ನವಯುಗ

ಚಂದಾ ರೂ 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ.ಪೈಸೆ

ವರುಷ ೩೮ ವಾರ ೫. 2-10-1958 Vol 38 No. 5.

ನ್ಯಾಯದಾನ

ನ್ಯಾಯಾಂಗವು ಶಾಸನಾಂಗಕ್ಕೆ ಸಂಪೂರ್ಣ ದೂರವಿರಬೇಕು

ತನ್ನ ತಪ್ಪಿಗೆ ಶಾಸನಾಂಗವು ನ್ಯಾಯಾಂಗವನ್ನು ದೂರುವುದು ಅವಿವೇಕದ ಪರಮಾವಧಿ! ತಜ್ಞರಿಂದ ನ್ಯಾಯಶಾಸ್ತ್ರವು ಪುನರ್ಘಟಿತವಾಗಲಿ

ಇತ್ತೀಚಿಗಿನ ದಿನಗಳಲ್ಲಿ ಅತ್ಯಂತ ಉತ್ಸಾಹಿ ವರ್ಗಗಳಿಂದಲೇ ನ್ಯಾಯಾಂಗದ ಕುರಿತಾದ ಟೀಕೆ ಟಿಪ್ಪಣಿಗಳು ಬರತೊಡಗಿರುವುದು ಶೋಚನೀಯ. ನಿಜವಾಗಿ ನೋಡುವುವಾದರೆ, ಶಾಸನಾಂಗದ ಮೂಲಕವಾಗಿಯೇ ಆರ್ಥಿಕ ಮತ್ತು ಸಾಮಾಜಿಕ ಲಾಭಗಳಿಗೆ ಸಂಬಂಧಿಸಿದ ಮಾರ್ಗಗಳ ಕಾರಣವಾಗಿಯೇ ಇವುಗಳು ಹುಟ್ಟಿಕೊಂಡಿವೆ. ಆದರೆ, ಈ ಟೀಕೆ ಹಾಗೂ ಟಿಪ್ಪಣಿಗಳು ತಪ್ಪು ಕಲ್ಪನೆಯಿಂದ ಬಂದುವುಗಳು. ನ್ಯಾಯ ಸೂತ್ರವನ್ನು ರಚಿಸುವ ಕೆಲಸವು ಮಾತ್ರ ಸಾಕಷ್ಟು ಕಷ್ಟುಹೋಗಿವೆಯೆಂಬುದನ್ನು ನಾವಿಂದು ನೋಡುತಿದ್ದೇವೆ. ಇದು ನ್ಯಾಯಾಲಯದ ತಪ್ಪು ಆಗಿರುವುದಿಲ್ಲ. ನ್ಯಾಯಾಲಯಗಳು ನ್ಯಾಯಸೂತ್ರಗಳ ಆರ್ಥವನ್ನು ಇದ್ದುದಕ್ಕಿದ್ದಂತೆಯೇ ಹೇಳಬೇಕಾಗುತ್ತದೆ.

ಪ್ರಜಾ ಪ್ರಭುತ್ವ ರಾಷ್ಟ್ರದಲ್ಲಿ ನ್ಯಾಯಾಂಗ ಮತ್ತು ಶಾಸನಾಂಗಗಳು ಪ್ರತಿಪ್ರತ್ಯೇಕವಾಗಿವೆ. ಶಾಸನಾಂಗವು ತತ್ವಗಳನ್ನು ಹಾಕಿ ಈ ತತ್ವ ಆಧಾರವಾಗಿ ಧ್ಯೇಯಗಳು ಫಲಿಸುವಂತೆ ಮಾಡಲು ಶಾಸನಗಳನ್ನು ಸಿದ್ಧಪಡಿಸುತ್ತದೆ ನ್ಯಾಯಾಂಗವು ನ್ಯಾಯಸೂತ್ರಕ್ಕನುಸಾರವಾಗಿ ಅವನ್ನು ಅರ್ಥಮಾಡಿಕೊಂಡು ನೈವರಿಸುತ್ತದೆ ಆದುದರಿಂದ ಶಾಸನೀಕರಣದ ಉದ್ದೇಶಗಳಿಗೂ ಒರ್ವ ನ್ಯಾಯಾಧೀಶನಿಗೂ ಯಾವ ಸಂಬಂಧವೂ ಇರುವುದಿಲ್ಲ.

ನಿಷ್ಪಕ್ಷಪಾತ ದೃಷ್ಟಿಯಿಂದ ಯಾವುದೇ ವಿಷಯವನ್ನು ಕೈಗೆ ತೆಗೆದುಕೊಳ್ಳುವುದಷ್ಟೆ ಒಬ್ಬ ನ್ಯಾಯಾಧೀಶನ ಕರ್ತವ್ಯವಾಗಿದೆ. ಆದರೆ, ಅವನು ಎಷ್ಟೇ ಅಲಿಪ್ತನಾಗಿರಲಿ. ಈ ರಾಷ್ಟ್ರದ ನಾಗರಿಕತನ ನಿಂದಾತನು ಸಂಚಿತನಾಗುವುದಿಲ್ಲ. ಈ ರಾಷ್ಟ್ರದ ಸ್ಥಗತಿಗೂ ಅತನಿಗೂ ಇರುವ ಸಂಬಂಧವು ದೂರವಾಗುವುದಿಲ್ಲ ತನ್ನ ಸುತ್ತು ಮುತ್ತಲೂ ಇರುವ ತನ್ನ ರಾಷ್ಟ್ರೀಯರ ಬಡತನವನ್ನು ತಕ್ಕೆಗೆ ಮರೆತು ಬಿಡಬಲ್ಲನು? ಜೀವನಮಟ್ಟವು ಉನ್ನತವಾಗಬೇಕು ಎಂಬ ಗುರಿಯನ್ನು ಹೇಗೆ ತಾನೇ ಸ್ಥಾಣಾಬಾಹಿರಗೊಳಿಸಬಲ್ಲನು?

ಒಬ್ಬ ನ್ಯಾಯಾಧಿಪತಿಯು ಒಂದು ಶಾಸನವನ್ನು ಸಿದ್ಧಪಡಿಸುವಾಗ, ಅದರಿಂದ ಉಕ್ಕಿಸಿಕೊಂಡಿರುವ ಕೇಡುಗಳನ್ನು ದೂರಮಾಡುವಲ್ಲಿ ಶಾಸನಾಂಗಕ್ಕೆ ನೆರವಾಗಬಲ್ಲನು

ಶಾಸನಾಂಗಕ್ಕೆ ಅನುಕೂಲವಾಗುವ ಹಾಗೆ ನ್ಯಾಯ ಸೂತ್ರಗಳನ್ನು ಒಬ್ಬ ನ್ಯಾಯಾಧಿಪತಿಯು ವಿವರಿಸಬಹುದು. ಆದರೆ, ಇಂತಹ ಸಂದರ್ಭದಲ್ಲಿ ನ್ಯಾಯ ಸೂತ್ರದಲ್ಲಿ ಆವಶ್ಯಕವಿರಬೇಕಾಗುತ್ತದೆ ನ್ಯಾಯ ಶಾಸ್ತ್ರಕ್ಕನುಸಾರವಾಗಿ ನ್ಯಾಯದಾನ ಮಾಡುವೆನೆಂದು ನ್ಯಾಯಾಧಿಪತಿಯು ಪ್ರತಿಜ್ಞೆ ಸ್ವೀಕರಿಸುತ್ತಾನೆ ಹಾಗಿರುವಾಗ ನ್ಯಾಯ ಸೂತ್ರವೇ ಶಾಸನಾಂಗಕ್ಕೆ ಬೇಕಾದ ರೀತಿಯಲ್ಲಿಲ್ಲವಾದರೆ, ಅತನಾದರೂ ಏನು ಮಾಡಬಲ್ಲ?

ಈ ಕಾರಣದಿಂದ ವ್ಯರ್ಥವಾಗಿ ನ್ಯಾಯಾಲಯಗಳನ್ನು ನಿಂದಿಸುವುದಕ್ಕಿಂತ, ನ್ಯಾಯ ಶಾಸ್ತ್ರದಲ್ಲಿಯೇ ಪರಿಣಿತರಾದ ಸಹಾಯದಿಂದ ನ್ಯಾಯ ಸೂತ್ರವನ್ನು ಸಮಯಕ್ಕೆ ಸಂಯಾಗಿ ಜೋಡಿಸುವಂತೆ ಮಾಡಿ ಅದಕ್ಕೆ ಹೊಣವನ್ನು ಕಟ್ಟು ಮಾಡುವುದು ಉಪಯೋಗಕರವಾದೀತು.

ಇಂಗ್ಲೆಂಡಿನಲ್ಲಿ ನುರಿತ ಪಾರ್ಲಿಮೆಂಟರಿ ಶಾಸ್ತ್ರ ರಚನಕಾರರು ಇರುತ್ತಾರೆ ಇಂಡಿಯನ್ ಪೆನಲ್‌ಕೋಡ್, ಎವಿಡೆನ್ಸ್ ಆಕ್ಟ್, ಕನ್ಟ್ರಾಕ್ಟ್ಸ ಆಕ್ಟ್ ಮೊದಲಾದುವುಗಳಿಗೆ ಸಮವಾದ ನ್ಯಾಯ ಸೂತ್ರಗಳಿರುತ್ತವೆ; ಆದರೆ ತಿದ್ದುಪಡಿಗಳನ್ನು ತಯಾರಿಸುವಾಗ ನಿರೀಕ್ಷಣ ಬುದ್ಧಿಯನ್ನು ಉಪಯೋಗಿಸಿರುವುದರಿಂದ ತಿದ್ದುಪಡಿ ಇಂದಿಗೂ ಸಮಯ ಪರೀಕ್ಷೆಗೆ ಗುರಿಯಾಗಿಲ್ಲ

ಒಂದು ಶಾಸನವು ಕೆಟ್ಟುದೆಂದು ಹೇಳಿದ ಮಾತ್ರಕ್ಕೆ ಶಾಸನಾಂಗವು ನ್ಯಾಯಾಲಯಗಳನ್ನು ದೂರುವುದಾಗಲೀ ಟೀಕಿಸುವುದಾಗಲೀ ಸಲ್ಲದು. ಹೀಗೆ ಶಾಸನವನ್ನು ದೂರುವುದು ನ್ಯಾಯದಾನಗಳ ತಪರಾಧವಲ್ಲ. ನ್ಯಾಯಾಲಯಗಳು ನ್ಯಾಯಸೂತ್ರಗಳ ಅರ್ಥವನ್ನು ಅದರಂತೆಯೆ ಹೇಳಬೇಕಾಗುತ್ತದೆ. ನಮ್ಮ ರಾಷ್ಟ್ರಸಂವಿಧಾನವು ಶಾಸನಾಂಗದಲ್ಲಿಗಳಲ್ಲ ನ್ಯಾಯಸಮ್ಮತವಾದ ಕಾರ್ಯವನ್ನು ಮಾಡಿದ್ದು ಇದು ಸಂವಿಧಾನವು ಮಾಡಿದ ಸರ್ವೋಚ್ಚ ಕೆಲಸವಾಗಿದೆ.

ನ್ಯಾಯಾಂಗ ಮತ್ತು ಆಡಳಿತೆಗಳು ಬೇರ್ಪಡಬೇಕಾಗಿರುವುದು ಸಂವಿಧಾನದಲ್ಲಿ ಸೂಚಿತವಾದ ತತ್ವಗಳಲ್ಲಿ ಒಂದಾಗಿದೆ. ಆದರೆ, ಪೆಚ್ಚಿನ ರಾಜ್ಯಗಳು ಈ ಸುಧಾರಣೆಯನ್ನು ಮಾಡಿಕೊಳ್ಳದಿರುವುದು ಶೋಚನೀಯ ಬೊಂಬಾಯಿ ಸರಕಾರವು ಈ ಸಂಬಂಧವನ್ನು ಕಡಿಮಗೊಂಡಿರುವುದು ಅಭಿನಂದನೀಯ. ಆದರೂ ಸರಕಾರವು ಸಾಮಾನ್ಯ ನ್ಯಾಯಪತಿಗಳ ವರ್ಗಾವಣೆ, ಭಡತಿ, ಮತ್ತು ನೇಮಕಗಳಲ್ಲಿ ತನ್ನ ಹಸ್ತಕ್ಷೇಪವನ್ನು ಮಾಡುವ ಅಧಿಕಾರವನ್ನಿಟ್ಟುಕೊಂಡಿರುವುದು ಸಾಂಘಿಕ ನೀಯವಲ್ಲ.

(ಉಳಿದ ಪುಟ ನೋಡಿರಿ)

ಅಮೆರಿಕೆಯ ಅಂತರಾಷ್ಟ್ರೀಯ ಭೂಭೌತ ವರ್ಷದ ಸಮಿತಿಯ ಡಾ ಜೇಮ್ಸ್ ವಾನ್ ಅಲೆನರು ನಾಲ್ಕನೆಯ ಎಕ್ಸ್‌ಪ್ಲೋರರ್‌ನ ವಿಜ್ಞಾನಿಕ ವಿವರಿಸುತ್ತಿದ್ದಾರೆ ಪ್ರಪಂಚದ ನಕ್ಷೆಯಲ್ಲಿ ತಾವು ಹಾರಿದ ಉಪಗ್ರಹಗಳ ಪಥಗಳನ್ನು ತೋರಿಸುತ್ತ ಪರದರ್ಶಕರಿಗೆ ಸೂಚನೆ ಯಾಯಿತ್ತಿದ್ದಾರೆ ಎಡಗೈಯಲ್ಲಿ ಅವರು ಅನೆಯ ಚಿಲುಪತ್ರಪ್ಪೆ ಮಾದರಿಯೊಂದನು ಇಟ್ಟುಕೊಂಡಿದ್ದಾರೆ

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ಮನೆಯಲ್ಲಿರಬೇಕು ಕರೆಯುವ ಧನವನ್ನು | ಸಿಂಡಿಕೇಟ್ ಬ್ಯಾಂಕ್
ಬ್ಯಾಂಕಿನಲ್ಲಿರಬೇಕು ಒಂದಿಷ್ಟು ಧನ

ಕಥಾ ವಿಹಾರ

ಇನಳಾರು ಬಸ್ಮಾಸುರ ನೋಹಿನಿಯೆ?

"ಕಾಮೀ ಸ್ವತಾರಿ ಪಶ್ಯತಿ" ಎಂಬ ಕಾಲಿದಾಸನ ಉಕ್ತಿ ಅಕ್ಷರಶಃ ನಿಜ

ರಾಮು, ಕೆಟ್ಟು, ಭೀಮು ಈ ಮೂವರು ನನ್ನ ಮಿತ್ರರಾಗಿದ್ದರು. ಅವರು ತಮ್ಮೆಲ್ಲ ವಿಚಾರಗಳನ್ನು ನನ್ನಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದರು. ಅವರು ಮೂವರ ಮದುವೆಯ ಕತೆ ಬಹಳ ಸ್ವಾರಸ್ಯವಾಗಿದೆ.

೦೦ ೦೦ ೦೦

ಮದುವೆ ವಿಚಾರದಲ್ಲಿ ರಾಮುವಿನ ಅಭಿಪ್ರಾಯ ಈ ರೀತಿಯಾಗಿದೆ:—

"ಮಿತ್ರನೆ! ನನಗೀಗ ೨೭ ವರ್ಷ ನಡೆಯುತ್ತಿದೆ. ನನಗಿಂಥ ವಯಸ್ಸಿಗಿಲ್ಲವೇನೆಂದು ನೀನು ಅನೇಕ ಬಾರಿ ನನ್ನನ್ನು ಪ್ರಶ್ನಿಸಿದ್ದೆ. ಆದಕ್ಕೆ ನಾನೀಗ ಉತ್ತರ ಕೊಡುತ್ತಿದ್ದೇನೆ.

"ಆಕೆ ನಮ್ಮ ಮನೆಯ ಹತ್ತಿರವಿರುವ ಹುಡುಗಿ. ಆಕೆಯನ್ನೇ ನಾನು ಮದುವೆಯಾಗಲು ಇಚ್ಛಿಸುತ್ತೇನೆ. ಆಕೆಯ ತಂದೆ ತಾಯಂದಿರು ಚಿಕ್ಕಂದಿನಲ್ಲಿ ನಿನ್ನ ಗಂಡ ರಾಮು ಎಂದೇ ಆಕೆಯನ್ನು ತಮಾಷೆ ಮಾಡುತ್ತಿದ್ದರು. ಅಂದು ಮಾಡುತ್ತಿದ್ದ ತಮಾಷೆಯ ಪ್ರತಿಫಲವೆ ನನ್ನನ್ನಿಂದು ಆಕೆಯ ಕಡೆಗೆ ಒಲಿದಿರುವಂತೆ ಮಾಡಿದೆ. ಆಕೆಯೂ ನನ್ನನ್ನು ಇಚ್ಛಿಸುತ್ತಿರುವಳೆಂಬುದಕ್ಕೆ ನಾನು ಅನೇಕ ಉದಾಹರಣೆಯನ್ನು ಕೊಡಬಲ್ಲೆ.

"ಆಕೆ ಸುರಸುಂದರಿ. ಭವ್ಯವಾದ ಆಕಾಶದಲ್ಲಿ ಮಿನುಗುವ ನಕ್ಷತ್ರದಂತೆ ಆಕೆಯ ಕುಂಕುಮನ ಬೊಟ್ಟು. ನಗೆ ತುಂಬಿದ ವಕ್ರದೃಷ್ಟಿಯನ್ನು ಬೀರುವ ಆಕೆಯ ಅಂಗಾಂಗಗಳ ಗಾಂಭೀರ್ಯವನ್ನು ಹೇಗೆ ಬ್ರಹ್ಮ ನಿರ್ಮಿಸಿರುವನೊ ನಾನರಿಯೆ. ಕೈಬಳೆಯಲ್ಲಿ ಬಳ್ಳಿಕಡಮೆಯಾಗಿದ್ದರೂ ಅವುಗಳ ಸದ್ದು ಘನಗಂಭೀರವಾದುದು. ಆಭರಣಗಳನ್ನು ಬೇಕಷ್ಟೇ ಉಪಯೋಗಿಸಿ ಅದರಲ್ಲೊಂದು ಸೌಮ್ಯತೆಯನ್ನು ನಾಧಿಸಿದುದರಿಂದ ಆಕೆಯ ನೈಸರ್ಗಿಕ ಸೌಂದರ್ಯಕ್ಕೆ ಅದೊಂದು ಮಿರುಗನ್ನು ಕೊಟ್ಟಿದೆ.

"ಚಿಕ್ಕಂದಿನಲ್ಲಿ ನಮ್ಮ ಹಿರಿಯರು ನಮ್ಮಿಬ್ಬರ ನೆಂಟಸ್ತಿಕೆ ವಿಚಾರ ಮಾತಾಡುತ್ತಿದ್ದರು. ಅದರ ಪರಿಣಾಮವಾಗಿಯೇ ಎಂದು ತೋರುತ್ತದೆ. ಈಗ ಯಾರು ಬಂದರೂ ಆಕೆ ಅವರ ಮಡದಿಯಾಗಲು ಒಪ್ಪುವುದಿಲ್ಲ. ನಾನು ಆಫೀಸು ಬಿಟ್ಟು ಬರುವ ಹೊತ್ತಿಗೆ ಸರಿಯಾಗಿ ಆಕೆ ತನ್ನನ್ನು ತಾನೇ ಸಿಂಗರಿಸಿಕೊಳ್ಳುವುದು ನನ್ನ ತೃಪ್ತಿಗಾಗಿಯೇ ಇರಬೇಕು. ಒಂದು ದಿನ ಆಕೆಯ ತಾಯಿ ನೀನು ರಾಮುವಿನ ಮನೆಗೆ ನಡೆ. ಆತನ ನಿನ್ನ ಮುಂದಿನ ಗಂಡ ನಲ್ಲನೆ? ಎಂದಾಗ ಆಕೆ ಕೊಟ್ಟ ಉತ್ತರ 'ಹಾಗೂ ನಿನಗೆ ಬೇಕಾದರೆ ನೀನೇ ಹೋಗಿ ಆತನನ್ನು ಅಳಿಯನನ್ನಾಗಿ ಮಾಡಿಕೊಂಡು ಬಾ. ಎಂಬುದು ಗಮನಾರ್ಹವಾಗಿದೆ. ನಾವು ಮಂಚ್ಯಾದೆ ನಿರಾಕರ್ತಿಸುವವರಲ್ಲವೆಂಬುದನ್ನು ಇದು ಸೂಚಿಸುವುದಿಲ್ಲವೆ?

"ಒಂದು ದಿನ ನಮ್ಮ ಮನೆಯಲ್ಲೊಂದು ವಿಶೇಷವಿತ್ತು. ಅದಕ್ಕೆ ಆಕೆಯನ್ನು ಆಮಂತ್ರಿಸಿತ್ತು. ನನ್ನೆದುರು ಆಕೆ ಕುಳಿತಿದ್ದಳು. ನಾವು ಅರೆಹೊಟ್ಟೆಯಲ್ಲಿರುವಾಗಲೇ ಅನ್ನ ಮುಗಿಯಿತು. ಕೂಸು ಅನ್ನ ಬೇಯಲಿಕ್ಕೆ ೧೦ ನಿಮಿಷಗಳ ಅವಕಾಶವಿತ್ತು. ಎಲ್ಲರೂ ಎದ್ದು ಹೋದರು. ಆರೆ ಹೊಟ್ಟೆ ತುಂಬಿದ ನಾವಿಬ್ಬರು ಕುಳಿತಿದ್ದೆವು. ನಮ್ಮ ಪ್ರಿಯವಾದ ವಸ್ತುವಿನ ಹೆಸರನ್ನು ಎಲೆಯಲ್ಲಿ ಕೈಬೆರಳಿನಿಂದಲೇ ಬರೆಯುತ್ತಿದ್ದೆವು. ಆರೆನೋಟದಿಂದ ಕದ್ದು ನೋಡುತ್ತಾ, ಆಕೆ ನೋಡಿದಾಗ ನಾನು ಮುಖ ತಗ್ಗಿಸಿಕೊಂಡು, ನಾನು ನೋಡಿದಾಗ ಆಕೆ ಮುಖ ತಗ್ಗಿಸಿಕೊಂಡು ನಮ್ಮ ಕಳ್ಳ ತನ ಪ್ರಕಟವಾಗಬಾರದೆಂಬ ಆರೆಯಿಂದಿದ್ದೆವು. ಕಳ್ಳತನ ಪ್ರಕಟವಾದಾಗ ನಾವು ಅನಾಮಂತ್ರಿತವಾಗಿಯೇ ಬರುತಿತ್ತು. ಹೀಗೆ ನಡೆದಿತ್ತು ಅಂದಿನ ಆ ಸುಂದರ ಊಟ ನೋಟ. ದೇವಸ್ಥಾಧಕ್ಕೆ ಪ್ರತಿದಿನ ಆಕೆ ನನ್ನ ತಾಯಿಯೊಂದಿಗೆ ಹೋಗುತ್ತಿದ್ದಳು ಇದು ಮುಂದಿನ ಜೀವನ ಆಡಿಗೊಳಿಸುವ ವಿಧಾನವಲ್ಲವೆ?

"ಆಕೆಯ ಈ ಎಲ್ಲಾ ವರ್ತನೆಗಳನ್ನು ಕಂಡಾಗ ನನ್ನ ಬಗ್ಗೆ ಆಕೆಯ ಇಚ್ಛೆಯಿದೆಯೆಂಬುದು ಪ್ರಕಟವಾಗುವುದಿಲ್ಲವೆ? ನಾವಿಬ್ಬರೂ ವಿಶೇಷ ವಗತಿನ ಸಂಪರ್ಕವಿಟ್ಟುಕೊಳ್ಳದಿದ್ದರೂ ನಮ್ಮ ವರ್ತನೆ ಇದುಕ್ಕೆ ಸಾಕ್ಷಿಯಾಗಲಾರದೆ?"

೦೦ ೦೦ ೦೦

ಕೆಟ್ಟುವಿನ ಅಭಿಪ್ರಾಯ ಈ ವಿಷಯದಲ್ಲಿ ಹೀಗಿದೆ:

"ನನ್ನ ತಾಯಿಗೆ ಅಂದು ಜೋರು ಕಾಯಿಲೆ. ಸಾಯಂಕಾಲ ತಾಯಿಯ ಯೋಚನೆ ಮನಸ್ಸಿನಲ್ಲಿ ಹೆಚ್ಚಿದ್ದರಿಂದ ಬೇಸರ ಪಟ್ಟುಕೊಂಡು ನಾನು ಡಾಕ್ಟರಲ್ಲಿಗೆ ಹೋದೆನು. ನನ್ನ ಹಾಗೆ ಡಾಕ್ಟರಲ್ಲಿಗೆ ಆಕೆ ಕೂಡಾ ಬಂದಿದ್ದಳು. ಆಕೆಯ ನೆಟ್ಟ ದೃಷ್ಟಿ ನನ್ನ ವೇಲೆ ಬಿದ್ದೊಡನೆಯೆ ಉರಿಯುವ ಬೆಂಕಿಗೆ ನೀರೆರಚಿದಂತಾಯಿತು. ಅರು ಹೋದಯುವಾದೊಡನೆ ಕತ್ತಲು ಸಾಮಾನ್ಯವಾಗುವಂತೆ ಬೇಕರ ನನ್ನಿಂದ ಮಾಯವಾಯಿತು.

"ಆಕೆಯ ರೂಪದ ಬಗ್ಗೆ ನಾನು ಹೇಳುವ ಮಾತೊಂದೆ. ಆಕೆ ಅತ್ಯಂತ ಸುಂದರಿ. ಆಕೆಗೆ ಆಕೆಯನ್ನೆ ಹೋಲಿಕೆಯಾಗಿ ಕೊಡಬಹುದಷ್ಟೆ! ಆಕೆಯನ್ನು ಕಂಡ ದಿನ ನನ್ನ ಪಾಲಿಗೆ ಶುಭದಿನ. ಆಕೆಯಿಂದಲೇ ನನ್ನ ಜೀವನದ ವಿಕಾಸ. ಆಕೆಯೆ ನನ್ನ ಜೀವನ ಸರ್ವಸ್ವ ಆಕೆಯೇ ನನ್ನ ಜೀವಿತದ ಉದ್ದೇಶ. ನನ್ನಲ್ಲಿ ಹುದುಗಿದ್ದ ರಕ್ತಿಯನ್ನು ಜೀವತಳೆಸಲು ಆಕೆಯೇ ಕಾರಣಳು. ಅಂತೂ ಆಕೆಯೆ ನನ್ನ ಪಾಲಿಗೆ.... ದೇವಿಯೆ?...

"ಒಂದು ದಿನ ನಾನು ನನ್ನ ಮಿತ್ರ ಸೀನನ ಅಂಗಡಿಯಲ್ಲಿ ಕುಳಿತಿದ್ದೆನು. ಆಕೆ ನನ್ನ ತಮ್ಮನೊಂದಿಗೆ ದಾರಿಯಲ್ಲಿ ಹೋಗುತ್ತಿದ್ದಳು. ಸೀನನು ಆಕೆಯನ್ನು ಕರೆದನು. ಆಕೆಯ ಶುಭದರ್ಶನ ನನಗಾಯಿತು. ಡಾಲ್ಡ ಕಣ್ಣುಗಳು ಒಂದಾದುವು. ನನ್ನ ಮನದ ನೆಲೆಯ ಸರಿಯಾದ ಅರಿವು ಆಕೆಗಾಗಿರಬಹುದು. ಸೀನ ಕರೆದೊಡನೆ ಆಕೆ ಅಂಗಡಿ ಬಾಗಿಲಿಗೆ ಬಂದಳು. ಸೀನ ಕೇಳಿದ— 'ನಿನ್ನೆ ನಿನ್ಮಲ್ಲಿಗೆ ಡಾಕ್ಟರು ಬಂದದ್ದು ಯಾಕೆ?' ಎಂದು. 'ಚಿಕ್ಕ ತಂದೆಯನ್ನು ನೋಡಲಿಕ್ಕೆ'ಯೆಂದು ಆಕೆ ಓರೆ ಕಣ್ಣಿನಿಂದ ನನ್ನನ್ನು ನೋಡುತ್ತಾ ಸೀನನ ಪ್ರಶ್ನೆಯನ್ನುತ್ತರಿಸಿದಳು. ಈ ಘಟನೆಯಿಂದ ನನಗೆ ಬಹು ಸಂತೋಷವಾಗಿ ನಗು ಬಂತು. ನನ್ನ ನಗು ಆಕೆಯನ್ನು ನಗಿಸುವಂತೆ ಮಾಡಿತು.

ಆದರೆ ಆಕೆ ತನ್ನ ನಗುವಿಗೆ ಬೇರೆ ಅರ್ಥ ಕಲ್ಪಿಸಿಕೊಂಡಳು. ಆದುದರಿಂದ ನಾನು ಸೀನನ ಬಾಯಿಯಿಂದ ಬದುಕಿದೆನು. ನಿಜವಾದ ಅರ್ಥವನ್ನು ಪರಿಕಿಸುವವರೆಗೂ ನಾನು ಕುಂಬಾ ಮೆಚ್ಚುವೆ. ಯಾರಾದರೂ ಮೆಚ್ಚಿಯಾರಷ್ಟೆ?

"ನನಗೆ ಆಕೆಯನ್ನು ಕಾಣಬೇಕೆಂಬ ಆಸೆಯಾಯಿತೆಂದರೆ ಆಕೆ ನನ್ನೆದುರು ಕಾಣಿಸಿಗುವಳೆಂದರೆ ನಿನಗೆ ಆಶ್ಚರ್ಯವಾಗಬಹುದು. ಇದೆಲ್ಲವೂ ಶುಭಸೂಚನೆಯಲ್ಲವೆ? ಒಂದು ದಿನ ಆಕೆ ನನಗೆ ಕನಸಿನಲ್ಲಿ ಕಾಣಿಸಿಕೊಂಡಳು. ಬೆಳ್ಳಮೂಡುವ ಸಮಯ. ಹಕ್ಕಿಗಳ ಕಲರವ ಹೆಚ್ಚಿದೆ, ಆ ಸಮಯದಲ್ಲಿ ಆಕೆಯ ದರ್ಶನ ನನಗಾಯಿತು. ಆಗ ಆಕೆ ನನ್ನನ್ನು 'ನಲ್ಲ' ನೆಂದೇ ಸಂಬೋಧಿಸಿದಳು. ನಿನ್ನ ಹೃದಯಾಂತರಾಳದಲ್ಲಿ ನನಗೆ ಸ್ಥಾನವಿರುವುದೆ? ಎಂದು ಪ್ರಶ್ನಿಸಿದೆನು. ಆಕೆ ಅದಕ್ಕೆ ಉತ್ತರಿಸದೆ ನನ್ನನ್ನು ಸ್ಪರ್ಶಿಸಿದಳು. ಆ ದು ವ್ಯಾದು ಸ್ಪರ್ಶ. ಅಪ್ಸರೆಲ್ಲೆ ನನಗೆ ನಿದ್ದೆಯಿಂದ ಎಚ್ಚತ್ತವಾಗಿತ್ತು, ಬೆಳ್ಳಮೂಡಿತ್ತು, ಬೆಳ್ಳಮೂಡುವ ಸಮಯದ ಕನಸು ನಿಜವಾಗುವುದೆಂಬ ಹಿರಿಯರ ಮಾತು ನಿಜವೆ?

"ಆಕೆಯ ವರ್ತನೆ ನನಗನುಕೂಲವಾಗಿಲ್ಲವೆ? ಆಕೆಯನ್ನು ನಾನೀತನಳ ಮಾತಾಡಿಸಿಲ್ಲ. ಮಾತನಾಡಿಸಬೇಕೆಂಬ ಹಂಬಲ ಮಾತ್ರ ನನಗಿದೆ. ನನಗೀಗ ಆ ಗಿರುವಂತೆ ಆಕೆಗೂ ಆಗಲೆಂದು ನಾನು ದೇವರಲ್ಲಿ ಬೇಡುತ್ತೇನೆ. ಅದೇ ನನ್ನ ಹಾರೈಕೆಯಾಗಿದೆ.

೦೦ ೦೦

ಭವಿಷ್ಯವಿಗೆ ಈ ವಿಷಯದಲ್ಲಿ ಈ ರೀತಿ ಅಭಿಪ್ರಾಯವಿದೆ. "ನನ್ಮ ಅಂಗಡಿಗೆ ಆಕೆ ಪ್ರತಿನಿತ್ಯ ಬರುತ್ತಿದ್ದಳು. ನಾನು ಆಕೆಯನ್ನು ಬಹಳ ತಮಾಷೆ ಮಾಡುತ್ತಿದ್ದೆನು. ಆಕೆ ತನ್ನ ಮನೆಯ ಕಷ್ಟಗಳನ್ನು ನನ್ನಲ್ಲಿ ತೋಡಿಕೊಳ್ಳುತ್ತಿದ್ದಳು. ನಾನೊಂದು ದಿನ ಆಕೆಯನ್ನು ತಮಾಷೆ ಮಾಡುತ್ತಾ 'ನಾನು ನಿನ್ನನ್ನೆ ಎಂಮನೆಯಾಡಿಕೊಳ್ಳುತ್ತೇನೆ'ಂದು ಹೇಳಿದೆನು. 'ನೀವು ಏನು ಬೇಕಾದರೂ ಮಾಡಿ" ಎಂದಾಕೆ ಅರೆಮನಸ್ಸಿನಿಂದ ಒಪ್ಪಿದಳು. ಅಂದು ಆಕೆ, ತನ್ನ ಸಂಕಷ್ಟಗಳನ್ನು ನನ್ನಲ್ಲಿ ನಿವೇದಿಸಿಕೊಳ್ಳುತ್ತಿದ್ದಳು. 'ಮದುವೆಯಾಗುವ ಹುಡುಗಿ ನೀನು. ನಿನಗೆ ನೆಲ ಒರೆಸಿ, ಕಸ ಗುಡಿಸಲು ಬರುವುದಿಲ್ಲವೆಂದರೆ ಯಾರಾದರೂ ನಗಲಿಕ್ಕಿಲ್ಲವೆ?' ಎಂದು ಆಕೆಯ ತಾಯಿ ಹೇಳುತ್ತಿದ್ದ ವಿಚಾರದ ಅರಿವು ಅಂದೇ ನನಗಾಯಿತು.

"ಒಂದು ದಿನ ನಾನು ಆಕೆಯನ್ನು ಕರೆದು ಹೇಳಿದೆನು: ನಾನು ಈ ದಿನ ಒಂದು ಹುಡುಗಿಯನ್ನು ಕಾಣಲು ಹೋಗಿದ್ದೆನು. ಮದುವೆಯಾಗುವ ಯೋಚನೆ ನನಗಿದೆ" ಎಂದು. ಆಕೆ— 'ಹುಡುಗಿ ಹೇಗಿದೆ?" ಎಂದಳು. 'ನಿನ್ನಂತೆಯೆ!' ಎಂದೆನು. 'ನಿನು ಗೊಸ್ಪಿಗೆಯೆ?' ಎಂದಳಾಕೆ. 'ಆಹುದು. ಇನ್ನೆಂಟು ದಿನಗಳಲ್ಲಿ ಮದುವೆಯಾಗಬಹುದು" ನಾನೆಂದೆನು. ಆಕೆಯ ಕಣ್ಣಾಗಳಿಂದ ಪ್ರಯತ್ನವಿಲ್ಲದೆ ನೀರು ಸುರಿಯಿತು. ತಕ್ಷಣ ಆಕೆ ಅಲ್ಲಿಂದ ಮಾಯವಾದಳು.

"ಈ ಘಟನೆ ನಡೆದು ಅರ್ಧ ಗಂಟೆ ಕಳೆದ ನಂತರ ಆಕೆಯ ಸಾವಾರ ಇತ್ತ ಚಿತ್ರೈಸಿ ಒಂದು ಕನಸನ್ನು ನೇಜಿನ ಮೇಲೆ ನೆದು ಧರಧರನೆ ಹೊರಟುಹೋಯಿತು. ಕವರಿನ ಮೇಲ್ಬರಿಯಲ್ಲಿ ನನ್ನ ಹೆಸರನ್ನು ಚಂದನಾಗಿ ಬರೆದಿತ್ತು. ಕವರನ್ನೊಡೆದಾಗ ಅದರಲ್ಲೊಂದು 5ರೂಪ್ಯಾ ನೋಟು ಮತ್ತೊಂದು ಕಾಗದವೂ ಇತ್ತು. ಕಾಗದ

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನನ್ನ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನನ್ನ ಬಡ್ಡಿ ದರಗಳು.
ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ನುತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಆನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಅಭಿಪ್ರಾಯ

ಎಲ್ಲ ಕಾಲದಲ್ಲಿಯೂ ಕಾವ್ಯ ಸೃಷ್ಟಿಯೋಗಲಾರದು

ಕವಿ, ಕಾವ್ಯ ಮತ್ತು ವಿಮರ್ಶಕರ ಬಗೆಗೆ ನುಹಾಕವಿ ಗಯುಟಿಯವರ ವಿಚಾರ ಧಾರೆ

ಜರ್ಮನ್ ದೇಶದ ಪ್ರಸಿದ್ಧ ಸಾಹಿತಿ ಹಾಗೂ ರಾಜಾಜ್ಞಾರಣಿ ಶ್ರೀ ಗಯಟಿಯವರು ಕಾವ್ಯ ಹಾಗೂ ಕವಿಯ ವಿಚಾರವಾಗಿ ತಮ್ಮ ಶಿಷ್ಯ ಎಕರ್ಮನ್‌ರೊಡನೆ ಬಾರಿ ಬಾರಿಗೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರಿಂದ ಅವರ ದೃಷ್ಟಿಯಲ್ಲಿ ಕಾವ್ಯಮೀಮಾಂಸೆಯ ರೀತಿಯನ್ನು ಅರಿತುಕೊಳ್ಳಬಹುದು.

ಕಾವ್ಯ ಬರೆಯುವವನು ಕಣ್ಣು ವಿಷಯಗಳನ್ನು ಕುರಿತು ಬರೆಯಬೇಕು. ಇಂತಹ ಕವಿಗೆ ವಿಷಯವಿಲ್ಲದೆ ಹೋಗುವುದಿಲ್ಲ. ಜೀವನದಲ್ಲಿ ದೃಢವಾಗಿ ಬೇರೂರಿರುವ ಕಾವ್ಯಗಳೇ ಮಾನ್ಯ ಕೊರತು ಆಕಾಶದಿಂದ ಎಳೆದುತಂದುವಲ್ಲ. ಸತ್ಯವೇ ಕಾವ್ಯಕ್ಕೆ ಪ್ರೇರಕವಾಗಿರಬೇಕು. ಊಹೆಯ ಮೇಲೆ ಬರೆದ ಕಾವ್ಯಗಳು ಎಂದಿಗೂ ಸೊಗಸಲಾರವು. ಸಿದ್ಧವಿರುವ ವಿಷಯಗಳನ್ನೇ ಆರಿಸಿ ಬರೆಯುವುದರಿಂದ ಸಮಯ ಉಳಿತಾಯವಾಗುವುದು. ವಸ್ತುವೊಂದೇ ಆದರೂ ಬೇರೆ ಬೇರೆ ಕವಿ ಕಾಣುವ ದೃಷ್ಟಿಯಿಂದ ಕಾವ್ಯದಲ್ಲಿ ಗುಣಗಳು ಬದಲಾಗುತ್ತವೆ. ಮತವಿಚಾರವು ಕಾವ್ಯಗಳಲ್ಲಿ ಬರಬಹುದಾದರೂ ಅವುಗಳಲ್ಲಿ ಸರ್ವಮಾನ್ಯ ತತ್ವಗಳೇ ಇರಬೇಕು. ವಿಶಿಷ್ಟ ಮತಪ್ರಜಾರವೆ ಕಾವ್ಯದಲ್ಲಿರಬಾರದು. ಇದರಿಂದ ಹಾನಿಯಿದೆ. ಏಕೆಂದರೆ ಕಾವ್ಯವು ರಸಜ್ಞಾನವನ್ನು ಮಾಡಿಕೊಡಬೇಕಲ್ಲದೇ ತತ್ವ ಬೋಧನೆಯನ್ನಲ್ಲ.

ಕವಿಗಳು, ವಿಮರ್ಶಕರು ಹೊಗಳಿದರೆ ಅವರನ್ನು ಪ್ರಶಿಂಸಿಸಿ ತನ್ನು ಯೋಗ್ಯತೆ ಕಡಿಮೆಯೆನ್ನುವುದಾಗಲೀ ಅವರು ದೂರಿದರೆ, ವಿಮರ್ಶಕರ ಮೇಲೆ ಕಿಡಿಕಾರುವುದಾಗಲೀ ಕೂಡದು. ಇದರಿಂದ ಕವಿಯು ಆಷಾಡಭೂತಿಯಾಗುತ್ತಾನೆ. ನಾಲ್ಕು ವ್ಯಾಸಗಳನ್ನು ಜೋಡಿಸಿದೊಡನೆಯೇ ತಾನೊಬ್ಬ ದೊಡ್ಡ ಲೇಖಕನಾದನೆಂದು ತಿಳಿಯುವ ಲೇಖಕರೂ ಇದ್ದಾರೆ! ಆದರೆ, ಇಂತಹರು ಕಾವ್ಯ ಉನ್ನತವಾಗುವುದಿಲ್ಲ. ಕಾವ್ಯಕ್ಕೆ ಯಿಲ್ಲದೆ ಸೀರಸತೆಯಿಂದ ಅಸ್ವಾಭಾವಿಕತೆಯಿಂದ ಕೂಡಿದ ಕಾವ್ಯ ಆಳಿದರೇನು? ಆಳಿದರೇನು?

ವಿಮರ್ಶಕರೂ ತಪ್ಪು ಮಾಡುವುದುಂಟು. ಒಬ್ಬ ಕವಿಯನ್ನು ಏನೊಬ್ಬನೊಡನೆ ಹೋಲಿಸುವ ಅವಿವೇಕ ಅವರಲ್ಲಿರುತ್ತದೆ. ವಿಮರ್ಶಕ ಹೀಗೆ ಮಾಡು ಎಂದು ಕವಿಗೆ ಹೇಳುವಂತಿಲ್ಲ; ಕವಿಯು ಕೈತಿಯ ಬಗ್ಗೆ ತನ್ನ ನಿಸ್ಕೃಷ್ಟ ಅಭಿಪ್ರಾಯವನ್ನು ಮಾತ್ರ ಕೊಡಬಲ್ಲನಷ್ಟೆ. ಪ್ರಕೃತಿ ಕವಿಯನ್ನು ಯೇಗೆ ಸೃಷ್ಟಿಸಿರುತ್ತದೆಯೋ ಆಯೇ ರೀತಿಯಲ್ಲಿ ಅವನಿಂದ ಕಾವ್ಯ ಪಡೆಯಬೇಕು. ಇದಕ್ಕೆ ಪಟ್ಟಿಯೆದರೆ ಕವಿಯು ನಾಪವಾಗುವುದು. ಒಬ್ಬಿಬ್ಬರು ವಿಮರ್ಶಕರ ಮೆಚ್ಚುದಿರುವ ಒಂದೊಂದೇ ಮಾತನ್ನು ಕಾವ್ಯದಿಂದ ಕಿತ್ತೊಗೆದರೆ, ಕಾವ್ಯವೇ ಇಲ್ಲದಂತಾಗಿತ್ತು. ಹಾಗೆಂದು ಕವಿಯು ವಿಮರ್ಶಕನಿಂದ ಕೇವಲ ಪ್ರಶಂಸೆಯನ್ನೇ ಬಯಸುವನಾದರೆ, ಅವನು ಕವಿಯಲ್ಲ; ಜೀವನ ಕೃತಿ ಕಾವ್ಯವಲ್ಲ.

ಕವಿಯ ಕಾವ್ಯದ ಉದ್ದೇಶವು ಸದ್ಗುಣ, ಸದಾಚಾರ, ಮತ್ತು ಸೌಂದರ್ಯ ಇವುಗಳಲ್ಲಿದ್ದರೂ ಕವಿ ಜೀವನ್ನು ಪ್ರೀತಿಸುತ್ತಾನೆ. ಕವಿಯು ತನ್ನ ಸುತ್ತಲಿನ ಜನರಲ್ಲಿನ ಅಜ್ಞಾನವನ್ನೂ ಸಂಕುಚಿತ ಬುದ್ಧಿಯನ್ನೂ ಕಳೆದು ಅವರ ಮನಸ್ಸನ್ನು ವಿಕಸಿಸಿ, ಅವರ ರುಚಿಯನ್ನು ಶುದ್ಧಿಮಾಡಿ, ಭಾವನೆಗಳನ್ನೂ ಯೋಚನೆಗಳನ್ನೂ ಉನ್ನತವಾಗಿ ಮಾಡಬೇಕು.

ಕವಿ ಉದಾತ್ತ ಕಾವ್ಯ ರಚಿಸಬೇಕಾದರೆ, ಆತನು ತನ್ನ ಜೀವನವನ್ನೂ ಉದಾತ್ತವಾಗಿರಿಸಿಕೊಳ್ಳಬೇಕು. ನೀತಿಯನ್ನಾತ ಪ್ರತಿಪಾದಿಸುವುದು ನ್ಯಾಯವಾದರೂ ಜನರಲ್ಲಿ ಉದು ಪರಿಣಾಮವಾಗಬೇಕಾಗಿರುವುದರಿಂದ, ಅವರಿಗೆ ತಕ್ಕಂತೆ ಉಪದೇಶಿಸಬೇಕಾಗುವುದು. ಕಾವ್ಯಗಳು ಕ್ಲಿಷ್ಟವಾಗಿ ನಾಂಡಿತ್ಯ ಸ್ಪರ್ಧನಕ್ಕೆ ಕಾರಣವಾಗದು; ಓದುವಾಗಲೇ ಚಿದ್ಧವಾಗುವಂತಿರಬೇಕು. ಇಲ್ಲವಾದರೆ, ಕಾವ್ಯ ರಸಾಸ್ವಾದನೆಗೆ ತಡೆಯುಂಟಾಗುವುದು.

• ಕಲುಷಿತ ವಾತಾವರಣದಲ್ಲಿಉತ್ತಮ ಕಾವ್ಯಗಳು ಹುಟ್ಟಲಾರವು. ಕಲೆಯ ಅಭ್ಯಾಸದಿಂದ ಕೌಶಲ ಒದಗುತ್ತದೆ. ಕಾವ್ಯಶಕ್ತಿ ಎಲ್ಲೆಡೆಯಲ್ಲೂ ಇದೆ. ಆದರೆ, ಕಲೆ ಬೆಳೆಯಬೇಕಾದರೆ, ಶಾಂತಿಬೇಕು; ಜನಾಂಗ ಜಾಗೃತವಾಗಬೇಕು; ಗುರು ಶಿಷ್ಯ ಪರಂಪರೆ ಜೀಕು; ಕವಿ ಕಾರ್ಯ ಮಗ್ನನಾಗಬೇಕು. ಆಗ ಉತ್ತಮ ಕಾವ್ಯದ ಸೃಷ್ಟಿಯಾಗುತ್ತದೆ; ಆಗ ಎಲ್ಲರೂ ಬಯಸುವ ಆನಂದ ದೊರೆಯುತ್ತದೆ ಆದರ್ಶ ಜೀವನವನ್ನು ಬಾಳುವ ಪ್ರತಿಭಾವಂತ ಕವಿಯಿಂದಲೇ ಉನ್ನತ ಕಾವ್ಯ ಸೃಷ್ಟಿಯಾಗಬಲ್ಲದು. ಭುವನದ ಸುಕೃತಿಯಿಂದಲೇ ಸುಕಾವ್ಯ ಸೃಷ್ಟಿಕರ್ತನಾದ ಕವಿಯು ಹುಟ್ಟುವನು.

(ಸಂಗ್ರಹ)

ದೇಶ ಪರಿಚಯ

ಪಾಶ್ಚಾತ್ಯ ಶಕ್ತಿಗಳ ಆಶ್ರಯಸ್ಥಾನ–ಜೋರ್ಡಾನ

ಅರಸ ಹುಸೇನರ ಪಾಶ್ಚಾತ್ಯ ಪರ ಧೋರಣೆಯಿಂದ ಅರಬ ಜಗತ್ತಿನಲ್ಲಿ ಐಕ್ಯ ಹಾನಿಯಾಗಬಹುದೆ

ಇಸ್ರಾಯೇಲ್, ಸೌದಿ ಅರೇಬಿಯಾ ಇರಾಕ ಮತ್ತು ಸಿರಿಯಾಗಳ ನಡುವೆ ಏರು ತಗ್ಗಾದ ನೆಲವುಳ್ಳ ಜೋರ್ಡಾನವು ೩೭ ಸಾವಿರ ಚದರ ಮೈಲು ವಿಸ್ತೀರ್ಣವಿದ್ದು, ಇಪ್ಪತ್ತನ ಜನ ಸಂಖ್ಯೆಯು ೧೫ಲಕ್ಷ ನಾನಿರವಿದೆ. ಆರಬಿಯಾದ ವಿಶಾಲ ಮರುಭೂಮಿಯನ್ನು ೧೯೨೧ರಲ್ಲಿ ಬ್ರಿಟಿಷರು ಹರಿಹಂಶಾಗಿ ಮಾಡಿ ಅರಬ ಮುಖಂಡ ಅಬ್ದುಲ್ಲರಿಗೆ ಅನ್ಯವ್ಯಸ್ತವಾದ ಟ್ರಾನ್ಸ್ ಜೋರ್ಡಾನ್ ಎಂಬ ಹೆಸರಿನ ರಾಜ್ಯವನ್ನು ನಿರ್ಮಿಸಿ ಕೊಟ್ಟು ಬಿಟ್ಟರು.

ಮಧ್ಯ ಪ್ರಾಚ್ಯದಲ್ಲಿ ತಮ್ಮ ಸ್ವಾರ್ಥ ಸಾಧನೆಗಾಗಿ ಒಂದಲ್ಲ ಒಂದು ರಾಜ್ಯದಲ್ಲಿ ತಮ್ಮ ಪ್ರಭಾವವನ್ನು ಬೀರುತ್ತಿರುವ ಬ್ರಿಟಿಷರು ಈ ಟ್ರಾನ್ಸ್ ಜೋರ್ಡಾನನ್ನು ತಮ್ಮ ಸೇನಾರಾಜನೆಯನ್ನಾಗಿಸಿಕೊಂಡರು. ಆದರೆ, ೧೯೪೬ರಲ್ಲಿ ಈ ಜೋರ್ಡಾನವು ಒಂದು ಸ್ವತಂತ್ರ ರಾಷ್ಟ್ರವೆಂದು ಉದ್ಘೋಷಿತವಾಗಿ ಶ್ರೀ ಅಬ್ದುಲ್ಲರೇ ಅದರ ಅರಸರಾದರು. ಕೇವಲ ಎರಡೇ ವರ್ಷಗಳಲ್ಲಿ ಇದರ ಸೈನ್ಯವು ಇಸ್ರಾಯೇಲಿನೊಡನೆ ಹೊಡೆದಾಡಬೇಕಾದ ಸಂದರ್ಭ ಬಂದು ನಾಶಗೊಳ್ಳುವ ಪ್ರಮೇಯವು ಬಂದು ಬಿಟ್ಟಿತು.

ಈ ಸಂದರ್ಭದಲ್ಲಿ ಶ್ರೀ ಅಬ್ದುಲ್ಲರು ಇತರ ಅರಬ ರಾಷ್ಟ್ರಗಳ ಮಾತುಗಳಿಗೆ ಕಿವಿಗೊಡದೆ ವೆಲೆಸ್ತೀನಿನ ಅರಬ ಪ್ರದೇಶಗಳನ್ನು ಟ್ರಾನ್ಸ್ ಜೋರ್ಡಾನಿನಿಂದ ಪ್ರತ್ಯೇಕಿಸಿ ಕೊಟ್ಟುಬಿಡಲು ತಮ್ಮ ರಾಷ್ಟ್ರದ ನಾಮಫಲಕದಿಂದ "ಜೋರ್ಡಾನ್" ಎಂಬ ಬರಹವನ್ನು ತೆಗೆಸಿಹಾಕಿಸಿಕೊಂಡರು. ೧೯೫೭ರಲ್ಲಿ ಇಸ್ರಾಯೇಲಿಗಳೊಡನೆ ಒಂದು ಒಪ್ಪಂದ ಸ್ಥಾಪಿಸಿಕೊಳ್ಳಲಿರುವರೆಂಬ ಆರೋಪದಿಂದಾಗಿ ಅವರು ಗುಂಡಿಗೆ ಎದೆ ಕೊಡಬೇಕಾಗಿ ಬಂತು.

೧೯೫೭ರಲ್ಲಿ ಜೋರ್ಡಾನನ್ನು ಬಗ್ಗಿಸಿದ ಒಡಂಬಡಿಕೆಯ ಒಳಗೆ ಎಳೆಮೆ ತನುವಬಗ್ಗೆ ಕಕ್ಷೆಪ್ಯತ್ವವು ನಡೆಯುತ್ತಲೇ ಸಿರಿಯಾದೊಡನೆ ವಿಲಯನಗೊಳ್ಳಬೇಕೆಂಬ ವಾದಗಳೂ ಬಲವಾಗತೊಡಗಿತು. ಆಗ ಪಾಶ್ಚಾತ್ಯ ವಿರೋಧೀ ಸರಕಾರವೊಂದರ ಸ್ಥಾಪನೆಯಾದೂ ಯುವರಾಜ ಹುಸ್ಸೇನರು ಅವನ್ನು ಕೆತ್ತಹಾಕಿದರು. ಅದರ ನಾಯಕರು ಗಣಂತ್ರವನ್ನು ಸ್ಥಾಪಿಸಲು ನಿರ್ಧರಿಸುತ್ತಿರುವರೆಂಬ ಆರೋಪನೆಸಿ ಸರಕಾರದ ಮೇಲೆ ಕೊರಿಸಿದ್ದರು. ಆಗ, ಬ್ರಿಟಿಷರೂ ಅಮೆರಿಕನ್ನರೂ ತಂತಮ್ಮ ಸೈನ್ಯಬಲದೊಡನೆ ಹುಸ್ಸೇನರ ಸಹಾಕ್ಕೆಂದು ಧಾವಿಸಿದರು. ಮುಂದೆ ಸುಮಾರು ಒಂದು ವರ್ಷದ ನಂತರ, ಎಂದರೆ, ಸಿರಿಯವು ಈಜಿಪ್ತದೊಡನೆ ಸೇರಿ, ಸಂಯುಕ್ತ ಅರಬ ರಾಷ್ಟ್ರವಾಗುವವರೆಗೆ ಆ ರಾಂತಿಯ ನೆಲೆನೀಡಾಗಿಯೇ ಜೋರ್ಡಾನವು ಕಾಲ ತಳ್ಳಬೇಕಾಯಿತು.

ಪರಿಸ್ಥಿತಿಯು ತೀವ್ರವಾಗಿ ಕೆಟ್ಟು ವಿಕೋಪಕ್ಕೆ ಹೋಗುತ್ತಿರುವಾಗ ತಮ್ಮ ಭದ್ರತೆಯನ್ನು ಮಾಡಿಕೊಳ್ಳುವ ಸಲುವಾಗಿ, ಅರಸ ಹುಸ್ಸೇನರು ತನ್ನ ಚಿಕ್ಕಪ್ಪನಾದ ಇರಾಕಿನ ಮಹಾರಾಜರೊಡನೆ ಕೂಡಿಕೊಂಡು ಒಂದು ಫೆಡರಲ್ ಸಂಯುಕ್ತ ರಾಷ್ಟ್ರವನ್ನು ನಿರ್ಮಿಸಿಕೊಂಡರು. ಆದರೆ, ಇರಾಕದಲ್ಲಿನ್ನಡ ಅಂತಕ್ರಾಂತಿಯಲ್ಲಿ ಇರಾಕದ ರಾಜವಂಶಜರು ಪ್ರಾಣತ್ಯಾಗ ಮಾಡತ್ಯಾಗಗಳನ್ನು ಏಕಕಾಲದಲ್ಲಿ ಮಾಡಬೇಕಾಗಿ ಬಂತು, ಇರಾಕದಲ್ಲಿ ಪ್ರಜಾಪ್ರಭುತ್ವವು ಸ್ಥಾಪನೆಯಾಯಿತು. ಹೀಗಾಗಿ ಅರಸ ಹುಸ್ಸೇನರ ಉದಾಕ್ಕೆ ವಜ್ರಾಘಾತ ಹೊಡೆದಂತಾಯಿತು.

ಈ ಆಘಾತದಿಂದ ರಕ್ಷಿಸಿಕೊಳ್ಳಲು ಶ್ರೀ ಹುಸೇನರಿಗೆ ಬ್ರಿಟಿಷನೇನೆಯು ಧಾವಿಸಿಬಂದು ಸಹಾಯಕ್ಕೆ ಸಿದ್ಧವಾಯಿತು. ಅರಮನೆಯಿಂದ ಅನತಿ ದೂರದಲ್ಲಿಯೇ ಬ್ರಿಟಿಷರ ವಿಮಾನಪಡೆಯುತಳಪೂರಿತ್ತು. ಪ್ರಪಂಚದ ಹೆಬ್ಬಿನರಾಷ್ಟ್ರಗಳ ಈ ಸೇನೆಯನ್ನು ಹಿಂತೆಗೆಯಲೇಬೇಕೆಂದು ವಾದಿಸುತಿದ್ದುವು.

ಇರಾಕದ ವಿದ್ರೋಹದಿಂದ ಒಂದು ಬಾರಿ ಸ್ಥಾಪಿತವಾದ ಫೆಡರಲ್ ಸರಕಾರೀ ವ್ಯವಸ್ಥೆಯು ಮಂಗಮಹೋಯಿತು. ಆ ಕ್ಷಾಬಾ ಕೊಲ್ಲಿಯಲ್ಲಿ ಸಾರಿಗೆ ಸೌಕರ್ಯವನ್ನು ಪಡೆಯುವ ಅಭಿಲಾಷೆಯಿಂದ ಅಮೆರಿಕೆಯು ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ನೀಡಲು ಮುಂದಾಗಿದೆ. ಆದರೆ, ಯಾರೊಬ್ಬನಿಗಾದರೂ ಈ ರಾಷ್ಟ್ರದ ಭಾವಿ ಸ್ಥಿತಿಯ ಬಗ್ಗೆ ಒಂದು ನಿರ್ದಿಷ್ಟ ನಿಲುವುಯಿಲ್ಲ. ಸ್ವಯಂ ಅರಸ ಹುಸೇನರೇ ಈ ಬಗ್ಗೆ ವ್ಯಥಿತಚಿತ್ತರಾಗಿದ್ದಾರೆ.

ಮುಂದಿನ ವಾರ: ಸಾವಿ ಅರೇಬಿಯಾ.

ಪ್ರಕಟಣೆ

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ

S. C. 458/1958.

N ಶ್ರೀನಿವಾಸ ರಾವ್ —ವಾದಿ

ಸುತ್ತ

ಲಚ್ಚಿ ಸಿಡ್ತಿ-ಕಂಬಳಸುತ್ತ ಅಂತನ್ನು ಸೆಡ್ತಿ ಮೊಮ್ಮಗಳು-ಉಡ್ಪಿ ತಾಲೂಕು ಕೊಡವೂರು ಗ್ರಾಮದ ಗರ್ದೆ —ಪ್ರತಿವಾದಿಯು

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ.

ಮೇಲ್ಕಂಡ ವಾದಿಯು ಮೂಲನೇನೆ ಬಾಕಿ ಆಸಲು ಬಡ್ಡಿಗೆ ದಾಕ್ಲುಮಾಡಿದ ಸದ್ರಿ ಸಾವಯಸ್ಸಿಗೆ ಪ್ರತಿವಾದಿಗೆ ಅಮ್ಮೆರ ಸರ್ಕಿ ನೋಟೀಸು ಬಗ್ಗೆ ತಾ. 8—10—1958ಕ್ಕೆ ಯಿಡೋಜಾಗಿಯಿದೆ. ಆ ಕುರಿತು ಪ್ರತಿವಾದಿಗೆ ಅಕ್ಕೆಪ ಹೇಳತಕ್ಕದ್ದು ಇದ್ದಲ್ಲಿ ಆ ದಿವಸ ಮೇಲ್ಕಂಡ ಕೋರ್ಟು ಮುಂದೆ 10 ಗಂಟೆಗೆ ಹಾಜರಾಗಿ ನ್ಯಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಜಾಗಿಯಿದೆ.

V. R. Kidyoor,
Advocate for Plff.

ಉಡ್ಪಿ 26—9—1958.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಹಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಸೀಜಂವ ರಾವ್, ವಿದ್ವಾನ್, ವಿಶಾರದ.

(೧೬ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೭೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ

ದಶಮಾನ ಪದ್ಧತಿ

ಸರ್ವಜನಮಾನ್ಯವಾದ ದಶಮಾನ ಪದ್ಧತಿ

ಸುಲಭ ಸರಳ ವ್ಯವಹಾರಕ್ಕೆ ಇದೇ ಅತಿಸುಲಭ ಸಾಧನ

ಚಕ್ರವನ್ನು ಪ್ರಥಮತಃ ಚೀನಾದಲ್ಲಿ ಕಂಡುಹಿಡಿಯಲಾಯಿತೆಂದೂ, ಆದರೆ ಜನರು ಅದನ್ನು ಪೂಜಾಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದರೆಂದೂ ಹೇಳಲಾಗಿ ಮೆ. ಚೀನೀಯರು ಕಂಡು ಹಿಡಿದ ಈ ಚಕ್ರವನ್ನು ಉಳಿದ ಜನರು ಯಂತ್ರ ವಿಜ್ಞಾನವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಉಪಯೋಗಿಸಿದರು. ತಳ್ಳಲವಾಗಿ ಯೂರೋಪಿನಲ್ಲಿ ಉದ್ಯೋಗ ದಂಧೆಗಳಲ್ಲಿ ಅಧಿಕಾಧಿಕವಾಗಿ ಯಂತ್ರಗಳನ್ನು ಉಪಯೋಗಿಸಲಾಯಿತು. ಆದರೆ ಚೀನಾದಲ್ಲಿ ಸಾಮಾನ್ಯ ಶತಮಾನಗಳ ಕಾಲದ ವರೆಗೆ ಮನುಷ್ಯರು ಹಾಗೂ ಪಶುಗಳನ್ನೇ ಶ್ರಮ ಕೆಲಸಗಳಿಗಾಗಿ ಬಳಸಲಾಗುತ್ತಿತ್ತು.

'ಸೊನ್ನೆ'ಯನ್ನು ಭಾರತದಲ್ಲಿ ಸುಮಾರು ೩೦೦೦ ವರ್ಷಗಳ ಹಿಂದೆ ಕಂಡುಹಿಡಿಯಲಾಯಿತು. 'ಸೊನ್ನೆ'ಯ ತತ್ವವು, ಭಾರತೀಯ ತತ್ವ ಶಾಸ್ತ್ರದ ಮೇಲೆ ಎಷ್ಟೆರ ಮಟ್ಟಿನ ಪರಿಣಾಮವನ್ನು ಬೀರಿದೆಯೆಂಬುದು ಸುಸ್ಪಷ್ಟವಾಗಿದೆ ಯಾದರೂ, ಸೊನ್ನೆಯನ್ನು ಹಾಗೂ ದಶಮಾನ ಪದ್ಧತಿಯನ್ನು ಭಾರತೀಯರು ವ್ಯವಹಾರ ಜೀವನದಲ್ಲಿ ಪ್ರಯೋಗಕ್ಕೆ ತರಲಿಲ್ಲ.

ಮಧ್ಯಕಾಲಾರಂಭದಿಂದ ಹಿಡಿದು ಸರಿಸುಮಾರಾಗಿ ಇತ್ತೀಚಿನ ವರೆಗೆ, ಭಾರತವು ವಿವಿಧ ರಾಜ್ಯಗಳಾಗಿ ಜರಿದು ಹಂಚಿ ಹೋಗಿತ್ತು. ಭಾರತವನ್ನು ಏಕೀಕೃತ ರಾಜ್ಯ ವ್ಯವಸ್ಥೆಯಲ್ಲಿ ತರುವ ಪ್ರಯತ್ನ ಗಳು ಫಲಸ್ರದವಾಗಿರಲಿಲ್ಲ. ರಾಜಕೀಯವಾಗಿ ಛಿನ್ನಭಿನ್ನವಾಗಿದ್ದ ರಾಜ್ಯಗಳಲ್ಲಿ ಭಿನ್ನಭಿನ್ನವಾದ ಸಾಧನೋಪಕರಣಗಳು ಮತ್ತು ಸಂಪ್ರದಾಯಗಳೂ ಒಳಕೆಯಲ್ಲಿದ್ದುವು. ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯ ನಾಣ್ಯ ಪದ್ಧತಿಗಳು ಹಾಗೂ ತೂಕ ಮತ್ತು ಅಳತೆಯ ಪದ್ಧತಿಗಳೂ ಇದ್ದವು.

ರಾಜಕೀಯವಾಗಿ ಜರಿದು ತುಂಡಾಗಿದ್ದ ಈ ರಾಜ್ಯಗಳು ಭೌಗೋಲಿಕ ಕಾರಣಗಳಿಂದಾಗಿ, ಒಂದು ಸ್ವಾತಂತ್ರ್ಯದ ಜನರು ಮತ್ತೊಂದು ಸ್ವಾತಂತ್ರ್ಯದ ಜನರೊಡನೆ ತಳೆಯುತ್ತಿದ್ದುದು ಬಹಳ ವಿರಳವಾಗಿತ್ತು, ಇದರಿಂದ ಪ್ರತ್ಯೇಕ ಗ್ರಾಮಗಳಲ್ಲಿ ಬಹುತೇಕವಾಗಿ ಸ್ವಪರಿಪೂರ್ಣ ಆರ್ಥಿಕ ವ್ಯವಸ್ಥೆಯು ಏರ್ಪಟ್ಟಿತು. ಅನೇಕ ಕಡೆಗಳಲ್ಲಿ ವಿವಿಧ ರೀತಿಯ ನಾಣ್ಯ ಪದ್ಧತಿಗಳು, ತೂಕ ಮತ್ತು ಅಳತೆಯ ಪದ್ಧತಿಗಳು ಇದ್ದುದು, ಅವರ ಹೊರಗಿನ ವಾಣಿಜ್ಯ ವ್ಯವಹಾರಗಳಿಗೆ ಅತಂಕವನ್ನೆಸಿಸಿತ್ತು. ಆಕ್ಬರನ ಕಾಲದಲ್ಲಿ ರಾಜಕೀಯ ಸಂಘಟನೆ ಕೊಂಚ ಮಟ್ಟಿಗೆ ನಡೆಯಿತು. ಭಾರತದಲ್ಲಿ ದಶಮಾನ ನಾಣ್ಯ ಪದ್ಧತಿ, ತೂಕ ಮತ್ತು ಅಳತೆಯ ಪದ್ಧತಿಗಳನ್ನು ಆಚರಣೆಗೆ ತರುವ ವಿಷಯವನ್ನು ಸವಾಲೋಚಿಸಿದವನು ಅವನೇ.

ಯೂರೋಪ್ ಮತ್ತು ಅಮೆರಿಕಾಗಳಲ್ಲಿ ವಿಜ್ಞಾನದಲ್ಲಿ ಬಹುವಾಗಿ ಪ್ರಗತಿಯಾಯಿತು, ಆವ ವಾಣಿಜ್ಯ ವ್ಯವಹಾರದ ಉಪಯೋಗಕ್ಕೆ ಬರುವ ತೂಕ ಮತ್ತು ಅಳತೆಯನ್ನೂ ಸಹ ಅನರು ಬಹಳವಾಗಿ ವ್ಯವಹಾರಿಕವನ್ನಾಗಿ ಮಾಡಿದರು. ಅಮೆರಿಕದ ಸ್ವಾತಂತ್ರ್ಯ ಯುದ್ಧಾನಂತರ ಅಲ್ಲಿನ ಅಧ್ಯಕ್ಷ ಜೆಫರ್ಸನ್‌ರವರು ನೂರು ಭಾಗಾಂಶಗಳನ್ನುಳ್ಳ ಡಾಲರನ್ನು ಆಚರಣೆಗೆ ತಂದರು. ಇದೇ ರೀತಿ ಫ್ರಾನ್ಸಿನಲ್ಲಿಯೂ ಮಹಾಕ್ರಾಂತಿಯನಂತರ, ಟಾಲಿರ್ಯಾಂಡ್‌ರವರು ಮೆಟ್ರಿಕ್ ಪದ್ಧತಿಯನ್ನು ಬಳಕೆಗೆ ತಂದರು. ಆದು ಯೂರೋಪಿನಲ್ಲಿ ತ್ವರಿತಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿದ್ದ ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರಗಳಿಗೆ ತುಂಬಾ ಸಹಾಯ ನೀಡಿತು.

೧೯ನೆಯ ಶತಮಾನದವರೆಗೂ ಭಾರತದಲ್ಲಿ ರಾಜಕೀಯ ಏಕ್ಯವನ್ನು ಸ್ಥಾಪಿಸುವ ಭಾವನೆಯೇ ಬಂದಿರಲಿಲ್ಲ, ಆ ಭಾವನೆಯು ರೂಪುಗೊಂಡ ಮೇಲೆ ಅನು ತ್ವರಿತಗತಿಯಿಂದ ಮುಂದುವರಿಯಿತು. ಆಚರೂ ದೇಶವ್ಯಾಪ್ತ ಏಕೀಯ ರೀತಿಯ ಆರ್ಥಿಕ ಸಾಧನೋಪಕರಣಗಳನ್ನು ತರುವುದು ಸಾಧ್ಯವಾದ ಕೆಲಸವಾಗುವುದು. ಮೆಟ್ರಿಕ್ ಪದ್ಧತಿಯನ್ನು ಭಾರತದಲ್ಲಿ ಆಚರಣೆಗೆ ತರಬೇಕೆಂದು ೧೮೭೦ರಲ್ಲಿಯೇ ಕಾನೂನನ್ನು ಅಂಗೀಕರಿಸಿದರೂ, ಅದು ಕಾರ್ಯರೂಪಕ್ಕೆ ಬಂದಿರಲಿಲ್ಲ.

ಸ್ವಾತಂತ್ರ್ಯ ಪ್ರಾಪ್ತಿಯಾದನಂತರ, ಇಡೀ ದೇಶವು ಒಂದೇ ರಾಜನೀತಿ ಸೂತ್ರದಲ್ಲಿ ಸೇರಿಕೊಂಡಿತು. ಸುಮಾರು ೬೦೦ ರಾಜ್ಯಗಳು ಈ ಸೂತ್ರದಲ್ಲಿಯೇ ಸೇರಿಕೊಂಡವು. ದೇಶವ್ಯಾಪ್ತ ಒಂದೇ ನಾಣ್ಯ ಪದ್ಧತಿ ಹಾಗೂ ತೂಕ ಮತ್ತು ಅಳತೆ ಮಾನಗಳನ್ನು ಆಚರಣೆಗೆತರುವ ಪ್ರಶ್ನೆಯನ್ನೂ ಎದುರಿಸಬೇಕಾಯಿತು. ದೇಶದಲ್ಲಿ ನೂರಾರು ವರ್ಷಗಳ ನಂತರ ಮೊದಲನೆಯ ಸಾರಿ ಔದ್ಯೋಗಿಕ ಹಾಗೂ ಆರ್ಥಿಕ ಉನ್ನತಿಯ ಆರಂಭವಾದಾಗ ಈ ಪ್ರಶ್ನೆ ಇನ್ನೂ ಹೆಚ್ಚಿನ ಮಹತ್ವವನ್ನು ಗಳಿಸಿತು. ನಾಣ್ಯ ಪದ್ಧತಿ ಹಾಗೂ ತೂಕ ಮತ್ತು ಅಳತೆಯ ಮಾನಗಳಲ್ಲಿ ಏಕರೂಪತೆ ಬರದ ಹೊರತು ಆರ್ಥಿಕ ಕ್ಷೇತ್ರದಲ್ಲಿ ತೊಂದರೆಗಳು ತಪ್ಪಿದ್ದಲ್ಲ. ಉದಾಹರಣೆಗೆ ಬ್ರಿಟನ್ ನಮ್ಮೆದುರಿಗಿದೆ, ಅಲ್ಲಿ ಈಗಲೂ ಪೌಂಡ್ ಮತ್ತು ಷಿಲ್ಲಿಂಗ್, ಹಾಗೂ ಟನ್ ಮತ್ತು ಹಂಡ್ರೆಡ್‌ವೇಟ್ ಎಂಬ ಹಳೆಯ ವದ್ಧತಿಯೇ ಜಾರಿಯಲ್ಲಿದೆ.

ದೇಶದಲ್ಲಿ ದಶಮಾನ ನಾಣ್ಯಗಳನ್ನು ಆಚರಣೆಗೆ ತರುವ ವಿಷಯವನ್ನು ಆಂಗೀಕರಿಸಿದಾಗ, ಅನೇಕ ಪ್ರಭಾವಶಾಲಿ ವ್ಯಕ್ತಿಗಳು ಇದನ್ನು ಸಿರೋಧಿಸಿದರು. ಇದು ಜನರಿಗೆ ಕಷ್ಟವಾಗುವುದು, ಅವರಿ

(೧೯ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಇಂದು ಪ್ರಾರಂಭವಾಗುತ್ತದೆ

ಭಾರತದಲ್ಲಿ ಒಂಭತ್ತನೆ ಟಿ. ಬಿ. ಮೊಹರು ಮಾರಾಟ ಚಳವಳಿ

(ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯ, ನ್ಯೂ ಡಿಲ್ಲಿ, ಇವರಿಂದ ಪ್ರಾರಂಭಿಸಲ್ಪಟ್ಟದ್ದು)

ಈ ಕೆಳಗಡೆ ಇರುವುದೇ 1958ನೆ ಟಿ.ಬಿ. ಮೊಹರು
(ಇಂದಿನಿಂದ ಮಾರಾಟದಲ್ಲಿದೆ)

ದೊಡ್ಡ ಸಂಖ್ಯೆಯಲ್ಲಿ ಟಿ. ಬಿ. ಮೊಹರುಗಳನ್ನು ಕೊಂಡುಕೊಳ್ಳಿರಿ.

ಒಂದು ಮೊಹರಿನ ಬೆಲೆ ಐದು ನಯೇಪೈಸೆ ಮಾತ್ರ.

"ಪರಕಾರದ ಆಶ್ರಯದಲ್ಲಿ ನಡೆಯುತ್ತಿರುವ ಕ್ಷಯರೋಗ ನಿಯಂತ್ರಣದ ರಾಷ್ಟ್ರೀಯ ಯೋಜನೆಯು ಒಂದು ದೊಡ್ಡ ಹೆಜ್ಜೆ ಎಂಬುದಾಗಿ ಪರಿಗಣಿತವಾದರೂ, ಇದರ ಪ್ರಯೋಜನವು ಮುಂದಿನ ವರ್ಷಗಳಲ್ಲಿ ತಿಳಿಯುವುದು ನಿಶ್ಚಿತವಾದರೂ ಬರಿಯ ಸರಕಾರ ಒಂದೇ ಈ ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಿಲ್ಲವೆಂದು ಈಗ ತಿಳಿದುಬಂದಿದೆ. ಈ ಕೆಲಸದಲ್ಲಿ ಸಾರ್ವಜನಿಕ ಸಂಸ್ಥೆಗಳೂ, ಮಹಾಜನರೂ ನೆರವಾಗಬೇಕಾದ್ದು ಯೋಗ್ಯ. ಭಾರತದ ಕ್ಷಯರೋಗ ಸಂಘವೂ ಅದಕ್ಕೆ ಸಂಬಂಧಿಸಿದ ರಾಜ್ಯಶಾಖೆಗಳೂ ತುಂಬಾ ಚಟುವಟಿಕೆಯಿಂದ ಕೆಲಸಮಾಡುತ್ತಿವೆ. ಕ್ಷಯರೋಗದ ಮುದ್ರೆಗಳ ಮಾರಾಟದ ಚಳವಳಿಯಿಂದ ಇದಕ್ಕೆ ಬೇಕಾದ ಧನಸಹಾಯ ಒದಗುವುದು ಒಂದೇ ಅಲ್ಲದೆ ಕ್ಷಯ ಮತ್ತು ಅದರ ನಿರೋಧದ ಬಗ್ಗೆ ಜನರಲ್ಲಿ ಜಾಗೃತಿಯನ್ನೂ ತಿಳಿವಳಿಕೆಯನ್ನೂ ಉಂಟುಮಾಡುವುದು ಸಾಧ್ಯವಾಗುತ್ತದೆ.

— ಡಾ. ಪಿ. ವಿ. ಬೆಂಜಮಿನ್.

ನೆನಪಿನಲ್ಲಿಡಿರಿ

ನೀವು ಕೊಡುವ ಸಹಾಯಧನವು ಕ್ಷಯರೋಗ ನಿವಾರಣಾ ಜನತಾ ಚಳವಳಿಗೆ ನೇರಾದ ಬೆಂಬಲವಾಗಿದೆ.

ಮೊಹರುಗಳು ಸಿಗುವ ಸ್ಥಳಗಳು:

1. ದಿ. ಜನರಲ್ ಸೆಕ್ರೆಟರಿ, ಸೀಲ್ ಸೇಲ್ ಕಮಿಟಿ, ಗೋಪಾಲಕೃಷ್ಣ ಟೆಂಪ್ಲ್ ರೋಡು, ಮಂಗಳೂರು.
2. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್, ಪುತ್ತೂರು, ಕೊಡಗು,
3. ದಿ. ಜನರಲ್ ಸೆಕ್ರೆಟರಿ, ಮೈಸೂರು ಸ್ಟೇಟ್ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್, ಲೇಡಿ ವಿಲ್ಲಿಂಗ್‌ಟನ್ಸ್ ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ನಗರ ಮತ್ತು ಸ್ಟೇಟಿನವರಿರುವ ಇತರ ವಿಜಿಪ್ಸಗಳು.

ಈ ಸ್ಥಳ ದಾನಮಾಡಿದವರು:

ದಿ. ಟಿ. ಐ. ಸೈಕ್ಲ್ಸ್ ಇಂಡಿಯಾ ಲಿಮಿಟೆಡ್,
ಆಂಬತ್ತೂರು, ಮದ್ರಾಸು ಸಮೀಪ.

ಅಧ್ಯಾತ್ಮ ಕ್ಷೇತ್ರ

ಆತ್ಮನು ದೇಹಿಯೇ ಅಲ್ಲದೆ ದೇಹವಲ್ಲ

ಆತ್ಮಜ್ಞಾನಿಯೊಬ್ಬನು ವಾಂಛೆಗ ಳೆಲ್ಲವನ್ನೂ ತಡೆಹಿಡಿದು ಸ್ಥಿತ ಪ್ರಜ್ಞನಾಗುವನು

ನಾನು ಯಾರು? ನನ್ನ ಶಕ್ತಿ ಏನು? ನನ್ನ ಕರ್ತವ್ಯವೇನು? ಇತ್ಯಾದಿ ಮಾತ್ಮ ಗಳ ವಿಚಾರ ಮಾಡಿರಿ. ಎಲ್ಲಾ ವಿಚಾರ ಕರ ಅಭಿಪ್ರಾಯದಂತೆ ಜ್ಞಾನದ ಒಂದೇ ಒಂದು ಸ್ವರೂಪವು "ಆತ್ಮ ಜ್ಞೋಧ"ವಾಗಿದೆ ತನ್ನನ್ನು ತಾನೇ ತಿಳಿದುಕೊಂಡ ನಂತರ, ಬೇರೆ ಏನನ್ನು ತಿಳಿದುಕೊಳ್ಳುವ ಅಗತ್ಯ ಇಲ್ಲ. ಜೀವವು ಈಶ್ವರಾಂಶ ಸಂಭೂತವಾಗಿದೆ. ವಿಚಾರಗಳಿಂದ ಮುಚ್ಚಲ್ಪಟ್ಟ, ಕೆಟ್ಟರೂಪದಿಂದ ಅದು ಗೋಚರಿಸುತ್ತಿದೆ. ಆದರೆ ಆದರೊಳಗೆ ಅಮೂಲ್ಯ ನಿಧಿಯು ಅಡಕವಾಗಿದೆ. ನನ್ಮೊಣಿಕೆಗೆ ಮೀರಿದ ಶಕ್ತಿಯ ಕೇಂದ್ರವಾಗಿದೆ. ಅಜ್ಞಾನವೇ ನಮ್ಮ ಎಲ್ಲಾ ಕಷ್ಟ, ದುಃಖದ ಮೂಲವಾಗಿದೆ. ಆತ್ಮ ಸ್ವರೂಪವನ್ನು ತಿಳಿದ ನಂತರ, ಬೇರೆ ಕಷ್ಟಗಳೆ ಯಾವುವೂ ಉಳಿಯಲಾರವು. ಯಾವ ರೀತಿಯಲ್ಲಿ ನೋಡಿದರೂ, ಆತ್ಮ ಜ್ಞಾನವೇ ಸರ್ವ ಸುಲಭ ಸರ್ವೋಚ್ಚ ಜ್ಞಾನವಾಗಿದೆ.

ಒಂದು ವೇಳೆ, ಯಾರನ್ನಾದರೂ ಕರೆದು, "ತಾವು ಯಾರು" ಎಂದು ಕೇಳಿದರೆ, ಅವರು ತಮ್ಮ ಹೆಸರು, ಕುಲ, ಗೋತ್ರ ಪದವಿ ಇವುಗಳನ್ನೆಲ್ಲ ವಿವರಿಸುವರು. ಪ್ರಶ್ನೆಗೆ ಉತ್ತರವನ್ನು ಈ ರೀತಿ ಕೊಡುವನಲ್ಲದೆ, ತನ್ನನ್ನು ತಾನು ಅಂತೆಯೇ ಇವನು ಎಣಿಸಿಯೇ ಇರುವನು. ಶರೀರ ಭಾವನೆಯಿಂದ ಮನುಜನು ತನ್ನನ್ನು ಶರೀರವೆಂದೇ ಎಣಿಸುವನು. ಕುಲಗೋತ್ರಾದಿಗಳೆಲ್ಲ ಶರೀರದವುಗಳಾಗಿಯೇ ಇರುತ್ತವೆ. ಶರೀರವು ಮಾನುಷ್ಯನ ಒಂದು ರೀತಿಯ ಅಂಗಿಯಾಗಿದೆ. ಆದರೆ ಮನುಜನು ಭ್ರಮೆ ಮತ್ತು ಅಜ್ಞಾನದಿಂದ ತನ್ನನ್ನೇ ಶರೀರವೆಂದು ತಿಳಿದಿರುವನು.

ಮನುಷ್ಯನು ಶರೀರದಲ್ಲಿಯೇ ಇರುವನು, ಇದು ಸತ್ಯವಾಗಿದೆ. ಆದರೆ ಅವನು ಶರೀರವಲ್ಲ. ಇದೂ ಕೂಡ ಸತ್ಯವಾಗಿದೆ. ಪ್ರಾಣವು ಹೋದ ನಂತರ ಶರೀರಕ್ಕೆ ಬೆಲೆಯೇ ಇಲ್ಲ-ಮೇಲಿಂದ ನೋಡಿದರೆ ಶರೀರಕ್ಕೂ ಮೃತ ಶರೀರಕ್ಕೂ ವ್ಯತ್ಯಾಸವೇನಿಲ್ಲ. ಮೃತ ಶರೀರವನ್ನು ಕೆಲವು ದಿನ ಹಾಗೆಯೇ ಬಿಟ್ಟರೆ, ಅದರ ಹತ್ತಿರ ಹೋಗಲೂ ಸಾಧ್ಯವಿಲ್ಲದಂತಾಗುವುದು. ಶರೀರದಲ್ಲಿ ಪ್ರಾಣ ಇರುವ ವರೆಗೆ ಮಾತ್ರ ಬೆಲೆಯುಳ್ಳದಿದೆ. ನಂತರ ಅದಕ್ಕೆ ಬೆಲೆಯಿಲ್ಲ. ಇದರಿಂದಾಗಿ, ಮನುಷ್ಯನು ಶರೀರವಲ್ಲ ವೆಂದು ಮಾಡುವನಲ್ಲದೆ, ಅವನು ಶರೀರದಿಂದ ಭಿನ್ನವಾಗಿದ್ದಾನೆಂದು, ತಿಳಿಯಬಹುದು. ಈ ಭಿನ್ನಸತ್ಯಕ್ಕೆ ಆತ್ಮನೆನ್ನುವರು. ಸರಿಯಾಗಿ ಪರಿಶೀಲಿಸಿದರೆ ಇದೇ ಮನುಷ್ಯನೆನ್ನಬಹುದು ನಾನು ಯಾರು? ನಾನು ಆತ್ಮ.

ಹೆಚ್ಚಿನ ಜನರು ತಾವು ಶರೀರವೆಂಬ ಭಾವನೆಯಿಂದಲೇ ವ್ಯವಹಾರವನ್ನು ಮಾಡುವರು. ಶರೀರದ ಹಾನಿಲಾಭವೇ ತನ್ನ ಹಾನಿಲಾಭವೆಂದು ತಿಳಿಯುವರು.

ಶರೀರವು ಆತ್ಮದ ಮಂದಿರವಾಗಿದೆ. ಶರೀರದ ಆರೋಗ್ಯ, ಸ್ವಚ್ಛತೆ, ಮುಂತಾದ ಕಾರ್ಯಗಳನ್ನು ಮಾಡುವುದು ಬಹಳ ಹಿತಕರವಾಗಿದೆ. ಆದರೆ ಶರೀರ ಕ್ಕೋಸ್ಕರವೇ ಚಿಂತಿಸುವುದು, ಅದನ್ನು ತನ್ನ ಸ್ವರೂಪವೆಂದು ತಿಳಿಯುವುದು, ಇದರಿಂದಾಗಿ ತನ್ನ ವಾಸ್ತವಿಕ ಸ್ವರೂಪವನ್ನು ಅರಿಯುವುದು ಹಿತವಲ್ಲ.

ಆತ್ಮನ ಶರೀರದಿಂದ ಬೇರೆಯಾಗಿದೆ. ಶರೀರ ಸ್ವಾರ್ಥದ ಪ್ರತಿನಿಧಿತ್ವವನ್ನು ಹೆತ್ತು ಇಂದ್ರಿಯಗಳೂ, ವತ್ತೆ ಹನ್ನೊಂದನೆಯ ಮನಸ್ಸೂ, ಕೂಡಿ, ಶರೀರಿಕ ದೃಷ್ಟಿಕೋಣವನ್ನು ಆಲೋಚಿಸುತ್ತಾ, ಕಾರ್ಯಗಳನ್ನು ಮಾಡುತ್ತಾ ಇರುತ್ತವೆ. ಸ್ವಾದಿಷ್ಟ ಭೋಜನ, ಹೊಸ ಆಭರಣ, ಸುಂದರ ದೃಶ್ಯ, ಮಧುರ ಶ್ರವಣ, ರೂಪವತಿ ಸ್ತ್ರೀ, ನಾನಾ ಪ್ರಕಾರ ಭೋಗವಿಲಾಸಗಳೇ ಇಂದ್ರಿಯಗಳ ಆಕಾಂಕ್ಷೆಗಳಾಗಿವೆ. ಉಚ್ಚ ಪದವಿ, ವಿಪುಲ ಸಂಪತ್ತು, ಅಸಾಧಾರಣ ಯಶಸ್ಸು, ಇವುಗಳೆಲ್ಲ ಮನಸ್ಸಿನ ಆಕಾಂಕ್ಷೆಗಳಾಗಿವೆ. ಈ ಇಚ್ಛೆಗಳನ್ನೇ ತೃಪ್ತಿಪಡಿಸುವುದರಲ್ಲಿ ಸಂಪೂರ್ಣ ಜೀವನವು ಕೊನೆಗೊಳ್ಳುವುದು ಈ ಇಚ್ಛೆಗಳು ಪ್ರಬಲವಾದ ಹಾಗೆ, ಮನುಷ್ಯನು ಅವುಗಳನ್ನು ಯಾವ ರೀತಿಯಿಂದಾದರೂ ತೃಪ್ತಿಪಡಿಸಲು ಹವಣಿಸುವನು. ಇದರ ದೆಸೆಯಿಂದ ಉಚಿತ ಅನುಚಿತ ವಿಚಾರಗಳನ್ನು ತೊರೆದು, ಯಾವ ಮಾರ್ಗದಲ್ಲಿ ಸಾಧ್ಯವಿವೆಯೋ, ಹಾಗೆ ಸ್ವಾರ್ಥಸಾಧನೆಯ ಮಾರ್ಗದಲ್ಲಿ ತೊಡಗುವನು. ಇದೇ ಸಮಸ್ತ ಪಾಪಗಳ ಮೂಲವಾಗಿದೆ.

ಜೀವನದ ವಾಸ್ತವಿಕ ಸಫಲತೆಯು, ಮತ್ತು ಸಮೃದ್ಧಿಯು ಆತ್ಮಭಾವದಲ್ಲಿ ಜಾಗ್ರತನಾಗಿರುವುದರಲ್ಲಿದೆ. ಯಾವಾಗ ಮನುಜನು ತನ್ನಲ್ಲಿ ಆತ್ಮಾನುಭವವನ್ನು ಹೊಂದುವನೋ, ಆಗಾಂ ಕ್ಷೆ, ಮತ್ತು ಅಭಿರುಚಿಯು, ಅಂತಹ ಕಾರ್ಯದಲ್ಲಿಯೇ, ಪ್ರಾಂತವಾಗುವುದು. ಇದರಿಂದಾಗಿ ಭಧ್ಯಾತ್ಮಿಕ ಸುಖವು ಪ್ರಾಪ್ತವಾಗುವುದು. ಕಳ್ಳತನ, ವ್ಯಭಿಚಾರ, ಅನೀತಿಯಿಂದ ಕೂಡಿದ ವ್ಯವಹಾರವನ್ನು ಮಾಡುವಾಗ, ಅಂತಃಪ್ರೇರಣದಲ್ಲಿ ಒಂದು ರೀತಿಯ ಳಳಕಳ ಉಂಟಾಗುವುದು. ಪಾಪಕಾರ್ಯಗಳನ್ನು ಮಾಡುವಾಗ, ಕೈಕಾಲು, ತುಟಿಗಳೆಲ್ಲ ನಡುಗತೊಡಗುವುದು. ಇದರ ತಾತ್ಪರ್ಯವೇನೆಂದರೆ ಆ ಕಾರ್ಯಗಳನ್ನು ನಾಡಲು, ಆತ್ಮನು ಇಚ್ಛಿಸುವುದಿಲ್ಲ. ಆದರೆ ಮನುಜನು ಪರೋಪಕಾರ, ಪರಮಾರ್ಥ, ಸೇವೆ, ದಾನ, ಉದಾರತೆ, ತ್ಯಾಗ, ತಪಸ್ಸು, ಮುಂತಾದ ಪುಣ್ಯ ಕರ್ಮಗಳನ್ನೇ ಮಾಡುವಾಗ, ಹೃದಯದ ಪೂರ್ಣತೆಯಲ್ಲಿ ಸಂತೋಷ, ಆನಂದ, ಉಲ್ಲಾಸವು ಉಂಟಾಗುವುದು. ಈ ಕರ್ಮಗಳನ್ನು ಆತ್ಮವು ಇಷ್ಟಪಡುವುದು. ಆತ್ಮ ಧ್ವನಿಯನ್ನು ಕೇಳಿ ಅದರಂತೆ ನಡೆಯುವ ಮನುಷ್ಯನು ಪುಣ್ಯಕರ್ಮಿಯಾಗಿದ್ದಾನೆ. ಶರೀರ ಮೃತವಾದಮೇಲೆ ಜೀವನು ಸದ್ಗತಿಯನ್ನು ಹೊಂದಲು, ಸತ್ಕರ್ಮವೇ ಕಾರಣವಾಗಿದೆ. ಲೋಕ, ಪರಲೋಕಗಳಲ್ಲಿ ಸುಖಶಾಂತಿಯು ಸತ್ಕರ್ಮಗಳ ಮೇಲೆ ನಿರ್ಧರವಾಗಿದೆ. ಇದರಿಂದಾಗಿ ಆತ್ಮದ ಸ್ವಾರ್ಥವು ಪುಣ್ಯಕರ್ಮಗಳ ಮೇಲೆ ಹೊಂದಿಕೊಂಡಿದೆ. ಶರೀರದ ಸ್ವಾರ್ಥವು ಇದಕ್ಕೆ ವಿಪರೀತವಾಗಿದೆ. ಮನುಜರನೇಕರು ನಾಶಹೊಂದುವ ಶರೀರದ ಇಚ್ಛೆಗಳನ್ನೆ, ಪೂರ್ಣಗೊಳಿಸುವುದಲ್ಲಿಯೇ, ಜೀವನವನ್ನು ಕಳೆಯುವರು. ಇದರಿಂದ ಶರೀರ ಮತ್ತು ಮನಕ್ಕೆ ಅಭಿರಂಜನವಾಗುವುದು. ಆದರೆ ಆತ್ಮಕ್ಕೆ ಲೋಕ ಪರಲೋಕಗಳಲ್ಲಿ, ಕಷ್ಟವನ್ನೂ ಸಹಿಸಬೇಕಾಗುವುದು. ತಪ, ತ್ಯಾಗ, ಸಂಯಮ, ಸೇವೆ, ದಾನ ಇತ್ಯಾದಿಗಳಿಂದ ಶರೀರ ಮತ್ತು ಮನಸ್ಸು ನೊಂದಿಕೊಳ್ಳುವುದು. ಇದರಿಂದಾಗಿ ಶಾರೀರಿಕ ಸ್ವಾರ್ಥಕ್ಕೂ, ಆತ್ಮ ಸ್ವಾರ್ಥಕ್ಕೂ ಸರಿಜೋಡಣೆಯಾಗುವುದಿಲ್ಲ. ಒಂದರ ಸುಖದಿಂದ ಇನ್ನೊಂದರ ದುಃಖವುಂಟಾಗುವುದು. ಇವುಗಳೆರಡರಲ್ಲಿ ಯಾವುದಾದರೊಂದನ್ನು ಆರಿಸಬೇಕಾಗುವುದು.

ಯಾರು ತನ್ನನ್ನು ಶರೀರವೆಂದು ಭಾವಿಸುವರೋ, ಅವರು ಆತ್ಮಸುಖವನ್ನೆಲೆ ಕ್ಕಿಸದೆ, ಶರೀರ ಸುಖಕ್ಕೋಸ್ಕರ, ಭೌತಿಕ ಸಂಪತ್ತುಗಳನ್ನೂ, ಭೋಗ ಸಾಮಗ್ರಿಗಳನ್ನೂ, ಅನುಭವಿಸುವುದರಲ್ಲಿಯೇ, ತಲ್ಲೀನರಾಗಿರುತ್ತಾರೆ, ಇವರು ಯಜ್ಞ ಪಡೆಯುವುದಕ್ಕೋಸ್ಕರ, ಮತ್ತು ಅಹಂಕಾರವನ್ನು ತೃಪ್ತಿಪಡಿಸುವುದಕ್ಕಾಗಿ ಮಾತ್ರವೇ, ಕೆಲವು ವೇಳೆ ಧರ್ಮದ ಆಶ್ರಯವನ್ನು ಪಡೆಯುತ್ತಾರೆ ಇಂತಹರು ಕೆಲವು ವೇಳೆ ಧರ್ಮ, ಈಶ್ವರ, ಸದಾಚಾರ, ಪರಲೋಕ ಇತ್ಯಾದಿ ವಿಷಯಗಳನ್ನು ಚರ್ಚೆ ಮಾಡುವರು. ಆತುರಭರಕ್ಕೋಸ್ಕರ ಧರ್ಮದಾನಾದಿಗಳನ್ನೂ ಮಾಡುವರು. ಇವೆಲ್ಲಾ ಕೀರ್ತಿ ಪಡೆಯುವುದಕ್ಕಾಗಿಯಲ್ಲದೇ ಬೇರೆ ಯಾವ ಕ್ಕೂ ಅಲ್ಲ. ಆದರೆ ಮನುಜನು ಆತ್ಮಸ್ವಾರ್ಥವನ್ನೂ ಸ್ವೀಕಾರ ಮಾಡಿದರೆ, ಅವನ ಅವನ್ಮೆಯು ವಿಪರೀತವಾಗುವುದು. ಭೋಗ ಮತ್ತು ಐಶ್ವರ್ಯದ ಪ್ರಯತ್ನಗಳಲ್ಲಿ ಅವನಿಗೆ ಮಕ್ಕಳ ಆಟದಂತೆ ಕಾಣುವುದು. ಆತ್ಮದ ಕವಚವಾದಂತಹ ಈ ಶರೀರವು ಅವನಿಗೆ ಅಮೂಲ್ಯ ವಸ್ತುವಿನಂತೆ ತೋರುವುದಿಲ್ಲ. ಇವನು ತನ್ನನ್ನು ಆತ್ಮವೆಂದೇ ಭಾವಿಸಿ, ಆತ್ಮಕಲ್ಯಾಣ ಕಾರ್ಯವನ್ನೆ ಕೈಗೊಳ್ಳುವನು. ಈ ರೀತಿ ಶರೀರ ಭಾವನೆಯಿಂದ ವ್ಯಕ್ತಿಯು ಆಧಃಪತನದ ಕಡೆಗೂ, ಆತ್ಮಭಾವೀ ವ್ಯಕ್ತಿಯೂ, ಜೀವನದ ಪರಮ ಗುರಿಯ ಕಡೆಗೂ ಪ್ರವೃತ್ತನಾಗುವನು. ಜೀವನವನ್ನು ಶುದ್ಧ, ಸರಳ, ಸ್ವಾಭಾವಿಕ ಆಥವಾ ಪುಣ್ಯಪ್ರತಿಷ್ಠೆಯಿಂದ ಹುಂಬಿಳುಕುವಂತೆ ಮಾಡಲು, ನಮ್ಮನ್ನು ಶರೀರ ಭಾವನೆಯಿಂದ ಮುಕ್ತಪಡಿಸಿ, ಆತ್ಮ ಭಾವನೆಯನ್ನು ಜೈಗೊಳ್ಳಬೇಕು.

ಆತ್ಮಜ್ಞಾನವನ್ನು ತಿಳಿಯುವುದರಿಂದ ಮನುಷ್ಯನು ತಾನು ಶರೀರವಲ್ಲವೆಂದು ತಿಳಿಯುವನು. ಇದರಿಂದಾಗಿ ಅವನ ಭೌತಿಕಗಳೆಲ್ಲ ದೂರ ಓಡುವುವು.

ಕಾಮ ಕ್ರೋಧಾದಿ ವಿಕಾರಗಳು ಮತ್ತು ಇಂದ್ರಿಯ ವಾಸನೆಗಳು ಮನುಷ್ಯನ ಆನಂದವಲ್ಲಿ ಬಾಧಕವನ್ನುಂಟು ಮಾಡುತ್ತಿವೆ. ಪಾಪ ಮತ್ತು ಬಂಧನದ ಮೂಲವೇ ಇದು. ಮನುಷ್ಯನು ಇಂದ್ರಿಯಗಳ ಗುಲಾಮನಲ್ಲ. ತನ್ನನ್ನು ಮತ್ತು ತನ್ನ ವ್ಯಕ್ತಿತ್ವವನ್ನು ಮನುಷ್ಯನು ಚೆನ್ನಾಗಿ ತಿಳಿದುಕೊಳ್ಳಬೇಕು ಲೌಕಿಕ ಮತ್ತು ಪಾರಮಾರ್ಥಿಕ ಕಾರ್ಯಗಳಲ್ಲಿ ಕ್ರಿಯೆಯೊಬ್ಬನೂ ತನ್ನ ಉಚಿತ ಸ್ವಾತಂತ್ರ್ಯವನ್ನು ಪ್ರಾಪ್ತಿಸಿಕೊಳ್ಳುತ್ತಾ ಸಲಹೆಯನ್ನು ಹೊಂದುತ್ತಾ ನಿರಂತರ ವಿಕಾಸದ ಕಡೆಗೆ ಮುಂದುವರಿಯುತ್ತಾ ಇರಬೇಕು. ಇದೇ ಅಧ್ಯಾತ್ಮ ಸಾಧನೆಯ ಗುರಿಯಾಗಿದೆ. ಈಶ್ವರನು ಪ್ರತಿಯೊಬ್ಬರನ್ನು ಈ ಮಾರ್ಗದಲ್ಲಿ ಚಲಿಸಲು ಪ್ರೇರೇಪಿಸಲಿ.

(ಸಾಧಾರ.)

—ಎಂ. ಅನಂತ ಪದ್ಮನಾಭ ಭಟ್, ಪೆರ್ಡೂರು

ನಿಮಗಾಗಿ ನಮ್ಮಲ್ಲಿ ನೂರಾರು ನುರಿತ ಕಾರಕೂನರಿದ್ದಾರೆ!

"ಕೊಪ್ಪೊರೇಶನ್" ಬೇಂಕನಲ್ಲಿ ನೀವು ಒಂದು ಹೊಸ ಖಾತೆಯನ್ನು ತೆರವಿರೆಂದರೆ, ನಮ್ಮ ಬೇಂಕಿನ ಕಾರಕೂನರು ನಿಮ್ಮದೇ ಕಾರಕೂನರಾದಂತೆ. ಕಾರಣ, ಅವರು ನಿಮಗಾಗಿ ನಿಮ್ಮ ಹೊಸ ಲೆಕ್ಕವನ್ನು ಕನ್ನಡಿಯಂತಿಟ್ಟುಕೊಂಡು, ನಿಮಗೆ ಬೇಕಾದ ವಿವರಗಳನ್ನು ನೀವು ಬಯಸಿದಾಗ ಕೊಡಲು ಸದಾ ಸಿದ್ಧರು!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಛೇರಿ: **ಉಡುಪಿ** (ದ ಭಾರತ)

(ಮೈಸೂರು ರಾಜ್ಯದಲ್ಲಿ ಪ್ರಧಾನ ಕಛೇರಿಗಳನ್ನಿಟ್ಟುಕೊಂಡಿರುವ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಇದು ಅತಿ ಹಳೆಯದು.)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯ 220/1958.

ಮಯರಪ್ಪ ಎಕ್ಸ್‌ಪೋರ್ಟ್ ಕಾರ್ಪೊರೇಶನ್ ಲಿಮಿಟೆಡ್ ಉಡುಪಿ-ಕಛೇರಿಯಿಂದ ಯೇಜಂಟ್ ಕೆ. ಅನಂತಯ್ಯನು ಉಣಾಮ —ವಾದಿ

ಮತ್ತು

M. ಗಣೇಶ ಭಟ್ಟ ಕೂಪಾ—ಪ್ರತಿವಾದಿರು

ಯವರೊಳಗೆ

3ನೇ ಪ್ರತಿವಾದಿ ಸಿ ನಾರಾಯಣ ಉಪಾಧ್ಯ ಸಿ. ಪದ್ಮನಾಭ ಉಪಾಧ್ಯರ ಮಗ ಉಡುಪಿ ತಾಲೂಕು ಅತ್ರಾಡಿ ಗ್ರಾಮದ ಪರೀಕ್ಷಣಾರಿಗೆ

1-2ನೇ ಪ್ರತಿವಾದಿರು ಮಾದಿ ಸಂಸ್ಥೆಗೆ ತಾರೀಕು 6—8—1956ರಲ್ಲಿ ಪ್ರತಿ ಒಂದು ರೂಪಾಯಿ 300ರಂತೆ ಬರಕೊಟ್ಟ ಒಟ್ಟು 4 ಪ್ರೊಮಿಸರಿ ನೋಟುಗಳ ಬಾಬ್ತು ಸದರಿ ಹಣಗಳನ್ನು ತೆರುವರೆ ತಾನು ಕೂಡಾ ಜವಾಬುದಾರನಾಗಿರುವಾಗಿ ಬರಹ ಮೂಲಕ ಸಹಾ ಒಪ್ಪಿದ 3ನೇ ಪ್ರತಿವಾದಿ ಕೂಡಾ ಪ್ರತಿವಾದಿರಿಂದ ವಾದಿಗೆ ಬಾಪ ಅಸಲು ಬಡ್ಡಿ ಕೂಡಾ ರೂಪ್ಯ 1421.42ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ದಾವೆಯು ತಾರೀಕು 8—10—1958ಕ್ಕೆ ತನಿಲಿ ಬಗ್ಗೆ ಇಜೋರಾಗಿಯದೆ. ಆ ದಿವಸ ಸದ್ರಿ 3ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸಿದೆಯಿದ್ದಲ್ಲಿ ಆತನ ಗೈರ್ ಹಾಜರಿಯಿಂದ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Plff.

ಉಡುಪಿ ತಾರೀಕು 26—9—58.

ದೇಹವು ನಶ್ವರ; ಆದನ್ನು ಬಿಟ್ಟು, ಒಂದಲ್ಲ ಒಂದು ದಿನ ಈ ಭೂಮಿಯಿಂದ ದೂರಸರಿಯಬೇಕಾದುದು ಅವಶ್ಯಕ; ಹಾಗಿರುವಾಗ, ದೀನ ದುಃಖಿತರಿಗಾಗಿ ದೇಹ ದಾನ ಮಾಡುವಷ್ಟು ಶುಭಪ್ರದವಾದ ಕರ್ಮ ಬೇರೆ ಯಾವುದಿದೆ?

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨-೧೦-೧೯೫೮	೫

ಬರ್ಮಾಯ ಸ್ಥಿತ್ಯಂತರ

ಒಂದು ಕಾಲದಲ್ಲಿ ಭಾರತದ ಅಂಗವೇ ಆಗಿದ್ದು ಸಿಡಿದು ಹೋಗಿ ಈಗ ನೆರೆ ರಾಷ್ಟ್ರವಾಗಿರುವ ಬರ್ಮದಲ್ಲಿ ಇದೀಗ ಒಂದು ವಿಶೇಷ ಘಟನೆಯು ನಡೆದಿದೆ. ಅಲ್ಲಿನ ಪ್ರಧಾನಿಯಾಗಿದ್ದ ಉ-ನುರವರು ತಮ್ಮ ಅಧಿಕಾರವನ್ನು ಬಿಟ್ಟುಕೊಟ್ಟು ಬರ್ಮಾಯ ಸೇನಾಪಡೆಗಳ ವಿಷ್ಠ ಸೇನಾನಿಯಾದಂತಾ ಜ। ನೆ-ವಿನ್‌ರನ್ನು ಆ ಗದ್ದುಗೆಗೆ ಏರಿಸಿದ್ದಾರೆ. ಬರ್ಮಾದ ಅಧ್ಯಕ್ಷರಾದ ಉ-ವಿನ್. ಮಾಂಗ್ ಅವರೂ ಈ ಬಗ್ಗೆ ಅವಶ್ಯಕ ಕಾರ್ಯಕ್ರಮಗಳನ್ನು ಕೈಗೊಂಡಿರುವರಲ್ಲದೇ, ಜನರಲ್ ನೆ-ವಿನ್‌ರು ಅಧಿಕಾರವನ್ನೂ ಸ್ವೀಕರಿಸಿದ್ದಾರೆ. ಈ ರೀತಿಯಲ್ಲಿ ವ್ಯಕ್ತಿಯಾದವನು ಸ್ವಯಂ ಸೇನಾನಿ ವರಿಷ್ಠನಾಗುವನಿಗೆ ಅಧಿಕಾರವನ್ನು ಬಿಟ್ಟುಕೊಡುವುದೂ ಯಾವುದೇ ಗೊಂದಲ ವಿದ್ರೋಹ, ರಕ್ತಪಾತಗಳಿಲ್ಲದೆ ಈ ಇತಿಹಾಸ ಪ್ರಧಾನ ಘಟನೆ ನಡೆದುದೂ ಗಮನೀಯವಾಗಿದೆ.

ಸದ್ಯ, ಪ್ರಧಾನಿಗಳಾಗಿದ್ದ ಉ—ನು ರವರು ಈ ರೀತಿಯ ಅಡಳಿತೆಯು ಹೆಸ್ತಾಂತರಕ್ಕೆ ಒಂದು ಬಲವಾದ ಕಾರಣವನ್ನು ಮುಂದೆ ಮಾಡಿದ್ದಾರೆ: ಬರ್ಮದಲ್ಲಿ ಈಗ ಗಂಭೀರ ಪರಿಸ್ಥಿತಿಯಿದೆಯೆನ್ನುತ್ತಾರೆ ಅವರು. ಮುಂದಿನ ಎಪ್ರಿಲ್ ಮಾಸದೊಳಗೆ ಚುನಾವಣೆಯು ನಡೆಯಲಿದ್ದು, ಅದು ವರೆಗೆ ಸೇನೆಗಳ ಮೂಲಕ ಅಡಳಿತೆಯು ನಿರ್ವಹಿಸಲ್ಪಡುವುದು. ಇದಕ್ಕೆ ಮೂಲ ಕಾರಣವನ್ನೂ ಊಹಿಸುವುದು ಸಾಧ್ಯ. ವ್ಯಕ್ತಿಯಾದ ಉ - ನುರವರ ಮೇಲೆ ಇತ್ತೀಚೆಗೆ ಒಂದು ಅನಿಶ್ಚಾಸ ಗೊತ್ತುವಳಿಯು ಮುಂದೆ ಬಂದದ್ದೂ ಅದು ಕೇವಲ ಎಂಟೇ ಮತಗಳಿಂದ ಬಿದ್ದು ಹೋದದ್ದೂ ಈ ಇರುಕಿನ ನಂದರ್ಭದಲ್ಲಿ ಸರಕಾರೀ ವಿರೋಧೀ ಪಕ್ಷಗಳಲ್ಲಿ ಕೆಲವೂ ಸರಕಾರಕ್ಕೆ ಪರವಾಗಿ ಮತ ಕೊಟ್ಟದ್ದುವೆಂಬುದೂ ಸ್ವತಃ ಉ-ನು-ರವರ ಪಕ್ಷವಾದ ಫಾಸಿಸ್ಟ್ ವಿರೋಧಿ ಜನತಾ ಸ್ವಾತಂತ್ರ್ಯ ಲೀಗ್‌ಗೆ ಕೇಂದ್ರ ಕಾರ್ಯಕಾರೀ ಸಮಿತಿಯಲ್ಲಿ ಬಹುಮತವಿಲ್ಲೆಂಬುದೂ ಗಮನಿಸತಕ್ಕ ಸಂಗತಿಗಳಾಗಿವೆ. ಶ್ರೀ ಉ-ನು ರವರ ಬಗ್ಗೆ ದೇಶದಲ್ಲಿ ಸದಭಿಪ್ರಾಯವಿರುವುದು ನಿಜವಿದ್ದರೂ ಇರಬಹುದು, ಅಲ್ಲದೇ ಅವರಿಗಂತೂ ತಾನು ಮುಂದಿನ ಬಾರಿ ಚುನಾವಣೆಯಲ್ಲಿ ಪ್ರಚಂಡ ಬಹುಮತ ಪಡೆಯುವೆನೆಂದು ವಿಶ್ವಾಸವಿರುವುದೆಂದು ಊಹಿಸಬಹುದು. ಪ್ರಕೃತ, ಚುನಾವಣೆಯು ಸಮೀಪಿಸುತ್ತಿರುವುದರಿಂದಲೂ ಈ ಸಂಬಂಧದಲ್ಲಿ ವಿರೋಧೀ ಪಕ್ಷಗಳ ಪ್ರಚಾರ ಕಾರ್ಯದಲ್ಲಿ ಶಸ್ತ್ರಾಸ್ತ್ರಗಳ ಬೆದರಿಕೆಯ ಹಂಚಿಕೆಯೂ ಒಂದೆಂಬ ಪ್ರತೀತಿಯಿರುವುದರಿಂದಲೂ ಶ್ರೀ ಉ-ನು ರವರು "ಗಂಭೀರ ಪರಿಸ್ಥಿತಿ" ಎಂದು ತಿಳಿದು, ಚುನಾವಣೆಯ ವ್ಯಾಜದಲ್ಲಿ ದೇಶದ ಶಾಂತಿ ಹಾಗೂ ಸಮಾಧಾನಗಳನ್ನು ಕೆಡಿಸುವ ಉದ್ರಿಕ್ತ ಮನೋಭಾವನೆಗೆವಕಾಶವನ್ನೀಯದೆ, ಸುರಕ್ಷಿತತೆಗಾಗಿ ಸೇನೆಯ ಮೂಲಕ ಆಡಳಿತೆಯನ್ನು ನಡೆಸುವ ಯೋಜನೆ ಮಾಡಿದರೆಂದು ಊಹಿಸಬಹುದು. ಒಂದುಬಾರಿ ಶಾಂತರೀತಿಯಲ್ಲಿ ಚುನಾವಣೆಯು ನಡೆದರೆ, ಆಗ ಶ್ರೀ ಉ-ನುರವರು ನಿಶ್ಚಳ ಬಹುಮತ ಪಡೆಯುವುದು ಖಂಡಿತವೆಂದೂ ಹೇಳಲಾಗುತ್ತದೆ.

ಈಗ ಇಷ್ಟೆ ಒಂದು ಪುಕ್ಕೆಯೇಳುತ್ತದೆ. ಶ್ರೀ ಉ-ನು ರವರು ತಮ್ಮ ಪಕ್ಷಕ್ಕೆ ಸರಕಾರವನ್ನು ರಚಿಸುವಷ್ಟು ಬಹುಮತವಿಲ್ಲವೆಂದಮಾತ್ರಕ್ಕೆ ಸೇನಾ ಆಡಳಿತೆಯನ್ನು ಏಂದು ತಮ್ಮ ಕೈ ತೊಳೆದುಬಿಡುವುದು ಪ್ರಜಾಪ್ರಭುತ್ವಕ್ಕೆ ಹೇಳಿಸಿದ, ಮರ್ಯಾದಾಸಹಿತವಾದ ಕೃತ್ಯವೆ? ಎಂದು. ಇತ್ತೀಚೆಗೆ ಫ್ರಾನ್ಸ್‌ನಲ್ಲಿಯೂ ಇಂತಹುದೇ ಘಟನೆಯೊಂದು ನಡೆದು, ಜನರಲ್ ಡಿಗಾಲೆಯವರಿಗೆ ಸಂಪೂರ್ಣ ರಾಜ್ಯಸೂತ್ರವನ್ನು ಒಪ್ಪಿಸಲಾಯಿತು. ಆದರೆ, ಫ್ರಾನ್ಸಿನಲ್ಲಿ ನಡೆದ ಈ ವಿದ್ಯಮಾನವು ವಸಾಹತುವಾದ ಅಲ್ಜೀರಿಯಾವನ್ನು ಅಂಕಿತದಲ್ಲಿಟ್ಟುಕೊಳ್ಳುವ ಒಂದು ಮಹತ್ವಾಕಾಂಕ್ಷೆಯಿಂದ ಎಂದು ಹೇಳಬಹುದು. ಆದರೆ, ಬರ್ಮದಲ್ಲಿ ಅಂತಹ ಪರಿಸ್ಥಿತಿಯೇನೂ ಇರುವುದಿಲ್ಲ. ನೂತನ ಪ್ರಧಾನಿ ಜನರಲ್ ನೆ-ವಿನ್‌ರವರು ಇದು ಕೇವಲ ಮಧ್ಯಾವಧಿ ಸರಕಾರವೆಂದೂ, ಚುನಾವಣೆಯ ವರೆಗೆ ಮಾತ್ರ ಅಸ್ತಿತ್ವದಲ್ಲಿ ಉಳಿಯುವುದೆಂದೂ ಹೇಳಿದ್ದಾರೆ. ಆದರೂ ಉ-ನುರವರ ಪಕ್ಷವು ಸರಕಾರ ಸ್ಥಾಪಿಸಲು ಅಸಮರ್ಥವಾದರೆ, ಇತರ ವಿರೋಧೀ ಪಕ್ಷಗಳನ್ನು ಅದಕ್ಕಾಗಿ ಆಹ್ವಾನಿಸುವುದು ಆದ್ಯ ಕರ್ತವ್ಯವಿತ್ತು. ಇದೀಕೆ ತಪ್ಪಿಹೋಯಿತೋ ತಿಳಿಯುವುದಿಲ್ಲ.

ಅಂತೂ ಆಗ್ನೇಯ ಏಶ್ಯಾದ ರಾಷ್ಟ್ರ ವೊಂದರಲ್ಲಿ ನಡೆದ ವಿದ್ಯಮಾನವು ಸರ್ವರ ಸಮ್ಮತಿಯಿಂದಲೇ ನಡೆಯಿತೆನ್ನುವುದು ಸಂತೋಷದಾಯಕವಾದ ಸಮಾಚಾರವೆನ್ನಬಹುದು. ಈ ರೀತಿಯ ಸ್ಥಿತ್ಯಂತರಕ್ಕೆ ದೂರ ಪ್ರಾಚ್ಯದಲ್ಲಿ ಚೀನಾ—ಅಮೆರಿಕೆಗಳ ಕುದೃಷ್ಟಿಯ ಸಂಬಂಧವನ್ನು ಕಲ್ಪಿಸಲು ಏನೇನೂ ಅವಕಾಶವಾಗಲೀ ಕಾರಣವಾಗಲೀ ಇಲ್ಲವೆಂದೇ ಹೇಳಬಹುದು. ಆದುದರಿಂದ ಮುಂದೆ, ಶಾಂತ ವಿಧಾನದಲ್ಲಿ ಚುನಾವಣೆಗಳು ನಡೆದು ನಿಶ್ಚಳ ಬಹುಮತವುಳ್ಳ ಪ್ರಜಾಪ್ರಭುತ್ವ ಸರಕಾರವು ಸ್ಥಾಪನೆಯಾಗುವುದಕ್ಕೆ ಅವಶ್ಯಕವರು ತಮ್ಮ ಮೆಚ್ಚುಗೆಯನ್ನು ಪ್ರದರ್ಶಿಸಿದರು.

ನಾನು ಭಾರತೀಯ

ಮುಂಬಯಿ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಶ್ರೀ ಎಂ. ಸಿ. ಛಗಲಾರವರು ಅಮೆರಿಕೆಯಲ್ಲಿ ಭಾರತದ ರಾಯಭಾರಿಗಳಾಗಿ ಹೋಗಲಿದ್ದಾರೆ. ಅವರು ಓರ್ವ ಮುಸಲ್ಮಾನರೆಂಬ ಕಾರಣದಿಂದಲೇ ಪ್ರಧಾನಿ ನೆಹರುರವರು ಅಮೆರಿಕೆಯಲ್ಲಿ ರಾಯಭಾರಿಗಳೆಂದು ನೇಮಿಸಿರುವುದಾಗಿ ಕೆಲವು ಅಮೆರಿಕೆಯ ಪತ್ರಿಕೆಗಳು ಬರೆದಿವೆ. ಈ ವಿಷಯವನ್ನು ಶ್ರೀ ಛಗಲಾರವರು ತಮ್ಮ ಗೌರವಾರ್ಥ ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ಉಲ್ಲೇಖಿಸುತ್ತ "ನನ್ನಲ್ಲಿ ಅನೇಕ ಅಪರಾಧವಿರುವುದಾದರೂ ಜಾತೀಯತೆಯ ದೃಷ್ಟಿಕೋನದಿಂದ ವಿಚಾರಮಾಡುವ ತಪ್ಪನ್ನು ಮಾಡಿಲ್ಲ. ಈ ದೃಷ್ಟಿಯಿಂದ ಅಮೆರಿಕನ್ ಪತ್ರಿಕೆಗಳು ನನಗೂ ಪ್ರಧಾನಿಯವರಿಗೂ ಅನ್ಯಾಯವನ್ನು ಎಸಗಿವೆ. ನನ್ನನ್ನು ಭಾರತೀಯನೆಂದು ಕಳೆದರೇನೇ ಸಾಕು" ಎಂದರು. ಭಾರತ ಮತ್ತು ಅಮೆರಿಕಗಳಲ್ಲಿ ಕೆಲವಿಷಯಗಳಲ್ಲಿ ಭಿನ್ನಾಭಿಪ್ರಾಯವಿರುವುದಾದರೂ ಅನೇಕ ವಿಷಯಗಳಲ್ಲಿ ಏಕ್ಯವಿದೆಯೆಂದೂ ವೆರೂ ಸಂಯುಕ್ತವಾಗಿ ಕೆಲಸ ಮಾಡಿದರೆ, ಜಗತ್ತಿನಲ್ಲಿ ಶಾಂತಿ ಮತ್ತು ಪ್ರಜಾಸತ್ತೆಗಳ ಪ್ರಗತಿ ಬಹಳವಾಗುವುದೆಂದೂ ಅವರು ಹೇಳಿದರು.

ಫ್ರಾನ್ಸಿನ ಸಂವಿಧಾನಕ್ಕೆ ಮನ್ನಣೆ

ಫ್ರಾನ್ಸಿನ ಪ್ರಧಾನ ಮಂತ್ರಿ ಜನರಲ್ ಡಿಗಾಲೆಯವರು ತಯಾರಿಸಿದ ಫ್ರಾನ್ಸಿನ ನೂತನ ರಾಜ್ಯಘಟನೆಯು ಪ್ರಚಂಡ ಬಹುಮತದಿಂದ ಸ್ವೀಕೃತವಾಗಿರುತ್ತದೆ. ಹೊಸ ಸಂವಿಧಾನವು ಸಂಸತ್ತಿನ ಅಧಿಕಾರವನ್ನು ಕಡಿಮೆಮಾಡಿ ಸರಕಾರದ ಅಧಿಕಾರವನ್ನು ಹೆಚ್ಚಿಸುತ್ತದೆ. ಜ। ಡಿಗಾಲೆಯವರಿಗೆ ಈ ಐದನೆಯ ಪ್ರಜಾರಾಜ್ಯದ ಸಂಸ್ಥೆಗಳನ್ನು ಸ್ಥಾಪಿಸಲು ನಾಲ್ಕು ತಿಂಗಳುಗಳ ವರೆಗೆ ಸಂಪೂರ್ಣ ಅಧಿಕಾರವನ್ನೀಯುತ್ತದೆ. ಆಕ್ಟೋಬರ ೪ ರಿಂದ ಅಥವಾ ೫ ರಿಂದ ಕೂಸ ಸಂವಿಧಾನವು ವ್ಯವಹಾರದಲ್ಲಿ ಬರುವುದು. ನವಂಬರದ ಮಧ್ಯದಲ್ಲಿ ಹೊಸ ರಾಷ್ಟ್ರೀಯ ಅಸೆಂಬ್ಲಿಯು ಹಾಗೂ ಹೊಸ ರಾಷ್ಟ್ರಾಧ್ಯಕ್ಷರ ಚುನಾವಣೆಯಾಗುವುದು. ಬಳಿಕ ರಾಷ್ಟ್ರಾಧ್ಯಕ್ಷರು ಹೊಸ ಪ್ರಧಾನಮಂತ್ರಿಯನ್ನು ನೇಮಿಸಿ, ಹೊಸ ಸಂವಿ

ಸಂಕ್ಷಿಪ್ತ ಸುದ್ದಿಗಳು

ಲೆಬನಾನಿನಲ್ಲಿ ಅಪಪ್ರಚಾರ

ಲೆಬನಾನಿನಲ್ಲಿ ಹೊಸತಾಗಿ ಅಧಿಕಾರವನ್ನು ಸ್ವೀಕರಿಸಿದ ಶ್ರೀ ಚೆಹಾಬರ ಸರಕಾರವನ್ನು ಉರುಳಿಸುವ ಸಲುವಾಗಿ ಭೂತಪೂರ್ವ ಅಧ್ಯಕ್ಷ ಕೆಮಿಲ್ಲೆ ಚಾಮುನರು ಸೇನೆಯನ್ನು ವಿನಂಪಿಸಿಕೊಂಡಿರುತ್ತಾರೆ. ಇಂದಿನ ಸರಕಾರದ ಆಜ್ಞೆಗಳನ್ನು ಮನ್ನಿಸಬಾರದೆಂದವರು ಕೇಳಿಕೊಂಡಿದ್ದಾರೆ. ಆಲ್ಲಲ್ಲಿ ಗಲಭೆ ಗುಲ್ಲುಗಳೂ ಲೆಬನಾನಿನಲ್ಲಿ ನಡೆಯುತ್ತಿದ್ದು, ಅಲ್ಪಸ್ವಲ್ಪ ಪ್ರಾಣಹಾನಿಯೂ ಆಗುತ್ತಿದೆ. ಇದರಿಂದಾಗಿ ನೂತನ ಅಧ್ಯಕ್ಷರ ಪದಸ್ವೀಕಾರದಿಂದ ತಿಳಿಯುವುದೆಂದು ವಿಶ್ವಾಸವಿಡಲಾಗಿದ್ದ ಲೆಬನಾನಿನಲ್ಲಿ ಆಂತರಿಕವಾಗಿ ಪಕ್ಷಸಂಗಡಗಳ ನಡುವೆ ಜಗಳವೇಳುತ್ತಿರುವುದು ಶೋಭನೀಯವಲ್ಲ. ಆಂತರಿಕ ಕಲಹ-ನೈಮನಸ್ಯಗಳ ಪರಿಣಾಮಗಳು ಎಲ್ಲಿ ಕೊನೆಗೊಳ್ಳುವುದೆಂದೆ. ಈಗಲೇ ಹೇಳುವುದು ಅವಿವೇಕದ ಮಾತಾದೀತು.

ಜಪಾನ ಸಂಚಾರ

ಭಾರತದ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರು ತಮ್ಮ ಅಲ್ಪ ದಿನಗಳ ಪ್ರವಾಸದ ಮೇಲೆ ಜಪಾನಕ್ಕೆ ತೆರಳಿದ್ದಾರೆ. ಜಪಾನಿನ ಸುತ್ತಾಮುತ್ತು ವಿಪರೀತ ಬಿಯಗಾಳಿಯೆದ್ದಿದ್ದುದರಿಂದ ಅವರು ಒಂದು ದಿನ ತಡವಾಗಿ ಜಪಾನವನ್ನು ಸೇರಿದರು. 'ಭಾರತ ಮತ್ತು ಜಪಾನುಗಳ ನಡುವೆ ಹಿಂದಿನಿಂದಲೂ ನಿಕಟ ಸಂಬಂಧವಿದೆ. ಭಾರತದಲ್ಲಿ ಅಸ್ತಿತ್ವಕ್ಕೆ ಬಂದಿರುವ ಬೌದ್ಧ ಮತ ಮತ್ತು ಅದರೊಂದಿಗೆ ಭಾರತದಿಂದ ಆಧ್ಯಾತ್ಮಿಕ ಮತ್ತು ಶಾಸ್ತ್ರಿಕ ಭಾವನೆಗಳೂ ಜಪಾನಕ್ಕೆ ಬಂದಿವೆ. ಆಧ್ಯಾತ್ಮಿಕ ದೃಷ್ಟಿಯಿಂದ ಭಾರತ ಮತ್ತು ಜಪಾನುಗಳ ನಡುವೆ ಶತ ಶತಮಾನಗಳಿಂದ ನಿಕಟ ಸಂಪರ್ಕವಿದೆ. ಜಪಾನಿನ ಶ್ರೀಮತಿ ಮತ್ತು ಜನತೆಯ ಯಶಸ್ವೀ ಜೀವನವು ಏಶ್ಯಾನರ ಮೆಚ್ಚುಗೆಗೆ ಪಾತ್ರವಾಗಿದೆ. ಆಲ್ಲದೆ ಜಪಾನಿನ ಅಭಿವೃದ್ಧಿಯು ಏಶ್ಯಾನರಿಗೆ ಒಂದು ಮಾದರಿಯಾಗಿದೆ" ಎಂದ

ವಾತಾವರಣವನ್ನು ಜನರಲ್‌ನೆ-ವಿನ್‌ರು ಕೆಲ್ಲಿಸುವರೆಂದೂ, ಬರ್ಮಾಯ ಜನತೆಯು ಈ ಬದಲಾವಣೆಯನ್ನು ವಿರೋಧಿಸಲಾರೆಂದೂ ಹಾಗೈಸಬಹುದು.

ಚಂದಾದಾರರಲ್ಲಿ ವಿನಂತಿ

ಆಗಸ್ಟ್ ತಿಂಗಳಾಂತ್ಯಕ್ಕೆ 'ನವಯುಗ'ದ **37** ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **38** ನೇ ವರ್ಷಾರಂಭವಾಗಿರುವುದಷ್ಟೆ! ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೇ ಕಳುಹಿಸಿ ಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇನೆ. ಚಂದಾ ಹಣವನ್ನು ಯಾವ ತರದ ಖರ್ಚೂ ಇಲ್ಲದೆ 'ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ ನವಯುಗದ ಖಾತೆಗೆ ಕಟ್ಟಬಹುದು.

ವಿ.ಪಿ. ಮಾಡಿದರೆ ಹನ್ನೆರಡಾಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಚಂದಾ ಹಣವನ್ನು ಮುಂದಾಗಿ ಕಳುಹಿಸಬೇಕಾಗಿ ವಿನಂತಿ. ಅಂತೂ ಸಕಾಲದಲ್ಲಿ ಚಂದಾ ಬಾರದಿದ್ದಲ್ಲಿ ನಾವು ಅನಿವಾರ್ಯವಾಗಿ ಕಳಿಸುವ ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಬಿನ್ನಹ.

ಮೆನೇಜರ್.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿಯಲ್ಲಿ ಸಾರ್ವಜನಿಕ ಸಭೆ—

ಇದೇ ತಾ. ೨೪ನೇ ರಾತ್ರಿ ಮೈಸೂರು ಪ್ರದೇಶಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ. ಎಚ್. ಕೆ. ವೀರಣ್ಣ ಗೌಡರೂ ಮಾಜಿ ಮುಖ್ಯಮಂತ್ರಿ ಶ್ರೀ. ಎಸ್. ನಿಜಲಿಂಗಪ್ಪನವರೂ ಉಡುಪಿ ತಾಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ರಥಬೀದಿಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಕಾಂಗ್ರೆಸ್ಸಿನಲ್ಲಿ ಈಗ ತೋರಿಬರುವ ಭಿನ್ನಾಭಿಪ್ರಾಯಗಳ ಕುರಿತು ಪ್ರಸ್ತಾಪಿಸಿ ಕಾಂಗ್ರೆಸಿಗರು ವಿಶೇಷವಾಗಿ ಜನಸಂಪರ್ಕವನ್ನಿಟ್ಟುಕೊಳ್ಳಬೇಕೆಂದು ಶ್ರೀ ವೀರಣ್ಣ ಗೌಡರು ಹೇಳಿದರು.

ಶ್ರೀ ಎಸ್. ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ಕಾಂಗ್ರೆಸಿನ ತೋಪಸ ದೋಷಗಳನ್ನು ಮಾತ್ರ ಎತ್ತಿ ತೋರಿಸುವುದು ಸರಿಯಲ್ಲವೆಂದೂ ದೇಶದಲ್ಲುದ ಪ್ರಗತಿಯನ್ನೂ ಕಾಂಗ್ರೆಸ್ಸು ಸಾಧಿಸಿದ ಕಾರ್ಯವನ್ನೂ ನಾವು ಜನತೆಗೆ ತಿಳಿಸಬೇಕೆಂದೂ ಹೇಳಿ ಭೂಕಾಯಿದೆಯ ಮೂಲಕ ರೈತನ ಹಿತಸಾಧನೆಯ ಯೋಜನೆ ಕೈಗೊಳ್ಳಲಾಗಿದೆಯೆಂದೂ ಜನತೆಗೆ ತಮಗೆ ಬೇಕಾದ ಸರಕಾರವನ್ನು ರಚಿಸಿಕೊಳ್ಳುವ ಹಕ್ಕಿರುವುದೆಂದೂ ಕಾಂಗ್ರೆಸ್ಸನ್ನು ಬಲಪಡಿಸಬೇಕೆಂದೂ ಹೇಳಿದರು.

ಉಡುಪಿ ತಾಲೂಕು ಕಮಿಟಿಯ ಅಧ್ಯಕ್ಷ ಶ್ರೀ. ಟಿ. ಎ. ಪೈಗಳು ತಮ್ಮ ಸಮಾರೋಪ ಭಾಷಣದಲ್ಲಿ ಕಾಂಗ್ರೆಸಿನ ಹಿತವೈರಿಯಿಂದಲೇ ನಾವು ಅದರ ದೋಷದೋಷಗಳನ್ನು ಹೇಳಿದ್ದಾಗಿದೆಯೆಂದೂ ಸರಕಾರವು ಜಾತೀಯ ವರ್ಗೀಕರಣಕ್ಕೆ ಪ್ರೋತ್ಸಾಹಿಸುವುದು ಜಾತ್ಯಾತೀತ ರಾಷ್ಟ್ರಕ್ಕೆ ಯೋಗ್ಯವಾದುದಲ್ಲವೆಂದೂ ನೇಳಿದರು.

ಅದಕ್ಕಿಂತ ಮೊದಲು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಎ. ಜಿ. ಆಳ್ವರು ಸ್ವಾಗತಿಸಿ ನುಡಿಯೊಂದನ್ನು ಅರ್ಪಿಸಿದರು.

ದಿನಾಚರಣೆ—

ಕಳೆದ ತಾ ೨೭ರಲ್ಲು ರಾಜಾರಾಮ ಮೋಹನ್‌ರಾಯ್ ಇವರ ದಿನಾಚರಣೆಯು ಮಂಗಳೂರು ಬ್ರಹ್ಮ ಸಮಾಜದ ಸೇತೃತ್ವದಲ್ಲಿ ಮಾಜಿಮಂತ್ರಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಮ್. ಆರ್. ಜಂದರ್ ಇವರು ಸ್ವಾಗತ ಭಾಷಣಮಾಡಿದರು. ಶ್ರೀಮತಿ ಶಾಂತೇರಿ ಪ್ರಭುರವರು ರಾಜಾರಾಮ ಮೋಹನ್‌ರಾಯರು ದೇಶಕ್ಕೆ ಮಾಡಿದ ಅಪಾರ ಸೇವೆಯನ್ನು ವಿವರಿಸಿದರು. ಶ್ರೀಗಳಾದ ಎಮ್. ರಾಜೇನ, ಎಚ್. ಎಮ್. ಶಿಂಗಣಾಯ ಇವರು ಮಾತನಾಡಿದ ಮೇಲೆ ಅಧ್ಯಕ್ಷರು ರಾಜಾರಾಮ ಮೋಹನ್‌ರಾಯರವರು ಅನುಸರಿಸಿದ ಇಂಗ್ಲಿಷ್ ಭಾಷಾ ಪ್ರೋತ್ಸಾಹ ತತ್ವವನ್ನು ಅನುಮೋದಿಸಿ ಭಾಷಣಮಾಡಿದರು.

ಯಕ್ಷಗಾನ ಕಲಾಗೋಷ್ಠಿ—

ನೊವೇ ಪ್ರಕಟಿಸಿದಂತೆ ಕಳೆದ ತಾ. ೨೭ರಿಂದ ೩೦ರವರೆಗೆ ಬ್ರಹ್ಮಾವರದಲ್ಲಿ ಯಕ್ಷಗಾನ ಕಲಾಗೋಷ್ಠಿಯು ನೆರವೇರಿತು. ಈ ಗೋಷ್ಠಿಗೆ ದಿಲ್ಲಿಯಿಂದ ಭಾರತದ ಸಂಗೀತ ನಾಟಕ ಎಕಾಡೆಮಿಯ ಪ್ರತಿನಿಧಿಗಳೂ ಆಕಾಶವಾಣಿ ಸಂಸ್ಥೆಗಳ ನಿರೀಕ್ಷಕರೂ ನಾನಾ ಕಡೆಗಳಿಂದ ಯಕ್ಷಗಾನ ಕಲಾಪ್ರಿಯರೂ ಬಂದಿದ್ದರು. ಆರಂಭದಿನ ಇಪರೆಸ್ಸಿರನ್ನೂ ಗೋಷ್ಠಿಯ ಸಂಚಾಲಕರಾದ ಶ್ರೀ ಶಿವರಾಮಕಾರಂತರು ಸ್ವಾಗತಿಸಿ ಪ್ರಬ್ರಹ್ಮಾನರದಲ್ಲಿ ಈ ಗೋಷ್ಠಿಯನ್ನು ಜರಗಿಸುವುದರ ಔಚಿತ್ಯವನ್ನು ಹೇಳಿ ಗೋಷ್ಠಿಯ ಉದ್ದೇಶವನ್ನು ವಿವರಿಸಿ ಈ ಸಾಹಸಕ್ಕೆ ಬೆಂಬಲಪತ್ರವರ ಸಹಕಾರವನ್ನು ಸ್ಮರಿಸಿದರು.

ಮಂಗಳೂರಲ್ಲಿ ಸಾರ್ವಜನಿಕ ಸಭೆಗಳು—

ಕಳೆದ ತಾ. ೨೫ನೇ ಸಂಜೆ ಮಂಗಳೂರು ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ವಿಶಾಲವಾದ ಸಾರ್ವಜನಿಕ ಸಭೆಯಲ್ಲಿ ಕೇರಳ ಪ್ರದೇಶಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಉದಯ ಭಾನು ಅವರು ಭಾಷಣಮಾಡುತ್ತ ಕೇರಳದಲ್ಲಿ ಕಮ್ಯೂನಿಸ್ಟರು ತೋರಿಸುವ ದ್ವಿಮುಖ ಧೋರಣೆಯನ್ನು ವಿವರಿಸಿದರು. ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆದಿಗರು ಸಭಾಧ್ಯಕ್ಷರಾಗಿದ್ದರು. ಸಭಾಂತ್ಯದಲ್ಲಿ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರು ಧನ್ಯವಾದ ಗಳನ್ನರ್ಪಿಸಿದರು.

ಕಳೆದ ತಾ. ೨೬ನೇ ಸಂಜೆ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಎಚ್. ಕೆ. ವೀರಣ್ಣ ಗೌಡರು, ಭಾಷಣಮಾಡುತ್ತ ಸತತ ಪ್ರಯತ್ನದಿಂದ ದಲಿತರು ತ್ಯಾಗ ಮತ್ತು ಪರಿಶ್ರಮದಿಂದ ನಾವು ಪಡೆದಿರುವ ಪ್ರಜಾಸ್ವಭುತ್ವವನ್ನೂ ವ್ಯಕ್ತಿ ಸ್ವಾತಂತ್ರ್ಯವನ್ನೂ ಕಾಪಾಡಿಕೊಳ್ಳಬೇಕಾದರೆ ವಿರುದ್ಧ ಶಕ್ತಿಗಳೊಡನೆ ಹೋರಾಡಲು ಜನತೆ ಮುಂದೆ ಬರಬೇಕಾಗಿದೆ. ಎನ್ನುತ್ತಾ ಸ್ವತಂತ್ರಗೊಳಿಸಿದ ಮೇಲೆ ಕಾಂಗ್ರೆಸ್ಸು ಮಾಡಿದ ಕೆಲಸವನ್ನು ವಿವರಿಸಿ ಕಾಂಗ್ರೆಸ್ಸನ್ನು ಬಲಪಡಿಸಬೇಕೆಂದರು.

ಶ್ರೀ ಮೈಕುಂಜ ಬಾಳಿಗ ಎಂ. ಎಲ್. ಎ. ಯವರು ಜಿಲ್ಲೆಯ ಅಭಿವೃದ್ಧಿಗಾಗಿ ಮೈಸೂರು ಸರಕಾರವು ಮಾಡಿದ ಕೆಲಸಗಳನ್ನು ವಿವರಿಸಿದರು. ಸಭಾಧ್ಯಕ್ಷರು ಕಾಂಗ್ರೆಸ್ಸು ಮಾಡಿದ ಉಪಕಾರವು ಸೇವೆಯನ್ನು ವಿವರಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರು ಆಭಾರಸೂಚಿಸಿದರು.

ಈ ದಿನ ಸಂಜೆ ಮಂಗಳೂರು ಗಣಪತಿ ಹ್ಯಾಸ್ಕೂಲಿನ ಸಭಾಸದನದಲ್ಲಿ ಜಿಲ್ಲೆಯ ಮುಂದಲ ಕಾಂಗ್ರೆಸಿಗರ ಸಭೆಯಲ್ಲಿ ಶ್ರೀ. ವೀರಣ್ಣ ಗೌಡರೂ ಸಜಲಿಂಗಪ್ಪನವರೂ ಭಾಷಣಮಾತ್ತರು.

ದ್ವಿತೀಯ ವಾರ್ಷಿಕೋತ್ಸವ—

ಮಣಿಪಾಲದ "ಲಾ ಕಾಂಗ್ರೆಸ್ಸಿಲಾ"ದ ದ್ವಿತೀಯ ವಾರ್ಷಿಕ ದಿನಾಚರಣೆಯು ಕಳೆದ ತಾ. ೧೯ರಂದು ಗೀತಾನಂದಿರದಲ್ಲಿ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ವಾರ್ಷಿಕೋತ್ಸವ ತರುವಾಯ ಮಾಲಕ ಶ್ರೀ. ಆರ್. ಎಸ್. ಕಿಣಿಯವರು ಸ್ವಾಗತಿಸಿ ಜನತಾ ಸ್ವೋತ್ಸಾಹವೇ ಲಾ ಕಾಂಗ್ರೆಸಿಲದ ಶ್ರೀ ಯಸ್ಸಿಗೆ ಕಾರಣವೆಂದರು.

ಸಭಿಕರಲ್ಲಿ ಶ್ರೀಗಳಾದ ಬಿ. ಕೃಷ್ಣಯ್ಯ ನುತ್ತು ವಿ. ಚಂದ್ರ ಶೇಖರ್ ಇವರು ಮಾತನಾಡಿ ಶ್ರೇಯಸ್ಸನ್ನು ಕೋರಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಣಿಪಾಲ್‌ಕ್ಕೆ ಲಾ ಕಾಂಗ್ರೆಸಿಲಾದಂತಹ ಒಂದು ಉಪಹಾರಗ್ರಹದ ಆಗತ್ಯಕೆಯುತ್ತೆಂದು ಹೇಳಿ ಅದನ್ನು ಪ್ರಾರಂಭಿಸಿದ ಶ್ರೀ ಕಿಣಿಯವರ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು.

ದ್ವಿತೀಯ ವಾರ್ಷಿಕ ದಿನಾಚರಣೆಯ ಈ ಶುಭದಿನದ ಸವಿ ನೆನಹಿಗಾಗಿ ಮಣಿಪಾಲದ ಉನ್ನತಿ, ಹಿರಿಮೆ ಮತ್ತು ಲಾ ಕಾಂಗ್ರೆಸಿಲದ ಪರಿಚಯಾತ್ಮಕ ಹೊತ್ತಗೆಯೊಂದನ್ನು ಪ್ರಕಟಿಸಲಾಯಿತು.

ಮರುದಿನ ಡಾ| ಟಿ. ಮೂಧವ ಪೈಯವರ ಹಿರಿತನದಲ್ಲಿ ನಡೆದ ಭೋಜನ ಸಮಾರಂಭದಲ್ಲಿ ಡಾ| ಪೈಯನರು ಶ್ರೀ. ಕಿಣಿಯವರ ಅಭ್ಯುದಯವನ್ನು ಹಾರೈಸಿದರು.

ಶಾಲಾ ಪಾರ್ಲಿಮೆಂಟಿನ ಉದ್ಘಾಟನೆ-

ಕಡಿಯಾಳಿ ಹಿರಿಯ ಬುನಾದಿ ಶಾಲೆಯ ಶಾಲಾ ಪಾರ್ಲಿಮೆಂಟಿನ ಉದ್ಘಾಟನೆಯು ಕಳೆದ ತಾ. ೨೭ರಂದು ಶ್ರೀಮತಿ ಆಶಾ ಕೆ. ಆರ್. ಕೆ. ಭಟ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖೋಪಾಧ್ಯಾಯರಾದ ಶ್ರೀ ವಿ ಗುರುರಾಜ ಭಟ್ಟರು ಸ್ವಾಗತ ಭಾಷಣ ಮಾಡಿದರು. ಕುಮಾರಿ ಸರಸ್ವತಿಯವರು ಪರಿಚಯ ಭಾಷಣಮಾಡಿದರು. ನಂತರ ಜನೆಯ ಕಾರ್ಯಕ್ರಮಗಳ ಬಳಿಕ ಶಾಲಾ ಸರಕಾರದ ಕುರಿತಾಗಿ ಶ್ರೀ ಪಿ. ಶ್ರೀಕಾಂತ ತಂತ್ರಿ, ಭಾಸ್ಕರ, ಪೆಂಕಟರಾಜ ಸರಳಾಯ, ಕುಮಾರಿ ಪದ್ಮಾವತಿಯವರು ಮಾತನಾಡಿದರು. ನಂತರ ಪಾರ್ಲಿಮೆಂಟಿನ ಅಧಿವೇಶನವು ಜರಗಿತು. ಮುಖ್ಯ ಮಂತ್ರಿಗಳು ಮಂಡಿಸಿದ ಹಣಕಾಸಿಗೆ ಸಂಬಂಧಿಸಿದ ನುಸೂದೆಯು ೨೩ ಪರ ಮತ್ತು ೨ ವಿರುದ್ಧ ಮತಗಳಿಂದ ತಿದ್ದುಪಡಿಯೊಂದಿಗೆ ಸ್ವೀಕೃತವಾಯಿತು. ಆ ಬಳಿಕ ಪ್ರಶ್ನೋತ್ತರಗಳು ನಡೆದುವು ಅಧಿವೇಶನದ ಅಧ್ಯಕ್ಷತೆಯನ್ನು ಸ್ವೀಕರ್ ಆನಂತ್ಯಮ ಭಟ್ಟರು ವಹಿಸಿದ್ದರು. ಆ ಬಳಿಕ ಅಧ್ಯಕ್ಷರು ಪಾರ್ಲಿಮೆಂಟಿನ ಸದಸ್ಯರನ್ನು ಮತ್ತು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿತ್ತಾ ನುನುಸ್ಸಾನಿಗೆ ಗುಣವೇ ಶೃಂಗಾರವಾಮದರಿಂದ ವಿದ್ಯಾರ್ಥಿಗಳು ಗುಣವಂತರಾಗಿ ಬಾಳುವ ಅವಶ್ಯಕತೆಯನ್ನು ವಿವರಿಸಿದರು. ಸಾಂಸ್ಕೃತಿಕ ಮಂತ್ರಿ ಕುಮಾರಿ ಪದ್ಮಾವತಿಯವರು ಧನ್ಯವಾದ ಇತ್ತರು.

ಯಕ್ಷಗಾನ —

ಉಡುಪಿ ಯಕ್ಷಗಾನ ಕಲಾಮಂದಿರದಿಯವರಿಂದ ಶ್ರೀ ವಿ. ಗೋವಿಂದ್ರಾಜ ಜೆಟ್ಟಿಗೇತರವರ ಅಧ್ಯಕ್ಷತೆಯಲ್ಲಿ ಶಲ್ಯ ಸಾರಥಿಯೆಂಬ ಯಕ್ಷಗಾನ ಕೂಟವು ಕೆ. ಲೇಪಗಿರಿ ಕಿಣಿ, ಮತ್ತು ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ, ಹಿರಿಯಡ್ಕ ಗೋಪಾಲರವರ ಮೃದಂಗವಾದನ ಪೊಳ್ಳ ಪೆಜಪ್ಪ ಶೆಟ್ಟಿ, ಶಿವಪುರ ಶ್ರೀನಿವಾಸ ಪಂಡಿತ, ಮಲ್ಪೆ ರಾಮದಾಸ ಸಾಮಗ, ಮಟ್ಟಿ ಸುಬ್ಬರಾಯ, ಸೀತಾನದಿ ಗಣಪಯ್ಯ ಶೆಟ್ಟಿ, ಮೊದಲಾದ ಪ್ರಸಿದ್ಧ ಅರ್ಥವಾರಿಗಳ ಕೂಡುವಿಕೆಯಿಂದ ಕಳೆದ ತಾ. ೨೬ರಲ್ಲು ಸರ್ಕಳ ದಲ್ಲಿ ಯಶಸ್ವಿಯಾಗಿ ಜರಗಿತು.

ಲಾ ಕ್ಯಾಲೇಜು ವಿದ್ಯಾರ್ಥಿ ಸಂಘದ

ಅಧ್ಯಯದಲ್ಲಿ ಕಳೆದ ತಾ. ೨೭ರಲ್ಲಿ ಆಣಕ ಪಾರ್ಲಿಮೆಂಟೊಂದು ನೆರವೇರಿತು. ಶ್ರೀ ಬಿ. ಎಲ್. ಎನ್. ರೈಗಳು ಪ್ರೆಸಿಡೆಂಟರಾಗಿ ಶ್ರೀ ಟಿ. ಎ. ಪೈಗಳು ಸ್ಪೀಕರರಾಗಿ ಶ್ರೀ ಎಸ್. ಡ್ಯಾನ್ಸಿಯು ಮುಖ್ಯಮಂತ್ರಿಗಳಾಗಿಯೂ ಶ್ರೀ ಎಸ್. ರಮಾನಂದ ಪೆಡ್ಡಿಯವರು ವಿರೋಧ ಪಕ್ಷದ ಧುರೀಣರಾಗಿ ಪಾರ್ಲಿಮೆಂಟು ಜರಗಿದಾಗ ಬೇರೆ ಬೇರೆ ವಿಷಯಗಳಲ್ಲಿ ಚರ್ಚೆ ನಡೆಯಿತು. ವಿರೋಧಿ ಪಕ್ಷದವರೇ ಮೇಲುಗೈಯಾದರು.

ಸಂಯುಕ್ತ ತರ್ಕಸಭೆ—

ಕೆದಿಲೂರು ಹಾಯಂ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ ಸಂಘಗಳ ಸಂಯುಕ್ತ ತರ್ಕ ಸಭೆಯು ದಿನಾಂಕ ೨೪ರಂದು ಶ್ರೀ ಎಸ್. ಗೋಳೀಚಂದರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಕೆ. ಪದ್ಮನಾಭ ಭಟ್ಟರು ಸ್ವಾಗತ ಭಾಷಣವನ್ನು ಮಾಡಿದ ನಂತರ ಭಾಷಣಗಳಾಮವು.

NOTICE.

In the Court of the District Munsif of Coondapoor.

Original Petition No. 31 of 1958.

Between

1. M. Gopalakrishna Kamath
2. M. Keshava Kamath
Sons of M. Narayana Kamath of Vaderhobli Village, Condapoor Tq. — Petitioners.

and

1. M. Anantha Kamath,
2. Uma Bai. 3. Varada Bai.
4. Anasuya Bai. — Children of late M. Narayana Kamath of the said Vaderhobli Village.

Respondent No. 1 resides in Kini House, Mahim, Bombay-16; Respondent No. 3, widow of P. Raghavendra Pai, residing with M. Keshava Kamath at Coondapoor Town; Respondent No. 2 with her husband—R. M. Shenoy, B. A., L. T., at No. 14 Tandavaraya Mudali Street, Tondiarpet Madras-21; and Respondent No. 4 with her husband K. V. Naik, B. A., LL. B., C/o Bank of Bikaner, P. O. Bikaner.

To the above respondents and to all whom it may concern:—

The petitioners and the respondents are the children of the late M. Narayana Kamath who died on 18—4—58. He held a policy (No. 58740) for Rs. 2,000/- in the Oriental Government Security Life Assurance Co. A sum of Rs. 1093 69NP is the net amount now due and recoverable under the Policy. By virtue of an agreement dated 23—12—55 entered into by the said deceased and the petitioners and the 1st respondent under which the net amount realized on the policy standing in the name of the deceased at maturity be had and shared equally by the petitioners and the first respondent herein the petitioners have filed the above petition in this Court for a Succession Certificate empowering them to collect and receive Rs. 729—13 NP being 2/3 of the amount due under the policy from the above Company. The above petition is posted to 16—10—1958 on which date any person desirous of objecting to the said petition may appear at 11 a. m. before the said Court.

Coondapoor. 25—9—1958.

Sd/ A. V. N. Hebbar,
Vakil for Petitioners.

ವಿಜ್ಞಾನ ವಿಸ್ಮಯ

ಮುದ್ರಣ ಸಾಧನದಲ್ಲಿ ಒಂದು ಮಹಾಕ್ರಾಂತಿ!

ಪ್ಲಾಸ್ಟಿಕ್‌ನ ಫಿಲ್ಮಿನಲ್ಲಿ ಅಕ್ಷರಗಳನ್ನು ಮೂಡಿಸಿ ಸುಲಭದಲ್ಲಿ ಅಗ್ಗದಲ್ಲಿ ಮುದ್ರಿಸಬಹುದು

ಲೋಹದ ತಗಡುಗಳ ಬದಲು ಪ್ಲಾಸ್ಟಿಕ್ ತಗಡುಗಳನ್ನು ಮುದ್ರಣರಂಗದಲ್ಲಿ ಉಪಯೋಗಿಸಬಹುದಾದ ಹೊಸ ಕ್ರಾಂತಿಕಾರಿ ವಿಧಾನವೊಂದನ್ನು ಡೂಪಾಂಟ್ ಕಂಪೆನಿಯ ವಿಜ್ಞಾನಿಗಳು ಸಿದ್ಧಪಡಿಸಿದ್ದಾರೆ. ವೃತ್ತಪತ್ರಿಕೆಗಳು ಮತ್ತು ಸಂಚಿಕೆಗಳನ್ನಲ್ಲದೆ ಇತರ ವಿಧದ ಮುದ್ರಣಗಳನ್ನೂ ಈ ಪ್ಲೇಟುಗಳ ನೆರವಿನಿಂದ ಎಲ್ಲ ವಿಧದ ಮುದ್ರಣಯಂತ್ರಗಳಲ್ಲೂ ಅಚ್ಚುಹಾಕುವುದು ಸಾಧ್ಯವಾಗಿದೆ. ಈ ಸಂಶೋಧನೆಯ ಫಲವಾಗಿ ವೃತ್ತಪತ್ರಿಕೆಗಳ ಮುದ್ರಣ ವೆಚ್ಚದಲ್ಲಿ ಇಳಿತವೂ ಮುದ್ರಣದ ಗತಿಯಲ್ಲಿ ತೀವ್ರತೆಯೂ ಆಗಲಿಹುದು.

ಈಗ ಅಮೆರಿಕೆಯ ಅನೇಕ ವೃತ್ತಪತ್ರಿಕೆಗಳ ಕಛೇರಿಗಳಲ್ಲಿ ಈ ಪ್ಲಾಸ್ಟಿಕ ಪ್ಲೇಟುಗಳನ್ನು ಪರೀಕ್ಷೆಗೆ ಗುರಿಪಡಿಸಲಾಗುತ್ತಿದೆ. ಅಲ್ಲದೇ ೧೯೬೦ರ ವರೆಗೂ ಈ ಪ್ಲೇಟುಗಳು ಸೀಮಿತ ಪ್ರಮಾಣದಲ್ಲಿಯೇ ತಯಾರಾಗುವವಲ್ಲದೆ ಬ್ರಹ್ಮಪ್ರಮಾಣ ರೂಪವನ್ನು ತಾಳಲಾರವು.

ಈ ಪ್ಲೇಟುಗಳಿಂದಾಗಿ ಮುದ್ರಣದ ಸಿದ್ಧತೆಗೆ ಬೇಕಾದ ಸಮಯದಲ್ಲಿ ೬ ಹಲ ಕಾಲ ಸಿಗುತ್ತದೆ. ಮುದ್ರಣವು ಓದಿಗೆ ಸುಲಭವಾಗುತ್ತದೆ. ಮುದ್ರಣದ ನಾನಾ ಕ್ರಮ ಮೆಟ್ಟಲುಗಳಲ್ಲಿ ಒಂದೆರಡು ಮೆಟ್ಟಲುಗಳ ಉಳಿತಾಯವಾಗುತ್ತದೆ. ಲೋಹದ ಪ್ಲೇಟುಗಳಿಗಿಂತ ಈ ಪ್ಲೇಟಿನಲ್ಲಿ ತಾಳಿಕೆಯ ಗುಣವೂ ಹೆಚ್ಚಿದೆ. ಆರಂಭದಲ್ಲಿ ಈ ಪ್ಲೇಟುಗಳ ಬೆಲೆಯು ಲೋಹದವುಗಳಿಗಿಂತ ಕೊಂಚ ಎತ್ತರದಲ್ಲಿರಬಹುದಾದರೂ ಅವುಗಳ ಉಪಯೋಗವು ಹೆಚ್ಚಿದಂತೆ ಇಳಿಯುತ್ತ ಬರುವುದು ನಿಶ್ಚಯ.

ಮೊದಮೊದಲು ವೃತ್ತಪತ್ರಿಕೆಗಳಲ್ಲಿ ಪೂರ್ಣ ಪೃಷ್ಠಾಕಾರದ ಜಾಹಿರಾತುಗಳನ್ನು ಸಿದ್ಧಪಡಿಸುವಾಗ ಇಂತಹ ಪ್ಲಾಸ್ಟಿಕ್ ಪ್ಲೇಟುಗಳನ್ನು ಬಳಸಬಹುದು. ಈಗಾಗಲೇ ತೊಡಗಿದ ಪರೀಕ್ಷಣೆಯಿಂದ ಪತ್ರಿಕಾ ಮುದ್ರಣದ ಎಲ್ಲ ಕಠಿನ ಪರಿಸ್ಥಿತಿಯನ್ನೂ ತಾಳಿಕೊಳ್ಳುವ ಶಕ್ತಿಯು ಇವಕ್ಕಿದೆ ಎಂದು ತಿಳಿದುಬಂದಿದೆ ಈ ಮುದ್ರಣದಲ್ಲಿ ಅಕ್ಷರಗಳು ಸುಸ್ಪಷ್ಟವಾಗಿರುತ್ತವೆ; ಸುಲಭದಲ್ಲಿ ಓದಬಲ್ಲ ಮಾದರಿಗಳನ್ನು ಹೊಂದಿರುತ್ತವೆ; ಚಿತ್ರ ಹಾಗೂ ಛಾಯಾ ಚಿತ್ರಗಳನ್ನು ಅಧಿಕ ಸಂಖ್ಯೆಯಲ್ಲಿ ಉಪಯೋಗಿಸಬಹುದಾಗಿದೆ; ಅತ್ಯಂತ ಕೊನೆಯ ಸುದ್ದಿಗಳನ್ನೂ ಪ್ರಕಟಿಸುವುದು ಸಾಧ್ಯವಾಗಿದೆ.

ದಿನಪತ್ರಿಕೆಗಳಿಲ್ಲದ ಸ್ಥಳಗಳಲ್ಲಿ ಇವುಗಳ ಸಹಾಯದಿಂದ ದಿನ ಪತ್ರಿಕೆಗಳನ್ನು ಪ್ರಾರಂಭಿಸಬಹುದಾಗಿದೆ. ಒಂದೇ ಪತ್ರಿಕೆಯಿರುವಲ್ಲಿ ಎರಡನ್ನು ಸ್ಥಾಪಿಸಬಹುದು. ಏಕೆಂದರೆ, ಹೊಸ ಪ್ಲೇಟುಗಳಿಂದಾಗಿ, ಮುದ್ರಣಯಂತ್ರೋತ್ಪಾದಿಗಳು ಹಗುರುವಾಗುವುವು; ಇದರಿಂದ ಅಗತ್ಯವಾದ ಕೆಲಸಗಾರರ ಸಂಖ್ಯೆಯಲ್ಲಿ ಇಳಿತಾಯವಾಗುವುದು; ಪತ್ರಿಕೋತ್ಪಾದನೆಯು ವೆಚ್ಚವು ತಾನಾಗಿ ಇಳಿಯುವುದು.

ಛಾಯಾಚಿತ್ರದ ಮೂಲಕ ಬರಹವನ್ನು ಅಚ್ಚುಹಾಕಿಸುವ ಆಲೋಚನೆಯು ಇತ್ತೀಚಿನದಲ್ಲ. ಸೂರು ವರ್ಷಗಳ ಕೆಳಗೆ ಇಂತಹ ಪ್ರಯತ್ನವೊಂದು ನಡೆಯಿತು. ಆದರೆ, ದ್ವಿತೀಯ ಲೋಕಯುದ್ಧಾನಂತ್ಯದ ವರೆಗೂ ಈ ವಿಧಾನವನ್ನು ಬೆಳೆಸುವ ಪ್ರಯತ್ನ ನಡೆಯುವುದು ಅಸಾಧ್ಯವಾಯಿತು. ಅನಂತರ ಅಮೆರಿಕೆಯ ಮತ್ತು ಯುರೋಪಿನ ಅನೇಕ ರಾಷ್ಟ್ರಗಳು ಲೋಹದ ಅಕ್ಷರಗಳ ಬದಲು ಛಾಯಾಚಿತ್ರದ ಫಿಲ್ಮ್‌ನ ಮೇಲೆ ಅಕ್ಷರ ಸಂಯೋಜಿಸುವ ಅನೇಕ ಸಾಧನಗಳನ್ನು ನಿರ್ಮಿಸಿವೆ.

ಟೈಪ್‌ರೈಟರುಗಳಂತೆಯೇ ಇರುವ ಯಂತ್ರಗಳ ಸಹಾಯದಿಂದ ಛಾಯಾಕ್ಷರವನ್ನು ಫಿಲ್ಮ್‌ಗಳ ಮೇಲೆ ಮೂಡಿಸಲಾಗುತ್ತದೆ. ಲೋಹದ ಅಕ್ಷರ ಸಂಯೋಜನೆಗಿಂತಲೂ ಈ ಛಾಯಾಕ್ಷರ ಸಂಯೋಜನೆಯು ಉತ್ತಮ ಫಲಿತಾಂಶಗಳನ್ನು ಈಯುವ ವಿಶ್ವಾಸವಿದೆ. ಛಾಯಾ ಚಿತ್ರವನ್ನು ಮುದ್ರಣಕ್ಕೆ ಉಪಯೋಗಿಸಲಾಗದಂತೆ ಇತ್ತೀಚೆಗಿನ ವರೆಗೆ ಮೂರು ಅಂಶಗಳು ಆತಂಕವಾಗಿದ್ದವು- ವಿಶೇಷ ಮಾದರಿಯ ಅಕ್ಷರಗಳು ಅಗತ್ಯವಾಗಿ ಅಕ್ಷರಗಳ ವೈವಿಧ್ಯದಲ್ಲಿ ಮಿತ ವ್ಯಾಪ್ತಿಯನ್ನು ಪಡೆದಿದ್ದ ಈ ವಿಧಾನ ಊನವೆನಿಸುತ್ತಿತ್ತು. ಕಿದ್ದುಪಡಿಗಳು ಅಧಿಕವಾಗಿದ್ದಾಗ ಅದಕ್ಕೆ ತಕ್ಕಂತೆ ಹೊಂದಿಕೊಳ್ಳಬಲ್ಲ ಜೇತನ ಇದಕ್ಕಿರಲಿಲ್ಲ. ಆದರೆ, ಈಗ, ಈ ಎರಡೂ ತೊಡಕುಗಳನ್ನು ನಿವಾರಿಸಲಾಗಿದೆ.

ಇವೆರಡಕ್ಕಿಂತಲೂ ಉತ್ಕೃಷ್ಟವಾದ ಆತಂಕವೆಂದರೆ, ಫಿಲ್ಮನ್ನು ಉಪಯೋಗಿಸುವ ಕೆಲ ಬಗೆಯ ಮುದ್ರಣಗಳ ಇಮ್ಮಡಿ ವೆಚ್ಚ. ಲೋಹಗಳಂತೆ ಫಿಲ್ಮನ್ನು ಮತ್ತೆ ಮತ್ತೆ ಉಪಯೋಗಿಸಲಾಗುವುದಿಲ್ಲ. ಆದರೆ, ಛಾಯಾಕ್ಷರ ಸಂಯೋಜನೆಯನ್ನು ಕಂಡುಹಿಡಿದವರು ಅತ್ಯಂತ ಸುಲಭ ಬೆಲೆಯ ಫಿಲಂಗಳನ್ನು ಸಂಶೋಧಿಸುವ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಇದು ಕೈಗೂಡಿತೆಂದರೆ, ಮುದ್ರಣ ಕ್ಷೇತ್ರದಲ್ಲಿ ಒಂದು ಮಹತ್ತರ ಪರಿವರ್ತನೆಯೊಗುವುದು ಎಂದು ಈ ಕೈಗಾರಿಕೆಯ ನಾಯಕರು ಧೈರ್ಯದಿಂದಿದ್ದಾರೆ.

ಅಂತಹ ಕಾಲವೂ ಬಹಳ ದೂರವಿಲ್ಲ ವೆಂಬುದಾಗಿಯೂ ತಿಳಿದುಬರುತ್ತದೆ. ಸಂಶೋಧನೆಯ ಪರಿಷತ್ತಿನಲ್ಲಿನಲ್ಲಿ ಇನ್ನೇನೇನು ಆಗಲಿವೆಯೋ ಬಲ್ಲವರಾರು?

ಗೋ ವಿಜಯ

(ಗೋವಿನಕಥೆ)

ಶ್ರೀ ಮುಳ್ಳುಸ್ವಾಮಿ ಉಪಾಧ್ಯಾಯರಿಂದ ರಚಿತವಾದ ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಪ್ಪಚ್ಚಿಯ ತಾನೇ ಕತೆ, ಹಾಡು, ಆರ್ಧ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ.-ನ.)

ಯೋಜನಾಭ್ಯುದಯ—

(ಸಾಧಿತ ಮತ್ತು ಸಾಧನೀಯಗಳು) ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ-೬. ಪುಟಗಳು: ೪೦. ಬೆಲೆ: ರೂ. ೦.೬೦ ನಯೇ ಪೈಸೆ.

ಭಾರತವು ತನ್ನ ಪುನಾರಚನಾ ಕಾರ್ಯಕ್ರಮದ ಅಂಗವಾಗಿ ಪಂಚವಾರ್ಷಿಕ ಯೋಜನೆಗಳನ್ನು ಕೈಗೊಳ್ಳುತ್ತಲಿರುವುದು ಸರ್ವವಿದಿತವಿದೆ. ಈಗಾಗಲೇ ಒಂದು ಯೋಜನೆಯನ್ನು ಮುಗಿಸಿ ಎರಡನೆಯದರಲ್ಲೂ ಅರ್ಧಾಂಶದಷ್ಟು ಕೊನೆಗೊಳ್ಳುತ್ತಬಂದಿದೆ. ಇಂತಹ ಸಂದರ್ಭದಲ್ಲಿ ಕೋಟಗಟ್ಟಲೆ ರೂಪಾಯಿಗಳ ಪೂರ್ವಾಪರಗಳನ್ನು ಜನತೆಗೆ ತಿಳಿಯಪಡಿಸುವ ಆಕಾಂಕ್ಷೆಯಿಂದ ಸರಕಾರವು ಈ ಪ್ರಕಟಣೆಯನ್ನು ಬೆಳಕಿಗೆ ತಂದಿರುವುದು ಪ್ರಶಂಸನೀಯ.

ಇದರ ಆದಿಯಲ್ಲಿ ಪ್ರಧಾನಿ ಶ್ರೀ ನೆಹರೂರವರು ಯೋಜನೆಯ ಬಗ್ಗೆ ಹಾಗೂ ಅದರ ಅವಶ್ಯಕತೆ, ಪ್ರಯಾಸಗಳ ಪರವಾಗಿ ಅಡಿದ ಮಾತುಗಳು ಇರುತ್ತವೆ. ನಮ್ಮ ದೇಶದ ಅಭಿವೃದ್ಧಿಯು ಮುಖ್ಯವಾಗಿ ಕೃಷಿಯಾವಲ್ಲೇ ಹೊಂದಿಕೊಂಡಿರುವುದರಿಂದ, ಬೇಸಾಯದ ಉತ್ಪತ್ತಿ ಹೆಚ್ಚಿದರೆ ಮಾತ್ರ ನಮ್ಮ ದೇಶದ ಅವಶ್ಯಕತೆಗಳನ್ನು ಒಡಗಿಸಿಕೊಳ್ಳಲು ಸಾಧ್ಯವಾದುದರಿಂದ ನಾವು ಕಷ್ಟಪಟ್ಟು ದುಡಿಯಲೇ ಬೇಕು; ಹಾಗೆ ನೂಡದೆ ಹೋದರೆ, ನಮ್ಮ ಯೋಜನೆಯನ್ನು ಮುಂದುವರಿಸಲಾರೆವು ಎಂದ ನರು ಅಭಿಪ್ರಾಯಪಟ್ಟಿದ್ದಾರೆ.

ಮುಂದೆ, ಗ್ರಾಮಾಭಿವೃದ್ಧಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ, ಕೈಗಾರಿಕೆಗಳು, ವೈಜ್ಞಾನಿಕ ಸಂಶೋಧನೆ, ಸಾರಿಗೆ ಹಾಗೂ ಸಮಾಜಸೇವೆ ಎಂಬ ಆರು ಅಧ್ಯಾಯಗಳಲ್ಲಿ ಆಯಾ ವಿಭಾಗದಲ್ಲಿದ್ದ, ಈಗಾಗಿರುವ ಮತ್ತು ಯೋಜನೆಯು ಪೂರ್ಣಗೊಳ್ಳುವಾಗ ಆಗಬಹುದಾದ ಪ್ರಗತಿಗಳನ್ನು ಸಾಕಷ್ಟು ಅಂಕಿಸಂಖ್ಯೆಗಳ ಆಧಾರದಿಂದ ವರ್ಣಿಸಿರಲಾಗುವುದಲ್ಲದೆ, ಸರಕಾರವು ಕೈಗೊಳ್ಳಲಿರುವ ವಿವಿಧ ಯೋಜನೆಗಳ ವಿವರಣೆಗಳೂ ಅವುಗಳಿಂದ ಒದಗಬಹುದಾದ ಪ್ರಯೋಜನಾದಿಗಳೂ ಸಾಧಾರವಾಗಿ ಸ್ಪಷ್ಟೀಕರಿಸಲ್ಪಟ್ಟಿವೆ. ಈ ಗ್ರಂಥದಿಂದ ಸಾಮಾನ್ಯ ಜನರೆಲ್ಲರಿಗೂ ನಮ್ಮ ಪ್ರಗತಿಪರ ಯೋಜನೆಯ ಸಾಧಿತಾಂಶಗಳೂ ಸಾಧನೀಯಾಂಶಗಳೂ ಬಹಳ ಸುಲಭವಾಗಿ ತಿಳಿದುಬರುವಲ್ಲಿ ಸಂಶಯವಿಲ್ಲ. ಆದರೂ ಹೆಚ್ಚಿನ ಜನರ ಕೈಗೆ ಇಲ್ಲಿಯವರೆಗೆ ಈ ಸರಕಾರೀ ಪ್ರಕಟಣೆಯು ಬೆಲೆಯಿರುವಂತೆ ನೋಡಿಕೊಳ್ಳದಿರುವುದೊಂದು ಊನವೆನ್ನಬಹುದಾದ ವಿಧಿಯಿಲ್ಲ. ಏಕೆಂದರೆ, ಈ ಬಗೆಯ ಪ್ರಕಟಣೆಗಳನ್ನು ಜನತೆಯಲ್ಲಿ ಯೋಜನಾಪ್ರಜ್ಞಾರಕ್ಕಾಗಿ ಪುಕ್ಕಟೆಯಾಗಿ ಹಂಚುವುದರಿಂದ ಅಥವಾ ಆಗ್ಗದ ದರದಲ್ಲಿ ಪೂರೈಸುವುದರಿಂದ ಒದಗಬಹುದಾದವನ್ನು ಈಗ ಸಫಲವಾಗುವುದೆಂದು ವಿಶ್ವಾಸ ಸಾಲದು. ಎಂತಲೆ ಸರಕಾರವು ಇತ್ತ ಗಮನವೀಯಬೇಕು. ಪ್ರಕಟಣೆ ಸ್ವಾಗತಾರ್ಹ ಹಾಗೂ ಸಂಗ್ರಾಹ್ಯವಿದೆ.

ದೀಪಮಾಲೆ: ಪುಟಗಳು ೨೮. ಬೆಲೆ: ರೂ. ೦-೦೯.

ಕಸ್ತೂರಿಯ ಪುತ್ತೂರಿ: ಪುಟಗಳು: ೧೪. ಬೆಲೆ: ರೂ. ೦-೦೯

ಮೇಲಿನ ಎರಡೂ ಪದ್ಯಸಂಕಲನಗಳ ಲೇಖಕರು: ಪದ್ಮನಂದ, ಸೊದೆ. ಪ್ರಕಾಶಕರು: ರಾಜಕಮಲ್ ಸಾಹಿತ್ಯ, ಸೊದೆ, ಧ.ಕ.

ಕನ್ನಡದಲ್ಲಿ ಶಿಶುಗೀತೆಗಳ ಕೊರತೆಯಿರುವುದು ಸಾಮಾನ್ಯವಾದರೂ ಉತ್ತಮ ಮಟ್ಟದ ಶಿಶುಗೀತೆಗಳು ಬಹಳಷ್ಟು ಅಪರೂಪವಾಗಿವೆ. ಮಾನಸ್ಸಿಗೆ ಮೆಚ್ಚಬಲ್ಲಂತಾದ, ಹುಲಭ ಗ್ರಾಹ್ಯವಾದ, ಸ್ವತಂತ್ರವಾದ ಶಿಶುಗೀತೆಗಳು ನಮ್ಮಲ್ಲಿಂದಾಗಿ ಬೇಕಾಗಿವೆಯೆಂಬುದನ್ನು ಯಾರೂ ಅಲ್ಲಗೆಳ್ಳಲಾರರು. ಚಿಕ್ಕಮಕ್ಕಳ ಮನಸ್ಸಿನಲ್ಲಿ ಪರಿಣಾಮ ಮಾಡುವಂತೆ ಬರೆದ ರಾಗಯುಕ್ತವಾಗಿ ಹಾಡಲಬಲ್ಲಂಥವಾದ ಶಿಶುಗೀತೆಗಳ ಅಭಾವವು ತುಂಬಿಬರಬೇಕು.

ಶ್ರೀ ಪದ್ಮನಂದ ಶೆಟ್ಟಿಯವರು ಈಗಾಗಲೇ ಕೆಲವು ಶಿಶು ಗೀತಾ ಸಂಕಲನಗಳನ್ನು ಬರೆದು ಬೆಳಕಿಗೆ ತಂದಿದ್ದಾರೆ. ಇದೀಗ ಈ ಎರಡೂ ಅಂಥವೇ ಗೀತಾ ಸಂಕಲನಗಳು ಪ್ರಕಾಶಕ್ಕೆ ಬರುತ್ತಿವೆ. ದೀಪ ಮಾಲೆಯಲ್ಲಿ ಇಪ್ಪತ್ತೂ ೭ಕಸ್ತೂರಿಯ ತುತ್ತೂರಿಯಲ್ಲಿ ಹದಿನಾಲ್ಕು ಗೀತೆಗಳಿವೆ. ಸಾಮಾನ್ಯವಾಗಿ ಹೆಚ್ಚಾಗಿ ಪ್ರಚಾರದಲ್ಲಿರುವ ಎಲ್ಲರೂ ಮೆಲುಕು ಹಾಕುತ್ತಿರುವ ರೂಢಿಯ ಅನುಕರಣೆಯನ್ನೇ ಮಾಡಿ ಈ ಕವನಗಳನ್ನು ಬರೆದಿರುವುದರಿಂದ ಮಕ್ಕಳಿಗೆ ಹಾಡಲೂ ಕೆಲಪ್ರೊಂದನ್ನು ಅಭಿನಯಿಸಿ ಹಾಡಲೂ ಸುಲಭವಾದೀತು. ಮಂಗ, ಚಿಟ್ಟೆ, ಮೇಳ, ತಾರೆ ಇತ್ಯಾದಿ ಪ್ರಸಿದ್ಧವಿಷಯಗಳನ್ನೇ ಮತ್ತೂ ಮತ್ತೂ ಬೆಲುಕು ಹಾಕುವುದಕ್ಕಿಂತ ಇಂದಿನ ಕಾಲಮಾನಕ್ಕೆ ಸರಿಹೊಂದನ, ಅನುಕರಣ ರಹಿತವಾದ ಶಿಶು ಗೀತೆಗಳಿದ್ದರೆ, ಅವು ನಿಜವಾಗಿಯೂ ಆದರ್ಶವಿಷಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಚಿಕ್ಕ ಮಕ್ಕಳ ಮನಸ್ಸಿಗೆ ಸಂತೋಷ ಪವನ್ನು ತಂದೀಯುವುದರೊಡನೆ ಸಾಹಿತ್ಯದ ಗಾರವನ್ನೂ ಉಳಿಸುವಂತೆ ಶಿಶು ಸಾಹಿತ್ಯದ ನಿರ್ಮಾಣವನ್ನು ಮಾಡುವ ಶಕ್ತಿ ಶ್ರೀ ಪದ್ಮನಂದರಲ್ಲಿದೆ ಯೆಂಬುದಕ್ಕೆ "ಮೇಳೈರಾಜ" ಪೊಪಲಾದ ಗೀತೆಗಳೇ ಸಾಕ್ಷಿ. ಶ್ರೀಯುತರು ಅನುಕರಣೆಯಿಲ್ಲದೆ ಸ್ವತಂತ್ರವಾಗಿ ಇದೆ ಕ್ಕಿರಲೂ ಉತ್ತಮವಾದ ಶಿಶು ಗೀತೆಗಳನ್ನು ರಚಿಸುವಂತಾಗಲಿ ಎಂದು ಹಾರೈಸುತ್ತೇವೆ. ಆಚ್ಚು ಮಾಡುವಾಗ ಪದವನ್ನು ಒಡೆಯುವಂತಹ ತಪ್ಪು ದೋಷವನ್ನು ತಿದ್ದಿಕೊಂಡರೆ ಉತ್ತಮ.

—ಗೋರಾ.

ಸಾದರ ಸ್ವೀಕಾರ

೧. ಬೆಂಕಿಯಿಂದ ರಕ್ಷಣೆ —

ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ-೬. ಪುಟಗಳು: ೪೪. ಬೆಲೆ: ರೂ. ೭೫ ನಯೇ ಪೈಸೆ.

೨. ಜನತಾ ಕಾರ್ಯಕ್ರಮ—

(ಸಮಾಜ ವಿಕಾಸ ದೇಖಾ ಚಿತ್ರಗಳು) ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ಶಾಖೆಗಳು, ದೆಹಲಿ-೬. ಬೆಲೆ ರೂ. ೨.

೩. Use of the Tamil Language—

Published by the Department of Information, Cylon. Pages: 29.

೪. ಸೋವಿಯತ್ ದೇಶ—

ನಂ. ೧೭ ಸಪ್ಟಂಬರ್, ೧೯, ೧೯೫೦. ಭಾರತ ದೇಶದಲ್ಲಿ ಸೋವಿಯತ್ ಒಕ್ಕೂಟದ ಮಾತಾವಾಸದ ಸಮಾಚಾರ ಕಾಚೆಯಿಂದ ಪ್ರಕಟವಾಗುವ ಸಚಿತ್ರ ಪಕ್ಷ ಪತ್ರಿಕೆ. ಪುಟಗಳು ೪೦. ಬೆಲೆ: ೨೮ ನಯೇಪೈಸೆ.

೫. ವಿವೇಕಾಭ್ಯುದಯ —

(ಬೆಳ್ಳಿ ಹಬ್ಬದ ಸಂಚಿಕೆ) ಸಂಪಾದಕರು: ಶ್ರೀ ಡಿ. ಪುಟ್ಟಸ್ವಾಮಿ, ಬಿ ಎ. ಬಿ. ಎಲ್. ವೀರಭದ್ರನ್, ನುಂಗಳೂರು ಪುಟಗಳು: ೧೬೦+೪ ಬೆಲೆ: ಒಂದು ರೂಪಾಯಿ.

NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

೧. ಪರೀಕ್ಷೆಯ ಫಲಿತಾಂಶ

ಸೈನಿಕ ದಳಕ್ಕೆ ಸೇರಲು ಬಂದವರನ್ನು ಅಧಿಕಾರಿಯು ಒಬ್ಬೊಬ್ಬರನ್ನಾಗಿಯೇ ಪರೀಕ್ಷಿಸುತ್ತಿದ್ದ. ಒಬ್ಬನ ಸರದಿ ಬಂದಾಗ.....

"ಮರುಭೂಮಿ. ನೀರಿಲ್ಲ. ಶತ್ರು ಪಕ್ಷದವರು ಎಡೆಬಿಡದೆ ಮದ್ದು ಗುಂಡುಗಳ ಸ್ವೆಸೆಯುತ್ತಿದ್ದಾರೆ. ತಾಣ್ಯವಿಲ್ಲ; ರಾವಿಲ್ಲ. ಕತ್ತಲೆ ಬೇರೆ. ಎಲ್ಲಿಗೆ ಹೋಗುವುದೆಂದು ತಿಳಿಯುವುದಿಲ್ಲ. ಗುಂಡಿನ ಸಪ್ಪಳ ಕಿವಿ ಕಿವುಡಾಗುವಂತೆ ಕೇಳಿಸುತ್ತಿದೆ, ಆಕ್ಕಪಕ್ಕದಲ್ಲೇ ನರಳಾಟ; ಚೀತ್ಕಾರ..... ಇಂತಹ ಸಂದರ್ಭದಲ್ಲಿ ನೀವು ಇರುತ್ತಿದ್ದರೆ, ಆಗ ನೀನೇನು ಮಾಡುತ್ತಿದ್ದಿರಿ?" ಪರೀಕ್ಷಾಧಿಕಾರಿ ಯಾವುದೋ ಒಂದು ಪತ್ರಿಕೆಯನ್ನು ಓದುತ್ತಾ ಕೇಳಿದ; ಈ ಪ್ರಶ್ನೆಗೆ ಎಷ್ಟು ಹೊತ್ತಾದರೂ ಪರೀಕ್ಷಾರ್ಥಿಯ ಉತ್ತರವೇ ಬಾರದಿದ್ದುದನ್ನು ಕಂಡು ಬೆರಗಾಗಿ ನೋಡಿದಾಗ ಪರೀಕ್ಷಾರ್ಥಿ ಪ್ರಜ್ಞಾಶೂನ್ಯನಾಗಿ ನೆಲಕ್ಕುರುಳಿದುದನ್ನು ಕಂಡನು.

೨. ಬಿಲ್ಲಿನ ಯೋಚನೆ.

ಡಾಕ್ಟರ್—ನಿದ್ದೆ ಬರೋದಕ್ಕೆ ಔಷಧಿ ಕೊಟ್ಟಿದ್ನಲ್ಲ. ಮತ್ತೇಕೆ ನಿದ್ದೆ ಬರಲಿಲ್ಲ?

ರೋಗಿ—ಡಾಕ್ಟರೇ! ನಿಮ್ಮ ಬಿಲ್ಲನ್ನು ಹೇಗೆ ತೀರಿಸುವುದು ಅಂತ ಯೋಚನೆ ಬಂತು..

೩. ಹೇಗಾದರೂ ಕಷ್ಟ.

ಒಬ್ಬರು ಪ್ರಸಿದ್ಧ ಚಿತ್ರ ಸಂಗೀತ ನಿರ್ದೇಶಕರು ತಾವು ಹೆಜ್ಜಾಗಿ ಏಕೆ ಮಹಿಳಾ ಹಿಂಬದಿ ಗಾಯಕರನ್ನು ಮೆಚ್ಚುವುದಿಲ್ಲ ಎಂಬುದಕ್ಕೆ ಕಾರಣವನ್ನಿಯುತ್ತಾ ಹೀಗೆ ಹೇಳಿದರು: "ಆಪಳು ಸುಂದರಿಯಾಗಿದ್ದರೆ ಇತರ ಗಾಯಕರ ಮನಸ್ಸನ್ನು ಸೆರೆಹಿಡಿಯುತ್ತಾಳೆ; ಕುರೂಪಿಯಾಗಿದ್ದರೆ ನನಗೇ ಆನಂದವೆನಿಸುವುದಿಲ್ಲ."

೪. ಒಂದೇ ಜಾತಿ.

ಓರ್ವ ಮುದುಕ ಕೆಮ್ಮುತ್ತಾ ಡಾಕ್ಟರರ ಕೋಣೆಯ ಬಳಿ ಬಂದಾಗ "ನೀವು ನನಗೆ ಕೊಟ್ಟ ಚೆಕ್ ಬೌಂಕಿನಿಂದ ವಾಪಾಸು ಬಂತು" ಎಂದರು. ಅದಕ್ಕೆ ಆ ರೋಗಿಯು, "ಹೀಗೋ, ತಮಾಷೆಯಾಗಿದೆ. ಏಕೆಂದರೆ ಯಾವ ರೀತಿ ಚೆಕ್ ವಾಪಾಸು ಬರುತ್ತೋ, ಅದೇ ರೀತಿ ನನ್ನ ಕೆಮ್ಮು ಕೂಡಾ ಮರುಕಳಿಸಿತೆ" ಎಂದನು.

೫. ಪ್ರಸ್ತುತ ಧರ್ಮ.

ಪತ್ನಿ [ಪೂಸ ಉಡುಪುಗಳನ್ನು ಧರಿಸಿಕೊಂಡು]—ಈ ಸೋಷಾಕು ನನಗೆ ಹೇಗೆ ಒಪ್ಪುತ್ತವೆ?

ಪತಿ [ಆಶ್ಚರ್ಯ ಚಕಿತನಾಗಿ]— ನಾನು ಇದಕ್ಕೆ ದುಡ್ಡನ್ನು ಎಲ್ಲಿಂದ ತರಲಿ ಎಂಬುದನ್ನಾದರೂ ಯೋಚಿಸಿದೆಯಾ?

ಪತ್ನಿ [ನಗುತ್ತಾ]—ಇದಕ್ಕಾಗಿ ನನ್ನ ಸಲಹೆ ಕೇಳಬೇಡಿರಿ. ಆರ್ಥಶಾಸ್ತ್ರದಲ್ಲಿ ನೀವು ನನಗಿಂತಲೂ ಎಷ್ಟೋ ಪ್ರವೀಣರು.

೬. ಸಹಯಾತ್ರಿಗಳು.

"ನೀವು ನಿಮ್ಮ ಪತ್ನಿಯೊಡನೆ ಎಂದಾದರೂ ವಿಕಾಭಿಪ್ರಾಯವುಳ್ಳವರಾಗಿದ್ದೀರೋ?

"ಹೌದು! ಒಮ್ಮೆ ನಮ್ಮ ಮನೆಗೆ ಬೆಂಕಿ ಬಿನ್ನಾಗ, ನಾವಿಬ್ಬರೂ ಒಟ್ಟಿಗೆ ಎದುರಿನ ಬಾಗಿಲಿನಿಂದ ಓಡಿಹೋಗಲು ಇಚ್ಛಿಸಿದೆವು

೭. ಈಡೇರಿದ ಬಯಕೆ

ಓರ್ವ ಮುದುಕ—"ನಿಮ್ಮ ಬಂಲ್ಕದ ಯಾವುದಾದರೂ ಅಭಿಲಾಷೆ ಪೂರ್ತಿಯಾಯಿತೋ?"

ಮತ್ತೊಬ್ಬ ಮುದುಕ— "ಹೌದು! ಶಾಲೆಯಲ್ಲಿ ಮಾಸ್ತರರು ನನ್ನ ತಲೆಕೂದಲನ್ನು ಹಿಡಿದು ಅಲ್ಲಾಡಿಸುತ್ತಿದ್ದಾಗ, 'ನನ್ನ ತಲೆಯಲ್ಲಿ ಕೂದಲೇ ಇಲ್ಲದಿದ್ದರೆ ಎಷ್ಟು ಉತ್ತಮವಾಗುತ್ತಿತ್ತು.' ಎಂದು ಯೋಚಿಸುತ್ತಿದ್ದೆ. ಆ ಬಯಕೆ ಈಗ ಈಡೇರಿದೆ."

ಶ್ರೀ ಎನ್. ನಾರಾಯಣ ಬಲ್ಲಾಳ್,
ಕಾಸನ.



ಬಾಕ್ಸ್ ಅನೆಕಟ್ಟನ್ನು ಕಟ್ಟಲು ಆರಿಸಿದ ಈ ಸ್ಥಳವು ಬಹಳ ಎರುತಗ್ಗುಗಳಿಂದ ಕೂಡಿಕೊಂಡಿದೆ.

ದಶಮಾನ ಪದ್ಧತಿ

(ಅಸೀ ಮುಟದಿಂದ)

ಗೆ ಆರ್ಥವಾಗುವುದಿಲ್ಲ, ಮುಂತಾದವುಗಳಿಗೆ ಆವರು ಅಭಿಪ್ರಾಯಪಟ್ಟರು. ಆದರೆ, ಈಗ ಒಂದೂವರೆ ವರ್ಷದ ಅಂತರದಲ್ಲಿ ದಶಮಾನ ಪದ್ಧತಿಯು ಸುಸೂತ್ರವಾಗಿ ಆಚರಣೆಗೆ ಬಂದಿತು. ನಮ್ಮ ಕೆಲಸದಲ್ಲಿ ನನಗೆ ಸಾಫಲ್ಯ ದೊರೆಯಿತು.

ದಶಮಾನ ನಾಣ್ಯ ಪದ್ಧತಿಯನ್ನು ೧೯೫೭ರ ಏಪ್ರಿಲ್ ೧ರಂದು ಆಚರಣೆಗೆ ತರಲಾಯಿತು. ನಗರಗಳು ಮತ್ತು ಗ್ರಾಮಗಳಲ್ಲಿ ಈ ನಾಣ್ಯಗಳ ಬಗೆಗೆ ಜಾಗೃತ್ಯ ಪ್ರಜ್ಞೆ ಮೂಡಲಾಯಿತು. ಮೊದಮೊದಲು ಕೆಲವು ತೊಂದರೆಗಳು ಉದ್ಭವಿಸಿದವು ಆದರೆ, ಕ್ರಮೇಣ ಈ ತೊಂದರೆಗಳು ತಪ್ಪಿ, ಹೊಸ ನಾಣ್ಯಗಳು ಆಚರಣೆಗೆ ಬಂದವು. ಈಗ ದೇಶದಲ್ಲಿ ೧೦೦ ಕೋಟಿ ನಯಾಪೈಸೆಗಿಂತಲೂ ಹೆಚ್ಚು ನಾಣ್ಯಗಳು ಚಲಾವಣೆಯಲ್ಲಿವೆ. ಜೊತೆಗೆ, ಕಲ್ಕತ್ತ ಮುಂಬೈ ಮತ್ತು ಹೈದರಾಬಾದ್‌ಗಳಲ್ಲಿರುವ ಟಂಕಸಾಲೆಗಳಲ್ಲಿ ಪ್ರತಿ ದಿನ ೩೦ ಲಕ್ಷಕ್ಕೆಂತಲೂ ಹೆಚ್ಚು ನಾಣ್ಯಗಳು ಸಿದ್ಧಗೊಳ್ಳುತ್ತಿವೆ. ಹಳೆಯ ನಾಣ್ಯಗಳ ಚಲಾವಣೆಯ ಪ್ರಮಾಣವೂ ಕಡಿಮೆಯಾಗುತ್ತ ಹೋಗುತ್ತಿದೆ.

ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗಳನ್ನು ಆಚರಣೆಗೆ ತರುವುದು, ದಶಮಾನ ಪದ್ಧತಿಯ ನಾಣ್ಯಗಳನ್ನು ಆಚರಣೆಗೆ ತರುವುದಕ್ಕೆಂತಲೂ ಕಠಿಣವಾದುದು. ಆರಂಭದಲ್ಲಿ ಕೊಂಚ ತೊಂದರೆಯಾದರೂ, ಸಾರ್ವಜನಿಕರು ಈ ಪದ್ಧತಿಯನ್ನು ಗ್ರಹಿಸಿ ಸಹಕರಿಸಿದರೆ ಈ ತೊಂದರೆಗಳು ನಿವಾರಣೆಯಾಗುವುವು. ಇದರಲ್ಲಿಯೂ ಸರ್ಕಾರದವರು ಪ್ರಯತ್ನ ಪಡುವರು.

ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗಳಿಂದ ಇದೊಂದು ಅನುಕೂಲವುಂಟು. ಅದೇನೆಂದರೆ; ತೂಕ ಮತ್ತು ಅಳತೆಯ ವೈವಿಧ್ಯದಿಂದ ಕೆಲವರಿಗೆ ಲಾಭವೂ, ಕೆಲವರಿಗೆ ನಷ್ಟವೂ ಸಂಭವಿಸುವುದಿಲ್ಲ. ಈ ಪದ್ಧತಿಯಿಂದ ಎಲ್ಲರಿಗೂ ಸಮಯೋಜನೆ ದೊರೆಯುವುದು. ಆದರಂತೆ ಮೆಟ್ರಿಕ್ ಪದ್ಧತಿಯ ಲಾಭವನ್ನು ಎಲ್ಲರೂ ಪಡೆಯಬೇಕು.

—ಶ್ರೀ ಬಿ ಆರ್. ಭಗತ್.



ಕವಿತಾ ವಿತಾನ

ಸಂಜೆಯ ಸೊಬಗು

ಬಣ್ಣಪಲ್ ಬೆಂಗದಿರ ತನ್ನಕರಕಾಂಜದಿಂ,
ಮೇಣ್ಗಾಸಂಕುಲ ಪರಿಣವರ್ಣ ತಳಿತ್ತು.
ರವಿಯ ಹೊಂಬಿಳಕ ಕರಿಗಳ್ ಗಿರಿನೆರಗಲೇಂ!
ಸೃಷ್ಟಿಸೊಬಗಿನ ಕಣಜವಲ್ಲಿ ನಂದಿತ್ತು. ||೧||

ಭ್ರಮರಗಳ ಬಂಧಿಸಲ್ ವನಜಗಳ್ ಬಾಸಣಿಸಿ
ತೋಮರವ ಸಿದ್ಧಿಸಿದುವಿರಿಯಲರಿಗಳನು.
ಸಂಜೆಮಲ್ಲಿಗೆಬುರಳಿ ಕಂಪನದು ಹೊರಸೂಸಿ,
ತಂಸುಕಂಸುಗೆಳೆತ್ತು ವೆನುಗೆ ಸೊಂಪನ್ನು ||೨||

ಆತನ್ನವನ್ತೆಲರ್ ಮೃದುವಾಗಿ ಕೀಡೆ ಕಡೆಯಾದ ತರು ತಳಿರುಗಳು ಮೆಲ್ಲನಲುಗಿಸುವು.
ಮನದೊಳುದ್ಭವಿಸುತಿತ್ತಾ ನೋಟವಂ ನೋಡೆ
ನೇಸರಸ್ತ ಮಪನಂದಕ್ಕೆ ನದುಗಿಡುವು. ||೩||

ಪಗಲಿರುಳ ಬವರದೊಳ್ ಗೆಲ್ಲುವೆಣ್ ಹಾರಮುಂ
ಪಿಡಿದು ಪೊರಬೆಳ್ ನನಿಗೆ ತೊಡಿಪ ಕಾರಣದಿ
ದಿನಶಾಂತವಾಯ್ತು; ತಂಗದಿರ ಕಾಂತಿ
ಕರಮುಂ
ನಸುಮತಿಗೆ ಬೀರಲಣಿಯಾದಳತಿ ಮುದದಿ. ||೪||

—ಕು. ಮ ಮನಮೋಹನ, ಸುಳ್ಯ.

(ಇನಸುಮ ಸ್ಪರ್ಧಾಸದವರು ಯೇರ್ಪಡಿಸಿದ ಕವಿತಾ ಸ್ಪರ್ಧೆಯಲ್ಲಿ ೧ನೇ ಬಹುಮಾನ ಪಡೆದ ಕವನ)

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಗ್ರಾಮ ಸ್ವರಾಜ್ಯ

ಭಾರತೀಯರ ಉದ್ಧಾರಕ್ಕೆ ಗ್ರಾಮಸ್ವರಾಜ್ಯವೇ ಮದ್ದು

ಗ್ರಾಮಪಂಚಾಯತುಗಳ ಪುನಾರಚನೆಯಿಂದು ಅವಶ್ಯಕ

ಒಂದು ಕಾಲದಲ್ಲಿ ಮೆರೆದಾಡಿದ್ದ ಪಂಚಾಯತ ಪದ್ಧತಿಯು ಆದರ್ಶವನ್ನು ಈ ಗೀಗ ಪುನಃ ವ್ಯವಹಾರಕ್ಕೆ ತರಲು ಪ್ರಯತ್ನಗಳು ನಡೆಯುತ್ತಿವೆ. ಒಂದು ರಾಜ್ಯದಲ್ಲಿ ಈ ಆದರ್ಶದನ್ವಯ ಆಡಳಿತೆಯು ಕೆಲವಂಶಗಳು ವಿಕೇಂದ್ರಿತವಾಗಿ, ಗ್ರಾಮ ಪಂಚಾಯತುಗಳ ಅಧಿಕಾರಕ್ಕೆ ಬರುತ್ತವೆ. ಸಾಮಾನ್ಯ ಒಂದು ಸಾವಿರ ಜನಸಂಖ್ಯೆಯಿರುವ ಗ್ರಾಮಗಳಿಗೊಂದು ಪಂಚಾಯತು ಸ್ಥಾಪನೆಯಾಗಬೇಕು. ಸುತ್ತಮುತ್ತಲಿನ ಸಣ್ಣ ಸಣ್ಣ ಗ್ರಾಮಗಳೂ ತಮ್ಮ ನೆರೆಯ ಪಂಚಾಯತನೊಳಗೆ ಸೇರಿಕೊಳ್ಳುತ್ತವೆ. ಪ್ರತಿ ಮೂರು ವೈಲುಗಳ ದೂರದಲ್ಲಿ ಸಾಮಾನ್ಯವಾಗಿ ಪಂಚಾಯತುಗಳಿರುತ್ತವೆ. ೫ ವರ್ಷಕ್ಕೆ ಸಾವಿರದ ಸ್ತ್ರೀಪುರುಷರೆಲ್ಲರೂ ಗ್ರಾಮಸಭೆಯ ಸದಸ್ಯರಾಗಬಲ್ಲರು. ಉನ್ಮತ್ತರು, ನೈತಿಕ ಅಪರಾಧದಲ್ಲಿ ದಂಡಿತರು, ದಿವಾಳಿಯೆದ್ದವರು ಮತ್ತು ರಾಜಕೀಯ ಕರ್ಮಚಾರಿಗಳಿಗೆ ಈ ಅಧಿಕಾರವಿಲ್ಲ. ಗ್ರಾಮವು ತನ್ನ ಕಾರ್ಯಕಾರೀ ಸಮಿತಿಯನ್ನು ಆರಿಸುತ್ತದೆ. ಇದರಲ್ಲಿ ಜನಸಂಖ್ಯೆಗನುಸಾರವಾಗಿ ನಿಯಮಿತರಿರುತ್ತಾರೆ. ಇವರಲ್ಲಿ ಅಧ್ಯಕ್ಷ—ಉಪಾಧ್ಯಕ್ಷರೂ ಇರುತ್ತಾರೆ. ನಿಮ್ನ ವರ್ಗದ ಹಾಗೂ ಹಿಂದುಳಿದವರಿಗೂ ಇಲ್ಲಿ ಅವಕಾಶವನ್ನು ನೀಡಲಾಗುವುದು. ಹೀಗೆ ಆರಿಸಲಾದ ಅಧ್ಯಕ್ಷ ಉಪಾಧ್ಯಕ್ಷರು ಸರಿಯಾಗಿ ಕೆಲಸಮಾಡುವುದಿಲ್ಲವಾದರೆ ಆಥವಾ ಜನತೆಯೊಡನೆ ಅನುಚಿತ ವ್ಯವಹಾರಗಳನ್ನು ನಡೆಸಿದರೆ, ಅವರ ಮೇಲೆ ಅವಿಶ್ವಾಸ ಗೊತ್ತುವಳಿಯನ್ನೂ ಪಂಚಾಯ್ತಿನ ಸದಸ್ಯರು ತರಬಹುದು.

ನ್ಯಾಯತ್ತ ಶಾಸನ ಮತ್ತು ನಾಗರಿಕ ಸಂಗಠನೆಯೊಡನೆ ಪಂಚಾಯತಿನ ಸಂಬಂಧವಿದೆ. ಸಾರ್ವಜನಿಕ ಸೇವೆಯ ಮೂಲಕ ಜರ್ಜರಿತ ಹಾಗೂ ಜೀರ್ಣವಾಗಿ ಹೋದ ಗ್ರಾಮಗಳ ಪುನರ್ನಿರ್ಮಾಣವೇ ಇವುಗಳಗುರಿ. ಶಿಕ್ಷಣ, ಆರೋಗ್ಯ, ಶುಚಿತ್ವ ಮೊದಲಾದವೂ ನ್ಯಾಯತೀರ್ಮಾನವೂ ಪಂಚಾಯತುಗಳ ಅಧಿಕಾರಾಧೀನವಾಗಿ ಬರುತ್ತವೆ. ಆಂಗ್ಲೇಯರ ಅಧಿಕಾರದಲ್ಲಿ ನ್ಯಾಯ ವಿತರಣೆಯು ಬಹುಮೂಲ್ಯವಾಗಿತ್ತು. ಶ್ರೀಮಂತ ಜನರೆದುರಾಗಿ ನಿರ್ಧನ ಮನುಷ್ಯನು ನ್ಯಾಯ ಪಡೆಯುವುದು ಅಸಂಭವವಲ್ಲವಾದರೂ ದುಸ್ಸಾಧ್ಯವಾಗಿತ್ತು. ಉತ್ತರೋತ್ತರ ಅಸಿಲು ಮಾಡುವ ಒಂದು ಸೌಕರ್ಯದಿಂದ ಹಳ್ಳಿಗರು ಬೆವರು ಸುರಿಸಿ ಪಡೆದ ಬೆಲೆಯು ನೀರಾಗುತಿತ್ತು. ನ್ಯಾಯಾಲಯ ಕೇಟಿವಾಗಿ ಕಳ್ಳಿಗರ ಸರ್ವನಾಶವಾಗುತಿತ್ತು. ಕೇವಲ ಸಣ್ಣ ವಿಚಾರಗಳೂ ಈ ರೀತಿಯಿಂದ ವಿಕರಾಳ ರೂಪವನ್ನ ಪಡೆಯುತಿದ್ದವು. ಪಂಚಾಯತ ರಾಜ್ಯ ಪದ್ಧತಿಯಲ್ಲಿ ಇಂತಹ ವ್ಯಾಜ್ಯಗಳನ್ನು ಗ್ರಾಮ ಪಂಚಾಯತುಗಳೇ ತೀರ್ಮಾನಿಸುತ್ತವೆ. ನಾಲ್ಕೈದು ಗ್ರಾಮ ಸಭೆಗಳಿಗೊಂದು ಪಂಚಾಯತ ನ್ಯಾಯಾಲಯವಿದ್ದು ಇದರಲ್ಲಿ ಎಲ್ಲ ಸಭೆಗಳಿಂದಲೂ ಆಯ್ಕೆಪಟ್ಟ ಬಲ್ಲವರಿರುತ್ತಾರೆ ಇವರು ವಾದಿಪ್ರತಿವಾದಿಗಳದೂರು—ಪ್ರತಿದೂರುಗಳನ್ನು ತಿಳಿದು, ಸಾಕ್ಷ್ಯವಿಸಿ ನ್ಯಾಯ ತೀರ್ಮಾನವನ್ನು ಮಾಡುತ್ತಾರೆ. ಈ ರೀತಿಯಲ್ಲಿ ದೊರೆಯುವ ನ್ಯಾಯವು ಸುಲಭದಲ್ಲಿ ತೀಳ್ಪುದಲ್ಲಿ ಸಿಗುವ ಶುದ್ಧ ನ್ಯಾಯವಾಗಿದೆ.

ನಮ್ಮ ದೇಶದಲ್ಲಿ ಬಾಪೂಜಿಯವರ ಗ್ರಾಮ ರಾಜ್ಯದ ಕನಸು ಕಾರ್ಯರೂಪಕ್ಕೆ ಬರುತ್ತಿದೆ ಎನ್ನಾತ್ತ. ಅದಿನ್ನೂ ಎಲ್ಲೆಡೆಯಲ್ಲಿಯೂ ಕಾರ್ಯಾಚರಣೆಗೊಂಡಿಲ್ಲ. ಪಂಚಾಯತುಗಳಿಗೆ ಈ ರೀತಿಯಾದ ವಿಶೇಷ ಅಧಿಕಾರವನ್ನಿತ್ತರೆ, ಆಗ ನಮ್ಮ ರಾಮರಾಜ್ಯವು ಆಗಬಹುದು.

ಇಂದು ಅಧಿಕಾರವು ಜನಸಾಮಾನ್ಯರ ಕೈಗಳಿಗೆ ಬಂದಿವೆ. ತನ್ನ ಉನ್ನತಿ, ಸಮೃದ್ಧಿ, ಸುಖಗಳ ಹೊಣೆಯು ಆತನ ಮೇಲೆಯೇ ಇದೆ. ತನ್ನ ಕಠಿನತೆಗಳನ್ನು ದೂರ ಮಾಡಲು, ತನ್ನ ಪಥವನ್ನು ಪರಿಷ್ಕರಿಸಲು ಆತನು ಸಮರ್ಥನಾಗಿದ್ದಾನೆ. ಹೀಗಾತನೆಗೈದರೆ, ಸಮಾಜಕ್ಕೂ ಆತನಿಂದ ಸೇವೆಯು ಲಭಿಸುವುದು; ಸ್ವಾರ್ಥ ಮತ್ತು ಪರಮಾರ್ಥಗಳರಡೂ ಇದರಿಂದ ಪೂರೈಸಲ್ಪಡುವುವು. ರಾಮರಾಜ್ಯ ಸ್ಥಾಪನೆಗೆ ಪಂಚಾಯತುಗಳ ಪುನಾರಚನೆಯು ಮೊದಲಿನ ಪದವಿನ್ಯಾಸ.

ಪಂಚಾಯತ ರಾಜ್ಯದ ಮೂಲಕ ಕೊಡುವ ಅಧಿಕಾರಗಳನ್ನು ಜನತೆಯು ಸದುಪಯೋಗಿಸಿಕೊಂಡರೆ, ಗ್ರಾಮಸ್ಥರು ಪರಸ್ಪರ ಪ್ರೇಮಮಯ, ಜಾತೀಯತೆ, ಭೇದ ಭಾವಗಳಿಗೆ ತಿಲಾಂಜಲಿಯಿತ್ತರೆ, ಪರಸ್ಪರ ಸಹಕಾರದಿಂದ ತಮ್ಮ ಮಾತೃಭೂಮಿಯ ಸೇವೆಯನ್ನು ಮಾಡತೊಡಗಿದರೆ, ನಮ್ಮ ಗ್ರಾಮಗಳು ಅಲ್ಪಕಾಲಾವಧಿಯಲ್ಲಿಯೇ ಸ್ವರ್ಗತುಲ್ಯವಾಗಬಹುದು. ಆಗ, ದರಿದ್ರರೂ, ದೀನರೂ-ದಲಿತರೂ ಇರಲಾರರು. ಪಂಚಾಯತರಾಜ್ಯವು ನಮ್ಮ ದೇಶದ ಕಾಯುವನ್ನು ಪಲ್ಲಟಿಸಬಲ್ಲುದು. ನವ ಜೀವನ, ನವ ಸೃಷ್ಟಿ, ನವ ಉತ್ಸಾಹ, ನವ ಶಕ್ತಿಗಳು ಜನತೆಯಲ್ಲಿ ಸಂಚಾರವಾಗುವುವು. ನಮ್ಮ ಗ್ರಾಮಗಳು ದಿವ್ಯ ಪ್ರಭೆಯಿಂದ ಕಂಗಜಿಸುವುವು. ಆಗ ಮಾತ್ರ ನಮ್ಮ ದೇಶದಲ್ಲಿ ನಿಜವಾದ ಸ್ವರಾಜ್ಯ, ರಾಮರಾಜ್ಯ ಸ್ಥಾಪಿತವಾಗುವುದು. ಅಂದೇ ರಾಷ್ಟ್ರಪಿತರ ಸ್ವರ್ಗೀಯ ಆತ್ಮವು ಪರಮಾನಂದಿತವಾಗುವುದು.

ಆಗದೇ, ನಮ್ಮ ಗ್ರಾಮ ಪಂಚಾಯತುಗಳ ಪರಿಸ್ಥಿತಿಯು ಉತ್ತಮವಾಗಿದೆಯೆಂದು ಹೇಳುವಂತಿಲ್ಲ. ಪಂಚಾಯತುಗಳಿಗೆ ಈಗ ಇತ್ತಿರುವ ಅಧಿಕಾರವು ಒಹಳ ಮಿತಿಯುಳ್ಳದು. ಅಧಿಕಾರ ವಿಕೇಂದ್ರೀಕರ

ಪರಿಚಯ

ಮಹಾತ್ಮ ಗಾಂಧೀಜಿಯವರು ಜಗತ್ತಿಗೆ ಮಾರ್ಗದರ್ಶಿಗಳು

ಮಾನವತಾ ಪ್ರೇಮಿಗಳ ಹೃದಯದಲ್ಲಿ ಅವರು ಅಮರ ಸ್ಥಾನವನ್ನು ಪಡೆದಿರುವರು

ಭಾರತದ ಸ್ವಾತಂತ್ರ್ಯ ಚಳವಳಿಯ ನಾಯಕತ್ವವನ್ನು ಹಲವು ದಶಕಗಳವರೆಗೆ ಹೊತ್ತಿದ್ದ ಭಾರತಮಾತೆಯ ಶ್ರೇಷ್ಠ ಪುತ್ರರಲ್ಲೊಬ್ಬರಾದ ಮಹಾತ್ಮಾಗಾಂಧಿಯು ಇಂದು ಜನಿಸಿ ಎಂಬತ್ತೊಂಬತ್ತು ವರ್ಷಗಳು ದಾಟಿದುವು ಭಾರತೀಯರ ಜೀವನದ ಪ್ರಮುಖ ಚಾರಿತ್ರಿಕ ಸೈಲುಕಲ್ಲು ಇವರ ಹೆಸರಿನೊಡನೆ ಅಮರವಾಗಿಬಿಡಿದೆ.

ಸಮರ್ಥನಾಯಕನೂ ತತ್ವಶಾಸ್ತ್ರಜ್ಞರೂ ಆದ ಮಹಾತ್ಮಾ ಗಾಂಧಿಯವರು ಇಂದಿಂದ ಜಗತ್ತಿಗೆ ಚಿರಪರಿಚಿತರು. ಅವರೊಬ್ಬರು ಮಹಾ ಮಾನವತಾವಾದಿಗಳು ಅಮೂಲ್ಯ ತತ್ವಗಳಿಗಾಗಿಯೇ ತಮ್ಮ ಜೀವನವನ್ನು ವಿನಿಯೋಗಿಸಿದ ಹಿರಿಯ ವ್ಯಕ್ತಿ ಬ್ರಿಟಿಷ ಸಾಮ್ರಾಜ್ಯವಾದಕ್ಕೆ ವಿರುದ್ಧವಾಗಿ ಹೋರಾಡುವುದಕ್ಕೆ ಭಾರತೀಯ ಜನತೆಯನ್ನು ಸಂಘಟಿಸಿದ ಮಹಾಸಾಹಸ ಕರ್ತೃರು.

ದಕ್ಷಿಣ ಆಫ್ರಿಕದಲ್ಲಿ ಕಳೆದ ಶತಮಾನದಲ್ಲಿಂತ್ಯಭಾಗದಲ್ಲಿ ಭಾರತೀಯರ ಬಗ್ಗೆ ಎದ್ದಿದ್ದ ಸುಲತಾಯಿ ಧೋರಣೆಯನ್ನು ಧೈರ್ಯದಿಂದ ಎದುರಿಸಿ, ಸ್ವದೇಶಕ್ಕೆ ಹಿಂತಿರುಗಿದೊಡನೆಯೇ ಭಾರತದಲ್ಲಿಯೂ ಬ್ರಿಟಿಷವಿರೋಧೀ ಚಳವಳಿಯನ್ನು ಹೂಡಿದರು.

ಣವಸಿದ್ಧಾಂತವನ್ನೊಪ್ಪಿಸರಕಾರವು ಪಂಚಾಯತಗಳಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನೂ ಇತ್ತು ಅಧಿಕ ವ್ಯವಸ್ಥೆಯನ್ನೂ ಒದಗಿಸಬೇಕು. ಪಂಚಾಯತ ನ್ಯಾಯಾಲಯಗಳಿಗೂ ವಿಶೇಷ ಅಧಿಕಾರವನ್ನಿತ್ತು ಅಪೀಲುಮಾಡುವುದಕ್ಕೆ ವಿಶೇಷ ಅವಕಾಶವನ್ನು ಕೊಡುವಂತಾಗಬಾರದು. ಆಗ ಮಾತ್ರ ಪಂಚರಬಾಯಿಯಿಂದ ಪರಮೇಶ್ವರನು ಆಡುತ್ತಾನೆ ಎಂಬ ಮಾತು ಸತ್ಯವಾದೀತು.

ಆದುದರಿಂದ ರಾಮರಾಜ್ಯ, ಗ್ರಾಮರಾಜ್ಯ, ಸ್ವರಾಜ್ಯದ ಸ್ಥಾಪನೆಯ ಲೋಕದಲ್ಲಿ ವಿಹರಿಸುತ್ತಿರುವ ಸರಕಾರವು ಗ್ರಾಮೋದ್ಧಾರವನ್ನು ಮಾಡಲು ಶಕ್ತವಾಗುವಂತೆ ಗ್ರಾಮ ಪಂಚಾಯತುಗಳನ್ನು ಪುನರ್ಘಟನೆಯ ಸಾಹಸವನ್ನು ಮೊತ್ತಮೊದಲಾಗಿ ಕೈಗೊಳ್ಳಬೇಕೆಂದು ಸೂಚಿಸಿದರೆ ತಪ್ಪಾಗಲಾರದು.

ಗಾಂಧೀಜಿಯವರು ಭಾರತೀಯರಿಗೆ ಕೊಟ್ಟ ಕಿಕೆಯು ಭಾರತೀಯರು ಮಾತ್ರ ವಲ್ಲದೇ ಭಾರತಪರರಾದ ಇತರ ದೇಶೀಯರ ಹೃದಯಗಳಲ್ಲಿಯೂ ಸಾಕಷ್ಟು ಪರಿಣಾಮ ಮಾಡಿತು. ಇದರಿಂದಾಗಿ ಅವರು ೧೯೨೦ರಲ್ಲಿ ರಾಷ್ಟ್ರೀಯ ಮಹಾಸಭೆಯು ಕರೆಯಂತೆ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಮಹಾ ಚಳವಳವಾದ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ೧೯೨೦ರಲ್ಲಿ ಗಾಂಧೀಕರೆಯಂತೆ ಕಾಯದೆ ಭಂಗ ಚಳವಳವನ್ನು ಹೂಡಿದುದರಿಂದ, ಬ್ರಿಟಿಷ ಸಾಮ್ರಾಜ್ಯದ ಪಂಚಾಂಗವೇ ಗಡಗಡನೆ ಕಂಪಿಸತೊಡಗಿತು. ಹಾಗೆಯೇ ಮುಂದೆ ೧೯೪೨ರಲ್ಲಿ 'ಭಾರತದಿಂದ ತೊಲಗಿರಿ" ಎಂಬ ಅಮರ ಘೋಷಣೆಯು ಭಾರತದ ವಸಾಹತುವಾದದ ವಿರುದ್ಧವಾದ ಆಂದೋಲನಕ್ಕೆ ಪುಷ್ಟಿಯನ್ನು ಕೊಟ್ಟಿತು. ತನ್ನ ಆತ್ಮಕಥೆಯಲ್ಲಿ, ಗಾಂಧಿಯವರ ಶಿಷ್ಯಂತೆ ಖಂಡಿತ ಜವಾಹರಲಾಲ ನೆಹರೂರವರು ಮಹಾತ್ಮ ಗಾಂಧಿಯವರು ಸಮರ್ಥ ನಾಯಕರೆಂದೂ ಭಾರತೀಯರ ನರನಾಡಿಗಳಲ್ಲಿ ಸ್ವಾತಂತ್ರ್ಯದ ರಕ್ತವನ್ನು ಹರಿಸಿ ಅವರನ್ನು ಉತ್ತೇಜಿತರನ್ನಾಗಿಸಿದರೆಂದೂ, ಜೀವಳವನ್ನು ಬಲಪಡಿಸುವ ಅವಕಾಶಗಳನ್ನವರು ತಿಳಿದಿದ್ದರೆಂದೂ ಬರೆದಿದ್ದಾರೆ.

ಜನ್ಮ, ಜಾತಿ, ಮತ, ದೇಶಗಳ ಭೇದ ಭಾವಗಳನ್ನು ತೊರೆದು ಎಲ್ಲರಿಗೂ ಸಮಾನತೆಯ ಜೀವನನ್ನು ಗಾಂಧೀಜಿ ಉಣಿಸಿದರು. ಭಾರತದಲ್ಲಿ ನೂರಾರು ವರ್ಷಗಳಿಂದ ಬೇರು ಬಿಟ್ಟಿದ್ದ ಜಾತೀಯತೆಗೆ ವಿರುದ್ಧವಾಗಿ ಅವರು ಹೋರಾಡಿದರು. ಬ್ರಿಟಿಷ ಸತ್ತಾವಾದಿಗಳಿಗೆ ವಿರುದ್ಧವಾಗಿ ಹಿಂದೂ ಮುಸಲ್ಮಾನರ ನಡುವೆ ಸ್ನೇಹ ಸಮಾನತೆಯನ್ನಿಟ್ಟು ಗಾಂಧೀಜಿ ಹೋರಾಡಿದರು ಸಮಾಜದಲ್ಲಿ ಸ್ತ್ರೀಯರುಗಿರಿಗೆ ಸಮಾನ ಹಕ್ಕನ್ನು ಒದಗಿಸುವುದು; ಭಾರತೀಯರ ಅದ್ವಿತೀಯ ಸಾಂಸ್ಕೃತಿಕ ಪರಂಪರೆಯನ್ನು ಅಭ್ಯುನ್ನತಗೊಳಿಸುವುದು, ಭಾರತೀಯರ ಸಾಮರ್ಥ್ಯದ ಒಗ್ಗೆ ವಿಶ್ವಾಸ ಮತ್ತು ಸಹಾನುಭೂತಿ—ಗಾಂಧಿಯವರ ಈ ತತ್ವವನ್ನು ವಿಶ್ವದ ನಾಗರಿಕರೆಲ್ಲರೂ ಒಪ್ಪುತ್ತಾರೆ.

ಭಾರತವು ಜಗತ್ತಿನಲ್ಲಿಂದು ಪಡೆದಿರುವ ಜನನುನ್ನತಿಗೆ ಮಹಾತ್ಮಾಗಾಂಧಿಯವರ ವ್ಯಕ್ತಿತ್ವವೂ ಕಾರಣವಾಗಿದೆಯೆಂದು ಹೇಳಬಹುದು; ಭಾರತದ ಕೆಲವೇ ಸುಪುತ್ರರಲ್ಲಿ ಮಹಾತ್ಮಾಗಾಂಧಿಯವರು ಶ್ರೇಷ್ಠರೂ ಪ್ರತಿಭಾಕಾಲಿಗಳೂ ಅಮರರೂ ಆಗಿ ಕೀರ್ತಿಗಳಿಸಿದರು. ಈ ಕಾರಣದಿಂದಲೇ ಗಾಂಧೀಜಿಯವರು ಭಾರತೀಯರ ಅಷ್ಟಲ್ಲದೇ ಮಾನವತಾ ಪ್ರೇಮಿಗಳೆಲ್ಲರ ಹೃದಯಗಳಲ್ಲಿಯೂ ಒಂದು ಅತ್ಯಮೂಲ್ಯ ಸ್ಥಾನವನ್ನು ಪಡೆದು, ಜ್ಞಾತ ಜ್ವಲ್ಯಮಾನ ಜ್ಯೋತಿಯಾಗಿ ಬೆಳಗಿ ಅಂತಹರೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿರುವಂತಿದ್ದಾರೆ. "ಮಹಾತ್ಮಾ ಗಾಂಧಿ ಚಿರಾಯುವಾಗಲಿ" ಎಂಬ ಅಮರೋಕ್ತಿಯು ಇಂದು ಎಲ್ಲೆಲ್ಲಿಯೂ ಉಚ್ಚರಿಸಲ್ಪಟ್ಟು, ದಶದಿಶೆಗಳಲ್ಲಿಯೂ ಪ್ರತಿಧ್ವನಿಸುತ್ತಿದೆ.

ನಿಜವಾಗಿಯೂ ಬಾಪೂ ಗಾಂಧಿಯವರ ಜೀವನವು ಧನ್ಯ!

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜೀನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ಕಾವ್ಯ ಪ್ರಕಾಶ

ಪಥಿಕನ ಮನಸ್ಸು ಪರಿವರ್ತನೆಯಾಯಿತು

ಸಾಧುವಿನ ಸದುಪದೇಶದಿಂದ ದೇಶಸೇವೆಯ ದೃಢನಿಶ್ಚಯಮಾಡಿ ಬಹು ಪ್ರಯತ್ನಿಸಿ ವಿಫಲನಾದನು

ಸಂಸಾರದಲ್ಲಿ ಸಾರವಿಲ್ಲವೆಂದು ತಿಳಿದು ಮನೆಮಠಗಳನ್ನು ತೊರೆದು ಸನ್ಯಾಸ ದ್ರ ದಂಡಿಗೆ ಬಂದಾಗ, ಅಲ್ಲಿಯೂ ತನ್ನ ಗಾಗಿ ಕಾಶೈಸಿ ಬಂದಿದ್ದ ಮಡದಿಯನ್ನೂ ತಿರಸ್ಕರಿಸಿದ ಪಥಿಕನಿಗೆ ಸಾಧು.ವಿನ ಜನಜಗತ್ತುಗಳ ನಡುವೆಯೇ ಬಾಳ ಬೇಕೆಂಬ ಉಪದೇಶವು ದೊರೆತಾಗಲೆ, ಆ ಪನು ತಕ್ಷಣನನಾಗಿ ಹೋಗಿದ್ದನು. ಇದ ರಿಂದ ಅವನಿಗೆ ಸಾಧುವು ತನ್ನನ್ನಗಲಿ ಹೋದುದೂ ಗೋಚರಕ್ಕೆ ಬರಲಿಲ್ಲ. ಸಾಧುವಿನ ಸತ್ಯವಾಕ್ಯಗಳು ಆತನ ಮನಪಟಲದಲ್ಲಿ ಅಂಕುರಿತವಾದುವು; ಪಲ್ಲವಿತವಾದುವು; ಹಾಗೆಯೇ ಪುಷ್ಪಿತವಾಗಿ ತೊಡಗಿದುವು. ಅವನು ತಲೆಯೆತ್ತಿ ಒಂದು ಸಿಟ್ಟುಸರನ್ನು ಬಿಟ್ಟು ತನ್ನ ಮರವನ್ನು ತೊರೆದು ಸಜ್ಜೀವನನಾದನು. ಆಗಲೂ ಅವನು ನಿಂತುಕೊಂಡಿದ್ದ ದ್ದನು. ಅವನು ತನ್ನ ನಿಜದೇಶದ ಕಡೆಗೆ ತಲೆತಿರ್ಗಿಸಿ ಶ್ರದ್ಧಾಪೂರ್ವಕವಾಗಿ ಒಂದು ಬಾರಿ ನಮಸ್ಕರಿಸಿದನು ಮತ್ತು ಅದರ ಸೇವೆಗಾಗಿ ಜೀವನವನ್ನು ವಿನಿಯೋಗಿಸು ವ ದೃಢ ನಿರ್ಧಾರವನ್ನು ಮಾಡಿದನು.

ದೇಶದ ಸ್ಥಿತಿಗತಿಯನ್ನರಿಯುವ ನಲು ವಾಗಿ, ಆತನು ದೇಶದ ವಿವಿಧ ಭಾಗಗಳನ್ನು ಒಂದು ವರ್ಷದ ವರೆಗೆ ಸುತ್ತಾಡಿ ಕಳೆದನು. ದೇಶದ ಪ್ರಾಕೃತಿಕ ಸೌಂದರ್ಯವನ್ನು ಕಂಡು, ಅವನಿಗೆ ಇಂತಹ ಸುಂದರ ದೇಶದಲ್ಲಿ ವಾಸಿಸಿಕೊಂಡಿದ್ದೂ ಅದರ ನಿವಾಸಿಗಳು ಇಷ್ಟೊಂದು ಮಲಿನ ಮನಸ್ಕರಾಗಿ ಏಕೆ ಇದ್ದಾರೆಂದು ಆಶ್ಚರ್ಯವಾಯಿತು.

ಅವನು ಸಮಾಜವನ್ನು ಪ್ರವೇಶಿಸಿ, ಅದರ ಪರಿಸ್ಥಿತಿಯನ್ನು ಅಭ್ಯಸಿಸಿದನು. ಆ ವನ ಹೃದಯ ಕರುಣಾರ್ದ್ರವಾಯಿತು. ಅವನಿಗೆ ಮುಂಜಾವದಿಂದ ಸಂಜೆಯ ವರೆಗೆ ದುಡಿದರೂ ಹೊಟ್ಟೆ ತುಂಬ ಅನ್ನ ಸಿಗದೆ ತೊಳಲಾಡುವ, ನಿರಾಹಾರಿಗಳಾಗಿ ಬದುಕುವ ಕೋಟಿಗಟ್ಟಲೆಯ ಜನರ ಪರಿಚಯವಾಯಿ ತು. ಕೃಷಿಕರು ಅಗಾಧ ಪರಿಶ್ರಮದಿಂದ ಭೂಮಿಯಲ್ಲಿ ಚಿನ್ನೋತ್ಪತ್ತಿಯನ್ನೆ ಗೆಯ್ಯುತ್ತಿದ್ದರು; ಆದರೆ, ಅವರೇ ಕಾಳಿಗಾಗಿ ಒದ್ದಾಡುತ್ತಿದ್ದರು. ತಮ್ಮಿಂದ ತಮ್ಮ ಆಹಾರವನ್ನು ಯಾರು ಅಪಹರಿಸುತ್ತಾರೆಂದು ಅವರು ಹೆದರುತ್ತಿದ್ದರು. ಸಮಾಜದಲ್ಲಿ ಬಿರುಕು, ಅಜಂಕಾರ, ವಿಶ್ವಾಸಘಾತ ಮತ್ತು ಹಠವಾದಿತನಗಳು ನೆಲೆಯೂರಿದ್ದುವು. ಅನೀತಿ ಮತ್ತು ಅನಾಚಾರಗಳಿಗೆ ಜನರು ಅಂಜುತ್ತಿರಲಿಲ್ಲ. ಸತ್ಯ, ವಿಶ್ವಾಸ, ಪ್ರಜ್ಞತೆ, ನುತ್ತು ಪೌರುಷಾದಿ ಗುಣಗಳು ಒಂದೇ ಕಾಸಿಗೆ ಮಾರಲ್ಪಡುತ್ತಿದ್ದವು. ಸಮಾಜದ ಈ ದುರ್ದಶೆಗೆ ಮೂಲಕಾರಣ ಅದರ ಬಡತನವಾಗಿತ್ತು.

ಸಮಾಜದ ಇಂತಹ ದುಸ್ಥಿತಿಗೆ ರಾಜನೇ ಕಾರಣನೆಂದು ಪಥಿಕನು ಕಂಡುಕೊಂಡನು. ರಾಜನು ಪ್ರಜೋತ್ಪತ್ತಿಯನ್ನು ಬಯಸುತ್ತಿರಲಿಲ್ಲ. ಪ್ರಜೆಗಳು ಜಿಪಿತ್ರ ಹೀನರಾಗಿ ಬಾಳಿಬೇಕು; ಅವರ ಆತ್ಮಗಳು ಪಾಪಭರಿತವಾಗಬೇಕು. ಇದರಿಂದ ಅವರು ರಾಜನೆದುರು ಎಂದೂತಲೆಯೆತ್ತದಂತಾಗಬೇಕು; ರಾಜದಂಡಕ್ಕೆ ಸದಾ ಭಯಭೀತರಾಗುಳಿಯಬೇಕು ಎಂದು ರಾಜನು ಆಜ್ಞೆ ಪಿಸಿದ್ದನು. ರಾಜನು ರಾಜ್ಯಯಂತ್ರವು ಸುಗಮತೆಯಿಂದ ಸಾಗುವುದಕ್ಕೆ ತಕ್ಕಾ ಗುವಂತಹ ಶಿಕ್ಷಣಕ್ರಮವನ್ನೂ ಪ್ರವ ಹಾರಕ್ಕೆ ತಂದಿದ್ದನು. ರಾಜನು ಸಿರಂಕು ಶನಾಗಿದ್ದನು. ಅವನ ತನ್ನ ಸ್ವಾರ್ಥವ ನ್ನೇ ನೀತಿಯೆಂದೂ ತನ್ನ ಮನಸ್ಸನ್ನೇ ರಾಜಸಿಯಮವೆಂದೂ ತಿಳಿಯುತ್ತಿದ್ದನು.

ಇಂತಹ ಹೀನ ದುರಿದ್ರ ಪ್ರಜೆಗಳ ನಡುವೆಯೂ ದೇಶಪ್ರೇಮ ಭರಿತ ನೈಜಯಿಗಳಾದ ಸವಣಾಜಸೇವಾ ಕುಂದಿಲುವಾದ ಕೆಲವು ಪದ್ವಿಚಾರೀ ವ್ಯಕ್ತಿಗಳಿದ್ದರು. ಅವರು ದೇಶ ಮತ್ತು ಸಮಾಜಕ್ಕಾಗಿ ತಮ್ಮ ಪ್ರಾಣವನ್ನಾದರೂ ಪಣವಿಡುತ್ತಿದ್ದರು. ಅವರು ರಾಜನ ಭಯವನ್ನು ತೊರೆದು, ಪ್ರಜಾಜನ ಲ್ಲಿ ಸ್ಫೂರ್ತಿಯ ಸ್ಥೈರ್ಯ ಸಾಹಸ ಮತ್ತು ಸತ್ಯನಿಷ್ಠೆಯ ಭಾವನೆಗಳನ್ನು ಜಾಗೃತಗೊಳಿಸುವ ಪ್ರಯತ್ನ ವೆಸಗುತ್ತಿದ್ದರು. ಅವರು ದುಃಖನಿವೃತ್ತಿಗಾಗಿ ಕೆಲವೊಂದು ಉಪಾಯಗಳನ್ನೂ ಹೇಳುತ್ತಿದ್ದರು; ಅವನ್ನು ತಾವೂ ಅನುಸರಿಸುತ್ತಿದ್ದರು. ಆದರೆ, ನೂರು ವರ್ಷಗಳ ಭವಿಷ್ಯವನ್ನು ಒಂದು ದಿವಸದಲ್ಲಿ ಬೇಳ ಲಾಗುವುದೆ? ಇಂತಹವರಲ್ಲಿಯೂ ದೇಶ ಭಕ್ತಿಯನ್ನು ಜೀವನದ ಒಂದು ಸಾಧನ ವನ್ನಾಗಿ ಮಾಡಿಕೊಂಡವರೂ ಕೆಲವರಿ ರುತ್ತಿದ್ದರು. ಪ್ರಶಂಸೆಯ ನ್ನೇ ಬಯಸುತ್ತಿ ದ್ದವರೂ ಇದ್ದರು. ರಾಜದ್ವೇಷವನ್ನು ಕಟ್ಟಿ ಪ್ರಜೆಗಳ ಪಕ್ಷ ಸೇರಿದವರೂ, ರಾ ಜನನ್ನು ಹೆದರಿಸಿ, ತಮ್ಮ ಸ್ವಾರ್ಥವನ್ನು ಸಾಧಿಸುವುದಕ್ಕೆ ಪ್ರಜೆಗಳ ಬೆಂಗೋಲಾ ಗಿ ನಿಂತವರೂ ಕೆಲಸಲವರು ಇರುತ್ತಿದ್ದರು.

ದೇಶದ ಈ ಸ್ಥಿತಿಯನ್ನು ಕಂಡು ಪಥಿಕನು ದೇಶಸೇವೆಯಲ್ಲಿ ಕೃತನಿಶ್ಚಯನಾಗಿ ಅಪಾರಾನಂದದಿಂದ ತನ್ನಯ ನಾದನು. ದೀನಜನರ ಸ್ಮರಣೆಯು ಸದಾ ಅವನಿಗಿರುತ್ತಿತ್ತು. ತಾನೂ ದೀನ ರಂತೆಯೇ ಜೀವನ ತೊಡಗಿದ. ಆವನಿಗೆ ಯಾರ ಮೇಲೆಯೂ ತಿರಸ್ಕಾರ ಭಾವನೆ ಯುರಲಿಲ್ಲ; ದ್ವೇಷವೂ ಇರಲಿಲ್ಲ. ಅವನು ಪ್ರೇಮ ಮೂರ್ತಿ, ಆನಂದರೂಪ ಮತ್ತು ಕೃಪಾಮೂರ್ತಿಯ ಭೂಷಣ ಪ್ರಾಯನಾಗಿದ್ದನು.

ಅವನು ದೇಶದಲ್ಲಿ ಪುನಃ ಸಂಚರಿಸಿ, ಜನರ ಕಷ್ಟಗಳೆಲ್ಲವನ್ನೂ ತಿಳಿದು ಪಂಗ್ರಹಿಸಿದನು. ರಾಜ ಭಟರು ಪದೇ ಪದೇ ಆತನನ್ನು ಪಡ್ಯತ್ರದಲ್ಲಿ ಸಿಲುಕಿಸಿ ಕರ್ಮ ಜ್ಯೋತನನ್ನಾಗಿಸ ಬಯಸಿದರು; ಆದರೆ, ಆತನ ಆತ್ಮಬಲಾತ್ಸಾಹತ ಮಾರ್ಗದಲ್ಲಿ ಎಡತಾಗಿದ ಸರ್ವ ಕಂಟಕಗಳನ್ನೂ ಪಾರುಮಾಡಿತು.

ಪಥಿಕನ ಸಹನಶೀಲತೆ, ದೇಶಿತಾನ ರಾಗ ಗಳನ್ನು ಕಂಡು, ಅತ್ಯಾಚಾರ ಪೀಡಿತ ತ್ರಸ್ತರಾದ ಪ್ರಜಾಜನರ ಮನಸ್ಸಿನಲ್ಲಿ ಜ್ಞಾನೋದಯವಾಯಿತು. ಆವರಲ್ಲಿ ಬಲ ವತ್ತರ ಅಲೆಯು ಹುಟ್ಟಿತು ಅವರು ಪಥಿಕನಿಗೆ ಮನಸ್ಸನು, ಪ್ರಾಣ, ಧನಗಳನ್ನು ಅರ್ಪಿಸಿದರು. ಪಥಿಕನು ಪ್ರಜಾ ನಗರದ ಹೃದಯಕೇಂದ್ರವಾದನು. ಪರ ಮಾತ್ಮನೇ ತಮ್ಮ ಪೂರ್ವಜರ ಭಕ್ತಿ ಗೊಲಿದು ಪಥಿಕನನ್ನು ತಮ್ಮ ನಡುವೆ ಆಟ್ಟಿದ್ದಾನೆಂದು ಆವರು ತಿಳಿದುಕೊಂ ಡರು.

ಒಂದು ದಿನ ಪಥಿಕನು ರಾಜನ ಓಲಗ ಕ್ಕೆ ಹೋದನು. ರಾಜನೊಡನೆ ಪ್ರಜೆಗಳ ದುರ್ದಶೆಯನ್ನು ವರ್ಣಿಸಿ, ಸುವ್ಯವಸ್ಥೆ ಮತ್ತು ಶಾಂತಿಸ್ಥಾಪನೆ ಮಾಡಲು ಯಾ ಚಿಸಿದನು. ತನ್ನ ಆಡಳಿತೆಯು ಮೇಲೆ ಪಥಿಕನು ಮಾಡಿದ ಟೀಕೆ ಟಿಪ್ಪಣಿಗಳಿಂ ದ ರಾಜನಿಗೆ ಆತನ್ಮ ಕ್ರೋಧವು ಉದ್ಭವಿ ಸಿತು. ಎಂತಲೇ ರಾಜ ಸಭೆಯಿಂದ ಪಥಿ ಕನನ್ನು ಕಾತ್ರಿಗೆಗೆ ಕೈಹಾಕಿ ಹೊರಬಿಟ್ಟಿ ಸಿದನು.

ತನ್ನ ಪ್ರಯತ್ನಪಲ್ಲಿ ನಿಷ್ಫಲನಾದುದಕ್ಕೆ ಪಥಿಕನಿಗೆ ಬಹಳ ಚಿಂತೆಯಾಯಿತು. ಆದ ರೆ, ಅವನ ಹೃದಯ ವಿಚಲಿತಗೊಳ್ಳಲಿಲ್ಲ. ದೇಶಸೇವೆಗಾಗಿ ಅರ್ಪಿಸಿದವನು ಪ್ರಾ ಣವನ್ನಾದರೂ ನಿರಾಯಾಸವಾಗಿ ಮಾರ್ಗಭ್ರಷ್ಟನಾಗುವನೆ? ಅವನು ರಾಜ ನನ್ನು ಹಲವು ಬಾರಿ ಭೇಟಿಯಾಗಿ ತಾನು ಆಡಳಿತೆಯನ್ನು ಸುಧಾರಿಸುವುದಾಗಿ ಹೇ ಳಿದನು; ಆದರೆ, ಆತನ ಉಪದೇಶಗಳಿಗೆ ರಾಜನೆಂದೂ ಕಿವಿಗೊಡಲಿಲ್ಲ.

ಪ್ರಜೆಗಳ ಕಷ್ಟ ನಿವಾರಣೆಗಾಗಿ ಅವನು ಅಂತಿಮ ಪ್ರಯತ್ನ ಸನ್ನಿವೇಶವನ್ನಿಟ್ಟನು. ಅವನು ಮುಂಜಾನೆ ನಗರ-ನಗರ, ಗ್ರಾಮ-ಗ್ರಾಮ, ಗೃಹ ಗೃಹಗಳನ್ನು ತಿರುಗಿ, ಕೆಲವೇ ನಿಮಿಷದಲ್ಲಿ ಪ್ರತಿ ವ್ಯಕ್ತಿಯ ಹೃದಯದಲ್ಲಿ ಪ್ರಜೆಗಳು ರಾಜನ ವಿಲ್ಲಿ ಸಂಬಂಧವನ್ನೂ ಕಡಿದುಬಿಡಬೇಕೆಂಬ ಭಾವನೆಯನ್ನು ತುಂಬಿಸಿದನು. ಪ್ರಜೆಗಳ ಸಹಾಯದಿಂದಲೇ ರಾಜನು ಆನಂತರ ಮೇಲೆ ಅತ್ಯಾಚಾರಗಳನ್ನು ನಡೆಸುತ್ತಾನೆ; ಪ್ರಜೆಗಳು ರಾಜನ ಕೈಬಿಟ್ಟರೆ, ಏಕಾಕಿ ರಾಜನೇನು ಮಾಡಬಲ್ಲ? ಅನ್ಯಾಯ, ಅಧರ್ಮ ಮತ್ತು ಅತ್ಯಾಚಾರಗಳೊಂದಿಗೆ ಸೇರಿಕೊಳ್ಳುವು ದು ಪಾಪ. ಪ್ರಜೆಗಳು ಈ ಪಾಪದಿಂದ ನಿವೃತ್ತರಾದವರಿಗೆ ಅವರ ಕಷ್ಟಗಳು ದೂರವಿಯಾಗುವವು. ಎಂಬ ಸತ್ಯ ಸಂ ತಿಯನ್ನು ಜಾಗೃತಗೊಳಿಸಿದನು ರಾಜನಿಗೆದು ರಂಗಿ ಜನತಾ ಹೃದಯಗಳಲ್ಲಿ ವಿದ್ರೋಹ ಭಾವನೆಯು ಬೂದಿಯೊಳಗಿನ ಕೆಂಡದಂತೆ ಒಳಗೊಳಗೇನೇ ಉರಿಯುತ್ತೊಡಗಿತು. (ಕೃಮಶಃ)

(ಸಾಧಾರ)

—ಗೋರಾ, ಉಡುಪಿ.

ಕಥಾ ವಿಹಾರ

(ನಿನ್ನೆ ಪುಟದಿಂದ)

ದಲ್ಲಿ—'ಭೀಮಣ್ಣರಿಗೆ ಪ್ರೀತಿಯ ಮದುನೆಯ ಉಡುಗೆರೆ' ಎಂದು ಮಾತ್ರ ಬರೆದಿತ್ತ. ಕೆಳಬದಿಯಲ್ಲಿ ಆಕೆಯ ಸಹಿ ಕೂಡಾ ಯಿತ್ತು.

"ಮರುದಿನ ದಾಯಿಲ್ಲಿ ಆಕೆ ಹೋಗುವಾಗ ಹಿಂದೆ ಕರೆದೆನು. ಆಕೆ ಬಂದಳು. ಬಂದಾಗ ನಾನು ಮಾಡಿದ ಅಣಕವ ವಿವರಣೆಯನ್ನಿತ್ತೆನು. ಆಕೆಗೆ ಸಿಟ್ಟು ಬಂದಿರಬೇಕು. ಆಕೆ ಹುಬ್ಬುಗಂಟ್ಟಿಕ್ಕಿಕೊಂಡೇ ನಡೆದಳು. ಮುಂದಿನ ಆಕೆಯು ರಸ್ತೆಯಲ್ಲಿ ತಿರುಗುತ್ತಿರುವಾಗ ಆಕೆಯ ಚಿತ್ರ (ಫೋಟೊ) ತೆಗೆದೆನು. ರಸ್ತೆಯಿಂದ ತಿರುಗುವಾಗ ನಗುಬೀರುವ ಪದ್ಮಕಿಯಾಕೆಯು ಪ್ಲಿದ್ದರೂ, ಚುಮ ಮಾತ್ರ ಆಕೆಯು ಮುಖ ಉಬ್ಬಿಕೊಂಡೇ ಇತ್ತು. ಕೆವರಿನ ಕೂದಲು, ಎತ್ತಿದ ಕಾಲು ಹಾಗೆಯೇ ಇತ್ತು. ಮುಂದಿನ ಈ ಪ್ರಪಂಚನನ್ನು 5 ರೂಪಾಯಿ ನೋಟನ್ನ ನಾನೊಂದೆ. ಕವರಿನೊಳಗೆ ಪಾಕಿ ಆಕೆಯ ಹೆಸರು ಬರೆದು ಆಕೆಗೆ ಕೊಟ್ಟೆನು. ಆಕೆ ಅವನ್ನು ತೆಗೆದುಕೊಂಡು ಜೋಡನಂತರ ನನ್ನನ್ನು ನೋಡು ಸ್ಮಿತ ನಗುತ್ತಿದ್ದಳು. ನನ್ನ ಮೇಲೆ ಆಕೆಗೆ ಪ್ರೇಮವಿಸ್ಫೋಟವಾಯಿತೆಂಬುದನ್ನು ಪರೀಕ್ಷಿಸುವುದಕ್ಕಾಗಿಯೆ ನಾನೀ ಅಣಕ ಆಟವನ್ನಾಡಿದ್ದೆನು. ಕೊನೆಯ ಆಕೆಯು ನಗುವಿನಿಂದ ಆಕೆಗೆ ನನ್ನ ಮೇಲೆ ದೃಢಾಭಿಪ್ರಾಯವಿದೆಯೆಂದು ನಂಬಲಡ್ಡಿಯಿಲ್ಲವೆ?"

ಂ ಂ ಂ

ಈ ಮೂವರು ಆಕರ್ಷಿಸಿದ ಹುಡುಗಿ ಒಬ್ಬಳೆ. ನಮ್ಮ ನೆರವನೆಯ ಮೋಹಿನಿ. ಆಕೆ ರೂಪವತಿ ಹೌದು. ಗುಣವತಿಯೂ ಹೌದು. ಇವರಿಗನುಕೂಲವಾದ ಗುಣ ನಡತೆಗಳನ್ನು ಆಕೆಯಲ್ಲಿ ಕಾಣಬಹುದು. ತಾವು ಯೋಚಿಸಿದ ಹುಡುಗಿ ಒಂದೇ ಎಂಬ ಅಭಿಪ್ರಾಯ ಯಾರಿಗೂ ಅವರಲ್ಲಿರಲಿಲ್ಲ. ಮೂವರು ಜೀವನ ಗೆಳೆಯರಾದುದರಿಂದಲೇ ಈ ವಿಚಾರವನ್ನು ಅವರು ನನ್ನಲ್ಲಿ ಕೇಳಿದ್ದರು. ನುಂದೆ ಆಕೆಯ ವಿವಾಹ ಆಕೆಯ ಪ್ರಬಲೇಚ್ಛೆಯ ಮೇರೆಗೆ ಊರಿನ ಆಢ್ಯ ಮನೆತನೀಯರೊಂದಿಗೆ ನಡೆಯಿತೆ ಹೊರತು ಇವರೊಂದಿಗೆ ನಡೆಯಲಿಲ್ಲ. ಇವರು ಮೂವರೂ ಬಹು ನಿರಾಶರಾಗುವುದು ಸ್ವಾಭಾವಿಕವಷ್ಟೆ!

ಇಂದು ಆಕೆಯನ್ನು ಕಂಡಾಗಲು ನನಗೆ ಆಕೆ ಭಗ್ನಾಶರ ಮೋಹಿನಿಯೆ? ಎಂಬ ಸಂಶೋಹ ಬರುತ್ತಿದೆ.

—ಕೆ. ವಾಸುದೇವರಾಯ ಐತಾಳ್, ಉಡುಪಿ.



ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗ

ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40

ಸ್ಥಾನೀಯರು: ಖಾ ಕಂಪೆನಿ, ಮಂಗಳೂರು—1.

NAVAYUGA
REGD. NO. M. 3618

UDIPI, THURSDAY
2—10—1958

LICENSE NO. 31
Licensed to Post without Prepayment

ಖನಿಜ ಖನನ

ನೂತನ ಕಾರಖಾನೆಗಳು ಗಣನೀಯ ಪ್ರಗತಿಪಥ ಭ್ರಮಣ ಮಾಡುತ್ತಿವೆ

ಭೂಗರ್ಭ ಖನಿಜ ಶೋಧನೆಯಲ್ಲಿ ಪರಿಣತರು ಪರಿಣತ ಕರ್ತವ್ಯರಾಗಬೇಕು

ಕೇಂದ್ರ ಉಕ್ಕು, ಗಣಿ ಮತ್ತು ಉರುವಲ ಶಾಖೆಗಳ ಮಂತ್ರಿ ಸರದಾರ ಸ್ವರ್ಣ ಸಿಂಗರು ಕಲಕತ್ತೆಯಲ್ಲಿ ನೇರದ ಭೂಗರ್ಭ ವಿಜ್ಞಾನ, ಗಣಿ ಮತ್ತು ಭಾರತೀಯ ಧಾತುಗಳ ಸೊಸಾಯಿಟಿಯು ಇಳನೆಯ ವಾರ್ಷಿಕ ಅಧಿವೇಶನದಲ್ಲಿ ಭಾಷಣ ಮಾಡುತ್ತ ರೂರ್ಕೇಲಾ, ಭಿಲೈ ಮತ್ತು ದುರ್ಗಾಪುರಗಳಲ್ಲಿ ಸ್ಥಾಪಿತವಾಗುವ ಭಾರತದ ಮೂರು ಉಕ್ಕಿನ ಕಾರಖಾನೆಗಳು, ತಾತಾ ಉಕ್ಕಿನ ಕಂಪೆನಿಯು ವಿಸ್ತರಣೆಯ ಕಾರ್ಯಕ್ರಮ ಮತ್ತು ಇಂಡಿಯನ್ ಆಯರ್ನ್ ಮತ್ತು ಸ್ಟೀಲ್ ಕಂಪೆನಿಗಳಲ್ಲಿ ತೀವ್ರ ಪ್ರಗತಿಯಾಗುತ್ತಿದೆ ಹಾಗೂ ನಿರ್ದೇಶಿತ ಗುರಿಯನ್ನು ತಲಪಲು ಸನ್ನಿಹಿತವಾಗಿವೆ ಎಂದು ಘೋಷಿಸಿದರು.

ರೂರ್ಕೇಲಾದಲ್ಲಿ ಪ್ರಥಮ ಕೋಕ್ ಭಟ್ಟಿಯ ಕಾರ್ಯವು ಪ್ರಾರಂಭವಾಗಿದ್ದು ಕೆಲವೇ ವಾರಗಳಲ್ಲಿ ಉತ್ಪಾದನೆ ವ್ಯಾಪಕವಾಗುವುದು. ಭಿಲೈಯಲ್ಲಿಯೂ ಕೊಂಚ ಸಮಯದಲ್ಲಿಯೇ ಕೋಕ್ ಭಟ್ಟಿಯು ಸ್ಥಾಪಿತವಾಗುವುದು.

ಖನಿಜ ಎಣ್ಣೆಗಳ ಬಗ್ಗೆ ಅವರು ಹೀಗೆ ವಿವರಿಸಿದರು ಭಾರತವು ಪ್ರತಿವರ್ಷ ಸುಮಾರು ೬೦ ಲಕ್ಷ ಟನ್ ಪೆಟ್ರೋಲನ್ನು ಉಪಯೋಗಿಸುತ್ತದೆ. ಈ ಪ್ರಮಾಣವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದರಿಂದಾಗಿ ಆಸ್ಸಾಮಿನಲ್ಲಿ ಅಧಿಕ ಕಲ್ಲೆಣ್ಣೆ ಪಡೆಯುವ ವ್ಯವಸ್ಥೆಯನ್ನು ಮಾಡಲಾಗಿದೆ. ಗೌಹಾತಿ ಮತ್ತು ಬರಾಸಿಗಳಲ್ಲಿ ಹೊಸ ಎಣ್ಣೆ ಶುದ್ಧಿ ಮಾಡುವ ಕಾರಖಾನೆಗಳನ್ನು ಪ್ರಾರಂಭಿಸಲಾಗುವುದು. ಈ ತೈಲ ಶುದ್ಧೀಕರಣ ಕಾರಖಾನೆಗಳಿಗಾಗಿ ಹೆಚ್ಚು ಎಣ್ಣೆಯನ್ನು ದಗಿಸುವುದು ಅನಿವಾರ್ಯವಾಗಿದ್ದು ಒಟ್ಟಾಗಿ ದೇಶದ ಬೇರೆ ಬೇರೆ ಡೆಗಳಲ್ಲಿ ಎಣ್ಣೆಯ ಶೋಧನೆಯ ಕಾರ್ಯವನ್ನೂ ಕೈಗೊಳ್ಳಲಾಗುತ್ತಿದೆ. ಗಂಗೆಯ ದಡದಲ್ಲಿ ಸ್ಪೇಡರ್ಡ್ ವಾಕಮ್ ಕಂಪೆನಿಯು ಇದುವರೆಗೆ ನಾಲ್ಕು ಸ್ಥಳಗಳಲ್ಲಿ ಎಣ್ಣೆಗಾಗಿ ಅಗೆತಕ್ಕೆ ಮೊದಲು ಮಾಡಿದೆ; ಆದರೆ, ನಮ್ಮ ದೌರ್ಭಾಗ್ಯದಿಂದ ಕೇವಲ ಒಂದೆಡೆಯಲ್ಲಿಯೂ ಕಲ್ಲೆಣ್ಣೆಯು ದೊರೆಯುವ ಸಂಭವವಿಲ್ಲ.

ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ೧೦ ಕೋಟಿ ಟನ್ ಅಥವಾ ಹೆಚ್ಚು ಇದ್ದಲನ್ನು ಪ್ರತಿವರ್ಷ ದೊರಕಿಸುವ ಉದ್ದೇಶವಿದೆ. ಇದು ಅಸ್ಸಾಮಿನಲ್ಲಿ ಸುಲಭ ಕಾರ್ಯವಲ್ಲವಾದರೂ ಇದನ್ನು ಸಾಧಿಸುವ ಪ್ರಯತ್ನವನ್ನು ನಡೆಸಲಾಗುವುದು. ಇದ್ದಲಿನ ಉತ್ಪಾದನೆಯಲ್ಲಿ ಉತ್ತಮಸ್ತರದ ಉತ್ಪಾದನೆಯೇ ಅವಶ್ಯಗವನೀಯವಾಗಿದೆ. ಇದರಿಂದ ವ್ಯರ್ಥ ಅವಶ್ಯಯವೂ ಉತ್ಪಾದನಾ ಪ್ರಕ್ರಿಯೆಯಲ್ಲಿ ಹ್ರಾಸವೂ ಆಗಲಾರದಂತಾಗುವುದು.

ಕೊಸ ಉಕ್ಕಿನ ಕಾರಖಾನೆಗಳಿಗೆ ಆವಶ್ಯಕವಾದ ಕಬ್ಬಿಣವನ್ನೊದಗಿಸುವ ಪಾತ್ರವು ಮಹತ್ವಪೂರ್ಣವಾಗಿದೆ. ಭಾರತವು ವ್ಯಾಪಕ ವಿಧಾನದಲ್ಲಿ ಕಬ್ಬಿಣವನ್ನು ಸಿದ್ಧಪಡಿಸುತ್ತಿದೆಯಲ್ಲದೇ ಕಚ್ಚಾ ಕಬ್ಬಿಣವನ್ನು ನಿರ್ಯಾತಮಾಡಲೂ ಪ್ರಯತ್ನಿಸುತ್ತಿದೆ. ಭಾರತದ ಕೆಲವು ಗಣಿಗಳಲ್ಲಿರುವ ಕಬ್ಬಿಣದ ಅದುರುಗಳು ಸಂಪನ್ನವೂ ಸರ್ವೋತ್ಕೃಷ್ಟವೂ ಆಗಿವೆ.

ಲಿಗ್ನಾಯಿಟ್‌ನ ಉತ್ಪಾದನಾ ಕಾರ್ಯವನ್ನು ಭಾರತವು ಈಗಾಗಲೇ ಪ್ರಾರಂಭಿಸಿದೆ. ನಮಗಿದೊಂದು ಹೊಸ ಕೆಲಸ. ಮುಂದಾಸಿನ ನೆವೇಲಿಯಲ್ಲಿ ಪ್ರತಿ ವರ್ಷ ಕೆಲವು ಲಕ್ಷ ಟನ್ನು ಲಿಗ್ನಾಯಿಟನ್ನು ಸಿದ್ಧಗೊಳಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಲಿಗ್ನಾಯಿಟ್‌ನ ಉತ್ಪಾದನೆಯ ಆಧಾರದ ಮೇಲೆಯೇ ಸಿಂಧ್ರಿಯಲ್ಲಿಂದು ಥರ್ಮಲ್ ಪವರ್‌ಸ್ಟೇಶನ್ ಮತ್ತು ಉರ್ವರಕ ಫೇಕ್ಟರಿಗಳನ್ನು ಸ್ಥಾಪಿಸಲಾಗುತ್ತಿದೆ.

ದೇಶದಲ್ಲಿರುವ ಪೈಜ್ಞಾನಿಕರು ಮತ್ತು ತಾಂತ್ರಿಕಜ್ಞರು ಭೂಮಿಯಲ್ಲಿ ಅಡಗಿ ಕೊಂಡಿರುವ ಖಜಾನೆಯನ್ನು ಶೋಧಿಸುವಲ್ಲಿ ನಿರಂತರ ಕಾರ್ಯಮಗ್ನರಾಗುತ್ತಿರಬೇಕು ಎಂದು ಕರೆ ನೀಡಿದರು.



ತಾಸಿಗೆ ೨,೪೦೦ ಇಂಪೀರಿಯಲ್ ಗೆಲನ್‌ಗಳಷ್ಟು ಸದೀಜಲವನ್ನು ಶುದ್ಧೀಕರಿಸುವ ಒಂದು ಯಂತ್ರ. ಇವನ್ನು ತಯಾರಿಸಿದವರು ಇಂಗ್ಲೆಂಡಿನ ಮಾರ್ಸ್‌ನ್ ಎಕ್ಸ್‌ಸೆಲ್‌ಸರ್ ಕಂಪೆನಿಯವರು.

ನ್ಯಾಯವಾದ

(ನಿನ್ನೆ ಮುಟಿಂದ)

ಇವುಗಳ ಅಧಿಕಾರವನ್ನು ಉಚ್ಚ ನ್ಯಾಯಾಲಯಗಳಿಗೆ ಬಿಟ್ಟುಕೊಡಬೇಕು. ಸರಕಾರಕ್ಕೆ ಈ ಸಂಬಂಧದಲ್ಲಿ ಯಾವುದೇ ಕೆಲಸವಿರಬಾರದು. ಇವು ಕಾರ್ಯಗತವಾದ ಪಕ್ಷದಲ್ಲಿ ಮಾತ್ರ ನಾವು ಸ್ವತಂತ್ರ ನ್ಯಾಯೋಗವನ್ನು ರೂಪಿಸಿಕೊಂಡಿದ್ದೇವೆ ಎಂದು ಹೇಳಬಹುದಲ್ಲದೆ, ಅದಕ್ಕಿಂತ ಮೊದಲು ಆಡಿಕೊಂಡರೆ, ಅದು ಒಣ ಡಂಬಾಚಾರವಾಗಬಹುದು.

(ಅಮೆರಿಕೆಯಲ್ಲಿ ಭಾರತೀಯ ರಾಯಭಾರಿಗಳಾಗಿ ಹೋಗಲಿರುವ ನ್ಯಾಯಮೂರ್ತಿ ಎಂ. ಸಿ. ಚಿಗಲಾರವರು ಬೊಂಬಾಯಿಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದ ಸಾರ.)

ಕು ಅನುಸಂಧಾನ ಕಾರ್ಯದ ಮೂಲಕ ಎಂದಿಗೂ ನಾವು ನಮ್ಮ ದೇಶದ ಸಂಪತ್ತನ್ನು ಸರ್ವೋತ್ಕೃಷ್ಟ ವಿಧಾನದಲ್ಲಿ ಉಪಯೋಗಿಸಲು ಸಮರ್ಥರಾಗಿ ವೆ.

ಪ್ರಾಥಮಿಕ ಶಿಕ್ಷಣ

ಮೂರನೆಯ ಯೋಜನೆಯಲ್ಲಿ ಉಚಿತ ಅನಿವಾರ್ಯ ಶಿಕ್ಷಣ

ಮೂರೂವರೆ ಕೋಟಿ ಮಕ್ಕಳಿಗೆ ಮೂರೂವರೆ ಲಕ್ಷ ಶಾಲೆಗಳು

ತೃತೀಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಭಾರತದಲ್ಲಿ ೬-೧೧ ವರ್ಷಗಳ ವಯೋವರ್ಗದ ಮಕ್ಕಳೆಲ್ಲಾ ಉಚಿತ ಹಾಗೂ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳನ್ನೊದಗಿಸಲು ಸಾಧ್ಯವಾಗುವುದೆಂದು ನಿರೀಕ್ಷಿಸಲಾಗಿದೆ.

ದ್ವಿತೀಯ ಯೋಜನೆಯನ್ನು ರೂಪಿಸಿದಾಗ, ೬-೧೧ ವರ್ಷಗಳ ವಯೋವರ್ಗದ ಸುಮಾರು ೭೭ ಲಕ್ಷ (ದ್ವಿತೀಯ ಯೋಜನೆಯ ಅಂತ್ಯದ ವೇಳೆಗೆ) ಹೆಚ್ಚು ವಿದ್ಯಾರ್ಥಿಗಳಿಗೆ ಶಾಲಾ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ನಿರೀಕ್ಷಿಸಲಾಗಿತ್ತು. ದ್ವಿತೀಯ ಯೋಜನೆಯು ಮೂರನೆ ವರ್ಷದ ಅಂತ್ಯದ ವೇಳೆಗೆ ಈ ವಯೋವರ್ಗದ ಸುಮಾರು ೬೦ ಲಕ್ಷ ಹೆಚ್ಚು ವಿದ್ಯಾರ್ಥಿಗಳಿಗೆ ಶಾಲಾ ಸೌಲಭ್ಯಗಳನ್ನು ಒದಗಿಸಲಾಗುವುದು ಭಾರತದಲ್ಲಿ ೧೯೫೦-೫೧ರಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ (೬-೧೧ ವಯೋವರ್ಗದ) ಸಂಖ್ಯೆ ೧೮೬ ಲಂ,೦೦೦ ಇದ್ದದ್ದು, ೫೫-೫೬ರಲ್ಲಿ ೨,೪೯,೧೨,೦೦೦ಕ್ಕೆ ಏರಿತು; ೬೦-೬೧ರ ವೇಳೆಗೆ ಆ ಸಂಖ್ಯೆ ೩,೫೪,೪೦,೦೦೦ರ ವರೆಗೆ ಏರುವ ನಿರೀಕ್ಷೆಯಿದೆ.

ಭಾರತದಲ್ಲಿ ೧೯೫೦-೫೧ರಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ೨,೧೦,೬೭೧ ಇದ್ದುದು ೧೯೫೫-೫೬ರಲ್ಲಿ ೨,೭೪,೫೦೯ಕ್ಕೆ ಏರಿತು; ಆ ಸಂಖ್ಯೆ ೬೦-೬೧ರ ವೇಳೆಗೆ ೩,೭೬,೦೦೦ಕ್ಕೂ ಹೆಚ್ಚಾಗುವ ನಿರೀಕ್ಷೆಯಿದೆ. ಕಿರಿಯ ಮೂಲಶಿಕ್ಷಣ ಶಾಲೆಗಳ ಸಂಖ್ಯೆ ೧೯೫೦-೫೧ರಲ್ಲಿ ೧೫೪೦೦ ಇದ್ದುದು, ೫೫-೫೬ರಲ್ಲಿ ೮,೩೬,೦೦೦ಕ್ಕೆ ಏರಿದೆ. ಈ ಸಂಖ್ಯೆ ೬೦-೬೧ರ ವೇಳೆಗೆ ೩೩ ೦೦೦ ಕ್ಕೆ ಏರುವ ನಿರೀಕ್ಷೆಯಿದೆ.

ದ್ವಿತೀಯಯೋಜನೆಯಲ್ಲಿ ೨,೩೪,೦೦೦ ಪ್ರಾಥಮಿಕ ಶಾಲಾ ಶಿಕ್ಷಕರ ಗುರಿಯಿದೆ. ದ್ವಿತೀಯ ಯೋಜನೆಯ ಪ್ರಥಮ ಮೂರು ವರ್ಷಗಳಲ್ಲಿ ಶಿಕ್ಷಕರ ಸಂಖ್ಯೆಯಲ್ಲಿ ಸುಮಾರು ೫೦,೦೦೦ ಏರಿಕೆಯಾಗಿದೆ.

ಹೆಚ್ಚುತ್ತಿರುವ ಶಿಕ್ಷಣದ ಬೇಡಿಕೆಗಳನ್ನು ಪೂರೈಸಲು ಹಾಗೂ ಅವಿದ್ಯಾವಂತ ನಿರುದ್ಯೋಗಿಗಳಿಗೆ ಹೆಚ್ಚಿನ ಪರಿಹಾರವನ್ನೊದಗಿಸಲು, ೬೦,೦೦೦ ರಿಂದ ಹೆಚ್ಚು ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳುವ ಹೊಸ ಕಾರ್ಯಯೋಜನೆಯೊಂದನ್ನು ೧೯೫೮-೫೯ರಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ. ಇದರಲ್ಲಿ ೧೫ ಸಾವಿರ ಮಂದಿಯನ್ನು ೫೮-೫೯ರಲ್ಲೂ, ೨೦ ಸಾವಿರ ಮಂದಿಯನ್ನು ೫೯-೬೦ರಲ್ಲಿ, ೧೫ ಸಾವಿರ ಮಂದಿಯನ್ನು ೬೦-೬೧ರಲ್ಲೂ ನೇಮಿಸಿಕೊಳ್ಳಲಾಗುವುದು.

ವಿಶಾಲ ಮೈಸೂರು ರಾಜ್ಯದಲ್ಲಿ ವಿಸ್ತೃತ ಸೇವೆಗಾಗಿ

ನಮ್ಮ ಶೇಷಾದ್ರಿಪುರಂ ಶಾಖೆಯು

ಸೆಪ್ಟಂಬರ್ ೧೫ರಂದು ತೆರೆಯಲ್ಪಟ್ಟಿರುವುದು.

ಇನ್ನೂ ಎರಡು ಶಾಖೆಗಳು ಸದ್ಯದಲ್ಲಿಯೇ ತೆರೆಯಲ್ಪಡುವುವು.

ಕೊಪ್ಪ ಮತ್ತು ಗಂಗಾವತಿ

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

THE CANARA INDUSTRIAL & BANKING SYNDICATE LTD., UDIPI

ವಿಶಾಲ ಪ್ರಜಾಕ್ಷೇತ್ರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

Edited Printed & Published by K H. Shetty, at the Navayuga press Udipi S. India

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನಯೆ ಪೈಸೆ

ವರುಷ ೩೮ ವಾರ ೬. 9-10-1958 Vol 38 No. 6.

ಗೌರವ ಪ್ರಾಪ್ತಿ

ವಿಶ್ವವಿಜೇತ ಮಹಾತ್ಮರು ದೃಢ ಪ್ರತಿಜ್ಞರಾಗಿದ್ದರು!

ಅವರು ಹೃದಯ ದೌರ್ಬಲ್ಯವನ್ನು ದೂರೀಕರಿಸಿ ಆತ್ಮವಿಶ್ವಾಸವನ್ನು ಪಡೆದುದರಿಂದಲೇ ಗೌರವಾರ್ಹ ವಿಶ್ವಪ್ರೇಮಿಯಾಗುಳಿದಿದ್ದಾರೆ

ಗೌತಮ ಬುದ್ಧರು ಜನಿಸಿದಾಗ, ಜವಿಷ್ಯದರ್ಶಿಗಳು ರಾಜಮಹಲಾಸದಲ್ಲಿ ಆಸಕ್ತನಾದರೆ, ರಾಜಮಹತ್ವನು ಶಕ್ತಿಶಾಲೀ ಸಾಮ್ರಾಟನಾಗುವನೆಂದೂ ಇಲ್ಲವಾದರೆ, ಸನ್ಯಾಸಿಯಾಗಿ ಮಾನವ ಜಾತಿಗೆ ಮೋಕ್ಷವನ್ನು ತಂದೊಪ್ಪಿಸುವನೆಂದೂ ನುಡಿದಿದ್ದರಂತೆ ಮಹಾತ್ಮಾಗಾಂಧಿಯವರ ಸಂಬಂಧದಲ್ಲಿ ಇಂತಹ ಭವಿಷ್ಯವನ್ನು ಹೇಳಿದ್ದಾರೆಯೇ ಇಲ್ಲವೇ ಎಂಬುದಿನ್ನೂ ತಿಳಿದಿಲ್ಲವಾದರೂ, ಐಶ್ವರ್ಯದ ಬಗ್ಗೆ ಅವರಲ್ಲಿ ಮೋಹಕತೆಯು ಉದಿಸಿದ್ದರೆ, ರಕ್ತಹೀನ ಕ್ರಾಂತಿಯ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವುದು ಕೇವಲ ಸ್ವಪ್ನದಲ್ಲಿಯೇ ಉಳಿಯುತಿತ್ತು ಎಂಬುದಂತೂ ನಿಶ್ಚಯವು.

ನಿದ್ರೆಯಿಂದೆದ್ದೆತ್ತೊಡನೆಯೇ ಒಂದು ವಿಧದ ಅಲಸ್ಯ ಹಾಗೂ ಅಕರ್ಮಣ್ಯತೆಯ ಮನೋಭಾವ ಮಾನವನಿಗೆ ಇರುವುದು ಸಹಜ. ಶತಮಾನಗಳಿಂದ ಪರಾಧೀನತೆಯಲ್ಲಿ ಕೊಳೆತಿದ್ದ ಭಾರತೀಯರು ಶಸ್ತ್ರಪ್ರಥಮರಿಗಳಾಗಿ ಸಬಲರಾಗುವುದು ಸಾಧ್ಯವೆ? ಕೇವಲ ಬಾಪೂ ಮಾತ್ರ ಇದರ ಸತ್ಯವನ್ನು ಕಂಡುಹಿಡಿದರು ಭಾರತೀಯರಲ್ಲಿ ಶಸ್ತ್ರಧಾರಣೆ ಮಾಡುವುದರಿಂದ ಆವಶ್ಯಕ ಸಾಹಸ, ಸ್ಥೈರ್ಯ, ಮತ್ತು ಶಕ್ತಿಗಳು ಹುಟ್ಟಲಾರವೆಂದವರು ಭಾವಿಸಿದರು. ತಮ್ಮಲ್ಲಿ ಹುದುಗಿದ್ದ ಅತ್ಯ ವಿಶ್ವಾಸವನ್ನವರು ಒಡಿದೆಬ್ಬಿಸಿದರು. ಸತ್ಯ, ಅಹಿಂಸೆ ಮತ್ತು ಶಾಂತಿಯ ಆಸ್ತ್ರಗಳನ್ನೆ ಧರಿಸಿ ಅವರು ಪಣ್ಣಿಡೆದರು ಬಾರತೀಯರು ಇವುಗಳನ್ನು ಸ್ವೀಕರಿಸಿದರು ಭಾರತೀಯರಲ್ಲಿ ಆತ್ಮ ವಿಶ್ವಾಸ ಪರಿಪೂರ್ಣರಾದರು. ತಮ್ಮ ಪ್ರಾಣವನ್ನೆ ಪಣವಾಗಿಟ್ಟು ಬಾಪೂವನ್ನು ಎಲ್ಲರೂ ಅನುಸರಿಸಿದರು. ಇವರಿಂದಾಗಿ ಪ್ರಪಂಚದ ಯಾವುದೇ ದೇಶವು ಪಡೆಯದ ಗೌರವವನ್ನು ಭಾರತವು ಪಡೆಯಿತು ರಕ್ತನಾಶವಿಲ್ಲದೇನೇ ಭಾರತವು ತನ್ನ ಸ್ವಾತಂತ್ರ್ಯವನ್ನು ಹೊಂದಿತು

ಗೌತಮನ ದನಿದ ಪ್ರಚಾರವು ಭಾರತಕ್ಕೆ ಮಾತ್ರ ಸೀಮಿತವಾಗಿಳಿಯಲಿಲ್ಲ ಬಾಪೂರವರ ಸಿದ್ಧಾಂತವನ್ನು ಜಗತ್ತಿಡೀ ಸಮ್ಮಾನಿಸಿತು ಬಾಪುವರ ಈ ಸಿದ್ಧಾಂತಗಳನ್ನು ಸ್ವೀಕರಿಸಲು ಪ್ರಪಂಚವಿಂದು ತಯಾರಾಗಿದೆ ಪ್ರಪಂಚದಲ್ಲಿ ವಿಶ್ವಬಂಧುತ್ವದ ಪಂರವನ್ನು ಕಲಿಸುವುದಕ್ಕೋಸ್ಕರ ಈ ಮಹಾ ಪುರುಷನು ಪರಾಧೀನ ಭಾರತದ ಕಲಂಕವನ್ನು ಸಂಪೂರ್ಣ ತೊಳೆದು ವಿಶ್ವದ ದೃಷ್ಟಿಯಲ್ಲಿ ಅವರ ಗೌರವನ್ನು ಹೆಚ್ಚಿಸಿದರು.

ಉಚ್ಚ ವಿಚಾರ ಮತ್ತು ಸೀದಾ ಸರಳವಾದ ಆಚರಣೆಗಳು ಗಾಂಧೀಜಿಯವರ ಪ್ರಧಾನ ತತ್ವಗಳಾಗಿದ್ದುವೆ ಇನ್ನೊಂದರ ಹೆಪ್ಪಡಿಯನಲ್ಲಿ ನೈರ್ಮಲ್ಯ ಪ್ರಕಾಶವನ್ನು ಹರಡಿಸುವ ಪ್ರಯತ್ನವನ್ನು ಮಾಡಿದ ಗಾಂಧಿಯವರು ನೀರೆಹರೂ ನಿಶ್ಚಲರೂ ಆಗಿದ್ದರು ಇದರಿಂದಾಗಿಯೇ ಮಕ್ಕಳಿಗೆ ಗಾಂಧಿಯೆಂದರೆ ಅಚ್ಚುಮೆಚ್ಚಾಗಿತ್ತು, ಗಾಂಧಿಯವರಿಗೂ ಹಾಗೆಯೇ ಯಾವ ಸಮಯದಲ್ಲೇ ಆಗಲಿ, ಬಾಲಕರ ಮಧ್ಯೆ ಅವರು ನಿರ್ಮಲ ಹಾಸ್ಯ-ವಿನೋದಮಗ್ನರಾಗಿರುತ್ತಿದ್ದರು ಇದರಿಂದಲೇ ಅವರು ಎಳೆಯರ ಗೆಳೆಯರಾಗಿದ್ದರು

ಭಾರತೀಯರಿಗೆ ಪ್ರಿಯರಾದ ಬಾಪುರವರನ್ನು ನಮ್ಮ ಕಾಲದ ಮಹಾ ಕ್ರಾಂತಿಕಾರೀ ಪುರುಷರೆಂದು ಕರೆಯಲ್ಪಡುವುದು ನಮಗೊಂದು ಅಭಿಮಾನಾಸ್ಪದ ವಿಷಯವಾಗಿದೆ ಮಾನವ ಸಮುದಾಯ ಹೃದಯದೌರ್ಬಲ್ಯವನ್ನು ದೂರಮಾಡಿ ಅವರು ನವಸಮಾಜವನ್ನು ಸ್ಥಾಪಿಸಲುದ್ಯುಕ್ತರಾದರು. ಗೌತಮನು ಹೇಳಿದ್ದ "ನಿರ್ವಾಣ" ಪದದ ಅರ್ಥವು ಬಾಪೂರವರ ದೃಷ್ಟಿಯಲ್ಲಿ "ಮನುಷ್ಯರ್ಮಗಳಿಂದ ಮುಕ್ತರಾಗುವುದು" ಎಂದು ಮಾನವ ಹೃದಯದ ದೌರ್ಬಲ್ಯಗಳು ಸಂಪೂರ್ಣವಾಗಿ ದೂರವಾದುವೆಂದರೆ, ಹೃದಯವು ನಿರ್ಮಲವಾಗುವುದು. ಹೃದಯ ನಿರ್ಮಲವಾದರೆ, ಆಗ, ವಾಸ್ತವವಾಗಿಯೂ ನಿರ್ವಾಣ ಅಥವಾ ಮುಕ್ತಿಯು ಲಭಿಸುವುದು. ಬಾಪೂ ಕಂಡು ಹಿಡಿದ "ನಿರ್ವಾಣ" ಪದದರ್ಥದಷ್ಟು ಸರಳ ಸುಲಭವಾದ ಅರ್ಥವನ್ನು ಈ ಮೊದಲು ಯಾರು ತಿಳಿದುಕೊಂಡಿದ್ದರು?

ಅಕ್ಟೋಬರ ೨ ಗಾಂಧೀಜಯಂತಿಯ ಪರ್ವದಿನ ಬಾಲಕ ಗಣದ ಹೃದಯದಲ್ಲಿ ಬಾಪೂ ಸೃಷ್ಟಿಯು ಎದ್ದು ಹುಟ್ಟಿ ನೆಗೆಯುತ್ತದೆ ಅವರ ಉಜ್ವಲ ಚರಿತ್ರೆಯು ರಾಮ ಕೃಷ್ಣರ ಆದರ್ಶ ಚರಿತ್ರೆಯಂತೆ ಸಂದು ಸಾಹಿತ್ಯ ನಿರ್ವಾಣಕ್ಕೆ ನೂತನ ಪ್ರೇರಣೆಯನ್ನು ಯಿತು ಭಾರತದ ಎಲ್ಲ ಭಾಷೆಗಳಲ್ಲಿಯೂ ಗಾಂಧೀಸಾಹಿತ್ಯವು ತುಂಬಿ ಬರುತ್ತದೆ ಹಾಗಿರುವಾಗ, ಕೇವಲ ಅವರ ಜನ್ಮತಿಥಿಯ ಸಮಯದಲ್ಲಿ ಮಾತ್ರ ಅವರ ನೆನಪಾಗುವುದಲ್ಲ.

(ಇನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H O. **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಉತ್ತಮ ವ್ಯಾಪಾರೋದ್ಯಮಗಳಿಗೆ ಬ್ಯಾಂಕಿಂಗ್ ಸೌಲಭ್ಯಗಳು- ಸಿಂಡಿಕೇಟ್ ಬ್ಯಾಂಕ್

ಕಥಾ ವಿಹಾರ

ಅವನ ಅದೃಷ್ಟ ಕನ್ನೆರೆಯಿತು!

ಅಂದು ಜನರೆಲ್ಲರೂ ಅವನನ್ನು ತಿರಸ್ಕರಿಸುತಿದ್ದರು; ಆದರೆ ಇಂದು ಅವರೇ ಪುರಸ್ಕರಿಸುತ್ತಾರೆ

ಒವಿ ಪುತ್ಕ ನಾನು ಆಗ ತಾನೇ 'ಮೋಹಿನೀ ನಿಲಾಸ'ದಿಂದ ಕಾಫಿ ಮುಗಿಸಿ ಹೊರಗೆ ಬಂದಿದ್ದೆ. ರವಿ ನಿಲುವುಗನ್ನಡಿಯ ಮುಂದೆ ನಿಂತು ತಲೆಗೂದಲು ಸರಿಯಾಗಿದೆಯೋ ಎಂದು ನೋಡುತ್ತಿದ್ದ, ನನ್ನ ದೃಷ್ಟಿ, ಮಾರ್ಗದ ಮೇಲೆ ಇತ್ತು. ಕೊಟೇಲಿನ ಎದುರಿಗೆ ಆಗತಾನೇ ಒಂದು ಕಾರು ಬಂದು ನಿಂತಿತು. ಕಾರಿನೊಳಗಿಂದ ಹೆಣ್ಣು ಹೆಣ್ಣು ಮುದುಕನೊಬ್ಬನು ಮೆಲ್ಲಗೆ ಇಳಿದನು. ಮುದುಕ ಕಾರಿನಿಂದ ಇಳಿಯುತ್ತಲೇ ಬೀದಿಯಲ್ಲಿ ಸಂಚರಿಸುವವರಲ್ಲಿ ಕೆಲವರು ನಮಸ್ಕರಿಸುತ್ತಾ ಹೋದರು. ಇನ್ನು ಕೆಲವರು ಅವರ ಬಳಿಯೇ ನಿಂತು ಕ್ಷೇಮಸಮಾಚಾರಗಳನ್ನು ವಿಚಾರಿಸುವುದರಲ್ಲಿ ತಲ್ಲೀನರಾದರು. ಬೀದಿ ಮಧ್ಯೆ ಆ ಬಡ ಮುದುಕನನ್ನು ಇಷ್ಟೆಲ್ಲ ಮಂದಿ ಭಕ್ತರು ಸುತ್ತುಗಟ್ಟಬೇಕಾದರೆ ಯಾರೋ ದೊಡ್ಡ ಜನವಾಗಿರಲೇಬೇಕು. ನಾನು ಸಹಜವಾಗಿ ಕುತೂಹಲದಿಂದ ರವಿಯೊಡನೆ ಪ್ರಶ್ನಿಸಿದೆ, "ಯಾರಪ್ಪಾ ಅದು?" ಎಂದು.

"ಅವರ ಪರಿಚಯವಿಲ್ಲವೇ ನಿನಗೆ?"

"ಇಲ್ಲ; ನಾನು ನೋಡುವುದೇ ಮೊದಲ ಬಾರಿ"

"ಬಹಳ ಹಣವಂತ ಕಾಣೋ!"

"ಹಣವಂತನ ಹಾಗೆ ಕಾಣುವುದಿಲ್ಲ ವಲ್ಲಾ' ಹೆನ್ನಮಂತನ ಹಾಗಿದ್ದಾನೆ ಮಾತ್ರ;"

"ನೋಡಲಿಕ್ಕೆ ಸಿಂಪಲ್ ಆಗಿ ಕಾಣಿಸಬಹುದು. ಅವರು ದೊಡ್ಡ ಶ್ರೀಮಂತರೇ ಗ, ಇದೇ ಮುದುಕನನ್ನು ಈಗ್ಗೆ ಕೆಲವು ವರ್ಷಗಳಿಂದ ಯಾರೂ ತಲೆಎತ್ತಿಯೂ ನೋಡುತ್ತಿರಲಿಲ್ಲ. ಈ ಮುದುಕನಿಗೆ ಊಟಕ್ಕೂ ಗತಿಯಿಲ್ಲದೆ ಬೇತುವ ಕಾಲವೂ ಬಂದಿತ್ತು"

"ಮತ್ತೆ ಹೀಗೆ ಆಗಬೇಕಾದರೆ ಏನು ಕಾರಣ?"

"ಒಂದು ಬಾರಿ ಈ ಮುದುಕನ ಜೀವನದಲ್ಲಿ ಲಕ್ಷ್ಮಿ ದೇವತೆ ತಲೆಗೆ ಕೈಯಿಟ್ಟಳು ಮುದುಕ ಎಲ್ಲಿಗೋ ಪ್ರಯಾಣಕ್ಕೆ ಹೊರಟಿದ್ದಾನಂತೆ. ಮಕ್ಕಳನ್ನು ನೋಡಲು ಹೊರಟಿದ್ದಾನೋ ಏನೋ! ರೈಲ್ವೇ ಸ್ಟೇಶನ್ನಿನಿಂದ ಹೊರಗೆ ಬಂದು ಒಂದು ಜಟಕಾ ಗಾಡಿ ಮಾಡಿಕೊಂಡು ಬಂದರಂತೆ. ಒಂದು ಕಡೆ ಅಗತ್ಯವಾಗಿ ಇಳಿಯಬೇಕೆಂದಾಯಿತು ಮುದುಕ ಗಾಡಿ ನಿಲ್ಲಿಸಿ ಜೇಬಿನಿಂದ ಐದು ರೂಪಾಯಿ ನೋಟೊಂದನ್ನು ತೆಗೆದು ಹಿಡಿದುಕೊಂಡರು. ಆವರ ಬಳಿ ಇದ್ದುದೇ ಆದು. ಬೇರೆ ಇರಲಿಲ್ಲ. ಗಾಡಿ ಬಾಡಿಗೆ ಎಷ್ಟೋ ಎಂದು ಕೇಳಿದರು. ಎರಡು ರೂಪಾಯಿ ಕೊಡಿ ಸ್ವಾಮಿ ಎಂದ ಗಾಡಿಯವ. ಉಪಾಯ ಇಲ್ಲದೆ ಮುದುಕ ಚಿಲ್ಲರೆಗಾಗಿ ಒಂದೆರಡು ಅಂಗಡಿಗಳಲ್ಲಿ ಕೇಳಿದರು. ಆದರೂ ಎಲ್ಲೂ ಸಿಗಲಿಲ್ಲ. 'ಚಿಲ್ಲರೆ ನಾನು ತರುತ್ತೇನೆ ಸ್ವಾಮಿ' ಎಂದು ಗಾಡಿಯವ. 'ಹಾಗಾದರೆ ಬೇ ಬ' ಎಂದು ಹೇಳಿ ಐದು ರೂಪಾಯಿ ನೋಟನ್ನು ಅವನ ಬಳಿ ಕೊಟ್ಟು ಅಲ್ಲೇ ಕಾದು ನಿಂತನು.

"ಗಾಡಿಯವನು ಐದು ರೂಪಾಯಿ ನೋಟು ಹಿಡಿದುಕೊಂಡು ಗಾಡಿಯೊಂದಿಗೆ ಹೋದನು ಆ ದಿನ ಕತ್ತಲಾದರೂ ಹಿಂತಿರುಗಿ ಬರಲೇ ಇಲ್ಲ. ಪಾಪ ಮುದುಕನ ಹೊಟ್ಟೆಯಲ್ಲಿ ಹಸಿವೆಯ ತಾಳ ಮದ್ದಳೆ ನಡೆಯುತ್ತಿತ್ತು. ಎದೆಯಲ್ಲಿ ಭಯದ ಜೊಂಬರಾಟವಾಗುತ್ತಿತ್ತು. ಕಡೆಗೆ ಮುದುಕ ನಿರಾಶೆಯಿಂದ ಗಾಡಿಯವನಿಗೆ ಬೈಯುತ್ತಾ ಅಲ್ಲಿಂದ ಹೊಂಟುಹೋದ. ರಾತ್ರಿ ಉಣ್ಣಲು ನಡೆಮುಕೊಂಡು ಹೋಗಲು ಆಗಲಿಲ್ಲ. ಕಡಗೆ ಯಾರೊಡನೆಯೋ ಬೇಡಿ ಬಸ್ಸಿಗೆ ಹಣವಾಡಿಕೊಂಡು ಹೊರಟು ಕೂದನಂತೆ.

"ಇದಾದ ಬಳಿಕ ಮುದುಕನಿಗೆ ದಿನಾಲೂ ಆ ಗಾಡಿಯವನನ್ನೇ ಹುಡುಕುವುದೊಂದು ಕೆಲಸವಾಯ್ತು ಎಲ್ಲಿಯಾವ ಗಾಡಿ ಸಿಕ್ಕಿದರೂ ಬಹಳ ಜಾಗ್ರತೆಯಾಗಿ ನೋಡುತ್ತಿದ್ದನು. ದಿನ ಕಳೆಯಿತು. ಸುವಾರು ಸಮಯದ ಅನಂತರ ಒಂದು ದಿನ ಆಕಸ್ಮಾತ್ ಆ ಗಾಡಿಯವನ ಸಿಕ್ಕಿಯೇ ಬಿದ್ದ. ಮುದುಕ ಒಂದೇ ಬಾರಿ ಗಾಡಿಯವನ ತಿಂಗಿ ಹಿಡಿದು ಸೂ....ಮಗನೇ ಕೊಡು ನನ್ನ ರೂಪಾಯಿ ಕೊಡು ಎಂದು ದೊಡ್ಡ ಗಲಾಟೆ ಮಾಡಿಬಿಟ್ಟನು. ಗಾಡಿಯವನಿಗೆ ಈ ಮುದುಕ ಯಾವ ಲೆಖ್ಖಕ್ಕೆ ನೆಲಕ್ಕೆ ದೂಡಿ ಓಡಿಹೋಗಬಹುದಾಗಿತ್ತು. ಆದರೆ ಆಗಲೇ ಜನ ಸುತ್ತ ಮುತ್ತ ಕೂಡಿದ್ದರಿಂದ ಆ ಪಾಯವಿರಲಿಲ್ಲ. ಆತ ಸಾಧ್ಯವಾದಷ್ಟು ಸುಳ್ಳುಹೇಳಿ ಮುದುಕನಿಂದ ತಪ್ಪಿಸಲು ಪ್ರಯತ್ನಿಸಿದ. ಆದರೆ ಮುದುಕ ಬಿಡಲಿಲ್ಲ.

ಏನ ಅಂಗಿಯಲ್ಲಿ ಹುಡುಕಾಡಿ ಅವನ ಪರ್ಸನ್ನು ಎಳದುಕೊಂಡನು ಪರ್ಸಿನಲ್ಲಿ ಒಂದು ಮುಕ್ಕಾಲೂ ಇರಲಲ್ಲವಾದ್ದರಿಂದ ಗಾಡಿಯವನು ಸುಮ್ಮಗೆ ನಗುತ್ತಾ ತನ್ನ ದಾರಿ ಹಿಡಿದು ಹೋದನು. ಮುದುಕ ತಾನೇ ಗೆದ್ದೆನೆಂದ ಕೊಂಡು ಪರ್ಸನ್ನು ಹಿಡಿದುಕೊಂಡು ಮನೆಗೆ ಹೊರಟುಹೋದನು. ಮನೆಗೆ ಹೋಗುವವರೆಗೂ ಮುದುಕ ಲಕ್ಷ್ಮಿ ನಾಮಹತ್ತಲೇ ಇದ್ದ. ಪರ್ಸಿನಲ್ಲಿ ಎಷ್ಟು ಹಣ ಇರಬಹುದು ಎಂದು ಆದರೆ ಮನೆಗೆ ಹೋಗಿ ಪರ್ಸ್ ಬಿಡಿಸಿದ ನಂತರ ಒಂದು ಕಾಗದದ ಚೂರಿನ ಹೊರತು ಆದರಲ್ಲಿ ಒಂದು ಮುಕ್ಕಾಲೂ ಇರಲಿಲ್ಲ. ಮುದುಕನಿಗೆ ಕೋಪಬಂದು ಪರ್ಸನ್ನು ಎಸೆಯುವುದರಲ್ಲಿದ್ದನು. ಒಂದು ಪರ್ಸಾದರೂ ಸಿಕ್ಕಿದ್ದು ಇರಲಿ ಎಂದು ಸಹನೆಯಿಂದ ಅದನ್ನು ತೆಗೆದು ತಟ್ಟಿದನು

"ಒಂದು ದಿನ ಆಕಸ್ಮಾತ್ ಗಾಡಿಯವನು ಈ ಮುದುಕನನ್ನು ಹುಡುಕಿಕೊಂಡು ಬಂದನು ಅವನು ಬಂದುದು ಪರ್ಸಿನಲ್ಲಿರುವ ಕಾಗದದ ಚೂರು ಕೇಳಲು ಆದರೆ ಮುದುಕ 'ನನ್ನ ಹಣ ವಾಪಾಸು ಕೊಡದೆ ಕೊಡುವುದಿಲ್ಲ' ಎಂದು ಹೇಳಿದನು ಖಡಾಖಡಿಯಾಗಿ. ನಿನ್ನ ಹಣ ಈಗಲೇ ತರ್ತೇನೆ ಎಂದು ಜೇಬಿಗೆ ಗಾಡಿಯವನು ಹೊರಟುಹೊದನು.

ಗಾಡಿಯವನು ಆ ಕಾಗದದ ಚೂರಿಗಾಗಿ ಇಲ್ಲಿವರೆಗೆ ಬರಬೇಕಾದರೆ ಅದರಲ್ಲೇನೋ ವಿಶೇಷ ಇರಬೇಕೆಂದು ಮುದುಕ ಕಾಗದವನ್ನು ಯಾರೊಡನೆಯೋ ಓದಿಸಿದನ. ಅದು ಓದಿನೋಡುವಾಗ ನೋಡ್ತಿಗೆ ಹಣ ಕಟ್ಟಿದ ರಶೀದಿಯಾಗಿತ್ತು. ಓದಿದವನು ಆಶ್ಚರ್ಯದಿಂದ ಕೇಳಿದ ಇದು ನಿನಗೆಲ್ಲಿ ಸಿಕ್ಕಿತು? ಈ ರಶೀದಿ ನಂಬ್ರಕ್ಕೆ ಈ ಭಾರಿ ನೋಡ್ತಿಯಲ್ಲಿ ಇಪ್ಪತ್ತು ಸಾವಿರ ರೂಪಾಯಿ ಬಹುಮಿದೆ ಎಂದನು.

"ಇತ್ತ ಗಾಡಿಯವನು ಮುದುಕನ ಬಳಿಗೆ ಐದು ರೂಪಾಯಿ ನೋಟು ಹಿಡಿದುಕೊಂಡು ಬರುವಾಗ ಮುದುಕ ವಿಸಿಯ ನೋಲೆ ಕೈಯಾಡಿಸುತ್ತಾ ಹೇಳಿದನು" ಏನೋ, ನನಗೆ ಬಹಳ ಲಾಭ ಮಾಡಿಸಿದೆಯಪ್ಪಾ, ನನ್ನ ರೂಪಾಯಿ ಹಿಡಿದುಕೊಂಡು ಓಡಿದರೂ ಚಿಂತಿಲ್ಲ ನನಗೆ ಆ ರಶೀದಿಯಿಂದ...ಇಪ್ಪತ್ತು ಸಾವಿರ ರೂಪಾಯಿ ಈ ದಿನ ಸಿಕ್ಕಿತು.

ಈ ಮಾತು ಕೇಳಿ ಗಾಡಿಯವನು ಅಲ್ಲೇ ಕುಸಿದು ಬಿದ್ದನಂತೆ

"ಮುದುಕನ ಐದು ರೂಪಾಯಿ ನೋಟನ್ನು ಹಿಡಿದುಕೊಂಡು ಗಾಡಿಯವನು ಓಡಿ ಹೋಗಿ ಅದನ್ನು ನೋಡ್ತಿ ಬೆಟಿಗೆ ಕಟ್ಟಿದ್ದನು ಅದೃಷ್ಟವಶಾತ್ ಅದೇ ನಂಬ್ರಕ್ಕೆ ಬಂದಿತ್ತು ಬಹುಮಾನ. ಈಗ ಈ ಮುದುಕ ಸಿಕ್ಕಿದ ಹಣದಿಂದ ಏನೋ ವ್ಯಾಪಾರ ಮಾಡಿ ಹಂಬಾ ಶ್ರೀಮಂತನಾಗಿದ್ದಾನೆ"

ರವಿ ಕತೆ ಮುಗಿಸುತ್ತಲೇ ನನಗೂ ಬಾಯಲ್ಲಿ ನೀರೂರಿತ್ತ. ನನ್ನ ಅದೃಷ್ಟ ದೇವತೆ ಯಾವಾಗ ಕಣ್ತೆರೆಯುವಳೋ ನೋಡಬೇಕು!

—ವಿಕುಕುಮಾರ್', ಮಂಗಳೂರು.



ಸಿಂಗಾಪುರದ ಸಿಥಾನಸಥೆಯು "ರಾಜದಂಡ"ನನ್ನು ಬ್ರಿಟಿಷ ಕಲಾವಿದೆ ಶ್ರೀ ಲೆಸ್ಲೀ ಡಬ್ಲಿನನು ಚಿತ್ರಿಸಿ ಸಿದ್ಧಪಡಿಸಿರುತ್ತಾನೆ ಈ ದಂಡದ ತುದಿಯಲ್ಲಿ ಸಿಂಗಾಪುರ (ಸಿಂಹಗಳ ನಾಡು) ಎಂಬ ಹೆಸರಿಗೆ ಕಾರಣವಾದ ಸಿಂಹವನ್ನು ನಿರ್ಮಿಸಿ, ಸಮುದ್ರ ಹಾಗೂ ವಾಯು ಯಾನಗಳಲ್ಲಿ ಈ ನಗರವು ಪಡೆದಿರುವ ಪ್ರಾಮುಖ್ಯವನ್ನು ಸೂಚಿಸುವುದಕ್ಕೆ ಸಿಂಹಕ್ಕೆ ಎರಡು ರೆಕ್ಕೆಗಳನ್ನೂ ಜೋಡಿಸಲಾಗಿದೆ

ಪರೀಕ್ಷಿಸಿ ಖಾತ್ರಿಯಾದುದನ್ನೇ ಪಡಕೊಳ್ಳಿರಿ!

ನಮ್ಮ ಶೋ ರೂಮನ್ನು ಸಂದರ್ಶಿಸಿ ಸಂಪೂರ್ಣ ಸಂತೃಪ್ತಿ ಹೊಂದಿರಿ!

ಸಂಪೂರ್ಣ ಹೊಸ ಮ್ಯಾಲು ಹೆಚ್ಚಿನ ಆಕರ್ಷಕಗಳ

ಮನೆಗಳಿಗೆ ಬೇಕಾಗುವ ಎಲ್ಲಾ ತರದ 'ಸ್ಟೈನ್‌ಲೆಸ್' ಸ್ಟೀಲ್ ಪಾತ್ರೆಗಳು

ವೀರಾ ಸ್ಟೀಲ್ ವರ್ಕ್ಸ್ ಪ್ರೈ. ಲಿ. ಬೊಂಬಾಯಿ.

ಇವರ ಅತ್ಯಾಧುನಿಕ ರೀತಿಯ ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟ

ದೊಡ್ಡ, ಸಣ್ಣ ಆಫೀಸುಗಳಿಗೆ, ಹೋಟೇಲು, ಆಸ್ಪತ್ರೆ, ಮನೆಗಳಿಗೆ ಬೇಕಾಗುವ ಮಡಚುವ ಕುರ್ಚಿಗಳು, ಸ್ಟೈಕ್ಲೋಪಯೋಗದ ಬೀರುಗಳು, ಮೇಜುಗಳು, ಸೋಫಾಗಳು ಮತ್ತು ಸೆಲ್ಫ್‌ಗಳು, ಸ್ಪ್ರಿಂಗ್ಸ, ಸರಿಗೆಯ ಮತ್ತು ಕೀಟ್ ಮಂಚಗಳು

ಇವುಗಳಲ್ಲದೆ ಅನೇಕ ತರದ ಸ್ಟೀಲು ಫರ್ನಿಚರುಗಳು

ಎಲ್ಲಾ ವಿಧದ 'ಜೆಸ್ಕೊ' ಇಲೆಕ್ಟ್ರಿಕ್ ಲೇಂಪ್ ಹೋಲ್ಡರುಗಳು

ರಖಂ ದರಬೆಲ್ಲಿ ದೊರೆಯುತ್ತವೆ.

ಭದ್ರತೆ, ಬಾಳಿಕೆ ಮತ್ತು ವಿಶ್ವಾಸಾರ್ಹತೆಯ ಬಾಗಿಲುಗಳಿಗಾಗಿ 'ಸ್ವಸ್ತಿಕ್ ರೋಲಿಂಗ್ ಶಟ್ಟರ್'ಗಳನ್ನೇ ಪಡೆಯಿರಿ.

ವಿವರಗಳಿಗೆ:

ಶಾಸ್ತ್ರಿ & ಕಂಪೆನಿ

ಹಂಪನಕಟ್ಟೆ, ಮಂಗಳೂರು.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಕವಿಕ ಚರಿತೆ

ರವಿಕಾಣದುದನ್ನು ಕಂಡ ಕವಿಕುಂಜರ ನೇಮಿಚಂದ್ರ

ಲೀಲಾವತೀ ಮಹಾಪ್ರಬಂಧ ಮತ್ತು ಅರ್ಧನೇಮಿ ಪುರಾಣಗಳು ಶ್ರೇಷ್ಠ ವಸ್ತುಕ ಕಾವ್ಯಗಳಾಗಿವೆ

ಕನ್ನಡ ಸಾಹಿತ್ಯದಲ್ಲಿ ಶೃಂಗಾರರಸವನ್ನು ಅತ್ಯಧಿಕವಾಗಿ ಪ್ರತಿಪಾದಿಸುವ ಶೃಂಗಾರ ಕಾವ್ಯವನ್ನು ಬರೆದ ನೇಮಿ ಚಂದ್ರನ ಹೆಸರು ಅಚಿಂದ್ಯಾರ್ಕ ಸ್ಥಾಯಿಯಾಗಿ ಉಳಿದಿದೆ. ಈತನು ಶೃಂಗಾರ ಕಾವ್ಯವೆಂದು ಹೆಸರಾದ ಕವಿಕುಂಜರ ಲೀಲಾವತಿಯೆಂದು ಪ್ರಸಿದ್ಧವಾದ ಲೀಲಾವತೀ ಎಂಬ ಮಹಾ ಪ್ರಬಂಧವನ್ನೂ ಅರ್ಧನೇಮಿ ಪುರಾಣವೆಂಬ ನೇಮಿನಾಥನ ಪುರಾಣಾರ್ಧವನ್ನೂ ಬರೆದಿದ್ದಾನೆ. ಈತನು ತನ್ನ ಗ್ರಂಥದಲ್ಲಿ "ಅಂಬುಧಿನೇಷ್ಟಿಕಾವನಿಗೆ ಲಕ್ಷ್ಮಣದೇವನೆ ರಾಜನೆಂದು..... "ಎಂಬೂ" ಧರೆಯಂ ರಕ್ಷಿಸುತಿರ್ಕೆ ಲಕ್ಷ್ಮ ಬರಿಸಂ ಲಕ್ಷ್ಮೀಧರೋರ್ವೀಶ್ವರಂ" ಎಂದೂ ಹೇಳಿಕೊಂಡಿರುವುದರಿಂದ, ಲಕ್ಷ್ಮಣ ರಾಜನೆಂಬವನ ಆಸ್ಥಾದ ಕವಿಯಾಗಿದ್ದಂತೆ ತಿಳಿದುಬರುವುದು. ಇದೇ ಲಕ್ಷ್ಮಣ ರಾಜನನ್ನು ೧೧೮೦ರಲ್ಲಿದ್ದ ಕರ್ಣಪಾರ್ಯನು ತನ್ನ ನೇಮಿನಾಥ ಪುರಾಣದಲ್ಲಿ ಸ್ಮರಿಸಿದ್ದಾನೆ. ಆದರೆ, ಆಗ ಲಕ್ಷ್ಮಣ ರಾಜನು ರಾಜನಾಗಿದ್ದಿರಲಿಲ್ಲ; ಯುವರಾಜನಾಗಿದ್ದಂತೆ ತಿಳಿದುಬರುತ್ತದೆ. ಆದುದರಿಂದ ಲಕ್ಷ್ಮಣ ರಾಜನು ಸು. ೧೧೬೦ರಲ್ಲಿದ್ದಿರಬಹುದು. ಆಗ ಕವಿಯ ಕಾಲವೂ ಅದೇ ಎಂದು ಊಹಿಸಬಹುದು.

ಈತನನ್ನು ಜನ್ನ, ಸಾರ್ವ, ಕಮಲಭವ, ಮಧುರ, ನುಂಗರಸ, ಬಾಹುಬಲಿ, ಮೊದಲಾದ ಕವಿಗಳು ತಂತಮ್ಮ ಕಾವ್ಯಗಳಲ್ಲಿ ಸ್ತುತಿಸಿದ್ದಾರೆ.

ಈತನಿಗೆ ಕಲಾಕಾಂತ, ಕವಿರಾಜಮಲ್ಲ, ಶೃಂಗಾರ ಕಾರಾಗೃಹ, ಕವಿರಾಜಕುಂಜರ, ವಿದ್ಯಾವಧೂವಲ್ಲಭ, ಸುಕವಿ ಕಂಠಾಭರಣ, ಚತುರ್ಭಾಷಾ ಕವಿಚಕ್ರವರ್ತಿ ಇತ್ಯಾದಿ ಹಲವಾರು ಬಿರುದುಗಳಿದ್ದರೂ "ಕವಿಕುಂಜರ" ಎಂಬುದು ಎಲ್ಲ ಕ್ಕಿಂತಲೂ ಸಪ್ರಸಿದ್ಧವಾಮವ.

ಈತನು ಜೈನಕವಿ. ಜೈನರೀತ್ಯಾ ನೇಮಿನಾಥ ಪುರಾಣವನ್ನು ಬರೆದಿರುವನು. ಆನಂದಿ, ನವಿಗೆ ಅದರ ಕಂದನಧಾಭಾಗ ದವರೆಗಿನ ಭಾಗ ಮಾತ್ರ ದೊರೆತಿದೆ. ವ್ಯಾಯಶಃ ಈತ್ತು ಬರೆದನಂತರ ಕವಿಯು ಮೃತಪಟ್ಟಿರಬೇಕೆಂದು ತೋರುತ್ತದೆ

ಈತನ ಕವಿಕುಂಜರ ಮತ್ತು ಶೃಂಗಾರಕಾರಾ ಗೃಹವೆಂಬ ಬಿರುದುಗಳು ನುಹಾ ಪ್ರಬಂಧವಾದ "ಲೀಲಾವತಿ"ಯಿಂದ ಸಾರ್ಥಕವಾಯಿತು. "ಕಟ್ಟುಗೆ ಕಟ್ಟದಿರ್ಕೆ ಕಡಲಲ್ಲಂ, ಕಪಿ ಸಂತತಿ, ಮುಟ್ಟುಗೆ ಮುಟ್ಟದಿರ್ಕೆ ವಾಮನ ಕ್ರಮಂ ಮುಗಿಲಂ; ಪರನಂ ನರಸಿಕ್ಕಿ ಗಂಟಲಂ ನೆಟ್ಟುಗೆ ಮೆಟ್ಟದಿರ್ಕೆ—ಕವಿಗಳ್ ಬಂಧದೊಳ್ ಕಟ್ಟದರ್, ಮೆಟ್ಟದರ್, ಒಕ್ಕಿ ಮೆಟ್ಟಿದರ್" ಎಂದು ಕೇಳಿದ ಕವಿ ಆ ಮಾತನ್ನೂ, "ರವಿ ಕಾಣದುದಂ ಕವಿ ಕಾಣ್ಬಂ", ಕವಿಗಳು "ಶಾಖಾನು ಗ್ರಹ ಸಪರ್ಧರು" ಎಂಬುದನ್ನೂ ಸತ್ಯಗೊಳಿಸಿದನು.

ಕಾವ್ಯವು "ಭವನದ ಭಾಗ್ಯದಿಂದ ಕ್ಕುಂ" ಅಲ್ಲವೆ ಬೆಳೆಯಿಂದಲ್ಲವೆಂದು ಹೇಳಿ, "ಜಲೆಗೊಟ್ಟು ತಾರ ವಧುವಂ ಮಲಯೊಸಿಲನಂ ಮನೋಜನಂ ಕೌಮುದಿಯುಂ" ಎಂದು ತನ್ನ ಈ ಲೀಲಾವತಿ ಕಾವ್ಯವು ಅವುಗಳಿಗೆ ಸರಿ ದೊರೆಯೆಂದ ಹೇಳಿದ್ದಾನೆ.

ಈ ಶೃಂಗಾರ ಕಾವ್ಯವಾದ "ಲೀಲಾವತಿ"ಯನ್ನು ಓದಿದ ನಂತರ ಜನರು ಬಾಣಭಟ್ಟ ಕವಿ ಕೃತವಾದ ಕಾದಂಬರಿಯನ್ನು ತರಿಸಿ, ಅದನ್ನು ಸುಟ್ಟು ಹಾಕಿ, ಆ ಬಸ್ಮದಿಂದ ಲೀಲಾವತಿಗೆ ಅಸ್ಥಿತ ಇಟ್ಟರು ಎಂಬ ಪ್ರತೀತಿಯುಳ್ಳ ಕಥೆ ದಂತಕತೆಯಾದರೂ ಲೀಲಾವತೀ ಕಾವ್ಯದ ಮಹತ್ವವನ್ನು ತಿಳಿಸುತ್ತದೆ.

ಈತನ ಬಂಧವು ಗಂಭೀರವಾಗಿಯೂ ಶೃಂಗಾರ ರಸ ಭರಿತವಾಗಿಯೂ ಹೃದಯಂಗಮವಾಗಿಯೂ ಇವೆ. ಈತನ ಪ್ರತಿ ಭೆಯೂ ಶಬ್ದ ಸಾಮರ್ಥ್ಯವೂ ವಾರ್ಧೋರಣೆಯೂ ಆನ್ಯಾದೃಶವಾಗಿವೆ.

"ಕವಿನಡೆವುದೆ ಮಾರ್ಗ ವೆಂಬ ನಾಳ್ನುಡಿಯನ್ನು ದಿಟ್ಟವಾಗಿಸಿ ಈ ಕವಿಯು ತೋರಿಸಿ ಕೊಟ್ಟಿದ್ದಾನೆ. ಕಥಾ ವಸ್ತುವಿನಲ್ಲಿ ಸುಬಂಧುವಿನ ವಾಸವದತ್ತನನ್ನು ಹೋಲುವುದಾದರೂ, ಕವಿ ನ್ನ ವರ್ಣನಾ ನೈಪುಣಿಯಿಂದ ತನ್ನ ವಾಗ್ವಿಲಾಸದಿಂದ ತನ್ನ ಬಂಧುರ ಶೈಲಿಯಿಂದ ಹಾಗೂ ಸ್ವಯಂ ಪ್ರತಿಭೆಯಿಂದ ಮೊದಲಾಗಿಸಿ, ಪ್ರತ್ಯೇಕ ಸ್ವತಂತ್ರ ಕಾವ್ಯವೇ ಎಂಬುದಾಗಿ ಭಾವಿಸಲು ಎಡೆಯಿದೆ.

ಈತನು ನೇಮಿನಾಥ ಪುರಾಣವನ್ನು ವೀರಬಲ್ಲಾಳನ ಪ್ರಧಾನನಾದ ಸೆಜ್ಜೆವಳ್ಳಿ ಪದ್ಮನಾಭನಿಗಾಗಿ ಬರೆದಂತೆ ಹೇಳುವುದರಿಂದ ಪ್ರಾಯಶಃ ಈತನು ಲಕ್ಷ್ಮಣರಾಜರಾಗೂ ವೀರ ಬಲ್ಲಾಳ ಈ ಇಬ್ಬರ ಆಸ್ಥಾನದಲ್ಲಿಯೂ ಕವಿ ಪ್ರಸಿದ್ಧನಾಗಿದ್ದಂತೆ ತೋರಿಬರುತ್ತದೆ. ಇವನು ಯಾವ ಕನ್ನಡ ಕವಿಯನ್ನೂ ಹೆಸರೆತ್ತಿ ಸ್ಮರಿಸಿಲ್ಲ.

ಗ್ರಂಥಾವತಾರಾದಲ್ಲಿ ಈಶ್ವರನ್ನು ಹೊಗಳುವುದಿಲ್ಲ ಎಂದು ಹೇಳಿ ತನೋಜನನ್ನು ಸ್ಮರಿಸಿರುವನು. ಹಾಗೆಯೇ ಹರರನ್ನು ದೂಷಿಸಿ—

ವಿಷಾಯ ವಿಷ್ಣುರ್ಧಾತಾರಾ
ನೇಸು ಜಂಭೈರಿ ಸಂಗತೇ॥
ಶ್ರೀವಾಣಿ ರಂಭೂರಲೋಕ್ಯ
ದೇಹಾಪೇಕ್ಷಿತ ವಾರ್ವತೀಃ

ನೇಮಿಜಿನೇಶ್ವರನಿಗೆ ವಿಷ್ಣುವಿನ ಪತ್ನಿಯಾದ ಲಕ್ಷ್ಮಿ ಬ್ರಹ್ಮನ ಹೆಂಡತಿಯಾದ ಸರಸ್ವತಿ ಇಬ್ಬರೂ ವರವಾದುದನ್ನು ಕಂಡು ಶಂಭು ತನ್ನ ಪತಿಯನ್ನು ತನ್ನ ದೇಹದ ಅರ್ಧವನ್ನಾಗಿ ನೂಡಿಕೊಂಡು ರಕ್ಷಿಸುತ್ತಿರುವನು—ಎಂಬುದಾಗಿ ಕವಿ ಹೇಳಿಕೊಂಡಿರುವನು ಇದನ್ನು ಕಾಣುವಾಗ ಕವಿಯು ಶ್ರೀಮಂತನೂ ಆಗಿದ್ದನೆಂದು ತಿಳಿದುಬರುವುದು.

(ಸಂಗ್ರಹಿತ)

ದೇಶ ಪರಿಚಯ

ನದಿ ನದಗಳನ್ನು ಕಾಣದ ಸೌದಿ ಅರೇಬಿಯಾ

ಸಂಯುಕ್ತ ಅರಬ ರಾಷ್ಟ್ರಜೊಡನೆ ಕೂಡಿಬಾಳುವ ಮಾತುಕತೆ ನಡೆದಿದೆ

ವಿಶಾಲ ಮರುಭೂಮಿಯಾದ ಸೌದಿ ಅರೆಬಿಯಾವು ಆಪೆರಿಕೆಯ ಸಂಯುಕ್ತ ಸಂಸ್ಥಾನಗಳ ಮೂರರಲ್ಲೊಂದು ಅಂಕವಿಪ್ಪತ್ತೈದರೆ, ಲಕ್ಷ ೨,೦೦೦ ಚದರ ಮೈಲು ಗಳನ್ನು ವಿಸ್ತಾರವುಳ್ಳದು. ಇಷ್ಟಿನ ಜನ ಸಂಖ್ಯೆಯು ಮಾತ್ರ ಕೇವಲ ೬೦೩೦೦೦ ಚದರ ಮೈಲೊಂದರಲ್ಲಿ ಎಂಟು ಜನರೂ ವಾಸಿಸಿದಂತಾಗುವುದಿಲ್ಲ. ಇಷ್ಟೊಂದು ಆವಾರ ವಿಸ್ತಾರವಿರುವುದಾದರೂ ಈ ಮರುಳುಗಾಡಿನಲ್ಲಿ ಒಂದೇ ಒಂದು ನದಿಯಾಗಲೀ ಸರೋವರವಾಗಲೀ ಇಲ್ಲದಿರುವುದು ವಿಸ್ಮಯ ವನ್ನುಂಟುಮಾಡುತ್ತದೆ. ಕೆಂಪು ಸಮುದ್ರ ತೀರದ ಜೆಡ್ಡಾದಿಂದ ವಾರ್ಸಿಕೊಲ್ಲಿಯ ದಡಡಲ್ಲಿರುವ ಆಮೆರಿಕೆಯ ವಿಮಾನ ನಿಲಯ ತಾಣ್ಯವಾದ ಧಹ್ರಾನಿನವರೆಗೆ ರಾಜಧಾನಿಯಾಧವನ್ನು ಹಾದುಹೋಡುವ ಹೃಯೇಯೊಂದನ್ನುಳಿದರೆ, ಬೇರೆ ನಾಲಿಗೆಯು ವ್ಯವಸ್ಥೆಯೂ ಈ ನಾಡಿನಲ್ಲಿರುವುದಿಲ್ಲ.

ಸೌದಿ ಅರೇಬಿಯಾದ ಅರಸರಾದ ಸಾವುದರು ಮುಸ್ಲಿಮರ ಒಂದು ಸಂಗಡವಾದ ವಾಹಾಬಿಯ ದಳಕ್ಕೆ ಸೇರಿದವರು. ಈ ಪಂಗಡದವರು ದೇಶದ ಪೂರ್ವದೆಸೆಯಲ್ಲಿರುವ ರಿಯಾಧದಲ್ಲಿ ಒಂದು ಓಯಸಿಸ್ಸನ್ನು ಸಿದ್ಧಪಡಿಸಿ ಕಮ್ಮ ಕೇಂದ್ರವನ್ನಾಗಿ ಮಾಡಿಕೊಂಡಿರುತ್ತಾರೆ.

ಪ್ರಥಮ ಲೋಕಯುದ್ಧದಲ್ಲಿ ಟರ್ಕಿಯ ಸಿನ ಅರಸ ಹಾತಿಮಿತೆ ಹುಸೇನರು ಬ್ರಿಟಿಷರೊಡನೆ ಕೂಡಿಕೊಂಡು, ಸಿರಿಯಾ ಮತ್ತು ಇರಾಕಗಳ ಅರಬಿಯ ಧೇಶಗಳನ್ನು ಗೆದ್ದುಕೊಳ್ಳಲು ಸಹಕರಿಸಿದಾಗ, ಅರಸ ಸಾವುದರ ತಂದೆ ಇಬ್ನು ಸಾವುದನು ಯಾರೊಡನೆಯೂ ಸೇರದೆ ತಟಸ್ಥರಾಗಿ ಉಳಿದರು. ೧೯೨೦ರಲ್ಲಿ ಹುಸೇನರ ಮಕ್ಕಳು ಜೋರ್ಡಾನ ಮತ್ತು ಇರಾಕಗಳಲ್ಲಿ ತಳವೂರಿದಾಗ, ಅವರು ಹಜಾಕಜನ್ನು ಆಕ್ರಮಿಸಿ ದೊರಮಾಡಿದರು. ೧೯೩೨ರಲ್ಲಿ ಸೌದಿ ಅರೇಬಿಯಾ ಎಂಬ ಹೆಸರು ಈ ರಾಜ್ಯಕ್ಕೆ ಕೊಡಲ್ಪಟ್ಟಿತು.

ಪಾರ್ಸಿ ಕೊಲ್ಲಿಯಲ್ಲಿ ಎಣ್ಣೆಯ ಶೋಧವು ನಡೆದು, ೧೯೩೦ರಲ್ಲಿ ಕೆಲಿಫೋರ್ನಿಯಾದ ಸ್ಟಾಂಡರ್ಡ್ ಎಣ್ಣೆ ಕಂಪೆನಿಗೆ ಕೆಲವೊಂದು ಸವಲತ್ತುಗಳು ಕೊಡಲ್ಪಟ್ಟವು. ಮುಂದೆ, ಈ ಕಂಪೆನಿಯು ಟೆಕ್ಸಾಸ್ ಕಂಪೆನಿಯೊಡನೆ ವಿಲಯನಗೊಂಡಿತು. ಬಹಳ ಪ್ರಮಾಣದಲ್ಲಿ ಎಣ್ಣೆಯು ದೊರೆತುದರಿಂದ ಈ ಉದ್ಯಮವು ದಿನೇ ದಿನೇ ಬೆಳೆದು ಬಂತಲ್ಲದೇ ಇದು ಎಣ್ಣೆಯ ಉಗಮ ಸ್ಥಾನಗಳಲ್ಲಿ ಪ್ರಭಾವದಲ್ಲಿ ಇದು ಐದನೆಯ ಸ್ಥಾನವನ್ನು ಗಳಿಸಿದೆ.

ಸಂಯುಕ್ತ ಅರಬ ರಾಷ್ಟ್ರವು ನಿರ್ಮಾಣಗೊಂಡದಿಂದ, ಸೌದಿ ಅರೇಬಿಯದ ಮೇಲೂ ಇದರ ಪ್ರಭಾವವು ಬಿತ್ತು. ರಾಜನ ಸೋದರ ಎಮಿರ ಫೈಸಲರಿಗೆ ರಾಜ್ಯ ಸಾಕ್ಯವೂ ವರ್ಗಾಂತರಿಸಲ್ಪಟ್ಟಿತು. ಇವರು ಸಾಮಾನ್ಯವಾಗಿ ಈಜಿಪ್ತ್‌ಕ್ಕೆ ಪರವಾದ ಭಾವನೆಯುಳ್ಳವರು. ಸೌದಿ ಅರೇಬಿಯ ಮತ್ತು ಸಂಯುಕ್ತ ಅರಬರಾಜ್ಯದ ಪರಾಧಿಕಾರಿಗಳ ನಡುವೆ ಅನೇಕ ಮಾತುಕತೆಗಳು ನಡೆದಿದ್ದು ಸಂಯುಕ್ತ ಅರಬ ರಾಜ್ಯಗಳಲ್ಲಿ ಸೌದಿ ಅರೆಬಿಯವೂ ಸೇರಿಕೊಳ್ಳುವ ಜಜ್ಞಾಸೆಯು ಹೆಚ್ಚುತ್ತ ಬಂದು ಇಮೂ ಒಂದು ಫೆಡರಲ್ ರಾಜ್ಯವಾಗುವ ಸಾಧ್ಯತೆಯು ಹೆಚ್ಚಿದೆ.

ಇರಾಕಲ್ಲಾದ ಪ್ರಜಾ ವಿದ್ರೋಹ ಹಾಗೂ ಮಧ್ಯಪೂರ್ವದಲ್ಲಿ ದಿನೇ ದಿನೇ ಬೆಳೆಯುತ್ತಿರುವ ಪಾಶ್ಚಾತ್ಯ ಪ್ರಭಾವದಿಂದ ದೂರವಿರಲು ಸ್ವತಂತ್ರ ಮನೋಭಾವನೆಯು ಅರಬ ರಾಷ್ಟ್ರಗಳಲ್ಲಿ ಒಂದು ವಿಶೇಷ ಪರಿಸ್ಥಿತಿಯನ್ನು ತಂದಿರುತ್ತದೆ. ಹಾಗಿರುವಾಗ, ಈ ಅರಬ ರಾಷ್ಟ್ರಗಳು ಪಾಶ್ಚಾತ್ಯ ಪ್ರಭಾವದಿಂದ ದೂರವಿರಲು ಬಯಸುತ್ತಿರುವುದಕ್ಕೆ ಇದಿಗ ಅಲ್ಲಿ ಎದ್ದಿರುವ ಸ್ವತಂತ್ರ ಭಾವನೆಯೇ ಒಂದು ದ್ಯೋತಕವಾಗಿದೆಯೆಂದು ಹೇಳಬಹುದು.

(ಮುಂದಿನವಾರ: ಟರ್ಕಿ)

ನೋವುಗಳ ತತ್ಕ್ಷಣ ಸಂಹಾರಣೆ.

ಅಮೃತಾಂಜನ

ನಿಮಗಾಗಿ ನಮ್ಮಲ್ಲಿ ನೂರಾರು ನುರಿತ ಕಾರಕೂನರಿದ್ದಾರೆ!

"ಕೊಪ್ಪೊರೇಶನ್" ಬೇಂಕಿನಲ್ಲಿ ನೀವು ಒಂದು ಹಣಖಾತೆಯನ್ನು ತೆರೆದಿರೆಂದರೆ, ನಮ್ಮ ಬೇಂಕಿನ ಕಾರಕೂನರು ನಿಮ್ಮದೇ ಕಾರಕೂನರಾವಂತೆ. ಕಾರಣ, ಅವರು ನಿಮಗಾಗಿ ನಿಮ್ಮ ಹಣದ ಲೆಕ್ಕವನ್ನು ಕನ್ನಡಿಯಂತಿಟ್ಟುಕೊಂಡು, ನಿಮಗೆ ಬೇಕಾದ ವಿವರಗಳನ್ನು ನೀವು ಬಯಸಿದಾಗ ಕೊಡಲು ಸದಾ ಸಿದ್ಧರು!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ ಭಾರತ)

(ಮೈಸೂರು ರಾಜ್ಯದಲ್ಲಿ ಸ್ಥಳಾನ ಕಚೇರಿಗಳನ್ನಿಟ್ಟುಕೊಂಡಿರುವ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಇದು ಅತಿ ಪಳೆಯದು.)

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಅಭಿಪ್ರಾಯ

ನಗರಗಳೊಡನೆ ಗ್ರಾಮಗಳ ಉದ್ಧಾರವನ್ನೂ ಕೈಗೊಳ್ಳಬೇಕು

ಭಾರತದಲ್ಲಿಂದು ಭೂರಹಿತ ಕೃಷಿಕರ ಸಮಸ್ಯೆಯೂ ಒಂದು ಮಹಾ ಮಾರಿಯಾಗಿದೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ದೇಭಾರರು ರಾಷ್ಟ್ರೀಯ ವಿಕಾಸ ಯೋಜನೆಗಳ ಸಿದ್ಧಾಂತಗಳನ್ನು ಪುನರ್ವಿಚಾರ ಮಾಡುವ ಮತ್ತು ಯೋಜನೆಗಳ ಸಂಬಂಧದಲ್ಲಿ ಕೃಷಿ, ಔದ್ಯೋಗಿಕ ದೃಷ್ಟಿಕೋನವನ್ನು ಸ್ವೀಕರಿಸಬೇಕಾದ ಅವಶ್ಯಕತೆಯ ಬಗ್ಗೆ ಸೂಚಿತ ಒತ್ತಿ ಹೇಳಿದರು.

ಕಾಂಗ್ರೆಸ್ ಮಹಾಸಭೆಯ ಮುಖಪತ್ರವಾದ 'ಇಕಾನಮಿಕ್ ರಿವ್ಯೂ' ಎಂಬ ಪತ್ರಿಕೆಯಲ್ಲಿ ಶ್ರೀ ದೇಭರು 'ಭಾರತದ ಭೂರಹಿತ ಕೃಷಿಕರ ಸಮಸ್ಯೆ' ಎಂಬ ಲೇಖನವನ್ನು ಬರೆದು ನೇಲಿನ ವಿಚಾರವನ್ನು ಪ್ರಸ್ತಾಪಿಸಿರುತ್ತಾರೆ. ಈ ಲೇಖನವು ಆಲೋಚನಾತ್ಮಕ ಮತ್ತು ವಿಚಾರೋತ್ಪಾದಕವಾಗಿದೆ.

ಅವರು ತನ್ನ ಲೇಖನದಲ್ಲಿ ಹೇಳಿರುವ ವಿಷಯಗಳು ಹೀಗಿವೆ: ಸೈದ್ಧಾಂತಿಕ ದೃಷ್ಟಿಯಿಂದ ಎರಡನೇ ಪಂಚವಾರ್ಷಿಕ ಯೋಜನೆಯ ರೂಪರೇಷೆ ಮತ್ತು ಕಲ್ಪನೆಗಳ ಮೇಲೆ ಯಾವುದಕ್ಕೂ ಜಿಪತ್ತು ಒದಗುವುದಿಲ್ಲ. ಇಷ್ಟು ಮಾತ್ರವಲ್ಲದೆ ದೇಶದ ಪ್ರಚಲಿತ ವಾತಾವರಣದಿಂದಾಗಿ ಈ ದೃಷ್ಟಿಯು ಸರಿಸಮಾನವಲ್ಲ ಎಂದು ತಿಳಿದುಬರುವುದು. ಈ ಯೋಜನೆಯಲ್ಲಿ ತೀವ್ರ ಔದ್ಯೋಗೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಈಯಲಾಗಿದೆ.

ದೇಶದ ನಾಯಕರ ಚಲನೆಯಲ್ಲಿ ಇಂದು ದೊಡ್ಡ ದೊಡ್ಡ ಆಣೆಕಟ್ಟುಗಳ ರಚನೆ, ದೊಡ್ಡ ದೊಡ್ಡ ಯೋಜನೆಗಳು ಮತ್ತು ದೊಡ್ಡ ದೊಡ್ಡ ಔದ್ಯೋಗಿಕ ಕಾರ್ಯಕ್ರಮಗಳ ಕಲ್ಪನೆಗಳು ಮನೆ ಮಾಡಿವೆ. ನಾವು ನಮ್ಮ ನಾಯಕರಲ್ಲಿ ನಿರುತ್ಸಾಹ ಮತ್ತು ನಿರಾಶೆಯನ್ನು ಹುಟ್ಟಿಸಲು ಆಶಿಸುವುದಿಲ್ಲ. ಆದರೆ ಈ ದೃಷ್ಟಿ ಕೋಣವನ್ನು ನಮ್ಮದನ್ನಾಗಿಸಿಕೊಳ್ಳುವುದರಿಂದ ಒಂದು ತಥ್ಯದ ಉಪೇಕ್ಷೆಯಾಗುತ್ತದೆ. ಆ ತಥ್ಯವಾವುದೆಂದರೆ ಭಾರತಕ್ಕೆ ಅತುಲ ಹಾಗೂ ವಿಪುಲ ಯೋಜನೆಗಳ ಅವಶ್ಯಕತೆ ಇದೆ. ಈ ಯೋಜನೆಗಳಲ್ಲಿ ಉದ್ಯೋಗ ಪುತ್ತು ನೀರಾವರಿಗಳ ವಿಕಾಸಕ್ಕೆ ಆದ್ಯತೆ ಹಾಗೂ ಸಮಾನ ವ್ಯವಸ್ಥೆ ಇರಬೇಕು ಮಾತ್ರವಲ್ಲ ಈ ಯೋಜನೆಗಳಿಂದ ಹೆಚ್ಚು ಹೆಚ್ಚು ವ್ಯಕ್ತಿಗಳಿಗೆ ಜೀವನದ ಪೂರೈಕೆಯಾಗಬೇಕು.

ನಮ್ಮ ಗ್ರಾಮಗಳಲ್ಲಿ ವಾಸಿಸುವ ಅಧಿಕ ಸಂಖ್ಯೆಯ ಜನಶಕ್ತಿಯ ಪ್ರಯೋಜನವನ್ನು ಇಂದು ನಾವು ಪಡೆಯುತ್ತಿಲ್ಲ ಮಾತ್ರವಲ್ಲ ಇಂತಹ ನಿಷ್ಪ್ರಯೋಜಕವಾಗುವ ಜನಶಕ್ತಿಯು ಹೆಚ್ಚುತ್ತಾ ಹೋಗುತ್ತಿದೆ. ಆದಕ್ಕಾಗಿ ಯೋಜನೆಯು ಸಂಬಂಧದಲ್ಲಿ ನಮ್ಮ ದೃಷ್ಟಿಕೋಣವು ಕೃಷಿ ಹಾಗೂ ಕೈಗಾರಿಕೆ ಎರಡರ ಕಡೆಗೂ ಹರಿಯಬೇಕಾಗಿದೆ. ಎಂದು ದೇಭಾರರು ಅಭಿಪ್ರಾಯಪಟ್ಟಿದ್ದಾರೆ.

ಅಖಿಲ ಭಾರತೀಯ ಕೃಷಿ ಶ್ರಮಿಕ ಸಂಘದ ವಿಸ್ತೃತ ವಿವರಣೆಯಲ್ಲಿ ದೇಶದಲ್ಲಿ ಇಂತಹ ಭೂರಹಿತ ಕೃಷಿಕರಿರುವರೆಂದು ಹೇಳಲಾಗಿದೆ. ಈ ಭೂರಹಿತ ವೈತರ ಆರ್ಥಿಕ ಸ್ಥಿತಿಯು ತುಂಬಾ ಹೀನವಾಗಿದೆ. ಆದುದರಿಂದ ದೊಡ್ಡ ಸ್ಪ್ರಮಾಣದಲ್ಲಿ ಔದ್ಯೋಗೀಕರಣವ ಯೋಜನೆಯನ್ನು ರಚಿಸುವ ಸಮಯದಲ್ಲಿ ನಾವು ತುರು ಯೋಚಿಸಬೇಕಾಗಿದೆ. ಈ ಕಾಲ ಹಳ್ಳಿಗಳ ಜನಶಕ್ತಿಯ ಉಚಿತ ಉಪಯೋಗವಾಗಿವೆಯೇ? ಕೃಷಿಯ ಕಚ್ಚಾ ಮ್ಯಾಲುಗಳ ಉಪಯೋಗವನ್ನು ಮಾಡುವ ಉದ್ಯೋಗಗಳಲ್ಲಿ ಎಲ್ಲಾ ಭೂರಹಿತ ಕೃಷಿಕರಿಗೆ ಜೀವನದ ವ್ಯವಸ್ಥೆ ಆಗಿದೆಯೇ? ಎಂದು ಯೋಚಿಸಬೇಕು.

ಗ್ರಾಮೀಣ ಜನರು ತಮ್ಮ ಜೀವನದ ಸುಟ್ಟವನ್ನು ಪಡೆದುಕೊಳ್ಳುವ ಅವಕಾಶ ಕೊಡಬೇಕಾದಾಗ ಸಾಮಾಜಿಕ, ಆರ್ಥಿಕ, ಮತ್ತು ಪ್ರತಿ ಒಂದು ಇತರ ದೃಷ್ಟಿಯಿಂದಲೂ ಸಟ್ಟಣ ಮತ್ತು ಹಳ್ಳಿಗಳ ಭೇಧವನ್ನು ಕಡಿಮೆ ಮಾಡಬೇಕು. ನಾವು ಯಾವುದೇವರೂ ವೆಚ್ಚದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ನೋಡುತ್ತೇವೆ. ಆದುದರಿಂದ ನಮ್ಮ ಕರ್ತವ್ಯವು ಇಲ್ಲಿ ಇದೆ. ನಾವು ವೈಜ್ಞಾನಿಕ ಮತ್ತು ವಿಧಿವತ್ತಾದ ಸ್ಪ್ರಗತಿಯು ಸೂರ್ಣ ಪ್ರಯೋಜನವಾಗುವುದೋ ಇಲ್ಲವೋ ಎಂದು ನೋಡಬೇಕು. ನನ್ನು ವೈಜ್ಞಾನಿಕ ಸ್ಪ್ರಗತಿಯ ಅನುಪಾನದಿಂದ ಲೇ ಗ್ರಾಮೀಣ ಜನತೆಯ ಪ್ರಾಥ ಶಿಕ್ಷಣದ ವ್ಯವಸ್ಥೆಯಾಗಬೇಕಾಗಿದೆ. ಉದ್ಯಾನವನೆಯ ಕೊಡುಗೆ ಮತ್ತು ಉತ್ಪಾದಕರ ಕೌರಲದ ವಿಕಾಸವು ಸಮಾನ ರೂಪದಿಂದಾಗಬೇಕು.

ಮಹಾಯೋಜನೆಗಳ ನೆಪದಲ್ಲಿ ಕೇವಲ ನಗರಗಳ ಜನರಪ್ಪಷ್ಟೇ ಗಣಿಸದೆ, ದೇಶದ ಸಮಸ್ತ ನಾಗರಿಕರ ಉದ್ಧಾರವನ್ನೂ ನಾವು ಅನುಲಕ್ಷಿಸಿ ದೃಡಿಯ ಬೇಕಾಗಿದೆ.

ಆಲಾಸ್ಕಾದ ಗವರ್ನರರ ಮನೆಯು ರಾಜಧಾನಿ ಜೆನೇಯುದಲ್ಲಿದ್ದು ಸೂರು ಮಾಳಿಗೆ ಗಳಿಂದಲೂ ಮೂರನ್ನು ಕೋಣೆಗಳಿಂದಲೂ ಕೂಡಿಕೊಂಡಿದೆ. ಸದ್ಯದ ಗವರ್ನರ ೪೮ ವರ್ಷ ಪ್ರಾಯದ ಸೈಪೊಪಿಜೆರು ತಮ್ಮ ಮಡದಿ ಮತ್ತು ೨ ಮಕ್ಕಳೊಂದಿಗೆ ನೆಡೆಯುತ್ತಿರುವುದನ್ನು ಇಲ್ಲಿ ಕಾಣಬಹುದು.

ಅಲಾಸ್ಕಾ

ಅಮೇರಿಕೆಯೊಡನೆ ಸೇರುವುದಕ್ಕೆ ಅಲಾಸ್ಕೆ ಒಪ್ಪಿತು

ಒಂದು ಕಾಲದಲ್ಲಿ ಹಿಮಕರಡಿಗಳ ನೆಲೆವೀಡಾಗಿದ್ದ ಅಲಾಸ್ಕ ಇಂದು ಹಣ ತರುವ ನಾಡಾಗಿದೆ! ಪಾಪ, ಅಮೆರಿಕೆಗೆ ಮಾರಿದ ರಶ್ಯನರಿಗಿದು ಗೊತ್ತಿತ್ತೆ?

ಅಲಾಸ್ಕಾದ ಜನತೆಯು ಅತ್ಯಧಿಕ ಬಹುಮತದಿಂದ, ಎಂದರೆ ಒಂದಕ್ಕೆ ಐದರಂತೆ, ಅಲಾಸ್ಕಾವನ್ನು ಸಂಯುಕ್ತ ಸಂಸ್ಥಾನಗಳ ಭಾನೆಯ ರಾಜ್ಯವಾಗಿ ಸೇರಿಸಿಕೊಳ್ಳುವುದಕ್ಕೆ ಮತದಾನವನ್ನು ಮಾಡಿತು. ಈಗ ಉಳಿದಿರುವ ಕೆಲಸವೆಂದರೆ, ಸಾರ್ವತ್ರಿಕ ಚುನಾವಣೆಯ ಫಲಿತಾಂಶವನ್ನು ದೃಢೀಕರಿಸುವುದು ಮತ್ತು ಅಧ್ಯಕ್ಷ ಐಸನ್‌ಹಾವರರು ಹೊಸ ರಾಜ್ಯದ ನಿರ್ಮಾಣದ ಬಗ್ಗೆ ಘೋಷಣೆ ಮಾಡುವುದು ಮಾತ್ರ.

ಅಲಾಸ್ಕಾದ ಸೇರ್ಪಡೆಯಿಂದ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳ ಒಕ್ಕೂಟಕ್ಕೆ ೫೭,೬೬,೪೦೦ ಚದರ್ ಮೈಲುಗಳ ಹೊಸ ಭೂಭಾಗ ಸಿಕ್ಕಿತು. ಎಂದರೆ ಇಂದಿನ ೪೮ ರಾಜ್ಯಗಳ ಒಟ್ಟು ವಿಸ್ತೀರ್ಣದ ಒಂದು ಐದನೆಲ್ಲೊಂದು ಭಾಗವು ಹೆಚ್ಚಿಗೆ ದೊರೆತಂತಾಗುವುದು. ಸಂಯುಕ್ತ ರಾಷ್ಟ್ರಗಳಲ್ಲಿನ ವಿಸ್ತೃತ ಸಂಸ್ಥಾನಗಳಲ್ಲಿ ಟೆಕ್ಸಾಸ್ ಪಡೆದಿದ್ದ ಸ್ಥಾನವನ್ನು ಇನ್ನು ಮುಂದೆ ಅಲಾಸ್ಕೆವು ಅಪಹರಿಸುವುದು. ಆದರೆ, ಅಲಾಸ್ಕೆವು ಕೇವಲ ಎರಡು ಲಕ್ಷ ಜನರಿಂಗೆ ಮಾತ್ರ ಕೂಡಿರುವುದರಿಂದ ಜನ ಸಂಖ್ಯೆಯಲ್ಲಿ ಇದು ಅತಿ ಕೆಳಗಿನ ಸ್ಥಾನವನ್ನಲಂಕರಿಸುವುದು. ಇನ್ನರಲ್ಲಿ ನೂರಾಲ್ಲೊಂದು ಪಾಲು ಜನರು, ಎಸ್ಕಿಮೋ, ಅಲ್ಯೂಟ್ ಮತ್ತು ಅನೆರಿಕೆಯ ಭಾರತೀಯ ಸಂಗಡಕ್ಕೆ ಸೇರಿದ ದೇಶೀಯ ವರ್ಗದವರು. ಅಲಾಸ್ಕೆದ ಆರ್ಥಿಕ ಜೀವನದಲ್ಲಿ ಇವರು ಸ್ವಭಾವತಃಲೇ ಪಾತ್ರವನ್ನು ವಹಿಸುತ್ತಿರುವರು. ಉಳಿದ ಎರಡಂಶದವರು ಅಧಿಕ ಸಂಖ್ಯಾತ್ಮಕ ವಿದೇಶೀಯ ಜನಿತ ವರ್ಗದವರಾದ ಸ್ಕೇಂಡಿನೇವಿಯನ್ನರು ಮತ್ತು ಕೆಲವು ರಶ್ಯನರು ಹಾಗೂ ಅಲ್ಲಿಯೇ ಬೆಳೆದ ಅಮೆರಿಕನರು — ಈ ಜಾತಿಯವರಾಗಿದ್ದಾರೆ.

ಮೂರು ಕಡೆಯಲ್ಲಿಯೂ ಸಮುದ್ರಗಳಿಂದ ಪರಿವೇಷ್ಟಿತವಾಗಿರುವ ಆಲಾಸ್ಕೆವು ಪ್ರಾಕೃತಿಕ ಸಂಪತ್ತಿನಿಂದ ಅಡಕವಾಗಿದೆ. ಇದ್ದಲು, ಚಿನ್ನ, ತಾಮ್ರ, ಪ್ಲಾಟಿನಮ್, ಕ್ರೋಮೈಟ್, ಸೀಸ, ತಾಮ್ರ, ಟಂಗ್ಸ್‌ಟೆಲಿಯಮ್, ಮೊದಲಾದ ಖನಿಜಗಳೂ ಅರಣ್ಯ ಸಂಪತ್ತು ಹಾಗೂ ವಿಪುಲ ಗಾರಿಕೆಯೂ ಕೂಡಿಕೊಂಡಿವೆ. ಮನೋಹರವಾದ ಸೌಂದರ್ಯ ಸಹಿತ ದೃಶ್ಯಗಳು, ಸುಂದರ ಪರ್ವತಗಳು, ಉದ್ವಮಾದ ರಮಣೀಯ ಸಮುದ್ರ ಕರಾವಳಿ ಹಾಗೂ ಹವ್ಯಾನದಿಗಳು ಪ್ರೇಕ್ಷಕರಿಗೆ ಹೃದಯಾನಂದಕರವಾಗಿವೆ. ಸ್ವಯಂಪ್ರೇರಿತ ಉದ್ದೇಶಕ್ಕಾಗಿ ವರ್ಷಂಪ್ರತಿ ಸಾವಿರಾರು ಜನರು ಇಲ್ಲಿಗೆ ಬರುತ್ತಾರೆ. ಮೀನು ಹಿಡಿಯುವುದಕ್ಕೆ, ಸರ್ವ

(ಕನೇ ಪುಟ ನೋಡಿರಿ)

ನೋಟೀಸು
ಹೆಗ್ಗುಂಜೆ ಪಂಚಾಯತು ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ ೧೫/೧೯೫೮. ಎನ್, ಚಂದಯ್ಯ ಹೆಗ್ಡೆ — ವಾದಿ
ಬಸವ ಹಾಂಡ ಕೂಡಾ .. ಪ್ರತಿವಾದಿಯರು ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದವರು.

ಸದ್ರಿ ವ್ಯಾಜ್ಯವು ತಾ. 25-10-1958ಕ್ಕೆ ಪ್ರತಿವಾದಿಯರ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಸದ್ರಿ ದಿವ್ಸ ಹಾಜರಾಗಿ ಉದಹರಿಸಿ ತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರು ಯುಕ್ತ ಕಂಡಂತೆ ದಾವೆಯನ್ನು ತೀರ್ಮಾನಿಸಲಾದೀತು.

Sd)H. Kristappa Shervegar
President, Panchayat Court,
Heggunje.

Dated 4—10—58.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ ಶ್ರೀ. ಕೊರಡ್ಡಯ ಶ್ರೀನಿವಾಸರಾಯರಿಂದ ವಿರಚಿತವಾದ—

ನುಡಿಪಥಮ್ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ವೈಜ್ಞಾನಿಕ ಕ್ಷೇತ್ರ

ಕಾರ್ಕಳದಲ್ಲಿ ರಾಸಾಯನಿಕ ಸಂಶೋಧನಾ ಸಂಸ್ಥೆ

ಭಾರತದಲ್ಲಿಯೂ ವೈಜ್ಞಾನಿಕ ಕ್ಷೇತ್ರದಲ್ಲಿ ಪ್ರಗತಿ ಕಾಣುವುದು ಸಾಧ್ಯವಾಗಿದೆ

ಭಾರತದ ಆಗ್ನೇಯ ತೀರದಲ್ಲಿ ಮದ್ರಾಸ್ ಮೋಟಿಯ ಹತ್ತಿರ ಮಂಡಪಂನಲ್ಲಿರುವ ಕೇಂದ್ರ ವಿದ್ಯುತ್-ರಾಸಾಯನಿಕ ಸಂಶೋಧನೆ ಸಂಸ್ಥೆಯು ಲೋಹಗಳಿಗೆ ತುಕ್ಕು ಹಿಡಿಯುವ ಸಂಬಂಧದಲ್ಲಿ ಹಲವು ಪ್ರಯೋಗಗಳನ್ನು ನಡೆಸುತ್ತಿದೆ. ದೊಡ್ಡ ಹಡಗಿನಿಂದ ಹಿಡಿದು ಸಣ್ಣ ಗುಂಡು ಸೂಜಿಯ ವರೆಗೆ ಎಲ್ಲಾ ಲೋಹವಸ್ತುಗಳಿಗೂ ನಿರಂತರವಾಗಿ ತುಕ್ಕು ಒಂದು ಮಾರಕವಾಗಿರುವುದು

ಈ ಸಂಶೋಧನ ಸಂಸ್ಥೆಯನ್ನು ೧೯೫೫ ರ ಜನವರಿ ತಿಂಗಳಲ್ಲಿ ಕಾರ್ಕಳಕುಡಿಯಲ್ಲಿ ಸ್ಥಾಪಿಸಲಾಯಿತು. ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನ ಪರಿಷತ್ತು ಸ್ಥಾಪಿಸಿದ ರಾಷ್ಟ್ರೀಯ ಪ್ರಯೋಗಾಲಯಗಳಲ್ಲಿ ಇದೇ ಅತ್ಯಂತ ಕಿರಿಯ ಪ್ರಯೋಗಶಾಲೆ. ದೇಶದಲ್ಲಿ ಜಲಜನಿತ ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ತೀವ್ರಗತಿಯ ಅಭಿವೃದ್ಧಿಯ ಗುತ್ತಿರುವುದರಿಂದ ವಿದ್ಯುತ್-ರಾಸಾಯನಿಕ ಸಂಶೋಧನೆಗಾಗಿ ಪ್ರತ್ಯೇಕವಾದ ಸಂಸ್ಥೆಯೊಂದನ್ನು ಸ್ಥಾಪಿಸುವುದರ ಅಗತ್ಯವನ್ನು ಈ ಪರಿಷತ್ತು ಮನಗಂಡಿತು. ವಿದ್ಯುತ್ ರಾಸಾಯನಿಕ ಸಂಶೋಧನ ಸಂಸ್ಥೆಯು ತೆಗೆದುಕೊಂಡ ಮೊದಲನೆಯ ಕಾರ್ಯವೇ ತುಕ್ಕು ನಿರೋಧಕ್ಕೆ ಸಂಬಂಧಪಟ್ಟ ಪ್ರಯೋಗಗಳು.

ಪ್ರಥಮತಃ ಮೆಷೀನ್ ಟೂಲ್‌ಗಳು, ವಿದ್ಯುಚ್ಛಕ್ತಿ ವಸ್ತುಗಳು, ಬೈಸಿಕಲ್‌ಗಳು ಮೋಟಾರುಗಾಡಿ, ಕೋಚ್‌ಗಳು ಮತ್ತು ಹಡಗುಗಳ ನಿರ್ಮಾಣ ಹಾಗೂ ಲೋಹ ತಡಗುಗಳ ಕೈಗಾರಿಕೆಗಳು—ಈ ಉದ್ಯಮಗಳ ಸಮಸ್ಯೆಗಳನ್ನು ಪರಿಶೀಲಿಸಲಾಯಿತು. ಈ ಉದ್ಯಮಗಳು ಪ್ರತಿವರ್ಷ ೩೫೦ ಕೋಟಿ ರೂಪಾಯಿಷ್ಟು ಬೆಲೆಬಾಳುವ ಲೋಹ ವಸ್ತುಗಳನ್ನು ಉತ್ಪಾದಿಸುತ್ತವೆ. ದ್ವಿತೀಯ ಯೋಜನೆಯ ಅವಧಿಯಲ್ಲಿ ಈ ಕೈಗಾರಿಕೆಗಳು ಆದಷ್ಟು ಅಭಿವೃದ್ಧಿಗೊಳ್ಳುವ ನಿರೀಕ್ಷೆಯಿರುವುದು

ಕಾರ್ಕಳಕುಡಿ ಸಂಶೋಧನ ಸಂಸ್ಥೆಯಲ್ಲಿ ನಡೆಸಿದ ಪೂರ್ವಭಾವಿ ಪ್ರಯೋಗಗಳಿಂದ, ತುಕ್ಕನ್ನು ನಿರೋಧಿಸುವುದಕ್ಕಾಗಿ ಬಳಸಲು ಅನುಕೂಲವಾಗುವಂತಹ ವಿವಿಧ ರಾಸಾಯನಿಕ ಸಂಯೋಜಕ ವಸ್ತುಗಳು ಸಿದ್ಧಗೊಂಡವು. ಈ ರಾಸಾಯನಿಕ ಸಂಯೋಜಕ ವಸ್ತುಗಳನ್ನು ಎಲ್ಲಾ ಪರಿಸ್ಥಿತಿಗಳಲ್ಲಿಯೂ ಉಪಯೋಗಿಸುವ ಬಗ್ಗೆ ಪರೀಕ್ಷಾ ಪ್ರಯೋಗಗಳನ್ನು ಈ ಸಂಶೋಧನ ಸಂಸ್ಥೆ ನಡೆಸುತ್ತಿದೆ

ತುಕ್ಕನ್ನು ನಿರೋಧಿಸುವ ಕೆಲಸವೊಂದನ್ನೇ ಈ ಸಂಸ್ಥೆಯು ಕೈಗೊಂಡಿಲ್ಲ. ವಿದ್ಯುತ್ ರಾಸಾಯನಿಕ ಕೈಗಾರಿಕೋದ್ಯಮಗಳಿಗೆ ಸಂಬಂಧಪಟ್ಟ ತಾಂತ್ರಿಕ ಜ್ಞಾನವನ್ನು ಅಭಿವೃದ್ಧಿಪಡಿಸುವುದೂ ಸಂಸ್ಥೆಯ ಮುಖ್ಯ ಕೆಲಸಗಳಲ್ಲೊಂದಾಗಿರುವುದು. ದೇಶದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನಾ ಸಾಮರ್ಥ್ಯವು ದ್ವಿತೀಯ ಯೋಜನೆಯಲ್ಲಿ ೬೦ ಲಕ್ಷ ಕಿಲೋವ್ಯಾಟ್‌ಗಳಷ್ಟು ಹೆಚ್ಚುವುದರಿಂದ ವಿದ್ಯುಚ್ಛಕ್ತಿಯು ಲಭ್ಯವಾಗುವ ಪ್ರಮಾಣವು ಹೆಚ್ಚಾಗುವುದು ಆದ್ದರಿಂದ ವಿದ್ಯುತ್-ರಾಸಾಯನಿಕ ಸಂಸ್ಥೆಗಳಿಗೆ ಉಜ್ವಲ ಭವಿಷ್ಯವಿರುವುದು. ಭಾರತದಲ್ಲಿರುವ ಪ್ರಮುಖ ವಿದ್ಯುತ್—ರಾಸಾಯನಿಕ ಕೈಗಾರಿಕೆಗಳು ಕ್ಷಾರೀಯ ರಾಸಾಯನಿಕ ವಸ್ತುಗಳು, ರಾಸಾಯನಿಕ ಗೊಬ್ಬರಗಳು, ಅಲ್ಯೂಮಿನಿಯಂ, ಉಕ್ಕು, ಕಬ್ಬಿಣದ ಮಿಶ್ರಲೋಹ ಮತ್ತು ಕಬ್ಬಿಣೇತರ ಲೋಹಗಳ ಕೈಗಾರಿಕೆಗಳು, ಕಾರ್ಕಳಕುಡಿ ಸಂಸ್ಥೆಯಲ್ಲಿ ನಡೆಸುವ ಸಂಶೋಧನೆಗಳಿಂದ ಈ ಕೈಗಾರಿಕೋದ್ಯಮಗಳಿಗೆ ನೇರವಾದ ಪ್ರಯೋಜನ ದೊರೆಯುವುದು

ಅಲಾಸ್ಕದ ರಾಜಧಾನಿಯಾದ ಜುನೇಯುವು ರಷ್ಯಾ ಸಾಮ್ರಾಜ್ಯಕ್ಕಿಂತಲೂ ತಡಿಮೆ ಜನಸಂಖ್ಯೆಯುಳ್ಳದು. ಇದು ಶಾಂತಿನಗರದ ಪಡಪಲ್ಲಿನಿ. ಇದರ ಹಿಂಡಿ ೪ ಸಾವಿರ ಅಡಿ ಎತ್ತರವಾದ ಶಖರತ ಶ್ರೇಣಿಯಿರುವುದನ್ನೂ ಕಾಣಬಹುದು

ವಿದ್ಯುತ್-ರಾಸಾಯನಿಕ ಉದ್ಯಮದಲ್ಲಿ ಎಲ್ಲಕ್ಕಿಂತಲೂ ಮಹತ್ವ ಪೂರ್ಣವಾದುದೆಂದರೆ, ಎಲೆಕ್ಟ್ರೋಲಿಟಿಕ್ ಸೆಲ್' ಲೋಹಗಳ ಅಥವಾ ಲೋಹ ವಿಶ್ರಣಗಳು, ರಾಸಾಯನಿಕ ಪದಾರ್ಥಗಳನ್ನು ಶುದ್ಧಗೊಳಿಸಲು ಅಥವಾ ಪ್ರತ್ಯೇಕಗೊಳಿಸಲು ಹಾಗೂ ವಿದ್ಯುಚ್ಛಕ್ತಿಯನ್ನು ಸಂಗ್ರಹಿಸಲು ಈ ಸೆಲ್‌ಗಳನ್ನು ಉಪಯೋಗಿಸಲಾಗುವುದು ಆದರೆ ಎಲ್ಲಾ ಬಗೆಯ ಕೆಲಸಗಳಿಗೂ ಒಂದೇ ರೀತಿಯ 'ಸೆಲ್'ಗಳು ಸರಿ ಹೋಗುವದಿಲ್ಲ. ಯಾವ ಕೆಲಸಕ್ಕಾಗಿ ಯಾವ 'ಸೆಲ್'ನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ತಿಳಿಯಲು ಹಾಗೂ ಅಂತಹ ಸೆಲ್'ಗಳನ್ನು ತಯಾರಿಸಲು ಸಂಶೋಧನೆಗಳನ್ನು ಈ ಸಂಸ್ಥೆಯು ನಡೆಸುತ್ತಿದೆ

ಈ ಪ್ರಯೋಗ ಶಾಲೆಯು ಎಲೆಕ್ಟ್ರೋಲಿಟಿಕ್ ಸೆಲ್ ವಿಭಾಗವು, ಸ್ವದೇಶದಲ್ಲಿ ದೊರೆಯುವ ಅಗ್ಗವಾದ ವಸ್ತುಗಳಿಂದ ತಯಾರಿಸಬಹುದಾದಂತಹ 'ಸೆಲ್'ನ್ನು ಸಂಶೋಧಿಸಿದೆ. ಪ್ರೊಫೆಸರ್ ಹಾಗೂ ತಂಡ ಮತ್ತು ತಂತ್ರ ವಿಜ್ಞಾನದವರು ಈ ಸೆಲ್‌ಗಳ ಪರೀಕ್ಷೆಯನ್ನು ನಡೆಸುತ್ತಿರುವರು. ಇದರಿಂದ ಪೂರ್ಣ ಉಪಯೋಗವೂ ದೊರೆತಿದೆ. ಈಗ ಈ 'ಸೆಲ್'ಗಳನ್ನು ದೊಡ್ಡ ದೊಡ್ಡ ಪ್ರಮಾಣದಲ್ಲಿ ತಯಾರಿಸಲಾಗುತ್ತಿದೆ. ಈ ವಿಜ್ಞಾನಗಳಲ್ಲಿ ಭವಿಷ್ಯದಲ್ಲಿ ಇದೇ 'ಸೆಲ್'ಗಳನ್ನು ಬಳಸುವ ನಿರೀಕ್ಷೆಯಿರುವುದು. ಈ 'ಸೆಲ್' ವೈಶಿಷ್ಟ್ಯವೆಂದರೆ, ಈ ಸೆಲ್‌ನಲ್ಲಿ ಧನದ್ರವ (ಅನೋಡ್)ಕ್ಕೆ ವಿಶೇಷ ರಕ್ಷಣೆ ಮಾಡಿಕೊಂಡ ಬಹು ಬೆಲೆಯ ಸತುವಿಗೆ ಬದಲು ಸ್ವದೇಶದಲ್ಲಿಯೇ ದೊರೆಯುವ ಅಲ್ಯೂಮಿನಿಯಂ ಮತ್ತು ಮೆಗ್ನೀಷಿಯಂ ಲೋಹಗಳನ್ನು ಉಪಯೋಗಿಸಬಹುದು. ಅದೂ ಅಲ್ಪವಿದೆ ಹೆಚ್ಚು ಬೆಲೆಯ ಅಯೋನಿಯಂ ಕ್ಲೋರೈಡ್‌ಗೆ ಬದಲು, ಅಡಿಗೆ ಉಪ್ಪಿನ ದ್ರಾವಣವನ್ನು ಉಪಯೋಗಿಸಬಹುದು

ಆಹಾರ ವಸ್ತುಗಳಿಗೆ ರುಚಿ ಹಾಗೂ ಕುಡಾ ಸನೆಯನ್ನು ನೀಡುವ ರಾಸಾಯನಿಕ ವಸ್ತುಗಳು, ಔಷಧಗಳಿಗೆ ಉಪಯುಕ್ತವಾಗುವ ರಾಸಾಯನಿಕ ವಸ್ತುಗಳು, ಬಣ್ಣ ಹಾಕುವ ಹಾಗೂ ಸುಗಂಧ ದ್ರವ್ಯಗಳಿಗೆ ಬೇಕಾಗುವ ಉತ್ತಮ ರಾಸಾಯನಿಕ ವಸ್ತು (ಪೈನ್ ಕೆಮಿಕಲ್ಸ್)ಗಳನ್ನು ತಯಾರಿಸುವ ಬಗೆಗೆ ಈ ಸಂಸ್ಥೆಯು ಅನೇಕ ಪ್ರಯೋಗಗಳನ್ನೂ ನಡೆಸುತ್ತಿದೆ ಈ ರಾಸಾಯನಿಕ ವಸ್ತುಗಳನೇಕವನ್ನು ನಾವೀಗ ಹೊರದೇಶಗಳಿಂದ ತರಿಸಿಕೊಳ್ಳುತ್ತಿದ್ದೇವೆ ವಿದ್ಯುತ್ ರಾಸಾಯನಿಕ ವಿಧಾನದಿಂದ ಅವುಗಳನ್ನು ನಾವು ಅಗ್ಗವಾಗಿಯೂ ಪರಿಶುದ್ಧ ವಿಧಾನದಿಂದಲೂ ತಯಾರಿಸಬಹುದು.

(ಎಸ್ ಪುಟ ನೋಡಿರಿ)

PUBLICATION

ಉಡುಪಿ ತಾಲೂಕು ನೀಲಾವರ ಗ್ರಾಮದ ಕುಂಜಾಲಲ್ಲಿರುವ ಮಂಜಪ್ಪ ಶೆಟ್ಟಿಗಳ ಮಗಳು ಕಮಲ ಇವರಿಗೆ ಲಕ್ಷ್ಮೀ ಹೆಂಗ್ಸಿಗೆ ತಾಲ್ಲೂಕು ಮಂಜೂರು ಬೇಕಾದಿ ಗ್ರಾಮದಲ್ಲಿರುವ ಸುಬ್ರಾಯ ಸಾವಂತರ ಮಗ ಲಕ್ಷ್ಮಣ ಸಾವಂತನು ಈ ಮೂಲಕ ತಿಳಿಯಪಡಿಸುವುದೇನೆಂದರೆ ನಾನು ೨೧ ನೀನು ಈಗ ಸುಮಾರು ೩೦ ವರ್ಷಗಳ ಹಿಂದೆ ನಮ್ಮ ಜಾತಿ ರಿವಾಜು ಪದ್ಧತಿ ಪ್ರಕಾರ ನುಡುವೆಯಾಗಿದ್ದು ನುಡುವೆ ಸನುಯ ನಾನು ನಿನಗೆ ಮೂಡ್ತಿಯಾಕರುವ ರುಪ್ಯಾ 1000 ಮೌಲ್ಯದ ಚಿನ್ನಾಭರಣಗಳನ್ನು ಕೂಡಾ ನೀನು ನಿನ್ನ ತಂದೆ ತಾಯಿಯು ಗಂಡಿನ ಬಗ್ಗೆ ಆವಂಗೆ ಕೊಟ್ಟರುವುದಲ್ಲದೆ ನೀನು ಕೂಡಾ ನನ್ನ ಜೀತಕ್ಕೆ ಪ ಷ್ಟಕ್ಕೆ ವಿರೋಧವಾಗಿ ವರ್ತಿಸುತ್ತಿದ್ದು ದುರ್ನಡತೆಗೆ ಬಳಪಟ್ಟು ನಿನ್ನ ಇಚ್ಛಾನುಸಾರದಂತೆ ನಡೆದು ಈಗ ಸುಮಾರು ೪ ವರ್ಷಗಳ ಅಗ್ಯಾತು ನನ್ನಲ್ಲಿಗೆ ಬಾರದೆ ಅನೇಕಾವರ್ತಿ ನಾನು ಸ್ವತಃ ಪ ರ್ಸಹ ಸ್ಥರ ಮುಖಾಂತ್ರ ನನ್ನಲ್ಲಿಗೆ ಬರಬೇಕಾಗಿ ನಿನ್ನ ಕೂಡೆ ಕೇಳಿಕೊಂಡಾಗ್ಯೂ ನೀನು ನಿರಾಕರ್ಸಿರುವುದರಿಂದ ನಿನ್ನ ವ ನನ್ನ ದಾಂಪತ್ಯವನ್ನು ಈ ಮೂಲಕ ಅಂತ್ಯಪಡಿಸಿರುತ್ತೇನೆ. ಇನ್ನು ನಿನಗೂ ನನಗೂ ಯಾವ ತರದ ಸಂಬಂಧವೂ ಇರುವದಿಲ್ಲ ಅಲ್ಲದೆ ನೀನು ನನ್ನಿಂದ ಯಾವ ತರಬೆ ನಿವೃತ್ತಿ ಹೊಂದುವಳೆಯೂ ಅರ್ಜಿಯಲ್ಲಿ ನಿನ್ನ ವ ನಿನ್ನ ನುಡುನೆಯನ್ನು ಈ ಮೂಲಕ ರದ್ದುಪಡಿಸಿರುತ್ತೇನೆಂತ ಸಹಾ ಈ ಮೂಲಕ ತಿಳಿಯಪಡಿಸಿರುತ್ತೇನೆ.

● ಈ ನಡ ಹೆಬ್ಬೆಟ್ಟಿನ ಗುರುತು
ಲಕ್ಷ್ಮಣ ಸಾವಂತನ ರುಜು.

ಬೇಕಾದಿ D 6—10—58

ಜನಪ್ರಿಯ ಪುಸ್ತಕದನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳಬೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ

ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ. ೨—೦—೦ (ಟಿ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ್, ಉಡುಪಿ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P 50/58

ಶ್ರೀಮತಿ ಪವ್ವಾನತಿ ಅನ್ನು ಅರ್ಜಿದಾರಳು ಮತ್ತು

ವಿ ಈಶ್ವರಯ್ಯ—ಎದ್ರಿರು

ಅರ್ಜಿದಾರಳು ಇಂದಿಯನ್ ಸಕ್ಸೆಶನ್ ಆಕ್ಟಿನ ೩೭ನೆಯ ಕಲಂ ೩೦ರ ಪ್ರಕಾರ ರಾಮಕುಂಜ ವಿರಿಯಿಂಟಿಲ್ ಸೈಸ್ಕೂಲಿನಲ್ಲಿ ಮಾಸ್ತರರಾಗಿದ್ದ ಮತ್ತು ತಾ ೨೫—೪—೫೮ ರಲ್ಲಿ ಮೃತಪಟ್ಟ ಎಸ್ ಗೋಪಾಲಕೃಷ್ಣ ಭಟ್ಟರ ಪಾಡಿಯನ್ನರ ಹೆಣ್ಣನ ಪ್ರೊವಿಜಿಂಟ್ ಸರ್ಟಿಫಿಕೇಟು ಮತ್ತು ಉಜ್ರೆ ಕೋಆರ್‌ಟಿವ್ ಬ್ಯಾಂಕ್‌ನಲ್ಲಿರುವ ಏನೇಜುಗಳಿಗೂ ವಾರಸು ಹಕ್ಕಿನ ಸರ್ಟಿಫಿಕೇಟಿಗೆ ಅರ್ಜಿ ಮಾಡಿರುತ್ತಾರೆ ಮುನಾಜನರಲ್ಲಿ ಯಾರಿಗಾದರೂ ಆಕ್ಷೇಪಣೆ ಇದ್ದರೆ ತಾ ೨೦—10—58ಕ್ಕೆ ಮುಂದ್ವಾಗಲೇ ಎ ವಕೀಲ್ ಮುಖಾಂತರವಾಗಿ ಲೇ ಪ್ರಾಜರಾಗತಕ್ಕದ್ದು ತಿಳಿದಿರಲಿ.

(By order of the Court)

ಕೆ ರಾಮಕೃಷ್ಣ,
ಎಡ್ವೋಕೇಟ್, ಪುತ್ತೂರು.

ಪುತ್ತೂರು, 25—9—58

ಸುಳ್ಳು ಸುಡಿಯುವುದರಿಂದ ನಿನಗೆ ಲಕ್ಷ ಕೊನ್ನು ಸಂಪಾದನೆ ಯಾಗುವುವಾದರೂ ಅದು ಒಳ್ಳೆಯದಲ್ಲ; ಧರ್ಮ ಮತ್ತು ನ್ಯಾಯ ಮಾರ್ಗದಿಂದ ಸಂಪಾದಿಸಿದ ಒಂದು ಚಿಕ್ಕಾಸಾದರೂ ಕಳ್ಳತನ ಮತ್ತು ಪಾಪಾಚಾರಗಳಿಂದ ಗಳಿಸಿದ ಕೋಟಿ ನಾಣ್ಯಗಳಿಗಿಂತಲೂ ಅಮೂಲ್ಯ ವಾದುದು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೬	೯-೧೦-೧೯೫೫	೬

ವಿಜಯೋ ಪ್ರಸಾದ

ಪೌರ್ವಾತ್ಯ ರಾಷ್ಟ್ರಗಳ ಸಾಲಿನಲ್ಲಿ ಗಣಿಸಲ್ಪಡುತಿದ್ದರೂ ತಮ್ಮ ದೇಶಪ್ರೇಮ, ಕಾರ್ಯನಿಷ್ಠೆ, ಸ್ವಾಭಿಮಾನಗಳಿಂದ ಪಾಶ್ಚಾತ್ಯ ರಾಷ್ಟ್ರ ಕೂಟದ ಯಾವುದೇ ದೇಶಕ್ಕೆ ಕಡಿಮೆಯಿಲ್ಲವೆಂಬುದನ್ನು ಕಳೆದ ಲೋಕ ಯುದ್ಧದ ಹಾಗೂ ಆ ಮೇಲಿನ ಸಮಯದಲ್ಲಿ ಲೋಕಕ್ಕೆ ತೋರಿಸಿಕೊಟ್ಟ ಜಪಾನವು ಇಂದು ಪ್ರಪಂಚದ ಅತಿ ಪ್ರಧಾನ ರಾಷ್ಟ್ರಗಳಲ್ಲಿ ಒಂದಾಗಿದೆ. ನೂರಾರು ಚಿಕ್ಕ ಮೊಡ್ಡ ದ್ವೀಪ ಸಮೂಹದಲ್ಲಿರುವ ಜಪಾನಿನ ಭೂಮಿಯು ಏರು ತಗ್ಗುಗಳಿಂದ ಕೂಡಿದ್ದರೂ ಪರಿಶ್ರಮ ಪ್ರೇಮಿ ಜಪಾನೀಯರು ಸುಧಾರಿತ ವಿಧಾನದ ಕೃಷಿಯಿಂದ ಅಧಿಕ ಲಾಭವನ್ನು ಸಂಪಾದಿಸುತ್ತಾರೆ. ಅನ್ಯದೇಶಗಳಿಂದ ಕಚ್ಚಾ ಮೂಲುಗಳನ್ನು ತರಿಸಿ, ಅವುಗಳಿಂದ ಒಷಧಿ ವಸ್ತುಗಳನ್ನು ನಿರ್ಮಿಸಿ ತಮ್ಮ ಉದ್ದಿಮೆಯಲ್ಲಿ ಯಶಸ್ಸು ಪಡೆಯುತ್ತಾರೆ ಅಲ್ಪ ಖರ್ಚಿನಲ್ಲಿ ಮಹತ್ ಆಯವನ್ನು ಗಿಟ್ಟಿಸುವ ಕಲೆ ಜಪಾನೀಯರಲ್ಲಿದೆ. ಇಲ್ಲವಾದರೆ, ದ್ವಿತೀಯ ಜಾಗತಿಕ ಯುದ್ಧದ ಮೇಳೆ ಸಂಪೂರ್ಣವಿಪರ್ಯಾಸಗೊಂಡಿದ್ದ ಸನ್ನದ್ಧ ಜಪಾನವು ಮತ್ತು ಕೆಲವೇ ವರ್ಷಗಳಲ್ಲಿ ಸಂಪದ್ಭರಿತವಾಗುತ್ತಿರಲಿಲ್ಲ.

ಇಂತಹ ಶ್ರಮಿಕರ, ದೇಶಪ್ರೇಮಿಗಳ ತವರೂರಾದ ಜಪಾನಕ್ಕೆ ಭಾರತದ ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರು ಸಂದರ್ಶನವಿತ್ತು ಸ್ವದೇಶಕ್ಕೆ ಮರಳಿರುವರು. ಬೌದ್ಧ ಮತಪುಗಮಸ್ಥಾನವಾದ ಭಾರತದ ಅಗ್ರಗಣ್ಯ ನಾಯಕರು ಬೌದ್ಧ ಮತೀಯರೇ ಅಧಿಕರಾಗಿರುವ ಜಪಾನಕ್ಕೆ ತೆರಳಿ, ಅಲ್ಲಿ ಅಹಿಂಸೆ, ಸತ್ಯ ಹಾಗೂ ಶಾಂತಿಯ ಬಗ್ಗೆ ಉಪದೇಶಮಾಡಿದಾರೆ. ಜಪಾನೀಯರು ಧರ್ಮಪ್ರೇಮಿಗಳೂ ಹೌದು. ಎಂತಲೇ ಭಾರತ ಮತ್ತು ಜಪಾನಗಳ ನಡುವೆ ಹಿಂದಿನಿಂದಲೂ ಸಂಬಂಧವಿತ್ತು. ಭಾರತದ ರಾಷ್ಟ್ರಪತಿಗಳು ಮೊತ್ತಮೊದಲಿಗೆ ಸಮುದ್ರದಾಚೆ ವಿದೇಶೀ ಸಂಚಾರ ಕೈಗೊಂಡಿದ್ದರೂ ಜಪಾನೀಯರ ಸ್ನೇಹಭರಿತ ಆದರಣೆಯಿಂದ, ಈ ಸಂದರ್ಶನೆಯು ಇತಿಹಾಸ ದೃಷ್ಟಿಯಿಂದ ಪ್ರಮುಖವಾಗುವುದು. ಗೌತಮ ಬುದ್ಧನ ಹುಟ್ಟೂರಾದ ಭಾರತವು ಪವಿತ್ರ ಭೂಮಿಯೆಂದು ಜಪಾನೀಯರು ತಿಳಿಯುತ್ತಾರೆ. ಹಿಂದೊಮ್ಮೆ ಭಾರತದಿಂದ ರಕ್ಷಿಸಿದ ಬೋಸರನ್ನು ಗಡಿಪಾರು ಮಾಡಿದಾಗ, ಜಪಾನವು ಅವರಿಗೆ ಆಶ್ರಯವಿತ್ತಿತ್ತು. ಸುಭಾಸಚಂದ್ರ ಬೋಸರು ಪಾಶ್ಚಾತ್ಯರಿಗೆ ವಿರುದ್ಧವಾಗಿ ಹೋರಾಡಲು ತೊಡಗಿದ ಹೋರಾಟದಲ್ಲಿಯೂ ಅವರು ಜಪಾನೀಯರಿಂದ ಸಹಾಯ ಪಡೆದಿದ್ದರು. ದ್ವಿತೀಯ ಲೋಕಯುದ್ಧದಲ್ಲಿ ಭಾಗವಹಿಸಿದ ಅಂದಿನ ಜಾಪ್ ಪ್ರಧಾನಿ ತೋಯೋ ಹಾಗೂ ಇತರ ಕೆಲ ಧುರೀಣರು ತಲೆಯುಳಿಸಿಕೊಳ್ಳಲು ಮಿಲಿಟರಿ ವಿಚಾರಣಾ ಸಮಿತಿಯು ಸದಸ್ಯರಾಗಿದ್ದ ಭಾರತೀಯರಾದ ಶ್ರೀ ರಾಧಾವಿನೋದ ಪಾಲರ ನಿಷ್ಪಕ್ಷಪಾತಿತನವೇ ಆಗಿತ್ತು. ಹೀಗೆ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮತ್ತು ರಾಜಕೀಯವಾಗಿ ಸಹಸ್ರಾರು ವರ್ಷಗಳಿಂದ ಭಾರತ-ಜಪಾನುಗಳಲ್ಲಿ ಮೈತ್ರಿಯು ಬೆಳೆದುಬಂದಿದೆಯೆಂಬುದನ್ನು ಮರೆಯುವಂತಿಲ್ಲ. ಏಶ್ಯದ ಆತಿಪೂರ್ವದಲ್ಲಿದ್ದು, ಪ್ರತಿನಿತ್ಯ ಎಲ್ಲರಿಗಿಂತ ಮೊದಲು ಸೂರ್ಯದೇವನ ದರ್ಶನವನ್ನು ಮಾಡುವ ಜಪಾನೀಯರು ನಿಷ್ಕಲ್ಮಶವನದವರು—ಶಾಂತಿ ಪ್ರಿಯರು; ಜೀವನಾಶಕ್ಕೆ ಒಪ್ಪದವರು. ಈ ಕಾರಣದಿಂದಲೇ ದ್ವಿತೀಯ ಲೋಕ ಯುದ್ಧದಲ್ಲಿ ಅಣು ಬಾಂಬುಗಳ ಅತೀವ ಹಾವಳಿಯನ್ನು ತಡೆಯಲಾರದೆ ಆದು ಶರಣು ಬಂದಿತು. ಭಾರತವೂ ಶಾಂತಿ ಮಂತ್ರ—ಪಂಚಶೀಲಗಳನ್ನೇ ನೆಮ್ಮಿರುವ ರಾಷ್ಟ್ರ. ಆದುದರಿಂದ ಹಿಂದಿನಿಂದಲೂ ಕೂಡಿ ಬಂದಿದ್ದ ಆ ಸಂಬಂಧವು ಇದೀಗ ಇನ್ನೂ ಬಲವಾಗುತ್ತಿದೆ. ಇದಕ್ಕೆ ಭಾರತದ ರಾಷ್ಟ್ರಪತಿಗಳ ಸಂದರ್ಶನವೊಂದು ಪೂರಕಾಂಶ ಮಾತ್ರ.

ಭಾರತ—ಜಪಾನುಗಳ ನಡುವೆ ಕೆಲವೊಂದು ಭಿನ್ನಾಭಿಪ್ರಾಯವಿದ್ದರೂ ಅವು ಸಹಜವೇ ಆಗಿದೆ. ಜಪಾನವು ಭಾರತದ ಯೋಜನೆಗಳಿಗೆ ಇನ್ನೂ ಬೆಂಬಲವನ್ನೂ ಸಹಾಯವನ್ನೂ ಇತ್ತಿದೆ; ಇನ್ನು ಮುಂದಕ್ಕೂ ನೀಡಲು ಸಿದ್ಧವಿದೆ. ಭಾರತದ ಅಭ್ಯುದಯವನ್ನು ಬಯಸುವವರಲ್ಲಿ ಜಪಾನೀಯರೂ ಸೇರಿದ್ದಾರೆ. ಅಹಿಂಸೆಯ ತತ್ವವನ್ನು ಸಾಲಿಸಿದ ಮಹಾತ್ಮಾ ಗಾಂಧಿಯವರ ಅನುಯಾಯಿಯಾದ ಡಾ| ಪ್ರಸಾದರಿಗೆ ಜಪಾನದ ವಿಶ್ವವಿದ್ಯಾಲಯಗಳೆರಡು ಗೌರವ ಡಾಕ್ಟರೇಟ್ ಪದವಿಗಳನ್ನಿತ್ತು ಗೌರವಿಸಿದುವು. ಎಲ್ಲೆಲ್ಲೂ ವೈಭವಪೂರ್ಣವಾದ ಸ್ವಾಗತವು ದೊರೆಯಿತು. ರಾಷ್ಟ್ರಪತಿಗಳು ಜಪಾನೀಯರ ವಿನಯಶೀಲತೆ, ಕಾರ್ಯದಕ್ಷತೆ, ಸದಾಚಾರನಿಷ್ಠೆಗಳಿಗೆ ಮಾರುಹೋದರು. ಜಪಾನೀ ಪದ್ಧತಿಯ ಬೇಸಾಯಕ್ರಮ, ಕೈಗಾರಿಕಾ ಕ್ಷೇತ್ರಗಳಲ್ಲಿ ಜಪಾನು ಇದೀಗ ಸಾಧಿಸಿದ ಅಸಾಧ್ಯ ಸಾಧನೆಗಳನ್ನು ಕಂಡು ಡಾ| ಪ್ರಸಾದರು ಸಂತೋಷಭರಿತರಾದರು. ಭಾರತದಲ್ಲಿ ಇಂದು ಎದ್ದುತೋರುತ್ತಿರುವ ಆಹಾರ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಮತ್ತು ಗ್ರಾಮಕಲ್ಯಾಣದ ಬಗ್ಗೆ ಜಪಾನೀಯರ ಉದಾಹರಣೆಯಿಂದ ನಾವು ಸಾತ್ ಕಲಿತ ಕೊಳ್ಳಬೇಕಾಗಿದೆ. ಏಶ್ಯದ ಪ್ರಬಲ ಕಮ್ಯುನಿಷ್ಟೇತರ ರಾಷ್ಟ್ರಗಳಾದ ಭಾರತ ಮತ್ತು ಜಪಾನುಗಳು ಮೈತ್ರಿಯಿಂದ ಕೂಡಿ ಬಾಳಿದರೆ, ಹೀನದೆಸೆಯಲ್ಲಿಯೇ ಇನ್ನೂ ನರಳುತ್ತಿರುವ ಏಶ್ಯದ ರಾಷ್ಟ್ರಗಳನ್ನು ಒಂದು ಆದರ್ಶಪಥದಲ್ಲಿ ಕರೆದೊಯ್ದು ಪ್ರಗತಿ ಸಾಧಿಸುವಂತೆಗಳು ಸಮರ್ಥವಾಗಿತ್ತವೆಯೆಂಬುದು ಖಂಡಿತ. ಇಂತಹ ವಾತಾವರಣವು ಉತ್ಪನ್ನವಾಗುವುದಕ್ಕೆ ಉಭಯ ರಾಷ್ಟ್ರಗಳ ನಡುವಿನಲ್ಲಿರುವ ದಾದ ವಿಮಧ್ಯ ಧೋರಣೆಯು ದೂರವಾಗಬೇಕು. ಹೀಗೆ ಸತ್ಯ ಶೋಧನೆಯಿಂದ ನಿಳಬಿಕ್ಕೆ ತರುವ ಕಾರ್ಯದಲ್ಲಿ ಈ ರಾಷ್ಟ್ರಪತಿಯವರ ಭೇಟಿಯು ಜಯಪ್ರದವಾಗಿದೆಯೆಂದು ಹೇಳಿ ಬಹುದು. ಕಂಗೆಟ್ಟ ಏಶ್ಯದ ರಾಷ್ಟ್ರಗಳಿಗೆ ಜಪಾನ — ಭಾರತಗಳ ನವಸ್ನೇಹ ಸೂರ್ಯನ. ಪ್ರಕಾಶವನ್ನು ಬೀರಿ ಬೆಳಗಿ ಸಲಿ.

ಗಾಂಧಿ ಜಯಂತಿ

ಶಾಶ್ವತ ಶಾಂತಿಯ ಬಗ್ಗೆ ಗಾಂಧೀ ಮಾರ್ಗ ಮತ್ತು ಸಂಸ್ಕೃತಿಗಳ ಕುರಿತು ಅಮೂಲ್ಯ ಭಾಷಣಗಳು

ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ದಿನಾಂಕ ೩ ಮತ್ತು ೪ರಂದು ಗಾಂಧಿ ಜಯಂತಿಯು ಆಚರಿಸಲ್ಪಟ್ಟಿತು. ಮೊದಲ ದಿನ ಡಾ| ಟಿ. ಎಂ. ಎ. ಪೈ ಅವರೂ ಎರಡನೆಯ ದಿನ ಶ್ರೀ ಟಿ. ಎ. ಪೈ ಅವರೂ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು.

ತನ್ನೆಯ ಪೂರ್ವಾಪ್ಹ ಕಾಲೇಜಿನ ವಿದ್ಯಾರ್ಥಿಗಳಿಂದ ಭಜನೆಯೊಂದಾಗಾಂಭವಾಗಿ ಪ್ರಿನ್ಸಿಪಲ್ ಎಚ್. ಸುಂದರ ರಾಯರ ಸ್ವಾಗತ ಭಾಷಣದೊಡನೆ ಕಾರ್ಯಕ್ರಮವು ಮೊದಲಾಯಿತು. ಶ್ರೀ ಜೆ. ಪಿ. ನಾರಾಯಣ ಮೂರ್ತಿಯವರು ಈ ಸಂದರ್ಭದಲ್ಲಿ ಮಾತಾಡುತ್ತ ಗಾಂಧೀಜಿಯವರ ಸರ್ವೋದಯ ತತ್ವದ ಆಕರಗಳನ್ನು ಎತ್ತಿ ತೋರಿಸಿದರು. ರಸ್ಕಿನರ ಲೇಬುಗಳೇ ಗಾಂಧೀಜಿಯವರ ಸರ್ವೋದಯ ತತ್ವದ ಪ್ರಧಾನ ಮೂಲವಾಗಿದೆ. ಸಾಮಾಜಿಕ ಅಧಿಕಾರಗಳಲ್ಲಿ ಸಮತೆ ಮತ್ತು ವೈಯಕ್ತಿಕ ಪರಿಶ್ರಮದಲ್ಲಿ ಎಲ್ಲರೂ ತತ್ವರಾಗಿರುವುದು—ಈ ಎರಡು ರಸ್ಕಿನರ ತತ್ವಗಳು ಗಾಂಧಿಜಿಯವರನ್ನು ಮಗ್ನರಾಗಿಸಿದುವು. ಇವುಗಳಲ್ಲಿ ರಸ್ಕಿನರ ಮೊದಲ ತತ್ವವು ಗಾಂಧೀಜಿಯವರಿಗೆ ಬಿಡುವಿಲ್ಲದ್ದೆ ಮೊದಲೇ ಜ್ಞಾತವಾಗಿತ್ತು. ವೈಯಕ್ತಿಕ ಪರಿಶ್ರಮವು ವಿಚಾರ ಮಾತ್ರ ರಸ್ಕಿನರ ಲೇಖನಗಳ ಅಧ್ಯಸನದ ಮೇಲೆ ಗಾಂಧೀಜಿಯವರ ವಿಚಾರ ಧಾರೆಯಲ್ಲಿ ಕ್ರಾಂತಿಯನ್ನೆಬ್ಬಿಸಿತು ಎಂದು ಶ್ರೀ ನಾರಾಯಣ ಮೂರ್ತಿಯವರು ಹೇಳಿದರು.

ಸಂಜೆಯ ಕಾರ್ಯಕ್ರಮದಲ್ಲಿ ಪ್ರೊ| ಎಂ. ಎ ವೆಂಕಟ ರಾವ್ ಅವರು ಮುಖ್ಯ ಭಾಷಣಕಾರರಾಗಿದ್ದರು. ಶ್ರೀ ಕು. ಶಿ. ಹರಿದಾಸ ಭಟ್ಟರು ನಕ್ಷತ್ರಗಳ ಪರಿಚಯ ಮಾಡಿಕೊಡುತ್ತ ಸಭಿಕರನ್ನು ಸ್ವಾಗತಿಸಿದರು. ಇಂದಿನ ಅಣು ಯುಗದಲ್ಲಿನ ಸಮಸ್ಯೆಗಳನ್ನು ಸಂಹರಿಸಲು ಭವಿಷ್ಯ ಕಾಲದಲ್ಲಿ ಆಸುರಸಲೇಬೇಕಾದ ಗಾಂಧೀಜೀ ಯೋಜನೆಯು ಬಗ್ಗೆ ಸೂಕ್ಷ್ಮ ಬಾಷ್ಯ ರೇಖೆಗಳನ್ನು ಶ್ರೀ ವೆಂಕಟ ರಾವ್ ಅವರು 'ಶಾಶ್ವತ ಶಾಂತಿಯ ಬಗ್ಗೆ ಗಾಂಧೀ ಮಾರ್ಗ' ವೆಂಬ ವಿಷಯದ ಕುರಿತು ಮಾತಾಡುತ್ತ ಎಳೆದರು. ಗಾಂಧೀಜಿಯ ಪರ ಅದ್ವಿತೀಯ ತತ್ವ ಅವರ ಧರ್ಮ, ಮಾನವತಾ ಪ್ರೇಮಗಳಲ್ಲಿ, ಕ್ರೂರ ರಾಕ್ಷಸ ಹಾಗೂ ಅನ್ಯಾಯಗಳ ವಿರುದ್ಧವಾಗಿ ಕೈಗೊಂಡ ಸತ್ಯಾಗ್ರಹ ತಂತ್ರಗಳನ್ನು ಪರಿಣಾಮಕಾರಿಯಾಗಿರುವುದಿಲ್ಲ. ಈ ಅಹಿಂಸಾ ತಂತ್ರದ ಮಹಶಕ್ತಿಯೆಯು, ಅಬಲರ ಉಪಾಸನೆಯೆಂದು ಈ ಸತ್ಯಾಗ್ರಹ ಮತ್ತು ಅಹಿಂಸೆಗಳನ್ನು ತಿಳಿವವರು ಕಂಡುಕೊಂಡಿಲ್ಲ. ಗಾಂಧೀಜಿಯವರು 'ಶಾಶ್ವತ' ನರ್ಗಕ್ಕೆ ಸೇರಿದವರು, 'ಸತ್' ಪದದಿಂದ ಸಾಧಿತವಾದ 'ಶಾಶ್ವತ' ವೆಂದರೆ ಬಲ ಮತ್ತು ಶಕ್ತಿಯಲ್ಲದೆ ಅಬಲತೆಯಲ್ಲ. ಪರಸ್ಪರ ಹೋರಾಡುವ ಯುದ್ಧ ತಂತ್ರಕ್ಕೆ ಈ ಸತ್ಯಾಗ್ರಹವೊಂದು ಶಕ್ತಿಶಾಲಿಯಾದ ನೈತಿಕ ಪೂರಕವಾಗಿದೆ. ಹೋರಾಟದ ಇಕ್ಕೆಡೆಗಳಲ್ಲಿಯೂ ಸತ್ಯಾನ್ವೇಷಣೆ ಮಾಡುವುದೇ ಗಾಂಧಿಯವರ ಪ್ರಥನ ಚಿಕಿತ್ಸೆ. ನುಂಬೆ, ಪಾಪ ಪನಲ್ಲಿರುವ ಸತ್ಯಪ್ರಯತ್ನೆಗೆ ಳಕಳಿಯ ಪುನಸ್ಸರಿಶೀಲನೆ ನಡೆಸುವುದು ಎಂದು ಶ್ರೀ ರಾವ್ ನುಡಿದರು. ಹಿಂಪಾರ್ಶ್ವದಲ್ಲಿ ಗಾಂಧೀಜಿ ಸ್ವೀಕರಿಸಿದ ಸಿದ್ಧಾಂತವನ್ನು ವಿಶ್ಲೇಷಿಸುತ್ತಾ ಯುದ್ಧವನ್ನು ಅಹಿಂಸಾತ್ಮಕವಾಗಿ ಎದುರಿಸಿದುದು ಸಾಧ್ಯವಿಲ್ಲ. ಆದರಿಂದಲೇ ಗಾಂಧಿಯವರು ಲಕ್ಷ್ಯಾಂತರ ಜನರ ಗಮನವನ್ನೆಳೆದರು ಎಂದರು. ಇಂದಿನ ಜಾಗತಿಕ ಹೋರಾಟಗಳಲ್ಲಿ ಲೋಕ ಶಾಂತಿಗಾಗಿ ಸ್ವೀಕರಿಸಲಬಹುದಾದ ಗಾಂಧೀ ಕಾರ್ಯಕ್ರಮಗಳ ಪರಿಚಯವನ್ನು ಕೊಡುತ್ತ ಸತ್ಯಸ್ಥಿತಿ ಸಿದ್ಧಕಾರದಿಂದಲೇ ಇವು ಕಾರ್ಯಕಾರಿಯಾಗಿಬಹುದು. ಈ ಜನರು ಕಮ್ಯೂನಿಸ್ಟರು ಪ್ರಜಾಪ್ರಭುತ್ವವಾದಿಗಳು ಜಾಗೂ ಇತರ ಜಾಗತಿಕ ಪಂಗಡಗಳ ನುಬು ಮಿಟ್ಟಗಳನ್ನು ನಿಸ್ಪಕ್ಷಪಾತವಾಗಿ ಅಧ್ಯಸಿಸುವರು ಪ್ರತಿ ಘಟನೆಯು ಹಿಂಗಡೆ ಗೊಂದಲಕ್ಕೆ ಬಿದ್ದಿರುವ ಸತ್ಯವನ್ನು ಹಗುರವಾಗಿ ನೈತಿಕವಾಗಿ ಅವರು ಪುನರ್ವಿಚಾರಕ್ಕಾಗಿ ದುಡಿಯುವರು, ದುಷ್ಟ ಶಕ್ತಿಗಳನ್ನೆದಿರಿಸಲು ಅವರು ಸತ್ಯಾಗ್ರಹವನ್ನು ಜೂಡುವರು. ಇಂತಹ ಕಾರ್ಯಕ್ರಮವು ತತ್ಕ್ಷಣ ಫಲಕಾರಿಯಾಗಲಾರದು ಆದರೆ, ಗಾಂಧಿಯವರ ರಾಜ್ಯೀಯ ಚಳವಳಿಯ ಸಂಘರ್ಷದಲ್ಲಿ ಅದಂತೆ ಶಾಶ್ವತ ಶಾಂತಿಗಾಗಿ ಗಾಂಧೀಮಾರ್ಗದಲ್ಲಿ ಅಧಿಕಾಧಿಕಸಂಖ್ಯೆಯಲ್ಲಿ ಬೆಂಬಲಿಗರು ಬಂದಾರು. ಎಂದು ಶ್ರೀ ರಾವ್ ಅವರು ಹೇಳಿದರು

ಡಾ| ಟಿ. ಎಂ. ಎ. ಪೈಯವರು ಗಾಂಧೀಜಿಯವರ ಚಿಕಿತ್ಸೆಯು ಸರಳವಾದುದಾದರೂ ಅವು ಸತ್ಯ ಸ್ಪರ್ಶಚಿಕಿತ್ಸೆಯನ್ನೂ ವಿಶಾಲ ಜಗತ್ತಿನ ಪ್ರತಿಘಟನೆಯನ್ನೂ ಮೀರಿ ಪ್ರಕಾಶಕ್ಕೆ ಬಂದಿವೆ ಎಂದು ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಚಂದಾದಾರರಲ್ಲಿ ವಿನಂತಿ

ಆಗಸ್ಟ್ ತಿಂಗಳಾಂತ್ಯಕ್ಕೆ 'ನವಯುಗ'ದ **37** ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ **38** ನೇ ವರ್ಷಾರಂಭವಾಗಿರುವುದಷ್ಟೆ! ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿಯಿರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಅವಶ್ಯ ಬೇಗನೇ ಕಳುಹಿಸಿಕೊಟ್ಟು, ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇನೆ. ಚಂದಾ ಹಣವನ್ನು ಯಾವ ತರದ ಖರ್ಚೂ ಇಲ್ಲದೆ 'ದಿ ಕೆನರಾ ಇಂಡಿಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟಿನ ಯಾವುದೇ ಶಾಖೆಯಲ್ಲಿ ನವಯುಗದ ಖಾತೆಗೆ ಕಟ್ಟಬಹುದು.

ವಿ. ಪಿ. ಮಾಡಿದರೆ ಹನ್ನೆರಡಾಣೆ ಹೆಚ್ಚಿಗೆ ಬೀಳುವುದರಿಂದ ಚಂದಾದಾರರು ಚಂದಾ ಹಣವನ್ನು ಮುಂದಾಗಿ ಕಳುಹಿಸಬೇಕಾಗಿ ವಿನಂತಿ. ಅಂತೂ ಸಕಾಲದಲ್ಲಿ ಚಂದಾ ಬಾರದಿದ್ದಲ್ಲಿ ನಾವು ಅನಿವಾರ್ಯವಾಗಿ ಕಳಿಸುವ ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ವಿಜ್ಞಪ್ತಿ.

ಮೆನೇಜರ್.

ಎರಡನೆಯ ದಿನ, ವಿದ್ಯಾರ್ಥಿ—ಅಧ್ಯಕ್ಷ ಶ್ರೀ ಶಂಕರ ಶೆಟ್ಟರು ಸಭಿಕರಿಗೆ ಮುಖ್ಯ ಭಾಷಣಕರ್ತರಾದ ಶ್ರೀ ಕೋದಂಡ ರಾವ್ ಅವರನ್ನು ಪರಿಚಯ ಮಾಡಿಕೊಟ್ಟರು. 'ಸಂಸ್ಕೃತಿ' ಎಂಬ ವಿಷಯದ ಬಗ್ಗೆ ಮಾತಾಡುತ್ತ ಶ್ರೀ ರಾವ್ ಅವರು ಆದಿ ಮಾನವನಿಂ ಎಲ್ಲಿ ಜಟುವಟಿಕೆಗಳ ರೂಪಗಳಿಂದ ಕೂಡಿದೆ ನಾವು ಅವನ್ನು ಯಾವ ಉಪಯೋಗವೂ ಇಲ್ಲದೆ, ವಿವಿಧ ಭಾಷಗಳಾಗಿ ವಿಂಗಡಿಸ.ತ್ತೀವಿ. ಈ ವಿಭಾಗಗಳೆಲ್ಲವನ್ನೂ ಸರಿಯಾಗಿ ಪರಿಶೀಲಿಸಿದಾಗ ಅವೆಲ್ಲವೂ ನೇರವಾಗುವುವು. ಆದರೆ, ಇಂದು ಈ ಭೇದಭಾವನೆಗಳು ಜನತೆಯಲ್ಲಿ ಬಹು ಆಳದ ವರೆಗೆ ಬೇರು ಬಿಟ್ಟು ಹೋಗಿವೆ. ಸಂಸ್ಕೃತಿಯೆಂಬುದು ಕುಲದಿಂದ ಬರುವುದಲ್ಲ ಅನಂತ್ಯಾಕ ಸಾಂಸ್ಕೃತಿಕ ಲಕ್ಷಣಗಳು ಬೇರೆ ಬೇರೆ ವ್ಯಕ್ತಿಗಳಿಂದ ಹೊಮ್ಮಿ ಜಗತ್ತಿನ ತುಂಬ ತರಡಿರುವುದನ್ನು ಕಾಣಬಹುದು ಸಂಸ್ಕೃತಿಯು ಕೆಲವು ವ್ಯಕ್ತಿ ಸಮೂಹದಲ್ಲಿ ಸಾನಾನ್ಯವಾಗಿರುವ ಮಟ್ಟಿಗೆ ಮಾತ್ರ ಸಾಮಾಜಿಕ ಬೆಲೆ ಸಹಿತವಾಗಿದೆ. ಒಬ್ಬ ವ್ಯಕ್ತಿಯು ಅಸಂಖ್ಯ ವಿಭಾಗಗಳಲ್ಲಿ ಕೂಡಿದವನಿರಬಹುದು. ಭೌತಿಕ ಮತ್ತು ವೈಜ್ಞಾನಿಕ ಸಾಂಸ್ಕೃತಿಕ ಲಕ್ಷಣಗಳು ಎಲ್ಲಿ ವ್ಯಕ್ತಿಗಳಲ್ಲೂ ಹರಡಲೇ ಬೇಕು. ಆದರೆ, ಸಾಹಿತ್ಯ ಮತ್ತು ಲಲಿತ ಕಲೆಗಳು ಮಾತ್ರ ಹೀಗಾಗಲಾಗವು. ಸಾಂಸ್ಕೃತಿಕ ಲಕ್ಷಣಗಳ ಮೇಲೆ ವ್ಯಕ್ತಿಗತ ಅಧಿಕಾರವನ್ನು ಪ್ರದರ್ಶಿಸುವುದರಿಂದಲೇ ಸಾಂಸ್ಕೃತಿಕ ಸಂಗ್ರಾಮವು ಪ್ರಚಲಿಸುವುದು. ಸಂಸ್ಕೃತಿಯನ್ನು ವಸ್ತುಗತ ಮತ್ತು ಅವಸ್ತುಗತವೆಂಬ ಎರಡು ಬಗೆಯಾಗಿ ವಿಂಗಡಿಸುತ್ತ ವಸುಗತ ಸಂಸ್ಕೃತಿಯು ಅಧಿಕಾರಕ್ಕೊಳಪಡಬಹುದೆಂದೂ ಅವಸ್ತುಗತ ಸಂಸ್ಕೃತಿಯು ಧರ್ಮ, ಕಲೆ, ವಿಜ್ಞಾನಗಳಿಂದ ಆಡಕವಾಗಿದ್ದು ಅದನ್ನು ಯಾರಿಂದಲೂ ತನ್ನ ಸೊತ್ತೆಂದು ಸಿಕೊಳ್ಳುವುದು ಅಸಾಧ್ಯವೆಂದೂ ಶ್ರೀ ರಾವ್ ಅಭಿಪ್ರಾಯಪಟ್ಟರು.

ಶ್ರೀ ಪಿ. ಕೋದಂಡ ರಾವ್ ಅವರು ಕಾಲೇಜಿನ ಅರ್ಥಶಾಸ್ತ್ರ ಮತ್ತು ಐತಿಹಾಸಿಕ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಭಾರತೀಯ ಸಂವಿಧಾನದ ಮೇಲೆ ಅವಲೋಕನವನ್ನು ಮಾಡಿದರು.

ಅಲ್ಲಲ್ಲಿಯ ಸುದ್ದಿಸಾರ

ಗಾಂಧೀ ಜಯಂತಿ

ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ತಾ. ೨ರಂದು ಶ್ರೀ ಪಿ. ಪಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಗಾಂಧೀ ಜಯಂತಿಯು ನೆರವೇರಿಸಲ್ಪಟ್ಟಿತು. ಪ್ರಿನ್ಸಿಪಾಲ್ ಕಾಲಗಿ ಶೇಷಾಚಾರ್ಯರು ಸ್ವಾಗತಿಸಿದರು. ಶ್ರೀ ಟಿ. ಎ. ಪೈಗಳು ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನು ಅನಾವರಣಮಾಡಿ ನಾವು ನಮ್ಮ ದೇಶಕ್ಕೆ ಯೋಗ್ಯವಾದ ಸಂಸ್ಕೃತಿಯನ್ನು ಉಳಿಸಿಕೊಂಡರೆ ಮಾತ್ರ ಪ್ರಗತಿ ಸಾಧ್ಯವೆಂದರು. ಬೆಂಗಳೂರಿನ ಪ್ರೊ. ಎಂ. ಎ. ವೆಂಕಟಪ್ಪಯ್ಯರು ಭಾಷಣಮಾಡುತ್ತಾ ಮಹಾತ್ಮರೊಬ್ಬರು ಕರ್ಮಯೋಗಿಗಳಾಗಿದ್ದರೆಂದೂ ಅವರು ಆತ್ಮಿಕಬಲದಿಂದ ಜಗತ್ತನ್ನೇ ಗೆದ್ದರೆಂದೂ ಅವರ ತತ್ವಗಳನ್ನು ಅನುಸರಿಸಬೇಕೆಂದೂ ಅವರ ತತ್ವವೇ ಶ್ರೇಷ್ಠವಾದುದೆಂದೂ ಹೇಳಿದರು. ಅಧ್ಯಕ್ಷರ ಭಾಷಣವಾದ ನಂತರ ಶ್ರೀ ವರದರಾಜ ಬಲ್ಲಾಳರು ಅಭಾರವನ್ನು ಸಲ್ಲಿಸಿದರು.

ಉಡುಪಿ ಮೋಡರ್ನ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಗಾಂಧೀ ಜಯಂತಿಯು ಶ್ರೀ ಬನ್ನಂಜೆ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ ಸಾಮೂಹಿಕ ಪ್ರಾರ್ಥನೆ, ಸತ್ಯಾಗ್ರಹ, ಧಾರ್ಮಿಕ ಗ್ರಂಥವಾಚನ, ಮಕ್ಕಳ ಭಾಷಣ ಮೊದಲಾದ ಕಾರ್ಯಕ್ರಮಗಳೊಂದಿಗೆ ಆಚರಿಸಲ್ಪಟ್ಟಿತು.

ಉಡುಪಿ ಅಂಚೆಕಚೇರಿ ಬುನಾದಿ ಪ್ರಾಥಮಿಕ ಶಾಲೆಯಲ್ಲಿ ಗಾಂಧೀಜಯಂತಿಯು ಸಂಭ್ರಮದಿಂದ ನೆರವೇರಿತು. ವಿದ್ವಾನ್ ಎ. ಶ್ರೀಪತಿ ತಂತ್ರಿಗಳು ಧ್ವಜಾರೋಹಣಮಾಡಿದರು. ವಿದ್ವಾನ್ ಪರಿವಾಸ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಹಲವರ ಭಾಷಣಗಳೂ ವಿದ್ಯಾರ್ಥಿಗಳಿಂದ ನಿಸೋವಾವಳಿಗಳೂ ನೆರವೇರಿದುವು. ಶ್ರೀ ಸೂರಪ್ಪ ಶೆಟ್ಟರು ಧನ್ಯವಾದಗಳನ್ನು ಆರ್ಪಿಸಿದರು.

ಕಿದಿಯೂರು ಹಾಯರ್ ಮತ್ತು ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ನಾರಾಯಣ ಬಲ್ಲಾಳರ ಅಧ್ಯಕ್ಷತೆಯಲ್ಲಿ ಚರಕಾ ಜಯಂತಿಯು ನಡೆಯಿತು. ಶ್ರೀ ಪುಂಡಲೀಕ ದೇವೆಯವರು ಧ್ವಜಾವತರಣೆಗೈದರು. ಧಾರ್ಮಿಕ ಗ್ರಂಥ ಪಠಣ, ಹಲವರ ಭಾಷಣಗಳಾದುವು.

ತಲ್ಲೂರು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಗಾಂಧೀ ಜಯಂತಿಯು ಶ್ರೀ. ಫಾ. ಥೋಮಸ್ ತೇವರ ಅಧ್ಯಕ್ಷತೆಯಲ್ಲಿ ಹಲವರ ಭಾಷಣ, ವಿನೋದಾವಳಿಗಳಿಂದ ನೆರವೇರಿಸಲ್ಪಟ್ಟಿತು.

ಕಡಿಯಾಳಿ ಹಿರಿಯ ಬುನಾದಿ ಶಾಲೆಯಲ್ಲಿ ಗಾಂಧಿ ಜಯಂತಿಯು ವಿವೇಕಾನಂದ ಸಮಾಜದ ಆಶ್ರಯದಲ್ಲಿ ಶ್ರೀ ಕೆ. ವಾಸು ಸೇರಿಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಸಾಮೂಹಿಕ ಸೂತ್ರಯಜ್ಞ, ಭಜನೆ, ಭಾಷಣಗಳೊಂದಿಗೆ ನೆರವೇರಿತು.

ವಾರ್ಷಿಕ ಮಹಾಸಭೆ— ಕೆಂಜೂರು ವಿನಿಯೋದ್ಯೋಗ ಸಂಘದ ಮಹಾಸಭೆಯು ತಾ. 28-9-55ರಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಕೆಂಜೂರು ಹಾ. ಎ. ಶಾಲೆಯಲ್ಲಿ ಜರಗಿ ಕಾರ್ಯದರ್ಶಿ ಶ್ರೀ ಯು. ನಾರಾಯಣ ಶೆಟ್ಟರು ಹಿಂದಿನ ಜೀಳಿದ 1954-1955ನೇ ಸಾಲಿನ ಪಡಿದ ಲೆಕ್ಕಪತ್ರ ರಿಪೋರ್ಟನ್ನು ಮಂಡಿಸಿದರು ಮತ್ತು ಸರ್ವಾನುಮತದಿಂದ ಅದನ್ನು ಅಂಗೀಕರಿಸಲಾಯಿತು. ಬಳಿಕ ಶ್ರೀ ಕೆ. ತಿಮ್ಮಪ್ಪ ಶೆಟ್ಟಿ ಕೆ. ಕಾರಪ್ಪ ಶೆಟ್ಟಿ ಎಸ. ಬಂಗೇರ ಮತ್ತು ಕೆ. ಗಣಪಯ್ಯ ಶೆಟ್ಟಿ, ಎಸ್. ನಾರಾಯಣ ಶೆಟ್ಟಿ ಇವರನ್ನು ಸಂಚಾಯತದಾರರನ್ನಾಗಿ ಆರಿಸಲಾಯಿತು.

ಸಾರ್ವಜನಿಕ ಸಭೆ:—ಇದೇ ತಾ. 2ರಲ್ಲಿ ಉಡುಪಿ ರಥಬೀದಿಯಲ್ಲಿ ಲೈಫ್ ಇನ್ಶೂರೆನ್ಸ್ ನಾಕರರ ಯೂನಿಯನಿನ ನೇತೃತ್ವದಲ್ಲಿ ಶ್ರೀ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾದ ಸಾರ್ವಜನಿಕ ಸಭೆಯಲ್ಲಿ ಅ.ಭಾ ಮಜದೂರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದತ್ತೋಪಂತ ಧೇಂಗಡಿಯವರು ಸ್ವತಂತ್ರ ಭಾರತದಲ್ಲಿ ಮಜದೂರ ಸಂಘಟನೆಯ ಕುರಿತು ಉಪನ್ಯಾಸನಿತ್ತರು.

ರೋಟರಿಸಭೆ:—ಉಡುಪಿ ರೋಟರಿ ಕ್ಲಬ್ಬಿನ ಸ್ಥಾನ್ಪಾತಿಕ ಸಭೆಯು ಮಣಿಪಾಲದ ಶ್ರೀ ಡಾ|| ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಪಿ. ಕೋದಂಡರಾಯರು ಸರಕಾರಿ ಆಡಳಿತೆಯ ಕುರಿತು ವಿಚಾರಪೂರ್ಣ ಭಾಷಣ ಮಾಡಿದರು ಶ್ರೀ ಟಿ. ಎ. ಪೈಗಳು ಸಾಮಾನ್ಯವಾಡಿದ ಮೇಲೆ ಕಾರ್ಯದರ್ಶಿ ಶ್ರೀ ರಮೇಶ ಪೈಗಳು ಧನ್ಯವಾದಗಳನ್ನಿತ್ತರು

ಸಂಕ್ಷಿಪ್ತ ಸುದ್ದಿಗಳು

ಚೀನೀಯರ ಉದಾರತೆ

ಕ್ವಿಮೋಯ ನಡುಗಡ್ಡೆ ಬಳ್ಳಿಗೆಯ ೧.೩೦,೦೦೦ ಸೈನಿಕರು ಮತ್ತು ಇತರ ನಾಗರಿಕರ ಮೇಲಿನ ಕರುಣೆಯಿಂದ ಚೀನವು ಕಳೆದ ಆರು ವಾರಗಳಿಂದ ಆದರ ಮೇಲೆ ಮಾಡುತಿದ್ದ ಗುಂಡಿನ ದಾಳಿಯನ್ನು ಒಂದು ವಾರದ ವರೆಗೆ ನಿಲ್ಲಿಸಿದೆಯೆಂದು ವರದಿಗಳು ಬಂದಿವೆ. ಈ ಅವಧಿಯಲ್ಲಿ ಚಿಯಾಂಗ ಕೈಶೇಕರ ಸರಕಾರವು ಈ ಪಡುಗುಡ್ಡೆಯಲ್ಲಿ ಉಪವಾಸ ಬೀಳುತ್ತಿರುವ ಜನರಿಗೆ ಆಹಾರವನ್ನು ಸರಬರಾಯಿ ಮಾಡಬಹುದೆಂದೂ, ಅಮೆರಿಕೆಯ ನೌಕಾಪಡೆಯ ರಕ್ಷಣೆ ಮಾತ್ರ ಅದಕ್ಕಿಂಬಾ-ದೆಂದೂ ಕರಾರು ಹಾಕಿದೆ. ಫಾರ್ಮೋಸಾದ ಜನತೆಗೆ ನವಚೀನದ ಸಂರಕ್ಷಣಾಮಂತ್ರಿ ಶ್ರೀ ಪೇಂಗತೆಹ್ ಹುವಾಯಿಯವರು ಕರೆ ಎತ್ತು, ಅಮೆರಿಕೆಯು ನಿನ್ನನ್ನು ನಡುನೀರಲ್ಲಿ ಕೈ ಬಿಡುತ್ತದೆ ಎಂದು ಭವಿಷ್ಯ ನುಡಿದರು. ಆಲ್ಲದೇ ನಾವಿಬ್ಬರೂ ಚೀನೀಯರೇ ಆಗಿರುವುದರಿಂ ಏಷಿಯಾಕೆಯು ನಮ್ಮ ಶತ್ರು ವಾಗಿದೆ ಎಂದು ಸಾರಿದರು.

ಉಪಯೋಗಕ್ಕೆ ಸಂಶೋಧನೆಗಳು

ರಾಷ್ಟ್ರದಲ್ಲಿ ಒಕ್ಕಲುತನ ಕ್ಷೇತ್ರದಲ್ಲಿ ಸಂಶೋಧನೆಗೆ ತೊಡಗಿರುವ ಸಂಶೋಧಕರು ಮತ್ತು ತಾಂತ್ರಿಕ ನಿಪುಣರು ತಮ್ಮ ಸಂಶೋಧನೆ ಗಳನ್ನು ತಾಂತ್ರಿಕ ನಿಪುಣತೆಯ ಲಾಭವು ಪ್ರತ್ಯಕ್ಷ ಕಾರ್ಯಕ್ಷೇತ್ರಕ್ಕೆ ದೊರೆಯುವಂತೆ ನೋಡಿಕೊಳ್ಳಬೇಕು; ಅಲ್ಲದೇ ರಾಷ್ಟ್ರವು ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಲು ಮತ್ತು ಹಣ ತರುವ ಬೆಳೆಗಳನ್ನು ಅಧಿಕವಾಗಿ ಉತ್ಪಾದಿಸಲು ನೆರವಾಗಬೇಕು ಎಂದ ಕೇಂದ್ರ ಆಹಾರ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರು ಭಾರತದಲ್ಲಿಯೇ ಮೊತ್ತ ಮೊದಲನೆಯದಾದ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಸ್ನಾತಕೋತ್ತರ ಶಾಲೆಯನ್ನು ಉದ್ಘಾಟಿಸಿ-ತ್ತ ಹೇಳಿದರು. ಸಂಶೋಧನೆಗಳು ಕೇವಲ ಸಂಶೋಧನಾಲಯಗಳಿಗೆ ಮಾತ್ರ ಪರಿಮಿತವಾದಲ್ಲಿ ಅವುಗಳ ಉಪಯುಕ್ತತೆಯು ಕುಂದುವುದೆಂದವರು ತಿಳಿಸಿದರು.

ಮಹಾಯುದ್ಧ ಅಸಂಭವ

ಪೂರ್ವ ಏಷ್ಯಾದ ಎಲ್ಲ ರಾಷ್ಟ್ರಗಳಿಗೂ ಶಾಂತಿಯಿಂದು ಬೇಕಾಗಿದೆ. ವಿಶಿಯ ಮತ್ತು ಅಭಿವೃದ್ಧಿಗಳ ರಾಷ್ಟ್ರಗಳ ಜನತೆಯಲ್ಲಿ ಜಾಗತಿಕ ಯುದ್ಧ ಸಂಭವಿಸುವುದೆಂಬ ಭಯವು ಹೆಚ್ಚುತ್ತಿರುವುದಾದರೂ ಅಲ್ಲೊಂದು ಇಲ್ಲೊಂದು ಚಿಕ್ಕ ಸ್ವರೂಪದ ಕಾರ್ಗ, ಶೀತ ಲಯುದ್ಧ ಛಭವಿಸ ಬಹುದಾದರೂ ಇಡಿ ಜಗತ್ತನ್ನೆ ಒಳಗೊಳ್ಳುವಂಥ ಜಾಗತಿಕ ಯುದ್ಧವು ಸಂಭವನೀಯವಲ್ಲವೆಂದೂ ಯಾವುದೇ ಶಕ್ತಿಕೂಟಕ್ಕೆ ಸೇರಿರದ ತಟಸ್ಥ ರಾಷ್ಟ್ರಗಳ ಸಂಖ್ಯೆಯನ್ನು ಹೆಚ್ಚಿಸುವುದು ಜಾಗತಿಕ ಯುದ್ಧ ನಿವಾರಣೆಯ ಉಪಾಯಗಳಲ್ಲಿ ಒಂದಾಗಿದೆಯೆಂದೂ ಶ್ರೀ ಜಯಪ್ರಕಾಶನಾರಾಯಣರು ತಮ್ಮ ವಿದೇಶ ಸಂಚಾರದ ಅನುಭವ ಬಲದಿಂದ ಅಡಿದ್ದಾರೆ.



ಡಿವಿಜನಲ್ ಆಫೀಸ್—ಕೆನರಾ ಮ್ಯುಚುವಲ್ ಬಿಲ್ಡಿಂಗ್, ಉಡುಪಿ.
ಶಾಖೆಗಳು:- ಉಡುಪಿ, ದಾವಣಗೆರೆ, ಧಾರವಾಡ, ಮಂಗಳೂರು.

ಪರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ನೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುನಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ

ವೈಜ್ಞಾನಿಕ ಕ್ಷೇತ್ರ
(೫ನೇ ಪುಟದಿಂದ)

ಈಗ ನಾವು ಮ್ಯಾಂಗನೀಸ್ ಅದಿರಿನಲ್ಲಿ ಬಹುಭಾಗವನ್ನು ನಿರ್ಯಾತ ಮಾಡುತ್ತಿದ್ದೇವೆ. ಮ್ಯಾಂಗನೀಸ್ ಅದಿರಿನ ಬದಲು, ಮ್ಯಾಂಗನೀನ್‌ನಿಂದ ಸಿದ್ಧಗೊಂಡ ವಸ್ತುಗಳನ್ನು ನಿರ್ಯಾತ ಮಾಡಿದರೆ, ನಮಗೆ ವಿದೇಶಿ ವಿನಿಮಯ ಧನವು ಹೆಚ್ಚಿನ ಪ್ರಮಾಣದಲ್ಲಿ ದೊರೆಯುವುದು. ಈ ಸಂಸ್ಥೆಯ ಫಲವು ಬಗೆಯ ಮ್ಯಾಂಗನೀಸ್ ಲವಣಗಳ ತಯಾರಿಕೆಗೆ ತಾಂತ್ರಿಕ ವಿಧಾನಗಳನ್ನು ಪ್ರಯೋಗಗಳಿಂದ ನಿರ್ಣಯಿಸಿದೆ.

ಮೂಲಭೂತವಾದ ಸಂಶೋಧನೆಯನ್ನು ನಡೆಸುವುದರ ಜೊತೆಗೆ ಈ ಸಂಶೋಧನೆಗಳ ಫಲಿತಾಂಶವನ್ನು ಕೈಗಾರಿಕೆಗಳಿಗೆ ಅನ್ವಯಿಸುವುದಕ್ಕೂ ಅನುಕೂಲವಾಗುವಂತೆ ಪ್ರಾಯೋಗಿಕ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ವಿವಿಧ ಕೈಗಾರಿಕೆಗಳಲ್ಲಿ ಉಪಯೋಗಿಸ ಬಹುದಾದ ಸಾಮಗ್ರಿಗಳನ್ನು ಪ್ರಮಾಣೀಕರಣಗೊಳಿಸುವುದು, ಈ ಕೈಗಾರಿಕೆಗಳಿಗೆ ಸಂಬಂಧಪಟ್ಟ ತಾಂತ್ರಿಕ ವಿಷಯಗಳನ್ನು ಒದಗಿಸುವುದು ಇವೆಲ್ಲವೂ ಈ ಸಂಸ್ಥೆಯ ಕಾರ್ಯ ವ್ಯಾಪ್ತಿಗೆ ಒಳಪಡುವುವು.

ಈ ಸಂಸ್ಥೆಯಲ್ಲಿ ಸಂಶೋಧನಾಕಾರ್ಯಗಳಲ್ಲಿ ನಿರತರಾಗಿರುವ ಸಿಬ್ಬಂದಿಯು, ದೇಶದಲ್ಲಿ ವಿದ್ಯುತ್ ರಾಸಾಯನಿಕ ಕೈಗಾರಿಕಾ ಕೇಂದ್ರಗಳಿಗೆ ಭೇಟಿ ಕೊಡುವುದರ ಮೂಲಕ ಆ ಕೈಗಾರಿಕೆಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡಿದೆ. ಈ ರೀತಿಯ ಭೇಟಿಗಳಿಂದ, ಸಂಶೋಧನೆ ಕಾರ್ಯಕರ್ತರಿಗೆ ಆ ಕೈಗಾರಿಕೆಗಳಲ್ಲಿರುವ ಪ್ರಾಯೋಗಿಕ ಸಮಸ್ಯೆಗಳ ಅರಿವಾಗುವುದರ ಜೊತೆಗೆ, ಕೈಗಾರಿಕೆ ಹಾಗೂ ಅವರು ನಡುವೆ ನಿಕಟವಾದ ಸಂಬಂಧಬೇರ್ಪಡುವುದು.

ಈ ರೀತಿಯಲ್ಲಿ, ಕಾರ್ಬೈಡುಯಲ್ಲಿರುವ ವಿದ್ಯುತ್ ರಾಸಾಯನಿಕ ಪ್ರಯೋಗಶಾಲೆಯು, ಭಾರತದ ಇತರ ಪ್ರಯೋಗಶಾಲೆಗಳಂತೆ, ದೇಶದ ಕೈಗಾರಿಕಾ ಹಾಗೂ ತಾಂತ್ರಿಕ ಅಭಿವೃದ್ಧಿಗಾಗಿ, ವೈಜ್ಞಾನಿಕ ತಿಳಿವಳಿಕೆಯನ್ನು ಒದಗಿಸುವ ಕಾರ್ಯದಲ್ಲಿ ನಿರತವಾಗಿದೆ.

ಪುಸ್ತಕ-ವಿಮರ್ಶೆ

(ವಿಮರ್ಶನಕ್ಕಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ನಮ್ಮ ಮೈಸೂರು ರಾಜ್ಯ—ಲೇಖಕರು: ಎಲ್. ಅಯ್. ಆಳ್ವವಾಣಿ, ಬಿ. ಎ, ಬಿ ಕಾಂ. ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೋ, ಧಾರವಾಡ. ಪುಟಗಳು: ೧೪. ಬೆಲೆ: ರೂ. ೦—೪೯.

ವಿವಿಧ ರಾಜ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡ ನಾಡು "ಮೈಸೂರು" ಎಂಬ ಹಳೆಯ ಹೆಸರಿನಿಂದಾದರೂ ಒಂದಾದುದು ಕನ್ನಡಿಗರ ಭಾಗ್ಯೋದಯ. ಆ ಸಮಯದಲ್ಲಿ ಮೈಸೂರು ಸರಕಾರವು "ಮೈಸೂರು ರಾಜ್ಯ" ವೆಂಬ ಹೆಸರಿನ ಹಿಂದು ಬ್ರಿಟಿಷ್ ಸಂಸ್ಪರ್ಶವನ್ನು ಪ್ರಕಾಶಿಸುತ್ತಿದ್ದರೂ ಅದು ಎಲ್ಲರಿಗೂ ಲಭ್ಯವಾಗುವ ಪರಿಸ್ಥಿತಿಯಿರಲಿಲ್ಲ; ಇದಿಗೂ ಇಲ್ಲಿ ಹಾಗಿರುವಾಗ್ಗೆ, ಸಮಗ್ರ ಮೈಸೂರಿನ ನ್ಯೂಸ್ ಪರಿಚಯವನ್ನು ಈಗಿನ ಉದ್ದೇಶದಿಂದ ಬೆಳಕುಕಂಡ ಆಕಳವಾಡಿಯವರ ಈ ಕಿರು ಹೊತ್ತಿಗೆಯನ್ನು ಸ್ವಾಗತಿಸಬಹುದು.

ಈ ಪುಸ್ತಕವನ್ನು ಲೇಖಕರು ಮುಖ್ಯವಾಗಿ ಪಠ್ಯಪುಸ್ತಕವಾಗಿಯೇ ಉದ್ದೇಶಿಸಿದ್ದಾರೆ. ಆದರಂತೆ ಬರೆದಿದ್ದಾರೆ ರಾಜ್ಯದ ಭೂಗೋಳಿಕ ಸ್ಥಿತಿಗತಿಗಳು, ಜನಸಂಖ್ಯೆ, ವಿದ್ಯುತ್, ಸಾರಿಗೆ, ವ್ಯಾಪಾರ ಮೊದಲಾದ ಸಾಮಾನ್ಯ ಭೂಗೋಳವನ್ನು ಹೇಳಿ, ನಂತರ ಜಿಲ್ಲೆಗಳ ವಿವರಣೆಯನ್ನು ಚುಟುಕಿನಲ್ಲಿ ತೀರಿಸಿದ್ದಾರೆ. ಗ್ರಂಥಾಂತ್ಯದಲ್ಲಿ ಕರ್ನಾಟಕ ನೋಡತಕ್ಕ ಸ್ಥಳಗಳ ಪಟ್ಟಿಯನ್ನೂ ಅಷ್ಟೆನ ಪ್ರೇಕ್ಷಣೀಯತೆಗೆ ಕಾರಣವಾದ ವೈಶಿಷ್ಟ್ಯಗಳನ್ನೂ ಕೊಟ್ಟಿದ್ದಾರೆ. ಕೊನೆಯಲ್ಲಿ ಸಾಕ್ಷರತೆ, ಭಾಷಾ ಸಮಾಜ, ಉದ್ಯೋಗ, ಪೂಸುಗಾರಿಕೆ, ಪುಳ ಮತ್ತು ಜನಪಟ್ಟಿಗೆಗಳನ್ನೂ ಚಿತ್ರಗಳಲ್ಲಿನ ತಾಲೂಕುಗಳನ್ನೂ ಪರಿಶಿಸ್ಪಪಟ್ಟಿ ಸೇರಿಸಿದ್ದಾರೆ. ೧೪ ಕಾತೆಗಳೂ ೨೦ ಚಿತ್ರಗಳೂ ಪುಸ್ತಕಕ್ಕೆ ಮೆರುಗನ್ನೀಯುತ್ತಿವೆ. ಮುದ್ರಣ, ಕಾಗದ ಉತ್ತಮವಿದೆ.

ಈ ಪುಸ್ತಕದ ವಿಷಯಗಳೆಲ್ಲವೂ ವಿದ್ಯಾರ್ಥಿಗಳಿಗೆ ಸರಿಯಾಗಿಯೇ ಬರೆಯಲ್ಪಟ್ಟಿವೆ ಆದರೂ ಪ್ರತಿ ಜಿಲ್ಲೆಯು ಒಂದೊಂದು ಸಚಿತ್ರ ಯನ್ನೂ ಕೊಟ್ಟು ಅಲ್ಲಿ ಆಯಾ ಜಿಲ್ಲೆಯ ವೈಶಿಷ್ಟ್ಯಗಳನ್ನು ಸೂಚಿಸಬಹುದಿತ್ತು. ಅಲ್ಲದೇ ಈಗ ಕೊಟ್ಟಿರುವ ಕರ್ನಾಟಕದ ಸಂಕಿಪ್ತ ಇತಿಹಾಸಕ್ಕಿಂತ ಸಾಲಿಪೆಂದೇ ಹೇಳಬಹುದು.

ವಿಷಯ ಸಂಗ್ರಹದಲ್ಲಿಯೂ ಕೆಲವೊಂದು ತಪ್ಪು ಗ್ರಹಿಕೆಯಿರುವುದು ಸರಿಯಲ್ಲ ಉದಾಹರಣೆಯಲ್ಲಿ ಮಧ್ವಾಚಾರ್ಯರ ಮಂಠದಲ್ಲಿ ಶ್ರೀಕೃಷ್ಣ ದೇವಾಲಯವಿರುವುದಿಲ್ಲ ಮಧ್ವಾಚಾರ್ಯರು ಶ್ರೀಕೃಷ್ಣನನ್ನಲ್ಲಿ ಪ್ರತಿಷ್ಠಾಪಿಸಿದರಷ್ಟೆ. ನೂಡಬಿದಿರೆಯ ತ್ರಿಭುವನ ತಿಲಕ ಬಸದಿಗೆ ಸಾವಿರ ಕಂಬದ ಬಸದಿಯೆಸ್ತುತ್ತಾರೆಯೇ ಹೊರತು ಸಾವಿರ ಗೋಪುರದ ಬಸದಿಯೆಂದಲ್ಲ ಇಂತಹ ಸಣ್ಣ ಸಣ್ಣ ತಪ್ಪುಗಳು ಕಿಡ್ದಲು ಅವಕಾಶವಾಗಿವೆ ಅಲ್ಲದೇ ಯಾತ್ರಿಕರಿಗೂ ಸಹಾಯಕವಾಗುವಂತೆ ಬರೆದ ಪುಸ್ತಕವಿದಲ್ಲವೆಂದು ಯಾತ್ರಾಸ್ಥಳಗಳ ಅಪೂರ್ಣ ವಿವರಣೆಗಳಿಂದ ಹೇಳಬಹುದು. ಆದರೂ, ಶಾಲೆಗಳಲ್ಲಿ ರಾಜ್ಯದ ಭೂಗೋಳವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಸ್ವಲ್ಪಮಟ್ಟಿನ ಸಹಕಾರಿಯೂ ಆಗುವುದು.

ಇಂತಹ ಪುಸ್ತಕಗಳನ್ನು ಬರೆಯುವಾಗ, ವಿಷಯ ಸಂಗ್ರಹಣೆ ಸಿದ್ಧರೂ ಸಾಲದು. ಅವಾರ ಪರಿಶ್ರಮ, ಆಸಕ್ತಿಯ ಸಂಗ್ರಹಗಳಿದ್ದರೆ ಮಾತ್ರ ಸಾಧ್ಯ ಏಳುಂದರೆ, ವಿದ್ಯಾರ್ಥಿಗಳು ಕಲಿಯುವಾಗ ಆಸಾಧು ಕಲ್ಪನೆಯನ್ನು ಅವರಲ್ಲಿ ಮೂಡಿಸುವುದು ಸರಿಯಲ್ಲ. ಶ್ರೀ ಆಕಳವಾಡಿಯವರ ಪರಿಶ್ರಮ ಸ್ತುತ್ಯವಿದ್ದರೂ ಕೊಂಚ ಮಟ್ಟಿಗೆ ಸಾರ್ಥಕವಾಗಿದೆಯೆಷ್ಟೆ. ಕೊಲಂಕಪ ಅಳ್ಳಾಸದಿಂದ ಇದೇ ಮೊದಲಿಯ ಇದ ಕ್ಕಿಂತಲೂ ವಿವರವಾದ ಕರ್ನಾಟಕದ ಸತ್ಯ ಚಿತ್ರವನ್ನೀಯಬಲ್ಲ ಹೊತ್ತಗೆಯನ್ನು ರಚಿಸಲು ಆವರಿಗೇನೂ ಕಷ್ಟವಾಗಲಾರದು. ಆದು ಬೇಗನೇ ಹೊರಬರಲೆಂದು ಹಾರೈಸುತ್ತೇವೆ.

ವರದಿಗಳು

ಹಿಂದ್ ಕೂಷ್ಠ ನಿವಾರಿಣಾ ಸಂಘ (ಮೈಸೂರು)—ಇದರ ೧೯೫೭ನೇ ಸಾಲಿಗೆ ಸಂಬಂಧಿಸಿದ ವರದಿ ಲೆಕ್ಕ ಪತ್ರಗಳು ಯಶಸ್ವಿಗತವಾಗಿವೆ. ರೋಗ ನಿವಾರಣೆಗಾಗಿ ಚಿಕಿತ್ಸಾಲಯಗಳಿಗೆ ವಿಚ್ಚೆಯೊ. ೫೦ ಜನ ಟಿಪಣಿಗಳ ಪ್ರಮಾಣವು ಬೆಳೆಯುತ್ತಿರುವುದರಿಂದ ಆಂಕ್ಷಿತ ಶಿಲ್ಕು ಕುಂದಿನ ವರ್ಷ ರೂ. ೫,೭೦೦ ಇದ್ದುದು ಈ ವರ್ಷ ೩,೭೫೦ಕ್ಕೆ ಇಳಿದಿದೆ. ಮಹಾಮಾರಿಯಾದ ಕುಷ್ಠರೋಗವನ್ನು ದೂರವಾಗಿಲು ಹೋರಾಡುವ ಈ ಸಂಘಕ್ಕೆ ಉದಾರಿಗಳು ಅವಶ್ಯ ದಾನವೀಯಬೇಕು; ತನ್ಮೂಲಕ ಸಮಾಜೋದ್ಧಾರ ಕಾರ್ಯದಲ್ಲಿ ಭಾಗಿಗಳಾಗಬೇಕು. ಇದರಿಂದಾಗಿ, ಪಡುಬಿದ್ರಿ, ಕಾಸು ಹಾಗೂ ಶಿರಂಗಿಪೇಟೆಗಳಲ್ಲಿ ಹೊಸ ಚಿಕಿತ್ಸಾಲಯಗಳಿಗೆ ಕಟ್ಟಡಗಳನ್ನು ಶ್ರೀ ಸೋನೆ ಮತ್ತು ಅದಮಾರು ಮಠಾಧೀಶರು ಕಟ್ಟಿಕೊಡಲು ಒಪ್ಪಿದ್ದಾರೆ ಇವರ ಮಾದರಿಯನ್ನಿತರರೂ ಅನುಸರಿಸುವಂತಾಗಲಿ.

ಕರ್ನಾಟಕ ಸಂಘ, ಬ್ರಹ್ಮಾವರ—ಇದರ ಎರಡನೆಯ ವರ್ಷದ (೫೭—೫೮) ವರದಿ, ಆಯವ್ಯಯಗಳ ಪತ್ರ ಕೈಸೇರಿದೆ. ಉತ್ಸಾಹಿ ಸದಸ್ಯರಿಂದ ಸಂಸ್ಥೆಯಿಂದ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಸೇವೆಯನ್ನು ಸಲ್ಲಿಸುತ್ತಿರುವ ಈ ಸಂಘವು ಕೃತಜ್ಞತಾರ್ಹವಾಗಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಒಂದು ಕಾಲದಲ್ಲಿ ಯಶಸ್ವಿಯಾಗಿದ್ದ ಕರ್ನಾಟಕ ಸಂಘಗಳು ಕೈಕಟ್ಟಿ ಮೌನ ಸ್ಮೃತಸ್ವಾಪ್ನಾವಸ್ಥೆಯಲ್ಲಿರುವಾಗ, ಬ್ರಹ್ಮಾವರದಂತಹ ಎಳೆಯ ಪಟ್ಟಣದಲ್ಲಿ ಉಮೇದಿನ ಕಾರ್ಯಕ್ರಮಗಳನ್ನು ನಡೆಸುವ ಸಂಘವು ಬೆಳೆದ ಬರಲೆಂದೂ, ಅದನ್ನು ಕಂಡಾದರೂ ನೂಲಿಗಿದ ಸಂಘಗಳು ಎಚ್ಚೆರವಾಗಲೆಂದೂ ಬಯಸುತ್ತೇವೆ.

—ಗೋರಾ.

ಸಾದರ ಸ್ವೀಕಾರ

೧. Devine Life (Birth day Souvnir number) Editor Sri Siva Premi, Rishikesh· Annual Subscription Rs. 3-75 Birthday Souvnir number: Rs· 2/-.

ಪುತ್ತೂರು ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S. 333/1958

ವಾಸುದೇವ ಶೈಖಾಡಿತ್ತಾಯ —ವಾದಿ

ಅಣಸ್ಪ ಸೆಟ್ಟಿ—ಹೂವಯ್ಯ ಸೆಟ್ಟಿ ಮಗ ಶಾಲಿಉಪ್ಪಿನಂಗಡಿ ಕಸಬಾ ಹಾಯರ್ ಎಲಿಮೆಂಟರಿ ಶಾಲೆಯ ಬಳಿಯಲ್ಲಿ—ಪ್ರತಿವಾದಿ

ವ್ಯಾದಿದೇನೆ ಪ್ರಕಾರ ಪ್ರತಿವಾದಿಯಿಂದ ಬಹು ತನಸಂಗಳ ಗೇಣಿ ಬಾಕಿ ರೂ 1849.7.0ಕ್ಕೆ ವಾದಿಯು ಮೂಡಿದ ದಾನೆಯು ಕೈಬೇತು ನೋಟೀಸಿನ ವ್ಯಾದಿಯು ತಾ 27-10-1958ಕ್ಕೆ ಇಟ್ಟಿರುವದಿಂದ ಆ ವ್ಯಾದಿಗೆ ಪ್ರತಿವಾದಿಯು ತನ್ನ ಆಕ್ಷೇಪಣೆಗೇನಾ ಪರೂ ಹೇಳುವದಿದ್ರೆ ಅದಿನ 11ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಆತನನ್ನು ತಿವಾಯಿ ಎಂತನೂಡಿ ಈ ವಾದಿಯನ್ನು ಮುಂದಿನ ತೀರ್ಮಾನಿಗೆ ಬಾಗುವಮು ಎಂತ ಈ ಕೋರ್ಟು R.I.A. 1638/58ನೇ ಆರ್ಡಿ ಹುಕುಂ ಸ್ಕರ ಈ ನೋಟೀಸು ನೂಡಿಸಿಯದೆ.

(Sd) B. Ramachandra Rao
M.A.B.L
Pleader for plaintiff
ಪುತ್ತೂರು S. K. ತಾ 6. 10. 1958

ಪ್ರಕಟಣೆ

ಕುಂದಾಪುರ ತಾಲೂಕು, ನಂಬ್ರ 14ನೇ ನಾವುಂದ ಗ್ರಾಮದ, ಸ ನಂ. 194 ಸ. ಪಿ. ಕು. ೬ ಪುಂಜ (ಹಾಡಿ) ಮತ್ತು ೬೫.೩ ಚಾಗ್ಯಾತಿಯ ಇದರಲ್ಲಿರುವ ಕಟ್ಟಡಗಳು ಬಾಬಿ ವಗೈರೆಗಳ ಮೇಲೆ ಈ ಕೆಳಗೆ ಹೆಸರು ಕಾಣಿಸಿದವರುಗಳ ಅನುಮತಿ ಇಲ್ಲದೆ. ಸಾಲ, ಆದಾವು ಉಡು ವಾಡಿದರೆ ಯಾ ಸ್ಥಿರ-ಚರಸ್ವಾತ್ತುಗಳನ್ನು ಪರಾಧೀನ ಮಾಡಿದರೆ ಅದು ಯಾರಿಗೂ ಸಿದ್ಧಿಯಾಗ ತಕ್ಕದ್ದಲ್ಲವೆಂದು ತೀರಿಸಿಳು ೫೮—೧೯೫೮ರ ರಿಜಿಸ್ಟ್ರಾರ್ ಕಛೇರಿಯ ನೋಟೀಸು ಈ ಮೂಲಕ ತಿಳಿಸಿದೆ.

1. ನಾವುಂದ ನಾರಾಯಣ ಆರ್. ಸುವರ್ಣ.
2. ನಾವುಂದ ಕುಪ್ಪಯ್ಯ ಆರ್. ಸುವರ್ಣ.

ಮಕ್ಕಳ ಮಗ್ಗಿಪುಸ್ತಕ

(ನಯೀ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ.

ಸಾರ್ವಜನಿಕ ವಾಚನಾಲಯ ಹಾಗೂ ಸಾರ್ವಜನಿಕ ಸಂಸ್ಥೆಗಳ ಸ್ಯವಸ್ಥಾಪಕರಲ್ಲಿ ಬಿನ್ನಹ:

ವಾಚನಾಲಯಗಳಿಗೆ ಗಾಂಧೀ ಸಾಹಿತ್ಯವನ್ನು ಕೊಳ್ಳುವ ಬಗ್ಗೆ ಗಾಂಧೀ ಸ್ಮಾರಕ ನಿಧಿಯವರು ಕೊಡತಕ್ಕಾದಿದ ಸಹಾಯ ನಿಧಿಯ ಬಗ್ಗೆ ಆನೇಕ ವಾಚನಾಲಯಗಳಿಂದ ನಮಗೆ ಕೇವಲ ಪತ್ರಗಳು ಬಂದಿವೆ. ಆದರೆ ಸರಿಸ ವಾಚನಾಲಯದವರು ನಮ್ಮ ಅರ್ಜಿ ಫಾರಂ ತರಿಸಿಕೊಂಡು ಅವನ್ನು ಅದಷ್ಟು ತೀವ್ರ ನಮಗೆ ಮುಟ್ಟುವಂತೆ ಕಳುಹಿಸಬೇಕು. ಈಗಾಗಲೇ ಅರ್ಜಿಫಾರಂ ತರಿಸಿಕೊಂಡವರು ತಮ್ಮ ತಮ್ಮ ಅರ್ಜಿಗಳನ್ನು ಅದಷ್ಟು ತೀವ್ರ ತುಂಬಿ ಕಳುಹಿಸಬೇಕಾಗಿ ವಿನಂತಿ.

ಸಂಚಾಲಕ,
ಗಾಂಧಿ ಸ್ಮಾರಕ ನಿಧಿ
ಕರ್ನಾಟಕ ಶಾಖೆ,
ಬೆಂಗಳೂರು-೪.

ವಿನಂತಿ

ಬಂಟರ ಯಾನೆ ನಾಡವರ ಸಂಘ ಮತ್ತು ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯ ಮಂಗಳೂರು ಇವುಗಳ ಸುವರ್ಣ ಸುಮೋತ್ಸವ ವನ್ನು 1959ನೇ ಜನವರಿ ತಿಂಗಳ ಕೊನೆಯ ವಾರದಲ್ಲಿ ಜರಗಿಸಲಾಗುವುದು. ಸಡಸ್ಕರನ್ನು ಸೇರಿಸಿಕೊಳ್ಳು, ಸಂಘಕ್ಕೆ ಸುತ್ತು ಬಡ ವಿದ್ಯಾರ್ಥಿಗಳ ನಿಧಿಗೆ ಸಹಾಯಧನವನ್ನು ಎತ್ತಿಕೊಳ್ಳು, ಜೆಲ್ಲೆಯಲ್ಲೂ, ಮುಂಬಯಿ, ಬೆಂಗಳೂರು, ಮಾಮ್ ಸು ಮುಂತಾದ ಕಡೆಗಳಲ್ಲೂ ಪ್ರಚಾರಕಾರ್ಯವನ್ನು ನಡೆಸಬೇಕಾಗಿದೆ. ನಮ್ಮ ವಿದ್ಯಾರ್ಥಿನಿಲಯದ ಹಳೆ ನಿವಾಸಿಗಳೂ, ಸಂಘದ ಸದಸ್ಯರೂ, ಸ್ನೇಹಿತರೂ, ಹಿತಚಿಂತಕರೂ, ಸಂಘದ ಮುಂದಿನ ಕೆಲಸಕ್ಕೂ, ಯೋಗ್ಯ ರೀತಿಯಲ್ಲಿ ಸಾರ್ಥಕ ಮತ್ತು ಉತ್ಸವವನ್ನು ಜರಗಿಸಿಕ್ಕೂ ಬೇಕಾದ ಸಹಾಯವನ್ನು ಸಂಗ್ರಹಿಸಲು ಸಹಕರಿಸಬೇಕಾಗಿ ವಿನಂತಿ.

ಕೆ. ಸುಂದರರಾಮ ಶೆಟ್ಟಿ,
ಕಛ್ಚೇರಿ,
ಜುಬಿಲಿ ಕಮಿಟಿ.

ಮಂಗಳೂರು, 2-10 1958.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ, ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ, ಬೆಳಕುಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆ-: ರೂ. ೧—೮—೦ (1 = 50)

ರೂ. 1 = 75 ಸುಸಿಯೂರ್ಡರು ಪಡಾದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ:

ನವಯುಗ ಎಂಟರ್‌ಪ್ರೈಸಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಇದು ಶುದ್ಧ ಹಸಿ

ಸರ್ವಂ ಮಸಾಲಾ ಮಯಂ ಜಗತ್

ಆ ಬಾಲವೃದ್ಧರಿಂದು ಮಸಾಲೆಗಾಗಿಯೇ ಹೋರಾಡುತ್ತಿರುವರೆ?

ತಿನ್ನುವ ಆಹಾರವು ನಾಲಿಗೆಗೆ ರುಚಿಯಾಗಿರಬೇಕು; ರುಚಿಕರವಾದ ಆಹಾರ ಸೇವನೆಯಿಂದಲೇ ಮಾನವನು ದೃಢಕಾಯನಾಗಬಲ್ಲನೆನ್ನುತ್ತಾರೆ. ಅಂತೆಯೇ ಉಪ್ಪು ರುಚಿಗೊಳಿಸುವ ಪದಾರ್ಥದಲ್ಲಿ ಮಸಾಲೆಯೂ ಯುಕ್ತ ಪ್ರಮಾಣದಲ್ಲಿ ಬೆರೆತಿದ್ದರೆ, ಆಗ ಸುವರ್ಣಕ್ಕೆ ಸೌರಭವು ಕೂಡಿದಂತಾಗುವುದು. ಈ ಕಾರಣದಿಂದಲೇ ಇರಬೇಕು, ಇಂದು ಮಸಾಲೆಯ ಪದಾರ್ಥಗಳಿಗೆ ದಿನೇ ದಿನೇ ಬೇಡಿಕೆಗಳು ಏರುತ್ತಿವೆ.

ಮಸಾಲೆಯ ಖಾದ್ಯ ಪದಾರ್ಥಗಳಲ್ಲಿ ಮೆಣಸು ಪ್ರಮುಖ ಸ್ಥಾನವನ್ನು ಪಡೆಯುತ್ತದೆ. ಹಿಂದೆ ಈ ಖಾರ ಖಾರವಾದ ಬೀಜಗಳೂ ಶೀತಪ್ರಧಾನವಾದ ಗೆಡ್ಡೆತೆರಗಿಗಳೂ ಕೊಲಂಬಸ ಹಾಗೂ ವೆಸ್ಪುಸಿಯನ್ನು ಸಂಚಾರ ಜೀವನವಾಗಲಿ ದ್ವೀಪಗಳನ್ನು ಜಲ ಮಾರ್ಗದಿಂದ ಸೇರುವ ಆಕಾಂಕ್ಷೆಯಿಂದ ಸ್ವದೇಶದಿಂದ ಹೊರಡಿಸಿ, ಅಮೆರಿಕೆಯ ತಟಕ್ಕೆ ಮುಟ್ಟಿಸಿದುವೆಂದರೆ, 'ಮಸಾಲೆ'ಯ ಮೇಲೆ ಜನರಿಗೆ ಪ್ರೀತಿಯೆಂಬುದು ವ್ಯಕ್ತವಾಗುತ್ತದೆ. ಭಾರತದಂತಹ ಪೌರಾತ್ಯ ದೇಶಗಳು ವಿದೇಶ ವಿನಿಮಯವನ್ನು ಸಂಪಾದಿಸುವ 'ನಿರ್ಯಾತ' ಕಾರ್ಯಕ್ರಮಗಳಲ್ಲಿ ಮಸಾಲೆಯ ಪದಾರ್ಥಗಳು ಪ್ರಾತ್ಯಹಿಸಿದ ಸ್ಥಾನವನ್ನು ಪಡೆದಿವೆಯೆಂದರೆ ಆತಿಶಯೋಕ್ತಿಯಲ್ಲ.

ಬೀರ ಸಪ್ಪೆಯಾದ ಆಹಾರವನ್ನೋ ಮಾಂಸವನ್ನೋ ತಿಂದು ತಿಂದು ನಾಲಿಗೆಯ ರುಚಿಯು ಕೆಟ್ಟು ಹೋಗುವಾಗ, ಖಾರವಾದ ಒಂದು ಸಿಗರೆಟ್ಟಿನ ಅನ್ನೋ ಕರಿಮೆಣಸಿನ ಕಾಯನ್ನೋ ಕಟ್ಟಮ್ಮನೆ ಕಡಿದಾಗ, ಕಣ್ಣು ಮೂಗುಗಳು ಉರಿದು ನೀರೂರಿಸುವಾಗ ಆಗುವ ಒಂದು ಆತ್ಮಾನಂದವನ್ನು ಯಾರೂ ಮರೆಯುವುದು ಸಾಧ್ಯವಿಲ್ಲ. ವನಗಳಲ್ಲಿನ ಕಪಿಗಳನ್ನು ವರ್ಣಿಸುವಾಗ, ಮಹಾಕವಿ ಯೊಬ್ಬನು "ನಾರಿಕೇಳ ರಸಾಸ್ವಾದಲಂಪಟಾನಂ ಪನಸಾನ್ಯಶತಂ ತಥಾಮರಿಚೋಪದಂಶಕ್ಷ ವನ್ಯಾವೃತ್ತಿ ರಹೋರುಖಂಗಿ" ಎಂದೆ. ತನಗೆ ಅಂತಹ ವಾಕ್ಯವು ಲಭ್ಯವಾಗದಿರುವುದಕ್ಕೆ ವ್ಯಥೆಯನ್ನು ವ್ಯಕ್ತಪಡಿಸಿದ್ದಾನೆ. ತೆಂಗಿನ ಮರಗಳನ್ನು ಗೊಂಚಲು ಗೊಂಚಲುಗಳಾಗಿ ತೂಗಾಡುತ್ತಿರುವ ಎಳನೀರನ್ನು ಯಥೇಚ್ಛವಾಗಿ ಕುಡಿದು, ಹಸಿಲಿನ ಹಣ್ಣು, ಮಾನಿನ ಹಣ್ಣು ಮೊದಲಾದ ಬಹುವಿಧ ಫಲಗಳನ್ನು ಮೆದ್ದು ರುಚಿಗಾಗಿ ಮೆಣಸಿನ್ನು ಕಡಿದು ಕಣ್ಣು ಕೆಂಪೇರಿಸುವ ಆ ವನ್ಯ ಜೀವನವೇ ಸುಖಮಯವೆಂದೀ ಶ್ಲೋಕದ ಅರ್ಥ! ಹಾಗಿರುವಾಗ, ಮಸಾಲೆಯು ಒಗ್ಗಿ ಜನತೆ ಕರುಬುತ್ತಿರುವುದಾದರೂ ಸಹಜವಾದುದೇ.

ಮಸಾಲೆಯ ಪದಾರ್ಥಗಳನ್ನು ಎನ್ನುವುದರಿಂದಲೇ ಅಮೆರಿಕನ್ನರು ಅಲ್ಪ ಸ್ವಲ್ಪ ಶಾಲಿಗಳಾಗಿದ್ದಾರೆ ನೀರುಳ್ಳಿ, ಬೆಳ್ಳುಳ್ಳಿ ನೊದಲಾದುವನ್ನೆ ಭಾರತೀಯರು ತಾ ಮಾಸಾಹಾರಗಳಲ್ಲಿ ಸೇರಿಸಿರುವರಾದರೂ ತಾಮಸ ವೃತ್ತಿಯನ್ನೋ ಪ್ರತಿಯ ಈ ಇಂದಿನ ಜಗತ್ತಿನಲ್ಲಿ ಇದ್ದು ಈಸಿ ಜಯಿಸಬೇಕಾದ ರಿ, ಇವುಗಳಿಗೆ ಹಾಕಿರುವ ಬೇಲಿಯನ್ನು ಕಿತ್ತೊಗೆಯಲೇಬೇಕು. ಪೌರಾತ್ಯ ದೇಶಗಳಲ್ಲಿ ಮನಸಾರೆ ಮಸಾಲೆಯನ್ನು ತಿಂದು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಂಡು ದ್ವಿತೀಯ ಲೋಕ ಯುದ್ಧದಲ್ಲಿ ಜಯ ಅಥವಾನ್ನು ವರಿಸಿದ ಅಮೆರಿಕೆಯ ಸೈನಿಕರು ತಂತಮ್ಮ ಆಶ್ರಮ ಮಹಿಷಿಯರೊಡನೆ ಈಗ್ಗೆ ಬಹಳವಾಗಿ ಸ್ವರಿಸಿರಂತೆ. ಭಾರತೀಯರಾದರೂ ಇಂದು ತಮ್ಮ ಉಪಯೋಗಕ್ಕೆ ಬಾರದೆ, ಜಗತ್ತಿಗೆ ಬೇಡವಾದ 'ಶಾಂತಿ ಮಂತ್ರ'ವನ್ನು ಪಠಿಸುವುದಕ್ಕೆ ಮಸಾಲೆಯ ಪದಾರ್ಥಗಳನ್ನು ಆಮದುಮಾಡುವುದಂತೂ ದಿಟವಿರಲಿ, ತಮ್ಮಲ್ಲಿ ಬೆಳೆದುತ್ತಿರುವುದನ್ನೂ ಅಮೆರಿಕೆಯೇ ಮೊದಲಾದುವುಗಳಿಗೆ ರಫ್ತು ಮಾಡುವ ಅವಿವೇಕವೇ ಬಲವಾದ ಕಾರಣವೆಂದೂ ಕಿಸ್ಸಾನ್ನವು ಭಾರತೀಯರ ಮೇಲೆ ಒಳಗಿಂದೊಳಗೇ ನೇಜು ಸುಗುಟ್ಟಿ ಮುಂದೊಂದು ದಿನ ರಣಕಹಳೆಯೂದುವುದಕ್ಕೂ ಇದೇ ಸೂತ್ರಾನ್ವಯವೆಂದೂ ನಿಸ್ಸಲ್ಕಶ ಮನಸ್ಸಿನಿಂದ ದೂರಾದೂರ ವಿವೇಚನೆಯಿಂದ ಗ್ರಹಿಸಿಕೊಂಡರೆ ಜ್ಞಾತವಾಗುವುದು.

ಇಂದು ಕಾಲೇಜು ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ಸ್ವತಂತ್ರ ಭಾರತದ ಭಾವಿ ನಾಗರಿಕ ಪಡೆಗೆ ಡಿಗಳನ್ನು ರೂಪಿಸುವಲ್ಲಿ ಕಾಲೇಜಿನ ಪ್ರಾಧ್ಯಾಪಕರಿಗಿಂತಲೂ ಈ ಮಸಾಲೆಯು ಅಗ್ರಗಣ್ಯ ಸ್ಥಾನವನ್ನು ಅಲಂಕರಿಸುವುದೆಂದಾಗ, ನಮ್ಮ ಭಾರತದ ಪುನರ್ನಿರ್ಮಾಣ ಕಾರ್ಯದಲ್ಲಿಯೂ ಮಸಾಲೆಯ ಪಾತ್ರವು ಮಹತ್ವಪೂರ್ಣವಾದುದೆಂದೂ, ಈ ಪಡೆನುಡಿಗಳನ್ನು "ಅತಿಶಕ್ತಿ" ಎಂದು ಅಜ್ಞಾನದಿಂದ ಕರೆಯುವ ದೇಶದ ಹಿರಿಯ ಧೀರೋದಾರರೂ ಕಾಲೇಜುಗಳ ವ್ಯವಸ್ಥಾಪಕ ವರ್ಗದವರೂ ಮಸಾಲೆಯ ಅನನ್ಯ ಭಕ್ತರಲ್ಲವೆ ಎಂದುದರಿಂದಲೇ ವಿದ್ಯಾರ್ಥಿಗಳ ಬುದ್ಧಿ ವಿಕಸಿತವಾದಷ್ಟು ಅವರ ವ್ಯವಹಾರಗಳು ಪರಿಪಕ್ವವಾಗಿಸುವ ಇವರ ದಾಗಲಿಲ್ಲವೆನ್ನುವುದೂ ರಾಜಕೀಯ ರಣಕಣದ ನೇಪಥ್ಯದಲ್ಲಿಂದಲೆ. ನಿಸ್ಸಂಶಯವಾಗಿ ಮನೋಭಾವನೆಯಿಂದ ತಿಳಿದುಕೊಂಡರೆ, ಭಾಸವಾಗುತ್ತದೆ.

ವಿದೇಶ ಪ್ರಯಾಣವಾಗಲಿ, ಬೇಸರವಾದಾಗ, ಆಲಸ್ಯ ಮೈ ತುಂಬಿ ಸಂಚಾರ ಮಾಡುತ್ತಿರುವಾಗ, ಒಂದು ದಮ್ ಸಿಗರೇಟು ಮೇಮವಪರಿಂದ ತಂತಹ ಪೇಹ ಕ್ಷಯು ಹೇಳುವಾಗ ರಕ್ತಸನ್ನು ಸಪೆಬಡಿಯುವುದೂ ಸಾಧ್ಯವೆಂದೂ ಒಂದು ಸ್ಪೇಟ್ ಮಾಲೆ ತಿಂಡಿ ಮತ್ತು ಒಂದು ಕಪ್ಪು ಎಕ್ಸ್ಪ್ರೆಸ್ ಸ್ಟ್ರಾಂಗ್ ಕಾಫಿಯು ನಿಜಾರ ರಕ್ತಿಯನ್ನು ಸರಿಪೊರ್ಣಗೊಳಿಸುವುದೆಂದೂ ನಮ್ಮ ಕಾಲೇಜ ನಿವಾರ್ಥಿಗಳು ಅನುಭವಬಲದಿಂದ ಹೇಳಬಲ್ಲರು.

ಭೂಮಧ್ಯ ರೇಖೆಯಿಂದ ಉತ್ತರಕ್ಕಿರಲಿ, ದಕ್ಷಿಣಕ್ಕಿರಲಿ, ಮಧ್ಯಾಹ್ನ ರೇಖೆಯ ಪೂರ್ವಕ್ಕಿರಲಿ, ಪಶ್ಚಿಮಕ್ಕಿರಲಿ ನೆಲದಲ್ಲಿ ಗಾಡಿಸವಾರಿ ಮಾಡುತ್ತಿರಲಿ, ಸಮುದ್ರದಲ್ಲಿ ಜಲಯಾನ ನಡಾಡಲಿ ಇನ್ನೇನು ಆಕಾಶದಲ್ಲಿ ಪುಷ್ಪಕ ವಿಮಾನದಲ್ಲಿಯೇ ನಿಕರಿಸುತ್ತಿರಲಿ ಅವರೆಲ್ಲಿರಿಗೂ ಮಸಾಲೆಯೇ ಸರ್ವಾಧಿಕಾರಿಯೆನಿ. ಅಜ್ಜ ಆಫ್ರೀ ನ್ಯಾನರಲಿ, ಕಜ್ಜ ಅಮೆರಿಕೆಯೇರೋಪಿಯ ನರಿರಲಿ, ಜನ್ಮಿಸಿದೆ ಧ್ರುವಗಳಲ್ಲಿ ಇರಬಹ ದಾದ ಜನರೇ ಇರಲಿ, ಅವರೆಲ್ಲರಿಗೂ ಮಸಾಲೆಯೆಂದರೆ ವಾಜಕ್ಕಿಂತಲೂ ಪ್ರಿಯವೆಂಬುದು ದೃಷ್ಟಕ್ಕೆ ರಶ್ಯ ಹಾಗೂ ಅಮೇರಿಕಗಳು ಇತ್ತೀಚೆಗೆ ಕೋಟಿಗಟ್ಟಲೆಯ ಕುಪತ್ತು ಸುರಿದು ಚಾಂಗ್, ಮಂಗಳ ದಿ ಗ್ರಹಗಳ ಯಾತ್ರೆಗೆ ತೊಡಗುವ ಪ್ರಯತ್ನವಾಡುತ್ತಿರುವುದಾರೂ ಮಸಾಲಾ ಸಂಗ್ರಹಕ್ಕೇನೇ ಎಂತಾಗಿರಬಾರದು?

ಜನ ಮನವನ್ನು ಸೂರೆಗೊಂಡು ಜನ ಹೃದಯದಲ್ಲಿ ಲಾಲಸೆಯ ರೂಪದಲ್ಲಿ ಹುದುಗಿರುವ ಈ ಮಸಾಲೆಯೇ ಇಂದಿನ ಪ್ರಪಂಚವನ್ನು ಆಳಬಲ್ಲುದು; ಆಳಿಸಬಲ್ಲುದು ಸಾಕ್ಷಾತ್ ಸರಮಾತ್ಮನೇ ಮಸಾಲೆಯ ರೂಪದಲ್ಲಿ ಪ್ರಪಂಚದಲ್ಲಿ ವ್ಯಾಪಿಸಿರುವನೆಂದು ನಿತ್ಯ ನೂತನ ಆಧ್ಯಾತ್ಮಿಕ ಯೋಗಿಗಳು ಸಂಶೋಧನೆ ನಡೆಸಿ ಪತ್ತೆ ಹಚ್ಚಿದ್ದಾರೆ, ಆದುದರಿಂದ, ಭಾರತೀಯರಾದ ನಾವು ಈಗಲೇ ಸೇವಿಸುತ್ತಿರುವ ಮಸಾಲೆಯ ಪರಿಮಾಣವನ್ನು ಮತ್ತಷ್ಟು ಹೆಚ್ಚಿಸಿ ಅಬಲ ಭಾರತವನ್ನು ಸಬಲ ಭಾರತವನ್ನಾಗಿ ಕಟ್ಟುವ ದೃಢ ಸಂಕಲ್ಪವನ್ನು ನಾವು ಮಾಡಬೇಡವೆ? ಇದಕ್ಕೆ ತಟ್ಟಿದೆರಿ, ಸಬಲ ಭಾರತಾಂಬೆಯ ಉದರದಲ್ಲಿ ಹುಟ್ಟಿದುದಕ್ಕೆ ಅರ್ಥವೇನು?

ಅಲಾಸ್ಕಾ

(೮ನೇ ಪುಟದಿಂದ)

ತಾರೋಪಣಕ್ಕಾಗಿಯೂ ಆಗಮಿಸುವವಿದ್ದಾರೆ.

ಅಮೆರಿಕೆಯು ಇಲ್ಲಿಂದ ೭೨ ಲಕ್ಷ ಡಾಲರುಗಳಿಗೆ ರಶ್ಯನರಿಂದ ಇದನ್ನು ಕೊಂಡುಕೊಂಡಿತ್ತು. ಆ ಸಮಯದಲ್ಲಿ ಅಲಾಸ್ಕವು ಇಲ್ಲಿ ಖಾವಿರ ಚದರ ಮೈಲಿ ವಿಸ್ತಾರದ ಹಿಮಭರಿತವಾದ ಧ್ರುವ ಕರಡಿಗಳ ನಿವಾಸಸ್ಥಾನವಾಗಿತ್ತು. ಆಗ ಇದನ್ನು ಕೊಂಡುಕೊಳ್ಳುವುದಕ್ಕೆ ಅಂದಿನ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದ ಶ್ರೀ ವಿಲಿಯಂ ಎಚ್. ಸೆವರ್ಡರು ಬಹಳ ಪ್ರಯಾಸಪಟ್ಟಿದ್ದರು. ಅಮೆರಿಕೆಯ ಕಾಂಗ್ರೆಸ್ ಮತ್ತು ಜನತೆಯು ಮನವೊಲಿಸುವುದು ಬಹು ಸುಲಭವಾಗಿರಲಿಲ್ಲ. ಆದರೆ, ಅಲಾಸ್ಕಾಕ್ಕಾಗಿ ಅಮೆರಿಕೆಯು ತೆತ್ತಿದ್ದ ಹಣಕ್ಕಿಂತಲೂ ಮುನ್ನೂರು ಪಟ್ಟು ಮಿಗಿಲಾಗಿ ಅಲ್ಲಿ ದೊರೆತ ಬಂಗಾರ ಮತ್ತು ತುಪ್ಪುಳಗಳೇ ಸಂಪಾದಿಸಿ ಕೊಟ್ಟಿವೆ.

ಈ ನೂತನ ರಾಜ್ಯವು ಸೇರ್ಪಡೆಗೊಳ್ಳುವುದರಿಂದ ಅಮೆರಿಕೆಯ ಜನತೆಗೂ ಸ್ವಯಂ ಅಲಾಸ್ಕಕ್ಕೂ ಮಂಗಲವಾಗುವುದೆಂದು ಹಾರೈಸಬಹುದು. ಸಂಪತ್ಸಮೃದ್ಧವಾದ ಅಮೆರಿಕೆಯ ಸಂಸ್ಥಾನಗಳು ಇನ್ನೂ ಸತ್ವಶಾಲಿಗಳಾಗುವುದೆಂಬುದು ನಿಸ್ಸಂಶಯ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ಗೌರವ ಪ್ರಾಪ್ತಿ

(೧ನೇ ಪುಟದಿಂದ)

ಬುದ್ಧ, ರಾಮ, ಕೃಷ್ಣ ಇವರನ್ನು ನಾವು ಕಂಡಿಲ್ಲ. ಕೇವಲ ಪ್ರಾಚೀನ ಗ್ರಂಥಗಳ ಮೂಲಕ ಮಾತ್ರವೇ ಅವರ ಪರಿಚಯ ನಮಗೊದಗಿದೆ. ಆದರೆ, ನಮ್ಮೆರಾಷ್ಟ್ರಪಿತರಿಂದು ಗೌರವಿತರಾಗುತ್ತಿರುವ ಮಹಾತ್ಮಾ ಗಾಂಧಿಯವರನ್ನು ನನ್ನು ಪೀಳಿಗೆಯವರು ಕಣ್ಣಾರೆ ಕಂಡಿದ್ದಾರೆ. ಅವರ ದಿವ್ಯ ಮಧುರ ವಾಣಿಯು ನಮ್ಮ ಕಿವಿದೆರೆಗಳಲ್ಲಿ ಗುರ್ ಗುಡುತ್ತಿದೆ. ಹಾಗಿರುವಾಗ ಅವರನ್ನು ನಾವು ಮರೆತುಬಿಡುವುದಾದರೂ ಹೇಗೆ? ಯಾರ ಮೈತ್ಯು ವಿನಿಂದ ಪ್ರಪಂಚವಾಸಿಗಳೆಲ್ಲರೂ ಪೀಡಿತರಾದರೋ ಆವರು ಸೃಷ್ಟಿಯು ಅಂತ್ಯ ಗೊಳ್ಳುವವರೆಗೂ ನವ್ಯ ಜೀವನ ಮಾರ್ಗದಲ್ಲಿ ಬೆಳಕನ್ನು ಬೀರುತ್ತಿರುವರು. ಅವರುಜ್ವಲಚರಿತ್ರೆಯು ನಮಗೆ ಪ್ರೇರಣಾಸ್ರೋತವಾಗಲಿ ಎಂಬುದೇ ಎಷ್ಟೆರ ಆಕಾಂಕ್ಷೆಯಾಗಿದೆ.

— ——

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

3 ತಿಂಗಳಿಗೆ	3%
4 ರಿಂದ 6 ,,	3½%
7 ,, 12 ,,	4%
13 ,, 24 ,,	4½%
ಸೇವಿಂಗ್ಸ ಬೇಂಕ್ ಲೆಕ್ಕ	2½%
ಕರೆಂಟ್ ಎಕೌಂಟು	½%

The Moolky Bank, Ltd

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—

ನವಯುಗ ಪ್ರೆಸ್ ಉಡುಪಿ

ಲಗ್ನಪತ್ರಿಕೆಯೇ ನೊದಲಾದ ಆಮಂತ್ರಣಗಳನ್ನೊ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕ್‌ನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.

NAVAYUGA PRESS, UDIPI.

ಕಾವ್ಯ ಪ್ರಕಾಶ

ದೇಶದ್ರೋಹದ ಅಪರಾಧಿ-ಪಥಿಕ!

ಮಡದಿ ಮಡಿದಳು; ಆತನ ಮತ್ತು ಮುದ್ದು ಕುವರನ ಪ್ರಾಣ ಮೃತ್ಯು ವಿನ ದವಡೆಗಳ ನಡುವೆ ಸಿಲುಕಿತು

ಒಂದು ಕಡೆ ಪಥಿಕನ ದೇಶದಲ್ಲೆಲ್ಲಾ ಸಂಚರಿಸಿ ಜನತೆಯಲ್ಲಿ ಶಮ್ಮನ್ನು ಸೀಡಿಸುವ ಕರುಣಾಶೂನ್ಯನಾದ ರಾಜನಿಗೆ ವಿರುದ್ಧವಾಗಿ ವಿದ್ರೋಹೀ ಭಾವನೆಯನ್ನು ಬೆಳೆಸುತಿದ್ದನು. ಇನ್ನೊಂದೆಡೆ ಸಮುದ್ರ ತಟದಲ್ಲಿ ಪಥಿಕನು ತನ್ನ ಪತ್ನಿಯನ್ನು ತೊರೆದು ಹೋದ ಮೇಲೆ ಪಥಿಕನನ್ನು ಕಂಡ ಸಾಧುವೇ ಆತನ ಪತ್ನಿಯನ್ನೂ ಅಂದು ಮಧ್ಯರಾತ್ರಿಯ ಹೊತ್ತಿಗೆ ಅದೇ ಸ್ಥಳದಲ್ಲಿ ಸಿಗುವಂತೆ ಹೇಳಿ ಆಕೆಗೆ ಮನೆಗೆ ಹೋಗಲು ಆಸ್ಪದವಿಲ್ಲದಂತೆ ಪಥಿಕನು ಪುನಃ ಮನೆಗೆ ಹಿಂತಿರುಗುವನೆಂದು ಆಕೆಯನ್ನು ಸಮಾಧಾನಪಡಿಸಿದನು.

ಸಾಧುವಿನ ಆಶ್ವಾಸನೆಯನ್ನು ಪಡೆದು ಪತ್ನಿಯು ಮನೆ ಸೇರಿದಳು. ಆಕೆ ಪ್ರತಿದಿನ ಮುಂಜಾವದಿಂದ ಸಂಜೆಯ ವರೆಗೆ ಮನೆಯಲ್ಲಿ ಪಥಿಕನ ದಾರಿಯನ್ನೇ ನೋಡುತಿದ್ದಳು. ತಿನ್ನುವ, ಕುಡಿಯುವ ಸ್ಮರಣೆಯೂ ಆಕೆಗಿರಲಿಲ್ಲ. ನಿದ್ರೆಯೂ ಆಕೆಯ ಕಣ್ಣುಗಳಿಂದ ಗಾವುದ ದೂರವಾಗಿ ಹೋಗಿತ್ತು. ಪಥಿಕನ ವಿಯೋಗದಲ್ಲಿ ಆಕೆಯೊಂದು ಮರದ ಕೊರಡಾಗಿ ಹೋಗಿದ್ದಳು. ಪತಿದರ್ಶನವನ್ನು ಮಾಡಬೇಕೆಂಬ ನೇತ್ರದ್ವಯದಿಂದಲೇ ಆಕೆ ಜೀವಿಸಿದ್ದಳು. ತನ್ನ ಮಗುವಿನ ಎಲನೆ ಹೋಷಣೆಗಳಲ್ಲಿಯೂ ಆಕೆಯು ಗಮನವಿಟ್ಟಿರಲಿಲ್ಲ. ತನ್ನನ್ನೂ, ತನ್ನ ಮಗುವನ್ನೂ ಮರೆತು ಬಿಟ್ಟು ಅಹೋರಾತ್ರಿ ತನ್ನ ಪ್ರಾಣನಾಥನ ಪವಿತ್ರ ನಾಮವನ್ನು ಆಕೆ ಜಪಿಸುತ್ತಿದ್ದಳು

ಒಂದು ದಿನ ಆ ಹಳ್ಳಿಗೆ ಕೆಲವು ಯಾತ್ರಿಕರು ಆಕಸ್ಮಾತ್ತಾಗಿ ಬಂದರು. ಸೀರಿಡಿಯನ್ನು ಹೋಗಲಾಡಿಸುವದಕ್ಕೋಸ್ಕರ ಅವರೊಂದು ತಟಾಕದ ಬಳಿ ಇಳಿದರು. ಕೆಲವು ಗ್ರಾಮಸ್ಥರೂ ಅವರಿಗೆ ಆಗಮಿಸಿದ್ದರು. ಅವರೊಡನೆ ಯಾತ್ರಿಕರು ತಮ್ಮ ತಮ್ಮ ವ್ಯಸನದ ಕಥೆಗಳನ್ನು ಹೇಳತೊಡಗಿದರು. ''ನಮ್ಮ ನ್ಯಾಯನಿಷ್ಠನಾದ ಪಥಿಕನನ್ನು ರಾಜನು ಸೆರೆಹಿಡಿದಿದ್ದಾನೆ. ಮತ್ತು ಅವನ ಮೇಲೆ ರಾಜದ್ರೋಹದ ಅಪರಾಧವನ್ನು ಹೊರಿಸಿ ಮೃತ್ಯುದಂಡನೆಯನ್ನು ಆಜ್ಞಾಪಿಸಿದ್ದಾನೆ. ನಾಳೆಯ ದಿನ ಆತನ ಪ್ರಾಣಪಕ್ಷಿಯು ದೇಹದಿಂದ ಬೇರ್ಪಡಲಿದೆ. ನಾವು ಅವನ ಅಂತಿಮ ದರ್ಶನಕ್ಕೋಸ್ಕರ ರಾಜಧಾನಿಯತ್ತ ಹೋಗುತ್ತಿದ್ದೇವೆ. ನಮ್ಮ ಕಲ್ಯಾಣಕ್ಕೋಸ್ಕರ ಪಥಿಕನು ಪ್ರಾಣವನ್ನು ಅರ್ಪಿಸಿದನು. ಅವನು ಪುಣ್ಯಾತ್ಮನಾಗಿದ್ದಾನೆ. ಆತನ ದರ್ಶನದಿಂದ ನಮ್ಮ ಪಾಪ ಕಡಿದುಹೋಗುವುದು.''— ಈ ರೀತಿಯಾಗಿ ಹೇಳಿ ಯಾತ್ರಿಕರು ಕಣ್ಣೀರು ಮಿಡುಕುತ್ತಾ ಹೊರಟುಹೋದರು.

ಈ ಸಮಾಚಾರವು ವಿದ್ಯುದಲೆಗಳಂತೆ ಗ್ರಾಮದ ಗೃಹ ಗೃಹದಲ್ಲಿ ಹರಡಿಬಿಟ್ಟಿತು. ಪಥಿಕನ ಪತ್ನಿಯು ಇದನ್ನು ಕೇಳಿ ತನ್ನ ಪತಿಯ ದರ್ಶನವನ್ನು ಪಡೆಯುವ ಅವಕಾಶ ಒದಗಿತೆಂದು ಅತ್ಯಂತ ಉಲ್ಲಾಸಿತಳಾದಳು. ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಶೃಷಾಸಕ್ತ ಪ್ರಾಣಿಯು ನೀರನ್ನರಸಿಕೊಂಡು ಹೋಗುವಂತೆ ಆಕೆಯು ರಾಜಧಾನಿಯತ್ತ ಹಾರಿದಳು. ಗ್ರಾಮದ ಆಲ ಬಾಲವೃದ್ಧರೂ ಸ್ತ್ರೀ ಪುರುಷರೆಂಬ ಭೇದಭಾವವಿಲ್ಲದೆ ಪಥಿಕನ ದರ್ಶನಾಕಾಂಕ್ಷೆಯಿಂದ ಓಡಿಹೋದರು.

ಕಾರಾಗೃಹದ ಎದುರು ಕಬ್ಬಿಣದ ಸಂಕಲೆಗಳಿಂದ ಬಂಧಿತನಾಗಿ ಪಥಿಕನು ಕೂತಿದ್ದನು. ಅವನ ಮುಖ ಕಮಲವು ಶಾಂತಿ, ಆನಂದ, ಮತ್ತು ಲೋಕ ಕಲ್ಯಾಣ ಕೋಸ್ಕರ ಜೀವನವನ್ನರ್ಪಿಸಿದ ಪುಣ್ಯ ಪ್ರಭಾವದಿಂದ ಪ್ರಕಾಶಿಸುತ್ತಿತ್ತು. ಆತನ ಮುಂದೆ ಶ್ರೀಮಂತ, ದರಿದ್ರ, ಕೃಷಿಕ, ಶ್ರಮಿಕ ಮತ್ತು ಸಾಧು ಸನ್ಯಾಸಿಗಳೆಲ್ಲರೂ ದುಃಖದ ಭಾರದಿಂದ ಕುಸಿದ ಹೃದಯಗಳಿಂದ ನಿಂತುಕೊಂಡಿದ್ದರು. ಎಲ್ಲರೂ ಆತನನ್ನು ಮಿಟ ಮಿಟನೆ ನೋಡತೊಡಗಿದರು. ಸಮೂಹದಲ್ಲಿ ಘೋರಾತಿಘೋರ ಸದೃಶವಾದ ವಿಷದಿಂದ ತುಂಬಿದ ಲೋಟೆಯೊಂದಿತ್ತು. ರಾಜನ ಆಜ್ಞೆ ದೊರೆತೊಡನೆಯೇ ಆ ವಿಷಪಾನಮಾಡಿ ಪಥಿಕನು ಪ್ರಾಣ ತ್ಯಾಗ ಮಾಡಬೇಕಾಗಿತ್ತು.

ಈ ಹೃದಯ ವಿದ್ರಾವಕ ಸನ್ನಿವೇಶದಲ್ಲಿ ಪಥಿಕನ ಪತ್ನಿಯು ಆತನೆದುರು ಬಂದು ವಿಷ ಪಾತ್ರೆಯನ್ನೆತ್ತಿ ಕುಡಿದುಬಿಟ್ಟಳು. ಜನರು ಹಾಹಾಕಾರ ಮಾಡತೊಡಗಿದರು. ಪತ್ನಿಯ ಪತಿಯು ಜೀರಣಧೂಳಿಯನ್ನು ಶಿರಸ್ಸಿಗೇರಿಸುತ್ತಾ ''ಇಂದು ನನ್ನ ಪ್ರಾಣನಾಥನ ಸಮ್ಮುಖದಲ್ಲಿ ಮರಣ ಹೊಂದುವಾಗ ಆಗುತ್ತಿರುವ ಸಂತೋಷ ಪುನಃ ನನಗೆ ಹಿಂದೆಂದೂ ಆಗಿರಲಿಲ್ಲ' ಎಂದು ನುಡಿದಳು.

ಆಕೆಯು ಮುಂದುವರಿಯುತ್ತಾ ತನ್ನ ಪತಿಯೊಡನೆ ಅಪಾರ ಪ್ರೇಮದಿಂದ ಅಡಿದಳು 'ಗೃಹವನ್ನು ತ್ಯಜಿಸಿದ ಪ್ರಕೃತಿ ಪ್ರೇಮಿಯಾದ ಪ್ರಾಣನಾಥನೆ, ನನಗೆ ನಿನ್ನ ಸೇವೆಯನ್ನು ಮಾಡುವ ಸೌಭಾಗ್ಯವು ದೊರೆಯಲಿಲ್ಲ. ನನ್ನ ಅಪರಾಧವನ್ನು ಪ್ರೇಮಿಸಿ ಬಿಡು.' ವಿಷ ಪ್ರಭಾವದಿಂದ ಆಕೆ ಮುಂದೆ ಮಾತಾಡಲಾರದಾದಳು. ಆಕೆಯು ತನ್ನ ಪತಿಯ ಮುಖವನ್ನು ತುಟ್ಟಿಸುತ್ತಾ ಕೆಲವೇ ಕ್ಷಣಗಳಲ್ಲಿ ಇಹಯಾತ್ರೆಯನ್ನು ಮುಗಿಸಿದಳು.

ತನ್ನ ಪತ್ನಿಯ ಮಾತುಗಳನ್ನು ಕೇಳುತ್ತಿದ್ದಂತೆ ಪಥಿಕನ ನಯನಗಳಿಂದ ಕಣ್ಣೀರು ಕೋಡಿ ಹರಿಯತೊಡಗಿತು. ಅಲ್ಲಿ ಸೇರಿದ್ದ ಜನರು ಪಥಿಕನ ಪತ್ನಿಯ ಆತ್ಮಾರ್ಪಣೆಯನ್ನು ಕಂಡು ಆವಾಕ್ಕಾದರು. ಪಥಿಕನ ಮಗನು ತನ್ನ ತಾಯಿಯ ಹಿಂದೆ ಗುಂಪನ್ನು ದಾಟಿ ಬಂದಿದ್ದನು. ತನ್ನ ತಾಯಿಯು ಇನ್ನು ದೊರೆಯಲಾರಳು ಎಂಬುದು ತಿಳಿಯುವಷ್ಟು ಆತನ ಪ್ರೌಢಳು ಪಕ್ವವಾಗಿದ್ದಿಲ್ಲ. ಆತನು ತಾಯಿಯ ಬಳಿಗೆ ಬಂದು ಮೈದಡವುತ್ತಾ ಹೇಳಿದನು— ಅಮ್ಮಾ ಮನೆಗೆ ಹೊರಡೋಣ ನನಗೆ ಹಸಿವಿಯಾಗುತ್ತಿದೆ. ನಾನೊಬ್ಬನೇ ಎಲ್ಲಿಗೆ ಹೇಗೆ ಹೋಗಲಿ?''

ಬಾಲಕನ ಮಾತುಗಳನ್ನು ಕೇಳಿ ಸಂದಣಿಸಿದ್ದ ಜನತೆಯ ಹೃದಯಗಳಲ್ಲಿ ಕರುಣಾ ಸಾಗರದ ತೆರೆಗಳೇಳ ತೊಡಗಿದುವು. ರಾಜನ ಹೆದರಿಕೆಯನ್ನು ಎಳ್ಳಷ್ಟೂ ತೋರ್ಪಡಿಸದೆ ಓರ್ವ ಸ್ತ್ರೀಯು ಮುಂದೆ ಬಂದು ಹುಡುಗನನ್ನು ಎತ್ತಿಕೊಂಡು ಸದೇ ಪದೇ ಚುಂಬಿಸತೊಡಗಿದಳು.

ಅಷ್ಟರಲ್ಲಿ ರಾಜ ದೂತನು ಜನ ಸಂದೋಹದ ನಡುವೆ ದಾರಿ ಮಾಡಿಕೊಳ್ಳುತ್ತಾ ಮುಂದೆ ಬಂದನು. ಆತನು ಜನತೆಯನ್ನುದ್ದೇಶಿಸಿ ಪಥಿಕನ ಅಪರಾಧ ಮತ್ತು ರಾಜಾಜ್ಞೆಯನ್ನು ಉಚ್ಚೈಸ್ವರದಲ್ಲಿ ಓದಿ ಹೇಳಿದನು—''ರಾಜನು ಪಥಿಕನನ್ನು ತನ್ನ ಪ್ರಜೆಯೆಂಬ ಅಭಿಮಾನದಿಂದ ಆತನಿಗೆ ಕಷ್ಟವಾಗ ಭಾರದೆಂದು ವಿಷ ಕುಡಿಸಿ ಕೊಲ್ಲಬೇಕೆಂದು ಆಜ್ಞೆ ಮಾಡಿದ್ದನು. ಆದರೆ ಈತನ ಅಪರಾಧದ ವರ್ತಮಾನವನ್ನು ಕೇಳಿ ಅವನ ಪತಿವ್ರತೆಯಾದ ಪತ್ನಿಯು ತನ್ನ ಪತಿಯ ಪಾಪಕರ್ಮಗಳಿಂದ ಬಹು ದುಃಖಿತಳಾದಳು. ಇದರಿಂದಾಗಿ ಆಕೆಯು ವಿಷವನ್ನು ಕುಡಿದು ಪ್ರಾಣ ತ್ಯಾಗ ಮಾಡಿದಳು. ಆಕೆಯ ಮರಣಕ್ಕೆ ಈ ಪಾಪಿಯಾದ ಪಥಿಕನೇ ಕಾರಣ ಈ ಘಟನೆಯಿಂದ ರಾಜನು ಬಹಳ ಕುಪಿತನಾಗಿದ್ದಾನೆ. ಅವನು ಈತನ ಅಂಗಾಂಗಗಳನ್ನು ಕತ್ತರಿಸಿ ಚಿತ್ರ ಹಿಂಸೆಯ ಮೂಲಕ ಕೊಂದು ಹಾಳಬೇಕೆಂದು ಹೊಸತಾಗಿ ಆಜ್ಞೆ ಇತ್ತಿದ್ದಾನೆ. ಈ ಅಪರಾಧವನ್ನು ಸ್ವೀಕರಿಸಿ ಕ್ಷಮೆಗಾಗಿ ಪ್ರಾರ್ಥಿಸುವನಾದರೆ ರಾಜನು ಇವನ ಪುತ್ರನಿಗೆ ಪ್ರಾಣ ದಾನ ಮಾಡುವನು. ಇಲ್ಲವಾದರೆ ಈ ವಿಷಯಕ್ಕೆ ಸಮೂಲ ನಾಶವಾಗುವುದಕ್ಕೋಸ್ಕರ ಆತನ ತಲೆಯನ್ನು ಕತ್ತರಿಸಿ ಹಾಕಲಾಗುವುದು.

(ಸಾಧಾರ)

— ಗೋರಾ ಉಡುಪಿ.

ವಿನೋದ ವಿಹಾರ

ಓದುವಿರಾದರೆ ನಕ್ಕುನಲಿಯಬಹುದು!

ಶರ್ಕರಜಾಲ

ಪತಿ [ಜಗಳವಾಡಿ ದಿನ ರಾತ್ರಿ]— ''ಪ್ರಿಯೆ! ನಮ್ಮ ಬೆಳಗಿನ ವಾದ-ವಿವಾದ .....''

ಪತ್ನಿ [ಕೋಪದಿಂದ]....'ಏನು?''

ಪತಿ— ನನ್ನ ವಿಚಾರ ಬದಲಾಗಿದೆ. ನೀನೇ ಸರಿಯೆಂದು ನನಗೀಗ ತೋಚುತ್ತಿದೆ.

ಪತ್ನಿ—ನನ್ನ ಅಭಿಪ್ರಾಯ ಕೂಡ ಬದಲಾಗಿದೆ. ನಾನು ಹೇಳಿದ್ದು ಸರಿ ಎಂದು ನಾನೇನೂ ಯೋಚಿಸುತ್ತಿರಲಿಲ್ಲ.

ಕಡಮೆ ಸಮಯ

ಓರ್ವ ಸಜ್ಜನ ಬಸ್ಸಿನಲ್ಲಿ ಖಾಲಿ ಸ್ಥಳ ವಿದ್ದರೂ ಕೂಡಾ ನಿಂತುಕೊಂಡೇ ಪ್ರಯಾಣ ಮಾಡುತ್ತಿದ್ದ.

ಕಂಡಕ್ಟರ್— ಕುಳಿತುಕೊಳ್ಳಿ ಸ್ವಾಮಿ!

ಸಜ್ಜನ—ನನಗೆ ಎಳತುಕೊಳ್ಳಲು ಸಮವಿಲ್ಲ. ಕೂಡಲೇ ಸ್ಟೇಶನ್ ತಲುಪಬೇಕಾಗಿದೆ.

ಪೋಲೀಸರಿದ್ದಾರೆಯೇ?

ಕಳ್ಳ—ಸ್ವಾಮೀ! ಇಲ್ಲಿ ಹತ್ತಿರ ಎಲ್ಲಿ ಯಾದರೂ ಪೋಲೀಸರನ್ನು ನೋಡಿದಿರಾ? ನೋಡಿದ್ದರೆ ಹೇಳಿ.

ದಾರಿಹೋಕ—ಪೋಲಿಸರೇ! ಅವರ ನೆರಳು ಕೂಡಾ ಕಾಣಬರಲಿಲ್ಲ. ಇಷ್ಟು ಜಂಬಮ ಮೋರಾಗಿದ್ದಾರೆ, ಈ ಪೋಲಿಸರು!

ಕಳ್ಳ—ಹಾಗಾದರೆ ಸರಿ. ಬೇಗನೇ ನಿಮ್ಮ ದುಡ್ಡಿನ ಪಾಕೆಟ್ ಇಲ್ಲಿ ಕೊಡಿ. ಇಲ್ಲವಾದರೆ.....

ನುರೆಯಲು ಸಾಧ್ಯವಿಲ್ಲ

ಅದ್ವಿತೀಯವಾಗಿ ನಟಿಸಿ, ಜನಮೆಚ್ಚುಗೆ ಗಳಿಸಿದ ಬಾಲನಟಿಯು ಹುಟ್ಟುಹಬ್ಬ ದಂದು ಚಿತ್ರ ಉತ್ಪಾದಕಸೊಬ್ಬ ಭಾಷಣವೀಯುತ್ತಾ ಹೀಗೆ ಹೇಳಿದ: ''ನಾವು ಈ ಬಾಲ ನಟಿಗೆ ಪುರಸ್ಕಾರವೀಯಲೇ ಬೇಕು. ಆದರೆ ಈ ಚಿನ್ನದ ಪೊಟ್ಟಯನ್ನು ಶ್ರೀಕೋಳಿಯನ್ನೂ ಮರೆಯಲು ಸಾಧ್ಯವಿಲ್ಲ.''

ಮರಣದ ಕಾರಣ

ಆಕೆ — ನಿಮ್ಮ ಪತಿಯ ಮರಣಕ್ಕೆ ಕಾರಣವೇನು?

ಈಕೆ — ನನ್ನ ಪತಿಗೆ ಮರೆವು ಬಹಳ. ಆದುದರಿಂದ ಬಸ್ಸುಚಕ್ರ ಎಲ್ಲೋ ಉಸಿರಾಡುವುದನ್ನೇ ಮರೆತಿರಬೇಕು.

ಜೆಚ್ಚು ಸಾರಿ ಹೇಳಿದರೆ ಒಳ್ಳೆಯದಲ್ಲ

ಸುಂದರ ಹುಡುಗಿಯೊಬ್ಬಳು ಒಂದು ಶಂಕಿತ ಪತ್ರವನ್ನು ಆಂಜೆಕಟ್ಟಿಗೆ ಬಂದು ಕ್ಲಾರ್ಕನ ಕೈಗೆ ಕೊಟ್ಟಳು. ಅದರಲ್ಲಿ ''ಆಗಬಹುದು'' ಎಂದಷ್ಟೇ ಆಕೆ ಬರೆದಿದ್ದಳು. ಕ್ಲಾರ್ಕ್ ''ನೀವು ಇನ್ನೂ ಐದು ಶಬ್ದಗಳನ್ನು ಇಷ್ಟೇ [illegible] ಕಳುಹಿಸಬಹುದಾಗಿದೆ'' ಎಂದನು.

ಹುಡುಗಿ ಹೇಳಿದಳು— ''ಅದು ನನಗೆ ಗೊತ್ತಿದೆ. ಆದರೆ ನಾನು ಇನ್ನೂ ಐದು ಬಾರಿ 'ಆಗಬಹುದು' ಎಂದು ಹೇಳಿವಷ್ಟು ಮೊಬಿಳಾಗಿಲ್ಲ.''

ಗಳಿಸಿದ ಹೆರಾಕ್ರನು

''ನಾನು ನನ್ನ ಜೀವನದಲ್ಲಿ ದನದ ಮಾಂಸವನ್ನೇ ಮುಖ್ಯ ಆಹಾರವಾಗಿ ಟ್ಟುಕೊಂಡು ಬಂದುದರ ಕಾರಣವಾಗಿಯೇ ಇಂದು ನಾನು ಒಂದು ಎತ್ತಿನಷ್ಟು ಬಲವನ್ನು ಸಂಪಾದಿಸಿಕೊಂಡಿದ್ದೇನೆ.''

''ನಾನು ವಿಷವನ್ನೇ ತಿನ್ನುತ್ತಿದ್ದ ಕಾರಣದಿಂದಲೋ ಏನೋ, ಈಗ ಅಷ್ಟು ಸುಲಭವಾಗಿ ನೀರನ್ನೆ ಜೀರ್ಣಿಸುತ್ತಿದ್ದೇನೆ.''

ಶ್ರೀ ಎನ್. ನಾರಾಯಣ ಬಲ್ಲಾಳ, ಹಾಸನ.

೭೦ ವರ್ಷ ಗಳಿಂದಲೂ ಪ್ರಸಿದ್ಧ ಇದೆ. ಮೆಕೇರಿಯಾ ಇನ್‌ಫ್ಲುಯೆಂಜಾ ಸುತ್ತು ಎಲ್ಲ ಜ್ವರಗಳಿಗೆ ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.
ಬಾಟ್ಲಿವಾಲಾ ಎಗ್ಲೂಮಿಕ್ಶರ
ಮತ್ತು ಗುಳಿಗೆಗಳು
ಮಾರಾಟ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್, ಬ್ರಿಟಿಷ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಆಡಳಿತೆ

ಅಪ್ರಾಮಾಣಿಕ ನೌಕರರಿಂದ ಆಡಳಿತೆ ಕುಸಿಯುತ್ತಿದೆ

ರೇಲ್ವೆ ವಿಭಾಗದ ಚಟುವಟಿಕೆಯನ್ನು ಕಂಡ ನೋಲೆ ಈ ವಿಭಾಗವನ್ನು ಏನೆಂದು ಕರೆಯಬಹುದು? ಎಂದು ಕೇಳುತ್ತೀರಿ

ದಿನಾಂಕ ೧೫ ಫೆಬ್ರವರಿ ಬೆಳಗ್ಗಿನ ಸಮಯ. ಮೇಜಿನ ಮೇಲೆ ಬಿದ್ದಿದ್ದ ದೈನಿಕಪತ್ರಿಕೆಯ ಮೇಲೆ ನನ್ನ ದೃಷ್ಟಿ ಬಿತ್ತು. 'ಗಗನ—ಗಾಂ ರೈಲ್ವೆ ಟಿಕೆಟ್' ನಲ್ಲಿ ೨೬ ಕೋಟಿ ೩೪ ಲಕ್ಷ ಹಣದ ಉಳಿತಾಯ'-'ಲೋಕಸಭೆಯಲ್ಲಿ ರೈಲ್ವೆ ಮಂತ್ರಿಯಿಂದ ಘೋಷಣೆ'. ಎಂದು ದಪ್ಪ ಅಕ್ಷರಗಳಲ್ಲಿ ಅದರಲ್ಲಿ ಬರೆದಿತ್ತು.

ನನ್ನ ದೃಷ್ಟಿ ಪತ್ರಿಕೆಯ ಮೇಲಿದ್ದರೂ ನನ್ನ ಮನಸ್ಸು ರೈಲ್ವೆ ವಿಭಾಗದಲ್ಲಿ ಸಂಚರಿಸುತಿತ್ತು. ಭಾರತೀಯ ರೈಲ್ವೆ ಸಾಧಾರಣ ೩೫ ಸಾವಿರ ಮೈಲುಗಳ ಉದ್ದಕ್ಕೆ ವ್ಯಾಪಿಸಿದೆ. ರೈಲ್ವೆಯಿಂದ ೧೩೪ ಕೋಟಿ ಹಣದ ನೊತ್ತ ನಮ್ಮ ವ್ಯವಹಾರಕ್ಕೊದಗುವುದು. ಇದುದರಿಂದ ಇದನ್ನು ರಾಷ್ಟ್ರೀಯ ಉದ್ಯೋಗವೆನ್ನಬಹುದು. ನಮ್ಮ ದೇಶದ ಆರ್ಥಿಕ ವ್ಯವಸ್ಥೆ ಇವನ್ನೇ ಹೊಂದಿಕೊಂಡಿದೆ. ಈ ಇಲಾಖೆಯಲ್ಲಿ ೧೦ಲಕ್ಷ ಕ್ಕಿಂತ ಹೆಚ್ಚು ಜನರು ಕೆಲಸಮಾಡುತ್ತಾರೆ. ಇದರಿಂದ ದೇಶಕ್ಕೆ ಬಹಳಷ್ಟು ಉತ್ಪತ್ತಿ ಹೆಚ್ಚಿದೆ. ಆದರೆ ಈ ಹಣದ ಉಳಿತಾಯದ ರಾಶಿ ೨೬ ಕೋಟಿಯಿಂದ ೩೭ ಅಥವಾ ೪೭ ಕೋಟಿಯಷ್ಟು ದೆಚ್ಚಾಗುತ್ತಿರಲಿಲ್ಲವೆ? ಖಂಡಿತವಾಗಿಯೂ ಆಗುತಿತ್ತು. ಆದರೆ ಅದಕ್ಕೆ ರೈಲ್ವೆ ನೌಕರರಲ್ಲಿ ಪ್ರಾಮಾಣಿಕತೆ ಹೆಚ್ಚಬೇಕು. ಈ ಪ್ರಾಮಾಣಿಕತೆ ಎಲ್ಲಿಂದ ಬರಬಹುದು? ಮಾರ್ಕೆಟುಗಳಲ್ಲಿ ಸಿಗುವ ವಸ್ತು ಇವಲ್ಲ. ಮಾರ್ಕೆಟುಗಳಲ್ಲಿ ಸಿಗುವುದಾದರೆ ಅದನ್ನು ತಂದು ರೈಲ್ವೆ ನೌಕರರಿಗೆ ಹಂಚಬಹುದಿತ್ತು.

ರೈಲ್ವೆ ನೌಕರರಲ್ಲಿ ಅನೇಕರು ರೈಲ್ವೆ ಸಂಪತ್ತನ್ನು ತಮ್ಮ ಸ್ವಂತ ಸಂಪತ್ತೆಂದೇ ಭಾವಿಸುತ್ತಾರೆ. ಟಿಕೇಟಿಲ್ಲದೆ ಪ್ರಯಾಣಿಸುವ ವಿಚಾರ ಸಂಬಂಧಪಟ್ಟವರಿಗೆ ತಿಳಿಯುವ ಸಂಭವವಿದ್ದರೆ ರೈಲನ್ನು ತಡೆದು ನಿಲ್ಲಿಸಿ ಅವರು ತಮ್ಮ ತಮ್ಮ ಸ್ಥಳವನ್ನು ತಂಗುತ್ತಾರೆ. ನೌಕರರ ಸಂಬಂಧಿಕರು ಪ್ರಯಾಣಿಸುವಾಗ ಟಿಕೇಟು ತೆಗೆದುಕೊಳ್ಳುವ ಸದ್ಬುದ್ಧಿಯೇ ಇಲ್ಲ. ಆ ರೀತಿ ಪ್ರಯಾಣಿಸುವವರು ರೈಲ್ವೆ ನೌಕರರ ಕೆಸರು ಹೇಳಿಕೊಂಡು ತಮ್ಮನ್ನು ತಾವೇ ತಪ್ಪಿಸಿಕೊಳ್ಳುತ್ತಾರೆ.

ಪಾಟ್ನಾದೊಬ್ಬ ಮನುಷ್ಯನು ಪಾಟ್ನಾದಿಂದ ಗುಂಟೂರ್ ಕ್ಷೇತ್ರಕ್ಕೆ ತಿಂಗಳಿಗೆ ಸರಾಸರಿ ೨೦ ಬಾರಿ ಪ್ರಯಾಣ ಮಾಡುತ್ತಾನೆ. ಟಿಕೇಟು ಪಡಕೊಂಡು ಪ್ರಯಾಣ ಮಾಡುವುದಾದರೆ ತಿಂಗಳಿಗಿಷ್ಟು ಬಾರಿ ಪ್ರಯಾಣ ಯಾರೂ ಮಾಡಬಾರದಷ್ಟೆ! ಆತನ ಜೇಕ್ಕಸ್ಸನ್ನು ಐ.ಟ್ಟಿ—ಗಳೂ ಕ್ಷೇತ್ರದ ಮಧ್ಯದಲ್ಲಿ ಲೈನ್‌ಗಾರ್ಡ್ ಆಗಿದ್ದಾನೆ. ಆತನೊಂದು ದಿನ ಈ ಸುದ್ದಿಯನ್ನು ಬಹಿರಂಗಪಡಿಸುತ್ತಾ—'ನನ್ನ ಚಿಕ್ಕಪ್ಪ ರೈಲ್ವೆ ಗಾರ್ಡ್ ಆಗಿದ್ದಾರೆ. ಆವರು ನನ್ನನ್ನು ಧರ್ಮಾಧಿಪಾಗಿ ಸೆಕೆಂಡ್ ಕ್ಲಾಸಿನಲ್ಲೆ ಪ್ರಯಾಣಮಾಡುವಂತೆ ಸಲಹೆ ಮಾಡುತ್ತಾರೆ. ನಾನು ಮಾತ್ರ ಥರ್ಡ್ ಕ್ಲಾಸಿನಲ್ಲೆ ಪ್ರಯಾಣಮಾಡುತ್ತೇನೆ. ಟಿಕೇಟು ಚೆಕ್ಕಿಂಗ್‌ಮಾಡುವವನು ಬಂದಾಗ ನಾನೊಂದು ಹೆಸರನ್ನು ಹೇಳುತ್ತೇನೆ.' ಎಂದು ಈ ರೀತಿಯಾಗಿ ಹೇಳಿದನು. ಪಾಟ್ನಾದಿಂದ-ಗುಂಟೂರ್‌ಗೆ ಹೋಗಿಬರುವ ರೈಲ್ವೆ ಚಾರ್ಜು ೮ ರೂಪ್ಯಾ. ಈ ಮಹಾಶಯನು ಚಿಕ್ಕಪ್ಪನ ಹೆಸರು ಹೇಳಿ ರೈಲ್ವೆ ವಿಭಾಗಕ್ಕೆ ತಿಂಗಳಿಗೆ ೧೩೦ ರೂಪ್ಯಾ ನಷ್ಟವನ್ನು ತಂದೊಡ್ಡಿದನಷ್ಟೆ!

ರೈಲ್ವೆ ಇಲಾಖೆಯ ೧೦ ಲಕ್ಷ ನೌಕರರಲ್ಲಿ ಕಡಿಮೆ ಪಕ್ಷ ೧೦ ಸಾವಿರ ನೌಕರರೂ, ಆಫೀಸ್ ಅವರ ಸಂಬಂಧಿಕರು ಟಿಕೇಟಿಲ್ಲದೆ ಪ್ರಯಾಣ ಮಾಡುತ್ತಾರೆ. ಇಂತವರು ಈ ವಿಭಾಗಕ್ಕೆ ತಿಂಗಳೊಂದರ ಕಡಿಮೆ ಪಕ್ಷ ೩೦ ಲಕ್ಷ ರೂಪ್ಯಾ ನಷ್ಟ ತಂದೊಡ್ಡುವರು. ಇದು ವರ್ಷದಲ್ಲಿ ೩೬ ಕೋಟಿ ೪೦ ಲಕ್ಷಗಳಷ್ಟಾಗುವುದು. ಹೆಚ್ಚಾಗಿ ರೈಲ್ವೆ ನೌಕರರಲ್ಲಿ ನೇತಾಜಿ ಅಂತಹ ಜನ ಹೀಗೆಯೇ ಮಾಡುತ್ತಾರೆ. ಇದರಿಂದ ರೈಲ್ವೆ ಉತ್ಪತ್ತಿ ಹೆಚ್ಚಲೇ ಕಡಿಮೆಯಾಗುವುದಿಲ್ಲವೆ? ನಮ್ಮ ಸರಕಾರ ಈ ವಿಷಯದಲ್ಲಿ ಕಠಿಣ ಹೆಜ್ಜೆಯನ್ನಿಡಬೇಡವೆ?

ಒಂದು ದಿನ ಒಂದು ಸ್ವಾರಸ್ಯದ ಘಟನೆ ನಡೆಯಿತು. ಒಂದು ಭಾರಿ ಟಿಕೇಟು ಚೆಕ್ಕರನು ಇಂತಹ ಒಬ್ಬ ಮನುಷ್ಯನಿಂದ ರೈಲ್ವೆ ಚಾರ್ಜನ್ನು ತೆಗೆಸಿ ಕೊಡಲು-ಪ್ರಯಾಣಿಕನು ತನ್ನ ಸಂಬಂಧಿಕನಿಗೆ ಈ ವಿಚಾರ ತಿಳಿಸಿದನು. ಸಂಬಂಧಿಕನು ಓಡಿ ಕೊಂಡು ಬಂದು ಟಿಕೇಟು ಚೆಕ್ಕರನನ್ನು ಕರೆತಂದು ಈ ರೀತಿಯಾಗಿ ಹೇಳಿದನು—'ಸ್ವಾಮಿ! ತಾವು ತಮ್ಮ ಮಕ್ಕಳಿಂದಲೂ ಹಣ ಪಡೆಯಲು ಆರ ಭಿಸಿದಿರೆ?' ಎಂದು ಟಿಕೇಟು ಚೆಕ್ಕರನು ಹಣ ಮರುಪಾವತಿ ಮಾಡಿ ತನ್ನ ಅನಾವಶ್ಯಕತೆಯನ್ನು ಪ್ರಕಟಿಸಿದನು. ಮುಂದೆ ಈ ಚೆಕ್ಕರನನ್ನು ನೌಕರರು ಮಾತಲವು ಬಹಿಷ್ಕರಿಸಿತು. ಒಡಪಾಯ ಚೆಕ್ಕರ ಸೀರಲ್ಲಿದ್ದೂ ನೊಸಲೆಗೆ ಹೆದರುವಂತಾದನು.

ಕಲವು ಕಡೆಗಳಲ್ಲಿ ಗಾಡಿಯು ಸರಪಳಿಯೆಳೆದು ಅನಾವಶ್ಯಕ ಗಾಡಿ ಹೊರಡುವ ಸಮಯವನ್ನು ತಪ್ಪಿಸುವುದುಂಟು. ಇದಕ್ಕೆ ಸ್ವಲ್ಪ ಕಾರಣರು ರೈಲ್ವೆ ಪ್ರಯಾಣಿಕರಿದ್ದರೂ. ಕೆಲಸಗಾರರ ಕೈವಾಡ ಇದರಲ್ಲಿ ಇಲ್ಲದೆ ಇಲ್ಲ. ನಾನು ಅನೇಕ ಕಡೆಗಳಲ್ಲಿ ಕಂಡಿದ್ದೇನೆ. ಒಬ್ಬ ಪ್ರಮುಖ ವ್ಯಾಪಾರಿಯು ರೈಲ್ವೆ ಗಾರ್ಡಿಗೆ ೧೦ ರೂಪ್ಯಾಗಳ ೨೮ರು ನೋಟುಗಳನ್ನು ಕೊಟ್ಟ ತಮಗೆಷ್ಟು ಸಮಯ ರೈಲು ತಡೆಯು ಬೇಕೋ ತಿಷ್ಟು ಸಮಯ ತಡೆ ಹಿಡಿದಿರಿಸಿದನು. ಇಂತಹ ಸಂದರ್ಭದಲ್ಲಿ ರೈಲ್ವೆ ಗಾರ್ಡನು, ಹೇಳುವುದನ್ನು ನಾನು ಕೇಳಿದ್ದೇನೆ—'ಏನು ಮಾಡಲಿ ಸ್ವಾಮಿ! ಈಗ ಬಹಳ ಚಳಿ ಆಗಿದೆ. ಹಿಂದೆ ಹೀಗೆಯೆ ೩೦೦,೩೦೦ ರೂಪ್ಯಾ ಸಂಪಾದನೆ ಪ್ರತಿನಿತ್ಯವೂ ಆಗುತಿತ್ತು ಈಗ ೧೦೦ ರೂಪ್ಯ ಕೂಡಾ ಪಾಕೇಟಿನ್ನು ಸೇರುವುದಿಲ್ಲ.'

ವಾಚಕರೆ! ತಾವೇ ಯೋಚಿಸಿರಿ. ಈ ಸಜ್ಜನರಿಗೆ ೧೦೦ ರೂಪ್ಯಾಗಿಂತ ಕಡಿಮೆ ಹಣ ಕಣ್ಣಿಗೆ ಕಾಣಿಸುವುದಿಲ್ಲ. ಅವನ ಉತ್ಪತ್ತಿಗಾಗಿ ರೈಲು ವೇಳೆ ತಪ್ಪಿ ಹೊರಡುವುದು ಸರಿಯೆ? ಗಗಜ ಆಗೋಸ್ಕರ ತಿಂಗಳಂದ ಇಂದಿನ ವರೆಗೆ ಥಿಲ್ಲಿ ಮಟ್ಟು ಹಾರಾದ ನಡುವಿನಲ್ಲಿ ಚಲಿಸುವ ಯಾವ ಬಂಡಿಯು ಪ್ರಾಯಶಃ ೧೫ ದಿನಗಳಲ್ಲಿ ಮಾತ್ರ ಸಮಯಕ್ಕೆ ಸರಿಯಾಗಿ ಬಂದು ತಲಪಿತ್ತೆಂಬ ವಿಚಾರ ತಿಳಿದಾಗ ನಿಮಗೆ ಆಶ್ಚರ್ಯವಾಗಲಿಕ್ಕಿಲ್ಲವೆ? ಇವಕ್ಕೆ ಕಾರಣ ಅಲ್ಲಿ ಹೂಹಣ್ಣಿನ ವ್ಯಾಪಾರಿಗಳು ತುಂಬಿಕೊಂಡಿರುವುದೇ ಆಗಿದೆ. ಹೆಜ್ಜು ಹೂಹಣ್ಣು ಉತ್ಪತ್ತಿಯಾಗುವ ಸ್ಥಳದಿಂದ ಕಡಮೆ ಉತ್ಪತ್ತಿಯಾಗುವ ಸ್ಥಳಕ್ಕೆ ನೇಲೆ ಹೇಳಿದ ರೀತಿಯಾಗಿ ರೈಲಿನಿಂದಲೇ ಅವುಗಳನ್ನು ನಾಗಿಸುತ್ತಾರೆ. ರೈಲ್ವೆ ನಿರೀಕ್ಷಿಸಿದ ಸಮಯ ತಪ್ಪಲು ಇದೇ ಕಾರಣವಾಗಿದೆ. ಈ ಕೆಲಸಗಳಲ್ಲಿ ಈಗ ವಿದ್ಯಾರ್ಥಿಗಳು ಸಹಭಾಗಿಗಳಾಗುತ್ತಿದ್ದಾರೆ.

ಒಂದು ದಿನ ನಾನು ರೈಲಿನ ಡಬ್ಬಿಯ ಲೆಕ್ಕಾಬ್ಬನನ್ನು ಕಂಡೆನು. ಆತನು ಸರಕಾರಿ ಪೋಷಾಕು ಧರಿಸಿದ್ದನು. ಆತನು ಕೆಲವು ಬಟ್ಟೆಗಳನ್ನು ಚೀಲದಲ್ಲಿ ತುಂಬಿಸಿಕೊಳ್ಳುತ್ತಿದ್ದನು. ನಾನು ಕೇಳಿದೆನು: 'ಮಿತ್ರರೆ! ಈ ಬಟ್ಟೆ ತಮ್ಮ ಮನೆಯನ್ನು ಜೋಗುವುದಕ್ಕಾಗಿ ಇಲ್ಲ. ಇಲ್ಲೇ ಅದು ಉರಿಯುವುದಿಲ್ಲವೆ?' ಎಂದು. ಆತನು ಬಹಳ ಲಕ್ಷಿಸಿದಿಂದ ಹೇಳಿದನು—'ಇದನ್ನು ಉರಿಸುವುದರ ಬದಲಾಗಿ ನನ್ನ ಮನೆಯ ಮಕ್ಕಳಿಗೆ ಆಪತ್ಕಾಲಕ್ಕಾಗಿಯೇ ತೆಗೆದುಕೊಂಡು ಹೋಗುತ್ತಿದ್ದೇನೆ" ಎಂದು. ಆತನ ಈ ಉತ್ತರದಿಂದ ನನ್ನ ಮಾತು ಕಟ್ಟಿ ಹೋಯಿತು. ನಾನು ಸುಮ್ಮನಾದೆನು. ಈ ಬಟ್ಟೆಗಳನ್ನು ಆತನು ರೈಲ್ವೆ ಡಬ್ಬಿಯಿಂದಲೇ ತೆಗೆದಿದ್ದನು.

ನಾನು ಮುಂದಿನ ಸ್ಟೇಶನ್ನಿನಲ್ಲಿ ಇಳಿದವನೆ ಹೋಗಿ ಈ ವಿಚಾರವನ್ನು ಸ್ಟೇಶನ್ನ ಮಾಸ್ಟರರಿಗೆ ತಿಳಿಸಿದೆನು. ಅವರು ಸಿಗರೇಟು ಸೇದುತ್ತಾ ಈ ರೀತಿಯಾಗಿ ಹೇಳಿದರು—'ಅದರಿಂದ ತನ್ಮಧ್ಯೇನಾ ಗುಂಟು ಮುಳುಗಿಹೋಯಿತು? ತಮ್ಮ ಅಭಿಮಾನ ಭಂಗವಾಗಿಲ್ಲವಷ್ಟೆ?" ಎಂದು.

ರೈಲ್ವೆ ಮೊದಲನೆಯ ವರ್ಗದ ಡಬ್ಬಿಗಳಲ್ಲಿರುವ ದೊಡ್ಡ ನಿಲುಗನ್ನಡಿ ರೇಲ್ವೆ ನೌಕರರ ನಸೆಬೆಗುವುದರಲ್ಲಿ ಸಹಾಯಕವಾಗಿದೆ. ರೈಲ್ವೆ ಫೋನ್‌ಗಳನ್ನು ಅವರು ತಮ್ಮ ಮನೆಗೆ ತೆಗೆದುಕೊಂಡು ಹೋಗುವುದಿದೆ. ಒಂದು ಬಾರಿ ಒಬ್ಬ ವಿದ್ಯಾರ್ಥಿ ರೈಲ್ವೆ ಸರ್ವಿಸ್ ಕಮಿಶನ್ ಫಾರ್ಮನ್ನು ತುಂಬಿಸಿಕ್ಕಾಗಿ ಒಬ್ಬ ರೇಲ್ವೆ ನೌಕರನ ಮನೆಗೆ ಹೋಗಿದ್ದೆನು. ಆತನು ಕನ್ನಡಿಗನೊಂದಿಗೆ ಈ ವಿಚಾರ ಹೇಳುತ್ತಿದ್ದನು- 'ಆ ಕರ್ಮಚಾರಿಯು ರೈಲ್ವೆ ಫೋನ್ ಗಳನ್ನು ತನ್ನ ಕೋಣೆಯ ನಾಲ್ಕು ಬದಿಗಳಲ್ಲೂ ಕಟ್ಟಿದ್ದನು. ಮತ್ತು ಆತನ ಹೆಂಡತಿ ಮಕ್ಕಳ ಹಾಸಿಗೆಯ ಮೇಲು .. ಹೀಗೆ ಹೇಳುತ್ತಾ ಆತನು ಮುಂದುವರಿದನು. ಮುಂದಿನ ಮಾತುಗಳು ನನ್ನ ಕಿವಿಗೆ ಬೀಳಲಿಲ್ಲ.

ರೈಲ್ವೆ ನೌಕರರಷ್ಟು ಅಪ್ರಾಮಾಣಿಕರು ಬೇರೆ ಯಾವ ಸರಕಾರಿ ನೌಕರರು ಇಲ್ಲವೆನ್ನಬಹುದು.

ಒಬ್ಬ ರೈಲ್ವೆ ನೌಕರನ ಮಾಸಿಕ ಬಹಳ ಸ್ವಾರಸ್ಯವಾಗಿದೆ- ಎಂಜಿ ತೆಗೆದುಕೊಳ್ಳದೆ ಕೆಲಸ ಮಾಡಿದು ಸ್ವಾಮಿ ಈ ಕಾಲದಲ್ಲಿ. ೨, ೩ ದಿನಗಳ ರಜೆಗಾಗಿ ಆಫೀಸರರಿಗೆ ೧೦ ರೂಪ್ಯಾ ಕೊಡಬೇಕಾಗುತ್ತದೆ. ಅನೇಕ ಬಾರಿ ರಜೆ ಬರೆಯಬೇಕಾಗುತ್ತದೆ ಪಾಕೇಟು ಬಿಸಿಮಾಡದೆ ಹೊದರೆ ಎಂದೂ ರಜೆ ಸಿಗದು. ದುರ್ದೈವವಶಾತ್ ನಾನು ಎಂತಿಕೋರನಾಗಿದ್ದೇನೆ. ಇಲ್ಲಿ ತೆಗೆದುಕೊಂಡರೆ ಅಲ್ಲಿ ಕೊಡುತ್ತೇನೆ ಎಂದನು.

ಪ್ರತಿ ವರ್ಷ ಎಷ್ಟು ಕೋಟಿ ರೂಪ್ಯಾ ಇದರಿಂದ ನಷ್ಟವಾಗುತ್ತಿದೆಯೆಂಬ ಪ್ರಶ್ನೆಗೆ ರೈಲ್ವೆ ನೌಕರೇ ಉತ್ತರವನ್ನೀಯಬೇಕು. ಕಡಿಮೆಪಕ್ಷ ವರ್ಷಂಪ್ರತಿ ೧೦ ಕೋಟಿ ರೂಪ್ಯಾ ರಾಷ್ಟ್ರೀಯ ಉತ್ಪನ್ನ ಇವರ ಪಾಕೇಟನ್ನು ತುಂಬಿಕೊಳ್ಳುವುದು ನಮ್ಮ ಸರಕಾರ ಈ ಬಗ್ಗೆ ಸೂಕ್ತ ಕ್ರಮ ಕೈಕೊಂಡು ಈ ಭ್ರಷ್ಟಾಚಾರವನ್ನು ತಡೆಹಿಡಿಯಬೇಕಾಗಿದೆ. ಇದನ್ನು ತಡೆಹಿಡಿಯಲು ಜನರ ಸಹಕಾರವು ಅಗತ್ಯವಾಗಿದೆ ಜನರ ಸಹಕಾರ ಇಲ್ಲದೆ ಹೋದರೆ ಸರಕಾರಿ ಹೆಜ್ಜೆ ನಿರರ್ಥಕವಾಗುವುದು. ಇಂತಹ ದೇಶದ್ರೋಹಿಗಳಿಗೆ ಯೋಗ್ಯ ಪಾಠಕಲಿಸಿಕೊಡುವುದು ನಮ್ಮೆಲ್ಲರ ಮುಖ್ಯ ಕೆಲಸವಾಗಿದೆ. ಇನ್ನು ಮುಂದೆ ಅವರು ರಾಷ್ಟ್ರದ ಹಣವನ್ನು ತಾವು ತುಂಬಿಕೊಳ್ಳದಂತಾಗಬೇಕು. ಇದರಿಂದ ಬರುವ ರಾಷ್ಟ್ರೀಯ ಉತ್ಪನ್ನವು 27 ಕೋಟಿಯಿದ್ದುದು 54 ಕೋಟಿಯಾಗಬೇಕು..ಇದಿಲ್ಲದಕ್ಕೂ ರೈಲ್ವೆ ನೌಕರರು ತಮ್ಮ ಸುವರ್ತನೆಗಳಿಂದ ದೂರವಾಗುವುದು ಅನಿವಾರ್ಯವಾಗಿದೆ.

(ಯೋಜನಾದಿಂದ)

ಕೆ. ದಾನೋಡರ ಐತಾಳ್, ಉಡುಪಿ.



ಕಾಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ಹಲವೇರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಸ್ಥ್ಯರು: ಷಾ ಕಂಪೌನ್ಡಿ, ಮಂಗಳೂರು—1.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

NAVAYUGA
REGD. NO. M. 3618

UDIPI, THURSDAY
9—10—1958

LICENSE NO. 31
Licensed to Post without Prepayment

ಅಹಿಂಸಾ ಶಕ್ತಿ

ವಿಶ್ವಕ್ಷೋಭ ವಿನಾಶಕ್ಕೆ ಅಹಿಂಸೆಯೇ ತಾರಕ

ಭಾರತೀಯರಿಗಿಂತಲೂ ಜಾಪನೀಯರು ಗಾಂಧೀ ತತ್ವಗಳನ್ನು ಹೆಚ್ಚಾಗಿ ಅನುಸರಿಸಬಲ್ಲರು

ಇಂದಿನ ಜಗತ್ತಿನ ತೊಂದರೆಗಳನ್ನು ಕುರಿತು ನಾವು ಆಲೋಚಿಸತೊಡಗಿದಾಗ, ಗಾಂಧೀಜಿಯವರ ಹೋಂಟದ ಅನುಭವವನ್ನು ಪಡೆದು ಜಗತ್ತಿನ ದೇಶಗಳು ತಮ್ಮ ಕಾರ್ಯಕ್ರಮ ಪುನರ್ವಿಮರ್ಶೆಗೊಳಿಸಬಾರದೇಕೆ ಎಂಬ ವಿಚಾರ ಬರುತ್ತದೆ. ಅವರು ಗಳಿಸಿದ ಅನುಭವವು ಕೇವಲ ಭಾರತಕ್ಕೆ ಮಾತ್ರ ಮರ್ಯಾದಿತವಾಗಿಲ್ಲ; ಅದನ್ನು ಅಖಂಡ ಜಗತ್ತೇ ಉಪಯೋಗಿಸಿಕೊಳ್ಳಬೇಕಾಗಿದೆ.

ಇಂದು ಜಗತ್ತು ನೈಜ್ಞಾನಿಕ ಹಾಗೂ ತಾಂತ್ರಿಕ ಕ್ಷೇತ್ರದಲ್ಲಿ ತೀವ್ರ ಪ್ರಗತಿಯನ್ನು ಸಾಧಿಸಿದ್ದು ಇದರ ಪರಿಣಾಮವಾಗಿ ಹಿಂಸಾಚರಣೆಯ ಪ್ರಮಾಣವು ಪ್ರಚಂಡವಾಗಿದೆ. ಈ ಹಿಂಸಾಚರಣೆಯು ಮಾನವ ಕುಲಕ್ಕೆ ಕೇವಲ ಹಾನಿಯನ್ನುಂಟು ಮಾಡಬಲ್ಲುದಷ್ಟೇ ಅಲ್ಲ, ಅದನ್ನು ಸಂಪೂರ್ಣವಾಗಿ ನಾಶಗೊಳಿಸಬಲ್ಲುದು. ಗಾಂಧೀಜಿಯವರು ಎಲ್ಲಾ ತಾಂತ್ರಿಕ ಪ್ರಗತಿಯು ಕೊನೆಯು ಇದೇಎಂದು ನಿರೀಕ್ಷಿಸಿದ್ದರು. ಅಲ್ಲದೇ ಹಿರೋಶಿಮಾ ನಗರದ ಮೇಲೆ ಅಣುಬಾಂಬು ಬಿದ್ದುದನ್ನು ಕಂಡು, ವ್ಯಾಕುಲಗೊಳ್ಳುವುದೂ ಅವರ ಅದೃಷ್ಟದಲ್ಲಿತ್ತು. ಆದರೆ ಇಂದಿನ ಮಾನವ ಕುಲದ ವಿವೇಚನಾ ಶಕ್ತಿಗೆ ಪ್ರಜ್ಞೋದಯವನ್ನು ಇತ್ತುದಾದರೆ ಜಾಗೂ ಜಗತ್ತಿನ ಪ್ರಬಲ ರಾಷ್ಟ್ರಗಳು ಅಹಿಂಸೆಯತ್ತ ಹೊರಳುವುದಕ್ಕೆ ಕಾರಣವೆನಿಸಿದರೆ ಅವರ ಜೀವನವು ಸಾರ್ಥಕವಾಗುವುದು.

ಗಾಂಧೀಜಿಯವರು ಬೋಧಿಸಿದ ತತ್ವಗಳು ಕೇವಲ ಒಬ್ಬ ಕನಸುಗಾರನ ಕನಸುಗಳೆಂದು ಹೇಳಬಾರದು. ನಮ್ಮ ಅಹಿಂಸಾ ನೀತಿಯಿಂದ ನಮಗೆಷ್ಟೋ ಒಳ್ಳೆಯದಾಗಿದೆ. ಅದರಿಂದ ನಾವು ಸ್ವಾತಂತ್ರ್ಯವನ್ನು ಸಂಪಾದಿಸಿದುದಲ್ಲದೇ ನಮ್ಮ ವಿರೋಧಿಗಳ ಹೃದಯವನ್ನು ಕೂಡ ಗೆದ್ದುಕೊಂಡಿದ್ದೇವೆ. ಇಂದು ಭಾರತ-ಇಂಗ್ಲಂಡುಗಳ ಸಂಬಂಧವು ಇತಿಹಾಸ ಕಾಲದಲ್ಲಿ ಎಂದೂ ಇದಷ್ಟು ಸೌಹಾರ್ದಮಯವಾಗಿದೆ.

ಅಹಿಂಸೆಯ ಉಚ್ಚ ಆದರ್ಶವನ್ನು ಜಗತ್ತಿನ ಮುಂದೆ ಇರಿಸಲು ನಾನು ಅಷ್ಟೊಂದು ಯೋಗ್ಯನಲ್ಲವೆಂದು ನನ್ನ ಭಾವನೆ. ಗಾಂಧೀಜಿಯಂತಹ ಮಹಾ ಪುರುಷರು ಇಂತಹ ಆದರ್ಶವನ್ನು ಪೂರ್ಣ ನಿಷ್ಠೆಯೊಂದಿಗೆ ಜಗತ್ತಿನ ಮುಂದಿರಿಸಿ ಎಲ್ಲರ ಮನವೋಲಿಸಿಕೊಳ್ಳಬಹುದಾಗಿತ್ತು. ದೀನ ವ್ಯಕ್ತಿಗಳಾದ ನನಗೆ ಗಾಂಧೀಜಿಯವರ ವ್ಯಕ್ತಿತ್ವವಾಗಲೀ ಅವರ ನಿಷ್ಠೆಯಾ ಬಲವಾಗಲೀ ಇಲ್ಲ. ಆಲ್ಲದೇ ನಮ್ಮ ದೇಶದಲ್ಲಿಯೇ ಸೈನ್ಯಬಲವಿರುವಾಗ, ನಾವು ಅಹಿಂಸೆಯ ತತ್ವವನ್ನು ಜಗತ್ತಿನೆದುರು ಇರಿಸುವುದು ಯೋಗ್ಯವೆನಿಸಲಾರದು.

ಯಾವುದೊಂದು ದೇಶವು, ಆದು ಸಣ್ಣದೇ ಇರಲಿ, ಸಂಪೂರ್ಣ ನಿಶ್ಶಸ್ತ್ರೀಕರಣವನ್ನು ಸಾಧಿಸಿ ಉಳಿದೆಲ್ಲರಿಗೆ ಆಹ್ವಾನವಿತ್ತಿತೆಂದರೆ ಜಗತ್ತಿನ ಸ್ವರೂಪವೇ ಬದಲಾಗುವುದು. ಹೀಗೆ ನಿಶ್ಶಸ್ತ್ರೀಕರಣ ಕೈಗೆತ್ತಿಕೊಂಡ ರಾಷ್ಟ್ರವು ತನ್ನ ನಿರಸ್ತ್ರ ಸಮಸ್ತ ವಿಶ್ವವೇ ನಿಶ್ಶಸ್ತ್ರೀಕರಣ ಕೈಗೊಳ್ಳುವಂತೆ ಮಾಡುವುದು. ಪ್ರಬಲ ರಾಷ್ಟ್ರಗಳು ಈ ತತ್ವವನ್ನು ಕಾರ್ಯಗತಗೊಳಿಸಿದರೆ, ಇಂದಿನ ಸಂತ್ರಸ್ತ ಪರಿಸ್ಥಿತಿ ಕೊನೆಗೊಂಡು ಸ್ವರ್ಗವೇ ಭೂಮಿಗಿಳಿಯುವುದು.

ನಮ್ಮ ದೇಶದ ಜನರು ಕೆಲವೊಂದು ಸಲ ಹುಚ್ಚಿನ ಭರದಲ್ಲಿ ಹಿಂಸಾಚರಣೆಗೆ ಇಳಿದರೆ, ಗಾಂಧೀಜಿ ಅದರಿಂದ ನಿರಾಶರಾಗುತ್ತಿರಲಿಲ್ಲ. ಆದರೆ, ಈ ರೀತಿ ಹಿಂಸಾಚಾರಣೆಯಲ್ಲಿ ತೊಡಗಿದವರನ್ನು ಹಿಂಸಾಚರಣೆಯಿಂದ ಪರಾವೃತಗೊಳಿಸಿ ನಿಜವಾದ ಅರ್ಥದಲ್ಲಿ ಧೀರ ಸ್ತ್ರೀ-ಪುರುಷರನ್ನಾಗಿ ಮಾಡುವ ಆಸೆಯನ್ನು ತಳೆದಿರುತ್ತಿದ್ದರು. ಈ ವರೆಗೆಯು ದ್ಧದಲ್ಲಿ ಶೌರ್ಯ ಸಾಹಸಗಳನ್ನು ಮೆರೆದ ರಾಷ್ಟ್ರಗಳು ಕೊಲ್ಲುವ ಹಾಗೂ ಕೊಲೆಗೀಡಾಗುವ ತಮ್ಮ ಅನುಭವದಿಂದ ಪಾಠ ಕಲಿತು ಗಾಂಧೀಜಿಯವರ ಅಹಿಂಸಾ ತತ್ವಕ್ಕೆ ಶರಣಾಗುತ್ತಾ ನಿಶ್ಶಸ್ತ್ರೀಕರಣ ಕೈಗೊಳ್ಳಲಾರವೇ ಎಂಬೆನಿಸುತ್ತದೆ. ಉತ್ತಾಹಶಾಲಿಗಳು ಹಾಗೂ ಕನಸುಗಾರರು ಇದೇ ಆಸೆಯ ಮೇಲೆ ಜೀವಿಸುತ್ತಾರೆ.

ತನ್ನ ಜೀವವು ಅಷ್ಟೊಂದು ಮಹತ್ವದ್ದೆಂದು ಭಾವಿಸದ ಜನರಿಂದ ತುಂಬಿದ ನಮ್ಮ ದೇಶಕ್ಕೆ ಗಾಂಧೀಜಿಯವರ ಅಹಿಂಸಾ ತತ್ವವನ್ನು ಸ್ವೀಕರಿಸುವುದು ಸುಲಭವೆನಿಸಬೇಕು. ನಿಮ್ಮಲ್ಲಿಯೆ ಜನರು ತಮ್ಮ ಜೀವಕ್ಕೆ ಬೇರೆ ದೇಶದ ಜನ ಸ್ವಲ್ಪ ಮಹತ್ವವನ್ನು ಕೊಡುತ್ತಿದಿಲ್ಲ. ಅಲ್ಲದೇ ನಿಮಗೆ ಶೌರ್ಯ ಹಾಗೂ ಪರಮತ್ಯಾಗದ ಪರಂಪರೆಯಿರುವುದರಿಂದ ಅಹಿಂಸೆ ಹಾಗೂ ನಿಶ್ಶಸ್ತ್ರೀಕರಣದ ದಾರಿ ತೊಂದರೆಯದೆನಿಸಬೇಕಾಗಿಲ್ಲ. ನಮಗಿಂತಲೂ ನೀವು ಗಾಂಧೀಜಿಯವರ ಒಳ್ಳೆಯ ಶಿಷ್ಯರಾಗಿರೆಂದು ನಾನು ಹಾರೈಸುತ್ತೇನೆ.

ಗಾಂಧೀಜಿಯವರು ಭಗವಾನ್ ಬುದ್ಧನ ಕಾಲದಿಂದ ನಡೆದುಬಂದ ಸಂತ ಸತ್ಪುರುಷರ ಪರಂಪರೆಗೆ ಸೇರಿದವರು. ಈ ಪರಂಪರೆಯು ಅಹಿಂಸೆಯ ಜ್ಯೋತಿಯು. ಆ ಧ್ಯಾತ್ಮಿಕ ಜೀವನದಲ್ಲಿ ಅಖಂಡವಾಗಿ ಬೆಳಗುವಂತೆ ನೋಡಿಕೊಂಡಿದೆ. ಈಗ ಇದೇ ಅಹಿಂಸೆಯು ಜ್ಯೋತಿಯನ್ನು ಆರ್ಥಿಕ — ಸಾಮಾಜಿಕ ರಂಗದಲ್ಲಿಯೂ ಬೆಳಗಿಸುವ ಸಮಯವು ಸ್ಪಾಪ್ತವಾಗಿದೆ.

(ಟೋಕಿಯೊ ಸರ್ವಜನಿಕ ಸಭೆಯಲ್ಲಿ ಡಾ. ರಾಜೇಂದ್ರ ಪ್ರಸಾದರು ಮಾಡಿದ ಭಾಷಣದಿಂದ)

ದಶಮಾನ ಪದ್ಧತಿ

ವಿಶ್ವದ ಹೆಚ್ಚಿನ ರಾಷ್ಟ್ರಗಳು ದಶಮಾನ ಪದ್ಧತಿಯನ್ನು ಅಂಗೀಕರಿಸಿರುತ್ತವೆ

ನಮ್ಮ ದೇಶದಲ್ಲಿಯೂ ಅಕ್ಟೋಬರ ರಿಂದ ವ್ಯವಹಾರಕ್ಕೆ ತರಲಾಯಿತು

ವಿಶ್ವದ 77 ರಾಷ್ಟ್ರಗಳು ಮೆಟ್ರಿಕ್ ಪದ್ಧತಿಯನ್ನು ಕಾನೂನಾತ್ಮಕವಾಗಿ ಕೈಗೊಂಡಿವೆ. 16 ರಾಷ್ಟ್ರಗಳಲ್ಲಿ ಈ ಪದ್ಧತಿಯ ಜೊತೆಗೆ ಇತರ ಪದ್ಧತಿಗಳೂ ಇರುವುವು, ಮತ್ತು ನಾಲ್ಕು ರಾಷ್ಟ್ರಗಳಲ್ಲಿ ಈ ಪದ್ಧತಿಗೆ ಮಾನ್ಯತೆ ದೊರೆತಿದೆ.

ಏಷಿಯನ್ ರಾಷ್ಟ್ರಗಳಲ್ಲಿ ಕಾನೂನಾತ್ಮಕವಾಗಿ ಮೆಟ್ರಿಕ್ ಪದ್ಧತಿಯನ್ನು ಕೈಗೊಂಡ ರಾಷ್ಟ್ರಗಳು ಹಾಗೂ ಆಚರಣೆಗೆ ತಂದ ವರ್ಷ ಈ ಕೆಳಕಂಡಂತಿವೆ:—

ಆಫ್ಘಾನಿಸ್ಥಾನ (1926), ಕಾಂಬೋಡಿಯಾ(1914), ಚೀನಾ(1930) ಇಂಡೋನೇಷಿಯಾ (1938), ಇರಾನ್ (1935), ಇಸ್ರೇಲ್ (1954) ಜಪಾನ್ (1952), ಜೋರ್ಡಾನ್ (1954), ಫಿಲಿಪೈನ್ಸ್ (1917), ದಕ್ಷಿಣ ಕೊರಿಯಾ (1949), ಸಿರಿಯಾ (1935), ಥಾಯ್‌ಲೆಂಡ್ (1936) ಮತ್ತು ವಿಯಟ್‌ನಾಂ (ದಕ್ಷಿಣ) (1911).

ಭಾರತದಲ್ಲಿ 1871ರಲ್ಲಿ ಮೆಟ್ರಿಕ್ ಪದ್ಧತಿಯನ್ನು ಆಚರಣೆಗೆ ತರಲು ಕಾನೂನನ್ನೂ ಮಾಡಲಾಗಿತ್ತು. ಆದರೆ, ಆ ಸಮಯದಲ್ಲಿ ಸರ್ಕಾರವು ಈ ಪದ್ಧತಿಯನ್ನು ಆಚರಣೆಗೆ ತರಲಿಲ್ಲ.

ಫ್ರಾನ್ಸಿನ ಮಹಾಕ್ರಾಂತಿಯು ಅರಂಭವಾಗಿ, ವಿಕರೀತಿಯ ತೂಕ ಮತ್ತು ಅಳತೆಗಳನ್ನೂ ಆಚರಣೆಗೆ ತರುವ ಕಾರ್ಯ ಸೂಚನೆಯನ್ನು ಆ ರಾಷ್ಟ್ರದಲ್ಲಿ ತೆಗೆದುಕೊಳ್ಳಲಾಗಿತ್ತು.

18ನೆಯ ಶತಮಾನದ ಅಂತ್ಯದಲ್ಲಿ, ಫ್ರಾನ್ಸಿನಲ್ಲಿ ಮೆಟ್ರಿಕ್ ಪದ್ಧತಿಯ ಅವಿಷ್ಕರಣೆಯಾಯಿತು. ಆದರೆ 1940ರ ವರೆಗೆ ಫ್ರಾನ್ಸಿನಲ್ಲಿ ಮೆಟ್ರಿಕ್ ಪದ್ಧತಿಯನ್ನು ಪೂರ್ಣವಾಗಿ ಆಚರಣೆಗೆ ತರಲಾಗಲಿಲ್ಲ.

ಫ್ರಾನ್ಸಿನಲ್ಲಿ ಈ ಪದ್ಧತಿಯನ್ನು ಆಚರಣೆಗೆ ತಂದ ಮೇಲೆ, ಮೆಟ್ರಿಕ್ ಪದ್ಧತಿಯು ನೆರೆಹೊರೆಯ ರಾಷ್ಟ್ರಗಳಿಗೂ ಶೀಘ್ರವಾಗಿ ಹರಡಿತು. ವಾಸ್ತವವಾಗಿ, ಫ್ರಾನ್ಸಿನೊಡನೆ ಜರ್ಮನಿಯ ಸಂಬಂಧವು ಸರಿಯಾಗಿಲ್ಲದಿದ್ದಾಗ್ಯೂ, ಜರ್ಮನಿಯು 1872ರಲ್ಲಿ ಈ ಪದ್ಧತಿಯನ್ನು ಕೈಗೊಂಡಿತು.

ಅಮೆರಿಕಾ ಮತ್ತು ಬ್ರಿಟನ್‌ಗಳು ಈ ಪದ್ಧತಿಯನ್ನು ಆಚರಣೆಗೆ ತರದಿದ್ದರೂ ಸಹ, ಆ ರಾಷ್ಟ್ರಗಳು ಇದರ ಬಳಕೆಯ ಬಗ್ಗೆ ಕ್ರಮವಾಗಿ 1864 ಮತ್ತು 1866ರಲ್ಲಿ ಮನ್ನಣೆಯನ್ನಿತ್ತವು. ವಾಸ್ತವವಾಗಿ, ಅಮೆರಿಕದಲ್ಲಿ ಗಜವನ್ನು ಮೀಟರಿನಲ್ಲಿಯೂ, ಪೌಂಡನ್ನು ಕೆಲೋಗ್ರಾಂನಲ್ಲಿಯೂ ವ್ಯವಹಾರ ನಡೆಸಲಾಗುತ್ತಿದೆ.

ಬ್ರಿಟನ್ನಿನಲ್ಲಿ ಅಳತೆ ಮತ್ತು ತೂಕಗಳ ಬಗೆಗೆ ಪರೀಕ್ಷಣೆ ನಡೆಸಲು ಬ್ರಿಟನ್ನಿನ ವಾಣಿಜ್ಯ ಮಂಡಲಿಯು 1951ರಲ್ಲಿ ಹಾಗ್‌ಸನ್ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧವಿಟ್ಟುಕೊಳ್ಳಲು ಬ್ರಿಟನ್ ಮತ್ತು ಅಮೆರಿಕಗಳು 20 ವರ್ಷಗಳ ಅವಧಿಯಲ್ಲಿ ಮೆಟ್ರಿಕ್ ಪದ್ಧತಿಯನ್ನು ಆಚರಣೆಗೆ ತರಬೇಕೆಂದು ಶಿಫಾರಸುಮಾಡಿತು. ಬ್ರಿಟಿಷ್ ಸರ್ಕಾರವು ಪರಿವರ್ತನೆಗೆ ಆಗಾಧ ವೆಚ್ಚತಗಲುವುದೆಂದು ಈ ಶಿಫಾರಸಿಗೆ ಸಮ್ಮತಿ ನೀಡಲಿಲ್ಲ.

ಬ್ರಿಟಿಷ್ ವೈಜ್ಞಾನಿಕ ಸಂಘದವರು, ಇತ್ತೀಚೆಗೆ ಸರ್‌ಹ್ಯೂ ಬೀವರ್‌ರವರ ಅಧ್ಯಕ್ಷತೆಯಲ್ಲಿ, ಬ್ರಿಟನ್ನಿನಲ್ಲಿ ಮೆಟ್ರಿಕ್ ಪದ್ಧತಿಯನ್ನು ಆಚರಣೆಗೆ ತರುವುದರ ಅವಶ್ಯಕತೆ, ಅದರ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ರಭಾವ, ಪರಿವರ್ತನೆಯಲ್ಲಿ ತಗಲುವ ವೆಚ್ಚ ಇತ್ಯಾದಿಗಳ ಬಗೆಗೆ ವರದಿಯನ್ನೂ ಸಲ್ಲಿಸಲು ಸಮಿತಿಯೊಂದನ್ನು ರಚಿಸಿರುವರು.

'ನ್ಯಾಷನಲ್ ಸ್ಯಾಂಪಲ್ ಸರ್ವೆ ವಿಭಾಗದವರು 1951ರಲ್ಲಿ ಸುಮಾರು 1000 ಗ್ರಾಮಗಳಲ್ಲಿ ಮಾಡಿರಿ ಸಮೀಕ್ಷೆಯೊಂದನ್ನು ಕೈಗೊಂಡರು. ಭಾರತದ ವಿವಿಧ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 143 ವಿವಿಧ ರೀತಿಯ ಅಳತೆ ಮತ್ತು ತೂಕದ ಪದ್ಧತಿಗಳಿದ್ದುದು ಸಮೀಕ್ಷೆಯ ಸಮಯದಲ್ಲಿ ಕಂಡುಬಂದಿತು. ಗಾತ್ರದ ಅಳತೆಗೆ 150 ಪದ್ಧತಿಗಳೂ, ಭೂಮಿಯ ಅಳತೆಗೆ 180 ಪದ್ಧತಿಗಳೂ ಇರುವುದೆಂದು ಈ ಸಮೀಕ್ಷೆಯ ವರದಿಯಲ್ಲಿ ತಿಳಿಸಲಾಗಿದೆ.

ದೇಶದಲ್ಲಿ ಒಟ್ಟು 160 ಬಗೆಯ ಮಣಗಳನ್ನು ತೂಕದಲ್ಲಿ ಬಳಸಲಾಗುತ್ತಿದೆ. ಆ ಮಣಗಳ ತೂಕವು 280 ತೊಲಗಳಿಂದ ಹಿಡಿದು 8320 ತೊಲಗಳವರೆಗಿರುವುವು. ಸ್ಟಾಂಡರ್ಡ್ ಮಣದ ತೂಕ 3200 ತೊಲಗಳಿರುವುದು, ಇದೇ ರೀತಿ ಸೇರಿನ ತೂಕವು 8 ತೊಲಗಳಿಂದ ಹಿಡಿದು 160 ತೊಲಗಳವರೆಗಿರುವುದು ಕಂಡುಬಂದಿತು. ಸ್ಟಾಂಡರ್ಡ್ ಸೇರಿನ ತೂಕ 80 ತೊಲಗಳಿರುವುದು.

ಮೀಟರ್, ಧ್ರುವವೃತ್ತದ ನಾಲ್ಕನೆಯ ಒಂದು ಭಾಗದ ಒಂದು ಕೋಟಿ ಭಾಗಗಳಲ್ಲಿ ಒಂದು ಭಾಗವಾಗಿರುವುದು. ಕೆಲೋಗ್ರಾಂ 0·1 ಮೀಟರಿನ ಘನದಲ್ಲಿರುವ ಸ್ವಚ್ಛನೀರಿನ ತೂಕವಿರುವುದು. ಇಷ್ಟು ಸೇರಿನ ಪ್ರಮಾಣವನ್ನೂ 'ಲೀಟರ್' ಎಂದು ಕರೆಯಲಾಗುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್,

ಮಂಗಳೂರು ಶಾಖೆಗಳು
ಹಂಪನಕಟ್ಟೆ . ಬಂದರ
ಪ್ರಧಾನ ಕಾರ್ಯಾಲಯ
ಮುಕುಂದ ನಿವಾಸ, ಉಡುಪಿ.

ಬೆಂಗಳೂರು
ಮುಂಬಯಿ ಕೊಚ್ಚಿ
ಹೈದರಾಬಾದು ಮದರಾಸು.

THE CANARA INDUSTRIAL & BANKING SYNDICATE LTD., UDIPI

Edited Printed & Published by K. H. Shetty, at the Navayuga press Udipi S. India

ನವಯುಗ

ವಾ.ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.

ವರುಷ ೩೮. ವಾರ ೭. 16-10-1958 Vol. 38. No. 7.

ರಾಜಕಾರಣ

ಪಾಕಿಸ್ತಾನದ ಕುರುಡು ರಾಜಕೀಯ

ಆಲ್ಲಿ ಸರ್ವಾಧಿಕಾರದ ಸರ್ಕಾವು ಹೆಡೆಯೆತ್ತಿ ಬುಸುಗುಟ್ಟ ತೊಡಗಿದೆ

ನೆರೆ ರಾಷ್ಟ್ರವಾದ ಪಾಕಿಸ್ತಾನದಲ್ಲಿ ಕೆಲವು ಸಮಯದಿಂದೀಚೆಗೆ ನಡೆದ ಗಲಭೆ ಗೊಂದಲಗಳು, ರಾಜಕೀಯ ಅಸ್ಥಿರತೆ, ಮುಂದಾಳುಗಳ ಅಶಕ್ತತೆ ಇವು ಇಂದು ಸೇನಾಡಳಿತೆಯ ಘೋಷಣೆಯೊಂದಿಗೆ ಪರ್ಯವಸಾನಗೊಂಡಿವೆ. ಗಳಿಲಿನಂತರ ಅಲ್ಲಿ ಹಲವಾರು ಸರಕಾರಗಳು ಅಳಿ ಅಳಿದು ಹೋಗಿವೆ. ರಾಷ್ಟ್ರಪಿತ್ವ ಜಾಪ್ರಭುತ್ವ ಘೋಷಣೆಯಾಗಿದ್ದರೂ, ಅಧ್ಯಕ್ಷ ಮೇ|ಜ ಇಸ್ಕಂದರ್ ಮಿರ್ಝಾರವರು ತನ್ನ ಸರ್ವಾಧಿಕಾರವನ್ನು ಚೆಲಾಯಿಸುತ್ತಿದ್ದರು. ಪಾಕ್ ಜನತೆಯ ಸ್ವಾತಂತ್ರ್ಯ ಮುಂತಾದ ನಾಗರಿಕ ಹಕ್ಕುಗಳು ಅಧ್ಯಕ್ಷರ ಕೈಯ್ಯಲ್ಲೇ ಸುರಕ್ಷಿತವಾಗಿವೆ! ವಿದೇಶಗಳ ಹಿಡಿತಕ್ಕೆ ಸಿಕ್ಕಿ ತೊಳಲಾಡುತ್ತಿದ್ದ ಪಾಕ್ ಜನತೆಯ ಸ್ಥಿತಿಯಂತೂ ಕನಿಕರಾರ್ಹವಾಗಿಯೇ ಇತ್ತು. ಅಲ್ಲಲ್ಲಿ ಹಸಿವು, ನೀರಡಿಕೆಗಳಿಂದ ತೊಳಲಾಡುತ್ತಿರುವ ಜನರ ಸಂಖ್ಯೆ ಹೆಚ್ಚುತ್ತ ಹೋಗಿ, ಭಾರತಕ್ಕೆ ವಲಸೆ ಬರುವ ಸಂಕಟ ಪೀಡಿತ ಪ್ರಜೆಗಳ ಸಂಖ್ಯೆಯೂ ದಿನೇ ದಿನೇ ಏರುತ್ತಿದೆ. ಆದರೆ ಜನ ಸೇವಕರ ಸೋಗು ಹಾಕಿಕೊಂಡಿರುವ ಜನನಾಯಕರ ಮಾತ್ರ ತಮ್ಮ ವಿಲಾಸ ಜೀವನದಲ್ಲಿಯೇ ಮೈಮರೆತಿದ್ದರು. ಎಂದ ಮೇಲೆ ಪ್ರಜೆಗಳ ಗೋಳಿನೆಡೆ ಆವರ ಲಕ್ಷ್ಯ ಹರಿಯುವುದಾದರೂ ಹೇಗೆ?

ಕೆಲದಿನಗಳಿಂದೀಚೆಗಂತೂ ಪಾಕಿಸ್ತಾನದಲ್ಲಿ ಅರಾಜಕತೆ ಎಲ್ಲೆ ಮೀರಿತು. ಪೂರ್ವ ಪಾಕಿಸ್ತಾನ ಎಸೆಂಬ್ಲಿಯಲ್ಲಿ ಶಾಸನ ಸಭಾಪತಿಗಳ ಸ್ವೇಚ್ಛಾಕ್ರಮಣಾಘಾತದಿಂದ ಸದಸ್ಯರೊಬ್ಬರು ಕುರ್ಚಿಯನ್ನು ಅವರೆಡೆಗೆಸೆದ ಪರಿಣಾಮವಾಗಿ, ಸಭಾಪತಿ ಶ್ರೀ ಶಹೀದ್ ಅಲಿಯವರು ತೀವ್ರ ಗಾಯಗೊಂಡು ಕೆಲವು ದಿನಗಳಲ್ಲೇ ಮೃತರಾದರು. ಆದರ ಕೆಲವು ದಿನ ಮೊದಲಿನಿಂದಲೇ ಎಸೆಂಬ್ಲಿಯಲ್ಲಾರಂಭವಾದ ಗಲಭೆ ಗೊಂದಲ, ಸದಸ್ಯರೊಳಗೆ ಬಡಿದಾಟ – ಇನ್ನೆಲ್ಲ ಶಾಸನ ಸಭಾಪತಿಗಳ ಕೊಲೆಯಲ್ಲಿ ಪರ್ಯವಸಾನಗೊಂಡಿತು. ಇಂತಹ ಹೊಡೆದಾಟಗಳೆಲ್ಲ ಈ ಮುಂದಾಳುಗಳ ಕಪಿಚೇಷ್ಟೆಯನ್ನೂ, ಅಲ್ಪ ಬುದ್ಧಿಯನ್ನೂ ಎತ್ತಿ ತೋರಿಸುತ್ತವೆ ಜನ ಸೇವಕರೆಂದು ಸೋಗು ಹಾಕಿಕೊಂಡಿರುವ ಈ ಮಂದಾಳುಗಳು ಎಳ್ಳಷ್ಟೂ ವಿವೇಕ ವಿಲ್ಲದೇ ಹೀಗೆ ಅಕ್ಕ ಮಕ್ಕಳಿಕ್ಕಿಲಿರುವುದು ಶೋಚನೀಯವೇ ಸರಿ! ಇವು ಮುಂದೊದಗಬಹುದಾದ ಭೀಕರ ಪರಿಣಾಮದ ಸೂಚನೆ

ಪಾಕಿಸ್ತಾನದ ಮಂತ್ರಿ ಸಂಪುಟದ ಪುನಾರಚನೆಯಲ್ಲೂ ತೀವ್ರ ಬಿಕ್ಕಟ್ಟು ಕಂಡು, ಒಂದು, ಪಕ್ಷ ಪಕ್ಷಗಳೊಳಗೆ ಮತಭೇದವಂಕುರಿಸಿ, ಇಷ್ಟರ ತನಕ ಯೋಗ್ಯವಾದ ಸಚಿವ ಸಂಪುಟವೊಂದನ್ನು ರಚಿಸಲು ಕೂಡ ಪಾಕ್ ಪ್ರಧಾನಿ ಅಸಮರ್ಥರಾದರು ಈಗ ಇವರು ತಮ್ಮ ಸಹೋದ್ಯೋಗಿಗಳೊಡನೆ ಗೃಹ ಬಂಧನ ಕ್ಕೊಳಗಾಗಿದ್ದಾರೆ. ಸುಮಾರು ಹನ್ನೊಂದು ವರ್ಷಗಳ ಕಾಲದಲ್ಲಿ ಎಂಟು ಮಂತ್ರಿ ಸಂಪುಟಗಳು ಪಾಕಿಸ್ತಾನದಲ್ಲಿ ಅಳಿ ಅಳಿದು ಹೋಗಿವೆ! ಇದು ದ್ವಿತೀಯ ಮಹಾ ಯುದ್ಧದ ನಂತರದ ವರ್ಷಗಳಲ್ಲಿ ಸುಮಾರು ಇಪ್ಪತ್ತೈದು ಮಂತ್ರಿ ಮಂಡಲಗಳನ್ನು ಕಂಡ ಫ್ರಾನ್ಸಿನ ನೆನಪು ತರುತ್ತದೆ. ಅಲ್ಲಾದರೋ ಘಟನಾತ್ಮಕ ಕಾರಣಗಳಿಗಾಗಿ ಮಂತ್ರಿ ಸಂಪುಟಗಳು ಪತನಹೊಂದುತ್ತಿವೆ. ಆದರೆ ನೆರೆ ರಾಷ್ಟ್ರದಲ್ಲಿ ಕೇವಲ ಕ್ಷುಲ್ಲಕ ಕಾರಣಗಳಿಂದಾಗಿ

ಅಮೆರಿಕೆಯಲ್ಲಿ ಇತ್ತೀಚೆಗೆ ಸಂಚಾರ ನಡೆಸಿ ಮರಳಿದ ಆರ್ಥಮಂತ್ರಿ ಶ್ರೀ ಮುರಾರ್ಜಿ ದೇಸಾಯ್ ಮತ್ತು ಅಮೆರಿಕೆಯ ರಾಜ್ಯಾಂಗಕಾರ್ಯದರ್ಶಿ ಡಲ್ಲಸ್. ಪತ್ರಾಂತರದಲ್ಲಿ ತೊಡಗಿರುವುದು

ಸರಕಾರಗಳು ಉರುಳುತ್ತಿರುತ್ತವೆ. ಇಷ್ಟರಲ್ಲೇ ಸಾರ್ವತ್ರಿಕ ಚುನಾವಣೆಯೊಂದನ್ನು ನಡೆಸಿ ಜನಪ್ರತಿನಿಧಿಗಳಿಂದೆರೆಡಾಗಿದ ಒಂದು ಸುಭದ್ರ ಸರಕಾರವನ್ನು ರಚಿಸಲು ಕೂಡ ಪಾಕ್ ನೇತೃಗಳು ಅಸಮರ್ಥರಾಗಿದ್ದಾರೆ. ಅಷ್ಟಲ್ಲದೇ ಜನಾವಣೆ ನಡೆದು, ಜನಪ್ರತಿನಿಧಿಗಳಿಂದೊಡಗೂಡಿದ ಸರಕಾರ ಬಂದರೂ, ಯೋಗ್ಯರೀತಿಯ ಸ್ಥಿರ ಕಾರ್ಯವನೆನಿಸಿ ಭರವಸೆ ಕೊಡ ತನಗಿಲ್ಲವೆನ್ನುವುದನ್ನು ಅತ್ಯ ವಿಶ್ವಾಸವನ್ನು ಕೂಡ ಕಳೆದುಕೊಂಡವರಾಗಿದ್ದಾರೆ, ಜನರಲ್ ಮಿರ್ಝಾ. ಎಂದ ಮೇಲೆ ಪಾಕಿಸ್ತಾನಕ್ಕೆ ಸರ್ವಾಧಿಕಾರವೊಂದೇ ಉಳಿದ ಹಾದಿ ಎಂಬುದು ಸ್ಪಷ್ಟವಾಗಿಯೇ ಇದೆ!

ಕೆಲ ಸಮಯದಿಂದ ನೆರೆ ರಾಷ್ಟ್ರದಲ್ಲಿ ಆಹಾರ ಪರಿಸ್ಥಿತಿಯಂತೂ ಬಿಗಡಾಯಿಸುತ್ತ ಬಂದಿದೆ. ಮುಂದಾಳುಗಳೆಳ್ಳಷ್ಟು ಬಸ್ಸಾಟ್ಟರೂ, ಪರಿಸ್ಥಿತಿಯ ನಿಜಸ್ಥಿತಿಯ ಅರಿವು ಮಾಡಿಕೊಳ್ಳಲಾರದವರಾಗಿದ್ದಾರೆ. ಸಾಲದುದಕ್ಕೆ ಅಧಿಕಾರಕ್ಕಾಗಿ ಹೋರಾಟಗಳು ನಡೆಯುತ್ತಲಿವೆ! ಮುಂದಾಳುಗಳು ಅಧಿಕಾರ ಸಿಪಾಸೆಯಿಂದ ಪರಿತಪಿಸುತ್ತಿದ್ದಾರೆ, ಹೊರತು ಅವರಿಗೆ ಬಡ ಜನರ ಗೋಳಿನೆಡೆ ಲಕ್ಷ್ಯವಿರಲಿಲ್ಲ! ಒಟ್ಟಾರೆ ಈ ಎಲ್ಲ ಅವ್ಯವಸ್ಥೆಯ ಪರಿಣಾಮವಾಗಿಯೋ ಎಂಬಂತೆ ಅಧ್ಯಕ್ಷ ಮಿರ್ಝಾರವರು ಇಡೀ ಆಕ್ಟೋಬರ್ ತಿಂಗಳು ಪಾಕಿಸ್ತಾನದ ಘಟನೆಯನ್ನೂ, ರಾಷ್ಟ್ರೀಯ ಪಾರ್ಲಿಮೆಂಟು, ರಾಜಕೀಯ ಪಕ್ಷಗಳನ್ನೂ, ಶಾಸನ ಸಭೆ, ಕೇಂದ್ರ ಮತ್ತು ಪ್ರಾಂತೀಕ ಸರಕಾರಗಳನ್ನೂ ರದ್ದುಗೊಳಿಸಿ ಪಾಕ್ ಸೇನಾಧಿಪತಿ ಜ| ಅಯೂಬ್ ಖಾನರ ಕೈಗೆ 'ಸರ್ವಾಧಿಕಾರ' ವೊಪ್ಪಿಸಿ, ಅವರನ್ನು ಸೇನಾಶಾಸನಾಡಳಿತಾಧಿಕಾರಿಯಾಗಿ ನೇಮಿಸುವ ಘೋಷಣೆ ಹೊರಡಿ

(ಇನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H. O. MANGALORE. Estd: 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಅಲ್ಪಸ್ವಲ್ಪ ಉಳಿಸಬೇಕೆಂಬವರಿಗೆ ಸಿಂಡಿಕೇಟ್ ಬ್ಯಾಂಕ್
ಸ್ವಿಗ್ಗಿ ಡಿಪಾಸಿಟ್ ಸೌಕರ್ಯ

ಕಥಾ ವಿಹಾರ

ಲತೆಯು ಬಾಡಿತ್ತು ಕತೆಯು ಮುಗಿದಿತ್ತು

ಶ್ರೀಧರನ ಒಂದು ಘಳಿಗೆಯ ಮುಂಗೋಪಕ್ಕೆ ತರುಣಿಯೋರ್ವಳ ಆಹುತಿ!

ಉಷಃಕಾಲ. ಕತ್ತಲೆಯು ಕಾಲು, ಕೀಳುತಿತ್ತು. ಹಕ್ಕಿಗಳು ಚಿಲಿಪಿಲಿ ಎನ್ನುತಿದ್ದುವು. ಪೂರ್ವಕಣಗಳು ಸೂರ್ಯನ ಬರೋಣವನ್ನು ಇದಿರುನೋಡುತಿದ್ದುವು. ನಕ್ಷತ್ರಗಳು ಮಾಯವಾಗುತಿದ್ದುವು. ಮೊಗ್ಗೆಗಳು ಅರೆ ಅರಳಿ ಪರಿಮಳ ಬೀರುತಿದ್ದುವು. ಹಸುಗೂಸುಗಳು ಸುಖನಿದ್ರೆಯಲ್ಲಿ ಆನಂದಿಸುತಿದ್ದರು. ಮುದುಕಿಯರು ಹಾಸಿಗೆಯಲ್ಲೇ ಎದ್ದು ಕುಳಿತು ಕಾಲು ತಿಕ್ಕುತಿದ್ದರು. ಇದೇ ಸಮಯ ಲತಾ ತನ್ನ ಸಂಗೀತಾಭ್ಯಾಸದಲ್ಲಿ ಮಗ್ನಳಾಗಿ ಹಾಡುತಿದ್ದಳು.

ನಾಲ್ಕು ಗಂಟೆಗೇ ಎದ್ದು ಮುಖತೊಳೆದು, ತಂಬೂರಿ ಶೃತಿಗೊಳಿಸಿ ಹಾಡಲು ತೊಡಗಿದ್ದ ಲತಾ, ಈ ಸಮಯ ತನ್ನ ಕೊನೆಯ (?) ಪದ್ಯವನ್ನು ಹಾಡಿ 'ಕಲ್ಪ ನಾಸ್ವರ'ಗಳನ್ನು ಹಾಡುತಿದ್ದಳು. ಇಂದೇ ಕೋ ಆಕೆ ಅತಿಹೆಚ್ಚಿನ ಉತ್ಸಾಹದಿಂದ ಹಾಡುತಿದ್ದಳು. ಹಾಡಿನಲ್ಲೇ ಮಗ್ನಳಾಗಿ ತನ್ನನ್ನು ತಾನೇ ಮರೆತಿದ್ದಳು ಹಾಡುತ್ತಿದ್ದಳು. ..... ಗ ಮ ಪ ಗ ರಿ ಸ ರಿ ಗ—ಮಾ....ಪಾಽ— ಧ್ಟಾರ್— ಏನದು? 'ಅಯ್ಯೋ!' ಜೋರಿ ಬಿನ್ದಳು ಲತಾ. ನೋಡುವುದೇನು? ಆಕೆಯ ಅತ್ತೆ ಮಾದೇವಿಯವರು ಉಗ್ರರೂಪಿಣಿಯಾಗಿ ಮುಂದೆ ನಿಂತಿದ್ದರು ಲತಾಳ ಕೆನ್ನೆಯಲ್ಲಿ ಬೆರಳುಗಳೈದರ ಕೆಂಪು ಚಿತ್ರವು ಮೂಡಿಬಂದಿತ್ತು. ಲತಾಳು ಕಣ್ಣುಬಿಟ್ಟು ನೋಡುತಿದ್ದಳು. ಕೆದರಿದ ಕೇಶರಾಶಿ, ಕೆಂಪಾದ ಕಣ್ಣುಗಳಿಂದ ಶೋಭಿಸುತಿದ್ದ ಅತ್ತೆಯವರು ಹುಟ್ಟ ಭಾಷಣವನ್ನೇ ನಾಭಿನಯವಾಗಿ ಮಾಡುತಿದ್ದರು. "ಏನೇ? ಎಷ್ಟು ಕರೆದೆ ಗೊತ್ತೆ? ಪಾತ್ರ ತೊಳೆಯುಬೇಕನ್ನೆ—ಅಕ್ಕಚ್ಚು ಕೊಡಬೇಕಷ್ಟೆ. ಕರೆದು ಕರೆದು ಗಂಟಲು ಒಡೆಯಿತು. ದಿನನಿತ್ಯವೂ ಬೆಳಗೆದ್ದು ನಿನ್ನೀ ಉದಯರಾಗ. ಕೆಲಸವೊಂದೂ ಇಲ್ಲ ಈ ಮನೆಯ ಕೆಲಸಗಳನ್ನೆಲ್ಲಾ ಯಾರು ಮಾಡಿ ಸಾಯಬೇಕು? ನಿತ್ಯವೂ ಹಾಡು. ಈ ನಿನ್ನ ತಂಬೂರಿ ಇದ್ದರಲ್ಲವೇ ನಿನ್ನ ಹಾಡು ಸಾಗುವುದು? ಇದನ್ನೇ ನುಂಗಿಸಿದರೆ?" ಎಂದು ಗರ್ಜಿಸುತ್ತಾ ತಂಬೂರಿಯ ತಂತಿಗಳನ್ನು ಹಿಡಿದೆಳೆದು ತುಂಡರಿಸಿ ತಂಬೂರಿಯನ್ನು ನೆಲಕ್ಕೆ ಧೊಪ್ಪನೆ ಬಡಿದರು.

ಲತಾಳು 'ಅತ್ತೇ ಅತ್ತೇ' ಎಂದು ಅತ್ತುದು ಅವರಿಗೆ ಕೇಳಲೇ ಇಲ್ಲ. ಲತಾಳಿಗೆ ತಂಬೂರಿಯ ಅವಸ್ಥೆಯನ್ನು ಕಂಡು ಕಲೆತಿರುಗಿದಂತಾಯಿತು. ಎಚ್ಚತ್ತಾಗ ಮಾದೇವಿಯವರು ಮಾಯವಾಗಿದ್ದರು.

ಲತಾಳು ತನ್ನ ಕೈಗಳಿಂದ ಕೆನ್ನೆಯನ್ನೊಮ್ಮೆ ಮುಟ್ಟಿನೋಡಿದಳು. ಕಣ್ಣುಗಳಲ್ಲಿ ನೀರು ತುಂಬಿಬಂತು. ತಂಬೂರಿಯತ್ತ ದೃಷ್ಟಿಹರಿಯಿಸಿದಳು. ತುಂಡಾದ ತಂತಿಗಳೊಡನೆ ಬುರುಡೆಯೊಡೆದು ಬಿದ್ದಿತ್ತು ಆ ತಂಬೂರಿ. ದುಃಖವು ಉಕ್ಕಿಬಂತು. "ಹಾಯ್, ನನ್ನ ಭಾಗ್ಯವೇ. ಈ ತಂಬೂರಿಗಾಗಿ ಎಷ್ಟೊಂದು ಬಾರಿ ಕೂಗಲಿಲ್ಲ? ಎಷ್ಟು ಬಾರಿ ಬೇಡಲಿಲ್ಲ? ಎಷ್ಟು ಬಾರಿ ಕಾಡಲಿಲ್ಲ? ಅಯ್ಯೋ, ಇನ್ನು ನನಗೀ ಜನ್ಮದಲ್ಲಿ ತಂಬೂರಿ ಸಿಗಬಹುದೇ? ನನ್ನನ್ನು ಹೊಡೆದರೂ ಚಿಂತಿಲ್ಲ. ಇದನ್ನೇಕೆ ಹಾಳುಗೆಡಹಿದರು? ಇನ್ನೆಲ್ಲಿಂದ ತಂಬೂರಿ ನನಗೆ? ಅಯ್ಯೋ. ನನ್ನ ಸರ್ವಸ್ವವಾದ ತಂಬೂರಿಯನ್ನು ಹಾಳುಮಾಡಿದ ಅವರ ಸರ್ವಸ್ವವಾದ..... ಯಾಕೆ? ನಾನೇಕೆನ್ನಲಿ? ಆ ಜಗದೊಡೆಯನೇ ನೋಡಿಕೊಳ್ಳಲಿ." ಮನಸ್ಸಿನ ಉದ್ವೇಗದಿಂದ ಮಾತುಗಳು ಹೊರಡುತಿದ್ದುದನ್ನು ಲತಾಳು ಅರಿಯಲಿಲ್ಲ. ಬಾಗಿಲ ಹೊರಗೆ ನಿಂತು ಕಿವಿಗೊಡುತಿದ್ದ ಅತ್ತೆಮ್ಮನವರ ಸಿಟ್ಟು ನೆತ್ತಿಗೇರಿತು. ಒಡನೇ "ಏ, ಏನೆಂದೆ? ತಡೆ, ಮಾಡುತ್ತೇನೆ ನಿನಗೆ" ಎಂದುಕೊಂಡು ಹೊರನಡೆದರು. ಲತಾಳು ನಿನ್ನೂ ಪೋಜದೆ ತಲೆಗೆ ಕೈಯಿಟ್ಟುಕೊಂಡು ಬಿದ್ದುಕೊಂಡಳು. ಐದು ಮಿನಿಟುಗಳು ಉರುಳಿಂಬಹುದು. ಕೆದರಿದ ಕಾಶಿನ ಶ್ರೀಧರನು ನಂಗಿರಬೆತ್ತ ಸಹಿತನಾಗಿ ಧಡಧಡನೆ ಲತಾಳ ಕೋಣೆಯನ್ನು ಪ್ರವೇಶಿಸಿದನು. ಹಿಂದಿನಿಂದಲೇ ಮಾದೇವಿಯವರೂ ಒಳಬಂದರು.

ಶ್ರೀಧರನು ಲತಾಳನ್ನು ಮದುವೆಯಾಗಿ ತಿಂಗಳು ಹತ್ತಾಗಿತ್ತಷ್ಟೆ. ಆತನು ಆಕೆಯನ್ನು ತುಂಬಾ ಪ್ರೀತಿಸುತಿದ್ದನು. ಆರ್ಥಿಕ ತೊಂದರೆಗಳು ಪೀಡಿಸುತಿದ್ದರೂ ಆಕೆಯು ಶೃಂಗಾರ ನಾಮಾಗ್ರಿಗಳಿಗೆ ಎಂಬೂ ಕುಂದನ್ನು ತಂದೊಡ್ಡಿದವನು ಆತನಲ್ಲ. ಆದರೆ? ತಾಯಿಯವರನ್ನು ಕಂಡಾಗ ಮಾತ್ರ 'ಕೊರವಂಜಿಯ ಕೋಡಗ' ನಂತಾಗುತಿದ್ದ. ಮಾತ್ರವಲ್ಲ. ತಾಯಿಯವರ ಮಾತೆಲ್ಲವನ್ನೂ ಸಹಜ ಸತ್ಯವೆಂದು ನಂಬುತಿದ್ದ, ತಾಯಿಯವರ ಆಜ್ಞೆ, ದೊರೆ ಕಿತೆಂದರೆ ಯಾವ ಕೆಲಸವನ್ನೂ ಆತ ಮಾಡಲು ಸಿದ್ಧ. ಎಷ್ಟೋ ಬಾರಿ ತಾಯಿಯ ಮಾತು ಸತ್ಯವೆಂದು ನಂಬಿ ತನ್ನ ಪ್ರೇಮದ ಪತ್ನಿಗೆ ಬೆತ್ತದೇಟುಗಳನ್ನು ಕೊಡುತಿದ್ದ. ಆಕೆ ನಿರಪರಾಧಿನಿಯೆಂದು ತಿಳಿದಾಗ ಆಕೆಯ ತಲೆಗೂದಲುಗಳನ್ನು ನೇವರಿಸಿ ಕ್ಷಮಾ ಯಾಚನೆ ಮಾಡುತಿದ್ದ. ಆತನ ಈ ಬುದ್ಧಿಯನ್ನು ಕಂಡು ಲತಾಳಿಗೆ ಅದೆಷ್ಟೋ ಬಾರಿ ದುಃಖವು ಉಕ್ಕಿ ಬಂದಿಕ್ಕು. ಅಂತೇ ಒಮ್ಮೊಮ್ಮೆ ನಗುವೂ ಬರುತಿತ್ತು.

ಇಂದು ತಾಯಿಯವರ ಆಣತಿಯಂತೆ ಶ್ರೀಧರನು ಬೆತ್ತ ಹಿಡಿದುಕೊಂಡು ಲತಾಳನ್ನು ಹೊಡೆಯಲಿಕ್ಕಾಗಿ ಆಕೆಯ ಸಂಗೀತ ಕೋಣೆಯನ್ನು ಪ್ರವೇಶಿಸಿದ್ದಾನೆ. ತಾಯಿಯವರು 'ಉಪ್ಪು ಹುಳಿ' ಸೇರಿಸಿ ಹೇಳಿದ ಮಾತುಗಳು ಆತನ ತಲೆಯೊಳಗೆ ಸುತ್ತುತ್ತಿವೆ. ಸಾಲದುದಕ್ಕೆ ಆಕೆಯ ಅಭಿನಯಪೂರ್ಣ ಭಾಷಣವು ಸ್ಫೂರ್ತಿಯನ್ನು ನೀಡಿದೆ.

ಲತಾಳು ಇವರನ್ನು ಕಂಡು ದಿಙ್ಮೂಢಳಾದಳು. ಶ್ರೀಧರನು ಆಕೆಯು ಕೈಯನ್ನು ಹಿಡಿದ. ಎಳೆದನು. ಏಳಲಿಲ್ಲ. ಜಡೆಯನ್ನು ಹಿಡಿದೆಳೆದು ನಿಲ್ಲಿಸಿ ಹೊಡೆಯಲು ಉಪಕ್ರಮಿಸಿದನು. ಆಕೆಯು ಕೂಗ ತೊಡಗಿದಳು. ಮಾತನಾಡಲಿಲ್ಲ. ಶ್ರೀಧರನು ಚೆನ್ನಾಗಿ ಬಾರಿಸಿದನು. ಆತ ಬಾರಿಸಿದಂತೇ ಆಕೆಯರಾಗವು ಕಡಿಮೆಯಾಗುತಿತ್ತು. ಕೊನೆಗೆ ದಣಿದು ಆತ ಬೆಟ್ಟಾಗ ಆಕೆ ನೆಲಕ್ಕೆ ಕುಸಿದು ಬಿದ್ದಳು, ನಿಶ್ಚೇಷ್ಟಿತಳಾಗಿ. ಆತ ಕಾಲಿನಿಂದ ನೂಕ್ತಾ ನಾಲಿಯರು ಬಾರಿ ಒದೆದು ಹೊರ ನಡೆದ ಆಯಾಸದಿಂದ ತಂಬಿದವನಾಗಿ. ಈ ದೃಶ್ಯವನ್ನು ನೋಡಲಾರೆನೆಂಬಂತೆ ಉತ್ಸಾಹದಿಂದ ಉದಯಿಸುತಿದ್ದ ರವಿಯೂ ಮೋಡಗಳೆಡೆಯಲ್ಲಿ ಮರೆಯಾದ. ಮಾದೇವಿಯೂ ಮಾತೆತ್ತದೆ ಮಾಯ ನಡೆದಳು.

ಲತಾಳಿಗೆ ಎಚ್ಚರವಾದಾಗ ಗಂಟೆ ಹನ್ನೊಂದು ಬಡಿಯುತಿತ್ತು. ಏಳುವ ಶಕ್ತಿ ಆಕೆಯಲ್ಲಿ ಉಳಿದಿರಲಿಲ್ಲ. ಮಲಗಿದಲ್ಲೇ ಅಶ್ರುಧಾರೆ ಹರಿಯುತಿತ್ತು. ಯೋಚನೆಗಳು ಒಂದರ ಹಿಂದೆ ಒಂದು ಬರುತಿದ್ದುವು. 'ದೇವರೆ, ನನಗೇಕೆ ಈ ಬವಣೆಯನ್ನಿತ್ತೆ? ಯಾವ ಪಾಪಕ್ಕಾಗಿ ನನಗೀ ಶಿಕ್ಷೆ? ಅಯ್ಯೋ ನಾನೇಕೆ ಬದುಕಲಿ? ಯಾರಿಗಾಗಿ? ನನ್ನವರೇ ನನ್ನನ್ನು ಕೊಲ್ಲುವರು. ತಾಯಿಯವರ ಮಾತೆಂದರೆ ವೇದ ವಾಕ್ಯವೆಂದು ನಂಬುವ ಈ ಅಂಧ ಭಕ್ತರು ಖಂಡಿತ ನನ್ನನ್ನೊಮ್ಮೆ ಕೊಲ್ಲುವರು. ಯಾಕಾಗಿ ಇವರಿಂದ ಶಿಕ್ಷೆ? ನಿರಪರಾಧಿಯಾದ ಇವರನ್ನು ಕಾರಾಗೃಹಕ್ಕೆ ಕೋಗಗೊಡಲಿ? ನಾನೇ ಸಾಯುವೆನು. ಎಲ್ಲರೂ ಸುಖಿಗಳಾಗಿರಲಿ. ಭಗವಾನ್, ನನ್ನ ಜೀವನವನ್ನು ಈಗಲೇ ಕೊನೆಗೊಳಿಸು", ಎಂದೆನ್ನುತ್ತಾ ಮೆಲ್ಲನೆ ಕೈಯೂರಿ ಎದ್ದಳು. ಪಕ್ಕದ ಕೋಣೆಗೆ ಪ್ರವೇಶಿಸಿ ಅತ್ಯಿತ್ತ ಹುಡುಕಿ ಜೊಟ್ಟಣವೊಂದನ್ನು ಹಿಡಿದುಕೊಂಡು ಹಿಂದೆ ಬಂದು ಬಿದ್ದುಕೊಂಡಳು ಮುಂಚಿನಂತೇ ಕಣ್ಣೀರಿಡುತ್ತಾ.

ಸಂಜೆ ನಾಲ್ಕು ಗಂಟೆಗಳ ತನಕ ಗೊರಕೆ ಕೊಡೆದು ಶ್ರೀಧರನು ಎಚ್ಚತ್ತಾಗ ಎಂದಿನಂತೆ ಕೈಯಲ್ಲಿ ಕಾಫಿ ಹಿಡಿದುಕೊಂಡು ನಸು ನಗುತ್ತಾ ಬರುವ ಲತಾಳನ್ನು ಇಂದು ಕಾಣದಿರಲು ನೆನಪಾಯ್ತು ಆಕೆ ಇಂದು ಸುಧ್ಯಾಹ್ನ ಊಟವನ್ನೂ ಮಾಡಲಿಲ್ಲವೆಂದು. ಹೇಗೂ ಸ್ವಲ್ಪ ಸಂತೈಸಿ ಕಾಫಿ ಮಾಡಿಸೋಣವೆಂದು ಆಕೆಯ ಕೋಣೆಯತ್ತ ಕಣ್ಣುಜ್ಜಿಕೊಳ್ಳುತ್ತಾ ನಡೆದ. ಲತಾಳು ಎದ್ದಿಂಲಿಲ್ಲ ಕರೆದನು. ಮಾತಿಲ್ಲ. ಸಿಟ್ಟುಗೊಂಡಿರಬೇಕೆಂದು ಸಮೀಪಕ್ಕೆ ಬಂದು ಆಕೆಯ ತೋಳುಗಳನ್ನು ಮೆಲ್ಲನೆ ಮುಟ್ಟಿದನು. ಆಂ—ಎಂದು ಒಮ್ಮೆಲೇ ಕೈಯನ್ನು ಹಿಂದೆಳೆದು ಆಕೆಯ ಮುಖವನ್ನೇ ನೋಡಿದನು. ಮತ್ತೂ ನೋಡಿದನು. ಹೌದು. ಆಕೆಯ ಪ್ರಾಣ ಪಕ್ಷಿಯು ಆಗಲೇ ಹಾರಿ ಹೋಗಿತ್ತು. ಆಕೆಯ ಇಹದ ಕತೆಯು ಮುಗಿದಿತ್ತು. ಆತನ ಜೀವನದ ಲತೆಯು ಬಾಡಿ ಬಿದ್ದಿತ್ತು.

—ರಾ. ಯಳ ಚಿತ್ತಾಯ, ವಿಶಾರದ, ಕವಳಕಟ್ಟೆ.

ಉಡುಪಿ ಡಿ| ಮುನ್ಸಿಫ್ ಕೋರ್ಟಿನಲ್ಲಿ

O. S. No. 276/1958

ಕೆ. ಆನಂತಕೃಷ್ಣ ಹೆಬ್ಬಾರ—ವಾದಿ

ಮತ್ತು

ದೂಜ ಸೋಜ ಕೂಡಾ—ಪ್ರತಿವಾದಿರು.

ಇವರಿಂಗಳಿಗೆ

ಇನೇ ಪ್ರತಿವಾದಿ ಕೆ. ರಗುನಾಥ ಹೆಬ್ಬಾರ —ಸುಬ್ರಾಯ ಹೆಬ್ಬಾರರ ಮಗ—ಉಡುಪಿ ತಾಲ್ಲೂ, ಕಟ್ಟಿಂಗೇರಿ ಗ್ರಾಮ—

ಮೇಲ್ಕಂಡ ಬ್ಯಾಜ್ಜದಲ್ಲಿ ಸದ್ರಿ ೨ನೇ ಪ್ರತಿವಾದಿಗೆ ಆಗುತ್ತಿರುವ ವ್ಯಾಜ್ಯದ ನೋಟೀಸು ತಾ. ೩೦—೧೦—೫೮ಕ್ಕೆ ಇಟ್ಟಿರುವದ್ರಿಂದ ಆ ದಿವ್ಸ ಸದ್ರಿ ಪ್ರತಿವಾದಿಯು ಅಕ್ಕೀಲರ ಹೇಳುವದನ್ನು ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜವಾಹಿರುನಾದಿಕೊಳ್ಳತಕ್ಕದ್ದು.

P. Padmanabha Rao,
Vakil for Plaintiff.
Udipi, Dated 8—10—58.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕತೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ವಿಚಾರ ವರ್ಷ

ಬೆಳೆಯುತ್ತಿರುವ ಅತಿಸ್ತಿಗೆ ಕಾರಣವೇ ಭೂತರಾರು?

ಇದೇ ರೀತಿ ಶಿಕ್ಷಣಾಲಯಗಳು ನುಂಬರಿದರೆ ಭಾರತದ ಭವಿಷ್ಯವು ಏನಾಗಬಹುದು

"ಬೆಳೆಯು ಗುಣ ಎಳೆಯಲ್ಲಿಯೇ ತಿಳಿಯುವುದು" ಎಂಬುದೊಂದು ನಾಣ್ಣುಡಿ ಹಳೆಯದಾದರೂ ಅದರ ಅರ್ಥವು ಮಾತ್ರ ಗತಕಾಲದಂತೆ ಲಘುವಾಗುವುದಿಲ್ಲ. "ಗಿಡವಾಗಿ ವಾಗುವಾಗ ಬಗ್ಗದ್ದು ಮರವಾದ ಮೇಲೆ ಬಗ್ಗೀತೇ?" ಎಂಬುದೂ ಇದರಂತೆ ಹುದೇ ಮತ್ತೊಂದು ನುಡಿ ಮುತ್ತು. "ಪುರಾಣ ಮಿತ್ಯೇವ ನ ಸಾಧು ಸರ್ವಂ" ಎಂದು ಮಹಾಕವಿ ಕಾಲಿದಾಸನೇ ನುಡಿದಿರುವಾಗ, ಹಳೆಯು ಕಾಲದ ಮಾತುಗಳು ಸಂಪೂರ್ಣ ನಿಜವೇ ಎಂದು ಜೇಳುವುದು ದಾರ್ಷ್ಟ್ಯದ ಮಾತಾಗಬಹುದಾದರೂ ಮೇಲೆ ಉಲ್ಲೇಖಿತವಾದುವುಗಳ ಮಟ್ಟಿಗೆ ಅವು ಅಚಂದ್ರಾರ್ಕ ಚಿರಸ್ಥಾಯಿಗಳು ಎಂದೇ ಹೇಳಬಹುದು.

ಒಂದು ದೇಶದ ನಿಜವಾದ ಸಂಪತ್ತು ಎಂದರೆ ಅಲ್ಲಿನ ಪ್ರಜೆಗಳು ಎಂದೊಬ್ಬ ಹಿರಿಯರು ಉದ್ಗರಿಸಿದ್ದಾರೆ. ಅಂತೆಯೇ ಜನಸಂಪತ್ತು ಪ್ರಾಚಾರವಾಗಿರುವ ರಾಷ್ಟ್ರದಲ್ಲಿ ಜನತೆಕಷ್ಟದಿಂದ ಪರಿಶ್ರಮ ಪೂರ್ವಕವಾಗಿ ದುಡಿದರೆ, ಎಂತಹ ದಟ್ಟ ದರಿದ್ರ ದೇಶವಾದರೂ ಸಂಪನ್ನರಾಷ್ಟ್ರವಾಗಿ ಪರಿಣಮಿಸುವುದು ಸಾಧ್ಯ. ಜೊತೆಗೆ ದೇಶಾಭಿಮಾನ, ಪರಿಶ್ರಮ ಪ್ರಿಯತೆ, ಮಿತವ್ಯಯಾದಿ ಗುಣಗಳೂ ಬೇಕು. ಉದಾಹರಣೆಗೆ ಬ್ರಿಟನ್ನಿನ ಸಂತಹ ಒಂದು ಎಳೆಯ ದ್ವೀಪದ ಜನರು ತಮ್ಮ ಬುದ್ಧಿಮತ್ತೆಯಿಂದ ಪ್ರಪಂಚದ ಎಲ್ಲೆಯೆಲ್ಲಿಯೂ ವಿಶಾಲ ಸಾಮ್ರಾಜ್ಯವನ್ನು ಕಟ್ಟಿ "ಸೂರ್ಯ ಮುಳುಗದ ದೇಶ"ವೆಂಬ ಕೀರ್ತಿಗೆ ಪಾತ್ರವಾಯಿತು. ಪೂರ್ವದ ಬ್ರಿಟನ್ನೆಂದು ಹೆಸರಾಂತ ಜಪಾನು, ತನ್ನ ದುಡಿಮೆಯಿಂದಲೇ ಕಂಗಾಲಾಗಿದ್ದರೂ ಈಗ ಸಂಪದ್ಭರಿತವಾಗಿದೆ. ಇದಕ್ಕೆ ಅಲ್ಲಿನ ಜನರಲ್ಲಿ ಒಂದು ಅಕಾಂಕ್ಷೆಯೂ ತಮ್ಮ ಉದ್ಧಾರವಾಗುವುದಕ್ಕೆ ಏನು ಮಾಡಬೇಕೆಂಬುದರ ವಿವೇಚನೆಯೂ ಕಾರಣವಾಗಿದೆ.

ಸಾಮಾನ್ಯವಾಗಿ, ಒಂದು ದೇಶದಲ್ಲಿನ ಜನ ಸಂಖ್ಯೆಯಲ್ಲಿ ಸುಮಾರು ನೂರಕ್ಕೆ ೬೦ರಷ್ಟು ಅಪ್ರಾಯಸ್ಥರಿರುತ್ತಾರೆ. ಇವರಲ್ಲಿ ಏದರಲ್ಲೆರಡು ವಾಲು ಎಳೆಯರೆಂದು ಲೆಕ್ಕಿಸಿದರೂ, ಉಳಿದವರು ತಮ್ಮ ಭವಿಷ್ಯವನ್ನು ರೂಪಿಸುವ ವಯಸ್ಸಿನಲ್ಲಿ ಕಾಲಿರಿಸಿರುತ್ತಾರೆ. ನಮ್ಮ ದೇಶದಲ್ಲಿಯೇ ಶಿಕ್ಷಿತ—ಅಶಿಕ್ಷಿತರನ್ನಾಗಿ ಈ ಪ್ರಾಯದ ಮಕ್ಕಳನ್ನು ವರ್ಗೀಕರಿಸಿ, ಅವರ ಭವಿಷ್ಯತ್ತಿನ ಚಿತ್ರಣವು ಯಾವ ರೀತಿಯಲ್ಲಿ ಸಡೆಯುತ್ತಿದೆ ಎಂಬುದನ್ನ ವಿಚಾರಿಸಿ ಹೊರಟರೆ, ಆಗ, ಭಾರತದ ಭವಿಷ್ಯವು ಸಂಪೂರ್ಣ ಅಂಧಕಾರಮಯವಾಗಿಯೇ ತೋರುವುದು. ಭಾವಿಭಾರತದ ರಾಜ್ಯಸೂತ್ರ ಸಂಚಾಲಕರನ್ನು ನಿರ್ಮಿಸುತ್ತಿರುವ ಹಾಗೂ ಭಾವಿ ವಿಜ್ಞಾನಿಗಳನ್ನು, ತಂತ್ರಜ್ಞರನ್ನು, ಮೇಧಾವಿಗಳನ್ನು ನಿರ್ಮಿಸುವ ಪವಿತ್ರ ಸ್ಥಳಗಳೆಂದ ಶಿಕ್ಷಣಾಲಯಗಳು ಹಾಗೂ ವಿದ್ಯಾಭ್ಯಾಸವನ್ನು ಯೋಗ್ಯ ರೀತಿಯಲ್ಲಿ ಮುಗಿಸಿದವರ ಸೇವೆಯನ್ನು ರಾಷ್ಟ್ರಕ್ಕೋಸ್ಕರ ಬಳಸಿಕೊಳ್ಳುವ ವಿಧಾನಗಳನ್ನು ಕಾಣುವಾಗ, ಈ ಆಧ್ಯೆರ್ಯವು ನುತ್ತೆತ್ತು ಹೆಚ್ಚುತ್ತದೆಯೇ ಹೊರತು ದೂರ ವಾಗುವುದಿಲ್ಲ.

ತಮ್ಮ ವಿದ್ಯಾಭ್ಯಾಸವನ್ನು ಸುಸೂತ್ರವಾಗಿ ಮುಗಿಸಿ, ತಮ್ಮ ಬುದ್ಧಿಮಂತಿಕೆಯನ್ನೂ ಜಿಜ್ಞಾಸೆಯನ್ನೂ ಹಚ್ಚಿಸಿ, ಮುಂದಕ್ಕೆ ಅವಕಾಶ ದೊರೆತಾಗ, ಭಾರತದ ಉನ್ನತಿಗಾಗಿ ಪರಿಶ್ರಮಿಸಿ, ತನ್ಮೂಲಕ ತಮ್ಮ ಉದ್ಧಾರವನ್ನೂ ಮಾಡಿಕೊಳ್ಳಬೇಕಾದ ನಮ್ಮ ವಿದ್ಯಾರ್ಥಿಗಳು ಒಂದು ರೀತಿಯಿಂದ ರಾಷ್ಟ್ರ ವಿಘಾತುಕರಂತೆ ನಡೆಯುತ್ತಿರುವರೆಂಬ ದೂರು ಕೇಳಬರುತ್ತಿದೆ. ಇವರ ಈ ಕುಕರ್ಮದ ಪರಿಣಾಮವು ಕೇವಲ ಇವರ ವೇಲೆ ಮಾತ್ರ ಆಗದೆ, ದೇಶದ ಹಾಗೂ ಪ್ರಜಾಜನದಲ್ಲಿ ಎಲ್ಲರ ಮೇಲೆಯೂ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಸ್ಪಷ್ಟವಾ ಬೀರುತ್ತದೆ. "ಹಿರಿಯಣ್ಣನ ಚಾಳಿ ಪಸಿವಂದಿಗೆಲ್ಲ" ಎಂಬಂತೆ, ಉಚ್ಚ ಶಿಕ್ಷಣಾಲಯಗಳಲ್ಲಿನೇ ಈ ರೀತಿಯ ಕೆಟ್ಟನೀತಿಯು ಕಾಣಿಸಿಕೊಂಡರೆ, ಉಳಿದವರ ಗತಯೇನು? ನಮ್ಮ ವಿದ್ಯಾರ್ಥಿಗಳು ಈಗ ಅಭ್ಯಸಿಸುತ್ತಿರುವುದಾದರೂ ಏನು?

ಕಳೆದ ಮಾರ್ಚಿ—ಏಪ್ರಿಲ್ ತಿಂಗಳಲ್ಲಿ ದಕ್ಷಿಣದ ಮದ್ರಾಸು ರಾಜ್ಯದ ಆನ್ನಾಮಲೈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪುಂಡಾಟಿಕೆಗಳಿಂದ ಅವು ಸುಮಾರು ಒಂದು ಒಂದೂವರೆ ತಿಂಗಳು ಮುಚ್ಚಲ್ಪಟ್ಟಿತು. ಇದೀಗ, ಭಾರತದ ಸರ್ವಶ್ರೇಷ್ಠ ವಿಶ್ವವಿದ್ಯಾಲಯವಾದ ಬನಾರಸ ಹಿಂದೂ ವಿಶ್ವವಿದ್ಯಾಲಯವೂ ಇದೇ ಕಾರಣದಿಂದ ಬಾಗಿಲು ಹಾಕಿಸಿಕೊಳ್ಳಬೇಕಾದ ಪ್ರಸಂಗವೊದಗಿತು. ಇದೇ ವ್ಯಾಧಿಯು ಸೋಂಕು ರೋಗದಂತೆ ಹರಡಿದಂತೆ ಯಾವ ಪ್ರತಿಬಂಧಕೋಪಾಯಗಳನ್ನೂ ಕೈಗೊಳ್ಳಲಾಗದೆ?

ತಮ್ಮ ಜೀವನವನ್ನು ದೇದೀಪ್ಯಮಾನವಾಗಿಸಬಲ್ಲ ವಿದ್ಯೆಯ ಅಭ್ಯಾಸಕ್ಕಾಗಿ ವಿಶ್ವವಿದ್ಯಾಲಯಗಳನ್ನೂ ಕಾಲೇಜುಗಳನ್ನೂ ಸ್ಪರ್ಧೆಸಿದವರು ತಮ್ಮ ಉದ್ದೇಶ ಹಾಗೂ ಕರ್ತವ್ಯಗಳನ್ನು ಮರೆತು ಜೀವನಾಬ್ಯಾಸದಿಂದ ದುರ್ನಡತೆಗಳಿಗೆ ಪಕ್ಕಾಗಿ, ತಮಗೂ ತಮ್ಮ ಸಂಸ್ಥೆಗೂ ದೇಶಕ್ಕೂ ಕಲಂಕಪ್ರಾಯವಾದ ಅಶಿಸ್ತಿನಿಂದ ಕೂಡಿ ಮಾಡಬಾರದ ಗೂಂಡಲಗಳನ್ನೆಲ್ಲೇ ಎಬ್ಬಿಸುವಲ್ಲಿ ತತ್ಪರರಾದರೆ, ಅವರ ಸಾಧನೆಯಾದರೂ ಜೇಗೆ ಸಾಧ್ಯವಾದೀತು? ಇಂತಹ ಹೋಗೇಡಿಗಳಿಂದ ದೇಶದ ಉದ್ಧಾರವಾಗುವುದೆಂದು ಹೇಗೆ ವಿಶ್ವಾಸವಿಡಬಹುದು?

ಭಾರತವು ಸ್ವಾತಂತ್ರ್ಯಪಡೆಯಲು ಪೂರ್ವ ದರ್ಶನ ಮಾಡಿದ ಮಹಾತ್ಮರ "ಸತ್ಯಾಗ್ರಹ" ಬಾಣವೀಗ ತನ್ನ ಪವಿತ್ರತೆಯನ್ನು ಕಳೆದುಕೊಂಡು "ದುರಾಗ್ರಹ" ವಾಗಿ ರೂಪಾಂತರ ಹೊಂದಿ-ತ್ತಿದೆ. ರಾಜಕೀಯ ಕಾಲೇಜುಗಳಲ್ಲಿ ವಿದ್ಯಾರ್ಜನೆ ಮಾಡುವವರು, "ಪರೀಕ್ಷೆಯ ಪ್ರಶ್ನಾಪತ್ರಗಳು ಬಿಗಿಯಾಗಿದ್ದುವು" ಎಂಬ ಕಾರಣವನ್ನಿತ್ತು ಪರೀಕ್ಷಾಭವನದಿಂದ ಹೊರಬಂದು ಮುಷ್ಕರ ಹೂಡುವಲ್ಲಿಯ ವರೆಗೂ ನವ್ಯ ಭಾವೀ ಪ್ರಜೆಗಳು ಮುಂದುನರಿದಿದ್ದಾರೆ. ಸಂಬಳ ಹೆಚ್ಚಿಸಿದರೆ, ಪ್ರಾಧ್ಯಾಪಕರನ್ನು ವರ್ಗಾಯಿಸಿದರೆ —ಎಲ್ಲವಕ್ಕೂ—ಸತ್ಯಾಗ್ರಹ, ಪಲ್ಲೆ, ವಿರುದ್ಧ ಘೋಷಣೆ, ಮರವಣಿಗೆ, ಬಹಿಷ್ಕಾರ, ನಿರ್ಬಂಧನೆಗೆ ತಿಲಾಂಜಲಿ!— ಹೀಗೆ ತಮ್ಮ ಅಧ್ಯಾಪ್ಯಕ್ಕೆಂತ ಬಾಹ್ಯ ರಾಷ್ಟ್ರಘಾತಕ ಚಟುವಟಿಕೆಗೆ ಮನಸ್ಸಿತ್ತು ಯೋರಾಡುವ ಈ ಜನರು ಬೆಳೆದು ಬಂದಾಗ, ನಮ್ಮ ದೇಶದಲ್ಲಿ ಹೆಕ್ಕಿ ತೆಗೆಯಲು ಕೆಲವು ಜನ "ಮೇಧಾವಿ"ಗಳಾದರೂ ಜೊರೆಯುವ ಸಂದರ್ಭವುಂಟೆ? ಎಲ್ಲ ಶಾಲೆ ಕಾಲೇಜುಗಳಲ್ಲೂ ಜೇಜವಾಬ್ದಾರಿ, ಆಶಿಸ್ತು, ಭ್ರಷ್ಟಾಚಾರಗಳು ನಿರಾತಂಕವಾಗಿ ಜೆಕೆಯುತ್ತಿವೆ ಎಂಬುದಂ, ನಮ್ಮ ಭವಿಷ್ಯ ಏನೆಂದು ಯಾರು ಕಣಿ ಜೇಳಿಯಾರ?

ವಿದ್ಯಾರ್ಥಿಗಳಲ್ಲಿ ಇಂತಹ ಅಸಭ್ಯ ವರ್ತನೆ ಬೆಳೆಯುವುದಕ್ಕೆ ಕಾರಣವನ್ನು ಚಿಂತಿಸುವಾಗ, ಆಡಳಿತೆಯಲ್ಲಿನ ಶಿಥಿಲತೆಯೇ ಪ್ರಧಾನ ಸ್ಥಾನವನ್ನು ಪಡೆಯುತ್ತದೆ. ವಿದ್ಯಾರ್ಥಿಗಳನ್ನು ಹತೋಟೆಯಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯ ಒಂದು, ಅಧ್ಯಾಪಕರು ವಿದ್ಯಾರ್ಥಿಗಳಿಗೆ ಈಯುವ ಲಘುವಾದ ಸ್ವತಂತ್ರ್ಯ ಇನ್ನೊಂದು. ಶಾಲೆಗಳಲ್ಲಿಯೂ ಸಮ್ಮ ಸರಕಾರದಂತೆ ಲೋಕ ಸಭೆ, ಶಾಸನ ಸಭೆಗಳಂತೆ ಪಕ್ಷ ಪ್ರತಿಪಕ್ಷಗಳ ನೂಕು ನಗ್ಗಲುಗಳಲ್ಲಿ ಸಿಲುಕಿಸುವುದೂ ನುತ್ತಿರುತ್ತಿಂದು. ವಿದ್ಯಾರ್ಥಿಗಳಿಗೆ, ಅವರಿಗೆ ಬೇಕಾದ ವಿದ್ಯೆಯನ್ನು ನಿಯಮಿತ ಕ್ರಮದಲ್ಲಿ ಸಾಗುವುದೇ ಜ್ಯೋತಿಯಿಲ್ಲದೆ ಕೊಡುವ ಹೊಣೆಯು ಶಿಕ್ಷಣಾಲಯಗಳಿಗೆ ಸೇರಿದೆ. ಇಂಥಲ್ಲಿ ಯಾವುದೇ ಕೊಂತೆಯಾಗಬಾರದು. ವಿದ್ಯಾರ್ಥಿಗಳನ್ನೂ ಕಟ್ಟುನಿಟ್ಟಿನಿಂದ ನೋಡಿಕೊಳ್ಳಬೇಕು. ಏಕೆಂದರೆ, ಆತುತ್ತಾತ್ತುತ್ತಾ ವಿದ್ಯೆ ಕಲಿತವುದೆಂದರೆ, ಈ ಸಲುಗೆಯು ಅನಭ್ಯ ವರ್ತನೆಗೆ ಪ್ರೋತ್ಸಾಹ ಕೊಟ್ಟಂತೆಯೇ ಆಗುತ್ತದು. ವಿದ್ಯಾರ್ಥಿಗಳಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶದೊರೆಯದಂತೆ ಆಡಲಿತೆಯವರು ನೋಡಿಕೊಳ್ಳಬೇಕು.

ಇವರೊಂದಿಗೆ, ಸರಕಾರದ ಪಾಲಿಗೆ ಸೇರಿದ ಒಂದು ಕರ್ತವ್ಯವಿಯೆಂದೂ ಹೇಳಬಹುದು. ವಿದ್ಯಾರ್ಥಿಗಳಲ್ಲಿ ವಿದ್ಯೆಯು ಕಡೆಗೆ ಅಸಕ್ತಿಯುಜ್ಜೆಚ್ಚಿ ಅವರು ಮೇಧಾವಿಗಳಾಗಬೇಕಾದರೆ, ಯೋಗ್ಯತೆಗೆ ಪ್ರಾರಬ್ಧ ಜೊರೆಯುವಂತಾಗಬೇಕು. ಅದು ಬಿಟ್ಟು ಜಾತೀಯತಾ ತಳಹದಿಯಲ್ಲಿ ಪ್ರಾರಬ್ಧವನ್ನು ಸರಕಾರವು ಕೊಟ್ಟರೆ, ಸರಕಾರದ ಕರ್ಮರಾಲೆಗಳಲ್ಲಿ ನಿರುಪಯೋಗಿಗಳೇ ಸೇರಿಕೊಳ್ಳುವರಲ್ಲದೆ, ನಿಜವಾಗಿಯೂ ರಾಷ್ಟ್ರಕ್ಕೆ ಗೌರವ ತರಬಲ್ಲ, ಮೇಧಾವಿಯೂಗಬಲ್ಲ ವಿದ್ಯಾರ್ಥಿಯು ತನಗೆ ಭವಿಷ್ಯ ವಿಲ್ಲವೆಂಬ ಕಾರಣದಿಂದ—ಅಭ್ಯಾಸದಲ್ಲಿ ವಿಶೇಷ ಗಮನವಿಲ್ಲದಾರನು. ಇಂತೆಯೇ ಶಿಕ್ಷಣಾಲಯಗಳ ಅಧ್ಯಾಪಕರನ್ನು ನೇಮಿಸುವಾಗ, ಧೀಕ್ಷ್ಣ ಮೇಧಾವಿಯೆಂಬುವನ್ನು ನೇಮಿಸುವುದರಿಂದ ವಿದ್ಯಾರ್ಥಿಗಳ ಉನ್ನತಿಯೂ ದೇಶಕ್ಕೆ ಗೌರವವೂ ಪ್ರಾಪ್ತವಾಗಬಹುದೇ ಹೊರತು ಇನ್ನಿವಾದು. ವಿದ್ಯಾರ್ಥಿಗಳನ್ನು ಸೈನ್ಯ ಪದೆಯಿಂದಲು ದೆಪ ಬಾರದಂತಾ, ಗಬಹುದು. ವಿದ್ಯಾರ್ಥಿಗಳ ಹರತಾಳಗಳಿಂದ ಶಿಕ್ಷಣಾಲಯಗಳಿಗಾ ರಾಷ್ಟ್ರಕ್ಕೂ ಕೆಡುಕೇ ಹೊರತು ಒಳ್ಳೆಯದಲ್ಲ. ಆದುದರಿಂದ ದೇಶದ ಭವಿಷ್ಯವು ಸುಖಮಯವಾಗಬೇಕೆನ್ನುವವರು ವಿದ್ಯಾರ್ಥಿಗಳ ಮನಸ್ಸನ್ನು ಅನಭ್ಯ ವರ್ತನೆಗಳಿಗೆ ಬಲಿಬೀಳದೆ ವಿದ್ಯಾಭ್ಯಾಸದಲ್ಲಿಯೇ ತಲ್ಲೀನವಾಗುವಂತೆ ಮಾಡಬಲ್ಲ ಉಪಾಯಗಳನ್ನು ಕೈಗೊಳ್ಳಬೇಕು.

ನೋವುಗಳ ಅಶ್ಯುತ್ತಮ ಸಂಹಾರಿಣಿ.

ಅಮೃತಾಂಜನ

ಯಾವ ಮನುಷ್ಯನಿಗಾದರೂ, ಯಾವ ವೇಳೆಯಲ್ಲೂ, ಯಾವುದೇ ಕಾರಣಕ್ಕಾಗಿ ಉಳಿತಾಯಗಳ ಬೆಂಬಲವು ಬೇಕಾಗಬಹುದು. ಅಂತಲೇ ನೀವು ಯೋಗ್ಯವಿರುವ ಉಳಿತಾಯ ಯೋಜನೆಯನ್ನು ಈಗಿಂದೀಗಲೇ ಅನುಸರಿಸುವುದು ಅತೀ ಆಗತ್ಯ. ಇದಕ್ಕಾಗಿ ನಿನಗೆ ಬೇಕಾದ ಸಲಹೆ-ಸಹಕಾರಗಳನ್ನು ಕೊಡಲು ನಾವು ಸದಾ ಸಿದ್ಧರಿದ್ದೇವೆ!

ಇಂದೇ ವಿಚಾರಿಸಿರಿ!

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ಗೋ ವಿಜಯ
(ಗೋವಿನಕಥೆ)

ಶ್ರೀ ಸುಬ್ಬಪ್ರಾಣ ಉಪಾಧ್ಯಾಯರಿಂದ ರಚಿತವಾದ, ಪುಟ್ಟಕ್ಕಿಗೂ, ವಯಸ್ಕರಿಗೂ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮವ್ವನ್ನಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಆವಶ್ಯ ಆವರೆ ಕೈಗೆ ಕೊಡಿರಿ.

60 ಪುಟಗಳು: ಬೆಲೆ .0-8-0

ನವಯುಗ ಪ್ರೆಸ್, ಉಡುಪಿ.

ಜಾಗತಿಕ ಸಂಸ್ಥೆ

ಅಂತಾರಾಷ್ಟ್ರೀಯ ಅಭಿವೃದ್ಧಿಗೆ ಪ್ರಪಂಚ ಬೇಂಕಿನ ಸಹಾಯ

೧೯೪೪ರಲ್ಲಿ ಸ್ಥಾಪಿತವಾದ ಬೇಂಕು ಸದಸ್ಯ ರಾಷ್ಟ್ರಗಳ ಪುನಾರಚನಾ ಕಾರ್ಯದಲ್ಲಿ ಮಹಾ ಪಾತ್ರ ವಹಿಸಿದೆ.

ಪ್ರಪಂಚ ಬ್ಯಾಂಕ್ ಎಂದು ಚಿರಪರಿಚಿತವಾಗಿರುವ ಪುನಾರಚನಾ ಹಾಗೂ ಅಭಿವೃದ್ಧಿ ಸಂಬಂಧದಾದ ಅಂತಾರಾಷ್ಟ್ರೀಯ ಬ್ಯಾಂಕ್ ೧೯೪೪ರ ಜೂಲೈ ತಿಂಗಳಲ್ಲಿ ಅಮೇರಿಕಾದ ಸಂಯುಕ್ತ ಸಂಸ್ಥಾನದ ಗ್ರೇಟ್‌ನ್ಯೂಡ್ಸ್‌ನಲ್ಲಿ ನಡೆದ ಆರ್ಥಿಕ ಸಮ್ಮೇಳನದಲ್ಲಿ ಸ್ಥಾಪಿತವಾಯಿತು. ಈ ಬ್ಯಾಂಕ್ ೧೯೫೬ರ ಜೂನ್ ತಿಂಗಳಲ್ಲಿ ತನ್ನ ಕಾರ್ಯಾಚರಣೆಯನ್ನಾರಂಭಿಸಿತು. ಇದು ಅಂತಾರಾಷ್ಟ್ರೀಯ ಸಹಕಾರ ಸಂಸ್ಥೆಯಾಗಿದ್ದು ಸಂಯುಕ್ತ ರಾಷ್ಟ್ರಗಳ ಸಂಘದ ವಿಶೇಷ ಅಂಗವೆನಿಸಿದೆ. ತನ್ನ ಸದಸ್ಯ ರಾಷ್ಟ್ರಗಳ ಆರ್ಥಿಕಾಭಿವೃದ್ಧಿ ಕಾರ್ಯಗಳಲ್ಲಿ ನೆರವೀಯುವುದು ಹಾಗೂ ಜಗತ್ತಿನ ಜನಜೀವನ ಮಟ್ಟವನ್ನು ಹೆಚ್ಚಿಸಲು ನೆರವಾಗುವುದು ಪ್ರಪಂಚ ಬ್ಯಾಂಕಿನ ಗುರಿಯಾಗಿದೆ. ಬ್ಯಾಂಕ್ ಸದಸ್ಯ ರಾಷ್ಟ್ರ ಸರ್ಕಾರಗಳು, ಸರ್ಕಾರಿ ಸಂಸ್ಥೆಗಳು, ಅಥವಾ ಖಾಸಗಿ ಉದ್ಯಮಗಳಿಗೆ ಸಾಲಗಳನ್ನು ನೀಡಬಹುದು. ಸಾಲ ಪಡೆಯುವ ಸಂಸ್ಥೆ ಅಥವಾ ಉದ್ಯಮವು ಸರ್ಕಾರಕ್ಕೆ ಸಂಬಂಧಪಡೆದಿದ್ದಲ್ಲಿ ಸಂಬಂಧಪಟ್ಟ ಸದಸ್ಯ ರಾಷ್ಟ್ರ ಸರ್ಕಾರವು ಸಾಲದ ಬಗ್ಗೆ ಭರವಸೆಯನ್ನಿಡಬೇಕಾಗುವುದು.

ಈ ಬ್ಯಾಂಕ್ ೧೯೫೮ರಲ್ಲಿ ಮೊತ್ತಮೊದಲನೆಯ ಸಲ ಸಾಲಗಳನ್ನು ನೀಡಿತು. ಸಮಾನಂತರ ವಿರೋಸ್ಯ ರಾಷ್ಟ್ರಗಳ ನೆರವಿಗಾಗಿ ೫೦ ಕೋಟಿ ಡಾಲರುಗಳಷ್ಟು ಸಾಲಗಳನ್ನು ನೀಡಲಾಯಿತು. ೧೯೫೮ರಲ್ಲಿ ಬ್ಯಾಂಕ್ ಪೂರ್ಣಾಭಿವೃದ್ಧಿ ಹೊಂದಿರದ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಗಣನೀಯ ಪ್ರಮಾಣದ ಸಾಲಗಳನ್ನು ಕೊಡಲು ಪ್ರಾರಂಭಿಸಿತು.



ಭಾರತ ಆಣಕಟ್ಟಿನ ಪ್ರವೇಶಕ್ಕೆ ಆಂಧ್ರದ ಕೆಸಾನರು ಸಂದರ್ಶಿಸಿದ ಸಂದರ್ಭದ ಚಿತ್ರವನ್ನು ಕೆಲವಾವಿದರೊಬ್ಬರು ಚಿತ್ರಿಸಿದ್ದಾರೆ. ಒಂದು ಜಿಲ್ಲೆಗಾಲದ ದಿನ ಎಲ್ಲ ಸ್ತ್ರಾಯದ ಸುಮಾರು ೪೫೦ ಕೃಷಿಕರು ಬಾಕ್ರಾವನ್ನು ಸಂದರ್ಶಿಸಿದ್ದರು. ಇವರಲ್ಲಿ ೭೦ ಯಾ ಅದಕ್ಕೂ ಮಿಕ್ಕಿದ ಮುದುಕರು, ಆಗಾಗಲೇ ಪ್ರಪಂಚಕ್ಕಳಿದಿದ್ದ ಬಾಲರು, ಮಕ್ಕಳು, ಹೆಂಗಸರು ಎಲ್ಲರೂ ಸೇರಿದ್ದರು. ಪ್ರಧಾನ ನೆಹರು ಹೇಳುತ್ತಿದ್ದ "ಪುಣ್ಯಸ್ಥಳ"ವನ್ನು ಸಂದರ್ಶಿಸುವ ಇರಾದೆಯಿಂದ ಇವರು ಆಂಧ್ರದ ಅನಕಪಲ್ಲಿಯಿಂದ ಅಪ್ಪು ದೂರಕ್ಕೆ ಹೋಗಿದ್ದರು.

೧೯೫೮ರ ಜೂಲೈ ವೇಳೆಗೆ ಬ್ಯಾಂಕ್ ೪೬ ರಾಷ್ಟ್ರಗಳು ಅಥವಾ ಕ್ಷೇತ್ರಗಳಲ್ಲಿನ ೬೦೦ಕ್ಕೂ ಹೆಚ್ಚಿನ ಯೋಜನೆಗಳಿಗೆ ಹಣ ಕಾಸನ್ನು ಒದಗಿಸುವುದಕ್ಕಾಗಿ ೩೭೦ ಕೋಟಿ ಡಾಲರ್‌ಗಳಷ್ಟು ಸಾಲಗಳನ್ನು ನೀಡಿತ್ತು. ಬ್ಯಾಂಕು ಆಫ್ರಿಕಾದ ರಾಷ್ಟ್ರಗಳಿಗೆ ೪೭.೯೦ ಕೋಟಿ ಡಾಲರ್‌ಗಳು ಏಶಿಯದ ರಾಷ್ಟ್ರಗಳಿಗೆ೯೪.೦೦ ಕೋಟಿ ಡಾಲರ್‌ಗಳಷ್ಟು ಹಣವನ್ನು ಸಾಲಗಳ ರೂಪದಲ್ಲಿ ನೀಡಿದೆ. ರಾಷ್ಟ್ರದ ಆರ್ಥಿಕ ಪ್ರಗತಿಗೆ ಅಗತ್ಯವಾದಅಡಿಪಾಯ ಸ್ಥಾಪನೆಗಾಗಿ ಬ್ಯಾಂಕ್ ತನ್ನ ಸದಸ್ಯ ರಾಷ್ಟ್ರಗಳಿಗೆ ಸಾಲಗಳನ್ನು ಕೊಡುತ್ತಿದೆ. ಬ್ಯಾಂಕ್ ನೀಡುತ್ತಿರುವ ಸಾಲಗಳಲ್ಲಿ ಸುಮಾರು ಮೂರನೆಯ ಒಂದರಷ್ಟು ಸಾಲಗಳು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಸಂಬಂಧಿಸಿವೆ. ಮತ್ತೆ ಮೂರನೆಯ ಒಂದರಷ್ಟು ಸಾಲಗಳನ್ನು ರೈಲ್ವೆಗಳು, ಮಾರ್ಗಗಳ, ವಾಯು ಹಾಗೂ ಜಲ ಮಾರ್ಗಗಳ ಸುಧಾರಣೆಗಾಗಿ ಕೊಟ್ಟಿದೆ. ಉಳಿದ ಮೂರನೆಯ ಒಂದರಷ್ಟು ಸಾಲಗಳನ್ನು ನ್ಯಮಕಾಯ (ಅದರಲ್ಲಿಯೂ ವಿಶೇಷವಾಗಿ ಸೀರಾವರಿ ಕಾರ್ಯಗಳು), ಉದ್ಯಮ (ಅದರಲ್ಲಿಯೂ ವಿಶೇಷವಾಗಿ ಉಕ್ಕಿನ ಉತ್ಪಾದನೆ) ಮತ್ತು ಸಾಮಾನ್ಯ ಅಭಿವೃದ್ಧಿ ಉದ್ದೇಶಗಳಿಗಾಗಿ ಒದಗಿಸಿದೆ.

೬೭ ರಾಷ್ಟ್ರಗಳು ಪ್ರಪಂಚ ಬ್ಯಾಂಕಿನ ಸದಸ್ಯತ್ವವನ್ನು ಪಡೆದಿವೆ. ಈ ಸದಸ್ಯ ರಾಷ್ಟ್ರಗಳು ಬ್ಯಾಂಕಿನ ಸ್ಟಾಕ್‌ಹೋಲ್ಡರ್‌ಗಳಾಗಿರುವುವು. ಪ್ರತಿ ರಾಷ್ಟ್ರವೂ ತನ್ನ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಚಂದಾ ನೀಡಿದೆ. ಪ್ರತಿಸದಸ್ಯರಾಷ್ಟ್ರವೂ ಬ್ಯಾಂಕಿನ ಕಾರ್ಯನಿರ್ವಾಹಕ ಮಂಡಲಿಗೆ ಒಬ್ಬ ಗೌರ್ನರ್‌ರನ್ನು ನಾಮಕರಣ ಮಾಡುವುದು. ಈ ಮಂಡಲಿಯು ದರ್ಮಕ್ಕೆಮ್ಮೆನ್ನು ಸಮಾನೇಶಗೊಳ್ಳುವುದು. ಈ ಮಂಡಲಿಯು ಗಿನಿಮಿಷು ಅಧಿನೇಶನವು ಕಳೆದ ವಾರ ನವದೆಹಲಿಯಲ್ಲಿ ನಡೆಯಿತು. ಕೇಂದ್ರ ಹಣಕಾಸಿನ ಶಾಖೆಯ ಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯಿ ಅವರು ಈ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಭಾರತದ ಪರವಾಗಿ ಗೌರ್ನರ್ ಆಗಿರುವರು. ಈ ಗೌರ್ನರ್‌ಗಳು ತಮಗಿರುವ ಅಧಿಕಾರಗಳಲ್ಲಿ ಅಧಿಕಾಂಶವನ್ನು ಕಾರ್ಯಕಾರೀ ನಿರ್ದೇಶಕರುಗಳಿಗೆ ವಹಿಸಿರುವರು. ಈ ಕಾರ್ಯಕಾರಿ ನಿರ್ದೇಶಕರು ತಿಂಗಳಗೊಮ್ಮೆ ಸಮಾವೇಶಗೊಳ್ಳುವರು. ಪ್ರಪಂಚ ಬ್ಯಾಂಕ್‌ನಲ್ಲಿ ಅತ್ಯಧಿಕ ಪ್ರಮಾಣದ ಸ್ಟಾಕ್‌ಗಳನ್ನು ಪಡೆದಿರುವ ಐದು ರಾಷ್ಟ್ರಗಳ ಪರವಾಗಿ ಕಾರ್ಯಕಾರಿ ನಿರ್ದೇಶಕರ ಮಂಡಲಿಗೆ ಐದು ಮಂದಿ ಕಾರ್ಯಕಾರಿ ನಿರ್ದೇಶಕರುಗಳನ್ನು ನಾಮಕರಣ ಮಾಡಲಾಗುವುದು. ಉಳಿದ ಸದಸ್ಯ ರಾಷ್ಟ್ರಗಳು ೧೫ ನಿರ್ದೇಶಕರುಗಳನ್ನು ಚುನಾಯಿಸುವುವು. ಅತ್ಯಧಿಕ ಸಂಖ್ಯೆಯ ಸ್ಟಾಕ್‌ಗಳನ್ನು ಪಡೆದಿರುವ ರಾಷ್ಟ್ರಗಳಲ್ಲಿ ಐದನೆಯ ಸ್ಥಾನವನ್ನು ಗಳಿಸಿರುವ ಭಾರತವು ಮಾಜಿ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರಾದ ಶ್ರೀ. ವಿ. ನರಹರಿರಾಯರನ್ನು ತನ್ನ ಕಾರ್ಯಕಾರಿ ನಿರ್ದೇಶಕರನ್ನಾಗಿ ನಾಮಕರಣ ಮಾಡಿದೆ. ಕಾರ್ಯಕಾರಿ ನಿರ್ದೇಶಕರು ಬ್ಯಾಂಕಿನ ಕಾರ್ಯನೀತಿ ಸಂಬಂಧವಾದ ವಿಷಯಗಳಿಗೆ ಹೊಣೆ ಹೊತ್ತಿರುವರಲ್ಲದೆ ಬಾಂಕ್ ನೀಡುವ ಎಲ್ಲ ಸಾಲಗಳಿಗೂ ಸಮ್ಮತಿಸಲೇ ಕಾರುವುದು.

ಬ್ಯಾಂಕಿನ ಅನುದಿನದ ಕೆಲಸಕಾರ್ಯಗಳನ್ನು ಅಧ್ಯಕ್ಷರೇ ನಿರ್ವಹಿಸುವರು. ಸಾಲಗಳ ಬಗ್ಗೆ ಕಾರ್ಯಕಾರಿ ನಿರ್ದೇಶಕರುಗಳಿಗೆ ಶಿಫಾರಸು ಮಾಡುವುದು, ಬ್ಯಾಂಕಿನ ಕಾರ್ಯನೀತಿ ಸಂಬಂಧವಾದ ಪ್ರಶ್ನೆಗಳು ಈ ಮುಂತಾದ ವಿಷಯಗಳು ಅಧ್ಯಕ್ಷರಿಗೆ ಸೇರಿರುವುವು. ಬ್ಯಾಂಕಿನ ಅಧ್ಯಕ್ಷರು ಕಾರ್ಯಕಾರಿ ನಿರ್ದೇಶಕರುಗಳ ಮಂಡಲಿಯ ಅಧ್ಯಕ್ಷರೂ ಆಗಿರುವರು. ಈಗ ಅಮೇರಿಕಾದ ಪ್ರಜೆ ಮಿ॥ ಯೂಜೆನ್ ಆರ್. ಬ್ಲ್ಯಾಕ್ ಅವರು ಬ್ಯಾಂಕಿನ ಅಧ್ಯಕ್ಷರಾಗಿರುವರು ಈ ಬ್ಯಾಂಕಿನಲ್ಲಿ ೪೦ ವಿವಿಧ ರಾಷ್ಟ್ರಗಳಿಗೆ ಸೇರಿದ ಸುಮಾರು ೫೦೦ ವ್ಯಕ್ತಿಗಳು ಕೆಲಸನಿರ್ವಹಿಸುತ್ತಿರುವರು. ಇವರಲ್ಲಿ ಬ್ಯಾಂಕರ್‌ಗಳು, ಆರ್ಥಶಾಸ್ತ್ರಜ್ಞರು, ಅಕೌಂಟೆಂಟರು, ಎಂಜಿನಿಯರ್‌ಗಳು ಮತ್ತಿತರ ಪ್ರವೀಣರುಗಳಿರುವರು. ಬ್ಯಾಂಕಿನ ಪ್ರಧಾನ ಕ

(೧೨ನೇ ಪುಟ ನೋಡಿರಿ)

The Moolky Bank Ltd.,
Mulki.
NOTICE.

It is reported that Share Certificate numbering 408 to 418 standing in the name of Late Sri. K. Menka Shetty, Uliyargoli, Kaup, in the Books of the Bank. are lost and Sri. B. Thukra Shetty, N/o Sri. Menka Shetty and Sri. K. Seetharama Shetty, grand N/o Sri. Menka Shetty have applied for the issue of duplicate Share Certificates.

Duplicate Share Certificates will be issued unless objection, if, any, is filed by 31—10—1958.

(Sd.) M. R. H. Punja,
MANAGER.

ಜನಪ್ರಿಯ ಪುಸ್ತಕದಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ಶೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ. ರೂ. ೨—೦—೦ (ಟಪಾಲು ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಿಕ್ಷಣ ಪ್ರಗತಿ

ಟ್ಯೂಶನ್ ಪದ್ಧತಿಯು ಅಂತ್ಯಗೊಳ್ಳದೆ ಶಿಕ್ಷಣಕ್ರಮವು ಸುಧಾರಿಸಲಾರದು

ಶಿಕ್ಷಣ ಪದ್ಧತಿಯನ್ನು ವ್ಯರ್ಥ ನಿಂದಿಸುವವರೇ ಬೆಳೆಯುತ್ತಿರುವ ಅಶಿಸ್ತಿಗೆ ಕಾರಣರಾಗಿದ್ದಾರೆ.

ಇಂದಿನ ಶಿಕ್ಷಣ ಕ್ರಮದಲ್ಲಿ ಯಾವ ಕೊರತೆಯೂ ಇಲ್ಲವೆಂದು ಹೇಳುವಂತಿಲ್ಲ. ಆದರೆ, ಕೊರತೆಯಿಲ್ಲದ ಶಿಕ್ಷಣ ಪದ್ಧತಿ ಜಗತ್ತಿನಲ್ಲಿ ಎಲ್ಲಿದೆ? ನಮ್ಮ ಶಿಕ್ಷಣ ಪದ್ಧತಿಯನ್ನು ಖಂಡಿಸುವುದು ಇಂದೊಂದು ಪ್ರವೃತ್ತಿಯಾಗಿದೆ ಆದರೆ, ಇದು ಖಂಡನಾರ್ಹವಿದೆ; ಅಪರಾಧವೂ ಆಗಿದೆ. ಇದ್ದ ಕುಂದುಕೊರತೆಗಳನ್ನು ತಿದ್ದಿ ಶಿಕ್ಷಣ ಕ್ರಮವನ್ನು ಸರಿಪಡಿಸದೆ ಅದನ್ನು ಖಂಡಿಸುತ್ತ ಹೋಗುವವರೇ ವಿದ್ಯಾರ್ಥಿಗಳಲ್ಲಿ ಅಶಿಸ್ತಿಗೆ ಮೂಲ ಕಾರಣರು. ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ಅಶಿಸ್ತಿಗೆ ಶಿಕ್ಷಕರನ್ನು ದೂರಿ ಪ್ರಯೋಜನವಿಲ್ಲ.

ಶಿಕ್ಷಕರಿಗೆ ಅಂತಹ ಸ್ಥಾನಮಾನಗಳಾಗಲೀ ಉತ್ತರ ದಾಯಿತ್ವಗಳನ್ನು ನಾವು ಕೊಡುತ್ತಿಲ್ಲ. ಅವರಿಗೆ ಕಡಿಮೆ ಸಂಬಳವಿತ್ತು ಅವರ ಆತ್ಮಗೌರವವನ್ನು ಕಾಯ್ದುಕೊಳ್ಳಲು ಅವಕಾಶವೀಯದೆ ವಿದ್ಯಾರ್ಥಿಗಳಲ್ಲಿ ಶಿಸ್ತು ಸಭ್ಯರ್ಕನೆ ಮೂಡಿಸಿ ಗಾರಿಕೆಯನ್ನು ನೀವು ಅವರ ಮೇಲೆ ಹೇಗೆ ಹೇರಬಲ್ಲಿರಿ? ನಾನು ವಿದ್ಯಾಶಾಖೆಯಲ್ಲಿದ್ದಾಗ, ಶಿಕ್ಷಣಕ್ಕೆ ವರ್ಷಕ್ಕೆ ಎರಡು ಕೋಟಿ ವೆಚ್ಚ ಮಾಡಲಾಗುತ್ತಿತ್ತು. ನಾನು ಬಿಡುವಾಗ ಅದು ೩೫ ಕೋಟಿ ರೂಪಾಯಿಗಳಿಗೇರಿತು. ಈಗ ನಾವು ಒಟ್ಟು ಶಿಕ್ಷಣಕ್ಕಾಗಿ ಸುಮಾರು ೨೧೦ ಕೋಟಿ ರೂಪಾಯಿಗಳನ್ನು ವ್ಯಯಿಸುತ್ತೇವೆ.

ಮುಖ್ಯವಾಗಿ ಈಗಿರುವ ಟ್ಯೂಶನ್ ಪದ್ಧತಿಯು ನಾಶವಾಗಬೇಕು ಅದು ಶಿಕ್ಷಕನ ಗೌರವವನ್ನು ಹಾಳುಮಾಡುತ್ತದೆ. ಖಾಸಗಿ ಶಿಕ್ಷಣ ಕೊಡುವ ಶಿಕ್ಷಕರು ಶಾಲೆಯಲ್ಲಿ ಸಸಂಪರ್ಕ ರೀತಿಯಿಂದ ತಮ್ಮ ಕರ್ತವ್ಯ ನಿರ್ವಹಿಸಲಾರರು ಖಾಸಗಿ ಶಿಕ್ಷಣ ಕೊಡುವ ಶಿಕ್ಷಕನು ಶಿಕ್ಷಕನಾಗಿ ಉಳಿಯಲಾರನು. ಅವನು ತನ್ನ ವ್ಯಕ್ತಿ ಗೌರವವನ್ನು ಕಳೆದುಕೊಳ್ಳುತ್ತಾನೆ ಶಿಕ್ಷಕನು ತಾನು ಕಲಿಸಿದುದಕ್ಕೆ ಪ್ರತಿಫಲ ಪಡೆಯಬೇಕು. ತನ್ನ ಜೀವನವನ್ನು ಸುಗಮವಾಗಿಸುವಷ್ಟು ಸಂಬಳ ಅವನಿಗೆ ಬೇಕು ಖಾಸಗಿ ಟ್ಯೂಶನ್ನಿಗೆ ಹಾಕುವಮಾಡುವ ಹಣವನ್ನು ಸಂಸ್ಥೆಗಳಿಗೆ ಹಾಕಿ ಶಾಲೆಗಳಲ್ಲಿಯೇ ಉತ್ತಮ ಶಿಕ್ಷಣ ಸೌಲಭ್ಯವನ್ನು ಏರ್ಪಡಿಸುವಂತೆ ನೀವೇಕೆ ಮಾಡಬಾರದು?

ಶಿಕ್ಷಕರಿಗೆ ಸಾಕಷ್ಟು ಸಂಬಳವಿತ್ತು ಆ ಉದ್ಯೋಗಕ್ಕೆ ಜನರನ್ನು ಸಾಕಷ್ಟು ಆಕರ್ಷಿಸದೆ ನಾವು ಅವರನ್ನು ಆಲಕ್ಷಿಸಿ ಶಿಕ್ಷಣಕ್ರಮವನ್ನು ಖಂಡಿಸುತ್ತೇನೆ. ವಿದ್ಯಾರ್ಥಿಗಳಲ್ಲಿಯ ಅಶಿಸ್ತಿನ ಪೊಣೆಗಾರಿಕೆಯನ್ನು ಅವರ ಮೇಲೆ ಹೇರುತ್ತೇನೆ ವಿದ್ಯಾರ್ಥಿಗಳ ನಡತೆಯ ಪೊಣೆಗಾರಿಕೆಯನ್ನು ಶಿಕ್ಷಕರು ಮಾತ್ರವೇ ಹೊರಲಾರರು ಪಾಲಕರೂ ಅದಕ್ಕೆ ಹೆಗಲೆಣೆ ಕೊಡಬೇಕಾಗುವುದು

ಶಿಕ್ಷಣ ವಿಷಯದಲ್ಲಿ ನಾವು ಜಗತ್ತಿನ ಯಾವುದೇ ದೇಶಕ್ಕೆಂತ ಉತ್ತಮ ಸ್ಥಿತಿಯಲ್ಲಿದ್ದೇವೆ ಅಮೆರಿಕೆಯು ಶಿಕ್ಷಣ ಕ್ರಮಕ್ಕೆ ಪಾಶ್ಚಾತ್ಯ ಹಿನ್ನೆಲೆಯ ಪಾಶ್ಚಾತ್ಯ ಶಿಕ್ಷಣಕ್ರಮವು ಹಬ್ಬಿ ಮೂಲವಾದುದು ಅರೇಬಿಯ, ಚೀನಗಳಿಗೆ ಕೂಡ ಅವುಗಳದೇ ಆದ ಪರಂಪರೆಯಿದೆ ಭಾರತಕ್ಕೆ ತನ್ನ ಸ್ವಂತವಾದ ಪೀಳಿಗೆಯಿರುವುದು ಮಾತ್ರವಲ್ಲದೆ ಈ ಎಲ್ಲವುಗಳ ಸಮನ್ವಯವಾಗಿದೆ ಇಂತಹ ಉತ್ತಮ ಹಿನ್ನೆಲೆಯಲ್ಲಿದ್ದುಕೊಂಡು ನಮ್ಮ ಶಿಕ್ಷಣ ಕ್ರಮವನ್ನು ಹಿಂಡಿರುತ್ತ ಖಾಸಗಿ ಟ್ಯೂಶನ್ ಪದ್ಧತಿಯಂತಹ ಕೆಟ್ಟ ಚಟವನ್ನು ಮುಂದುವರಿಸುತ್ತ ಹೋಗುವುದು ದುರಂತವೇ ಸರಿ.

ನಾವು ಮಾತಿನಲ್ಲಿ ಗುರುದೇವೋ ಎಂದು ಅಧ್ಯಾಪಕರನ್ನು ಅಟ್ಟಕ್ಕೇರಿಸುತ್ತೇವೆ ಆದರೆ, ಆಚರಣೆಯಲ್ಲಿ ಅವರನ್ನು ಸಾಮಾನ್ಯ ಮನೆಗೆಲಸದವರಿಗಿಂತ ಕೀಳಾಗಿ ತಿಳಿಯುತ್ತೇವೆ ಇಂತಹ ಇಬ್ಬಗೆಯ ಮಾನದಂಡದಿಂದ ಅಳಯುವುದು ಸಲ್ಲದ ಕಾರ್ಯ ಇಂದಿನ ಶಿಕ್ಷಣ ಕ್ರಮವೇ ನನಗೆ ಬಹಳ ಮಂದಿ ತಜ್ಞರನ್ನು ಇತ್ತಿದೆಯೆಂಬಾಗ ಅದನ್ನು ಸುಮ್ಮನೇ ದೂರುವುದು ಸರಿಯಲ್ಲ. ಇದರಲ್ಲಿಯೇ ಸ್ವಲ್ಪ ಸರಿಹೊಂದಿಸಿ, ಉತ್ತಮ ಶಿಕ್ಷಕರನ್ನು ತೊರೆಸಿಕೊಂಡರೆ, ಯೋಗ್ಯ ಶಿಕ್ಷಣವು ಲಭಿಸುತ್ತದೆ ಶಿಕ್ಷಣ ಮಟ್ಟವನ್ನು ಎತ್ತರಿಸದೆ ಆಡಳಿತಟ್ಟುಗಳನ್ನು ಮಾತ್ರ ಕಟ್ಟಿಸಿದ ಮಾತ್ರಕ್ಕೆ ನಮ್ಮ ಪ್ರಗತಿಯೂಗಲಾರದು ಮಾನವೀಯ ಮೌಲ್ಯಗಳಿಲ್ಲದ ವಂತಾಗಬಾರದು. ಪ್ರಾಚೀನ ಕಾಲದಲ್ಲಿ ಸೆನೆಪೋಟೇಮಿಯಾ, ಸೈಲ್, ಆಫ್ರಿಕಾಗಳಲ್ಲಿ ಅನೇಕಾನೇಕ ಭೌತಿಕ ಸಿರಿಪದ ರಜನೆಗಳು ನಿರ್ಮಾಣವಾಗಿದ್ದುವು, ಆದರೆ ಅವು ಮಾನವೀಯ ಮೌಲ್ಯವನ್ನು ಎತ್ತರಿಸದೆ ಹೋದುದರಿಂದ ಆ ದೇಶಗಳು ನಿರ್ನಾಮವಾದುವು ಆದಕಾರಣ, ಶಿಕ್ಷಣ ಮಟ್ಟವನ್ನು ಎತ್ತರಿಸುವುದೇ ನಮ್ಮ ಗುರಿಯಾಗಬೇಕು.ಈ ವಿಷಯದಲ್ಲಿ ಎಲ್ಲರೂ ವಿಚಾರಿಸುವಂತೆ ಪ್ರಯತ್ನ ನಡೆಯಬೇಕು. ಡಿಸ್ಕೋಲಿ ಕೀಳಿದಂತೆ ನಾವು ನಮ್ಮ ಒಡೆಯರಿಗೇನೇ ಪಾರ ಕಲಿಸಬೇಕು

(ಜನವಾಣಿಯ ಕರ್ನಾಟಕ ಭಾಷಣದಿಂದ)



ಹಿಮದಿಬ್ಬಿಯಲ್ಲೂ ಸಂಚರಿಸಬಲ್ಲ ಮತ್ತು ಅಣುಶಕ್ತಿಯಿಂದ ಸಂಚರಿಸುವ ಸಬ್‌ಮರಿನ್‌ಗಳನ್ನು ಅಮೆರಿಕೆಯು ತಯಾರಿಸಿದೆ. ಅವುಗಳಲ್ಲಿ ಇದು ಎರಡನೆಯದಾಗಿದೆ.

ಸಾಹಿತ್ಯ ಸಮೀಕ್ಷೆ

ಅರ್ಧಗೌರವಕ್ಕೆ ಹೆಸರಾದ ಮಹಾಕವಿ—ಭಾರವಿ

ಅವನ ಕಿರಾತಾರ್ಜುನೀಯಂ- ಉತ್ತಮ ಕವಿಕೃತಿಗೊಂದು ಶ್ರಾಢ ಉದಾಹರಣೆ!

ಸಂಸ್ಕೃತ ಭಾಷೆಯ ಅಗ್ರಗಣ್ಯ ಮಹಾಕವಿಗಳಲ್ಲಿ ಕಾಲಿದಾಸನ ನಂತರದ ಸ್ಥಾನವನ್ನು ಭಾರವಿಯು ಪಡೆಯುತ್ತಾನೆ ಆವನು 'ಕಿರಾತಾರ್ಜುನೀಯಮ್' ಎಂಬ ಒಂದೇ ಕಾವ್ಯವನ್ನು ಬರೆದಿದ್ದರೂ ಇದೊಂದರಿಂದಲೇ ಅವನ ಕೀರ್ತಿಯು ಅಮರವಾಯಿತು

ಕವಿಯ ಕಾವ್ಯದಿಂದ ಅತನ ಬಗ್ಗೆ ಯಾವುದೇ ವಿಚಾರವೂ ತಿಳಿಯುವುದಿಲ್ಲ. ಕಾಲಿದಾಸನನಂತರ ಎಂದರೆ, ಸುಮಾರು ಕ್ರಿ ಶ ೫೫೦ರಷ್ಟೀತನಿದ್ದನೆಂದು ವಿದ್ವಾಂಸರು ತರ್ಕವ್ಯಾಯಪಟ್ಟಿದ್ದಾರೆ

ಕಿರಾತ ಜುನೀಯಂ ಕಾವ್ಯದಲ್ಲಿ ಕವಿಯ ಕಾವ್ಯ ಕಲ್ಪನೆಯು ವ್ಯಕ್ತಪಟ್ಟಿದೆ ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯಲು ಹಿಂದನ್ನು ಕುರಿತು ತಪಸ್ಸನ್ನು ಮಾಡಿದಾಗ ಹರನು ಕಿರಾತನ ವೇಷವನ್ನು ತೊಟ್ಟು, ಅರ್ಜುನನ ಸತ್ವ ಪರೀಕ್ಷೆಗೆ ಸನ್ನದ್ಧನಾಗಿ ಬರಲು ಹಿಂದಿಯ ಕಾರಣದಿಂದ, ಅವರಿಗಳಿಗೆ ಬಾಹುಯುದ್ಧವಾಗಿ, ಅರ್ಜುನನು ಗೆದ್ದು ಅಸ್ತ್ರವನ್ನು ಸಂಪಾದಿಸಿದ ಕಥಾನಕವಿದರಲ್ಲಿ ಅಡಕವಾಗಿದೆ.

ಮಹಾಕಾವ್ಯ ಲಕ್ಷಣ ನ್ನನುಸರಿಸಿ ಕವಿಯು ಈ ಕಾವ್ಯದ ೧೮ ಸರ್ಗಗಳಲ್ಲಿ ಯೆತ್ತು, ಪ್ರಕೃತಿ ವರ್ಣನೆ, ಜಲಕ್ರೀಡೆ, ಸೂರ್ಯೋದಯಾಸ್ತಾದಿಗಳನ್ನು ಮನೋರಮ ಶಬ್ದ ಚಿತ್ರಗಳಿಂದ ವರ್ಣಿಸಿದ್ದಾನೆ. ಇಂತಹ ಸಂದರ್ಭದಲ್ಲಿ ಒದುಗನು ಕವಿಯ ಕೌಶಲವನ್ನು ಕಂಡು ವಿಸ್ಮಯಪಡುತ್ತಾನೆ ೧೫ನೇ ಸರ್ಗದಲ್ಲಿ ಕವಿಯ ಕಲೆಯು ಚರಮಸೀಮೆಯನ್ನು ಮುಟ್ಟಿದೆ. ಕವಿಯಲ್ಲಿ ಛಂದಸ್ಸು ಮತ್ತು ಅಲಂಕಾರ ಶಾಸ್ತ್ರಗಳ ಕ್ಷೇತ್ರದಲ್ಲಿ ನವೀನ ಪ್ರಯೋಗಗಳನ್ನು ಅದ್ಭುತವಾಗಿ ಮಾಡಿದ್ದಾನೆ

ಈ ಸರ್ಗದಲ್ಲಿ ಪದ್ಯದ ಪಂಕ್ತಿಯನ್ನು ಓದುವಾಗ ತಿರುವು ಮುರುವು ಮಾಡಿದರೆ ಒಂದೇ ಅರ್ಥಬರುವ ಒಂದು ಪದ್ಯವಿದೆ ಎರಡು ಅರ್ಥವಾ ನಾಲ್ಕೆ ಎಕ್ಷರಗಳ ಪ್ರಯೋಗ ಮಾಡಿದ ಕೆಲವು ಪದ್ಯಗಳಿವೆ ಕೇವಲ 'ನ' ವರ್ಣವು ಪ್ರಯೋಗಿಸಲ್ಪಟ್ಟ ಒಂದು ಸದ್ಯ ನೋಡಿರಿ.

ನನೋನನುನ್ನೋ ನುನ್ನೋನೋ
ನಾನಾನನುನನು ನ ನ್ನೋ ನುನ್ನೋ
ನನುನ್ನೇನೋ ನಾನೇನಾ ನನ್ನನುನ್ನ
ನುತ್

ಈ ಪದ್ಯದ ಅರ್ಥ ತಿಳಿದಿವೆಯೆ? "ನೀಚ ಮನುಷ್ಯನಿಂದ ನೋಯಿಸಲ್ಪಟ್ಟವನು ಪುರುಷನೇ ಇಲ್ಲ. ನೀಚ ಜನರಿಗೆ ನೋವನ್ನುಂಟುಮಾಡುವವನೂ ಪುರುಷನಲ್ಲ. ಅಸ್ವತಂತ್ರ ಸ್ವಾಮಿಯಿರುವ ಗಾಯಾಳುವಾದ ಮನುಷ್ಯನು ಗಾಯಾಳುವಲ್ಲ ಗಾಯಗೊಂಡಿರುವವನ ಮೇಲೆ ಹೊಡೆಯುವವನೇ ಅಧಂಧಿಯು"

ಇಂತಹ ಚಮತ್ಕಾರಿ ಕವಿಗೆ ತನ್ನ ಕವಿತ್ವದಿಂದಲೇ ಕಷ್ಟಗಳನ್ನೂ ಅನುಭವಿಸಬೇಕಾಯಿತು. ಭಾರವಿಯ ಶೈಲಿಯು ಜಟಿಲವಾಗಿದೆ ಆದರೆ, ಅವನ್ನು ಅರ್ಥವಿಸಿಕೊಂಡಾಗ ಮಾತ್ರ ಮನಸ್ಸಿಗೆ ಆಹ್ಲಾದವಾಗುವುದು ಕೆಲವೇ ಮಾತುಗಳಲ್ಲಿ ಬಹಳ ಹೇಳುವ ಕಲೆಯಲ್ಲಿ ಭಾರವಿಯದೆತ್ತಿದ ಕೈ. ಈತನ ಬಗ್ಗೆ ವ್ಯಾಖ್ಯಾನಕಾರ ಮಲ್ಲಿನಾಥನು ಹೀಗೆ ಬರೆಯುತ್ತಾನೆ:

(ಉಳಿದ ಸುದ್ದಿ ನೋಡಿರಿ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಇಂಗ್ಲಿಷ್ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:– ಸಾಧಾರಣ ಪ್ರತಿ- ರೂ. ೧-೮-೦ (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ

ಮೂರ್ಖನಾದವನು ತನ್ನ ಮೂರ್ಖತೆಯನ್ನು ತಿಳಿದುಕೊಂಡ ಪಕ್ಷದಲ್ಲಿ ಮುಂದಕ್ಕಾದರೂ ಆದನ್ನು ತೊರೆದು ಸಜ್ಜನನಾಗಬಹುದು; [ಆದರೆ] ತನ್ನ ಮೂರ್ಖತೆಯನ್ನು ಗಮನಿಸದಿರುವ ಮೂರ್ಖನು ಕೊನೆಯುಸಿರಿರುವತನಕವೂ ಮೂರ್ಖನಾಗಿಯೇ ಬಾಳಬೇಕಾಗುವುದು.

NAVAYUGA

Founder:—

A. B. SHETTY,

Former Minister for Public Health Govt. of Madras & Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೬	೧೩-೧೦-೨೫ಲ	೭

ಗಂಭೀರ ಎಚ್ಚರಿಕೆ

ಒಂದು ವಾರ ಆಗ್ನೇಯ ಆಸ್ಯದ ಒಂದು ರಾಷ್ಟ್ರ ಬರ್ಮಾವು ಸೈನಿಕಾಧಿಕಾರಿಯ ಆಡಳಿತಕ್ಕೆ ಈಡಾದರೆ, ಇನ್ನೊಂದು ವಾರದಲ್ಲಿಯೇ ಭಾರತದ ದಾಯಾದಿ ರಾಷ್ಟ್ರವೆನ್ನಬಹುದಾದ ಪಾಕಿಸ್ತಾನದಲ್ಲಿ ದಂಡಿನ ಶಾಸನವು ವ್ಯವಹರಿಸಲ್ಪಟ್ಟಿತು. ಇಕ್ಕಡೆಗಳಲ್ಲಿಯೂ ಇಂತಹ ಕ್ರೂರ ಕ್ರೋರ ಶಾಸನಿತ ರಾಷ್ಟ್ರಗಳಿರುವಾಗ, ತನ್ನಧ್ಯೇಯ ಸಿದ್ಧಿಸುವ ಭಾರತದ ಮೇಲೆ ಈ ಘಟನೆಗಳು ಭಯಂಕರ ಪರಿಣಾಮವನ್ನು ಮಾಡದುಳಿದಾವೆ ಎಂಬುದೊಂದು ಪ್ರಶ್ನೆಯಾಗಿ ಪರಿಣಮಿಸಿದೆ. ಬರ್ಮಾದಲ್ಲಿ ಆಳುವ ಪಕ್ಷಕ್ಕೆ ಬಹುಮತವಿಲ್ಲದಾಗ, ಉಳಿದ ಎಡಪಕ್ಷಗಳಿಂದ ಸರಕಾರ ರಚಿಸುವುದೆಂದಾಗ್ಯೂ ಮನಗಂಡ ಪ್ರಧಾನಿಯವರು ಜನರಲ್ ನಿವಿನರನ್ನು ಕರೆದು ಸಮಾಲೋಚನೆ ನಡೆಸಿ ಅವರಿಗೆ ಅಧಿಕಾರ ಒಪ್ಪಿಸುವ ವ್ಯವಸ್ಥೆ ಮಾಡಿದರು. ಇನ್ನು ಶ್ರೀ ನಿವಿನರನ್ನೇ ಪ್ರಧಾನಿಯಾಗಿ ಆರಿಸುವ ಕಾರ್ಯವೂ ನಡೆಯಲಿದೆಯೆಂದು ತಿಳಿದು ಬರುತ್ತದೆ. ಆದರೆ, ಪಾಕಿಸ್ತಾನದ ಘಟನೆಯು ಮಾತ್ರ ಈ ರೀತಿಯಾಗಿರದೆ. ರಾತ್ರೆ ಬೆಳಗಾಗುವುದರೊಳಗೆ ಅಧ್ಯಕ್ಷ ಇಸ್ಕಾಂದರ ಮಿರ್ಜರವರು ಸರಕಾರ, ರಾಜಕೀಯ ಪಕ್ಷಗಳು, ಶಾಸನ ಸಭೆ, ಇತ್ಯಾದಿಗಳೊಡನೆ ಪ್ರಜಾಪ್ರಭುತ್ವ ರಾಷ್ಟ್ರದ ಸಂಚಾಂಗವಾದ ಸಂವಿಧಾನವನ್ನೇ ರದ್ದುಗೊಳಿಸಿ ದಂಡಿನ ಆಡಳಿತೆಯನ್ನು ಘೋಷಿಸಿ ಪ್ರಧಾನ ಸೇನಾಧಿಕಾರಿ ಶ್ರೀ ಅಯೂಬ ಖಾನರನ್ನು ಆ ಆಡಳಿತಾಧಿಕಾರಿಯಾಗಿ ನೇಮಿಸಿದ್ದಾರೆ; ಅಲ್ಲದೇ ಗಂಡಾಂತರದ ಪಡೆಯಲ್ಲಿ ಸಿಲುಕಲು ಸನ್ನದ್ಧವಾಗಿರುವ ಪಾಕಿಸ್ತಾನವನ್ನು ಉಳಿಸುವ ಸಲುವಾಗಿ, ವ್ಯಾಕುಲಚಿತ್ತದಿಂದ ಈ ಘೋಷಣೆಯನ್ನು ಮಾಡಬೇಕಾಗಿ ಬಂದಿತೆಂದು ಕಣ್ಣೀರು ಮಿಡಿದಿದ್ದಾರೆ.

ಪಾಕಿಸ್ತಾನದ ಕುರುಡು ರಾಜಕಾರಣವು ಯಾರಿಗೂ ತಿಳಿಯದುದಲ್ಲ. ಕೇವಲ ಅಧಿಕಾರಕ್ಕೆ ಅಂಟಿಕೊಂಡು ರೂಢವಮನೋವೃತ್ತಿಯುಳ್ಳ ಹಾಗೂ ತಾವು ತಿಳಿದದ್ದೂ ನುಡಿದದ್ದೂ ಮಾತ್ರ ನೇದವೆಂಬ ತೆ ಆಚರಿಸುತ್ತಿರುವ ಪಾಕಿಸ್ತಾನದ ರಾಜಕೀಯ ಪಕ್ಷಗಳ ನಿಲುಮೆಯೂ ಅವುಗಳೊಳಗಿನ ಆಂತರಿಕ ವೈಮನಸ್ಯವೂ ಜನತೆಯನ್ನು ಕಂಗಾಲು ಮಾಡಿಯುವುದೆಂಬುದು ಸುಳ್ಳಲ್ಲ ಇಂತಹ ಸ್ವಾರ್ಥಿ ಶುತ್ತಳಿಗಳ ಆಳಕೆಯಲ್ಲಿ ವ್ಯರ್ಥ ಪ್ರಲಾಪಿಸುವುದೊಂದನ್ನುಳಿದರೆ, ಪಾಕಿಸ್ತಾನವೂ ಪ್ರಗತಿಯತ್ತ ಧಾವಿಸುವ ಕಾರ್ಯವನ್ನು ಮಾಡಲಿಲ್ಲವೆಂದೂ ಅವನತಿಯತ್ತ ಅತಿ ವೆಗದಿಂದ ಸಂಚರಿಸುತ್ತ ಬಂದಿದೆಯೆಂದೂ ಮನವರಿಕೆಯಾಗದಿರದು. ಸಂವಿಧಾನಕ್ಕೆ ಸರಿಯಾದ ಆಡಳಿತೆಯನ್ನು ನಡೆಸಬೇಕಾದ ಸರಕಾರ ಹಾಗೂ ಶಾಸನ ಸಭೆಗಳಲ್ಲಿ ಸಭೆಯಲ್ಲಿಯೇ ಹಿಂಸಾಚರಣೆಯು ನಡೆದುದರ ಪರಿಣಾಮವಾಗಿ ಪೂರ್ವ ಬಂಗಾಲದ ಶಾಸನಾ ಸಭಾಧಿನೇತೃನದಲ್ಲಿ ಉಪಾಧ್ಯಕ್ಷರ ದುರಂತ ಮರಣವೂ ಸಂಭವಿಸಿತು. ಪಶ್ಚಿಮ ಪಾಕಿಸ್ತಾನದ ಎಲ್ಲಾ ದರೂ ಮಂತ್ರಿಮಂಡಳದಲ್ಲಿ ಒಡಕು, ಆಳುವ ಪಕ್ಷದಲ್ಲಿಸದಾ ಬಿರುಕುಗಳಿದ್ದುದು ಎಲ್ಲರಿಗೂ ಗೊತ್ತಿರುವ ಸಂಗತಿ ಹಾಗಿರುವಾಗ, ಪದೇ ಪದೇ ಸರಕಾರವನ್ನು ಬದಲಾಯಿಸುವ ಅಭ್ಯಾಸವುಳ್ಳ ಪಾಕಿಸ್ತಾನದಲ್ಲಿ—ಪೂರ್ವ ಸರಕಾರದ ಧ್ಯೇಯ ಧೋರಣೆಗಳನ್ನು ಉತ್ತರ ಸರಕಾರವು ಸಂಪೂರ್ಣ ಕೈಬಿಟ್ಟು ಹೊಸ ಧೋರಣೆ ರೂಪಿಸುತ್ತಿರುವ ಅಭ್ಯಾಸದಿಂದ ಇದ್ದುದೂ ಇದ್ದಂತಿಳಿಯದೆ ವಿನಾಶದ ಮಾರ್ಗದಲ್ಲಿ ಮುಂದುವರಿಯುತ್ತಿದೆ — ಪರಿಸ್ಥಿತಿ ಬಹು ವಿಪರೀತಕ್ಕೆಟ್ಟು ಕೊಂಡಿದೆ ಎಂಬುದು ಅಧ್ಯಕ್ಷರ ಘೋಷಣಾ ಜೇಳಿಕೆಯಲ್ಲಿ ವ್ಯಕ್ತವಾಗುವುದು. ದಂಡಾಧಿಕಾರಿಗಳ ಹೇಳಿಕೆಯಂತೆ, ಅಧ್ಯಕ್ಷರು ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳದೆ ಹೋದರೆ, ನೇನೆಯು ಸ್ವತಃ ಆ ಕಾರ್ಯವನ್ನು ಮಾಡಬೇಕಾಗಿ ಬರಬಹುದೆಂಬ ಎಚ್ಚರಿಕೆಯೂ ಅಧ್ಯಕ್ಷ ಮಿರ್ಜಾರಿಗೆ ದೊರೆತಿತ್ತೆಂದೂ ತಿಳಿಯುತ್ತದೆ. ಆಗ, ಅಧ್ಯಕ್ಷರು ಪಾಕಿಸ್ತಾನವನ್ನು ಉಳಿಸುವುದಕ್ಕಲ್ಲ, ಸೇನೆಯ ಬಲಾತ್ಕಾರಕ್ಕಾಗಿ—ಪ್ರಾಯಃ ತಾವು ಅಧ್ಯಕ್ಷಪಟ್ಟಕ್ಕೆ ಬಲವಾಗಿ ನಿಲ್ಲುವೆನೆಂಬ ದೃಢವಿಶ್ವಾಸದಿಂದಲೂ—ಈತೆರದ ಸೈನಿಕಾಡಳಿತೆಯನ್ನು ಘೋಷಿಸಿದರೆಂದು ತಿಳಿಯಬಹುದು.

ಯಾವುದೇ ಒಂದು ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಇಂತಹ ಗತಿ ಬಂದೊದಗುವುದು ದುರ್ದೈವದ ಸಂಗತಿ. ಪಾಕಿಸ್ತಾನದ ಈ ದಂಡಿನಾಳಿಕೆಗೆ ಹಾಗೂ ವಿರುದ್ಧ ಪ್ರತಿಕ್ರಿಯೆಯೂ ಬಾರದಂತೆ ಆಜ್ಞೆವಿಧಿಸಿ, ಕೆಲವಾರು ಪತ್ರಿಕೆಗಳು ಇದನ್ನು ಸ್ವಾಗತಿಸಿವೆ ಎಂದು ವರದಿಮಾಡುವುದಕ್ಕೆ ನೀನೇನೂ ಅರ್ಥವಿಲ್ಲ. ಆದರೂ ಪಾಕಿಸ್ತಾನದ ಪ್ರಕ್ಷುಬ್ಧ ವಾತಾವರಣದಲ್ಲಿ ಇಂತಹ ಕ್ರಿಯೆಯು ಅನಿವಾರ್ಯವಾಗಿದ್ದಿತೆಂದು ಹೇಳುವುದಾದರೂ ಸಂವಿಧಾನದ ಆಯುಷ್ಯವನ್ನೂ ತುಂಡರಿಸಿದುದೇಕೋ ತಿಳಿಯುವುದಿಲ್ಲ. ಅಂತೂ ಆಗಬಾರದುದೋ ಆಗಲೇ ಬೇಕಾದುದೋ ಒಂದು ಭಯಾನಕ ಘಟನೆ ನಡೆದು ಹೋಯಿತು. ಇದರಿಂದಾದರೂ ಪಾಕ್ ಜನತೆ ಜಾಗ್ರತವಾಗಿ, ತಮ್ಮ ಸ್ವಾತಂತ್ರ್ಯವನ್ನುಳಿಸುವುದರೊಡನೆ ಪ್ರಜಾಪ್ರಭುತ್ವದ ತತ್ವಗಳಿಗೆ ಸರಿಯಾಗಿ ನಡೆಯುವ ಗಡಿಯ ಪಳಗುವರೆಂದು ಆಶಿಸಬಹುದು. ಆದಷ್ಟು ಬೇಗನೇ ನೂತನ ಸಂವಿಧಾನವು ರಚಿತವಾಗಿ, ತನ್ಮೂಲಕ ಸಂವಿಧಾನಗಳು ನಡೆಯು ಪ್ರಜಾತಂತ್ರವು ನೆಲೆಗೊಳ್ಳುವಂತಾಗಲಿ. ಆದರೆ, ಹೀಗಾಗುವುದಕ್ಕೆ ಅವಿಸ್ಸು ಸಮಯ ಬೇಕೆಂದು ಹೇಳುವುದು ಮಾತ್ರ ಅಸಾಧ್ಯ.

ಬರ್ಮಾ ಮತ್ತು ಪಾಕಿಸ್ತಾನದ ಈ ಘಟನೆಗಳಿಂದ ಆಸ್ಯದಲ್ಲಿ ಪ್ರಜಾಪ್ರಭುತ್ವವು ಸಲ್ಲದು ಎಂಬ ಆರೋಪ ಬರುತ್ತಿದೆ. ಆದರೆ, ಹಾಗೇನೂ ಹೇಳಬರುವುದಿಲ್ಲ. ಭಾರತವನ್ನೂ ಈ ದೃಷ್ಟಿಯಿಂದ ಅಳೆಯುವ ಸಾಹಸವನ್ನೂ ದೂಡಿದವರಿದ್ದಾರೆ. ಭಾರತದಲ್ಲಿ ಜಳುಪ ಪಕ್ಷಕ್ಕೆ ಬಹುಮತವಿದೆಯೆಂಬುದೇನೋ ನಿಜ. ಇಲ್ಲಿ ಅಂತಹ ದುರ್ಘಟನೆ ಎಂದಿಗೂ ನಡೆಯಲಾರದು—ನಡೆಯಬಾರದು. ಆದರೆ, ನೆರೆರಾಷ್ಟ್ರಗಳ ಭಯಾನಕ ಸಂಗತಿಯ್ಯು ಉಳಿದ ಪ್ರಜಾಪ್ರಭುತ್ವವಾದೀ ರಾಷ್ಟ್ರಗಳಿಗೊಂದು ಗಂಭೀರ ಎಚ್ಚರಿಕೆಯೆಂದು ಮಾತ್ರ ಹೇಳಬಹುದು. ಆದುದರಿಂದ ಭಾರತವೂ ತನ್ನ ಆಡಳಿತೆಯಲ್ಲಿರಬಹುದಾದ ದೋಷಗಳನ್ನು ಗಮನಿಸಿ, ಜನತೆಯ ಸುಖದುಃಖಗಳನ್ನೆ ಅರಿತುಕೊಂಡು, ಅವುಗಳನ್ನುತ್ತಿನಿವಾರಿಸುವ ಬಗ್ಗೆ ತೀವ್ರ ಕಾರ್ಯಕ್ರಮಗಳನ್ನು ಕೈಗೊಂಡು, ಜನಪ್ರಿಯತೆಯನ್ನು ಗಳಿಸುವುದು ಅವಶ್ಯಕವೆಂದು ಬಯಸಿದರೆ, ಅದರಲ್ಲಿ ತಪ್ಪಿಲ್ಲ. ನಮ್ಮ ಆಡಳಿತಾಧಿಕಾರಿಗಳ ಗಮನವಿತ್ತು ಹರಿಯುತ್ತದು ಅಪೇಕ್ಷಣೀಯವೆಂದು ಬೇರೆ ಹೇಳ ಬೇಕಾಗಿಲ್ಲ.

ಸಂಕ್ಷಿಪ್ತ ಸುದ್ದಿಗಳು

ಪೋಪರ ನೈಭವಪೂರ್ಣ ಸಮಾಧಿ

ಕೆಥೋಲಿಕ್ ಸಮಾಜದ ಧರ್ಮಗುರುಗಳಾದ ೧೨ನೆ ಪೋಪ ಪಯಸರು ೯ರಂದು ದಿವಂಗತರಾದರು. ಅವರ ಕಳೇವರವನ್ನು ಸೇಂಟ್ ಪೀಟರ್ಸ್ ಭವನದಲ್ಲಿ ಸಂದರ್ಶನಾಕಾಕ್ಷಿಗಳಿಗೆ ನೋಡುವ ಸಲುವಾಗಿ ಇಟ್ಟಿದ್ದರು. ದಿನಾಂಕ ೧೩ರಂದು ಅಂತಿಮ ಸಂಸ್ಕಾರಕ್ಕೆ ಕಳೇವರವನ್ನು ಒಯ್ಯುವ ಸಮಯದವರೆಗೆ ವಿವಿಧ ಎಡೆಗಳ ಸುಮಾರು ೫ ಲಕ್ಷ ಜನರು ಅವರ ಅಂತಿಮದರ್ಶನವನ್ನೆನ್ನು ಪಡೆದರು. ಇವರ ಶವವನ್ನು ಪೀಟರ್ಸ್ ಸಮಾಧಿಯ ಬದಿಯಲ್ಲಿಯೇ ದಫನ ನಡೆಸಲಾಯಿತು. ದಿವಂಗತರು ಮೃತರಾಗುವಾಗ ಅವರಿಗೆ ೮೨ ವರ್ಷ ವಯಸ್ಸಾಗಿತ್ತಷ್ಟೆ. ಜಾಗತಿಕ ಶಾಂತಿಗಾಗಿ ಅವರು ದುಡಿಯುತ್ತಿದ್ದುದರಿಂದ ವಿಶ್ವವಿಖ್ಯಾತರಾಗಿರುವರು. ಇವರು ತಮ್ಮ ಜೀವಿತಾವಧಿಯಲ್ಲಿ ಅನೇಕ ಮಹತ್ಕಾರ್ಯಗಳನ್ನು ಸಾಧಿಸಿರುವರು.

ಅಧಿನಾಯಕರು ಹೊರಬರಲಿ.

ದೇಶದಲ್ಲಿ ಪ್ರಜಾಪ್ರಭುತ್ವ ನಾತ್ತು ಕಾಂಗ್ರೆಸ್ ಜೀವಂತವಾಗುಳಿಯಬೇಕಾದರೆ, ಕೇಂದ್ರ ಸಾರಿಗೆ ಮತ್ತು ಸಂಪರ್ಕ ಶಾಖೆಯ ಮಂತ್ರಿವರ್ಯರಾದ ಶ್ರೀ ಎಸ್. ಕೆ. ಪಾಟೀಲರೊಂದು ಉತ್ತಮ ಔಷಧಿಯನ್ನು ಸೂಚಿಸಿದ್ದಾರೆ. ಅವರ ಅಭಿಪ್ರಾಯದಂತೆ, ಕೆಲವು ಜನ ಹಿರಿಯ ಕಾಂಗ್ರೆಸ ನಾಯಕರಾದರೂ ತಮ್ಮ ಮಂತ್ರಿ ಸ್ಥಾನವನ್ನು ತ್ಯಜಿಸಿ ಕಾಂಗ್ರೆಸಿನ ಸಂಘಟನಾ ಕಾರ್ಯದ ಕಡೆಗೆ ಸಂಪೂರ್ಣ ಗಮನ ಹರಿಸಬೇಕು. ಈ ರೀತಿಯ ಕ್ರಮ ಕೈಗೊಂಡರೆ, ತಾವು ಮೊತ್ತ ಮೊದಲಿಗೆ ಮಂತ್ರಿಪದತ್ಯೆ ರಾಜೀನಾಮೆ ಕೊಡುವುದಾಗಿ ಹೇಳಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸ್ಸನ್ನು ದೇಶ ಹಿತದ ಕಾರ್ಯದಲ್ಲಿ ಅಶಕ್ತವಾಗುವಂತೆ ಮಾಡಬಾರದು ಎಂದವರು ಆಡಿದ್ದಾರೆ.

ಗೃಹ ವಿಜ್ಞಾನ ಅಭ್ಯಾಸಕ್ರಮ

ಮನೆಯನ್ನು ತೂಗಿಸಿಕೊಂಡು ಹೋಗುವ ಮತ್ತು ಮಕ್ಕಳನ್ನು ಪಾಲಿಸಿ ಪೋಷಿಸುವ ವಿಷಯದಲ್ಲಿ ಮಹಿಳೆಯರಿಗೆ ಶಾಸ್ತ್ರೀಯವಾದ ಶಿಕ್ಷಣವನ್ನು ಕೊಡುವುದಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗೃಹ ವಿಜ್ಞಾನದ ಡಿಪ್ಲೊಮಾ ಇನ್ನುವೇ ಡಿಗ್ರಿ ಅಭ್ಯಾಸ ಕ್ರಮವನ್ನು ಪ್ರಾರಂಭಿಸಿದರೆ, ಮಹಿಳೆಯರು ಯೋಗ್ಯ ಗೃಹಿಣಿಯರಾಗಿ ನಾಡಿನ ಉತ್ತಮ ನಾಗರಿಕರನ್ನು ತರಬೇತಿಗೊಳಿಸಬಲ್ಲರು ಎಂದು ಸೂಚಿಸಿ ವಿಶ್ವವಿದ್ಯಾಲಯದ ಸಿನೇಟಿನಲ್ಲಿ ಈ ವಿಷಯದ ಅಭ್ಯಾಸಕ್ರಮವನ್ನು ತೆರೆಯಬೇಕೆಂದು ಡಾ. ಗೋಡಬೊಲೆಯವರು ಸಿನೇಟಿನಲ್ಲಿ ಮಂಡಿಸಿದ ಗೊತ್ತುವಳಿಯು ಸರ್ವಾನು ಮತದಿಂದ ಸ್ವೀಕಾರವಾಯಿತು ಈ ಕ್ರಮವು ಎಂದಿನಿಂದ ಹೊದಲಾಗುವುದೆಂಬ ಮಾತ್ರ ತಿಳಿದು ಬಂದಿಲ್ಲ.

ಕಮ್ಯೂನಿಸ್ಟರ ವ್ಯರ್ಥಾಲಾಪ

ಕೇರಳದಲ್ಲಿರುವ ಆಹಾರ ಧಾನ್ಯಗಳ ಪರಿಸ್ಥಿತಿಯು ವಿಷಮವಾಗಿರುವುದಕ್ಕೆ ಕೇಂದ್ರ ಸರಕಾರವೇ ಕೊಣೆಯೆಂಬ ಕಮ್ಯೂನಿಸ್ಟರ ವಾದವನ್ನು ಕೇಂದ್ರ ಆಹಾರ ಶಾಖೆಯು ವಕ್ತಾರರು ಖಂಡಿಸಿದ್ದಾರೆ. ಹೀಗೆ ಹೇಳುವುದು ಅನ್ಯಾಯವೆಂದೂ, ಕೇಂದ್ರ ಸರಕಾರವನ್ನು ಟೀಕಿಸುವಾಗ, ಮಾಡಿದ ಕೆಲವೊಂದು ಹೇಳಿಕೆಗಳು ದುರುದ್ದೇಶ ಸಹಿತವಾದುವು ಅಥವಾ ವಾಮಮಾರ್ಗವನ್ನು ಹಿಡಿಸುವಂಥದೆಂದೂ ಅವರು ಆಡಿದ್ದಾರೆ. ಯಾವುದೇ ರಾಜ್ಯದ ಬೇಡಿಕೆಯನ್ನು ಪೂರ್ಣವಾಗಿ ಪರೈಸದೆ ಹೋದಲ್ಲಿ ಅದಕ್ಕೆ ಅಪಾರ್ಥ ಮಾಡುವುದು ತೀರ ಅನ್ಯಾಯ. ಎಲ್ಲ ವಿಷಯಗಳನ್ನು ಯಥಾವತ್ತಾಗಿ ಜನತೆಯ ಮುಂದಿಟ್ಟರೆ, ಆಗ, ಕೇಂದ್ರವು ಕೇರಳವನ್ನು ಕಡೆಗಣಿಸಿಲ್ಲವೆಂದಷ್ಟೇ ಅಲ್ಲ, ಎಲ್ಲ ರೀತಿಯ ಸವಲತ್ತುಗಳನ್ನೂ ಒದಗಿಸಿದೆಯೆಂದು ಮನವರಿಕೆಯಾಗದಿರದು ಎಂದುಮಾತನಾಡಿದ್ದಾರೆ.

ಮೈಸೂರು ಕರ್ನಾಟಕವಾಗುವುದು

ಧಾರವಾಡ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದರಲ್ಲಿ ಮೈಸೂರು ಮುಖ್ಯ ಮಂತ್ರಿ ಶ್ರೀ ಬಿ. ಡಿ ಜತ್ತಿಯವರು ಪ್ರದೇಶ ಕಾಂಗ್ರೆಸ್ ಸಮಿತಿಗೆ ಕರ್ನಾಟಕವೆಂದು ನಾಮಕರಣ ಮಾಡಬೇಕೆಂಬುದು ಈಗಾಗಲೇ ಒಪ್ಪಿದ ವಿಷಯವಾಗಿದೆ. ರಾಜ್ಯಕ್ಕೆ ಸಹ ಕರ್ನಾಟಕವೆಂಬ ಹೆಸರಿಡುವ ಸೂಚನೆಯು ಬಹುಶಃ ವಿಧಾನ ಸಂಘದ ಇವೇ ಅಧಿವೇಶನದ ನೊದಲು ಸೇರುವ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಬರಬಹುದು ಮತ್ತು ಅನಂತರ ವಿಧಾನ ಮಂಡಳದಲ್ಲಿ ಸಹ ಅದು ಸ್ವೀಕೃತವಾಗಬಹುದು ಎಂದು ಹೇಳಿದ್ದಾರೆ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಅಲ್ಲಲ್ಲಿಯ ಸುದ್ದಿಸಾರ

ಜೆರಿಕಾ ಜಯಂತಿ ಸಪ್ತಾಹವು

ಮಂಗಳೂರಿನಲ್ಲಿ ಇದೇ ತಾ. ೨೦ರಿಂದ ೬ರ ತನಕ ಸಾರಂಗಸಾಯಿಯು ಪ್ರತಿದಿನ ಸಂಜೆ ಅನುಕ್ರಮವಾಗಿ ಜಿಲ್ಲಾಧಿಕಾರಿ ಶ್ರೀ ವೈ. ಸಿ. ಜೊಂಬಳಯ್ಯ, ಶ್ರೀ ಬಿ. ಬಿ. ಬೀಗ್, ಎಮ್. ಎಲ್. ಎ., ಶ್ರೀ ಟಿ. ಶ್ರೀನಿವಾಸ ಪೈ, ಶ್ರೀ ಎಮ್. ಶ್ರೀನಿವಾಸ ನಾಯಕ್, ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಮಂಜಯ್ಯ ಹೆಗ್ಡೆ, ಶ್ರೀಮತಿ ಉಮಾ ವಿ ಕಾಮತ್ ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟ, ಎಮ್. ಎಲ್. ಸಿ. ಯವರ ಅಧ್ಯಕ್ಷತೆಗಳಲ್ಲಿ ಸಭೆ ಹಾಗೂ ಭಾಷಣಗಳಾಯುವು. ಶ್ರೀ ಎಚ್. ನಾರಾಯಣ ರಾಯರು ಖಾದಿ ಕ್ಷೇತ್ರದಲ್ಲಿ ಸಂಘದ ಕಡೆಯಿಂದ ನಡೆದ ಕಾರ್ಯಕಲಾಪಗಳ ವರದಿಯನ್ನೋದಿದರು. ಶ್ರೀ ಎ. ವಿ. ಮೈಯ್ಯರು ಧನ್ಯವಾದಗ ಲ್ಪಿಸಿದರು.

ಶೈಕ್ಷಣಿಕ ಪ್ರದರ್ಶನ— ಬೈಲೂರು

ಬೋರ್ಡ್ ಹೈಸ್ಕೂಲಿನಲ್ಲಿ ತಾ. 6 ಮತ್ತು 7ರಂದು ಎಕ್ಸ್‌ಟೆನ್‌ಶನ್ ಸರ್ವಿಸಿನ ಕೋ ಓರ್ಡಿನೇಶನ್ ಸರ್ವಿಸಿನ ಕೋ-ಆರ್ಡಿನೇಟರ್ ಶ್ರೀ ಬೆಳ್ಳೆ ಭವಾನಿರಾಯರಿಂದ ವ್ಯವಸ್ಥೆಗೊಳಿಸಲಾದ ಶೈಕ್ಷಣಿಕ ಪ್ರದರ್ಶನವು ಮುಖ್ಯೋಪಾಧ್ಯಾಯ ಶ್ರೀ ಬಿ. ಎನ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಡಾ. ಎನ್. ವಿ ಅಡ್ಯಂತಾಯರಿಗೆ ಸಾ

ಇಂಟರ್ ಕ್ಲಾಸ್ ಲೀಗ್ ಟೂರ್ನಮೆಂಟಿನಲ್ಲಿ ಫೈನಲ್ ಪಂದ್ಯಾಟವು ತಾ. ೬ರಂದು ಬೊಂಬಾಯಿಯ ಓವೆಲ್ ಮೈದಾನಿನಲ್ಲಿ ನಡೆದು ಕರ್ನಾಟಕ ಫ್ರೀ ಸ್ಕೂಟ್ ಹೈಸ್ಕೂಲಿನ ಹತ್ತನೆ ತರಗತಿಯವರು ವಿಜಯದ ಆಟವನ್ನು ಆಡಿದರು. ಶ್ರೀಗಳಾದ ಕೆ. ಟಿ ಬಂಗೇರ ಕೃಷ್ಣ ಶೆಟ್ಟ, ಸಪಾನಂದ ಸಾಲಿಯಾನ್ ಮತ್ತು ಎಮ್. ಬಿ. ಶೆಟ್ಟಿಯವರು ಜುರುಕಾಗಿ ಆಟವಾಡಿದ್ದರು.

ಕಾಸರಗೋಡು ತಾಲೂಕು ಕರ್ನಾಟಕಕ್ಕೆ ಸೇರಬೇಕೆನ್ನುವ ನಿರ್ಣಯ— ತಾ. 11ರಂದು ಮಂಗಳೂರಿನ ಹೋಂಜೋನ್ಸ್ ಹಾಲಿನಲ್ಲಿ ಜರಗಿದ ಕಾಸರಗೋಡು ಕರ್ನಾಟಕ ವಿಲೀನೀಕರಣ ಸರ್ವಪಕ್ಷ ಪರಿಷತ್ತಿನಲ್ಲಿ ಇದೇ ಕಾಸರಗೋಡು ತಾಲೂಕನ್ನು ಮೈಸೂರು ಸ್ಟಾಂತದೊಂದಿಗೆ ವಿಲೀನೀಕರಿಸುವ ದಿಸೆಯಲ್ಲಿ ಕೇಂದ್ರ ಸರಕಾರವು ಸೂಕ್ತ ಕ್ರಮವನ್ನು ಕೂಡಲೇ ಕೈಕೊಳ್ಳಬೇಕು ಎನ್ನುವ ನಿರ್ಣಯ ಮಂಜೂರಾಯಿತು.

ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಕೆ. ಕೆ ರೈಗಳವರು ಜಾನಪದಗೀತೆಗಳನ್ನು ಹಾಡಿದರು. ಶ್ರೀ ಕೆ. ಆರ್. ಕಾಂತರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ಶಿವರಾವ್, ಎಮ್. ಪಿ. ಅವರು ಪರಿಷತ್ತನ್ನು ಉದ್ಘಾಟಿಸಿದರು. ಶ್ರೀ ಎ. ಬಿ. ಶೆಟ್ಟರು ಪೂಜಾ ವಿಧಿ ನೆರವೇರಿಸಿದ್ದರು.

ಪರಿಷತ್ತಿನ ಗೊತ್ತುವಳಿಗಳ ಕುರಿತು ಕಾರ್ಯಕ್ರಮ ಕೈಗೊಳ್ಳಲು ಶ್ರೀಗಳಾದ ಎಮ್. ಉಮೇಶರಾವ್, ಎಮ್. ಎಲ್. ಎ; ಕೆ. ಸುಂದರರಾಮ ಶೆಟ್ಟಿ, ಬಿ. ವಿ. ಬಾಳಿಗ, ಎಮ್. ಎಲ್. ಎ ಬಿ. ಎಸ್. ಕಕ್ಕಿಲ್ಲಾಯ ಮತ್ತು ಕೆ. ಆರ್. ಕಾರಂತರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಶ್ರೀ ಕೆ. ಮಹಾಬಲ ಥಂಡಾರಿಗಳು ಧನ್ಯವಾದವಿತ್ತರು.

ದೇಶದ ಶಾಂತಿ ರಕ್ಷಣೆಯಲ್ಲಿ ಯುವಕರ ಜವಾಬ್ದಾರಿ— ಮಂಗಳೂರಿನ ಯುವಕ ಕಾಂಗ್ರೆಸಿನ ಸಾಪ್ತಾಹಿಕ ಸಭೆಯು ತಾ. 12ರಂದು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಶಿವರಾವ್, ಎಮ್. ಪಿ. ಅವರು ಪ್ರಮುಖ ಭಾಷಣ ಕರ್ತರಿಬ್ಬರು. ದೇಶದ ಶಾಂತಿ ರಕ್ಷಣೆಯಲ್ಲಿ ಭಾರತದ ಜನತಾ ಜವಾಬ್ದಾರಿ ಬಹಳ ಮಹತ್ತರವಾದುದು ಎಂದರು. ಶ್ರೀ ಎಸ್ ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ಜನತೆ—ಕಾಂಗ್ರೆಸ್‌ಗಳೊಳಗೆ ನಿಕಟವಾದ ಸಂಪರ್ಕವನ್ನುಂಟು ಮಾಡುವಲ್ಲಿ ಯುವಕ ಕಾಂಗ್ರೆಸಿಗರ ಮಹತ್ ಜವಾಬ್ದಾರಿಯನ್ನು ವಿವರಿಸಿದರು. ಶ್ರೀ ಎಸ್. ಎಸ್. ಪಾಡರರು ಧನ್ಯವಾದವಿತ್ತರು.

ಹರಿಕಥಾ ಕಾಲಕ್ಷೇಪ— ಅಂಜಾರು ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ. 9ರಂದು ಡಾ. ಬಿ. ಚಂದಯ್ಯ ಹೆಗ್ಡೆಯವರ ನೇತೃತ್ವದಲ್ಲಿ ಕೇತನ ಕೇಸರಿ ಭದ್ರಗಿರಿ ಕೇಶವದಾಸರಿಂದ ಶ್ರೀ ಭೀಮಭಕ್ತ' ಎಂಬ ಹರಿಕಥಾ ಕಾಲಕ್ಷೇಪವಾಯಿತು. ಕಾಲಾ ಹೆಬ್ಬಾಸ್ಟರ್ ಶ್ರೀ ಗುರುವಪ್ಪನವರು ಪರಿವಾಸರ ಪರಿಚಯ ಮಾಡಿದರು. ಶ್ರೀ ಅಂಜಾರು ವಿಠಲ ಹೆಗ್ಡೆಯವರು ಸ್ವಾಗತಿಸಿದರು.

1959ನೆ ಮೋರ್ಚಿ ಎಸ್. ಎಸ್. ಎಲ್. ಸಿ. ಮತ್ತು ಒ. ಎಸ್. ಎಸ್. ಎಲ್. ಸಿ ಪರೀಕ್ಷೆಗೆ ಸ್ವಾವೇಟ್ ಮತ್ತು ಉಪಾಧ್ಯಾಯ ಅನುಮೋದ್ಯಾರಿಗಳು ತಂತಮ್ಮ ಅರ್ಜಿಗಳನ್ನು ತಾ. 15—11—58ರೊಳಗೆ ಪರೀಕ್ಷಾ ಕಮಿಶನರ್, ಬಿಕ್ಟರಿ ಹಾರ್ಸ್, ಬೆಂಗಳೂರು-1 ವಿಳಾಸಕ್ಕೆ ಕಳುಹಿಸಬೇಕು. ಆರ್ಜಿ ಫಾರ್ಮುಗಳು ಟ್ರೆಜರಿ ಆಫೀಸರರಿಂದಲೂ ಜಿಲ್ಲಾ ವಿದ್ಯಾಧಿಕಾರಿಗಳಿಂದಲೂ ಪಡೆಯಬಹುದು. ಈ ಪ್ರಕಟಣೆಯು ಮದ್ರಾಸು ಕರ್ನಾಟಕ ಪ್ರದೇಶಕ್ಕೆ ಅನ್ವಯಿಸುವುದು.

ನವರಾತ್ರಿ ಮಹೋತ್ಸವವು ಮಂಗಳೂರಿನ ಗೋಕರ್ಣನಾಥ ಕ್ಷೇತ್ರದಲ್ಲಿ ಇದೇ ತಾ. 18ರಿಂದ 22ರ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು.

ನಿಧನ— ಕುಂದಾಪುರ ತಾಲೂಕು ಬಿತ್ತೂರು ಗ್ರಾಮದ ಪಟೇಲ್ ಶ್ರೀ ಪುಟ್ಟಯ್ಯ ಶೆಟ್ಟರು ಇದೇ ತಾ. 6ರಂದು ತಮ್ಮ 85ನೆ ವಯಸ್ಸಿನಲ್ಲಿ ದೈವಾಧೀನವಾದುದು ವಿಷಾದ ಕರವಿದೆ.

ಕಾಂಗ್ರೆಸ್ ಪ್ರಚಾರ ಸಭೆ— ಹೆಬ್ರಿ

ಯ ಸಮಾಜ ಮಂದಿರದಲ್ಲಿ ತಾ. 4ರಂದು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಪಿ. ಕೆ. ಕೆ. ಶೆಟ್ಟ, ಎಸ್. ಎಲ್. ಸಿ, ವೈ. ಶಾಳಪ್ಪ ಶೆಟ್ಟಿ, ಎಚ್. ಭುಜಂಗ ಬಲ್ಲಾಳ್, ಡಾ. ಯು. ಕೃಷ್ಣ ಮೊದಲಾದವರು ಗಾಂಧಿ ತತ್ವ, ಕಾಂಗ್ರೆಸ್ಸಿನ ಧ್ಯೇಯೋದ್ದೇಶ, ಗ್ರಾಮೋದ್ಧಾರದ್ದಿ ಕುರಿತು ಭಾಷಣ ಮಾಡಿದರು. ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಧನ್ಯವಾದಗ ಲ್ಪಿಸಿದರು.

ಮಂಗಳೂರು ತಾಲೂಕು ಗ್ರಾಮ ಉದ್ಯೋಗಸ್ಥರ ಸಂಘ— ವನ್ನು ತಾ. 10ರಂದು ಬೆಳಿಗ್ಗೆ ಮಂಗಳೂರು ನಗರಸಭಾಸಭಾಂಗಣದಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಉದ್ಘಾಟಿಸುತ್ತಾ, ಪಟೇಲ, ಶ್ಯಾನುಭೋಗರು ಗ್ರಾಮದೇವತೆಗಳಿಗೆ ಆಧಾರಸ್ತಂಭಗಳಾಗಿರುತ್ತಾರೆಂದು ಹೇಳಿದರು.

ಆರಂಭದಲ್ಲಿ ಶ್ರೀ ಪಿ. ದಾಮೋದರಾಯರು ಸ್ವಾಗತಿಸಿದರು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಪಿ ಬಿ. ಆರ್. ಕರ್ಕೇರ, ಎಮ್. ಎಲ್. ಎ; ಮೊದಲಾದವರು ಕಾಲೋಚಿತ ಭಾಷಣ ಮಾಡಿದರು.

ಸಮ್ಮಾಪ ಮುಕ್ತಾಯ ಸಾರ್ವಜನಿಕ ಸಭೆ— ಗಾಂಧಿ ಜಯಂತಿ ಸಪ್ತಾಹದ ಕೊನೆಯ ದಿನವಾದ ತಾ. 9ರಂದು ಮಂಗಳೂರು ಕೇಂದ್ರ ಮೈದಾನಿನಲ್ಲಿ ಮಂಗಳೂರು ತಾಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಕೆ. ಕೆ. ಶೆಟ್ಟ, ಎಮ್. ಎಲ್. ಸಿ, ಕೆ. ಬಾಲಕೃಷ್ಣ ರಾವ್, ಎಮ್. ಎಲ್. ಸಿ. ನಗರ ಸಭಾಪತಿ ಕೆ. ಸೂರ್ಯನಾರಾಯಣ ಅಡಿಗ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಮ್. ರಮಾನಾಥ ಮೊದಲಾದವರು ಕಾಲೋಚಿತ ಭಾಷಣವಿತ್ತರು.

ಮೂಲ್ಕಿ ಮಂಡಲ ಕಾಂಗ್ರೆಸಿನ ಅಧ್ಯಯದಲ್ಲಿ ತಾ. ೩ರಂದು ಗಾಂಧಿ ಜಯಂತಿ ಅಂಗವಾಗಿ ಜರಗಿದ ಸಭೆಯಲ್ಲಿ ಶ್ರೀಗಳಾದ ಬಿ. ಆರ್. ಕರ್ಕೇರ, ಎಮ್. ಎಲ್. ಎ., ಡಾ. ಎಸ್. ಚಂದಾ, ಎಮ್. ಎಲ್. ಸಿ, ಶಂಕರ ಆಳ್ವ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಬೆಳ್ಳಾರೆ ಮಂಡಲ ಕಾಂಗ್ರೆಸ್ಸಿನ ಆಶ್ರಯದಲ್ಲಿ ತಾ. ೨ರಂದು ಗಾಂಧಿ ಜಯಂತಿ ಸಭೆ ಜರಗಿತು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಪಿ., ಕೆ. ಕೆ. ಶೆಟ್ಟ, ಎಮ್. ಎಲ್. ಸಿ, ಬಿ. ಕೆಟ್ಟಿಣ್ಣಾ ರೈ, ಎನ್. ವೆಂಕಟ ಸುಬ್ಬ ರಾವ್, ಬಿ. ಗೋವಿಂದ ಶೆಣೈ ಮೊದಲಾದವರು ಭಾಷಣವಿತ್ತರು.

ಉತ್ತಮ ಜಾನುವಾರುಗಳ ಅಭಿವೃದ್ಧಿ ಕಡೆಗೆ ಹೆಚ್ಚಿನ ನಿಗಾ ಕೊಡಬೇಕು— ಮಂಗಳೂರು ತಾಲೂಕು ಆಫೀಸಿನ ವರ್ಷದಲ್ಲಿ ತಾ. 13ರಂದು ಮಾಜಿ ಸಚಿವ ಶ್ರೀ ಎ. ಗಿ. ರಟ್ಟರು ಜಾನುವಾರು ಪ್ರದರ್ಶನ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ, ದೇಶದ ಆಹಾರ ಉತ್ಪನ್ನವನ್ನು ಹೆಚ್ಚಿಸುವಲ್ಲಿ ಜಾನುವಾರುಗಳ ಪಾತ್ರ ಮಹತ್ವದ್ದಿರುವುದರಿಂದ ಜನತೆ ಉತ್ತಮ ಜಾನುವಾರುಗಳನ್ನು ಅಭಿವೃದ್ಧಿಪಡಿಸುವ ಕಡೆಗೆ ಹೆಚ್ಚಿನ ನಿಗಾ ಕೊಡಬೇಕಾಗಿದೆ ಎಂದರು.

ಆರಂಭದಲ್ಲಿ ಜಿಲ್ಲಾಧಿಕಾರಿ ಶ್ರೀ ವೈ. ಸಿ. ಸೊಂಬಳಯ್ಯನವರು ಸ್ವಾಗತಿಸಿದರು ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಕಾಲೋಚಿತ ಮಾತುಗಳನ್ನಾಡಿದರು.

ಉಡುಪಿ ಮುನಿಸಿಪಲ್ ಕೌನ್ಸಿಲು ಸಭೆಯು— ತಾ 10ರಂದು ಚೇರ್‌ಮೇನ್ ಡೆಲಿಗೇಟ್ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವಾಸುದೇವ ರಾಯರು ಕೌನ್ಸಿಲಿನ ಹೇಳಿ ಮಾಡಿದ ಮಾನನಷ್ಟದ ನೋಟೀಸನ್ನು ಓದಿ, ಅದರಲ್ಲಿ ಹೇಳಿದ ಮಾನನಷ್ಟ ಕಾರಣಗಳಿಗೆ ಕೌನ್ಸಿಲು ಕಾರಣವಲ್ಲವೆಂದು ವಕೀಲರ ಮುಖಾಂತರ ತಿಳಿಸಿ ಬೇಕೆಂದು ನಿರ್ಣಯವಾಯಿತು. ಮಾನನಷ್ಟ ಕೊಡಬೇಕೆಂದು ಕೋರ್ಟಿನಲ್ಲಿ ದಿಕ್ರಿಯಾದಲ್ಲಿ ಕಮಿಶನರರು ಶ್ರೀ ವಾಸುದೇವರಾಯರಿಗೆ ಕೊಟ್ಟ ನೋಟೀಸಿಗೆ ಒಪ್ಪಿಗೆಯಿತ್ತ ಕೌನ್ಸಿಲರುಗಳೇ ಕೊಡಬೇಕು ಎನ್ನುವ ನಿರ್ಣಯವನ್ನು ಶ್ರೀ ನೀತಾರಾಮ ಕಾಮತರು ತಂದುವಿಸಿದ್ದು ಅಧ್ಯಕ್ಷರು ಆರ್ಜಿಸಲು ಬಿಡಲಿಲ್ಲ. ಇದರ ಸ್ಪಷ್ಟಾರ್ಥವಾಗಿ ಶ್ರೀಗಳಾದ ಎನ್. ನೀತಾರಾಮ ಕಾಮತ್, ವಿಠಲ ಶೆಟ್ಟ, ದಾಸ ಸೇರಿಗಾರ ಮತ್ತು ಡಾ. ವ್ಯಾಸರಾಯರು ಸಭೆ ಬಿಟ್ಟು ಹೋದರು.



ಸಾದರ ಸ್ವೀಕಾರ

1. The world Almanac, 1958 and book of facts. (Seventy-third Year of issue) Published by New York World Telegram and The Sun.

2. A Brochure issued by La Shangrila, Boarding—Lodging-Restaurant Manipal, S. India.

3. ಮಕ್ಕಳ ಗಾಂಧಿ— ಬರೆದವರು:—ಶ್ರೀ ಎಸ್. ಟಿ. ಭಟ್, ವಿದ್ವಾನ್ ಮತ್ತು ಶ್ರೀ ಎ. ಲಕ್ಷ್ಮಣ ಪೈ. ಪ್ರಕಾಶಕರು, ಮಂಗಳೂರು. ಬೆಲೆ: ೦—೧೦.

ಸಾಹಿತ್ಯ ಸಮೀಕ್ಷೆ

(ಜನೇ ಪುಟದಿಂದ)

ನಾರಿಕೇಲ ಫಲಸಂಮಿತಂ ವಚೋ ಭಾರವೇಃ
ಸಸದಿ ತದ್ವಿಭಜ್ಯತೇ
ಸ್ವಾದಯಂತು ರಸಗರ್ಭನಿರ್ಭರಂ ಸಾರಮಸ್ಯ
ರಸಿಕಾ ಯಥೇಪ್ಸಿತಂ ॥

"ಭಾರವಿಯ ವಾಕ್ಯುಗಳು ತೆಂಗಿನ ಫಲದಂತೆ ಗಟ್ಟಿಯಾದ ಹೊದಿಕೆಯು ಳ್ಳವು. ರಸಿಕರು ಈ ಜಟಿಯನ್ನು ಕಿತ್ತೆಸೆದು, ಅದರ ರಸಾಸ್ವಾದವನ್ನು ಹೊಂದುತ್ತಾರೆ."

ವ್ಯಾಕರಣ, ಛಂದಸ್ಸು, ಅಲಂಕಾರ ಮತ್ತು ರಸಗಳ ವಿದ್ವಾಂಸರು ಕವಿಯನ್ನು ಹೊಗಳುತ್ತಾರೆ. ಹಾಗೆಯೇ ಆತನಿಗೆ "ಆತ ಪತ್ರ ಭಾರವಿ" ಎಂಬ ಬಿರುದನ್ನೂ ಕರುಣಿಸಿದ್ದಾರೆ. ಆತ ಪತ್ರನೆಂದರೆ, ಬಿಸಿಲಿನಿಂದ ರಕ್ಷಿಸುವ ಕೊಡೆ. ಈ ಉಪನಾಮಕ್ಕೆ ಕಾರಣೀ ಭೂತವಾದ ಶ್ಲೋಕ ಹೀಗಿದೆ.

ಉತ್ಫುಲ್ಲ ಸ್ಥಲನಲಿನೀವನಾದ
ಮುಷ್ಯಾ ದುದ್ಭೂತಃ
ಸರಸಿಜಸಂಭವಃ ಪರಾಗಃ
ವಾತ್ಯಾಳ್ಥಿರ್ವಿಯತಿ ವಿವರ್ತಿತಃ
ಸಮಂತಾತ್
ದಾದತ್ತೇ ಕನಕ ಮಯಾಂ ಪತ್ರ
ಲಕ್ಷ್ಮೀಮ್ ॥

"ಕಮಲಗಳ ವನಗಳಲ್ಲಿ ಅಸಂಖ್ಯ ಹೂಗಳು ಅರಳಿವೆ. ಅವುಗಳಿಂದ ಹಳದಿ ಬಣ್ಣದ ಪರಾಗವು ಕದಡುತ್ತಾ ಇದೆ. ಬೀಸುತ್ತಿರುವ ಗಾಳಿಯು ಈ ಪರಾಗವನ್ನು ಆಕಾಶ ತುಂಬ ಹರಡಿಸುತ್ತಿದೆ. ಹೀಗೆ ಕಮಲಗಳ ಪರಾಗವು ವಾಯು ಮಂಡಲದಲ್ಲಿ ಚಿನ್ನದ ಕೊಡೆಯಂತೆ ಶೋಭಿಸುತ್ತಿದೆ."

ಇದೇ ರೀತಿಯ ಶರತ್ಕಾಲದ ವರ್ಣನೆಯ ಶಬ್ದ ಚಿತ್ರವನ್ನು ನೋಡಿರಿ: "ಶರತ್ಕಾಲ. ಗದ್ದೆಗಳಲ್ಲಿ ಪೈರು ಹಣ್ಣಾಗಿದ್ದು ಹಳದಿ ವರ್ಣಕ್ಕೆ ತಿರುಗಿವೆ. ತೆನೆಗಳ ಭಾರದಿಂದ ಗಿಡಗಳು ಮಲಗಿವೆ. ತೆನೆಗಳನ್ನು ಕಾಣುವಾಗ, ಅವುಗಳು ಸಮೀಪದ ನೀರಿನಲ್ಲಿಯೇ ಬೆಳೆದಿರುವ ನೀಲ ಕಮಲಗಳ ಪಂಮಳವನ್ನು ಆಸ್ವಾದಿಸಲು ಬಗ್ಗಿರುವಂತೆ ಕಾಣುತ್ತವೆ." ಬಗ್ಗಿದ ಗಿಡಗಳ ಉತ್ಪ್ರೇಕ್ಷೆ ಹೇಗಿದೆ?

ಗದ್ದೆಯ ನೀರಿನ ವರ್ಣನೆ ನೋಡಿರಿ:

"ನೀರಿನಲ್ಲಿ ಕಮಲಿನಿ ಅರಳಿದೆ. ಕಮಲದ ಹಸುರಾದ ನಾಳದ ನೆರಳಿನಿಂದ ನೀರೂ ಹಸುರಾಗಿ ತೋರುತ್ತವೆ. ಕಮಲದ ಎಲೆಗಳು ನೀರಿನಲ್ಲಿ ತಾಗಿದ್ದು ಶೋಭನೀಯವಾಗಿದೆ ಬಾಗಿರುವ ಹೆಳದಿ ತೆನೆಗಳಿಂದ ಹಳದಿ ನೆರಳು ಬಿದ್ದಿದೆ. ಹೀಗೆ ವಿಭಿನ್ನ ವರ್ಣಗಳಿಂದ ಇಂದ್ರ ಧನು ನೀರಿನ ರೂಪದಲ್ಲಿ ಹರಿಯುತ್ತಿರುವಂತೆ ಕಾಣುತ್ತದೆ."

ವರ್ಣನೆ, ಚಮತ್ಕಾರಗಳಲ್ಲಿ ಭಾರವಿ ಕೈಗಟ್ಟಿ ಕುಳಿತಿಲ್ಲ. ರಾಜನೀತಿ ನೀತಿ ಶಾಸ್ತ್ರಗಳಲ್ಲೂ ಆತನದು ಎತ್ತಿದ ಕೈ. ದ್ವಿತೀಯ ಸರ್ಗದಲ್ಲಿ ಭೀಮ ಮತ್ತು ಯುಧಿಷ್ಠಿರರ ಮಧ್ಯೆ ನಡೆದ ಸಂವಾದದಲ್ಲಿ ಬರುವ ರಾಜನೀತಿಯು ಇಂದಿಗೂ ವ್ಯವಹಾರ್ಯವಿದೆ.

ಹಿತಂ ಮನೋಹರಿ ಚ ದುರ್ಲಭಂ ವಚಃ, ಸುಮರ್ಲಭಾಃ ಸರ್ವಮನೋರವಾ ಗಿರಃ—ಇತ್ಯಾದಿ ನೀತಿವಾಕ್ಯಗಳು ಪಂಡಿತರ ತುಟಿನಾಲಗೆಯಲ್ಲಿರುತ್ತವೆ.

ಹೀಗೆ ಸರ್ವದೃಷ್ಟಿಯಿಂದಲೂ ಯೋಗ್ಯನಾದ ಕವಿ ಭಾರವಿ. ಶಬ್ದಗಳ ಮೇಲೆ, ಅಕ್ಷರಗಳ ಮೇಲೆ ತಾಂಡವವಾಡಲು ಶಕ್ತನಾದ ಈತನ ಒಂದೇ ಒಂದು ಕಾವ್ಯ ವಿದಕ್ಕೆ ನಿದರ್ಶನ! ಎಂತಲೇ "ಭಾರವೇರರ್ಥಗಾರವಮ್" ಎಂದು ಪ್ರಸಿದ್ಧಿಯಿದೆ.

ನವರಾತ್ರಿ

ಶಕ್ತ್ಯಾರಾಧನೆಯ ಪವಿತ್ರಪರ್ವಕಾಲ

ನಾಡ ಹಬ್ಬದ ಆಚರಣೆ ನಮ್ಮ ಹಿರಿಯರಿಂದ ಪ್ರಾಚೀನೆ ಕುರುಹು

ಆಶ್ವೀಜ ಶುದ್ಧ ಪ್ರತಿಪದೆಯಿಂದ ಶರದೃತುವು ಆರಂಭವಾಗುವುದರ ಜೊತೆಯಲ್ಲಿಯೇ ನವರಾತ್ರಿ ಇಲ್ಲವೆ ದಸರೆಯ ರಾಷ್ಟ್ರೀಯ ಪರ್ವನೇಳೆಯೂ ಮೊದಲಾಗುತ್ತದೆ. ನವರಾತ್ರಿಯ ಪರ್ವಕಾಲವು ಭಾರತೀಯ ಸಂಸ್ಕೃತಿಯ ಹಾಗೂ ಪರಂಪರೆಯ ಆರಾಧನಾಸಮಯ. ಈ ದಿನಗಳಲ್ಲಿ ಶಕ್ತಿಪೂಜೆ, ಸರಸ್ವತೀಪೂಜೆ ಹಾಗೂ ಧಾನ್ಯಪೂಜೆ ಸೀಮೋಲ್ಲಂಘನಗಳು ನಡೆಯುತ್ತವೆ. ಹಿಂದಿನ ಕಾಲದಲ್ಲಿ ಕೇವಲ ಭಾರತದಲ್ಲಿ ಮಾತ್ರವಲ್ಲ, ಈಜಿಪ್ತ, ಅಸ್ಸಿ ಮೈನರ್ ಮೊದಲಾದ ದೇಶಗಳಲ್ಲಿಯೂ ಇದೇ ಆಚರಣೆಯಿತ್ತೆಂದು ತಿಳಿದುಬರುತ್ತದೆ.

ವರ್ಷರ್ತುವಿನ ಘನಘೋರ ವರ್ಷವು ದೂರಸರಿದು, ಪ್ರಕೃತಿಯು ಪ್ರಶಾಂತವಾಗತೊಡಗುವ ರಮಣೀಯಕ ಸಮಯ—ಶರದೃತು. ಆಕಾಶದಲ್ಲಿ ಕವಿಯು ಮೋಡಗಳ ಬದಲು ಬಿಳಿದಾದ ಜಲದಗಳು ಒನಕೆ ದಾರೆಯ ಬದಲು ಹೂ ಮಳೆಯನ್ನು ಚೆಲ್ಲುತ್ತಿವೆ. ನದಿ ನದಗಳೂ ಕೆರೆ ಕುಂಟೆಗಳೂ ಸಮುದ್ರ ಸಾಗರಗಳೂ ತಮ್ಮ ತುಂಬಿ ಹರಿಯುವ ಗುಣವನ್ನು ತ್ಯಜಿಸುವುವು. ಪ್ರಕೃತಿ ದೇವಿಯೂ ಹೆಚ್ಚಿ ಹರುಂಗಿ, ಪೈರು ಪಚ್ಚೆಗಳಿಂದ ತುಂಬಿ ನಲಿದಾಡುತ್ತಿರುವಳು. ಇದೇ ಸಮಯದ ನಂತರ ದೇಶದ ರೈತ ಜನರು ತಮ್ಮ ಗದ್ದೆಗಳಿಗೆ ಗೇಯಲು ಹೋಗುತ್ತಾರೆ. ಹಾಗಾಗಿ ನವರಾತ್ರಿಯ ಪರ್ವಕಾಲವು ಭಾವೀ ಸುಖಾನಂದಗಳ ನಾಂದಿಯಷ್ಟೆ? ಎಂತಲೇ ಈ ಹಬ್ಬವನ್ನು ಆಚರಿಸುವುದರಲ್ಲಿ ಔಚಿತ್ಯವಿದೆ.

ಸರಸ್ವತಿಯು ಜನತೆಯ ಅಜ್ಞಾನವನ್ನು ದೂರ ಮಾಡಿ ಸುಜ್ಞಾನವನ್ನು ನೀಡುವಳು. ವಿದ್ಯೆಯ ಒಡತಿ, ಪುಸ್ತಕಪಾಣಿ, ವೀಣಾಪಾಣಿ ಇತ್ಯಾದಿ ಬಿರುದು ಭಾಜನೆ. ಆಕೆಯು ಮೂಲಾ ನಕ್ಷತ್ರದಿಂದ ನಾಲ್ಕು ದಿನ ನಿದ್ರಿಸುವೆಂಬ ಆ ಕಾಲದಲ್ಲಿ ಭಕ್ತಾದಿಗಳು ಆರಾಧನೆಯ ಮೂಲಕ ಭಜಿಸುವರೆಂದೂ ಉಲ್ಲೇಖವಿದೆ. ಇದರ ಕಾರಣದಿಂದಲೇ ಮೂಲಾ ನಕ್ಷತ್ರದಂದು ಸರಸ್ವತಿಯ ಪ್ರತಿರೂಪವಾದ ಪುಸ್ತಕಗಳಿಗೆ ಭಕ್ತಿಪುರಸ್ಸರವಾಗಿ ಪೂಜೆಸಲ್ಲಿಸುವ ಪದ್ಧತಿ ಇಂದಿಗೂ ನಡೆದು ಬರುತ್ತಿದೆ.

ರಾಮನು ರಾವಣನನ್ನು ಕೊಂದದಿನ, ಅರ್ಜುನನು ಉತ್ತರ ಗೋಗ್ರಹಣದಲ್ಲಿ ಜಾಣ-ವಧುವನ್ನು ಪರಿಸಿದ ದಿನ, ಮಹಿಷಾಸುರ ಮರ್ದಿನಿ ಯಾದ ದುರ್ಗೆಯು ಮಹಿಷಾಸುರನನ್ನು ಮಥಿಸಿದ ದಿನವೆಲ್ಲವೂ ಈ ನವರಾತ್ರಿಯ ದಿನಗಳಲ್ಲೆಂದು ಹೇಳಲಾಗುತ್ತಿದೆ. ಅಂದು ಲೋಕ ಕಂಟಕರಾದ ದುರ್ಜನರನ್ನು ನಾಶಮಾಡಿ ಶಿಷ್ಟ ಪರಿವಾಲನೆಯ ಅಡಿಗಲ್ಲನ್ನು ಹಾಕಿದ್ದ ಸಂತೆನೆಪಿಗಾಗಿ ಸ್ತ್ರೀಯರು ವಿಜಯ ದಶಮಿಯ ದಿನವೆಂದು ಶಮೀ ಪೂಜೆಯನ್ನು ಮಾಡಿ ನಗರ ಪ್ರವೇಶ ಮಾಡುತಿದ್ದರಂತೆ. ಮೈಸೂರು ಮಹಾರಾಜರ ಈ ತೆರದ ಆಚರಣೆಯೂ ಈ ಅರ್ಥದಲ್ಲಿಯೇ ಒಳಗಾಗುತ್ತದೆ.

ಮೈಸೂರಿನ ಕಥೆಯ ಂತಿರಲಿ ಪ್ರಜಾಪ್ರಭುತ್ವದಲ್ಲಿ ಈ ರೀತಿ ಆಚರಣೆಯಾಹುದೇ ಬಾರದೇ ಎಂಬುದು ವಿವಾದಾಸ್ಪದ ಸಂಗತಿ. ಆದರೆ, ಇಂದು ಹಿಂದಿನ ಪರಂಪರೆಯ ಕುರುಹಾದರೂ ಉಳಿದಿರುವುದಾದರೆ, ಅದು ಮೈಸೂರಲ್ಲಿ ಮಾತ್ರ.

ನವರಾತ್ರಿ, ಹಾಗೂ ವಿಜಯದಶಮಿಗಳ ಆಚರಣೆಯು ರಾಮಾಯಣ ಕಾಲದ ನಂತರವೇ ಪ್ರಚಲಿತವಾಗಿರದೆ, ಅದಕ್ಕೂ ಮೊದಲು ಇದರ ಆಚರಣೆಯಿದ್ದ ಉಲ್ಲೇಖವಿದೆ. ಭೂಮಿಗೆ ಭಾರವಾದ ನೇತನೆಂಬ ಪಾಪಾಚಾರಿ ರಾಜನನ್ನು ಗದ್ದುಗೆಯಿಂದಿಳಿಸಿ ಪೃಥುವೆಂಬ ಸಜ್ಜನನನ್ನು ಪಟ್ಟಕ್ಕೇರಿಸಿದ ಘಟನೆ ನಡೆದುದೂ ಇದೇ ದಿನವಂತೆ. ಈ ಪೃಥುವಿನಿಂದಾಗಿಯೇ ಭೂಮಿಗೆ ಪೃಥ್ವೀ—ಹೊಡವಿ—ಎಂಬ ನಾನಾಭೇಧವಾಯಿತೆಂದೂ ಈತನು ಭೂಮಿಯನ್ನು ಫಲವತ್ತಾಗಿ ಮಾಡುವ ಹಲವಾರು ಕಾರ್ಯವಿಧಾನಗಳನ್ನು ಕೈಕೊಂಡು ಜನಪ್ರೀತಿ ಸಾತ್ರನಾದನೆಂದೂ ಹೇಳುತ್ತಾರೆ. ಹೀಗಾಗಿ ನವರಾತ್ರಿಯು ಸಂಡೇಶವೂ ಇದೇ ಆಗಿದೆ. ನಿರಂಕುಶ ಪ್ರಭುತ್ವನ್ನು ಕೈಕೊಡಲಿಯೇಟು ಬಿದ್ದು, ಪ್ರಜಾಪ್ರಭುತ್ವಕ್ಕೆ ಮನ್ನಣೆ ದೊರೆತ ದಿನವೆಂದೂ ಈ ವಿಜಯ ದಶಮಿ ಪವಿತ್ರವಾಗಿದೆ.

ನವರಾತ್ರಿಯ ಕಾಲ ಮುಖ್ಯವಾಗಿ, ಶಕ್ತಿ ಆರಾಧನೆಗು ಸಮಯ. ಮನೆ ಮನೆಯಲ್ಲಿ ಶಕ್ತಿಯನ್ನು ನಾನಾ ರೀತಿಯಾಗಿ ಭಕ್ತಿಭಾವ ಪುರಸ್ಸರವಾಗಿ ಆರಾಧಿಸಿ ತಮ್ಮ ಕ್ಷೇಮ ಹಾಗೂ ಸುಖಕ್ಕಾಗಿ ಪ್ರಾರ್ಥಿಸುತ್ತಾರೆ. ಪಾರ್ವತಿ, ಕಾತ್ಯಾಯನಿ, ಶಕ್ತಿ, ದುರ್ಗೆ ಮೊದಲಾಗಿ ಬಗೆ ಬಗೆಯಾದ ಹೆಸರುಗಳಿಂದಲೂ ಮಹಾಲಕ್ಷ್ಮಿ ಮಹಾಸರಸ್ವತಿ ವೆಂಬಲಾದ ನಾಮಧೇಯಗಳಿಂದಲೂ ಕರೆಯಲ್ಪಡುವ ಆ ಆನಂತ ಶಕ್ತಿಯು ತನ್ನನ್ನು ಆರಾಧಿಸಿದ ಭಜಕರಿಗೆ ಆನಂದ ಸುಖ ಸಂತೋಷಗಳನ್ನು ಈಯುವಳೆಂಬುದು ಜನರ ಧೃಢನಿಶ್ಚಯವಾಗಿದೆ. ವಿಜಯ ದಶಮಿಯನ್ನು ವಿದ್ಯಾ ದಶಮಿಯೆಂದೂ ಕರೆದು, ಮನೆಯ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಪ್ರಾರಂಭಿಸುವ ಪದ್ಧತಿಯೂ ನಮ್ಮಲ್ಲಿದೆ.

ಹಿಂದಿನ ಕಾಲದಲ್ಲಿ ರಘುವಂಶ ಅರಸನು ವಿಜಯದಶಮಿಯ ದಿನದಂದು ದಿಗ್ವಿಜಯಕ್ಕಾಗಿ ಹೊರಡುತಿದ್ದುದರಿಂದಲೇ ಪ್ರತಿ ದಾರಿಯೂ ಜಯಶೀಲನಾಗಿ ಬರುತಿದ್ದನಂತೆ. ಶಮೀ ಪೂಜೆ ಮತ್ತು ಸೀಮೋಲ್ಲಂಘನದ ಆಚರಣೆಯು ಹಿಂದಿನ ದಿನಗಳ ಕ್ಷಾತ್ರ ವೃತ್ತಿಯ ಅಳಿದುಳಿದ ಸ್ಮಾರಕ ಮಾತ್ರ. ಕರ್ನಾಟಕ ಜನರಿಗೆ ಮಾತ್ರ ಈ ನವರಾತ್ರಿಯ ಸಮಯವು ಬಹಳ ಪ್ರಧಾನವಾಗಿದ್ದು ಆದನ್ನು 'ನಾಡ ಹಬ್ಬ' ಎಂದೆ. ಕರೆಯುತ್ತಾರೆ. ನಗರ—ಹಳ್ಳಿಯೆಂಬ, ಧನಿಕ—ದರಿದ್ರನೆಂಬ ಭೇದಭಾವವಿಲ್ಲದೆ ಎಲ್ಲರೂ ಈ ನಾಡ ಹಬ್ಬದ ದಿನಗಳನ್ನು ತಂತಮ್ಮ ಶಕ್ತ್ಯಾನುಸಾರ ಆಚರಿಸುತ್ತಾರೆ. ತಮ್ಮೊಳಗಿನ ವೈಷಮ್ಯಗಳನ್ನು ದೂರೀಕರಿಸುತ್ತಾರೆ. ಶಕ್ತಿಯ ಒಂದು ರೂಪವಾದ ದುರ್ಗಾಪೂಜೆಗೆ ಈ ಕಾಲವು ಪರಮಪ್ರಶಸ್ತವಾದುದೆಂದು ಜನರ ನಂಬಿಕೆಯಿದೆ.

ಕಾರ್ಕಳ ಡಿ. ಮುಂ. ಕೋರ್ಟಿನಲ್ಲಿ

R. E. P. No349/1958
O. S. No183/1956

ಶಿವಪ್ಪಪೂಜಾರಿ (ವಾದಿ) ಆರ್ಜಿದಾರ
ಮತ್ತು

ತಿಮ್ಮಾಜು ಹೆಂಗಸು-ಕೊಚ್ಚಮ್ಮ ಹೆಂಗಸಿನ ಮಗಳು, ಕಾರ್ಕಳ ತಾಲ್ಲೂ ಕೆಲ್ಲಪುತ್ತಿಗೆ ಗ್ರಾಮ— (ಪ್ರತಿವಾದಿ) ಎದ್ರಿಳು.

ಮೇಲ್ಕಂಡ ದಿಕ್ರಿ ಅನ್ನುಜ್ಞಾರಿಯಲ್ಲಿ ಕೇಳಿದಂತೆ ಆರ್ಜಿದಾರರಿಗೆ ಬಹಾ ಅವೇಜಿನ ವಸೂಲು ಬಗ್ಗೆ ದಿಕ್ರಿಯಲ್ಲಿ ಸಾರಾಟಕ್ಕೆ ವಿಧಿಯಿರುವ ಎದ್ರಿಳವ್ಯಾದೆ ಗೇಣಿ ಪಕ್ಕೆನಕ್ಕರಾಸ್ತಿಯೇಲಂ ಬಗ್ಗೆ ದಾಕ್ಲು ಮಾಡಿದ ಯಿಸ್ತು ಶಾರಿನ ಶರ್ತ ನಿರ್ಣಯದ(ಮತ್ತು ಸದ್ರಿಯೇಲಂ ಸಮಯ ಆರ್ಜಿದಾರಗೆ Bid &Set off) ಕುರಿತು ತಾ 30-10-1958ಕ್ಕೆ ಯಿಟ್ಟಿರುತ್ತದೆ. ಆಕುರಿತು ಆಕ್ಷೇಪಯಿದ್ದರೆ ನೀವು ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ದಿವಸ ಬೆಳಿಗ್ಗೆ 10ಗಂಟೆಗೆ ಹಾಜರಾಗಿ ಜವಾಬರು ಮಾಡಿಕೊಳ್ಳತಕ್ಕದ್ದು. ಯಂತ ಕೋರ್ಟು ಮುಕುಂದ ಪ್ರಕಾರ (ಎದ್ರಿಗೆ) ಈ ಮಾಲಕ ತಿಳಿಸೂಡಾಗಿಯದೆ.

(Sd) I. Subba Rao,
ಆರ್ಜಿದಾರನ ಕಡೆ ವಕೀಲ್.

Karkala Date 9-10-1958



ಜಾಗತಿಕ ಸಂಸ್ಥೆ

(೪ನೇ ಪುಟದಿಂದ)

ಜೇರಿಯು ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ವಾಷಿಂಗ್‌ಟನ್ನಿನಲ್ಲಿರುತ್ತದು. ಪ್ಯಾರಿಸ್ ಮತ್ತು ನ್ಯೂಯಾರ್ಕ್‌ಗಳಲ್ಲಿ ಈ ಬ್ಯಾಂಕಿನ ಚಿಕ್ಕ ಚಿಕ್ಕ ಕಚೇರಿಗಳಿವೆ.

ಸಾಲ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಸದಸ್ಯ ರಾಷ್ಟ್ರಗಳಿಗೆ ವಿವಿಧ ರೀತಿಯಲ್ಲಿ ತಾಂತ್ರಿಕ ನೆರವನ್ನು ಸಹ ನೀಡುತ್ತಿದೆ ಸದಸ್ಯ ರಾಷ್ಟ್ರಗಳ ವಿಶಿಷ್ಟ ಯೋಜನೆಗಳ ವಿಷಯದಲ್ಲಿ ಪ್ರಾದೇಶಿಕ ಪರಿಶೀಲನೆ ಅಥವಾ ಸಲಹೆಗಳನ್ನು ನೀಡುವುದಕ್ಕಾಗಿ ಬ್ಯಾಂಕ್ ಇಲ್ಲಿಯ ವರೆಗೆ ೧೫ ಆರ್ಥಿಕ ಕಾರ್ಯಾಚಣೆಗಳನ್ನು ನಡೆಸಿದೆ. ಅಂತಾರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ಇತ್ಯರ್ಥಕ್ಕಾಗಿ ಬ್ಯಾಂಕ್ ಶ್ರಮಿಸಿದೆ. ಭಾರತ ಮತ್ತು ಪಾಕಿಸ್ತಾನ ರಾಷ್ಟ್ರಗಳ ನಡುವೆ ಸಿಂಧೂನದಿ ಜಲಾನಯನ ಭೂಮಿಯ ನೀರುಗಳ ಹಂಚಿಕೆ ಮತ್ತು ಸೂಯಸ್ ಕಾಲುವೆಯ ರಾಷ್ಟ್ರೀಕರಣಕ್ಕಾಗಿ ಈಜಿಪ್ಟ್ ಪಾವತಿಮಾಡಬೇಕಾದ ಪರಿಹಾರ ಧನ ಇವುಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ.

ಬ್ಯಾಂಕ್ ಸಾಲವನ್ನು ಕೊಡುವುದೇ ಅಲ್ಲದೆ ಸಾಲಗಳನ್ನು ಸಹ ಪಡೆಯುವುದು. ಏಕೆಂದರೆ ಸದಸ್ಯ ರಾಷ್ಟ್ರ ಸರ್ಕಾರಗಳು ಕೊಡುವ ಚಂದಾರಾಶಿಯಲ್ಲಿ ನೀಡುವ ಬಂಡವಾಳದ ಹಣವನ್ನು ಬ್ಯಾಂಕಿನ ಎಲ್ಲ ವ್ಯವಹಾರಗಳಿಗೂ ವಿನಿಯೋಗಿಸಲಾಗುವುದಿಲ್ಲ. ಬ್ಯಾಂಕಿನ ಬಾಂಡುಗಳನ್ನು ಜಗತ್ತಿನ ಮುಖ್ಯ ಷೇರ್ ಮಾರುಕಟ್ಟೆಗಳಲ್ಲಿ ಮಾರಾಟಮಾಡಿ ಉಳಿದ ಹಣವನ್ನು ಸಂಗ್ರಹಿಸಲಾಗುವುದು. ೧೯೫೦ ಜೂಲೈ ತಿಂಗಳ ವೇಳೆಗೆ ಬ್ಯಾಂಕ್ ೧೭೦ ಕೋಟಿ ಡಾಲರ್‌ಗಳಷ್ಟು ಸಾಲಗಳನ್ನು ಪಡೆದಿತ್ತು. ಈ ಹಣದಲ್ಲಿ ಹೆಚ್ಚಿನದು ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ಡಾಲರ್ ಬಾಂಡ್‌ಗಳ ರೂಪದಲ್ಲಿದೆ. ಬ್ಯಾಂಕ್ ಸಾಲಪಡೆದುಕೊಂಡಿರುವ ಹಣದಲ್ಲಿ ಸುಮಾರು ಅರ್ಧದಷ್ಟನ್ನು ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಹಣ ತೊಡಗಿಸಿರುವವರಿಗೇ ಕೊಡಬೇಕಾಗಿದೆ.

ಬ್ಯಾಂಕ್ ತನ್ನ ಸಾಲಗಳಲ್ಲಿ ಕೊಂಚ ಪಾಲನ್ನು ವಿಕ್ರಯಿಸಿ ಖಾಸಗಿ ಒಂಡವಾಳಗಾರರ ಸಹಕಾರವನ್ನು ಪಡೆಯುತ್ತಿದೆ. ಈ ರೀತಿಯಾಗಿ ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸಿನ ನೆರವನ್ನು ಒದಗಿಸುವ ಬಗ್ಗೆ ಬ್ಯಾಂಕ್ ೪೦ ಕೋಟಿ ಡಾಲರ್‌ಗಳನ್ನು ಸಂಗ್ರಹಿಸಿದೆ. ಹಿಂದೆ ಕೊಡಲಾದ ಸಾಲಗಳ ಮರುಪಾವತಿಯಿಂದ ಹಾಗೂ ಸಾಲಗಳ ಮೇಲೆ ಬರುವ ಲಾಭಗಳಿಂದ ಸಂಗ್ರಹವಾದ ಹಣಗಳನ್ನು ಸಹ ಬ್ಯಾಂಕ್ ಸಾಲನೀಡುವುದಕ್ಕಾಗಿ ಉಪಯೋಗಿಸುವುದು. ಬ್ಯಾಂಕ್ ನೀಡುವ ದೀರ್ಘಾವಧಿಯ ಸಾಲಗಳಿಗೆ ಶೇಕಡ ೪½ರಿಂದ ೬ರಷ್ಟು ಬಡ್ಡಿಯನ್ನು ಕೊಡಬೇಕಾಗುವುದು. ಬಡ್ಡಿಯ ದರದ ವಿಚಾರದಲ್ಲಿ ಬ್ಯಾಂಕ್ ಸಾಲಗಳನ್ನು ಪಡೆಯುವ ವಿವಿಧ ರಾಷ್ಟ್ರಗಳ ನಡುವೆ ತಾರತಮ್ಯ ಮಾಡುವುದಿಲ್ಲ.

ಪ್ರಸಕ್ತ ಬ್ಯಾಂಕ್ ಮೂರು ಮುಖ್ಯವಾದ ತತ್ವಗಳ ಮೇಲೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ:—ಮೊದಲನೆಯದು ಸಾಲಪಡೆಯುವ ರಾಷ್ಟ್ರವು ಸಾಲವನ್ನು ಸದುಪಾಯವಾಗಿ ಮಾಡಲು ಶಕ್ತವಾಗಿದೆಯೆ? ಎರಡನೆಯದು, ವಿದೇಶೀ ವಿನಿಮಯ

ಬರ್ಮಾ ವಿದ್ರೋಹ

ಅಲ್ಲಿ ನಡೆದಿರುವುದು ಸುಂದರ ವಿಧಾನದ ವಿಪ್ಲವ!

ಈ ವರ್ಷದಾದಿಯಿಂದಲೇ ಸೇನೆಯ ಒಂದು ವರ್ಗವು ಇದಕ್ಕಾಸರೆಯೊಯ್ಯುತಿತ್ತೇ

ಇತ್ತೀಚೆಗೆ ಬರ್ಮಾದಲ್ಲಿ ನಡೆದ ಸ್ಥಿತ್ಯಂತರವನ್ನು ವಿದ್ರೋಹವೆಂದೋ ವಿಪ್ಲವವೆಂದೋ ಆಲ್ಲವೇ ಬವಲಾವಣೆಯೆಂದೋ ದಾವ ಹೆಸರಿನಲ್ಲಿಯೇ ಕರೆದರೂ ಅಲ್ಲಿ ಪರಿವರ್ತನೆಯಾಗಿರುವುದೂ, ಸೇನಾಡಳತೆಯು ಸ್ಥಾಪಿತವಾದುದೂ ಹೌದು. ವಾಮ ಪಕ್ಷವಾದ ನೇಶನಲ್ ಯುನೈಟೆಡ್ ಫ್ರಂಟ್‌ನ ನಾಯಕರೂ ಸ್ವರ್ಗೀಯ ಅಂಗಸಾನ್‌ರ ಸೋದರರೂ ಆದ ಶ್ರೀ ಅಂಗ ಧಾನ್‌ರು ಈ ಸಂಬಧದ ಇತ್ತ ಸಮ್ಮತಿಯು ಕಣ್ಣು ತೆರೆಯುತ್ತದೆ. ಕಳೆದ ವಾರ ಇವರು ಜನರಲ್ ನಿವಿನ್‌ರನ್ನು ಭೆಟ್ಟಿಯಾಗಿದ್ದರು. ಆಗ ಇವರು, "ಇದೊಂದು ಅದ್ವಿತೀಯ ಸ್ಥಿತಿ. ನಿಜವಾಗಿಯೂ ಈಗ ನಡೆದುದು ಸೈನಿಕ ವಿಪ್ಲವವಲ್ಲ; ಆದರೂ ಏನು ನಡೆದಿದೆಯೆಂಬುದು ನಮಗೆ ತಿಳಿದಿದೆ" ಎಂದರಂತೆ! ಅಲ್ಲಿಯೇ ಇಂತಹ ಪರಿವರ್ತನೆಯನ್ನು ಮಾಡಿದವರು ಬಹಳ ಚತುರರು ಎಂದನಿಸಿ ಉದ್ಗರಿಸಿದರೆಂದು ವರದಿಯಾಗಿದೆ.

ಹಿಂದಿನ ವಾರದಲ್ಲಿ ಬರ್ಮಾದ ಪ್ರಧಾನಿ ಶ್ರೀ ಯುನೂರವರು ರಂಗೂನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಮಾತಾಡಿದ್ದ ತಾವು ಯಾವುದೋ ಹಣ ಸಾಲಪಡೆಯುವಷ್ಟರಮಟ್ಟಿಗೆ, ಧನ ಸಹಾಯ ಅಗತ್ಯವಿರುವ ಯೋಜನೆ ಅಥವಾ ಕಾರ್ಯಕ್ರಮವಿಂದ ರಾಷ್ಟ್ರದ ಆರ್ಥಿಕ ವ್ಯವಸ್ಥೆಗೆ ಅನುಕೂಲ ಲಭಿಸುವುದೇ? ಮತ್ತು ಮೂರನೆಯದು ಯೋಜನೆಯನ್ನು ಕಾರ್ಯಗತ ಮಾಡಲು ಸಾಧ್ಯವಿದೆಯೇ?

ಬ್ಯಾಂಕ್ ಅಭಿವೃದ್ಧಿ ಯೋಜನೆಗಳಿಗಾಗಿ ಅಗತ್ಯವಾಗುವ ಉಪಮಾನಾಲ್ಪು ಟ್ಟಿ ಸರಕುಗಳು ಮತ್ತು ಸೇವೆಯ ಮೆಶ್ಚಿಗಳ ಬಗ್ಗೆ ಹಣಕಾಸನ್ನು ನೀಡುವುದು. ಸಂಬಂಧಪಟ್ಟ ದೇಶಗಳಲ್ಲಿಯೇ ಸಂಭವಿಸುವ ವೆಚ್ಚಗಳಿಗಾಗಿ ಸಾಲಗಳನ್ನು ಕೊಡುವುದಿಲ್ಲ. ಸಂಬಂಧಪಟ್ಟ ರಾಷ್ಟ್ರದಲ್ಲಿ ಸಂಭವಿಸುವ ವೆಚ್ಚಗಳನ್ನು ಸಾಲಪಡೆಯುವ ರಾಷ್ಟ್ರವೇ ವಹಿಸಿಕೊಳ್ಳಬೇಕಾಗುವುದು. ಬ್ಯಾಂಕ್ ಸುಮಾರು ೪೦೦ ಕೋಟಿ ಡಾಲರ್‌ಗಳನ್ನು ಸಾಲಗಳ ರೂಪದಲ್ಲಿ ಕೊಟ್ಟಿದೆ. ವಿವಿಧ ಪ್ರಾಜೆಕ್ಟ್‌ಗಳಲ್ಲಿ ಸುಮಾರು ೧೫೦೦ ಕೋಟಿ ಡಾಲರ್‌ಗಳ ಹಣವನ್ನು ತೊಡಗಿಸಿದೆ.

ಒಂದು ಕ್ಷೇತ್ರದಲ್ಲಿ ಒತ್ತಾಯಿಸಲ್ಪಟ್ಟಿದ್ದನ್ನು ಪರೋಕ್ಷವಾಗಿ ಹೇಳಿದರು. ಇದಕ್ಕೂ ಬರ್ಮಾದ ಸ್ಥಿತ್ಯಂತರಕ್ಕೂ ಸಂಬಂಧವಿದ್ದರೂ ಇರಬಹುದು.

ಶ್ವೇತ್ಸಕರ ಅಭಿಪ್ರಾಯದಂತೆ, ಬರ್ಮಾದಲ್ಲಿ ನಡೆದುದು—ಬಹಳ ಸುಂದರ ವಿಧಾನದ ವಿಪ್ಲವ. ಈ ವರ್ಷಾರಂಭದಲ್ಲಿ ಬರ್ಮಾದ ಅಧಿಕಾರಾರೂಢ ಪಕ್ಷ ಎ. ಎಫ್. ಪಿ ಎಫ್. ಎಲ್.ನಲ್ಲಿ ಬಿರುಕೆದ್ದಾಗ, ಜನತೆಗೆ ಸೇನಾನಿ ಯುಂತ್ರಣವು ಪಕ್ಕಾರಂಭವಾಗುವುದೇ ಎಂಬ ಭಯ ವಿತ್ತು. ಜನರಲ್ ನಿವಿನರು, ಸೇನೆಯು ರಾಜಕೀಯದಲ್ಲಿ ಆಸಕ್ತಿಯನ್ನು ತಳೆದೆ ಯೋಗ್ಯ ರೀತಿಯಲ್ಲಿ ಸ್ಥಾಪಿತವಾದ ಸರಕಾರದ ಸೇವೆ ಮಾಡುವುದೆಂಬ ಘೋಷಣೆಯನ್ನು ಮಾಡಿದಾಗ, ಈ ಅಂಜಿಕೆಯು ದೂರವಾಯಿತು. ಈಗ, ಜನರಲ್ ನಿವಿನರು ಈ ಒತ್ತಾಯವನ್ನು ಹೇರಿದೆ, ರಾಜಕೀಯ ಪರಿಸ್ಥಿತಿಯಿಂದ ಆ ಸಂತೃಪ್ತವಾದ ಸೇನೆಯು ಒಂದು ವರ್ಗವು ಈ ರೀತಿಯ ವಿಪ್ಲವಕ್ಕೆ ಕಾರಣವಾಯಿತೆಂದೂ, ಜನರಲ್ಲರು ಆಂತಿಮ ಕ್ಷಣಕ್ಕೆ ಮಾತ್ರ ಮುಂದೆ ಬಂದರೆಂದೂ ಅಂದುಕೊಳ್ಳುತಿದ್ದಾರೆ.

ಆತಳಿತ ಪಕ್ಷದಲ್ಲಿ ಒಡಕುಂಟಾದೊಡನೆಯೇ ಸೇನೆಯು ಸಂರಕ್ಷಣೆಯ ನೆಪವನ್ನು ಮುಂದೂಡಿ ದೇಶದ ಕಡೆಗೆ ತೀವ್ರ ಗಮನ ಹರಿಡಿಸಿತು. ಪೋಲೀಸರೂ ತಮ್ಮ ಜೊತೆಗಾರಿಕೆಯನ್ನು ಸಂಪೂರ್ಣ ಹೊತ್ತರು. ಯುನೂರವರ ಪ್ರಸಿದ್ಧ ರೇಡಿಯೋ ಭಾಷಣವಾದ ಸಪ್ಟೆಂಬರ್ ೬ಕ್ಕೆ ಮೊದಲಿನ ಘಟನೆಗಳು ಮಹತ್ವಪೂರ್ಣವಾಗಿವೆ. ಸೇನೆಯು ಅನೇಕ ವಸತಿಗಳ ಮೇಲೆ ಅಧಿಕಾರ ಚಲಾಯಿಸಿತ್ತು. ರಂಗೂನಿನಿಂದ ಸುಮಾರು ಎಂಟು ಮೈಲು ದೂರದ ಮಂಗಲಾಡನ ವಿಮಾನ ನಿಲ್ದಾಣ ಮತ್ತು ಂಯ ಸೆಣಬಿನ ಕಾರಖಾನೆಯ ಮೇಲೆ ಇವರು ಅಧಿಕಾರ ನಡೆಸಿದ್ದರು. ಅಲ್ಲಿನ ಸಶಸ್ತ್ರಬಲದ ನೆಂಠರ ಶ್ವೇದಾವ್ಗೂಂಗ ಮತ್ತು ಜೊಗಾಲೆಗಳ ಸೇನೆಯು ಈ ನಗರಗಳ ಮೇಲೆ ಅಧಿಕಾರ ನಡೆಸುವ ಘೋಷಣೆಯನ್ನು ಮಾಡಿಮುಖ. ಸಂಯೋಗವಶದಿಂದಲೇ ಇವೆಲ್ಲವೂ ಒಂದೇ ಬಾರಿ ನಡೆಯಿತೆಂದು ಹೇಳಬರುವುದಿಲ್ಲ. ಹಾಗೆಯೇ ಜನರಲ್ ನಿವಿನರೂ ಅಧಿಕಾರಾಕಾಂಕ್ಷಿಗಳೆನ್ನುವುದೂ ತಪ್ಪಾಗುವುದು.

ಸೇನೆಯು ಕಳೆದ ೧೦ ವರ್ಷಗಳಿಂದಲೂ ಕಮ್ಯುನಿಸ್ಟರೊಡನೆ ಹೋರಾಡಿದ್ದ ದರಿಂದ, ಸರಕಾರದಲ್ಲಿ ಕಮ್ಯುನಿಸ್ಟರ ಸಹಕಾರದಲ್ಲಿ ಭಶಂಕೆಯಿತ್ತು. ಆದರೂ ಇದನ್ನು ವಿತೋಧಿಸುವುದು ಮಾತ್ರ ಅವಕ್ಕೆ ಅಸಾಧ್ಯವಾಗಿತ್ತು. ಒಟ್ಟಿನಲ್ಲಿ ಯು—ನೂ ರವರ ಈ ಹೊಸ ವರ್ಷಾಡು ಬರ್ಮಾಕ್ಕೆ ಹಿತಕಾರಿಯಾಗುವುದೆಂದು ಬರ್ಮಿಯರು ನಂಬಿದ್ದಾರೆ. ಶ್ರೀ ನಿವಿನರು ಅಧಿಕಾರವು ಸೈನಿಕ ಶಾಸನದ ಮೂಲಕವಾಗದೆ, ಸೇನೆಯ ಮೂಲಕ ಮಾತ್ರ ನಡೆಯುವುದೆಂದು ಆಶ್ವಾಸನೆಯಿತ್ತರೂ ಅದು ದೇಂಡಿನ ಸಹಾಯದಿಂದಲೇ ನಡೆಯುವುದು. ಸೈನಿಕಾಡಳತೆಯು ಯೋಗ್ಯವಲ್ಲವೆಂದು ಎಲ್ಲರೂ ಭಾವಿಸುತ್ತಿರುವ ಜಹಿಮತದಿಂದ ಜನರಲ್ ನಿವಿನರನ್ನೇ ಪ್ರಧಾನ ಮಂತ್ರಿಯಾಗಿ ಆರಿಸಲಾಗುವುದೆಂಬ ಸಂಭಾವನೆಯೂ ಪುಟಿಲವಾಗಿದೆ.

ರಾಜಕೀಯ ದಳಗಳಿಗೆ ಸಂಬಂಧಿಸಿದವರನ್ನೇ ಮಂತ್ರಿ ಮಂಡಲದಲ್ಲಿ ಸೇರಿಸಲಾಗುವುದು. ಡಾ. ಬ್ಯಾಮೊ ಹಾಗೂ ಮಾಜೀ ನ್ಯಾಯಾಧೀಶ ಯೂಥೀನ್ ವಾಂಗರನ್ನು ಈ ಮಂಡಲಿಯಲ್ಲಿ ಸೇರಿಸಿಕೊಳ್ಳುವ ನಿರೀಕ್ಷೆಯಿದೆ.

ನೇಶನಲ್ ಯುನೈಟೆಡ್ ಫ್ರಂಟ್ ಪಕ್ಷವು ಇಂದಿನ ಸರಕಾರ ರಚನೆಗಾಗಿ ಯೂನೂ ಘೋಷಣೆಯನ್ನು ಸಮರ್ಥಿಸಿದೆ. ಆದರೆ, ಅಕ್ಟೋಬರ್ ೨ರಕ್ಕೆ ಜನರಲ್ ನಿವಿನರನ್ನು ಪ್ರಧಾನಿಯಾಗಿ ಆರಿಸುವ ಗೊತ್ತುವಳಿಯು ಮಂಡಿಸಲಾಗ, ಅದು ಅದನ್ನು ಬೆಂಬಲಿಯಸುದಿಲ್ಲವೆಂದೂ ತಿಳಿದು ಬಂದಿದೆ. ರಾಜಕೀಯ ಕಾರಣಗಳಿಂದ ಈ ಪಕ್ಷದ ಸಚಿವರು ಸರಕಾರ ಕೈದಾಗಿದ್ದಾರೆ. ಇಂತಹ ವರಿಸ್ಥಿತಿಯಲ್ಲಿ ಫ್ರಂಟಿನ ಸಮರ್ಥನೆಯು ದೊರೆಯುವುದೂ ಕಠಿನವಾಗಿದೆ.

ಬರ್ಮಾದ ಡೆನೊಕ್ರೆಟಿಕ್ ಪಕ್ಷ ಮತ್ತು ಕಮ್ಯುನಿಸ್ಟ್ ವಿರೋಧಿ ಲೀಗಿನ ಅಧ್ಯಕ್ಷೆ ಥಾಕಿನ್ ಬಾಸೀನರು ಒಂದು ಹೇಳಿಕೆಯಲ್ಲಿ ಜನರಲ್ ನಿವಿನರ ಸರಕಾರ ಸ್ಥಾಪನೆಯನ್ನು ಸ್ವಾಗತಿಸಿರುವರು. ಜನರಲ್ ನಿವಿನರು ತಂಜೆ ತಂತಿ ಕಛೇರಿಯಲ್ಲಿ ಒಬ್ಬ ಕಾರಕೂನರಾಗಿ ತಮ್ಮ ಕೆಲಸವನ್ನು ಪ್ರಾರಂಭಿಸಿದ್ದರು. ೧೪ನೆ ವೇರ್ಗಾಗರಲ್ಲಿ ಇವರು ಜನಿಸಿದ್ದರು. ೧೯೪೫ರಲ್ಲಿ ಬರ್ಮಾ ಸೇನೆಯ ಲ್ಲಿವರು ಕರ್ನೇಲರಾಗಿ ನೇಮಕಗೊಂಡರು. ಈಗ ಬರ್ಮಾದ ಹೊಣೆಯನ್ನೇ ಹೊರಬಲ್ಲವರಾಗಿದ್ದಾರೆ. ಭಾಗ್ಯ ತೆರೆಯುವುದೆಂದರೆ, ಹೀಗೇ ತಾನೆ?

ರಾಜಕಾರಣ

(೧ನೇ ಪುಟದಿಂದ)

ಸಿದ್ದಾರೆ. ಪಾಕ್ ಜನತೆಯ ಹಿತಕ್ಕಾಗಿ ತಾನು ಮಾಡಿದ ಕಾರ್ಯವಿದೆಂದು ಅವರು ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡಿದ್ದಾರೆ. ಅಂತೂ ಪಾಕಿಸ್ತಾನ ಕೊನೆಗೂ ಸೇನಾಡಳತೆಗೊಳಪಡಲೇ ಬೇಕಾದ ದುರ್ಗತಿಯೊದಗಬಂತೇ ಬಂತು! ಇದರಿಂದಾಗಿ ಇನ್ನು ನೆರೆ ರಾಷ್ಟ್ರವು ನಿರಂಕುಶ ಶೃಂಖಲೆಯಡಿಗೆ ಧಾವಿಸುವುದು ತಿಳಿದುಬರುತ್ತಿದೆ. ೨೦ತೂ ಪಾಕಿಸ್ತಾನದ ನೆರೆಯವರಾದ ನಾವು ಈಗ ಎಚ್ಚರಗೊಳ್ಳಬೇಕಾದ ಪರಿಸ್ಥಿತಿ ಬಂದೊದಗಿದೆ. ಪಾಕಿಸ್ತಾನದ ಪರಿಸ್ಥಿತಿ ಹಾಗಾಗಬಾರದಿತ್ತು. ಆದರೆ ಸಂದರ್ಭವಿ ಒತ್ತಡದಿಂದಾಗಿ ಹಾಗಾಗಲೇ ಬೇಕಾಯಿತು. ಆದರೆ ಇನ್ನು ಮುಂದಾದರೂ ನೆರೆ ರಾಷ್ಟ್ರದ ಮುಂದಾಳುಗಳು ಯೋಗ್ಯ ಘಟನೆಯೊಂದನ್ನು ರೂಪಿಸಿ, ಜನಹಿತವನ್ನು ಸಾಧಿಸಲಿ, ಹಾಗೂ ಪಾಕಿಸ್ತಾನಕ್ಕೊದಗಿದ ಈ ಸ್ಥಿತಿ ಭಾರತಕ್ಕೂ ಬಟ್ಟದಿರಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥನೆ.

—ಎಸ್. ರಘುನಂದನ ರಾವ್,
ಕಲ್ಲೂರು.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳಿಗೂ,
ಸ್ಕೂಲ್ ಮೆಗಜಿನ್‌ಗಳಿಗೂ ಬುಕ್‌ವರ್ಕ್‌ಗೂ
ಚೆಲೋವಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ಕಾವ್ಯಪ್ರಕಾಶ

ಅಂತಿಮ ಕಾಲದಲ್ಲಿ ಸಧಿಕನ ನಿಷ್ಕಲಂಕತೆ

ತನ್ನ ಶತ್ರುವೂ ಅವನ ಕುಲವೂ ಬೇರು ಸಹಿತ ಸಕ್ತುಹೋದುದಕ್ಕೆ ರಾಜನಿಗೆ ಅತುಲಾನಂದ!

ರಾಜದೂತನು ಪಥಿಕನ ಅಪರಾಧವನ್ನು ಓದಿ, ಉತ್ತರಕ್ಕೋಸ್ಕರ ಪಥಿಕನನ್ನು ಕತೂಹಲ ಪೂರ್ಣ ದೃಷ್ಟಿಯಿಂದ ನೋಡತೊಡಗಿದನು ಪಥಿಕನು ಎದ್ದುನಿಂತು ಗಾಳಿದನು—"ನಾನು ನನ್ನ ಜೀವನದಲ್ಲಿ ಪ್ರಭು, ಪ್ರಜೆಯ ಹಿತವನ್ನು ಬಯಸಿದ್ದೆನು ಯಾವುದೇ ಅಪರಾಧವನ್ನು ನಾನು ಮಾಡಿರುವುದಿಲ್ಲ. ನನ್ನ ಅಂತರಾತ್ಮವು ನಾನು ನಿರ್ದೋಷಿಯೆಂದು ಸಾರಿ ಹೇಳುತ್ತಿದೆ. ಹಾಗಿರುವಾಗ ನಾನು ಕ್ಷಮೆಯಾಚನೆ ಮಾಡುವುದಾದರೂ ಏಂತು?"

ಪಥಿಕನ ಈ ಉತ್ತರವನ್ನು ಕೇಳಿದೊಡನೆಯೇ ತನ್ನ ಸಮೂಹ ಸಿಂತ್ವ ಹಿಂಡಾಲನನ್ನು ಕರೆದು ಪಥಿಕನ ಮತ್ರನ ತೀರ್ಪ್ಪಿಗೆ ಮಾಡಲು ಆಜ್ಞಾಪಿಸಿದನು. ಪೆರ್ಮ ಹಿಂಡಾಲನು ಸ್ತ್ರೀಯ ಸೊಂಟದಲ್ಲಿದ್ದ ಬಾಲಕನನ್ನು ಎಳೆದು ಹಿಡ್ಡದಿಂದ ಅವನ ತಲೆಯನ್ನ ಶತ್ತರಿಸಿ ಹಾರಿಸಿದನು. ನೆರೆದಿದ್ದ ಸ್ತ್ರೀಯರು ಈ ದಾರುಣ ದೃಶ್ಯವನ್ನು ಕಾಣಲಾರದೆ ಮೂರ್ಛಿತರಾಗಿ ಬಿದ್ದು ಬಿಟ್ಟರು. ಉಳಿದವರು ಭಯ ಮತ್ತು ಗ್ಲಾನಿಗಳಿಂದ ಕಂಪಿಸತೊಡಗಿದರು ರಾಜನ ಈ ಹೃದಯ ವಿದ್ರಾವಕ ಕಾರ್ಯವನ್ನು ಕೆಲವು ಯುವಕರು ಸಹಿಸಲಿಲ್ಲ. "ಈ ಅನ್ಯಾಯ ರಾಜನ ಜೀವನವನ್ನು ಹೀರಿರಿ" ಎನ್ನುತ್ತಾ ಅವರು ಜನ ಸಂದೋಹದ ನಡುವೆ ಕೂಗಾಡುತ್ತಾ ಮುಂದೆ ಬಂದರು ಯುವಕರ ಆವೇಶವನ್ನು ಕಂಡು ಪಥಿಕನೆ ಎದ್ದನು. ಅವರು ಕೈಯೆತ್ತಿ ಜೋರಿದರು— "ಸ್ತ್ರೀಯ ಸಹೋದರರೇ ಬಂದು ಕ್ಷಣ ಸಮ್ಮನಿದ್ದು ನನ್ನೆ ಜಾತಿಯನ್ನು ಕೇಳಿ ಕ್ರೋಧದ ಆವೇಶದಿಂದ ಯಾವುದೇ ಅಪರಾಧವನ್ನು ಮಾಡಬೇಡಿರಿ. ರಾಜ ದೂತನಾಗಲೀ ಹಿಂಡಾಲನಾಗಲೀ ರಾಜನ ಅಜ್ಞೆಯನ್ನು ಪಾಲಿಸಿದರಲ್ಲದೆ ಬೇರಾವ ಅಪರಾಧವನ್ನೂ ಮಾಡಿಲ್ಲ. ರಾಜಾಜ್ಞೆಗೆ ತಿರಸ್ಕಾರಗಾರವು ಅವರ ಕರ್ತವ್ಯವಾಗಿದೆ. ಆದುದರಿಂದ ಅವರ ಸ್ವಾಮಿ ಭಕ್ತಿಯನ್ನು ಅದರಿರಿ.

"ಪ್ರಪಂಚದಲ್ಲಿ ನನಗೆ ಯಾರೂ ಅಪರಾಧವೆಸಗಿಲ್ಲ "ನನ್ನ ಹೃದಯದಲ್ಲಿ ಪ್ರತೀಕಾರದ ಭಾವನೆಯಿಲ್ಲ. ಮಗನು ನನ್ನ ಕಂರವಾಗಿದ್ದನು. ಇಂದು ಆವನ ಮೂಲಕ ನನ್ನ ಸತ್ಯ ಪರೀಕ್ಷೆ ನಡೆಯಿತು. ಅದಕ್ಕೋಸ್ಕರ ರಾಜ ಸಿಟ್ಟಿಗೇಳಬೇಡಿರಿ. ನನ್ನ ಪ್ರಾಣವನ್ನು ಸಡೆಯುವುದರಿಂದ ರಾಜನ ಭಯವು ದೂರವಾಗುವುದಾದರೆ ನಾನು ಅದಕ್ಕೂ ಸಿದ್ಧನಿರುವೆನು. ಏಕೆಂದರೆ ಇದಕ್ಕಿಂತಲೂ ಮಿಗಿಲಾಗಿ ಈ ಶರೀರದ ಸದುಪಯೋಗವು ಎಂದಿಗೂ ಆಗಲಾರದೆ. ರಕ್ತ ಪಾತವು ಅಜ್ಞಾನ ಪ್ರತಿಫಲವಾದುದು ಸಂಕುಚಿತ ವಿಸ್ತೋವೃತ್ತಿಯನ್ನು ಪ್ರದರ್ಶಿಸುವುದು. ಶತ್ರುಗಳನ್ನು ತಮ್ಮ ಜಿತ್ರ ಶುದ್ಧಿಯಿಂದ ಗೆಲ್ಲುವುದೇ ಸಜ್ಜನರಿಗೊಂದು ಭೂಷಣ. ನನ್ನ ದುಃಖಕ್ಕೆ ನಾನೇ ಕಾರಣನಾಗಿದ್ದೇನೆ. ಹೀಗಿರುವಾಗ ನನ ಗೋಸ್ಕರ ನೀವು ಏಕೆ ಚಿಂತಿಸುತ್ತೀರಿ?

"ನಾನು ನನ್ನ ಕರ್ತವ್ಯವನ್ನು ಪಾಲಿಸಿದ್ದೇನೆ. ತನ್ನ ದೇಶಕ್ಕಾಗಿ ಜೀವವನ್ನು ಪಾಪುವುದು ಪ್ರತ್ಯೇಕ ದೇಶವಾಸಿಯ ಆದ್ಯ ಕರ್ತವ್ಯ. ಇದನ್ನು ಸ್ವಾರ್ಥವೆಂದು ವಿಳಿಯಬೇಡಿರಿ. ಕೋಪವೆಂಬುದು ಪಾಪಕ್ಕೆ ಮೂಲವು. ಆ ಕೋಪವು ನಮ್ಮಲ್ಲಿಯೇ ಇರುತ್ತದೆ. ಅದನ್ನು ನೀವು ಗೆದ್ದು ಕೊಂಡಿದ್ದಿಂದರೆ ಜಯಿಂಡ ಪ್ರಪಂಚವನ್ನು ನೀವು ಗೆಲ್ಲಬಲ್ಲಿರಿ. ಆತ್ಮಕ್ಕೆ ಆಪಮಾನವನ್ನು ತಂದುಕೊಳ್ಳಬೇಡಿರಿ. ನನ್ನ ಅಂತ್ಯ ಗಳಿಗೆಯಲ್ಲಿ ನನಗೋಸ್ಕರ ನೀವು ರಾಜನ ಮೇಲೆ ಹಿಂಸಾಚರಣೆಯನ್ನು ಮಾಡಬೇಡಿರೆಂದು ವಿನಂತಿಸಿಕೊಳ್ಳುತ್ತೇನೆ."

ಪಥಿಕನ ಈ ಮಾತುಗಳನ್ನು ಕೇಳಿ ಒಬ್ಬ ಸಾಧುವು ಆನಂದ ತುಂದಿಲನಾಗಿ ಕಣ್ಣೀರನು ಸುರಿಸುತ್ತಾ, ಜನರ ಗುಂಪಿನಿಂದ ಮುಂದೆದ್ದು ಬಂದನು. ಅವನು ಮತ್ತಾರೂ ಆಗಿರದೆ ಅಂದು ಸಮುದ್ರ ತಟದಲ್ಲಿ ಆತನಿಗೆ ಉಪದೇಶಿಸಿದ ಸಂತನೇ ಆಗಿದ್ದನು. ಅವನು ಪಥಿಕನ ಗುಣಗಳನ್ನು ಪ್ರಶಂಸಿಸುತ್ತಾ ಹೇಳತೊಡಗಿದನು- "ಮಗನೆ ನಿನ್ನ ಜೀವನ ಧನ್ಯವಾಯಿತು. ನೀನು ಪ್ರಪಂಚದಲ್ಲಿ ಹುಟ್ಟಿ ಅದನ್ನು ಕೀರ್ತಿಯಿಂದ ತುಂಬಿಸಿದೆ. ನಿನ್ನ ಚರಿತ್ರೆಯ ಸ್ಮರಣೆಯಿಂದ ದೇಶದ ದುಃಖವು ದೂರವಾಗುವುದು. ನಿನ್ನ ನಾಮೋಚ್ಚಾರಣೆಯಿಂದ ಪ್ರಪಂಚದ ಪಾಪವು ಹಾರಿ ಹೋಗುವುದು. ನನ್ನ ಇಚ್ಛೆಯು ಪೂರ್ಣಗೊಂಡಿತು.". ಈ ಮಾತುಗಳನ್ನೆಲ್ಲ ಹೇಳಿದ ಸಾಧುವು ಸಮಾಧಿಸ್ಥನಾಗಿ ಸ್ವರ್ಗವಾಸಿಯಾದನು.

ಪಥಿಕನಿಗೆ ಗುರುವಿನ ದರ್ಶನದಿಂದ ಆನಂದವಾಯಿತು. ಕೆಲಕ್ಷಣಗಳಿಗೆ ಹಿಂದೆ ಆತನಲ್ಲಿ ಗುರುವಿನ ದರ್ಶನದ ಆಸೆಯು ಉತ್ಪನ್ನವಾಗಿತ್ತು. ಪರಮಾತ್ಮನ ಕೃಪೆಯಿಂದ ಇವನ ಅಂತಿಮ ಇಚ್ಛೆಯು ಪೂರ್ಣವಾಯಿತು.

ಗುಂಪು ಸೇರಿದ್ದ ಜನವು ಇವೆಲ್ಲವನ್ನು ಕಂಡು ಕೆತ್ತಿಪ ಚಿತ್ರಗಳಂತೆ ಮೂಕರಾಗಿ ನಿಂತು ಬಿಟ್ಟರು. ಆಷ್ಟರಲ್ಲಿ ರಾಜ ಸೈನಿಕರು ಒಬ್ಬ ಚಂಡಾಲನೊಡನೆ ಅಲ್ಲಿಗೆ ಬಂದರು.. ಪ್ರೇಕ್ಷಕರಿಗೆ ಇವನ್ನು ನೋಡಲಾಗಲಿಲ್ಲ. ಆದುದರಿಂದ ಪಥಿಕನ ಆಶಯವನ್ನು ಸ್ಮರಿಸಿ ಕೋಪವನ್ನು ನುಂಗಿಕೊಳ್ಳುತ್ತಾ ಅವರು ಅಲ್ಲಿಂದ ದೂರ ಸರಿದರು.

ಈಗ ಪಥಿಕನ ಮನಸ್ಸು ಪ್ರಸನ್ನವಾಯಿತು. ಆತನ ಮುಖದಲ್ಲಿ ಚಿಂತೆಯ ಕುರುಹು ಎಲ್ಲಿಯೂ ತೋರಲಿಲ್ಲ. ಸೈನಿಕರು ಮತ್ತು ಚಂಡಾಲರು ಅವನ ಕಾಂತಿ ಮತ್ತು ನಿರ್ಭಯತೆಯನ್ನು ಕಂಡು ಆಶ್ಚರ್ಯ ಚಕಿತರಾದರು. ಚಂಡಾಲರು ತಮ್ಮ ಕಾರ್ಯವನ್ನು ಸೂರ್ಕೆ ಸಿದರು. ಪಥಿಕ, ಸಾಧು, ಸ್ತ್ರೀ, ಮತ್ತು ಬಾಲಕನ ಮೃತ್ಯುವಿನ ವರ್ತಮಾನವನ್ನು ಕೇಳಿ ಮಹಾರಾಜನು ಎಲ್ಲ ಆಪತ್ತುಗಳು ಒಂಜೇ ಬಾರಿಗೆ ದೂರವಾದುವೆಂದು ಹಿಂಹಿರಿ ಹಿಗ್ಗಿದನು.

(ಸಾಧಾರ)

— ಗೋರಾ, ಉಡುಪಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಥರು: ಷಾ ಕಂಪೆನಿ, ಮಂಗಳೂರು—1.

ಆರ್ಥಿಕ ಆಕರ

ಅಂತಾರಾಷ್ಟ್ರೀಯ ಹಣ ಕಾಸಿನ ನುಹಾವುಂಡಳದ ಸಾಧನೆ

ಖಾಸಗಿ ಕ್ಷೇತ್ರದಲ್ಲಿ ಹಣತೊಡಗಿಸುವ ಏಕಮಾತ್ರ ಅಂತರಾಷ್ಟ್ರೀಯ ಸಂಸ್ಥೆಯಿದು

ಅಂತಾರಾಷ್ಟ್ರೀಯ ಹಣಕಾಸಿನ ಕಾರ್ಪೊರೇಷನ್ (ಇಂಟರ್ ನ್ಯಾಷನಲ್ ಫೈನಾನ್ಸ್ ಕಾರ್ಪೊರೇಷನ್) ಪ್ರಪಂಚದ ನಾನಾ ಭಾಗಗಳಲ್ಲಿ ಹಣವನ್ನು ತೊಡಗಿಸುವ ಸಂಸ್ಥೆಯಾಗಿದೆ. ಪ್ರಪಂಚ ಬ್ಯಾಂಕಿನೊಂದಿಗೆ ಸಂಬಂಧಪಡೆದಿರುವ ಈ ಸಂಸ್ಥೆಯ ಬಂಡವಾಳ ೧೦ ಲಕ್ಷ ಡಾಲರುಗಳು. ಈ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಪಡೆದಿರುವ ೫೫ ರಾಷ್ಟ್ರ ಸರಕಾರಗಳು ಬಂಡವಾಳವನ್ನು ಹಾಕಿವೆ. ಪೂರ್ವಾಭಿವೃದ್ಧಿಯನ್ನು ಹೊಂದಿರದ ಸದಸ್ಯ ರಾಷ್ಟ್ರಗಳಲ್ಲಿ ಸರಕಾರವು ಭರವಸೆಯಿಲ್ಲದೆ ಆ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗಾಗಿ ಹಣ ತೊಡಗಿಸುವುದು, ಖಾಸಗಿ ಬಂಡವಾಳ ಮತ್ತು ಆಡಳಿತದೊಂದಿಗೆ ಪಾಲುಗೊಂಡು ಉತ್ಪನ್ನ ಪ್ರಧಾನ ಖಾಸಗಿ ಉದ್ಯಮಗಳಲ್ಲಿ ಹಣ ತೊಡಗಿಸುವುದು ಈ ಕಾರ್ಪೊರೇಷನ್ನಿನ ಮುಖ್ಯ ಉದ್ದೇಶವಾಗಿದೆ. ಅಂತಾರಾಷ್ಟ್ರೀಯ ಹಣಕಾಸಿನ ಕಾರ್ಪೊರೇಷನ್ ಖಾಸಗಿ ಬಂಡವಾಳದೊಂದಿಗೆ ಸ್ಪರ್ಧಿಸುವುದಿಲ್ಲ ಅಥವಾ ಖಾಸಗಿ ಉದ್ಯಮವು ಕಾರ್ಯ ನಿರ್ವಹಣೆಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸುವುದಿಲ್ಲ.

ಮುಖ್ಯವಾಗಿ ಅಂತಾರಾಷ್ಟ್ರೀಯ ಹಣಕಾಸಿನ ಕಾರ್ಪೊರೇಷನ್ ಹಣ ತೊಡಗಿಸುವ ಸಂಸ್ಥೆಯಾಗಿದೆಯೇ ಹೊರತು ಬಾಲ ನೀಡುವ ಸಂಸ್ಥೆಯಾಗಿಲ್ಲ.

ಪ್ರಪಂಚ ಬ್ಯಾಂಕಿನೆಂತಲ್ಲದೆ ಅಂತಾರಾಷ್ಟ್ರೀಯ ಹಣಕಾಸಿನ ಕಾರ್ಪೊರೇಷನ್ ಸರಕಾರದ ಪ್ರವೇಶವಿಲ್ಲದೆ ಖಾಸಗಿ ಉದ್ಯಮದೊಂದಿಗೆ ನೇರವಾಗಿ ವ್ಯವಹರಿಸುವುದು ಹಾಗೂ ಖಾಸಗಿ ಉದ್ಯಮಗಳಿಗೆ ಮಾತ್ರ ಹಣಕಾಸಿನ ನೆರವನ್ನು ನೀಡುವುದು. ಸರಕಾರಿ ಸ್ವಾಮ್ಯದ ಹಾಗೂ ಸರಕಾರದ ಅಧೀನದಲ್ಲಿ ಕೆಲಸಮಾಡುವ ಉದ್ಯಮಗಳಲ್ಲಿ ಕಾರ್ಪೊರೇಷನ್ ಹಣ ತೊಡಗಿಸುವುದಿಲ್ಲ. ಆದರೆ ಖಾಸಗಿ ವ್ಯವಸ್ಥಿಕರ ಹಣವನ್ನು ಕೊಂಚ ಮಟ್ಟಿಗೆ ಪಡೆದಿದ್ದರೂ ಪೂರ್ಣವಾಗಿ ಖಾಸಗಿಯ ದಾದ ಉದ್ಯಮದಲ್ಲಿ ಅಂತರಾಷ್ಟ್ರೀಯ ಹಣಕಾಸಿನ ಕಾರ್ಪೊರೇಷನ್ ಹಣತೊಡಗಿಸಲು ಅಭ್ಯಂತರವಿಲ್ಲ. ಈ ಅಂತರಾಷ್ಟ್ರೀಯ ಕಾರ್ಪೊರೇಷನ್ ಸರಕಾರಿ ಭರವಸೆಯನ್ನೇನೂ ಅಪೇಕ್ಷಿಸುವುದಿಲ್ಲ.

ಕಾರ್ಪೊರೇಷನ್ನಿನಿಂದ ಧನಸಹಾಯವನ್ನು ಅಪೇಕ್ಷಿಸಿ ಬಂದಿರುವ ಕಾರ್ಯ ಯೋಜನೆಯು ಕಾರ್ಪೊರೇಷನ್ನಿನ ಸದಸ್ಯ ರಾಷ್ಟ್ರದಲ್ಲಿ ಅಥವಾ ಸದಸ್ಯ ರಾಷ್ಟ್ರದ ಅಧೀನ ಕ್ಷೇತ್ರದಲ್ಲಿರಬೇಕು. ಈ ಕಾರ್ಪೊರೇಷನ್ ಪೂರ್ಣಾಭಿವೃದ್ಧಿ ಹೊಂದಿರದ ಆಫ್ರಿಕ, ಏಷಿಯಾ, ಪಶ್ಚಿಮ ಏಷಿಯಾ, ಆಸ್ಟ್ರೇಲಿಯಾ, ಲ್ಯಾಟಿನ್ ಅಮೆರಿಕಾ ಮತ್ತು ಯೂರೋಪಿನ ಕೆಲವು ಕ್ಷೇತ್ರಗಳಲ್ಲಿ ಸಾಮಾನ್ಯ ಹಣ ತೊಡಗಿಸುವುದು.

ಅಂತಾರಾಷ್ಟ್ರೀಯ ಹಣಕಾಸಿನ ಕಾರ್ಪೊರೇಷನ್ ಮುಖ್ಯವಾಗಿ ಕೈಗಾರಿಕೋದ್ಯಮಗಳಿಗೆ ಮಾತ್ರ ಹಣಕಾಸಿನ ನೆರವನ್ನು ನೀಡುವುದು. ಈಗಿರುವ ಉದ್ಯಮದ ವಿಸ್ತರಣೆ ಅಥವಾ ಸುಧಾರಣೆ ಅಥವಾ ಹೊಸ ಉದ್ಯಮದ ಸ್ಥಾಪನೆ ಈ ಒಕ್ಕೂಟ ಧನ ಸಹಾಯ ನೀಡುವುದು. ಏಮು ಲಕ್ಷ ಡಾಲರುಗಳಿಗಿಂತ ಕಡಿಮೆ ಸಾಲ್ಯದಷ್ಟು ಒಟ್ಟು ಆಸ್ತಿಗಳನ್ನು ಪಡೆದಿರುವ ಉದ್ಯಮಗಳಿಗೆ ಹಣಕಾಸಿನ ನೆರವನ್ನು ನೀಡಲು ಈ ಕಾರ್ಪೊರೇಷನಿಗೆ ಸಾಧ್ಯವಾಗುವುದಿಲ್ಲ

ಅಂತಾರಾಷ್ಟ್ರೀಯ ಹಣಕಾಸಿನ ಕಾರ್ಪೊರೇಷನ್ ಒಂದು ಉದ್ಯಮಕ್ಕೆ ತಗಲುವ ಒಟ್ಟು ವೆಚ್ಚದಲ್ಲಿ ಶುವಾಗಿ ಅರ್ಧದಷ್ಟನ್ನು ಮಾತ್ರ ಏಪಿಸಿಕೊಳ್ಳುವುದು ಸಾಮಾನ್ಯವಾಗಿ ಈ ಸಂಸ್ಥೆಯು ೧ ಲಕ್ಷ ಡಾಲರುಗಳಿಂದ ಇಪ್ಪತ್ತು ಲಕ್ಷ ಡಾಲರುಗಳಷ್ಟು ಹಣವನ್ನು ತೊಡಗಿಸುವುದು.

ಈ ಸಂಸ್ಥೆಯು ತೊಡಗಿಸುವ ಬಂಡವಾಳದ ಮೇಲೆ ಕೊಂಚ ಬಡ್ಡಿಯನ್ನು ಅಪೇಕ್ಷಿಸುವುದಲ್ಲದೆ ಹಣ ಪಡೆಯುವ ಉದ್ಯಮದ ಲಾಭ ಮತ್ತು ಅಭಿವೃದ್ಧಿಯಲ್ಲಿ ಪಾಲನ್ನು ಆಪೇಕ್ಷಿಸುವುದು. ಈ ಸಂಸ್ಥೆಯು ವಿಧಿಸುವ ಬಡ್ಡಿಯ ದರವನ್ನು ನಿರ್ದಿಷ್ಟಗೊಂಡಿಲ್ಲ. ಈ ಸಂಸ್ಥೆಯು ಅಮೆರಿಕಾದ ಡಾಲರುಗಳಲ್ಲಿ ಹಣವನ್ನು ತೊಡಗಿಸುತ್ತಿದೆ. ಕೊಂಚ ಮಟ್ಟಿಗೆ ಉಳಿದ ರಾಷ್ಟ್ರಗಳ ನಾಣ್ಯಗಳಲ್ಲಿ ಸಹ ಹಣವನ್ನು ತೊಡಗಿಸುವುದು.

ಮಕ್ಕಳ ಮಗ್ಗಿಪುಸ್ತಕ

(ನವಯುಗ ಪ್ರೆಸ್ ಕೊಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ.

ವಿಚಿತ್ರ ಸತ್ಯ

ಅಂಗವಿಹೀನರು ಮುಖಭಂಗಿತರಲ್ಲ!

ಹೆಲನ್ ಕೆಲ್ಲರ್ ಕುರುಡಿ, ಮೂಕಿ, ಕಿವುಡಿಯಾಗಿದ್ದರೂ ಸ್ವಶಕ್ತಿಯಿಂದ ಪ್ರತಿಭಾವಂತೆಯಾಗಿದ್ದಾಳೆ.

ಅಮೇರಿಕಾದ ವಿಶ್ವವಿಖ್ಯಾತ ಮಹಿಳೆಯರಲ್ಲಿ ಒಬ್ಬಳು ಹೆಲೆನ್ ಕೆಲ್ಲರ್. ಹೆಲೆನ್ ಕೆಲ್ಲರಳು ಮೂಕಿ, ಕಿವುಡಿ, ಕುರುಡಿ. ಆದರೆ ಅವಳಂತಹ ಪ್ರತಿಭಾವಂತ ಮಹಿಳೆ ಇಂದು ಬೇರೊಬ್ಬಳಿಲ್ಲ. ಅವಳು ಮೂಕಿಯಾಗಿದ್ದರೂ ಈಗ ಮಾತನಾಡಬಲ್ಲಳು. ಕಿವುಡಿಯಾಗಿದ್ದರೂ ಸ್ಪರ್ಶ ಶಕ್ತಿಯಿಂದ ಅಭಿವ್ಯಾಯವನ್ನು ತಿಳಿಯಬಲ್ಲಳು. ಕುರುಡಿಯಾದರೂ ಸೌಂದರ್ಯಾನುಭವವನ್ನು ಪಡೆಯಬಲ್ಲಳು. ಅವಳು ಇಂತಹ ಪ್ರೌಢಿಮೆಯನ್ನು ಗಳಿಸಿದ ಬಗೆಯು ನಿಜಕ್ಕೂ ಅದ್ಭುತವಾದುದು.

ಹೆಲೆನ್ ಕೆಲ್ಲರಳು ತನ್ನ ಒಂದೂವರೆ ವರ್ಷ ಪ್ರಾಯದಲ್ಲೇ ಕಾಯಿಲೆಗೆ ತುತ್ತಾಗಿ ಮೂಕಿ, ಕಿವುಡಿ ಹಾಗೂ ಕುರುಡಿಯಾದ ದೌರ್ಭಾಗ್ಯಕ್ಕೆ. ಮಾತನ್ನು ಕಲಿಯಲಾರಂಭಿಸಬೇಕಾದ ವರ್ಷ ಪ್ರಾಯದಲ್ಲೇ ಆಕೆ ಈ ಅವಸ್ಥೆಗೆ ಈಡಾದಳು. ಹೆಲೆನಳ ಆಕೆಯ ತಂದೆ ತಾಯಿಗಳಿಗೊಂದು ಹೊರೆಯಾಗಿ ಪರಿಣಮಿಸಿದಳು. ಅವರಿಗೆ ಈ ಹುಡುಗಿಯ ಭವಿಷ್ಯದ ಚಿಂತೆಯೇ ಅಧಿಕವಾಗಿ ಪರಿಣಮಿಸಿತು. ಕ್ಯಾಟ್ರಿಕಡೆಗೆ ಅವಳನ್ನು ಆನ್ ಸುಲ್ಲಿವೆನ್ ಎಂಬ ಅಧ್ಯಾಪಕಿಯ ಪಶ ಕೊಡಲಾಯಿತು. ಈ ಅಧ್ಯಾಪಕಿಯು ಸತ ಆರು ವರ್ಷಗಳ ತನಕ ಕುರುಡಿಯಾಗಿದ್ದು ಕೊನೆಗೆ ಸ್ವಾವಲಂಬಿಯಾದ ಒಬ್ಬಳು ಪ್ರತಿಭಾವಂತ ಮಹಿಳೆ. ಈಕೆಯು ಕುರುಡರ ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದಳು. ಈಕೆಯ ಪ್ರತಿಭೆಗೆ ಸಾಕ್ಷಿಯೆಂದರೆ ಇಂದು ಅನಳ ಪ್ರಧಾನದಿಂದ ಹೆಲೆನಳು ಒಬ್ಬಳು ವಿದ್ಯಾವಂತ, ಸುಸಂಸ್ಕೃತ ಹಾಗೂ ಸುಗುಣಶಾಲಿ ಮಹಿಳೆಯಾದುದು.

ಹೆಲೆನಳು ಬಾಲ್ಯದಲ್ಲಿ ವಿಪರೀತ ಹಟ ಸ್ವಭಾವದ ಹುಡುಗಿಯಾಗಿದ್ದಳು. ತನ್ನ ಅಭಿಲಾಷೆಗಳನ್ನು ಇತರರು ಅರ್ಥಮಾಡಿಕೊಳ್ಳದಿದ್ದಾಗ ಅವಳು ಸಿಟ್ಟಿನಿಂದ ಆಕಾಶಕ್ಕೆ ಹಾರುತಿದ್ದಳು. ಇವಳಿಗೆ ವರ್ತನೆ, ಪದ್ಧತಿ, ವಿಧೇಯತೆ, ಸಭ್ಯತೆಗಳ ಅರಿವೇ ಇರಲಿಲ್ಲ. ಗಂಟೆಗಟ್ಟಲೆ ಕೈಕಾಲು ಬಡಿಯುತ್ತಾ, ನೆಲದ ಮೇಲೆ ಹೊರಳಾಡುವಂತಹ ಒಬ್ಬಳು ವಿಚಿತ್ರ ಕೂಸಾಗಿದ್ದಳು.

ಸುಲ್ಲಿವೆನಳು ಹೆಲೆನಳಿಗೆ ಮೊತ್ತ ಮೊದಲು ಕಲಿಸಿದ ಪಾಠವೆಂದರೆ ವಿಧೇಯತೆ. ದೀರ್ಘಕಾಲದ ಶ್ರಮ, ಸಹನೆ ಹಾಗೂ ಸಾಧನೆಗಳ ಪ್ರತಿಫಲವಾಗಿ ಹೆಲೆನಳು ವಿಧೇಯತೆಯನ್ನು ಕಲಿತಳು. ಇತರರ ಸಂಕಷ್ಟವನ್ನು ಅರಿಯುವ, ಇತರರನ್ನು ಅರ್ಥ ಮಾಡಿಕೊಳ್ಳುವ ಗುಣ ಆಕೆಯಲ್ಲಿ ಮೊಳಕೆಯಿತು. ಪ್ರೀತಿ ಮತ್ತು ಸಹನೆಗಳೇ ಹೆಲೆನಳಲ್ಲಿ ಈ ಗುಣಗಳು ಮೊಳೆಯುವಂತೆ ಮಾಡಿದುವು.

ಹೆಲೆನಳು ಸುಲ್ಲಿವೆನಳ ಗೆಳತಿಯಾದಳು ಅಬಳಿಕ ಸುಲ್ಲಿವೆನಳು ಅಳಗೆ ಕೆಲವು ಶಬ್ದಗಳನ್ನು ಉಚ್ಚರಿಸಲು ಹೇಳಿಕೊಟ್ಟಳು. ಶಬ್ದಗಳ ಅರ್ಥ ತಿಳಿಯದೆ ಹೆಲೆನಳು ಶಬ್ದೋಚ್ಚಾರಣೆಯನ್ನು ಕಲಿತಳು. ಶಬ್ದಗಳ ಜಿಜ್ಞಾಸೆಯನ್ನು ಪ್ರತ್ಯಕ್ಷವಾಗಿ ಹೆಲೆನಳಿಗೆ ಆಕೆ ಮಾಡಿಸಿಕೊಟ್ಟಳು ನೀರನ್ನು ಮುಟ್ಟಿಸಿ ನಂತರ ನಿಧಾನವಾಗಿ w-a-t-e-r ಎಂದು ಹೇಳಿಸಿ ನಂತರ ಪದವನ್ನು ಜೆನ್ನಾಗಿ ಬೀಗದಿಂದ ಪುನರುಚ್ಚರಿಸುವಂತೆ ಮಾಡಿದಳು. ಈ ಬೋಧನಾ ಕ್ರಮವು ಹೆಲೆನಳಿಗೆ ರೂಢಿಸಿತು. ಆಕೆಯು ಉತ್ಸಾಹದಿಂದ ಇದೇ ರೀತಿ ಮೂವತ್ತು ಶಬ್ದಗಳ ಅರ್ಥ, ಪ್ರಯೋಗಗಳನ್ನು ಅಲ್ಪಾವಧಿಯಲ್ಲಿ ಕಲಿಯಲು ಶಕ್ತಳಾದಳು. ಜೆನ್ನಾಗಿ ಶಬ್ದಗಳನ್ನು ಉಚ್ಚರಿಸಲು ಶಕ್ತಳಾದಳು. ತಾಳ್ಮೆ, ಸಹನೆಗಳ ಪರೀಕ್ಷೆಗೆ ಸುಲ್ಲಿವೆನಳು ಒಳಗಾಗಿ ಬೇಕಾಯಿತು.

ಸ್ವಲ್ಪ ಸಮಯದಲ್ಲಿ ಉಬ್ಬಿದ ಅಕ್ಷರ (Raised letters)ಗಳ ಸಹಾಯದಿಂದ ಆಕೆ ಶಬ್ದಗಳನ್ನು ಜೆನ್ನಾಗಿ ಉಚ್ಚರಿಸುವಂತಾದಳು ಈ ಶಬ್ದಗಳ ಸಹಾಯದಿಂದ ಆಕೆ ಚಿಕ್ಕ ಪಟ್ಟ ವಾಕ್ಯಗಳನ್ನು ಉಚ್ಚರಿಸಲು ಶಕ್ತಳೆನಿಸಿದಳು.

ಶಬ್ದ ವಾಕ್ಯಗಳ ಅರ್ಥವೂ ಆಕೆಗೆ ಮಂಪಟ್ಟಾಯಿತು. ಕಾಲಕ್ರಮೇಣ ಆಕೆ ದೊಡ್ಡ ಅಕ್ಷರಗಳನ್ನು ಬರೆಯಲು ತೊಡಗಿದಳು. ಈ ರೀತಿ ಆಕೆ ಮಾತನಾಡಲು, ಬರೆಯಲು ಅರಂಭಿಸಿದಳು.

ಹೆಲೆನಳ ಕುತೂಹಲ ಹೆಚ್ಚಿತು ಇತರರಂತೆ ತಾನು ಕೂಡಾ ತನ್ನ ಸ್ವರದಲ್ಲೇ ಮಾತನಾಡಬೇಕೆಂಬ ಆಕೆ ಅವಳಲ್ಲಿ ಮೊಳೆಯಿತು. ಆದರೆ ಆಕೆ ಕಿವುಡಿಯಾದುದರಿಂದ ಶಬ್ದಗಳ ಉಚ್ಚಾರಣೆಯನ್ನು ಕೇಳುವಂತಿರಲಿಲ್ಲ. ಕುರುಡಿಯಾದುದರಿಂದ ಸ್ವರೋತ್ಪಾದಕ ಅಂಗಗಳ ಚಲನೆಯನ್ನು ನಿರೀಕ್ಷಿಸುವಂತೆಯೂ ಇರಲಿಲ್ಲ. ಹೀಗಾದರೆ ಆಕೆ ಹೇಗೆ ಮಾತನಾಡಲು ಕಲಿತಾಳು? ಆಕೆಯ ಅಧ್ಯಾಪಕಿಯೇ ಈ ಕೆಲಸಕ್ಕೆ ಪ್ರೋತ್ಸಾಹ ಈಯಲಿಲ್ಲ ಆದರೆ ಕಲಿಸಲು ತನ್ನ ಆಸೆಯನ್ನು ತ್ಯಜಿಸಲಿಲ್ಲ.

ತನ್ನ ಈ ಆಶೆಯ ಪೂರೈಕೆಗಾಗಿ ಆಕೆ ವಿನ್, ಫ್ಲೆರ್ ಎಂಬವಳನ್ನು ಆಶ್ರಯಿಸಬೇಕಾಯಿತು. ಸ್ನಲ್ಲರಳು ಹೆಲೆನಳ ಕೈಗಳನ್ನು ತಾನು ಮಾತನಾಡುವ ನೆಲೆಗೆ ತನ್ನ ಮುಖವನ್ನು ಪ್ರತಿಬಿಂಬಿಸುವಂತೆ ಮಾಡಿ ಮಾತನಾಡುವಾಗ ಅಂಗಗಳ ಚಲನೆಯ ಅನುಭವವನ್ನು ಮಾಡಿಸಿದಳು. ಈ ರೀತಿ ಹೆಲೆನಳು ಸ್ವರೋತ್ಪಾದನೆಯ ಗುಟ್ಟನ್ನು ಅರಿತಳು. ಆರು ವರ್ಷಗಳ ದಿರ್ಘ ಪರಿಶ್ರಮದಿಂದ ಮತ್ತು ಅಭ್ಯಾಸದಿಂದ ಆಕೆ ಮಾತನಾಡಲು ಕಲಿತು ಒಂದು ಸಾರ್ವಜನಿಕ ಭಾಷಣ ಮಾಡುವಷ್ಟರ ವರೆಗಿನ ನೈಪುಣ್ಯವನ್ನು ಗಳಿಸಿದಳು.

ತನ್ನ ಹದಿನಾಲ್ಕನೆ ವರ್ಷ ಪ್ರಾಯದಲ್ಲಿ ಹೆಲೆನಳು ಶಾಲೆಯನ್ನು ಸೇರಿದಳು. ಈ ಶಾಲೆಯು ಕಿವುಡರ ಶಾಲೆಯಾಗಿತ್ತು. ಅಲ್ಲಿ ಇತರ ವಿಷಯಗಳ ಜೊತೆಗೆ ಲೆಟಿನ್, ಫ್ರೆಂಚ್, ಜರ್ಮನಿ ಭಾಷೆಗಳನ್ನು ಅಭ್ಯಸಿಸಿದಳು. ತನ್ನ ಹದಿನಾರು ವರ್ಷ ಪ್ರಾಯದಲ್ಲಿ ಆಕೆ ಸಾಮಾನ್ಯ ಶಾಲೆಯನ್ನೇ ಸೇರಿದಳು. ಈ ಶಾಲೆಯಲ್ಲಿ ಸುಲ್ಲಿವೆನಳು ಆಕೆಗೆ ಅಧ್ಯಾಪಕರ ಮಾತುಗಳನ್ನು ಕೈಗಳ ಸಹಾಯದಿಂದ ತಿಳಿಯುತ್ತಿದ್ದಳು. ಏಳು ವರ್ಷಗಳ ಆಕೆ ಪ್ರಿಲಿಮಿನರಿ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದಳು.

ತನ್ನ ಹತ್ತೊಂಭತ್ತನೇ ವರ್ಷ ಪ್ರಾಯದಲ್ಲಿ ಹೆಲೆನಳು ಕೋಲೇಜನ್ನು ಸೇರಿ ತನ್ನ ವ್ಯಾಸಂಗವನ್ನು ಮುಂದರಿಸಿದಳು. ಶಾಲಾ ಭ್ಯಾಸ ಪಾಠ್ಯವಲ್ಲದೆ ಇತರ ಚಟುವಟಿಕೆಗಳಲ್ಲೂ ಆಕೆಗೆ ಆಸಕ್ತಿ ಇತ್ತು. ಆಕೆ ಈಜು, ಸೈಕಲು ಬಿಡಲು ಕುದುರೆ ಸವಾರಿ ಮಾಡಲು ಕಲಿತಳು. ವಾಚನಾಲಯದ ಪುಸ್ತಕ ಓದುತ್ತಿದ್ದಳು. ಮಾತ್ರವಲ್ಲ ತಾನೇ ಸ್ವತಃ ಅನೇಕ ಗ್ರಂಥಗಳನ್ನು ಬರೆದಳು. ಇಂದು ಹೆಲೆನಳು ಏನು ಬೇಕಾದರೂ ಮಾಡಬಲ್ಲಳು. ಆಕೆ ವೃದ್ಧೆಯಾಗಿದ್ದಾಳೆ. ಆಕೆ ಎಲ್ಲಾ ದೇಶಗಳನ್ನೂ ಸಂಚರಿಸಿದ್ದಾಳೆ. ಎಲ್ಲಾ ಭಾಷೆಯ ಜನರನ್ನೂ ತಿಳಿದಿದ್ದಾಳೆ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಂಡ ವಿಚಿತ್ರ ಮಹಿಳೆ ಹೆಲೆನ್ ಕೆಲ್ಲರ್. ಆಕೆಯ ಜೀವನ ಅಂಗವಿಕಲರಿಗೊಂದು ಆಶ್ವಾಸನೆ!

ನಗರಸಭೆಯ ಒಂದು ಬತ್ತವಿದು. ಇಂತಯದೇ ಸಭೆಗಳ ಅನವರತ ಪರಿಶ್ರಮದ ಪರಿಣಾಮವಾಗಿ ಇತ್ತೀಚೆಗೆ ಅಲಾಸ್ಕಾದಲ್ಲಿ ಚುನಾವಣೆಯು ನಡೆದು, ಅದು ಅಮೆರಿಕೆಯ ಸಂಯುಕ್ತ ರಾಷ್ಟ್ರಗಳೊಡನೆ ಸೇರುವ ನಿಶ್ಚಯ ಮಾಡಿತು.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸ್ಥಿರ ಠೇವಣಿಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.	
3 ತಿಂಗಳಿಗೆ	3%
4 ರಿಂದ 6 ,,	3½%
7 ,, 12 ,,	4%
13 ,, 24 ,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ	2½%
ಕರೆಂಟ್ ಎಕೌಂಟು	½%

The Moolky Bank, Ltd

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಚ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಬೆಲೆ ರೂ. ೧-೫೦.

ಪುಟಗಳು: ೧೫೪.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಕ್ಷಾ.**

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಕುಂದಾಪುರ ಡಿ ನು. ಕೋರ್ಟಿನಲ್ಲಿ

R. E. P. 658/1958 O. S. 273/57.

ಇಂತ್ರು ಮನುವೆಲ್ ರೇಗೊ ಕೂಡಾ. ಇವರ ಪವರ್ ಆಫ್ ಎಟೊರ್ನಿ ಹೋಲ್ಡರ್ ಕೆವಿಂಡ್ ಫಾದರ್ ಪಿ ಡಿ. ಜಿ. ರೇಗೊ.

—ಅರ್ಜಿದಾರರು.

ಬಲೀಫ್ ಬಾಕ್ಯಾ ಸಾಹೇಬ —ಎದ್ರಿ.
ಎದ್ರಿಗೆ ತಿಳಿಸುವದೇನೆಂದರೆ.

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ದಿಕ್ಕಿ ಹೊಂದಿದವನಾದ ಅರ್ಜಿದಾರನು ಸ್ತಿರಾಸ್ತಿ ವಿಲ್ಕಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದ್ದರಿಂದ ವಿಕ್ರಯದ ಇಸ್ಕಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾರೀಕು 1-11-58ಕ್ಕೆ ಇಹೋಣಾಗಿಯೆಂದೆ ಈ ಮೂಲಕ ತಿಳಿಸೋಣಾಗುತ್ತದೆ.

M. Ananthaya,
Advocate for Petitioner.

ಮೊಕ್ಕಾಂ ಕುಂದಾಪುರ, ತಾ. 8-10-58.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

NAVAYUGA REGD. NO. M. 3618 | **UDIPI, THURSDAY** 16-10-1958 | **LICENSE NO. 31** Licensed to Post without Prepayment

ದೇಶ ಪರಿಚಯ

ಅರಬರ ಪ್ರಧಾನ ದೇಶವಾದ ತುರ್ಕಿ

ಅನಾಗರಿಕ ಜನಾಂಗವು ನಾಗರಿಕತೆಯ ದ್ವಾರವನ್ನು ಪ್ರವೇಶಿಸುತ್ತಿದೆ.

ತುರ್ಕಿಯ ಸಾಮ್ರಾಜ್ಯವನ್ನು ಸ್ಥಾಪಿಸಿದ ತುರ್ಕೀಯರು ಯುದ್ಧಪ್ರಿಯ ಜಾತಿಯ ಜನರು. ಈ ತುರುಕರು ಮಧ್ಯ ಏಷ್ಯಾ ಖಂಡದಿಂದ ಪಶ್ಚಿಮ ದಿಕ್ಕಿಗೆ ದಂಡೆತ್ತಿ ಬಂದವರಾಗಿರುವರು. ಸುಮಾರು ೨ ಸಾವಿರದಿಂದ ನಾಲ್ಕು ಸಾವಿರದ ಜನರ ಮಟ್ಟಿಗೆ ಹೆನ್ನೆರಡನೇ ಶತಮಾನದಲ್ಲಿ ದಂಡೆತ್ತಿ ಬಂದವರಾಗಿರುವರು. ಆ ಕಾಲದಲ್ಲಿ ಅಲ್ಲಿ ರಾಜ್ಯವಾಳುತ್ತಿದ್ದ ಸೆಲುಕ್ಯಾ ಮನೆತನದ ರಾಜನು ಆಂತಾರ್ದ ಸಮಿಪ ಈ ಜನರಿಗೆ ವಲಸೆ ಹೋಗಲು ಸ್ವಲ್ಪ ಸ್ಥಳವನ್ನು ಕೊಟ್ಟನು. ಹೀಗೆ ವಲಸೆಯಾದ ತುರುಕರ ಮುಖ್ಯಸ್ಥನಾದ ಒತ್ತೋಮನ್ ಎಂಬವನು ಆ ಕಾಲದ ಅಲ್ಲಿನ ವಿದ್ಯಮಾನವನ್ನು ಕಂಡುಕೊಂಡು ಸ್ವಲ್ಪ ಕಾಲ ದಾಟುತ್ತಲೇ ತನ್ನ ಕುಲದವರಿಗೆ ಕೊಟ್ಟ ಸ್ಥಳವನ್ನು ವಿಸ್ತರಿಸುವ ಹಿರಿದಾಶೆಯುಳ್ಳವನಾಗಿ ಅಸುಪಾಸಿನ ಪ್ರಾಂತಗಳನ್ನು ಆಕ್ರಮಿಸ ತೊಡಗಿದನು. ಈ ರೀತಿ ತನ್ನ ಆಕ್ರಮಿತ ಕ್ಷೇತ್ರಗಳ ನ್ನು ವಿಸ್ತರಿಸುತ್ತಾ ಹೋಗಿ ಕೊನೆಗೆ ಸೆಲುಕ್ಯಾ ಸಾಮ್ರಾಜ್ಯವನ್ನೇ ತನ್ನ ಅಧೀನ ಮಾಡಿಕೊಂಡನು. ಆಸ್ಯಾ ಖಂಡದ ಪಶ್ಚಿಮ ಭಾಗವನ್ನೆಲ್ಲಾ ತನ್ನ ಆಡಳಿತೆಗೆ ಒಳಪಡಿಸಿಕೊಂಡು ಐರೋಪ್ಯ ಖಂಡಕ್ಕೆ ಧಾಳಿಯಿಟ್ಟನು. ಕಾನ್ಸ್ಟೆಂಟಿನೋಪಲ್ ಎಂಬಅಭೇದ್ಯ ಕೋಟೆಯು ಕ್ರೈಸ್ತ ಸಾಮ್ರಾಜ್ಯಕ್ಕೆ ಸುಮಾರು ಒಂದು ಸಾವಿರ ವರುಷಗಳ ವರೆಗೆ ರಕ್ಷಣೆ ಕೊಟ್ಟದ್ದು ಸುಮಾರು ೧೪ನೆಯ ಶತಮಾನ ತುರುಕರ ವಶವಾಯಿತು. ಒತ್ತೋಮನ್ ತುರುಕರು ತಮ್ಮ ರಾಜ್ಯವನ್ನು ವಿಸ್ತರಿಸಿದ್ದಲ್ಲದೆ ತಮ್ಮ ಮತವನ್ನು ವಿಸ್ತರಿಸಲು, ಜನರ ಮೇಲೆ ಅದನ್ನು ಒತ್ತಾಯದಿಂದ ಹೇರಲು ಪ್ರಯತ್ನಪಟ್ಟರು.

ತುರುಕರು ಅನಾಗರಿಕರಂತಿರುವವರು ನಾಗರಿಕತೆಯ ಬೆಳವಣಿಗೆಯು ಅವರಲ್ಲಿ ಬಹು ನಿಧಾನವಾಗಿರುವದು. ಈ ಕಾರಣ ದಿಂದ ತಾವು ಗೆದ್ದ ರಾಷ್ಟ್ರಗಳನ್ನು ಬಲ ಪಡಿಸಿ ಇಟ್ಟುಕೊಳ್ಳಲು ಸಾಧ್ಯವಾಗದೆ ಕಳಕೊಳ್ಳುತ್ತಾ ಬಂದರು. ಕೊನೆಗೆ ಅವರ ಸಾಮ್ರಾಜ್ಯವೆಂಬುದು ಪಶ್ಚಿಮ ಆಸ್ಯಾ ಖಂಡದ ತುದಿ ಮತ್ತು ಐರೋಪ್ಯ ಖಂಡದಲ್ಲಿ ಕೆಲವು ಮೈಲುಗಳಷ್ಟು ವಿಸ್ತೀರ್ಣದ ಸ್ಥಳ ಮಾತ್ರವಾಗಿರುತ್ತದೆ. ಆದ್ದರಿಂದ ತುರ್ಕಿ ರಾಜ್ಯವೆಂಬುದು ಐರೋಪ್ಯದವರ ಕಣ್ಣಿಗೆ ಒತ್ತೊಂತ ಒಂದು ಕುತ್ತವಾಗಿ ತುರ್ಕಿಯನ್ನು ಯುರೋಪಿನ ರೋಗಿ ಎಂದು ಕರೆದಿರುವರು. ಇವರ ಆರ್ಥವು ಇವರು ಯಾವಾಗಲೂ ಕಾಯಿಲೆ ಗೃಷ್ಠರು, ಯಾವ ಕಾರ್ಯವೂ ಇವರಿಂದ ಸಾಗದು ಎಂಬುದಾಗಿದೆ.

ಮಹಮ್ಮದೀಯ ಮತವನ್ನು ಶಾಸನ ಪ್ರಕಾರ ಪ್ರಾಣಿಗಳಿಗೆ ಹಿಂಸೆ ಕೊಡಕೂಡದೆಂದಿರುವದಾದರೂ ಬೀದಿಯಲ್ಲಿ ಅಲೆದಾಡಿ ಬೀದಿಯ ಕೊಳಕನ್ನು ತೆಗೆದು ಚೊಕ್ಕಟ ಮಾಡುವ ನಾಯಿಗಳನ್ನು ಬಹುದೂರದೊಂದು ದ್ವೀಪಕ್ಕೆ ಒಯಿದು ಆಹಾರವಿಲ್ಲದೆ ಅವುಗಳು ಅಲ್ಲಿಯೇ ಸಾಯಲು ಬಿಡಲು ಅವರು ಹೇಸುವದಿಲ್ಲ.

ತುರುಕರು ಯಾವಾಗಲೂ ಕಪ್ಪು ದುಸ್ತನ್ನು ಧರಿಸುವರು. ವಿಲಾಸದ ಗೊಂಡೆಯಿರುವ ಟೋಪಿಯನ್ನು ಹಾಕುವರು ಇದನ್ನೆ ಫೆಜ್ ಟೊಪ್ಪಿ ಎಂದು ಕರೆಯುವರು. ತುರುಕರ ಹೆಂಗಸರು ಬಹಳ ಜಾಗರೂಕತೆಯಿಂದ ಜೀವಿಸುವರು. ಸ್ತ್ರೀ ಕುಟುಂಬದವರು ಎಂದರೆ ಒತ್ತೆ. ಚಿಕ್ಕತಾಯಿ, ಅತ್ತಿಗೆ, ನಾದಿನಿಯರು ವಗೈರೆಯವರು ತಮಗೆ ಪ್ರತ್ಯೇಕವಾಗಿ ಇರಿಸಲ್ಪಟ್ಟ ಒಂದು ಭಾಗದ ಮನೆಯಲ್ಲಿ ಉಳಕೊಳ್ಳುವರು. ಈ ಸ್ಥಳಕ್ಕೆ ಜನಾನಾ ಅಥವಾ ಅಂತಃಪುರವೆಂದು ಕರೆಯುವರು. ಈ ಸ್ಥಳಕ್ಕೆ ಸಮೂಹದ ಸಂಬಂಧಿಕರಲ್ಲದೆ ಬೇರೆಯಾರಿಗೂ ಪ್ರವೇಶವಿಲ್ಲ. ಅಲ್ಲಿ ಅವರಿಗೆ ಬೇಕಾದ ಅನುಕೂಲತೆಗಳಿವೆ. ಅವರು ಹೊರಗೆ ಹೋಗುವಾಗ ಮುಸುಕನ್ನು ಅಂದರೆ ಪರದೆಯನ್ನು ಹಾಕಿಕೊಳ್ಳುವರು. ಕಣ್ಣುಗಳನ್ನು ಮಾತ್ರ ಮುಚ್ಚಿಕೊಳ್ಳುವದಿಲ್ಲ. ಈ ಮುಸುಕಿಗೆ ಚಾರ್ ಚಾಫ್" ಎನ್ನುವರು. ಇವರು ಹೊರಗೆಹೋಗುವಾಗ ಹೆಚ್ಚಾಗಿ ವಾಹನಗಳವೇಲೆಯೇ ಹೋಗುವವರು ಸಂದರ್ಭಾನುಸಾರ ಕಾಲು ನಡೆಯಲ್ಲಿ ಹೋಗುವದಾದರೆ ಒಬ್ಬ ಗಂಡಸು ಸೇವಕನು ಹಿಂದಿನಿಂದ ಹಿಂಬಾಲಿಸಿಕೊಂಡು ಹೋಗುವನು.

ತುರುಕರಿಗೆ ಮಕ್ಕಳೆಂದರೆ ಅತಿ ಪ್ರೀತಿ ಅವುಗಳನ್ನವರು ಮಮತೆಯಿಂದ ಆರಿದಿಂದ ಸಾಕುವರು. ಒಬ್ಬ ತುರುಕನು ಒಂದು ಹೆಂಡತಿಗಿಂತ ಹೆಚ್ಚು ಮದುವೆಯಾಗಬಹುದೆಂದು ಶಾಸ್ತ್ರವಿನಾಯತಿಯನ್ನು ತುಂಬಾ ಉಪಯೋಗಿಸಿಕೊಳ್ಳುವರು. ಒಬ್ಬ ತುರುಕನು ನಾಲ್ಕು ಹೆಂಡಂದಿರನ್ನು ಒಂದೇ ಸಮಯದಲ್ಲಿ ಬಾಳಿಸಿದರೆ ತಪ್ಪಿಲ್ಲವೆಂದಿರುವ ಕಾರಣ ನಿಕ ಪತ್ನಿ ನೃತವು ಅವರಲ್ಲಿ ಆಚರಣೆಯಲ್ಲಿಲ್ಲ, ಆದ್ದರೇ ಕೆಲವು ಶ್ರೀಮಂತ ತುರುಕರು ಉಪಪತ್ನಿಯರನ್ನು ಯಿಟ್ಟುಕೊಂಡದ್ದೂಯಿದೆ.

ತುರ್ಕಿಯು ಒಂದು ವ್ಯವಸಾಯಗಾರರ ರಾಜ್ಯ ಕೃಷಿ ರಾಜ್ಯದಲ್ಲಿ ಒಕ್ಕಲಿಗರು ಮತ್ತು ಸಣ್ಣ ಸಣ್ಣ ಸಾಗ್ವಳ್ಳಿದಾರರ ಸಂಖ್ಯೆಯೇ ಜಾಸ್ತಿ. ಗಂಡಸರು ನೀಲಿಬಣ್ಣದ ಅಂಗಿ ಒಂದು ಕೆಂಪುಬಣ್ಣದ ನಡುಕಟ್ಟು, ಸಡಿಲಾದ ಕಪ್ಪುಚೆಣ್ಣ ತಲೆಗೊಂದು ವಸ್ತ್ರವನ್ನು ರುಮಾಲಿನಂತೆ ಸುತ್ತಿ ಕೆಲಸಕ್ಕೆ ಹೋಗುವರು. ಅವರು ಅವರು ಉಪಯೋಗಿಸುವ ಸಾಧನಗಳೆಲ್ಲವುಗಳೂ ಪ್ರಾಚೀನಕಾಲದ ನಮೂನೆಯ ಗಳು ಬಹುಕಷ್ಟ ಪಟ್ಟು ಬೇಸಾಯಮಾಡುವರು ಈ ಬಗ್ಗೆ ಹೆಂಗಸರು ಮಕ್ಕಳ ಸಹಾಯವನ್ನು ಪಡೆಯುವರು. ಇವರಲ್ಲಿ ಹೆಚ್ಚಿನವರು ನಿರಕ್ಷರರಾದ ಕಾರಣ ಬರ ಹಗಾರರ ಸಹಾಯ ಯಾವಾಗಲೂ ಬೇಕೇ ಬೇಕು.

ಆವರು ಊಟಮಾಡುವ ಕ್ರಮದಲ್ಲಿ ಒಂದು ವಿಶೇಷತೆಯಿದೆ. ದೊಡ್ಡಪಾತ್ರೆಗಳಲ್ಲಿ ಆಹಾರ ತಯಾರಿಸಿ ಒಂದು ಬೋಗುಣಿ ಅಥವಾ ಬಟ್ಟಲಿನಲ್ಲಿ ಬಡಿಸಿ ಒಂದು ಪೀಠದ ಮೇಲೆ ನೆಲದಲ್ಲಿಡುವರು ಇದಕ್ಕೆ ಸುತ್ತುಕಟ್ಟೆ ಲೋಡಿನ ಮೇಲೆ ಕೂತುಕೊಂಡು ಕೋಡಿನಿಂದ ತಯಾರಿಸಿದ ಚಮಚೆಯಿಂದ ಆಹಾರ ತೆಕ್ಕೊಳ್ಳುವರು. ಕೆಲವುಕಡೆ ಮೇಜು ಮತ್ತದರ ಮೇಲೆ ವಸ್ತ್ರವಿರುವುದಾದರೂ ಆ ವಸ್ತ್ರವನ್ನು ಮೇಜಿನ ಅಡಿಯಿಟ್ಟು ಊಟಮಾಡುವರು ಊಟದಲ್ಲಿ ಸಿಕ್ಕಿದ ಎಲುಬಿನ ಚೂರುಗಳನ್ನು ಆ ವಸ್ತ್ರದ ಮೇಲೆ ಹಾಕುವರು.

ಶ್ರೀಮಂತರಲ್ಲಿ ಒಳ್ಳೆಯ ನೇಜುವಸ್ತ್ರ ಚಮಚೆ ವಗೈರೆ ಊಟದ ಸಲಕರಣೆಗಳಿರುವುವು. ಅವರು ಮಾಂಸಾಹಾರಿಗಳು, ಆದರಲ್ಲಿ ನೆಚ್ಚಿನ ಮಾಂಸವು ಕುರಿ ಮಾಂಸ. ಹೆಚ್ಚಾಗಿ ಅವರು ಪಿಲಾವು ಅಂದರೆ ಅನ್ನ ಮಾಂಸ ಒಟ್ಟಿಗೆ ಎಣ್ಣೆ ಅಥವಾ ತುಪ್ಪದಲ್ಲಿ ತಯಾರಿಸಿ ಊಟಮಾಡುವರು. ಮದ್ಯಪಾನವು ಶಾಸ್ತ್ರದಲ್ಲಿ ನಿಷೇಧಿಸಿದ ಕಾರಣ ಹೆಚ್ಚಾಗಿ ಕಾಫಿ ಕುಡಿಯುವರು. ಕೆಲವು ಸಮಯ ಆರೋಗ್ಯಕ್ಕೆ ಹಿತಕರವೆಂದು ಹುಳಿಮಜ್ಜಿಗೆ—ಇದಕ್ಕೆ ಯಾಗ್ಹೂರ್ಟ್ ಎನ್ನುವರು—ಇದನ್ನು ಕುಡಿಯುವರು.

ತುರುಕರು ಸತ್ಯವಂತರು; ಅಪರಿಚಿತರಿಗೆ ದಯಾಳುಗಳು, ಯುದ್ಧದಲ್ಲಿ ಕಡು ವೈರಿಗಳು. ಸ್ತ್ರೀಯರನ್ನು ಆದರದಿಂದ ನೋಡುವರು. ಸ್ತ್ರೀಯರ ಕೈಯನ್ನು ಎತ್ತಿ ತಮ್ಮ ಹಣೆಗೆ ಚಾಚಿ ನೆವಸ್ಕಾರ ಸೂಚಿಸುವರು. ಅವರ ಆತಿಥ್ಯ ಉಪಚಾರದ ಮಾತುಗಳು ಹೆಸರಾಂತವು. ಊಟವಾದೊಡನೆ "ಒಳ್ಳೇದಾಗಲಿ" "ದೇವರು ನಿನಗೆ ದಯ ತೋರಲಿ" ಇಂಥಾ ಎಷ್ಟೋ ಮಾತುಗಳನ್ನು ಸ್ನೇಹಿತರು ಹೇಳುವರು. ಭಿಕ್ಷುಕನಿಗೆ ಧರ್ಮ ನೀಡಿದ ಕೂಡಲೇ "ಅಲ್ಲಾನು ನಿನಗೆ ಫಲಕೊಡಲಿ" ಎನ್ನುವರು. ತುರುಕರು ನಿಷ್ಠಾವಂತರು ಎಲ್ಲಿಯೇ ಇರಲಿ ದಿನಕ್ಕೆ ಐದು ಬಾರಿ ಮೆಕ್ಕದ ಕಡೆಗೆ ಮುಖವಾಗಿ ಪ್ರಾರ್ಥನೆಯೈಯುವರು.

ಕಳೆದ 1ನೇ ಮಹಾಯುದ್ಧದ ನಂತರ ತುರುಕರ ನಡತೆ ರೀತಿಗಳಲ್ಲಿ ಪಕ್ಕನೆ ಬದಲಾಯಿಸಿತು. ಹಳೇ ಪದ್ಧತಿಯನ್ನು ಬಿಟ್ಟು ಆಧುನಿಕ ಕ್ರಮ ಅನುಸರಿಸಿದರು. ಹೆಂಗಸರು ಜನಾನಾದಲ್ಲಿರುವ ಬದಲಿಗೆ ತಮ್ಮ ಗಂಡ ಮತ್ತು ಮಕ್ಕಳೊಂದಿಗೆ ಬೀದಿಯಲ್ಲಿ ಮುಸುಕು ಹಾಕಿಕೊಳ್ಳದೆ ತಿರುಗಾಡಲು ಹೋಗುವರು. ಗಂಡಸರು ಫೆಜ್ ಟೋಪಿ ಹಾಕುವದಿಲ್ಲ. ಇದು ಕಾನೂನಿನಿಂದ ನಿಷೇಧಿಸಲ್ಪಟ್ಟಿದೆ. ಹೆಂಗಸರು ಐರೋಪ್ಯದವರಂತೆ ದುಸ್ತು ಮಾಡತೊಡಗಿದರು. ಹೆಂಗಸರು ಆಫೀಸು ಅಂಗಡಿಗಳಲ್ಲಿ ದುಡಿಯಲಾರಂಭಿಸಿದರು. ಹಳ್ಳಿಗಳಲ್ಲಿ ಹೆಂಗಸರು ಈಗಲೂ ಹಳೇ ಪದ್ಧತಿಯಂತೆ ನಡೆಯುವರು. ಹಿಂದಿನ ತುರ್ಕಿಯನ್ನು ನೋಡಿದವನು ಈಗ ಅಲ್ಲಿಗೆ ಹೋದರೆ ತಾಕಂಡ ತುರ್ಕಿಯು ಇದೇಯೇ ಎಂಬ ಸಂಶಯ ಆವನಲ್ಲಿ ಮೂಡಿಬರಬಹುದು.

ಶ್ರೀ ಸಿ. ಎಚ್. ಶೆಟ್ಟಿ, ಬೈಂದೂರು.

ಪ್ರಕಟಣೆ

ಕುಂದಾಪುರ ತಾಲೂಕು, ನಂದ್ರ 14ನೇ ನಾವುಂದ ಗ್ರಾಮದ, ಸ. ನಂ. 194 ಸ. ದಿ. ನಂ. 5 ಪುಂಜ (ಡಾಡಿ) ಮತ್ತು 44.3 ಬಾಗಾಯ್ತು, ಇವರಲ್ಲಿರುವ ಕಟ್ಟಡಗಳು ಬಾವಿ ವಗೈರೆಗಳ ಮೇಲೆ ಈ ಕೆಳಗೆ ಹೆಸರು ಕಾಣಿಸಿದವರುಗಳ ಅನುಮತಿ ಇಲ್ಲದೆ, ಸಾಲ ಅಡವು ಈಡು ಮಾಡಿದರೆ ಯಾ ಸ್ಥಿರ-ಚರಸೊತ್ತುಗಳನ್ನು ಪರಾಧೀನ ಮಾಡಿದರೆ ಅಮ ಯಾರಿಗೂ ನಿಂಧುವಾಗ ತಕ್ಕದ್ದಲ್ಲವೆಂದು ತಾರೀಖು 25-5-1956ರ ರಿಜಿಸ್ಟ್ರಾರ್ ಕಛೇರಿಯ ಮೇರೆಗೆ ಈ ಮೂಲಕ ಲೆಟಿಸೋಣಾಗಿದೆ.

1. ನಾವುಂದ ನಾರಾಯಣ ಆರ್. ಸುವರ್ಣ.
2. ನಾವುಂದ ಕುಪ್ಪಯ್ಯ ಆರ್. ಸುವರ್ಣ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್,

ಮಂಗಳೂರು ಶಾಖೆಗಳು
ಹಂಪನಕಟ್ಟೆ . ಬಂದರ

ಪ್ರಧಾನ ಕಾರ್ಯಾಲಯ
ಮುಕುಂದ ನಿವಾಸ, ಉಡುಪಿ.

ಬೆಂಗಳೂರು
ಮುಂಬಯಿ ಕೊಚ್ಚಿ
ಹೈದರಾಬಾದು * ಮದರಾಸು.

THE CANARA INDUSTRIAL & BANKING SYNDICATE LTD., UDIPI.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಏತಾಳ, ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited Printed & Published by K. H. Shetty, at the Navayuga press Udipi S. India

ಸಾಯುಧ

ವಾ.ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ.ಪೈಸೆ.

ವರುಷ ೩೮. ವಾರ ೮. 23-10-1958 Vol. 38. No. 8.

ಕಾಂಗ್ರೆಸಾಧಿವೇಶನ

ತೃತೀಯ ಯೋಜನೆಯ ರೂಪರೇಷೆಗಳ ರಚನೆ

ಭೂಸುಧಾರಣೆಯನ್ನು ಮಾಡುವಂತೆ ರಾಜ್ಯಸರಕಾರಗಳ ಮೇಲೆ ಒತ್ತಾಯ

ಅಕ್ಟೋಬರ ೪ರಂದು ಹೈದರಾಬಾದಿನಲ್ಲಿ ಸಮಾಗಮಿಸಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ತೃತೀಯ ಪಂಚವಾರ್ಷಿಕ ಯೋಜನೆಯ ಕುರಿತಾಗಿ ಮೂಲ ಸಿದ್ಧಾಂತಗಳನ್ನು ನಿರೂಪಿಸಲಾಗುವುದು ಅಲ್ಲದೇ ಈ ಆಧಾರಭೂತ ಸಿದ್ಧಾಂತಗಳ ಬಲದಿಂದಲೇ ಮೂರನೆಯ ಯೋಜನೆಯ ಪೂರ್ವರೂಪವನ್ನು ಸಿದ್ಧಪಡಿಸಲಾಗುವುದು.

ಕಾಂಗ್ರೆಸ್ ಮಹಾಸಭೆಯ ಕಾರ್ಯಾಲಯದಲ್ಲಿ ತೃತೀಯ ಯೋಜನೆಯ ಮೂಲ ಸಿದ್ಧಾಂತಗಳಿಂದ ಜನತೆಯನ್ನು ಅವಗತಿಪಡಿಸುವ ಆವಶ್ಯಕತೆಯ ಮೇಲೆ ಒತ್ತಾಯವನ್ನು ಸೂಚಿಸುವ ಹಲವಾರು ಅನಧಿಕಾರಿಕ ಗೊತ್ತುವಳಿಗಳು ಹಲವಿನೆ ಅಲ್ಲದೇ ಈ ಗೊತ್ತುವಳಿಗಳ ಹೊರತಾಗಿ, ಸ್ವಯಂ ಕಾಂಗ್ರೆಸಿನ ನಂಬ್ಯರೇ ಈ ವಿಷಯದ ಮೇಲೆ ವಾದ-ವಿವಾದವನ್ನಾರಂಭಿಸುವರೆಂದೂ ತಿಳಿದುಬಂದಿದೆ.

ಹೈದರಬಾದದ ಕಾಂಗ್ರೆಸ್ ಮಹಾಸಭೆಯ ಅಧಿವೇಶನದಲ್ಲಿ ದೇಶದ ಆಹಾರ ಪರಿಸ್ಥಿತಿ, ಭೂಸುಧಾರಣೆ, ಪಕ್ಷೀಯ ಸಂವಿಧಾನ ಸಂಶೋಧನೆ, ಮಂಡಲ ಸಮಿತಿಗಳ ಶಕ್ತಿಸಂವರ್ಧನೆ, ಸಂಘಟನೆಯಲ್ಲಿ ಪಕ್ಷ ಮತ್ತು ಪಕ್ಷ ಪ್ರತಿ ದ್ವಂದ್ವತೆಯ ಸಮಾಪ್ತಿ ಮೊದಲಾದ ಸಮಸ್ಯೆಗಳ ಮೇಲೆ ವಿಚಾರ ನಡೆಸಲಾಗುವುದು. ಆಹಾರ ಸಂಕಲ್ಪವನ್ನು ಎದುರಿಸುವುದಕ್ಕೆ ಸಂಘಟಿತ ಪ್ರಯತ್ನವನ್ನು ಕೈಗೊಳ್ಳುವಂತೆ ಕಳಕಳಿಯಿಂದ ಕೇಳಿಕೊಳ್ಳಲಾಗುವುದು. ಆಹಾರೋತ್ಪಾದನೆಯಲ್ಲಿ ಹೆಚ್ಚುವಳಿಯಾಗುವಂತೆ ಮಾಡಲಾಗುವ ಯೋಜನೆಗಳನ್ನು ಕಾರ್ಯಕಾರೀಗೊಳಿಸುವಲ್ಲಿ ಮಂಡಲ ಸಮಿತಿಗಳ ಸಹಯೋಗದ ಬಗ್ಗೆ ವಿಚಾರ ವಿನಿಮಯವನ್ನೂ ಮಾಡುವ ಸಂಭವವಿದೆ.

ಭೂಸುಧಾರಣೆಯ ಯೋಜನೆಗಳನ್ನು ತೀವ್ರವಾಗಿ ಕಾರ್ಯಾನ್ವಯಗೊಳಿಸುವ ಬಗ್ಗೆ ವಿವಿಧ ಕಾಂಗ್ರೆಸ್ ರಾಜ್ಯ ಸರಕಾರಗಳನ್ನು ಒತ್ತಾಯಿಸಲಾಗುವುದು.

ಕಳೆದ ಜುಲಾಯಿ ತಿಂಗಳಲ್ಲಿ ಕಾಂಗ್ರೆಸ್ ಕಾರ್ಯಸಮಿತಿಯು ಶ್ರೀ ಧೇಬರರ ಅಧ್ಯಕ್ಷತೆಯಲ್ಲಿ ಒಂದು ಉಚ್ಚ ಸಮಿತಿಯನ್ನು ನಿಯುಕ್ತಿಮಾಡಿತು. ಈ ಸಮಿತಿಯು ತನ್ನ ಕಾರ್ಯಗಳ ಪ್ರಗತಿಯ ವರದಿಯನ್ನು ಮಹಾಸಭೆಯ ಅಧಿವೇಶನದಲ್ಲಿ ಮುಂದಿಡುವುದು ಆದರೂ, ಈ ಬಗ್ಗೆ ಸಮಿತಿಯು ಅಂತಿಮರೂಪವ ಗೊತ್ತುವಳಿಯು ತಯಾರಾಗುತ್ತಿದೆ

ಪ್ರಧಾನಿ ಶ್ರೀ ಜವಾಹರಲಾಲ ನೆಹರೂರವರು ಅಕ್ಟೋಬರ ೨ರಂದು ಅಂಬರ ಚರಕದಲ್ಲಿನ ನಾಮೂಹಿಕ ನೂಲುವಿಕೆಯ ಪ್ರದರ್ಶನವೊಂದನ್ನು ನಿರೀಕ್ಷಿಸಲಿರುವರು.

ಹೈದರಬಾದಿನ ಖಾದಿ ಸಮಿತಿಯ ಅಧ್ಯಕ್ಷ ಹಾಗೂ ಲೋಕಸಭಾ ಸದಸ್ಯರಾದ ಸ್ವಾಮಿ ರಮಾನಂದ ತೀರ್ಥರ ಕಥನಾನುಸಾರ, ಈ ಅಂಬರ ಚರಕದಲ್ಲಿನ ನೂಲುವಿಕೆಯ ಪ್ರದರ್ಶನವು ವಿನೇಕವಧಿನೀ ಕಾಲೇಜಿನ ಮೈದಾನದಲ್ಲಿ ನಡೆಯುವುದು. ಇದರಲ್ಲಿ ಒಂದು ಸಾವಿರದ ಏಸೂರಕ್ಕೂ ಮಿಕ್ಕಿದ ಸ್ತ್ರೀಯರು ಭಾಗವಹಿಸಲಿರುವರು.

ಈ ಪ್ರದರ್ಶನದಿಂದ ಯೋಜನಾ ಆಯೋಗದ ಸದಸ್ಯರಲ್ಲಿ ವಿಶ್ವಾಸಹುಟ್ಟಿಸುವ ಸುಸಂದರ್ಭವೊಂದು ದೊರೆತಂತಾಯಿತು. ಈ ಪ್ರದರ್ಶನವನ್ನೀಕ್ಷಿಸಿ, ಭಾರತ ಸರಕಾರದ ಉದ್ಯೋಗ ವಿಭಾಗದಲ್ಲಿನ ಅಧಿಕಾರಿಗಳು ಕೂಡಾ ನಿರುದ್ಯೋಗ ಸಮಸ್ಯೆಯನ್ನು ದೂರೀಕರಿಸುವಲ್ಲಿ ಅಂಬರ ಚರಕವು ಬಹಳ ಸಹಾಯವಾಗುವುದೆಂಬ ಅಂಶವನ್ನು ತಿಳಿದುಕೊಳ್ಳಬಲ್ಲರು



ಪರ್ಲ್ ಹಾರ್ಬರ್ ಪತೇಲಿಯಿಂದ ಹೊರಡುವಂತೆ ಆಣುರಕ್ಕೆ ಚಾಲಿತ ಸಬ್‌ಮೆರಿನನ್ನು ಸಿದ್ಧಪಡಿಸಲಾಗಿದ್ದಾರೆ.

ಕೆಲವು ಕೊಣೆಗಾರ ಮುಖಂಡರುಗಳು ನಿರುದ್ಯೋಗ ದೂರೀಕರಣವಲ್ಲಿ ಈ ಅಂಬರ ಚರಕಗಳು ಯಾವುದೇ ಪಾತ್ರವಹಿಸಲಾರವು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ದೇಶದ ಹಲವಾರು ಸಮಸ್ಯೆಗಳಲ್ಲಿ ಬಟ್ಟೆಯ ಸಮಸ್ಯೆಯೂ ಒಂದಾಗಿದೆ. ಅದರೆ, ಅಂಬರ ಚರಕಾದ ಯೋಜನೆಯಿಂದ ವಸ್ತ್ರೋತ್ಪಾನೆಯಲ್ಲಿ ವೃದ್ಧಿಯಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ, ಅಂಬರ ಚರಕಾದ ಆಂದೋಲನದಲ್ಲಿ ಇಂತಹ ವಿರುದ್ಧಾಭಿಪ್ರಾಯಗಳ ವಿಚಾರವೇ ಎಲ್ಲವುಗಳಿಗಿಂತ ಹಿರಿದಾದ ಸಮಸ್ಯೆಯಾಗಿದೆ.

ಹೈದರಬಾದದ ಈ ಕಾಂಗ್ರೆಸ್ ಅಧಿವೇಶನವು ಎರಡು ದೃಷ್ಟಿಯಿಂದ ಮುಖ್ಯವಾಗಿದೆ ಮೊದಲನೆಯದಾಗಿ, ಭಾರತದ ಅಭಿವೃದ್ಧಿಗೆ ಆಧಾರವಾದ ಪಂಚವಾರ್ಷಿಕ ಯೋಜನೆಯ ರೂಪರೇಷೆಗಳ ಕುರಿತಾದ ಸಿದ್ಧಾಂತಗಳು ರೂಪಿಸಲ್ಪಡುವುದೆ ನ್ನಬಹುದು. ಪ್ರಥಮ ಯೋಜನೆಯಲ್ಲಿ ಆಧಿಕ ಆತ್ಮೋತ್ಪಾದನೆಗಾಗಿ, ಕೃಷಿ-ನೀರಾವರಿಯತ್ತ ವಿಶೇಷ ಗಮನ ಹರಿಸಿದ್ದರೆ, ದ್ವಿತೀಯ ಯೋಜನೆಯಲ್ಲಿ ಔದ್ಯೋಗೀಕರಣದತ್ತ ದೃಷ್ಟಿಹರಿಸಲಾಗಿದೆ. ಇನ್ನು ತೃತೀಯ ಯೋಜನೆಯಲ್ಲಿ ಯಾವ ಕ್ಷೇತ್ರಕ್ಕೆ ಅಗ್ರಪಟ್ಟ ದೊರೆಯಬೇಕು ಎನ್ನುವುದೂ ಒಂದು ಪ್ರಶ್ನೆಯಾಗಿದೆ. ಈ ಗೀಗಿನ ವರ್ತಮಾನಗಳನ್ನವಲೋಕಿಸಿದರೆ, ಸಂವಿಧಾನದಲ್ಲಿ ನಿರೂಪಿತವಾದ ಪರಿಚ್ಛೇದವನ್ನು ಕಾರ್ಯಕಾರಿಗೊಳಿಸಲು ಸಾಕ್ಷಾತೆಗೆ ಆ ಸ್ಥಾನದೊರೆಯುವುದೇ ಎಂಬ ಸಂದೇಹ ಬಂದರೂ ಆವಕ್ಕೆಂತ ಈ ಹಿಂದಿನ ಎರಡು ಪಂಚವರ್ಷಾಜನೆಗಳಲ್ಲಿ ಪ್ರಧಾನವಾಗಿ ಆರಿಸಲಾದ ಕೃಷಿ-ಉದ್ಯೋಗ ಎರಡೂ ಸಮಾನ ಸ್ಥಾನವನ್ನು ಪಡೆಯುವ ಸಂಭವವೇ ಅಧಿಕವೆಂದೂಹಿಸಬಹುದು.

(೧೯೫ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. MANGALORE. Estd: 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಆದರ್ಶ ಆರ್ಥಿಕ ಆಸರೆಗೆ
ಸರ್ವರಿಗೂ ಬೇಕಾದ ಬೇಂಕು ಸಿಂಡಿಕೇಟ್ ಬೇಂಕ್

ಕಥಾವಿಹಾರ

ಸಾಂತಪ್ಪನೇಕೆ ಬೈರಾಗಿಯಾದ?

ರಾಜನ ಬೇಡಿಕೆಯೆನ್ನು ತೀರಿಸುವ ಭಾಷೆಯಿತ್ತು ಉಡುಗೊರೆ ಸ್ವೀಕರಿಸಿದ್ದ ಸಾಂತಪ್ಪ ಅದನ್ನು ಕಾರ್ಯರೂಪಕ್ಕೆ ತರಲಾರದೆ ಚಡಪಡಿಸಿ ಕೊನೆಗೆ ಬೈರಾಗಿಯಾದ!

ಮನಸ್ಸಿನ ಸ್ಥಿತಿ ಗತಿಗಳು ವೇಷ ಭಾಷೆ-ಆಹಾರ-ವಿಹಾರ ಇವುಗಳ ಮೇಲೆಯೇ ಅವಲಂಬಿಸಿಕೊಂಡಿವೆ. ಇವುಗಳ ವೈವಿಧ್ಯದಿಂದಲೇ ಮನಸ್ಸಿನಲ್ಲಿ ಭಿನ್ನ ಭಿನ್ನ ವಿಚಾರಗಳು ಉದಯಿಸಿ ಜೀವನರಂಗದಲ್ಲಿ ಉಜ್ಜ್ವಲ ಹೊಸ ಬದಲಾವಣೆಗಳುಂಟಾಗುವವು. ಕಾಳಿದಾಸನಿಗೆ ಹೆಂಡತಿ ಹೇಳಿದ ಮಾತುಗಳಿಗಾಗಿಯೇ (ಅಸ್ತಿ-ಕಶ್ಚಿತ್-ವಾಕ್) ಲೋಕೋತ್ತರ ಕಾವ್ಯಗಳು ಹೊರಬಿದ್ದು ಜನಸೇವೆಯಲ್ಲಿ ಮುಂದುವರಿದವೆಂದು ಪ್ರತೀತಿ ಇದೆ. ವೇಷದಿಂದಲೇ ವಿರಕ್ತಿಯಾಗಿರುವ ಉದಾಹರಣೆಗೆ ಸಾಂತಪ್ಪನ ಚರಿತ್ರೆ ಮಹತ್ವದ್ದಾಗಿದೆ. ಅದರಿಂದ ನಮ್ಮ ಸಾಂಸ್ಕೃತಿಯನ್ನು ಬೆಳಗಿಸುವ ವೇಷ-ಭಾಷೆ-ಆಹಾರ ಮುಂತಾದವುಗಳ ಕಡೆಗೆ ಲಕ್ಷಿಸುವರು ಜನತೆಯ ಹಿತ-ಮಿತದ ದೃಷ್ಟಿಯಿಂದ ಸರ್ವೋತ್ತಮ.

ಹೊರಬದಿಯಲ್ಲಿ ರಾಜದೂತನೊಬ್ಬ—ಸಾಂತಪ್ಪ! ಮಹಾರಾಜರು ಕರೆಯುವರು. ಕೂಡಲೇ ಹೊರಟು ಬಾ. ಎಂದು ಕೂಗಿದ. ಎಂದೂ ಕೇಳದ ಈ ಶಬ್ದವನ್ನು ಕೇಳಿ ಸಾಂತಪ್ಪ ಬೆದರಿದ. ಆದರೂ ನಿರುಪಾಯನಾಗಿ ಹೊರಡಲೇ ಬೇಕಾಯಿತು.

ಸಾಂತಪ್ಪ ಕೇಳುವರ್ಗದಲ್ಲಿ ಸೇರಿದವ. ಮೀನು ಹಿಡಿದು ಜೀವಿಸುವದೇ ಅವನ ಜೀವನದ ನಿತ್ಯದ ಕೆಲಸ. ಹೆಂಡತಿ ಮಕ್ಕಳು ಇದರಿಂದ ಸಹಿತನಾಗಿ ಪುಟ್ಟ ಪ್ರಪಂಚವನ್ನು ಸುಗಮವಾಗಿ ಸಾಗಿಸುತ್ತ ಬಂದ ವ್ಯಕ್ತಿ. ಊರ ಹೊರಬದಿಯಲ್ಲಿ ಇವನ ವಾಸ್ತವ್ಯ.

ಹಾದಿಯ ಉದ್ದಕ್ಕೂ ಸಾಂತಪ್ಪನ ಯೋಚನೆ. ಪಾಪ! ಅರಮನೆಯನ್ನು ತಲ್ಪಿದ. ಹೃದಯದಲ್ಲಿ ಡವಡವ ಎನ್ನುತ್ತಿತ್ತು. ದೂತನೊಬ್ಬ ಸಾಂತಪ್ಪನನ್ನು ರಾಜನಮುಂದೆ ಕರಕೊಂಡು ಹೋಗಿ ನಿಲ್ಲಿಸಿದ. ಆಗಲಂತೂ ಸಾಂತಪ್ಪ ನಿರ್ಜೀವಿ.

ರಾಜನೆಂದ—ಸಾಂತಪ್ಪ! ನೀನು ಮೀನುಹಿಡಿಯುವದರಲ್ಲಿ ಅಗ್ರಗಣ್ಯನಂತೆ. ಇದೋ? ಈ ಬಹುಮಾನವನ್ನು ಸ್ವೀಕರಿಸು. ಇಂದು ಸಾಯಂಕಾಲ ಕೆಲವು ಉತ್ತಮ ಮೀನುಗಳನ್ನು ತಂದುಕೊಡಲೇ ಬೇಕು. ಇಲ್ಲದಿದರೆ ರಾಜಾಜ್ಞೆಯ ಶಿಕ್ಷೆಗೆ ಗುರಿಯಾಗಬೇಕಾದೀತು. ಎಂದು ಉತ್ತಮ ಥೋತರವೊಂದನ್ನು ಸಾಂತಪ್ಪನ ಮೈಗೆ ಒಗೆದ. ಎಂದೂ ಕಾಣದ ಅಂತಹ ಥೋತರವನ್ನು ಹಿಡಿದು ಮೀನುಹಿಡಿಯುವದರಲ್ಲಿ ಗಟ್ಟಿಗನಾದ ಸಾಂತಪ್ಪ ಹಾದಿಯಲ್ಲಿ ತುಂಬಾ ಹೆಮ್ಮೆಯ ಸಂತೋಷದ ನಗುವನ್ನು ಬೀಯುತ್ತಾ ಮನೆಗೆ ತಲ್ಪಿದ.

ಕೆಲಸದ ಉತ್ಸಾಹದಿಂದ ಊಟದ ಕಡೆಗೆ ಸಾಂತಪ್ಪನ ಲಕ್ಷ್ಯ ಹೋಗಲಿಲ್ಲ. ಮೀನುಹಿಡಿಯುವ ಸಾಹಿತ್ಯಗಳನ್ನು ತೆಗೆದುಕೊಂಡು ನದಿಯಕಡೆಗೆ ಹೊರಟ.

ಆದರೆ!.....ಕಾಲದ ಗತಿಯನ್ನು ಕಂಡವರಾರು? ದುರ್ದೈವದಿಂದ ಸ್ವಲ್ಪ ವೇಳೆಯಲ್ಲಿಯೇ ಆಕಸ್ಮಿಕವಾಗಿ ಭಯಂಕರ ಗುಡುಗುಮಿಂಚುಗಳು ಆರ್ಭಟಿಸತೊಡಗಿತು. ನಾಲ್ಕೂ ದಿಕ್ಕಿನಲ್ಲೂ ಕರಾಳ ಮೋಡಗಳು ಒಟ್ಟುಗೂಡಿದವು. ಈ ಭಯಾನಕ ದೃಶ್ಯಗಳನ್ನು ನೋಡುತ್ತಿರುವಷ್ಟರಲ್ಲಿಯೇ ಧಾರಾಕಾರವಾಗಿ ಎರಡು ತಾಸುಗಳ ವರೆಗೆ ನುಸಿ ಸುರಿಯಿತು. ನದಿಯು ನೀರು ರಾಡಿಯಾಗಿ ಉಕ್ಕೇರಿತು. ನೀರಿನ ಪ್ರವಾಹ ವೇಗದಿಂದ ಚಲಿಸುತ್ತಲಿತ್ತು.

ಸಾಂತಪ್ಪ ಕಂಗಾಲಾದ. ಬಹುವಾಗಿ ಪ್ರಯತ್ನಿಸಿದ. ಒಂದು ಮೀನು ಬೆಸೆಯಲಿಲ್ಲ. ತನ್ನ ಕೊನೆಯ ಉಪಾಯವನ್ನೆಲ್ಲಾ ಉಪಯೋಗಿಸಿದ. ಜೀವದ ಪರಿವೆಯಿಲ್ಲದೇ ದುಡಿದ. ಇಲ್ಲ ಏನೂ ಪ್ರಯೋಜನವಾಗಲಿಲ್ಲ. ಸಂಜೆಯಾಗಲು ಇನ್ನು ಹೆಚ್ಚು ವೇಳೆ ಸಹ ಇರಲಿಲ್ಲ. ಆದರಿಂದ ಅವನ ಹೃದಯದಲ್ಲಿ "ಇನ್ನೇನು?" ಎನ್ನುವ ವಿಚಾರಗಳ ತಾಂಡವವಾಡುತ್ತಿತ್ತು.

ನಿರಾಶೆಯ ನಿಟ್ಟುಸಿರೊಂದನ್ನು ಬಿಟ್ಟು ಕುಳಿತುಕೊಂಡ. ಮನಸ್ಸು ಹಲವು ಒಗ್ಗೆಯಿಂದ ವಿಚಾರಿಸಿತು. ಬಹುವಾಗಿ ಯೋಚಿಸಿತು. ಇನ್ನೇನೂ ಬದುಕುವ ಆಸೆಯಿಲ್ಲ. ರಾಜ ಶಿಕ್ಷೆಗೆ ಒಳಗಾಗಲೇಬೇಕು ಇಲ್ಲದಿದ್ದರೆ ಪ್ರಾಣಾಗುವದು ಹೇಗೆ? ಎನ್ನುವ ಚಿಂತೆಯ ಕತ್ತಲೆಯಲ್ಲಿಯೇ "ಜೀವನ್ ಭದ್ರಾಣಿ ಪಶ್ಯತಿ" ಎನ್ನುವ ಕೆರಣವೊಂದು ಸುಳಿದಾಡಿತು.

ಬಹುವಾಗಿ ಪ್ರೀತಿಸುತ್ತಿದ್ದ ತನ್ನ ದೋಣಿಯನ್ನು ತಾನೇ ಒಡೆದು ಚೂರು ಮಾಡಿದ. ಬೆಂಕೀ ಹೊತ್ತಿಸಿದ, ಆದರ ಬೂದಿಯನ್ನು ಶರೀರವ ತುಂಬಾ ಬಡಿದುಕೊಂಡ. ನದಿಯ ಒಂದು ಕಡೆಯಲ್ಲಿ ಕಣ್ಣುಗಳನ್ನು ಮುಚ್ಚಿ ದೇವರನ್ನು ನೆನೆಯುತ್ತ ಯೋಗಿಯಂತೆ ಕುಳಿತುಕೊಂಡ.

ಸಂಜೆಯಾಯಿತು. ರಾಜಾಜ್ಞೆಯಂತೆ ಸೇವಕರು ಸಾಂತಪ್ಪನನ್ನು ಹುಡುಕಿದರು. ಎಲ್ಲಿಯೂ ದೊರೆಯಲಿಲ್ಲ. ನದಿಯಲ್ಲಿ ಕಂನ್ಯಾಸಿಯೊಬ್ಬನನ್ನು ನೂತ್ರ ಕಂಡಿದ್ದರು. ಆದರಂತೆಯೇ ರಾಜನಿಗೆ ತಿಳಿಸಿ ಬಿಟ್ಟರು.

ಸಂನ್ಯಾಸಿಯ ವಿಷಯ ತಿಳಿದು ರಾಜನು ಫಲಪುಷ್ಪಗಳನ್ನು ಹಿಡಿದು ಪರಿವಾರ ಯುತನಾಗಿ ಬಂದನು. ದೂರದಲ್ಲೇ ರಾಜನನ್ನು ಕಂಡು ಸಾಂತಪ್ಪ ಬೆಚ್ಚಿದ. ಭಯದಿಂದ ಕಣ್ಣುಗಳನ್ನು ಮುಚ್ಚಿದ.

ರಾಜನು ಫಲಪುಷ್ಪಗಳನ್ನು ಅರ್ಪಿಸಿ ವಂದಿಸಿದನು. ಕ್ಷಣಕಾಲ ಸಂತನು. ಸಂನ್ಯಾಸಿಯು ಕಣ್ಣು ತೆರೆಯಲಿಲ್ಲ. ಸಮಾಧಿಯಲ್ಲಿರಬಹುದೆಂದು ತಿಳಿದು ರಾಜನು ಹಿಂದೆ ತಿರುಗಿದ.

ಸಾಂತಪ್ಪ ಅರೆಕಣ್ಣಿನಿಂದ ಇಲ್ಲಿಯ ದೃಶ್ಯವನ್ನು ನೋಡಿದ. ಇದೊಂದು ವೇಷಕ್ಕಾಗಿ ಇಂತಹ ಮನ್ನಣೆಯೇ? ಎಂದು ಕೊಂಡು ನಿತ್ಯವೂ ದೇವರನ್ನು ನೆನೆಯುತ್ತ ಭೈರಾಗಿಯೇ ಆಗಿಬಿಟ್ಟ.

ಇದು ವೇಷದ ಮಹಿಮೆಯಲ್ಲದೇ ಮತ್ತೇನು?

—ವಿಘ್ನೇಶ್ವರ ಶರ್ಮಾ, ತದ್ದಲಸೆ.



"ಉತ್ತರ ಧ್ರುವವನ್ನು (2) ಹಾದು ಹವಾಯಿ (1) ಯಿಂದ ಇಂಗ್ಲೆಂಡಿಗೆ (3) ಹೋಗುವ ಅಮೆರಿಕೆಯ ಸರ್ಮೇರಿನ್ನ ಪ್ರಯಾಣ ನೂರಾರು ಪುಟ ಗೀಟಿನಲ್ಲಿದೆ. ಕಡಿದ ಗೀಟಿರುವಲ್ಲಿ ನೀರು ಸಂಪೂರ್ಣ ಹೆಪ್ಪುಗಟ್ಟಿರುವುದರಿಂದ ಅಡಿಯಲ್ಲಿಯೇ ಮುಳುಗಿ ಹೋಗಬೇಕಾಯಿತು. ಆದೇ ಕಾಲದಲ್ಲಿ ನ್ಯೂ ಲಂಡನ್ (4) ದಿಂದಲೂ ಬಂದು ಅಣುಶಕ್ತಿ ಚಾಲಕ ಸರ್ಮೇರಿನ್ ಉತ್ತರಧ್ರುವವನ್ನು ಹಾಯಿತು.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%

5 ರಿಂದ 12 ,, 4½%

13 ,, 24 ,, 4¾%

ರೂ. 10,000/- ಮುತ್ತ ಮೇಲಣ ಹಣಕ್ಕೆ ½% ಹೆಚ್ಚು.

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1920

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಆವಶ್ಯ. ಕಳ್ಳರ ಸುಳಿಹುಪ್ಪಟಿಗಳ ಭೀತಿ ಇಲ್ಲವೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. 3 ಸೈಜುಗಳಿವೆ; ಮಿಡಿಟೌ, ಏಷ್ಯಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳಿವೆ.

ಅಲ್ಲದೆ

ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್, ಡೆಸ್ಕ್‌ಗಳು, ಸ್ಪ್ರಿಂಗ್‌ಲೆಸ್ ಸ್ಟೀಲ್ ಹಾಸಿಗೆಗಳು, ವಿ. ಕೆ. ರಾಜ್ ಇಂಡಸ್ಟ್ರೀಸ್, ಆಲಿಘರ್ ಇವರ

ಉತ್ತಮ ಬೀಗಗಳು

ಇವೆಲ್ಲ ಸ್ವಾಕವೆ.

ಸ್ಪ್ರಿಂಗ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ. ಆದರೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.

ಶೋ ರೂಮನ್ನು ಸಂದರ್ಶಿಸಿ:

ಶಾಸ್ತೀ ಅಂಡ್ ಕಂಪೆನಿ

ಹಂಸನಕಟ್ಟೆ — — ಮಂಗಳೂರು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮಸಂಖ್ಯೆ 250/1954

ಪಾಂಡುರಂಗ ಲಕ್ಷ್ಮಣ ಕಾಮತ್— ವಾದಿ ಮತ್ತು

ಜನಾರ್ಧನ ಕಾಮತ್ ಕೂಡಾ—ಪ್ರತಿವಾದಿರು ಇವರೊಳಗೆ

ಏಲಂ ಇಸ್ತಿಹಾರು

1. ಕೆಳಗೆ ಕಾಣ್ಪಡೆ ಆಸ್ತಿಯನ್ನು ತಾ. 14—11—1958ರಲ್ಲು ಬೆಳ್ಳಿತಃ ಘಂಟೆ 10—30ಕ್ಕೆ ಈ ಕೋರ್ಟಿನಿಂದ ನೇಮಿಸಲ್ಪಟ್ಟ ಕಮೀಶನರಾದ ಈ ಕೋರ್ಟು ವಕೀಲ್ ಶ್ರೀ ಯಚ್. ಪಿ. ಎ. ಜೈನ್‌ರು ಸದ್ರಿ ಆಸ್ತಿಯನ್ನು ಬಹಿರಂಗವಾಗಿ ಏಲಂ ಮಾಡುವರು. ಪ್ರಥಮ ವಾರು ಕರೆಯುವರೆ ಡಾಲಾ ಕಿಮ್ಮತ್ತು ರೂಪಾಯಿ 100/— ಒಂದು ನೂರು ಎಂತ ನಿಶ್ಚೆಯವೆ.

2. ಇತರ ಮಾಹಿತುಗಳನ್ನು ಕಮೀಷನರರಿಂದ ಬರಹ ಮೂಲಕ ಏಲಂಗೆ ಏಲ್ಲುವರೆ ಆಪೇಕ್ಷಿಸುವವರು ಪಡಕೊಳ್ಳಬಹುದು.

ಏಲಂ ಆಗತಕ್ಕ ಆಸ್ತಿ ವಿವರೆ—

ಮಂಗಳೂರು ತಾಲ್ಲೂ ಬಪ್ಪನಾಡು ಗ್ರಾಮದ ಮೂಲಗೇಣಿ ಹಕ್ಕಿನ ಆಸ್ತಿ:—

ಸರ್ವೇನಂಬ್ರ—1, ಸ. ನಿ. ನಂಬ್ರ—5. ಕೆಸಂ— ಸುಂಜ.

ವಿಸ್ತೀರ್ಣ —0.04 ಸೆಂಟ್ಸು

ಈ ತಪಸೀಲಿನ ಖಾಲಿ ಸ್ಥಳ, ಇದರಲ್ಲಿ ಏಲಂ ಸಮಯದಲ್ಲಿರುವ ಪಕ್ಕೇ ಮೂಫ್‌ಗಳು ಸಹಾ.

H. P. A. Jain
Commissioner.

ಕಾರ್ಕಳ, ತಾ. 14—10—1958.

ಪರಿಚಯ

ಭಾರತೀಯ ವಿತ್ತಮಂತ್ರಿ ಮುರಾರ್ಜಿ ದೇಸಾಯಿ

ಅವರ ಜನ್ಮದಿನ ೪ವರ್ಷಗಳಿಗೊಂದು ಬಾರಿ ಬರುವುದಂತೆ!

ಈಗ್ಗೆ ಸುಮಾರು ಅರವತ್ತೆರಡು ವರ್ಷಗಳ ಹಿಂದೆ ಮುಂಬೈ ಪ್ರಾಂತದ ಸೂರತ್ ಜಿಲ್ಲೆಯಲ್ಲಿ ವಾಸವಾಗಿದ್ದ ಮಧ್ಯಮ ವರ್ಗದ ಗುಜರಾತಿ ಸಂಸಾರವೊಂದರಲ್ಲಿ ಮೊರಾರ್ಜಿ ರಾಂಚೋಡ್ಜಿ ದೇಸಾಯಿಯವರು ಜನ್ಮತಾಳಿದರು. ಇಲ್ಲಿಂದ ಅಧಿಕ ವರ್ಷದಲ್ಲಿ ಫೆಬ್ರುವರಿ ೨೯ರಂದು ಜನ್ಮತಾಳಿದ, ಭಾರತ ಸರ್ಕಾರದ ಇಂದಿನ ಹಣಕಾಸಿನ ಶಾಖೆಯ ಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯಿಯವರು, ತಮ್ಮ ಹುಟ್ಟಿದ ಹಬ್ಬವು ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಬರುವುದೆಂದೂ, ತಾವಿನ್ನೂ 'ಎಳೆಯ' ಎಂದೇ ಪರಿಗಣಿಸಬೇಕೆಂದೂ ವಿನೋದವಾಗಿ ಅವರು ಒಮ್ಮೊಮ್ಮೆ ಹೇಳುವರು. ಅವರ ಮುಖಮಾಟ ಮತ್ತು ಮಂದಸ್ಮಿತ್ವವು ಅವರು ವಿನೋದದಲ್ಲಿ ಹೇಳಿದ ಈ ಮಾತು ವಾಸ್ತವವೇ ಎಂದೆ ನಿಸುವಂತೆ ಗಾಢವಾಗುತ್ತದೆ.

ಶ್ರೀ ಮೊರಾರ್ಜಿಯವರು ಅವರ ತಂದೆ ತಾಯಿಗಳ ಆಜ್ಞಾನುವರ್ತಿನ ಬಾಲಕರಾಗಿದ್ದರು. ಆಟಪಾಟಗಳಲ್ಲಿ, ಕ್ರೀಡೆಗಳಲ್ಲಿ ಮತ್ತು ವಾಚನದಲ್ಲಿ ಅವರಿಗೆ ತೀವ್ರಾಸಕ್ತಿಯಿತ್ತು. ಅವರ ವಿದ್ಯಾರ್ಥಿ ಜೀವನ ಸುಖಮಯವಾಗಿ ಕಳೆಯಿತು. ಮುಂಬೈ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ವಿಷಯವನ್ನು ತೆಗೆದುಕೊಂಡು ಅವರು ಪ್ರಥಮ ದರ್ಜೆಯ 'ಆನರ್ಸ್' ಪದವಿಯನ್ನು ಪಡೆದರು. ಈ ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದಿದ್ದುದರಿಂದ, ಅವನ್ನು, ಮುಂಬೈ ಪ್ರಾಂತದ 'ಸಿವಿಲ್ ಸರ್ವಿಸ್'ಗೆ ನೇರವಾಗಿ ನೇಮಕ ಮಾಡಿಕೊಳ್ಳಲಾಯಿತು. ಅನಂತರ ೧೭ ವರ್ಷಗಳ ಅವಧಿಯಲ್ಲಿ ಅವರು ಅಡಳಿತದ ವಿವಿಧ ಸಮಸ್ಯೆಗಳು ಹಾಗೂ ರೆವಿನ್ಯೂ ಬಾಬಿನ ವಿಷಯಗಳಲ್ಲಿ ನಿಷ್ಣಾತವಾದ ಪರಿಶ್ರಮ ಪಡೆದುಕೊಂಡರು.

ಮಹಾತ್ಮಾ ಗಾಂಧಿಯವರ ಪ್ರಭಾವಕ್ಕೆ ಒಳಪಟ್ಟು, ಭಾರತದಲ್ಲಿ ಗುಲಾಮಗಿರಿಯಲ್ಲಿದ್ದು ಬಡತನದಿಂದ ನೊಂದು ಬಸವಳಿಯುತ್ತಿದ್ದ ಜನತೆಯನ್ನು ಕಣ್ಣಾರೆ ನೋಡಿದ ಶ್ರೀ ಮೊರಾರ್ಜಿಯವರು ಒಂದು ದಿನ ಅವರು ತಮ್ಮ ಸರ್ಕಾರಿ ಹುದ್ದೆಗೆ ರಾಜೀನಾಮೆಯನ್ನಿತ್ತು, ಆ ವಿಷಯವನ್ನು ತಮ್ಮ ಸಹಧರ್ಮಿಣಿಗೆ ತಿಳಿಸಿದರು ಅವರ ಸಹಧರ್ಮಿಣಿ ಅವರನ್ನು ಚೆನ್ನಾಗಿ ಬಲ್ಲವರು. ಅವರ ಇಂಗಿತವನ್ನು ಚೆನ್ನಾಗಿ ಅರಿತವರು. ಆಂತೆಯೇ, ತನ್ನ ಗಂಡನಿಗೆ ಇಂಬುಗೊಟ್ಟು ಅವರ ಹಾದಿಯನ್ನೇ ತಾವೂ ಅಂಗೀಕರಿಸಿದರು ಕೆಲದಿನಗಳಲ್ಲಿಯೇ ಇಡೀ ಸಂಸಾರವೇ, ಸ್ವಯಸ್ಥೈರ್ಯ ನಾಗರಿಕ ಸುಖಜೀವನವನ್ನು ತೊರೆದು ರಾಷ್ಟ್ರಸೇವಾಕಾರ್ಯಕ್ಕಾಗಿ ದೀಕ್ಷಾಬದ್ಧವಾಯಿತು

ಮೊರಾರ್ಜಿ ರಾಂಚೋಡ್ಜಿ ದೇಸಾಯಿಯವರನ್ನು ಈಗ ಸಾಮಾನ್ಯವಾಗಿ ಮೊರಾರ್ಜಿ ಭಾಯ್ ಎಂದು ಕರೆಯುತ್ತಾರೆ. ಅವರು ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯನ್ನು ಸೇರಿದರು. ಅವರು ಗುಜರಾತ್ ಮಹಾ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದರು. ೧೯೩೧ರಲ್ಲಿ ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಆರಿಸಿ ಬಂದರು ಆಕ್ಷಿಂದೀಚೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ವಿವಿಧ ಪದವಿಗಳಲ್ಲಿದ್ದು ಅಪರ್ಯಾಪ್ತ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಕಾಂಗ್ರೆಸ್ಸಿನ ಕೋಶಾಧ್ಯಕ್ಷರಾಗಿದ್ದರು ಅವರು ಕಾಂಗ್ರೆಸ್ ಹೈಕಮಾಂಡಿನ ಸದಸ್ಯರಾಗಿದ್ದಾರೆ ಮಹಾತ್ಮಾ ಗಾಂಧಿ, ಸರದಾರ್ ವಲ್ಲಭಾಯ್ ಪಟೇಲ್‌ರವರೊಂದಿಗೆ ನಿಕಟವಾದ ಸಂಪರ್ಕವನ್ನು ಶ್ರೀ ಮೊರಾರ್ಜಿಯವರು ಹೊಂದಿದ್ದರು. ರಾಷ್ಟ್ರೀಯ ಚಳವಳಿಯಿಂದಾಗಿ ಮೂರು ಬಾರಿ ದೀರ್ಘ ಕಾಲಾವಧಿಯ ತುರಂಗ ವಾಸವನ್ನೂ ಶ್ರೀ ಮೊರಾರ್ಜಿಯವರು ಅನುಭವಿಸಿದರು.

೧೯೩೭ರಲ್ಲಿ ಬ್ರಿಟಿಷ್ ಸರ್ಕಾರದವರು ಭಾರತದಲ್ಲಿ ವ್ಯಾಪಾರೀಯ ಸ್ವಯಮಧಿಕಾರ ವ್ಯವಸ್ಥೆಯನ್ನು ಆಚರಣೆಗೆ ತಂದರು. ಕಾಂಗ್ರೆಸ್ಸನವರು ಚುನಾವಣೆಗಳಲ್ಲಿ ವಿಜಯಗಳಿಸಿದರು. ಶ್ರೀ ಮೊರಾರ್ಜಿಯವರು ತಮ್ಮ ಸ್ವಕ್ಷೇತ್ರವಾದ ಬುಲ್ಸಾರ್ ಜಿಲ್ಲಾ ವಿಧಾನ ಕ್ಷೇತ್ರದಿಂದ ಚುನಾಯಿತರಾಗಿ ಬಂದರು. ಆಗ, ಅವರು, ಮುಂಬೈ ಪ್ರಾಂತದ ಪ್ರಥಮ ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಕಂದಾಯ ಶಾಖೆಯ ಮಂತ್ರಿಗಳಾದರು. ದ್ವಿತೀಯ ಮಹಾಸಮರವು ಮುನ್ನ, ಭಾರತದಲ್ಲಿನ ಜನತೆಯ ಅಭಿಪ್ರಾಯವನ್ನೇ ಪಡೆಯದೆ, ಬ್ರಿಟಿಷ್ ಸರ್ಕಾರದವರು, ಭಾರತವನ್ನು ಯುದ್ಧದಲ್ಲಿ ತೊಡಗಿಸಿದುದನ್ನು ಪ್ರತಿಭಟಿಸಿ, ಎಲ್ಲಾ ಕಾಂಗ್ರೆಸ್ ವಂತ್ರಿ ಮಂಡಲಗಳೂ ರಾಜೀನಾಮೆಯನ್ನಿತ್ತವು. ಇತರ ಕಾಂಗ್ರೆಸ್ ಕಾರ್ಯಕರ್ತರಂತೆ, ಮೊರಾರ್ಜಿಯವರಿಗೂ ಮತ್ತೆ ೧೯೪೫ರವರೆಗೆ ತುರಂಗವಾಸ ಪ್ರಾಪ್ತಿಯಾಯಿತು.

೧೯೪೬ರಲ್ಲಿ ಸಾರ್ವತ್ರಿಕ ಚುನಾವಣೆ ಮತ್ತೆ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತಂದಿತು. ಮೊರಾರ್ಜಿ ದೇಸಾಯಿಯವರು ಕಂದಾಯ ಹಾಗೂ ಗೃಹ ಶಾಖೆಯ ಮಂತ್ರಿಗಳಾದರು ಈ ಅವಧಿಯಲ್ಲಿ ಅವರು, ಭೂಮಿಯ ಗೇಣಿ ವ್ಯವಸ್ಥೆಯಲ್ಲಿ ವ್ಯಾಪಕವಾದ ಸುಧಾರಣೆಯನ್ನು ತಂದರು ಪೋಲೀಸ್ ಮತ್ತು ಜೈಲು ಇಲಾಖೆಗಳಲ್ಲಿ ಸುಧಾರಣೆಗಳನ್ನು ಯಶಸ್ವಿಯಾಗಿ ತಂದರು. ಮುಂಬೈ ಪ್ರಾಂತದ ನೆರೆಹೊರೆಯಲ್ಲಿದ್ದ ನರೇಂದ್ರರ ಸಂಸ್ಥಾನಗಳ ವಿಲಯನವನ್ನೂ ಯಶಸ್ವಿಯಾಗಿ ಸಾಧಿಸಿದ್ದಾರೆ. ೧೯೫೨ರ ಸಾರ್ವತ್ರಿಕ ಚುನಾವಣೆಯು ಪತ್ರಿಶ್ರೀ ಮೊರಾರ್ಜಿಯವರನ್ನು ಭಾರತದ ಗಣರಾಜ್ಯದಲ್ಲಿನ ಮುಂಬೈ ರಾಜ್ಯದ ಪ್ರಥಮ ಮುಖ್ಯಮಂತ್ರಿಗಳನ್ನಾಗಿ ಪ್ರತಿಷ್ಠಾಪಿಸಿತು

೧೯೫೬ರಲ್ಲಿ, ಭಾರತದ ಪ್ರಧಾನ ಮಂತ್ರಿಗಳು, ಮೊರಾರ್ಜಿಯವರನ್ನು ಕೇಂದ್ರ ಸರ್ಕಾರದ ಮಂತ್ರಿ ಸಂಪುಟವನ್ನು ಸೇರಲು ಆಹ್ವಾನಿಸಿದರು. ೧೯೫೬ನೆಂ ಒಕ್ಟೋಬರಿಂದು, ಶ್ರೀ ನೆಹರೂರವರ ಜನ್ಮದಿನೋತ್ಸವದಂದು— ಶ್ರೀ ಮೊರಾರ್ಜಿಯವರು ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಶಾಖೆಯ ಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದರು. ೧೯೫೭ರ ಸಾರ್ವತ್ರಿಕ ಚುನಾವಣೆಯು ಶ್ರೀ ಮೊರಾರ್ಜಿಯವರನ್ನು ಲೋಕ ಸಭಾಸದಸ್ಯರನ್ನಾಗಿ ಆರಿಸಿತು. ಅವರು ಪುನಃ ಕೇಂದ್ರ ವಂತ್ರಿ ಮಂಡಲದಲ್ಲಿ ಆಡೇ ಶಾಖೆಯ ಮಂತ್ರಿಗಳಾದರು. ೧೯೫೭ರ ಮಾರ್ಚಿ ತಿಂಗಳಲ್ಲಿ, ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ರಾಜೀನಾಮೆ ಬಿನ್ನಿತ್ತ ವೇಳೆ, ಅವರು ಭಾರತ ಸರ್ಕಾರದ ಹಣಕಾಸಿನ ಶಾಖೆಯ ಮಂತ್ರಿಗಳಾದರು.

ಶ್ರೀ ಮೊರಾರ್ಜಿಯವರು ನಿಷ್ಠಾವಂತ ಸನ್ಯಾಸಾರಿಗಳು. ಮಾದಕ ಪದಾರ್ಥಗಳ ಸೇವನೆಯನ್ನು ವರ್ಜಿಸಿವವರು. "ಗೀತೆ" ಯ ಅನುಪಾಸಕರು, ಸಂಗೀತ ಪ್ರೇಮಿಗಳು, ಸ್ವಯಂಶಿಸ್ತು, ಆನುಕಂಪ ಮತ್ತು ಸಹಿಷ್ಣುತೆಗಳು ಅವರ ಗುಣಗಳಲ್ಲಿ ಸಮಸಮ ಬೆರೆತಿವೆ ಅವರು ಹವ್ಯಾಸಗಳು ಓದು, ಬರಹ, ಪ್ರಯೋಗವಾದಿಗಳು. ಮಂತ್ರಿ ಸಂಪುಟದಲ್ಲಿ, ಕಾಂಗ್ರೆಸ್ ಹೈಕಮಾಂಡಿನಲ್ಲಿ ಮತ್ತು ಸರ್ಕಾರಿ ಅಧಿಕಾರಿಗಳ ಸಭೆಗಳಲ್ಲಿ ತಮ್ಮ ಮಂತ್ರಾತ್ಮಾಕಾಂಕ್ಷೆ ಧ್ಯೇಯೋದ್ದೇಶಗಳನ್ನು ಸ್ಪಷ್ಟವಾಗಿ ಮಂಡಿಸತಕ್ಕವರು. ಅವರು ಜನಾನುರಾಗಿಗಳಾದವರು. ಅವರು ನಂ. ೧೧ ವಿಲ್ಲಿಂಗ್‌ಡನ್ ಕ್ರೆಸೆಂಟ್, ನವದೆಹಲಿ—ಈ ನಿವಾಸದಲ್ಲಿ ವಾಸಿಸುವರು. ಅವರ ನಿವಾಸದಲ್ಲಿ ಅವರ ಸ್ನೇಹಿತರು ಹಾಗೂ ಇತರರೂ ನಿರಂತರವಾಗಿ ಭೇಟಿಗಾಗಿ ಬರುತ್ತಿರುವರು.



ಜೀವ ವಿಮೆಯ
ಆಶ್ರಯದಲ್ಲಿ ಭದ್ರತೆ

ದೂರ ದೃಷ್ಟಿಯುಳ್ಳವನು
ತನ್ನ ಸಂಸಾರದ ಮುಂದಿನ
ಸಂರಕ್ಷಣೆಯನ್ನು ಯೋಚಿಸುತ್ತಾನೆ.
ಜೀವ ವಿಮೆ ಅದನ್ನು
ಸಾಧ್ಯಗೊಳಿಸುತ್ತದೆ.

ಲೈಫ್ ಇನ್ಷೂರನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ

ಡಿವ್ಹಿಜನಲ್ ಆಫೀಸ್—ಕೆನರಾ ಮ್ಯೂಚುವಲ್ ಬಿಲ್ಡಿಂಗ್, ಉಡುಪಿ.
ಶಾಖೆಗಳು:- ಉಡುಪಿ, ದಾವಣಗೆರೆ, ಧಾರವಾಡ, ಮಂಗಳೂರು.

ಕಾಸರಗೋಡು

ಚಂದ್ರಗಿರಿ ಹೊಳೆಯ ಉತ್ತರಪ್ರದೇಶ ಕರ್ನಾಟಕ

ಆದು ಕೂಡಲೇ ಮೈಸೂರಿಗೆ ಸೇರುವಂತೆ ಗೊತ್ತುವಳಿ

ಈ ತಿಂಗಳ ಎರಡನೆ ವಾರದಲ್ಲಿ ಕಾಸರಗೋಡು ತಾಲೂಕನ್ನು ಮೈಸೂರು ರಾಜ್ಯದೊಡನೆ ಸೇರಿಸುವ ಬಗ್ಗೆ ಮಂಗಳೂರಲ್ಲಿ ಒಂದು ಸರ್ವಪಕ್ಷ ಸಮ್ಮೇಳನವು ನಡೆಯಿತು. ಈ ಸಮ್ಮೇಳನದಲ್ಲಿ ಮೊದಲು, ಮಂಜೇಶ್ವರ ಮತ್ತು ಕುಂಬಳೆ ಫಿರ್ಕಗಳು ಮಾತ್ರ ತೀವ್ರವೇ ಮೈಸೂರಿನಲ್ಲಿ ವಿಲೀನವಾಗಬೇಕೆಂದು ಗೊತ್ತುವಳಿ ಬಂದರೂ ಮುಂದೆ, ಎದ್ದು ಬಂದ ತಿದ್ದುಪಡಿಯಿಂದ ಎರಡರೊಡನೆ ಕಾಸರಗೋಡು ಫಿರ್ಕವೂ ಸೇರಿ, ಅವು ಮೈಸೂರಿನಲ್ಲಿ ಸೇರಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಚಂದ್ರಗಿರಿ ಹೊಳೆಯ ಉತ್ತರದ ಭಾಗವು ಕರ್ನಾಟಕಕ್ಕೆ ಸೇರಬೇಕಾದುದು ನ್ಯಾಯವೆಂದು ಈ ಮೊದಲೇ ಅಭಿಪ್ರಾಯಗಳು ಪ್ರಕಟವಾಗಿವೆ. ಅಲ್ಲದೆ, ಕುಂಬಳೆ ಮತ್ತು ಮಂಜೇಶ್ವರಗಳನ್ನು ಕೇರಳವೂ ಕೊಡಲು ಮುಂದೆ ಬಂದಿರುವುದೆಂದೂ ತಿಳಿಯುತ್ತದೆ. ಆದರೆ ರಾಜ್ಯ ಪುನರ್ಘಟನೆಯಾಗಿ ಎರಡು ವರ್ಷಗಳು ಸಲ್ಲುತ್ತ ಬಂದರೂ ಕಾರ್ಯ ಮಾತ್ರ ಏನೂ ಪ್ರಗತಿಕಾಣಲಿಲ್ಲ. ಮುಖ್ಯವಾಗಿ ಪೊನ್ನೆ ನಡೆದ ಸರ್ವಪಕ್ಷೀಯ ಸಮ್ಮೇಳನದಲ್ಲಿ ಗೊತ್ತುವಳಿಗೆ ವಿರುದ್ಧವಾಗಿ ಒಂದೇ ಒಂದು ಮತವೂ ಬೀಳಲಿಲ್ಲ ಎಂಬುದನ್ನು ಗಮನಿಸಿದಾಗ, ಜನತೆಯ ಸ್ಪಷ್ಟಾಭಿಪ್ರಾಯವು ವ್ಯಕ್ತಪಡುವುದು.

ಈ ಮಧ್ಯೆ ಕಾಂಗ್ರಾಸಿನ ಮಾಜಿ ಅಧ್ಯಕ್ಷ ಜನರಲ್ ಶ್ರೀ ಕುಟ್ಟಿಕೃಷ್ಣ ಮೆನನರೊಂದು ಮಾತಾಡಿದ್ದಾರೆ. ಕೇರಳದ ಮುಖ್ಯಮಂತ್ರಿ ನಂಬೂದರಿ ಪಾದರು ಮೇಲೆ ಮಾತ್ರವಲ್ಲದೆ, ದಕ್ಷಿಣಕನ್ನಡಿಗರು ಮೇಲೂ ಅವರ ಮಾತಿನ ಪರಿಣಾಮ ಬೀರುತ್ತದೆ. ಕುಂಬಳೆ ಮತ್ತು ಮಂಜೇಶ್ವರ ಫಿರ್ಕಗಳಲ್ಲಿ ಕಮ್ಯುನಿಸ್ಟರಿಗೆ ಗೇಲು ದೊರೆಯುವುದಿಲ್ಲ ಎಂಬ ಕಾರಣದಿಂದಾಗಿ ಶ್ರೀ ನಂಬೂದರಿ ಪಾದರು ಅವನ್ನು ಕರ್ನಾಟಕಕ್ಕೆ ಕೊಡಲೊಪ್ಪಿದರು ಎಂಬುದು ಒಂದು ರಾಜ್ಯದ ಮುಖ್ಯ ಮಂತ್ರಿಯ ನೀಲಿ ಆಪವಾದ. ಅಲ್ಲದೇ, ದಕ್ಷಿಣ ಕನ್ನಡಿಗರು ಲಿಪಿ ಸಹ ಇಲ್ಲದ (ಸಾಹಿತ್ಯವಿರಲೇ ಬಾರದು ತಾನೆ?) ತುಳು ಮತ್ತು ಕೊಂಕಣಿ ಭಾಷೆಯನ್ನಾಡುವವರು. ಅಲ್ಲಿ ಕನ್ನಡಿಗರು (ಕನ್ನಡ ಮಾತೃ ಭಾಷೆಯಾಗಿರುವವರು) ಕಡಿಮೆ ಎಂದಿದ್ದಾರೆ. ಮಂಗಳೂರು ಕಾಸರಗೋಡು ತಾಲೂಕುಗಳಲ್ಲಿ ಕನ್ನಡ ಆಡುವವರಿಗಿಂತ ಮಲೆಯಾಳ ಆಡುವವರಧಿಕವೆಂದೂ ಕೆಲವೆಡೆ ಳಂ ಸೇಕಡಾ ಮಲೆಯಾಳಿಗಳು ಇರುವರೆಂದೂ ಅವರ ಅಂಬೋಣ.

ಶ್ರೀ ಮೆನನ್ನರು ಹೇಳುವಂತೆ, ದಕ್ಷಿಣ ಕನ್ನಡ (ಕಾಸರಗೋಡು ತಾಲೂಕು ಸೇರಿಯೂ ಸೇರದೆಯೂ)ದ ಜನರಲ್ಲಿ ನಿಜವಾಗಿ ಕನ್ನಡವು ಮಾತೃ ಭಾಷೆಯಾಗಿರುವವರು ಕಡಿಮೆಯೆಂದೂ ಹೆಚ್ಚಿನವರು ತುಳು ಇಲ್ಲವೇ ಕೊಂಕಣಿ ಭಾಷೆಯನ್ನಾಡುವವರೆಂದೂ ಒಪ್ಪಬೇಕು. ಅದರೆ, ದಕ್ಷಿಣ ಕನ್ನಡದವರ ಮುರಬೈಷ್ಟದಿಂದ ತುಳು ಲಿಪಿಯ ಪ್ರಚಾರವಿಲ್ಲದೆ ಅದೇನೋ ಕಾರಣದಿಂದ ಅವರು ಪ್ರಾಥಮಿಕ ತರಗತಿಯಿಂದಲೂ ಕನ್ನಡವನ್ನೇ ತಮ್ಮ ಭಾಷೆಯನ್ನಾಗಿ ಕಲಿಯುತ್ತಾರೆ, ಬಳಸಿಕೊಳ್ಳುತ್ತಾರೆ. ಮದ್ರಾಸು ರಾಜ್ಯದಲ್ಲಿರುವಾಗಲೂ ದಕ್ಷಿಣ ಕನ್ನಡಿಗರ ಮೇಲೆ ಕನ್ನಡವನ್ನೇ ಹೇರಲಾಗಿತ್ತು. ಅವರು ಅದನ್ನೇ ಕಲಿತು, ಅಧ್ಯಾಸ, ಸಂಸರ್ಗ, ಪರಂಪರೆಗಳ ಬಲದಿಂದ ಕನ್ನಡಿಗರಾಗಿದ್ದಾರೆ—ಅಥವಾ ದಕ್ಷಿಣ ಕನ್ನಡಿಗರೇತರ ಕನ್ನಡಿಗರ ದತ್ತಕ ಪುತ್ರರಾಗಿದ್ದಾರೆ. ಹಾಗಿರುವಾಗ, ದಕ್ಷಿಣ ಕನ್ನಡದ ಒಂದು ಭಾಗ ಕರ್ನಾಟಕವಾದ ಮೈಸೂರಿಗೆ ಸೇರುವಾಗ, ಕನ್ನಡ ಸಂಸ್ಕೃತಿಯಲ್ಲೇ ಬಾಳಿಬೆಳೆದು ಬಂದ ಕಾಸರಗೋಡಿನ 'ಕನ್ನಡಿಗರು' ಕೇರಳದಲ್ಲಿಯೇ ಕೊಳೆಯುಬೇಕೆಂದು ಚಂಡಿ ಹಿಡಿಯುವುದು ಯಾವ ಸಮಂಜಸವೆನ್ನಿಸಬರುವುದಿಲ್ಲ.

ಕೇರಳವು ತೀರ ಚಿಕ್ಕ ರಾಜ್ಯ, ಅದರಲ್ಲಿಯೂ ಈಗ ಇರುವ ಕಾಸರಗೋಡಿನ ತುಂಡನ್ನು ಕೊಟ್ಟುಬಿಟ್ಟರೆ ಮತ್ತೂ ಕಣ್ಣಾದಾಗುವುದೆಂದು ಕರುಬುತ್ತಾರೆ—ಶ್ರೀ ಮೆನನ್ನರು. ಆದರೆ, ಈ ಹಿಂದೆ ತಿರುವಾಂಕೂರು ಹಾಗೂ ಕೊಚ್ಚಿ ಸಂಸ್ಥಾನಗಳು ಕಳೆದುಳಿಯುವ ಕೇರಳಕ್ಕಿಂತ ವಿಶಾಲವೆಂದವರು ಭಾವಿಸಿದ್ದಾರೆಯೆ? ಅಥವಾ ಕೇರಳ ರಾಜ್ಯ ಹಿರಿಜಾಗಬೇಕೆಂಬ ಇರಾದೆಯಿಂದ ಕೂಡಿರುವರಾದರೆ, ಭಾರತದ ಹೆಸರನ್ನೇ ತೆಗೆದು "ಕೇರಳ"ವೆಂದದನ್ನು ಸಂಬೋಧಿಸುವ ಮಾತನ್ನೇ ಏಕೆ ಆಡಬಾರದಿತ್ತು? ಹೇಗೂ ನಾಯಕ ನೇತಾರರು ಹೆಸರಿನಲ್ಲೇನಿದೆ ಎಂದು ಆಗಾಗ ಹೇಳುತ್ತಿರುತ್ತಾರೆ. ಈ ಪ್ರಶ್ನೆಯು ಸಾರ್ಥಕವೆಂದು ಸಮರ್ಥಿಸುವುದಕ್ಕೂ ಈ "ಕೇರಳೀಯ ನಾಮಕರಣ"ವೊಂದು ಉಚ್ಚ ಆದರ್ಶ ಉದಾಹರಣೆಯಾಗಬಹುದು. ಆದುದರಿಂದ, ವಿದೇಶ ಸಂಚಾರ ಮುಗಿಸಿ ಬಂದ ಶ್ರೀ ಮಾನ್ ಜಯಪ್ರಕಾಶರೂ ಅವರೊಡನೆ ಕೇಂದ್ರಮಂತ್ರಿ ಶ್ರೀ ಎಸ್. ಕೆ. ಪಾಟೀಲರೂ ಶ್ರೇಷ್ಠ ನಾಯಕರು ಪದತ್ಯಾಗ ಮಾಡಿ ಜನಸಂಘರ್ಷಣೆಗಿಳಿಯಬೇಕೆನ್ನುವಂತೆ ರಾಮಚಂದ್ರಾಮಿ ನಾಯ್ಕರ ಸಂವಿಧಾನ ಜ್ವಲನ ಆಂದೋಲನವಂತೆ ಶ್ರೀ ಮೆನನ್ನರೂ ಭಾರತದ ಹೆಸರನ್ನು "ಕೇರಳ" ಎಂದಿಡುವಂತೆ ಸತ್ಯಾಗ್ರಹ (ಇದೆಂದಿಗೂ ದುರಾಗ್ರಹವಾಗುವುದಿಲ್ಲ) ವನ್ನೇಕೆ ಹೂಡಬಾರದೆ? ಆಗ ಸುವಿಶಾಲವಾದ ಕೇರಳ ದೊರೆಯುವುದು. ಅಲ್ಲದೇ ಅವರ ಹೆದರಿಕೆಗೆ ಮೂಲಕಾರಣ (?)ವಿರಬಹುದಾದ ಕಮ್ಯುನಿಸ್ಟ ವಿಜಯವೂ ಸದ್ಯ ಸಂಭವನೀಯವಲ್ಲ. ಏಕೆಂದರೆ, ಈ ಬಗ್ಗೆ ಹಿಂದೊಮ್ಮೆ ಭಾರತದ ರಾಜಕೀಯ ಭವಿಷ್ಯದರ್ಶಿ, ಸದಾ ಸನ್ಯಾಹಾರಿ, ದೃಢಕಾಯ, ಪಾಶ್ಚಾತ್ಯ ಭಾವೀ ಭಾರತೀಯ ಪ್ರಧಾನಿ (ಪಾಶ್ಚಾತ್ಯರ ದೃಷ್ಟಿಯಲ್ಲಿ ಭಾವೀ ಭಾರತೀಯರ ಪ್ರಧಾನಿಯೆಂದು ವಿಗ್ರಹಿಸಿಕೊಳ್ಳಿ) ಹಾಗೂ ನೆಹರೂ ಉತ್ತರಾಧಿಕಾರಿಯಾದ ಶ್ರೀ ಅರ್ಥ ನುಂತ್ರಿ ದೇಸಾಯಿಯವರು ತಮ್ಮ ಶಾಖೆಗೆ ಹೊರಗಿನ ವಿಷಯವಾದರೂ ಈ ಬಗ್ಗೆ ನಂಬುಗೆ ಇತ್ತಿದ್ದಾರೆ. ಆದುದರಿಂದ ಶ್ರೀ ಮೆನನರು ಅದಕ್ಕಾಗಿ ಅಂಜಬೇಕಾದ ಪ್ರಮೇಯವಿಲ್ಲ.

ಈಗಿನ ದಕ್ಷಿಣ ಕನ್ನಡಿಗರು ಅತ್ಯಕ್ನಡಿಗರೂ ಅಲ್ಲ, ಹೆಚ್ಚು ಮಂದಿ ಮಲೆಯಾಳಿಗಳೂ ಅಲ್ಲ; ಅವರ ಭಾಷೆಗೆ ಲಿಪಿಯೂ ಇಲ್ಲ, ಸಾಹಿತ್ಯ ಮೊದಲೇ ಇಲ್ಲ ಎಂಬ ಗಂಭೀರ ಆರೋಪನ್ನು ಸಹನಾಶೀಲರಾದ ಮತ್ತು ಅಪ್ರತಿಮ ನೇಥಾವಿಗಳೆಂಬ ಬಿರುದುಭಾಜನರಾದ ದಕ್ಷಿಣಕನ್ನಡಿಗರು ಕಾಸರಗೋಡಿನ ವಿರಹವನ್ನಿದುವರೆಗೆ ಸಹಿಸಿದಂತೆ, ಇನ್ನು ಮುಂದೆಕ್ಕೂ (ಚಿರಕಾಲವಲ್ಲವಾದರೂ ಬಹುಕಾಲ) ಸಹಿಸುವಂತೆ ತಾಳಿಕೊಳ್ಳುವರು. ಏಕೆಂದರೆ, ಮಹಾಪ್ರಪ್ರದ ಜನದೇವನಾದ ಪಂಡರಾಪುರದ ವಿಷ್ಣುವಿನ ಅನನ್ಯ ಭಕ್ತರಾದ ಪುರಂದರ ದಾಸರು ಕನ್ನಡದಲ್ಲಿ ಹಾಡಿದ ತುಂಡು ಪಲ್ಲವಿಯನ್ನವರು ತಮಗೆ ಬೇಡವಾದರೂ ಸದೇ ಸದೇ ಮೆಲುಕು ಹಾಕುತ್ತಿರುತ್ತಾರೆ: "ತಾಳುವಿಕೆಗಿಂತನ್ಯ ತಪವು ಬೇರಿಲ್ಲ!"

ಅಮೆರಿಕೆಯ ಅಣುಶಕ್ತಿಚಾಲಿತ ಸಬ್‌ಮೆರಿನನ್ನು ಉತ್ತರ ಧ್ರುವದ ಮಂಜುಗಡ್ಡೆಗಳಡಿಯಲ್ಲಿ ಹೋಗುತ್ತಿರುವಾಗ, ಅದರ ಯಂತ್ರವನ್ನು ಪರಿಶೀಲಿಸಲಾಗುತ್ತಿದೆ.

ನೋಟೀಸು.

ಉಡ್ಪಿ ಡಿ. ಮು. ಕೋರ್ಟ್‌ನಲ್ಲಿ

S. C. No. 497/1958.

ಬಿ. ಬಡಿಯ ನ್ಯಾರಿ — ವಾದಿ.

ಮತ್ತು

ಹೆರಿಯ ಪೂಜಾರಿ, ಸದುಹಿತ್ಲು ಸೂರ. ಪೂಜಾರಿ ಆಳಿಯ, ಉಡ್ಪಿ ತಾಲೂಕು ವಾರೆಂಬಳ್ಳಿ ಗ್ರಾಮದಲ್ಲಿರುವವನ—

ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿರು ನಿಮ್ಮಿಂದ ದಿವಾನಾಂಡು ನೋಟಿನ ಬಾಬ್ತು ಬರತಕ್ಕ ಏಜೆಜಿಗೆ ದಾಖ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ನಿಮ್ಮ ಆಳ್ಕೆರಿ ನೋಟೀಸು ಬಗ್ಗೆ ತಾ. 7—11—1958ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಳ್ಕೇದವರ್ಗೆರ ಇದ್ದಲ್ಲಿ ಸದ್ರಿ ತನಿಕೆಯ ದಿವಸ ಬೆಳಿಗ್ಗೆ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರು ಆಗಿ ಜಾಹೀರು ನಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ನಿಮ್ಮ ಸೈರು ಹಾಜರಿಯಿಂದ ಸದ್ರಿ ವ್ಯಾಜ್ಯ ಏಕಪಕ್ಷವಾಗಿ ತೀರ್ಮಾನಿಸಲಾದೀತು, ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸಿದೆ.

K. Varadaraya Pai,
Advocate for Plaintiff.

ಉಡ್ಪಿ, ತಾ. 20—10—1959.

ಯಾವ ಮನುಷ್ಯನಿಗಾದರೂ, ಯಾವ ವೇಳೆಯಲ್ಲೂ, ಯಾವುದೇ ಕಾರಣಕ್ಕಾಗಿ ಉಳಿತಾಯಗಳ ಬೆಂಬಲವು ಬೇಕಾಗಬಹುದು. ಅಂತಲೇ ನೀವು ಯೋಗ್ಯವಿರುವ ಉಳಿತಾಯ ಯೋಜನೆಯನ್ನು ಈಗಿಂದೀಗಲೇ ಅನುಸರಿಸುವುದು ಅತೀ ಆಗತ್ಯ. ಇದಕ್ಕಾಗಿ ನಿನಗೆ ಬೇಕಾದ ಸಲಹೆ-ಸಹಕಾರಗಳನ್ನು ಕೊಡಲು ನಾವು ಸದಾ ಸಿದ್ಧರಿದ್ದೇವೆ!

ಇಂದೇ ವಿಚಾರಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಛೇರಿ: ಉಡುಪಿ (ದ. ಕನರ)

ಮಕ್ಕಳ ಮಗ್ಗಿಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ ೦ ೧ ೦ .

ನವಯುಗ ಪ್ರೆಸ್, ಉಡುಪಿ.

ಪ್ರಗತಿಪಥ

ಭಾರತ—೧೯೫೮ ವಸ್ತು ಪ್ರದರ್ಶನ

ಭಾರತದ ಪ್ರಗತಿಯನ್ನು ತೋರಿಸುವ ಒಂದು ಮಹತ್ವದ ಪ್ರದರ್ಶನವಾಗಿದೆ

'ಭಾರತ-೧೯೫೮' ವಸ್ತುಪ್ರದರ್ಶನವು ಹಲವಾರು ವಿಷಯಗಳಲ್ಲಿ ಪ್ರಪ್ರಥಮ ರೀತಿಯದಾಗಿರುತ್ತದೆ. ಇದು ರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥೆಗೊಳಿಸಲ್ಪಟ್ಟು ಮೊದಲನೆಯ ವಸ್ತುಪ್ರದರ್ಶನವಾಗಿದೆ. ಇದು ವ್ಯವಸ್ಥೆಗೊಳಿಸಲ್ಪಟ್ಟಿರುವ ಸಮಯ, ಉದ್ದೇಶ, ತಂತ್ರವಿಧಾನ, ಸಂಘಟನೆ ಇತ್ಯಾದಿಗಳು ಸಹ ಭಾರತದಲ್ಲಿ ಹಿಂದೆ ಏರ್ಪಡಿಸಲ್ಪಟ್ಟಿದ್ದ ವಸ್ತುಪ್ರದರ್ಶನಗಳಿಗಿಂತ ವಿಭಿನ್ನವಾಗಿದೆ.

ಆರ್ಥಿಕ ಹಾಗೂ ಕೈಗಾರಿಕಾಭಿವೃದ್ಧಿ ಹೊಂದಿರುವ ಅನೇಕ ರಾಷ್ಟ್ರಗಳಲ್ಲಿ ಈ ಚೆಗೆ ವಿವಿಧ ದರ್ಜೆಯ ವಸ್ತು ಪ್ರದರ್ಶನಗಳನ್ನು ನೋಡಬಹುದಾಗಿದೆ. ಕೆಲವು ವಸ್ತು ಪ್ರದರ್ಶನಗಳು ಖಾಯಂ ಆದವು; ಅನೇಕ ತಾತ್ಕಾಲಿಕ ಅವಧಿಯವು.

ಖಾಯಂ ವಸ್ತು ಪ್ರದರ್ಶನಗಳಲ್ಲಿ ಅನೇಕವನ್ನು 'ವಸ್ತು ಸಂಗ್ರಹಾಲಯ' ವರ್ಗಕ್ಕೆ ಸೇರಿಸಬಹುದಾಗಿದೆ. ಮತ್ತೆ ಕೆಲವನ್ನು 'ತಾಂತ್ರಿಕ ವಸ್ತು ಸಂಗ್ರಹಾಲಯ' ಗಳ ವರ್ಗಕ್ಕೆ ಸೇರಿಸಬಹುದಾಗಿದೆ.

ಸುಸ್ಥಾಪಿತ ಹಾಗೂ ಹೆಸರು ಪಡೆದಿರುವ ವಸ್ತು ಪ್ರದರ್ಶನಗಳಲ್ಲಿ ಅನೇಕವು ವಾಣಿಜ್ಯ ಜಾತ್ರೆಗಳಾಗಿವೆ. ವಾಣಿಜ್ಯ ಮತ್ತು ಉತ್ಪಾದನೆಯನ್ನು ಪ್ರೋತ್ಸಾಹಿಸುವುದೇ ಈ ಜಾತ್ರೆಗಳ ಉದ್ದೇಶವಾಗಿದೆ. ಈ ಜಾತ್ರೆಗಳು ಸಾಧಾರಣವಾಗಿ ಐದು ದಿನಗಳಿಂದ ೧೪ ದಿನಗಳ ಅವಧಿಯ ವರೆಗೆ ನಡೆಯುವುವು. ವಾಣಿಜ್ಯ ಜಾತ್ರೆಗಳನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಬಹುದಾಗಿದೆ: ಸ್ಥಳೀಯ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಜಾತ್ರೆಗಳು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಜಾತ್ರೆಗಳು ಈಗ ವಾಣಿಜ್ಯ ಉತ್ಪೋಜನ ವಿಚಾರದಲ್ಲಿ ಮಹತ್ವಪೂರ್ಣ ಪಾತ್ರ ವಹಿಸುತ್ತಿವೆ.

ಇವಲ್ಲದೆ ಇನ್ನೊಂದು ದರ್ಜೆಯ ವಸ್ತು ಪ್ರದರ್ಶನವಿದೆ. ಇದನ್ನು ವಿಶ್ವ ವಸ್ತು ಪ್ರದರ್ಶನವೆನ್ನಬಹುದು. ಈಗ ಬೆಲ್ಜಿಯಂನ ಬ್ರುಸೆಲ್ಸ್‌ನಲ್ಲಿ ನಡೆಯುತ್ತಿರುವ ವಸ್ತು ಪ್ರದರ್ಶನವು ಈ ದರ್ಜೆಗೆ ಸೇರಿದ್ದು. ವಿಶ್ವ ವಸ್ತು ಪ್ರದರ್ಶನವು ಸಾಧಾರಣವಾಗಿ ೧೫ ವರ್ಷಗಳಿಗೊಮ್ಮೆ ನಡೆಯುವುದು.

ವಸ್ತು ಪ್ರದರ್ಶನಗಳ ಸಂಘಟನೆ ಮತ್ತು ವ್ಯವಸ್ಥೆಯ ವಿಧಾನ ಮತ್ತು ತಂತ್ರ ವಿಧಾನಗಳು ಒಂದೊಂದು ವಸ್ತು ಪ್ರದರ್ಶನಕ್ಕೂ ಬೇರೆ ಬೇರೆಯದಾಗಿರುತ್ತದೆ. ವಿಧಾನ ಮತ್ತು ತಂತ್ರ ವಿಧಾನಗಳು ಸಾಮಾನ್ಯವಾಗಿ ವಸ್ತು ಪ್ರದರ್ಶನದ ಸಂಪನ್ಮಾಧನಗಳು ಮತ್ತು ಉದ್ದೇಶಗಳನ್ನು ಅವಲಂಬಿಸಿರುತ್ತವೆ.

"ಭಾರತ—೧೯೫೮" ವಸ್ತು ಪ್ರದರ್ಶನವು ಏಕೋದ್ದೇಶದ್ದಾಗಿದೆ. ಇದನ್ನು ಅಖಿಲ ಭಾರತದ ಆಧಾರದ ಮೇಲೆ ವ್ಯವಸ್ಥೆಗೊಳಿಸಲಾಗಿದೆ. ಆದ್ದರಿಂದ ಇದು ರಾಷ್ಟ್ರೀಯ ವಸ್ತು ಪ್ರದರ್ಶನವಾಗಿದೆ. ನಮ್ಮ ದೇಶಬಾಂಧವರಿಗೆ ದೇಶದ ಪ್ರಗತಿಕ ಹಾಗೂ ಆರ್ಥಿಕ ಸಂಪತ್ಸಾಧನಗಳ ಸಹಾಯದಿಂದ ಹೀಗೆ ವಿವಿಧ ಆಭಿವೃದ್ಧಿ ಯೋಜನೆಗಳನ್ನು ಕೈಗೊಡಿಸಲು ಪ್ರಯತ್ನಿಸಲಾಗುತ್ತಿದೆ ಎಂಬುದನ್ನು ತಿಳಿಸುವುದು ಈ ವಸ್ತು ಪ್ರದರ್ಶನದ ಉದ್ದೇಶವಾಗಿದೆ. ಆರ್ಥಿಕ, ಕೈಗಾರಿಕಾ, ವೈಜ್ಞಾನಿಕ, ಔದ್ಯೋಗಿಕ ವಿಜ್ಞಾನದ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿನ ಪ್ರಗತಿಯನ್ನು ಪರಿಚಯ ಮಾಡಿಕೊಡುವುದೂ ಒಂದು ಉದ್ದೇಶವಾಗಿದೆ.

"ಭಾರತ—೧೯೫೮" ವಸ್ತುಪ್ರದರ್ಶನವು ೧೩೦ ಎಕರೆಗಳಿಗೂ ಹೆಚ್ಚಿನ ವಿಸ್ತೀರ್ಣಕ್ಕೆ ವ್ಯಾಪಿಸಿದೆ. ಸಂದರ್ಶಕರ ಅನುಕೂಲಕ್ಕಾಗಿ ನಾಲ್ಕು ದ್ವಾರಗಳಿರುವುವು. ವಸ್ತು ಪ್ರದರ್ಶನವನ್ನು ೩೨ ಕೇಂದ್ರಗಳ ಸ್ಥಾನಿಗಿ ವಿಭಾಗಿಸಲಾಗಿದೆ. ೩೨ ಕೇಂದ್ರಗಳಲ್ಲಿ ೧೬೯ ಪೆವಿಲಿಯನ್‌ಗಳು ಮತ್ತು ೧೩೫ ಪ್ರದರ್ಶನಾಲಯಗಳು ಇರುವುವು. ಒಂದು ಕಲಾಮಂಟಪ, ಮನರಂಜನಾ ಪಾರ್ಕ್, ಮಕ್ಕಳಿಗಾಗಿ ಪ್ರತ್ಯೇಕ ಪಾರ್ಕ್, ಮತ್ತು ಸರೋವರ. ಇವುಗಳನ್ನು ಸಂದರ್ಶಕರ ಮನೋಲ್ಲಾಸ, ಮನರಂಜನೆಗಾಗಿ ವ್ಯವಸ್ಥೆಗೊಳಿಸಲಾಗಿದೆ.

ಕೆಲವು ಪೆವಿಲಿಯನ್‌ಗಳು ವ್ಯವಸಾಯ, ಸಾರಿಗೆ ಉದ್ಯಮ ಕ್ಷೇತ್ರದಲ್ಲಿನ ಅಭಿವೃದ್ಧಿ ಸ್ಥಳಗಳನ್ನು ತೋರಿಸುವುವು. ಉಳಿದವು ಉತ್ಪಾದನೆಯ ಗತಿ, ವೈಜ್ಞಾನಿಕ, ಔದ್ಯೋಗಿಕ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಕಾರ್ಯಗಳ ಪ್ರಗತಿಗಳನ್ನು ಪ್ರತಿಬಿಂಬಿಸುವುವು.

ಹಲವಾರು ಪೆವಿಲಿಯನ್‌ಗಳು ಸಂಕೀರ್ಣ ರೂಪದ್ದಾಗಿವೆ. ಈ ಸಂಕೀರ್ಣ ರೂಪದ ಪೆವಿಲಿಯನ್‌ಗಳಲ್ಲಿ ಬಹು ಘಟಕಗಳುಳ್ಳ ಉದ್ಯಮಗಳಿಗೆ ಸಂಬಂಧಿಸಿದಂತೆ ವಸ್ತುಗಳನ್ನು ಪ್ರದರ್ಶಿಸಲ್ಪಟ್ಟಿವೆ. ಉದಾಹರಣೆಗೆ ವಿಜ್ಞಾನ ಕೇಂದ್ರದಲ್ಲಿರುವ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಪರಿಷತ್ತಿನ ಪೆವಿಲಿಯನ್‌ನಲ್ಲಿ ವಿವಿಧ ರಾಷ್ಟ್ರೀಯ ಪ್ರಯೋಗಶಾಲೆಗಳು ಮತ್ತಿತರ ಪ್ರಸಿದ್ಧ ವೈಜ್ಞಾನಿಕ ಹಾಗೂ ಔದ್ಯೋಗಿಕ ವಿಜ್ಞಾನ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳ ಕಾರ್ಯ ಮತ್ತು ಮಹತ್ಸಾಧನೆಗಳು ಪ್ರದರ್ಶಿತವಾಗಿವೆ. ಉಷ್ಣಾಂಶ ಮತ್ತು ಸ್ಥಾವ ಸಾಯ, ನೀರಾವರಿ ನುತ್ತು ವಿದ್ಯುಚ್ಛಕ್ತಿ, ಸಾರಿಗೆ ಮತ್ತು ಸಂಪರ್ಕ ಮತ್ತು ಅಲ್ಪ ಪ್ರಮಾಣದ ಉದ್ಯಮಗಳಿಗೆ ಸಂಬಂಧಿಸಿದಂತೆ ಪೆವಿಲಿಯನ್‌ಗಳಿರುವುವು.

ಕೆಲವಾರು ರಾಜ್ಯಗಳು ವ್ಯವಸ್ಥೆಗೊಳಿಸುವ ಸಂಕೀರ್ಣ ಪ್ರದರ್ಶನಗಳಲ್ಲಿ ಸಹ ಆಯಾ ಕ್ಷೇತ್ರದಲ್ಲಿನ ಕೆಲವು ಉದ್ಯಮಗಳ ವರ್ಗ ಪ್ರತಿನಿಧ್ಯವಿರುವುದು. ಉದಾಹರಣೆಗೆ ಸಾರಿಗೆ ವಿಭಾಗದ ಪೆವಿಲಿಯನ್‌ನಲ್ಲಿರುವ ಒಂದು ಭಾಗವು ಆರು ವ್ಯಾಪಾರಿ ನೌಕಾ ಶಂಬೇತಿ ಸಂಸ್ಥೆಗಳು ಮತ್ತು ಎರಡು ಕಾರ್ಪೊರೇಷನ್‌ಗಳಿಗೆ ಸಂಬಂಧಿಸಿದೆ. ಪ್ರತಿಯೊಂದು ಸಂಸ್ಥೆಯು ದೇಶದ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ವಹಿಸಿರುವ ಪಾತ್ರವನ್ನು ಈ ವಿಭಾಗದಲ್ಲಿ ನಿರೂಪಿಸಲಾಗಿದೆ.

(ಅನೇ ಪುಟ ನೋಡಿರಿ)

"ಕಷ್ಟದಲ್ಲಿರುವ ನಮ್ಮ ಸಹೋದರರನ್ನು ಕೈಬಿಡಲಾರೆವೆನ್ನುವ ಹೆಮ್ಮೋದ್ಗಾರ ಸಂದೇಶ ಚಿನ್ದೆಯಾಗಿ ಈ ದೇಶದ ಪ್ರತಿಯೊಬ್ಬ ಗಂಡಸೂ, ಹೆಂಗಸೂ ಟಿ. ಬಿ. ಮೊಹರುಗಳನ್ನು ಕೊಂಡುತೊಳ್ಳುವುದು ರಾಷ್ಟ್ರಕ್ಕೆ ಸಲ್ಲಿಸುವ ಸೇವೆಯಾಗಿದೆ."
—ರಾಜಕುಮಾರಿ ಅಮೃತ್‌ಕೌರ್.

ಮತ್ತೀಗ
ಪೂ ಜಾ ಹ ಬ್ಬ ದ
ಸಮಯದಲ್ಲಿ

ನಾವೆಲ್ಲರೂ ನಮ್ಮ ಅದೃಷ್ಟಹೀನ ಟಿ. ಬಿ. ರೋಗಿಗಳ ಬಗ್ಗೆ ಟಿ. ಬಿ. ಮೊಹರು ಚಳವಳಿಗೆ ಬೆಂಬಲ ನೀಡುವ. ಟಿ. ಬಿ. ಮೊಹರುಗಳು ಕ್ಷಯರೋಗವನ್ನು ಹೊಡೆದೋಡಿಸಲು ಪ್ರಯತ್ನಿಸುವ ದೇಶ ಸಂಕಲ್ಪದ ಸಂಕೇತವಿರುವುವು!

ಅಧಿಕ ಸಂಖ್ಯೆಯಲ್ಲಿ



ಟಿ. ಬಿ. ಮುದ್ರೆಗಳನ್ನು ಖರೀದಿಸಿ ಉಪಯೋಗಿಸಿರಿ!

ಅವುಗಳು ದೊರೆಯುವ ಸ್ಥಳಗಳು:
1. ದಿ ಒನೆರರಿ ಸೆಕ್ರೆಟರಿ, ಸೀಲ್ ಸೇಲ್ ಕಮಿಟಿ, ಗೋಪಾಲಕೃಷ್ಣ ಟೆಂಪಲ್ ರೋಡ್, ಮಂಗಳೂರು.
2. ಜಿಲ್ಲಾ ಮೆಡಿಕಲ್ ಆಫೀಸರ್, ಮಡಿಕೇರಿ, ಕೊಡಗು.
3. ದಿ ಒನೆರರಿ ಸೆಕ್ರೆಟರಿ, ಮೈಸೂರು ಸ್ಟೇಟ್ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ಸ್ಟೇಟಿನಲ್ಲಿರುವ ಇತರ ವಿಜನ್ಸಿಗಳು.

ಭಾರತದಲ್ಲಿ ಒಂಭತ್ತನೆ ಟಿ. ಬಿ. ಮುದ್ರೆ ಮಾರಾಟದ ಚಳವಳಿ

ಜಾಹೀರಾತು ಸ್ಥಳ ದಾನ ಮಾಡಿದವರು:
ದಿ ಪೆಟ್ಲಾಡ್ ಟರ್ಕಿ ರೆಡ್ ಡ್ಯಾ ವರ್ಕ್ಸ್ ಕೊ. ಲಿಮಿಟೆಡ್, ಪೆಟ್ಲಾಡ್.

ಅಳುತ್ತ ಅಳುತ್ತ ಮಾನವನು ತಾಯ್ಗರ್ಭದಿಂದ ಭೂಮಿಗಿಳಿಯುತ್ತಾನೆ; ತನ್ನ ಸಾರುಷಪ್ರದರ್ಶನದಿಂದಲೇ ಬೆಳೆದು ಪ್ರಪಂಚದಲ್ಲಿ ಬಾಳುತ್ತಾನೆ; ಆದರೆ, ಈ ಕ್ಷುದ್ರ ಜಗತ್ತನ್ನು ತೊರೆಯುವ ಅವಸರ ಬಂದಾಗ ಮಾತ್ರ ಸಂಪೂರ್ಣ ನಿರಾಶನಾಗಿ ಹೋಗುತ್ತಾನೆ; ಮತ್ತು ಅತೀವ ನಿರಾಶೆಯಿಂದಲೇ ಕಾಲಮುಖನಾಗುತ್ತಾನೆ.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಸ್ನಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ ೩	ಉಡುಪಿ ೨೩–೧೦–೧೯೫೫	ವಾರ ೪

ಗಡಿತಂಟೆಗಳು

ರಾಜ್ಯ ಪುನರ್ಘಟನೆಯಾಗಿ ಎರಡು ವರ್ಷಗಳು ಸಂದು, ದ್ವಿತೀಯ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿರುವ ನವಂಬರ ೧ರಿಂದು ಬೆಳಗಾವಿಯಲ್ಲಿ ಸಂಯುಕ್ತ ಮಹಾರಾಷ್ಟ್ರ ಸಮಿತಿ ಹಾಗೂ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸ್ತೋತ್ಸಾಹ ಹಾಗೂ ನೇತೃತ್ವದಲ್ಲಿ ಮೈಸೂರಿನಲ್ಲಡಕವಾಗಿರುವ ಬೆಳಗಾವಿಯನ್ನು ಮುಂಬಯಿಗೆ ನೇರಿಸಬೇಕೆಂಬ ವಾದವನ್ನು ಮುಂದೂಡಿ, ಸತ್ಯಾಗ್ರಹವು ಆರಂಭವಾಗಲಿದೆಯೆಂದು ವರದಿಗಳು ಬಂದಿರುತ್ತವೆ. ಮೈಸೂರು–ಮುಂಬಯಿ ಗಡಿ ಪ್ರಶ್ನೆಗಳಲ್ಲಿ ಒಮ್ಮತದ ನಿರ್ಧಾರವಾಗದೇ ಇರುವುದೆಂತೂ ನಿಶ್ಚಯ. ಆದರೆ, ಬೆಳಗಾವಿಯು ಮುಂಬಯಿಗೆ ಸೇರಬೇಕು ಎಂಬ ವಾದದಲ್ಲಿಯೇ ಹುರುಳಿಲ್ಲದಿರುವಾಗ, ಈ ಸತ್ಯಾಗ್ರಹವು ದುರಾಗ್ರಹವೇ ಎನ್ನದೆ ಗತ್ಯಂತರವಿಲ್ಲ.

ರಾಜ್ಯ ಪುನರ್ಘಟನಾ ಸಮಿತಿಯು ಸಾಕಷ್ಟು ಪರಿಶೀಲನೆಗಳನ್ನು ಮಾಡಿ, ಆ ಮೊದಲು ಈ ಬಗ್ಗೆ ಪ್ರಕಟವಾದ ವಿವಿಧ ಅಭಿವ್ಯಾಯಗಳನ್ನು ಮನಗಂಡು ಬೆಳಗಾವಿಯು ಕನ್ನಡದ್ದೆಂದು ನಿರ್ಧರಿಸಿದ್ದಾರೆ. ಅಂತೆಯೇ ಆವಶ್ಯಕ ವಿಧೇಯಕವನ್ನು ಜನತಾ ಪ್ರತಿನಿಧಿಗಳು ತಯಾರಿಸಿ ಮಂಜೂರು ಮಾಡಿರುತ್ತಾರೆ. ಹಾಗಿರುವಾಗ, ಜನತೆಯ ಅಭಿವ್ಯಾಯಕ್ಕೆ ಮನ್ನಣೆ ದೊರೆತಿಲ್ಲ ಎಂದು ಮರಾಠಿ ಧುರೀಣರು ಹೇಳುತ್ತಾ ಬರುವುದೂ ಆ ಬಗ್ಗೆ ತಮ್ಮ ಜೇಲರ ಮೂಲಕ ಹಾಗೂ ಪತ್ರಿಕಾದ್ವಾರಾ ಪ್ರಚಾರ ಕಾರ್ಯವನ್ನು ತೊಂಬು ಹುರುಪಿನಿಂದ ಕೈಗೊಳ್ಳುತ್ತಿರುವುದೂ ಅನ್ಯಾಯವೆನ್ನದೆ ನಿರ್ವಾಹವಿಲ್ಲ. ಪ್ರಜಾಪ್ರಭುತ್ವರಾಷ್ಟ್ರದಲ್ಲಿ ಒಂದು ಪಂಗಡದ ಜನರ ಮಾತು ಸಫಲವಾಗಲಿಲ್ಲವೆಂದು ಆ ಜನಪ್ರತಿನಿಧಿಗಳು ಬಹುಮತದಿಂದ ನಿರ್ಧರಿಸಿದ ಒಂದು ಪ್ರಸ್ತಾಪವನ್ನು ವಿರೋಧಿಸುವುದು ಸರಿಯೆಂದು ಯಾವ ಪ್ರಜಾಪ್ರಭುತ್ವ ಪ್ರೇಮಿಯೂ ಒಪ್ಪಲಾರ. ಅಲ್ಲದೆ ಬೆಳಗಾವಿಯ ಬಗ್ಗೆ ಮಹಾರಾಷ್ಟ್ರೀಯರ ಕೇಳಿಕೆಯೂ ಅನ್ಯಾಯವಾದುದು. ಬೆಳಗಾವಿಯು ಹಿಂದಿನ ಕಾಲದಿಂದಲೂ ಕರ್ನಾಟಕ ಸಂಸ್ಕೃತಿಯ ತವರು ಮನೆಯಾಗಿತ್ತು. ಮಹಾರಾಷ್ಟ್ರವೆಂಬ ಹೆಸರಾದರೂ ಉದ್ಭವಿಸಿದುದು ಕೆಲವು ಶತಮಾನಗಳಿಂದ ಮಾತ್ರ. ಪೇಶ್ವೆಗಳ ಕಾಲದಲ್ಲಿ ಮಾತ್ರ ಮರಾಠಿಗರ ಪ್ರಭಾವವು ಬೆಳಗಾವಿಯ ಮೇಲೆ ಬಿದ್ದು, ಮರಾಠೀಕರಣಕ್ಕೆ ತೊಡಗಿದಂತಾಯಿತು. ಮುಂದೆ, ಮುಂಬಯಿ ರಾಜ್ಯದಲ್ಲಿ ಸೇರಿಕೊಂಡಿರುವಾಗಲೂ ಮರಾಠಿಗರ ಸಂಖ್ಯೆಯೂ ಸಂಪರ್ಕವೂ ಬೆಳೆಯಿತು. ಅದು ಸ್ವಾಭಾವಿಕವೇ. ಒಂದು ರಾಜ್ಯದಲ್ಲಿ ವಿವಿಧ ಭಾಷೆಗಳನ್ನಾಡುವ ಜನರಿರುವಾಗ, ಸಾಮಾಜಿಕ ಹಾಗೂ ಶಾಸನಿಕ ವ್ಯವಸ್ಥೆಯಿಂದ ಒಂದು ಜನಾಂಗದ ಪ್ರಭಾವವಿನ್ನೊಂದು ಜನಾಂಗದ ಮೇಲೆ ಬೀಳುವುದು ಅಸಂಭವವಲ್ಲ. ಅಲ್ಲದೇ ಕಾರಣಾಂತರಗಳಿಂದ ಬೆಳಗಾವಿಯು ಬೆಳೆದು ಬಂದಂತೆ ಅಲ್ಲಿ ಬಂನು ತಾತ್ಕಾಲಿಕವಾಗಿ ಉಳಿಕೊಳ್ಳುವವರ ಸಂಖ್ಯೆಯೂ ಹೆಚ್ಚಿತು. ಮರಾಠಿಗರು ಯುಕ್ತಿ ಚಾತುರ್ಯದಿಂದ ಜನಗಣನೆಯಲ್ಲೂ ವಂಚನೆಯು ನಡೆದು, ಮುಂದೆ, ಜನಗಣನೆಯು ಅಂಕೆ ಅಂಶಗಳು ಯಥಾರ್ಥವಲ್ಲನೆಂದೂ ಘೋಷಿಸಲಾಯಿತು. ಕನ್ನಡಿಗರು ಅಧಿಕ ಸಂಖ್ಯಾಕರಲ್ಲವೆಂಬ ಕಾರಣದಿಂದ ಬೆಳಗಾವಿಯು ತಮಗೆ ಸೇರಬೇಕೆಂದು ಹೇಳಿ, ಅದಕ್ಕೋಸ್ಕರ ಸತ್ಯಾಗ್ರಹ ಹೂಡುವುದು ಪ್ರಜಾಪ್ರಭುತ್ವ ರಾಷ್ಟ್ರದ ಶಾಸನವನ್ನಲ್ಲಂಟಿಸಿದಂತೆಯೇ ಸರಿ. ಇತ್ತೀಚೆಗೆ ಅಲ್ಲಿ ನಾಡಹಬ್ಬದ ಆಚರಣೆಗೋಸ್ಕರ ಹಾಕಲಾಗಿದ್ದ ಹಂದರವನ್ನೂ ಸುಟ್ಟು ಹಾಕಿದರು ಎಂಬ ವರದಿಯು ನಿಜವಾದರೆ, ಕಿಡಿಗೇಡಿಗಳ ಕೈವಾಡವೆಷ್ಟಿದೆಯೆಂದು ಸ್ವಯಂ ವ್ಯಕ್ತವಾಗುವುದು. ಆಡಳಿತದ ದೃಷ್ಟಿಯಿಂದ ಹಾಗೂ ಇನ್ನಿತರ ಕಾರಣಗಳಿಂದ ಬೊಂಬಾಯಿ ನಗರದಲ್ಲಿ ತಮಗೆ ಬಹುಮತವಿಲ್ಲವಾದರೂ ಅದು ತಮಗೇ ಸೇರಬೇಕೆಂದು ರಟ್ಟೆ ಹಿಡಿಯುವ ಮರಾಠಿಗರು ಅದೇ ದೃಷ್ಟಿಯಲ್ಲಿ ಬೆಳಗಾವಿಯನ್ನು ನೋಡದಿರುವುದು ಆಶ್ಚರ್ಯ. ಎಂದರೆ, ಕೆಲವೇ ಜನ ಮರಾಠಿಗಳ ಉತ್ತೇಜನ ಹಾಗೂ ಮಹತ್ವಾಕಾಂಕ್ಷೆಯೇ ಈ ಎಲ್ಲಾ ಉಪದ್ವ್ಯಾಪಗಳಿಗೆ ಮೂಲವೆನ್ನದೆ ಸಾಧ್ಯವಿಲ್ಲ. ಆದುದರಿಂದ, ನಮ್ಮ ನೆರೆ ರಾಜ್ಯದ ಮರಾಠಿ ಬಂಧುಗಳು ಬೆಳಗಾವಿಯ ಆಗ್ರಹವನ್ನು ಹಿಂತೆಗೆದುಕೊಂಡು, ನ್ಯಾಯೋಚಿತವಾದ ರೀತಿಯಲ್ಲಿ ನಡೆದುಕೊಳ್ಳಬೇಕು. ವೃಥಾ ಎಣಿ ಕಿರುಬುಳಿಗಳನ್ನೆಬ್ಬಿಸದೆ, ಸಹೋದ್ಯದ ಸಬಂಧವಡಿಡನೆ ಪ್ರೀತಿ ಪುರಸ್ಸರವಾಗಿ ನಡೆದುಕೊಳ್ಳಬೇಕು. ಬೆಳಗಾವಿಯು ಕೇವಲ ಭಾಷಾದೃಷ್ಟಿಯಿಂದಲೇ ಕರ್ನಾಟಕದೊಡನೆ ಸೇರದೆ, ಐತಿಹಾಸಿಕ, ಸಾಂಸ್ಕೃತಿಕ ಮತ್ತು ಭೌಗೋಲಿಕ ಹಾಗೂ ಶಾಸನಾತ್ಮಕ ದೃಷ್ಟಿಯಿಂದಲೂ ಅವಶ್ಯ ಸೇರಲೇಬೇಕಾಗಿತ್ತು. ಅದು ಸೇರಿದೆ. ಅದಕ್ಕಾಗಿ ಈ ನೀತಿಯ ಅಗ್ರಹವನ್ನು ಮರಾಠಿಗರು ಮಾಡುವುದು ಎಂದೆಂದಿಗೂ ಸರಿಯಲ್ಲ.

ಇದೇ ಸಂದರ್ಭದಲ್ಲಿ ಕಾಸರಗೋಡು ತಾಲೂಕಿನ ಕುರಿತಾಗಿಯೂ ನಾಲ್ಕು ಮಾತುಗಳನ್ನು ಬರೆಯಬಹುದು. ಕಾಸರಗೋಡು ದಕ್ಷಿಣ ಕನ್ನಡದ ಅಂಗವಾಗಿದೆ. ಅಲ್ಲಿಯೂ ಮಲೆಯಾಳಿಗಳಿಗಿರಬಹುದು; ಆದರೆ, ಅಡಳಿತೆಯ ದೃಷ್ಟಿಯಿಂದ ಹಾಗೂ ಭಾಷಾ ದೃಷ್ಟಿಯಿಂದ, ಪ್ರಾಕೃತಿಕೇಕ್ಷಣದಿಂದ ಚಂದ್ರಗಿರಿ ಹೊಳೆಯ ಉತ್ತರನ ಭಾಗವು ಕೇರಳದಲ್ಲಿ ಲೀನವಾಗುವುದಕ್ಕಿಂತ ಕರ್ನಾಟಕದಲ್ಲಿ ಸೇರ್ಪಡೆ ಹೊಂದುವುದರಲ್ಲಿ ಔಚಿತ್ಯವಿದೆ. ಆಲ್ಲದೆ, ಈ ಕುರಿತಾಗಿ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳ ನಡುವೆಯೂ ಸ್ವಲ್ಪ ಮಟ್ಟಿಗೆ ಒಮ್ಮತವು ಸಾಧ್ಯವಾಗಿದೆ. ಆದುದರಿಂದ, ಕನ್ನಡವನ್ನೇ ನಂಬಿ ನೆಚ್ಚಿದ ನಮ್ಮ ಕಾಸರಗೋಡು ಬಾಂಧವರನ್ನು ಕೇರಳದಲ್ಲಿಯೇ ಶಾಶ್ವತವಾಗಿ ಉಳಿಯಲು ಬಿಡುವುದರಲ್ಲಿ ಆರ್ಥವಿಲ್ಲ. ಈ ದೃಷ್ಟಿಯಿಂದ್ಮಂಗಳೂರಲ್ಲಿ ಇತ್ತೀಚೆಗೆ ನಡೆದ ಸರ್ವಪಕ್ಷ ಸಮ್ಮೇಳನದ ಗೊತ್ತುವಳಿಯನ್ನು ಸ್ವಾಗತಿಸುತ್ತೇವೆ.

ಕರ್ನಾಟಕ ಮಾತೆಯ ಪಕ್ಷಿ ವೇದನೆಯು ಸೌಹಾರ್ದದಿಂದಲೇ ದೂರವಾಗಬೇಕೆಂದು ನಮ್ಮ ಬಯಕೆ. ಹಾಗಾಗುವಂತೆ ಪ್ರಯತ್ನಗಳು ಸಾಗಲಿ.

ರೋಟರಿ ಕ್ಲಬ್

ಮೆಡಿಕಲ್ ಕಾಲೇಜಿನ ಆಸ್ಪತ್ರೆಯ ರೋಟರಿ ಬ್ಲೋಕಿನ ಶಂಕುಸ್ಥಾಪನೆ

ಉಡುಪಿಯಲ್ಲಿ ಇತ್ತೀಚೆಗೆ ಸ್ಥಾಪಿತವಾದ ರೋಟರಿ ಕ್ಲಬ್ ವಿಶ್ವವ್ಯಾಪಿ ಸೇವೆ ಸಲ್ಲಿಸುವ ರೋಟರಿ ಇಂಟರ್‌ನೇಶನಲ್‌ನಿಂದ ಸನದನ್ನು ಪಡೆಯಿತು ಪ್ರಪಂಚದ ಅರು ಭೂಖಂಡಗಳಲ್ಲಿನ ೧೧೦ ವಿವಿಧ ರಾಷ್ಟ್ರಗಳಲ್ಲಿ ೬,೯೦೦ ಕ್ಲಬ್‌ಗಳಿವೆ. ಇವುಗಳ ಸದಸ್ಯರ ಸಂಖ್ಯೆಯು ೫೬೪,೦೦೦ದಷ್ಟಿದೆ. ಇವರಲ್ಲಿ ವಿವಿಧ ಉದ್ಯೋಗದ, ಧರ್ಮಾವರದ ಜನರಿರುವರು.

ವಿಶ್ವವ್ಯಾಪಿ ಸೇವಾಸಂಘಗಳಾದ ಈ ರೋಟರಿ ಕ್ಲಬ್ಬುಗಳಿಗೆ ಸ್ನೇಹ ಮತ್ತು ಸೌಹಾರ್ದ ಹಾಗೂ ಸೇವಾವಕಾಶ, ವೃತ್ತಿ ದಂಧೆಗಳ ಉನ್ನತೀಕರಣ ಸಮಾಜ ಕಲ್ಯಾಣ ಮೊದಲಾದ ಧ್ಯೇಯೋದ್ದೇಶಗಳಿರುವುವು. ಅಂತಾರಾಷ್ಟ್ರೀಯ ಜ್ಞಾನಸಂವರ್ಧನೆ, ವಿಶ್ವಾಸ ಮತ್ತು ಶಾಂತಿಗಾಗಿಯೂ ಇವು ಹುಡಿಯುವುವು. ಈ ಸಂಸ್ಥೆಯು ಚಿಕಾಗೋ ನಗರದಲ್ಲಿ ೧೯೦೫ರಲ್ಲಿ ಮೊತ್ತ ಮೊದಲಿಗೆ ಸ್ಥಾಪಿಸಲಾಗಿತ್ತು.

ಉಡುಪಿಯಲ್ಲಿ ಡಾ| ಟಿ. ಎಂ. ಎ. ಪೈಯವರು ಅಧ್ಯಕ್ಷರಾಗಿಯೂ ಶ್ರೀ ಕೆ. ಆರ್. ಕೆ. ಭಟ್ಟರವರು ಉಪಾಧ್ಯಕ್ಷರಾಗಿಯೂ ಶ್ರೀ ಟಿ. ಆರ್. ಯು. ಪೈಯವರು ಕಾರ್ಯದರ್ಶಿಯಾಗಿಯೂ ಶ್ರೀ ಕೆ. ಶಂಕರ ಶೆಣೈಯವರು ಕೋಶಾಧಿಕಾರಿಯೂ ಇರುವ ರೋಟರಿ ಕ್ಲಬ್ ಕೆಲವು ಮಾಹೆಪೂರ್ವದಲ್ಲಿ ಸ್ಥಾಪಿತವಾಗಿದೆ. ಈ ಕ್ಲಬ್ಬಿಗೆ ಪ್ರಭಾಕಯಗಳು.

ಈ ಕ್ಲಬ್ಬಿನ ಉತ್ತಾಪದಿಂದ, ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಯ ರೋಟರಿ ಬ್ಲಾಕಿನ ಶಂಕುಸ್ಥಾಪನೆಯು ದಿನಾಂಕ ೧೭ರಂದು ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ಶ್ರೀ ಟಿ. ಎಸ್. ರಾಜಂ ಅವರಿಂದ ಈಯಲ್ಪಟ್ಟಿತು. ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ| ಟಿ. ಮೋಹನ ಪೈಯವರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಕೆ. ಆರ್. ಕೆ. ಭಟ್ಟರು ಪ್ರಾರ್ಥನೆಯನ್ನು ನಾಡಿದ ನಂತರ ಶ್ರೀ ಟಿ ರಮೇಶ ಪೈಯವರು ಸಂದೇಶ ವಾಚನ ಮಾಡಿದರು. ಡಾ| ಪೈಯವರು ಸ್ವಾಗತ ಭಾಷಣ ಗೈಯುತ್ತ ರೋಟರಿ ಕ್ಲಬ್ಬಿನ ಉದ್ದೇಶಗಳನ್ನೂ, ಉಡುಪಿಯ ಕ್ಲಬ್ಬಿ ಸಾಧಿಸಿದ ಸಾಧನೆಗಳನ್ನೂ, ವಿವರಿಸಿದರು. ಹೊರಗಿನಿಂದ ಬಂದ ವಿವಿಧ ರೋಟೇರಿಯನ್ನರು ಸ್ವಯಂ ನಿಜ ಪರಿಚಯ ಗೂಡಿಕೊಟ್ಟ ಮೇಲೆ, ಮಂಗಳೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ವಿಶ್ವನಾಥ ಕಾಮತರು ಉಡುಪಿಯ ಕ್ಲಬ್ಬಿಗೆ ಆಸ್ತಿಸನ್ನೇಯವೇಕೆಂದು ಶ್ರೀ ರಾಜಂರವರನ್ನು ಕೇಳಿಕೊಂಡರು. ಆ ಮೇರೆಗೆ ಶ್ರೀ ರಾಜಂ ಅವರು ಸನದನ್ನು ದಯಪಾಲಿಸುತ್ತ, ರೋಟರಿ ಕ್ಲಬ್ಬಿನ ಸ್ಥಾಪನೆ ಹಾಗೂ ಸಾಧನೆಗಳನ್ನು ವಿವರಿಸಿ ಕಲ್ಪಿಸಿಯಲ್ಲಿ ಮೊತ್ತಮೊದಲನೆಯವಾಗಿ ಈ ಕ್ಲಬ್ಬು ಭಾರತಕ್ಕೆ ಪಾದಾರ್ಪಣಾನಾಮಿತು ಎಂದರು. ವಿವಿಧ ಕ್ಷೇತ್ರಗಳಲ್ಲಿ ಕ್ಲಬ್ಬು ಮಾಡಿದ ಕಾರ್ಯವನ್ನೂ ಗೆಳಿಸಿದ ಕೀರ್ತಿಯನ್ನೂ ಪಶಂಸಿಸಿ, ಉಡುಪಿಯ ಕ್ಲಬ್ಬಿನ ಉತ್ಸಾಹವನ್ನೂ ಕಾರ್ಯಸಾಧನೆಯನ್ನೂ ಕೊಂಡಾಡಿದರು. ರೋಟರಿಯಲ್ಲಿ ಜಾತಿಮತ ಮೊದಲಾದ ಭೇದಭಾವನೆಯಿರುವುದಿಲ್ಲ ರೋಟರಿ ಕ್ಲಬ್ಬುಗಳು ತನ್ನ ಕಾರ್ಯಕ್ರಮಗಳನ್ನು ಆಯಾಯ ಊರಿನ ಭಾಷೆಯಲ್ಲಿ ನಿರವೇರಿಸುವುದುತ್ತಮವೆಂದು ಅಭಿಪ್ರಾಯ ಪಟ್ಟು ಕ್ರಮೇಣ ಹಿಂದಿ ಹಾಗೂ ಜಪಾನಿ ಭಾಷೆಗಳನ್ನು ರೋಟರಿಯು ಅಂಗೀಕರಿಸಬಹುದು ಎಂದರು. ಶ್ರೇಷ್ಠ ವ್ಯಕ್ತಿಗಳ ಸಂಸರ್ಗದಿಂದ ಉತ್ತಮ ಕಾರ್ಯವಾಗುವುದೆಂಬುದಕ್ಕೆ ಈ ಕ್ಲಬ್ಬು ಉದಾಹರಣೆಯಾಗಿದೆ ಎಂದು ಹೇಳಿ ರೋಟರಿ ತತ್ವ ಪ್ರತಿಪಾದನೆ ಮಾಡುವ "ಎಥಿಕ್ಸ್ ಆಫ್ ಸರ್ವಿಸ್" ಎಂಬ ಪುಸ್ತಕವನ್ನು ಸದಸ್ಯರಿಗೆ ಪಂಚಿದರು.

ಭೋಜನ ಕೂಟದ ನಂತರ ಡಾ| ಪೈಯವರು ರಾಷ್ಟ್ರಾಧ್ಯಕ್ಷರಿಗೂ ಭಾರತದ ಪ್ರಜಾಸತ್ತೆಗೂ ಸ್ತುತಿ ವಾಚನ ಮಾಡಿದರು. ಪ್ರೊ ಪಿ ಪಲ್ ಎಸ್. ಸುಂದರರಾಯರೂ ಶ್ರೀ ಕೆ. ವಿಠಲ ಶೆಣೈ ಅವರೂ ಅತಿಥಿಗಳ ಪರವಾಗಿ ಮಾತನಾಡಿದರು. ಶ್ರೀ ಟಿ. ಎ ಪೈ ಅವರು ಧನ್ಯವಾದ ಸಮರ್ಪಣೆ ಮಾಡಿದರು. ರಾತ್ರಿ ಚಲಚ್ಚಿತ್ರ ಪ್ರದರ್ಶನವು ನಡೆಯಿತು.

೧೧ ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಆಸ್ಪತ್ರೆ ಕಟ್ಟಲಾಗುವುದೆಂದೂ ರೋಟರಿ ಕ್ಲಬ್ಬಿನ ಇಂಜಿನಿಯರರೂ ಕಂಟ್ರಾಕ್ಟರೇ ಮೊದಲಾದವರೂ ಸೇವಾ ರೂಪವಾಗಿ ದುಡಿಯುವ ಆಶ್ವಾಸನೆಯಿತ್ತಿರುವರೆಂದೂ ನುಡಿದರು. ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈಯವರು ಸಂದೇಶಗಳನ್ನು ಓದಿದರು.

ಶ್ರೀ ರಾಜಮ್‌ರು ಶಂಕು ಸ್ಥಾಪನೆಯನ್ನು ಮಾಡುತ್ತ, ಖಾಸಗಿ ಕ್ಷೇತ್ರಗಳು ಇಂತಹ ಉದ್ಯಮದಲ್ಲಿ ತೊಡಗಿರುವುದನ್ನು ಪ್ರಶಂಸಿಸಿ, ಅಮೆರಿಕೆಯಲ್ಲಿ ಸರಕಾರವು ನೆಕೆಂಡರಿ ಶಿಕ್ಷಣ ವನ್ನಷ್ಟೇ ಈಯುವ ಹೊಣೆಯನ್ನು ಹೊತ್ತಿದೆಯೆಂದೂ ವಿಶ್ವವಿದ್ಯಾಲಯ ಶಿಕ್ಷಣವನ್ನು ಖಾಸಗಿ ಪ್ರಯತ್ನದಿಂದಲೇ ಈಯಲಾಗುವುದೆಂದೂ ಹೇಳಿ, ಸಾರ್ವಜನಿಕ ಸಹಾಯದಿಂದ ಎಂತಹ ಸಂಸ್ಥೆಯನ್ನಾದರೂ ಕಟ್ಟಬಹುದೆಂಬುದಕ್ಕೆ ಈ ಮೆಡಿಕಲ್ ಕಾಲೇಜೇ ಸಾಕ್ಷಿ ಎಂದರು.

ಆ ಮೇರೆ ಶ್ರೀ ಸೋದೆ ಮಠಾಧೀಶರು, ಸ್ವಾತಂತ್ರ್ಯಪ್ರಾಪ್ತ್ಯನಂತರ್ಕ ನಿರಕ್ಷರತೆ, ವೈದ್ಯಕೀಯ, ಆಹಾರ ಮೊದಲಾದ ಸಮಸ್ಯೆಗಳನ್ನೆದುರಿಸುತ್ತಿದ್ದೇವೆ. ಆದರೆ, ಇವನ್ನೆಲ್ಲಂ ಬಗೆದುರಿಸಲು ಸರಕಾರದ ಮುಖ ನೋಡುತ್ತ ಕೂರಿದರೆ ಇನ್ನೆಷ್ಟೋ ವರ್ಷ ಹೋಗಬಹುದು ಎಂದು ಇಂತಹ ಖಾರಿಕ ಶಾಂತಿಯನ್ನು ಒದಗಿಸುವ ಕಾರ್ಯವನ್ನು ಕೈಗೊಂಡ ರೋಟರಿ ಕ್ಲಬ್ಬನ್ನು ಅಶೀರ್ವದಿಸಿದರು. ಡಾ| ಯು. ಸುಂದರರಾಮ ಪೈಯವರು ಧನ್ಯವಾದಪತ್ತಿರು. ಮುಂದೆ, ಸಂಗೀತ ಹಾಗೂ ನೃತ್ಯ ಪ್ರದರ್ಶನಗಳು ನಿರ್ವಾಹಿತ್ತು.

ಸನದು ವಿತರಣಾ ಸಮಾರಂಭ—

ಉಡುಪಿ ರೋಟರಿ ಕ್ಲಬ್ಬನ್ನು ರೋಟರಿ ಇಂಟರ್‌ನೇಶನಲ್ ಮನ್ನಿಸಿರುವುದರ ಪ್ರತೀಕವಾದ ಸನದು ದಿನಾಂಕ ೧೪ರಂದು ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ಶ್ರೀ ಟಿ. ಎಸ್. ರಾಜಂ ಅವರಿಂದ ಈಯಲ್ಪಟ್ಟಿತು. ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ| ಟಿ. ಮೋಹನ ಪೈ ಅವರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಕೆ. ಆರ್. ಕೆ. ಭಟ್ಟರು ಪ್ರಾರ್ಥನೆಯನ್ನು ನಾಡಿದ ನಂತರ ಶ್ರೀ ಟಿ ರಮೇಶ ಪೈಯವರು ಸಂದೇಶ ವಾಚನ ಮಾಡಿದರು. ಡಾ| ಪೈಯವರು ಸ್ವಾಗತ ಭಾಷಣ ಗೈಯುತ್ತ ರೋಟರಿ ಕ್ಲಬ್ಬಿನ ಉದ್ದೇಶಗಳನ್ನೂ, ಉಡುಪಿಯ ಕ್ಲಬ್ಬಿ ಸಾಧಿಸಿದ ಸಾಧನೆಗಳನ್ನೂ, ವಿವರಿಸಿದರು. ಹೊರಗಿನಿಂದ ಬಂದ ವಿವಿಧ ರೋಟೇರಿಯನ್ನರು ಸ್ವಯಂ ನಿಜ ಪರಿಚಯ ಗೂಡಿಕೊಟ್ಟ ಮೇಲೆ, ಮಂಗಳೂರು ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ವಿಶ್ವನಾಥ ಕಾಮತರು ಉಡುಪಿಯ ಕ್ಲಬ್ಬಿಗೆ ಆಸ್ತಿಸನ್ನೇಯವೇಕೆಂದು ಶ್ರೀ ರಾಜಂರವರನ್ನು ಕೇಳಿಕೊಂಡರು. ಆ ಮೇರೆಗೆ ಶ್ರೀ ರಾಜಂ ಅವರು ಸನದನ್ನು ದಯಪಾಲಿಸುತ್ತ, ರೋಟರಿ ಕ್ಲಬ್ಬಿನ ಸ್ಥಾಪನೆ ಹಾಗೂ ಸಾಧನೆಗಳನ್ನು ವಿವರಿಸಿ ಕಲ್ಪಿಸಿಯಲ್ಲಿ ಮೊತ್ತಮೊದಲನೆಯವಾಗಿ ಈ ಕ್ಲಬ್ಬು ಭಾರತಕ್ಕೆ ಪಾದಾರ್ಪಣಾನಾಮಿತು ಎಂದರು. ವಿವಿಧ ಕ್ಷೇತ್ರಗಳಲ್ಲಿ ಕ್ಲಬ್ಬು ಮಾಡಿದ ಕಾರ್ಯವನ್ನೂ ಗೆಳಿಸಿದ ಕೀರ್ತಿಯನ್ನೂ ಪಶಂಸಿಸಿ, ಉಡುಪಿಯ ಕ್ಲಬ್ಬಿನ ಉತ್ಸಾಹವನ್ನೂ ಕಾರ್ಯಸಾಧನೆಯನ್ನೂ ಕೊಂಡಾಡಿದರು. ರೋಟರಿಯಲ್ಲಿ ಜಾತಿಮತ ಮೊದಲಾದ ಭೇದಭಾವನೆಯಿರುವುದಿಲ್ಲ ರೋಟರಿ ಕ್ಲಬ್ಬುಗಳು ತನ್ನ ಕಾರ್ಯಕ್ರಮಗಳನ್ನು ಆಯಾಯ ಊರಿನ ಭಾಷೆಯಲ್ಲಿ ನಿರವೇರಿಸುವುದುತ್ತಮವೆಂದು ಅಭಿಪ್ರಾಯ ಪಟ್ಟು ಕ್ರಮೇಣ ಹಿಂದಿ ಹಾಗೂ ಜಪಾನಿ ಭಾಷೆಗಳನ್ನು ರೋಟರಿಯು ಅಂಗೀಕರಿಸಬಹುದು ಎಂದರು. ಶ್ರೇಷ್ಠ ವ್ಯಕ್ತಿಗಳ ಸಂಸರ್ಗದಿಂದ ಉತ್ತಮ ಕಾರ್ಯವಾಗುವುದೆಂಬುದಕ್ಕೆ ಈ ಕ್ಲಬ್ಬು ಉದಾಹರಣೆಯಾಗಿದೆ ಎಂದು ಹೇಳಿ ರೋಟರಿ ತತ್ವ ಪ್ರತಿಪಾದನೆ ಮಾಡುವ "ಎಥಿಕ್ಸ್ ಆಫ್ ಸರ್ವಿಸ್" ಎಂಬ ಪುಸ್ತಕವನ್ನು ಸದಸ್ಯರಿಗೆ ಪಂಚಿದರು.

ಭೋಜನ ಕೂಟದ ನಂತರ ಡಾ| ಪೈಯವರು ರಾಷ್ಟ್ರಾಧ್ಯಕ್ಷರಿಗೂ ಭಾರತದ ಪ್ರಜಾಸತ್ತೆಗೂ ಸ್ತುತಿ ವಾಚನ ಮಾಡಿದರು. ಪ್ರೊ ಪಿ ಪಲ್ ಎಸ್. ಸುಂದರರಾಯರೂ ಶ್ರೀ ಕೆ. ವಿಠಲ ಶೆಣೈ ಅವರೂ ಅತಿಥಿಗಳ ಪರವಾಗಿ ಮಾತನಾಡಿದರು. ಶ್ರೀ ಟಿ. ಎ ಪೈ ಅವರು ಧನ್ಯವಾದ ಸಮರ್ಪಣೆ ಮಾಡಿದರು. ರಾತ್ರಿ ಚಲಚ್ಚಿತ್ರ ಪ್ರದರ್ಶನವು ನಡೆಯಿತು.

ಪೈಲಟ್ರೆ ಅನಾವರಣ— ಉಡುಪಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಪೂರ್ವಗಿಯರ ಹಾಸ್ಟೆಲಿಗಾಗಿ ಕುಂಜಿಬೆಟ್ಟುನಲ್ಲಿರುವ ತಮ್ಮ ಮನೆಯನ್ನು ದಾನ ಮಾಡಿದ ಶ್ರೀ. ಕೆ. ಆರ್. ಕೆ. ಭಟ್ ಮತ್ತು ಅವರ ಪತ್ನಿ ಶ್ರೀಮತಿ ಆರಾ ಭಟ್ಟರ ತೈಲಚಿತ್ರವನ್ನು ಕಾಲೇಜು ಭವನದಲ್ಲಿ ತಾ. 18ರಂದು ರೋಟರಿ ಗವರ್ನರ್ ಶ್ರೀ ರಾಜಂ ನವರು ಅನಾವರಣ ಮಾಡುತ್ತ ಭಟ್ಟದಂಪತಿಗಳಲ್ಲಿ ಹಿಂದಿನಿಂದಲೂ ಬೆಳೆದು ಬಂದ ಔದಾರ್ಯ ಧರ್ಮಬುದ್ಧಿಯನ್ನು ಕೊಂಡಾಡಿದರು.

ಪದ್ಮಾ ಶೆಣೈರವರಾದ ಬಳಿಕ ಶ್ರೀ ಟಿ. ಎ. ಪೈಗಳು ಸ್ವಾಗತ ಮಾತುಗಳನ್ನಾಡಿ ಕಾಲೇಜು ಹೇಗೆ ರೂಪುಗೊಂಡಿತು ಎಂಬುದನ್ನು ವಿವರಿಸಿದರು. ಡಾ| ಟಿ. ಎಸ್. ಎ. ಪೈಗಳು ಮಾತನಾಡಿ ಶ್ರೀ ಮತ್ತು ಶ್ರೀಮತಿ ಭಟ್ಟರ ಉದಾರ ದಾನವು ಇತರರಿಗೆ ಮಾರ್ಗದರ್ಶನ ಮಾಡಬೇಕೆಂದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಧನ್ಯವಾದಗಳನ್ನಿತ್ತರು.

ಅಲ್ಲಲ್ಲಿಯ ಸುದ್ದಿಸಾರ

ಅಂಬಲಪಾಡಿ ಗೀತಾಭವನದಲ್ಲಿ— ನಾಡಹಬ್ಬವು ತಾ. 16ರಂದು ಡಿ! ಮುನ್ಸಿಫ್ ಶ್ರೀ ಜೆ. ಎಸ್. ನಾಗಮೋತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೊ.ಭೈರಪ್ಪ ಶ್ರೀಶ ಬಲ್ಲಾರು ಸ್ವಾಗತಿಸಿದರು. ಶ್ರೀ ಎ ಕೃಷ್ಣ ರಾಯರು ಆತಿಥಿಗಳ ಪರಿಚಯ ಮಾಡಿದರು. ಶ್ರೀ ಪಿ. ರಘೋತ್ತಮ ಐತಾಳರು ಕವಿತೆಗಳನ್ನು ಹಾಡಿದರು. ಶ್ರೀಗಳಾದ ಎ. ಜೆ. ಅಲ್ಲಿಯನರು ಭಾರತೀಯ ಪರಂಪರೆಯಲ್ಲಿ ಸಹಿಷ್ಣುತೆ ಎಂಬೀ ವಿಷಯದಲ್ಲೂ, ಎ ಸುಬ್ರಾಯ ಆಚಾರ್ಯರು 'ಭಾರತೀಯ ತತ್ವಗಳು' ಎಂಬೀ ವಿಷಯದಲ್ಲೂ ಭಾಷಣವಿತ್ತರು. ಅಧ್ಯಕ್ಷರ ಕಾರೋಚಿತ ಭಾಷಣವಾದ ಬಳಿಕ ಶ್ರೀ ಕೆ. ಎಲ್. ಎಸ್. ಉಪಾಧ್ಯಾಯರು ಧನ್ಯವಾದಗಳನ್ನಿತ್ತರು.

ಶ್ರೀಕೃಷ್ಣ ಮಠದಲ್ಲಿ ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾಂತ್ಮ ತೀರ್ಥ ಸ್ವಾಮಿಗಳವರ ನಾಮಕರ್ತದಲ್ಲಿ ದಸರಾ ಮಹೋತ್ಸವವು ತಾ. 13ರಂದು ಪ್ರಾರಂಭವಾಗಿ ತಾ. 22ರಂದು ಯಶಸ್ವಿಯಾಗಿ ಕೊನೆಗೊಂಡಿತು. ದಿನಾಲೂ ರಾತ್ರಿ ನಸಂತ ಮಹಿಳೆಯರಲ್ಲಿ ನಾಟಕ ಪ್ರದರ್ಶನದ ವ್ಯವಸ್ಥೆ ಮಾಡಲಾಗಿತ್ತು.

ಕುಡುಮಲ್ಲಿಗೆಯಲ್ಲಿ— ಭಾಗ್ಯೋದಯ ಮಾಸದ ಮುತ್ಸಾಯ ಸಮಾರಂಭವು ತಾ. 12ರಂದು ಸುಲೆನಾಡು ಅಭಿವೃದ್ಧಿ ಸಮಿತಿಯ ಹಾಗೂ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿರುವ ಶ್ರೀ ಎ. ಅರ್. ಬದರಿನಾರಾಯಣನವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀ ಮಲ್ಲಿಕಾರ್ಜುನಪ್ಪ ಗೌಡರು ಈ ಸಮಾರಂಭವ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಮಂಜಾವಧಿ ಕೃಷ್ಣಯ್ಯ ಸೆಟ್ಟರು ಧ್ವಜಾರೋಹಣಗೈದರು. ಶ್ರೀ ಟಿ. ರಮೇಂದ್ರರವರು ಕವಿತಾ ವಾಚನಮಾಡಿದರು. ಸರ್ವೋದಯ ಮಂಡಳಿಯ ಅಧ್ಯಕ್ಷ ಡಾ| ಯು. ಚಂದ್ರಶೇಖರ್, ಅವರು ಸ್ವಾಗತ ಮಾತುಗಳನ್ನಾಡಿದರು, ಕಾರ್ಯದರ್ಶಿ ಶ್ರೀ ಬಿ. ಎ. ಗುರಪ್ಪನವರು ವರದಿವಾಚನ ಮಾಡಿದರು. ಮಂಡಳಿಯ ಉಪಾಧ್ಯಕ್ಷ ಶ್ರೀ ಆಚ್ಚಣ್ಣ ಸೆಟ್ಟರು ವಂದನೆಗಳನ್ನಿತ್ತರು.

ವಿದ್ಯಾಭ್ಯಾಸ ವಿಚಾರ ಗೋಷ್ಠಿ— ದ ಕ. ಜಿಲ್ಲಾ ಅಭಿವೃದ್ಧಿ ಮತ್ತು ಹಿತಚಿಂತನಾ ಬೋರ್ಡಿನ ಆಶ್ರಯದಲ್ಲಿ ಸುಂಗಳೂರಲ್ಲಿ ವಿಶ್ವವಿದ್ಯಾಲಯ ವಿಚಾರ ಗೋಷ್ಠಿಯನ್ನು ತಾ. 19ರಂದು ಮಾಜಿ ಆರೋಗ್ಯ ಸಚಿವ ಶ್ರೀ ಎ. ಬಿ ಸೆಟ್ಟರು ಉದ್ಘಾಟಿಸಿದರು. ಜಿಲ್ಲಾ ಅಭಿವೃದ್ಧಿ ಬೋರ್ಡಿನ ಅಧ್ಯಕ್ಷ ಶ್ರೀ ಎ. ಎಸ್. ಕುಡ್ವರು ಸ್ವಾಗತಿಸಿದರು. ವಿದ್ಯಾತಜ್ಞರಾದ ಶ್ರೀ ಬೆನೆಗಲ್ ಸಂಜೀವರಾಯರು ವಿದ್ಯಾಭ್ಯಾಸದ ಮೂಲ ತತ್ವಗಳು ಎಂಬ ವಿಷಯದ ಮೇಲೆ ಮಾತನಾಡಿದರು.

ತಾ. 19ರಂದು ನಡೆದ ವಿಚಾರ ಗೋಷ್ಠಿಯಲ್ಲಿ ಶ್ರೀ ಬಿ. ಭಾನಾಸಾಯರು ಸೆಕೆಂಡರಿ ಶಿಕ್ಷಣದ ಕುರಿತೂ, ಶ್ರೀ ಎಚ್. ಸುಂದರ ರಾಯರು ಯುನಿವರ್ಸಿಟಿ ಶಿಕ್ಷಣದ ಕುರಿತೂ ಶ್ರೀ ಶ್ರೀನಿವಾಸ ವಿ ಕುಡ್ವರು ತಾಂತ್ರಿಕ ಶಿಕ್ಷಣದ ಕುರಿತೂ ಪತ್ರಗಳನ್ನೋದಿದರು.

ಬ್ರಹ್ಮಾವರ ಕರ್ನಾಟಕ ಸಂಘದ ಕಡೆಯಿಂದ ನಾಡಿನಲ್ಲಿ ನಡೆಯುವ ಸಲುವಾಗಿ ನಿರ್ಮಿಸಲಾಗಿದ್ದ ಲೇಖಿಸಿ ಸ್ಪರ್ಧೆಯಲ್ಲಿ ಶ್ರೀ ಎಚ್. ಎ. ಕುಲಕರ್ಣಿ, ಧಾರವಾಡ, ಇವರ ಲೇಖನಕ್ಕೆ ರೂಪಾಯಿ ಪತ್ರರ ಬಹುಮಾನವೂ, ಶ್ರೀ ಎಸ್. ರಾಮಚಂದ್ರ ಮುಂಗಳೂರು, ಇವರ ಲೇಖನಕ್ಕೆ ರೂಪಾಯಿ ಎಂಟರ ದ್ವಿತೀಯ ಬಹುಮಾನವೂ ದೊರೆತಿರುವುದು.

ಮೂಡಬಿದ್ರೆ ಶ್ರೀ ಸರಸ್ವತಿ ಸೇವಾ ಸಂಘದ—ಆಶ್ರಯದಲ್ಲಿ ನಡೆಯುವ ದಸರಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವವನ್ನು ತಾ 15ರಂದು ಮಾಜಿ ಮಂತ್ರಿ ಶ್ರೀ ಎ ಬಿ. ಸೆಟ್ಟರು ಉದ್ಘಾಟಿಸಿದರು. ಶ್ರೀ ಜಿ. ವಾಸುದೇವ ಭೈಗಳು ಸ್ವಾಗತಿಸಿದರು. ಶ್ರೀ ಎಸ್. ಮುಕುಂದರಾವ್, ಎಲ್. ಎಲ್. ಬಿ, ಅವರು ಭಾಷಣಗೈದರು. ಶ್ರೀ ಕೆ. ಕಾಂತ ಭೈಗಳು ಧನ್ಯವಾದವಿತ್ತರು.

ದಸರಾ ಮಹೋತ್ಸವವು ತಾ 16ರಂದು ಆರಂಭವಾಗಿ ತಾ. 22ರಂದು ಕೊನೆಗೊಂಡಿತು. ಶ್ರೀಗಳಾದ ಕೆ. ಶ್ಯಾಮ ಭಟ್, ಬಿ. ಎಸ್. ಭಾಸ್ಕರ ರೈ, ಎಮ್. ಪಿ. ಹೆಗ್ಡೆ, ಜಲ್ಲಾಧಿಕಾರಿ ಶ್ರೀ ಸಿ. ಹೊಂಬಾಳಮ್ಮ, ಶ್ರೀಮತಿಯರಾದ ಕಲ್ಯಾಣಿ ದಿ. ಸೆಟ್ಟಿ, ಎಸ್. ರತ್ನಮ್ಮ ಮೊದಲಾದವರು ಭಾಗವಹಿಸಿದ್ದರು. ನಾಟಕ, ಯಕ್ಷಗಾನ ಇತ್ಯಾದಿ ಮನರಂಜನಾ ಕಾರ್ಯಕ್ರಮಗಳೂ ಇದ್ದುವು. ಕೊನೆಯ ದಿನ ಬಹುಮಾನ ವಿತರಣೆಯು ಸ್ಥಳೀಯ ಜೈನ್ ಹ್ಯಾಸ್ಕೂಲ್ ಹೆಡ್ಮಾಸ್ಟರ್ ಶ್ರೀ. ಎ. ಸೋಮಪ್ಪ ರೈಗಳಿಂದ ನೆರವೇರಿಸಲ್ಪಟ್ಟಿತು.

ಸಂಕ್ಷಿಪ್ತ ಸುದ್ದಿಗಳು

ಮೈಸೂರು ಭೂಸುಧಾರಣೆ

ಮೈಸೂರು ರಾಜ್ಯದಲ್ಲಿ ಭೂಸುಧಾರಣೆಯ ವಿಚಾರವಾಗಿ ಪರಿಶೀಲಿಸಲು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಸಭೆ ಸೇರಿತ್ತು. ಈ ಸಭೆಯಲ್ಲಿ ಸಾಕಷ್ಟು ಆಸಕ್ತಿಯಿಂದ ವಾದವಿವಾದಗಳು ಬೆಳೆದುವೇ ಹೊರತು ಯಾವ ನಿರ್ಧಾರವೂ ಆಗಲಿಲ್ಲ ವೆಂದೇ ತಿಳಿದು ಬಂದಿದೆ. ಮಂತ್ರಿಗಳಾದ ಕಡಿದಾಳ ಮಂಜಪ್ಪ ಹಾಗೂ ಮುಖ್ಯ ಮಂತ್ರಿ ಜತ್ತಿ ಮತ್ತೆ ಕೆಲವರು ಈ ಶಾಸನವನ್ನು ತೀವ್ರವೇ ಕಾರ್ಯರೂಪಕ್ಕೆಳಿಸಬೇಕೆಂದು ವಾದಿಸಿದರಂತೆ. ದಕ್ಷಿಣ ಕನ್ನಡಿಗರಾದ ಅಳಿಯ ಸಂತಾನದ ಪದ್ಧತಿಯನ್ನು ನುಸರಿಸುವವರಿಗಾಗಿ ಪ್ರತ್ಯೇಕ ಭೂ ಶಾಸನವನ್ನು ಸಿದ್ಧಪಡಿಸುವ ಸೂಚನೆಯೂ ಮುಂದೆ ಬಂತು. ಯೋಜನಾ ಆಯೋಗದ ಸದಸ್ಯರು ಹಾಗೂ ಕಾಂಗ್ರೆಸ್ ಅಧ್ಯಕ್ಷ ಮತ್ತು ಸರಿಸ್ಯರೊಡನೆ ವಿಚಾರ ವಿನಿಮಯ ಮಾಡಿದ ನಂತರ, ಮುಂದಿನ ವಾರದಲ್ಲಿ ಮೈಸೂರು ಭೂ ಶಾಸನದ ಅಂತಿಮ ರೂಪುರೇಷೆಗಳು ಸಿದ್ಧವಾಗುವ ನಿರೀಕ್ಷೆಯಿದೆ.

ಯೋಗಸಾಧನೆಯಿಂದ ಆರೋಗ್ಯ

ರೋಗಗಳನ್ನು ನಿವಾರಿಸುವಲ್ಲಿ ಹಾಗೂ ಒಳ್ಳೆಯ ಆರೋಗ್ಯವನ್ನು ಕಾಯ್ದುಕೊಳ್ಳುವುದರಲ್ಲಿ ಯೋಗಾಸನಗಳು ಶಾಶ್ವತ ಸ್ಥಾನಗಳಿಸಿವೆ. ಇವನ್ನು ಕೇವಲ ಶಾಸ್ತ್ರಗಳ ಆಧಾರದ ಮೇಲಿಂದ ಹೇಳುತ್ತಿರದೆ ಆಸನಗಳನ್ನು ಹಾಕುವುದರ ಮೂಲಕ ಲಾಭಪಡೆದ ಲಕ್ಷಾಂತರ ಜನರ ಸಪ್ಯಕ್ಕೆ ಅನುಭವ ಬಲದಿಂದ ಹೇಳುತ್ತಿದ್ದೇನೆ ಎಂದು ಕೇಂದ್ರ ಕೂಲಿಗಾರ ಮಂತ್ರಿ ಶ್ರೀ ಗುಲ್ಜರಿಲಾಲ ನಂದರು ಹೇಳಿದರು. ಅಖಿಲ ಭಾರತ ಯೋಗಾರೋಗ್ಯ ಚರ್ಚಾಗೋಷ್ಠಿಯನ್ನು ಉದ್ಘಾಟಿಸುತ್ತಾ ಅವರು ಮುಂಬರಿದು ಅನೇಕ ಜಾಡ್ಯಗಳನ್ನು ಗುಣಪಡಿಸಲು ಯೋಗಾಸನಗಳ ಲಾಭವನ್ನು ಪಡೆದುಕೊಳ್ಳಲಾಗುತ್ತದೆ. ಪ್ರೇರದ ಅನೇಕ ಸಂಸ್ಥೆಗಳು ಈ ತಂತ್ರಗಳ ಮೌಲ್ಯಗಳನ್ನು ಸಿದ್ಧಪಡಿಸುವ ಅನೇಕ ದಾಖಲೆಗಳನ್ನು ತೋರಿಸಬಲ್ಲವು ಎಂದು ನುಡಿದರು.

ಪಾಸಗಿ ಗೊತ್ತುವಳಿಗಳು

ಹೈದರಾಬಾದಿನಲ್ಲಿ ನೇರಲಿರುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕೇರಳದ ಯಥಾರ್ಥ ಸ್ಥಿತಿಯನ್ನು ಪರಿಶೀಲಿಸಿ ವರದಿಮಾಡಬೇಕೆಂಬ ಗೊತ್ತುವಳಿಯು ಚರ್ಚಿಸಲ್ಪಡಲು ಪಾಸಗಿಯಾಗಿ ಬಂದಿದ್ದು ಇದಕ್ಕೆ ಲಸಿಯ ಸ್ಥಾನವು ದೊರೆತಿದೆ. ದೇಶದಲ್ಲಿಯ ಆಹಾರ ಪರಿಸ್ಥಿತಿಯನ್ನು ಮನದಂದು ಧಾನ್ಯೋತ್ಪಾದನೆಯನ್ನು ಅಧಿಕ ಪ್ರಮಾಣದಲ್ಲಿ ಸಾಧಿಸುವುದಕ್ಕೆ ತಾಲೂಕು ಮಟ್ಟದಿಂದ ರಾಷ್ಟ್ರೀಯ ಮಟ್ಟದ ವರೆಗೆ ಧಾನ್ಯೋತ್ಪಾದನೆಯ—ಗುರಿಯನ್ನು ನಿರ್ಧರಿಸಿಕೊಡಬೇಕೆಂಬ ಗೊತ್ತುವಳಿಯು ಪ್ರಥಮ ಸ್ಥಾನವನ್ನು ಪಡೆದಿದೆ. ಜನಜಂಗಳಿಯೊಂದಿಗೆ ವರ್ತಿಸುವಾಗ ಸೋಲೀಸರು ಗೋಲಿಬಾರು ಮಾಡುವುದನ್ನು ಸಂಪೂರ್ಣ ನಿರ್ಬಂಧಿಸಬೇಕೆಂಬ ಹಾಗೂ ಇಂತಹ ಸಂಬಂಧದಲ್ಲಿ ಉಪಯೋಗಿಸಲು ಇತರ ಅನೇಕ ಪದ್ಧತಿಗಳನ್ನು ಸೂಚಿಸುವ ಒಂದು ಗೊತ್ತುವಳಿಯನ್ನು ಮುಂಬಯಿ ಪ್ರಾದೇಶಿಕ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಆರ್.ಎಸ್. ವಾಂಡೆಯನರಿಂದಲಿರಿಸಿದರು.

ತಂತ್ರಜ್ಞರ ಕೊರತೆ

ಏಶಿಯಾದಲ್ಲಿ ಹೆಚ್ಚುತ್ತಿರುವ ಜನ ಸಂಖ್ಯೆಯೆ ಏಶ್ಯಾದಲ್ಲಿಯ ಧಾನ್ಯಾಭಾವಕ್ಕೆ ಕಾರಣವಾಗಿದೆ ನಂದು ಜಾಕತಿಕ ಒಕ್ಕೂಲತನ ಸಂಸ್ಥೆಯ ಏಶಿಯಾ-ದೂರ ಪ್ರಾಚ್ಯ ಪ್ರಾದೇಶಿಕ ಪರಿಷತ್ತಿನಲ್ಲಿ ಭಾಗವಹಿಸಿದ ಸುಮಾರು ೯೦ ಪ್ರತಿನಿಧಿಗಳು ಒಪ್ಪಿಕೊಂಡರು. ವಿವಿಧ ರಾಷ್ಟ್ರಗಳ ಪ್ರತಿನಿಧಿಗಳು ತಂತಮ್ಮ ರಾಷ್ಟ್ರಗಳು ಒಕ್ಕೂಲತನದ ಉತ್ಪಾದನೆಗೆ ವಿಶೇಷ ಪ್ರಾಶಸ್ತ್ಯವೀಯುವನೆಂದು ತಿಳಿಸಿದರು. ಭಾರತದ ಪ್ರತಿನಿಧಿ ಶ್ರೀ ಪಂಜಾಬ ರಾವ್ ದೇಶಮುಖರು, ಭಾರತದಲ್ಲಿ ಜಪಾನ್ ಮಾದರಿಯ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಎಕ್ರೆಗೆ ಅರ್ಧ ಟನ್ನಿನಂತೆ ಅಧಿಕೋತ್ಪತ್ತಿ ಪಡೆಯಲಾಗಿದೆ ಎಂದರು. ಈ ವರ್ಷ ೭೦ ಲಕ್ಷ ಎಕ್ರೆಗಳಲ್ಲಿ ಈ ವಿಧಾನ ಕೃತಿಯನ್ನು ಮಾಡಿದೇ ಕೆಂಬ ಗುರಿಯು ಭಾರತಕ್ಕೆದೆಯೆಂದೂ ಹೇಳಿದರು. ಅನೇಕ ರಾಷ್ಟ್ರಗಳಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳು ನಿರ್ಥಕವಾಗದೆಯಿರುವುದಕ್ಕೆ ತಂತ್ರಜ್ಞರ ಕೊರತೆಯೇ ಕಾರಣವೆಂದು ಈ ಸಭೆಯು ಅಭಿಪ್ರಾಯಪಟ್ಟಿತು.

ಸೂಚನೆ

ವರ್ಷಾವಧಿ ರತೆಯಾಗಿ ಬರುವ ವಾರದೆ ಸಂಚಿಕೆಯನ್ನು ನಿಲ್ಲಿಸಲಾಗಿದೆ. ಮುಂದಿನ ಸಂಚಿಕೆಯು ತಾರೀಕು 6—11—58ಕ್ಕೆ ಹೊರಡುವುದು.

—ನವಯುಗ.

ಶ್ರೀ ವಿ. ತಿಮ್ಮಪ್ಪ ಶೆಟ್ಟರ ಶೋಚನೀಯ ನಿಧನ— ಮಣಿಪಾಲ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಶಾಮರಾಯ ಶೆಟ್ಟರ ಪ್ರಥಮ ಪುತ್ರ ಶ್ರೀ ವಿ. ತಿಮ್ಮಪ್ಪ ಶೆಟ್ಟಿಯವರು ತಾ. ೧೬ ರಂದು ತನ್ನ ಎಳೆಪರೆಯವಲ್ಲಿಯೇ ಇಹರೋ ಕವನ್ನಗಲಿ ಹೋದರು. ದಿವಂಗತರು ತನ್ನ ವಿದ್ಯಾಭ್ಯಾಸವನ್ನು ಯಥಾಯೋಗ್ಯನಾಗಿ ಮುಗಿಸಿದ ಮೇಲೆ, ನಾಯಿಪ್ಪಾಡಿ ಸರಕಾರಿ ತರಬೇತಿ ಶಾಲೆಯಲ್ಲಿ ಅಧ್ಯಾಪಕರಾಗಿಯೂ ಮುಂದೆ ಉಡುಪಿ ದಕ್ಷಿಣ ಶ್ರೀನಿಯ ಶಾಲೆಗಳ ಪರೀಕ್ಷಕರಾಗಿಯೂ ಮಡಿದಿದ್ದರು. ಉಡುಪಿ ಸರಕಾರಿ ತರಬೇತಿ ಶಾಲೆಯಲ್ಲಿ ಸ್ವಲ್ಪಕಾಲ ಸೇವೆಸಲ್ಲಿಸಿ, ಮೂಡಬಿದಿರೆ ತ್ರಿಣಿಯ ಶಾಲಾ ಪರೀಕ್ಷಕರಾಗಿ ತಮ್ಮ ಅಂತಿಮ ಕಾಲದಲ್ಲಿ ಮಡಿಯುತಿದ್ದರು. ಇವರನ್ನು ಕೆಲವು ಸಮಯದಿಂದ ಹೃದಯ ದೌರ್ಬಲ್ಯವು ಕಾಡುತಿದ್ದು ಮರಣಗೊಳ್ಳುವ ಹಿಂದಿನ ದಿನ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕೊಂಡೊಯ್ಯಲಾಗಿದ್ದು ಚಿಕಿತ್ಸೆ ಹೊಂದುತಿದ್ದಂತೆಯೇ ಅವರು ಮೃತ್ಯುವನ್ನಪ್ಪಿದರು. ದಿವಂಗತರು ಅದರ್ಶ ಗುಣಭರಿತರಾಗಿಯೂ ಮೃದು ಸ್ವಭಾವದವರಾಗಿಯೂ ಹಿತಮಿತ ಮಾತುಗಾರರಾಗಿಯೂ ಇದ್ದು ತಾನು ತಾಲಿರಿಸಿದ ವಿವಿಧ ಕ್ಷೇತ್ರಗಳಲ್ಲಿ ಜನತೆಯ, ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಇವರು ಗರ್ಭವತಿಯಾದ ತನ್ನ ಪತ್ನಿಯನ್ನೂ ಸಂತಾನವನ್ನೂ ಬಂಧು ಬಾಂಧವರನ್ನೂ ಅಗಲಿಹೋದರು. ವೃತರ ಆತ್ಮಕ್ಕೆ ಶಾಂತಿಯನ್ನು ಬಯಸಿ ಕುಟುಂಬದ ದುಃಖದಲ್ಲಿ 'ನವಯುಗ'ವು ಸಹಭಾಗಿಯಾಗುತ್ತದೆ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ ೨೮ ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್-ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಮಂಗಳೂರು.

ವಿಜ್ಞಾನ ವಿಸ್ಮಯ

ವಿಜ್ಞಾನವು ಬೆಳೆದಂತೆ ವಿಸ್ಮಯಗಳೂ ಬೆಳೆಯುತ್ತಿವೆ!

ಟೈಪ್ ಸೆಟ್ಟಿಂಗ್ ಯಂತ್ರ

ಸಾಂಪ್ರದಾಯಿಕ ಸಲಕರಣೆಗಳಿಗಿಂತ ಮೂರು ಪಾಲು ಅಧಿಕ ವೇಗದಲ್ಲಿ ಮುದ್ರಣಕ್ಕೆ ಲೋಹವನ್ನು ಸಿದ್ಧಪಡಿಸುವ ಒಂದು ಹೊಸ ಇಲೆಕ್ಟ್ರಾನಿಕ್ ಟೈಪ್ ಸೆಟ್ಟಿಂಗ್ ಯಂತ್ರದ ಉತ್ಪಾದನೆಗೆ ಮತ್ತು ಹಂಚಿಕೆಗೆ ಯೋಜನೆಗಳನ್ನು ಘೋಷಿಸಲಾಗಿದೆ. ವಾಲ್‌ಸ್ಟ್ರೀಟ್ ಜರ್ನಲ್ ಆನೇಕ ವರ್ಷಗಳಿಂದ ಅಭಿವೃದ್ಧಿಗೊಳಿಸಿ ಪರೀಕ್ಷಿಸಿರುವ ಈ ಯಂತ್ರವನ್ನು ಅಮೆರಿಕದ ರೇಡಿಯೋ ಕಾರ್ಪೋರೇಶನ್ ಉತ್ಪಾದಿಸುವುದು. ಈ ಇಲೊಕ್ಟ್ರೋ-ಟೈಪ್‌ಸೆಟ್ಟರ್ ಯಂತ್ರವು, ಸಾಂಪ್ರದಾಯಿಕ ಸಲಕರಣೆಯಿಂದ ಉತ್ಪಾದಿಸಿದ ಒಂದು ರಂಧ್ರಮಯ ಟೇಪನ್ನು ಉಪಯೋಗಿಸುತ್ತದೆ. ಅನಂತರ ಒಂದು ಟೇಪ್ ರೀಡಿಂಗ್ ಸಾಧನವು ಟೈಪ್-ಕಾಸ್ಟಿಂಗ್ ಯಂತ್ರಕ್ಕೆ ನಿಯುತ ಸಂಕೇತಗಳನ್ನು ಕಳುಹಿಸುತ್ತದೆ ಸ್ವಯಂಚಾಲಿತ ಕಾರ್ಯ ನಿರ್ವಹಣೆಗೆಂದು ವಿಶೇಷವಾಗಿ ರಚಿಸಲಾದ ಇಲೆಕ್ಟ್ರೋ-ಟೈಪ್ ಸೆಟ್ಟರ್‌ಗಳಲ್ಲಿ ಇದೇ ಮೊದಲನೆಯದು.

೦ ೦ ೦

ಹೃದಯ ಶಸ್ತ್ರಕ್ರಿಯೆ

ಹೃದಯ ಶಸ್ತ್ರಕ್ರಿಯೆಯ ಹೊಸ ವಿಧಾನವೊಂದರಲ್ಲಿ, ಡಾಕ್ಟರ್‌ನಿಗೆ ಸುಮಾರು ಒಂದುವರೆ ಗಂಟೆಗಳ ವರೆಗೂ, ಹೃದಯದ ಚಿಕಿತ್ಸೆ ಮಾಡಿಕೊಂಡಿರಲು ಸಾಧ್ಯವಾಗುವುದು ಎಂದು ಫಿಲಡೆಲ್ಫಿಯದ ವೈದ್ಯರೊಬ್ಬರು ಅಮೆರಿಕನ್ ಕಾಲೆಜ್ ಆಫ್ ಸರ್ಜನ್‌ರ ವಾರ್ಷಿಕ ಕ್ಲಿನಿಕಲ್ ಕಾಂಗ್ರೆಸ್‌ನಲ್ಲಿ ಹೇಳಿದ್ದಾರೆ. ಹೊಸ ವಿಧಾನದಲ್ಲಿ ರೋಗಿಯ ಶ್ವಾಸಕೋಶಗಳನ್ನೇ ಉಪಯೋಗಿಸಲಾಗುವುದು, ಮತ್ತು ಹೃದಯಕ್ಕೆ ಹಿಂತಿರುಗುತ್ತಿರುವ ರಕ್ತವನ್ನು, ರೋಗಿಯ ದೇಹದ ಹೊರಗಿರುವ ಒಂದು ರಿಸರ್ವಾಯರ್‌ಗೆ ತಿರುಗಿಸಲಾಗುವುದು ಎಂದು ಹಾಹೆನ್‌ಮಾನ್ ಸ್ಕೂಲ್‌ನ ಡಾ। ಗುಮೆರಿಂಡೋ ಬ್ಲಾಂಕೋ ಹೇಳಿದರು. ಈ ವಿಧಾನದಲ್ಲಿ, ಅಂಗಾಂಶಗಳು ಸಜೀವವಾಗಿರಲು ಸಾಕಷ್ಟು ರಕ್ತ ಮಾತ್ರ ಹೃದಯದ ನ್ಯಾಯುಗಳಿಗೆ ಲಭಿಸುತ್ತದೆ ಎಂದವರು ಹೇಳಿದರು, ಹೃದಯವನ್ನು ಶರಪಡಿಸಲು ಅವಶ್ಯವಿದ್ದರೆ, ಮೊದಲು ಸಾಧ್ಯವಾಗಿದ್ದುದಕ್ಕಿಂತ, ಇಮ್ಮಡಿ ಕಾಲಾವಕಾಶವನ್ನು ಸರ್ಜನ್ ಉಪಯೋಗಿಸಿಕೊಳ್ಳಬಹುದು.

ಎಲುಬುಗಳ ಸರಿಪಡಿಸುವಿಕೆ

ಮುರಿದ ಮತ್ತು ರೋಗಗ್ರಸ್ತ ಮೂಳೆಗಳನ್ನು ಸಂವಡಿಸಲು, ಶ್ರೇಷ್ಠವಾಗಿ ಜೋಡಿಸುವ ಪ್ಲಾಸ್ಟಿಕ್ ಅಂಟಿನ ಪ್ರಥಮ ಯಶಸ್ವೀ ಉಪಯೋಗವನ್ನು, ಅಮೆರಿಕನ್ ಕಾಲೇಜ್ ಆಫ್ ಸರ್ಜನ್ಸ್‌ನ ಳಿಗನೆಯ ವಾರ್ಷಿಕ ಕ್ಲಿನಿಕಲ್ ಪರಿಷತ್ತಿನಲ್ಲಿ ವರದಿ ಮಾಡಲಾಗಿದೆ. ರಾಜಧಾನಿ ವಾಷಿಂಗ್ಟನ್‌ನ ವಾಲ್ಟರ್ ರೀಡ್ ಆರ್ಮ್ಡ್ ಮೆಡಿಕಲ್ ಸೆಂಟರ್‌ನಲ್ಲಿ ಮತ್ತು ಫಿಲಡೆಲ್ಫಿಯದ ಹಾಹೆನ್‌ಮೆನ್ ಮೆಡಿಕಲ್ ಕಾಲೇಜ್ ಮತ್ತು ಹಾಸ್ಪಿಟಲ್‌ನಲ್ಲಿ ಈ ಹೊಸ ವಸ್ತುವಿನ (ಪೋಲಿಯುರೆಥೇನ್ ಫೋಮ್) ಕ್ಲಿನಿಕಲ್ ಪ್ರಯೋಗಗಳನ್ನು ಮಾಡಲಾಯಿತು ಈ ಹೊಸ ಪದಾರ್ಥವು ಮುರಿದ ಮೂಳೆಯ ತುದಿಗಳಿಗೆ ೦೦ ನಿಮಿಷಗಳಲ್ಲಿ ಅಂಟುತ್ತದೆ ಮತ್ತು ಗಟ್ಟಿಯಾಗುತ್ತದೆ ಮತ್ತು ಒಂದೆರಡು ದಿನಗಳಲ್ಲಿ ಭಾರವನ್ನು ತಾಳಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸರ್ಜನ್‌ರು ಪರಿಷತ್ತಿನಲ್ಲಿ ವರದಿ ಮಾಡಲಾಯಿತು. ಕ್ಯಾನ್ಸರ್‌ನಿಂದ ಹಾಳಾದ ಸ್ಥಳಗಳಲ್ಲಿ ಪ್ಲಾಸ್ಟಿಕ್ ತುಂಬಿಸಿದ ಮತ್ತು ಗಟ್ಟಿಯಾಗುವ ಮುಂಚೆ ಇದನ್ನು ಮೂಳೆಯ ಸಹಜ ರೂಪಗಳಿಗೆ ರೂಪಿಸಿದ ವಿಷಯವೊಂದನ್ನು ವರದಿ ಮಾಡಲಾಯಿತು ಈ ಪದಾರ್ಥವು ಭವಿಷ್ಯದಲ್ಲಿ ನಿಶ್ಚಿತ ಬಳಕೆಗೆ ಬರುವುದೆಂದು ವರದಿಯಲ್ಲಿ ಆಶಾಭಾವನೆ ವ್ಯಕ್ತಪಡಿಸಲಾಗಿದೆ

ಪದವೀಧರರಾಗುವ ವಿದ್ಯಾರ್ಥಿಗಳೆಬ್ಬರನ್ನು ಅಮೆರಿಕೆಯ ಕೃಷಿ ಖಾತೆಯ ಕಾರ್ಯದರ್ಶಿ ಶ್ರೀ ಎಜ್ರಾ ತಾಫ್ಟ್‌ಬೆನ್‌ಸನರು ಗೌರವಿಸುತ್ತಿದ್ದಾರೆ.

ಪ್ರಗತಿಪಥ

(ಒನೇ ಪುಟದಿಂದ)

ಈ ವಸ್ತುಪ್ರದರ್ಶನವು ನಾಲು ಮುರಗಳುಳ್ಳ ವಿಶಾಲ ಬೀದಿಗಳು ಮತ್ತು ಹೆಚ್ಚಿನೆಯ ಬಯಲುಗಳಿಂದ ಕೂಡಿರುವುದು. ವಸ್ತು ಪ್ರದರ್ಶನದಲ್ಲಿ ನಿರ್ಮಿಸಿರುವ ಕಟ್ಟಡಗಳು ಸಹ ಒಂದೇ-ಮಾದರಿಯವಲ್ಲ. ಅವು ವಿವಿಧ ವಾಸ್ತು ಶಿಲ್ಪ ಶೈಲಿಗಳಿಂದ ಕೂಡಿರುವುವು

'ಭಾರತ-೧೯೫೮' ವಸ್ತುಪ್ರದರ್ಶನವು ಈ ತರಹದ ವಸ್ತು ಪ್ರದರ್ಶನಗಳಲ್ಲಿ ಮೊತ್ತಮೊದಲನೆಯದಾಗಿರುವುದು. ಈ ವಸ್ತುಪ್ರದರ್ಶನದ ವ್ಯವಸ್ಥೆಯು ಉದ್ದೇಶವು ಸಾಫಲ್ಯಗೊಳ್ಳುವುದೆಂದು ಆಶಿಸಲಾಗಿದೆ.

—ಶ್ರೀ ಪಿ. ಕೆ. ಪಣಿಕ್ಕರ್.

CORRECTION

In the notice of the Moolky Bank Ltd, Mulki, published in our issue of 16—10—58, the following correction is given For 'B. Thukra Shetty' read 'B. Thukku Shetty'

—Ed.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

S. C. No. 616/1958.

ಚಂದ್ರಶೇಖರ ಸೆಟ್ಟಿ—ವಾದಿ.

ಕನ್ಯಾನ ಜಿಕ್ಕ ಅಕ್ಕಾಲಿ—ಪ್ರತಿವಾದಿ.

ಸದ್ರಿ ದಾವೆಯ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ಚಂದ್ರಶೇಖರ ಸೆಟ್ಟು ವಾದಿಯಾಗಿ ಸ್ರಿಕ್ ವಾದಿ-ಚಿಕ್ಕ ಅಕ್ಕಸಾಲಿ ಎಂಬವರು ಕುಂದಾಪುರ ಕಸಬಾದಲ್ಲಿರುವ ಮೃತಪಟ್ಟ ಶಿವರಾಮ ಸೆಟ್ಟಿ ಅಂಗಡಿಯಲ್ಲಿ ತಾ. 4-7-1955ರಲ್ಲಿ ನಡೆಸಿದ ಲೇವಾದೇವಿ ಬಾಬ್ತು ಬಾಕಿ ಅದರೂ. 118—0—0 ಅ ಬಡ್ಡಿ ಕೂಡಾ ರೂಪ್ಯಾ 137—8 0ಕ್ಕೆ ನಾದಿಯು ದಾವೆ ದಾಕಲು ಮಾಡಿದ್ದಾನೆ. ಸದ್ರಿ ದಾವೆಯು ತಾ. 7—11—1958ಕ್ಕೆ ಇಡೋಣಾಗಿಯದೆ. ಈ ಬಾಬಿನಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸದ್ರಿ ತಾರೀಕಿನ ಹಗಲು 10 ಗಂಟೆಗೆ ಹಾಜ್ರಾಗಿ ತಿಳಿಸೋಣಂಗಬೇಕಾಗಿ ಈ ಮೂಲಕ ಜಾಹೀರು ಮಾಡಿಕೊಂಡಿರುತ್ತೇವೆ.

ಸೂರಪ್ಪ ಸೆಟ್ಟಿ ಕೊಳ್ಕೆಬೈಲು,
ವಾದಿಕಡೆ ಎಡ್ವೋಕೇಟ್.

ಕುಂದಾಪುರ, ತಾ 17—10—1958.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಟಿಗ ಪುಸ್ತಕಗಳು, ಸೊನ್ನೆಟ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫುಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಜಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ನೆಂಕಟ್ರಾನ್, ಎಲ್- ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ. ಎರಡು ಎರಡು ರೂಪಾಯಿ ೨೬ ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಲಪಡುವುದು.

●

ನಿನ್ನಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಅಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ ಒಂದೂವರೆ. ಒಂದು ರೂಪಾಯಿ ೭೬ ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಲಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ವಿತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಕಾಂಗ್ರೆಸಾಧಿವೇಶನ

(೧೨ನೇ ಪುಟದಿಂದ)

ನಾವು ಆರ್ಥಿಕೋತ್ಪಾದನೆಯತ್ತ ಧಾವಿಸಿರುವೆವಾದರೂ ದೇಶದಲ್ಲಿ ಮುಖ್ಯವಾಗಿ ಕೆಲವು ರಾಜ್ಯಗಳಲ್ಲಿ ಆಹಾರದ ಕರಸ್ಥಿತಿಯು ತುಂಬ ಚಿಂತಾಜನಕವಿರುವುದಾಗಿ ವರದಿಗಳು ಬಂದಿವೆ. ಈ ಬಗ್ಗೆ ಉತ್ತರ ಪ್ರದೇಶದಲ್ಲಿ ಸತ್ಯಾಗ್ರವು ಕೈಗೊಳ್ಳಲ್ಪಟ್ಟುದೂ ಕೇರಳ ಸರಕಾರವು ತನ್ನ ತಪ್ಪನ್ನು ಕೇಂದ್ರದ ತಲೆಯ ಮೇಲೆ ಹೊರಿಸುತ್ತಿರುವುದೂ ಇತ್ತೀಚೆಗೆ ಕೇವಲ ಲೋಕ ಸಭೆಯಲ್ಲೇ ಅಲ್ಲ, ಲೋಕಸಭಾ ಕಾಂಗ್ರೆಸ್ ಪಕ್ಷದಲ್ಲೂ ಆಹಾರಶಾಖಾ ಮಂತ್ರಿ ಶ್ರೀ ಜೈನರ ಮೇಲೆ ಟೀಕೆಯ ಸುರಿಮಳೆ ಬಿದ್ದುದೂ ಸ್ಮೃತಿಪಟಲದಿಂದ ದೂರ ಸರಿಯಲಾರದು. ಹೀಗಿರುವಾಗ, ಕೃಷಿಯನ್ನು ನಾವು ಕಡೆಗಣಿಸುವುದು ಸಾಧ್ಯವೆ?

ಭಾರತದಂತಹ ವಿಸ್ತಾರವಾದ ಸಸ್ಯಶ್ಯಾಮಲವಾದ ಜನ ನಿಬಿಡವಾದ ಆಜ್ಞಾನಿಗಳ ತವರೂರಲ್ಲಿ ಬೇಸಾಯವನ್ನೇ ಪ್ರಧಾನ ಕಸುಬನ್ನಾಗಿ ಮಾಡಿಕೊಂಡಿರುವವರ ದೇಶದಲ್ಲಿ ಈ ವಿಭಾಗವನ್ನು ಲಕ್ಷಿಸದೆ ಆಹಾರ ಸ್ವಾವಲಂಬನೆಯನ್ನು ಸಾಧಿಸದೆ ಇನ್ನೂ ಇನ್ನೂ ಕಂಗೆಡುವುದು ಸರಿಯಲ್ಲ. ಅಂತೆಯೇ, ನವೀನ ಯುಗಕ್ಕೆ ಅನುಗುಣವಾಗಿ, ಉದ್ಯೋಗೀಕರಣವನ್ನೂ ನಾವು ಸಾಧಿಸದೆ ಕುಳಿತಿರುವುದೂ ಅವಿವೇಕವೆಂದೇ ಹೇಳಬೇಕು. ನಮಗೆ ಬೇಕಾಗಿರುವುದು ಅನಂತವಾದರೂ ನಮ್ಮ ಯೋಜನೆಯು ಮಿತವಾಗಿರುವುದಾದರೂ ಇವನ್ನು ಮರೆತು ಕಣ್ಣು ಮುಚ್ಚಿ ಕೂರುವುದು ಸಮಂಜಸವಲ್ಲ.

ಅಲ್ಲದೇ ಯೋಜನೆಯ ಬಗ್ಗೆ ವೆಚ್ಚವಾಗುವ ಪ್ರತಿ ನಯೇ ಪೈಸೆಯೂ ಆದಕ್ಕಾಗಿ ವಿನಿಯೋಗವಾಗುವಂತೆಯೂ ಈ ವಿನಿಯೋಗದಿಂದ ಸಕಲ ಲಭಿಸುವಂತೆಯೂ ನೋಡಿಕೊಂಡಿರಬೇಕಾದುದು ಅಗತ್ಯವೆಂದು ಒತ್ತಿ ಹೇಳಬೇಕಾಗಿದೆ.

ಎರಡನೆಯದಾಗಿ ಭೂ ಸುಧಾರಣೆ ಕಾಂಗ್ರೆಸ್ ಸಂಸ್ಥೆಗೆ ಇದು ಅತ್ಯಂತ ಹಳಸಿ ಹೋದ ವಿಚಾರ. ಆದರೆ, ಇನ್ನೂ ದೇಶವಿಡೀ ಭೂ ಸುಧಾರಣೆ ಕಾಯ್ದೆಯನ್ನು ವ್ಯವಹಾರದಲ್ಲಿ ತರುವುದು ಸಾಧ್ಯವಾಗಲಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ಆದರೆ, ಒಂದಲ್ಲ ಒಂದು ವಿಧದ, ಧನಿ ಹಾಗೂ ಒಕ್ಕಲುಗಳಲ್ಲಿ ಯಾರಿಗೂ ಅನ್ಯಾಯವಾಗದಂತೆ ಮತ್ತು ರಾಷ್ಟ್ರದ ಹಿತದೃಷ್ಟಿಗೆ ಅನುಕೂಲವಾಗುವಂತೆ ಭೂಸುಧಾರಣೆಯನ್ನು ಮಾಡಲು ನೆರವಾಗಬಹುದಾದ ಒಂದು ಶಾಸನವನ್ನು ಈ ವರ್ಷವಾದರೂ ಮಾಡುವಂತೆ ಒತ್ತಾಯ ಹೇರಬೇಕು. ಇನ್ನೂ ಇನ್ನೂ ಈ ದಿಸೆಯಲ್ಲಿ ಕೂರ್ಮಗಮನವನ್ನನುಸರಿಸುವುದು ದೇಶದ ದೃಷ್ಟಿಯಿಂದಲೂ ಕಾಂಗ್ರೆಸ್‌ನ ಹಿತದೃಷ್ಟಿಯಿಂದಲೂ ಹಾನಿಕಾರಕವಾದುದೆನ್ನದೆ ಅನ್ಯತ್ರ ಗತಿಯಿಲ್ಲ.

ವಿಜಯ ದಶಮಿ

ಸರ್ವಜನಾದರಣೀಯ ಭಾರತೀಯ ಪರ್ವವಿದು

ವಿವಿಧೆಡೆಗಳಲ್ಲಿ ವಿಭಿನ್ನ ರೀತಿಯಲ್ಲಿ ಇದರ ಆಚರಣೆ ನಡೆಯುತ್ತದೆ

ವಿಜಯ ದಶಮಿಯನ್ನು ಭಾರತದ ಸರ್ವ ಭಾಗಗಳಲ್ಲಿಯೂ ಆಚರಿಸಲಾಗುತ್ತದೆ. ಇದು ಶಕ್ತಿ ಪೂಜೆಯ ಕಾರ್ಯವಲ್ಲದೇ ಕುಪ್ರವೃತ್ತಿಗಳ ಮೇಲೆ ಸುಪ್ರವೃತ್ತಿಗಳ ವಿಜಯ ಸಂಪಾದನೆಯ ಸ್ಮರಣೆಯ ದಿವಸವೂ ಹಾದು. ಈ ದಿನವೇ ಲಂಕಾಧಿಪತಿಯಾಗಿದ್ದ ರಾವಣನ ವಧೆಯು ರಾಮನಿಂದಾಯಿತು. ಬಂಗಾಲ ಮತ್ತು ನೈಸೂರು ರಾಜ್ಯಗಳಲ್ಲಿ ಆತ್ಯಂತೋತ್ಸಾಹದಿಂದ ಇದನ್ನು ಆಚರಿಸುತ್ತಾರೆ.

ವಿಜಯದಶಮಿಯನ್ನು ಭಾರತದ ವಿಭಿನ್ನ ಭಾಗದ ಜನರು ಬೇರೆ ಬೇರೆ ವಿಧಾನಗಳಿಂದ ಆಚರಿಸುತ್ತಾರೆ. ಇದು ೯ ದಿನಗಳ ನವರಾತ್ರಿಯ ಉಡನೆಯೂ ಸೇರುತ್ತದೆ. ೯ ದಿನಗಳಲ್ಲಿ ದೇವಿಯಶ್ವರೂಪದಲ್ಲಿ ಶಕ್ತಿ ಪೂಜೆಯು ನಡೆಯುತ್ತದೆ. ಈ ದಿನಗಳಿಗೆ ತಮ್ಮದೇ ಆದ ಬೇರೆ ಬೇರೆ ಮಹತ್ವಗಳಿವೆ. ಚಳಿಗಾಲಕ್ಕೆ ಮೊದಲು ಮತ್ತು ಮಳೆಗಾಲದ ನಂತರ ಈ ಹಬ್ಬದ ದಿನಗಳು ಬರುತ್ತವೆ. ಗ್ರೀಷ್ಮ ಹಾಗೂ ವರ್ಷ ಋತುಗಳ ನಾಲ್ಕು ತಿಂಗಳ, ಜಗತ್ತಿನ ಪ್ರಾಣಿಗಳ ಶಕ್ತಿ ಕ್ರಮಶಃ ಕ್ಷೀಣವಾಗುತ್ತ ಬರುತ್ತದೆ. ಚಳಿಗಾಲವು ಮೊದಲಾದೊಡನೆಯೇ ಆದು ಬೆಳೆಯುತ್ತದೆ. ಈ ಶಕ್ತಿಸಂಚಾಲನೆಗಾಗಿಯೇ ಭಾರತೀಯರು ಆಶಕ್ತಿಯನ್ನು ದೇವಿಯ ರೂಪದಲ್ಲಿ ಆರಾಧಿಸುತ್ತಾರೆ.

ರಾಜ ಭಗೀರಥನು ತನ್ನ ತಪಸ್ಸಿನ ಪ್ರಭಾವದಿಂದ ಗಂಗೆಯನ್ನು ಸ್ವರ್ಗ ಲೋಕದಿಂದ ಭೂಮಿಗಳಿಸಿದನೆಂದು ಕೆಲವರು ಹೇಳುತ್ತ ವಿಜಯ ದಶಮಿಯನ್ನು ಗಂಗಾ ದಶಮಿಯೆಂದು ಕರೆಯುತ್ತಾರೆ. ಇನ್ನೊಂದು ಕಥೆಯ ದೆ: ಒಂದು ಖಾರಿ ಪಾರ್ವತಿಯು ಶಿವನ ಪತಿ ಶಂಕರನಿಂದ ಪಿತೃಗ್ರಹಕ್ಕೆ ತೆರಳಲು ಅನುಮತಿ ಯಾಚಿಸಿದಳು; ಆದರೆ, ಶಿವನದನ್ನು ತಿರಸ್ಕರಿಸಿದನು. ಆತ್ಯಂತಾಗ್ರಹ ಮಾಡಿದ ಮೇಲೆ ಆಕೆಗೆ ಅ ಪೈಣೆ ಕೊಡೆಯಿತು. ಪಾರ್ವತಿಯು ಇದೇ ದಿನಗಳಲ್ಲಿ ಹೋದಳು. ಬಂಗಾಳದಲ್ಲಿ ಈ ವಿಶ್ವಾಸದಿಂದಲೇ ದುರ್ಗಾಪೂಜೆಯು ಅವಧಿಯಲ್ಲಿ ಮಗಳಿಂದಿರು ಪಿತೃಗೃಹಕ್ಕೆ ತೆರಳುತ್ತಾರೆ.

ಪುರುಷೋತ್ತಮನಾದ ರಾಮನು ಲಂಕಾಪತಿ ರಾವಣನನ್ನು ವಿಜಯ ದಶಮಿಯ ದಿನವೇ ಗೆದ್ದನೆನ್ನುತ್ತಾರೆ. ರಾವಣನ ಸತ್ತು ತಲೆಗಳನ್ನು ರಾಮನು ಕೆಂಡರಿಸಿದರೂ ಅವು ಮತ್ತೂ ಮತ್ತೂ ಮೊಳೆಯುತ್ತ ಇದ್ದುವಂತೆ. ದೇವಿಯನ್ನು ಪೂಜಿಸಿ, ಆಕೆಯ ಅಶೀರ್ವಾದವನ್ನು ಪಡೆದು, ರಾವಣನನ್ನು ಕೊಲ್ಲಲು ಸಮರ್ಥನಾದನಂತೆ.

ಮತ್ತೊಂದು ಕಥೆ ಹೀಗಿದೆ: ಒಂದು ಸಮಯ ಮಹಿಷಾಸುರನೆಂಬ ದುಷ್ಟನ ಶಕ್ತಿಗೆ ಸೀಮೆಯಿರಲಿಲ್ಲ. ತನ್ನ ಬಲದಿಂದ ಇಹಲೋಕವನ್ನು ಗೆದ್ದು. ದೇವಲೋಕವನ್ನು ಕೈವಶಮಾಡಿಕೊಳ್ಳುವುದಕ್ಕೂ ಮುಂದಾಗಿ ಕಾರ್ಯ ತತ್ಪರನಾದನು. ದುಃಖಿಗಳಾದ ಅವಾರ ದೇವತೆಗಳು ಭಗವಾನ್ ಶಂಕರನಲ್ಲಿ ಮೊರೆಯಿಟ್ಟರು. ಈಶ್ವರ ತೇಜದಿಂದ ದೇವಿಯುತ್ಪನ್ನಳಾದಳು; ಉಳಿದ ದೇವತೆಗಳ ಅಂಶದಿಂದ ದೇವಿಯ ಬೇರೆ ಬೇರೆ ಅಂಗಾಂಗಗಳು ಸಿದ್ಧವಾದುವು ಹೀಗೆ ಎಲ್ಲ ದೇವತೆಯರ ತೇಜಸ್ಸಿನಿಂದ ನಿರ್ಮಿತವಾದ ಸಜೀವಿಯೇ ದುರ್ಗೆ. ಈಕೆಯು ಮಹಿಷಾಸುರನನ್ನು ಇದೇ ದಿನ ಸಂಹರಿಸಿದಳಂತೆ. ಹೀಗೆ ದೇವತೆಯರ ಕಲ್ಯಾಣವೂ ಆಯಿತಂತೆ.

ದೇಶದ ವಿವಿಧ ಕಡೆಗಳಲ್ಲಿ ಬಗೆ ಬಗೆಯಿಂದ ಈ ಉತ್ಸವವನ್ನು ಆಚರಿಸಲಾಗುತ್ತದೆ. ನವದೆಹಲಿಯಲ್ಲಿ ರಾವಣ ಮತ್ತು ಲಂಕೆಯ ಮೂರ್ತಿಗಳನ್ನು ನಿರ್ಮಿಸಿ, ಅವನ್ನು ಸುಟ್ಟು ಉರಿಸುತ್ತಾರೆ. ಹಳ್ಳಿಗಾಡುಗಳಲ್ಲಿ ಕೋಳಿ ಅಂಕ, ಮಲ್ಲಯುದ್ಧ ಇತ್ಯಾದಿಗಳ ಮೂಲಕ ಉತ್ಸವವನ್ನು ಮಾಡುತ್ತಾರೆ. ಒಂಭತ್ತು ದಿನಗಳಲ್ಲೂ ಗ್ರಾಮಿಣರು ಬಾಹಿರ ಪ್ರದೇಶಕ್ಕೆ ತೆರಳಿ, ಅಲ್ಲಿ ವಟವೃಕ್ಷವನ್ನು ಪೂಜಿಸುತ್ತಾರೆ.

ಬೊಂಬಾಯಿಯ ಪ್ರಭು ಜಾತಿಗೆ ಸೇರಿದ ಹಿಂದುಗಳು ಗುಪ್ತದಾನವನ್ನು ಈ ದಿನಗಳಲ್ಲಿ ಕೊಡುತ್ತಾರೆ. ಈ ಜಾತಿಯ ಚಂದ್ರಸೇನನೆಂಬವನಿಗೆ ನಾರದನು ಗುಪ್ತದಾನ ಮಾಡುವಂತೆ ಉಪದೇಶಿಸಿದನೆಂದೂ ಚಂದ್ರಸೇನನು ಕುಂಬಳ ಕಾಯಿಗಳಲ್ಲಿ ಸ್ವರ್ಣ ಮುದ್ರೆಗಳನ್ನಿಟ್ಟು ದಾನ ಮಾಡಿದನೆಂದೂ ಇವರನ್ನುತ್ತಾನೆ.

ನೇಪಾಲದಲ್ಲಿ ದೇವಿಗೆ ಪಶುಬಲಿಯನ್ನೂ ಕೊಡುತ್ತಾರೆ. ಬಂಗಾಳದಲ್ಲಿ ಗಂಗೆಯ ಮಣ್ಣಿನಲ್ಲಿ ದೇವಿಯ ಪ್ರತಿಮೆಯನ್ನು ಮಾಡ್ಸಿ,ಪೂಜಿಸಿ ಸವಿಪದ ಹಳ್ಳಕೆರೆಗಳಲ್ಲಿ ವಿಸರ್ಜಿಸಿ ಬಿಡುತ್ತಾರೆ. ಬಂಗಾಳಿಗಳಿಗಿದು ಮಹತ್ವಪೂರ್ಣ ಹಬ್ಬವಾಗಿದೆ. ದಕ್ಷಿಣ ಭಾರತದಲ್ಲಿಯೂ ದುರ್ಗೋತ್ಸವವು ಮನೋರಂಜಕವಾಗಿದೆ.

ಮೈಸೂರಿನ ದಸರಾ ಅಖಿಲಭಾರತ ಪ್ರಸಿದ್ಧವಾಗಿದೆ. ಅಂದು ಹಿಂದಿನ ಕಾಲದ ಕ್ಷತ್ರಿಯರು ಸೀಮೋಲ್ಲಂಘನದ ಪ್ರತೀಕವಾಗಿ ತಮ್ಮ ಪೂಜೆ, ಸೀಮೋಲ್ಲಂಘನ, ಜಂಬೂಸವಾರಿ ಇತ್ಯಾದಿಗಳು ನಡೆಯುತ್ತವೆ. ಬೇರೆ ಬೇರೆ ಮೂಲೆಗಳಿಂದ ಲಕ್ಷಾಂತರ ಜನರಲ್ಲಿ ಕಿಕ್ಕಿರಿಯುತ್ತಾರೆ. ಆಲ್ಲದೇ, ಇದು ಕನ್ನಡಿಗರಿಗಿದೊಂದು ರಾಷ್ಟ್ರೀಯ ಪರ್ವಕಾಲ ಅಥವಾ ನಾಡ ಹಬ್ಬವಾಗಿದೆ.

ಈ ದಿನಗಳು ಕೇವಲ ಮನೋರಂಜನೆಗಾಗಿಯೇ ಇರುವುದೆಂದು ತಿಳಿದರೆ ಅಪಾರ್ಥವಾದೀತು. ಮಹಿಷಾಸುರ ರಾವಣಾದಿಗಳು ನಮ್ಮ ಕುಪ್ರವೃತ್ತಿಯ ಮತ್ತು ಹೇಯಾಚಾರಗಳ ಪ್ರತೀಕವಾಗಿದ್ದಾರೆ. ವಿಜಯದಶಮಿಯು ಮನೋರಂಜಕವಿರುವಂತೆಯೇ ಗೌರವಪೂರ್ಣವೂ ಅರ್ಥಪೂರ್ಣವೂ ಆಗಬೇಕಾದರೆ, ನಾವೂ ನಮ್ಮ ದೋಷಗಳನ್ನು ಹೊಡೆದೋಡಿಸಿ, ಅವುಗಳ ಮೇಲೆ ವಿಜಯ ಸಂಪಾದಿಸುವ ದಿಶೆಯಲ್ಲಿ ನಡೆಯಬೇಕು. ಎಂತಲೇ ಈ ವಿಜಯ ದಶಮಿಯು ಆತ್ಮಸಂಶೋಧನೆಯ ಕಾಲವೆಂದು ಹೇಳದೆಯೂ ಅನ್ಯೋತ್ತಿಯಾಗಲಾರದು.

ನೋಟೀಸು.

ಕಾರ್ಕಳ ಡಿ. ಮುನ್ಸಿ. ಕೋರ್ಟಿನಲ್ಲಿ

S. C- 258/58

ಇನಾಸ್ ಡಿಸೋಜ — ವಾದಿ.

ಸಂಜೀವ ಆಚಿಲ — ಪ್ರತಿವಾದಿ.

ಸದ್ರಿ ದಾವೆಯ ಶ್ರೀವಾದಿ ಮಂಗ್ಳೂರು ತಾಲ್ಲೂ ಕವತಾರು ಗ್ರಾಮದ ಹೊಸಮನೆ ಎಂಬಲ್ಲಿರುವ ಬೊಂಬ್ಮಯ್ಯ ಆಚಿಲರ ಮಗ ಸಂಜೀವ ಆಚಿಲರಿಗೆ —

ಮಾದಿಗೆ ನೀವು ತಾ. 7-8-1958ರಲ್ಲಿ ರೂ. 150/-ಕ್ಕೆ ಬರೆಕೊಟ್ಟ ಡಿ. ಪೆದ್ರಿ. ನೋಟನ ಅಸಲು ಬಡ್ಡಿ ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಸದ್ರಿ ದಾವೆಯು ನಿಮ್ಮ ಹಾಜ್ರಾತಿ ಬಗ್ಗೆ ತಾ. 1-11-58ಕ್ಕೆ ಇಟ್ಟಿರುವದ್ರಿಂದ ಆ ದಿನ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಉಡಪರಿಸತಕ್ಕೆದ್ದು ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

By order of the Court.

L. Pereira,
Advocate for Plff.

Karkala, 14—10—58.

೭೦ ವರ್ಷ ಗಳಿಂದಲೂ ಪ್ರಸಿದ್ಧ ಇದೆ. | ಮಲೇರಿಯಾ | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯೂಮಿಕ್ಶರ

ಮತ್ತು ಗುಳಿಗೆಗಳು

ಮಾರಾಟ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಕೇವಲ ವಿವಾಹಿತರಿಗಾಗಿ

ಕಾಶೀರಿ ಶಾಸ್ತ್ರ

ಬಳ ಚಿತ್ರಗಳೊಂದಿಗೆ

ಜಾಹೀರಾತಿನಿಂದ ಸ್ಪಷ್ಟವಾಗಿ ತಿಳಿಸಲು ಜಾತಿವಿ ವಿಸಯಗಳಿಂದ ಕೂಡಿದೆ. ಮಾರ್ಕೆಟಿನಲ್ಲಿ ಸಿಗುವ 'ಕಾಶ್ಮೀರಿ ಶಾಸ್ತ್ರ' ಎಂಬ ಪುಸ್ತಕದಿಂದ ಹಿಡುಗರು ಅದರೊಳಗಿನ ವಿಷಯಗಳನ್ನು ಹಾಗೂ ಎಂಥ ನವುಮನೆಯ ಚಿತ್ರಗಳಿರಬಹುದೆಂಬುದನ್ನು ಕಂಡುಕೊಳ್ಳಬೇಕು. ಬೆಲೆ ರೂ. ೪.೦೦.

ಶಯನಗೃಹದ ಚಿತ್ರಗಳು

ಶಯನಗೃಹದ ಅಂದ ಚೆಂದವನ್ನು ನೋಡಲು ಆಪೇಕ್ಷೆಯುಳ್ಳವರಾಗಿದ್ದರೆ ರೂ. ೬.೦೦ ಕಿಮ್ಮತ್ತಿನ ೩೫ ಚಿತ್ರಗಳ ಒಂದು ಸೆಟ್ಟಿಗೆ ಆರ್ಡರ್ ಕಳಿಸಿರಿ. ೧೨೮ ಮಾದರಿಯ ನಮೂನೆ ಬೆಲೆ ೩.೫೦. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾತ್ರ.

Paris Art House
(Sec. 108)
Durgiana, AMRITSAR.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಕಾವ್ಯಪ್ರಕಾಶ

ಜನತೆಯನ್ನುದ್ರೇಕಿಸಿ ರಾಜನು ದೇಶಭ್ರಷ್ಟನಾದನು

ತಮ್ಮನ್ನುದ್ಧರಿಸಿದ ಪಥಿಕಕುಟುಂಬದ ಹೆಸರಿನಲ್ಲಿ ಜನರು ಉತ್ಸವವನ್ನು ಆರಂಭಿಸಿ ನಲಿದು

ಸುಖಿಗಳಾದರು.

ಪಥಿಕನ ಹತ್ಯಾಕಾಂಡವು ಮುಕ್ತಾಯವಾದ ತರುವಾಯ ದೇಶದಲ್ಲಿ ಅದ್ಭುತ ಪ್ರಕಾರದ ಶಾಂತಿಯು ವ್ಯಾಪಿಸಿತು. ಜನರು ತಮ್ಮ ಕಷ್ಟಗಳ ಮೂಲಕಾರಣವನ್ನೇ ಮರೆತರು. ಅವರವರಿಗೆ ಅವರವರ ತಾಪತ್ರಯಗಳೇ ಪುನಃ ಹೆಚ್ಚೆನಿಸತೊಡಗಿದುವು ತಮ್ಮ ಕೆಲ್ರೀಧನನ್ನೂ ಅವರು ನೆಂಗಿಬಿಟ್ಟರು. ಆವರಲ್ಲಿ ಉಚ್ಚ ನೀಚ ಭಾವಗಳೂ ವಗಾಯವಾದುವು. ಒಬ್ಬನಿನ್ನೊಬ್ಬನೊಡನೆ ಮಾತಾಡುತ್ತಿರಲಿಲ್ಲ; ಯಾವುದೇ ಸಭೆ ಸಮಾರಂಭಗಳಲ್ಲಿ ಒಂದುಸೇರುತ್ತಿರಲಿಲ್ಲ. ಎಲ್ಲರೂ ಅಂತರಾತ್ಮವಲ್ಲಿಯೂ ಒಂದು ವಿಧದ ಪೀಡೆಯು ಅವರಿಸಿ ಅವರನ್ನು ಮೂಕರನ್ನಾಗಿ ಮಾಡಿತ್ತು.

ದೇಶದ ಈ ಕಂದ ಗಂಭೀರ ಔದಾಸೀನ್ಯವು ರಾಜನಿಗೆ ಅಸಹ್ಯವೆನಿಸತೊಡಗಿತು. ಅತ್ಯಾಚಾರಿ ವ್ಯಕ್ತಿಯು ತನ್ನ ವಿನಾಶ ಪ್ರಯತ್ನವನ್ನು ಸ್ವಯಂ ಮಾಡತೊಡಗುತ್ತಾನೆ ರಾಜನು ಪ್ರಜಾಜನರ ಮನಸ್ಸನ್ನು ಉದ್ರೇಕಿಸಲು ಪಥಿಕನ ನೆನಪನ್ನುಂಟುಮಾಡುವ ಯಾವುದೇ ಆನಂದ ವಿರಾಚರಣೆಯನ್ನು ನಿಷೇಧಿಸಿ ಪಥಿಕನ ಮನೆಯನ್ನು ಕೆಡವಲು ಆಜ್ಞೆಯಿತ್ತನು. ಅಲ್ಲದೇ ಪಥಿಕನ ಅನುಯಾಯಿಗಳನ್ನು ಸೆರೆಹಿಡಿದು ತನ್ನೆದುರು ಉಪಸ್ಥಿತರಾಗಿಸುವ ಆಜ್ಞೆಯನ್ನು ಜಾಹೀರು ಮಾಡಿದನು

ರಾಜನ ಮೇಲಣ ಆಜ್ಞೆಯನ್ನು ಆಲಿಸಿದಾಗ, ಜನರಿಗೆ ತಮ್ಮ ಕಷ್ಟಗಳ ಮನವರಿಕೆಯಾಯಿತು. ಅದು ಜಾಗ್ರತವಾಯಿತು. ದೇಶದ ವೃದ್ಧವೃದ್ಧೆಯರು, ಯುವಕಯುವತಿಯರು, ಬಾಲಕ ಬಾಲಿಕೆಯರು, ವಿದ್ವಾಂಸರು, ಮೂಢರು, ಕೃಷಿಕರು, ಮಜೂರರು ಎಲ್ಲರೂ ಪಥಿಕನ ವಾತ್ಸಲ್ಯಪೂರ್ಣ ನಾಮವನ್ನು ಉಚ್ಚರಿಸುತ್ತ ಅಳತೊಡಗಿದರು. ಕಣ್ಣೀರ ಪ್ರವಾಹದಲ್ಲಿ ಹರಿದು ದುಃಖದ ಆವೇಗವು ಕಡಿಮೆಯಾದಾಗ ಅವರು ತಮ್ಮ ಕರ್ತವ್ಯವನ್ನು ನಿಶ್ಚಯಿಸಿಕೊಂಡರು.

ಪ್ರಜೆಗಳ ಈ ಸ್ಥಿತಿಯನ್ನು ಕಂಡು ರಾಜಸೇವಕರು ಭಯಭೀತರಾಗಿದ್ದರು. ಅವರು ರಾಜನನ್ನು ಬಿಟ್ಟು ಓಡಿಹೋದರು. ಪ್ರಜಾಹೃದಯದಲ್ಲಿ ರಾಜನಿಂದ ಜಾಗ್ರತವಾದ ವಿರಕ್ತಿಯ ಪ್ರಭಾವದಿಂದಾಗಿ ಸೈನಿಕರೂ ಸೇವಕರೂ ರಾಜಸೇವೆಗೆ ತಿಲಾಂಜಲಿಯಿತ್ತು ತಂತಮ್ಮ ಮನೆಗಳನ್ನು ಸೇರಿದರು. ರಾಜ ಭವನದಲ್ಲಿ ರಾಜನು ಏಕಾಕಿಯಾಗುಳಿದನು.

ಪ್ರಜೆಗಳು ಏಕ ಕಂಠದಿಂದ ರಾಜನಿಗೆ ದೇಶದಿಂದ ಹೊರ ಹೋಗಬೇಕೆಂಬ ಕಟ್ಟಪ್ಪಣೆ ಮಾಡಿ, ಅವನ ಜೀವನ ರಕ್ಷಣೆಯ ವ್ಯವಸ್ಥೆಗೆಯ್ದು ದೇಶದ ಸೀಮೆಯಿಂದ ಹೊರಕಳಿಸಿದರು. ದೇಶದಲ್ಲಿ ಪ್ರಜಾಪ್ರತಿನಿಧಿಗಳ ಆಡಳಿತೆಯು ಪ್ರಾರಂಭವಾಯಿತು. ಸ್ವರಾಜ್ಯದಿಂದ ಅವರು ಅರಳಿ ನಕ್ಕು ನಲಿದರು ಅವರ ದುರ್ಗುಣಗಳು ತಮಗೆ ತಾವಾಗಿಯೇ ದೂರವಾದುವು. ಜ್ಞಾನ ಜ್ಯೋತಿಲತೆಯಿಂದ ಎಲ್ಲ ಮಾನವ ಶರೀರವು ಪ್ರಫುಲ್ಲಿತವಾಯಿತು

ಪಥಿಕ, ಸಾಧು, ಸ್ತ್ರೀ ಮತ್ತು ಬಾಲಕರು ಪ್ರಾಣಾರ್ಪಣೆ ಮಾಡಿದ ಸ್ಥಳದಲ್ಲಿ ಪ್ರಜೆಗಳೊಂದು ಮಹಾ ಮಂದಿರವನ್ನು ಕಟ್ಟಿಸಿದರು. ಅದರಲ್ಲಿ ಆ ನಾಲ್ವರ ಮೂರ್ತಿಗಳನ್ನೂ ಸ್ಥಾಪಿಸಿದರು. ಅವರು ಮಾರಣಗೊಂಡ ದಿನ ಪ್ರತಿ ವರ್ಷವೂ ಒಂದು ಉತ್ಸವ ಸೇರತೊಡಗಿತು; ಇದು ಆ ನಾಲ್ಕು ವೀರರ ಹೆಸರನಲ್ಲಿ ನಾಲ್ಕು ದಿನಗಳ ವರೆಗೆ ನಡೆಯುತ್ತಿತ್ತು. ಈ ಉತ್ಸವದಲ್ಲಿ ಸಮೀಪ-ದೂರವೆಂಬ ಭೇದ ಭಾವವಿಲ್ಲದೆ ಎಲ್ಲ ಮೂಲೆಯ ಜನರೂ ನಡೆದುಕೊಂಡು ಬರುತಿದ್ದರು. ಆವರು ಪಥಿಕನಿಗೆ ಪ್ರಣಾಮ ಸಲ್ಲಿಸುತಿದ್ದರು, ಅತನ ಗುಣಗಳನ್ನು ಕೀರ್ತಿಸುತಿದ್ದರು; ಕಣ್ಣೀರು ಮಿಡಿಯುತ್ತಿದ್ದರು. ತಮ್ಮ ಜೀವನವನ್ನೂ ಅದೇ ರೀತಿ ಆದರ್ಶವಾಗಿಸುವ ಪ್ರತಿಜ್ಞೆತೊಟ್ಟು ಮನೆಗಳಿಗೆ ಹಿಂತಿರುಗುತಿದ್ದರು. ಆ ಕಾಲದ ಕವಿಗಳು ಪಥಿಕನನ್ನೆ ಕುರಿತು ಕವಿತೆಗಳನ್ನು ಓರೆಯುತಿದ್ದರು. ಜನರು ಈ ಕವಿತೆಗಳನ್ನು ಹಾಡಿ ಹಾಡಿ, ತಮ್ಮ ಜೀವನ ಸಧನವನ್ನು ನಿಶ್ಚಯಿಸುತಿದ್ದರು. ಮಳೆ ಚಳಿಗಾಲಗಳಲ್ಲಿ ಮನೆಯವರೆಲ್ಲರೂ ಗುಂಪು ಸೇರಿರುತಿದ್ದಾಗ,ವೃದ್ಧರು ಪಥಿಕನ ಕಥೆಯನ್ನು ವರ್ಣಿಸುತಿದ್ದರು. ಬಾಲ ಬಾಲಿಕೆಯರಿಗೆ ಈ ಕಥೆಯನ್ನು ಕೇಳಿದಷ್ಟೂ ತೃಪ್ತರಾಗದೆ, ಮತ್ತೂ ಮತ್ತೂ ಹೇಳುವಂತೆ ಹರಿಸಾಡುತಿದ್ದರು. ಸ್ತ್ರೀಯರು ಮುಂಜಾನೆಯೆದ್ದು ಪಥಿಕನ ಪತ್ನಿಯ ಕಥಾಗೀತೆಯನ್ನು ಹಾಡುತ್ತ ಹಾಡತ್ತ, ತಮ್ಮ ಮಕ್ಕಳನ್ನೆಬ್ಬಿಸುತಿದ್ದರು. ದೇಶದಲ್ಲಿ ಶಾಂತಿ ಹರಡಿತ್ತು ಮತ್ತು ಸುಖೀರಾಜ್ಯವಾಗಿ ಪರಿಣಮಿಸಿತು. ಆಗ ಯಾವುದೇ ರೋಗಕ್ಕೆ ಉಳಿಯಲಿಲ್ಲ, ದರಿದ್ರ ದೇವಿಯೂ ಓಡದ ಳಿಯಲಿಲ್ಲ.

ಈ ರೀತಿಯಾಗಿ ಒರ್ವ ನಿಜ ನುತ್ತು ಶುದ್ಧ ಪ್ರೇಮಿಯು ಆತ್ಮ ಶಕ್ತಿಯಿಂದಾಗಿ ಒಂದು ಮಹಾರಾಷ್ಟ್ರವನ್ನು ನರಕಸದೃಶವಾದ ಆಡಳಿತೆಯಿಂದ ಬಿಡುಗಡೆಮಾಡಿ ಧನ್ಯನಾದನು. ಸನ್ಮಾರ್ಗ ಪಥಿಕನಾಗಿ ಜನತೆಯ ಸ್ವಸುಖೀ ರಾಜ್ಯಸ್ಥಾಪನಾ ಸೇನೆಯ ಪಥಿಕನಾಗಿ ಬಾಳಿ ಮೆರೆದು ಅಮರನಾದನು.

(ಸಮಾಪ್ತಿ)

(ಸಾಧಾರ)

— ಗೋರಾ, ಉಡುಪಿ.



ಅಮೆರಿಕೆಯ ಮೂರನೆಯ ಅಣುಶಕ್ತಿ ಚಾಲಿತ ಸಬ್‌ಮೇರಿನ್ ಅತ್ಲಾಂತಿಕ ಸಾಗರಕ್ಕೆ ನ್ಯೂಲಂಡನ್ ಸಮೀಪದಲ್ಲಿ ಇಳಿಯಿತು.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು!

ತಿಳಿವು ಬಂದ ಬಳಿಕ

ಆರೋಪಿ— ಸ್ವಾಮೀ! ನಾನು ನನ್ನ ಅಪರಾಧವನ್ನು ಒಪ್ಪಿಕೊಳ್ಳುತ್ತೇನೆ.

ಜಡ್ಜ್—ನೀನು ಈ ಮೊದಲೇ ಏಕೆ ಒಪ್ಪಿಕೊಳ್ಳಲಿಲ್ಲ?

ಆರೋಪಿ—ಇಷ್ಟರ ತನಕ ನಾನು ನಿರಪರಾಧಿ ಎಂದು ತಿಳಿದುಕೊಂಡಿದ್ದೆ. ಆದರೆ ಈಗ ಸಾಕ್ಷಿಗಳು ಹೇಳಿದ್ದು ಕೇಳುವಾಗ ನಾನು ಅಪರಾಧಿ ಎಂದು ನನಗೆ ತಿಳಿದು ಬಂತು.

ಕಾಹಿಲೆಯ ಕಾರಣ

ಶ್ರೀಮಂತ ರೋಗಿಯನ್ನು ಪರೀಕ್ಷಿಸಲು ಬಂದ ಡಾಕ್ಟರರು ಒಳಗೆ ಬಂದವರೇ "ತಮಗೆ ಏನಾಗುತ್ತಿದೆ?" ಎಂದು ವಿನಯದಿಂದಲೇ ಕೇಳಿದರು.

ರೋಗಿ ಹೇಳಿದ—"ಏನಾಗುತ್ತದೆಯೆಂದು ನನ್ನೊಡನೆ ಏನು ಕೇಳುತ್ತೀರಿ. ನೀವೇ ಪರೀಕ್ಷಿಸಿ ತಿಳಿಯಬೇಕು".

"ಹಾಗಾದರೆ, ತುಂಬ ಸಂತೋಷ". ಡಾಕ್ಟರ್‌ರು ಹೇಳಿದರು: "ಸ್ವಲ್ಪ ತಡೆಯಿರಿ. ಒಬ್ಬ ಮಾಂತ್ರವಾದಿಯನ್ನು ಕರೆದು ತರುತ್ತೇನೆ. ಪ್ರಶ್ನೆ ಕೇಳದೇ ಕಾಹಿಲೆಯ ಕಾರಣವನ್ನು ತಿಳಿಯಲು ಅವನು ಮಾತ್ರ ಶಕ್ತನಾಗಿದ್ದಾನೆ."

ಇನ್ನೊಂದು ಕಿಸೆ ಹುಡುಕುತ್ತಿದ್ದರೆ....

ಭಾರೀ ಜನ ಸತ್ಕಾರ ನಡೆಯುತ್ತಿತ್ತು ಮುಖ್ಯ ಅತಿಥಿಗಳೇ ಶ್ರೀಧರರಾಯರು. ಬೆಳ್ಳಿಯ ತಟ್ಟೆ, ಚಮಚಗಳಿಂದಲೇ ಅತಿಥಿಗಳಿಗೆಲ್ಲ ತಿಂಡಿಯನ್ನೊದಗಿಸಲಾಗಿತ್ತು. ಶ್ರೀನಿವಾಸರಾಯರಿಗೆ ಒಂದು ಚಮಚೆಯನ್ನು ಕಿಸೆಯಲ್ಲಿ ಇಳಿಸಿಬಿಡೋಣ ಎನ್ನಿಸಿತು. ಹಾಗೆಯೇ ಮಾಡಿದರು. ಶ್ರೀಧರರಾಯರು ಅದನ್ನು ಹೇಗೋ ನೋಡಿಬಿಟ್ಟರು. ಸತ್ಕಾರ ಎಲ್ಲ ಮುಗಿದನಂತರ ಎಲ್ಲರೂ ಒಂದೊಂದು ರೀತಿಯ ಮನರಂಜನೆಯನ್ನು ಒದಗಿಸಿ ನಗಿಸಬೇಕಾಗಿತ್ತು. ಮುಖ್ಯ ಅತಿಥಿಗಳ ಸರದಿಯೂಬಂತು. ಅವರುಎದ್ದು ಒಂದುಚಮಚೆಯನ್ನು ಕೈಯಲ್ಲಿಹಿಡಿದು, "ನಾನು ಕಲಿತ 'ಮೆಸ್ಮರಿಸಂ' ವಿದ್ಯೆಯನ್ನು ನಿಮಗೂ ತೋರಿಸುತ್ತೇನೆ" ಎಂದನರೇ ಆ ಚಮಚೆಯನ್ನು ಕೆಟ್ಟಕೆಯ ಮೂಲಕ ಹೊರಗೆ ಬಿಚ್ಚಾಡಿ, ಪಕ್ಕದಲ್ಲೇ ಕುಳಿತಿದ್ದ ಶ್ರೀನಿವಾಸರಾಯರ ಜೇಬಿನಿಂದ ಚಮಚೆಯನ್ನು ತೆಗೆದು ಎಲ್ಲರಿಗೂ ತೋರಿಸಿದರು. ಎಲ್ಲರೂ ಕೈಚಪ್ಪಾಳೆತಟ್ಟಿ ಶ್ರೀಧರ ರಾಯರ 'ಮೆಸ್ಮರಿಸಂ'ನ್ನು ಸ್ತುತಿಸಿದರು

ಮಾರನೇದಿನ ಶ್ರೀನಿವಾಸರಾಯರು ಶ್ರೀಧರರಾಯರಿಗೆ ರಸ್ತೆಯಲ್ಲಿ ಭೇಟಿಯಾದಾಗ ಹೀಗೆ ಹೇಳಿದರು: "ಗಡಿಬಿಡಿಯಲ್ಲಿ ನೀವೇನಾದರೂ ನನ್ನ ಬಲಗಡೆಯ ಜೇಬಿಗೆ ಕೈ ಹಾಕುತ್ತಿದ್ದರೆ ಕೆಲಸ ಕೆಟ್ಟು ಹೋಗುತ್ತಿತ್ತು."

"ಕಾರಣ?"

"ಆ ಜೇಬಿನಲ್ಲಿ ತಟ್ಟೆ ಇತ್ತು."

ಬಾಲಲೀಲೆ

ಬಾಲಕ.—ಅಪ್ಪಾ! ನಾನು ರಾಕೇಶನೊಡನೆ ಆಟವಾದಲು ಹೊರಗೆ ಹೋಗಲೇ?

ತಂದೆ:—ಬೇಡ, ಆತ ಪಟ್ಟಣದ ಹಿಂಗಾಲು ಕಟ್ಟಿದ ಮುಂಡನಾಗಿದ್ದಾನೆ

ಬಾಲಕ.—ಹಾಗಾದರೆ ನಾನು ಆವನೊಡನೆ ಜಗಳಾಡಲೇ?

ಕಾದಾಟದ ವ್ಯತ್ಯಾಸ

ಆತ ಉತ್ಸಾಹದಿಂದ ಹೇಳಿದ:

"ನನ್ನ ಆಸ್ತಿಯನ್ನು ಬಹಳ ಹುರುಪಿನಿಂದ ಕಾದಾಡಿ ಆ ವಕೀಲರು ನನಗೆ ಕೊಡಿಸಿದರು."

ಈತ ಅವ್ಯೇ ಬೇಸರದಿಂದ ಹೇಳಿದ:

"ನನ್ನ ಆಸ್ತಿಯನ್ನು ಬಹಳ ಹುರುಪಿನಿಂದ ಏನೂ ಕಾದಾಟವಿಲ್ಲದೇ ಆ ವಕೀಲರು ತಮ್ಮದಾಗಿಸಿಕೊಂಡರು."

— ಎನ್. ನಾರಾಯಣ ಬಲ್ಲಾಳ, ಹಾಸನ.

NAVAYUGA WEEKLY

ADVERTISEMENT RATES

Display Advertisements:— Rs. 2 8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಪರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ನೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೨—೦

ನವಯುಗ ಪ್ರೆಸ್, ಉಡುಪಿ

ಕವಿತಾ ವಿತಾನ

ಗಾಂಧೀಜಿ ಶರಣು!

*

ಗಾಂಧೀಜಿ, ಗಾಂಧೀಜಿ ಶರಣು!
ಭಾರತದ ಬಡ-ತಿರುಕ-
ಹರಿಜನರ ಪ್ರತ್ಯಕ್ಷ ದೇವ;
ಇಂದಿಗೂ ಪ್ರತಿಧ್ವನಿಸುವ—
ಬಗವಂತ, ಸಂತ ಜೀವ:
ಶರಣು!

*

ಗಾಂಧೀಜಿ ಗಾಂಧೀಜಿ ಶರಣು!
ಸ್ವಾತಂತ್ರ್ಯ ಧೀಮಂತ—
ಯುಗ-ಯುಗಗಳ ವೀರ ಶಕ್ತಿ;
ನಿನ್ನೆದೆ ಗೂಡಿನಲಿತ್ತು
ಬ್ರಹ್ಮ-ಮೀರಿಸುವ ಧೀ ಶಕ್ತಿ:
ಶರಣು!

*

ಗಾಂಧೀಜಿ ಗಾಂಧೀಜಿ ಶರಣು!
ಸತ್ಯ-ಶಾಂತಿಯ ಪಾಸ
ಅಹಿಂಸೆಯ ಮಹಾ-ವೀರ ಮೂರ್ತಿ;
ಸಿದ್ಧ ನೀ, ಬುದ್ಧ ನೀ—
ಜೀವನದ ಪರಿಶುದ್ಧ-ವಿಶ್ವಜ್ಯೋತಿ!
ಶರಣು!

*

ಗಾಂಧೀಜಿ ಗಾಂಧೀಜಿ ಶರಣು!
ನಿಸ್ಪೃಹ, ನಿಸ್ವಾರ್ಥ—
ಗಳ ನಿರಂತರ ನಿರಂಜನ;
ಜೀವನುದಯಾಸ್ತ —
ಗಳ ಚಿರಂತನ—ಹೊಂಕಿರಣ!
ಶರಣು!

*

ಗಾಂಧೀಜಿ ಗಾಂಧೀಜಿ ಶರಣು!
ತಂದೆ ಪ್ರಪಂಚದ—
ತಾಳ್ಮೆಯಾ ಹಿಮಾಚಲ;
ನಿರ್ಗುಣ ನಿರಹಂ —
ಕಾರಿ, ನಿರ್ದೇಹಿ, ನಿಶ್ಚಲಾ!
ಶರಣು!

*

ಗಾಂಧೀಜಿ ಗಾಂಧೀಜಿ ಶರಣು!
ಕವಿ-ಬರೆಹಗಾರಗಳ
ಕಣ್ಣು-ನಾಲ್ಗೆಗಳನ್ನೆಲ್ಲ-ತುಂಬಿ;
ತುಳುಕಿ ಹರಿಯುವ ವಸ್ತು,
ಅಪೂರ್ವ ಜೀವನ-ನಾಂದಿ!
ಶರಣು!

*

ಬಿ. ಬಿ. ಹಿಂಗಮಿರೆ, ಬಿ. ಎ.
ಅಥಣಿ.

ಶಿಲ್ಪಕಲೆ

ಕೋನಾರ್ಕದ ಸೂರ್ಯ ದೇವಳ ಅಮೋಘ ಕಲಾ ಮಾದರಿಯಾಗಿದೆ

ಏಳುಕಲ್ಲಿನ ಕುದುರೆಗಳು ಹನ್ನೆರಡು ಚಕ್ರಗಳ ರಥನನ್ನೆಳೆಯುವ ಕಲ್ಪನೆ ನುಡಿತತ್ವಪೂರ್ಣವಿದೆ.

ಭಾರತೀಯರು ಹೆಮ್ಮೆ ಪಡಬಹುದಾದ ಕೆಲವೇ ವಿಷಯಗಳಲ್ಲಿ ನಮ್ಮ ನಾ ಜೀವನ ಶಿಲ್ಪಕಲೆಯೂ ಒಂದು ಭಾರತದ ಕಲೆಗಳ ಬೀಡಾದ ನಾಡು, ಸರ್ವ ಕಲೆಗಳ ಉಚ್ಚ ಮಾದರಿಗಳು ನಮ್ಮಲ್ಲಿರುವುದು ನಮ್ಮ ಒಂದು ವೈಶಿಷ್ಟ್ಯ. ಆಂತಹದರಲ್ಲಿ ಭಾರತದ ಶಿಲ್ಪಕಲಾ ಮಾದರಿಗಳು ನಿವಿಧ ಶೈಲಿಗಳಿಂದೊಡಗೂಡಿದ್ದು ತಮ್ಮದೇ ಆದ ವೈಶಿಷ್ಟ್ಯಗಳಿಂದಲೂ ಪರಿಪೂರಿತವಾಗಿವೆ. ಕಠಿಣವಾದ ಕಲ್ಲನ್ನು ಮೃದುವಾದ ಬೆಣ್ಣೆಯಂತೆ ಕೆತ್ತಿ, ತಿದ್ದಿ, ತೀಡಿ ಮೂಡಿರುವ ಕಲಾಕೃತಿಗಳು ನವ್ಯ ಕಲಾ ಕೌಶಲ್ಯಕ್ಕೆ ಕನ್ನಡಿ ಹಿಡಿಯುತ್ತಿವೆ. ನಮ್ಮ ಪೂರ್ವಜರ ಸೌಂದರ್ಯೋಪಾಸನಾ, ಕಲಾರಾಧನಾ ಗುಣಗಳೇ ನಮ್ಮಲ್ಲಿಯ ಕಲಾಮಂದಿರಗಳ ಇರುವಿಕೆಗೆ ಕಾರಣವೆನಿಸಿವೆ. ಭಾರತದ ಶಿಲ್ಪಕಲಾ ಕೃತಿಯು ಅಶ್ಯುಚ್ಚ ಮಾದರಿಗಳಲ್ಲಿ ಸರ್ವಶ್ರೇಷ್ಠವಾದುದು ಕೊನಾರಕದ ಸೂರ್ಯ ದೇವಾಲಯ.

ಭಾರತದ ಪೂರ್ವ ಕರಾವಳಿಯಲ್ಲಿ ವಿಶಾಲವಾದ ಸಮುದ್ರ ದಂಡೆಯ ಮರಳು ಪ್ರದೇಶದಲ್ಲಿ ತಾನೇ ತಾನಾಗಿ ಎದ್ದು ನಿಂತಿದೆ ಈ ಸೂರ್ಯ ದೇವಾಲಯ. ಹುರಿಯಿಂದ ಅಗಿ ಪೈಲು ಈಜಾನ್ಯ ದಿಕ್ಕಿನಲ್ಲಿದೆ ಈ ಕಲಾಗಾರ. ಸೂರ್ಯನಿಗೆ ಅರ್ಪಿತವಾದ ಈ ದೇವಾಲಯವನ್ನು ಕೊನಾರಕ ಎಂದು ಕರೆಯುತ್ತಾರೆ. ಈ ದೇವಾಲಯವು ಸ್ವರ್ಗದಿಂದ ಸೂರ್ಯನು ಇಳಿದು ಬರುತ್ತಿರುವ ರಥದ ಆಕಾರದಲ್ಲಿ ರಚಿಸಲ್ಪಟ್ಟಿರುವುದು ಇದರ ಒಂದು ವೈಶಿಷ್ಟ್ಯ.

ಈ ದೇವಾಲಯವು ಕಲ್ಲಿನಲ್ಲಿ ರಚಿಸಿದ ಕಾವ್ಯವೆನಿಸಿದೆ. ದೇಗುಲದ ಇಕ್ಕೆಡೆಗಳಲ್ಲೂ ಇರುವ ಹನ್ನೆರಡು ಶಿಲ್ಪರಂಜಿತ ಚಕ್ರಗಳು ಸೂರ್ಯನ ರಥದ ಚಕ್ರಗಳೋ ಪಾದಿಯಲ್ಲಿವೆ. ದೇವಾಲಯದ ಎದುರು ಭಾಗದಲ್ಲಿರುವ ಏಳು ಕಲ್ಲಿನ ಕುದುರೆಗಳು ರಥವನ್ನೆಳೆಯುವಂತೆ ಕತ್ತನ್ನು ಬಾಗಿಸಿ ಮುಂದೆ ಹೆಜ್ಜೆಯಿಕ್ಕುತ್ತಿರುವ ಭಂಗಿ ವರ್ಣಿಸಲಸದಳವಾಗಿದೆ. ದೇಗುಲದ ಪ್ರತಿಯೊಂದು ಚಕ್ರದಲ್ಲಿರುವ ಕೆತ್ತನೆಯು ಕಣ್ಣು ಕುಕ್ಕುವಂತಹದು. ಈ ಹನ್ನೆರಡು ಚಕ್ರಗಳು ಹನ್ನೆರಡು ರಾಶಿಗಳನ್ನು ಅಥವಾ ಹನ್ನೆರಡು ತಿಂಗಳುಗಳನ್ನು ಪ್ರತಿನಿಧೀಕರಿಸುತ್ತವೆಂದೂ ಮುಂಭಾಗದ ಏಳು ಕುದುರೆಗಳು ಸೂರ್ಯನ ಏಳು ಕಿರಣಗಳನ್ನು ಅಥವಾ ವಾರದ ಏಳು ದಿನಗಳನ್ನು ಸೂಚಿಸುತ್ತವೆಯೆಂದೂ ಕೆಲವರ ಅಭಿಪ್ರಾಯ. ಆದರೆ ಇದನ್ನು ಪಂಡಿತರ ನಿರ್ಣಯಕ್ಕೆ ಬಿಡುವುದು ಒಳ್ಳೆಯದು ಶಿಕ್ಷಕರು ಈ ಅರ್ಥಗರ್ಭಿತ ಕೃತಿ ಹಾಗೂ ಜಿಜ್ಞಾಸೆಗಳನ್ನು ಕಂಡು ಮೂಕನಾಗಿಬಿಡುವರು.

ಈ ದೇವಾಲಯದ ಅಸ್ತಿತ್ವದ ಕುರಿತು ಒಂದು ದಂತ ಕಥೆಯಿದೆ. ಶ್ರೀಕೃಷ್ಣನ ಸುಂದರ ಪುತ್ರನಾದ ಸಾಂಬನು ಒಂದು ಬಾರಿ ತನ್ನ ತಂದೆಯ ಆಗ್ರಹಕ್ಕೆ ಗುರಿಯಾಗಿ ಶಾಪಕ್ಕೊಳಗಾದನು. ಶಾಪದ ಪರಿಣಾಮದಿಂದ ಸಾಂಬನು ತನ್ನ ಸೌಂದರ್ಯವನ್ನು ಕಳೆದುಕೊಂಡು ಒಬ್ಬ ಕುಷ್ಠರೋಗಿಯಾದನು. ಕೊನೆಯಲ್ಲಿ ತನ್ನ ತಂದೆಯೊಡನೆ ಕ್ಷಮಾಯಾಚನೆ ಮಾಡಿದಾಗ ಕೃಷ್ಣನು ಆತನೊಡನೆ ಹನ್ನೆರಡು ವರ್ಷಗಳ ತನಕ ಸೂರ್ಯದೇವನ ಧ್ಯಾನಮಾಡಿದಲ್ಲಿ ಶಾಪ ವಿಮೋಚನೆಯಾಗುವುದೆಂದು ಹೇಳಿದನು. ಸಾಂಬನು ಶಾಪ ವಿಮುಕ್ತನಾದ ಬಳಿಕ ಸೂರ್ಯನ ಸ್ತ್ರೀತ್ಯರ್ಥವಾಗಿ ಈ ದೇವಾಲಯವನ್ನು ಕಟ್ಟಿಸಿದನೆಂದು ಪ್ರತೀತಿ ಇದೆ.

ಚರಿತ್ರೆಯ ಆಧಾರಗಳಿಂದ ತಿಳಿದು ಬರುವ ಸಂಗತಿಗಳು ಇವಕ್ಕೆ ವ್ಯತಿರಿಕ್ತವಾಗಿವೆ. ಇವುಗಳಂತೆ, ಈ ದೇವಾಲಯವು ಪೂರ್ವದ ನರಸಿಂಹ ದೇವರಾಜನಿಂದ (ಕ್ರಿ. ಶ. ೧೨೩೫—೬೪) ಮುಸ್ಲಿಮರ ಮೇಲೆ ತಾನು ಪಡೆದ ವಿಜಯಗಳ ಸ್ಮಾರಕಾರ್ಥವಾಗಿ ರಚಿಸಲ್ಪಟ್ಟಿತ್ತೆಂದು ಹೇಳುತ್ತಾರೆ. ಹಿಂದೂಸ್ತಾನದ ಪ್ರಸಿದ್ಧರು ಕಟ್ಟಿಸಿದ ದೇವಾಲಯಗಳನ್ನು ವಿಂಧ್ಯಾನಂದು ದೇವಾಲಯವನ್ನು ರಚಿಸಬೇಕೆಂದು ಬಯಸಿ ಈ ದೇವಾಲಯದ ರಚನೆಗೆ ಆಣಿ ಮಾಡಿದನೆಂದು ತಿಳಿದು ಬರುತ್ತದೆ. ೧೨ ವರ್ಷಗಳ ಕಾಲಾವಧಿಯ ವೆಚ್ಚದಿಂದ, ೧,೨೦೦ ಜನ ಕುಶಲ ಶಿಲ್ಪಿಗಳಿಗೆ ೧೨ ವರ್ಷಗಳ ಸತತ ಪರಿಶ್ರಮವೆಂದೆ ಈ ರಚನೆ ಪೂರ್ಣವಾಯಿತು. 'ಕೊ' ಎಂಬುದು ಕೊನಾರಕ ದೇವಾಲಯದ ವಿವರದಲ್ಲಿ ಅಲ್ಲಲ್ಲಿ ಕಾಣ ಬರುವ ಸಂಖ್ಯೆ. ಇದೂ ಒಂದು ವೈಶಿಷ್ಟ್ಯ.

ಸಂಸ್ಕೃತದಲ್ಲಿ 'ಕೋನಾರ್ಕ' (ಕೋನಾರ್ಕ) ಶಬ್ದದ ಅರ್ಥವು 'ಸೂರ್ಯನ ಪ್ರದೇಶ' ಎಂದಾಗುವುದು. ವ್ಯಾಪಾರಿಗಳ ಪೋರ್ಚುಗೀಸ್ ನಾವಿಕರು ಇದನ್ನು 'ಕೆ ಪ್ಪ ಪಗೋಡಾ' ಎಂದು ಕರೆದರು. ಕೊನಾರಕದ ಭಗ್ನಾವಶೇಷಗಳು ಮಾತ್ರ ಇಂದು ಉಳಿದಿವೆ. ಆದರೆ ಪೂರ್ಣ ಭಗ್ನನೋಟವು ಇಂದು ಕಲ್ಪನಾ ಗಾಂಭೀರ್ಯದಲ್ಲಿ ಮಾತ್ರ ಕಾಣಬಹುದಾಗಿದೆ. ಕಾರಣ ಮುಖ್ಯ ದೇವಾಲಯದ ದೇವ ವಿಗ್ರಹದ ಮೇಲ್ಭಾಗ ದಲ್ಲಿರುವ ಗೋಪುರವು ಈಗ ಅವಶೇಷವಾಗಿದೆ. ಈ ದೇವಾಲಯದ ರಚನೆಯಂತಹ ಮಾದರಿ ಬೇರೊಂದಿಲ್ಲ.

ದೇವಾಲಯದ ಪ್ರತಿ ಅಂಗುಲದಲ್ಲೂ ಕೆತ್ತನೆಯೇ ತುಂಬಿದೆ. ದೇಗುಲದ ಹೊರ ಭಾಗದಲ್ಲಿ ಕೈಬೆರಳು ಊರುವಷ್ಟೂ ಜಾಗ ಸಿಗದು. ಜೀವನದ ವಿವಿಧ ಭಾವ, ಘಟನೆಗಳನ್ನು ಬಿಂಬಿಸುವ ಹಲವಾರು ಶಿಲ್ಪದ ಕೃತಿಗಳ ಸಮೂಹವೇ ಇಲ್ಲಿ ನೆಲೆಯಾಡಿದೆ. ಅತ್ಯುಚ್ಚ ಅನುಭವದಿಂದ ಹಿಡಿದು ಅತಿ ಕೆಳಮಟ್ಟದ ಅನುಭವವನ್ನು ಇಲ್ಲಿ ನಾವು ಕಾಣಬಹುದಾಗಿದೆ. ದೇವಾಲಯದ ಮಹಾದ್ವಾರದಲ್ಲಿರುವ ಕೆತ್ತನೆಯು ಅತಿ ಸೂಕ್ಷ್ಮ, ನಾಜೂಕು ಹಾಗೂ ಕಲಾತ್ಮಕ. ನರ್ತಕಿ, ನರ್ತಕಿಯರು, ದೇವಕನ್ನಿಯರು, ವಾದ್ಯವಾದಕರ ಕೆಲವು ಭಂಗಿಗಳು ಇಂದಿಗೂ ಜೀವಂತವಾಗಿ ಕಾಣಿಸುತ್ತಿವೆ. ದೇವಾಲಯದ ರಕ್ಷಣೆಗಾಗಿ ನಿಂತ ಏಳು ಆನೆಗಳ ವಿಗ್ರಹಗಳೂ ಮನಮೋಹಕವೆನಿಸಿವೆ. ದೇವಾಲಯದ ಪ್ರವೇಶ ದ್ವಾರದಲ್ಲಿ ತಾಂಡವ ನೃತ್ಯಗೈಯ್ಯುತ್ತಿರುವ ಶಿವನ ವಿಗ್ರಹ ಒಂದು ಇದೆ. ಇಲ್ಲಿಯ ಕೆತ್ತನೆಯಲ್ಲಿ ಕಾಣದ ಪ್ರಾಣಿಗಳಿಲ್ಲ. ಸೃಷ್ಟಿಯ ಸಕಲ ಜೀವಿಗಳ ಚಿತ್ರಗಳೂ ಇಲ್ಲಿ ಕೆತ್ತಲ್ಪಟ್ಟಿವೆ. ಸೂರ್ಯನು ಸಕಲ ಚರಾಚರ ಜೀವಿಗಳಿಗೂ ಜೀವನಾಧಾರನಾದುದರಿಂದ ಜನನ ದೇವಾಲಯದಲ್ಲಿ ಆತನಿಂದ ಚೈತನ್ಯ ಪಡೆಯುವ ಎಲ್ಲ ಜೀವ ಜಂತುಗಳಿಗೂ ಸ್ಥಾನ ಕಲ್ಪಿಸಿ ಕೊಡಲಾಗಿರುವುದು ಮತ್ತೊಂದು ವಿಚಿತ್ರ.

ಕೊನಾರಕವು ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ನೆಲೆನಿಂತ ಪೀಳಿಗೆಯವರ ಜೀವನ, ವ್ಯಾಪ್ತಿಗೆ ಧರ್ಮ ಕಲಾರಾಧನೆಗಳ, ಸೌಂದರ್ಯೋಪಾಸಕ ಗುಣದ, ಕಠಿಣಶ್ರಮದ ಒಂದು ಜೀವಂತ ನಿದರ್ಶನವೆನ್ನೋಡಿದ ಪ್ರೇಕ್ಷಕನ ಮನ ಸೆಳೆಯುವ ಚಿತ್ತಾಕರ್ಷಕ ಶಿಲ್ಪನಿಧಿ. ಭಾರತದಲ್ಲಿ ಶಿಲ್ಪಕಾಟೆಯಿಲ್ಲದ ಶಿಲ್ಪವಿಲ್ಲ. ಕಾವ್ಯಮಯ, ಕೌಶಲಮಯ, ಸೌಂದರ್ಯಮಯ, ಕಲಾಮಯವೆನಿಸಿದ ಒಂದೇ ದೇಗುಲ ಒರಿಸ್ಸಾ ಪ್ರಾಂತ್ಯದ ಸಂಸ್ಕೃತಿಯ ಹೆಗ್ಗುರುತು. ಭಾರತದ ಸಂಸ್ಕೃತಿ ಕಲೆಗಳ ಪ್ರತೀಕ. ಭಾರತೀಯರು ನೋಡಿ ನಲಿಯಬಹುದಾದ, ಬೆರಗಾಗಬಹುದಾದ, ಸೌಂದರ್ಯವನ್ನು ಸವಿಯಬಹುದಾದ ಒಂದೇ ಒಂದು ತಾಣ. ಪ್ರತಿಯೊಬ್ಬ ಭಾರತೀಯನೂ ನೋಡಬೇಕಾದ ಸ್ಥಳ. ಹೆಮ್ಮೆಯ 'ಕೊನಾರಕ ದೇವಾಲಯ'.

—ಶ್ರೀ. ಯಸ್. ಸದಾಶಿವರಾವ್,
ಉಡುಪಿ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ

ಅತ್ಯುತ್ತಮ ಔಷಧಿ ಬೆಲೆ ರೂ. ೬/- ದೀರ್ಘಕಾಲದ ಬಾಧೆಗೆ ರೂ. ೪/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಸರು: ಪಾ ಕಂಪೆನಿ, ಮಂಗಳೂರು—1.

ಸೂಚನೆ

"ನವಯುಗ" ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

N A V A Y U G A
REGD. NO. M. 3618

UDIPI, THURSDAY
23—10—1958

LICENSE NO. 31
Licensed to Post without Prepayment

ಭೂಸುಧಾರಣೆ

ಏಕಪಕ್ಷೀಯವಾದ ಭೂಸುಧಾರಣಾಶಾಸನ ಬೇಡ

ಧನಿ, ಒಕ್ಕಲುಗಳಿಬ್ಬರ ಹಿತವನ್ನೂ ಸಾಧಿಸುವ ಶಾಸನವಿಂದು ಮುಂದೆ ಬರಲಿ

ಭೂಸುಧಾರಣೆ ವತ್ತು ವಕ್ಲು ಮಸೂದೆ ಇವುಗಳನ್ನು ಆದಷ್ಟು ಬೇಗನೇ ತರಬೇಕೆಂಬುದು ಬಹು ವರ್ಷಗಳಿಂದ ಕಾಂಗ್ರೆಸ್ಸು ಸಂಸ್ಥೆಯ ಉದ್ದೇಶವಾಗಿದೆ. ಸಮಾಜವಾದದ ತತ್ವದ ಆಧಾರದ ಮೇಲೆ ರಾಷ್ಟ್ರವನ್ನು ರೂಪಿಸುವುದಕ್ಕೆ ಇದು ಅತಿ ಆಗತ್ಯವೆಂದು ನಮ್ಮ ರಾಜಕಾರಣಿಗಳು ಮನಗಂಡಿದ್ದರು. ನಮ್ಮ ರಾಷ್ಟ್ರದ ಮುಂದಿರುವ ಯಾವ ಪ್ರಶ್ನೆಯಾದರೂ ಬಗೆಹರಿಸಲು ಈ ಸಮಸ್ಯೆಯಷ್ಟು ಕಷ್ಟದ್ದಿಲ್ಲ. ಯಾವ ರೀತಿಯಲ್ಲಿ ಸುಧಾರಣೆತರುವದೆಂಬುದರ ಬಗ್ಗೆ ಇನ್ನೂ ಕೆಲವರಲ್ಲಿ ದೃಢ ನಿರ್ಧಾರ ಕಂಡು ಬರಲಿಲ್ಲ. ಈ ಕಾರಣ ನ್ಯಾಯವಾದ ತೀರ್ಮಾನ ಮಾಡುವದು ಒಂದು ಸುಲಭದ ಕೆಲಸವಲ್ಲ. ಹೀಗೆ ಬಲ್ಲೆಯೊಳಗೆ ಕೈಹಾಕಿದಾಗ ಎಲ್ಲಾ ಕಡೆಗಳಿಂದಲೂ ಮುಳ್ಳು ಚುಚ್ಚಿದಂತೆ ನಾನಾ ತರದ ತೊಂದರೆತೊಡಕುಗಳು ಕಂಡು ಒರೆವವು. ಒಂದಕ್ಕೊಂದು ವಿರೋಧವಾಗಿ ಆತ್ಮ ಬರುವದು ರೋಗಿಯ ಕಾಯಿಲೆಯಲ್ಲಿ "ಆಪ್ಲಿಕೇಶನ್" ಅಂದರೆ ತೊಡಕ್ಕುಗಳಿಲ್ಲದೆ ಡಾಕ್ಟರರಿಗೆ ಔಷಧೋಪಚಾರ ನಡೆಯುವದು ಹೇಗೆ ಕಷ್ಟವಾಗುವದೋ ಹಾಗೆಯೇ ನಮ್ಮ ಸರಕಾರವು ಒಂದು ರೀತಿಯ ಉಭಯ ಸಂಕಟದಲ್ಲಿ ಸಿಕ್ಕಿ ಪೇಚಾಡುವದು.

ಇತ್ತೀಚೆಗೆ ಯಾವ ರೀತಿಯ ತೀರ್ಮಾನವಾದರೂ ಕೂಡಲೇ ಆಗಬೇಕೆಂದು ಜನರು ಹಟತೊಟ್ಟು ವಾದಿಸುವದು ಸರಕಾರದ ಗಮನಕ್ಕೆ ಬಂದಿದೆ. ನ್ಯಾಯವಾದ ಒಂದು ತೀರ್ಮಾನಕ್ಕೆ ಬಾರದೆ ಮತ್ತೂ ಮತ್ತು ಮುಂದುವರಿಸಿದರೆ ಆರೋಪ ಅಪವಾದಗಳ ಸುರಿ ಮಳೆಯೇ ತಮ್ಮ ಮೇಲೆ ಬೀಳುವದೆಂದು ಅದಷ್ಟು ತೀಕ್ಷ್ಣದಿಂದ ಒಂದು ತೀರ್ಮಾನಕ್ಕೆ ಬರಬೇಕೆಂಬ ನಿರ್ಧಾರವು ೧೫ ಕಾರಣಿಗಳಲ್ಲಿ ಮೂಡಿ ಬಂತು. ಈಗ ಅನೇಕ ಜನರ ಅನುಭವವನ್ನು ಸಂಗ್ರಹಿಸಲು ತೊಡಗಿದ್ದಾದ್ದರಿಂದ ನಮ್ಮ ಅಭಿಪ್ರಾಯವನ್ನು ಸೂಚಿಸಬೇಕಾಗಿಯಿದೆ.

ನಾವು ಪ್ರಥಮವಾಗಿ ಹೇಳುವದೇನೆಂದರೆ ಭೂಮಾಲೀಕನೂ ಭೂಮಿಯನ್ನು ಉಳುವ ವಕ್ಲೂ ಇಬ್ಬರೂ ಸರಕಾರಕ್ಕೆ ತೆರುವ ಕಂದಾಯ ಅಥವಾ ತೀರ್ವೆಗೆ ಜವಾಬ್ದಾರರಾಗಬೇಕು. ಗೇಣಿ ತೆತ್ತು ಒಡೆಯನ ರಕ್ಷಿದಿ ತೋರಿಸಿದ ಹೊರತು ಒಕ್ಕಲುಗಳ ಜವಾಬ್ದಾರಿಯು ತಪ್ಪಬಾರದು. ಇದರಿಂದ ಸಣ್ಣ ಪುಟ್ಟ ವರ್ಗದವರಿಗೆ ಕೆಲವು ವಕ್ಲುಗಳು ಕೊಡುವ ಉಪದ್ರ ತಪ್ಪಿದಂತಾಗುವದು. ಒಡೆಯನು ನಿರ್ಬಲನು ಅಥವಾ ಒಡವನಾದರೆ ಗೇಣಿಯನ್ನು ಕೊಡದೆ ಅಥವಾ ಸಮಯಕ್ಕೆ ಸರಿಯಾಗಿ ಕೊಡದೆ ಚಿಕ್ಕ ವರ್ಗದವರಿಗೆ ಪಚೀತಿ ಕೊಡುವರು. ಕಂದಾಯ ಕೊಡುವದೇ ಕಷ್ಟವಾಗಿ ಸಾಲ ಮಾಡುವರು. ಅನೇಕ ಕಡೆಗಳಲ್ಲಿ ಬಡ ಒಡೆಯನಿಗೆ "ಕೋರ್ಟಿಗೆ ಹೋಗಿ" ಎಂತ ಜನರಿಂದ ಸಹ ನಾವು ಕೇಳರುವೆವು. ಭೂಸುಧಾರಣೆಯ ಪ್ರಯೋಜನ ಹೆಚ್ಚಾಗಿ ಮಧ್ಯಮ ತರಗತಿಯ ಜನರಿಗಾಗಿದೆ. ಮಧ್ಯಮ ತರಗತಿಯವರೇ ವಕ್ಲುಗಳು ಪೀಡೆ ಕೊಡುವದು. ಕೋರ್ಟಿಗೆ ಹೋಗುವ ಅನುಕೂಲತೆಯಿಲ್ಲದ ಕಾರಣ ಇವರಿಗೆ ಸಿಕ್ಕುವ ನಿಶ್ಚಿತ ಗೇಣಿ ತೊಂದ್ರೆಗಳಿಲ್ಲದೆ ಸಿಕ್ಕುವಂತಾಗಬೇಕು. ಗೇಣಿಯು ಪ್ರಥಮ ಜವಾಬ್ದಾರಿಯಾಗಬೇಕ .

ನ್ಯಾಯವಾದ ಗೇಣಿ ಎಂಬುದು ಎಲ್ಲಾ ತರಗತಿಯ ಭೂಮಿಗೆ ಅನ್ವಯಿಸಬೇಕು. ಈಗ ಅನುಸರಿಸುವ ರೀತಿಯು ಸಕ್ಷಪಾತದ್ದಲ್ಲವೆಂತ ಹೇಳಲು ಬರುವದಿಲ್ಲ. ಅದರ ಪ್ರಕಾರ ಹೆಚ್ಚಿಗಯಾದ ಗೇಣಿಯನ್ನು ಕಡಮೆ ಮಾಡುವದು ಮತ್ತು ಕಡಿಮೆ ರೇಟನ್ನಲ್ಲಿದ್ದುದನ್ನು ಹಾಗೆಯೇ ಇರಗೊಡಿಸಬೇಕು. ಆದರೆ ಜಾಸ್ತಿ ಇದ್ದಲ್ಲಿ ಕಡಮೆ ಮಾಡುವದೆಂತಾದ್ರೆ ಕಡಿಮೆ ಇದಲ್ಲಿ ಏಕೆ ಜಾಸ್ತಿಮಾಡಬಾರದು? ಇದು (Heads you lose tails we win) ಎಂಬಂತೆ ಮುಂಡೆಯನ್ನು ನೋತ ಕಾರಣ ಕಳಕೊಂಡಿರಿ. ಬಾಲವನ್ನು ನಾವು ನಿವಿ್ಕೊಂದ ಗೆದ್ದೆವು ಹೀಗಾಗಿ ಇಡೀ ನಮ್ಮದು ಎಂಬ ಸ್ವಾರ್ಥಪರವು ಕಾಣುವದು.

ಮಧ್ಯಮ ತರಗತಿಯ ಅನೇಕ ವರ್ಗದವರು ದ್ರವ್ಯಾನುಕೂಲತೆಯಿಲ್ಲದೆ ಕೋರ್ಟು ವ್ಯಪಹರಣೆಗೆ ಹೋಗುವದಿಲ್ಲ. ಹಾಗೂ ಕೋರ್ಟು ತೀರ್ಮಾನವು ವಿಳಂಬವಾಗುವದು. ಈ ಕಾರಣದಿಂದ ಗೇಣಿ ಬಾಕಿ ವಸೂಲಿಯನ್ನು ರೆವೆನ್ಯೂ ಕೋರ್ಟು ಮುಖಾಂತರ ಆಗುವಂತೆ ಮಾಡುವದು ಒಳ್ಳೆದು. ತೀರ್ವೆ ಬಾಕಿಯಂತ್ಲೇ ಗ್ರಾಮ ಉದ್ಯೋಗಸ್ಥರ ಮುಖೇನ ಗೇಣಿ ಬಾಕಿ ವಸೂಲಾಗುವಂತೆ ಯೋಜನೆ ಮಾಡುವದು ಉತ್ತಮ. ಇದರಿಂದ ವ್ಯವಹರಣೆಗಳು ಕೆಲವುಮಟ್ಟಿಗೆ ಕಡಮೆಯಾಗುವದು.

ಹಿಡುವಳಿಗೆ ಮಿತಿಯಿಡುವುದು ಅಗತ್ಯವೆಂದು ಹಲವರು ಅಭಿಪ್ರಾಯಪಡುತ್ತಾರೆ. ನಮಗಿದು ಹಾಗಿಸಿವುದಿಲ್ಲ. ಕುಟುಂಬವು ವೃದ್ಧಿಯಾಗುವದಾದ್ದರಿಂದ ಹಿಡುವಳಿಯು ತನ್ನಿಂದ ತಾನೇ ನಾಶವಾಗುವದು. ಆಸ್ತಿಯು ಹಿಸಿಯಾಗುವದು ಸರ್ವ ನಂಬ್ರಗಳಲ್ಲಾ ತುಂಡಾಗಿ "ಸಬ್ ಡಿವೈಡು" ಆಗುವದು. ಜಮೀನಿಯಲ್ಲಿ ಒಂದು ಸಾಗ್ವಳಿ ಮಾಡುವ ಕುಟುಂಬವ ಹಿಡುವಳಿ ಇಂತಿಷ್ಟೇ ಎಕ್ರೆಯಿರಬೇಕೆಂದಿದೆ. ಆದ್ರೆ ಅದು ಪರಾಧೀನ ನಿರಹಶಪಟ್ಟದ್ದು ಮತ್ತು ವಿಭಾಗಮಾಡಲು ಶ್ರತಬಂಧಕವಿದ. ಕೊಮ್ಯುನಿಸ್ಟರು ಭೂಮಿಯನ್ನು ದೊಡ್ಡವರಿಂದ ಕಸಿದು ಬಡವರಿಗೆ ಹಂಚಿದಂತೆಯೇ ಸರಿ. ಒಮ್ಮೆ ಎಲ್ಲರಿಗೂ ಸಂತೋಷವಾಗಬಹುದು. ಒಂದು ತಲೆಯು ಕಳದತರುವಾಯ ಇದೇ ಸಮಸ್ಯೆಯು ತಲೆದೋರಿ ಪುನಃ ಎದುರಿಸುವದು. ಈ ರೀತಿ ಸೀಲಿಂಗು ತರುವದಾದ್ರೆ ಪಿತ್ರಾರ್ಜಿತ ಅಥವಾ ಬಾಧ್ಯತೆಯ ಕಾನೂನನು (Law of inheritance) ಬದಲಾಯಿಸಬೇಕಾದೀತು.

ಕೊಮ್ಯುನಿಸ್ಮು ಮತ್ತು ಸಮಾಜವಾದದ ತತ್ವಗಳು ಬೆರುಸಿನಿಂದ ಪ್ರಚಾರವಾಗದ ಹಳ್ಳಿಗಳಲ್ಲಿ ಒಡೆಯ ಮತ್ತು ನಕ್ಲು ಗಳೊಳಗಿನ ಹಿತ ಸಂಭಂದವು ನೆಮ್ಮದಿಯಾಗಿದೆ. ಇತ್ತೀಚೆಗೆ ಶಹರು ಪಟ್ಟಣಗಳಲ್ಲಿ ಮತ್ತು ಉದ್ದಿನೆ ವ್ಯಾವಾರ ಕೇಂದ್ರಗಳಲ್ಲಿ ಪ್ರಚಾರಕರಿಂದ ವಾತಾವರಣವು ಕೆಟ್ಟುಹೋಗಿದೆ. ಹಿಡುವಳಿ ಮಿತಿಗೆ ಮಿಕ್ಕಿ ಉಳಿದ ಭೂಮಿಯನ್ನು ಕೊಂಡುಕೊಳ್ಳಲು ದ್ರವ್ಯಾನುಕೂಲವಿರುವ ಜನರು ಬಹಳ ಕಡಮೆ. ಹೀಗಾಗಿ ಹಣವ್ಯಯಿಸಿ ಭೂಮಿಯನ್ನು ರೂಪಿತಕ್ಕೆ ತರುವ ಯೋಗ್ಯತೆಯಿರು ಸರಿ ಬಹಳ ಕಡಮೆ. ಇಲ್ಲದ ವ್ಯವಸಾಯದ ಕಾರ್ಯವನ್ನು ಮನಃಪೂರ್ವಕಮಾಡಿ ಅಧಿಕ ರೀತಿಯ ಸಲಕರಣೆಗಳನ್ನು ಉಪಯೋಗಿಸಿ ಉತ್ಪತ್ತಿಯನ್ನು ಜಾಸ್ತಿಮಾಡುವವರಿಗೆ ಹಿಡುವಳಿ ಮಿತಿಯು ಆತಂಕ ತಂದೊಡ್ಡುವುದು. ಸಣ್ಣ ಸಣ್ಣ ವ್ಯವಸಾಯದವರಲ್ಲಿ ಇದು ಸಾಧ್ಯವೇ ಇಲ್ಲ. "ಹೊಸಪರೇಟೆವ್" ಕ್ರಮದ ಸಾಗ್ವಳಿ ಕ್ರಮವಿಲ್ಲದೆ ಹಿಡುವಳಿಗೆ ಮಿತಿಯಿಟ್ಟು ಯೇನೂ ಪ್ರಯೋಜನವಿಲ್ಲ.

ಈಗ ನಮ್ಮಲ್ಲಿ ಭೂಕಂದಾಯ ಮತ್ತು ಸಾಗ್ವಳಿ ಉತ್ಪನ್ನದ ತೆರಿಗೆ (Agricultural Income tax) ಹೀಗೆ ಎರ್ಡುತರವಿಂದ ಸರಕಾರಕ್ಕೆ ತೆರಿಗೆ ಸಲ್ಲುತ್ತದೆ ಇದರ ಬದಲಿಗೆ ಭೂಕಂದಾಯವನ್ನು ತೆಗೆದುಹಾಕಿ ಸಾಗ್ವಳಿ ಉತ್ಪನ್ನದ ತೆರಿಗೆಯನ್ನೆ ಭೂಮಿಗೂ ಲಗಾವಾಗುವಂತೆ ತಿದ್ದುಪಡಿಸುವದು ಸರಿಯೆಂದು ನಮಗೆ ತೋರುವದು. ಸ್ವಲ್ಪ ಸಮಯದ ಹಿಂದೆ ಭೂಮಿಯು ಕ್ರಯಕ್ಕೆ ಕೊಳ್ಳುವದು ಶಾಶ್ವತ ಲಾಭದಾಯಕ ಅಥವಾ ಧನ ವಿನಿಯೋಗವೆಂಬ ಮನೋಭಿಪ್ರಾಯವು ಈಗ ಕಡಮೆಯಾಗಿದೆ. ಈಗ ಕಟ್ಟಡ ವ್ಯವಸಾಯಕ್ಕೆ ಕೆಲ್ಸಕ್ಕೆ ಉಪಯೋಗಿಸುವವರೇ ಹೊರತು ಭೂಮಿಯನ್ನು ರೂಪಿಸಿ ವೃದ್ಧಿ ಮಾಡಲು ಯಾರೂ ಕಾಸು ಕರ್ಜುಮಾಡುವದಿಲ್ಲ. ಹೀಗಾಗಿ ಉತ್ಪನ್ನವು ಜೆನ್ನಾಗಿ ಆಗುವದಿಲ್ಲ. ನಾವು ಒಂದು ಕಡೆಯಲ್ಲಿ ಉತ್ಪನ್ನ ಜಾಸ್ತಿ ಆಗಬೇಕೆನ್ನುವೆವು ಇನ್ನೊಂದೆಡೆ ಅದಕ್ಕೆ ಪ್ರತಿಕೂಲವಾಗಿ ವರ್ತಿಸುವೆವು.

—ಸಿ. ಎಚ್. ಶೆಟ್ಟಿ, ಬೈಂದೂರು.

ಅಲಾಸ್ಕಾದ ಫೈರ್ ಬೇಂಕ್ಸ್‌ನಲ್ಲಿ ಸಮಯುವಕರನ್ನು ಮೊತ್ತಕೊಂಡ ಗಾಂಧಿ. ಇವರೆ ಳನೆ ರಾಜ್ಯವಾಗಿ ಸೇರಿಕೊಳ್ಳುವುದಕ್ಕೆ ಸಹಾಯವಾಗುವ ಪರೇಡಿಗೆ ಹೋಗುತ್ತಿದ್ದಾರೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್,

ಮಂಗಳೂರು ಶಾಖೆಗಳು
ಹಂಪನಕಟ್ಟೆ . ಬಂದರ

ಪ್ರಧಾನ ಕಾರ್ಯಾಲಯ
ಮುಕುಂದ ನಿವಾಸ, ಉಡುಪಿ.

ಬೆಂಗಳೂರು
ಮುಂಬಯಿ ಕೊಚ್ಚಿ
ಹೈದರಾಬಾದು ಮದರಾಸು.

THE CANARA INDUSTRIAL & BANKING
SYNDICATE LTD . UDIPI.

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

Edited Printed & Published by K. H. Shetty, at the Navayugapress Udipi S. India

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲ 13 ನ.ಪೈಸ

ವರುಷ ೩೮. ವಾರ ೯. 6-11-1958 Vol 38 No. 9.

ದುರಾಗ್ರಹ

ಮರಾಠಿಗರ ಆಂದೋಲನವು ಸತ್ಯಾಗ್ರಹವೆ? ಅಥವಾ ದುರಾಗ್ರಹವೆ?

ವ್ಯರ್ಥವಾಗಿ ಕನ್ನಡಿಗರನ್ನು ಉದ್ರೇಕಿಸುವ ಈ ಪುಂಡಾಟಕ್ಕೆ ಸರಕಾರ ಸೊಪ್ಪು ಹಾಕಬಾರದು.

"ಚಲದೊಳ್ದುರ್ಯೋಧನಂ ..." ಎಂದು ಹಾಡಿದ ಮಹಾಕವಿ ಪಂಪನ ಕಾಲ ಕಳೆದು ಒಂದು ಸಾವಿರ ವರ್ಷಗಳುರುಳಿದರೂ, "ಎಲೆಗೆ ನಿನ್ನೊಡನೆ ನಾನೇಂ ಪರಿಯ ಹೋರುವೆಂ ಚಲತನಕಲಸಿದೆಂ ...." ಎಂದು ಉದ್ದಾಲಕನ ನಾಲಿಗೆಯಿಂದಾಡಿಸಿ ಚಂಡಿಗೆ ಶಾಪವೀಯಿಸಿದ ಲಕ್ಷ್ಮೀಕನ ಕಾಲ ಲಯಕಾಲವಾದರೂ ಇಂದಿಗೂ ಚಲತನದ ಮೊತನ್ನೇ ಆಧಾರವಾಗಿಟ್ಟು ಅದಕ್ಕಾಗಿಯೇ ಆಜನ್ಮ ಹೋರಾಡುವ ದೃಢನಿರ್ಧಾರವನ್ನು ಮಾಡುವವರಿದ್ದಾರೆ ಎಂಬುದಕ್ಕೆ ಬೆಳಗಾವಿಯ "ಸತ್ಯಾಗ್ರಹ"ವೇ ಒಂದು ಐತಿಹಾಸಿಕ ದಾಖಲೆಯೆನ್ನಬಹುದು. ಎಣ್ಣೆಚೆಲ್ಲಿದವನೂ ಅತ್ತ; ನೀರು ಚೆಲ್ಲಿದವನೂ ಅತ್ತ ಎಂಬಂತೆ ಮಹಾರಾಷ್ಟ್ರ ಏಕೀಕರಣ ಸಮಿತಿ, ಮತ್ತು ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಗೋಳಾಟ ರೂಪವಾದ ಸತ್ಯಾಗ್ರಹವು ಸಂಪೂರ್ಣ ದುರಾಗ್ರಹವೇ ಆಗಿದೆ. ಮಹಾರಾಷ್ಟ್ರವು ಈಗ ಬೊಂಬಾಯಿರಾಜ್ಯಕ್ಕೆ ಸೇರಿದ್ದು, ಅದರ ಮುಖ್ಯ ಮಂತ್ರಿ ಶ್ರೀ ವೈ ಬಿ. ಚವ್ಹಣರೂ ಈ ಸತ್ಯಾಗ್ರಹಕ್ಕೆ ತಮ್ಮ ಬೆಂಬಲವಿಲ್ಲವೆಂದು ಸ್ಪಷ್ಟಾಭಿಪ್ರಾಯವನ್ನಿತ್ತಿರುವಾಗ ಈ ಸಮಿತಿಯ ಸ್ವಯಂ ಸೇವಕ ಸಂಘಟಕರು ಕುರುಡ ಹಿಡಿದದ್ದೇ ಬಡಿಗೆ ಎಂಬುದನ್ನು ನುಕರಿಸುವತೆರದಲ್ಲಿ ತಾವು ಇಟ್ಟ ಹೆಜ್ಜೆಯನ್ನು ಹಿಂದಿಡಲಿಲ್ಲ.

ಈ ಸತ್ಯಾಗ್ರಹವು ಬೆಳಗಾವಿ, ನಿಪ್ಪಾಣಿ ಮತ್ತು ಕಾರವಾರಗಳು ನಿಜವಾಗಿಯೂ ಸಂಪೂರ್ಣ ಕರ್ನಾಟಕದ ಭಾಗವೆಂಬುದು ನಿರ್ವಿವಾದವಾಗಿ ಒಪ್ಪಿರುವಾಗ, ಈ ಬಗ್ಗೆ ಹಿಂದೆಯೂ ಹಲವಾರು ಸಮಿತಿಗಳು ಇದೇ ಮಾತನ್ನು ಮತ್ತೂ ನುತ್ತೂ ಒತ್ತಿ ಹೇಳಿರುವಾಗ, ಜನತಾ ಪ್ರತಿನಿಧಿಗಳಿಂದ ಕೂಡಿದ ಲೋಕ ಸಭೆಯಿದನ್ನು ಒಪ್ಪಿ, ಅಂತಿಮ ನಿರ್ಧಾರವನ್ನು ಮಾಡಿರುವಾಗ, ಅಲ್ಲದೇ ಈ ಬಗ್ಗೆ ಬೊಂಬಾಯಿ — ಪೈಸೂರು ಮುಖ್ಯ ಮಂತ್ರಿಗಳು ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರ ಸಮ್ಮುಖದಲ್ಲಿ ವಿಚಾರವಿನಿಮಯ ನೂ ಡಿದ್ದು, ಜಿದನ್ನು ಇನ್ನೂ ಮುಂದುವರಿಸುವ ಇರಾದೆಯಿರುವಾಗ, ಈ ಸತ್ಯಾಗ್ರಹದ ಆಶಯವೇನೆಂಬ ಅರ್ಥವಾಗುವುದಿಲ್ಲ ಸತ್ಯಾಗ್ರಹದ ನಾಯಕರು ಕನ್ನಡದ ಹಾಗೂ ಕನ್ನಡಿಗರ ಮೇಲಿನ ದ್ವೇಷದಿಂದ ತಮ್ಮ ಈ ಸತ್ಯಾಗ್ರಹವನ್ನು ಹೂಡುವುದಲ್ಲವೆಂದೂ, ಆ ಪ್ರದೇಶಗಳು ಮಾತ್ರ ಮರಾಠಿಗರದಾಗಿದ್ದು ಮಹಾರಾಷ್ಟ್ರಕ್ಕೆ ಸೇರಬೇಕೆಂಬುದೇ ಇದರ ಆಶಯವೆಂದೂ ಆಡಿ, ಕನ್ನಡಿಗರನ್ನು ಮೆಚ್ಚಿಸಲು ಹೋಗಿ, ವ್ಯರ್ಥವಾಗಿ ಅವರನ್ನು ಉದ್ರೇಕಿಸುತಿದ್ದಾರೆ ಬೆಳಗಾವಿ ಕಾಂಗ್ರೆಸ್ ಸಮಿತಿಯು ಈ ಸಂದರ್ಭದಲ್ಲಿ ಸ್ವೀಕರಿಸಿದ ಗೊತ್ತುವಳಿಯು ಖಾಭಾವಿಕವಾಗಿದ್ದು, ಅಲ್ಲಿನ ಕನ್ನಡಿಗರ ಆಶಯವನ್ನು ಪ್ರತಿಬಿಂಬಿಸುತ್ತದೆ ಹೀಗಿರುವಾಗ, ಈ ಪ್ರದೇಶಗಳು ಮರಾಠಿಗರದ್ದೇ ಕನ್ನಡಿಗರದ್ದೇ ಎಂಬುದರಲ್ಲಿ ಯಾರ ಕೈ ವೇಲಾಗಬೇಕು?

ಹೀಗೆ ಒಂದು ಹೆಣ್ಣನ್ನು ಇಬ್ಬರು ಗಂಡಸರು ತಮ್ಮ ತಮ್ಮವಳೆಂದು ತಿಳಿದು ಒತ್ತಾಯ ದುರಾಗ್ರಹಗಳಿಸ್ಟೇ ಹಿಡಿದು ಮುಂಬರಿದರೆ, ಈ ವಾದವು ಅಂತ್ಯಗೊಳ್ಳುವುದಾದೂ ಹೇಗೆ? ಈ ದೃಷ್ಟಿಯಿಂದ ಈ ಪ್ರದೇಶಗಳ ಕನ್ನಡಿಗರ ಸಹನೆಯನ್ನೂ ವಿಧೇಯತೆಯನ್ನೂ ಮೆಚ್ಚಬೇಕು.

ಲಂಡನ್ ಮತ್ತು ಮೋಸ್ಕೋಗಳ ನಡುವೆ ವಿಮಾನ ಸಂಚಾರ ಸಂಬಂಧಿ ಪತ್ರಗಳಿಗೆ ತಮ್ಮ ಅನುಮತಿ ಸೂಚಕ ಸಹಿಯನ್ನು ಶ್ರೀ ಹಿಮ್ಮ್ ಬಿಗೋರ್ (ಬಲ)—ಬ್ರಿಟನ್ನಿನ ವಿದೇಶೀಯ ಮಂತ್ರಿ—ಮತ್ತು ಮಾರ್ಷಲ್ ಜಗಾರೆವ್ (ಎಡ) — ರಶ್ಯನ್ ವಿಮಾನಯಾನ ಮಂತ್ರಿಗಳಿಗೆ ಸಹಾಯಕರು

ಒಂದು ವೇಳೆ ಕನ್ನಡಿಗರೂ ಇದೇ ಸಂದರ್ಭದಲ್ಲಿ ಈ ಪ್ರದೇಶಗಳನ್ನು ಕರ್ನಾಟಕದಲ್ಲಿಯೇ ಉಳಿಸಿಕೊಳ್ಳಬೇಕೆಂದು ಇನ್ನೊಂದು ಬಗೆಯ 'ಸತ್ಯಾಗ್ರಹ'ವನ್ನು ಹೂಡಲು ಹವಣಿಸುತ್ತಿದ್ದರೆ, ಆಗ, ಪರಿಸ್ಥಿತಿಯನ್ನು ಹೇಗೆ ಸಮಾಧಾನಕ್ಕೆ ತರಬೇಕಿತ್ತು? ಹಿರಿಯರು ಒಮ್ಮೆ ಕೈ ತಪ್ಪಿದರೆ, ಸದ್ವಿಷಯವೆನ್ನುತ್ತಿರುತ್ತೇ ಅಂತೆಯೇ ವಿಳಂಬಕ್ಕೆ ಪಕ್ಷೀಯವಾಗಿ ಮಹಾರಾಷ್ಟ್ರೀಯರು ಮಾತ್ರ ಸತ್ಯಾಗ್ರಹವನ್ನಾರಂಭಿಸಿದುದು ಸಪೈವನ್ನೆನ್ನಬೇಕು.

ಸತ್ಯಾಗ್ರಹಿಗಳು ಡಿಪ್ಯುಟಿ ಕಮಿಶನರರ ಕಛೇರಿಗೆ ತೆರಳಿ, ಅಲ್ಲಿ ಅವರೊಡನೆ ಕೇಳಿಕೆಯನ್ನಿರಿಸಿದರೆಂದೂ ಮಾನ್ಯ ಕಮಿಶನರರು ತಮ್ಮ ಕೆಲಸವನ್ನು ನಿಲ್ಲಿಸಬೇಕೆಂದು ಕೇಳಿಕೊಂಡರೆಂದೂ, ಡಿವಿಶನರರು ಈ ವಿಚಾರವು ಸರಕಾರ ಸಂಬಂಧಿಸಿದ್ದು, ತಾನು ಸರಕಾರಿ ನೌಕನಿದ್ದು, ತನ್ನ ಕರ್ತವ್ಯವನ್ನು ಪಾಲಿಸಹೋದರೆ, ಕರ್ತವ್ಯಭ್ರಷ್ಟನಾಗುವುದಾದ, ಇವರ ವಿನಂತಿಯನ್ನು ತಿರಸ್ಕರಿಸಿರೆಂದೂ ವರದಿಯಾಗಿದೆ. ಮಾನ್ಯ ಕಮಿಶನರರಾದ ಶ್ರೀ ರಾಮಚಾಮ್ರನ್ ನ್ಯಾಯವಾದುದನ್ನೇ ಆಡಿದರೂ ಸತ್ಯಾಗ್ರಹಿಗಳು ತಮ್ಮ ಬೇಡಿಕೆಗಳು ಪೂರವಾಗದ ವರೆಗೆ ಕದಲಲಾರೆವೆಂದು ರಾಗ್ರಹ ಹಿಡಿಯಲು, ಅವರನ್ನು ಸಂಧೀ ಕೆಲಸಕ್ಕೆ ನಿನ್ನೆತಂದರೆಂದು ಬಂಧಿಸಲಾಯಿತೆಂದೂ ವರದಿಗಳು ಬಂದಿವೆ.

ಸತ್ಯಾಗ್ರಹವು ಶಾಂತಮಯವಾಗಿ ಸಾಗಿರುವುದೊಂದು ಸುದೈವವೆನ್ನಬಹುದು. ಆದರೆ, ಇಂತಹ ಸತ್ಯಾಗ್ರಹಗಳು ಪ್ರೋತ್ಸಾಹಾರ್ಹವಲ್ಲವೆಂಬುದನ್ನು ಮಾತ್ರ ಸರಕಾರ ತಿಳಿಯ ಬೇಕು. ನುರಾರಿಗರು ಬೆಳಗಾವ್, ಕಾರವಾರಾದಿಗಳನ್ನು ಬೇಡಿ ಸತ್ಯಾಗ್ರಹ ಮುಂದೂಡಿದರೆ, ಶೋಲಾಪುರದ ಪರವಾಗಿ ಕನ್ನಡಿಗರೂ ಅದೇ ರೀತಿಯ ವರ್ತಮಾನವನ್ನನುಸರಿಸಬೇಕಾಗಿ ಒರಬಹುದು ಎಂಬ ಅಭಿಪ್ರಾಯವು ಈಗಾಗಲೇ ಹೊರಹೊಮ್ಮಿರುವುದನ್ನು ಗಮನಿಸಿವಾಗ, ಕನ್ನಡಿಗರ ಎದೆಯ ಕೆಚ್ಚೂ ಪ್ರಕಟವಾಗುತ್ತಿದೆ. ಆದರೆ, ಸ್ವಾಭಾವಿಕವಾಗಿ ಸಹನಾಶೀಲರೂ ಸಹಿ

(ಉಳಿದ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. **MANGALORE.** Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಪ್ರಾಮಾಣಿಕ ವ್ಯವಹಾರಕ್ಕೆ ಆರ್ಥಿಕ ಸೇವೆ **ಸಿಂಡಿಕೇಟ್ ಬೇಂಕ್**

ಕಥಾ ವಿಹಾರ

ದೈವದೊಡನೆ ಸರಸಾಟ ಸಲ್ಲ

ತನ್ನ ಪತ್ನಿಯನ್ನು ಯಾತನೆಯಿಂದ ಬಿಡುಗಡೆ ಮಾಡಲು ಸಂತತಿನಿಯಂತ್ರಣ ಮಾಡೋಣವೆಂದರೆ ಅಕೆಯೇ ನೆಂದಳು, ಗೊತ್ತೆ?

ಗಂಭೀರ ಮೌನ ಕೋಣೆಯಿಡೀ ವ್ಯಾಪಿಸಿತ್ತು. ಬಾಯಿಯಲ್ಲಿ ಮಾತೇ ಹೊರಡುತಿರಲಿಲ್ಲ ಮೌನ! ದೀರ್ಘವಾದ ವಿಚಿತ್ರ ರೀತಿಯ ಮೌನರಂಗದಂತಿದ್ದ ಆ ಕೋಣೆಯಲ್ಲಿ ಆರೆಜೀವದಂತಿದ್ದ ಮಾನವ ಮೂರ್ತಿಯೊಂದು ಶಿಲಾಪ್ರತಿಮೆಯಂತೆ, ಕುಳಿತಿತ್ತು!

ಆಕೆಯ ಕಣ್ಣುಗಳು ಎಲ್ಲೋ ನೆಟ್ಟು ಹೋಗಿದ್ದುವು! ಭಯಂಕರ ಯಾತನೆಯಿಂದ ನರಳುತ್ತಿರುವಂತೆ ದೇಹವಿಡೀ ಗಡಗಡನೆ ನಡುಗುತ್ತಲೇ ಇತ್ತು. ಜತೆಗೆ ದೀರ್ಘವಾಗಿ ಹೊರಡುತಿದ್ದ ನಿಟ್ಟುಸಿರು ನಿಂದಾಗಿ, ಆ ಮಾನವ ಶರೀರದ ಗೂಡಲ್ಲಿ ಪ್ರಾಣಹಕ್ಕಿಯು ಇನ್ನೂ ನೆಲೆಸಿದೆಯೆಂದು ಸಾಕ್ಷೆ ನುಡಿಯುತಿತ್ತು.

ವಿಮಲೆ, ಅದೇ ನೆಟ್ಟ ದೃಷ್ಟಿಯಿಂದ, ತನ್ನೆಮರು ಸಾಲಾಗಿ ಮಲಗಿದ್ದ, ಆ ಮೂರು ಎಳೆಯ ಶರೀರಗಳನ್ನು ನೋಡುತಿದ್ದಳು. ಆಸೆ ಆಕಾಂಕ್ಷೆಗಳನ್ನು, ಹೆದರಿಕೆ ಭೀಕರತೆಗಳಾವುದನ್ನೂ ಪ್ರಕಟಿಸಲೆಡೆಗೊಡದ ನಿರ್ವಿಕಾರ ಭಾವನೆಯಿಂದ ತನ್ನ ಕರುಳಿನ ಕುಡಿಗಳನ್ನು, ಆಕೆ ನೋಡುತ್ತಲೇ ಇದ್ದಳು ಆ ಮುದ್ದು ಚಿಣ್ಣರು ಆಕೆಯ ಭಾವನೆಯ ಲೋಕವನ್ನಾಳುತಿದ್ದ ವಮೂರು ಮೂರ್ತಿಗಳು. ಅವುಗಳು ಎಳೆ ನಗುವನ್ನು ಬೀರಿದರೆ, ಸಂತಸದಿಂದ ಹಿಗ್ಗಿ, ಅವುಗಳತ್ತರೆ, ನೊರಗಿ ಕಂಗಾಲಾಗುತಿದ್ದು, ಅವುಗಳಿಗಾಗಿಯೇ ತನ್ನ ಜೀವನ ಮಂಡಿ ಪಾಗಿಟ್ಟಿದ್ದಳು.

ಆದರೆ ದುರ್ದಿನ ಗಳಿಗೆಯೊಂದು, ತನ್ನ ಕರಾಳ ಕೈಯನ್ನು ನುಂದೆ ಚಾಚಿ, ಸ್ವಲ್ಪವೂ ಕರುಣೆತೋರದೆ, ವಿಮಲೆಯ, ನ್ನೂ, ಆಕೆಯ ಪ್ರೀತಿಯ ಪತಿಯನ್ನೂ ಲೋಕದ ಕಡಲಲ್ಲಿ ಮುಳುಗಿಸಿ, ಅರಿಬಿರಿಯುತ್ತಿರುವ ಪುಷ್ಪಗಳನ್ನು ಕೆತ್ತುಬಿಡುವ ತಂಟೆ ಹುಡುಗನಂತೆ, ಆ ಮೂರು ಹಾಲು ಹಸುಳೆಗಳನ್ನೊಯ್ಯತಿದ್ದನೆಂದು ಯಾರು ತಾನೇ ಊಹಿಸಿದ್ದರು? ಹೀಗಾಗಿ ಮನೆಯೆಡೀ ರುದ್ರ ಗಂಭೀರ ಆವಾಸ ಮಾಡಿತ್ತು. ಲೋಕದ ಚಿಂತೆಯಿಲ್ಲದನ್ನೂ ಮರೆತು, ಶಾಂತಿಯ ರಾಜ್ಯವನ್ನಡರಿದ ಮುದ್ದು ಕಿಶೋರ್. ಕಿಶೋರಿ, ಕಿರಣರ ಮೃತ ದೇಹದ ಬಳಿ ಕೆತ್ತಿದ ಮೂರ್ತಿಯಂತೆ ವಿಮಲೆ ಕುಳಿತೇ ಇದ್ದಳು.

ವಿಮಲೆ, ಸಂಸಾರದ್ದು ಸುಖವನ್ನೇ ಕಂಡಿರಲಿಲ್ಲ. ಎಲ್ಲರೂ ಸುಖವನ್ನೇ ಅನುಭವಿಸುವವರಾದರೆ, ಕಷ್ಟ. ದಾರಿದ್ರ್ಯಗಳೆಂಬ ಹೆಸರಿಗೆ ಭೂಲೋಕದಲ್ಲಿ ಸ್ಥಾನವಾದರೂ ಎಲ್ಲರೂಪಡೆದೆಂದು ಹೆದರಿಯೋ ಏನೋ, ದೇವರು ವಿಮಲೆಯಂತವರನ್ನು ಧಾರಾಳವಾಗಿ ಸೃಷ್ಟಿಸಿರಬೇಕು. ಇಲ್ಲವಾದರೆ ಬಡತನವನ್ನೇ ವರಿಸಿಕೊಂಡಿದ್ದ ತನ್ನ ಪತಿಯನ್ನು ಬಿಟ್ಟು ಪತಿಗೃಹವನ್ನು ಪ್ರವೇಶಿಸಿದ ಮೇಲಾದರೂ, ಸ್ವಲ್ಪವಾದರೂ ಸುಖ ಕಾಣಬಾರದಾಗಿತ್ತೇ? ಗಂಡನ ಮನೆಯಲ್ಲಿ ಅವಳು ಅಂಜಿಕೆ ಯಾವ ಸೌಭಾಗ್ಯವನ್ನೂ ಕಂಡವಳಾಗಿರಲಿಲ್ಲ. ಪತಿಯ ತಿಂಗಳ ದುಡಿಮೆಯಿಂದ ಆ ಸಂಸಾರ ಸುಖದಲ್ಲಿ ನಲಿಯುವ ವಾತಾಂತರಲಿ ಮರ್ಯಾದೆಯಿಂದ ದಿನ ದೂಡುವುದಕ್ಕೂ ಕಷ್ಟ ಎನ್ನಿಸಿಕೊಂಡಿತ್ತು. ಆದರು, ವ್ಯಾಥಮಿಕ ಶಾಲೆಯ ಶಿಕ್ಷಕನೊಬ್ಬನ ರಾಣಿ ಆದಕ್ಕಿಂತ ಹೆಚ್ಚಿನ ದೇನನ್ನು ಪಡೆಯಲು ಸಾಧ್ಯ ಎಂಬ ವಿವೇಕ, ಬಾಳಿನ ಸವಿಗನಸನ್ನು ಕಟ್ಟಿಕೊಂಡು ಪತಿಯ ಮನೆಸೇರಿದ್ದ ವಿಮಲೆಗೆ ಬಾರದಿದ್ದುದರಲ್ಲಿ ಆಶ್ಚರ್ಯವೂ ಇರಲಿಲ್ಲ.

ನಾಲಾದ-ದೆಕ್ಕೆ ಬಡತನಕ್ಕೂ ಸಂಸಾರಕ್ಕೂ ನಂಟೋ, ಎಂಬಂತೆ, ವಿಮಲೆ ಮೂತೆಯು ಪಟ್ಟವನ್ನು ಪಡೆಯುವುದರಲ್ಲೇನೂ ತಡವಾಗಲಿಲ್ಲ. ಸೃಷ್ಟಿಕರ್ತನೂ ಆ ಮಟ್ಟಿಗೆ ಆ ದಂಪತಿಗಳ ಕಡೆಗೆ ಬಹಳ ಉದಾರಿಯಾಗಿಯೇ ವರ್ತಿಸಿದ್ದ. ವರ್ಷ ಐದು ಕಳೆಯುವುದರೊಳಗೆ, ಮಧ್ಯೆ ಇಂಗಿದ ಬಸಿರನ್ನು ಬಿಟ್ಟು, ನಾಲ್ಕು ಮಕ್ಕಳ ತಾಯಿ ಎನ್ನಿಸಿಕೊಂಡಿದ್ದಳು ಇನ್ನೂ ಇಪ್ಪತ್ತೈರಡರ ಗಡಿ ದಾಟದ, ಮಾಸ್ತರರ ಪತ್ನಿ.

ವರ್ಷಕ್ಕೊಂದು ಹೆರಿಗೆ! ಸಾಕಷ್ಟು ಅನುವಾನ, ನೈದ್ಯಕೀಯ ಶುಶ್ರೂಷೆ, ಪೌಷ್ಟಿಕ ಆಹಾರ, ಇವೆಲ್ಲ ಆಕೆ ಹೆತ್ತ ಸುಲಗಿದಾಗ ಕಂಡವಳೆ ಅಲ್ಲ ಆಕೆಯ ಪತಿ ಮಹಾಶಯ. ಆ ಊರಿನ ಭಾವೀ ಸ್ರಜೆಗಳನ್ನು ಭವ್ಯಭಾರತೀಯರಾಗಿ ರೂಪಿಸಲು ಸೊಂಟಕಟ್ಟಿದ್ದ ಆ ಮಾನ್ತರರ, ವಿಜ್ಞಾನಾಗಾರ ದಲ್ಲಿ ಮಕ್ಕಳಿಗೆಲ್ಲಾ ಪೌಷ್ಟಿಕ ಆಹಾರದ ಕಂತು, ಪಿಪಿ-ಮಿನುಗಳ ಕುರಿತು ಉದ್ದುದ್ದ ವಿವರಿಸುತಿದ್ದರೂ, ತನ್ನ ಪತ್ನೀಪುತ್ರರಿಗೆ ಆದರಲ್ಲಿ ಸ್ವಲ್ಪವನ್ನಾದರೂ ಕೊಡುವ ಭಾಗ್ಯ ಪಡೆದೇ ಬಂದಿರಲಿಲ್ಲ.

ಆದುದರಿಂದಲೇ ವಿಮಲೆ ಇಪ್ಪತ್ತರಲ್ಲೇ ಹೆಣ್ಣು ಮುದುಕಿಯಂತಾಗಿದ್ದಳು. ಕೈ ಕಾಲು, ಮುಖಗಳೆಲ್ಲೆಲ್ಲಾ, ಎದ್ದತೋರುತಿದ್ದ ಎಲುಬುಗಳನ್ನು ದೂರದಿಂದಲೇ ಎಣಿಸಲು ಯಾವ ಕಷ್ಟವೂ ಇರಲಿಲ್ಲ. ಮುಖದಲ್ಲಂತೂ ರಕ್ತದ ಕಲೆಯೇ ಇರಲಿಲ್ಲ. ಇಷ್ಟು ಸಾಲದುದಕ್ಕೆ ವಿಮಲೆ ಇನ್ನೊಮ್ಮೆ ತಾಯಿಯಾಗುವ ಸಿದ್ಧತೆ ಮಾಡುತಿದ್ದಳು!

ಕೊನೆಯೆಲ್ಲಿ? ಹೌದು, ಈ ಬಡತನದ ರುದ್ರ ನಾಟಕದ ಕೊನೆಯಾವರೂ ಎಲ್ಲಿ? ಎಂದು ಆ ದಂಪತಿಗಳಿಬ್ಬರೂ ಯೋಚಿಸುತ್ತಲೇ ಇದ್ದರು. ಮಕ್ಕಳುಮರಿಗಳಿಂದ ತುಂಬಿ, ಸಂಕೋಚದಲ್ಲಿ ನಲಿವ ಸಂಸಾರ ಯಾರಿಗೆ ತಾನೇ ಬೇಡವಾದೀತು? ನಿಜಕ್ಕೂ ಆದೊಂದು ಭಾಗ್ಯ ಎನ್ನಬಹುದು ಮಕ್ಕಳಿಗೆ ಹಂಬಲಿಸುವ ಸಿರಿವಂತರು. ಆದರೆ, ವಿಮಲೆಯ ಮಟ್ಟಿಗೆ ಮಾತ್ರ, ಇದ್ದ ಮಕ್ಕಳೇ ಹೆಚ್ಚು ಎನ್ನಿಸಿದ್ದುವು. ಇದ್ದ ನಾಲ್ಕು ಮಕ್ಕಳಿಗೆ ಹೊಟ್ಟೆಗೆ ತಣಿವನ್ನು ಕೊಟ್ಟು, ವೈಮುಚ್ಚುವಷ್ಟ ಬಟ್ಟೆಯಿತ್ತು ಸಾಕುವ ಭಾಗ್ಯ ಶಿವರಿಗಿರಲಿಲ್ಲಿ. ಸಾಲದುದಕ್ಕೆ ಹಿರಿಯ ಮಗ ಆರುಣ ಕಳೆದೊಂದು ತಿಂಗಳು ವಿಷಮ ಜ್ವರದಿಂದ ಬಳಲಿ, ನಿತ್ರಾ, ನರಳಿ, ಹೆತ್ತವರ ಕಷ್ಟ ತಪ್ಪಿಸಲೋ ಎಂದೋ ಏನೋ ತೋರದ ನಾದನ್ನು ನೀರಿದ್ದ! ಅವಸಿಗಾಗಿ ಮಾಡಿದ್ದ ಔಷಧಿಯ ಖರ್ಚು—ಡಾಕ್ಟರರ ಬಿಲ್ಲು—ಇನ್ನೂ ಬಾಕಿ! ಡಾಕ್ಟರರ ಕೆಂಪೌಂಡರ್, ನಿನ್ನೆ ತಾನೇ ಬಂದು, ಮರ್ಯಾದೆಯು ಎಲ್ಲೆ ಮೀರಿ ಏನೇನೋ ನುಡಿದಿದ್ದ!

ಹೀಗಿದ್ದೂ ಇನ್ನೂ ವಿಮಲೆ ಗರ್ಭಿಣಿ!

ಪರಿಹಾರ! ಪರಿಹಾರ!! ಪರಿಹಾರ!!! ದಂಪತಿಗಳ ತಲೆಯಲ್ಲು ಇದೊಂದೇ ವಿಷಯ, ಹಳೆಯ ಮರವನ್ನು ಕೊರೆವ ಹುಳುವಿನಂತೆ ಚುಚ್ಚಿ ಕೊರಕುತಿತ್ತು ಸಂತತಿ ನಿಯಂತ್ರಣವೊಂದೇ ಇದಕ್ಕೆ ಪರಿಹಾರ!

"ಇನ್ನು ಮುಂದೆ ಮಕ್ಕಳಾಗದಂತೆ ಜಾಗ್ರತೆ ವಹಿಸೋಣ: ತನ್ನ ವಿಮಲೆ ಇನ್ನು ಮುಂದಾದರೂ ನರಕಯಾತನೆಯನ್ನನುಭವಿಸುವುದನ್ನು ತಪ್ಪಿಸೋಣ ಎಂದು ಆತ ಯೋಚಿಸಿ,ಕೊನೆಯ ನಿರ್ಧಾರಕ್ಕೆ ಬಂದ.

"ಈ ಕಷ್ಟ ಈ ಸಲಕ್ಕೇ ಕೊನೆಯದಾಗಬೇಕು ನನ್ನ ಚಿನ್ನಾ ಈ ಸಾರಿಯು ಹೆರಿಗೆ ಆಸ್ಪತ್ರೆಯಲ್ಲೇ ಮಾಡಿಸಿ, ಆ ಸಮಯದಲ್ಲೇ ಮಕ್ಕಳಾಗದಂತೆ ವ್ಯವಸ್ಥೆ ಮಾಡಲು ಡಾಕ್ಟರರನ್ನು ವಿನಂತಿಸೋಣ"ಎಂದು ತನ್ನ ಯೋಜನೆಯನ್ನು ವಿಮಲೆಗೆ ವಿವರಿಸಿ, ಇದಕ್ಕೆ ಸರಕಾರದವರು ಕೊಡುವ ಪ್ರೋತ್ಸಾಹನವನ್ನೂ ತಿಳಿಸಿ, ಗಾಂಧೀಜಿಯವರೂ ಸಂತತಿ ನಿಯಂತ್ರಣಕ್ಕೆ ವಿರೋಧವಿಲ್ಲ ಎಂದು ತನ್ನ ಆಲೋಚನೆಯನ್ನು ಸಮರ್ಥಿಸಿದ. ವಿಮಲೆ ಪತಿಯ ಯೋಜನೆಯನ್ನು ಕೇಳುತ್ತಲೇ ಇದ್ದಳು. ಅದನ್ನು ಕೇಳಿತ್ತಿದ್ದಂತೆ, ಆಕೆಗೆ ಅಲ್ಲೇ ನಿದ್ದೆ ಆವರಿಸಿತು.ತಿಂಡಿಗೆಂದು ಚಂಡಿ ಹಿಡಿದ ಕಿರಣನನ್ನು ಹಿಡಿದುಕೊಂಡ ಮೂರುವರ್ಷದ ಎಳೆಯ ಹುಡುಗಿ ಕಿಶೋರಿ,ಅಲ್ಲೇ ಕೆರಕು ಚಾಪೆಯಲ್ಲಿ ಒರಗಿದ್ದಳು. ಬಳಿಯಲ್ಲೇ ಕಿಶೋರ್ ಮಲಗಿದ್ದ.

ಅಪ್ಪರಲ್ಲೇ ಭಯಂಕರಾಕೃತಿಯ ಕರಾಳ ರೂಪವೊಂದು, ತನ್ನ ಉಗ್ರಣ್ಣಲ್ಲಿ ಬೆಂಕಿಯ ಜ್ವಾಲೆಯನ್ನು ಸೂಸುತ್ತಾ ವಿಕಾರವಾಗಿ ಬಾಯಿ ತೆರೆದ. ನಕ್ಕಂತೆ-ಗುಡುಗಿದಂತೆ ಏನೋ ಶಬ್ದ! ಆ ಭೀಮಕಾಯ ಅಲ್ಲೇ ನಿಲ್ಲದೆ, ಆನೆಯ ಕಾಲುಗಳಂತಹ ತನ್ನ ಪಪ್ಪನೆಯ ಕೈಗಳಿಂದ ಆ ಮೂರು ಶಿಶುಗಳನ್ನು ಹಿಸುಕಿ ಬಿಟ್ಟಿತು! ಅಲ್ಲೂ ನಿಲ್ಲದೆ ಹರಿತವಾದ ಉಲಗನ್ನು ತನ್ನ ಹೊಟ್ಟೆಗೆ ಗುರಿ ಎಸೆದಂತೆ! ಭೀಕರ ದೃಶ್ಯ!

ವಿಮಲೆ ತಟ್ಟನೆ ಚೀರಿದಳು! ಅಲ್ಲಿಂದೆದ್ದು ಇದೇ ಜೀವನ್ಮೃತ ಸ್ಥಿತಿಯಲ್ಲಿ ಮಕ್ಕಳ ಮೃತದೇಹವನ್ನೇ ದಿಟ್ಟಿಸಿದಳು!

ತುಸು ಸಮಯದ ಬಳಿಕ—"ಬೇಡ, ಬೇಡ—ನಿಮ್ಮ ದಮ್ಮಯ್ಯ—ಯಾವ ನಿಯಂತ್ರಣವೂ ಬೇಡ! ವಿಧಿಯೊಡನೆ ಜೆಬ್ಲಾಟ ಬೇಡಬ್ಬಾ—ಬೇಡ—"
ವಿಮಲೆ ಗೊಣಗುತಿದ್ದಳು.

ಆಕೆಯ ಪತಿ ವಿಮಲೆಯನ್ನು ಸಂತೈಸುತ್ತಾ-'ಕನಸು ಕಂಡೆಯಾ ಚಿನ್ನಾ" ಎಂದು ಪ್ರಶ್ನಿಸತೊಡಗಿದ.

"ಹೂಂ ಕಾಣ್ತೈ, ಹಾಳು ಕನಸು ಏಕೆ ಬಿತ್ತೋ-ಎನ್ಕೊತ್ತಾ ಆಕ. ತನ್ನ ಜೀವದ ಕೊಡೆಯಂತಿದ್ದ ಕಿಶೋರ್, ಕಿಶೋರಿ, ಕಿರಣ್ನನ್ನು ಮಟ್ಟಿ ನೋಡಿದಳು ಮೂವರೂ ಗಾಢ ನಿದ್ರೆಯಲ್ಲಿ ಆವುದೋ ಸವಿಗನಸು ಕಾಣುತಿದ್ದರೆಂದು, ಆ ಮುಖದಲ್ಲಿ ಮಿನುಗುತ್ತಿದ್ದ ಮುಗುಳು ನುಡಿಯುತ್ತಿತ್ತು.

ವಿಮಲೆ ದೇವರನ್ನೊಮ್ಮೆ ಮನಸಾ ವಂದಿಸಿದಳು.

"ಗಿರಿಜಾಪ್ರಿಯ."



ಭೂಸುಧಾರಣೆ

ಎಲ್ಲ ಜನರ ಗಮನವನ್ನೂ ಬರಸೆಳೆದ ಸುಧಾರಣೆ

ಪಶ್ಚಿಮ ವಲಯದ ಬೊಂಬಾಯಿ ಮತ್ತು ಮೈಸೂರುಗಳಲ್ಲಿ ವಿವೇಚನೆ

[ಪ್ರಥಮ ಹಾಗೂ ದ್ವಿತೀಯ ಯೋಜನೆಗಳಲ್ಲಿ ಭೂಸುಧಾರಣೆಗಳ ಬಗ್ಗೆ ಹೆಚ್ಚು ಸ್ಪಷ್ಟ ಮುಖ್ಯವೀಯಲಾಗಿದೆ. ಭೂಸುಧಾರಣೆಗಾಗಿ ವಿವಿಧ ರಾಜ್ಯಗಳಲ್ಲಿ ಕಾನೂನುಗಳು ರೂಪಿಸಲ್ಪಟ್ಟಿವೆ. ಪ್ರಸ್ತುತ ಲೇಖನದಲ್ಲಿ ಪಶ್ಚಿಮ ವಲಯದಲ್ಲಿರುವ ಮೈಸೂರು, ಮುಂಬೈ ಮುಂತಾದ ರಾಜ್ಯಗಳಲ್ಲಿ ಭೂಸುಧಾರಣೆ ಸಂಬಂಧದಲ್ಲಿ ಕೈಗೊಂಡಿರುವ ಕಾರ್ಯಗಳ ಪ್ರಗತಿಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.]

ಭೂಮಿಯ ಫಲ ಶಕ್ತಿಯು ಮಣ್ಣಿನ ಸಾರ, ಗೊಬ್ಬರದ ಉಪಯೋಗ, ಸಾಗುವಳಿಯ ವಿಧಾನ ಇತ್ಯಾದಿಗಳಿಂತಹ ಅನೇಕ ಅಂಶಗಳ ಮೇಲೆ ಅವಲಂಬಿಸಿಕೊಂಡಿರುವುದು. ಆದರೆ ಇವೆಲ್ಲಕ್ಕಿಂತ ಮುಖ್ಯವಾದ ಅಂಶವೆಂದರೆ ಭೂವ್ಯವಸ್ಥೆ. ಉತ್ಪತ್ತಿಯಾದ ಬೆಳೆಯನ್ನು ಸರ್ಕಾರ, ಜಮೀನುದಾರ ಮುಂತಾದ ವಿವಿಧ ಸಾಮಾಜಿಕ ವರ್ಗಗಳು ಹೆಂಚಿಕೊಳ್ಳುವುದೇ ಈ ವ್ಯವಸ್ಥೆಯಾಗಿರುವುದು.

ನಮ್ಮ ದೇಶದ ಭೂವ್ಯವಸ್ಥೆಯು ಲೋಪದೋಷಗಳಿಂದ ಕೂಡಿದೆ. ಭೂವ್ಯವಸ್ಥೆಯಿಂದಾಗಿ ದೇಶದ ಆರ್ಥಿಕ ವ್ಯವಸ್ಥೆಗೆ ಹಾನಿಯುಂಟಾಗಲಿದೆ ಇದರಿಂದ ನಮ್ಮ ಸಮಾಜದಲ್ಲಿ ವರ್ಗದ್ವೇಷ ಹೆಚ್ಚಾಗುವಂತಹ ಕ್ಷುಸಂಗ ಸಂಭವಿಸಬಹುದಾಗಿದೆ. ಈ ಲೋಪದೋಷಗಳನ್ನು ಸರಿಪಡಿಸುವುದು ಜರೂರು ಕೆಲಸವಾಗಿದೆ. ಈ ಲೋಪದೋಷಗಳಿಂದಾಗಿ ವ್ಯವಸಾಯ ಉತ್ಪಾದನೆ ಕುಂಠಿತಗೊಳ್ಳುತ್ತಿದೆಯಲ್ಲದೆ ವ್ಯವಸಾಯ ಆರ್ಥಿಕ ವ್ಯವಸ್ಥೆಯು ವಿಕಾಸಕ್ಕೆ ಅಡಚಣೆಯುಂಟಾಗಿದೆ. ಸಮಾಜವಾದಿ ಸ್ವರೂಪದ ವ್ಯವಸ್ಥೆಯನ್ನು ಸ್ವೀಕರಿಸಿದ ನಂತರ ಭೂವ್ಯವಸ್ಥೆಯಲ್ಲಿ ವರ್ಗಭೇದವನ್ನು ಸಮಾಪ್ತಿಗೊಳಿಸಿ ನ್ಯಾಯಪೂರ್ಣ ವ್ಯವಸ್ಥೆಯನ್ನು ತರುವುದು ಅವಶ್ಯವಾಗಿದೆ.

ಭೂಸುಧಾರಣಾ ಕ್ರಮಗಳನ್ನು ಆಚರಣೆಗೆ ತರುವ ಅಗತ್ಯವನ್ನು ಪ್ರಥಮ ಹಾಗೂ ದ್ವಿತೀಯ ಯೋಜನೆಗಳಲ್ಲಿ ಒತ್ತಿ ಸೂಚಿಸಲಾಯಿತು. ಇದನ್ನು ೧೯೫೨ರ ಸೆಪ್ಟೆಂಬರ್‌ನಲ್ಲಿ ಸಮಾವೇಶಗೊಂಡಿದ್ದ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಸ್ಥಾಯಿ ಸಮಿತಿ ಹಾಗೂ ೧೯೫೨ರ ಅಕ್ಟೋಬರ್‌ನಲ್ಲಿ ನಡೆದ ವ್ಯವಸಾಯ ಮಂತ್ರಿಗಳ ಸಮ್ಮೇಳನಗಳು ಅನುಮೋದಿಸಿದವು.

ಉತ್ಪಾದನೆಯನ್ನು ಅತ್ಯಧಿಕಗೊಳಿಸುವುದಕ್ಕಾಗಿ ಚೇಸಾಯಗಾರನಿಗೆ ಸಾಕಷ್ಟು ಸಂಪತ್ಪಾಧನ ಹಾಗೂ ಪ್ರೋತ್ಸಾಹ ನೀಡುವ ಉದ್ದೇಶದಿಂದ ಆದಷ್ಟು ಬೇಗನೆ ಗೇಣಿಯನ್ನು ಬೆಳೆಯಲ್ಲಿ ಕಾಲುಭಾಗಕ್ಕೆ ಅಥವಾ ಐದನೆಯ ಒಂದು ಭಾಗಕ್ಕೆ ಇಳಿಸಬೇಕೆಂದು ಯೋಜನೆಯಲ್ಲಿ ಶಿಫಾರಸು ಮಾಡಲಾಗಿದೆ. ದ್ವಿತೀಯ ಯೋಜನೆಯು ಗೇಣಿದಾರನಿಗೆ ಗೇಣಿಯ ಅವಧಿಯ ರಕ್ಷಣೆಯನ್ನು ನೀಡುವುದನ್ನು ಸೂಚಿಸಿದೆ. ತಮ್ಮ ಕುಟುಂಬಹಿಡುವಳಿಗಿಂತ ಹೆಚ್ಚಿನ ಕ್ಷೇತ್ರಫಲವನ್ನು ಹೊಂದಿರುವ ಜಮೀನು ಮಾಲೀಕರು ವೈಯಕ್ತಿಕ ಸಾಗುವಳಿಗಾಗಿ ಸಾಮಾನ್ಯವಾಗಿ ತಮ್ಮ ಜಮೀನಿನಲ್ಲಿ ಅರ್ಧದಷ್ಟನ್ನು ಮಾತ್ರ ಇಟ್ಟುಕೊಳ್ಳಬಹುದೆಂದೂ ಆದರೆ ಗೇಣಿದಾರರು ಕೆಲವು ಸಂದರ್ಭಗಳಲ್ಲಿ ಮೂಲಹಿಡುವಳಿಗಿಂತ ಕಡಿಮೆ ಇಲ್ಲದಷ್ಟು ಕ್ಷೇತ್ರ ಫಲವನ್ನು ಮಾತ್ರ ಇಟ್ಟುಕೊಳ್ಳಬಹುದೆಂದೂ ದ್ವಿತೀಯ ಯೋಜನೆಯು ಶಿಫಾರಸು ಮಾಡಿದೆ. ಆದರೆ ಒಬ್ಬ ವ್ಯಕ್ತಿಯು ಎಷ್ಟೂರು ಕುಟುಂಬಹಿಡುವಳಿಗಳಷ್ಟು (ವೈಯಕ್ತಿಕ ಸಾಗುವಳಿಗಾಗಿರುವ ಕ್ಷೇತ್ರ ಫಲವೂ ಸೇರಿ) ಪರಮಾವಧಿ ಕ್ಷೇತ್ರಫಲವನ್ನು ಹೊಂದಿರಬಹುದಾಗಿದೆ. ಗೇಣಿದಾರರೇ ಕ್ರಮೇಣ ಭೂಸ್ವಾಮಿಗಳಾಗುವುದನ್ನು ನಿರೂಪಿಸಿ ಪ್ರಥಮ ಯೋಜನೆಯು ಗೇಣಿದಾರರೇ, ಜಮೀನುದಾರರು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳದೇ ಇರುವ ಭೂಮಿಯ, ಭೂಸ್ವಾಮಿಗಳಾಗುವುದು ಸಾಮಾನ್ಯ ಕಾರ್ಯನೀತಿಯಾಗಬೇಕೆಂದು ಸೂಚಿಸಿತು. ಜಮೀನುದಾರರು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳದೇ ಇರುವ ಜಮೀನುಗಳ ಎಲ್ಲ ಗೇಣಿದಾರರುಗಳನ್ನು ಸರ್ಕಾರದ ಪರವಾಗಿ ನೇರಸಂಬಂಧ ಪಡುವಂತೆ ಮಾಡಬೇಕೆಂದೂ, ಪ್ರತಿರಾಜ್ಯದ ಗೇಣಿದಾರನ್ನು ಆ ಜಮೀನುಗಳ ಮಾಲೀಕರನ್ನಾಗಿ ಮಾಡುವ ಕಾರ್ಯಕ್ರಮವೊಂದನ್ನು ರೂಪಿಸಬೇಕೆಂದೂ ದ್ವಿತೀಯ ಯೋಜನೆಯಲ್ಲಿ ಶಿಫಾರಸು ಮಾಡಲಾಗಿದೆ.

ಮುಂದೆ ಭೂಮಿಯನ್ನು ಅರ್ಜಿಸಿಕೊಳ್ಳುವ ಜಮೀನುಗಳ ಹಾಗೂ ಈಗಿರುವ ಹಿಡುವಳಿಗಳ ಬಗ್ಗೆ ಮಿತಿಯನ್ನು ವಿಧಿಸಬೇಕೆಂದು ದ್ವಿತೀಯ ಯೋಜನೆಯಲ್ಲಿ ಶಿಫಾರಸು ಮಾಡಲಾಗಿದೆ. ಪ್ರಥಮ ಯೋಜನೆಯಲ್ಲಿ ಕುಟುಂಬಹಿಡುವಳಿಯನ್ನು ಸ್ಥಳೀಯ ಸ್ಥಿತಿಗತಿಗಳಿಗನುಗುಣವಾಗಿ ಒಂದು ನೇಗಿಲಿನಿಂದ ಸಾಗುವಳಿ ಮಾಡಬಹುದಾದ ಕ್ಷೇತ್ರಫಲವೆಂದು ವಿವರಿಸಲ್ಪಟ್ಟಿದೆ. ದ್ವಿತೀಯ ಯೋಜನೆಯು ಪ್ರತಿ ವ್ಯಕ್ತಿಯು ಹೊಂದಿರಬಹುದಾದ ಕ್ಷೇತ್ರ ಫಲವು ಕುಟುಂಬಹಿಡುವಳಿಯ ಮೂರರ ಪ್ಪಿರಬಹುದೆಂದು ಶಿಫಾರಸು ಮಾಡಿದೆ.

ಭೂಮಿಯನ್ನು ಛಿದ್ರ ಛಿದ್ರಗೊಳಿಸುವುದನ್ನು ಪಡೆಯುವುದಕ್ಕಾಗಿ ದ್ವಿತೀಯ ಯೋಜನೆಯು ಹಿಡುವಳಿಗಳ ಕ್ರೋಢೀಕರಣವನ್ನು ರಾಷ್ಟ್ರೀಯ ವಿಸ್ತರಣಾ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳು ಮತ್ತು ವ್ಯವಸಾಯ ಉತ್ಪಾದನೆಯು ಒಂದು ಸಮಗ್ರ ಭಾಗವನ್ನಾಗಿ ಮಾಡಬೇಕೆಂದು ಶಿಫಾರಸುಮಾಡಿದೆ. ಅನೇಕ ಕ್ಷೇತ್ರಗಳಲ್ಲಿ ಸಮರ್ಪಕವಾದ ಭೂದಾಖಲೆ ಪತ್ರಗಳಲ್ಲದಿರುವುದರಿಂದ ಭೂಸುಧಾರಣಾ ಕಾರ್ಯಕ್ರಮಗಳನ್ನು ಶ್ರುತಿ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದು ಇಚ್ಛವಾನದೇ ಹೋಗಿದೆ. ಭೂದಾಖಲೆ ಪತ್ರಗಳನ್ನು ರಚಿಸುವ ಅತ್ಯಗತ್ಯ ಶಿಪನ್ಯೂಹ ಅಡಳಿತವನ್ನು ಬಲಪಡಿಸಿ ಭೂಸುಧಾರಣಾ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಪಂಚಾಯತ್‌ಗಳ ಸಹಕಾರವನ್ನು ಪಡೆಯುವುದು ಈ ಬಗ್ಗೆ ದ್ವಿತೀಯ ಯೋಜನೆಯು ಗಮನ ಸೆಳೆದಿದೆ.

ಪಶ್ಚಿಮ ವಲಯದಲ್ಲಿ ಪ್ರಗತಿ

ಹಿಂದಿನ ಮುಂಬೈ ರಾಜ್ಯದಲ್ಲಿದ್ದ ೧೯೪೮ರ ಮುಂಬೈ ಗೇಣೀ ಕಾನೂನನ್ನು ತಿದ್ದುಪಡಿಮಾಡಿ ಹೊಸ ಕಾನೂನನ್ನು ರಚಿಸಲಾಯಿತು. ೧೯೫೬ರ ಮಾರ್ಚ್ ೧೬ರಂದು, ತಿದ್ದುಪಡಿ ಮಾಡಲ್ಪಟ್ಟ ಕಾನೂನಿಗೆ, ರಾಷ್ಟ್ರಾಧ್ಯಕ್ಷರು ಅಂಕಿತವಿತ್ತರು. ರಾಜ್ಯ ಸರ್ಕಾರದವರು ೧೯೫೬ರ ಆಗಸ್ಟ್ ೧೬ರಿಂದ ಈ ಕಾನೂನನ್ನು ಅನುಷ್ಠಾನಕ್ಕೆ ತಂದರು.

ಈ ತಿದ್ದುಪಡಿ ಮಾಡಲ್ಪಟ್ಟ ಕಾನೂನಿನ ಪ್ರಕಾರ, ಖಾಯಂ ಗೇಣಿದಾರರಿಗೆ ಗೇಣಿಯ ಅವಧಿಯ ಪೂರ್ಣ ಭದ್ರತೆಯಿರುವುದಲ್ಲದೆ ಗೇಣಿಯು ಆರುಪಟ್ಟು ಪಣವನ್ನು ಪಾವತಿನಾಡಿ ಅವರು ತಾವು ಸಾಗುವಳಿ ಮಾಡುತ್ತಿದ್ದ ಜಮೀನಿನ ಭೂಸ್ವಾಮಿಗಳಾಗಬಹುದಾಗಿದೆ ಉಳಿದ ಗೇಣಿದಾರರು ಗೇಣಿಯು ಅವಧಿಯ ಪೂರ್ಣಭದ್ರತೆಯನ್ನು ಪಡೆಯಿರುವರು. ಆದರೆ ಜಮೀನುದಾರನು ಸ್ವಂತಕ್ಕಾಗುವಳಿಗಾಗಿ ೧೯೫೧ರ ಳಲ ಎಕರೆಗಳಷ್ಟು ಜಮೀನನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಹಕ್ಕಿದೆ. ಗೇಣಿದಾರನು ತನ್ನ ಆರ್ಧ ಜಮೀನನ್ನು ಉಳಿಸಿಕೊಳ್ಳುವ ಹಕ್ಕನ್ನು ಪಡೆದಿರುವನು.

೧೯೫೭ರ ಏಪ್ರಿಲ್ ೧೭೦೦ ಎಲ್ಲ ಗೇಣಿದಾರರು, ಜಮೀನುದಾರರು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳದೇ ಇರುವ ಜಮೀನುಗಳ ಮಾಲೀಕತನದ ಹಕ್ಕನ್ನು ಪಡೆದಿರುವರೆಂದೇ ಪರಿಗಣಿಸಲಾಯಿತು. ಹೀಗೆ ಮಾಲೀಕತ್ವ ಪಡೆದ ಗೇಣಿದಾರರು ಜಮೀನಿನ ವೌಲ್ಯದ ಮತ್ತು ಜಮೀನನ್ನು ಉತ್ತಮಪಡಿಸುವುದಕ್ಕಾಗಿ ಪಾವತಿ ಮಾಡಿದ ಹಣ ಇವುಗಳ ೨೦ರಿಂದ ೩೦ ಪಟ್ಟು ಹಣವನ್ನು ಪರಿಹಾರಧನದ ರೂಪದಲ್ಲಿ ಮಾಡಬೇಕಾಗುವುದು. ಈ ಪರಿಹಾರ ಧನವನ್ನು ೧೫ಕ್ಕೆ ಮೀರದ ಕಂತುಗಳಲ್ಲಿ ಶೇ. ೪॥ ಬಡ್ಡಿಯ ಸಹಿತ ಪಾವತಿ ಮಾಡಬೇಕಾಗುವುದು. ಖಾಯಂ ಗೇಣಿದಾರರು ಪರಿಹಾರ ಧನವನ್ನು ಒಂದೇ ಕಂತಿನಲ್ಲಿ ಕೊಡಬೇಕಾಗುವುದು.

ಪರಮಾವಧಿ ಗೇಣಿಯು ಜಮೀನಿನ ಕಂದಾಯದ ಎರಡರಿಂದ ಐದರಷ್ಟಕ್ಕಿಂತ ಹೆಚ್ಚಾಗಿರಬಾರದು. ಜೊತೆಗೆ, ಗೇಣಿದಾರನು ಕಂದಾಯ, ಸೆಸ್‌ಗಳನ್ನು ಪಾವತಿ ಮಾಡಿಬೇಕಾಗುವುದು. ಆದರೆ ಕಂದಾಯ ಸೆಸ್‌ಗಳಿಗಾಗಿ ಪಾವತಿಮಾಡುವ ಹಣವು ಒಟ್ಟು ಉತ್ಪನ್ನದ ಆರರಲ್ಲೊಂದಕ್ಕಿಂತ ಹೆಚ್ಚಿರಬಾರದು.

ಈ ಕಾನೂನನ್ನು ಈಗ ಪುನರ್ವ್ಯವಸ್ಥೆಗೊಂಡ ಮುಂಬೈ ರಾಜ್ಯದ ಒಂದು ಭಾಗವಾಗಿರುವ ಹಿಂದಿನ ಸೌರಾಷ್ಟ್ರ ರಾಜ್ಯದ ಕ್ಷೇತ್ರಗಳಿಗೂ ಅನ್ವಯಿಸಲಾಗಿದೆ. ಮುಂಬೈ ರಾಜ್ಯದಲ್ಲಿ ಅಂತರ್ಗತವಾಗಿರುವ ಉಳಿದ ಕ್ಷೇತ್ರಗಳಿಗೂ ಅನ್ವಯಿಸಲಾಗಿದೆ. ಮುಂಬೈ ರಾಜ್ಯದಲ್ಲಿ ಅಂತರ್ಗತವಾಗಿರುವ ಉಳಿದ ಕ್ಷೇತ್ರಗಳಿಗೂ ಇಂತಹದೇ ಅದ ಕಾನೂನನ್ನು ತರುವ ವಿಚಾರವು ಪರ್ಯಾಲೋಚನೆಯಲ್ಲಿದೆ.

ಪುನರ್ವ್ಯವಸ್ಥಿತ ವ್ಯೆಸೂರು ರಾಜ್ಯದಲ್ಲಿ ಹಿಂದಿನ ಮೈಸೂರು, ಕೊಡಗು, ಹಿಂದಿನ ಮುಂಬೈ, ಹೈದರಾಬಾದ್ ಮತ್ತು ಮದರಾಸ್ ರಾಜ್ಯಗಳ ಕೆಲವು ಭಾಗಗಳು ಸೇರಿವೆ. ಎಲ್ಲ ಭಾಗಗಳಿಗೂ ವ್ಯಾಪಕವಾಗುವಂತಹ ಭೂಸುಧಾರಣಾ ಕಾನೂನನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರುವ ಹಾಗೂ ಏಕರೂಪದ ಭೂಸುಧಾರಣೆ ಪದ್ಧತಿಯನ್ನು ತರುವ ಪ್ರಶ್ನೆಯು ಮೈಸೂರು ರಾಜ್ಯ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಗೇಣಿದಾರರು ಸ್ಥಾನಪಲ್ಲಟಗೊಳ್ಳದಂತೆ ಮಾಡುವುದಕ್ಕಾಗಿ ಸುಗ್ರೀವಾಜ್ಞೆಗಳು ಹೊರಡಿಸಲ್ಪಟ್ಟಿವೆ. ಕೊಡಗಿನಲ್ಲಿ ಗೇಣಿಗೆಳನ್ನು ಕ್ರಮಬದ್ಧಗೊಳಿಸುವ ಬಗ್ಗೆ ಯಾವ ರೀತಿಯ ಕಾನೂನನ್ನು ರಚಿಸಿರಲಿಲ್ಲ. ಅಲ್ಲಿ ಸಣ್ಣ ಗೇಣಿಯು, ಒಟ್ಟು ಉತ್ಪನ್ನದಲ್ಲಿ ಪರಮಾವಧಿ ಮೂರನೆಯ ಒಂದು ಭಾಗವೆಂದು ನಿಗದಿ ಮಾಡಿ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ. ಗೇಣಿದಾರರು ಸ್ವಂತ ಇಚ್ಛೆಯ ಮೇಲೆ ಜಮೀನುಗಳನ್ನು ಜಮೀನುದಾರರಿಗೆ ಬಿಟ್ಟುಕೊಡುವ ಪದ್ಧತಿಯನ್ನೂ ತ

(೧೦ನೇ ಪುಟ ನೋಡಿರಿ.)

ಕೇಶ ಸೌಂದರ್ಯವೇ—ಯುವತಿ, ಯುವಕರ ಶೃಂಗಾರ.

ಅಂಥ ಕೇಶವೃದ್ಧಿ (ಕೂದಲ ಬೆಳವಣಿಗೆ)ಗಾಗಿ ಅನೇಕ ತಲೆ ಎಣ್ಣೆಗಳನ್ನು (Hair Oils) ಉಪಯೋಗಿಸಿ ನಿರುತ್ಸಾಹರಾಗಿರುವುದು ಸಹಜ. ಆದರೆ:—

ಹಿಮಗಿರಿ ತೈಲ

ಉಪಯೋಗಿಸುವುದರಿಂದ

ತಲೆನೋವು, ಕಣ್ಣುರಿ, ಕಣ್ಣಿನಲ್ಲಿ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೂದಲು ಉದುರುವಿಕೆ, ಕಣ್ಣು ಮಂಜು, ನಿದ್ರಾಭಂಗ ಈ ವ್ಯಾಧಿಗಳನ್ನು ಪರಿಹರಿಸಿ ಕೇಶವೃದ್ಧಿ ಮಾಡುವುದು.

ಸೂಚನೆ:— ಹಿಮಗಿರಿ ತೈಲವೆಂದು "ಬೇರೆ ಗಿರಿಗಳ" ಹೆಸರುಳ್ಳ ನಕಲಿ ಮಾಲನ್ನು ಕೊಂಡು ಮೋಸಹೋಗಬೇಡಿರಿ.

Wanted Agents & Stockists

Manufacturers: RATAN MISRI DEPOT
Avenue Road Cross, BANGALORE-2.

ಪತ್ರಿಕಾ ಕಾಗದ

ಆಯಾತ ನಿಂತಿದೆ; ಉತ್ಪಾದನೆ ಹ್ರಸ್ವವಾಗಿದೆ; ಬಳಕೆ ಹೆಚ್ಚಿದೆ; ಬೆಲೆಯೇರಿದೆ

ಪತ್ರಿಕಾ ಸ್ವಾತಂತ್ರ್ಯಕ್ಕೊಟ್ಟು ಪತ್ರಿಕಾ ಕಾಗದದ ಅಭಾವವನ್ನುಂಟು ಮಾಡುವುದು ವಿಹಿತವಲ್ಲ.

ದ್ವಿತೀಯ ವಿಶ್ವಸಮರದ ನೊಡಲು ಭಾರತದಲ್ಲಿ ನ್ಯೂಸ್‌ಪ್ರಿಂಟಿನ ವಾರ್ಷಿಕ ಬಳಕೆಯು ಸುಮಾರು ೩೭,೦೦೦ ಟನ್ನು ಗಳಷ್ಟಿತ್ತು, ಪ್ರಸ್ತುತದ ಬೇಡಿಕೆಯು ಸುಮಾರು ೮೦,೦೦೦ ಟನ್ನುಗಳೆಂದು ಅಂದಾಜು ಮಾಡಲಾಗಿದೆ; ಅದು ೧೯೬೦-೬೧ರ ನೇಳೆಗೆ ೧,೦೦,೦೦೦ ಟನ್ನುಗಳಿಗೆ ಏರುವ ನಿರೀಕ್ಷೆಯಿದೆ.

೧೯೫೨ರಲ್ಲಿ, ಭಾರತವು ೫೫,೬೪೪ ಟನ್ನುಗಳಷ್ಟು ನ್ಯೂಸ್‌ಪ್ರಿಂಟನ್ನು ಆಮದು ಮಾಡಿಕೊಂಡಿತು.

ನೇಪಾ ಕಾರ್ಖಾನೆಯನ್ನು ಸ್ಥಾಪಿಸುವ ವರೆಗೆ, ಭಾರತವು ನ್ಯೂಸ್‌ಪ್ರಿಂಟಿನ ಬೇಡಿಕೆಗಳಿಗ ಪೂರ್ಣವಾಗಿ ಆಮದನ್ನೇ ಅವಲಂಬಿಸಿತ್ತು. ಈ ಕಾರ್ಖಾನೆಯು ೧೯೫೨ರ ಜನವರಿಯಲ್ಲಿ ಉತ್ಪಾದನೆಯನ್ನು ಆರಂಭಿಸಿತು.

೧೯೫೨ರ ಮೇ ೩೧ರಂದು ಪ್ರಧನು ನ್ಯೂಸ್‌ಪ್ರಿಂಟ್ ನಿಯಂತ್ರಣ ಆಜ್ಞೆಯನ್ನು ಜಾರಿಗೆ ತರಲಾಯಿತು. ಇದರ ಪ್ರಕಾರ ನ್ಯೂಸ್‌ಪ್ರಿಂಟಿನ ಮಾರಾಟ ಹಾಗೂ ಕೊಳ್ಳುವಿದನ್ನು ನಿಯಂತ್ರಿಸಲಾಯಿತು. ವಿವಿಧ ವೃತ್ತಪತ್ರಿಕೆಗಳಿಗೆ ಆಮದು ಕೋಟಾಗಳನ್ನು ಹಂಚಲಾಯಿತು, ಮತ್ತು ವೃತ್ತಪತ್ರಿಕೆಗಳ ಪ್ರಕಟಣೆಯನ್ನುಳಿದು ಇತರ ಉದ್ದೇಶಗಳಿಗೆ ನ್ಯೂಸ್‌ಪ್ರಿಂಟನ್ನು ಬಳಸುವುದನ್ನು ನಿಷೇಧಿಸಲಾಯಿತು.

ವೃತ್ತಪತ್ರಿಕೆ ನಿಯಂತ್ರಣ ಆಜ್ಞೆ' ಎಂಬ ಮತ್ತೊಂದು ನಿಯಂತ್ರಣ ಆಜ್ಞೆಯನ್ನು ೧೯೫೨ರ ಮೇ ೫ರಂದು ಹೊರಡಿಸಲಾಯಿತು. ನಿರ್ದಿಷ್ಟ ಬೆಲೆಯಲ್ಲಿ ಮಾರಾಟವಾಗುವ ವೃತ್ತಪತ್ರಿಕೆಗಳ ಪುಟಗಳನ್ನು ನಿಗದಿ ಮಾಡಿ ನ್ಯೂಸ್ ಪ್ರಿಂಟಿನ ಬಳಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಈ ಆಜ್ಞೆಯನ್ನು ಹೊರಡಿಸಲಾಯಿತು. ೧೯೫೩ರ ಏಪ್ರಿಲ್‌ನಿಂದ ನ್ಯೂಸ್‌ಪ್ರಿಂಟಿನ ಹಂಚಿಕೆಯನ್ನು ಸಹ ನಿಯಂತ್ರಣಕ್ಕೊಳಪಡಿಸಲಾಯಿತು. ಕಾಲಕಾಲಕ್ಕೆ ಪರಿಷ್ಕರಿಸಿದ, ಪುಟ ನಿರ್ಬಂಧಗಳು ೧೯೫೩ರ ಏಪ್ರಿಲ್‌ನಿಂದ ೧೯೫೩ರ ಜೂಲೈ ವರೆಗೆ ಅತ್ಯಂತ ಕಟ್ಟುನಿಟ್ಟಾಗಿದ್ದವು. ನ್ಯೂಸ್ ಪ್ರಿಂಟಿನ ಪೂರೈಕೆ ಪರಿಸ್ಥಿತಿಯು ಸುಧಾರಿಸಿದ್ದರಿಂದ ನ್ಯೂಸ್ ಪ್ರಿಂಟಿನ ಮೇಲಿನ ನಿಯಂತ್ರಣವನ್ನು ೧೯೫೪ರಿಂದ ತೆಗೆದುಹಾಕಲಾಯಿತು. ೧೯೫೯ರ ಆಗಸ್ಟ್ ತಿಂಗಳಿಂದ ನ್ಯೂಸ್ ಪ್ರಿಂಟನ್ನು 'ಓಪನ್ ಜನರಲ್ ಲೈಸನ್ಸ್' ಮೇಲೆ ಕೊಡಲಾಯಿತು.

೧೯೫೭ರ ಅಕ್ಟೋಬರ್‌ನಲ್ಲಿ ನಡೆದ ಕೇಂದ್ರ ಹಣಕಾಸಿನ ಮಂತ್ರಿ ಶಂಖೆಯ ಉಳಿತಾಯ ಮಂಡಲಿಯ ಸಭೆಯಲ್ಲಿ, ವೃತ್ತ ಪತ್ರಿಕೆಗಳ ಆಕಾರ, ಪ್ರಕಟಿಸಲಾದ ಸರಾಸರಿ ಪುಟಗಳ ಸಂಖ್ಯೆ, ಪ್ರಚಾರ ಮತ್ತು ಪ್ರಕಟಣೆಯ ಅವಧಿ—ಇವುಗಳನ್ನು ಗಣನೆಗೆ ತೆಗೆದುಕೊಂಡು, ಅವುಗಳ ಆಧಾರದ ಮೇಲೆ ವೃತ್ತಪತ್ರಿಕೆಗಳಿಗೆ ನ್ಯೂಸ್ ಪ್ರಿಂಟಿನ ಬೆ ಡಿಕೆಗಳನ್ನು ಲೆಕ್ಕಾಚಾರ ಮಾಡಬೇಕೆಂದು ನಿರ್ಧರಿಸಲಾಯಿತು.

ಆದರಂತೆಯೇ, ನ್ಯೂಸ್ ಪ್ರಿಂಟಿನ ಆಮದಿಗಾಗಿ, ವೃತ್ತಪತ್ರಿಕೆಗಳಿಗೆ ನ್ಯೂಸ್ ಪ್ರಿಂಟಿನ ಅಗತ್ಯತೆಯನ್ನು ನಿರ್ಧರಿಸಲು ನ್ಯೂಸ್ ಪ್ರಿಂಟ್ ವಿಭಾಗವೊಂದನ್ನು ಸ್ಥಾಪಿಸಲಾಯಿತು. ಇದರಲ್ಲಿ ಕೇಂದ್ರ ವಾರ್ತಾ ಮತ್ತು ವ್ಯಸಾರ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿ ಶಾಖೆಗಳಿಗೆ ಸೇರಿದ ಬಿಬ್ಬಂದಿ ಕೆಲಸ ಮಾಡುತ್ತಿರುವರು.

ರಾಷ್ಟ್ರದಲ್ಲಿ ಈಗ ನ್ಯೂಸ್‌ಪ್ರಿಂಟನ್ನು ತಯಾರಿಸುತ್ತಿರುವ ಕಾರಖಾನೆ 'ನೇಪಾ ಮಿಲ್ಸ್' ಒಂದೇ ಒಂದು. ಈ ಕಾರಖಾನೆಯಲ್ಲಿ ೧೯೫೭ರಲ್ಲಿ ೨೫೬೬ ಟನ್ನುಗಳಷ್ಟು ನ್ಯೂಸ್‌ಪ್ರಿಂಟನ್ನು ಉತ್ಪಾದಿಸಲಾಯಿತು ಈ ಉತ್ಪಾದನೆಯು ೧೯೫೫ರಲ್ಲಿ ೧೫೪೪೪ ಟನ್ನುಗಳಿಗೆ ಏರಿತು.

ಒಳದೇಶದ ನ್ಯೂಸ್‌ಪ್ರಿಂಟ್ ಉತ್ಪಾದನೆಯನ್ನು ಅಭಿವೃದ್ಧಿಪಡಿಸಲು ದ್ವಿತೀಯ ಯೋಜನೆಯಲ್ಲಿ ವರ್ಷಕ್ಕೆ ೫೦,೦೦೦ ಟನ್ನುಗಳಷ್ಟು ಸಾಮರ್ಥ್ಯವುಳ್ಳ ಎರಡನೆಯ ನ್ಯೂಸ್‌ಪ್ರಿಂಟ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವ ಕಾರ್ಯಕ್ರಮ ಪೊಂದಿರುವುದು.

ನ್ಯೂಸ್‌ಪ್ರಿಂಟ್‌ನ ತಯಾರಿಕೆಗೆ ಸಂಪ್ರದಾಯಿಕ ಕಚ್ಚಾ ವಸ್ತುಗಳಾದ ಒಂದು ಬಗೆಯ ನೈಸರ್ಗಿಕ ಮರಗಳ ಅಭಾವವಿರುವಾಗ, ರಾಷ್ಟ್ರದಲ್ಲಿ ಅಗಾಧವಾಗಿ ದೊರೆಯುವ ಕಬ್ಬಿನ ಸಿಪ್ಪೆಗಳಂಥ ನಾರಿನ ಕಚ್ಚಾವಸ್ತುಗಳ ಬಳಕೆಗೆ ಗಮನವೀಯಲಾಗುತ್ತಿದೆ.

ನೆಜಾಮ್ ಸಕ್ಕರೆ ಕಾರಖಾನೆಯಲ್ಲಿ ದೊರೆಯುವ ಕಬ್ಬಿನ ಸಿಪ್ಪೆಯನ್ನು ಬಳಸಿಕೊಳ್ಳುವ ಸಲುವಾಗಿ ಎರಡನೆಯ ನ್ಯೂಸ್‌ಪ್ರಿಂಟ್ ಕಾರಖಾನೆಯನ್ನು ಆಂಧ್ರ ಪ್ರದೇಶದ ಶಕ್ಕರ್ ನಗರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಕುಮಾರಿ ಶೀಲ ವಿಲೋಕ್ಸ್‌ರವರು ಬ್ರಿಟಿಷ್ ಹಾರ್ಸ್ ಸೊಸ್ಯಾಟಿಯ ಟ್ರಾಯಲ್‌ನಲ್ಲಿ ಗೆದ್ದು, ರಾಣಿ ಎಲಿಜಬೆತ್‌ರಿಂದ ಹಸ್ತಲಾಘ ಪಡೆಯುತ್ತಿದ್ದಾರೆ.

ಪರಿಚಯ

ಭಾರತಾಂಬೆಯ ವರಸುತ ಆಚಾರ್ಯ ನರೇಂದ್ರದೇವ

ಇವರು ಉತ್ತಮ ಸಾಹಿತಿಗಳೂ ವಕ್ತೃಗಳೂ ರಾಜಶಾಸ್ತ್ರಜ್ಞರೂ ಶಿಕ್ಷಣತಜ್ಞರೂ ಇದ್ದು ವಿಖ್ಯಾತರಾಗಿದ್ದಾರೆ

ದಿವಂಗತ ಆಚಾರ್ಯರು ಶ್ರೀ ನರೇಂದ್ರದೇವ್‌ರು ರಾಷ್ಟ್ರದ ನಿಜವಾದ ಸೇವಕರಾಗೂ ಭಾರತೀಯ ಸಮಾಜವಾದಿ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು. ಇವರು ಉಚ್ಚಮಟ್ಟದ ಶಿಕ್ಷಣಜ್ಞ, ಹಾಗೂ ವಿಶೇಷಜ್ಞರಾಗಿದ್ದರು. ತನ್ನ ಗಂಭೀರ ಅಧ್ಯಯನದ ಮೂಲಕ ರಾಷ್ಟ್ರೀಯ ಆಂದೋಲನ ಹಾಗೂ ಸಮಾಜವಾದದ ಸಂಬಂಧವಾಗಿ ಇವರು ಅನೇಕ ವಿದ್ವತ್ ಪೂರ್ಣ ಭಾಷಣ ಮತ್ತು ಉಪನ್ಯಾಸಗಳನ್ನು ಕೊಟ್ಟಿದ್ದರು. ಇವರ ಈ ಭಾಷಣ ಹಾಗೂ ಉಪನ್ಯಾಸಗಳ ಸಂಗ್ರಹ ಪುಸ್ತಕಗಳ ರೂಪದಲ್ಲಿ ಪ್ರಕಟವಾಗಿದೆ. ಇವು ಆವರ ಸ್ಮೃತಿ ಚಿಹ್ನೆಯಾಗಿವೆ.

ದಿವಂಗತ ನರೇಂದ್ರದೇವರು ಉತ್ತರ ಪ್ರದೇಶದ ಒಂದು ಪಟ್ಟಣದಲ್ಲಿ ೧೮೮೯ರ ಅಕ್ಟೋಬರ ೧೫ರಲ್ಲಿ ಹುಟ್ಟಿದರು. ಇವರ ಶಿಕ್ಷಣವು ಅಲ್ಲಾಹಾಬಾದ್ ಹಾಗೂ ಬನಾರಸಿನಲ್ಲಿ ನಡೆಯಿತು. ಸಂಸ್ಕೃತ ಹಾಗೂ ಭಾರತದ ಪ್ರಾಚೀನ ಇತಿಹಾಸ-ಇನ್ನೆರಡೂ ವಿಷಯಗಳನ್ನು ತೆಗೆದುಕೊಂಡು ಇವರು ಎಂ. ಎ. ಮುಗಿಸಿದರು. ಪ್ರಾರಂಭದಿಂದಲೂ ಇವರ ಒಲವು ರಾಜನೀತಿಯ ಕಡೆಗಿತ್ತು. ೧೯೨೦ರಲ್ಲಿ ಇವರು ವಕಾಲತ್ತನ್ನು ಬಿಟ್ಟು ಅಸಹಕಾರ ಆಂದೋಲನದಲ್ಲಿ ಭಾಗವಹಿಸಿ ತೊಡಗಿದರು. ಇವರ ಒಲವು ರಾಜನೀತಿಯೊಡನೆ ಶಿಕ್ಷಣ ಕ್ಷೇತ್ರದ ಕಡೆಗೂ ಇತ್ತು. ೧೯೨೧ರಿಂದ ಅಂತ್ಯ ಪರ್ಯಂತವೂ ದಾದಾಪಂಥೀಯ ಶಿಕ್ಷಣ ಸಂಸ್ಥೆಯೊಡನೆ ಇವರ ಸಂಬಂಧವಿದ್ದೇ ಇರುತ್ತಿತ್ತು. ಅಸಹಕಾರ ಆಂದೋಲನದ ಬಳಿಕ ೧೯೨೧ರಲ್ಲಿ ಇವರು ಕಾಶಿ ವಿದ್ಯಾಪೀಠದಲ್ಲಿ ಭಾರತೀಯ ಇತಿಹಾಸದ ಪ್ರಾಧ್ಯಾಪಕರಾಗಿ ನಿಯುಕ್ತರಾದುದಲ್ಲದೆ, ೩೮ರಲ್ಲಿ ಆದೇ ವಿದ್ಯಾಪೀಠದ ಪ್ರಿನ್ಸಿಪಾಲರಾದರು. ಕೆಲವೇ ದಿನಗಳ ಬಳಿಕ ಆದೇ ವಿದ್ಯಾಪೀಠದ ಕುಲಪತಿಗಳೂ ಆದರು. ಇದರ ಬಳಿಕ ೪ ವರ್ಷಗಳ ತನಕ ಲಕ್ನೋ ವಿಶ್ವವಿದ್ಯಾಲಯದ ಕುಲಪತಿಯಾಗಿ, ಬಳಿಕ ಕಾಶೀ ವಿಶ್ವವಿದ್ಯಾಲಯದ ಕುಲಪತಿಯಾಗಿ ನಿಯುಕ್ತರಾದರು.

ಇವರು ೧೯೩೪ರಲ್ಲಿ ಉತ್ತರ ಪ್ರದೇಶದ ಕಾಂಗ್ರೆಸ್ ಸಮಿತಿಯ ಸದಸ್ಯರಾದರು. ಇವರು ರಾಷ್ಟ್ರೀಯ ಆಂದೋಲನದ ಸಮಯ, ೪ ಬಾರಿ ಜೈಲು ಯಾತ್ರೆ ಮಾಡಿದುದಲ್ಲದೆ, ೧೯೪೨ರ "ಭಾರತ ಬಿಟ್ಟು ತೊಲಗಿರಿ" ಆಂದೋಲನದಲ್ಲಿ ಪಟ್ಟಣ ಕಾವಲಿನಲ್ಲಿಡಲ್ಪಟ್ಟರು.

ಇವರು ಬೌದ್ಧ ಧರ್ಮದ ವಿಸ್ತೃತವಾದ ಅಧ್ಯಯನವನ್ನು ಮಾಡಿದ್ದರಲ್ಲದೆ, ಬೌದ್ಧ ದರ್ಶನದ ಪ್ರಸಿದ್ಧ ಗ್ರಂಥ—ವಿಶ್ವ ಬಂಧುವಿನಿಂದ ರಚಿಸಲ್ಪಟ್ಟ—« ಅಭಿಧ

(೧೨ನೇ ಪುಟ ನೋಡಿರಿ)

ಅಸ್ತಿ ನೂರಾಟಕ್ಕಿದೆ

ಉಡುಪಿ ತಾಲೂಕು ಹಿರೇಬೆಟ್ಟು ಗ್ರಾಮದ ಬಾಬ್ತು ಆಕ್ಕಿಮನೆ ಮಂಡಿ 4ನೇ, 4ನೇ,30 ಈರೀತಿಯ ಗೇಣಿ ಹಿ.ಟ್ಟುವಳ್ಳಿಯ ಆಸ್ತಿಯು ಒಂದೇ ಲೋಟಾಗಿ, ಯಾ ಪ್ರತ್ಯೇಕವಾಗಿ ಮಾರುವುದಿದೆ-ಖರೀದಿಸುವವರು ಕೆಳಗಿನವರಿಂದ ವ್ಯವಹರಿಸಬಹುದು.

ಹೆಗ್ಡೆ: C/o ನವಯುಗ, ಉಡುಪಿ

ಯಾವ ಮನುಷ್ಯನಿಗಾದರೂ, ಯಾವ ವೇಳೆಯಲ್ಲೂ, ಯಾವುದೇ ಕಾರಣಕ್ಕಾಗಿ ಉಳಿತಾಯಗಳ ಬೆಂಬಲವು ಬೇಕಾಗಬಹುದು. ಆಂತಲೇ ನೀವು ಯೋಗ್ಯವಿರುವ ಉಳಿತಾಯ ಯೋಜನೆಯನ್ನು ಈಗಿಂದೀಗಲೇ ಆನುಸರಿಸುವುದು ಅತೀ ಅಗತ್ಯ. ಇದಕ್ಕಾಗಿ ನಿಮಗೆ ಬೇಕಾದ ಸಲಹೆ-ಸಹಕಾರಗಳನ್ನು ಕೊಡಲು ನಾವು ಸದಾ ಸಿದ್ಧರಿದ್ದೇವೆ!

ಇಂದೇ ವಿಚಾರಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಛೇರಿ: ಉಡುಪಿ (ದ. ಭಾರತ)

NAVAYUGA' WEEKLY is in the list of periodicals and Newspapers approved for use in Secondary Schools as per proceedings Rec. No 466 N/50 date 2-12-1950 of the Director of public Instruction, Madras.

ಆದರ್ಶ ಜೀವನ

ಸ್ವತಂತ್ರ ಪ್ರಜಾಜನರಿಗೆ ೧೫ಜೀವನ ಸೂತ್ರಗಳು

ಜನಪ್ರಿಯ ಪ್ರಧಾನಿ ಶ್ರೀನೆಹರೂರವರಿಂದ ಭಾರತೀಯರಿಗೆ ಕಳಕಳಿಯ ಮನವಿ

೧. ರಾಜಕೀಯ ಭಿನ್ನಾಭಿಪ್ರಾಯಗಳೇನೇ ಇರಲಿ, ಪ್ರತಿಯೊಬ್ಬನೂ ದೇಶದ ರಕ್ಷಣೆಗೂ, ದೇಶದ ಹಿತಸಾಧನೆಗೂ, ಸರ್ವರ ಹಿತಕ್ಕೂ ಐಕ್ಯಭಾವನೆಯಿಂದ ಎಲ್ಲರೊಡನೆ ಬೆರೆತು ಯೋಜನೆಗಳ ಸಿದ್ಧಿಗಾಗಿ ಸಹಕರಿಸಬೇಕು.

೨. ದೇಶದ ಅಭಿವೃದ್ಧಿ ಮತ್ತು ಐಕ್ಯತೆ ಅತಿ ಹೆಚ್ಚಿನ ಪ್ರಾಮುಖ್ಯವನ್ನು ಕೊಡಬೇಕು. ಪ್ರಜೆಗಳು ಜಾತಿ ಮತ ಭಾಷಾ ಮತ್ತು ಪ್ರಾದೇಶಿಕ ಭಿನ್ನತೆಗಳ ಅಂಧಕಾರದಿಂದ ಹೊರಬಂದು, ವಿಶಾಲ ಭಾರತದ ಪ್ರಗತಿಗಾಗಿ ಕಾರ್ಯೋನ್ಮುಖರಾಗಬೇಕು.

೩. ಯಾವ ರೀತಿಯ ಹಿಂಸಾಕೃತ್ಯವೇ ಆಗಲಿ, ಅದನ್ನು ತ್ಯಜಿಸಬೇಕು. ಹಿಂಸೆಯೇ ದ್ವೇಷಕ್ಕೆ ಮೂಲಕಾರಣ. ದ್ವೇಷವು ನುರ್ಗತಿಗೆ ದಾರಿಮಾಡುತ್ತದೆ.

೪. ಸಮಾಜದಲ್ಲಿ ಪ್ರತಿ ವ್ಯಕ್ತಿಗೂ ಸೌಮ್ಯತೆಯನ್ನೂ, ವಿಶಾಲದೃಷ್ಟಿಯನ್ನೂ ಕೊಡುವುದೇ ಮತಧರ್ಮದ ಮುಖ್ಯತತ್ವ ಒಂದು ಮತದವರು ಹೋರ್ಯಡಿಸುವ ಸಂಕುಚಿತ ಭಾವನೆ ಮತ್ತು ಕೀಳು ಪಕ್ಷಪಾತಗಳಿಂದ, ಆ ಮತ ತತ್ವಕ್ಕೇ ಹಾನಿಯುಂಟಾಗುವುದು. ಪರರ ದೃಷ್ಟಿಯಲ್ಲಿ ಅಂತಹ ಮತಕ್ಕೆ ಮನ್ನಣೆಯೂ ದೊರೆಯುವುದಿಲ್ಲ. ನಾವು ನಮ್ಮ ಮತ ತತ್ವಗಳನ್ನು ಗೌರವಿಸುವುದರ ಜತೆಗೆ ಅನ್ಯಮತ ತತ್ವಗಳನ್ನೂ ಗೌರವದಿಂದ ಕಾಣಬೇಕು.

೫. ಸರ್ವರಿಗೂ ಸಮಾನ ವ್ಯಕ್ತಿತ್ವವನ್ನು ದೊರಕಿಸುವುದೇ ನಮ್ಮ ಧ್ಯೇಯವಾಗಿರಬೇಕು. ಬಡವ-ಬಲ್ಲಿದ, ಸವರ್ಣ-ಅಸ್ಪೃಶ್ಯ ಭೇದಗಳೆಲ್ಲವನ್ನೂ ದೂರವಾಡಬೇಕು.

೬. ಒಳ್ಳೆಯ ಪೌರರಾಗಿ, ಸ್ವಾರ್ಥವನ್ನು ತ್ಯಜಿಸಿ, ಸರ್ವರ ಹಿತಕ್ಕಾಗಿ ದುಡಿಯುವುದೇ ನಮ್ಮ ಗುರಿಯಾಗಬೇಕು.

೭. ಸ್ತ್ರೀಯರನ್ನು ಗೌರವದಿಂದಲೂ, ಏಕೀ ಮನೋಭಾವದಿಂದಲೂ ಕಾಣಬೇಕು. ಅವರನ್ನು ಶೋಷಾದಲ್ಲಿಡುವುದಾಗಲೀ, ವಿಕಾಂತದಲ್ಲಿಡುವುದಾಗಲೀ ಮಾಡದೆ, ವಿವಿಧ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಬೇಕು.

೮. ಮಕ್ಕಳನ್ನು ಪ್ರೇಮದಿಂದಲೂ, ನಯದಿಂದಲೂ ಬೆಳೆಸಬೇಕು. ಅವರನ್ನು ಹೊಡೆಯುವುದಾಗಲೀ, ಬೈಯ್ಯುವುದಾಗಲೀ ಮಾಡಕೂಡದು.

೯. ಯಾವ ತರದ ಮಾದಕ ದ್ರವ್ಯಗಳನ್ನೂ ಸೇವಿಸಕೂಡದು.

೧೦. ಗ್ರಾಮೋದ್ಯೋಗಗಳಿಗೂ, ಗೃಹ ಕೈಗಾರಿಕೆಗಳಿಗೂ ಉತ್ತೇಜನವಿತ್ತು, ಸಾಧ್ಯವಾದಷ್ಟು ಮಟ್ಟಿಗೆ ಪಿಡ್ಡರು ಒಟ್ಟೆಯನ್ನೇ ಉಪಯೋಗಿಸಬೇಕು.

೧೧. ಆಹಾರ ಪದಾರ್ಥಗಳಿಗೆ, ಮತ್ತಿತರ ವಸ್ತುಗಳಿಗೆ ಬೆರಕೆಮಾಡಿ ಕೆಡಿಸುವುದನ್ನು ಸರ್ವಥಾ ಮಾಡಕೂಡದು.

೧೨. ಲಂಚಗಳನ್ನು ಕೊಡುವುದನ್ನಾಗಲೀ ಅಥವಾ ತೆಗೆದುಕೊಳ್ಳುವುದನ್ನಾಗಲೀ ಮಾಡಕೂಡದು. ಇದು ಕೊಡುವವರಿಗೆ ಮತ್ತು ತೆಗೆದುಕೊಳ್ಳುವವರಿಬ್ಬರಿಗೂ ಕೆಡುಕನ್ನುಂಟುಮಾಡುವುದು. ಇಂತಹ ಹೇಯ ಕೃತ್ಯಗಳನ್ನು ಕಠಿಣ ರೀತಿಯಿಂದ ತಡೆಗಟ್ಟಬೇಕು.

೧೩. ಗೃಹವನ್ನೂ, ರಸ್ತೆಯನ್ನೂ, ಗ್ರಾಮವನ್ನೂ ಶುಭ್ರವಾಗಿಡಬೇಕು.

೧೪. ರಾಷ್ಟ್ರದಲ್ಲಿ ಕಾರ್ಯಗತವಾಗುತ್ತಿರುವ ಪಂಪವಾರ್ಷಿಕ ಯೋಜನೆ, ಸಾಮೂಹಿಕ ಅಭಿವೃದ್ಧಿ ಯೋಜನೆ ಮುಂತಾದ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜನ್ಮಾಗಿ ಅರಿತುಕೊಂಡು, ಈ ಕಾರ್ಯಕ್ರಮಗಳನ್ನು ಮತ್ತಷ್ಟು ಶಕ್ತಿಯುತವಾಗಿ ಮುಂದುವರಿಸಲು ಸಹಕರಿಸಿ, ದೇಶದ ಉನ್ನತಿಗಾಗಿ ಶ್ರಮಪಡಬೇಕು.

೧೫. ಶ್ರವಣಜೀವಿಯು ಉಯೋಗವನ್ನು ಗೌರವದಿಂದ ಕಾಣಬೇಕು ಮತ್ತು ಪ್ರತಿಯೊಬ್ಬನೂ ರಚನಾತ್ಮಕ ಕಾರ್ಯಗಳಿಗಾಗಿ ಯಾವುದಾದರೊಂದು ರೀತಿಯ ಶರೀರ ಶ್ರಮವನ್ನಾದರೂ ಕೊಂಡ ಕಾರ್ಯವನ್ನು ಕೈಕೊಳ್ಳಬೇಕು.

ಪ್ರಗತಿ ಪಥ

ಅಗ್ನಿ ಶಮನ ಸೇನೆಯ ತರಬೇತಿಯ ಕಾಲೇಜು

ಸ್ವಾತಂತ್ರ್ಯ ಪ್ರಾಪ್ತ್ಯನಂತರ ಭಾರತದ ಸಾಮಾನ್ಯ ಪಟ್ಟಣಗಳಿಗೂ ಅಗ್ನಿಶಮನ ಸೇವೆಯನ್ನು ಒದಗಿಸಲಾಗುತ್ತಿದೆ.

ಈ ವರ್ಷದ ಜೂಲೈ ತಿಂಗಳಲ್ಲಿ ಭಾರತದ ರಾಷ್ಟ್ರೀಯ ಅಗ್ನಿ ಶಮನ ಸೇವಾ ಕಾಲೇಜು ಅಸ್ತಿತ್ವಕ್ಕೆ ಬಂದು ಎರಡು ವರ್ಷಗಳು ತುಂಬಿದವು. ಮೊದಲನೆಯ ವರ್ಷ ಈ ಕಾಲೇಜು ರಾಮಪುರದಲ್ಲಿರುವ ಹಿಂದಿನ ಸಂಸ್ಥಾನ ಸೇನೆಗಳ ಬ್ಯಾರಕ್‌ಗಳಲ್ಲಿ ನಡೆಯುತ್ತಿತ್ತು. ಕಳೆದ ವರ್ಷ ಜೂನ್ ತಿಂಗಳಲ್ಲಿ ಈ ಕಾಲೇಜನ್ನು ನಾಗಪುರದಲ್ಲಿನ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.

ಭಾರತ ವಾತ್ಸಲ್ಯೇ ಇಲ್ಲದೆ ಇಡೀ ಆಗ್ನೇಯ ಏಷಿಯಾದಲ್ಲಿಯೇ ಮೊಟ್ಟ ಮೊದಲನೆಯ ಸಲ ಸ್ಥಾಪಿಸಲ್ಪಟ್ಟಿರುವ ಈ ಅಗ್ನಿಶಮನ ಸೇವಾ ಕಾಲೇಜು ಕಳೆದ ಎರಡು ವರ್ಷಗಳಲ್ಲಿ ಮಹತ್ವಪೂರ್ಣ ಪ್ರಗತಿ ಸಾಧಿಸಿದೆ. ಅಗ್ನಿಶಮನ ಕಾರ್ಯಕ್ಕೆ ಸಂಬಂಧಿಸಿದ ಉದ್ಯೋಗಿಗಳಿಗೆ ವ್ಯವಸ್ಥಿತ ರೀತಿಯಲ್ಲಿ ಶಿಕ್ಷಣ ನೀಡುತ್ತಿರುವ ಸಂಸ್ಥೆ ಇದೊಂದೇ. ಈ ಕಾಲೇಜಿನಲ್ಲಿ ಒಂದು ವ್ಯವಸ್ಥಿತ ಕಾರ್ಯಕ್ರಮದಂತೆ ಶಿಕ್ಷಣ ನೀಡುವುದೇ ಅಲ್ಲದೆ ಅಗ್ನಿಶಮನ ಸೇನೆಗಳಿಗೆ ಸಂಬಂಧಿಸಿದಂತೆ ಹೊಸಹೊಸ ವಿಧಾನಗಳ ಬಗ್ಗೆ ಸಂಶೋಧನೆಯನ್ನು ನಡೆಸಲಾಗುತ್ತಿದೆ.

ರಾಷ್ಟ್ರ ಸರ್ಕಾರವು ದೇಶದ ಆಡಳಿತ ಸೂತ್ರಗಳನ್ನು ವಹಿಸಿಕೊಂಡ ಸಮಯದಲ್ಲಿ, ಕೇವಲ ಕೆಲವು ದೊಡ್ಡ ಕೈಗಾರಿಕಾ ನಗರಗಳು ಮತ್ತು ರೇವು ಪಟ್ಟಣಗಳಲ್ಲಿ ವ್ಯವಸ್ಥಿತ ರೀತಿಯ ಅಗ್ನಿಶಮನ ಸೇವಾ ವಿಭಾಗಗಳಿದ್ದುದು ವ್ಯಕ್ತವಾಗಿತ್ತು. ಉಳಿದ ಸ್ಥಳಗಳಲ್ಲಿ ಅಗ್ನಿಶಮನ ಸೇವಾ ವಿಭಾಗಗಳಿದ್ದಾಗ್ಯೂ ಅವು ಅಸಮರ್ಪಕವಾಗಿದ್ದವು. ಅಸಂಖ್ಯಾತ ಊರುಗಳು ಮತ್ತು ಗ್ರಾಮಗಳಲ್ಲಿ ಅಗ್ನಿಶಮನ ಸೇವಾ ವಿಭಾಗಗಳೇ ಇರಲಿಲ್ಲ.

ದೇಶದ ಕೈಗಾರಿಕಾಭಿವೃದ್ಧಿಯೊಂದಿಗೆ ಹೊಸದಾಗಿ ಊರುಗಳು ಮತ್ತು ಸಾಮುದಾಯಿಕ ಕೇಂದ್ರಗಳು ಸ್ಥಾಪನೆಗೊಂಡವು ಜೊತೆಗೆ ಬೆಂಕಿಯಿಂದ ಅನಾಹುತಗಳು ಸಂಭವಿಸುವುದೂ ಹೆಚ್ಚಾಯಿತು. ಸತ್ವರವಾಗಿ ದೇಶದಲ್ಲಿ ಅಗ್ನಿಶಮನ ಸೇವೆಗಳ ಸ್ಥಿತಿಗತಿಗಳನ್ನು ಸಮೀಕ್ಷಿಸುವುದು ಅಗತ್ಯವಾಗಿ ಪರಿಣಮಿಸಿತು.

ಸರ್ಕಾರದವರು ೧೯೫೦ರ ಮೇ ತಿಂಗಳಲ್ಲಿ ಅಗ್ನಿಶಮನ ಸೇವೆಯ ಪರಿಣತರ ಸಮಿತಿಯೊಂದನ್ನು ರಚಿಸಿದರು ಈ ಸಮಿತಿಗೆ ದೇಶದಲ್ಲಿನ ಪ್ರಮುಖ ಅಗ್ನಿಶಮನ ಸೇವಾ ವಿಭಾಗಗಳ ಮುಖ್ಯಸ್ಥರನ್ನು ಸೇರಿಸಿಕೊಳ್ಳಲಾಯಿತು. ಅಗ್ನಿ ಶಮನ ಸೇವಾ ಕಾರ್ಯದಲ್ಲಿ ನಿರತರಾಗಿರುವ ಉದ್ಯೋಗಿಗಳಿಗೆ ಸುವ್ಯವಸ್ಥಿತ ಶಿಕ್ಷಣ ನೀಡುವ ಸಂಸ್ಥೆಯಾವುದೂ ದೇಶದಲ್ಲಿ ಇಲ್ಲವಾದ್ದರಿಂದ ಅಗ್ನಿಶಮನ ಸೇವಾ ಉದ್ಯೋಗಿಗಳ ಶಿಕ್ಷಣಕ್ಕಾಗಿ ಕೇಂದ್ರ ಸಂಸ್ಥೆಯೊಂದನ್ನು ಸ್ಥಾಪಿಸುವ ವಿಚಾರಕ್ಕೆ ಈ ಸಮಿತಿಯು ಅಗ್ರಸ್ಥಾನವನ್ನಿತ್ತಿತು. ಸ್ವರಿತವಾಗಿ ವಿಕಾಸಗೊಳ್ಳುತ್ತಿರುವ ಅಗ್ನಿಶಮನ ಸೇವಾ ವಿಭಾಗಗಳಿಗೆ ಅಧಿಕ ಸಂಖ್ಯೆಯ ಸುರಿತ ಸಿಬ್ಬಂದಿ ಅಗತ್ಯವಿರುವುದರಿಂದ ಕೇಂದ್ರ ಶಿಕ್ಷಣ ಸಂಸ್ಥೆಯ ಸ್ಥಾಪನೆ ಅತ್ಯಾವಶ್ಯಕವೆಂದು ಸಮಿತಿ ಭಾವಿಸಿತು.

ರಾಷ್ಟ್ರೀಯ ಅಗ್ನಿ ಶಮನ ಸೇವಾ ಕಾಲೇಜು ಈ ಗುರಿಗಳನ್ನು ಸಾಧಿಸಲು ಸಾಧ್ಯವಾಗುವಂತೆ ರೂಪಿಸಲ್ಪಟ್ಟಿದೆ. ಕಾಲೇಜು ಸುಸಜ್ಜಿತಗೊಂಡಿದೆ. ಅನುಭವ ಶಾಲಿಗಳಾದ ಕಮಾಂಡೆಂಟರು ಮತ್ತು ನುರಿತ ಶಿಕ್ಷಕರ ಮಾರ್ಗದರ್ಶನದಲ್ಲಿ ಈ ಕಾಲೇಜು, ಭೂಸೇನೆ ಮತ್ತು ಪೋಲೀಸ್ ಸಿಬ್ಬಂದಿಗೆ ಶಿಕ್ಷಣ ನೀಡುವ ಸಂಸ್ಥೆಗಳಂತೆ ಪ್ರಥಮ ಶ್ರೇಣಿಯ ಶಿಕ್ಷಣ ಸಂಸ್ಥೆಯಾಗಿ ಪರಿಣಮಿಸಿದೆ.

ಕಾಲೇಜಿಗೆ ಸೇರಿದಂತೆ ವಿದ್ಯಾರ್ಥಿನಿಲಯವೊಂದಿದೆ. ಈ ವಿದ್ಯಾರ್ಥಿನಿಲಯದಲ್ಲಿ ೪೦ ಸುಸಜ್ಜಿತಗೊಂಡ ಕೊಟ್ಟಡಿಗಳಿವೆ.

(ಉಸೇ ಪುಟನೋಡಿರಿ.)



ಒಣ ಭೂಮಿಯಲ್ಲಿ ಸುಡುಬಿಸಿಲಿನಲ್ಲಿ ಬೆಳೆದ ಮರವು ತಾನು ಸಂಕಟಪಡುವುದಾದರೂ ತನ್ನನ್ನಾಶ್ರಯಿಸಿದವರಿಗೆ ನೆಳಲನ್ನಿತ್ತು ರಕ್ಷಿಸುತ್ತದೆ ಸಮಾಜದಲ್ಲಿದ್ದು ಸಮಾಜದ ನಿಂದೆಗೆಗುರಿಯಾಗಬೇಕಾಗಿ ಬಂದರೂ ಸಮಾಜ ಸೇವೆಯ ಕರ್ತವ್ಯಕ್ಕೆ ಎಂದಿನವನು ಚ್ಯುತಿಯನ್ನು ತಂದೊಡ್ಡ ಬಾರದು.

NAVAYUGA

Founder:—

A. B. SHETTY,

Former Minister for Public Health Govt. of Madras & Govt. of Mysore.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩ಲ	೬-೧೧-'೩೮ಲ	೯

ಹೈದರಾಬಾದ ಸಮ್ಮೇಳನ

ಹೈದರಾಬಾದದಲ್ಲಿ ಇತ್ತೀಚೆಗೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಕೆಲವು ವಿಷಯಗಳಲ್ಲಿ ಪ್ರಮುಖವಾಗಿದೆ. ಮುಂದಿನ ಅಧಿವೇಶನವು ಬರುವ ಜನವರಿಯಲ್ಲಿ ನಾಗಪುರದಲ್ಲಿ ಸೇರಲಿದ್ದು, ಆ ಅಧಿವೇಶನದಲ್ಲಿ ಪ್ರಸ್ತುತದ ಅಧಿವೇಶನದಲ್ಲಿ ಗೊತ್ತಾದ ಹಾಗೂ ನಿರ್ಧಾರಿತವಾದ ವಿಷಯಗಳ ಕುರಿತು ಒಂದು ದೃಢ ನಿರ್ಧಾರಕ್ಕೆ ಬರಲು ಅನುಕೂಲವಾಗುವುದು.

ದೇಶದ ಮುಖ್ಯ ಸಮಸ್ಯೆಗಳಲ್ಲಿ ಆಹಾರದ ಸಮಸ್ಯೆಯೂ ಒಂದು. ಈ ಸಮಸ್ಯೆಯ ಕುರಿತಾಗಿ, ನಾತಷ್ಟು ಚರ್ಚೆಯು ನಡೆದು, ೧೫ ಮಂದಿ ಸದಸ್ಯರುಳ್ಳ ಒಂದು ಸಮಿತಿಗೆ ಈ ವಿಷಯವನ್ನು ವಿಮರ್ಶಿಸಿ ವರದಿಯನ್ನೊಪ್ಪಿಸುವಂತೆಯೂ ಈ ವರದಿಯನ್ನು ಮುಂದಿನ ಅಧಿವೇಶನದಲ್ಲಿ ಚರ್ಚಿಸಿ, ಆ ಮೇಲಿನ ಧೋರಣೆಯನ್ನು ರೂಪಿಸಬೇಕೆಂದೂ ಗೊತ್ತಾಯಿತು. ದೇಶದಲ್ಲಿ ಕಳೆದ ಕೆಲವಾರು ವರ್ಷಗಳಿಂದ ಹಲವಾರು ಅಭಿವೃದ್ಧಿ ಯೋಜನೆಗಳು ಕೈಗೂಡಿದರೂ ನೀರಾವರಿ ಸೌಕರ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವಂತಾದರೂ, ಅಂಕೆಸಂಖ್ಯೆಗಳಿಂದ ಆಹಾರದ ಪರಿಸ್ಥಿತಿಯು ಸುಧಾರಿಸಿರುವುದೆಂದು ತಿಳಿದುಬರುವುದಾದರೂ ವಾಸ್ತವಿಕವಾಗಿ ಯಾವುದೇ ಪ್ರಗತಿಯು ತೋರದಿರುವುದಕ್ಕೆ ಕಾರಣವನ್ನೂ ಅದಕ್ಕೆ ಸರಿಹಾರೋಪಾಯವನ್ನೂ ಕಂಡುಹಿಡುಕೆ ಈ ಸಮಿತಿಯು ವರದಿಯನ್ನೊಪ್ಪಿಸಬೇಕು. ಈ ವರದಿಯನ್ನು ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸ್ ಸಮಿತಿಯು ಪರ್ಯಾಲೋಚಿಸಿ ಈ ಬಿಕ್ಕಟ್ಟನ್ನೆದುರಿಸಲು ಯೋಗ್ಯ ಕಾರ್ಯಕ್ರಮವನ್ನು ರೂಪಿಸುವುದು. ಏಕೆಂದರೆ, ಸ್ವಾತಂತ್ರ್ಯ ಪಡೆದು ಇಷ್ಟು ಕಾಲವು ಗತಿಸಿ ಹೋದರೂ, ಆಹಾರ ಸ್ವಾವಲಂಬನೆಗಾಗಿ ನಾವು ನಾನಾ ವಿಧದ ಯೋಜನೆಗಳನ್ನೂ ಜಳವಳಿಗಳನ್ನೂ ಪ್ರಾರಂಭಿಸಿದ್ದರೂ ನಮ್ಮ ಆಹಾರ ಪರಿಸ್ಥಿತಿಯು ಇನ್ನೂ ಗಂಭೀರವಾಗಿಯೇ ಇದೆಯೆಂಬುದರ ಕಡೆಗೆ ಕೇಂದ್ರ ಸರಕಾರದ ಗಮನವು ಹರಿದುದೂ ಈ ಬಗ್ಗೆ ತೀವ್ರ ಪರ್ಯಾಲೋಚನೆ ನಡೆಯುವುದೂ ಆತ್ಯಗತ್ಯ.

ಕೇರಳದ ಕುರಿತಾಗಿ ವಿಚಾರ ವಿನಿಮಯ ನಡೆಯಿತಾದರೂ ಅಲ್ಲಿ ಕೇಂದ್ರವು ಹೆಸ್ತಕ್ಷೇಪ ಮಾಡುವುದಕ್ಕೆ ಅಸಮ್ಮತಿಯನ್ನು ವ್ಯಕ್ತಪಡಿಸಿದುದು ಕಾಂಗ್ರೆಸಿನ ನೀತಿ ಧೋರಣೆಗಳಿಗೆ ಗೌರವಾಸ್ಪದವಾಗಿದೆ. ಮುಂಬಯಿ ರಾಜ್ಯದ ಎಲ್ಲ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳನ್ನೂ ಒಂದುಗೂಡಿಸಿ, ಒಂದು ರಾಜ್ಯಕ್ಕೆ ಒಂದೇ ಪ್ರಾದೇಶಿಕ ಸಮಿತಿಯಿರುವಂತೆಗೈದುದು ಸಮರ್ಪಕವಾಗಿದೆ. ಮೈಸೂರು ರಾಜ್ಯದಲ್ಲಿ ಕೆ. ಪಿ. ಸಿ. ಸಿ.ಯನ್ನು ಇದಕ್ಕೆ ಮೊದಲೇ ರದ್ದುಪಡಿಸಿ ಈ ನ್ಯಾಯವನ್ನು ಆ ನುಸರಿಸಲಾಗಿದ್ದರೂ ಬೊಂಬಾಯಿಯ ಕುರಿತು ಸ್ವಲ್ಪ ವಿಲಂಬವಾಯಿತು. ದ್ವಿಭಾಷಾ ಮುಂಬಯಿ ರಾಜ್ಯವನ್ನು ಒಡೆಯುವ ಸೂಚನೆಸಿ ಜಳವಳಿ, ಘೋಷಣೆ ಇತ್ಯಾದಿಗಳು ಪ್ರಬಲವಾಗುತ್ತಿರುವ ಕಾಲದಲ್ಲಿ ಕಾಂಗ್ರೆಸ್ಸಿನ ತಿಪ್ಪೆನ್ನು ಕಾಪಾಡಿಕೊಳ್ಳುವ ದೂರದರ್ಶಿತನದಿಂದ ಈ ಬದಲಾವಣೆಯು ಈಗ ಮುಂಬಯಿಯಲ್ಲಾಯಿತೆಂದು ಹೇಳಬಹುದು. ಜಗತ್ತಿನ ಶಾಂತಿಯು ಅಲ್ಲೋಲಕಲ್ಲೋಲವಾಗುತ್ತಿರುವ, ಅಲ್ಲಲ್ಲಿ ಬಿಕ್ಕಟ್ಟು ಉದ್ಭವಿಸುತ್ತಿರುವ ಈ ಸಂಧಿಕಾಲದಲ್ಲಿ ಅಣ್ವಸ್ತ್ರ ನಿರ್ಬಂಧನೆಗೆ ಬೆಂಬಲವಿತ್ತುದೂ ಮಹತ್ವದ್ದಾಗಿದೆ. ತೃತೀಯ ಪಂಚವಾರ್ಷಿಕ ಯೋಜನೆಯ ಬಾಹ್ಯ ರೇಖೆಗಳ ಬಗ್ಗೆ ಚರ್ಚೆ ನಡೆದು ಈ ಯೋಜನೆಯು ಅಳಂತ ವಿಶಾಲವೂ, ವಿಸ್ತೃತವೂ ಆಕಾಂಕ್ಷಾಪೂರ್ಣವೂ ಆಗಿರುವುದರಿಂದ, ಈ ಕುರಿತಾಗಿ ಸಮಾಲೋಚನೆಯು ತೀರ ಅವಶ್ಯವೆನಿಸಿದುದರಿಂದ, ಯೋಜನೆಯಲ್ಲಿ ಸಾಧಿಸಿಬೇಕಾದ ಸಾಮಾಜಿಕ ಮತ್ತು ಆರ್ಥಿಕ ಧ್ಯೇಯಗಳನ್ನು ಸೂಚಿಸಲು ಒಂದು ಸಮಿತಿಯನ್ನೂ ಕಾಂಗ್ರೆಸ್ಸು ಸಮ್ಮೇಳನ ರಚಿಸಿತು.

ಎಲ್ಲವುಗಳಿಗಿಂತ ಏಕಾವಧಿಗಿಂತ ಅಧಿಕವಾಗಿ ಒಂದೇ ಸನನೆ ಜಾರೂಬ್ಬರಾದರೂ ಕಾಂಗ್ರೆಸ್ ಅಧ್ಯಕ್ಷ ಪದವಾ ಕಾರ್ಯದರ್ಶಿಯಾಗಿ ಆಯಿಯಬಾರದು ಎಂಬ ಪ್ರಸಿದ್ಧಿಯೇನೂ ಇರಲಿಲ್ಲ ಎಂಬಾಗ ಅಪ್ರಸಿದ್ಧವೂ ತನ್ನ ಶಕ್ತಿ ಸಂವೇದನೆಗಳಿಂದ ದಕ್ಷ ಪದವನ್ನು ಸಿರ್ವಹಿಸಬಲ್ಲ ನೆನ್ನೆಬಹುದು ಆದುದರಿಂದ, ಹೊಸ ಹೊಸ ಉತ್ಸಾಹೀ ಕಾರ್ಯದರ್ಶಿಗಳನ್ನು ಕಾಂಗ್ರೆಸಿಗರು, ಅವರು ಯಾವ ಭಾಗ, ರಾಜ್ಯ, ಭಾಷೆಗಳಿಗೇನೇ ಸೇರಲಿ, ಅವಕಾಶ ಪಡೆಯುವಂತೆ ಕಾರ್ಯವಿಧಾನವನ್ನು ರೂಪಿಸಬೇಕಾದುದು ಅಗತ್ಯ. ಇಂದು ಕಾಂಗ್ರೆಸ್ ಪದಾಧಿಕಾರಿಗಳಿಗೆ ಬಂದ ಈ ನಿಯಮವು ಮುಂದೆ ಮಂತ್ರಿಮಂಡಲಗಳಿಗೂ ಅನ್ವಯೀಸುವುದೇ ಎಂಬ ಸಂದೇಹ ನಮಗಿತ್ತು ಹುಟ್ಟುವುದಕ್ಕೂ ಅವಕಾಶವಿದೆ.

ಅಂತೂ ಕಾಂಗ್ರೆಸ್ಸಿನ ಈ ಹೈದರಾಬಾದದ ಸಮ್ಮೇಳನವು ಯಶಸ್ವಿಯಾಗಿ ಮುಕ್ತಾಯಗೊಂಡಿತು. ಆಗ್ನೇಯ ಹಾಗೂ ದಕ್ಷಿಣ ಏಶ್ಯಾದ ಇತ್ತೀಚಿನ ರಾಜಕೀಯ ಪರಿಸ್ಥಿತಿ ಪರಿವರ್ತನೆಯು ಭಾರತದ ಮೇಲೆ ಬೀರಿದ ಪರಿಣಾಮಗಳನ್ನೆದುರಿಸುವುದಕ್ಕೆ ಈ ಸಮ್ಮೇಳನವು ಕೊಂಚ ಮುಟ್ಟಿನ ಮಾರ್ಗ ಪ್ರದರ್ಶನಮಾಡಿತು.

ಸಂಕ್ಷಿಪ್ತ ಸುದ್ದಿಗಳು

ರಾಷ್ಟ್ರಭ್ರಾತೃಕಾಂಡೋಲನ

ಪಂಡಿತ ಜವಾಹರಲಾಲ ನೆಹೂರವರು ಹೈದರಾಬಾದಿನ ಕಾಂಗ್ರೆಸ್ಸು ಸಮ್ಮೇಳನದಲ್ಲಿ ಭಾಗವಹಿಸಿ ಬರೋಡೆಕ್ಕೆ ಸಂದರ್ಶನವಿತ್ತರು. ಅಲ್ಲಿ ಸಂಯುಕ್ತ ಮಹಾರಾಷ್ಟ್ರ ಸಮಿತಿ, ಗುಜರಾತ ಪರಿಷತ್ತು ಮೊದಲಾದುವುಗಳ ನೇತೃತ್ವದಲ್ಲಿ ಆವರೆದುರು ಮತಪ್ರದರ್ಶನವು ಮಾಡಲಾಯಿತು ಈಗ ದ್ವಿಭಾಷಾ ಘಟಕವಾಗಿರುವ ಮುಂಬಯಿಯನ್ನು ಏಕಭಾಷಾ ರಾಜ್ಯಗಳಾಗಿ ಒಡೆಯ ಬೇಕೆಂಬುದೇ ಆವರ ಬೇಡಿಕೆಯಿತ್ತು. ಈ ಮತಪ್ರದರ್ಶನ, ಘೋಷಣೆಗಳನ್ನು ಉಲ್ಲೇಖಿಸುತ್ತ ಪಂಡಿತ ನೆಹೂರವರು ಭಾಷಾವಾರು ರಾಜ್ಯಸ್ಥಾಪನೆಯ ಉದ್ದೇಶವು ಕೇವಲ ಆಡಳಿತೆಯನ್ನು ಸುಲಭ ಹಾಗೂ ಸರಳವಾಗುವಂತೆ ಮಾತ್ರ ಜನರಿಗೆ ಸಾಧ್ಯವಾದಷ್ಟು ಹೆಚ್ಚು ಪ್ರಯೋಜನಗಳು ದೊರಕುವಂತೆ ಘಟಕಗಳನ್ನು ನಿರ್ಮಿಸುವುದೇ ಆಗಿದೆ. ನಿರ್ಧಾರ ಮಾಡುವುದು ಮಹತ್ವದ ಪ್ರಶ್ನೆಯಲ್ಲವಾದರೂ ಒಂದು ಸಲ ನಿರ್ಧಾರ ಮಾಡಿಯದನ್ನು ಪುನಃ ಬದಲಾವಣೆ ಗೊಳಿಸುವುದೆಂದರೆ, ಅದು ಅಷ್ಟು ಸುಲಭವೆಂದು ತಿಳಿಯ ಬಾರದು. ಸಂಕುಚಿತತೆ ಭಾಷಾಭಿನ್ನತೆಯ ದೋಷಗಳು ಈಗಾಗಲೇ ಬಲಿತಿದ್ದು, ಜನತಾ ಪ್ರತಿನಿಧಿ ಸಭೆಯಾದ ಪಾರ್ಲಿಮೆಂಟು ಒಂದು ಬಾರಿ ಗೊತ್ತು ಮಾಡಿದುದನ್ನು ತಪ್ಪಿಸುವುದಕ್ಕೆ ಪ್ರೇರಣೆ ಮಾಡುವುದೆಂದರೆ, ಅದು ರಾಷ್ಟ್ರೀಯ ಮನೋವೃತ್ತಿಯಾಗಿದೆ. ಎಲ್ಲ ಸಮಸ್ಯೆಗಳನ್ನೂ ಸಾಂವಿಧಾನಿಕ ವಿಧಾನಗಳಿಂದ ಹಾಗೂ ಪ್ರಜಾಪ್ರಭುತ್ವದ ತತ್ವಗಳಿಗೆ ಚ್ಯುತಿಯಿರದಂತೆ ಪರಿಹರಿಸಿಕೊಳ್ಳಬೇಕು ಎಂದು ಮುಂತಾಗಿ ಹೇಳಿದರು. ಒಂದುಗಂಟೆ ಪ್ರಧಾನಿವರ್ಯರು ೧೯೦ ನಿಮಿಟುಗಳ ವರೆಗೆ ಶುಂಬಿದ ಉತ್ಸಾಹದಿಂದ ಭಾಷಣ ಮಾಡುತ್ತಿರುವಾಗ, ಅದೇ ಸಮಯದಲ್ಲಿ ಈ ಸ್ಥಳದಿಂದ ಒಂದರ್ಧ ಮೈಲು ದೂರದಲ್ಲಿ ಏಕ ಭಾಷೀಯ ರಾಜ್ಯಕ್ಕೆ ಬೆಂಬಲ ಸೂಚಿಸುವ ಗೊತ್ತುವಳಿಯೊಂದನ್ನು ಅಧಿಕ ಸಂಖ್ಯಾಕ ಗುರುರಾಜ್ಯ ಮಂರಾರೀ ಜನರು ಬಹಿರಂಗ ಸಭೆಯಲ್ಲಿ ಸ್ವೀಕರಿಸಿದರು. ಈ ಸಭೆಗೆ ಸುಮಾರು ೪೮ ಸಾವಿರ ಜನರು ಆಗಮಿಸಿರುವರೆಂದು ವರದಿಯಾಗಿದೆ.

ಇಂಡಿಯನ್ ಎಕ್ಸ್‌ಪ್ರೆಸ್ ಬಳಗ

ನುದ್ರಾಸದಿಂದ ಪ್ರಕಟವಾಗುವ 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತಿತರ ಸಹ ಪತ್ರಿಕೆಗಳ ಪ್ರಕಟಣೆಯನ್ನು ದಶಂಬರ ಒಂದನೆಯ ತಾರೀಕಿನಿಂ ನಿಲ್ಲಿಸಲಾಗುವುದೆಂದು ಅಧಿಕೃತವಾಗಿ ತಿಳಿದು ಬಂದಿದೆ. ಇತ್ತೀಚೆಗೆ ಪತ್ರಿಕೆಯ ಕಛೇರಿಯಲ್ಲಿ ನಡೆದ ಮುಷ್ಕರಾದಿಗಳಿಂದ ಇನ್ನು ಮುಂದೆ ಈ ಪತ್ರಿಕೆಗಳನ್ನು ಮುತ್ತಾ ಮುಂದುವರಿಸುವದು ದುಸ್ಸಾಧ್ಯವೆಂದು ಆಡಳಿತೆ ಮಂಡಳಿಯವರು ನಿರ್ಧರಿಸಿ ಈ ಅಂತಿಮೋಪಾಯಕ್ಕೆ ಬಂದಿದ್ದಾರೆ. ಇತ್ತೀಚೆಗೆ ಕೆಲಸದಿಂದ ತೆಗೆದುಹಾಕಲ್ಪಟ್ಟ ೧೬ ಜನರನ್ನು ತಿರುಗಿ ತೆಗೆದುಕೊಳ್ಳಬೇಕು, ತಿಟ್ಟೆ ಬತ್ತೆ ಮತ್ತು ಬೋನಸ್ಸು ಕೊಡಬೇಕು ಎಂದು ಕೇಳಿಕೊಂಡು ಮತ್ತು ಔದ್ಯೋಗಿಕ ನ್ಯಾಯ ಮಂಡಳಿಯ ಏತೀರ್ಮಾನಗಳ ವಿರುದ್ಧ ಆಡಳಿತ ವರ್ಗವು ವರಿಷ್ಠ ನ್ಯಾಯಾಲಯಕ್ಕೆ ಅಪೀಲು ಮಾಡಲು ಮುಂದುವರಿದಿದ್ದು, ಆಡಳಿತೆ ವರ್ಗದ ಈ ಕ್ರಿಯೆಯನ್ನು ವಿರೋಧಿಸಿ "ಇಂಡಿಯನ್ ಎಕ್ಸ್‌ಪ್ರೆಸ್" ಪಂಗಡದ ವಿವಿಧ ಪತ್ರಿಕೆಗಳ ಕೆಲಸಗಾರರು ಕಳೆದ ೧೫ ದಿನಗಳಿಂದ ಮತಪ್ರದರ್ಶನವನ್ನು ನಡೆಸುತ್ತಿದ್ದಾರೆ.

ದೇವರು ಕೊಟ್ಟರೂ ಪೂಜಾರಿ ಬಿಡ

ಸ್ವೀಡನ್ನಿನ ನೋಬೆಲ್ ಪಾರಿತೋಷಕ ಸಮಿತಿಯು ರಹಸ್ಯದ ನಿರ್ಣಯಿಸಿದ್ದ ಲೇಖಕರಾದ ಶ್ರೀ ಬೋರಿಸ್ ಪ್ಯಾಸ್ಟರ್‌ನಾಕರಿಗೆ ಸಾಹಿತ್ಯ ಪಾರಿತೋಷಕವನ್ನು ಕೊಡಮಾಡಿದೆ. ಈ ವರ್ತಮಾನವು ಪ್ರಕಟವಾದ ಕೆಲವೇ ದಿನಗಳಲ್ಲಿ ಈ ಬಹುಮಾನಿತ ಲೇಖಕರ ಟೀಕ ಟಿಪ್ಪಣಿಗಳು ಕೇಳಿಬಂದುವು ಹಾಗೂ ರಶ್ಯನ್ ಲೇಖಕರ ಸಂಘದಿಂದ ಅವರನ್ನು ತಳ್ಳಿಬಿಡಲಾಯಿತಂತೆ. ಈ ಕಾರಣದಿಂದ ಶ್ರೀಯುತರು ನೋಬೆಲ್ ಪಾರಿತೋಷಕ ಸಮಿತಿಗೊಂದು ಪತ್ರವನ್ನು ಬರೆದು, "ನೋಬೆಲ್ ಸಮಿತಿಯವರು ನನಗಿತ್ತ ಈ ಗೌರವದ ಬಗ್ಗೆ ನನ್ನ ಸಮಾಜಬಾಂಧವರು ಮಾಡುತ್ತಿರುವ ಟೀಕೆಗಳನ್ನು ಗಮನಿಸಿ ಈ ಪುರಸ್ಕಾರಕ್ಕೆ ನಾನು ಯೋಗ್ಯನಲ್ಲವೆಂದು ತಿಳಿದು ಈ ಬಹುಮಾನವನ್ನು ನಾನು ಅನಿವಾರ್ಯವಾಗಿ ನಿರಾಕರಿಸಬೇಕಾಗಿ ಬಂದಿದೆ" ಎಂದು ಅವರು ನಿರಾಕರಣೆಯ ಪತ್ರವನ್ನು ರವಾನಿಸಿದ್ದಾರೆ ಎಂದು ತಿಳಿದು ಬರುತ್ತದೆ.

ದಯವಿಟ್ಟು ನಿಮ್ಮ ಬಾಕಿ ಚಂದಾಹಣವನ್ನು ಮನಿಯಾರ್ಡರು ಮಾಡಿರಿ.

ಅಲ್ಲಲ್ಲಿಯ ಸುದ್ದಿಸಾರ

ಶ್ರೀ. ಪೃಥ್ವಿರಾಜ್ ಎಂ. ಪಿ. ಯವರು—ತಾ. 30ರಂದು ಮಂಗಳೂರು ನಗರ ಸಭೆಯುವರಿತ್ತ ಸ್ವಾಗತ ಸಮಾರಂಭದಲ್ಲಿ ಮಾತನಾಡುತ್ತಾ, ಭವ್ಯ ಭಾರತವನ್ನು ಕಟ್ಟುವಲ್ಲಿ ಒನತೆಯ ಮನೋಪರಿವರ್ತನೆ ಮಾಡಿ ಅವರು ಸರಿದಾರಿಯಲ್ಲಿ ನಡೆಯುವಂತೆ ಮಾಡುವಲ್ಲಿ ಕಲಾವಿದರ ಪಾತ್ರ ಬಹಳ ಮಹತ್ವವಾದುದೆಂದರು ಜನತೆಯಲ್ಲಿ ಕಲೆಯ ಬಗ್ಗೆ ಉನ್ನತ ಭಾವನೆ ಹಾಗೂ ಅಭಿರುಚಿಯನ್ನು ಪುಟ್ಟಿಸಿರುವ ಮಂಗಳೂರಿನ ಕಲಾವಿದರನ್ನು ಪ್ರಶಂಸಿಸಿದರು.

ಆರಂಭದಲ್ಲಿ ನಗರ ಸಭಾಪತಿ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತ ಭಾಷಣ ಮಾಡಿದರು.

ಯುಕ್ತ ರಾಷ್ಟ್ರ ಸಂಘ ದಿನಾಚರಣೆಯು ಮಂಗಳೂರಿನ ಗಣಪತಿ ಹೈಸ್ಕೂಲಿನ ಕಿರಿಯ ವಿದ್ಯಾರ್ಥಿಗಳ ಸಾಹಿತ್ಯ ಸಭೆಯ ಆಶ್ರಯದಲ್ಲಿ ತಾ. 29ರಂದು ಮುಖ್ಯೋಪಾಧ್ಯಾಯ ಶ್ರೀ. ಕೆ. ಶಂಕರರಾಯರ ಅಧ್ಯಕ್ಷತೆಯಲ್ಲಿ ಜರಿಗಿತು. ಮರುದಿವಸ ಅದೇ ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಾಹಿತ್ಯ ಸಭೆಯ ಆಶ್ರಯದಲ್ಲಿ ಶ್ರೀ ಬಿ. ವಿ. ರಮಣ ನವರು ಯುಕ್ತರಾಷ್ಟ್ರ ಸಂಘವು ವಿದ್ಯಾರ್ಥಿಗಳಿಗಾಗಿ ಏನೇನು ಮಾಡುತ್ತಿದೆ ಎಂಬುದ ದನ್ನು ವಿವರಿಸಿ ಮಾತನಾಡಿದರು.

ಉಡುಪಿ ಮುನಿಸಿಪಾಲಿಟಿಯ ಆಡಳಿತವು ಇದೇ ತಾ.1ರಂದು ಮಧ್ಯಾಹ್ನ ಅಂತ್ಯವಾದುದನ್ನು ಮುಂದಿನ ಘೆಬ್ರವರಿ ತಾ. 1ರಂದು ಮಧ್ಯಾಹ್ನದ ತನಕ ಊರ್ಜಿತಕ್ಕೆ ಸರಕಾರವು ತಂದಿರುವುದು. ಚುನಾವಣೆಯು ಜನವರಿ ತಾ. 5ಕ್ಕೆ ಜರಗಬಹುದೆಂದೂ ಆ ಬಗ್ಗೆ ನಾಮಪತ್ರಗಳು ಡಿಸೆಂಬರ್ ತಾ. 15, 16, 17ರಲ್ಲಿ ಸ್ವೀಕರಿಸಲ್ಪಡುವುದೆಂದೂ ತಿಳಿದುಬರುತ್ತದೆ.

ಶ್ರೀ ಲಕ್ಷ್ಮೀನಿಕೇತನ ದೇವಸ್ಥಾನದಲ್ಲಿ ನವರಾತ್ರಿ ಉತ್ಸವದ ಆಗಮನಿ ಶ್ರೀ ವೇದೇಂದ್ರ ತಂತ್ರಿಯವರಿಂದ ಹತ್ತು ದಿವಸಗಳ ತನಕ ಹರಿಕಥೆ ನಡೆಯಿತು. ಅಂತೆಯೇ ಶ್ರೀ ಭದ್ರಗಿರಿ ಪಿಲಿಚ ಪೈಗಳು ಎರಡು ದಿವಸಗಳಲ್ಲಿ ಶ್ರೀ ಭದ್ರಗಿರಿ ಸರ್ವೋತ್ತಮ ಪೈಗಳು ಐದು ದಿವಸಗಳಲ್ಲೂ ಹರಿಕಥಾಕಾಲಕ್ಷೇಪ ನಡೆಸಿದರು.

ಯಕ್ಷಗಾನ ಕಲಾಮಂಡಳಿ ಯವರು-ನವರಾತ್ರಿ ಮಹೋತ್ಸವ ನಿಮಿತ್ತ ಜೈಮಿನಿ ಭಾರತದೊಳಗಣ ಸುಧನ್ವಮುಕ್ತಿ ಎಂಬ ಕಥಾ ಭಾಗವ ಯಕ್ಷಗಾನ ಊಟವನ್ನೇರ್ಪಡಿಸಿದ್ದರು ಶ್ರೀಗಳಾದ ಕೆ. ನಾರಾಯಣ ಸೆಟ್ಟಿ, ಎಮ್. ಗೋವಿಂದ ರಾವ್, ಕೆ. ಜನಾರ್ದನಾಚಾರ್ಯ, ಪೊಳ್ಕ ದೇವಪ್ಪ ಸೆಟ್ಟಿ, ಪಿ. ವಾಸು ಸೆಟ್ಟಿ, ಎಸ್ ಗಣಪಯ್ಯ ಸೆಟ್ಟಿ, ಎಸ್. ಕೃಷ್ಣಯ್ಯ ಸೆಟ್ಟಿ, ಜೆ. ಎಲ್. ಪ್ರಭು, ಜಿ. ಗೋಪಾಲ ಸೆಟ್ಟಿ, ಕೆ. ರಾಮ ಸೆಟ್ಟಿ ಮೊದಲಾದವರು ಪ್ರಮುಖ ಭಾಗವಹಿಸಿದ್ದರು.

ಶಿವ ಕಲಾರಾಧನಾ ಸಂಘದ ವರು—ಶಿಕ್ಕಿಯೇಶನ್ ಕ್ಲಬ್ಬಿನ ಆಶ್ರಯದಲ್ಲಿ ದಸರಾಮಹೋತ್ಸವವನ್ನು ಯಶಸ್ವಿಯಾಗಿ ಆಚರಿಸಿದರು. ಡಾ| ವೈ. ಆರ್. ಸೆಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಸೇವ ಜಮಿರಾಜ ಮಲ್ಲರ ಭಾಷಣ, ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಕೆ ಎಲ್. ಎನ್. ಉಪಾಧ್ಯಾಯರ ಭಾಷಣ; ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿದ್ವಾನ್ ಪಿ. ಕಾಡಪ್ಪನವರ ಭಾಷಣ; ಟಿ. ಗೋಪಾಲಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಎನ್. ಮಹಾಬಲ ಭಟ್ಟರ ಭಾಷಣಗಳು ಐದು ದಿವಸಗಳಲ್ಲಿ ಸಾಂಗವಾಮವು. ಜನಸುನರಂಜನ ನಾಟಕಗಳೂ ಪ್ರದರ್ಶಿಸಲ್ಪಟ್ಟವು

ಸರ್ವೋದಯ ಕರ್ನಾಟಕ ಕಲಾನಿಕೇತನ ಎಂಬ ಸಂಸ್ಥೆಯನ್ನು ಕಳೆದ ತಾ. 21ರಂದು ಮುಂಬಯಿ ಗಿರ್‌ಗಾಮಿನ ಕನ್ನಡಿಗರು ಸ್ಥಾಪಿಸಿದರು. ಸಂಸ್ಥೆಯ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಬಿ. ವಿಠಲ ಸೆಟ್ಟಿ (ಅಧ್ಯಕ್ಷ), ಪಿ. ನಾರಾಯಣ ಸೆಟ್ಟಿ (ಉಪಾಧ್ಯಕ್ಷ), ರಾಜು ಸೆಟ್ಟಿ (ಕೋಶಾಧಿಕಾರಿ), ಕೆ. ಕೆ. ಪತ್ತನ್ (ಕಾರ್ಯದರ್ಶಿ), ಶ್ರೀಮತಿ ಆನಂದಿ ಬಾಯಿ ಗಂಗೊಳ್ಳಿ (ಉಪಕಾರ್ಯದರ್ಶಿಗಳು), ಬಿ. ಶೀನಪ್ಪ ನಾಯಕ್, ಕೆ. ಜಿ. ಸುವರ್ಣ, ಜೆ. ಆರ್. ಕಿರೋಡಿಯನ್, ಸೋನು ಪೇಲಿರಿ, ಬಿ. ಡಿ. ಸಾಲಿಯಾನ್, ಜೆ. ಕೆ. ಬಂಗೇರ (ಇದರ ಸದಸ್ಯರು) ಆರಿಸಲ್ಪಟ್ಟರು.

ಬೊಂಬಾಯಿ ದ. ಕ. ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಕಳೆದ ತಾ 21ರಂದು ವಿದ್ವಾರ್ಕಂಸಾಳಿ ಪಾಲ್‌ನಲ್ಲಿ ಉಡುಪಿಯ ಫಲಿಮಾರು ಮಠದ ಶ್ರೀ ರಘೂವಲ್ಲಭ ತೀರ್ಥ ಸ್ವಾಮಿಗಳವರು ದೀಕ್ಷಾ" ಪತ್ರಿಕೆಯನ್ನು ಉದ್ಘಾಟಿಸಿದರು. ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರೂ ಉಪಸ್ಥಿತರಿದ್ದರು ಗುರುಪಿಷ್ಯ ಶ್ರೀಗಳವರು ಪತ್ರಿಕೆಗೆ ಯಶಸ್ಸನ್ನು ಕೋರಿದರು. ಆರಂಭದಲ್ಲಿ ಶ್ರೀ ಕೆ. ಶ್ರೀಧರ ರಾಯರು ಸ್ವಾಗತಿಸಿದರು. ಉಪಕಾರ್ಯದರ್ಶಿ ಶ್ರೀ ಆಚಾರ್ಯರು ಧನ್ಯವಾದವಿತ್ತರು.

ದ. ಕ. ಜಿಲ್ಲಾ ಬೋರ್ಡಿನ ಸಭೆಯು ಕಳೆದ ತಾ. 26ರಂದು ಬೋರ್ಡಿನ ಸಭಾ ಭವನದಲ್ಲಿ ಶ್ರೀ ಬಿ. ನಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಿಗಿತು. ಬೋರ್ಡಿನ ಈ ವರ್ಷದ ಅಂದಾಜು ಪತ್ರದಲ್ಲಿ ಹೆಚ್ಚು ಜನವಲ್ಲಿದೆ ಕಾರಣ ಬಾಲಿಯೆರುವ ಸ್ಥಳಕ್ಕೆ ಚುನಾವಣೆ ಬೇಡವೆಂದು ನಿರ್ಣಯಿಸಲಾಯಿತು. ಜಾಲ್ಸೂರು ಸುಬ್ರಹ್ಮಣ್ಯ ಲೈನಿನ ಮಾರ್ಗದ ಪರಿಶೀಲನೆಗಾಗಿ ರೂಪಾಯಿ 1560/-ನ್ನು ಮಂಜೂರು ಮಾಡಲಾಯಿತು. ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆ ನಾಡುವ ಮತ್ತು ಹೊಸ ಜಾಗೆಗಳನ್ನು ತೆರೆಯುವ ವಿಷಯದಲ್ಲಿ ಪರಿಶೀಲನೆಗಾಗಿ ಕಮಿಟಿಯೊಂದು ನೇಮಿಸಲಾಯಿತು. ಬೋರ್ಡಿನ ತನ್ನ ಅಧಿಕಾರ ಕಛೇರಿಯನ್ನು ನಿರ್ಮೂಲ ಮಾಡಲು ವೆಚ್ಚ ಕಡಿಮೆ ಮಾಡಬೇಕೆಂಬುದಾಗಿ ಸೂಚಿಸಲಾಯಿತು.

ಮಂಗಳೂರಿಗೆ ಹೊಲಗೇರಿ ನಿರ್ಮೂಲನ ಯೋಜನೆ—ಮಂಗಳೂರು ನಗರಸಭಾ ಕ್ಷೇತ್ರದ ಕಸಬಾ ಬಜಾರು ಮತ್ತು ಕೊಡಿಯಾಲಬೈಲು ಪ್ರದೇಶಗಳಲ್ಲಿನ ಹೊಲಗೇರಿ ನಿರ್ಮೂಲನಕ್ಕಾಗಿ ಮಂಗಳೂರು ಮುನಿಸಿಪಾಲಿಟಿಯು ತಯಾರಿಸಿದ ಎರಡು ಪುನರ್ನಿರ್ಮಿತ ಹೊಲಗೇರಿ ನಿರ್ಮೂಲನ ಯೋಜನೆಗಳ ತಾತ್ಕಾಲಿಕ ಪರಿಶೀಲನೆ ನಡೆಸಲಾಗಿದ್ದು ಅವುಗಳು ಸರಿಯಾಗಿವೆ ಎಂದು ಸರಕಾರವು ಒಪ್ಪಿಗೆಯಿತ್ತಿದೆ.

ಈ ಯೋಜನೆಯನ್ವಯ 103 ಎರಡು ಮಾಳಿಗೆಯ ಒಂದು ಕೋಣೆಯ ವಸತಿಗಳನ್ನು ಈ ಪ್ರದೇಶಗಳಲ್ಲಿ ಕಟ್ಟಿಸುವ ಯೋಜನೆಯನ್ನು ಕಾರ್ಯಗತಗೊಳಿಸಲು ಆರಂಭಿಕ ಬಹುಮೊದಲು ಸರಕಾರ ಅಪ್ಪಣೆಯಿತ್ತಿದೆ. ಒಂದು ವಸತಿಗೆ ರೂಪಾಯಿ 3500 ಪರಮಾವಧಿ ನಿಶ್ಚಿತ ತಳಪಾಯದ ಮೇಲೆ ಸರಕಾರೀ ಆರ್ಥಿಕ ಸಹಾಯವನ್ನು ಪಡೆಯಲು ಈ ಯೋಜನೆಗಳನ್ನು ಆರ್ಯತೆಯಿದೆ. ಈ ಯೋಜನೆಗೆ ಒಟ್ಟು ಸಾಧಾರಣ ರೂಪಾಯಿ 3,78,000 ವೆಚ್ಚವಾಗಬಹುದು.

ವಾರ್ಷಿಕ ನಿಧಿ ಸಂಗ್ರಹ ಜಳಕಳಿ

ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ವಾರ್ಷಿಕ ನಿಧಿ ಸಂಗ್ರಹ ಜಳಕಳಿವು ತಾ. 30ರಂದು ಮಂಗಳೂರಿನ ಸರಕಾರಿ ಆರ್ಟ್ಸ್ ಕಾಲೇಜಿನಲ್ಲಿ, ಕರ್ನಾಟಕ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಡಾ| ಜಿ. ಡಿ. ವೇಲಿಯತ್ತರಿಂದ ಉದ್ಘಾಟಿಸಲ್ಪಟ್ಟತು. ಶ್ರೀ ಕೆ. ಆರ್. ಆಚಾರ್, ಎಮ್. ಸಿ. ಆನರು ಅಧ್ಯಕ್ಷತೆ ವಹಿಸಿದ್ದರು. ರೆಡ್‌ಕ್ರಾಸಿನ ಮೈಸೂರು ರಾಜ್ಯ ಶಾಖೆಯ ಕಾರ್ಯದರ್ಶಿ ಶ್ರೀ ಎಸ್. ಜಿ. ನಾರಾಯಣರಾಯರು ರೆಡ್‌ಕ್ರಾಸಿನ ಧ್ಯೇಯೋದ್ದೇಶಗಳ ಕುರಿತು ಭಾಷಣವಿತ್ತರು.

ನವಮೈಸೂರು ರಾಜ್ಯೋದಯ ದಿನವನ್ನು ಮಂಗಳೂರು ಸರಕಾರೀ ಕಾಲೇಜಿನ ವಿದ್ಯಾರ್ಥಿ ಯೂನಿಯನ್ ಆಶ್ರಯದಲ್ಲಿ ತಾ. 1ರಂದು ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಆರ್. ಆರ್. ಉಮರ್‌ಜಿಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಆರಂಭದಲ್ಲಿ ಕೊಮರ ಶಿವರಾಯರಿಂದ ಪ್ರಾರ್ಥನೆಯೊಯಿತು. ಶ್ರೀ ಪೃಥ್ವಿರಾಜ್ ಕಪೂರ್, ಎಮ್. ಸಿ.ಯವರು ಭಾಷಣಗೈದು ವಿದ್ಯಾರ್ಥಿಗಳು ತಮ್ಮ ಜ್ಞಾನಜಿಜ್ಞಾಸೆಯನ್ನು ತಮ್ಮ ಜೀವನ ದಾತ್ಮಕತೆ ಇವುಗಳಿಂದಿರಬೇಕೆಂದು ಹೇಳಿದರು. ಶ್ರೀ ಮಹಮ್ಮದ್ ಹುಸ್ಸೇನರು ಧನ್ಯವಾದವಿತ್ತರು.

ಹೆಬ್ರಿಯಲ್ಲಿ ಯಕ್ಷಗಾನ ನಾಟಕ:ಸ್ಥಳೀಯ ಬೋರ್ಡು ಹೈಸ್ಕೂಲು ಕಟ್ಟಡದ ಸಹಾಯಾರ್ಥವಾಗಿ ಇಂತಿ ಯಕ್ಷಗಾನ ಕಲಾವಿದರ ಕೂಡುವಿಕೆಯಿಂದ ತಾ1ರಂದು ರಾತ್ರಿ ಶ್ರೀಕೊರಗ ಸೆಟ್ಟರ ದಿಗ್ವಿಜಯದಲ್ಲಿ 'ಸಂಪೂರ್ಣ ರಾಮಾಯಣ' ಯಕ್ಷಗಾನ ನಾಟಕವನ್ನು ಜಿಲ್ಲಾಧಿಕಾರಿ ಶ್ರೀವೈ. ಸಿ. ಹೊಂಡಾಳಯ್ಯನವರು ಉದ್ಘಾಟಿಸಿದರು.ಹೈಸ್ಕೂಲು ಕಟ್ಟಡ ಸಮಿತಿಯ ಅಧ್ಯಕ್ಷ ಶ್ರೀ ಎಚ್. ಭುಜಂಗ ಬಲ್ಲಾಳರು ಸ್ವಾಗತ ಭಾಷಣ ಮಾಡಿದರು. ಉದ್ಘಾಟಕರು ಸಮಯೋಚಿತ ಮಾತುಗಳನ್ನಾಡಿದರು.

ಉಡುಪಿ ಬೋರ್ಡು ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ1ರಂದು ಡಾ| ಟಿ ಎಂ ಪೈಗ ಅಧ್ಯಕ್ಷತೆಯಲ್ಲಿ ಜರಿಗಿತು ಸಂಘದ ಆಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಕಾರ್ಯ ಹಳೆಯ ವಿದ್ಯಾರ್ಥಿ ವಕೀಲ ಶ್ರೀ ಪಿ. ಪದ್ಮನಾಭರಾಯರನ್ನು ಗೌರವಿಸಲಾಯಿತು. ಬಳಿಕ ನೃತ್ತ ಪೆಡ್ಡುಸ್ಪರ ಶ್ರೀ ಆರ್. ಫೆರ್ನಾಂಡಿಸ್ ಮತ್ತು ಡಾ ಸುಂದರರಾಯ ಶೇರ್ವಾರವರು ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ ಬಳಿಕ ನೃತ್ತ, ನೃತ್ಯ ಕಾರ್ಯಕ್ರಮಗಳಾದುವು.

ನಂತರ ಸಂಘದ ವಾರ್ಷಿಕ ಮಹಾ ಸಭೆಯು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು. ಸಂಘದ ಸದಸ್ಯರಾದ ದಿವಂಗತ ಉಪೇಂದ್ರ ಪೈ ಎಸ್. ಮೆಕೆಟ್ರುಮಣ ರಾವ್ ಮತ್ತು ವಿ. ತಿಮ್ಮಪ್ಪ ಸೆಟ್ಟರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವಾಯಿತು. ಕಾರ್ಯದರ್ಶಿ ಶ್ರೀ ಟಿ. ಎ. ಮಾಸ್ತಿದೇವನ್ ಆನಂದ ವರದಿಯನ್ನೋದಿದರು. ಹೊಸ ವರ್ಷಕ್ಕೆ ಶ್ರೀಗಳಾದ ಟಿ. ಎ. ಪೈ (ಅಧ್ಯಕ್ಷ), ಡಾ| ಯು. ಸುಂದರರಾಯ ಶೇರ್ವಾ ಮತ್ತು ಶಿವಾಜಿ ಸೆಟ್ಟಿ ಉಪಾಧ್ಯಕ್ಷರು, ಪಿ. ರಂಗನಾಥ ಶೆಣೈ (ಕೋಶಾಧಿಕಾರಿ), ಟಿ. ಎ. ವಾಸುದೇವನ್ (ಕಾರ್ಯದರ್ಶಿ), ಜಗನ್ನಾಥ ಹೆಗ್ಡೆ ಮತ್ತು ಯು. ಪಾಮೋದರ (ಉಪಕಾರ್ಯದರ್ಶಿಗಳು), ಅಧಿಕಾರಿಗಳಾಗಿರುವ ಕಾರ್ಯನಿರ್ವಾಹಕ ಮಂಡಳಿ ರಚಿಸಲ್ಪಟ್ಟತು. ರಾತ್ರಿ ಭೋಜನ ಸಮಾರಂಭ ಜರಿಗಿತು.

ದ. ಕ. ಜಿಲ್ಲೆಯ ಕೈಗಾರಿಕೆಗಳ ಸಮಸ್ಯೆಗಳ ಹಾಗೂ ಪರಿಹಾರ ಕಾರ್ಯಕ್ರಮಗಳ ವಿಚಾರ ಗೋಷ್ಠಿಯು ಕಳೆದ ತಾ. 25 ಮತ್ತು 26ರಂದು ಜಿಲ್ಲಾ ಆಡಳಿತ ಮತ್ತು ಹಿತಚಿಂತನಾ ಸೋರ್ದಿನ ಆಶ್ರಯದಲ್ಲಿ ಸಿ. ಪಿ. ಸಿ. ಕಂಪೆನಿ ಮರೆದಲ್ಲಿ ಶ್ರೀ ವಿ. ಎಸ್. ಕಾಮತ್ತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕು. ಶಿ. ಹರಿದಾಸ ಭಟ್, ಟಿ. ಎ. ಪೈ ಟಿ. ಎಲ್. ಶಾನಭಾಗ್, ಪಿ. ವಿ. ವೆಂಕಟರಾಯ ಅಯ್ಯರ್, ಡಿ. ಪೈ, ಕುಂಠ ಬಾಳಿಗ, ಎಚ್. ಪಿ. ಕಾಮತ್, ಕೆ. ವಾಸುದೇವ ಕಾರಂತ್, ಠಿ| ಫ್ರಾ| ಅಂಜಿರೆ ಟ್ರೈ, ಯು. ಆರ್. ಮಲ್ಯ ಮೊದಲಾದವರು ವಿವಿಧ ವಿಷಯಗಳ ಮೇಲೆ ನಿಪುಣರ ಪತ್ರಗಳನ್ನು ಓದಿದರು. ಶ್ರೀಗಳಾದ ಎಮ್. ಗೋವಿಂದ ಪೈ, ಎ. ಶಂಕರರಾಮ ಪೈ ಸ್ವಾಗತ ಭಾಷಣ, ಕೆ. ಆರ್. ಆಚಾರ್, ಎನ್. ಎಮ್. ಅಡ್ಯಂತಾಯ, ಎಸ್. ರಾಜೀವ, ಎ ಕೃಷ್ಣ ಶೆಟ್ಟಿ, ಕೆ. ಎ. ಶ್ಯಾನುಭಾಗ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಬಳಿಕ ಜಿಲ್ಲೆಯ ಕೈಗಾರಿಕೆಗಳ ಅಭಿವೃದ್ಧಿಗೆ ಅಗತ್ಯವಾಗಿರುವ ಕೆಲವೊಂದು ನಿರ್ಧಾರಗಳಾನುವು ಶ್ರೀ ಕೆ. ವಾಸುದೇವ ಕಾರಂತರು ಧನ್ಯವಾದಗಳನ್ನರ್ಪಿಸಿ ಬಳಿಕ ವಿಚಾರಗೋಷ್ಠಿ ಕೊನೆಗೊಂಡಿತು.

ಎಮ್. ಜಿ. ಎಮ್ ಕಾಲೇಜ್ ಆಟದ ಬಯಲಲ್ಲಿ 'ಇಂಟರ್' ಕಾಲೇಜ್ ಎಥ್ಲೆಟಿಕ್ ಮೀಟ್'ನ ಸಮಾರಂಭವನ್ನು ತಾ1 ರಂದು ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರು ಉದ್ಘಾಟಿಸಿದರು. ಮಂಗಳೂರು, ಉಡುಪಿ ಮತ್ತು ಪುತ್ತೂರಿನ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿವಿಧ ಸ್ಪರ್ಧೆಗಳಲ್ಲಿ ಒಂದನೆ, ಎರಡನೆ ನಂಬರು ಗಳನ್ನು ಪಡೆದವರಿಗೆ ಬಹುಮಾನ ವಿತರಣೆಯನ್ನು ತಾ 2ರಂದು ಡಾ| ಟಿ ಎಂ ಪೈಗಳು ನೆರವೇರಿಸಿದರು ಛಿದ್ರಲ್ ಪೈರೆಕ್ಟರ್ ಶ್ರೀ ಸೋಮಸುಂದರನವರು ವರದಿಯನ್ನೋದಿದರು.

ಮಕ್ಕಳ ದಿನಾಚರಣೆಯು ಇದೇ ತಿಂಗಳ ತಾ. 14ರಂದು ಉಡುಪಿಯಲ್ಲಿ ಜರಿಗಿನ್ನು ಆ ಬಗ್ಗೆ ಸಾರ್ವಜನಿಕರು ಸಹಾಯ ನೀಡಬಹುದಾಗಿ ತಹಶೀಲ್ದಾರ್ ಶ್ರೀ ಕೆ ಮಹಮ್ಮದ್ ಜ್ಯಾಗಿರ್‌ದಾರವನು ವಿನಂತಿಸಿತ್ತಾರೆ.

ಉದಿಯಾವರ ಮಂಡಲ ಕಾಂಗ್ರೆಸ್ ಸಮಿತಿ ಸಭೆಯು ತಾ. 1ರಂದು ಜರಿಗಿ 1938 59ರ ಸಾಲಿಗೆ ಶ್ರೀಗಳಾದ ಯು. ಕೃಷ್ಣಪ್ಪ ಸಾಮುಕಾರರು ಅಧ್ಯಕ್ಷರಾಗಿಯೂ, ಕೆ. ವೆಂಕಟ್ರಾವ್ ಮತ್ತು ಯು. ವಾಸುದೇವ ಶೆಟ್ಟಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಮಜ್ಜಿಗೆ ಪಾದೆ ಸೇತುವೆ ನುತ್ತು ಹರಿಜನ ಕೆಲಸಗಳ ಕುರಿತು ನಿರ್ಣಯಗಳಾಗಿ ಆದನ್ನು ತಾಲೂಕು ಕಾಂಗ್ರೆಸ್ ಕಮಿಟಿಗೆ ಕಳುಹಿಸಬೇಕೆಂದು ತೀರ್ಮಾನವಾಯಿತು.

ದ. ಕ ಜಿಲ್ಲಾ ಕಾಂಗ್ರೆಸ್ ಕಚೇರಿ ಯಲ್ಲಿ ತಾ 3ರಂದು ಜರಿಗಿದ ಕಾಂಗ್ರೆಸಿಗರ ಸಭೆಯಲ್ಲಿ ಶ್ರೀ ಪೃಥ್ವಿರಾಜ್ ಕಪೂರರು ಮಾತನಾಡುತ್ತ, ಸ್ವತಂತ್ರ ದೇಶದಲ್ಲಿ ರಾಷ್ಟ್ರ ಭಾವೈಕ್ಯ ಕಾರ್ಯದಲ್ಲಿ ಪ್ರತಿಯೊಬ್ಬನೂ ತನ್ನ ಪಾಲಿನ್ನು ಆಪ್ರಸಿಬೇಕಾಗಿದೆ ಎಂದು ಹೇಳಿದರು. ಡಾ| ಯು. ಪಿ. ಮಲ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಎ. ಶಂಕರ ಆಳ್ವರು ಸ್ವಾಗತಿಸಿದರು. ಶ್ರೀ ಎಮ್. ರೆವಾನಾಥರು ಧನ್ಯವಾದವಿತ್ತರು.

ಕಾಶೀಮಠಾಧೀಶರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ತಾ. 8ರಿಂದ ದಶಂಬರ ತಾ. 28ರ ತನಕ ಕಾರ್ಯಕ್ರಮವಿಟ್ಟುಕೊಂಡಿರುವರು. ದಶಂಬರ ತಾ 6ರಂದು ಕಲ್ಯಾಣಪುರ ವೆಂಕಟ್ರಮಣ ದೇವಸ್ಥಾನವಲ್ಲಿ ಕನಕಾಭಿಷೇಕ ಸಮಾರಂಭದಲ್ಲಿ ಭಾಗವಹಿಸುವರು. ಸಮಾಜ ಬಾಂಧವರೆಲ್ಲರೂ ಭಾಗವಹಿಸಿ ಶ್ರೀ ಗುರು ಆನುಗ್ರಹಕ್ಕೆ ಪಾತ್ರರಾಗಬೇಕಾಗಿ ಹೈರೆಕ್ಷನ್ ಕಮಿಟಿಯ ಕಾರ್ಯದರ್ಶಿ ಡಾ| ಟಿ. ಎಮ್. ಎ. ಪೈಗಳವರು ವಿನಂತಿಸುತ್ತಾರೆ.

ಐ ವರ್ಷ ಗಳಿಂದಲೂ ಪ್ರಸಿದ್ಧ ಇವೆ. | ಮುಲೇರಿಯಾ | ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ | ಎಲ್ಲ ಕೆಮಿಸ್ಟರಲ್ಲಿ ಸ್ಪೋಸರ್‌ರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಲೂಮಿಕ್ಶರ

ಮತ್ತು ಗುಳಿಗೆಗಳು

ಪಾರಾಟ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್, ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಹಿಸಿರಿ

ದುರಾಗ್ರಹ

(೧ನೇ ಪುಟದಿಂದ)

ಷ್ಟುಗಳೂ ಆದ ಕನ್ನಡಿಗರ ಈ ಉದಾರತೆ ಆಥವಾ ಆದರ್ಶವನ್ನು ಅವರ ಅಸಹಾಯಕತನದ ಇಲ್ಲವೇ ಅಬಲತೆಯ ದ್ಯೋತಕವೆಂದು ಬಗೆದು, ಅವುಗಳ ದುರುಪಯೋಗವನ್ನು ಬಳಸಿ, ತಮ್ಮ ಬೇಳೆ ಬೇಯಿಸಲು ಮಂತಾಂತಿಗರು ಬದ್ಧ ಕಂಕಣರಾದುದು ನಮ್ಮ ದುರ್ದೈವವೆನ್ನಬೇಕು.

ನ್ಯಾಯಕ್ಕಾಗಿ ಹೋರಾಟ ನಡೆಸುವಾಗ, ಅನ್ಯಾಯವನ್ನು ಪ್ರತಿಭಟಿಸುವಾಗ, ವಿದೇಶೀಯ ಸತ್ತೆಯನ್ನು ದೂರಮಾಡಲು ನಿಶ್ಶಸ್ತ್ರ ಭಾರತೀಯರ ಪ್ರಬಲಾಯುಧವಾದ ಈ ಸತ್ಯಾಗ್ರಹವು ಈಗೀಗ ದುರಾಗ್ರಹವಾಗಿ ಪರಿಣಮಿಸುತ್ತಿರುವುದು ಬೇದಾರ್ಹವಾಗಿದೆ. ಒಂದು ಕಾಲದಲ್ಲಿ ದೊಂಬಿ, ಗಲಭೆ, ಗುಲ್ಲು, ಪಂಡಾಟ ನೊದಲಾದ ಕೀಳ್ಮಟ್ಟಿಗಳಿಂದ ಉಲ್ಲೇಖಿಸಲ್ಪಡುತಿದ್ದವೆಲ್ಲ ಇದು "ಸತ್ಯಾಗ್ರಹ" ವೆಂಬ ಪುನಾಮಧೇಯವನ್ನು ತಾಳುವಂತಾಗಿದೆ. ಸತ್ಯಾಗ್ರಹದ ಪವಿತ್ರತೆಯು ಅಳವಾದ ಕತ್ತಲೆಯಡಿಯಲ್ಲಿ ಹುದುಗಿ ಹೋಗುವಂತಾಗಿದೆ. ಇದು ಸತ್ಯಾಗ್ರಹದ ಅವಿಷ್ಕರ್ತರ ಅನುಯಾಯಿಗಳಿಗೆಲ್ಲ ಲಾಂಛನಾಸ್ಪದ ವಿಷಯ.

ಎಡವಿಬಿದ್ದರೂ, ಅಲ್ಲಿಯೇ ಉಳಿಯುದೆ, ಎದ್ದುನಿಲ್ಲುವುದು ಯೋಗ್ಯರ ಧರ್ಮ. ನನ್ನು ನುರಾತಿ ಬಾಂಧವರೂ ತಾವು ಹೂಡಿದ ಸತ್ಯಾಗ್ರಹವನ್ನು ಇನ್ನಾದರೂ ಹಿಂತೆಗೆದುಕೊಂಡು ವಿಚಾರವಿನಿಮಯಕ್ಕೆ ಅನುಕೂಲವಾವಕಾಶವನ್ನೊದಗಿಸುವರೆಂದು ಆಶಿಸಬಹುದು. ಒಂದು ವೇಳೆ, ಈ ಸತ್ಯಾಗ್ರಹವು ಮುಂಬರಿದರೆ, ಇದಕ್ಕೆ ನಮ್ಮ ಮೈಸೂರು ಆಥವಾ ಬೊಂಬಾಯಿ ಸರಕಾರಗಳು ಇನ್ನಷ್ಟೇ ಕೇಂದ್ರ ಸರಕಾರವು ಸೊಪ್ಪು ಹಾಕಿತೆ, ಈ ಸತ್ಯಾಗ್ರಹವು ಸಂಸೂರ್ಣ ಅಯಶಸ್ವಿಯಾಗುವಂತೆ ನೂಡಬೇಕು; ಹಾಗೆ ಮಾಡಿದರೆ, ಆ ಮೇಲಾದರೂ ಸತ್ಯಾಗ್ರಹದ ಮಹಿಮೆಯ ಅರಿವು ಸ್ವಲ್ಪ ಮಟ್ಟಿಗಾದರೂ ಆಗಬಹುದು. ಸತ್ಯಾಗ್ರಹ ಮತ್ತು ದುರಾಗ್ರಹಗಳ ನಡುವಿನ ಭೇದಗಳು ಸುಸ್ಪಷ್ಟವಾಗಿ ವ್ಯಕ್ತಪಟ್ಟೀತು.

ಪ್ರಗತಿ ಪಥ

(೫ನೇ ಪುಟದಿಂದ)

ಕಾಲೇಜಿನ ಗ್ರಂಥ ಭಂಡಾರದಲ್ಲಿ ಅಗ್ನಿಶಮನ ಕಾರ್ಯಕ್ಕೆ ಸಂಬಂಧಿಸಿದಂತೆ ಅತ್ಯುತ್ತಮವಾದ ಗ್ರಂಥಗಳಿವೆ. ಇಷ್ಟೇ ಅಲ್ಲದೆ ಕಾಲೇಜಿನಲ್ಲಿ ಚಲನ ಚಿತ್ರ ಪ್ರದರ್ಶನಾಲಯವಿದೆ. ಕಾಲೇಜಿನಲ್ಲಿ ಅಗ್ನಿಶಮನ ಸೇವೆಗೆ ಸಂಬಂಧಿಸಿದ ಇತ್ತೀಚಿನ ವಿಧಾನದ ಯಂತ್ರಗಳು, ಏಣಿಗಳು, ಪಂಪ್‌ಗಳು ಮುಂತಾದ ಉಪಕರಣಗಳಿರುವುತ್ತವೆ. ಕಾಲೇಜಿಗೆ ಸೇರಿದಂತೆ ವಿಶಾಲ ಮೈದಾನವಿದೆ. ಈ ಮೈದಾನದಲ್ಲಿ ಶಿಕ್ಷಣಾರ್ಥಿಗಳು ಅಂಗಸಾಧನೆ ಮಾಡಲವರಲ್ಲದೆ ಅಗ್ನಿಶಮನ ಸೇವೆಗೆ ಸಂಬಂಧಿಸಿದ ನಾನಾ ವಿಷಯುಗಳನ್ನು ಅಭ್ಯಾಸ ಮಾಡುವರು. ಈ ಮೈದಾನದಲ್ಲಿ ಪ್ರತಿ ಅಡಿಗಳ ಎತ್ತರದ ಉಕ್ಕಿನ ಗೋಪುರವೊಂದಿದೆ. ಎತ್ತರವಾದ ಕಟ್ಟಡಗಳಲ್ಲಿ ಬೆಂಕಿ ಅನಾಹುತಕ್ಕೆ ಸಿಕ್ಕಿರುವವನ್ನು ರಕ್ಷಿಸುವ ಕಾರ್ಯವಲ್ಲಿ ಶಿಕ್ಷಣಾರ್ಥಿಗಳು ಅಭ್ಯಾಸ ಪಡೆಯುವುದಕ್ಕಾಗಿ ಉಕ್ಕಿನ ಗೋಪುರವನ್ನು ಸಜ್ಜಿಸಲಾಗಿದೆ.

ಈ ಕಾಲೇಜಿನಲ್ಲಿ ಅರು ವಿಭಿನ್ನ ಪಾಠಕ್ರಮಗಳನ್ನು ನಡೆಸಲಾಗುತ್ತಿದೆ. ಒಂದೊಂದೂ ಅರು ತಿಂಗಳಕಾಲ ನಡೆಯುವುದು. ಇವುಗಳಲ್ಲಿ ಎರಡು ಪಾಠಕ್ರಮಗಳು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿವೆ. ಇನ್ನೆರಡು ಪಾಠಕ್ರಮಗಳು ಅಗ್ನಿ ನಿರೋಧಕಾರ್ಯದಲ್ಲಿ ಹೆಚ್ಚಿನ ತರಬೇತಿಗಾಗಿವೆ. ಮತ್ತೆರಡು ಪಾಠಕ್ರಮಗಳು ಅಗ್ನಿಶಮನ ಸೇವೆಯ ಮೇಲ್ವಿಚಾರಣೆಗೆ ಸಂಬಂಧಿಸಿವೆ. ಈ ಪಾಠಕ್ರಮಗಳಲ್ಲಿ ಸೇರಲಿಚ್ಛಿಸುವವರು ಕನಿಷ್ಠ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಭ್ಯರ್ಥಿಗಳ ವಯಸ್ಸು ೨೧ ರಿಂದ ೩೫ ರೊಳಗಿರಬೇಕು. ಅಭ್ಯರ್ಥಿಗಳು ಆರೋಗ್ಯವಂತರಾಗಿರಬೇಕು. ಅಭ್ಯರ್ಥಿಗಳು ಅಗ್ನಿಶಮನ ಸೇವೆಯಲ್ಲಿ ಕೆಲಸಮಾಡಲು ಸಿದ್ಧರಿರಬೇಕು. ಅಭ್ಯರ್ಥಿಗಳು ಅಗ್ನಿಶಮನ ಸೇವೆಯಲ್ಲಿ ಕೆಲಸಮಾಡಲು ಸಿದ್ಧರಿರಬೇಕು. ಅಭ್ಯರ್ಥಿಗಳು ಅಗ್ನಿಶಮನ ಸೇವೆಯಲ್ಲಿ ಕೆಲಸಮಾಡಲು ಸಿದ್ಧರಿರಬೇಕು.

ಪುಸ್ತಕ-ನಿಮರ್ಶೆ

(ವಿಮರ್ಶನಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ಸ.)

ಜನತಾ ಕಾರ್ಯಕ್ರಮ-(ಸರ್ವಾಜನಿಕ ಕೃಷಿ ಚಿತ್ರಗಳು) ಪ್ರಕಾಶಕರು: ಪ್ರಕಾಶನ ವಿಭಾಗ, ಭಾರತ ಸರಕಾರದ ಸಮಾಚಾರ ಮತ್ತು ಸಚಿವಾಲಯ, ನವದೆಹಲಿ. ಕೃಷಿ ಚಿತ್ರಗಳ ನಿರ್ಮಾಪಕರು: ಶ್ರೀ ಟಿ. ಸಾಮ್ಯುಯೆಲ್. ಬೆಲೆ: ರೂ ೨.

ಭಾರತದ ಲಕ್ಷಾಂತರ ಹಳ್ಳಿಗಳಲ್ಲಿ ವಾಸವಾಗಿರುವ ಕೋಟ್ಯಂತರ ಗ್ರಾಮೀಣ ಜನತೆಯ ಅಭಿವೃದ್ಧಿಗಾಗಿ ಸರ್ವಾಜನಿಕಾಸ್ಪತ್ರೆಗಳನ್ನು ಆರಿಸಿ, ಗ್ರಾಮಸೇವಕರ ಮೂಲಕ ಜನತೆಯಲ್ಲಿ ತುಂಬಿರುವ ಅಜ್ಞಾನವನ್ನು ನೂರೀಕರಿಸಿ, ಅವರ ಆಭ್ಯುದಯವನ್ನು ಸಾಧಿಸಬಯಸುತ್ತಿದೆ, ನಮ್ಮ ಜನತಾ ಸರಕಾರ. ಈ ಸಂಬಂಧದ ಸಂಪೂರ್ಣ ವಿವರವನ್ನು ರೇಖಾಚಿತ್ರಗಳ ಮೂಲಕ ಸುಲಭಗ್ರಾಹಿಯಾಗಿ ಈ ಪುಸ್ತಕದಲ್ಲಿ ಕೊಡಲಾಗಿದೆ ಅಜ್ಞಾನದಿಂದ ತಮ್ಮ ಪೂರ್ವಜರನ್ನು ಅಂಧರಂತೆ ಅನುಕರಿಸಿ ಬಾಳುತಿದ್ದ ಗ್ರಾಮೀಣರಲ್ಲಿಗೆ ಗ್ರಾಮ ಸೇವಕ ನೊಬ್ಬನು ಬಂದು, ಅವರ ಕುಂದುಕೊರತೆಗಳನ್ನೂ ಅಜ್ಞಾನವನ್ನೂ ತಿಳಿದು, ಯಾವ ಯಾವ ರೀತಿಯಿಂದ ಗ್ರಾಮೀಣಜನತೆಗೆ ಸಂಕಷ್ಟಗಳು ಬರುತ್ತವೆಯೆಂಬುದನ್ನು ಮೊದಲಾಗಿ ಅರಿತು, ಅವರಿಗೆ ಬೇರೆಯ ಸರಕಾರದ ಸಹಾಯದಿಂದ ಯಾವ ಯಾವ ರೀತಿಯಲ್ಲಿ ಆವರಿವರ ಉದ್ಯಮ ದಂಧೆಗಳನ್ನು ಅಭಿವೃದ್ಧಿಗೊಳಿಸಬಹುದು, ತನ್ಮೂಲಕ ತಾವೇ ಜೀಗೇ ಉದ್ಧರಿಸಬಹುದು ಎಂಬುದರ ಬಗ್ಗೆ ಯಥೋಚಿತವಾಗಿ ವಿವರಿಸಿ ಹೇಳುತ್ತಾನೆ. ಈ ಗ್ರಾಮಸೇವಕನ ಹೇಳಿಕೆಗನುಗುಣವಾದ ಚಿತ್ರಗಳು ರೇಖೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಇಂತಹ ೧೪೩ ಚಿತ್ರಗಳು ಈ ಪುಸ್ತಕದಲ್ಲಿವೆ.

ಕೇವಲ ಲೇಖನ, ಭಾಷಣಗಳಿಂದ ಆಭಿವೃದ್ಧಿ ಸಾಧಿಸಿಕೊಳ್ಳಲು ಉಪದೇಶಿಸುವುದಕ್ಕಿಂತ, ಸಚಿತ್ರವಾಗಿ ಅಂತಹ ಉಪದೇಶಗಳನ್ನು ಪ್ರತಿಬಿಂಬಿಸಲು ಪ್ರಯತ್ನಿಸಿರುವುದು ಶ್ಲಾಘನೀಯವಾಗಿದೆ. ಅಲ್ಲದೇ ಇಂತಹ ಪ್ರಯತ್ನದಿಂದಲೇ ವಿಷಮಗಳು ಸರ್ವಜನಮನಕ್ಕೆ ಸುಲಭವಾಗಿ ಪ್ರತಿಬಿಂಬಿಸಲ್ಪಡುವುದು ಸಾಧ್ಯವಾಗಿದೆ. ಈ ದೃಷ್ಟಿಯಿಂದ ಸರಕಾರದ ಕಡೆಯಿಂದ ಇಂಥ ಕಾರ್ಯವು ನಡೆಯುತ್ತಿರುವುದೇ ಶ್ಲಾಘನೀಯ ಮತ್ತು ಗಟ್ಟಿಮುಟ್ಟಾದ ರಕ್ಷಾಕವಚವಿದ್ದು, ಅಕಸ್ಮಾತ್‌ಕವಾಗಿ ಮುದ್ರಣ ಕಾರ್ಯವು ಸಾಗಿದೆ ಪ್ರಕಟಣೆಯು ಸ್ವಾಗತಾರ್ಹ.

ಆದ್ಯಯನ ನಡೆಸುವ ಕಿರಿಯ ಅಧಿಕಾರಿಗಳಿಗೆ ಕಂಬೂಂಧಪಟ್ಟವೆ ಒಂದು ಪಾಠಕ್ರಮವು ಅಗ್ನಿಶಮನ ಸೇವಾ ಎಂಜಿನಿಯರುಗಳಿಗೆ ಸಂಬಂಧಿಸಿದೆ ಹಿರಿಯ ಅಧಿಕಾರಿಗಳ ವಿಚಾರ-ಗೋಷ್ಠಿಗೆಂದು ಒಂದು ಪಾಠಕ್ರಮವು ಸಂಬಂಧ ಪಡುತ್ತದೆ. ದೇಶದಲ್ಲಿ ಈಗಿರುವ ಅಗ್ನಿಶಮನ ಸೇವಾ ವಿಭಾಗಗಳನ್ನು ಸುಧಾರಿಸಲು ಹಾಗೂ ಅಭಿವೃದ್ಧಿಪಡಿಸಲು ಸಾಧ್ಯವಾಗುವಂತೆ ಈ ಎಲ್ಲ ಪಾಠಕ್ರಮಗಳನ್ನು ರೂಪಿಸಲಾಗಿದೆ.

ಗಾಯತ್ರೀಧ್ಯಾನ—ಮೂಲ ಲೇಖಕರು: ಸ್ವಾಮಿ ಶ್ರೀ ಶಿವಾನಂದ ಸರಸ್ವತಿಯವರು. ಅನುವಾದಕರು: ಶ್ರೀ ತಲಚೀರಿ ರಾಘವೇಂದ್ರ ಪ್ರಭುಗಳು ಪ್ರಕಾಶಕರು. ಬಳ್ಳುಂಜೆ ಸುಬ್ಬರಾಯ, ಥಿಯೊಸೊಫಿಸ್ಟ್, ಮೂಡಬಿದ್ರಿ ಜೋಸ್ಟ್ಸ್: ದ. ಕನ್ನಡ. ಬೆಲೆ: ಒಂದು ಕಾರ್ಡನ್ನು ಬರೆಸಿ ಪ್ರತಿಯನ್ನು ಅಪೇಕ್ಷಿಸುವವರೆಗೆ ಒಂದು ಪ್ರತಿ, ಶಿಷ್ಟಾಚಾರವಕರಪತ್ರ. ಮತ್ತು ಒಂದಕ್ಕೆ ಶಾಶ್ವತ ಈ ಮೂಲಕ್ಕೆ ಕಳಿಸಲಾಗುವುದು. ಅಂಚೆಚೆಚ್ಚ ೧೬ ನ ಪೈ. ಯನ್ನು ಆವರೇ ಕೊಡಬೇಕಾಗುವುದು ಜಾ ಕಾರ್ಡನ್ನು ಕಳಿಸುವವರು ೬ ನ. ಪೈಸೆಯ ಕೊಡಬೇಕಾಗುವುದು.

ಪುಂಕ್ತಗಳಲ್ಲೆಲ್ಲ ಪ್ರಧಾನವಾದ ಗಾಯತ್ರಿಯ ಧ್ಯಾನಕ್ರಮವನ್ನು ಆವು ವಿಶೇಷ ಸುಮಿಮೆ. ಪ್ರಯೋಜನಾದಿಗಳನ್ನು ವಿವರಿಸಿ ಧ್ಯಾನದ ಮೇಲೆ ಕೆಲವು ಸೂಚನೆಗಳನ್ನು ಇಲ್ಲಿ ಕೊಡಲಾಗಿದೆ. ವೈದಿಕ ರೀತ್ಯಾ ಮಂತ್ರೋಚ್ಚಾರಣೆಯ ಫಲವೇನೇ ಇರಲಿ, ಚಿತ್ತ ಕುದ್ಧಿಯಾಗುವ ದೃಷ್ಟಿಯಿಂದ ಇಂದ್ರಿಯ ಸಂಯಮವಕ್ಕಾಗಿ ಏಕಾಗ್ರತೆಗಾಗಿ ಇಂತಹ ಧ್ಯಾನವು ಆಗತ್ಯ ಬೇಕಾಗಿದೆ. ವೈದಿಕರು ಗಾಯತ್ರಿಯ ಜಪದಿಂದ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಂಡ ಉದಾಹರಣೆಗಳೂ ಪುರಾಣಗಳಲ್ಲಿವೆ. ಅಜ್ಞಾನಿ ಜನರಿಗೆ ಜ್ಞಾನದ ಪ್ರಚಾರ ಮಾಡುವುದು ಆಥವಾ ಧರ್ಮದ ದಾರಿಯನ್ನು ತೋರಿಸುವುದು ಇದೀ ಪೃಥ್ವಿಯನ್ನು ಪಾನಕೊಡುವುದಕ್ಕಿಂತ ಶ್ರೇಷ್ಠವಾಗಿರುವುದೆಂದು ಮಹಾಭಾರತದಲ್ಲಿ ಹೇಳಿರುವುದರಿಂದ, ಈ ಕಿರು ಹೊತ್ತಗೆಯು ಜ್ಞಾನದೀಪವಾಗಿರುವುದರಿಂದ ಈ ಪ್ರತಿಯನ್ನು ಸಾಧ್ಯವಿರುವಷ್ಟು ಜನರಿಗೆ ಒಳಲಿಕ್ಕೆ ಕೊಡುವಂತೆ ವಿನಂತಿಸಲಾಗಿದೆ.

—ಗೋ. ರಾ.

ಸಾದರ ಸ್ವೀಕಾರ

೧. ಮಕ್ಕಳಿಗಾಂಧಿ—ಲೇಖಕರು: ಶ್ರೀ ಎಸ್. ಟಿ. ಭಟ್, ವಿದ್ವಾನ್, ಮತ್ತು ಶ್ರೀ ಎ. ಲಕ್ಷ್ಮಣ ಪೈ. ಪ್ರಕಾಶಕರು: ಲೇಖಕರೇ (?) ಪುಟಗಳು: ೧೩. ಬೆಲೆ: ೧೧ ನಯೇ ಪೈಸೆ.

೨. ಗಾಯತ್ರೀ ಧ್ಯಾನ—ಮೂಲ ಲೇಖಕರು: ಸ್ವಾಮಿ ಶ್ರೀ ಶಿವಾನಂದ ಸರಸ್ವತಿಯವರು. ಅನು: ಶ್ರೀ ತಲಚೀರಿ ರಾಘವೇಂದ್ರ ಪ್ರಭುಗಳು. ಪ್ರಕಾಶಕ: ಬಳ್ಳುಂಜೆ ಸುಬ್ಬರಾಯ, ಮೂಡಬಿದ್ರಿ. ಪುಟಗಳು: ೨೦ ಬೆಲೆ: ಆಂಚೆವೆಚ್ಚ ಮಾತ್ರ (?)

೩. ಸೌದಾಮಿನಿ-(ಪತ್ತೇದಾರಿ ಕಾದಂಬರಿ) ಲೇಖಕರು: ಶ್ರೀ ಬಿ ಎಸ್. ರಾಮಸ್ವಾಮಿ ಐಯರಿಗಾರ್, ಬಿ ಎ. ಪ್ರಕಾಶಕರು: ನವಚೇತನ ಪ್ರಕಟಣಾಲಯ ಬೆಂಗಳೂರು—೪. ಪುಟಗಳು: ೧೩೫. ಬೆಲೆ: ೨—೦೦.

೪. ಮಿಲನ-(ಸಾಮಾಜಿಕ ನಾಟಕ) ಬರೆದವರು ಮತ್ತು ಪ್ರಕಾಶಕರು. ಶ್ರೀ ಎಂ. ವೀರಪ್ಪ, ಮಂಗಳೂರು. ಪುಟಗಳು: ೫೪. ಬೆಲೆ: ೬೫ ನಯೇ ಪೈಸೆ.

೫. Swami Shraddhananda Sevashram—Report for the year ending 31st March, 1958

೬. Deeksha (A Quarterly Magagine Published by the B. S. K. B, Association (Regd) Bombay.

೭. ವಿಜಯ ವಾಣಿ—ವಿಜಯ ದಶಮಿ ಸಂಚಿಕೆ. ಪುಟಗಳು: ೩೦. ಬೆಲೆ: ೨೦ ನಯೇ ಪೈಸೆ. (ಕವಿಕಾರಿನಿಂದ ಪ್ರಕಟವಾಗುವುದು.)

೮. ಯುಗ ಪುರುಷ (ದಸರಾ ವಿಶೇಷಾಂಕ ೧೯೫೮) ಪುಟಗಳು: ೪೨. ಬೆಲೆ: ರೂ. ೧. (ಕಿನ್ನಿಗೋಳಿಯಿಂದ ಬೆಲೆಕು ಕಾಣುವುದು.)

೯. ವಿಕ್ರಮ ವಿಜಯ ದಶಮಿ ಸಂಚಿಕೆ (೧೯೫೮) ಪುಟಗಳು ೧೦೦. ಬೆಲೆ ೧ ೦೦. (ಬೆಂಗಳೂರಿಂದ ಹೊರಡುವುದು.)



ಕುಮಾರಿ ಬಿಸ್ಕೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಳಿಕೆ ರೂ. ೪/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಕರು: ಷಾ ಕಂಪೆನಿ, ಮಂಗಳೂರು—1.

ಪ್ರಕಟಣೆ

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಕಾಳುನಾನೆ ಅಡಿಯಲ್ಲಿರುವ ಕುಡುಬಿ ಕಾಳು ನಾಯ್ಕನ ಮಗ ಪುರುಷ ನಾಯ್ಕ ಒಂದು ಮತ್ತು ಸದ್ರಿಯನನ ಮಗ ಕಾಳು ನಾಯ್ಕ ಸಹಾ ಎರಡು ಜನರು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನೆಂದರೆ— ಸಾಧಾರಣ ಒಂದು ತಿಂಗಳ ಹಿಂದೆ ಹೆಗ್ಗುಂಜೆ ಹೊಸಮನೆ ಪೇಪ ಹೆಗ್ಡೇರ ಮಗ ರಾಮುಂಡ ಹೆಗ್ಡೇರೆಂಬವರು ನಮ್ಮಿ ಪೈಕಿ ಒಂದನೇಯ ನವರ ಸಾಧಾರಣ ೬೦ ವರುಷ ಪ್ರಾಯದ ಪುರುಷ ನಾಯ್ಕ ಎಂಬವರನ್ನು, ೨ನೇಯವನಾದ ಕಾಳು ನಾಯ್ಕನು ಮನೆಯಲ್ಲಿ ಇಲ್ಲದ ಹೇಳಿ ಸುಗಿರಕಟ್ಟಿ ಎಂಬಲ್ಲಿಗೆ ಕರೆದುಕೊಂಡು ಹೋಗಿ, ನಿನ್ನ ಹೆಸರಿನ್ಲಿ ಒಂದು ದರಖಾಸ್ತು ಮಾಡಿಸಿಕೊಡುತ್ತೇನೆ ಅದಕ್ಕೆ ನಿನ್ನ ಎಡಗೈ ಹೆಬ್ಬೆಟ್ಟಿನ ಮುದ್ರೆ ಬೇಕು ಎಂತ ಹೇಳಿ ಅದಕ್ಕೆ ಅವರು ಸಮ್ಮತಿಸದಿದ್ದುದರಿಂದ ಆವರನ್ನು ಗದರಿಸಿ ಖಾಲಿ ಕಾಗದದ ಮೇಲೆ ಪುರುಷ ನಾಯ್ಕನ ಎಡಗೈ ಹೆಬ್ಬೆಟ್ಟಿನ ಮುದ್ರೆಯನ್ನು ಪಡೆದು ಅಲ್ಲಿಂದ ಹೋಗಿರುತ್ತಾರೆ. ನನ್ನು ಕುಟುಂಬದ ಸರ್ವ ವಹಿವಾಟನ್ನೂ ನಮ್ಮ ಪೈಕಿ ೨ನೇಯನವನಾದ ಕಾಳು ನಾಯ್ಕನೇ ನೋಡಿಕೊಂಡು ಬರುವವನಾಗಿದ್ದು ಅವನ ವಿನಹ ನಾವು ಯಾವ ವಹಿವಾಟನ್ನೂ ನಡೆಸಿಕೊಂಡು ಬಂದದ್ದಿಲ್ಲ. ಅಲ್ಲದೆ ನನ್ನ ಸಾಗುವಳ್ಳಿಯ ಉತ್ಪತ್ತಿಯು ಗೇಣಿ ಕೊಡುವುದು ಹೋಗ್ತಾ ನನ್ನ ಕುಟುಂಬದ ಜೀವನ ಸಾಗಾಣಿಕೆಯಾದುದರಿಂದ ನಾವು ಈ ತನಕ ಯಾರಿಂದಲೂ ಸಾಲ ವಗೈರೆ ಮಾಡಿದ್ದು ಇರುವುದಿಲ್ಲ. ಕಳೆದ ವರುಷದ ತನಕ ನಾವು ನಮ್ಮ ಧನಸಂರಿಗೆ ಗೇಣಿ ಸಂದಾಯ ಮಾಡಿ ಕೃತಾರ್ಥವಾದ ರಶೀದಿ ಪಡೆದಿರುತ್ತೇವೆ. ಹೀಗಿದ್ದೂ ನನ್ನನ್ನು ಮೋಸಗೊಳಿಸಿ ನಮ್ಮಿಂದ ಅಕ್ರಮವಾಗಿ ಲಾಭಹೊಂದುವ ಬಿಯಾಧೆಯಿಂದ ನನ್ನ ಸ್ಥಿತಿ ೧ನೇಯನವಿಂದ ಪಡೆದ ಸದ್ರಿ ಹೆಬ್ಬೆಟ್ಟಿನ ಮುದ್ರೆಯನ್ನು ಉಪಯೋಗಿಸಿ ಸದ್ರಿ ರಾಮುಂಡ ಹೆಗ್ಡೇರಾಗಲೀ ಇ ಇತರ ರಾಗಲೀ ಯಾವ ತರದ ಸ್ಟಾಂಪು ಕಾಗದ ಸೃಷ್ಟಿಸಿ ಸೋರ್ಜರಿ ರಿಕಾರ್ಡನ್ನು ಮಾಡಿದಲ್ಲಿ ಅದು ನವಂಬರ್ ಬಾಧಿಸತಕ್ಕದ್ದಲ್ಲ ಮತ್ತು ಅದರಿಂದುಂಟಾಗುವ ಸಕಲ ನಷ್ಟಕಷ್ಟಗಳಿಗೂ ಆವರೇ ಜವಾಬುದಾರರಾಗತಕ್ಕದ್ದೇ ಎಂತ ಈ ಮೂಲಕ ಸರ್ವರಿಗೂ ತಿಳಿಯಪಡಿಸಿದ್ದೇವೆ.

● ಈ ಎಡಗೈ ಹೆಬ್ಬೆಟ್ಟಿನ ಗುರುತು ಮತ್ತು ಗೆರೆಗಳು ಪುರುಷ ನಾಯ್ಕನ ರುಜು.

● ಈ ಎಡಗೈ ಹೆಬ್ಬೆಟ್ಟಿನ ಗುರುತು ಮತ್ತು ಗೆರೆಗಳು ಕಾಳು ನಾಯ್ಕನ ರುಜು.

ಹೆಗ್ಗುಂಜೆ, 2-11-58.

ರಾಷ್ಟ್ರೀಯತೆ

ಎನ್ನ ಬಗೆಯೆಂಬುದದು ನಿನ್ನದಾಗಲಿ, ಮಾತೆ

ಸಂಕುಚಿತ ಮನೋಭಾವನೆಯನ್ನು ದೂರೀಕರಿಸಿ ಭಾರತೀಯರು ಪಿಕಸಿತ ಹೃದಯರಾಗಬೇಕು

ಭಾರತವು ಅಖಂಡ ರಾಷ್ಟ್ರವೆಂದು ಜನರು ಆಡಿಕೊಳ್ಳುತಿದ್ದಾರೆ. ನಮ್ಮ ಸ್ವತಂತ್ರ ರಾಷ್ಟ್ರದ ಸಂವಿಧಾನದಲ್ಲಿಯೂ ಈ ವಿಷಯವನ್ನು ಸ್ಥಿರೀಕರಿಸಲಾಗಿದೆ. ರಾಷ್ಟ್ರದಲ್ಲಿ ಲೋಕಸಭೆ ಮತ್ತು ರಾಜ್ಯ ಸಭೆಗಳಿರುವುದೂ ಭಾರತವು ಅಖಂಡ ವೆಂಬುದನ್ನು ಸ್ಥಿರೀಕರಿಸುತ್ತದೆ. ನಮ್ಮ ಕಾಯಿದೆ ಕಾನೂನುಗಳು, ಸಾಹಿತ್ಯವೆಲ್ಲವೂ ಅದು ಅಖಂಡವೆಂದು ಘೋಷಿಸುತ್ತವೆ. ನಮ್ಮ ಪ್ರಥಮಾ ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಗಳೂ ಈ ವಿಶಾಲದೃಷ್ಟಿಯಲ್ಲಿ ರೂಪಿಸಲ್ಪಟ್ಟಿದೆ. ನಮ್ಮ ಆಡಳಿತೆಯ ಪದ್ಧತಿಯೂ ಇದೇ. ನಮ್ಮ ಗಮನ ಹರಿಯಬೇಕಾದ ಮುಖ್ಯ ಸಂಗತಿಯೂ ಇದೇ.

ಆದರೆ, ನಾವು ಭಾರತವು ಅಖಂಡ ವೆಂದು ತಿಳಿದಿದ್ದೇವೆಯೆ? ನಮ್ಮೆಲ್ಲರ ಹೃದಯಗಳು ಒಂದುಗೂಡಿರುವುವೆ? ಸತ್ಯವನ್ನು ಅಮುಕಿ ಹಿಡಿಯುವುದರಿಂದ ಅದು ಹೊರಬಾರದು ಳಿಯದು. ಸತ್ಯವನ್ನು ವಿಶಾಲ ಪ್ರಪಂಚದಲ್ಲಿ ವಿಹರಿಸಲು ಬಿಟ್ಟಾಗ, ಅದನ್ನು ಎಲ್ಲರೂ ನೋಡಬಲ್ಲರು.

ಒಂದು ಕಾಲದಲ್ಲಿ ಅದು ನಮ್ಮ ಜೀವನದ ಸತ್ಯವಾಗಿತ್ತು. ಒಂದು ಸಮಯದಲ್ಲಿ ಅದು ಸ್ವಪ್ನಜಾಗರಣಗಳಲ್ಲಿ ಹೃದಯಗಳಲ್ಲಿ, ಆಶೆ ಆಕಾಂಕ್ಷೆಗಳಲ್ಲಿ ಹರಿದಿತ್ತು. ನಾವೆಲ್ಲರೂ ಆದರಲ್ಲಿಯೇ ನಿಮಗ್ನರಿದ್ದೆವು. ನಮ್ಮ ಮಾತೃದರ್ಶನವನ್ನೂ ನಾವು ಮಾಡಿದ್ದೆವು. ಆದರೆ, ನಮ್ಮ ಮಾತೆ ಹೇಗಿದ್ದಾಳೆ? ತಲೆಯಲ್ಲಿ ಹಿಮಾಲಯ ಪರ್ವತದ ಧವಲ ಹಿಮವು ನೆಲಸಿದ್ದು, ಚರಣಗಳನ್ನು ಸಾಗರವು ತೊಳೆಯುತಿದ್ದು, ಸ್ತನಗಳಿಂದ ನದಿ ಪ್ರವಾಹಗಳು ಹರಿಯುತಿದ್ದು. ಆಕೆಯ ಸ್ವಾಭಾವಿಕ ಸೌಂದರ್ಯದಿಂದ ನಾವು ಬೆಳೆಯುತಿದ್ದೇವೆ. ನಾವಾಕೆಯ ವಿರಾಟ್‌ರೂಪವನ್ನು ಕಂಡು, ಆಕೆಯ ಕೂಗನ್ನು ಆಲಿಸಿದ್ದೆವು. ಆಕೆ ನಮ್ಮ ಕಲ್ಪನೆಯ ಮಾತೆಯಾಗಿರದೆ ನಮ್ಮಂತೆಯೇ ಜೀವಿತಳಾದವಳಲ್ಲದಳು. ನಮ್ಮೊಡನಾಡುವ, ನಮಗಾಜ್ಞೆದೆಯವಾಲಿಸುವ ನಮ್ಮನ್ನು ಕರೆಯುವ ತಾಯಿಯಾಗಿದ್ದಳು.

ಆಕೆಯ ಆಸಹ್ಯನೇದನೆಯನ್ನು ನಮ್ಮಿಂ ಸಹಿಸುವುದಸಾಧ್ಯವಾಗಿತ್ತು. ಆಕೆ ಅಳತೊಡಗಿದಾಗ ನಮ್ಮ ಕೈಬೆರಳುಗಳು ಮುಷ್ಟಿಬಿಗಿಯುತಿದ್ದುವು. ಆಕೆ ನಗುವಾಗ ನಮ್ಮಾಣಾವರಳುತಿತ್ತು. ಆಕೆಯ ಅಪಮಾನವಾದಾಗ ಎದೆ ತಿವಿದಂತೆ ಭಾಸವಾಗುತಿತ್ತು.

ನಾವಿಂದು ಅಂತಹ ಅಖಂಡತೆಯನ್ನು ಅಪಹಾಸ್ಯ ಮಾಡುತಿದ್ದೇವೆ. ಹೆಜ್ಜೆ ಹೆಜ್ಜೆಯಲ್ಲೂ ನಾವು ಆಕೆಯನ್ನು ಹೀನವಾಗಿ ಕಾಣುತ್ತೇವೆ. ದಕ್ಷಿಣೋತ್ತರದ ವಾದ, ಪ್ರಾಂತೀಯತೆಯ ಸಂಕುಚಿತತೆ ಬೆಳೆಯುತ್ತ ಹೋಗುತ್ತಿದೆ. ನಮ್ಮನಮ್ಮಲ್ಲಿ ಅನುಹನೆ, ಉದ್ವೇಗಗಳನ್ನು ಬೆಳೆಸಿಕೊಂಡು ಒಳಗೊಳಗೇನೇ ಉರಿಯುತ್ತಿರುವುದು ನಮ್ಮ ತಾಯಿಗೆ ಗೌರವಾಸ್ಪದವೆ? ನಾವು ಈಯೆಲ್ಲಾ ಖಂಡಖಂಡಿತ ವಾದವಿವಾದಗಳನ್ನೆಸಗುವಾಗ, ನಮ್ಮ ತಾಯ ರೂಪವನ್ನು ಮುಂದಿಟ್ಟುಕೊಳ್ಳುತ್ತೇವೆಯೆ?

ಒಬ್ಬನು ದೇಶದ ಎಲ್ಲ ಮೂಲೆಯಲ್ಲೂ ಪಾಸಿ ಆಗಾಗ ದೂರದೂರದ ಯಾತ್ರೆಗಳನ್ನು ಕೈಗೊಳ್ಳುತ್ತಾನೆ. ಆಗ ಆತನು ಲಜ್ಜಾವಸಂಗತಿಗಳನ್ನೆ ನೋಡಬಹುದು. ಸ್ವತಂತ್ರರಾದ ಮೇಲೆ ಬಂಗಾಲಿಗಳು ಅಚ್ಚ ಬಂಗಾಲಿಗಳಾದರು, ಅಸಾಮಿ, ಬಿಹಾರಿ, ಪಂಜಾಬಿ, ಗುಜರಾತಿ, ಮರಾಠಿ, ನೈಬೂರಿ, ಮದ್ರಾಸಿ, ಕೇರಳೀಯ ಇತ್ಯಾದಿ ಪ್ರಾಂತೀಯ ವಾದಿಗಳಾದ ನಾಗರಿಕರೇ ನಮಗೆ ಎಲ್ಲೆಲ್ಲೂ ಕಾಣಸಿಗುವರಲ್ಲದೆ ಭಾರತೀಯನೊಬ್ಬನಾದರೂ ಆಗೋಚರನಾಗಿರುವನು. ಅಖಂಡತೆ— ಭಾರತೀಯತೆಗಳು ಲೋಪವಾಗಿನೆ; ಅಥವಾ ಅಗುತ್ತಿವೆ. ಎಲ್ಲರೂ ತಂತಮ್ಮ ಭಾಷೆ – ಸಂಸ್ಕೃತಿಗಳ ಮಾತಿತ್ತಾತ್ತಾರೆ. ನಾವು ಲೋಕದಲ್ಲಿ ವರ್ಚಸ್ಸು ಬೀರಿ ಬದುಕಬಯಸುತ್ತೇವೆ; ರಾಜಕೀಯ, ರಾಷ್ಟ್ರೀಯ ಜೀವನದ ದೃಷ್ಟಿಯಲ್ಲಿ ನಮ್ಮ ಪೂರ್ವಜರಿಗಿಂತ ಮುಂದುವರಿದವರು ಎಂಬ ಅಹಂಕಾರ ಹೆಚ್ಚುತ್ತಿದೆ. ನಮ್ಮ ಪ್ರಾದೇಶಿಕ ಸಾಹಿತ್ಯ ಕೃತಿಗಳಲ್ಲಿ ಪ್ರದೇಶವನ್ನೆಜಾಡಿಗಳನ್ನೆವೆ; ಆದರೆ, ಎಲ್ಲಿಯೂ ಪ್ರಾದೇಶಿಕ ಸಂಸ್ಕೃತಿಯೆಂಬುದರ ಉಲ್ಲೇಖವಿಲ್ಲ. ನಾವಿಂದು ಪ್ರಾದೇಶಿಕ ಭಾವನೆಯನ್ನೇ ಬೆಳೆಸುತಿದ್ದೇವೆ; ನಮ್ಮನ್ನು ಪ್ರತಿ ಪ್ರತ್ಯೇಕ ಸ್ವತಂತ್ರ ಸಾಂಸ್ಕೃತಿಕ ಪರಂಪರೆಯ ರೂಪದಲ್ಲಿ ಕಲ್ಪಿಸುತ್ತೇವೆ.

ಆದರೆ, ಈ ರೀತಿಯಲ್ಲಿ ಸಂಸ್ಕೃತಿ ಸಂಗಮವಾಗುವುದೆ? ಹೀಗೆ ವಿಂಗಡ್ ದರ್ಶನವೊದಗಬಹುದೆ? ನಮ್ಮ "ಸ್ವ" ಎಂಬ ಸದಮ ಸಂಕುಚಿತತೆಯನ್ನು ದೂರೀಕರಿಸಿ, ಅದಕ್ಕೆ ವಿರಾಡ್ರೂಪವನ್ನೀಯದವರೆಗೆ ನಮ್ಮ ಭಾರತೀಯ ಸಂಸ್ಕೃತಿ, ಭಾರತೀಯ ರಾಷ್ಟ್ರ ಕೇವಲ ಉಲ್ಲೇಖದಲ್ಲಿ ಮಾತ್ರ ಇರಬಲ್ಲದೇ ವಿನಃ ಪ್ರಯೋಗಿಕದಲ್ಲಲ್ಲ. ಬೇರೆಬೇರೆ ಪ್ರಾಂತೀಯ ಸಂಸ್ಕೃತಿಗಳೆಲ್ಲವೂ ಭಾರತೀಯ ಸಂಸ್ಕೃತಿಯ ಮಹಾನಾಗರದಲ್ಲೇಕೆ ವಿಲೀನವಾಗಬಾರದು?

ತಮ್ಮ ಕುಟುಂಬವನ್ನು ಪತ್ನೀ ಪುತ್ರ ಪುತ್ರಿಯರನ್ನು, ಹೆಜ್ಜೆಗೆ, ತಮ್ಮ ಪ್ರಾಣವನ್ನೂ ಮುಡುಪಾಗಿಟ್ಟು, ತಮ್ಮ ಮಾತೃಭೂಮಿಯ ಏಕ್ಯಕ್ಕಾಗಿ ಅರ್ಪಿಸಿ ಹೋರಾಡಿ ಕೀರ್ತಿಶೇಷರಾದ ಮಹಾತ್ಮರ ಸೇಕರ ದಿವ್ಯಸ್ಫೂರ್ತಿಯನ್ನು ನಾವು ತಂದು ಕೊಂಡರೆ, ನಮಗೆ ನಾವೇ ಪ್ರಶ್ನಿಸಬಹುದು: ನಮ್ಮನ್ನು ಹೊತ್ತು ಹೆತ್ತು ನಾಕಿ, ಘೋಷಿಸಿದ ನಮ್ಮ ದೇಶಮಾತೆಯಿಂದೆಂತು ನನೆದಿರುವಳು? ಆಕೆಯು ಉದ್ವೇಗ ಹಾಗೂ ಸಂಕಟಗಳೇನು?

ನಮ್ಮ ಶರೀರಗಳೇನೋ ಒಂದಾಗಿವೆ; ಹೃದಯಗಳು ಮಾತ್ರ ಖಂಡಖಂಡವಾಗಿವೆ. ಮೇಲೊಂದು, ಕೆಳಗೊಂದು. ಮೇಲ್ಗಡೆಯ ಸೋದರರು ತಾವು ತಾವು ತಮ್ಮ ಸ್ವಕ್ಕೇನೇ ಇರಲು ಬಯಸುತ್ತಾರೆ; ಹಾಗೆಯೇ ಕೆಳಗಡೆಯೂ ತಾಯನ್ನು ಮರೆತು, ಮೋಹಪರವಶರಾಗಿ, ನಮಗೆ ಬೆಳಕು ನೀಡುವ ಓಜಸ್ವೀ ದೀಪ್ತಿಯಡಗಿಸಿಕೊಂಡಿರುವ, ನಮಗೆ ಬಲನೀಡುವ, ನಮ್ಮ ಪ್ರಜ್ಞೆಯನ್ನು ಹೆಚ್ಚಿಸಬಲ್ಲವಳನ್ನು ದೂರ ಮಾಡಿದ್ದೇವೆ. ನಾವಿಂದು ಭಾರತ ಮಾತೆಯ ದರ್ಶನಮಾಡಬೇಕು; ಆಕೆಯ ಮಾತನ್ನು ಕೇಳಬೇಕು; ಆಕೆಯನ್ನು ನಮ್ಮ ನಡುವೆ ನಿಲ್ಲಿಸಿ, ಆಕೆಯ ಚರಣಗಳ ಮೇಲೆ ಶಿರಕೆತವಬೇಕು. ಋಷಿ ಬಂಕಿಮರಂತೆ, ರವೀಂದ್ರನಾಥರಂತೆ, ಗಾಂಧಿಯಂತೆ ಆಕೆಯ ಮಾತನ್ನು ನಾವು ಪವಿತ್ರಾಲಿನ ಬೇಕು. ಕೋಟಿ ಸಂಖ್ಯೆಯ ಕಂಠ ಹಾಹಾಗೂ ಹೃದಯಗಳು ನಮ್ಮ ಮಾತೆಯೊಡನೆ ಭಾಷಾವಾಕ್ಯನ್ನಾಡಲಿ:

"ಎನ್ನ ಬಗೆಯೆಂಬುದದು ನಿನ್ನದಾಗಲಿ ಮಾತೆ."

("ಯೋಜನಾ"ದಿಂದ)

— ಗೋರಾ, ಉಡುಪಿ.

The Moolky Bank, Ltd.

MULKI.

ಡಿಪೋಸಿಟ್ ನೋಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%

5 ರಿಂದ 12 ,, 4½%

13 ,, 24 ,, 4¾%

ರೂ. 10,000/- ಮುತ್ತ ಮೇಲಣ ಹಣಕ್ಕೆ ¼% ಹೆಚ್ಚು.

ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ನೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಜ್ಞ. ಪೂಂಜ, ಮೆನೇಜರ್.

ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ.

ಸ್ಥಾಪನೆ: 1939

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಪೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೈತ್ಯಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ), ಮುಂಬಯಿ, ೧೪.

ಪರಿಚಯ

(ಇನೇ ಪುಟದಿಂದ)

ರ್ಮಕೋಶ"ದ ಫ್ರೆಂಚ್ ಅನುವಾದವನ್ನು ಹಿಂದೀ ಹಾಗೂ ಇಂಗ್ಲಿಷ್‌ಗಳಿಗೆ ರೂಪಾಂತರ ಕೂಡಾ ಮಾಡಿದ್ದರು. ಇದಲ್ಲದೆ ಇವರು ಬೌದ್ಧ ಧರ್ಮದ ಕುರಿತು ಒಂದು ಮಹತ್ವಪೂರ್ಣ ಗ್ರಂಥವನ್ನು ಬರೆದಿದ್ದಾರೆ.

ದಿವಂಗತ ಆಚಾರ್ಯರು ಉಬ್ಬಸ ರೋಗದಿಂದ ಪೀಡಿತರಾಗಿದ್ದರು. ಈ ಭಯಂಕರ ರೋಗವು ಅವರ ಶರೀರವನ್ನು ಅತ್ಯಂತ ಜರ್ಜರಿತವನ್ನಾಗಿ ಮಾಡಿತ್ತು. ಆದರೆ ಇವರ ಉತ್ಸಾಹ, ತೇಜೋಮಯ ಮುಖ ಮಂಡಲ ಹಾಗೂ ಕಾರ್ಯದಲ್ಲಿರುವ ನಿಜವಾದ ಮಗ್ನತೆ—ಇವುಗಳನ್ನು ನೋಡಿ ಅವರಸಂಪರ್ಕಕ್ಕೆಬಂದವರು ಜನರು ಅನಾಯಾಸವಾಗಿಯೇ ಅವರ ಕಡೆಗೆ ಆಕೃಷ್ಟರಾಗಿ ಬಿಡುತಿದ್ದರು. ಇವರ ಪ್ರಭಾವಶಾಲಿ ವ್ಯಕ್ತಿತ್ವ ಹಾಗೂ ಓಜಸ್ವೀ ಭಾಷಣ ಸಾಧಾರಣ ಜನರ ನೇಲೆಲ್ಲಾ ಪ್ರಭಾವ ಬೀರುತ್ತಿತ್ತು.

ಇವರು ೧೯ನೇ ಫೆಬ್ರುವರಿ, ೧೯೫೬ರಲ್ಲಿ ತನ್ನ ೬೬ನೇ ವರ್ಷ ಪ್ರಾಯದಲ್ಲಿ ಕೊಯಂಬತ್ತೂರಿನಿಂದ ೫೫ ಮೈಲು ದೂರವಿರುವ ಈರೋಡಿನಲ್ಲಿ ಮೃತ್ಯುವಶರಾದರು. ಇವರ ಅಂತಿಮ ಶವಯಾತ್ರೆಯ ಸಮಯ ಒಂದು ವಿಶಾಲ ಜನಸಮೂಹ ತನ್ನ ಶ್ರದ್ಧಾಂಜಲಿಯನ್ನರ್ಪಿಸಲು ಹೋಗಿತ್ತು. ಇವರ ಸಿಧನದಿಂದಾಗಿ ನಮ್ಮ ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಯಾವುದೊಂದು ಕೊರತೆಯುಂಟಾಗಿದೆಯೋ, ಅದು ಇನ್ನು ಮುಂದೆ ಪೂರೈಸಬಹುದು ಎಂಬುದರಲ್ಲಿ ಏನೇನೂ ಸಂದೇಹವಿಲ್ಲ.

(ಆಧಾರ)

— ಶ್ರೀ. ಪಿ. ನಾರಾಯಣ ಬಲ್ಲಾಳ.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಛಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಯುಗಧರ್ಮ

ಮಾರ್ಕಂಡೇಯರು ಭವಿಷ್ಯ ನುಡಿದಂತೆಯಿಂದು ನಡೆದಿದೆ

ಆದರೆ, ಅವರು ಹಾಗಂದುದು ಕಾಲಾಯ ತಸ್ಮೈ: ನಮ: ಎಂದು ಕೈಗಟ್ಟಿ ಕೂರುವುದಕ್ಕಲ್ಲ.

ಮಹಾ ಭಾರತದಲ್ಲಿ ಪಾಂಡವರು ಆರಣ್ಯ ವಾಸದಲ್ಲಿದ್ದಾಗ ಮಾರ್ಕಂಡೇಯ-ನು ಬಂದು ಅನೇಕ ಕಥೆಗಳನ್ನೂ ನೀತಿಗಳನ್ನೂ ಹೇಳುತ್ತಾನೆ. ಆ ಸಂದರ್ಭದಲ್ಲಿ ಕಲಿಯುಗದ ಧರ್ಮವನ್ನು ಕುರಿತು ಹೇಳುತ್ತಾ "……ಕಲಿಯುಗದಲ್ಲಿ ಧರ್ಮವು ಒಂದೇ ಪಾದದಲ್ಲಿ ನಿಲ್ಲ ತೊಡಗುತ್ತದೆ. ಜನರು ಕಷ್ಟಪಟ್ಟು ನದಿಗಳಿಗೆ ಭಾರೀ ಭಾರೀ ಆಣೆಕಟ್ಟುಗಳನ್ನು ಕಟ್ಟಿ ಅಲ್ಪ ಬೆಳೆಯನ್ನು ಬೆಳೆಯಿ ಸಿಕೊಳ್ಳುತ್ತಾರೆ. ಚಿಕ್ಕ ವರು ವಿಶೇಷ ಜ್ಞಾನಿಗಳಾಗಿ ಹಿರಿಯರಿಗೆ ಬುದ್ಧಿ ಹೇಳುತ್ತಾರೆ. ಹಿರಿಯರು ಜಡಮ ತಿಗಳಾಗ ತ್ತಾರೆ. ಜನರು ಸುಳ್ಳೇ ಪತ್ರಗಳನ್ನು ಬಿಟ್ಟು ನಿಷ್ಫಲವಾದ ಕ್ಷೇತ್ರಗಳಲ್ಲಿ ವಾಸಿಸಲು ಇಷ್ಟಪಡುತ್ತಾರೆ……"ಎಂದು ಮುಂತಾಗಿ ಹೇಳಿರುತ್ತಾನೆ.

ಈಗ ಕಾಣುವ ದೇಶದ ಪರಿಸ್ಥಿತಿಯನ್ನು ನೋಡುವಾಗ ಮಾರ್ಕಂಡೇಯನ ದೂರದೃಷ್ಟಿ ಕಣ್ಣಿಗೆ ಕಟ್ಟುವ ಹಾಗೆ ಕಾಣಿಸುವುದಿಲ್ಲವೆ? ಬ್ರಹ್ಮಾಂಡದಂತಹ ಪಂಚ ವಾರ್ಷಿಕ ಯೋಜನೆಗಳೇನು, ಅವುಗಳಿಗಾಗುವ ಕೋಟಿ ಕೋಟಿ ಖರ್ಚುಗಳೇನು, ಇದರ ಲೆಕ್ಕಾಚಾರವನ್ನೂ ಭವಿಷ್ಯ ವಾಣಿಯನ್ನೂ ಕೇಳುವಾಗ ಸ್ವರ್ಗವೇನೊ ಎತ್ತರದಲ್ಲಿರುವ ಹಾಗೂ, ಇನ್ನೇನು ಭೂಮಿಗೆ ಬೀಳುವ ಹಾಗೂ ಭಾಸವಾಗಬೇಕು. ಈ ಬಗೆಯ ಭ್ರಮಾಭಾಸಗಳಿಂದಲೇ ಕಳೆದು ಹೋಯಿತು ಒಂದು ಇಡೀ ದಶಕ. ಹಾಕಿಕೊಂಡ ಲೆಕ್ಕದಂತೆ ಪರಿಣಾಮ ಕಾಣಲಿಲ್ಲ. ದುರ್ವಿನಿಯೋಗದಿಂದ ಸ್ವಲ್ಪ- ಪದವೀ ಮೋಹದಿಂದ ಸ್ವಲ್ಪ,ಲಂಚ ರುಸುವುಗಳಿಂದ ಸ್ವಲ್ಪ ಜನನಿಗಳ ಅಧಿಕ್ಯತೆಯಿಂದ ಸ್ವಲ್ಪ, ಋತುಗಳ ವ್ಯತ್ಯಾಸದಿಂದ ಸ್ವಲ್ಪ, ಜನತೆಯ ಅಜ್ಞಾನದಿಂದ ಸ್ವಲ್ಪ, ವಂದಾಳುಗಳ ಅಥವಾ ಮ.ಖಂತರ ಮೊಬಾಟು ನಿಂದ ಸ್ವಲ್ಪ, ಹಾಗು ಅವರ ಅತಿಬುದ್ಧಿ ಮಂತಿಕೆಯಿಂದ ಸ್ವಲ್ಪ ಹೀಗೇನೋ ಸ್ವಲ್ಪ ಸ್ವಲ್ಪ ಲೋಪಗಳಿಂದಲೇ ಅಂದು ಕೊಂಡ ಹಾಗೆ ಯಾವುದೂ ಆಗಿಬರಲಿಲ್ಲ. ಪರದೇಶಗಳಿಂದ ಧನಧಾನ್ಯಗಳ ಸಾಲವನ್ನೂ ಸಹಾಯವನ್ನೂ ಇದು ವರೆಗೂ ಪಡೆಯುತ್ತ, ಇನ್ನು ಮುಂದೂಪಡೆಯ ಬೇಕಾದ ಅವಶ್ಯಕತೆಯುನ್ನೆ ಸೂಚಿಸಿಸುವ ದ್ವಿತೀಯ, ತೃತೀಯ ಪಂಚವರ್ಷ ಯೋಜನೆಗಳ ಮಹತ್ವವನ್ನು ನೋಡುವಾಗ ಮಾರ್ಕಂಡೇಯನ ದೂರದೃಷ್ಟಿಗೆ ಮೆಚ್ಚಲೇ ಬೇಕಾಗುತ್ತದೆ.

ಇನ್ನು ಚಿಕ್ಕ ಪ್ರಾಯುದವರ ವಿಶೇಷ ಜ್ಞಾನವನ್ನು ಕುರಿತು ಏನು ಹೇಳೋಣ? ಗುರುಗಳು, ಉಪಾಧ್ಯಾಯರು ಎಂಬ ಗೌರವ ಪುಸ್ತಕದ ಬದಲೇ ಕಾಯಿಯಾಗಿದೆ. ದುರ್ವಿದಗ್ಧತೆಯೂ, ಅಧಿಕಪ್ರಸಂಗತನ ಪೂರ್ವವಿದ್ಯಾರ್ಥಿಗಳಲ್ಲೇ ನೇರಿಕೊಂಡಿದೆಯೋ ಅನಿಸುತ್ತದೆ. ತಮಗಿತ್ತ ಪಾಠಗಳ ಗುಣದೋಷ ವಿಮರ್ಶೆ ಮಾಡವವರು ಕೂಡ ಅವರೇ ಆಗಿ ಬಿಡುತಿದ್ದಾರೆ ಈಗ. ಅವರನ್ನು ನೋಡಿ ಉಪಾಧ್ಯಾಯರೇ ಹೆದರ ಬೇಕಾಗಿದೆ. ಪರೀಕ್ಷಾ ಪತ್ರ ಕಠಿನವಾಗಿವೆಯೆಂದು ಸಹ್ಯಾಗ್ರಹಮಾಡುವುದು, ಗಲಾಟೆಮಾಡುವುದು, ದೊಡ್ಡ ದೊಡ್ಡ ರಾಜಕೀಯ ಧೋರಣೆಯಿಂದ ಭಾಷಣ ಕೊಡುವುದು, ಗೊಂಬುಗೂಡಿ ಸಾರ್ವಜನಿಕ ಕಾಯುದೆಗಳನ್ನು ಮುರಿಯುವುದು, ವಾಹನಗಳಿಗೆ ಶಿಲಾವರ್ಷಣ ಮಾಡುವುದು, ದೊಂಬಿ ಹೊಡೆಯುವುದು, ತಿರುಗುಳಿ ಪರಿಣಾಮವಾಗಿ ಶಾಲಾಕಾಲೇಜುಗಳನ್ನೆ ಮುಚ್ಚಿ ಬೆಡಬೇಕಾದ ಸಂದಿಗ್ಧಾವಸ್ಥೆ ಬರುವುದು ಇದೆಲ್ಲಾ ಈಗ ಸರ್ವೇ ಸಾಧಾರಣವಾದ ವಿಷಯವಾಯಿತು. ಆವರನ್ನು ಕೇಳಿ ಪಾಠಕಲಿಸುವಂತಹ ಹೆಚ್ಚಿಗಿಷ್ಟ ಪರಿಸ್ಥಿತಿ ಗುರುಗಳಿಗೆ ಬರುವುದೆಂದರೆ, ಇದೇನು ಕಲಿಕಾಲದ ಮಹಿಮೆಯೋ ಅನಿಸುವುದಿಲ್ಲವೆ?

ಹಾಗಾದರೆ ಈ ಪರಿಸ್ಥಿತಿಯನ್ನು ತಪ್ಪಿಸಲು ಸಾಧ್ಯವಿಲ್ಲವೇನು? ಮಾರ್ಕಂಡೇಯನು ಯುಗಧರ್ಮವೇ ಹಾಗೆಂದು ಎಂದೋ ಹೇಳಿಬಿಟ್ಟಿರುವನಲ್ಲವೇ? ಮತ್ತೇಕೆ ಚಿಂತೆ? ಎಂದು ಕೇಳುವೀರನೆ?

ಅಲ್ಲಲ್ಲ, ಹಾಗೆ ಸುಮ್ಮನೆ ಕುಳಿತರಾಗದು ಹಿಂದಿನವರು ಹೇಳಿಟ್ಟು ಮಾತಿನ ಹಾಗೆಯೇ ನಡೆಯುವುದೆಂದೂ, ಅದನ್ನು ತಪ್ಪಿಸಲಾಗುವುದಿಲ್ಲವೆಂದೂ ತಿಳಿದು ಮೌಢ್ಯತೆಯೆಂದಿರುವುದು ಸರಿಯಲ್ಲ. ಹಾಗೆ ಮೂಢರಾಗಿಂಬೇಕೆಂದು ಅವರು ಭವಿಷ್ಯ ನುಡಿದುದೂ ಅಲ್ಲ. ಈ ವಿಷಯಗಳನ್ನು ಮುಂದಾಗಿ ತಿಳಿದುಕೊಂಡು ತಕ್ಕ ಎಚ್ಚರಿಕೆಯಿಂದ ದುಷ್ಪರಿಣಾಮಗಳನ್ನ ತಡೆಯ ಬೇಕೆಂಬುದಕ್ಕಾಗಿಯೇ ಹೀಗೆ ಭವಿಷ್ಯ ನುಡಿದಿದ್ದಾರೆ ಹಿರಿಯರು. ಬಡ ಜನತೆಯ ಶಕ್ತಿಗೆ ತಕ್ಕ ಕೆಲಸವನ್ನೊಪ್ಪಿಸುತ್ತ, ತಕ್ಕಿಗೆತಕ್ಕ ಯೋಜನೆಗಳನ್ನು ಹಾಕುತ್ತಾ, ಹಾಕಿದ ಯೋಜನೆಗಳಲ್ಲಿ ಪ್ರಥಮ ಮಹತ್ವದ್ದಾವ್ಯಧು. ಅನಂತರದ ಮಹತ್ವದ್ದಾವ್ಯದು, ಆ ಡಿಗೆ ಮೊದಲು ಮಾಡಬೇಕೇ ಬಟ್ಟಲು ಮೊದಲು ತಯಾರಿಸಬೇಕೇ ? ಸಂಕ, ಆಣೆಕಟ್ಟು, ವ್ಯವಸಾಯ ಮೊದಲಾದ ಮುಖ್ಯತೆಗಳಲ್ಲಿ ಮೊದಲನೇ ಮುಖ್ಯತ್ವ ಯಾವುದಕ್ಕೆ, ಒಂದೆರೆ ಪ್ಲೇಡಾಗಿ ಎರಡೆರಡ್ಡಿನಾಲಾಲ್ಯಾಗಿ ಫಲಕೊಡುವ ಕ್ರಮಣಿಕೆಯೊಪ್ಪುದು ಎಂಬ ಸಮಸ್ಯೆಗಳನ್ನು ಗಜಿ ಬಿಜಿಗೆ - ಅವಕಾಶವಿಲ್ಲದಂತೆ ಬಿಡಿಬಿಡಿಯಾಗಿ ಯೋಚಿಸಿಕೊಂಡು ನಡೆಯುವುದಾದರೆ, ಆಮೆಯ ನಡಿಗೆಯೂ ದಿರೂ ಜಯವನ್ನು ಮುಟ್ಟುವ ಕಥೆಯಂತೆ, ಜನತೆನೆಮ್ಮದಿಯು ಶಾಶ್ವತಬಿಡುತ್ತ, ದೇಶವನ್ನು ಸುರೋಭಿವೃದ್ಧಿಗ್ಯೆತಂದಾರು. ಹೀಗೆ ಬೇಗದಲ್ಲಿ ಪುರೋಭಿವೃದ್ಧಿಗೆ ಬಂದಿರುವಚೀನಾ, ಅಮೇರಿಕಾ ಮೊದಲಾದ ದೇಶಗಳಿಲ್ಲವೇ ? ನೋಡಬಹುದಷ್ಟೇ?

ಹಿಂದಿನ ಕಾಲದಲ್ಲಿ ಗುರುಗಳ ವರ್ಚಸ್ಸು ಉನ್ನತಸ್ಥಾನವಲ್ಲಿತ್ತು. ಈಗ ಉಪಾಧ್ಯಾಯರು ಪಾಪ! ಬಡ ಉಪಾಧ್ಯಾಯರು. ಹುಡುಗ ಗೊಂದು ಎಗತಾಳಿಯ ಮೂರ್ತಿ, ಇಂಥಹ ಭಾವನೆಯಿಂದ ಕಲಿಯುವ ವಿದ್ಯೆ ಎಂತಹ ಬ್ರಹ್ಮವಿದ್ಯೆಯೇ ಆದರೂ ಅದರ ಗೌರವ ಅವ್ಯಕ್ತವೇ. ವಿದ್ಯೆಗೆ ಗೌರವ ಬರಬೇಕಾದರೆ ಗುರುಗಳ ವ್ಯಕ್ತಿತ್ವ ಉನ್ನತವಾಗಬೇಕು. ಅವರು ಉತ್ತಮ ಸ್ಥಿತಿಯಲ್ಲಿ ಬದುಕುವಂತಾಗಬೇಕು. ಆಗ ಅವರಿಗೆ ಗೌರವ ಬರುತ್ತದೆ, ಅವರು ಕಲಿಸುವ ವಿದ್ಯೆಗೂ ಗೌರವ ಬರುತ್ತದೆ. ಹುಡುಗರು ವಿಧೇಯರಾಗುತ್ತಾರೆ. ವಿದ್ಯಾಧಿಕಾರಿಗಳು ತಯಾರಿಸುವ ಪಾಠ ಪುಸ್ತಕಗಳು, ಪ್ರಶ್ನೆ. ಪತ್ರಿಕೆಗಳು ವಿಮರ್ಶೆಗೆ ಘಾಡನವಾಗುವುವಾದರೂ ಅದು ಗೌರವದಿಂದ ಕೂಡಿರಬೇಕಾದುದು ನ್ಯಾಯ. ಇದೆಲ್ಲಾ ಬರಬೇಕಾದರೆ ಮೊತ್ತಮೊದಲು ವಿದ್ಯಾರ್ಥಿಗಳ ಮಾನಸಿಕ ಕ್ಷೇತ್ರದಲ್ಲಿ ಭಯಭಕ್ತಿಗಳು ಬೇರೂರುವ ಹಾಗೆ ಗುರುಗಳ ಗೌರವ ಎದ್ದು ನಿಲ್ಲಬೇಕು. ಈ ಬಗೆಯಾಗಿ ಸದ್ಭಾವನೆಗಳನ್ನು ಕಾಪಾಡಿಕೊಳ್ಳಬೇಕೆಂತಲೇ ಮಾರ್ಕಂಡೆಯನು ಹಾಗೆ ಯುಗ ಧರ್ಮವನ್ನು ಕುರಿತು ಹೇಳಿದು ದಾಗಿದೆ.

—ಎಂ. ರಂಗರಾವ್.

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O P. No 43/1958.

ಕಲ್ಯಾಡ ಕೆಟ್ಟ ... —ಅರ್ಜಿದಾರಳು.

ಮತ್ತು

ಬಾಬು ಕೆಟ್ಟ .. ... —ಎದ್ರಿ.

ಇವರೊಳಗೆ

ಈ ಮೂಲಕ ಸರ್ವ ಜನರಿಗೂ ಅರ್ಜಿದಾರಳು ತಿಳಿಸುವದೇನಂದ್ರೆ

ಮೇಲ್ಕಂಡ ವ್ಯವಹಾರಣೆಯಲ್ಲಿ ಅರ್ಜಿದಾರವ ಎದ್ರಿಯ ತನ್ನ ನ್ಯಾಯವಾದಿ N. ಶಂಕರ ಕೆಟ್ಟ ಸೊತ್ತುಗಳಿಗೆ ಪಾರ್ಟಿಸ ಸರ್ಟಿಫಿಕೇಟು ಕೊಡಿಸಲೆ ಹೇಳಿ ಅರ್ಜಿದಾರಳು ಬರಕೊಂಡ ಮೇಲ್ಕಂಡ ಅರ್ಜಿ ತಾರೀಕು 20-11-1958ಕ್ಕೆ ಇಟ್ಟಿದೆ. ಅಲ್ಲಿವರೆಗೆ ಎದ್ರಿಯವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉಡಪುರಿಸತಕ್ಕದ್ದು.

(By order of the Court.)

N. M Adyanthaya.
Advocate for Petitioner.

Karkal, 28--10 --'58.

ಉತ್ತರ ಇಂಡಿಯಾ ಸಂಪೂರ್ಣ ತೀರ್ಥಯಾತ್ರೆಗೆ

ಗುಂತಕಲ್ ಸ್ಟೇಶನ್ ದಿಂದಾ—ಯಾತ್ರಾ ಹೊರಡುವದು.

ಹೆಚ್ಚಿನ ಸೌಕರ್ಯ ಉಳ್ಳ ಸ್ಪೆಶಲ್-ಟೂರಿಸ್ಟ್ ಗಾಡಿಯಿಂದಾ—

ಈ ಯಾತ್ರಾ ಹೊರಟು ಪುನಾ ೨ ದಿನ (ಭೀಮಾಶಂಕರ ಜೋತಿರ್ಲಿಂಗ ಆಳಂದಿ ಕಿಲ್ಲಾ ನಾರ್ಕೆಟ್ ನುಂತಾದವು) ಮುಂಬಯಿ ೨ ದಿನ (ಇಂಡಿಯಾ ದೇಶದ ಮುಖ್ಯ ಪಟ್ಟಣವು ಅನೇಕ ನೋಡತಕ್ಕ ೨೬ ಸ್ಥಳಗಳು) ನಾಶೀಕ ೨ ದಿನ (ತ್ರ್ಯಂಬಕೇಶ್ವರ ಜೋತಿರ್ಲಿಂಗ, ಪಂಚವಟಿ ತ್ರ್ಯಂಬಕೇಶ್ವರ ಉಗಮಸ್ಥಾನ ಮುಂತಾದವು) ಖಾಂಡವಾ ೧ ದಿನ (ನರ್ಮದಾ ನದಿ ಸ್ನಾನ ಓಂಕಾರೇಶ್ವರ ಜೋತಿರ್ಲಿಂಗ ದರ್ಶನ ಅಲ್ಲಾಹಾದ ೨ ದಿನ (ಗಂಗಾ ಯಮುನಾ ಸರಸ್ವತಿಗಳ ತ್ರಿವೇಣಿಸಂಗಮ ಸ್ನಾನ ವೇಣಿದಾನ ನೇಪರು ಬಂಗಾಲಾ ಕಮಲಾ ಹಾಸ್ಪೆಲ್ ಮುಂತಾನವು.) ೧೯ ಕ್ಷೇತ್ರ ಕಾಶೀ ೪ ದಿನ ೧೯ ಕಾಶೀ ವಿಶ್ವನಾಥನ ದರ್ಶನ, ಪುಣ್ಯ ಗಂಗಾಭಾಗೀರಥಿ ಸ್ನಾನ ಮಣಿಕರ್ಣಿಕಾ ಘಾಟಿನಲ್ಲಿ ಸ್ನಾನ ೬೪ ಘಾಟುಗಳ ಸ್ನಾನ ಕಾಲಭಾರವ ಕನಿಷ ಮುತನಾಯಿ. ವ್ಯಾಸಕಾಶಿ ಸಾರಾನಾಥ ಜೈನಕ್ಷೇತ್ರ ಮುಂತಾದವು) ೧೯ ಕ್ಷೇತ್ರ ಗಯಾ ೨ ದಿನ (ಫಲ್ಗು ನದಿ ಸ್ನಾನ ೧೯ ವಿಷ್ಣುಪಾದ ದರ್ಶನ ಪಿತೃಪಿಂಡದಾನ ಮುಂತಾದವು) ೧೯ ಸಮೇತಶಿಖರಜಿ (ಪುಸ್ಪಿದ್ಧ ವಾನ ಜೈನ ಕ್ಷೇತ್ರ) ಆಯೋಧ್ಯಾ ೧ ದಿನ (ಸರಯುನದಿ ಸ್ನಾನ ೧೯ ರಾಮಜೀತಾ ಮುಂದಿರಗಳು ಹನುಮಾನ ಗಡಿ ಮುಂತಾದವು) ಲಖನೌ ೧ ದಿನ (ಬಜಾರ ಚಾಕ ಕಾಜಿನ ಮನೆ ಮುಂತಾದವು,) ಹರಿದ್ವಾರ ೩ ದಿನ (ಹಿಮಾಚಲ ಶುದ್ಧಗಂಗಾ ಹಿಡುವಿಕೆ ಬ್ರಹ್ಮ ಕುಂಡ ಸ್ನಾನ ಕನಕಲ ಗುರುಕುಲ ವೈಷ್ಣೋದೇವಿ ಸ್ವರ್ಗಾಶ್ರಮ ದಕ್ಷಪ್ರಜಾ ಯೋಗಶಾಲೆ ಮುಂತಾದವು) ನಾಂಗಲ್ ಡ್ಯಾಮ್-೧ ದಿನ (ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಭಾಕ್ರಾ ನಾಂಗಲ ಆಣೆಕಟ್ಟು.) ಕುರುಕ್ಷೇತ್ರ ೧ ದಿನ (ಸೂರ್ಯಸರೋವರ ಸ್ನಾನ ಭೀಷ್ಮಾಚಾರ್ಯರ ದರ್ಶನ ಪಾತಾಳಗಂಗೆ) ದಿಲ್ಲಿ ೨ ದಿನ (ಕೆಂಪುಕೋಟೆ ರಾಷ್ಟ್ರಪತಿ ಕುತುಬಮಿನಾರ ಇಂದ್ರ ಪ್ರಸ್ತ ಹಸ್ತಿನಾವತಿ ಜಂತರ್-ಮಂತರ್ಪಾಲಯ ಬಿರ್ಲಾಮಂದಿರ ಬಿರ್ಲಾಹೌಸ ಶಾಪ್ಪಿಲಾಹಾಲ್ ಮುಂತಾದವು.) ಮಥುರಾ ೨ ದಿನ (ಬೃಂದಾವನ ಗೋಕುಲ ಗೋವರ್ಧನ ಯಮುನಾನದಿ ಸ್ನಾನ ದ್ವಾರಪ್ರಾನಾಥ ಮಂದಿರ ಮುಂತಾದವು) ಆಗ್ರಾ ೧ ದಿನ (ತಾಜ ಮಹಲ್ ಶಾಹಾಜಿಹಾನ ಕಿಲ್ಲಾ ಯಮುನಾನದಿ ಸ್ನಾನ ಬಜಾರ ಚಾಕ ಮುಂತಾದವು.) ಗ್ವಾಲೇರ ೧ ದಿನ (ಶಿವಾಜಿ ಕೋಟೆ ಝಾನ್ಸಿ ಮಹಾರಾಜ ಸಮಾಧಿ ಸ್ಥಳ ಮುಂತಾದವು) ಭೋಪಾಲ್ ೧ ದಿನ (ಕಿಲ್ಲಾ ದೊಡ್ಡ ತಲಾವರ ಮುಂತಾದವು) ಭುಸಾವಳ ೧ ದಿನ (ತಾಪಿ ನದಿ ಸ್ನಾನ ಮುಂತಾದವು) ದಾಂಡ್ ಪುಣ್ಯಕ್ಕೆ ಪರತ ಪುನಾದಿಂದಾ ಬೆಂಗಳೂರಿಗೆ ೪೫ ದಿವಸ ಪ್ರಯಾಣವು. ಈ ಯಾತ್ರೆಯಲ್ಲಿ ದ್ವಾರಕಾ-ಸೋಮನಾಥ—ಪಂಡರಪುರ ಎಲ್ಲಾ ಯಾತ್ರಾ ಸೇರಿವೆ, ಬಹಳೇ ಸುಕೌರ್ಯ ಪ್ರವಾಸವದೆ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಅಡ್ರೆಸ್ಸಕ್ಕೆ ಬರೆಯಬಹುದು. ತಂತಿ ಮೂಲಕ ಸೀಟುಗಳ ಸಂಖ್ಯೆ ತಿಳಿಯಿಸಬೇಕು.

ಶ್ರೀ ಶಿವಾನಂದ ಯಾತ್ರಾ ಕಂ. ಬನಹಟ್ಟಿ } ತಂತಿ ಆಡ್ರೆಸ್
ಪೊಸ್ಟ—ಬನಹಟ್ಟಿ ಜಿ. ವಿಜಾಪುರ } ಶಿವಾನಂದ ಯಾತ್ರಾ ಬನಹಟ್ಟಿ

ಭೂಸುಧಾರಣೆ

(೭ನೇ ಪುಟದಿಂದ)

ಪ್ಪಿಸುವುದಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ. ಹೀಗೆ ಸ್ವಂತ ಇಚ್ಛೆಯ ಪೇಲೆ ಬಿಟ್ಟುಕೊಡವ ಜಮೀನುಗಳನ್ನು ರಿವಿನ್ಯೂ ಅಧಿಕಾರಿಗಳು ದಾಖಲು ಮಾಡಿದ ಹೊರತು ಅನ್ಯಕ ಮಬದ್ಧವಾಗಿರುವುದಿಲ್ಲ. ಇಷ್ಟೇ ಅಲ್ಲದೆ ಜಮೀನುದಾರನು ತಾನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ ಹೊಂದಿರುವ ಹಕ್ಕಿನ ಪ್ರಕಾರ ಮಾತ್ರ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಉಳಿದ ಜಮೀನನ್ನು ಹಾಗೂ ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳುವ ಹಕ್ಕಿಲ್ಲದ ಜಮೀನುಗಳನ್ನು ಸರ್ಕಾರವೇ ವಹಿಸಿಕೊಳ್ಳುವುದು. ಈ ಸುಗ್ರೀವಾಜ್ಞೆಗಳ ಸ್ಥಾನದಲ್ಲಿ ೧೯೫೭ ರಲ್ಲಿ ಕಾನೂನುಗಳು ರಚಿಸಲ್ಪಟ್ಟವು. ಆಚರಣೆಗೆ ತರಲ್ಪಟ್ಟಿತು.

ಮೈಸೂರು ಸರ್ಕಾರದವರು ಗೇಣಿ ಸುಧಾರಣೆ ಸಂಬಂಧನಾದ ಪ್ರಶ್ನೆಗಳನ್ನು ಪರಿಶೀಲಿಸುವುದಕ್ಕಾಗಿ ಸಮಿತಿಯೊಂದನ್ನು ನೇಮಿಸಿದರು. ಈ ಸಮಿತಿಯು ವರದಿಯನ್ನು ಒಪ್ಪಿಸಿದೆ. ವ್ಯಾಪಕವಾದ ಕಾನೂನೊಂದನ್ನು ರಚಿಸುವ ವಿಚಾರವು ಸರ್ಕಾರದವರ ಪರಿಶೀಲನೆಯಲ್ಲಿದೆ.

ಈ ವರದಿಯ ಆಧಾರದ ಮೇಲೆ ಹಾಗೂ ಇನ್ನಿತರ ಪರಿಶೀಲನೆ ಸಬಹೆ ಸೂಚನೆಗಳನ್ನನುಸರಿಸಿ ಒಂದು ವಿಧೇಯಕವನ್ನು ತಯಾರಿಸುವ ಸಿದ್ಧತೆಯು ಬಹಳ ವಾಗಿ ಮುಂದರಿಯುತ್ತಿದೆ ಈ ಸಂಬಂಧದ ವಿಧೇಯಕವು ಈ ವಾರದ ವಿಧಾನ ಸಭೆಯಲ್ಲಿ ಮಂಡಿಸಲಿರುವುದೆಂದು ತಿಳಿದು ಬರುತ್ತದೆ.

ಭಯಂಕರ ವರ್ಣನೆ

ನರ್ಷಕಾಲದನಂತರ ಹರ್ಷ ಮೂಡಿಸುವ ಶರದೃತು

ಕನ್ನಡದ ಉದ್ದಾನು ಶೃಂಗಾರಕವಿ ಶರದೃತುವನ್ನು ಕವಿದೃಷ್ಟಿಯಿಂದ ಕಂಡಿದ್ದಾನೆ.

ಭೂಮಿಯಲ್ಲಿನ ನದಿಗಳು ಹಾವಸೆಯ ಹುಲ್ಲಿನಿಂದ ಕೂಡಿ ಹರಿಯುತ್ತಿರಲು, ದಡಗಳೂಳಗೆ ಹರಿಯುವ ನದಿಯು ಸಲಿಲಾವರ್ತಗಳಿಂದ ಕೂಡಿರಲು, ಹಿಂಸಕ ಕಾಮಿಗಳವು ಮದೋನ್ಮತ್ತತೆಯಿಂದ ಕೂಗುತ್ತಿರಲು, ನೆಯ್ದಿಲೆಯುಳ್ಳ ಪರಾಗವು ತುಂಬಿರಲು ಶರದೃತುವು ಕಾಣಿಸಿಕೊಂಡಿತು.

ನೋಡವೆಂಬ ವಿಟನಿಗೆ ವಿದ್ಯುನ್ನಾರಿಯ ವಿರಹವಾಗಲು ಅವನು ಬಡವಾಗಿ ಬಿಳುಪೇರಿದನೆಂಬಂತೆ ಆಕಾಶದಲ್ಲಿ ಶರದೃತುವಿನ ಜಲಗಳು ಬೆಳ್ಳಗೆ ಬೆಳಗಿದುವು. ಗಗನ ಶಿಲಾತಳದಲ್ಲಿ ಪಕ್ಷಿ ಸಮೂಹವು ಬಿಕ್ಕೆ ಹಾಕಿ ಕೋಮನೆಂಬಂತೆ, ಸಮುದ್ರದ ನೊರೆಯೆಲ್ಲುವು ಆಕಾಶಕ್ಕೆ ಹಾರಿತೆಂಬಂತೆ ಬಿಳಿಯ ಮುಗಿಲುಗಳು ಶೋಭಿಸಿದುವು. ಜೀವನ (ನೀರು)ವಿರುವ ವರೆಗೆ ಅಖಿಳಾವನಿಗೆ ದಾನಮಾಡಿ ಘನವಾದ ಕೀರ್ತಿಗಳು ಬೆಳ್ಳಗಾಗಿ ಕೀರ್ತಿ ಶೇಷವಾಯಿತೆಂಬಂತೆ ನಭದಲ್ಲಿ ತುಂಬಿದುವು.

ಸಮುದ್ರವನ್ನು ಒತ್ತಿ ಎಳೆದುತಂದು, ತೇದಾಗ, ಆಮ ಹೊಸತಾನ ಮುತ್ತುಗಳನ್ನು ಕುರಿಯುತ್ತಿರುವುದೋ ಎಂಬಂತೆ ಬಿಸಿಲಿನಲ್ಲಿ ಶೋಭಿಸುವ ಬಳಿಹಿಸಿಗಳನ್ನು ಹಗುರವಾಗಿ ಬೀಸಿಗಾದ ಮೋಡಗಳು ಸುರಿಸಿದುವು.

ನೀರು ತಿಳಿಯಾಯಿತು; ಚಂದ್ರನು ತೊಳೆದಂತೆ ಸಳಚ್ಚನೆ ಆದನು; ಗಗನವು ಮುಸುಕು ತೆರೆದಂತೆ ಕರಮೋಡಗಳು ದೂರಸರಿದುವು; ದಿಶಾಮುಖಗಳು ತೊಳೆಗಿದುವು. ದಿಕ್ಕುಗಳನ್ನು ಕಾಂತಿಹೀನವಾಗಿ ಮಾಡಿದ ಮುಗಿಲ್ಗೆ ಶರಪ್ಪ ತೊಳೆಯುವಂತೆ ಶುಭ್ರಚಾಂದ್ರಸ ಚಂದ್ರಿಕೆಯು ವಸರಿಸಿತು. ಹಸಿವು ತೀರುವ ವರೆಗೂ ಬೆಳ್ದಿಂಗಳನ್ನೂ ಸೂರ್ಯಪ್ರಕಾಶವನ್ನೂ ಹೀರುತ್ತ ಹೊಸ ನೆಯ್ದಿಲೆಯೂ ಅರಳಿದ ತಾವರೆಯೂ ಎಸೆದುವು. ಗಾಳಿಯಿಂದ ಕಂಪಿಸಿ ಸುರಿದ ನೀರು ಕೆಸಗಿನ ನೆಲವಾಗಿರಲು, ಅದರ ತುಂಬ ಕೇಸರವು ಬೀಳಲ್ಲು ಬಯಲ್ಲಿ ಅರಳಿದ ಕಮಲದಂತೆ ಕಮಲಗಳು ತೊಳಗಿದುವು. ಎಲಯೆಂಬ ಪಚ್ಚೆಕರ್ಪನ ನೆಲಗಟ್ಟು ಕಟ್ಟಿದಂತೆ ಹೂವಿನ ಬಲಿ ಕೆದರಿದಂತಿರಲು ಕೋಗಗಳೆಂಬ ಅರಮನೆಯಲ್ಲಿ ಜಲಜಗಳು ಶೋಭಿಸಿದುವು.

ಅಂಬುಜಾಕ್ಷಿಯರೆ ತನುಲತೆಯ ತುಂಬುತ್ತಿರಲು, ತೆರೆಗಳನ್ನು ಈಜಗಳು ಹೊಡೆಯುತ್ತಿಗಲು, ಹೊಳೆಯುವ ಪಚ್ಚೆಯ ಗೆಲ್ಲುಗಳನ್ನು ಹಿಡಿದು ನಿಳ್ಳನೆಯಿತ್ತಿಲನ್ನು ಆಯುತಿದ್ದರು. ಮೊರೆಯುತ್ತಿರುವ ಭೃಮರಗೀತವು ರೀತಿಕಾರವಾಗಿರಲು; ಮರಕತಶಿಲ್ಪದಲ್ಲಿ ಮನೋಜ್ಞ ಮಂಜರಿಯನ್ನು ಮುಸುಕಿದ ನವ ಮಂಜುಲ ಲತೆಯು ಮದನ ಜಾತಪಲತೆಯನ್ನು ಹೋಲುತಿತ್ತು. ಅಕಾಶದ ಬಿಳಿಯ ಮೋಡಗಳು ಮಂದವಿಟ್ಟನೆಂಬಂತೆ ವರ್ಷಕಾಲದಲ್ಲಿ ಮಾನಸಸರೋವರಕ್ಕೆ ಹಾರಿಹೋದ ಹಂಸಗಳು ಮರಳಿ ನಾಡಿಗೆ ಬಂದುವು. ನಳಿನೀಕಂದಗಳಿಂದ ಒಡನೆಯೇ ಕೋರಕಗಳು ಮೂಡಿ ಬಂದುವು. ಈ ನಳಿನದ ಗೆಡ್ಡೆಗಳ ಚಿಗುರುಳು ತನಿರಸವನ್ನೇಂಟಿ, ವರ್ಷಾಕಾಲದ ಗುಡುಗಿನ ಧ್ವನಿಯನ್ನು ಅನುಕರಿಸುವಂತೆ ಕಳಹಂಸಗಳು ಕೂಗುತಿದ್ದುವು.

ಹಂದೆ, ಮರೆಯಾಗಿದ್ದ ಸೂರ್ಯಕಿರಣಗಳು ಒಂದನ್ನೊಂದು ಎಡತಾಕಿ ಘರ್ಷಣೆಯಿಂದ ಕಿಡಿಯೇಳುವಂತೆ ಕಡುಬಿಸಿಲಿನ ಕಾಯ್ವು ಕಾಣಿಸಿಕೊಂಡಿತು. ಶರದದ ಬಿಸಿಲು ವ್ಯಾಪಿಸಲು, ತನ್ನ ಕೋಮಲತೆಯಿಂದಾಗಿ ಬಾಡಿ ಕಂದಿ, ಮೆಯ್ಯಾಯ್ದು ನೈದಿಲೆಯ ಬಡಬಡವಾಯಿತು.

ಅಂದು ನುಂಗಿದ್ದ ತಾರಸಕರವನ್ನು ಇಂದು ಉಗುಳ್ವಂತೆ ಸೂರ್ಯಕಿರಣಗಳು ಸುಡುತ್ತಿರಲು, ಸಧಿಕರು ಆಯಾಸಗೊಂಡು, ಮರದ ನೆರಳನ್ನಾಶ್ರಯಿಸಿದರು. ಶರದೃತುವು ಕಾಲಿಟ್ಟಿಪ್ಪದನೆಯೇ ಓಡಿಹೋಗುವ ಇಂದ್ರಜಾಪದಂತಹ ಬತ್ತಲತನೆಯನ್ನು ತಮ್ಮ ಚಾಂಚಲ್ಯದಿಂದ ಕರ್ದಂಕಿ ಅರಗಿಳಿಗಳು ಓಡುತಿದ್ದುವು.

ಹೊಳೆಯುವ ಬಿಸಿಲು ಮೆಯ್ವೆಳಗು, ಪರೋಧಾಗ್ರದಿಂದ ಇಳಿಯುವ ಸರಿಯು ಹಾರವಾಗಿರಲು, ವಿಕಸಿತವಾದ ಸರೋಜಗಳ ಗಂಧದಿಂದ ಕೂಡಿ, ಕಳಹಂಸ ಮನೋಹರಯಾನವಾಗಿ ಸ್ಮಿತಸಹಿತವಾದ ಉತ್ಪಲಧವಳಾಕ್ಷಿಯಂತೆ ಶರದಂಗನೆ ಕಣ್ಣಿಗ್ಗಿಪ್ಪವಳು. ಉಳಿಯುವ ಬಿಸಿಲು ಮೈಯ್ಯ ಬೆಂಕಿಯಾಗಿರಲು, ಬೆಲ್ಲರಿಯು ನೇಚಿಸುವ ಶೀತಜಲವಾಗಿರಲು, ಹಾರುತ್ತಿರುವ ಗಿಳಿಗಳ ರೆಕ್ಕೆಗಳು ಬೀಸುವ ಬೀಸಣಿಗೆಯಾಗಿರಲು, ನವ ಪಾಂಡು ಪಯೋಧರೆಯಾದ ಶರದ್ವಧು ವಿರಹಿಣಿಯಂತೆ ಕಂಡುಬಂದಳು.

ಕೆಸರು, ಗುಳಿ,ಸಮುದಾರಿಯೆಲ್ಲವುಗಳಲ್ಲಿಯೂ ಹೆಲ್ಲು ಬೆಳೆದು, ಎಕ ಸಮವಾಗಿ ತೋರುತಿದ್ದುವು. ಅಲ್ಲಲ್ಲಿ ದಪ್ಪನಾಗಿ ಬೆಳೆದ ಹುಲ್ಲಿನ ಮೇಲೆ ಕಾಲಿಡುವಾಗ ಹಾಸಿಗೆ ಪೆಟ್ಟಿದಂತೆಯೂ ಕೆರಿನಲ್ಲಿ ಪಾದ ವಿಡುವಾಗ ಕಸ್ತೂರಿ ಬಳೆದಂತೆಯೂ ಕಂಡುಬರುತಿತ್ತು. ಕಮಲ ಕುಮುದ ಪನಗಳು, ಕೆಂಬಣ್ಣದ ಬತ್ತದ ಗದ್ದೆಗಳು, ತಿಳಿದು ತೆರೆಯೆಬ್ಬಿಸುವ ಸರೋವರಗಳು ಮನೋಹರವಾಗಿದ್ದುವು.

ಬೆಳ್ಳವನೆಯೇ ಶ್ವೇತಚ್ಛತ್ರವಾಗಿರಲು ಕಳಹಂಸಗಳೇ ಧವಳಚಾಮರವಾಗಿರಲು ಉತ್ಪಲಧವಳಾಕ್ಷಿಯಾದ ಶರದ್ವನಿತಾಲಕನು ಮುಂದೆ ಸ್ವಾಗತಿಸುತಿದ್ದನು. ಹಸುರಾದ ಹುಲ್ಲುಗಳು ರೋಮಾವಳಿಯಾಗಿ, ಬೆಳ್ಮುಗಿಲನ್ನು ಹೊತ್ತ ಬೆಟ್ಟಗಳು ಕುಚಗಳಾಗಿ ಧರಣೀಕಾಂತೆಗೆ ಹೊಸ ಜವ್ವನವು ಅರುರಿಸಿದಂತೆ ತೋರುತಿತ್ತು. ಸಂಸಿಜದ ಎಲೆ ಹಾಗೂ ರಜಸ್ಸುಗಳು ಕಾಮನಬಿಲ್ಲನ್ನೂ ಸೊಳೆಯುವ ವಿಷಗುಗಳು ಎಳ ಮಿಂಚನ್ನೂ ಹೋಲುತ್ತಿರಲು ಕೆರೆಗಳು ಶರದನು ಹೊಡೆದಾಗ ಭೂಮಿಗುರುಳಿದ ಪೋಡಗಳನ್ನು ವಿಂಗಿಸುತಿದ್ದುವು. ಬಯಲಿನಲ್ಲಿನ ಕರೆಗಳ ಆಡಿಯಲ್ಲಿ ಹಾವಸೆ ಬೆಳೆದು ಅವನ್ನು ಹುಲ್ಲೆಂದು ಬಗೆದು ಹೆಂಗಸರು ಹರಿಯಲಿಳಿಯಲು ಜಲ್ಲಿ ಆಕ್ಕಿಯಿಸಿದ್ದ ಬಾಳೆವಿಸುಗಳುಕಡಿದು,ಚಿವರೆನ್ನು ಹಿಂತಿರುಗಿಸುತಿದ್ದುವು.ಸರೋವರಕೊಳಗಳ ಸುತ್ತಲಿನ ಗಂಧಶಾಲಿ ಕಳಮಗಳಲ್ಲಿನ ಸಸಿಗಳು ತಮ್ಮನಗೆಬೊಗವ ಚೆಲುವನ್ನು ಕಾಣಬೇಕೆಂಬ ಆತುರದಿಂದ ನೀರಾಶ್ರಯಬತ್ತ ಬಗ್ಗಿ ನೋಡುತಿದ್ದುವು. ತಮ್ಮ ಕೆಳಗಿನ ನೆಯ್ದಿಲೆಗಳು ಕಾಲುಹಿಡಿದು, ಬಾಯಿ ಆಯೆಂದು ತೆರೆದು, ಬೇಡಲು, ತಮ್ಮ ಶರಿಮಳವನ್ನು ಆದಸ್ಸು ಉಗುಳುವುದಕ್ಕೆ ಬಗ್ಗಿರುವಂತೆ ಗಂಧಶಾಲಿಗಳು ಎಸೆಯುತಿದ್ದುವು. ಇಲ್ಲಲ್ಲಿ ಕೆಲವು ಕುಮುದಗಳು ಸಸಿಗಳ ತೆನೆಗಳನ್ನು ಒಳಗೊಂಡು ಮುಟ್ಟಿದ್ದು ಕಂಪನ್ನು ಹೀರುವುದನ್ನು ಅನುಕರಿಸುತಿದ್ದುವು. ಗಿಳಿಗಳ ಬಳಗವು ಸಮವರ್ಣ ರುಚಿಗೆ ಹಾಯ್ದೆರಗುವಂತೆ ಕಳಮಳಿಗಳನ್ನು ಮುತ್ತುತಿದ್ದುವು. ತಮ್ಮನ್ನು ಯಾರೂ ಹೊಯ್ಯಬಾರದೆಂದೆಚ್ಚರಿಸುವಂತೆ ಗಿಳಿಗಳು ಕೆಂಬಣ್ಣದ ತೆನೆಗಳನ್ನು ಕಚ್ಚಿ ಹಾರಾಡುತಿದ್ದುವು.

ಗಿಳಿಗಳು ತೆನೆಯ ತುದಿಭಾಗವನ್ನಿ ಕುಳಿತು, ಅದರ ಕಾಳುಗಳನ್ನು ಕುಟುಕುತಿರುವಾಗ, ತೆನೆಗಳನ್ನು ಖಂಡಿಸುತ್ತಿರುವಾಗ ಕಾಳಿನ ಹಾಲು ಗದ್ದೆಗೆ ಸುರಿಯುತ್ತಿರಲು ಹಾಲನ್ನು ಹೊಯ್ದು ಸಸಿಗಳನ್ನು ಬೆಳಸಿದಂತೆ ತೋರಿಬರುತಿತ್ತು. ಗಾಳಿಯು ಬೀಸುತ್ತಿರುವಾಗ ಆದರೊಂದಿಗೆ ಸುಲಭದಲ್ಲಿ ಹಾರಿ, ಭತ್ತದ ತೆನೆಯ ಮೇಲೆ ಕೂರಲು , ಕಾಲು ಜಾರಲು, ತೂಗುತ್ತಿರುವ ತೆನೆಯನ್ನೇ ಆಧಾರವಾಗಿ ಆಧರಿಸಲು ಪ್ರಯತ್ನಿಸಿದಾಗ ಕೀಲ್ ಕೀರೆಂದು ಕೂಗಿ ಕೆಸರಿಗೆಬಿದ್ದು ಬಿಡಲು,ಗಿಡದ ಡಿಯ ನಿರ್ಮಲ ನೀರಿನಲ್ಲಿ ಪ್ರತಿಬಿಂಬಿಸುವ ತೆನೆಯ ಬಿಂಬವನ್ನು ಕಚ್ಚಿ, ನಿಸ್ಸು ಯೋಜನವೆಂದು ತಿಳಿದು ಬಂದಾಗ, ಪಕ್ಷದ ದಾಗೂ ಚುಂಚು ಪುಟವ ನೀರನ್ನೂ ಕೆಸರನ್ನೂ ಮೂರ್ದೂಡೆಯುವುದರಲ್ಲಿ ನಿರತವಾದ ಬಾಲಕೀರತ್ತ ಹಾಸ್ಯರಸವನ್ನು ಣ್ಣಿಸುವುದು.

ಜೆಲ್ಲಿದ ಶರಾಗದಿಂದ ಪಿಂಜರ ವರ್ಣದ ತೀರ ಜಲವು ಹೊಳೆಯುವ ಚಿನ್ನದೆಲೆಯಂತಿರಲು ಕೈರವ ಹಾಗೂ ಕಮಲ ಪಂಕುಲಗಳು ಕರ್ಣಪೂರಗಳಂತಿರಲು, ಸರೋವರವು ಭೂಕಾಂತೆಯ ಕರ್ಣಾಗಳಂತಿದ್ದುವು. ತುಂಬಿಯ ಮತ್ತು ಕನ್ನೈದಿಲೆಯ ಬಣ್ಣಗಳು ಕತ್ತಲೆಯೆಂಬ ಹಂಸಗಳ ಮತ್ತು ಬೆನ್ನೆ ದಿಲೆಯ ಬಿಳಿ ಬಣ್ಣವು ಹಗಲೆಂದೂ ಸೂರ್ಯಚಂದ್ರರಿಗೆ ಎಲ್ಲಿಲ್ಲದ ಕೂಟವನ್ನುಂಟು ಮಾಡುವಂತೆ ತೋರುತಿತ್ತು. ಕಮನೀಯವೂ ಮನೋಹರವೂ ಆಗಿ ಪ್ರಕೃತಿಯು ಕಂಗೊಳಿಸುತಿತ್ತು.

ಓದಲೇಬೇಕಾದ ಕೆಲವು ಹೊಸ ಪುಸ್ತಕಗಳು

ದ್ರೌಪದಿ ಮತ್ತು ಅವಶೃತ ಕನ್ಯೆ(ಪತ್ತೆದಾರಿಕ ದಂಬದ)	ಅಣ್ಣಂಗಿರಿ	1 8
ಸಿದ್ಧಾರ್ಥ	ಅನು: ಬಿ.ಎಸ್.ರಂಮಸ್ವಾವಿ.ಅಯ್ಯಂಗಾರ	2 0
ಕೊನೆಯ ಭೇಟಿ	ಸರೋಜಮ್ಮ ಅನಂತರಾಮಯ್ಯ	1 8
ಗಾಂಧಿ	ಅನು: ವಿ. ಎಸ್. ನಾರಾಯಣ ರಾವ್	2 4
ಜೇರ್ಮನ್ ವೀರಮಾಳ್	ಅನು: ನಾ. ಕಸ್ತೂರಿ	1 8
ಕೊಕೋರೊ	ಅನು: ಡಿ. ವಿ. ರಾಘವೇಂದ್ರ	1 0
ವಿಭಾ (ರವೀಂದ್ರನಾಥ ಠಾಕೂರ್)	ಅನು: ಅಂಬಿ.ಜಾಷ್ಟಿ	2 0
ನ್ಯತಾಪ ಮಂದಲಿ	ಮತ್ತೂರು ಕೃಷ್ಣಮೂರ್ತಿ	1 4
ಅತ್ತೆ	ಅನು: ಪಿ.ವೆಂಕೋಬಾಚಾರ್ಯ(ಮಾ.ರಾಗೋ.)	0 12
ಅಂಬೆಸನೆ (ಠಾಗೋರ್)	ಅನು: ರಾ.ಗಣೇಶ ಶರ್ಮ ಮತ್ತೂರು	0 12
ಹೊನ್ನಿನ ಹಂಬಲ	ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್	2 12
ಅಪರ್ಣ ಚಿತ್ರಗಳು (ಸಂಕಲನ)		1 8
ಕಿರುಗತೆಗಳು	ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್	1 12
ದಕ್ಷಿಣ ಭಾರತದ ಇತಿಹಾಸ	ಅನು: ಜಿ. ಎಸ್. ಕೃಷ್ಣರಾವ್	3 0
ಕುಮಾರಿ ಸಂಸ್ಕೃತಾ	ರಂಗರಾಯ ತಲಚೇರಿಕರ	0 12
ವಾತ್ಸಲ್ಯ	(ಶರತ್) ಅನು: ಪ್ರಕಾರ ಬುರ್ಡೆ	1 0
ಬಿಳಿ ಕೊಕ್ಕರೆ	ಗೌರೀಶ ಕ್ಯಾಕೆಣಿ	1 4
ರಘುನಾಥನ ನಾಪಸೆ	ಸಿ. ಕೆ. ವೆಂಕಟರಾಮಯ್ಯ	1 4
ಮಾತಿನ ಮಲ್ಲಿ	ಜಿ. ಪಿ. ರಾಜರತ್ನಂ	1 12
ಭತ್ತೆ ವಿೂರಾ	ಆರ್. ಕಲ್ಯಾಣಮ್ಮ	1 0
ನಮ್ಮ ಪ್ರವಾಸ	ಮ. ನಾ. ಮೂರ್ತಿ	1=60N.P.
ಕಲ್ಲಿನ ಕಾಮಣ್ಣ	ಜಿ. ಪಿ. ರಾಜರತ್ನಂ	2 8
ಸವಿಸ್ಮರಣ	ಬಿ. ಕೆ. ಸುಬ್ಬರಾವ್	1 8
ಪ್ರೇಮದರ್ಶಿ	ವಿ. ಎನ್. ರಾಜಾರಾವ್	1 4
ಭಾರತದ ನಾಯಕಮಣಿಗಳು	ಎಲ್. ಗುಂಡಪ್ಪ	1 8
ನೀತಿಯ ನೆಲಗಟ್ಟು	ಹೊಸಕೆರೆ ಚಿದಂಬಯ್ಯ	2 0
ಹೆಂದ ಗಜ್ಜೆ	ಕುಮಾರ.ವೆಂಕಣ್ಣಿ	1 8
ಆಲಿವರ ಟ್ವಿಸ್ಟ್	ಜಿ. ಪಿ. ರಾಜರತ್ನಂ	1 6
ಸೌದಾಮಿನಿ	ಬಿ.ಎಸ್.ರಾಮಸ್ವಾಮಿ ಅಯ್ಯಂಗಾರ್	2=10N.P.

ಅಂಚೆಪೆಚ್ಚಿ ಬೇಕು. ಪುಸ್ತಕ ವ್ಯಾಪಾರಿಗಳಿಗೆ ಕಮಿಷನ್ ಇದೆ. ವಿಚಾರಿಸಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
REGD. NO. M. 3618

UDIPI, THURSDAY
6—11—1958

LICENSE NO. 31
Licensed to Post without Prepaymen

ಸ್ಥಳೀಯ ಸಂಸ್ಥೆಗಳು

ಜಿಲ್ಲಾ ಬೋರ್ಡುಗಳ ಸ್ಥಾನಕ್ಕೆ ತಾಲೂಕು ಬೋರ್ಡುಗಳು

ಕಾರ್ಯಕ್ಷಮತೆಯನ್ನು ಜೆಚ್ಚಿಸುವುದೇ ಈ ಪರಿವರ್ತನೆಯ ಆಶಯ.

ಆದರೆ, ಅದು ಕೈಗೂಡಬಲ್ಲುದೆ?

ಮೈಸೂರು ವಿಧಾನ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳ ಸಂಬಂಧದ ಮಸೂದೆಯೊಂದು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಲ್ಪಟ್ಟಿತು. ಈ ಮಸೂದೆಯನ್ವಯ ಈಗಿರುವ ಜಿಲ್ಲಾ ಬೋರ್ಡುಗಳು ರದ್ದಾಗಿ, ಅವುಗಳ ಬದಲು ತಾಲೂಕು ಬೋರ್ಡುಗಳು ರಚಿತವಾಗಲಿರುವುವು. ಜಿಲ್ಲಾ ಬೋರ್ಡುಗಳಿಗಿಂತ ತಾಲೂಕು ಬೋರ್ಡುಗಳು ಸಮರ್ಪಕವಾಗಿ ಕಾರ್ಯಗಳನ್ನು ನಿರವೇರಿಸಲು ಸಮರ್ಥವಾಗುವುದೇಂದು ಹೇಳಲಾಗಿದೆ.

ಇಂದು ಜಿಲ್ಲಾ ಬೋರ್ಡುಗಳ ಕಾರ್ಯ ಪ್ರಣಾಲಿಯು ನಾಕಷ್ಟು ಪರಿಣಾಮಕಾರಿಯಾಗಿಲ್ಲವೆಂಬುದನ್ನು ಒಪ್ಪಬೇಕು. ಆದರೆ, ಇದಕ್ಕೆ ಮುಖ್ಯ ಕಾರಣ ಜಿಲ್ಲಾ ಬೋರ್ಡುಗಳ ಆರ್ಥಿಕ ಪರಿಸ್ಥಿತಿಯೇ ಎಂಬುದು ನಿರ್ವಿವಾದ ಇತ್ತೀಚೆಗೆ, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ವಾರ್ಷಿಕ ವರದಿಯನ್ನು ನುಂದಿಡುತ್ತಾ ಮಾನ್ಯ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು, ಈ ವಿಚಾರವತ್ತ ಕ್ಷ—ಕೇರಣವನ್ನು ಬಿ.ರಿ. ಸರಕಾರವು ಇವುಗಳಿಗೆ ಕೊಡಮಾಡುವ ಸಹಾಯಧನವು ನಾಕಷ್ಟು ಪ್ರಮಾಣದಲ್ಲಲ್ಲದಿರುವುದೂ, ಮಂಜೂರಾದ ಸಹಾಯಧನವಾದರೂ ಸಕಾಲಕ್ಕೆ ರವಾನಿಸಲ್ಪಡದಿರುವುದೂ ಮುಖ್ಯ ಕಾರಣವಾಗಿ ಜಿಲ್ಲಾ ಬೋರ್ಡುಗಳ ಕಾರ್ಯಪ್ರಣಾಳಿಯಲ್ಲಿ ಆತಂಕಗಳು ಉದ್ಭವಿಸುತ್ತವೆ ಎಂದಿದ್ದಾರೆ. ಆದುದರಿಂದ, ಜಿಲ್ಲಾ ಬೋರ್ಡುಗಳು ತೃಪ್ತಿಕರವಾಗಿ ಸೇವೆ ಸಲ್ಲಿಸುವಂತೆ ಮಾಡಲು ಆರ್ಥಿಕ ವ್ಯವಸ್ಥೆಯೇ ಮೂಲಕಾರಣವೆನ್ನಬಹುದು.

ಒಂದು ಕಾಲದಲ್ಲಿ—ಎಂದರೆ, ಕೆಲವು ದಶಕಗಳ ಪೂರ್ವದಲ್ಲಿ— ತಾಲೂಕು ಬೋರ್ಡುಗಳು ಸಮರ್ಪಕವಾಗಿ ಕಾರ್ಯವೆಸಗುವುದಿಲ್ಲವೆಂದು ಜಿಲ್ಲಾ ಬೋರ್ಡುಗಳನ್ನು ಸ್ಥಾಪಿಸಿದುದಾಗಿದ. ಈ ಕತ್ಯಸಂಗತಿಯತ್ತ ಸರಕಾರದ ಗಮನವನ್ನು ಸೆಳೆದಾಗ, ಸ್ಥಳೀಯ ಸಂಸ್ಥೆಗಳ ಮಂತ್ರಿವರ್ಯರು ನಾಕಷ್ಟು ಆರ್ಥಿಕಬಲವಿಲ್ಲದೇನೇ ಆಗ ತಾಲೂಕು ಬೋರ್ಡುಗಳು ಕೆಲಸ ಮಾಡಲಿಲ್ಲವೆಂದೂ, ಇನ್ನು ಮುಂದೆ, ಅವುಗಳಿಗೆ ಸಕಾಲದಲ್ಲಿ ಪೂರ್ವಭಾವಿಯಾಗಿಯೇ ಆರ್ಥಿಕ ಸಹಾಯವನ್ನು ಕ್ರಮಗತನಾಗಿ ಸೀಡುವ ವ್ಯವಸ್ಥೆ ಮಾಡಲಾಗುವುದೆಂದೂ ಹೇಳಿದರು. ಇಂದು, ಈ ಜಿಲ್ಲಾ ಬೋರ್ಡುಗಳು ಅಸಫಲವಾಗಲು ಮುಖ್ಯ ಕಾರಣವಾದ ಆರ್ಥಿಕ ವಿಚಾರವನ್ನು ಸುಧಾರಿಸಿದಲ್ಲಿ ಜಿಲ್ಲಾ ಬೋರ್ಡುಗಳೂ ಉತ್ತಮ ರೀತಿಯಿಂದ ಕಾರ್ಯವೆಸಗಲಾರವೆಂದು ಹೇಳುವುದು ಅಸಾಧ್ಯ. ಆದುದರಿಂದ, ತಾಲೂಕು ಬೋರ್ಡುಗಳಿಗೆ ಕೊಡಬಹುದಾದ ಕ್ರಮಾಗತ ಸಹಾಯವನ್ನು ಜಿಲ್ಲಾ ಬೋರ್ಡುಗಳಿಗೇನೇ ಇತ್ತರೆ, ಅದರಿಂದ, ಈಗಿರುವುದಕ್ಕಿಂತ ಹೆಚ್ಚಿನ ಕಾರ್ಯಕ್ಷಮತೆ ತೋರಿಬರಲಾರದೇ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ

ತಾಲೂಕು ಬೋರ್ಡುಗಳ ರಚನೆಯಾದಾಗ, ಜೋರ್ಡುಗಳು ಹೆಚ್ಚಾಗುವುವು. ಸರಕಾರದಿಂದ ಹೊತ್ತಿಗೆ ಸರಿಯಾಗಿ ನಾಕಷ್ಟು ಸಹಾಯಧನ ದೊರೆಯವುದು ನಿಶ್ಚಯವಾದರೆ, ನಮ್ಮ ರಾಜ್ಯಸರಕಾರದ ಆಲಸ್ಯ ಮನೋಭಾವನೆಯನ್ನು, ಈ ಕಾರ್ಯವೆಷ್ಟು ಯಶಸ್ವಿಯಾಗುವುದೋ ಅನುಭವದಿಂದ ಕಂಡುಕೊಳ್ಳಬೇಕಷ್ಟೆ. ತಾಲೂಕು ಬೋರ್ಡುಗಳು ಮನಸ್ಸು ಮಾಡಿದರೆ, ಉತ್ತಮ ರೀತಿಯಿಂದ ಕಾರ್ಯ ನಿಸಗಬಹುದು. ಪರಿಶೀಲಕ ಸಮಿತಿಯು ಹೆಚ್ಚಿನಮಟ್ಟಿಗೆ ಈ ಮಸೂದೆಯ ಮೂಲ ತತ್ವಗಳನ್ನು ಒಪ್ಪಿ, ಆದು ಮಸೂದೆಯಾಗಿ ಬರುವುದೆಂಬುದು ನಿರೀಕ್ಷೆತ. ಆದರೆ, ಫಲವು ನಿಜಯೇ ಕಹಿಯೇ ಎಂದು ಮುಂದೆ ಮಾತ್ರ ಹೇಳಬೇಕು.

ವಿನೋದ ವಿಹಾರ

ಓದುವಿರಾದರೆ ನಕ್ಕು ನಲಿಯಬಹುದು

ಮೂರ್ಖರಿಗೂ ತಿಳಿಯಬೇಕು

ಸಂಪಾದಕ ಮಹಾಶಯರಲ್ಲಿಗೋರ್ವ ಒಂದು ಲೇಖನವನ್ನು ತಂದುಕೊಟ್ಟು ಸಮೀಪದ ಕುರ್ಚಿಯನ್ನೆಳೆದು ಕೂತುಕೊಂಡ. ಗುರುಹಾಶಯರು ಅತ್ತಿತ್ತ ನೋಡುತ್ತ ಲೇಖಕನ ಮುಖಚರ್ಯೆಯಿಂದಲೇ ಹೊಸಬನೆಂದರಿತು ಲೇಖನ ಹೇಗಿರಬೇಕು ಎಂದು ಲೇಖನಕಲೆಯ ಮೇಲೆ ಉಪನ್ಯಾಸವೀಯತೊಡಗಿದರು: ನ್ವಾಮಿ, ತಾವು ಲೇಖನಕ್ಷೇತ್ರಕ್ಕೆ ಹೊಸಬರು. ನಿಮ್ಮ ಪ್ರಯತ್ನವು ಫಲಿಸಲಿ. ಆದರೆ, ಶತಮೂರ್ಖನಿಗೂ ಅರ್ಥವಾಗುವಷ್ಟು ಸುಲಭ ಗ್ರಾಹ್ಯವೂ ಸರಳಭಾಷಿಣಿಯೂ ಆಗಿ ನಿಮ್ಮ ಲೇಖನಗಳಿರುವಂತೆ ಪ್ರಯತ್ನಿಸಿರಿ. ಆಗ ಲೇಖನದ ಉದ್ದೇಶ ನೂರಕ್ಕೆ ನೂರರಷ್ಟು ಫಲಿಸುವುದು,

ತಟಕ್ಕನೆ ಎದ್ದು ನಿಂತು ಲೇಖಕ ಮಾನ್ಯರಿದು: ಆದರೆ, ಮಹಾಶಯರೇ, ಈ ಲೇಖನ ದಲ್ಲಿ ನಿಮ್ಮ ಅಭಿಪ್ರಾಯಗಳು ಸರಿಯಾಗಿ ಅನುಸರಿಸಲ್ಪಟ್ಟಿರುವುದು ನಿಮ್ಮ ಗಮನಕ್ಕೆ ಬಾರದೆ ಹೋಯ ತೆ?

ಸಂಪಾದಕರು ಬೇರೆ ಕೆಲಸವಿದೆಯೆಂದು ಒಳ ಹೋದವರು ನವಲೇಖಕರು ಹೊರ ಹೋಗುವ ವರೆಗೆ ಆಫೀಸಿಗೆ ಕಾಲಿರಿಸಲಿಲ್ಲ

೦೦ ೦೦

ಉತ್ತಮ ಡಾಕ್ಟರರು

ಚೀನೀ ನಾಗರಿಕನೊಬ್ಬನು ಭಾರತಕ್ಕೆ ಸಂದರ್ಶನವಿತ್ತಾಗ ವೈದ್ಯಕೀಯ ವಿದ್ಯಾರ್ಥಿಗಳು ಆತನನ್ನು ಮುತ್ತಿ ಪ್ರಶ್ನೆಗಳ ತೊಡಗಿದರು: ಚೀನಾದಲ್ಲಿ ಒಳ್ಳೆಯ ಡಾಕ್ಟರರಿರುವರೆ?

ಚೀನೀ ನಾಗರಿಕ—ಚೀನವು ಒಳ್ಳೆಯ ಡಾಕ್ಟರರಿಂದಲೇ ತುಂಬಿದೆ ಸುಂಗ್‌ಸೀಯವರನ್ನೇ ತೆಗೆದುಕೊಳ್ಳಿ,ಅವರೂ ಒಳ್ಳೆಯ ಡಾಕ್ಟರರು. ಅವರೇ ನನ್ನ ಪ್ರಾಣವನ್ನುಳಿಸಿದವರು.

ಪ್ರಶ್ನೆ ಸಿದ್ಧವಾಗಿತ್ತು—ಹೇಗೆ?

ಒಂದು ಬಾರಿ ನಾನು ಖಾಯಿಲೆ ಬಿದ್ದುಬಿಟ್ಟೆ. ಡಾ. ಲೂಲಂಗರನ್ನು ಕರೆಸಿದೆ ಆವರು ಔಷಧಿಯಿತ್ತರು. ಆದರೆ, ನನ್ನ ಸ್ಥಿತಿಯು ಮತ್ತೂ ಕೆಡುತ್ತ ಹೋಯಿತು. ಆ ಮೇಲೆ, ಡಾ. ಜುಂಗರನ್ನು ಕರೆಸಿದೆ. ಆವರ ಔಷಧಿಯಿಂದ ನನ್ನ ಆರೋಗ್ಯ ಸ್ಥಿತಿಯು ಮತ್ತಷ್ಟು ಗಂಭೀರವಾಗಿ ಪರಿಣಮಿಸಿತು. ಮುಂದೇನೂ ಮಾಡಬಹೆಯದೆ, ಡಾ. ಸುಂಗ್‌ಸೀಯನರನ್ನು ಕರೆಕಳಿಸಿದೆ. ಆದರೆ, ಆವರಿಗೆ ಕಾರ್ಯಭಾರದ ನಿಮಿತ್ತದಿಂದ ಬರುವುದಕ್ಕೇ ಆಗಲಿಲ್ಲ. ಹೀಗಾಗಿ ನನ್ನ ಪ್ರಾಣವು ಉಳಿಯಿತು. ಆವರೂ ಬರುತಿದ್ದರೆ, ನಾನು ನಿಮ್ಮನ್ನು ನೋಡುತ್ತಲೇ ಇರಲಿಲ್ಲ—ಚೀನೀ ನಾಗರಿಕನು ಹೇಳಿದನು.

ಪ್ರಶ್ನಿಸಿದವರಿಗಿದೊಂದು ನೋಜನಿಸಿತು.

೦೦ ೦೦

ಕೊಪ್ಪ

ವಿಶಾಲವಾಗಿ ಹಬ್ಬುತ್ತಿರುವ
ಸಿಂಡಿಕೇಟ್ ಬೇಂಕಿನ
ನೂರಹದಿನೈದನೆಯ ಶಾಖೆ

ಆಕ್ಟೋಬರ ೨೦, ೧೯೫೮ರಂದು
ಕೊಪ್ಪದಲ್ಲಿ ಆರಂಭವಾಗಿದೆ.

ಶ್ರೀ. ಎನ್. ತಂಕರ ಶೆಟ್ಟಿ,
ಏಜಂಟ್, ಕೊಪ್ಪ.

ಡಾ| ಟಿ. ಎಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಶ್ರೀ. ಟಿ. ಎ. ಪೈ,
ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್
ಸಿಂಡಿಕೇಟ್, ಲಿ.

THE CANARA INDUSTRIAL & BANKING
SYNDICATE LTD., UDIPI



ಲಂಡನ್ ಪ್ರದರ್ಶನದಲ್ಲಿಟ್ಟ "ಪಶ್ಚಿಮಾ ಇಂಡಿಯಾ" ದ ರಂಜದಂಡ

ಗುರುವಿಗೆ ತಿರುಮಂತ್ರ

ಸೇರಜೀಯನದು ಲೆಸ್ಸ ಸಂಶೋಧನೆಯನ್ನು ಮಾಡಿದಾಗ, ಗುಮಾಸ್ತ ಜಂದ್ರು ಸಾವಿರಾರು ರೂಪಾಯಿಗಳನ್ನು ಸ್ವಾಹಾ ಮಾಡಿದ್ದಾನೆಂದು ತಿಳಿದು ಬಂತು. ಆದರೆ, ಈ ಗ ಮಾನ್ತನು ಬಹಳ ಹಳೆಯ ಕಾಲದವನಾಗಿದ್ದು ಇಂದೋ ನಾಳೆಯೋ ಸಾಯುವವನಿದ್ದ. ಆದುದರಿಂದ ಆತನನ್ನು ಪೋಲೀಸರ ಕೈಗೊಪ್ಪಿಸದೆ, ಕೆಲಸದಿಂದ ಮಾತ್ರ ವಜಾ ಮಾಡುವ ಆಲೋಚನೆಯಿಂದ ಹೇಳಿದ: — ನಾಳೆಯಿಂದ ನೀನು ಕೆಲಸಕ್ಕೆ ಬರಬೇಕಾಗಿಲ್ಲ.

ಗುಮಾಸ್ತ ವಿನಮ್ರನಾಗಿ ಹೇಳತೊಡಗಿದ—ಮಹಾ ನ್ವಾಮಿ, ನಾನು ಇದುವರೆಗೂ ನಿಮ್ಮಲ್ಲಿಯೇ ಇದ್ದು ಬೆಳೆದವ. ಇನ್ನೇನು, ಒಂದು ದಿನ ಸಾಯುವವನಿದ್ದೇನೆ. ನಿಮ್ಮ ಚರಣ ಸೇವೆಯನ್ನು ಮಾಡುತ್ತ ಸಾಯಬೇಕೆಂಪಾಸೆ. ಅದಕ್ಕೊಂದು ಅವಕಾಶ ನೀಡಿ

ಸೇರ ಮಾತಾಡಲಿಲ್ಲ.

ಗುಮಾಸ್ತ ಮುಂದುವರಿದ—ಮಹಾನ್ವಾಮಿ, ನಾನು ನಿಮಗೆ ವಂಚನೆ ಮಾಡಿರುವೆನೆಂದು ಭಾವಿಸಿದ್ದೀರಿ. ಆದರೆ ಆ ಮು ನಾನು ಮಾಡಿದ ವಂಚನೆಯೆಂದು ತಿಳಿಯ ಬೇಡಿರಿ.

ಸೇರನಿಗೆ ಕುತೂಹಲವುಕ್ಕಿ ಕೇಳಿದ—ಮತ್ತಾರು?

ಗುಮಾಸ್ತನ ಮುಖ ಅರಳಿತು. ಅವನು ಹಸನ್ಮುಖದಿಂದ ಹೇಳಿದ—ಇನ್ನು ನಾನು ಸತ್ತಿನೆಂದರೆ, ತಾವು ಬೇರೊಬ್ಬನನ್ನು ಕೆಲಸಕ್ಕಿಟ್ಟುಕೊಳ್ಳುತ್ತೀರಿ. ಆತನು ಹೀಗೆಯೇ ಮಾಡುವನೆಂಬು ನಾನು ನಿಮಗೆ ಹೇಳಿಕೊಟ್ಟಿಯಷ್ಟೆ. ಗುಮಾಸ್ತರ ಮೇಲೆ ಹತೋಟಿಯಿಟ್ಟುಕೊಳ್ಳಬೇಕೆಂದು ನಿಮಗೆ ಪಾರೆ ಕಲಿಸಿದೆನಷ್ಟೆ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ.

Edited Printed & Published by K. H. Shetty, at the Navayuga Press Udipi S. India

ನವಯುಗ

ವಾ ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ.ಪೈಸೆ.

ವರುಷ ೩೮. ವಾರ ೧೦. 13-11-1958 Vol. 38 No. 10.

ದೀಪಾವಳಿ

ಲಕ್ಷ್ಮೀಪೂಜೆಯ ಅಂತರಾಳವೇನು?

ಭಾರತೀಯರು ಸಮುದ್ರ ವ್ಯಾಪಾರ ಮಾಡಿ ಲಾಭ ಗಳಿಸಿದ ಘಟನೆಯು ಸಮುದ್ರಮಥನದ ಕಥೆಯಿಂದ ವ್ಯಂಜಕವಾಗಿ ಬಹುದೆ?

ಪರಮ ಲಾವಣ್ಯಮಯಿಯೂ ಸೌವರ್ಣಕಾಂತಿ ಸದೃಶದೇಹಿಯೂ ಜನಿಂದ್ಯ ಸುಂದರಿಯೂ ಆದ ಲಕ್ಷ್ಮಿಯು ದೀಪಾವಳಿಯ ದಿನಗಳಲ್ಲಿ ಮನೆ ಮನೆಯಲ್ಲಿ ಪೂಜಿಸಲ್ಪಡುತ್ತಾಳೆ ದೀಪಾವಳಿಯ ಈ ದೇವಿಯು ಪರಮಾತ್ಮನ ವಿಷ್ಣುವಿನ ಪತ್ನಿಯೆಂದೂ ನಾವರಿತಿದ್ದೇವೆ. ಅದರೆ, ಈ ಆನಂದದ ಹಬ್ಬದ ದಿನಗಳಲ್ಲಿ ಆಕೆಯ ಪತಿ ವಿಷ್ಣುವನ್ನೂ ಪೂಜಿಸದೆ ಕೇವಲ ಅರ್ಧಾಂಗಿಯನ್ನೇ ಏಕೆ ಆರಾಧಿಸುತ್ತಾರೆ?

ಭಾರತದ ಪುರಾತನ ಸಮಾಜ ಮತ್ತು ಸಂಸ್ಕೃತಿ ವ ಧ್ಯಕಾಲದಂತಿರಲಿಲ್ಲ. ಭಾರತೀಯರ ಮೂವತ್ತ ಮೂರು ಕೋಟಿ ದೇವತೆಗಳಲ್ಲಿ ಸ್ತ್ರೀ ದೇವತೆಯರೂ ಇದ್ದಾರೆ. ವೀಣಾಪಾಣಿಯಾದ ಸರಸ್ವತಿಯು ವಿದ್ಯಾದಾಯಿನಿಯೂ ಸಮಸ್ತ ಜ್ಞಾನವಿಜ್ಞಾನಾಧಿಕಾರಿಣಿಯೂ ಆಗಿದ್ದಾಳೆ. ಪತಿಸರಾಯಣಿಯಾದ ಗೌರಿ ಅಥವಾ ಪಾರ್ವತಿಯು ಅಖಂಡ ಸೌಭಾಗ್ಯ ಮತ್ತು ಸೌಮ್ಯಗಳ ಸಂಚಾಲಿಕೆಯಾಗಿದ್ದಾಳೆ. ಸಂಕಷ್ಟ ನಿವಾರಣೆಗಾಗಿ ಅವುಗಳಲ್ಲಿ ವಿಜಯ ದೊರಕಿಸಲು ದುರ್ಗೆ ವಂದ್ಯೆಯಾಗಿರುವಳು. ದೀಪಾವಳಿಯ ದೇವಿಯಾದ ಲಕ್ಷ್ಮಿಯೂ ಈ ಪರಂಪರೆಯಂತೆ ಮಾನವನು ಸುಖದಿಂದ ಬದುಕಲು ಅವಶ್ಯಕವಾಗಿ ಬೇಕಾದ ಧನ, ಸಂಪತ್ತು, ಐಶ್ವರ್ಯಗಳ ಸ್ವಾಮಿನಿಯಾಗಿರುವಳು.

ಈಕೆಯು ಋಗ್ವೇದದಲ್ಲಿ 'ಕಲ್ಯಾಣ' ವೆಂದು ವರ್ಣಿಸಲ್ಪಟ್ಟುದರ ಉತ್ತರ ವೈದಿಕ ಸಾಹಿತ್ಯದಲ್ಲಿ ಲಕ್ಷ್ಮಿಯೊಡನೆ ಶ್ರೀ ಎಂದು ಸೇರಿದುದೂ ಗೊತ್ತಾಗುತ್ತದೆ. ಶ್ರೀ ಸೂಕ್ತದ ಅನೇಕ ಋಕ್ಕುಗಳಲ್ಲಿ ಕೆಯ ವರ್ಣನೆಯಿದೆ. ಈಕೆಯನ್ನು ಸದ್ಯಾಸನೆಯೆಂದೂ ಕರೆಯಲಾಗಿದೆ. ವಿಷ್ಣು-ಲಕ್ಷ್ಮಿಯರ ಸಂಬಂಧದ ವಿಷಯ ಮಾತ್ರ ಅಲ್ಲಿಲ್ಲ. ಯಜುರ್ವೇದದಲ್ಲಿ ಉದಿತಿ ಅಥವಾ ಭೂದೇವಿಯು ವಿಷ್ಣುವಿನ ಪತ್ನಿಯಾಗಿದ್ದಾಳೆ.

ಬುದ್ಧ ಮತ್ತು ಮಹಾವೀರರ ಕಾಲಾನಂತರ ಪೌರಾಣಿಕ ಅವತಾರ ಮತ್ತು ದೇವೀ ದೇವತೆಯರ ಅವತಾರಣ ನಡೆದಾಗ, ಲಕ್ಷ್ಮಿಯು ಸ್ವರೂಪವು ವಿಕಾಸವಾಯಿತು ಪುರಾಣಗಳು ವೇದ ಶ್ರುತಿ ಪಾದಿತ ಪ್ರಾಕೃತಿಕ ದೇವೀ ದೇವತೆಯರ ಪುಂಖಾನುಪುಂಖಾರ್ಧನೆಗೆ ಹಾಗೂ ಬುದ್ಧನಿಂದ ನಿರ್ದೇಶನವಾದ ಪತ್ತು ವಿರಕ್ತಿವಾದದ ಸ್ಥಾನದಲ್ಲಿ ಅಸಂಖ್ಯ ದೇವಿ ದೇವತೆಯರ ಪೂಜೆ ಭಕ್ತಿ ವ್ರತ ಸ್ತವನ ವಿಧಾನವನ್ನು ಮಾಡಿದುವು ಈ ದೇವತೆಗಳೆಲ್ಲವೂ ಕೋಟಿರೂಪ ಕೋಟಿ ನಾಮರೂಪಧಾರಿಣಿಯಾದ ಏಕ ಬ್ರಹ್ಮನ ವಿವಿಧ ಸ್ವರೂಪವಾಗಿದ್ದುವು. ಪೂಜೆ ಮತ್ತ ಆರಾಧನೆಯಲ್ಲಿ ಬಾಹ್ಯೋಪಕರಣಗಳಿಗೆ ವಿಶೇಷ ಒಲವೀಯಲಾಗಿತ್ತು.

ಪುರಾಣಗಳಲ್ಲಿ ಹಳೆಯದಾದ ವಿಷ್ಣು ಪುರಾಣದಲ್ಲಿ ಸಮುದ್ರ ಮಥನದ ಕಥೆಯಿದೆ. ಈ ಮಥನ ಕಾಲದಲ್ಲಿ ಹದಿಮೂರು ಅಮೂಲ್ಯ ರತ್ನಗಳು ಮೇಲ್ಬಂದ ಮೇಲೆ, ಪದ್ಮಾಸೀನೆಯಾದ ಲಕ್ಷ್ಮಿಯು ಎದ್ದು ಬಂದಳು. ಸರ್ವೇಂದ್ರ ಕನ್ಯೆಯೆಂಬ ಹೆಸರಿದರಿಂದಾಗಿ ಬಂತು. ಸಮುದ್ರ ಕಥೆಯ ಈ ಉತ್ಪತ್ತಿ ಆಕಸ್ಮಿಕ ಘಟನೆಯಲ್ಲ ಏಕೆಂದರೆ, ದೇವರಾಜ ಇಂದ್ರನು ಲಕ್ಷ್ಮಿಯನ್ನು ಆಹ್ವಾನಿಸಿ ಪೂಜಿಸಿದುದರಿಂದ್ಲೆ ಸ್ಪಷ್ಟವಾಗಿ ದೇವತೆಗಳಿಗೆ ಸಫಲತೆಯನ್ನೂ ವಿಜಯಶ್ರೀಯು ಆತ್ಯಾಸನೆಯನ್ನೂ ಆ ಹಿಂದೆಯೂ ಈಯುತಿದ್ದಳು.

ಸಮುದ್ರ ಮಥನದ ಈ ಕಥೆಯು ವಾಚಕವಾಗಿರದೆ ಲಾಕ್ಷಣಿಕವಾಗಿರಬಹುದು ರಾಮಾಯಣವಲ್ಲಿ ಆರ್ಯರ ದಕ್ಷಿಣದ ತೀರ ವಿಸ್ತಾರ ಮತ್ತು ಮಹಾಭಾರತದಲ್ಲಿ ಆದರ ಆಂತರಿಕ ವೈಮನಸ್ಯ ಮತ್ತು ಗೃಹಕಯುದ್ಧಗಳ ರೂಪಕವಿದ್ದಂತೆಯೇ ಸಮುದ್ರ ಮಥನದ ಪೌರಾಣಿಕ ಕಥೆಯಲ್ಲಿ ಆರ್ಯರಾಧಿಪತ್ಯವು ಸರ್ವಾಧಿಪತ್ಯದ ಮೇಲೂ ಹರಡಿದ ಮತ್ತು ಮೊತ್ತ ಮೊದಲಿಗೆ ವಿದೇಶ ಯಾತ್ರೆಯನ್ನು ಕೈಕೊಂಡು ವಾಣಿಜ್ಯ ವ್ಯವಸಾಯದಲ್ಲಿ ಸಫಲತೆ ಸಾಧಿಸಿದ ರೂಪಕವಿಲ್ಲವಾದೀತೇ? ಇಂತಹ ಯಾತ್ರೆಯ ಪರಿಣಾಮವೇ ಶುಭ ಮತ್ತು ಲಕ್ಷ್ಮೀಪ್ರಾಪ್ತಿಯಾಗಿರುವುದು ಸಂಗತವೆದೆ ಲಕ್ಷ್ಮಿಯ ಒಂದು ಕೈಯಲ್ಲಿ ನಾರಿಕೇಳ (ಶ್ರೀಫಳ), ಇನ್ನೊಂದರಲ್ಲಿ ಕಮಲ ಹೂವಿರುವ ವರ್ಣನೆಯೂ ಸಾಂಕೇತಿಕವೂ ಲಾಕ್ಷಣಿಕವೂ ಇರಬಹುದು ಪ್ರಾಚೀನ ಭಾರತದ ನಿರ್ಯಾತ ವಸ್ತುಗಳಲ್ಲಿ ತೆಂಗು ಪ್ರಮುಖ ವಸ್ತುವಿಶೇಷ. ಮತ್ತು ಕಮಲವು ಜೀವನ ಹಾಗೂ ಮಾನವೀಯ ವ್ಯವಹಾರದಲ್ಲಿ ಶುಚಿತ್ವ ಮತ್ತು ಪವಿತ್ರತೆಯ ಪ್ರತೀಕವಾಗಿದೆ. ಇವು ವ್ಯಾಪಾರ ವ್ಯವಸಾಯದಲ್ಲಿ ಅವಶ್ಯಕವಿವೆ.

ಸ್ಕಂದ ಪುರಾಣ ಹಾಗೂ ಭಾಗವತಗಳಲ್ಲಿ ಲಕ್ಷ್ಮಿಯನ್ನು ವಿಷ್ಣುಪತ್ನಿಯೆಂದು ಘೋಷಿಸಿದ. ಪೂರ್ವ ಪುರಾಣಗಳಲ್ಲಿ ಅತ್ಯಂತ ನಾಟಕೀಯ ವಿಧಾನದಲ್ಲಿ ಆವಿರ್ಭವಿಸಿದ ಈ ದೇವಿಯನ್ನು ಸಾಂಪ್ರದಾಯಿಕ ಪ್ರಾಣಿಗಳಿಗೆ ಭುಕ್ತಿ ಮತ್ತು ಮುಕ್ತಿಗಳನ್ನೀಯುವವಳೆಂದು ಹೇಳಲಾಗಿದೆ. ಮುಂದಿನ ಸಂಸ್ಕೃತ ಗ್ರಂಥಗಳಲ್ಲಿ ಲಕ್ಷ್ಮಿಯ ವರ್ಣನೆಯು ಸುಖ ಸಂಪತ್ತುಗಳ ದೇವಿ ಎಂದಾಯಿತು ಭಾರತೀಯ ಇತಿಹಾಸದ ಸ್ವರ್ಣಕಾಲವಾದ ಮೌರ್ಯ ಹಾಗೂ ಗುಪ್ತರ ಕಾಲದಲ್ಲಿ ದೇಶದಲ್ಲಿ ಭೌತಿಕ ಅಭಿವೃದ್ಧಿಯು ಪರ್ಯಾಪ್ತವಿದ್ದಾಗ, ಲಕ್ಷ್ಮಿಯು ಈ ರೀತಿಯ ಸ್ವರೂಪ ವಿಕಾಸಕ್ಕೆ ಅನುಕೂಲ ವಾತಾವರಣವೇ ಸಿಕ್ಕಿತು.

ಆಕೆಯ ಅತ್ಯಂತಾಕರ್ಷಕ ವರ್ಣನೆ ನೋಡಿರಿ: ಹೂರ್ಣವಿಕಸಿತ ಪದ್ಮಾಸನೆ: ಕಾಸಿದ ಚಿನ್ನದಂತಹ ನರ್ಣ, ಕೆನಿಗಳಲ್ಲಿ ರತ್ನಜಟಿತ ಮಕರಾ ಕೃತಿಯ ಕುಂಡಲೆ, ಒಂದು ಕೈಯಲ್ಲಿ ಕಮಲವ ಹೂ ಇನ್ನೊಂದರಲ್ಲಿ ಶ್ರೀಫಲಧಾರಿಯೆಯಿರುತ್ತಾಳೆ. ಧನುಷಾಕಾರದ ಹುಬ್ಬುಗಳೊಡನೆ ಆತೆಯ ನೇತ್ರಗಳು ಕಮಲವಂತಿವೆ ಚಿನುಮರಿಯೂ ಚಿರಯುವತಿಯೂ ಆಗಿದ್ದಾಳೆ. ಇಂಥಾದಲ್ಲಿ ಯಾರು ಸುಂದರಿಯರಿದ್ದರೂ ಅವರ ಸೌಂದರ್ಯವು ಲಕ್ಷ್ಮಿಯೇ ಕಮಲವು ಶುದ್ಧತೆಯು, ಪವಿತ್ರತೆಯ ಪ್ರತೀಕ ಅವಿಚ್ಛಿನ್ನರೂಪದಿಂದ ಸೌಂದರ್ಯ ಮತ್ತು ಸಂಪತ್ತಿನ ಜೊತೆಯೊಡನೆ ಜೋಡಿಸಲಾಗಿದ್ದು ಹೊನ್ನಿಗೆ ಪರಿಮಳವದಂತಾಗಿದೆ.

ಲಕ್ಷ್ಮೀ ಪೂಜೆಯನ್ನೆಂದು ಅನೇಕರು ಮನೆಗಳಲ್ಲಿ ಬೆಳ್ಳಿಯ ನಾಣ್ಯಗಳ ರೂಪದಲ್ಲಿ ಆಚರಿಸಲಾಗುತ್ತಿದೆ. ಧೌತಿಕವಾದ ವ

(ಉಳಿದ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O MANGALORE. Estd: 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ದೀಪಾವಳಿಯ ಶುಭಾಶಯಗಳು ಸಿಂಡಿಕೇಟ್ ಬೇಂಕ್

ಕಥಾ ವಿಹಾರ

ಇಂತಿದು ಅಂತಿಮ ಕೋರಿಕೆ

ಕೊನೆಗೆ ಸಿಗಬೇಕಾದುದು ಮೊದಲೇ ದೊರೆತು ಅನಾಹುತವಾಯಿತು

ಆ ಮನೆಯಿಂದ ಒಮ್ಮಿಂದೊಮ್ಮೆಗೇ ರೋದನ ಧ್ವನಿ ಕೇಳಿ ಬಂತು. ನೆರೆಕರೆಯವರಿಗೆಲ್ಲಾ ಆಶ್ಚರ್ಯ! ಯಾವರೋಗದ ಸುಳಿವೂ, ಖಾಸಾ ಮುದುಕನ ಶ್ವಾಸವೂ ಇಲ್ಲದ ಮನೆಯಿಂದ ಅಳುಗೂರಳು ಹೊರಡುವುದೆಂದರೆ? ಬೆಳಗ್ಗೆ ಸುಮಾರು ಎಂಟು ಗಂಟೆ.

"ಅಯ್ಯಯ್ಯೋ! ಹೋಗಿ ಬಿಟ್ರಲ್ಲಾ!" ಎಂದು ವಿಕಾರವಾಗಿ ಅಳತೊಡಗಿದ್ದಳು ಗೃಹಿಣಿ ಶಾರದೆ. ಜವಳನ್ನನುಸರಿಸಿ ಮೂವರು ಮಕ್ಕಳೂ 'ಅಪ್ಪಾ' ಎಂದು ರೋದಿಸುತಿದ್ದುವು.

ನೆರೆಮನೆಯವರೂ ಆ ಮನೆಯ ನಾರಾದ ಬಾಡಿಗೆ ಪಡೆಯುವ ಒಡೆಯನೂ ಬಂದು ಸೇರಿದರು. ಏನೆಂದು ಎಲ್ಲರೂ ತಿಳಿಯದೆ ನೋಡುವವರೆ. "ಏನಾದರೂ ಕಂತಿಗಿಂತಿ ಬಂತೆ? ಎಲ್ಲದ್ದಾರೆ ನಿಮ್ಮಯ ಜಮಾನರು?" ಎಂದು ವರಾರದೊಡೆಯ ಶಾರದೆಯನ್ನು ಕೇಳಿದ.

ಶಾರದೆ ತಪ್ಪಿದಿರಿನಲ್ಲಿ ಬಿದ್ದಿರುವ ಒಂದು ಕಾಗದವನ್ನು ತೋರಿಸುತ್ತಾ ಬಿಕ್ಕಿ ದಳು. ವರಾರದೊಡೆಯ ಆ ಕಾಗದವನ್ನೆತ್ತಿಕೊಂಡು ನೋಡಿದ. ಆ ಕನ್ನಡ ಕಾಗದ ಅವನಿಗೊಂದೂ ಅರ್ಥವಾಗಲಿಲ್ಲ. "ಏನಿದೆ ಇದರಲ್ಲಿ? ಯಾರದು?"

ಹದಿಮೂರು ವರುಷ ವ್ಯಾಯದ ಶಾರದೆಯ ಮಗಳು ಹೇಳಿದಳು ಅಳುತ್ತಾ: "ಅಪ್ಪ ಬರೆದದ್ದು ಸತ್ತು ಹೋಗುತ್ತೇನೇ ಅಂತ ಇದರಲ್ಲಿ ಉಂಟು" ಎಂಬುದು ಅವಳ ವಾಣಿಯ ಮರ್ಮಾರ್ಥ.

"ಓಽ! ಆತ್ಮಹತ್ಯೆ! ಎಲ್ಲಿ? ಯಾವಾಗ?"

"ಇದೇ ತಿಳಿಯದು. ಪೋಲೀಸಿಗೆ ತಿಳಿಸಬೇಕು" ಎಂದು ಶಾರದೆ ಪ್ರಲಾಪಿಸಿದಳು "ಅಯ್ಯೋ! ಏನಾಯಿತೋ! ನಾವೇನೂ ಮಾಡಲಿಲ್ಲಲ್ಲಾ! ಆಫೀಸಿನಲ್ಲಿ ಏನಾದರೂ ಆಯಿತೋ? ಏನಿತ್ತೋ ಅವರ ಮನಸ್ಸಿನಲ್ಲಿ! ಏನೂ ಗೊತ್ತಾಗಲಿಲ್ಲವಲ್ಲಾ. ಮುಖದಲ್ಲಿ ಚಿನ್ನಾಗೇ ಇದ್ದರಲ್ಲಾ! ಎಲ್ಲಿ ಬಿದ್ದರೋ! ರೈಲಿಗೋ, ಮರಕ್ಕೋ, ಬಾವಿಗೋ ಸಮುದ್ರಕ್ಕೋ! ....."

ಮನೆಯೊಡೆಯ ಪಕ್ಕದಲ್ಲಿದ್ದ ಉಡುಪಿ ಹೋಟೆಲ್ಲಿನ ಗೋವಿಂದರಾಯನನ್ನು ಕರೆದುಕೊಂಡು ಬಂದು ಆ ಕಾಗದವನ್ನು ಓದಿಸಿದ.

"ಪ್ರಿಯ ಶಾರದೆಗೆ, ಅಥವಾ ನನ್ನ ಮಕ್ಕಳಿಗೆ. ನನ್ನ ಅಂತಿಮ ಕೋರಿಕೆಯನ್ನು ಇಲ್ಲಿ ಬರೆದಿದ್ದೇನೆ. ನನ್ನ ಸಾವನ್ನು ನೋಡಿ ನೀವಾರೂ ವಿಶೇಷವಾಗಿ ಅಳಬೇಡಿ. ಗೋಳಾಡಬೇಡಿ ಏಕೆಂದರೆ ಎಲ್ಲರೂ ಒಂದು ದಿನ ಪಂಡಿತ ಸಾಯುತ್ತಾರೆ. ನೀವು ಹೆಚ್ಚು ಅಳುತ್ತಾ ಇದ್ದರೆ ನನ್ನ ಆತ್ಮಕ್ಕೆ ಬಹಳ ಕಷ್ಟವಾಗುತ್ತದೆ. ನೀವು ಸಂತೋಷವಾಗಿರಬೇಕೆಂಬುದೇ ನನ್ನ ಮುಖ್ಯ ಕೋರಿಕೆ. ನಾನು ಹೇಗೆ ಸಾಯುತ್ತೇನೋ ನನಗೇ ಗೊತ್ತಿಲ್ಲ. ಸಕ್ಕ ಮೇಲೆ ನನ್ನ ದೇಹ ಹೆಣ. ಆದರಲ್ಲಿ ಖಂಡಿತಾ ನಾನಿಲ್ಲ ಆದುದರಿಂದ ನೀವು ಸುಮ್ಮನೆ ಆ ಹೆಣಕ್ಕೆ ಸಿಂಗಾರಪೂಜೆ ಯಾವುದೂ ಮಾಡಬೇಕಾಗಿಲ್ಲ. ಪದ್ಧತಿಯನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ ನಿಜ. ನೀವು ವಿಶೇಷ ಕಷ್ಟಪಡದೆ ನನ್ನ ಕೆಣದ ದಹನ ಸಂಸ್ಕಾರ ಮಾತ್ರ ಮಾಡಿಸಿದರೆ ಸಾಕು. ಅನಂತರ ಮಾಡುವ ಕ್ರಿಯೆಗಳು ಬೊಜ್ಜ ಗಿಜ್ಜ ಯಾವುದೂ ನನಗೆ ಮಾಡಬೇಡಿ. ಹರಿವಾರಿನಲ್ಲಿ ಗುರುತು ಪರಿಚಿತಿಯಿಲ್ಲದವರನ್ನು ಕರೆದು ಕೂಲಿಕೊಟ್ಟು ಆ ಕರ್ಮಗಳನ್ನು ಮಾಡಿಸಬೇಡಿ. ಪಂಚಕವ್ಯ ತಳಿಸಿ ಶುದ್ಧಿ ಮಾಡಿಸಿಕೊಂಡುಬಿಡಿ ಸಾಕು. ಊರಿನಲ್ಲಿ ಕೂಡ ನಮ್ಮನ್ನು ಮೆಚ್ಚಿಕೊಳ್ಳುವವರಾರೂ ಇಲ್ಲದ ಕಾರಣ ಆಲಿಯೂ ಏನೂ ಮಾಡಿಸಬೇಕಾಗಿಲ್ಲ. ಕಾರಣ ನಾವು ಬಡವರು. ಗಳಿಸಿದ್ದನ್ನು ಕಾದಿಟ್ಟುಕೊಂಡು ಮಕ್ಕಳನ್ನು ಅಭಿವೃದ್ಧಿಗೆ ತಂದುಕೊಳ್ಳಿ ಬೇಕು. ವರುಷಕ್ಕೊಂದಾವರ್ತಿ ನನ್ನ ನೆನಪು ಬರುವ ತಾಗೆ ಶ್ರಾದ್ಧ ಮಾತ್ರ ಮಾಡುತ್ತಿರಿ.

ನನ್ನ ಶವ ದಹನಕಾರ್ಯ ಮುಗಿದ ಕೂಡಲೇ ನಿಮಗೆ ಊರಿಗೆ ಹೋಗಲಿಕ್ಕು ನನ್ನ ಪೆಟ್ಟಿಗೆಯಡಿಯಲ್ಲಿ ಇನ್ನೂರೂಪಾಯಿ ಇದೆ. ಇತಿ —

ಗೋಪಾಲಕೃಷ್ಣ"

ಗೋಪಾಲಕೃಷ್ಣನು ನಾಲ್ಕು ವರ್ಷಗಳಿಂದ ಮದರಾಸಿನ ಸಿನಿಮಾ ಸ್ಟೂಡಿಯೋ ಒಂದರಲ್ಲಿ ಕಲಾವಿದನಾಗಿ ಕೆಲಸ ಮಾಡುತಿದ್ದಾನೆ. ತಿಂಗಳಿಗೆ ಇನ್ನೂರೂಪಾಯಿ ಬರುತಿತ್ತು. ಮನೆಯಲ್ಲಿ ಪತ್ನಿ ಶಾರದೆಯೂ ಮೂರು ಮಂದಿ ಮಕ್ಕಳೂ ಇದ್ದರು. ಎರಡು ಕೋಣೆಯ ಪುಟ್ಟ ಗೂಡು ಮನೆ. ನೆರೆಕರೆಯ ವರೊಡನೆ ಯಾವ ಪೆಜಿಯೋ ಕೈಗಡವೋ ಸಾಲವೋ ಇಲ್ಲದೆ ನೆವ್ವದಿಯಾಗಿ ಕಾಲ ದೂಡುತಿದ್ದ. ಆಗಾಗ ಗೋಪಾಲಕೃಷ್ಣನಿಗೆ ರಾತ್ರಿ ದ್ಯೂಟೀ ಇರುವುದರಿಂದ ರಾತ್ರಿ ಅವನು ಮನೆಯಲ್ಲಿ ಲ್ಲದಿದ್ದರೆ ವಿಶೇಷವೇನಿಲ್ಲ.

ಅಂದು ಕಳೆದ ರಾತ್ರಿ ಜವನು ಸ್ಟೂಡಿಯೋದಲ್ಲಿಲ್ಲವೆಂದು ತಿಳಿದು ಬಂತು. ನಿನ್ನೆ ಸಂಜೆ ಐದುವರೆ ಗಂಟೆಗೇ ಸ್ಟೂಡಿಯೋದಿಂದ ಹೊರಟಿದ್ದ ಆತನು ಮನೆಗೇ ಬಂದಿರಲಿಲ್ಲ. ಹಾಗಾದರೆ ಅವನ ಗತಿ ಏನಾಯಿತು? ಆ ಪತ್ರ ಮೇಜಿನ ಡ್ರಾವರಿನಲ್ಲಿದ್ದ ಆತನ ಖಾಸಾ ಡೈರಿಯಲ್ಲಿತ್ತಂತೆ. ಶಾರದೆ ಹಾಲಿನ ಲೆಕ್ಕ ನೋಡಲಿಕ್ಕಾಗಿ ಆ ಡ್ರೆಸ್ಸಿ ತೆರೆದಾಗ ಈ ಪತ್ರ ಸಿಕ್ಕಿತ್ತು. ನೋನ್ನೆ ತಾನೇ ಬರೆದಿರುವ ಪತ್ರವದು.

೦ ೦ ೦

ಇತ್ತ ಕಡೆಯಿಂದ ಪೋಲೀಸು ಇನ್ಸ್ ಪೆಕ್ಟರೊಬ್ಬರು ಜವಾನನೊಂದಿಗೆ ಬರುವುದಕ್ಕು, ಇತ್ತ ಕಡೆಯಿಂದ ಆಗ ತಾನೇ ಬಸ್ಸಿನಿಂದಿಳಿದು ಧೈರ್ಯಲ್ಲಿಂದು ಪೊಟ್ಟಣದೊಂದಿಗೆ ಸಾಕ್ಷಾತ್ ಗೋವಾ ಕೃಷ್ಣನೇ ಮನೆಗೆ ಬರುವುದಕ್ಕು ಸರಿ ಹೋಯಿತು.

ಕನ್ನ ಮನೆಯಲ್ಲಿವ್ವ ಗುಂಪನ್ನೂ ರೋದನವನ್ನೂ ಕೇಳಿ ಗೋಪಾಲಕೃಷ್ಣ ಚಿತಿಗಾಬರಿಯಿಂದ ಓಡೋಡಿ ಬಂದು "ಏನಾಯಿತೇನಾಯಿತೆ"ನ್ನುತ್ತ ಒಳಗಡಿಗಿದ.

"ಪ್ಪಾ! ಅಪ್ಪಾ!"

"ಅಯ್ಯೋ! ಬಂದಿಂ!" ಗುಂಪೆಂದು ಕೂಡಾ ನೋಡದೆ ಶಾರದೆ ಪತಿಯ ದೇಹದ ಮೇಲೆ ಬಿದ್ದಳು....ದೋಕಪೂ ಸಂತೋಷವೂ ಒಂದನ್ನೊಂದು ಧಿಕ್ಕರಿಸಿಕೊಂಡ ಸಮಯದಲ್ಲಿ ಹೊರಳಾಡುತ್ತಾ ಆ ಭಾವಾವೇಗಗಳು ತಗ್ಗಿದ ಮೇಲೆ, ಇವಿಷ್ಟಕ್ಕೂ ಕಾರಣವಾದ ವಿಷಯವನ್ನು ಗೋಪಾಲಕೃಷ್ಣನು ಹೇಳಿದನು.

ಹದಿನೈದ್ದು ದಿನಗಳ ಹಿಂದೆ ತಂಬು ಜೆಟ್ಟಿ ಬೀದಿಯಲ್ಲಿ ಗೋವಿಂದಜ್ಜ ಎಂಬ ವರೊಬ್ಬರು ತೀರಿಹೋದರು. ಅವರೂ ಮಂಗಳೂರು ವಾಸ್ತವ್ಯದವರು ಗೋಪಾಲಕೃಷ್ಣನೂ ಮಂಗಳೂರಿನವ. ಗೋಪಾಲಕೃಷ್ಣ ವೊತ್ತನೆಂದಲು ಮದ್ರಾಸಿಗೆ ಬಂದಾಗ ಅವರ ಬಡಮನೆಯಲ್ಲಿ ಕಲವು ದಿನ ಆಶ್ರಯಪಡೆದಿದ್ದ.

ಗೋವಿಂದಜ್ಜ ಗಟ್ಟಿಮುಟ್ಟಾಗಿದ್ದಾಗ ಬಹಳ ಮಂದಿಗೆ ಬೇಕಾದವರಾಗಿದ್ದರು.

(೧೦ನೇ ಪುಟ ನೋಡಿರಿ)



ನೂತನ ಬಗೆಯ ರಿಕೈಗಳನ್ನು ಹೆಲಿಕ್ಯಾಪ್ಟರ್‌ದಂತೆ ಹಾರುವ ಈ ಅಮೆರಿಕನ್ ವಿಮಾನವು ಹೆಚ್ಚಿನ ಸೌಲಭ್ಯಗಳನ್ನೊಳಗೊಂಡಿದೆ. ಸದ್ಯದ ಹೆಲಿಕ್ಯಾಪ್ಟರುಗಳ ವೇಗವು ಒಂದು ಗಂಟೆಗೆ ೧೬೦ ಮೈಲು ಇದ್ದರೆ ಇದರವೇಗವು ಗಂಟೆಗೆ ೨೫೦ ಮೈಲು ಇದೆ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%
5 ರಿಂದ 12 ,, 4½%
13 ,, 24 ,, 4¾%
ರೂ. 10,000/- ಮತ್ತೆ ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ 1%

ಸುಲಭ ಒಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1949

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಮಗೆ ಒಂದು ಕ್ಯಾಬಿನೆಟ್ ಆಗತ್ಯ ಕಳ್ಳರ, ಬೆಂಕಿಯ ಅಪಘಾತಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುದು. 3 ಸೈಜುಗಳಲ್ಲಿವೆ, ಸೈಜ್ 1, ಪಾಪ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು! ಮತ್ತು ಭದ್ರವಾದ ಬೀಗವುಳ್ಳ ಒಳಕೋಡಿಗಳಿವೆ.

ಅಲ್ಲದೆ

ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್, ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು, ವಿ. ಕೆ. ರಾಜ್ ಇಂಡಸ್ಟ್ರೀಸ್, ಆಲಿಘರ್ ಇವರ

ಉತ್ತಮ ಬೀಗಗಳು

ಇವೆಲ್ಲ ಸ್ವಾಧೀನ.

ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ. ಆದರದೇ ಅಲ್ಲದ ಜೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.
ಶೋ ರೂಮನ್ನು ಸಂದರ್ಶಿಸಿ:

ಶಾಸ್ತ್ರೀ ಅಂಡ್ ಕಂಪೆನಿ

ಹಂಪನಕಟ್ಟೆ — — ಮಂಗಳೂರು

ಸಾಹಿತ್ಯಾವಲೋಕನ

ಕರ್ಣಾಟಕ ಜೈಮಿನಿ ಭಾರತ

ಸರ್ವ ಜನಾದರಣೀಯವಾಗಿ ಕನ್ನಡನಾಡಿನಲ್ಲಿ ರಾರಾಜಿಸುತ್ತಿದೆ

ದೇವನೂರಿನ ಲಕ್ಷ್ಮೀಕಾಂತ ಹೆಬ್ಬಾರನು ಸುರಪುರದ ಲಕ್ಷ್ಮೀವರನ ಭಕ್ತನಾಗಿ ಕರ್ಣಾಟಕ ಕವಿ ಜೈತ್ರವನ್ನು ಜೂತನೆಂದೆನ್ನಿಸಿಕೊಂತುದು ಅತನ ಅತ್ಯುತ್ತಮಸ್ಪರದ ಕಾವ್ಯ—"ಜೈಮಿನಿ ಭಾರತ" ದಿಂದ ಎಂಬುದಂತೂ ನಿರ್ವಿವಾದ.

ಕರ್ಣಾಟಕ ಜೈಮಿನಿ ಭಾರತವು ಕನ್ನಡ ಸಾಹಿತ್ಯದಲ್ಲಿ ದೇದೀಪ್ಯಮಾನವಾದ ಒಂದು ಗ್ರಂಥ ಪಂಡಿತ ಪಾಮರ ಮನೋರಂಜಕವಾದ ಕಾವ್ಯ. ಆನರೆ ಇದರ ಲಾಭವು ಪ್ರಾಜ್ಞರಿಗೆ ಅಧಿಕವಿರಬಹುದು; ಅಪ್ಪೆ ಕನ್ನಡದ ಯಾವ ಮೂಲೆಯಲ್ಲಿ ಪರೀಕ್ಷಿಸಿದರೂ ಈ "ಭಾರತ"ದ ಕೆಲವೊಂದು ಪದ್ಯಗಳನ್ನಾದರೂ ಕಂಠಪಾಠ ಮಾಡಿರು ಜನರಿರುತ್ತುದು ದುರ್ಲಭವೆನ್ನಬಹುದು. ಚಿಕ್ಕ ಮಕ್ಕಳ ಪಠ್ಯ ಪುಸ್ತಕಗಳನ್ನು ಹಿಡಿದು ಉಚ್ಚ ವರ್ಗದ ವಿದ್ಯಾರ್ಥಿಗಳ ವರೆವಿಗೆ ಓದುವ ಪುಸ್ತಕಗಳ ಸಾಲಿನಲ್ಲಿಯೂ ಇದರ ಪದ್ಯಗಳೋ ಸಂಧಿಗಳೋ ಸ್ಥಾನಪಡೆದಿರುವುದು ಆದರ ಜನಪ್ರಿಯತೆಯನ್ನು ಪ್ರತಿ ಬಿಂಬಿಸುತ್ತದೆ.

ಇಷ್ಟೊಂದು ಪ್ರಸಿದ್ಧಿಯನ್ನು ಪಡೆಯಬೇಕಾದರೆ, ಆ ಕಾವ್ಯವೆಂತಿರಬೇಕು? ಕಾವ್ಯದಲ್ಲಿ ಯೋಗ್ಯತೆಯಿದೆಯೆ? ಎಂದು ಪ್ರಶ್ನಿಸಿದರೆ, ಅದಿಕ್ಕೆ ಔನೆನ್ನಲೇಬೇಕು. ಜೈಮಿನಿ ಭಾರತವು ಒತ್ತಾಯದ ಕಟ್ಟಿಗೆ ಬಿದ್ದು ಹೊರಬಂದ ಗ್ರಂಥವಲ್ಲ; ಶ್ರೀ ಕೃಷ್ಣನಲ್ಲಿದ್ದ ಅಪಾರ ಭಕ್ತಿಯದ್ಯೋತಕವಾಗಿ ಭಕ್ತಿರಸನೋನೆಯೇ ಶಬ್ದರೂಪದಿಂದ ಎಣ್ಣಾಕರಣದ ಛೇಡಿಗಳ ನಡುವೆ ಪ್ರಾಸ, ಯತಿ, ಛಂದಸ್ಸುಗಳ ವೇಗದೊಳಗೆ ಅಲಂಕಾರ ಯುಕ್ತವಾಗಿ ಹೊರ ಹರಿವ ಅಮರ ಕಾವ್ಯ. ರಸ, ಭಾವ, ಚರ್ಚೆ ಯುಕ್ತವಾಗಿ ಉಕ್ಕಿ ಹರಿದ ಸಂತೋಷದ ತೊರೆ. ಇದರಿಂದ ಈ ಕಾವ್ಯವನ್ನು ತರಿಚ್ಚರಿಸಲು ಯಾರು ತಾನೇ ಸಿದ್ಧರಾದಾರು?

ಇದೊಂದು ಕತೆಗಳ ಸಂಕಲನ. ಇದರ ಬೇಲಿಯೊಳಗೆ ಜ್ವಾಲೆ, ಯೌವನಾಶ್ವ, ಹಂಸಧ್ವಜ, ಸ್ರವಿಳೆ, ಬಭ್ರುವಾಹನ, ಚಂಡಿ, ಚಂದ್ರಹಾಸರ ಕಥೆಗಳು ಹೀಗೇ ಇನ್ನೂ ಅನೇಕಾನೇಕ ಸಣ್ಣ ದೊಡ್ಡ ಕಥೆಗಳು ತಲೆಯೆತ್ತಿವೆ. ಲಕ್ಷ್ಮೀಶ ಕವಿಯು ಸುಂದರವಾದ ಹಲವು ಕಥೆಗಳನ್ನು ಸೇರಿಸಿ ಹೇಳಿರುವುದರಿಂದ, ಜೈಮಿನಿ ಭಾರತವು ಎಲ್ಲ ವಯಸ್ಸಿನ ಎಲ್ಲ ತಿಳಿವಿನ ಜನಕ್ಕೂ ಆದರದ ಗ್ರಂಥವಾಯಿತು.

ಈತನ ಕಥನ ಶೈಲಿಯು ಮೆಚ್ಚತಕ್ಕದಾಗಿದೆ. ಧರ್ಮರಾಯನ ಕಥೆಯನ್ನು "ವನರುಹಭವಾಂಡಮೊಳಗೈವತ್ತು ಕೋಟಿ ಯೋಜನದ ವಿಸ್ತೀರ್ಣದಿಳೆಯಂ ಸಪ್ತ ಶರನಿಧಿಗಳನು ವೇಷ್ಟಿಸಿರಲವರ ಮಧ್ಯದೊಳಗಿಹುದು ಜಂಬೂದ್ವೀಪಂ" ಎಂದು ಆರಂಭಿಸುತ್ತಾನೆ. ಚಂದ್ರಹಾಸನ ಕಥೆಯು, "ಇನ್ನೊರೆನೆನಾಲಿಸಾದೊಡೆ ಪಾರ್ಥಧಾರ್ಮಿಕಂ ಮುನ್ನೋರ್ವನುಂಟು ಕೇರಳದೇಶದನಿಪಂ ಸನ್ನುತಗುಣೋದಯಂ ಮೇಧಾವಿಯೆಂಬವಂ ಬಲಯುತಂ ಬಳಿಕವಂಗೆ" ಎಂದು ಪ್ರಾರಂಭವಾಗುತ್ತದೆ. ರಾಮಕಥೆಯನ್ನು "ಇಯೋಧ್ಯಾಪುರದೊಳ್ ಮಹಾವಿಷ್ಣು ಸುರರೂಪದಿಂದವತರಿಸಿದಂ ದಶರಥಂಗೆ ಸುತ್ಯಕಾಮೇಷ್ಟಿಯಿಂದ ರಾವಣಾಭಿಧಾನದೋಳ್" ಎಂದು ಹೊಡಲು ಮಾಡುತ್ತಾನೆ. ಹೀಗೆ ಕಥೆಯನ್ನು ಸಂಗ್ರಹಿಸಿ ಹೇಳುವ ಕಲೆಯು ಈತನಲ್ಲಿ ಹಾಸು ಹೊಕ್ಕಾಗಿದೆ. ಬಭ್ರುವಾಹನನ ಕಥೆ, ಸೀತಾ ವನವಾಸದ ಕಥೆ, ಚಂದ್ರಹಾಸನ ಕಥೆಗಳು ಉತ್ಕೃಷ್ಟವಾದ ರೀತಿಯಲ್ಲಿವೆ. ಇದರಿಂದ ಈತನು ಪ್ರಸ್ಪಷ್ಟನುತಃ ಕಥನ ಕುರಿಲಸು.

ಕಾವ್ಯವು ಕೃಷ್ಣ ಭಕ್ತಿಯ ಪ್ರತಿರೂಪವಾಗಿದೆ. ಇದರಿಂದ ಕಾವ್ಯದಲ್ಲಿ ಅಲ್ಲಲ್ಲಿ ಶ್ರೀಕೃಷ್ಣಸ್ತೋತ್ರವು ಬರುತ್ತದೆ. ಪದಲಾಲಿತ್ಯದಿಂದ, "ಬಳಿಕವಂ ಕಂಡ ನುತ್ಪಲದಳ ಶ್ಯಾಮಲ ಶರೀರನಂ" ಎಂದಾಗಿ ಎತ್ತರ ಹೃದಯವೂ ಪರವಾತ್ಮನಲ್ಲಿ ನೆಲಸಿಯೇ ನೆಲಸಿರುವುದು.

ಅಲ್ಲಲ್ಲಿ ವಿಸ್ತಾರವಾಗಿ ಬರುವ ಯುದ್ಧಗಳ ವರ್ಣನೆಯು ಈ ಕಾವ್ಯದ ಆದರವನ್ನು ಕಚ್ಚಿಸುತ್ತದೆ. ನನ್ನು ಪೂರ್ವಜರು ಯುದ್ಧಗಳಲ್ಲಿ ಅನುಭವಿಗರು. ಈ ಕಾವ್ಯವನ್ನು ಓದುವಾಗ, ತಾವೇ ಹೋರುತಿದ್ದಂತೆ ಜಿನುಭವ ಮಾಡಿಕೊಳ್ಳಬಿವ್ವರು. ಲವಕುಶರ ಕಾಳಗ, ಹಂಸಧ್ವಜ ಕಾಳಗಗಳನ್ನೂ ಇನ್ನಿತರ ಯುದ್ಧಗಳನ್ನೂ ಉತ್ಸಾಹದಿಂದ ವರ್ಣಿಸುವ ಕಾವ್ಯವು ಜನರ ಮನಸ್ಸನ್ನು ಅಪಹರಿಸಿದಲ್ಲಿ ಆಶ್ಚರ್ಯವಿಲ್ಲ.

ಕವಿಯ ವಸ್ತು ಸೌಂದರ್ಯ ಜ್ಞಾನವು ಹಿರಿದಾಗಿದೆ. ವರ್ಣನೆಗಳು ಬಲು ಸೊಗಸು. ಉದಯವಾಗಲು, "ಮೂಡು ದಿಸೆಯೊಳ್ ಕೆಂಪು ದೋರೆಯೆ, ತಾರೆಗೆ ಪರಿಯೆ, ಕೂಡೆ ತಂಗಾಳಿ ಮುಂಬರಿಯೆ, ಕನುಲಂ ಬಿರಿಯೆ, ಕಾಡುವೇದಂಬಿಗಳ್ ಪೊರೆಯೆ, ಚಕ್ರಂ ನೆರೆಯೆ, ಸೈದಿಲೆಯ ಸೊಂಪು ಸುರಿಯೆ." ಕತ್ತಲನ್ನು ಆರಿಸುತ್ತ ಸೂರ್ಯನು ಬಂದನಂತೆ! ಇದೇ ರೀತಿಯಲ್ಲಿ ಕತ್ತಲಾಗೆ, "ಮನೆಮನೆಯ ಸೊಡರ್ ಕಣ್ಣಿಸಿಪುವು.." ಎಂಬ ಸಂಧ್ಯಾವರ್ಣನೆಯು ನೈಜವಾಗಿದೆ. ಕವಿಯು ಯಾವ ವರ್ಣನೆಯನ್ನು ಮಾಡಿದರೂ ಅದರಲ್ಲಿ ತನ್ಮಯನಾಗಿ ಹೋಗುತ್ತಾನೆ. ನೈಸರ್ಗಿಕವಾಗಿ ವರ್ಣನೆಯನ್ನು ಮಾಡುತ್ತಾನೆ. ಸೌಂದರ್ಯದ ಸ್ಥಾನಗಳನ್ನು ನೋಡಿ ತಿಳಿಯುವ ದೃಷ್ಟಿಯೂ ಅದರೊಂದಿಗೆ ವರ್ಣನಾ ಚಾತುರಿಯೂ ನಿಚಿತ್ರವಾದುದು. ಸಂಧ್ಯಾಕಾಲದ ಕೆಂಬಣ್ಣವನ್ನು "ರಂಜಿಸುವ ಪಶ್ಚಿಮಾಚಲ ಕಿರಂತಂ ತೊಟ್ಟ ಗುಂಜಾಭರಣವೋ..." ಎನ್ನುತ್ತಾನೆ. ಮಾನವ ಶರೀರವನ್ನೆ ಮನೋರಥ ಹಲವಾರು ಬಾರಿ ಹೊಗಳುತ್ತಾನೆ. ರಾವಣನನ್ನು "ತೋಳಪ ನಾಸಿಕದ ನೆಣ್ಣಿದಪುಗಳ..." ಎಂದು ಸೀತೆಯಿಂದ ಹೇಳಿಸುತ್ತಾನೆ. ಸೀತೆಯು, "ಮಲ್ಲಿಕಾಸ್ತ್ರಕರುಚಿರೆ, ಕುಂದಕುಟ್ಮಲರದನೆ..." ಆಗಿದ್ದಳಂತೆ! ಲವಕುಶರು, "ಜೆಲ್ವೆರಡು ರೂಪಾಯ್ತೊ ವಿಮಲಕೆ ಕವಲ್ತುದೋ.." ಎಂಬಂತೆ ತೋರಿದರಂತೆ! ಬೇಟೆಯ ನಾಯಿಗಳೋ? "...ಹೆಬ್ಬಲ್ಲ ಬಿಡುವಾಯಿ ಜೋಲ್ವ ಕೆನ್ನಾಲಗೆ" ಯವು! ಸವಸ್ತ್ರ ವಸ್ತುಗಳ ಔಂದರ್ಯವನ್ನು ಕಂಡುಕೊಂಡು ಉಚಿತ ಎಡೆಗಳನ್ನು ಅರಿತು, ಎಲ್ಲಿ ಅವನ್ನು ಪ್ರದರ್ಶಿಸಿದ್ದಾನೆ, ಕವಿ ಇತಿಮಿತಿಯರಿತು, ರಸವೊಸರುವಂತೆ ಬೇಸರಬರದಂತೆ ಇವನ್ನು ತೋರಿಸಿದ್ದಾನೆ.

ಅಕಾರದೊಡನೆ ಶೀಲವಲ್ಲಿಯೂ ಸೊಗಸಿದೆ ಎಂದನ್ನು ಕವಿ ಯೋಗ್ಯ ರೀತಿಯಲ್ಲಿ ಚಿತ್ರಿಸಿದ್ದಾನೆ. ಆ ವನ್ನು ವ್ಯಕ್ತಪಡಿಸಲು ಹಲವಾರು ಸನ್ನಿವೇಶಗಳನ್ನು ಕಲ್ಪಿಸಿದ್ದಾನೆ. ಕೃಷ್ಣನಿಗೆ ಧರ್ಮರಾಯನಲ್ಲಿ ಮರ್ಯಾದೆ, ಭೀಮನಲ್ಲಿ ಸಲುಗೆ, ಅರ್ಜುನನಲ್ಲಿ ಸ್ನೇಹ, ದ್ರೌಪದಿಯಲ್ಲಿ ಕರುಣೆ, ಭಕ್ತರಲ್ಲಿ ಪ್ರೇಮ —ಇವನ್ನು ಕವಿ ಸ್ಪಾರಸ್ಯವಾಗಿ ಚಿತ್ರಿಸಿದ್ದಾನೆ. ಹಂಪಪ್ಪೆಜ, ತಾಪ್ರೆದ್ಧಿಜರ ಚಿತ್ರಣವು ನಮ್ಮ ಸುತ್ತುಮುತ್ತಿಲಿನ ಜನರ ಚಿತ್ರಣವಾಗಿದೆ. ಪ್ರಪಂಚದ ನಡೆವಳಿಕೆಗನುಗುಣವಾಗಿಯೇ ಪ್ರತಿಯೊಂದು ಸನ್ನಿವೇಶವೂ ಪಾತ್ರಗಳೂ ಇವೆ. ಕವಿಪಾತ್ರಗಳನ್ನು ಸಹಜವಾಗಿ ಕಂಡು, ನವುಗೂ ಸಜ್ಜನ ಪಾತ್ರಗಳೆಂಬ ಮಂಕುಬೂದಿಯನ್ನೆರಚಿದ್ದಾನೆ.

ಪ್ರಕೃತಿಯನ್ನು ಸಜೀವನವೆಂಬುದಾಗಿ ಚಿತ್ರಿಸಿದ್ದು ಕವಿಯ ವೈಶಿಷ್ಟ್ಯ. ಸೀತೆ ಚಂದ್ರಹಾಸರು ಕಾಡಿನಲ್ಲಿದ್ದಾಗ ಅಲ್ಲಿನ ವ್ಯಗ ಸಕ್ಷ್ಮ ಜಂತುಗಳು ಹಸಿವು ತೃಷೆ ನಿದ್ರೆಯಂ ತೊರೆದು ನೋಡಿ ಕಣ್ಣೀರು ಸುರಿಸಿ ಉಪಚರಿಸುತಿದ್ದುವಂತೆ! ಜಗದೊತ್ಪತ್ತಿಯ ಹಾನಿಯಂ ಕಂಡು ಸೈರಿಸುವರುಂಟೆ? ಕವಿಯ ಪ್ರಕಂಚನನ್ನೇ ಅರಿತಿರುವಾಗ, ಇದೇನೂ ಹೆಚ್ಚಿನದಲ್ಲ.

ಕವಿಯ ಪೌಢಿಮೆಯು ಶಬ್ದ ಜೋಡಣೆಯಿಂದಲೂ ವ್ಯಕ್ತವಾಗುತ್ತದೆ. ಶ್ರೀವಧುವಿನಂಬಕಚಕೋರಕಂ ನಲಿಪೆ" ಎಂಬ ನಾಂದಿ ಪದ್ಯ ಮುದ್ದಾಗಿದೆ. ಇದೇ ರೀತಿಯ ಶಬ್ದವಿನ್ಯಾಸ ಔಂತ್ಯದ ವರೆಗೂ ಕಾಣಿಸುತ್ತದೆ. "ಅತಸೀ ಕುಸುಮ ಗಾತ್ರನಂ ಕಮನ ನೇತ್ರನಂ....", "ತರುಣ ಪಲ್ಲವದ ವಿಸ್ತಾರದಿಂ ನೇರದಿಂ...." ಇತ್ಯಾದಿಗಳು ಮನಸೂರೆಗೊಳ್ಳುತ್ತವೆ.

ಕವಿಯ ಉಪಮೆಗಳು ಭಾವನೆಯಿಂದ ಪರಿಶುದ್ಧವಾಗಿವೆ. ತನ್ನ ಕಾವ್ಯದ ಕುರಿತು, ತಾನು ವೀಣೆ, ಲಕ್ಷ್ಮೀವರನು ವೈಣಿಕ, ಕಾವ್ಯವು ಆ ವೈಣಿಕನು ತನ್ನಿಂದ ನುಡಿಸಿದ ಗಾನವೆನ್ನುತ್ತಾನೆ. "ಆಳಾಂದ ಮಲ್ಲಿಗೆಯು ಪೊದರೊಳಗೆ ತಿರುಗಿದೊಡೆ ತೆರೆಳಬಲ್ಲುದೆ ಸಂಸಗೆಯ ಬನಕೆ ಮರಿದುಂಬಿ" ಎಂದು ಯೌವನಾಶ್ವದಿಗಳನ್ನು ಬಾರಿಸಲು ಅಸಾಧ್ಯವೆಂದು ಭೀಮನಿಗೆ ಕೃಷ್ಣನಿಂದ ತಿಳಿಸುತ್ತಾನೆ. ಚಂದ್ರಹಾಸನು ಕಾಡಿನಲ್ಲಿ ಪರಮಾತ್ಮನಂತೆ, ಕೋಪಾತಿಶಯದೊಳಿಹ ಸುವಿವೇಕದಂತಿದ್ದನಂತೆ! ಪುಳಂದನಿಗೆ ಚಂದ್ರಹಾಸನು ದೊರೆತದು "ಬಿತ್ತಿದ ಕಾವ್ಯರಚನೆಗೆ ದೇವತಾಸ್ತುತಿನಗಲ್ಪಂತೆ" ಆಯಿತು! ಹೀಗೆಯೇ ಆದ್ಯಂತ ಸುಂದರ ಆಸಾಧಾರಣ ಉಪಮೆಗಳು ತುಂಬಿವೆ.

ಕೃಷ್ಣ ಭೀಮ ಸಂವಾದ, ಜಂಡಿಯ ಕಥೆಗಳು ಕವಿಯ ಹಾಸ್ಯಂಪಲ್ಯವಾಹಕಗಳು. ಇಂತಹ ಹಲವಾರು ಸನ್ನಿವೇಶಗಳು ಅಲ್ಲಲ್ಲಿ ಬಂದು, ಕಾವ್ಯದ ವೀರ—ಭಕ್ತಿ ರಸಗಳಿಗೆ ಪರಿಪೋಷಕವಾಗಿ ರಸ ಪುಷ್ಟಿಯನ್ನು ಒದಗಿಸುತ್ತವೆ.

ಈ ಕಾವ್ಯ ಸಂಸ್ಕೃತ ಜೈಮಿನಿ ಭಾರತದ ಧಾರತದ ಭಾಷಾಂತರವಾದರೂ ಆಮೂಲಾಗ್ರ ರೂಪಾಂತರವಲ್ಲ. ಆದರಲ್ಲಿನ ಕಥೆಗಳನ್ನು ಬೇಕಾದಲ್ಲಿ ಹಿಗ್ಗಿಸಿ ಬೇಡಾದ್ದು ಕುಗ್ಗಿಸಿ, ತನ್ನ ಕಥನ ಕೌಶಲದಿಂದ ಎರಕಹೊಯ್ದು, ಉತ್ತಮ ರೀತಿಯಲ್ಲಿ ಹೆಣೆದು ಅರ್ಪಕ ಕಾವ್ಯವನ್ನಾಗಿ ಮಾಡಿದ್ದಾನೆ.

ಹೀಗೆ ಸರ್ವ ರೀತಿಯಲ್ಲೂ ಉದ್ದಾಮ ನೆನಿಸಿದ ಕವಿ ಲಕ್ಷ್ಮೀಶನು ದೇವನೂರ ಲಕ್ಷ್ಮೀಕಾಂತನ ಕೈಪಿಯಿಂದ ಒಂದು ರಸ ಕಾವ್ಯವನ್ನು ಬರೆದು ಕಾವ್ಯ ಲಕ್ಷ್ಮೀಶನಾಗಿದ್ದಾನೆ. ಅವನ್ನು ಕನ್ನಡಿಗರು ಅತಿಶಯಾರ್ಜಿತ ಸಂತೋಷಗಳಿಂದ ಓದಿ ತಲೆದೂಗುತಿದ್ದಾರೆ.

(ಸಂಗ್ರಹಿತ)

ಕೇಶ ಸೌಂದರ್ಯವೇ—ಯುವತಿ, ಯುವಕರ ಶೃಂಗಾರ.

ಅಂಭ ಕೇಶವೃದ್ಧಿ (ಕೂದಲ ಬೆಳವಣಿಗೆ)ಗಾಗಿ ಅನೇಕ ತಲೆ ಎಣ್ಣೆಗಳನ್ನು (Hair Oils) ಉಪಯೋಗಿಸಿ ನಿರುತ್ಸಾಹರಾಗಿರುವುದು ಸಹಜ. ಆದರೆ:—

ಹಿಮಗಿರಿ ತೈಲ ಉಪಯೋಗಿಸುವುದರಿಂದ

ತಲೆನೋವು, ಕಣ್ಣುರಿ, ಕಣ್ಣಿನಲ್ಲಿ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೂದಲು ಉದುರುವಿಕೆ, ಕಣ್ಣು ಮಂಜು, ನಿದ್ರಾಭಂಗ ಈ ವ್ಯಾಧಿಗಳನ್ನು ಪರಿಹರಿಸಿ ಕೇಶವೃದ್ಧಿ ಮಾಡುವುದು.

ಸೂಚನೆ:— ಹಿಮಗಿರಿ ತೈಲವೆಂದು "ಬೀರೆ ಗಿರಿಗಳೆ" ಹೆಸರುಳ್ಳ ನಕಲಿ ಮಾಲನ್ನು ಕೊಂಡು ಮೋಸಹೋಗಬೇಡಿರಿ.

Wanted Agents & Stockists

Manufacturers: RATAN MISRI DEPOT
Avenue Road Cross, BANGALORE-2.

ರೇಲ್ವೆ ಮಾರ್ಗಗಳು

ಭಾರತೀಯ ಕಂಬಿಮಾರ್ಗ ರಚನೆಗೆ ಅಂತರಾಷ್ಟ್ರೀಯ ಸಹಕಾರ

ವಿಶ್ವಸಂಸ್ಥೆಯು ಭಾರತಕ್ಕೆ ಅಪೂರ್ವವಾದ ನೆರವು ನೀಡಿದೆ

ಭಾರತದಲ್ಲಿ ದೇಶದ ಸಾಧನ ಸಂಪತ್ತುಗಳನ್ನು ಉಪಯೋಗಿಸಿಕೊಂಡು ವ್ಯವಸ್ಥಿತ ಆರ್ಥಿಕಾಭಿವೃದ್ಧಿಯ ಗುರಿಯನ್ನಿಟ್ಟು ಕೈಗೊಂಡ ಸರ್ವಾಂಗೀಣ ಪ್ರಯತ್ನವೇ ಪ್ರಥಮ ಪಂಚವಾರ್ಷಿಕ ಯೋಜನೆ. ಈ ಯೋಜನೆಯು ಗಮನಾರ್ಹವಾದ ರೀತಿಯಲ್ಲಿ ಯಶಸ್ವಿಯಾದ್ದರಿಂದ ದ್ವಿತೀಯ ಯೋಜನೆಯನ್ನು ರೂಪಿಸಲಾಯಿತು. ಆ ಯೋಜನೆಯಲ್ಲಿ ಇನ್ನೂ ಹೆಚ್ಚಿನ ಗುರಿಗಳನ್ನು ಇಟ್ಟುಕೊಳ್ಳಲಾಗಿದೆ.

ಈ ಯೋಜನೆಯಲ್ಲಿ ಮೂಲಭೂತವಾದ ಹಾಗೂ ಭಾರಿ ಪ್ರಮಾಣದ ಕೈಗಾರಿಕೋದ್ಯಮಗಳನ್ನು ಸೇರಿಸಲಾಗಿದೆ. ಇದು ಸಾಗಣಿಕೆ ಹಾಗೂ ರೈಲು ಸಂಚಾರದ ಮೇಲೆ ಪರಿಣಾಮ ಬೀರದಿರುವುದಿಲ್ಲ. ಇತ್ತೀಚಿನ ಅಂದಾಜುಗಳ ಪ್ರಕಾರ, ರೈಲ್ವೆಯವರು ೧೯೫೦—೫೧ರ ವೇಳೆಗೆ ೧೬೮ ದಶಲಕ್ಷ ಟನ್ನುಗಳಷ್ಟು ಸರಕುಗಳನ್ನು ಸಾಗಿಸಬೇಕಾಗುವುದು. ೧೯೫೫—೫೬ರಲ್ಲಿ ವರ್ಷಕ್ಕೆ ೧೧೪ ದಶಲಕ್ಷ ಟನ್ನುಗಳಷ್ಟು ಸರಕುಗಳನ್ನು ರೈಲ್ವೆಯವರು ಸಾಗಿಸುತ್ತಿದ್ದರು. ಅಂದರೆ, ಸಾಗಾಣಿಕೆಯು ನೂರಕ್ಕೆ ೪೭ರಷ್ಟು ಹೆಚ್ಚಿಗುವುದು.

ಇದರ ಜೊತೆಗೆ, ಪ್ರಯಾಣಿಕರ ಗಾಡಿಗಳ ಓಡಾಟದಲ್ಲಿ ಪ್ರತಿವರ್ಷ ನೂರಕ್ಕೆ ೩ರಷ್ಟು ಹೆಚ್ಚುವರಿಯಾಗುವುದೆಂದು ಅಂದಾಜು ಮಾಡಲಾಗಿದೆ. ಬೆಳೆಯುತ್ತಿರುವ ಜನಸಾಂದ್ರತೆಯಿಂದಾಗಿ ರೈಲುಗಳಲ್ಲಿ ಜನದಟ್ಟಣೆ ಕೊಂಚವೂ ಕಡಿಮೆಯಾಗದಂತಾಗುವುದಿಲ್ಲ.

ಸರಕುಗಳ ಸಾಗಾಣಿಕೆಯಲ್ಲಿ ನೂರಕ್ಕೆ ೪೭ರಷ್ಟು ಹೆಚ್ಚುವರಿಯಾಗುವುದರ ಜೊತೆಗೆ, ಪ್ರಯಾಣಿಕರ ಸಂಚಾರವೂ ನೂರಕ್ಕೆ ೧೫ರಷ್ಟು ಹೆಚ್ಚಾಗುವುದು. ಇದರ ಜೊತೆಗೆ ರೈಲ್ವೆಯವರು ತಮ್ಮ ಸಾಮಾನು ಸರಂಜಾಮುಗಳ ಪುನರ್ಸ್ಥಾಪನೆ ಮಾಡಿಕೊಳ್ಳಬೇಕಾಗುವುದು. ಸಮಗ್ರವಾದ ಯೋಜನೆಯಲ್ಲಿ ರೈಲ್ವೆಯವರು ಇವೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುವುದು:

ರೈಲ್ವೆಯವರು ತಮ್ಮ ಯೋಜನೆಯಲ್ಲಿ, ಉಳಿದ ಪೈಲಿಗಳಷ್ಟು ದೂರದ ಹೊಸ ರೈಲು ಮಾರ್ಗಗಳನ್ನು ಹಾಕುವುದು, ೧೫೦೭ ಮೈಲಿಗಳಷ್ಟು ದೂರ ಎರಡು ರೈಲು ಮಾರ್ಗಗಳನ್ನು ಹಾಕುವುದು, ೮೨೬ ಮೈಲಿಗಳಷ್ಟು ದೂರ ರೈಲು ಮಾರ್ಗಗಳಲ್ಲಿ ವಿದ್ಯುಚ್ಛಕ್ತಿ ರೈಲುಗಳನ್ನು ಓಡಿಸುವುದು, ಸುಮಾರು ೨೦೯೦ ಮೈಲಿಗಳಷ್ಟು ದೂರ ರೈಲು ಮಾರ್ಗಗಳನ್ನು ರಿಜೇರಿ ಮಾಡುವುದು, ೩೩೩೪ ರೈಲ್ವೆ ಎಂಜಿನ್‌ಗಳು, ೧೧,೩೭೫ ಪ್ರಯಾಣಿಕರ ರೈಲು ಗಾಡಿಗಳು ಮತ್ತು ೧೦೭೨೪ ವಾಗೀನುಗಳನ್ನು ಬದಲಾಯಿಸುವುದು—ಇವೇ ಮುಂತಾದ ಗುರಿಗಳನ್ನು ಇಟ್ಟುಕೊಂಡಿರುವರು.

ಯೋಜನೆಯಲ್ಲಿ ಇಟ್ಟುಕೊಳ್ಳಲಾಗಿರುವ ಗುರಿಗಳನ್ನು ಒಳದೇಶದ ಸಾಧನ ಸಂಪತ್ತುಗಳಿಂದಲೇ ಸಾಧಿಸಲು ಆಗುವುದಿಲ್ಲ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಆರಂಭದಲ್ಲಿಯೇ, ರೈಲ್ವೆಯವರಿಗೆ ಬೇಕಾದ ಅನೇಕ ಸಲಕರಣೆಗಳನ್ನು ಒಳದೇಶದ ಸಾಧನಸಂಪತ್ತುಗಳಿಂದ ಒದಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಲವು ಮುಖ್ಯ ಸಲಕರಣೆಗಳು, ಸ್ವದೇಶದಲ್ಲಿ ದೊರೆಯುತ್ತಲೇ ಇರಲಿಲ್ಲ. ಆದ್ದರಿಂದ ರೈಲ್ವೆಯವರ ಯೋಜನೆಗಾಗಿ ತೆಗೆದಿರಿಸಿದ್ದ ಒಟ್ಟು ೧೧೫೫ ಕೋಟಿ ರೂ.ಗಳಲ್ಲಿ ವಿದೇಶ ಧನ ವಿನಿಮಯಕ್ಕಾಗಿ ೪೫೫ ಕೋಟಿ ರೂ.ಗಳನ್ನು ಕೊಡಲಾಗುವುದು ಇದು ದೇಶದ ವಿದೇಶಧನವಿನಿಮಯ ಸಾಧನ ಸಂಪತ್ತುಗಳ ಮೇಲೆ ತೀವ್ರವಾದ ಪರಿಣಾಮವನ್ನುಂಟು ಮಾಡದಿರುವುದಿಲ್ಲ.

ತಮಗೆ ಬೇಕಾದ ಸಲಕರಣೆಗಳನ್ನು ಸ್ವದೇಶದಲ್ಲಿ ಸಜ್ಜುಗೊಳಿಸುವ ಸಂಬಂಧದಲ್ಲಿ ರೈಲ್ವೆಯವರು ನಿರಂತರವೂ ಪ್ರಯತ್ನಿಸುತ್ತಿರುವರು. ೧೯೫೫—೫೬ರಲ್ಲಿ ಅವರು ೬೮ ಕೋಟಿ ರೂ.ಗಳಷ್ಟು ಬೆಲೆ ಬಾಳುವ ಸ್ವದೇಶಿ ಸಲಕರಣೆಗಳನ್ನು ಕೊಂಡು ಕೊಂಡಿದ್ದರೆ, ೧೯೫೬—೫೭ರಲ್ಲಿ ೧೩೬ ಕೋಟಿ ರೂ.ಗಳಷ್ಟು ಬೆಲೆ ಬಾಳುವ ವಸ್ತುಗಳನ್ನು ಕೊಂಡು ಕೊಂಡಿರುವರು. ಸ್ವದೇಶದಲ್ಲಿ ಲಭ್ಯವಾಗದ ವಸ್ತುಗಳನ್ನು ಮಾತ್ರ ಆಯಾತ ಮಾಡಿಕೊಳ್ಳಲಾಯಿತು.

ಭಾರತೀಯ ರೈಲ್ವೆಯನರು, ಮೊತ್ತ ಮೊದಲು ೧೯೪೯ರಲ್ಲಿ ಅಂತರಾಷ್ಟ್ರೀಯ ಪುನರ್—ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ಇರುವ ಬ್ಯಾಂಕಿನಿಂದ ೩೫ ದಶಲಕ್ಷ ಡಾಲರುಗಳಷ್ಟು ಹಣವನ್ನು ರೈಲ್ವೆ ಎಂಜಿನ್‌ಗಳನ್ನೂ ಕೊಳ್ಳುವ ಸಲುವಾಗಿ ತೆಗೆದುಕೊಂಡರು.

ದ್ವಿತೀಯ ಪಂಚವಾರ್ಷಿಕ ಯೋಜನೆಗಾಗಿ, ವಿಶ್ವ ಬ್ಯಾಂಕಿನಿಂದ ಸಾಲವನ್ನು ಪಡೆಯುವ ವಿಷಯವನ್ನು ೧೯೫೮ರಲ್ಲಿ ಪರಿಶೀಲಿಸಲಾಯಿತು. ಈ ಸಂಬಂಧದಲ್ಲಿ ಭಾರತೀಯ ರೈಲ್ವೆಯ ಹಿರಿಯ ಅಧಿಕಾರಿಗಳೂ ವಿಶ್ವ ಬ್ಯಾಂಕಿನ ಪ್ರತಿನಿಧಿಗಳೂ ವಾಷಿಂಗ್‌ಟನ್ನಿನಲ್ಲಿ ಮಾತುಕತೆ ನಡೆಸಿದರು. ಇದಾದ ನಂತರ ವಿಶ್ವ ಬ್ಯಾಂಕಿನವರ ತಾಂತ್ರಿಕ ನಿಯೋಗವೊಂದು ಭಾರತಕ್ಕೆ ಆಗಮಿಸಿ, ಅಂತಿಮವಾದ ಮಾತುಕತೆ ನಡೆಸಿತು; ಈ ಮಾತುಕತೆಗಳ ಫಲವಾಗಿ ೧೯೫೮ರ ಜೂಲೈ ತಿಂಗಳಲ್ಲಿ ವಿಶ್ವ ಬ್ಯಾಂಕಿನವರು ಭಾರತೀಯ ರೈಲ್ವೆಯವರಿಗೆ ೫೦ ದಶಲಕ್ಷ ಡಾಲರುಗಳಷ್ಟು ಸಾಲವನ್ನು ನೀಡಿದರು.

ಈ ಹಣದಿಂದ ರೈಲ್ವೆಯವರು ತಮ್ಮ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಅಗತ್ಯವಾದ ಸಲಕರಣೆಗಳನ್ನು ಪಡೆದುಕೊಂಡಿರುವರು. ಆಸ್ಟ್ರಿಯಾ, ಬೆಲ್ಜಿಯಂ, ಜರ್ಮನಿ, ಇಟಲಿ, ಜಪಾನ್, ಅಮೆರಿಕದ ಸಂಯುಕ್ತ ಸಂಸ್ಥಾನ, ಬ್ರಿಟನ್ ಮತ್ತು ಯುಗೋಸ್ಲಾವಿಯಗಳಿಂದ ಈ ಸಲಕರಣೆಗಳನ್ನೂ ತರಿಸಿಕೊಂಡರು.

ವಿದ್ಯುಚ್ಛಕ್ತಿಯಿಂದ ರೈಲುಗಳನ್ನು ಓಡಿಸುವ ಯೋಜನೆಗಾಗಿ, ರೈಲುಗಾಡಿಗಳು ಮತ್ತು ರೈಲು ಮಾರ್ಗಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಕೊಳ್ಳುವುದಕ್ಕಾಗಿ ರೈಲ್ವೆಯವರಿಗೆ ೪೭ದಶಲಕ್ಷ ಪೌಂಡು ವಿತ್ತಸಹಾಯವಾಯಿತು. ವಿಶ್ವಬ್ಯಾಂಕಿನವರು ಈ ೩೦ದಶಲಕ್ಷ ಡಾಲರುಗಳಷ್ಟು ಹಣವನ್ನು ಮತ್ತೆ ಮಂಜೂರು ಮಾಡಿದರು.

ಭಾರತದಲ್ಲಿ ಸಿಗದ ಸಲಕರಣೆಗಳ ಬಗೆಗೂ, ಭಾರತೀಯ ರೈಲ್ವೆಯವರು, ವಿಶ್ವವ್ಯಾಪಿ ಟೆಂಡರುಗಳನ್ನೂ ಕರೆದು, ಅತ್ಯಂತ ಆಗ್ಗವಾದ ಕಡೆಯಿಂದ ಅವುಗಳನ್ನು ಪಡೆಯುವರು. ಭಾರತದಲ್ಲಿ ವಿದೇಶ ಧನವಿನಿಮಯದ ಕೊರತೆಯಿದ್ದಾಗ ವಿಶ್ವ ಬ್ಯಾಂಕಿನವರು ನೆರವು ನೀಡಿದ್ದು ನಿಜವಾಗಿಯೂ ಶ್ಲಾಘನೀಯವಾದುದು. ವಿಶ್ವಬ್ಯಾಂಕಿನ ವಾರ್ಷಿಕ ಸಭೆಯು ನವದೆಹಲಿಯಲ್ಲಿ ನಡೆದದ್ದು ನಮಗೆ ಹೆಮ್ಮೆಯನ್ನುಂಟುಮಾಡುವ ಸಂಗತಿಯಾಗಿರುವುದು.



ಅರು ಸಿಲಿಂಡರುಗಳ ಡಿಸಿಲ್ ಇಂಜಿನುಗಳು ಬ್ರಿಟನ್ನಿನಲ್ಲಿ ಧಾರಾಳ ತಯಾರಾಗುತ್ತಿವೆ. ಅವುಗಳಿಗೆ ಪಶ್ಚಿಮ ಯುರೋಪು, ಭಾರತ, ದಕ್ಷಿಣ ಆಫ್ರಿಕ, ಕೆನಡಾ, ಆಸ್ಟ್ರೇಲಿಯಾಗಳಲ್ಲಿ ಬೇಡಿಕೆಗಳು ಹೆಚ್ಚಾಗಿವೆ.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಟಿಗೆ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಯಾವ ಮನುಷ್ಯನಿಗಾದರೂ, ಯಾವ ವೇಳೆಯಲ್ಲೂ, ಯಾವುದೇ ಕಾರಣಕ್ಕಾಗಿ ಉಳಿತಾಯಗಳ ಬೆಂಬಲವು ಬೇಕಾಗಬಹುದು. ಅಂತಲೇ ನೀವು ಯೋಗ್ಯವಿರುವ ಉಳಿತಾಯ ಯೋಜನೆಯನ್ನು ಈಗಿಂದೀಗಲೇ ಅನುಸರಿಸುವುದು ಅತೀ ಆಗತ್ಯ. ಇದಕ್ಕಾಗಿ ನಿಮಗೆ ಬೇಕಾದ ಸಲಹೆ-ಸಹಕಾರಗಳನ್ನು ಕೊಡಲು ನಾವು ಸದಾ ಸಿದ್ಧರಿದ್ದೇವೆ!

ಇಂದೇ ನಿಶ್ಚಯಿಸಿರಿ!

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

[ಸ್ಥಾಪನೆ: 1906] [ಪ್ರಧಾನ ಕಚೇರಿ: ಉಡುಪಿ (ದ. ಭಾರತ)

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ದೇಶ ಪರಿಚಯ

ಇರಾವದಿ ಪೋಷಿತ ಸುಖಿಸಮೃದ್ಧ-ಬ್ರಹ್ಮ

ಕಾಡು-ನಾಡುಗಳ ಸಂಪತ್ತಿನಿಂದ ಅಭಿವೃದ್ಧಿ ಸಾಧಿಸುವ ಏಶ್ಯದ ರಾಷ್ಟ್ರವಿದು.

ಭಾರತದ ಆಗ್ನೇಯವಾಗಿದ್ದು, ೧೯೩೭ರಲ್ಲಿ ವಿಭಜಿತವಾದ ಬರ್ಮಾವು ೨೩೮,೨೮೮ ಚದರ ಮೈಲಿಗಳಷ್ಟು ವಿಸ್ತೀರ್ಣವುಳ್ಳದು. ಸುಮಾರು ಎಂಟು ಕೋಟಿಯಷ್ಟು ಜನಸಂಖ್ಯೆಯಿದೆ.

ಬರ್ಮಾದ ಪ್ರಜಾರಾಜ್ಯವು ಉತ್ತರದಲ್ಲಿ ತಿಬೇಟು ವ.ತ್ತು ಚೀನಾಗಳಿಂದಲೂ ಪೂರ್ವದ. ಚೀನಾ, ಇಂಡೋಚೀನಾ ಮತ್ತು ಸಯಾಮಗಳಿಂದಲೂ ದಕ್ಷಿಣದಲ್ಲಿ ಬಂಗಾಳ ಕೊಲ್ಲಿ ಹಾಗೂ ಪಶ್ಚಿಮದಲ್ಲಿ ಬಂಗಾಳಾಖಾತ ಮತ್ತು ಪೂರ್ವ ಪಾಕಿಸ್ತಾನಗಳಿಂದಲೂ ಪರಿವೇಷ್ಟಿತವಾಗಿದೆ.

ಬರ್ಮಾವನ್ನು ಇರಾವದಿ ಎಂಬ ದೊಡ್ಡ ನದಿಯು ಇಂಡೋಚೈನದಿಂದ ಪ್ರತ್ಯೇಕಿಸುತ್ತದೆ. ಅಲ್ಲದೇ ಈ ನದಿಯು ಸರ್ವತ ಹಾಗೂ ಪೀಠಭೂಮಿ ಪ್ರದೇಶಗಳಲ್ಲಿ ಹರಿದು ಕಾಡುಗುಡ್ಡಗಳ ಪ್ರದೇಶವನ್ನು ಸಂಪನ್ನವೃದ್ಧವನ್ನಾಗಿ ಮಾಡುತ್ತದೆ. ಬರ್ಮಾದ ಉತ್ತರ ಹಾಗೂ ದಕ್ಷಿಣ ಭಾಗಗಳಿಂದಕ್ಕೂ ಈ ನದಿಯು ನೀರನ್ನುಣಿಸುತ್ತ ಬಂಗಾಳಾಖಾತವನ್ನು ಸೇರುತ್ತದೆ. ಹೀಗಾಗಿ ಬರ್ಮವಿಂದು ಫಲವತ್ತಾದ ದೇಶವಾಗಿದೆ. ಈ ನದಿಯು ಮುಖಜ ಭೂಮಿಯಿಂದ ಸುಮಾರು ೯೦೦ ಮೈಲುಗಳ ವರೆಗೆ ಒಳನಾಡನ್ನು ದೋಣಿಗಳ ಮೂಲಕವಾಗಿಯೋ ಬೆಳ್ಳ ಹಡಗುಗಳ ದ್ವಾರವಾಗಿಯೋ ಸೇರಬಹುದು

ಬರ್ಮಾದ ಉತ್ತರ ಭಾಗವು ಅರಣ್ಯ ಹಾಗೂ ಪರ್ವತ ಪ್ರದೇಶವಾಗಿದೆ. ಇಲ್ಲಿನ ಸಾಗುವಾನಿ ಮರಗಳೂ, ಪೆಟ್ರೋಲಿಯಮ್ಮೂ ಪ್ರಸಿದ್ಧವಾಗಿದೆ ಅಲ್ಲಲ್ಲಿ ತವರವೂ ಸಾಕಷ್ಟು ದೊರೆಯುತ್ತದೆ. ದಕ್ಷಿಣ ಬ್ರಹ್ಮದಲ್ಲಿ ಇರಾವದಿ ನದೀಕಣಿವೆಯಲ್ಲಿ ಭಾರಾಳವಾಗಿ ಕತ್ತಿ, ಭತ್ತ ಹಾಗೂ ಹೊಗೆಸೊಪ್ಪುಗಳ ಉತ್ಪತ್ತಿಯಾಗುತ್ತವೆ. ಮಾಣಿಕ್ಯ-ನೀಲಮಣಿ ಮೊದಲಾದ ಅಮೂಲ್ಯ ರತ್ನಗಳಿಗೆ ಬರ್ಮವು ಆಕರಸ್ಥಾನವಾಗಿದ್ದು ಅನೇಕ ದೇಶೀಯ ಹಾಗೂ ವಿದೇಶೀಯ ಕಂಪೆನಿಗಳು ಇವನ್ನು ರಪ್ತು ಮಾಡುವ ವ್ಯಾಪಾರದಲ್ಲಿ ತೊಡಗಿವೆ.

ಬ್ರಹ್ಮದ ಸದ್ಯದ ವಾರ್ಷಿಕ ರಾಷ್ಟ್ರೀಯ ಆದಾಯವು ಸುಮಾರು ೩,೫೦೦ ಮಿಲಿಯ ಕ್ಯಾಟ್ (೧೮೫ ಲಕ್ಷ ಡಾಲರ್) ಇದ್ದು ೧೯೫೬-೬೦ ರ ಬಗ್ಗೆ ಒಂದು ಎಂಟು ವರ್ಷದ ಯೋಜನೆಯೊಂದು ತಯಾರಾಗಿ, ಅದರಿಂದ, ಈಗಿನ ಆದಾಯವನ್ನು ಇಮ್ಮಡಿಗೊಳಿಸಬಹುದೆಂದು ಯೋಜಿಸಲಾಗಿದೆ. ಒಕ್ಕಲತನ, ನೀರಾವರಿ ಸೌಕರ್ಯ, ಗಣಿಗಾರಿಕೆ ವಿದ್ಯುಚ್ಛಕ್ತಿ, ಸಾರಿಗೆ ಸಂಪರ್ಕ ಮೊದಲಾದವುಗಳಿಗೆ ವಿಶೇಷ ಹಣವನ್ನು ವ್ಯಯಿಸಲು ಗುರಿಯಿದೆ.

೧೯೪೭ರಿಂದ ಬ್ರಿಟಿಷ ಸರಕಾರದ ಆಶ್ರಯದಲ್ಲಿ ಹಾಗೂ ಈಸ್ಟ್ ಇಂಡಿಯಾ ಕಂಪೆನಿಯ ನೇತೃತ್ವದಲ್ಲಿ ೧೮೨೪ರಿಂದ ೧೯೪೨ರ ವರೆಗೆ ಬ್ರಹ್ಮವು ಭಾರತದ ಅಂಗವಾಗಿಯೇ ಆಳಲ್ಪಟ್ಟಿತ್ತು.

೧೯೪೮ನೆಯ ಭಾರತ ಸರಕಾರದ ಕಾಯದೆಯನ್ವಯ ಭಾರತದಿಂದ ಬೇರ್ಪಡಿಯನ್ನು ಬೇಡಿದ್ದ ಬ್ರಹ್ಮವನ್ನು ೧೯೪೭ನೆ ಎಪ್ರಿಲ್ ೧೬ರಿಂದ ಬ್ರಿಟಿಷ ಕಾಮನ್‌ವೆಲ್ತಿನ ಸ್ವತಂತ್ರ ರಾಷ್ಟ್ರವೆಂದು ಬೇರ್ಪಡಿಸಿ ಅದಕ್ಕೆ ಸರಕಾರವೊಂದನ್ನು ರಚಿಸಲಾಯಿತು. ಕಾಮನ್‌ವೆಲ್ತಿನಲ್ಲಿ ೧೯೪೮ನೆ ಜನವರಿಯಿಂದ ಕೊಂಬೀಳುವ ನಿರ್ಧಾರವು ಒಕ್ಕೂಟದ ಪಾರ್ಲಿಮೆಂಟಿನಲ್ಲಿ ಆಯಿತು. ಹೀಗಾಗಿ ಇದಿಂದು ಸಂಪೂರ್ಣ ಸ್ವತಂತ್ರವಾದ ರಾಷ್ಟ್ರವಾಗಿದೆ. ಸಂಯುಕ್ತ ರಾಷ್ಟ್ರ ಸಂಸ್ಥೆಯ ಜನನೆಯ ಸದ್ಯ ರಾಷ್ಟ್ರವಾಗಿ ಬ್ರಹ್ಮವು ೧೯೪೮ನೆ ಇಸವಿಯಲ್ಲಿ ಸೇರಿಕೊಂಡಿತು.

ಒಂದು ಸ್ವತಂತ್ರ ಸಂವಿಧಾನವನ್ನು ಸ್ವೀಕರಿಸಿ, ಬ್ರಹ್ಮವು ಅಧಿಕ ಸಂಖ್ಯಾಕರ ಧರ್ಮವೆಂದು ಬೌದ್ಧ ಧರ್ಮವನ್ನು ಮನ್ನಿಸಿದೆ. ಹೊಸಗಿ ಸಂಸ್ಥೆ ಸಂಸ್ಥೆಗಳೂ ಸೊತ್ತುಗಳೂ ಮನ್ನಿಸಲ್ಪಟ್ಟವೆ ಯಾದರೂ ಅವು ರಾಷ್ಟ್ರೀಕರಣಕ್ಕೆ ಅರ್ಹವಾಗಿವೆ. ನಾಲ್ಕು ವರ್ಷಕ್ಕೊಮ್ಮೆ ಚುನಾವಣೆಗಳು ನಡೆದು. ಆರು ಸುವ ಕೇಂದ್ರ ಪಾರ್ಲಿಮೆಂಟಿನಲ್ಲಿ ೫೫೦ ಡಿಪ್ಯುಟೆಗಳ ಚೇಂಬರಿನ ಸದಸ್ಯರೂ ೧೫೫ ರಾಷ್ಟ್ರೀಯ ಚೇಂಬರಿನ ಸದಸ್ಯರೂ ಇರುವರು. ಐದು ವರ್ಷಕ್ಕೊಂದು ಬಾರಿ ಪಾರ್ಲಿಮೆಂಟು ಅಸ್ಸೆಂಬ್ಲಿಯನ್ನು ಆರಿಸುವುದು; ಮತ್ತು ಈ ಪಂಥ್ಯೆ ಒಂದು ಬಾರಿ ಮಾತ್ರ ಪುನರ್ಜೋನಾವಣೆಯಾಗಬಹುದು. ಬೇರೆ ಬೇರೆ ಪ್ರದೇಶಗಳಿಗೆ ತಕ್ಕ ಪ್ರಾತಿನಿಧ್ಯವನ್ನು ಸರಕಾರದಲ್ಲಿ ಕೊಡಲಾಗುತ್ತದೆ.

೧೯೪೮ರಿಂದ ಕಮ್ಯುನಿಸ್ಟರಿಂದ ಬ್ರಹ್ಮವು ಪೆಟ್ಟು ತಿನ್ನುತ್ತಿದೆ. ಇದರಿಂದ ಆಂತರಿಕವಾಗಿಯೂ ಆರ್ಥಿಕವಾಗಿಯೂ ಅಶಾಂತಿ ಉಂಟುಮಾಡಿದ್ದು ಇದು ಕರೆಗಾಣಿಂದ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ.

ಬರ್ಮೀಯರು ಹೆಚ್ಚಾಗಿ ಮನೆಗೊಲ್ಲಿಡ್ ಪಂಗಡಕ್ಕೆ ಸೇರಿದ ಜನರು. ಚೀನೀಯರು, ಜಪಾನೀಯರು, ಕೋರಿಯನರು, ಪಿಬೇಟಿಯನರು, ವಲಯಿಗಳು ಹಾಗೂ ಪೂರ್ವ ಆಸ್ಯದ ಇತರ ರಾಜ್ಯಗಳ ಜನರೂ ಇವೇ ಮೂಲ ಜನಾಂಗಕ್ಕೆ ಸೇರಿದ್ದಾರೆ. ಬರ್ಮೀಭಾಷೆ ಅಧಿಕವಾ ತಜ್ಞನ್ಯ ಒಂದಲ್ಲ ಒಂದು ಭಾಷೆಯು ರಾಷ್ಟ್ರದ ಮುಕ್ಕಾಲು ಪಾಲು ಜನರು ಆಡುತ್ತಾರೆ. ರಂಗೂನ್ ವಿದ್ಯೆವಿದ್ಯಾಲಯದಲ್ಲಿ ಉಚ್ಚ ಶಿಕ್ಷಣದ ವ್ಯವಸ್ಥೆಯು ನಡೆದಿದೆ. ಇದಕ್ಕೆ ಹಲವಾರು ಕಾಲೇಜುಗಳು ಸೇರಿಸಲ್ಪಟ್ಟಿವೆ. ದ್ವಿತೀಯ ಲೋಕ ಯುದ್ಧಾನಂತರ ರಾಜ್ಯ ಶಾಸನಿತ ವಿದ್ಯಾಕ್ರಮವೊಂದನ್ನು ಸ್ವೀಕರಿಸಲಾಗಿದೆ.

ಬ್ರಹ್ಮದ ಮುಖ್ಯ ಪಟ್ಟಣ ರಂಗೂನ್ ಮತ್ತು ಪ್ರಧಾನ ಧರ್ಮಬೌದ್ಧ.

ಇತ್ತೀಚೆಗೆ ಬಲ್ಲಿ ಸಾಮ್ಯ ರೀತಿಯ ರಾಜಕೀಯ ಸ್ಥಿತ್ಯಂತರವು ಜರುಗಿ, ಸೇನಾಧಿಕಾರಿಯೇ ಪ್ರಧಾನ ಮಂತ್ರಿಯಾಗಿ ಕೆಲಸ ಮಾಡುತಿದ್ದಾನೆ. ಇವಕ್ಕೆ ಕಮ್ಯುನಿಸ್ಟರ ಕೈವಾಡವೂ ಒಂದು ಕಾರಣವಾಗಿರಬಹುದೆಂದು ಹೇಳಲಾಗುತ್ತದೆ.

ಮಾನವ ಸಹೋದರತೆಯ ಮತ್ತು ಪ್ರೇಮ ಸೂಚಕ ಉಡುಗೊರೆಗಳನ್ನು ಸಾಂಪ್ರದಾಯಿಕವಾಗಿ ಕೊಡಲಾಗುತ್ತಿರುವ ಉಲ್ಲಾಸ ಹಾಗೂ ಉತ್ಸವ ಸಮಾರಂಭದ ಸಮಯವಿದು!

ದೀಪಾರಾಧನೆಯ ದೀಪಾವಳಿಯ ದಿನಗಳಿವು!

ಟಿ. ಬಿ. ಮುದ್ರೆಗಳನ್ನು ಕೊಂಡು ಕೊಂಡು ಅವುಗಳನ್ನು ನಿಮ್ಮ ದೀಪಾವಳಿ ಶುಭಾಶಯಗಳಿಗೂ ಉಡುಗೊರೆಗಳಿಗೂ ಅಂಟಿಸಿರಿ. ಹೀಗೆ ಮಾಡುವುದು ದೀಪಾವಳಿ ಹಬ್ಬವನ್ನು ಅಸೌಖ್ಯದಿಂದ ಆಚರಿಸಲು ಅಸಮರ್ಥರಾದ ಕ್ಷಯರೋಗ ಪೀಡಿತರಿಗೆ ನಿಮ್ಮ ನೇರ ಸಹಾಯವಾಗಿದೆ.

ಒಂದು ಟಿ. ಬಿ. ಮುದ್ರೆಯ ಬೆಲೆ ಐದು ನಯೇಪೈಸೆ ಮಾತ್ರ.

ಸೀಲುಗಳು ದೊರೆಯುವ ಸ್ಥಳಗಳು:

1. ದಿ ಒನೆರರಿ ಸೆಕ್ರೆಟರಿ, ಸೀಲು ಮಾರಾಟ ಕಮಿಟಿ, ಗೋಪಾಲಕೃಷ್ಣ ದೇವಸ್ಥಾನ ರಸ್ತೆ. ಮಂಗಳೂರು.
2. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್, ಮೆಡಿಕೇರಿ, ಕೊಡಗು.
3. ದಿ ಒನೆರರಿ ಸೆಕ್ರೆಟರಿ, ಮೈಸೂರು ಸ್ಟೇಟ್ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ಸ್ಟೇಟಿನ ಇತರ ಎಜನ್ಸಿಗಳು.

ಸ್ಥಳ ದಾನಮಾಡಿದವರು:

THE TRAVANCORE FORWARD BANK LTD., KOTTAYAM.

ಪ್ರತ್ಯೇಕ ವ್ಯಕ್ತಿಯೂ ತಾನು ಪ್ರತಿಷ್ಠಿತನಾಗಬೇಕೆಂದು ಬಯಸುತ್ತಾನೆ; ಆದರೆ, ಆತನು ತನ್ನನ್ನು ಉನ್ನತಿಯ ಪಥದಲ್ಲಿ ಕೊಂಡೊಯ್ಯುವ ಸಾಧನವನ್ನು ಮಾತ್ರ ಅರಿಯಲಪೇಕ್ಷಿಸುವುದಿಲ್ಲ; ಹೃದಯ ವೈಶಾಲ್ಯವೇ ಉನ್ನತಿಯ ಪ್ರಥಮ ಸೋಪಾನವೆಂಬುದನ್ನೆಲ್ಲರೂ ಗಮನಿಸುವುದಿಲ್ಲ; ಹಾಗಾಗಿ ತಾವು ಬಯಸಿದನ್ನು ಪಡೆಯಲು ಹೆಚ್ಚಿನವರು ಸಫಲರಾಗುವುದಿಲ್ಲ.

NAVAYUGA

Founder:—

A. B. SHETTY,

Former Minister for Public Health Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೫	೧೩-೧೧-೧೯೫೮	೧೦

ಜಿಲ್ಲೆಯ ವಿದ್ಯಾಸಂಸ್ಥೆಗಳು

ದಕ್ಷಿಣ ಕನ್ನಡ ಜಿಲ್ಲೆಯ ಸಂಚಾರ ಮುಖ್ಯವಾಗಿ ಉಡುಪಿಯ ಕಾರ್ಯಕ್ರಮವನ್ನಿಟ್ಟು ಕೊಂಡು, ಕೇಂದ್ರ ವಿದ್ಯಾಮಂತ್ರಿ ಡಾ॥ ಕೆ.ಎಲ್. ಶ್ರೀಮಾಲಿಯವರು ಇಲ್ಲಿನ ವಿವಿಧ ಕಾಲೇಜುಗಳನ್ನು ಸಂದರ್ಶಿಸಿ, ಅಲ್ಲಿಯ ಪ್ರಗತಿಯನ್ನು ಗಮನಿಸಿ ತಮ್ಮ ಸಂತೋಷವನ್ನೂ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದರು. ಮಣಿಪಾಲದ ಇಂಜಿನಿಯರಿಂಗ್ ಕಾಲೇಜು, ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು ಮತ್ತು ಸಂಸ್ಕೃತ ಕಾಲೇಜು ಹಾಗೂ ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜುಗಳನ್ನು ಇವರು ಸಂದರ್ಶಿಸಿ, ಖಾಸಗಿ ಕ್ಷೇತ್ರಗಳಿಂದ ವಿದ್ಯಾದಾನದಂತಹ ಗುರುತರವಾದ ಹೊಣೆಯು ಹೊರಲ್ಪಟ್ಟುದನ್ನು ಶ್ಲಾಘಿಸಿದರು. ಅಲ್ಲದೇ ಆಧ್ಯಾತ್ಮಿಕತೆಯ ತಳಹದಿಯಲ್ಲಿ ಇಂದಿನ ಕಾಲಕ್ಕೆ ಅತ್ಯವಶ್ಯವಾದ ಕಾಂತ್ರಿಕ ಹಾಗೂ ವೈಜ್ಞಾನಿಕ ವಿದ್ಯೆಯನ್ನೂ ಕೊಡುತ್ತಿರುವ ದಕ್ಷಿಣಕನ್ನಡದ ಭಾಗ್ಯವನ್ನವರು ತುಂಬ ಮೆಚ್ಚಿದಂತೆ ಕಂಡು ಬಂದು ಈ ಕ್ಷೇತ್ರಕ್ಕೆ ಸ್ವತ್ಯೇಕ ವಿಶ್ವವಿದ್ಯಾಲಯವೊಂದು ಮೊದಲಾಗುವ ಕಾಲವಿಂದು ದೂರವಿಲ್ಲವೆಂದವರು ಅಭಿಪ್ರಾಯಪಟ್ಟರು.

ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಮಣಿಪಾಲ ಇಂಜನಿಯರಿಂಗ್ ಕಾಲೇಜುಗಳು ವಿದ್ಯಾರ್ಥಿಗಳ ರಕ್ಷಣೆಕ್ರಿಂದ ಸಹಾಯಧನವನ್ನು ಪಡೆದು ತಮ್ಮೂಲಕ ಸಹಕಾರ ಪದ್ಧತಿಯಿಂದ ಕಟ್ಟಲ್ಪಟ್ಟ ಸಂಸ್ಥೆಗಳೆಂದು ಅವುಗಳ ಪರಿಚಯ ಮಾಡಿ ಕೊಟ್ಟಾಗ ಮಾನ್ಯ ಮಂತ್ರಿಗಳು ಇದರಿಂದ ತಪ್ಪಿಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಎಕೆಡೆಮಿ ಆಫ್ ಜನರಲ್ ಎಜುಕೇಶನ್ನಿನವರು ಇಂತಹ ಕಾಲೇಜುಗಳನ್ನೂ ತೆರೆಯುವ ಸಾಹಸಕ್ಕೆಗೊಂಡು ದಕ್ಕೆ ಅದನ್ನೂ ಅದರ ರಿಜಿಸ್ಟ್ರಾರರಾದ ಡಾ॥ ಮಾಧವ ಪೈಯವರ ಕಾರ್ಯಪಟುತ್ವವನ್ನೂ ಅವರು ಪ್ರಶಂಸಿಸಿದರು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮಂಗಳೂರು ವಿಭಾಗದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿಯೂ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಡಾ॥ ಮಾಧವ ಪೈ ಪಷ್ಕಳ್ಬಿ ಸ್ಮಾರಕ ವಿಜ್ಞಾನ ಭವನದ ಮತ್ತು ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಭವನದ ಶಂಕುಸ್ಥಾಪನೆಯನ್ನು ಮಾಡಿದಾಗಲೂ ಮಾನ್ಯ ಮಂತ್ರಿಗಳು ಜನರು ಸರಕಾರವು ಮಾಡಬೇಕೆಂದು ಬಯಸಿದು ನ್ನು ಇಲ್ಲಿ ಖಾಸಗಿ ಕ್ಷೇತ್ರಗಳು ಮಾಡಿವೆಯೆಂದು ಹೇಳಿ, ನಾವು ಇಂದು ಕೈಗೊಳ್ಳಬೇಕಾದ ಮುಖ್ಯ ಕಾರ್ಯ-ಕ್ರಮವನ್ನು ವಿವರಿಸಿದರು. ಕೇವಲ ಸಾಮಾನ್ಯ ಶಿಕ್ಷಣವನ್ನೇ ಈಯುವುದಲ್ಲದೆ, ನಿಮಿಷದಿಂದ ನಿಮಿಷಕ್ಕೆ ಪರಿವರ್ತನೆಯಾಗುವ ವಿಜ್ಞಾನದ ಪ್ರಸಂಚದಲ್ಲಿ ಬಾಳುತ್ತಿರುವ ನಾವು ವೈಜ್ಞಾನಿಕ ಮತ್ತು ತಾಂತ್ರಿಕ ವಿದ್ಯೆಗಳತ್ತ ವಿಶೇಷ ಮಹತ್ವವೀಯಬೇಕೆಂದವರು ಹೇಳಿದರು. ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳು ದೇಶದ ಪರಿವರ್ತಿತ ಸ್ಥಿತಿಗತಿಗೆ ತಕ್ಕ ವಿದ್ಯೆಯನ್ನೀಯುವುದರಲ್ಲಿ ಸಹಾಯಕವಾಗುತ್ತಿವೆಯೆಂದು ಅಭಿಪ್ರಾಯಪಟ್ಟರು. ಅಂತೆಯೇ ವಿದ್ಯೆಯೆಂಬುದು ಕೆಲವೇ ವ್ಯಕ್ತಿಗಳಿಗೆ ಮೀಸಲಾಗಿಟ್ಟ ವಸ್ತುವಲ್ಲ; ಯೋಗ್ಯತೆಯಿರುವ ಪ್ರತಿಯೊಬ್ಬನಿಗೂ ಅದನ್ನು ಪಡೆಯುವ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳಿ, ಅವರು, ವಾಣಿಜ್ಯ ರಾಷ್ಟ್ರಗಳಲ್ಲಿ ಸರಕಾರವೆ ಅಲ್ಲಿ ಕಲಿಯುವ ನೇಕಡಾ ೧೦೦ಷ್ಟು ವಿದ್ಯಾರ್ಥಿಗಳಿಗೆ ಆವಶ್ಯಕ ಸಹಾಯವನ್ನೀಯುವುದೆಂದೂ ನಮ್ಮ ದೇಶದಲ್ಲಿಯೂ ಇಂತಹ ಪದ್ಧತಿಯು ಕಾರ್ಯಾಚರಣೆಗೆ ಬಳಬೇಕೆಂದೂ ಆಶಿಸಿದರು. ಮಾನ್ಯ ಮಂತ್ರಿಗಳ ಈ ಅಭಿಪ್ರಾಯವನ್ನು ನಾವು ಸ್ವಾಗತಿಸುತ್ತೇವೆ. ಯೋಗ್ಯತೆಯನ್ನು ನುರಿಸಿ ವಿದ್ಯೆಯ ಸೌಕರ್ಯ ಹಾಗೂ ಸೌಲಭ್ಯಗಳನ್ನು ಕೊಡುವುದು ಆವಶ್ಯಕವೇ ಆಗಿದೆ. ನಮ್ಮಲ್ಲಿಯೂ ಪರಿಶಿಷ್ಟ ವರ್ಗಗಳವರಿಗೆ ವಿವಿಧ ಧನಸಹಾಯವು ಸರಕಾರದಿಂದ ದೊರೆಯುವುದಾದರೂ ಉಳಿದವರಿಗೆ ಇಂತಹ ನೆರವು ಸಿಗುತ್ತಿಲ್ಲ. ಆದರೂ ಕಾಲೇಜುಗಳ ನ್ಯಾಯ ಸ್ಥಾಪಕರ ಉದಾರತೆಯಿಂದ ಸಚ್ಚಿನವರಿಗೆ ಇಂತಹ ಸೌಲಭ್ಯ ಖಾಸಗಿಯಾಗಿಯೇ ದೊರೆಯುತ್ತಿರುವುದು ಅಭಿನಂದನೀಯ. ಸಂಸ್ಕೃತ ಕಾಲೇಜನ್ನು ಸಂದರ್ಶಿಸಿದ ಮಂತ್ರಿಗಳು, ಕೇವಲ ಪರಾಶ್ರಯಮಾರ್ಗದ ವಿದ್ಯಾಭ್ಯಾಸವೇ ಸಾಲದೆಂದೂ, ವಿಜ್ಞಾನ ಯುಗದಲ್ಲಿರುವ ನಾವು ಕಣ್ಣುಮುಚ್ಚಿ ಕೂರದೆ, ನಮ್ಮ ಪ್ರಾಚೀನ ಸಂಸ್ಕೃತಿ—ಸಾಹಿತ್ಯಗಳೊಡನೆ ಆಧುನಿಕ ಜ್ಞಾನ—ವಿಜ್ಞಾನಗಳನ್ನೂ ಆಭ್ಯಸಿಸಿ ನಮ್ಮ ಆಧ್ಯಾತ್ಮಿಕತೆಯ ಬಲದಿಂದ ವಿನಾಶದತ್ತ ಸರಿಯುವ ಪ್ರಪಂಚವನ್ನುಳಿಸಬೇಕೆಂದೂ ಹೇಳಿದರು. ನಿಜವಾಗಿಯೂ ನಮ್ಮ ಪಂಡಿತರು ಇಂದು ಸಮಾಜದಲ್ಲಿ ತಲೆಯೆತ್ತಿ ನಿಲ್ಲಲು ಅಶಕ್ತರಾಗಿರುವುದು ನಿಜವಾದರೆ, ಅವಕ್ಕೆ ಆಧುನಿಕ ವಿಜ್ಞಾನ ಜ್ಞಾನಾಭಾವವೇ ಕಾರಣ. ಆದರುದರಿಂದ, ಸಂಸ್ಕೃತ ಆಯೋಗದ ನಂದಿಯ ಕಾರ್ಯಾಚರಣೆಯು ಆತಿ ಶೀಘ್ರದಲ್ಲಾಗಬೇಕಾದುದು ನ್ಯಾಯವೇ. ನಗರ ಸಭೆಯ ಮಾನಪತ್ರಕ್ಕೆ ಉತ್ತರಿಸುತ್ತ ರೈಲ್ವೆ ಇತ್ಯಾದಿ ಸೌಲಭ್ಯಗಳಿಗಿಂತಲೂ ವಿದ್ಯೆಯೆ ಮೂಲಕ ಅಭಿವೃದ್ಧಿ ಸಾಧಿಸುವುದು ಅಗತ್ಯವೆಂದೂ, ಇಲ್ಲಿಯವರು ವಿವಿಧ ಶಾಲೆ, ಕಾಲೇಜುಗಳನ್ನು ಕಟ್ಟಿ ಕೊಂಡು ಈ ದಿಸೆಯಲ್ಲಿ ಬಹಳ ಮುಂದುವರಿದಿರುವರೆಂದೂ ಪ್ರಗತಿ ಸಾಧಿಸಿರುವರೆಂದೂ ಹೇಳಿದರು. ಇನ್ನಿನ, ವಿದ್ಯಾ ಸಂಸ್ಥೆಗಳು ಮತ್ತು ಸಾಮಾಜಿಕ ವ್ಯಕ್ತಿಗಳ ನಡುವೆ ಸಾಮರಸ್ಯವಿರುವಿದರಿಂದಲೇ ಇಷ್ಟೊಂದು ಪ್ರಗತಿಯಾಗುವುದು ಸಾಧ್ಯವಾಯಿತೆಂದೂ ಡಾ॥ ಮಾಧವ ಪೈಯವರಂತಹ ನುರಿತ ಕಾರ್ಯದುರಂಧರರನ್ನು ನೀವು ಪಡೆದಿರುವಿರೆಂದೂ ಹೇಳಿದರು.

ಈ ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸುವಾಗ, ಎಕೆಡೆಮಿಯು ಇಟ್ಟಿದಿಟ್ಟಿ ಹೆಜ್ಜೆಯು ಸಮರ್ಪಕವಾದುದೆಂದೂ ವಿದ್ಯಾರ್ಥಿಗಳನ್ನು ಸನ್ನಾರ್ಗದಲ್ಲಿ ಮುಂದುವರಿಯಲು ಪ್ರೇರೇಪಿಸುವುದೆಂದೂ, ಸಹಾಯ ಧನಪಡೆದು ಸಹಕಾರಕ್ರಮದಿಂದ ಸಂಸ್ಥೆಗಳನ್ನು ಕಟ್ಟುವುದು ಅನ್ಯಾಯವಲ್ಲವೆಂದೂ, ತಾಂತ್ರಿಕ ಹಾಗೂ ವೈಜ್ಞಾನಿಕ ವಿದ್ಯೆಗಳ ಪ್ರಸಾರ ಅತ್ಯಗತ್ಯವೆಂದೂ ನಮ್ಮ ಪರಂಪರೆಯ ಸಂಸ್ಕೃತಿಯನ್ನು ಬಿಡದೆ, ಅದರೊಂದಿಗೆ ಇಂದಿನ ಜಗತ್ತಿನ ಜೀವಾಳವಾದ ವಿಜ್ಞಾನವನ್ನೂ ಅಳವಡಿಸುವುದು ಅತ ಗತ್ಯವೆಂದೂ ತಿಳಿಸಿ ಬರುವುದು. ನಿಜವಾಗಿಯೂ ಪ್ರಸಂಜ ನಿಮಿಷಕ್ಕೆ ಲಕ್ಷ ಮೈಲು ಓಡುತ್ತಿರುವಾಗ, ನಾವು ಮಾತ್ರ ಕೋಟೆ ವರ್ಷಗಳ ಹಿಂದಿನ ಕ್ರಮವೆಂದು ಕಾಲ್ಕಡೆಯಲ್ಲೇ ಮುಂದುವರಿಯುವುದು ಇಂದಿನ ಯುಗಕ್ಕೆ ಹೇಳಿಸಿದ ಶ್ರಮವಲ್ಲ. ಆದುದರಿಂದ, ನಾವು ಇಂದಿನ ಕಾಲಕ್ಕತ್ಯವಾದ ವೈಜ್ಞಾನಿಕ ವಿದ್ಯೆಯನ್ನು ವಿಪುಲವಾಗಿ ಸಂರಿಸುವುದು ಅಗತ್ಯ. ಅದರೊಂದಿಗೆ, ನಮ್ಮ ಸಂಸ್ಕೃತಿಯ ಸಂರಕ್ಷಣೆಯೂ ಅತ್ಯಗತ್ಯ. ಪ್ರಾಚೀನ ಮತ್ತು ಅರ್ವಾಚೀನಗಳೆಲ್ಲಿ ಸಮರಸತೆಯನ್ನು ಕಾಯ್ದುಕೊಂಡು ದೇಶದ ಬೃಹತ್ತಸಮಸ್ಯೆಯನ್ನು ಬಗೆಹರಿಸುವಲ್ಲಿ ತಮ್ಮ ಅಮೂಲ್ಯ ದೇಣಿಗೆಯನ್ನೀಯುತ್ತಿರುವ ನಮ್ಮ ಜಿಲ್ಲೆಯ ವಿವಿಧ ವಿದ್ಯಾಸಂಸ್ಥೆಗಳೂ ಅವುಗಳ ವ್ಯವಸ್ಥಾಪಕವರ್ಗಗಳೂ ಪಂದನಾರ್ಹವಿವೆ. ಅವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಪ್ರಯೋಜನ ದೊರೆಯುವುದೆಂದು ಹಾರೈಸಿದರೆ, ತಪ್ಪಿಲ್ಲ.

ವಿದ್ಯಾಮಂತ್ರಿಗಳ ಸಂಚಾರ

ಎಂ. ಜಿ ಎಂ. ಕಾಲೇಜು ಇದೇ ತಾ. ೨ನೇ ಸಂಜೆ ಉಡುಪಿ ಎಂ. ಜಿ ಎಂ. ಕಾಲೇಜ್ ಡಾ॥ ಮಾಧವ ಪೈ ಪಷ್ಕಳ್ಬಿ ಸ್ಮಾರಕ ವಿಜ್ಞಾನ ಭವನದ ಶಂಕುಸ್ಥಾಪನಾ ಸಮಾರಂಭವು ವಿದ್ಯಾ ಮಂತ್ರಿ ಡಾ॥ ಕೆ. ಎಲ್. ಶ್ರೀಮಾಲಿಯವರಿಂದ ನೆರವೇರಿಸಲ್ಪಟ್ಟಿತು. ರಾಜ್ಯ ಸಭೆಯ ಉಪಸಭಾಧ್ಯಕ್ಷ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಕಾಲೇಜಿನ ಕರೆಸ್ಪೋಂಡೆಂಟ್ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡಿ, ಕಾಲೇಜಿನ ಸಾಧಿಸಿ ಯೊಯುತ್ತ ಜಲಕ್ಷ ವೆಚ್ಚದಿಂದ ಕಟ್ಟಲಾಗುವ ವಿಜ್ಞಾನ ಭವನಕ್ಕೆ ಡಾ॥ ಸಾಧನ ಪೈ ಪಷ್ಕಳ್ಬಿ ಸಮಿತಿಯವರು ರೂ ೦| ಲಕ್ಷ ಕೊಟ್ಟ ವಿಚಾರದಿಗ ಳನ್ನು ವಿವರಿಸಿದರು.

ಡಾ॥ ಶ್ರೀ ನೂಲಿಯವರು ಉಡುಪಿಯ ಇತಿಹಾಸವನ್ನು ತಾನು ಕೇಳಿರುವುದಾಗಿಯೂ, ಇಂತಹ ಪ್ರಸಿದ್ಧ ಸ್ಥಳಕ್ಕೆ ಬರಲು ನನಗೆ ಅನಂದ ವಾಗುವುದೆಂದೂ, ಪ್ರಜಾಪ್ರಭುತ್ವವು ಜಯ ಶೀಲವಾಗಬೇಕಾದರೆ ಸರಕಾರಕ್ಕೆ ಜನತಾ ಸಹಕಾರ ಅಗತ್ಯವೆಂದೂ ಡಾ॥ ಟಿ. ಎಂ ಎ. ಪೈಗಳು ಏಕೆಡೆಮಿ ಸಂಸ್ಥೆಯು ಮೂಲಕ ವಿದ್ಯಾ ಕ್ಷೇತ್ರದಲ್ಲಿ ಏಕಿಷ್ಟ ಕೆಲಸಗಳನ್ನು ನೂಡಿರುವರೆಂದೂ, ಇದರಿಂದ ಊರವರಿಗೆ ಪ್ರೌಢ ಅಲ್ಲದೇ ಪರವೂರ ವಿದ್ಯಾರ್ಥಿಗಳಿಗೂ, ಹೆಚ್ಚಿನ ವಿದ್ಯಾಸೌಲಭ್ಯ ಲಭಿಸುವಂತಾಗಿದೆ ಎಂದೂ ಇಲ್ಲಿಯ ಎಂ. ಜಿ. ಎಮ್ ಕಾಲೇಜು, ಬಿಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳ ಕುರಿತು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಇಂದಿನ ನಾಗರಿಕ ಯುಗದಲ್ಲಿ ವಿಜ್ಞಾನವೂ ತಾಂತ್ರಿಕ ವಿದ್ಯಾಭ್ಯಾಸವೂ ಅತಿ ಮುಖ್ಯವಾಹುದಾದರೂ ವಿಜ್ಞಾನದಿಂದ ವಿನಾಶವಾಗದಂತೆ ನೋಡಬೇಕಾಗಿದೆಯೆಂದೂ ಎಲ್ಲರಿಗೂ ತಾಂತ್ರಿಕ ಶಿಕ್ಷಣಕ್ಕೆ ತಕ್ಕ ಸೌಲಭ್ಯ ಏರಬೇಕೆಂದೂ ಇಂಗ್ಲೆಂಡಿನಲ್ಲಿ ಸೇಕಡಾ ೯೦ರಷ್ಟು ವಿದ್ಯಾರ್ಥಿಗಳಿಗೆ ಸರಕಾರ ವಿದ್ಯಾರ್ಥಿ ವೇತನ ಕೊಡುತ್ತಿರುವುದೆಂದೂ ಇಲ್ಲಿಯೂ ಈ ಸೌಕರ್ಯ ವಿರಬೇಕೆಂದು ಹೇಳಿದರು.

ಆಧ್ಯಕ್ಷ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಡಾ॥ ಮಾಧವ ಪೈಗಳ ನೇತೃತ್ವದಲ್ಲಿ ಇಲ್ಲಿಯ ಸಂಸ್ಥೆಗಳು ಉನ್ನತ ಮಟ್ಟು ಆದರ್ಶ ರೀತಿಯಲ್ಲಿ ಮುನ್ನಡೆಯುತ್ತಿವೆಯೆಂದೂ ವಿದ್ಯಾರ್ಥಿಗಳಲ್ಲಿ ಉತ್ತಮ ಗುಣಾಸ್ತು ಮುಖ್ಯವಾದುವೆಂದೂ ಹೇಳಿದರು. ಪ್ರಿನ್ಸಿಂಲ್ ಎಚ್. ಸುಂದರರಾಯರು ಧನ್ಯವಾದಗಳನ್ನಿತ್ತರು.

ಸಂಸ್ಕೃತ ಕಾಲೇಜು— ಆನಂತರ ಮಾನ್ಯ ಮಂತ್ರಿವರ್ಯರು ಸಂಸ್ಕೃತ ಕಾಲೇಜನ್ನು ಸಂದರ್ಶಿಸಿದಾಗ, ಪ್ರಿನ್ಸಿಂಪಲ್ ಕೆ. ಶೇಷಾಚಾರ್ಯರು ಸ್ವಾಗತಿಸಿ, ಸಂಸ್ಕೃತ ಆಯೋಗದ ಶಿಫಾರಸುಗಳನ್ನು ಜೀಗನೇ ಕಾರ್ಯಾನ್ವಿತಗೊಳಿಸಲು ಕೇಳಿಕೊಂಡರು. ಮಂತ್ರಿವರ್ಯರು ಈ ವಿಷಯದಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರಗಳನಡುವೆವಿಚಾರವಿನಿಮಯ ನಡೆಯುತ್ತಿದೆಯೆಂದೂ ಅವಷ್ಟು ತೀಕ್ರವಾಗಿ ಅವನ್ನು ಸ್ವೀಕರಿಸಲಾಗುವುದೆಂದೂ ಹೇಳಿ, ಸಂಸ್ಕೃತ ವಿದ್ಯಾಭ್ಯಾಸದೊಡನೆ ವೈಜ್ಞಾನಿಕ ವಿದ್ಯೆಯೂ ಆಜಾರ್ಯರಿಗೆ ದೊರೆಯುವ ಸೌಲಭ್ಯವಿರುವ ಅವಶ್ಯಕತೆಯನ್ನು ಒತ್ತಿ ಹೇಳಿದರು.

ನಗರ ಸಭೆ ಮುಂತೆ, ಡಾ॥ ಶ್ರೀ ನೂಲಿಯವರು ನಗರಸಭೆಯ ಮೂಸ ಪತ್ರವನ್ನು ಸ್ವೀಕರಿಸಿದರು. ಅದರಲ್ಲಿ ನ ಗ ರ ಸ ಭೆ ಗಳ ಶಾ ಲೆ ಗ ಳ ನ್ನು ಸ ರ ಕಾ ರ ವೇ ನ ಹಿ ಸ ಬೇ ಕು ಆ ಥ ವಾ ಸಾಕಷ್ಟು ಸಹಾಯಧನವೀಯಬೇಕು ಎಂದೂ ಮಲ್ಪೆ ಬಂದರನ್ನು ಪ್ರಬುದ್ಧ ಬಂದರನ್ನಾಗಿ ಮಾಡಬೇಕೆಂದೂ ಕೇಳಿಕೊಳ್ಳಲಾಗಿತ್ತು. ಮಾನ್ಯ ಮಂತ್ರಿಗಳು ಈ ವಿಷಯಗಳನ್ನೆಲ್ಲ ರೂಪಯ ವಿಟ್ಟು ವಿದ್ಯಾಕ್ಷೇತ್ರದಲ್ಲಿ ಉಡುಪಿಯು ಸಾಧಿಸಿದ ಸಾಧನೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯೆಯು ಆವಶ್ಯಕತೆಗಳನ್ನು ಒತ್ತಿ ಹೇಳಿದರು. ಆಧ್ಯಕ್ಷೆ ಸ್ಥಾನದಿಂದ ಶ್ರೀ ಎಸ್. ವಿ ಕೃಷ್ಣಮೂರ್ತಿರಾಯರು ತೃತೀಯ ಯೋಜನೆಯಲ್ಲಿ ಮಲ್ಪೆಯು ಪ್ರಬುದ್ಧ ಬಂಎರವಾಗುವ ಸೂಚನೆಯಿದೆ ಎಂದು ಹೇಳಿದರು.

ಇಂಜಿನಿಯರಿಂಗ್ ಕಾಲೇಜ್ ನಿಲಯದ ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿ ಭವನದ ರಂಕುಸ್ಥಾಪನೆ ಮಾಡುತ್ತ ಡಾ॥ ಶ್ರೀಮಾಲಿಯನರು ಏಕೆಡೆಮಿಯು ಸಾಧಿಸಿರುವ ಪ್ರಗತಿಯನ್ನು ಪ್ರಶಂಸಿಸಿ, ಔದ್ಯೋಗಿಕ ಶಿಕ್ಷಣದೊಡನೆ ಸಾಮಾನ್ಯ ಜ್ಞಾನವು ಅಗತ್ಯವೆಂದೂ ಏಕೆಡೆಮಿಯು ತನ್ನ ಕಾರ್ಯಕ್ಷೇತ್ರವನ್ನು ಇನ್ನೂ ವಿಸ್ತರಿಸಲೆಂದೂ ಆಶಿಸಿದರು. ಆಧ್ಯಕ್ಷೆ ಡಾಗಿದ್ದ ಶ್ರೀ ಎಸ್. ವಿ.ಯವರು ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಸಮಾಜದ ಸೇವೆಗೆ ಸದಾ ಸಿದ್ಧರಾಗಿರಬೇಕೆಂದೂ ಹೇಳಿದರು.



ಅಲ್ಲಲ್ಲಿಯ ಸುದ್ದಿಸಾರ

ಮೂಳ್ಳಿ ಆಸ್ಪತ್ರೆ ದಿನಾಚರಣೆ— ಸಮಾರಂಭವನ್ನು ತಾ. ೭ರಂದು ಬೆಳಿಗ್ಗೆ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಸಂಜೀವಯ್ಯ ಜೆಡ್ಡಿಯವರು ಉದ್ಘಾಟಿಸಿದರು. ಸಾಜಿ ಸಾರ್ವಜನಿಕ ಸಭೆಯು ಪೂಜಾ ಸುಂಠ್ರಾ ಶ್ರೀ ಎ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಿಗಿತು. ಡಾ. ಕೆ. ಜೆ. ದಾಸರು 'ಗೃಹವೈದ್ಯ' ಎಂಬ ವಿಷಯದ ಮೇಲೂ, ಡಾ| ಯು. ಎಸ್. ನಾಯ್ಕರು ಆರೋಗ್ಯ ಮತ್ತು ಶುಚಿತ್ವದ ಮೇಲೂ, ಡಾ| ಆರ್. ಎನ್. ಶೆಣೈಯವರು ಕ್ಷಾಸ್ಪರಿನ ಮೇಲೂ, ಡಾ| ಬಿ. ಆರ್. ರಾವ್ ಯವರು ಮಕ್ಕಳ ರೋಗ ಮತ್ತು ಅವರ ನಿರೋಧದ ಮೇಲೂ, ಡಾ| ಎಫ್. ಕೊಯಿಲೋರವರು ಕುಷ್ಠ ರೋಗ ನಿಯಂತ್ರಣದ ಕುರಿತೂ, ಡಾ| ಎನ್. ಎಸ್. ಮಾಡೇಶ್ವಯ್ಯನವರು ಹೊಸ ಮಾದರಿಯ ಬಾಯಿಬಾನೆಗಳು ಮತ್ತು ಹೊಗೆ ರಹಿತ ಒಲೆಯ ಕುರಿತೂ ಶ್ರೀ ಕೆ. ರಘುವೀರರು ಅನೆಕಲಿನ ಕುರಿತೂ ಭಾಷಣಮಾಡಿದ್ದರು. ಜಿಲ್ಲಾ ವೈದ್ಯಾಧಿಕಾರಿ ಡಾ| ಎ. ತಿಮ್ಮಪ್ಪಯ್ಯನವರು ಆಸ್ಪತ್ರೆಯ ವಿದ್ಯುತ್ ಸರಬರಾಯಿಯ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಎ. ಬಿ. ಸೆಟ್ಟರು ತಮ್ಮ ಭಾಷಣದಲ್ಲಿ ೪೬ ವರ್ಷಗಳ ಹಿಂದೆ ಅರಂಭಿಸಲಾದ ಆಸ್ಪತ್ರೆ ನಿರಾಶ್ರಿತ ಭಂಡು ಆಸ್ಪತ್ರೆಯು ವಿಜಾರದಲ್ಲಿ ಉತ್ತಮ ಸೇವೆಸಲ್ಲಿಸುತ್ತಿದೆ ಎಂದರು.

ಕೇಂದ್ರ ಸರಕಾರದ ರೈಲ್ವೇಇಲಾಖಾ ಉಪಮಂತ್ರಿ ಶ್ರೀ ಎಸ್. ನಿವಾಸ ಸ್ವಾಮಿ ಯವರು ತಾರೀಕಂದು ಉಡುಪಿ ಶ್ರೀ ಕೃಷ್ಣನ ೪ ಮೆಟ್ರಿಕ್ ಸೆಂಟರ್ಸ್, ಜಾಜಪಾಲದ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜು

ರಿಂಗ್ ಕ್ಷೇತ್ರದಲ್ಲಿ ಮೈಸೂರಿನ ಭವ್ಯ ಪರಂಪರೆಯನ್ನು ಉಳಿಸಿ ಬೆಳೆದ ಅನಸ್ಥೆಕೆತೆಗಳನ್ನು ಪೂರೈಸುವಂತೆ ಬಯಸಿದರು.

ಆರಂಭದಲ್ಲಿ ಡಾ| ಸೂಧನ ಪೈಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳು ದೇಶದ ಆವಶ್ಯಕತೆಗೆ ತಕ್ಕಷ್ಟು ಟೆಕ್ನೋಲಿಗಿಕ ಕಾಲೇಜುಗಳನ್ನು ತೆರೆಯಲು ಅಸಮರ್ಥವಾದಾಗ ಎಕೆಮಿಯು ಇಂತಹ ಕಾಲೇಜುಗಳನ್ನು ತೆರೆದಿರುವುದೆಂದೂ, ಪಗಡಿ ಕಾಲೇಜುಗಳಿಂದ ಆಪಾದಕ್ಕೆ ಪೆಗುರಿಯಾಗಿರುವುದೆಂದೂ, ಆದರೆ, ಸರಕಾರವು ಸಾಕಷ್ಟು ಸಹಾಯವನ್ನಿತ್ತರೆ ಇವುಗಳ ದ್ಯಾರವನ್ನು ಸರ್ವರಿಗೂ ಮುಕ್ತವಾಗಿರಿಸುವುದು ಸಾಧ್ಯವೆಂದೂ ಹೇಳಿದರು.

ಮೆಡಿಕಲ್ ಕಾಲೇಜು— ಮಂಗಳೂರು ತಸ್ಕೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಜರಗಿದ ಕಾಲೇಜು ವಿದ್ಯಾರ್ಥಿಗಳ ಸಭೆಯಲ್ಲಿ ತಾ. ೧೫ರಂದು ಡಾ| ಶ್ರೀ ಮಾಲಿಯವರು ಭಾಷಣ ಮಾಡುತ್ತಾ, ನಾವು ಕಾಲಗತಿಯೊಂದಿಗೆ ಚಲಿಸಬೇಕಾಗುವುದೆಂದೂ, ಕ್ಷಣದಿಂದ ಕ್ಷಣಕ್ಕೆ ಪರಿವರ್ತನೆಯಾಗುತ್ತಿರುವ ಸ್ಥಿತಿಯಲ್ಲಿ ನಾವು ಇದ್ದೇವೆಂದೂ ಇಂತಹ ವೇಳೆಯಲ್ಲಿ ಹೊಸ ದಾರಿಗಾಗಿ ಪಾತೊರೆಯುವ ಯುವಕರೆನ್ನು ಸುಸ್ವಾಗತಿಸುವ ಜವಾಬ್ದಾರಿ ಹೊತ್ತವರು ಪರಿವರ್ತನೆಯನ್ನು ಜಗತ್ತಿಗೆ ಪರಿಚಯ ಮಾಡಿಕೊಳ್ಳಬೇಕಾಗಿದೆಯೆಂದೂ ಭರದಿಂದ ಪ್ರಗತಿ ಪಥೆಯತ್ತಿರುವ ವಿಜ್ಞಾನವನ್ನು ಸದುಪಯೋಗ ಮಾಡಿಕೊಳ್ಳಬೇಕೆಂದೂ ನಾವು ಭಾರತೀಯ ಸಂಸ್ಕೃತಿ ಸ್ಫೆತಿಕ ಧರ್ಮಗಳನ್ನು ತ್ಯಜಿಸಬಾರದೆಂದೂ ಉಡುಪಿ ಹಾಗೂ ತಾಂತ್ರಿಕ ಕೊಲೆಜುಗಳಿಂದ ಸ್ಫೂರ್ತಿ ಪಡೆಯುತ್ತಿರುವ ಮಣಿಪಾಲ ಇವುಗಳು ಆಧ್ಯಾತ್ಮಿಕ ಹಿನ್ನೆಲೆ ಮತ್ತು ವಿಜ್ಞಾನದ ಸಮನ್ವಯಕ್ಕೆ ಉತ್ತಮ ಆದರ್ಶವೆಂದೂ ಹೇಳಿದರು.

ಆರಂಭದಲ್ಲಿ ಪ್ರಿನ್ಸಿಪಾಲ್, ಡಾ| ಜೆ. ಡಿ. ವೇಲಿಯತರು ಸ್ವಾಗತಿಸಿದರು. ಡಾ| ಟಿ. ಮಾಧವ ಮೈಯವರು ಸುಂಠ್ರಿಗಳ ಪರಿಚಯ ಮಾಡಿಸುತ್ತಾ ವಿದ್ಯಾರಂಗದ ಅಭಿವೃದ್ಧಿಯಲ್ಲಿ ಸರಕಾರ ಮತ್ತು ಧಾರ್ಮಿಕ ಸಂಸ್ಥೆಗಳಪ್ಪೇ ಪ್ರಮುಖ ಪಾತ್ರ ವಾಸಗೀ ಸೆಂಸ್ಥೆಗಳದ್ದೆಂದರು. ಶ್ರೀ ಎಂ. ಆರ್. ಟಾಂಗರವರು ಧನ್ಯವಾದಗಳನ್ನರ್ಪಿಸಿದರು.

ಗಳನ್ನು ಸಂದರ್ಶಿಸಿ ತಮ್ಮ ಸೇಜ್ಞೆಗೆಯನ್ನು ನೈಕ್ಷಪಡಿಸಿದರು. ಡಾ| ಸೂಧನ ಪೈಗಳು ಎಕೆಮಿಯ ಆಫ್ ಜನರಲ್ ಎಜ್ಯುಕೇಶನ್ ಪರವಾಗಿ ಸ್ವಾಗತ ವಿಯುತ್ತಾ ಎಕೆಮಿಯು ಸಾಧಿಸಿದ ಕಾರ್ಯಗಳನ್ನು ವಿವರಿಸಿದರು. ಉಪಸುಂಠ್ರಿಗಳು ಉತ್ತರ ವಿಯುತ್ತಾ ಈ ಜಿಲ್ಲೆಯ ಸೃಷ್ಟಿಯ ಸೊಬಗನ್ನು ಕೊಂಡಾಡಿದರು. ಡಾ| ಸೈ, ವೈಕುಂಠಬಾಳಿಗಾರರಂಥವರ ಚಟುವಟಿಕೆಗಳನ್ನು ಪ್ರಶಂಸಿಸಿದರು.

ಎಮ್. ಜಿ. ಎಮ್. ಕಾಲೇಜಿಗೆ ಉಗಸಚಿವರು ಭೇಟಿಯಿತ್ತಾಗ ಕಾಲೇಜಿನ ಕರ್ಸ್ಪಾಂಡೆಂಟರಾದ ಶ್ರೀ ಟಿ. ಎ. ಪೈಗಳು ಸ್ವಾಗತಿಸಿ ಮೈಸೂರು ರಾಜ್ಯದ ಮುಖ್ಯ ಅನ ಶ್ಯಕತೆ ಪಬುಜ್ಞ ಬಂದರ ಮತ್ತು ಜಳಪ್ಪಾಂತ್ಯವನ್ನು ಇದರೊಂದಿಗೆ ಜೋಡಿಸುವ ರೈಲ್ವೆ ಯೊಂದಿಗೆ. ದೇಶದ ಹಿತದೃಷ್ಟಿಯಲ್ಲಿ ಯಾವುದು ಉತ್ತಮವೊ ಅದನ್ನು ನೆರವೇರಿಸ ಬೇಕಾಗುವುದು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರು ೪೫ ಕೋಟಿ ಮಿತಿಯೇನು, ತೃತೀಯ ಯೋಜನೆಯ ರೂಪರೇಖೆಯನ್ನು ಉಪಸಚಿವರು ವಿವರಿಸಿದ್ದರೆ ಪೆನ್ನಾಗಿತ್ತೆಂದು ಹೇಳಿದರು. ಉಪಸಚಿವರು ಉತ್ತರವಿಯುತ್ತ ದ್ವಿತೀಯ ಯೋಜನೆಯಲ್ಲಿ ಕಾಲಂಕ ರೈಲ್ವೆಗಾಗಿರಿಯೆಂದು ನಿಶ್ಚಯಿಸಲಾಗಿದೆ. ಆದರೆ ಉಕ್ಕಿನ ಕ್ರಯ ಹೆಚ್ಚುತ್ತಿರಿ ಇರುವುದರಿಂದ ಆಯಾಜು ಮಾಡಿದ ಉಕ್ಕಿನ ಸರಬರಾಯಿಯಲ್ಲಿ ಕಾಲಂಶವಾದರೂ ಕಡಿತ ವಾಗಬಹುದು, ಪ್ರಕೃತ ನೂರು ಉಕ್ಕಿನ ಕಾರ್ಖಾನೆಗಳನ್ನು ಅಪರೂಗಳಿರುವ ಸ್ಥಳಗಳೊಂದಿಗೆ ಸಂಪರ್ಕ ತರುವ ಮುಖ್ಯ ರೈಲು ದಾರಿಗಳನ್ನು ಮಾತ್ರ ಹಾಕಿತ್ತಿದೆ. ಪಶ್ಚಿಮ ಕರಾವಳಿಯಲ್ಲಿ ಆವಕ್ಕಿಂತಲೂ ಹೆಚ್ಚಿನ ಅಗತ್ಯವಿದೆ ಎಂದು ನೀವು ಬಲವತ್ತಾಪೆ ಕಾರಣ ಕೊಡುವಿರಾದರೆ ಇದು ಸಾಧ್ಯವಾಗಬಹುದು ಆಥವಾ ಇಲ್ಲಿರುವ ಕಚ್ಚಾ ಪದಾರ್ಥಗಳನ್ನು ಕೊಂಡು ಕೊಂಡು ಸಾಗಾಟ ನೈಸ್ಪರ್ಯವನ್ನು ಯಾವದೇ ವಿದೇಶಿಯರು ವಹಿಸಿಕೊಳ್ಳುವವರೆಗೆ ಅದನ್ನು ಸರಕಾರ ಪರಿಗಸಿಸುವುದೆಂದು ಹೇಳಿದರು. ನಂತರ ಮಲ್ಪೆಯನ್ನು ಸಂದರ್ಶಿಸಿದರು.

ಕಾಂಗ್ರೆಸ್ ಕಮಿಟಿಯ ನೇತೃತ್ವ ದಲ್ಲಿ ವಿಧಾನಸಿಸಲಾದ ಚಿಕಾ ಸತ್ಕಾರವನ್ನು ಉಪಸಚಿವರು ಸ್ವೀಕರಿಸಿದರು ಕಾರ್ಯದರ್ಶಿ ಶ್ರೀ ಎ. ಜೆ. ಅಲ್ಸಿಯವರು ಸ್ವಾಗತಿಸುತ್ತಾ ಮಲ್ಪೆಯ ಪ್ರಕೃತಿದತ್ತವಾದ ಅನುಕೂಲತೆಯನ್ನು ಉಪಯೋಗಿಸಿಕೊಳ್ಳುವುದು ದೇಶದ ಮುಂದಿರುವ ಆರ್ಥಿಕ ದುಸ್ಥಿತಿಯ ಕಾಲದಲ್ಲಿ ಉಳಿತಾಯವಾಗುವುದೆಂದು ಹೇಳಿದರು ಉಪಸಚಿವರು ಉತ್ತರವಿಯುತ್ತಾ, ಇನ್ನಿನ ವಿಧಾನದ ಲೋಕ ಸಭಾಸದಸ್ಯ ಶ್ರೀ ಯು. ಎಸ್ ಮಲ್ಯರ ಕಾರ್ಯಪಟುತ್ವವನ್ನು ಪ್ರಶಂಸಿಸಿ ಈ ಜಿಲ್ಲೆಗೆ ಬೇಕಾಗಿರುವುದನ್ನು ಅವರು ಚಾಣಾಕ್ಷತನದಿಂದ ಸಾಧಿಸಿ ಬಿಡುತ್ತಾರೆಂದು ಹೇಳಿದರು.

ನಿಧನ; ಸೂಡಾಗ್ರಾಮದ ಪಶೇಲರೂ ಸೂಡಾ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ಮೊಕ್ತೇಸರರೂ ಆಗಿದ್ದ ಶ್ರೀ. ಶಿವಕೋಡು ಶೀನಪ್ಪ ಹೆಗ್ಡೆಯವರು ತಮ್ಮ 67 ನೇ ವಯಸ್ಸಿನಲ್ಲಿ, ಮುಂಬಾಯಿಯಲ್ಲಿರುವ ತಮ್ಮ ಮಗ ಡಾ| ಪಿ. ಜಗನ್ನಾಥ ಶೆಟ್ರ ಮನೆ ಗ್ರಹದಲ್ಲಿ ತಾ. 29 - 10 - 58ರಲ್ಲು ದೈವಾದೀನರಾದುದು ವಿಷಾಧಕರ ದಿವಂಗತರು ಸೂಡಾ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ ಪಲೂ ಸೂಡಾ ಬೋರ್ಡು ಎಲೆಮೆಂಟರಿ ಶಾಲೆ ಸುಬ್ರಹ್ಮಣ್ಯ ಹಾಯರ್ ಎಲಿಮೆಂಟರಿ ಶಾಲೆ ಪಂಚಾಯತ್ ಬೋರ್ಡು ಮುಂತಾದ ಸಂಸ್ಥೆಗಳ ಸ್ಥಾಪನೆ ಬಗ್ಗೆ ತುಂಬಾದುಡಿದವರೂ, ಶಿರ್ವ ಹಿಂದೂ ಹೈಸ್ಕೂಲಿನ ಕನಿಟಿಮೆಂಬರರೂ, ಲಡಾಕ ಬಡ್ಡಿದರೆಂಬ ಭೀಧನಲ್ಲಿ ದಕ್ಷ ಆಡಳಿತನಡಿಸಿದಜನಪ್ರಿಯಪಶೇಲರೂಆಗಿದ್ದರು

ವಾರ್ಷಿಕೋತ್ಸವ— ಉಡುಪಿ ಕಲಾ ಪೃಂದದ ವಾರ್ಷಿಕೋತ್ಸವವೆ ತಾ. 8—11—1958ರಂದು ಪರ್ಯಾಯ ಶ್ರೀ ಕೃಷ್ಣಾಪುರ ಮಠದ ಶ್ರೀಗಳವರ ಆಶ್ರಯ ದಲ್ಲಿ ಸಸಂತ ಮಸಲಿನಲ್ಲಿ ಶ್ರೀ ಕಾಣಿಯೂರು ಮಠದ ಶ್ರೀ ವಿದ್ಯಾನಿಧಿ ತೀರ್ಥ ಶ್ರೀ ಪಾದಂಗಳವರ ಹಿರಿತನದಲ್ಲಿ ಜರಿಗಿತು. ಮುದ್ರಿತ ಸಮಸ್ಯಾಚಯ ಕಥಾಂಶನನ್ನು ಶ್ರೀ ಫೆಲಿಮಾರು ಮಠದ ಶ್ರೀಗಳವರು ಉಪ್ಪಾಟಿ ಸಿದರು. ಶ್ರೀ ವಾಸುದೇವ ಆಚಾರ್ಯರು ಕವಿತಾವಾಚನವನ್ನು ಮಾಡಿದರು. ಶ್ರೀಗಳಾ ದ ಕು. ಶಿ. ಹರಿದಾಸ ಭಟ್ಟರು, ಮತ್ತು ಎ. ಸುಬ್ರಾಯ ಆಚಾರ್ಯ, ವಿದ್ವಾನ್ ಇವರು ಭಾಷಣಗೈದರು. ನಂತರ ಸಂಗೀತ, ನಾಟಕಾ ಭಿನಯಗಳಿದ್ದವು.

ಅಧಿಕ ಅಧಿಕ ಜನರಿಗೆ

ಅಧಿಕ ಅಧಿಕ ಪ್ರಮಾಣದಲ್ಲಿ ಸೇವೆಯನ್ನು ಸಲ್ಲಿಸಲು ಈ ಕೆಳಗಿನ ಕೇಂದ್ರಗಳಲ್ಲಿ, ಹೊಸದಾಗಿ ನಮ್ಮ ಶಾಖೆಗಳನ್ನು ತೆರೆಯಲ್ಪಟ್ಟಿತೆಂದು ತಿಳಿಸಲು ಹರ್ಷಿಸುತ್ತೇವೆ:—

1) ಬೆಂಗಳೂರು .... ಮಹಾತ್ಮ ಗಾಂಧಿ ರೋಡು
2) ಬೊಂಬಾಯಿ ... ಕಿಂಗ್ ಸರ್ಕಲ್-ಮಾತುಂಗ
3) ಬಳ್ಳಾರಿ .... ರಥಬೀದಿ
4) ಬಿಜಾಪುರ .... ಸರಾಫಿ ಮಾರ್ಕೆಟ್ ರೋಡು
5) ಗದಗ್ .... ನಾವಸ್ ಜೋಷಿ ರೋಡು
6) ರಾಯಚೂರು.... ಬ್ರೇಸ್ಪ್ಪೇವರ್ ಪೇಟೆ
7) ತಲ್ಲಿಜೇರಿ .... ಮೈನ್ ರೋಡು
8) ಕೊಲ್ಹಾಪುರ .... ಲಕ್ಷ್ಮೀಪುರಿ

ದಿನೇ ದಿನೇ ಬೆಳೆಯುತ್ತಿರುವ ತಮ್ಮ ಹಿತೈಷಿಗಳ ಪ್ರೀತಿ, ವಿಶ್ವಾಸಗಳ ಬಲದಿಂದ ಮುಂಬರುವ ವರ್ಷಗಳಲ್ಲಿ ಹೆಚ್ಚು ಹೆಚ್ಚಿನ ಸೇವೆಯನ್ನು ಸಲ್ಲಿಸುವೆನೆಂಬ ದೃಢ ನಂಬಿಕೆ ಇರುವ.....

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಮೈಸೂರು ರಾಜ್ಯದಲ್ಲಿ ಸ್ಥಾಪಿತವಾಗಿರುವ ಹೆಡ್ಡೂಲ್ಡ್ ಬ್ಯಾಂಕುಗಳಲ್ಲೆಲ್ಲಾ ಅತ್ಯಂತ ದೊಡ್ಡದಾದುದು.

ದೀಪಾವಳಿ

(೧ನೇ ಪುಟದಿಂದ)

ತ್ತು ಅರ್ಥವಾದಗಳು ಇಲ್ಲಿವರೆಗೆ ಬಂದು ಮುಟ್ಟಿವೆ. ಜಿಣವೆಂಬುದು ಏನ್ಯಚಾದರೂ ಅದರ ಅಭಾವನಿದ್ದರೆ ರಂಸಾರ ಸಾಗರದಲ್ಲಿ ಮುಳುಡೆಯುವುದೇ ಅಂಥವ ವಾಗುವುದೆಂದು ಒಬ್ಬರೇ ಬೇಕು ಸಂಸಾರದಲ್ಲಿ ಸುಖವನ್ನೀಯುವನೆಲು ಲಕ್ಷ್ಮಿಯಾಗಿದ್ದು ಸುಖಕ್ಕೆ ಐಶ್ವರ್ಯವೇ ಮೂಲಕಾರಣವಾದುದರಿಂದ, ಈ ಐಶ್ವರ್ಯವು ಬೆಳ್ಳಿಯ ನಾಣ್ಯಗಳ ರೂಪದಲ್ಲಿರುವ ಕಾರಣ, ಅದನ್ನೇ ಲಕ್ಷ್ಮಿ ಎಂಬ ಹೆಸರಿನಿಂದ ಕರೆದು ಪೂಜಿಸುವ ವಾಡಿಕೆ ಬಂದು ಬಿಟ್ಟಿದೆ.

ಸ್ವರ್ಗದಲ್ಲಿ ದೇವಲಕ್ಷ್ಮಿ, ರಾಜ್ಯದಲ್ಲಿ ರಾಜಲಕ್ಷ್ಮಿ ಮನೆಯಲ್ಲಿ ಗೃಹಲಕ್ಷ್ಮಿ, ಗದ್ದೆಗಳಲ್ಲಿ ಧಾನ್ಯಲಕ್ಷ್ಮಿಯಾಗಿ ಈಕೆ ಕೋಭಿಸುತ್ತಾಳೆ. ಎಂತಲೇ ಸುಖಸಮೃದ್ಧಿಯಿಂದಲೂ ಆತ್ಮವಿಶ್ವಾಸ, ಆತ್ಮೊಲ್ಲಾಸಗಳಿಂದಲೂ ನಾವು ಜೀವಿಸುವುದಕ್ಕೆ ಲಕ್ಷ್ಮಿಯು ಈ ವಿಧದ ಆರಾಧನೆಯು ಉತ್ತೇಜನವೀಯುತ್ತದೆ. ಲಕ್ಷ್ಮಿಯು ಶುಚಿತ್ವ ಮತ್ತು ಶಾಂತಿ ಹಾಗೂ ಸೌಂದರ್ಯ ಮತ್ತು ಯೌವನ ಮತ್ತು ಸಮೃದ್ಧಿ ಮತ್ತು ಬಹುಲತೆಗಳ ಪರ್ಯಾಯವಾಗಿದ್ದಾಳೆ. ನಿಸ್ಸೀಮ ಸುಖದ, ಅಭಾವಹೀನವಾದ, ಅಭಿಯೋಗರಹಿತವಾದ ಸ್ಥಳವೆಲ್ಲಿದೆಯೊ ಅಲ್ಲಿ ಪರಿಪೂರ್ಣತೆಯೂ ಸಂತೋಷವೂ ಇದೆ; ಅಲ್ಲಿಯೇ ಶಾಶ್ವತವಾಗಿ ಲಕ್ಷ್ಮಿ ವಾಸಿಸುತ್ತಾಳೆ.

ಮಾನವನ ಸ್ವಭಾವ ಮತ್ತು ಪ್ರಕೃತಿಗಳು ಸೆವಕಾಲವಿರುವಂತಹವು. ಕೆಲವು ಶತಮಾನಗಳಲ್ಲಿ ಒಬ್ಬ ಮೆಹಾತ್ಮನಿರಿಸಿ ಇವನ್ನು ಕಂಡುಕೊಳ್ಳುತ್ತಾನೆ. ದುರ್ಬಲ ಜನರು ಜೀವನದರ್ಶನ ಅಡೆತಡೆಗಳು ಉತ್ಸಾಹ ಪತನಗಳು ಹಾನಿಲಾಭಗಳಿಂದ ಉಂಟಾಗುವ ನೈರಾಶ್ಯ ಮತ್ತು ಅನಿಶ್ಚಾಯತೆಗಳಿಂದ ಲಕ್ಷ್ಮಿಯನ್ನು ಚಂಚಲೆಯೆಂದು ತಿರಸ್ಕರಿಸುತ್ತಾರೆ ಈ ಚಂಚಲಿಯಾದ ಲಕ್ಷ್ಮಿಯು ಬಹುಕಾಲ ಎಲ್ಲೆಯೂ ವಾಸಿಸುವುದಿಲ್ಲ.

ದೇಶದ ಎಲ್ಲ ಭಾಗಗಳಲ್ಲಿಯೂ ದೀಪಾವಳಿಯ ಸಂದರ್ಭದಲ್ಲಿ ಹಲವು ಜನಪದ ಕಥೆಗಳು ಹೇಳಲ್ಪಡುತ್ತವೆ. ಕೇಳಲ್ಪಡುತ್ತವೆ. ಈ ಕಥೆಗಳಿಂದ ಲಕ್ಷ್ಮಿಯು ಚಂಚಲತೆಯು ಮತ್ತು ಸ್ಥಿರ ದೃಢತೆಗಳು ತ್ತದೆ. ರಾಜಸ್ಥಾನದ ಒಂದು ಕಥೆಯಂತೆ ಲಕ್ಷ್ಮಿಯು ಒಂದು ಕುಟುಂಬವಲ್ಲಿ ಹೆಜ್ಜೆಂದರೆ ಆರು ತಲೆಮಾರುಗಳ ವರೆಗೆ ಸ್ಥಿರವಾಗಿ ನಿಲ್ಲುವಳಂತೆ.

ಆದರೆ, ಲಕ್ಷ್ಮಿಯು ಆಕೆಯೊಡನೆ ಜೀವನ ಸಮೃದ್ಧಿ ಹಾಗೂ ಪೂರ್ಣತ್ವಗಳು ಇಂದಿಗೂ ನೂತನ ಜಾತಿಯು ನವೀನರವಾದ ಮಹತ್ವಾಕಾಂಕ್ಷೆಯಾಗಿಯೆ ಉಳಿದಿವೆ. ದೀಪಗಳು ಸಾಲು-ಸಾಲಾಗಿ ಉರಿಯುತ್ತಿರುವಾಗಿನ ಮಂದ ಪ್ರಕಾಶದಲ್ಲಿಯೇ ಸೈಜ ಚಂಚಲೆಯಾದ ಲಕ್ಷ್ಮಿಯು ಆಳುಕುತ್ತಾ ಬಳುಕುತ್ತಾ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗುವಳಂತೆ. ಎಲ್ಲಿ ದೀಪಗಳ ಪ್ರಕಾಶ ಹೆಚ್ಚಿದೆಯೋ ಅಲ್ಲಿಗೆ ಲಕ್ಷ್ಮಿಯು ಕಾಲಿರಿಸುವಳಂತೆ. ಅದಕ್ಕಾಗಿ ಜನರು ತಮ್ಮ ಮನೆ ಹೊಲಗಳನ್ನು ದೀಪಗಳಿಂದ ಮನೋರಂಜಕವಾಗಿ ಅಲಂಕರಿಸಿ, ಲಕ್ಷ್ಮಿಯನ್ನು ಮನಸಾರೆ ತಮ್ಮಲ್ಲಿಗೆ ಕರೆಯುತ್ತಾರೆ. ಆದರೆ, ಎಲ್ಲರ ಮನೆಯಲ್ಲಿಯೂ ಆಕೆ ಅಸ್ತಿತ್ವವನ್ನು ಸ್ವೀಕರಿಸುತ್ತಾಳೆಯೆ?

—ಗೋತಾ, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯವಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ.ನ.)

ಮಕ್ಕಳ ಗಾಂಧಿ— ಬರೆದವರು: ಶ್ರೀ ಎಸ್. ಟಿ. ಭಟ್, ನಿದ್ವಾನ್ ಮತ್ತು ಶ್ರೀ ಎ. ಲಕ್ಷ್ಮಿಪ್ಪ, ಬೆಂಡೂರು, ಮಂಗಳೂರು. ಪ್ರಕಾಶಕರು:? ಸುಟಗಳು: ೧೨. ಬೆಲೆ: ೧೦ ನ. ಪೈ.

ಭಾರತೀಯರೆ ಜಾಸುವಾಗಿ, ಜಗತ್ತಿಗೆ ಮಹಾತ್ಮರಾಗಿ ಬಾಳಿ ಬದುಕಿದ ಗಾಂಧೀಜಿಯವರ ಜೀವನದ ಚರಿತ್ರೆಯನ್ನು ಸಂಕ್ಷಿಪ್ತವಾಗಿ, ಮಕ್ಕಳಿಗೆ ಸರಿಯಾಗಿ ಮುಂದಟ್ಟಾಗುವಂತೆ ಸಂಗ್ರಹಿಸಲಾಗಿದೆ. ಭಾಷೆಯು ಸರಳವಾಗಿದ್ದು ದೊಡ್ಡ ಅಕ್ಷರಗಳಲ್ಲಿ ಅಚ್ಚು ಹಾಕಲಾಗಿದೆ. ಗಾಂಧೀಜೀಯವರ ಜೀವನದ ಪ್ರಮುಖ ಘಟ್ಟಗಳನ್ನು ಬಿಡದೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಈ ಪುಟ್ಟ ಪುಸ್ತಕಕ್ಕೆ ನುಂಗಳೂರಿನ ಕೆಥೋಲಿಕ್ ಬೋರ್ಡು ಒಳ್ಳೆ ಎಜ್ಯುಕೇಶನ್‌ನ ಮೆನೆಜರೆಂಬ ಫಾರ್ಡ್ ಜಿ. ಕೆಸ್ತೆಲಿನೋ ಮುನ್ನುಡಿ ಬರೆದಿದ್ದಾರೆ.

ವಿವೇಕಾಭ್ಯುದಯ— (ಬೆಳ್ಳಿ ಹಬ್ಬದ ಸಂಚಿಕೆ) ಸಂಪಾದಕರು: ಡಿ. ಪುಟ್ಟು ಸ್ವಾಮಿ; ವೀರಭದ್ರ, ಮಂಗಳೂರು. ಬೆಲೆ: ರೂ. ೧.

ರಾಜಕೀಯ ಗೊಂದಲಗಳಲ್ಲಿಯೇ ಕಲಕಿದ ಸಾತ್ವಾವರಣದಲ್ಲಿ ಧಾರ್ಮಿಕ ತಿಳುವಳಿಕೆಯು ಹೆಚ್ಚುವುದರಿಂದಲೇ ಜನತೆಯು ಸನ್ಮಾರ್ಗದಲ್ಲಿ ನಡೆಯಬಲ್ಲುದು. ಹಾಗಾಗಿ, ದಿನೇ ದಿನೇ ಅಧಃ ಪತನದತ್ತ ಸರಿಯುತ್ತಿರುವ ಪ್ರಪಂಚದಲ್ಲಿ ಧಾರ್ಮಿಕ ಜಾಗೃತಿ ಯಾಗುವುದು ಅಗತ್ಯ. 'ವಿವೇಕಾಭ್ಯುದಯ'ವು ಕಳೆದ ಇಪ್ಪತ್ತೈದು ವರ್ಷಗಳಕಾಲ ಕನ್ನಡಿಗರಿಗೆ ಧಾರ್ಮಿಕ ಸೇವೆಸಲ್ಲಿಸಿದ್ದು, ಆದರ ಸವಿನೆನಪಿಗಾಗಿ ಒಂದು ಸ್ಮಾರಕ ಸಂಚಿಕೆಯನ್ನು ಪ್ರಕಟಿಸಿರುವುದು ಅಭಿನಂದನೀಯ. ಈ ಸಂಚಿಕೆಯಲ್ಲಿ ಕರ್ನಾಟಕದ ಸುಪ್ರಸಿದ್ಧ ಲೇಖಕರು ಜೈನ ಧರ್ಮ ಮತ್ತು ಸಾಹಿತ್ಯಗಳ ಬಗೆಗೆ ಬೋಧಪೂರ್ಣವಾದ ಲೇಖನಗಳಿಂದ ಕೂಡಿದೆ. ಇದರಲ್ಲಿ ಬೆಳಕು ಕಂಡ ವಿಷಯಗಳು ಉದ್ದಾಮ ಪಂಡಿತರಿಂದಲೇ ಲಿಖಿಸಲ್ಪಟ್ಟಿರುವುದೂ ಅಭಿನಂದನೀಯ. ಇದೇ ರೀತಿಯಲ್ಲಿ ನ್ಯಾಯ ಸ್ಥಾಪಕರು ಆಗಾಗ ಉತ್ತಮ ವಿಶೇಷ ಸಂಚಿಕೆಗಳನ್ನು ಹೊರಡಿಸಿ, ಧರ್ಮಭೀರುಗಳಿಗೆ ಧರ್ಮರಸಾಯನವನ್ನು ಉಣಿಸಿ, ಅಧರ್ಮಿಗಳಿಗೆ ಧರ್ಮದ ಬಗ್ಗೆ ಸದಭಿಪ್ರಾಯವನ್ನೂ ಹುಟ್ಟಿಸುವಂತಾಗಲೆಂದು ಪಾರ್ಶ್ವನಾಥನೇ.

—ಗೋರಾ.

Divine Life— (Birthday number) Editor: Sri Seva Prem, Divine Life Society, Rishikesh Price: Rs 2/- Annual Subscription Rs. 3-25.

ಯೋಗಿಗಳ ತವರೂರಾಗಿದ್ದ ಹಿಮಾಲಯದ ತಪ್ಪಲಿನಿಂದ ಧಾರ್ಮಿಕ ಪತ್ರಿಕೆಯೊಂದು ಬೆಳಕು ಕಾಣುತ್ತಿರುವುದೂ ತನ್ಮೂಲಕ ಧರ್ಮ ಜಾಗೃತಿಯನ್ನುಂಟು ಮಾಡುವುದೂ ಧರ್ಮ ಸ್ಥೈರ್ಯಗಳಿಗೊಂದು ಆಶಾದಾಯಕ ಜ್ಯೋತಿಯೂಗಿದೆ. ವಿಶಾಲವಾಗುತ್ತಿರುವ ಭಾರತೀಯ ಧರ್ಮರಕ್ಷಣೆಯು ಇಂದು ಪ್ರತ್ಯೇಕ ಭಾರತೀಯನ ಕರ್ತವ್ಯ ಧರ್ಮವಾಗಿದೆ.

Divine Life ಎಂಬ ಧಾರ್ಮಿಕ ಮಾಸ ಪತ್ರಿಕೆಯು ಕಳೆದ ೩೦ ವರ್ಷಗಳಿಂದಲೂ ಈ ದಿನೇಯಲ್ಲಿ ಕನ್ನ ಸೇವೆಯನ್ನು ಸಲ್ಲಿಸಿದೆ. ಸದ್ಗತ ಶ್ರೀ ಶಿವಾನಂದರ ಎಳ್ಪತ್ತೈದನೆಯ ಜನ್ಮ ದಿನೋತ್ಸವದ ಸ್ಮಾರಕ ಸಂಚಿಕೆಯು ಪ್ರಕಟವಾಗಿದ್ದು ಛಿನ್ನಛಿನ್ನಾಭರುಚಿಯ ಛಿನ್ನಛಿನ್ನವಸ್ತ್ರಾಯದ ಧಾರ್ಮಿಕ ಜನಸಂಗವೆಲ್ಲಿಕ್ಕೂ ಒಪ್ಪುವ ಆತ್ಯುತ್ತಮವಾದ ಲೇಖನಗಳಿಂದ ಕೂಡಿದೆ. ಇದರಲ್ಲಿ ಬೆಳಕು ಕಂಡ ವಿಷಯಗಳು ಉದ್ದಾಮ ಪಂಡಿತರಿಂದಲೇ ಲಿಖಿಸಲ್ಪಟ್ಟಿರುವುದೂ ಅಭಿನಂದನೀಯ. ಇದೇ ರೀತಿಯಲ್ಲಿ ನ್ಯಾಯ ಸ್ಥಾಪಕರು ಆಗಾಗ ಉತ್ತಮ ವಿಶೇಷ ಸಂಚಿಕೆಗಳನ್ನು ಹೊರಡಿಸಿ, ಧರ್ಮಭೀರುಗಳಿಗೆ ಧರ್ಮರಸಾಯನವನ್ನು ಉಣಿಸಿ, ಅಧರ್ಮಿಗಳಿಗೆ ಧರ್ಮದ ಬಗ್ಗೆ ಸದಭಿಪ್ರಾಯವನ್ನೂ ಹುಟ್ಟಿಸುವಂತಾಗಲೆಂದು ಪಾರ್ಶ್ವನಾಥನೇ.

—ಗೋರಾ.

ಸಾದರ ಸ್ವೀಕಾರ

೧. **ವಂದನಾರ್ಪಣೆ**— (ವಿಡಂಬನಗಳು) ಲೇಖಕರು: ಪು ಹ ಆಚಾರ್ಯ. ಪ್ರಕಾಶಕರು: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ. ಪುಟಗಳು: ೮೦. ಬೆಲೆ. ರೂ ೧.

ಲೇಖನಗಳೂ ಅಡಕವಾಗಿವೆ ಮತ್ತು ಮಾಜ ನೀಯವಿವೆ. ಶ್ರೀ ರೆಹಿನ್‌ರವರು ಬಿಡಿಸಿದ ಟಾಲ್‌ಸ್ಟಾಯ್‌ರವರ ಚಿತ್ರವಂತೆ ರಕ್ಷಾಪತ್ರ ದಲ್ಲಿದ್ದು ಸುಂದರವಾಗಿದೆ.

ವಿಜಯ ವಾಣಿ— (ವಿಜಯ ದಶಮಿ ಸಂಚಿಕೆ) ಸಂಪಾದಕರು: ಹೆಚ್. ಆರ್. ಗುಂಡೂರಾವ್, ತುಮಕೂರು. ಬೆಲೆ: ೨೦ ನ. ಪೈಸೆ. ಪುಟಗಳು: ೨೦.

ಕನ್ನಡಿಗರ ನಾಡ ಹಬ್ಬದ ಸಮಯದಲ್ಲಿ ಹೊರಡಿಸಿದ ಈ ಸಂಚಿಕೆಯಲ್ಲಿ ಉತ್ತಮ ಲೇಖನಗಳು ಇವೆ. ಬೇರೆ ಬೇರೆ ಲೇಖಕರು ಭಿನ್ನಭಿನ್ನ ಕ್ಷೇತ್ರಗಳಿಗೆ ಸಂಬಂಧಿಸಿದ ತಮ್ಮ ಕೃತಿಗಳನ್ನು ಈ ಸಂಚಿಕೆಗೆ ಕೊಟ್ಟಿದ್ದಾರೆ. ಲಿಂಗನ ಮಕ್ಕಿ ಜಲಾಶಯ ಪ್ರದೇಶದ ಮುಖ ಪೃಷ್ಠ ಸುಂದರವಿದೆ. ಸಂಚಿಕೆಯು ಸ್ವಾಗತಾರ್ಹ ಹಾಗೂ ವಾಚನೀಯ.

ಜನಮತ

ಬೆಳ್ತಂಗಡಿ ಕಿಲ್ಲೂರು ರಸ್ತೆಯ ದುರವಸ್ಥೆ!

ಇದೀಗ ಆಕ್ಟೋಬರ್ ಸುಮಾರು ಹತ್ತು ವರುಷಗಳಿಂದಲೂ ಕೇಳಿಕೆಗಳ ಮೂಲಕವೂ ಮನವಿಗಳ ಮೂಲಕವೂ ಬೆಳ್ತಂಗಡಿ ತಾಲೂಕಿನ ಮಲೆನಾಡಿನ ಬಡಜನತೆಯು ಆಪೇಕ್ಷಿಸಿದ ಬೆಳ್ತಂಗಡಿ, ಕಿಲ್ಲೂರು ರಸ್ತೆ, ಮರಸಣಿಗೆಯ ವರೆಗಿನ (ಸುಮಾರು ೨೩ ಮೈಲು ಉದ್ದದ) ರಸ್ತೆಯು ದ್ವಿತೀಯ ಪಂಚವಾರ್ಷಿಕ ಯೋಜನೆಯ ಈ ಅವಧಿಯಲ್ಲಿ ಹೈವೆ ಡಿಪಾರ್ಟಮೆಂಟಿನವರಿಂದ ಸುಮಾರು ೬ ಲಕ್ಷ ೫೫ ಸಾವಿರ ರೂಪ್ಯಾ ಖರ್ಚು ತಗಲುವ ಎಸ್ಟಿಮೇಟು ತಯಾರಾಗಿ ಕೇಂದ್ರಸರಕಾರದಲ್ಲಿ ನುಮಂದನೆಯಾಗಿ ಬಿಳಿದಿದ್ದರೂ ಸದ್ರಿ ರಸ್ತೆಯು ಕೃತೀಯ ಪಂಚವಾರ್ಷಿಕ ಯೋಜನೆಗಾಗಿ ಈಗ ತಯಾರಿಸುವ ಪಟ್ಟಿಯಲ್ಲಿಯೂ ಸೇರದೆ ಉಳಿಯುವುದೆಂಬ ನಿರಾಶೆಯು ತಲೆದೋರಿದೆ.

ಬೆಳ್ತಂಗಡಿಯಿಂದ ಕಿಲ್ಲೂರು ವರೆಗಿನ ರಸ್ತೆಯನ್ನು ಸದಾಕಾಲ ಜನ ವಾಹನ ಸಂಚಾರದ ರಸ್ತೆಯನ್ನಾಗಿ ಮಾರ್ಪಡಿಸುವಂತೆ ಜಿಲ್ಲಾ ಬೋರ್ಡು ನಿರ್ಣಯ ಮೂಲಕ ಸರಕಾರವನ್ನು ಈ ಮೊದಲೇ ಒತ್ತಾಯಿಸಿಯಿದೆ. ತಾಲೂಕು ಕೇಂದ್ರವೆನಿಸಿದ ಬೆಳ್ತಂಗಡಿಯು, ಸಂಕಷ್ಟ ಒಂದು ತುದಿಯಿಂದ ಹೊರಡುವ ಈ ರಸ್ತೆಯು, ಲ್ಯಂಲ, ನಡ, ಕನ್ಯಾಡಿ, ಇಂದ ಬಿಟ್ಟು, ನಿತ್ತಿಲಾಗಿಲು, ನುಲಬಂತಿಗೆ ನಗ್ಗೆರೆ ಗ್ರಾಮ ಪಂಚಾಯ್ತ ಸರಹದ್ದುಗಳನ್ನು ದಾಟು ಹೋಗುವಷ್ಟಲ್ಲದೆ ಸರುಸಕ್ಕೆ ಸುಮಾರು ೨ ಸಾವಿರಕ್ಕೂ ಮಿಕ್ಕಿ ಪ್ರೇಕ್ಷಕರು ಕಾಣಲು ಬರುವ ಜಾತ್ರಿಕ್ಕೆ ಸ್ಥಳವಾದ ಜನಲಂಬಾಬಾಮ ಸ್ವಾಮಿಯ ಸುಮಾರು ೬೦೦ ಅಡಿ ಎತ್ತರದ ಈ ಗಾಗಲೇ ಇಂಡಿಯಾ ಸರಕಾರವರು 'Tourist Camp' ಮಾಡುವುದಾಗಿ ನಿರ್ಣಯಿಸಿದ ಕುದುರೆಮುಖಕ್ಕೆ ಹೋಗುವ ರಸ್ತೆಯು ಕವಲೊಡೆಯುವ ಸ್ಥಳದ ಸಮೀಪವೂ ಮತ್ತು ಜೈನ ಅಯ್ಯಂಗಳಿಗಳ ಪುಣ್ಯಕ್ಷೇತ್ರವಾದ ಬಂಗಾಡಿಯ ಶ್ರವಣಗುಂಡಬೆಂಬ ಸ್ಥಳದ ಸಮೀಪವೂ ಹಾದುಹೋಗುವುದಾಗಿದೆ. ಈ ರೀತಿಯ ಚಾರಿತ್ರಿಕ ಸ್ಥಳಗಳ ಮಗ್ಗುಲಿಂದ ಹಾದುಹೋಗುವ ಮಲೆನಾಡಿನ ಜನರ ಪ್ರಯಾಣದ ಸೌಕರ್ಯದ ರಸ್ತೆಯ ಅಭಿವೃದ್ಧಿಗೆ ಇನ್ನೂ ಅಡೆತಡೆಯೇಕೆ?

ಈ ವಿಷಯದಲ್ಲಿ ಮಲೆನಾಡಿನ ಅಭಿವೃದ್ಧಿಗಾಗಿ ಶ್ರಮಿಸಿದ ಮಾನ್ಯ ಮಾಜಿ ಮುಖ್ಯಮಂತ್ರಿ ಶ್ರೀ ಯಟ್. ನಿಜಲಿಂಗಪ್ಪನವರಲ್ಲಿಯೂ ಸಾರ್ವಜನಿಕ ಕಾಮಗಾರಿ ಶಾಖೆಯ ಮಾಜಿ ಮಂತ್ರಿ ಶ್ರೀ ಯಟ್. ಕೆ. ವೀರಣ್ಣ ಗೌಡರಲ್ಲಿಯೂ ಮನವಿಗಳನ್ನು ಅರ್ಪಿಸಿ ನಮ್ಮ ಕೇಳಿಕೆಗಳನ್ನು ಅವರ ಮುಂದಿಟ್ಟಿತ್ತು. ಈ ರೀತಿಯ ಅನೇಕ ಮನವಿಗಳ ಅವಿಯಿಂದ ಮೋಡ ತುಂಬಿ ಮಳೆಗರೆಯುವುದೆಂಬ ನಿರೀಕ್ಷೆಯಿಂದಿದ್ದರೂ ಪ್ರತ್ಯಕ್ಷದ ಸ್ಥಿತಿಯಲ್ಲಿ ಕವಿದ ಮೋಡವನ್ನು ಬಿರುಗಾಳಿ ಎಲ್ಲೋ ಒಯ್ದು ಆಪೇಕ್ಷಿತ ಪ್ರದೇಶಕ್ಕೆ ಮಳೆಯಾಗದಾಗ ಸಂಭವ ಇದೆ.

ತೃತೀಯ ಪಂಚವಾರ್ಷಿಕ ಯೋಜನೆಯ ಕಾಮಗಾರಿಗಳ ಪಟ್ಟಿಯನ್ನು ತಯಾರಿಸುವ ಸಮಯದಲ್ಲಿ ಯಾವ ಪ್ರಾಮುಖ್ಯತೆಗಳನ್ನಾಗಲೀ ಅಥವಾ ಶಿಫಾರಸ್ಸು ವ್ಯಕ್ತಿಗಳನ್ನಾಗಲೀ ಕೇಳದೆ ತಯಾರಿಸುವುದು ಬಹಳ ಬೇಸರ. ಇದು ನ್ಯಾಯವೇ? ಅದರಲ್ಲಿಯೂ ನ್ಯಾಯವಾದ ಕೇಳಿಕೆಯ ಮೇಲಿನ ರಸ್ತೆ ಸೇರಿದೆ ಉಳಿಯುವುದೆಂಬ ಶಂಕೆಯೂ ಇದೆ. ಇತಕ್ಕೇನೇ ಅನ್ನುವುದು ಕೈಗೆ ಬಂದ ತುತ್ತು ಬಾಯಿಗೆ ಹೋಗುವುದು ದಸ್ತು ಆತಂಕಿಸುವುದೆಂತ.

ಆದುದರಿಂದ ಬೆಳ್ತಂಗಡಿ ಕಿಲ್ಲೂರು ಸಂಸಿ ಮರ್ಪಣೆಗೆ ರಸ್ತೆಯ ಕಾರಣ ಈ ವರೆಗಿನ ಮಲೆನಾಡ ಬಡ ಜನತೆಯು ಕೂಗು ನಿಷ್ಕಲ ಕೋಳಿಕೂಗೆಂದು ಪರಿಗಣಿಸದೆ ಸಾವಿರಾರು ಹಳ್ಳಿಗರ ನಿಷ್ಕಲ ಕಣ್ಣೀರ ಹೊಳೆಯು ಮೊಗಂ ಕಾರದ ಧ್ವನಿಯೆಂದು ಎಣಿಸಿ ತೃತೀಯ ಪಂಚವಾರ್ಷಿಕ ಯೋಜನೆಗಾಗಿ ಈಗ ತಯಾರಿಸುವ ಪಟ್ಟಿಯಲ್ಲಿಯೇ ಪ್ರಥಮವಾಗಿ ಸೇರಿಸುವಂತೆ ಇನ್ನೊಮ್ಮೆ ಸಾರ್ವತ್ಯ ಸರಕಾರವನ್ನು ಈ ಸಾಲಕ ವಿನಯದಿಂದ ಮಲೆನಾಡ ಬಡ ಜನರ ಪರವಾಗಿ ಕೇಳಿಕೊಳ್ಳುತ್ತೇವೆ.

"ಮಲೆನಾಡಿಗ"

ಅವಳ ನೆನಪು— (ನಿಳ್ಗಲ್ಪ) ಬರೆದವರು: ಎ.ಸಿಕೆ". ಪ್ರಕಾಶಕರು: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ. ಪುಟಗಳು: ೧೨ ಬೆಲೆ. ರೂ. ೦—೫೦

ಕವಿತಾ ವಿತಾನ

ಸೂರ್ಯ ನಮಸ್ಕಾರಂ

"ಆರೋಗ್ಯ ಭಾಸ್ಕರಾದಿಚ್ಛೇತ್"
ಜ್ಞಾನ ಮಿಚ್ಛೇನ್ಮ ಹೇಶ್ವರಾತ್

೧

ಹರಿಯಿಂದಂ ಶುಜ್ಞಾನಂ
ಹರಿಯಿಂದಂ ಪರಿಪರಿಪುದು ಜನರೆ ಜ್ಞಾನಂ|
ಹರಿಯಾವರೆ ಗುಣಗಾನಂ
ನರರಂಗೆಯದು ತಾನಹಾಸು ಚೇತನಮಾನಂ||

೨

ಹರಿನಾಮಂ ಮಧುರಂ ಹರಿ
ಗುರುವಾಗಿಕಾಂಧರೆಗುರೆಕಾಂತಿಯು ಪಿನಂ|
ಪರಕೀರ್ತನೆಯೆದು ಭಾಗ್ಯಂ
ನರ! ಹರ! ಪೆಸ್ನುತಪೊಡಮಾಡುತಿರಲಾ ರೋಗ್ಯಂ||

೩

ಹರಿಯಿಲ್ಲದ ಕಾನನಮುಂ
ಹರಿಯಿಲ್ಲದ ವೇನಲೋಕಪಮಾರಾತಿಯುಂ
ಹರಿ ಸಂಕೀರ್ತನೆಯಿಲ್ಲದ
ನರನಾರಿಯರೇಂ ಸುರಕ್ತಿ ಪಡೆವರೆ ಜಗ ದೊಳ್?

೪

ಹರಿಯೆಂಬೆರಡಕ್ಷರ ಕಂ
ಸರಿಯಲ್ಲಂ ಸಿರಿಯ ವಾರ ಧಾರಂ ತೂಗಲ್
ಹರಿನಾಮಂ ಲಘು ಭಿನವನ
ನರತಂ ನಿಲ್ವುದು ಪರಕಿಸಲತಿಲೇಲಸಿರಿಯಂ||

೫

ಹರಿಯಾರಾಧನೆ ನಿತ್ಯಂ
ಹಿರಿದಾಗಿಪ್ಪುದು ಪ್ರಭಾತ ಸಮಯಕ್ಕಿಂಮುಂ
ಬರಿದಂ ಗುರುಕೃಪೆಯಿಂದಂ
ಗಿರಿಜಾಪ್ರಿಯ ನೀಲಕಂಠ ಶರ್ಮಂ ನಲವಿಂ||

ಕವಿ, ಕೆ.ಎನ್. ಭಟ್ಟ, ಶಿರಾಡಿಘಾಲ್

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಕಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಆತ್ಯಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಮಂಗಳೂರು.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಹಿಕ್ಕ ಪ್ರತಿಫಲ ಪಡೆಯಿರಿ.

ಶುದ್ಧ ಹರಟೆ

ನಾನೊಂದು ರಿಸ್ಟ್‌ವಾಚ್ ಕೊಂಡು ಕೊಂಡೆ, ಆದರೆ?

ಅತಿಸ್ನೇಹನೆಂಬುದು ಪಾಪ ಶಂಕೆಯೆಂಬಂತಾಯಿತು

ನನ್ನ ರಿಸ್ಟ್‌ವಾಚ್ ನನ್ನ ಕೈ ಸೇರಿದ ಅನಂತರ ಇದು ತನಕ ಆಗಾಗ ನನ್ನ ಎಲ್ಲಾ ಕೆಲಸಗಳು ಪೂರ್ತಿಗೊಂಡಿವೆ. ಈ ವಿಚಾರವನ್ನು ನಾನು ತುಂಬಾ ಅಭಿಮಾನದಿಂದ ಉನ್ನತಿದ್ದೇನೆ. ಈಗ ನನ್ನಲ್ಲಿ ಸಂತೋಷ ಕಿಚ್ಚಿದೆ. ಮುಖ್ಯವಾಗಿ ನನಗೆ ಮದುವೆಯಾದುದು ಈ ವಾಚ್ ಬಂದ ನಂತರವೆ. ನನ್ನ ನಲ್ಮೆಯ ಮಡದಿ, ಜಿಲುರೂಪಿಯಾದ ನನ್ನ ಬಯಕೆಯನ್ನೀಡೇರಿಸುವ ಹೆಣ್ಣು ನನ್ನ ಕೈಸೇರಲು ಈ ವಾಚ್ ಒಂದು ನಾಲ್ಕು ತಿಂಗಳುಗಳ ಕಾಲ ಕಳೆಯು ಬೇಕಾಯಿತಷ್ಟೆ!

ಒಂದೆರಡು ವರ್ಷಗಳ ಹಿಂದೆ ನನ್ನ ಮಿತ್ರನು ಈ ವಾಚನ್ನು ಕೇವಲ ೧೦೦ ರೂಪ್ಯಾಗಳಿಗೆ ಕ್ರಯಕ್ಕೆ ಪಡಕೊಂಡಿದ್ದನು. ಅಡಜಣೆಯಿಂದಾಗಿ ಆತನು ಇದನ್ನು ಸೋಡ್ತಿ ಹಾಕಿದನು. ಒಂದು ರೂಪ್ಯಾ ಕೊಟ್ಟು ನಾನು ಸೋಡ್ತಿಯ ಮೆಂಬರನಾಗಿದ್ದೆನು. ಪಗಿ. ಎಲ್ಲರ ಅದೃಷ್ಟದ ಗುದ್ದಿ ಟದಲ್ಲಿ ನನ್ನ ಕೈ ವೇಲಾಯಿತು ಅದು ನನ್ನ ಕೈಯನ್ನು ಸೇರಿತು

ಒಂದು ನೂರು ರೂಪ್ಯಾ ವಾಚ್ ಒಂದು ರುಪಾಯಿಗೆ ನನ್ನ ಕೈಸೇರಿತೆಂದರೆ ನನಗಾದ ಸಂತೋಷ. ಆಶ್ಚರ್ಯವಲ್ಲ ಎಂದೂ ವಾಚ್ ಕಟ್ಟಿಕೊಳ್ಳದ ನಾನು ಮೊದಲ ಬಾರಿ ವಾಚನ್ನು ಬಲಗೈಗೆ ಕಟ್ಟಿದೆನು. ಆ ಸಂದರ್ಭದಲ್ಲಿ ನನ್ನ ಮಿತ್ರರೆ. ಸರಿಯಾದ ಮಾರ್ಗದರ್ಶನ ನನಗೆ ಮಾಡಿ ನನ್ನ ಮಂಡ್ಯಾಡೆ ಉಳಿಸಿದರು.

ಒಂದು ರೂಪ್ಯಾ ವಾಚಿಗೆ ನಾನು ೪ ರೂಪ್ಯಾ ಪೆಟ್ಟಿಗೆಯೊಂದನ್ನು ತಯಾರಿಸಿದೆನು. ಅದರ ಅಂದಚಂದವನ್ನು ಮಹಾಶೇಷನಿಂದಲೂ ವರ್ಣಿಸಲ ಸಾಧ್ಯ. ಮನೆಗೆ ಬಂದ ಮಿತ್ರರಿಗೆ ನಾನು ವಾಚನ್ನು ತೋರಿಸುವ ಮೊದಲು ಆದನ್ನಿಡುವ ೪ ರೂಪ್ಯಾ ಪೆಟ್ಟಿಗೆಯನ್ನೇ ನಾನು ತೋರಿಸುತ್ತಿದ್ದೆನು.

ಯಾವಾಗಲೂ ಇಡೀ ಕೈಯನ್ನು ಮುಚ್ಚುವ ನನ್ನ ಅಂಗಿಯ ಕೈಯನ್ನು ನಾನು ನನ್ನ ವಾಚ್ ಬಂದ ನಂತರ ಮಡಚುವ ಪದ್ಧತಿಯನ್ನು ಜಾರಿಗೊಳಿಸಿದ್ದೆನು. ನಾಲ್ಕು ಜನರು ಕೂಡಿದ ಸ್ಥಳದಲ್ಲಿ ನನ್ನ ವಾಚ್ ಕಟ್ಟಿಕೊಂಡ ಬಲದ ಕೈ—ಸೋರಿ—ಎಡದ ಕೈಯ ತನ್ನಿಂದ ತಾನಾಗಿಯೆ ಮೇಲೇರುತಿತ್ತು: ರಸ್ತೆಯಲ್ಲಂತೂ ಗಳಿಗೆಗೆ ನಲ್ವತ್ತೈದು ಬಾರಿ ಕೈ ಮೇಲಕ್ಕೆತ್ತಿ ಗಂಟೆ ನೋಡುವ, ಅಭ್ಯಾಸ ನನಗೆ ಹಾಸು ಹೊಕ್ಕಾಯಿತು. ದಾರಿಯಲ್ಲಿ ಹೋಗುವ ಜನರೆಲ್ಲರೂ ನನ್ನಲ್ಲಿ 'ಗಂಟೆಯೆಷ್ಟಾಯಿತು?' ಎಂದು ಕೇಳಿದೆ ಹೊತ್ತಿಗೆ ಖರಿಯಾಗಿ (ಒಂದು ಸೆಕೆಂಡು ವ್ಯತ್ಯಾಸವಾಗದೆ) ಉತ್ತರ ಕೊಡುವ ಹಂಬಲದಿಂದಲೆ ನಾನು ರಸ್ತೆಯಲ್ಲಿ ನಡೆಯುತ್ತಿದ್ದೆನು. ಪರಿಯಾದ ಸಮಯ ಜನಗಳಿಗೆ ತಿಳಿಸಿದ ಕೂಡಲೇ ಅವರು ಕೊಡುವ 'ಥ್ಯಾಂಕ್ಸ್'ಗಾಗಿ ನನ್ನ ಮನಸ್ಸು ಹಾತೊರೆಯುತ್ತಿತ್ತು.

ಈ ವಾಚ್ ಬಂದನಂತರ ನನ್ನೆಲ್ಲಾ ಕೆಲಸಗಳು ಸಮಯ ಹಾಗೂ ಕ್ರಮಬದ್ಧವಾಗಿ ನಡೆಯುತಿದ್ದವು. ನನಗೆ ಮದುವೆ ಮಾಡಿಕೊಳ್ಳ ಬೇಕೆಂಬ ಆಸೆ ಹುಟ್ಟಿದ್ದು ಈ ವಾಚ್ ಬಂದನಂತರ. ಒಂದು ಹುಡುಗಿಯನ್ನು ಕಾಣಲು ಒಂದು ಬಾರಿ ನಾನು ನನ್ನ ಸೋದರ ಮಾವನೊಂದಿಗೆ ೭॥ ಗಂಟೆಗೆ ಸರಿಯಾಗಿ ಹೋಗಬೇಕೆಂದು ನಿಶ್ಚಯವಾಗಿತ್ತು.

ನಮ್ಮ ಮೇಕಪ್ಪಿಸಿ ಎಲ್ಲಾ ಕೆಲಸಗಳನ್ನು ನಾನು ಮುಗಿಸಿಕೊಂಡು ಅಂದು ನಾನು ನನ್ನ ವಾಚಿನ ಮೇಲೆ ದೃಷ್ಟಿಯಾಯಿಸಿದೆನು. ಗಂಟೆ||ಯಾಗಿತ್ತು. ಮೂನ ನಲ್ಲಿ ಹರಟೆಹೊಡೆಯುತ್ತಾ — ೯ಗಂಟೆಗೆ ಹೊಡೋಣ ೬॥ಗಂಟೆ ರಿಕ್ ಹೊಡೆದ ಕೂಡಲೆನಾವಲ್ಲಿ ಹಾಜರಾಗೋಣ! ಎಂದು ಹೇಳಿದನು. ಮೂವರವರು ಒಪ್ಪಿದರು. ಸ್ವಲ್ಪಸಮಯ ಕಳೆದಬಳಿಕ ನಾನು ನನ್ನ ವಾಚನ್ನು ಕೈಯಲ್ಲಿ ಕಟ್ಟಿಕೊಂಡೆನು. ಗಂಟೆ ೬॥ಆಗಿತ್ತು. ವಾಚನ್ನು ಕಿವಿಗೊತ್ತಿಹಿಡಿದೆನು. ಟಿಕ್—ಟಿಕ್ ಜೋರಾಗಿತ್ತು.

ಗಡಿಬಿಡಿಯಲ್ಲಿ ಹೆಣ್ಣನ್ನೋಡಲು ಹೊರಟೆವು ನಾವು. ಹೆಣ್ಣು ಏನೇಮಕ್ಕೆ ಹೋಗಿತ್ತು. ಅಲ್ಲಿ ಗಂಟೆ ೨ಮೊಕ್ಕ ಆಗಿತ್ತು. ಆ ಮನೆಯ ಯುವಕನೊಬ್ಬನು ಹೊರಬಂದು ನನ್ನನ್ನು ಗೇಲಿಮಾಡುತ್ತಾ—'ಏನು ಸ್ವಾಮಿ? ವಾಚ್ ಕಟ್ಟಿಕೊಂಡು ಇಷ್ಟು ಬೇಗ ಬಂದಿರಿ? ನಮ್ಮ ಹುಡುಗಿ ಮೆಟ್ಟಿನ ಸಿನೇಮಾ ನೋಡಿ ೬॥ ಗಂಟೆಯೊಳಗೆ ಬರುವಳು, ಹೆಣ್ಣು ನೋಡುವ ಹಂಬಲ ಬಹು ಜೋರಾಗಿದೆಯೆ?" ಎಂದು ನಮ್ಮನ್ನು ಅವಮಾನಿಸಿದನು.

೦೦ ೦೦

ನಮ್ಮ ನೆರೆಮನೆಯ ನನ್ನ ಮಿತ್ರ ಪದ್ಮನಾಭನು ಮಂಗಳೂರಲ್ಲಿ 'ಇಂಟರ್ ವ್ಯೂ'ಗೆ ಹೋಗುವವನಿದ್ದನು. ಆತನಿಗೆ ೩ ಗಂಟೆ ಮಧ್ಯಾಹ್ನಕ್ಕೆ ಇಂಟರ್‌ವ್ಯೂಗೆ ಹೋಗಬೇಕಾಗಿತ್ತು. ನಮ್ಮಲ್ಲಿಂದ ೧೦॥ ಯಷ್ಟಿಗೆ ಹೊರಟರೆ ಮಂಗಳೂರನ್ನು ೩ ಗಂಟೆಯೊಳಗಾಗಿ ತಲಪಬಹುದು. ಆತನು ನನ್ನ ಸವಿನಿದ್ರೆಗೆ ಬಂದ. ಗಂಟೆ ಕೇಳಿದನು. ಕಣ್ಣು ಮುಳ್ಳು ೧ ಸಂಖ್ಯೆಯ ಮೇಲೂ ದೊತ್ತ ಮುಳ್ಳು ೬ ಸಂಖ್ಯೆಯ ಮೇಲೂ ಇರುವುದನ್ನು ಕಂಡು ನಾನು ಧೈರ್ಯವಾಗಿ ಮಿತ್ರನಿಗೆ ಮುಹೂರ್ತಕಾರನನ್ನು ಮಾಡಿನಿರಂತೆ 'ಗಂಟೆ ೭!' ಎಂದೆನು ಆತನು ಆವನ್ನು ನಂಬಿ ಬೇಗನೆ ಬಿರುನಾಗಿ ಮಾಡುವ ಸಿದ್ಧತೆಗಳನ್ನು ಮೆಲ್ಲಮೆಲ್ಲನೆ ಮಾಡಿ ಹೊರಡುವ ಸಮಯ ಕ್ಕೆ ಸರಿಯಾಗಿ ಪುನಃ ನನ್ನಲ್ಲಿಗೆ ಒಂದು ಗಂಟೆ ಕೇಳಿದನು. ವಾಚ್ ಕಂಡಾಗ ೪॥ಯೆ ಆಗಿತ್ತು. ಕಿವಿಗೊತ್ತಿ ಹಿಡಿದೆನು. ಟಿಕ್....ಟಿಕ್....ಇಲ್ಲ. ನನಗೆ ನನ್ನ ಮೇಲೆ ಸಿಂಡೇಹ ಬಂತು ಪದ್ಮನಾಭನ ಕಿವಿಗೊತ್ತಿ ಹಿಡಿದೆನು, ಅವನು ವಾಚ್ ನಿತಿಯೆಯೆಂದು ಹೇಳಿ ಗಡಿಬಿಡಿಯಿಂದಲೆ ಕೊರಟಿಹೋದನು.

ಬಸ್ಸು ಆಫೀಸನ್ನು ಆತನು ತಲಪಿದಾಗ ಗಂಟೆ ೧೦॥ ಆಗಿತ್ತು. ಮಂಗಳೂರಿಗೆ ಹೋಗುವಂ॥ಬಸ್ಸು ಹೋಗಿತ್ತು. ಇನ್ನೊಂದು ೧೩॥ ಗಂಟೆಗೆ ಹೊರಡುವದಿತ್ತು. ಅಂತೂ ಆತನ ಇಂಟರ್‌ವ್ಯೂ ತಪ್ಪಿತು. ಪದ್ಮನಾಭನಷ್ಟು ವಿದ್ಯಾಯೋಗ್ಯತೆಯ ಜನರಾರೂ ಇಂಟರ್‌ವ್ಯೂಗೆ ಬಂದಿರಲಿಲ್ಲವಂತೆ. ಪದ್ಮನಾಭನು ಹೋಗಿದ್ದರೆ ಆತನ ಚಾನ್ಸ್ ಕಂಡಿತ ಏಳುತಿತ್ತಂತೆ. ಎಂಬ ಆತನ ಮಾತು ನನ್ನನ್ನು ಬಹುಚಿಂತೆಗೆ ಗುರಿಪಡಿಸಿತ್ತು.

ಈ ವಾಚ್‌ನಿಂದಾಗಿ ಮಿತ್ರದ್ರೋಹವೆಂಬ ಮಹಾಪಾತಕ ನನ್ನ ಬೆನ್ನಹತ್ತಿತು ಹುಡುಗಿಯನ್ನು ನೋಡಲು ಹೋಗಿ ಹುಡುಗಿ ಮನೆಯವರು ನನ್ನನ್ನು ಹೀಯಾಳಿಸುವಂತಾಯಿತು ಆದರೂ ನಾನೀಗ ಚಂದದ ಹುಡುಗಿಯೊಂದಿಗೆ ಇದೇ ವೊಟ್ಟು (?) ವಾಚ್ ಕಟ್ಟಿಕೊಂಡು ಮದುವೆಯಾದೆನು. ವಿತ್ತದ್ರೋಹದ ಮಹಾಪಾತಕವನ್ನು ನನ್ನ ಮೇಲೆ ಹೊರಿಸಿದ ನನ್ನ ವಾಚನ್ನು ಕೊಡಲೇ ಬಹು ಕಡಿಮೆ ಕ್ರಯದಲ್ಲಿ, ಆಇಲಿಗೆ ಬಡ್ತಿ ಸೇಕಡಾ ೧೫೦ರಂತೆ ಸೇರಿಸಿ ಅಂದರೆ ರೂಪ್ಯಾ ೧೬೯ಕ್ಕೆ (೧೯೫೪) ವಾಪ್ಪೇನೆ ಆದರ ಪೆಟ್ಟಿಗೆ (ಟ್ರೆಜರಿ) ಈಗಲೂ ವಾಚಿನ ಸ್ಮಾರಕಾರ್ಥವಾಗಿ ನಾನು ನನ್ನಲ್ಲೆ ಇಟ್ಟುಕೊಂಡಿದ್ದೇನೆ.

—ಕುಂಪಲಾಪ್ರಿಯ.

ಅಮೆರಿಕೆಯ ಅಧ್ಯಕ್ಷ ಶ್ರೀ ಐಸನ್ ಹಾವರರು ಯುನೋದ ಕಾರ್ಯದರ್ಶಿ ಶ್ರೀ ಹಾಗ್ ಹೆಮ್ಮರ್‌ಶೀಲ್ಡರೊಡನೆ ಅರು ವಿಷಯಕ ವಧ್ಯ ಪ್ರಾಚ್ಯ ಯೋಜನೆಯನ್ನೊಪ್ಪಿಸಿ ಹಸ್ತಾಂದೋಲನವನ್ನೀಯುತಿದ್ದಾರೆ.

ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾಮ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆ ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಆರ್ಡರು ಮಾಡಿದರೆ ೧ ಪ್ರತಿ ಕಳಿಸಲಪಡುವುದು.

●

ನಿಮ್ಮಿಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ ಒಂದೂವರೆ ಒಂದು ರೂಪಾಯಿ 75 ನಯೇ ಪೈಸೆ ಮನಿಆರ್ಡರ್ ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಲಪಡುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ವಾರಪತ್ರಿಕೆಗೆ

ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಪರಿಚಯ

ವಿಶ್ವ ವಿಭೂತಿ ಜವಾಹರಲಾಲ ನೆಹರು

ಎಪ್ಪತ್ತೈದರ ಆರುಣೋದಯದಲ್ಲಿ ಭಾರತೀಯರ ಶುಭಾಕಾಂಕ್ಷೆ

ಭಾರತೀಯರಾದ ನಮಗೆ ಅಕ್ಟೋಬರ ಎರಡು ಎಷ್ಟು ಪವಿತ್ರವಾದ ದಿನವಾಗಿದೆಯೋ, ಹಾಗೆಯೇ ನವಂಬರ ಹದಿನಾಲ್ಕು ಸಹ ಪವಿತ್ರವಾದ ದಿನ. ಏಕೆಂದರೆ ಆ ದಿನ ಮಾತಾ ಸ್ವರೂಪ ರಾಣಿಯವರು ದೇಶಪ್ರೇಮಿ ಪುತ್ರನಿಗೆ ಜನ್ಮಕೊಟ್ಟರು. ಆ ಪುತ್ರನೇ ಇಂದು ನಮ್ಮ ಆಚ್ಚುಮೆಚ್ಚಿನ ಪ್ರಧಾನಮಂತ್ರಿ ನೆಹರೂರವರು.

ಇವರ ತಂದೆ ದಿವಂಗತ ಶ್ರೀ ಮೋತಿಲಾಲ ನೆಹರೂ ಕಾಶ್ಮೀರದವರು. ಅವರೊಬ್ಬ ಪ್ರಸಿದ್ಧ ಬ್ಯಾರಿಸ್ಟರರಾಗಿದ್ದರು. ಅಲ್ಲದೆ ತಮ್ಮ ಪ್ರಾಧಿಮೆಯಿಂದ ಅಲ್ಲಾಹಾಬಾದಿನ ಹೈಕೋರ್ಟಿನಲ್ಲಿ ಅಗ್ರಗಣ್ಯರೂ ಆಗಿದ್ದರು. ಬ್ರಿಟಿಷ್ ಸರಕಾರದ ವಿರುದ್ಧ ನಡೆದ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಶ್ರೇಷ್ಠ ಧೀಧೀಣರಲ್ಲಿ ಮೋತಿಲಾಲರೂ ಒಬ್ಬರು. ಅಧುನಿಕ ಭಾರತದ ನಿರ್ಮಾಪಕರಲ್ಲಿ ಒಬ್ಬರಾದ ಮೋತಿಲಾಲ ನೆಹರೂ ರಾಷ್ಟ್ರಗನ್ನಲ್ಲಿ ಕಣ್ಮಣಿಯಾದರು. ಜವಾಹರಲಾಲ ನೆಹರೂರವರು ನಮ್ಮ ದೇಶಕ್ಕೆ ಅವರು ಬಿಟ್ಟು ಹೋದ ಕೊಡುಗೆಯಾಗಿದ್ದಾರೆ.

ಬಾಲ್ಯದಲ್ಲಿ "ಆನಂದ ಭವನ"ದಲ್ಲಿ ರಾಜಕುಮಾರನಂತೆ ಬೆಳೆಯುತ್ತಾ, ಜವಾಹರರು ತಮ್ಮ ತಂದೆ-ತಾಯಿಗಳ ಪ್ರೀತಿಯ, ಗಿಣಿಯಾದರು. ಬಾಲ್ಯದಲ್ಲಿ ಇವರಿಗೆ 'ಅರೇಬಿಯನ್ ನೈಟ್ಸ್' ಅಂತಹ ಕತೆಗಳನ್ನೋದಲು ಉತ್ಸುಕತೆಯಿತ್ತು. ಪದಿನೈದು ವರ್ಷಗಳ ತನಕ ಇವರ ವಿದ್ಯಾಭ್ಯಾಸವು ಒಬ್ಬ ಇಂಗ್ಲಿಷ್ ಪ್ರೊಫೆಸರರ ಮೂಲಕ ಮನೆಯಲ್ಲಿಯೇ ಪಡೆಯಿತು. ಇದರ ಪರಿಣಾಮವಾಗಿ ಇಂಗ್ಲಿಷ್ ಸಂಸ್ಕೃತಿಯು ಇವರನ್ನು ತನ್ನ ಕಡೆಗೆ ಹೆಚ್ಚಾಗಿ ಎಳೆಯಿತು. ಡಾಲ್‌ಹೌಸಿ, ವೆಲ್ಲೆಸ್ಲಿ, ಹೇಸ್ಟಿಂಗ್ಸ್, ಬಾಲ್ಡ್‌ವಿನ್— ಮೊದಲಾದ ಮಹಾನ್ ವ್ಯಕ್ತಿಗಳು ಕಲಿತ ಇಂಗ್ಲೆಂಡಿನ "ಹ್ಯಾರೋ" ವಿಶ್ವವಿದ್ಯಾಲಯಕ್ಕೆ ಇವರು ತಮ್ಮ ೧೫ನೇ ವರ್ಷದಲ್ಲಿಯೇ ಸೇರಿ ಅಭ್ಯಾಸಕ್ಕೆ ತೊಡಗಿದರು.

ಕೆಲವು ವರ್ಷಗಳ ನಂತರ ಇವರು ಕೆಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಎಂ.ಎ, ಡಿಗ್ರಿಯನ್ನು ಪಡೆದು, ಲಂಡನ್ನಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಪಾಸಾದರು. ಇವರು ಕಲಿಯುವುದರಲ್ಲಿ ಎಷ್ಟು ಚುರುಕಾಗಿದ್ದರೋ, ಅಷ್ಟೇ ಆಟದಲ್ಲಿ ಕೂಡಾ.



ಒಂದು ಸಲ ಇವರು ನದಿಯಲ್ಲಿ ಈಜುವಾಗ ಮುಳುಗಿ ಹೋಗುತ್ತಿದ್ದರು. ಆಗ ಆ ವರ ಒಬ್ಬ ಇಂಗ್ಲಿಷ್ ಮಿತ್ರನು ಬಂದು ಅವರನ್ನುಳಿಸಿದನು ಆ ಆಂಗ್ಲ ಮಿತ್ರನಿಗೆ ಇಂದು ನಮ್ಮ ದೇಶವು ಎಷ್ಟು ಋಣಿ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ನೆಹರೂ ವಾಶ್ಚಾತ್ಯ ಶಿಕ್ಷಣ ಮುಗಿಸಿ ೧೯೧೫ರಲ್ಲಿ ಸ್ವದೇಶಕ್ಕೆ ಮರಳಿದರು. ಇಲ್ಲಿ ಜನರೆಲ್ಲಾ ಇವರ ಭಾಷಣ ಕೇಳಿ ಮುಗ್ಧರಾದರು. ಇವರಿಗೆ ೧೯೧೬ರಲ್ಲಿ ಕಮಲಾರೊಡನೆ ವಿವಾಹವಾಯಿತು ಆದರೆ ವಿಧಿಯು ಇವರಿಗೆ ಗೃಹಜೀವನದ ಸುಖವನ್ನು ಕೊನೆಯ ತನಕ ಕೊಡಲಿಲ್ಲ. ಇವರು ತಮ್ಮ ಅಧಿಕ ಸಮಯವನ್ನು ಜೈಲಿನಲ್ಲಿಯೇ ಕಳೆದರು. ೧೯೩೫ರಲ್ಲಿ ಇವರ ಪತ್ನಿ ಸ್ವರ್ಗಸ್ಥರಾದರು.

ಕಾಕೆನಾಡದಲ್ಲಿ ನಡೆದ ಕಾಂಗ್ರೆಸ್ ಧಿವೇಶನದಲ್ಲಿ ಇವರು ಅದರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ನುಂದೆ ಹೇ ವರ್ಷಗಳ ವರೆಗೆ ಅದೇ ಅಧಿಕಾರದಲ್ಲಿದ್ದು ೧೯೨೭ರಲ್ಲಿ ಕಾಂಗ್ರೆಸಿನ ಅಧ್ಯಕ್ಷರಾದರು ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದಲ್ಲಿ ಇವರು ಭಾಗ ವಹಿಸಿದ್ದರು. ಆದಕಾರಣ ಇವರು ಜೈಲು ವಾಸವನ್ನನುಭವಿಸಬೇಕಾಗಿ ಬಂದಿತು. ಎರವಾಡಾವಲ್ಲಿನ ಮಾತುಕತೆಗಳ ಫಲವಾಗಿ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸದಸ್ಯರೊಂದಿಗೆ ಇವರ ಬಿಡುಗಡೆಯೂ ಆಯಿತು. ಬಿಡುಗಡೆಯಾಗಿ ಮನೆಗೆ ಬಂದಾಗ ಇವರ ತಂದೆ ಸ್ವರ್ಗಸ್ಥರಾಗಿದ್ದರು.

ತನ್ನ ತಂದೆ ಮತ್ತು ಪತ್ನಿಯವರ ಮರಣದಿಂದ ನೆಹರೂರವರಿಗೆ ಬಹಳ ದುಃಖವಾಯಿತು. ಆದರೂ ಕೂಡಾ ಇವರು ತಮ್ಮ ಕರ್ತವ್ಯದ ಕಡೆಗೆ ಮನಸ್ಸನ್ನು ಹರಿಸಿ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಿಂಚಿನಂತೆ ಧುಮುಕಿದರು. ಇವರು ಅಲಾಹಾಬಾದಿನ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರಾದರು. ತಮ್ಮ ಅಧಿಕ ಸಮಯವನ್ನು ಕಾರಾಗೃಹದಲ್ಲಿ ಕಳೆದರೂ ಅವರು ಅಲ್ಲಿ ಸುಮ್ಮನೆ ಕುಳಿತುಕೊಳ್ಳಲಿಲ್ಲ ತಮಗೆ ದೊರೆತ ಆ ಸಮಯದಲ್ಲಿ ಪುಸ್ತಕಗಳೇ ಇವರ ಮಿತ್ರರಾದುವು, ಜೈಲಿಗೆ ಹೋಗುವುದು, ಬರುವುದು ಇವರಿಗೆ ಸಾಮಾನ್ಯದ ಮಾತಾಯಿತು.

ಇವರು ತಮ್ಮ ಉದ್ವೇಗದ ಭಾಷಣಗಳಿಂದ ಭಾರತೀಯರನ್ನು ಜಾಗೃತರನ್ನಾಗಿ ಮಾಡಿದರು. ಕಾಂಗ್ರೆಸ್ ಸರಕಾರವು ಅಧಿಕಾರವನ್ನು ಸ್ವೀಕಾರ ಮಾಡುವ ಸಮ್ಮತಿ ಕೊಟ್ಟಿತು. ಆಗ ಇವರು ಜನಜಾಗೃತಿಯ ನ್ಮಂಟು ಮಾಡಲು ತೂಫಾನಿನಂತೆ ಇಡೀ ಹಿಂದೂಸ್ಥಾನವನ್ನು ಸಂಚರಿಸಿ ಬಂದರು. ಜನತೆಗೆ ಇವರ ಆದರ್ಶ ವ್ಯಕ್ತಿತ್ವವನ್ನು ನೋಡಿ ದಂಗು ಬಡಿದಂತಾಯಿತು. ಈ ಪ್ರಯಾಣದಲ್ಲಿ ಇವರಿಗೆ ದೊರೆತ ಸ್ವಾಗತವು ಅನುಪಮ ಹಾಗೂ ಅಭೂತಪೂರ್ವವಾಗಿತ್ತು. ಅವರ ದರ್ಶನವನ್ನು ಪಡಯುವುದಕ್ಕೋಸ್ಕರ ಲಕ್ಷ ಗಟ್ಟಲೆ ಜನರು ಗಂಟೆಗಟ್ಟಲೆ ಮಳೆ, ಗಾಳಿ, ಬಿಸಿಲೆನ್ನದೆ ಸಿಲ್ಲಿ ತೊಡಗಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನತೆಯು ಇವರಿಗೆ ತಮ್ಮ ಪೂರ್ಣ ಸಹಾಯವನ್ನು ಕೊಟ್ಟತು.

"ಪ್ರಜಾಪ್ರಭುತ್ವದಲ್ಲಿ ಜವಾಹರಲಾಲರಂತಹ ವ್ಯಕ್ತಿಗಳು ಅವಶ್ಯಕರು ಅವರು ತಮ್ಮನ್ನು ಪ್ರಜಾಪ್ರಭುತ್ವವಾದಿಯೆಂದೂ, ಏಷಾವಾದವಾದಿಯೆಂದೂ ಕರೆದುಕೊಳ್ಳುತ್ತಾರೆ ಆದರೆ ಸ್ವೈಚ್ಛಾ ಆಡ್ಡ ದಾರಿ ಹಿಡಿದರೆ ಅವರು ಸರ್ವಾಧಿಕಾರಿಯಾಗಿ ಬದಲಾಗಬಹುದು" ಎಂಬ ಈ ಮಾತನ್ನು ನೆಹರೂರವರೇ ಅನಾಮಿಕರಾಗಿ ಒಂದು ಲೇಖನದಲ್ಲಿ ದೇಶದ ನಾಯಕರಾಗಿರಲು ತಮಗಿರುವ ಅರ್ಹತೆಗಳನ್ನು ಪ್ರಶ್ನಿಸಿ, ಪ್ರಕಟಿಸಿದರು. ನೇರಿನ ಮಾತು ನೆಹರೂ ನಿಸ್ಸಂದೇಹವಾಗಿಯೂ ನಿರ್ಮಲ ಅಂತಃಕರಣವುಳ್ಳವರೆಂಬುದಕ್ಕೆ ಸಾಕ್ಷ್ಯ. ೧೯೪೭ ನೇ ಆಗಸ್ಟ್, ೧೫ನೇ ತಾರೀಕು ಸುವರ್ಣಾಕ್ಷರಗಳಲ್ಲಿ ಬರೆಯುವ ದಿನವಾಗಿದೆ ಕಾರಣ—೩೦೦ ವರ್ಷಗಳ ಪರದಾಸ್ಯ ಸಂಕೋಲೆಯಿಂದ ಭಾರತವು ಆ ದಿನ ಸ್ವತಂತ್ರಗೊಳಿಸಿತು. ಇದರ ಸ್ವತಂತ್ರ ರಾಷ್ಟ್ರಗಳೊಡನೆ ಕುಳಿತುಕೊಳ್ಳುವ ಯೋಗ್ಯತೆ ಪಡೆಯಿತು. ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಮಂತ್ರಿ ಸ್ಥಾನಕ್ಕೆ ಜನತೆಯು ಇವನ್ನೇರಿಸಿ ಗೌರವಿಸಿತು.

ಈಗ ಅಧಿಕಾರದಲ್ಲಿರುವ ಪಕ್ಷವಾದ ಕಾಂಗ್ರೆಸ್ ಮುಖಂಡರಾಗಿ ಇವರ ಸರಕಾರವು ನಿರ್ವಹಿಸಿರುವ ಕಾರ್ಯಕ್ರಮದ ಬಗ್ಗೆ ವಿಸ್ತರಿಸಿ ಬಹಳ ಹೃಷ್ಟಿಪಟ್ಟದೆ ಎಂಬಾದರಲ್ಲಿ ಏನೂ ಸಂದೇಹವಿಲ್ಲ. "ನೆಹರೂ ಅವರು ನನ್ನ ಉತ್ತರಾಧಿಕಾರಿ" ಎಂದು ಗಾಂಧೀಜಿಯವರೇ ನೆಹರೂರವರ ಕುರಿತು ಹೇಳಿದ್ದರು. ಆದರಂತೆಯೇ ನೆಹರೂರವರು ಗಾಂಧೀಜಿಯವರ ಅನುಯಾಯಿಗಳಾಗಿ ಈಗಲೂ ಗಾಂಧೀ ತತ್ವಗಳ ತಳಹದಿಯ ಮೇಲೆ ಕೆಲಸ ಮಾಡುತ್ತಿದ್ದಾರೆ.

ನಲ್ಬತ್ತು ಕೋಟಿ ಜನರನ್ನು ತನ್ನ ಅಸಾಧಾರಣ ಕರ್ತವ್ಯ ಶಕ್ತಿಯಿಂದ ಆಕರ್ಷಿಸಿ, ಅವರ ಹೃದಯ ಸಿಂಹಾಸನದಲ್ಲಿ ಸ್ಥಾನಪಡೆದ ಧೀಮಂತ ನೆಹರೂರವರು ಒಬ್ಬ ವ್ಯಕ್ತಿಯಲ್ಲ; ಸಮಷ್ಟಿ ಶಕ್ತಿಯೇ ಆಗಿರುವರು. ಇವರ ನಡೆ-ನುಡಿ, ಕಾರ್ಯಾಚರಣೆಗಳ ವಿಚಾರದಲ್ಲಿ ಇಂದು ಲೋಕವೇ ಉತ್ಸುಕತೆ ತಾಳಿದೆ. ಬಾಪೂಜಿಯವರ ಉತ್ತರಾಧಿಕಾರಿಯೊಂದ ನೆಹರೂರವರನ್ನು ಇಂದು ಭಾರತದಷ್ಟೇ ಅಲ್ಲಲೋಕದ ಮಹಾನಾಯಕನ ಸ್ಥಾನ ಪಡೆದಿದ್ದಾರೆ.

ಅಷ್ಟೈಶ್ವರ್ಯದ ರಾಜಪುತ್ರನಾಗಿ ಮೆರೆಯಬಹುದಾಗಿದ್ದ ನೆಹರೂರವರು ಅವೆಲ್ಲವನ್ನೂ ತ್ಯಜಿಸಿ ದೇಶಸೇವಕರಾಗಿ ಪರಿಪರಿಯ ಕಷ್ಟ ಅನುಭವಿಸಿದರು. ಭಾರತದ ಸ್ವಾತಂತ್ರ್ಯಾರಾಧನೆಯನ್ನು ಎಂತೆಂತಹ ಗಂಡಾಂತರಗಳಿಂದಲಾದರೂ ತಪ್ಪಿಸಿ, ಮುನ್ನಡೆಸಿದ ಈ ಮಹಾರಥಿ ಭಾರತದ ಕೀರ್ತಿ ಧ್ವಜವನ್ನು ಲೋಕವೇ ಬೆರಗುಗೊಳ್ಳುವ ರೀತಿಯಲ್ಲಿ ಬಾನೆತ್ತರದಲ್ಲೇರಿಸಿದ್ದಾರೆ. ಕಳೆದ ಹಲವು ದಶಮಾನಗಳಿಂದ ಅವರ ರಾಜಕೀಯ ಜೀವನ ಭಾರತೀಯರಿಗೊಂದು ನವಸ್ಫೂರ್ತಿಯಾಗಿದೆ ಲೋಕಕ್ಕೆ ಆದರ್ಶಪ್ರಾಯವೆನಿಸಿದ ನೆಹರೂರವರ ಸಮರ್ಥ ಮುಂದಾಳುತನದಿಂದ ಭಾರತವು ಕೇವಲ ಸ್ವಾತಂತ್ರ್ಯ ದೊರೆತ ಹನ್ನೊಂದು ವರ್ಷಗಳಲ್ಲಿ ಅದ್ಭುತ ಪ್ರಗತಿ ಸಾಧಿಸಿದೆ ಎಂಬ ಮಾತಿಗೆ ಇಡೀ ವಿಶ್ವವೇ ಧ್ವನಿಗೂಡಿಸುತ್ತಿದೆ.

ಒಂದೆಡೆ ಡಾ॥ ಶ್ರೀಪಟ್ಟಾಭಿ ಸೀತಾರಾಮಯ್ಯನವರು ಅನೇಕ ವರ್ಷಗಳ ಹಿಂದೆ ಗಾಂಧೀಜೀ ಮತ್ತು ನೆಹರೂರವರನ್ನು ಹೋಲಿಸುತ್ತಾ, "ಗಾಂಧೀಜೀ ತತ್ವ ಜ್ಞಾನಿಗಳಾಗಿದ್ದಾರೆ. ನೆಹರೂ ರಾಜಕಾರಣಿಗಳೂ, ಈ ಲೋಕದ ವ್ಯಕ್ತಿಗಳೂ ಆಗಿದ್ದಾರೆ" ಎಂದು ಹೇಳಿದ ಮಾತು ಹದಿನಾರಣೆ ನಿಜ. ನೆಹರೂರವರು ಗಾಂಧೀಜೀಯವರ ತತ್ವಗಳನ್ನು ಬಿಟ್ಟು ಯಾವ ಕೆಲಸವನ್ನೂ ಮಾಡುತ್ತಿಲ್ಲ. ಗಾಂಧೀ ತತ್ವಗಳ ಸ್ಫೂರ್ತಿಯೇ ಅವರ ಕಾರ್ಯರಂಗದ ಶಕ್ತಿ.

ನೆಹರೂರವರಿಗೆ ವಿಶ್ರಾಂತಿ ಎಂಬುದಿಲ್ಲ. ಇವರಂತಹ ಕಾರ್ಯನಿರತ ವ್ಯಕ್ತಿ ಪ್ರಪಂಚದಲ್ಲೇ ಇನ್ನೊಬ್ಬರಿಲ್ಲ; ಇವರಿಗಿಂತಲೂ ಕಾರ್ಯಾದ ಹೊರೆ ಪ್ರಪಂಚದ ಬೇರಾವ ಪ್ರಧಾನಿಗೂ ಇಲ್ಲವೆಂದರೆ ಅತ್ಯುಕ್ತಿ ಎನಿಸದು.

ನಮ್ಮ ನೆಚ್ಚಿನ ನಾಯಕ ನೆಹರೂ ಶತಾಯುಷಿಯಾಗಲಿ! ಅವರ ನಾಯಕತ್ವದಲ್ಲಿ ಭಾರತವು ಸಂಪತ್ಸಮೃದ್ಧವಾಗಿ ಮೆರೆದಾಡಲಿ! ಎಪ್ಪತ್ತನೇ ವರ್ಷಕ್ಕೆ ಪದಾರ್ಪಣ ಮಾಡುತ್ತಿರುವ ಶ್ರೀ ನೆಹರೂರವರಿಗೆ ನಮ್ಮ ಶುಭಾಶಯಗಳು!

—ಸಿ. ನಾರಾಯಣ ಬಲ್ಲಾಳ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.



ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ಕರು: ಷಾ ಕಂಪೆನಿ, ಮಂಗಳೂರು—1.

ವಿಚಿತ್ರ ಸತ್ಯ

ಭುವಿಕಾಣದುದನ್ನು ಭವಿ ಕಾಣಬಲ್ಲನು

೧. ಶ್ವಾನಸೂಚೀ ಮಂತ್ರ

ರೈನ್ ಜನಾಂಗಕ್ಕೆ ನಾಯಿಗಳ ಸಂತಾನವು ಪ್ರಾಯಶಃ ದಾಯಾದಿ ಸ್ಥಾನದಲ್ಲಿರಬೇಕು. ಹಿಂದೊಮ್ಮೆ ಲೈಕಾವನ್ನು ದುರುಳು ಬಾಣಗಳ ಮೂಲಕ ಆಕಾಶದ ಭ್ರಮಣಕಾರ್ಯಕ್ಕೆ ಹಚ್ಚಿದ ಉಪಚಂದ್ರನಲ್ಲಿ ಕೂರಿಸಿ ಅದರ ಪ್ರಾಣವನ್ನು ಹೀರಿದ (?) ಸಂಗತಿಯು ಪ್ರಕಂಚಿಕ್ಕೇನೇ ಗೊತ್ತಾಗಿದೆ. ಇದೀಗ ಮೃತ ಜೀವಿಗಳಿಗೆ ಪ್ರಾಣದಾನ ಮಾಡುವ ರಶ್ಯನ್ ಶಸ್ತ್ರಜ್ಞರ ಸಾಕೂತ ದೃಷ್ಟಿಗೂ ಒಂದು ನಾಯಿಯೇ ಬಲಿಬಿದ್ದ ಸುದ್ದಿಯೂ ತಿಳಿದು ಬಂದಿದೆ. ನಾಯಿಯು ಪೈಯ ಶಾಖವನ್ನು ಇಳಿಸುತ್ತ ಬಂದು ೨೯ ನಿಮಿಷಗಳವರೆಗೆ ಸತ್ತು ಹೋಗುವಂತೆ ಮಾಡಿದರು. ಲೈಕಾದ ದೌರ್ಭಾಗ್ಯದಿಂದ ಅದರ ಭವಿಷ್ಯತ್ತು ಏನಾಯಿತೆಂದು ತಿಳಿದು ಬಾರದೆ ಹೋಗಿದ್ದರೂ ಈ ನಾಯಿಯು ಲೈಕಾದಷ್ಟು ಹತಭಾಗ್ಯವಲ್ಲ. ೨೯ ನಿಮಿಷಗಳಲ್ಲಿ ಸೂಕ್ಷ್ಮ ಪರೀಕ್ಷೆ ನಡೆಸಿದಾಗ, ಅದು ನಿರ್ಜೀವವಾಗಿತ್ತೆಂದು ವೈಜ್ಞಾನಿಕೋಪಕರಣಗಳು ಸೂಚಿಸಿದುವು. ಆದರೆ, ಮುಂದೆ, ಸ್ವಲ್ಪ ಸಮಯಾನಂತರದಲ್ಲಿಯೇ ನಾಯಿಯು ಪುನಃ ಉಸಿರಾಡಲಾರಂಭಿಸಿ, ಅದರ ಶರೀರದಲ್ಲಿ ರಕ್ತಸಂಚಾರವಾಗಲು ತೊಡಗಿತು. ಹೀಗೆ ನಾಯಿಸಿದ ನಾಯಿಯನ್ನು ಪುನಃ ಜೀವಂತವಾಗಿಸಿದರು. ಇದೇ ರೀತಿಯ ಚಿಕಿತ್ಸೆಯನ್ನು ಮನುಷ್ಯನಿಗೂ ಮಾಡಿ, ಆದರಿಂದ ಮೃತ್ಯುವಶನಾದವನನ್ನು ಆತನ ಕೈಯಿಂದ ಪುನಃ ಸೆಳೆದು ತರುವ ಸಾಹಸವನ್ನು ಮಾಡಲಿದ್ದಾರೆ.

ಆದರೆ, ಒಂದು ಸಾರಿ ಜೀವಂತ ನಾಯಿಯನ್ನು ಸಾಯಿಸಿ ಮತ್ತೆ ಜೀವಂತಗೊಳಿಸಿದ ವಾರ್ತೆಯಿದು. ಕಾಲವಶದಿಂದ ವ್ಯಾಪಾರಂಚಿತರಾದವನನ್ನು ಸಜೀವಗೊಳಿಸುವುದು ಸಾಧ್ಯವೇ ಎಂಬುದು ಒಂದು ಪ್ರಶ್ನೆ. ಅದು ಸಾಧ್ಯವೆನಿಸಿದರೆ, ಜನವಾರಕ್ಕೂ ಪ್ರಳಯಾವಕಾಶವೆನ್ನುವ ಯೋಜನೆಯನ್ನೂ ಕೈಗೊಳ್ಳುವುದು ಅಗತ್ಯವಲ್ಲವೆ?

೨. ಪ್ರತಿಬಿಂಬ ಗ್ರಹಣ

ಸಾಮಾನ್ಯವಾಗಿ ಟೆಲಿವಿಜನ್‌ನ ಗ್ರಾಹಕ ತೆರೆಯನ್ನು ವಿದ್ಯುತ್ಪ್ರವಾಹದಲ್ಲಿ ಯಾವ ಬದಲಾವಣೆಗಳನ್ನೂ ಮಾಡದೆಯೇ ಹತ್ತಾರು ಮೈಲು ವಿಸ್ತರಿಸುವುದು ಸಾಧ್ಯವೇ ಎಂದು ಯಾರಾದರೂ ಕೇಳಬಹುದು. ಸಾಮಾನ್ಯ ಮನುಷ್ಯನನ್ನು ಅಥವಾ ಕಜ್ಜಾನನ್ನು ಕೇಳಿದರೆ, ಅತನು ತೆಗೆದ ಬಾಯಿಗೆ ಅದು ಅಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಬಹುದು. ಆದರೆ, ಅಪೂರ್ಣ ವಾಹಕ ಲೋಕಗಳ ಬಳಕೆಯಿಂದ ಈ ಅವಾಸ್ತವವು ಸಾಧ್ಯವೆನಿಸುತ್ತದೆ. ಎರಡು ವಾರದರ್ಶಕ ಫಲಕಗಳ ಮಧ್ಯೆ ಅಪೂರ್ಣ ವಾಹಕ ವಸ್ತುವಿನಿಂದ ತಯಾರಿಸಲಾದ ವಿದ್ಯುತ್ಕೇಜೋವರ್ಧಕ ತೆರೆಯನ್ನು ನಿರ್ಮಿಸಲು ಸೋವಿಯತ್ ವಿಜ್ಞಾನಿಗಳೂ ಯಂತ್ರ ನಿರ್ಮಾತರೂ ಅನವಂತ ಕೆಲಸ ಮಾಡುತ್ತಿದ್ದಾರೆ. ಈ ತೆರೆಗಳನ್ನು ಟೆಲಿವಿಜನ್ ಗ್ರಾಹಕಕ್ಕೆ ಜೋಡಿಸಿದ ಪಕ್ಷದಲ್ಲಿ ಯಾವ ಪ್ರಮಾಣದವ್ಯಯವಾದರೂ ಸ್ವೀಕೃವಾದ ಹೊಳಿಯುವ ಪ್ರತಿಬಿಂಬವನ್ನು ಆದು ನೀಡಬಲ್ಲುದು. ರಶ್ಯನ್ ತಜ್ಞರು ಈ ಸಾಹಸದ ಫಲಶ್ರುತಿಯನ್ನು ಸದ್ಯದಲ್ಲಿಯೇ ಕೇಳುವ ಭಾಗ್ಯವು ನಮಗೆ ಒದಗಬಾರದೆಂಬ ಹುದು. ಇದೊಂದು ಕೈಗೂಡಿತೆಂದರೆ, ಟೆಲಿವಿಜನ್‌ನ ವ್ಯಾಪ್ತಿಯೂ ಉಪಯೋಗವೂ ದ್ವಿಗುಣವಾಗುವುದೆಂದು ನೀರೀಕ್ಷಿಸಬಹುದಲ್ಲವೆ?

೩. ಸಮುದ್ರ ತಳ ವೀಕ್ಷಣ

ಅಮೆರಿಕನ್ನರು ಜಲಾಂತರ್ಗಾಮಿಯೊಂದರ ಮೂಲಕ ಉತ್ತರ ಧ್ರುವ ಪ್ರದೇಶದ ಹಿಮಗೆಡ್ಡೆಗಳಡಿಭಾಗವನ್ನು ಹಾದು ಹೋಗುವ ಮಾರ್ಗ ಪ್ರತಿಪಾದಿಸಿ ಕಾರ್ಯವನ್ನು ಮಾಡಿತೋರಿಸಿದರು. ರಶ್ಯನರು ಇನ್ನೂ ಒಂದು ಹೆಜ್ಜೆ ಮುಂಬರಿದ ವರದಿಗಳು ಬಂದಿವೆ. ಸುಮಾರು ೬೦೦ ಮೀಟರುಗಳಷ್ಟು ಆಳದಲ್ಲಿ ನೀರಡಿಯಲ್ಲಿ ಇಂಚರಿಸಬಲ್ಲ ಜಲಾಂತರ್ಗಾಮಿಯೊಂದನ್ನು ಅವರು ತಯಾರಿಸಲಿರುವರಂತೆ. ಸಂಶೋಧನಾ ನೌಕೆಯಿಂದ ಇದು ಪ್ರತ್ಯೇಕವಾಗಿ ಮುಳುಗಿ ಸಮುದ್ರದಡಿಯ ವೈಚಿತ್ರ್ಯ, ಜಲಾಂತರಾಳದಲ್ಲಿ ವಾಸಿಸುವ ಪ್ರಾಣಿಗಳು ಹಾಗೂ ನೆಲ ಮತ್ತಿತರ ವಿಷಯಗಳನ್ನು ಅರಿತುಕೊಳ್ಳಲು ಸಹಾಯಕವಾಗುವುದು. ಈ ಸರ್ವಾನ್ವೇಷಣೆಯ ವೀಕ್ಷಣ ಗವಾಕ್ಷಗಳು ನೀರಿನ ಅಪರಿಮಿತ ಒತ್ತಡವನ್ನು ಸಹಿಸಿಕೊಳ್ಳಬಲ್ಲ ಗಟ್ಟಿಯಾದ ಗಾಜಿನಿಂದ ತಯಾರಿಸಲ್ಪಟ್ಟಿವೆ. ಸಂಶೋಧನಾ ನೌಕೆಯಿಂದ ಬೇರ್ಪಡುವುದಾದರೂ ಅದರೊಡನೆ ಸದಾಕಾಲ ಸಾಕಷ್ಟು ಸಂಪರ್ಕ ಸಂಬಂಧವನ್ನಿಟ್ಟುಕೊಳ್ಳಬಹುದು. ಇಲ್ಲದೇ ಆವಶ್ಯಕವೆನಿಸಿದಾಗ, ಇದು ನೀರಡಿಯಿಂದ ಮೇಲೆ ಬಂದು ಸಹಾಯಕ ನೌಕೆಯನ್ನು ಕೂಡಿಕೊಳ್ಳಬಹುದು.

ಕಥಾ ವಿಹಾರ

(ಹಿಂದೆ ಪುಟದಿಂದ)

ಬಳಿಕ ವೃದ್ಧಾಪ್ಯದಿಂದ ಕೈಕಾಲು ಬಿದ್ದು ನೂಲಿ ನೇರಿ ಒಂದು ದಿನ ಘಕ್ಕನೆ ತೀರಿ ಹೋದರು. ಅವರ ಸೃದ್ಧಪತ್ನಿ ತುಳಸಮ್ಮ ಮಗ ಕೃಷ್ಣನನ್ನು ಗೋಪಾಲಕೃಷ್ಣನ ಮನೆಗೆ ಕಳಿಸಿದಳು. ಆ ಹುಡುಗ ಅವರಿಗೆ ವೃದ್ಧಾಪ್ಯದಲ್ಲಿ ಹುಟ್ಟಿದ್ದ. ಕೇವಲ ದಡ್ಡ, ಶೂನ್ಯ, ತಿರುಗೂಳಿ. ತುಳಸಮ್ಮನ ದುಃಖ ಶಾಂತಿಮಾಡಲು ಗೋಪಾಲಕೃಷ್ಣನ ಹೊರತು ಯಾರೂ ಇಲ್ಲ. ಗೋಪಾಲಕೃಷ್ಣನೇ ಮುಂದಿನ ಕಾರ್ಯಕ್ಕೆ ತಲೆ ಹಾಕಬೇಕಾಯಿತು. ಅಲ್ಲೊಬ್ಬರ ಪುರೋಹಿತರನ್ನು ವಿಚಾರಿಸಿ ಅವರ ಮೂಲಕ ನಾಲ್ಕು ಶವವಾಹಕರನ್ನು ಗೊತ್ತುಮಾಡಿದನು. ಪುರೋಹಿತರು ಬಹಳ ಆಸಕ್ತಿಯಿಂದ ಹೊತ್ತು ಮೀರಿ ಬಂದರು. ಶವಸ್ನಾನ ಮಂತ್ರಾದಿಗಳನ್ನು ಮಾಡಿಸಿ ಶ್ಮಶಾನಯಾತ್ರೆ ತೊಡಗಿಸಿದಾಗ ಜೀವ ಹೋಗಿ ೨೬ ಗಂಟೆ ಹೊತ್ತಿನ ಪರಿಗೆ ಶವ ಹಾಗೇ ಬಿದ್ದಿತ್ತು. ಶವವಾಹಕರು ಕೂಲಿ ಶ್ಮಶಾನ ಫೀಸು, ಅಲ್ಲಿಯ ಕಂಟ್ರಾಕ್ಟ್ರಾಳ್ತಿ ಇದು ಇದು ಅಂತ ಆ ದಿನದ ಕಾರ್ಯಕ್ಕೆ ರೂಪಾಯಿ ೬೦ ಆಯಿತು. ಇಷ್ಟಕ್ಕೂ ಒಂದು ಮೇಳ ತಾಳ ಅಲಂಕಾರ ಮೇವಣಿಕೆ ಯಾವುದೂ ಇಲ್ಲ. ಮುಂದಿನಿಂದ ಅಗ್ನಿಪಾತ್ರೆಯೊಂದಿಗೆ ಮಗ, ಅವನ ಹಿಂದೆ ನಾಲ್ವರು ಶವವಾಹಕರು, ಅವರ ಹಿಂದೆ ಗೋಪಾಲಕೃಷ್ಣ ಪ್ರತಿನಿಧಿ. ಹೀಗೆ ನಾಗುವ ಶ್ಮಶಾನ ಯಾತ್ರೆಯನ್ನು ಪಟ್ಟಣಿಗರು ಚಿತ್ರವೈಪಿಯಿಂದ ನೋಡಿರು. ಎಷ್ಟೋ ವರ್ಷದಿಂದ ಅದೇ ಬೀದಿಯಲ್ಲಿದ್ದ ಆ ವೃದ್ಧರ ಶ್ಮಶಾನಯಾತ್ರೆ ಜಾಗಾಯಿತು! ಅನಂತರ, ನುಗನಿರುವಾಗ ಕೇಗಾದರೂ ಕೈಯಿ ಹಿಡಿಸಿ ಶಾಸ್ತ್ರಪ್ರಕಾರ ಎಲ್ಲ ನಡೆಸಬೇಕೆಂದು ತುಳಸಮ್ಮನ ಬಯಕೆಯಾಗಿತ್ತು. ಒಂಬತ್ತೊತ್ತೆ ಚಿನ್ನದ ಬಳೆಯನ್ನು ಮಾರಿ ಹಣತಂದುದಾಯಿತು. ಗೋಪಾಲಕೃಷ್ಣ ಎಂಟುದಿನ ರಜೆಹಾಕಿದ. ತುಳಸಮ್ಮನ ಇಬ್ಬರು ಹೆಣ್ಣುಮಕ್ಕಳುಕೂಡ ದೂರವಾದ್ದಕಾರಣ ಬರಲಿಲ್ಲ. ಬಾಡಿಗೆಯ ಗೂಡು ಮನೆಯಲ್ಲಿ ಸಾಧ್ಯವಿಲ್ಲದುದರಿಂದ, ಎಲ್ಲೋ ದೂರದ ಮೂಲೆಯ ಒಂದೆತ್ತರಕ್ಕೆ ಸಾಮಾನುಗಳನ್ನೆಲ್ಲಾ ಸಾಗಿಸಿ ಕೂಲಿ ಬ್ರಾಹ್ಮಣರು, ಕೂಲಿ ಪುರೋಹಿತರು, ಕೂಲಿಯೆಳುಗಳು ಮೊದಲಾದವರಿಂದ ಆದಾನ ಈ ದಾನಗಳೆಂದು ಸತ್ತ ಹೆನ್ನೆರಡು ದಿನದೊಳಗೆ ಜೀವದಲ್ಲಿದ್ದವರ ಶ್ರಾದ್ಧಕಾರ್ಯವನ್ನೆಲ್ಲ ಹೀರಿಕೊಂಡಂತೆ ಕ್ರಿಯಾವಿಧಾನ ನಡೆಯಿತು. ಹೀಗೆ ಇದ್ದದನ್ನು ತೀರಿಸಿಕೊಂಡು ಆ ತುಳಸಮ್ಮ ಶಂಕರಪುತ್ರನೆಂದಿಗೆ ಹೇಗೆ ದಿನ ದೂಡುತ್ತಿದ್ದಳೋ? ತಮ್ಮ ಹೆಂಡತಿ ಮಕ್ಕಳು ಕಷ್ಟಪಡುವಂತಾಗುವುದು ಶಕ್ತವರಿಗೆ ಸಂತೋಷವೆ?

ಯೋಚನೆಯೊಯಿತು ಗೋಪಾಲಕೃಷ್ಣನಿಗೆ ತನಗೂ ಒಂದುದಿನ ಸಾತ್ಪಾಬಂದೇ ಬರುತ್ತದೆ. ಆ ಸಮಯಕ್ಕೆ ಈ ಪರಿ ಊಟಾನಲ್ಲಿ ಕಂಡ ಕಂಡವರು ತಪ್ಪ ಕಂಡಕಿವಾಕ್ಯಗಳನ್ನು ಹೀರಬಾರದು ಆದಕ್ಕೆ ಅವನು ಆ ರೀತಿಯ ವಿಚಾರಮಾಡುತ್ತಿದ್ದ. ಸ್ವಲ್ಪ ಗದ ಬರೆದು ತನ್ನ ಡೈರಿಯೊಳಗಿಟ್ಟಿದ್ದ. ಸೈಕಲ್ಲಿಗೆಯಲ್ಲಿಯೂ ಗಣಂ ರೂಪಾಯಿ ಬಚ್ಚಿಟ್ಟಿದ್ದ.

ನಿನ್ನೆ ಅತನು ಮನೆಗೆ ಬರಬೇಕಾದುದು ಮಾತ್ರ ಅನಿರೀಕ್ಷಿತ. ಅವನು ಸ್ಟುಡಿಯೋ ಕೆಲಸ ಮುಗಿಸಿ ಹೊರಗೆಬರುವಾಗ ಹಳೇ ಸ್ನೇಹಿತನೊಬ್ಬ ಸಿಕ್ಕಿ ಒತ್ತಾಯಮಾಡಿ ಟ್ಯಾಕ್ಸಿಗೆ ಕರದುಕೊಂಡು ಅಲ್ಲಿ ಗೀಮೂಯಣ ನಾಟಕ ನೋಡಿದ. ಮನೆಗೆ ಬರಲಾಗದೆ ಅಲ್ಲೇ ತಂಗಿದ. ಈ ದಿನ ಬೆಳಗ್ಗೆ ಆ ಗೆಳೆಯನನ್ನು ರೈಲಿನಲ್ಲಿ ಕಳುಹಿಸಿ, ಸ್ವಲ್ಪ ತಿಂಡಿಪೊಟ್ಟಣಮೊಂದಿಗೆ ಮನೆಗೆ ಬರುವಾಗ ಇಲ್ಲಿ ಯೂ ಅನಿರೀಕ್ಷಿತ ಘಟನೆನೆಡೆದಿತ್ತು!

—"ನವಗಿರಿನಂದ"

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 49/1958

1. ರಮಾ V. ಶೈ–
2. ಗುಲಾಬಿ B. ಶೆಟ್ಟಿ
3. M. ರಾಮಕೃಷ್ಣ ಪೂಂಜ
4. ಕಾಂತಾ V. ಶೈ–

} ಅರ್ಜಿದಾರರು.

ಈ ಮೂಲಕ ಸರ್ವ ಜನರಿಗೂ ತಿಳಿಸುವ ದೇನಂದರೆ

ಅರ್ಜಿದಾರರು ಅವರ ಸಹೋದರ ಮೃತ ಬೆಳ್ತಂಗಡಿ ತಾಲ್ಲೂ ಅಜೆಪಿಟ್ಟು ಗ್ರಾಮದ ಬಾಳಿಕೆ ಮನೆ M. ಬಾಲಕೃಷ್ಣ ಶೈಗಳಿಗೆ ಬರಬೇಕಾಗಿರುವ ಸಾಲಗಳಿಗೆ ಪಾರಿಸರ್ಟಿಫಿಕೇಟು ಕೊಡಬೇಕೆಂದು ಕೋರ್ಟಿಗೆ ಅರ್ಜಿ ಹಾಕಿದ್ದು ಅದರಂತೆ ಈ ಕೋರ್ಟು ಮುಂದೆ ಹಾಜರಾಗಿ ಅರ್ಜಿಯ ಸತ್ಯಾಸತ್ಯತೆಯ ಬಗ್ಗೆ ವಿಚಾರಣೆ ನಡೆಸಿದಾಗ ಅರ್ಜಿದಾರರು ಹೇಳಿದ ಮಾತು ಸತ್ಯವೆಂದು ಕಂಡುಬಂದಿರುತ್ತದೆ. ಆದುದರಿಂದ ಈ ಮೂಲಕ ತೀರ್ಮಾನಿಸಿರುತ್ತದೆ.

ಆದ್ದರಿಂದ ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ ಮೃತ ಬಾಳಿಕೆ ಮನೆ M. ಬಾಲಕೃಷ್ಣ ಶೈಗಳಿಗೆ ಬರಬೇಕಾಗಿರುವ ಸಾಲಗಳಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಕೋರ್ಟಿಗೆ ಸಲ್ಲಿಸಬೇಕಾಗಿ ಕೋರಲಾಗಿದೆ.

(By order of the Court.)

N. M. Adyanthaya.
Advocate for Petitioners.

Karkal, 4- 11- 1958.

ಉತ್ತರ ಇಂಡಿಯಾ ಸಂಪೂರ್ಣ ತೀರ್ಥಯಾತ್ರೆಗೆ

ಗುಂತಕಲ್ ಸ್ಪೆಷಲ್‌ನಿಂದಾ—ಯಾತ್ರಾ ಹೊರಡುವದು.

ಹೆಚ್ಚಿನ ಸೌಕರ್ಯ ಉಳ್ಳ ಸ್ಪೆಶಲ್–ಟೂರಿಷ್ಟ್ ಗಾಡಿಯಿಂದಾ—

ಈ ಯಾತ್ರಾ ಹೊರಟು ಪುನಾ ೨ ದಿನ (ಭೀಮಾಶಂಕರ ಜೋತಿರ್ಲಿಂಗ ಆಳಂದಿ ಕೆಲ್ಲಾ ಸಾರ್ಕಟ ಮುಂತಾದವ) ಮುಂಬಯಿ ೨ ದಿನ (ಇತಿಯೂ ದೇಶದ ಮುಖ್ಯ ಪಟ್ಟಣವು ಅನೇಕ ನೋಡತಕ್ಕ ೩೬ ಸ್ಥಳಗಳು) ನಾಶೀಕ್ ೨ ದಿನ (ತ್ರ್ಯಂಬಕೇಶ್ವರ ಜೋತಿರ್ಲಿಂಗ, ಪಂಚವಟಿ ತ್ರ್ಯಂಬಕೇಶ್ವರ ಉಗಮಸ್ಥಾನ ಮುಂತಾದವ) ಬಾಂಡವಾ ೧ ದಿನ (ನರ್ಮದಾ ನದಿ ಸ್ನಾನ ಓಂಕಾರೇಶ್ವರ ಜೋತಿರ್ಲಿಂಗ ದರ್ಶನ ಆಲ್ಟಾ ಬಾವಿ ೨ ದಿನ (ಗಂಗಾ ಯಮುನಾ ಸರಸ್ವತಿಗಳ ತ್ರಿವೇಣಿಸಂಗನ ಸ್ನಾನ ವೇಣಿಮಾಧವ ನೇಪರು ಬಂಗಾಲಾ ಕಲಾ ಮಾಸ್ಟೆಲ್ ಮುಂತಾದವ) ಶ್ರೀ ಕ್ಷೇತ್ರ ಕಾಶೀ ೧ ದಿನ (ಶ್ರೀ ಕಾಶೀ ವಿಶ್ವನಾಥ ದರ್ಶನ, ಪುಣ್ಯ ಗಂಗಾಭಾಗೀರಥಿ ಸ್ನಾನ ಮಣಿಕರ್ಣಿಕಾ ಘಾಟಿನಲ್ಲಿ ಸ್ನಾನ ಒಳ ಘಾಟಗಳ ಸ್ನಾನ ಕಾಲಭೈರವ ಕರಡಿ ಮಾದಸಯ್ಯ, ವ್ಯಾಸಕಾಶಿ ಸಾರಾನಾಥ ಜೈನಕ್ಷೇತ್ರ ಮುಂತಾದವು) ಶ್ರೀ ಕ್ಷೇತ್ರ ಗಯಾ ೨ ದಿನ (ಫಲ್ಗು ನದಿ ಸ್ನಾನ ಶ್ರೀ ವಿಷ್ಣುಪಾದ ದರ್ಶನ ಪಿತೃಪಿಂಡಪ್ರದಾನ ಮುಂತಾದವ.) ಶ್ರೀ ಸಮೇತಶಿಖರಜಿ (ಸುಪ್ರಸಿದ್ಧವಾದ ಜೈನ ಕ್ಷೇತ್ರ) ಆಯೋಧ್ಯಾ ೧ ದಿನ (ಶರಯುನದಿ ಸ್ನಾನ ಶ್ರೀ ರಾಮಜನ್ಮಸ್ಥಾನ ಮುಂದಿರಗಳು ಹನುಮಾನ ಗಡಿ ಮುಂತಾದವು) ಲಖನೌ ೧ ದಿನ (ಲಕ್ನಾರ ಚಾಕಿ ಕಾಜಿನ ಮನೆ ಮುಂತಾದವು.) ಹರಿದ್ವಾರ ೨ ದಿನ (ಹರಿಪಾಜಿಲ ಶುದ್ಧಗಂಗಾ ಹಿತುವಿಕೆ ಬ್ರಹ್ಮ ಕುಂಡ ಸ್ನಾನ ಕನಕಲ ಗುರುಕುಲ ಇತ್ಯಾದಿಕ್ಷೇತ್ರ ಸ್ವರ್ಗಾಶ್ರಮ ದಕ್ಷಪ್ರಜಾ ಯೋಗಕಾಶಿ ಮುಂತಾದವು) ನಾಗಲ್ ಡ್ಯಾಮ್ ೧ ದಿನ (ಜಗತ್ಪ್ರಸಿದ್ಧಯೇ ಆತಿ ದೊಡ್ಡದಾದ ಭಾಕ್ರಾ ನಾಂಗಲ ಆಣೆಕಟ್ಟು.) ಕುರುಕ್ಷೇತ್ರ ೧ ದಿನ (ಸೂರ್ಯಕಿರಣೋದರ ಸ್ನಾನ ಭೀಷ್ಮಾಚಾರ್ಯರ ದರ್ಶನ ಪಾರಾವಾರಗಂಗೆ) ದಿಲ್ಲಿ ೨ ದಿನ (ಕೆಂಪುಕೋಟೆ ರಾಜಘಾಟ ಕುತುಬಮಿನಾರ್ ಇಂದ್ರಪ್ರಸ್ಥ ಪಸ್ತಿನಾವತಿ ಜಂತರ್–ಮಂತರ್ಪಾಲು ಬಿರ್ಲಾಮಂದಿರ ಬಿರ್ಲಾಪಾತಶಾಲೆ ಕೌನ್ಸಿಲ್‌ಹಾಲ್ ಮುಂತಾದವು.) ಮಥುರಾ ೨ ದಿನ (ಬ್ರಂದಾವನ ಗೋಕುಲ ಗೋವರ್ಧನ ಯಮುನಾನದಿ ಸ್ನಾನ ವಾರ್ತಾಜಾನಾಥ ಮುಂದಿರ ಮುಂತಾದವು) ಆಗ್ರಾ ೧ ದಿನ (ತಾಜ ಮಹಲ್ ಶಾಜಹಾನನ ಕೆಲ್ಲಾ ಯಮುನಾನದಿ ಸ್ನಾನ ಜಹಾರ ಚಾಕಿ ಮುಂತಾದವು) ಗ್ವಾಲೇರ ೧ ದಿನ (ಶಿವಾಜಿ ಕೋಟೆ ಝಾಂಸಿ ಮಹಾರಾಣಿ ಸವಾರಿ ಸ್ಥಳ ಮುಂತಾದವು) ಭೋಪಾಲ್ ೧ ದಿನ (ಕೆಲ್ಲಾ ದೊಡ್ಡ ತಲಾವರ ಮುಂತಾದವು) ಭುಪಾವಳ ೧ ದಿನ (ತಾಪಿ ನದಿ ಸ್ನಾನ ಮುಂತಾವು ದೌಡ್ ಪುನ್ಸ್ ಪರತ ಪುನಾವಿಂದಾ ಬೆಂಗಳೂರಿಗೆ ಆಗಮನ ದಿನಕ್ಕೆ ಪ್ರವಾಸವು. ಈ ಯಾತ್ರೆಯಲ್ಲಿ ವ್ಯಾಪಕಾ–ಸೋಮನಾಥ—ಪಂಡರಪುರ ಎಲ್ಲಾ ಯಾತ್ರಾ ಸೇವೆ, ಬಹಳೇ ಸೌಕರ್ಯ ಪ್ರವಾಸವಿದೆ.

ಹೆಚ್ಚಿನ ಮಾಹಿತಿಗಾಗಿ ಕೆಳಗಿನ ಆಪ್ತರಿಕ್ಕೆ ಬರೆಯಬಹುದು. ತಂಪಿ ಮೂಲಕ ಸೀಟುಗಳ ಸಂಖ್ಯೆ ತಿಳಿಯಬೇಕು.

ಶ್ರೀ ಶಿವಾನಂದ ಯಾತ್ರಾ ಕಂ. ಬನಹಟ್ಟಿ
ಪೋಸ್ಟ್—ಬನಹಟ್ಟಿ ಜಿ. ವಿಜಾಪುರ

ತಂತಿ ಆಡ್ರೆಸ್
ಶಿವಾನಂದ ಯಾತ್ರಾ ಬನಹಟ್ಟಿ

N A V A Y U G A
REGD. NO. M. 3618

UDIPI, THURSDAY
13-11-1958

LICENSE NO. 31
Licensed to Post without Prepayment

ಅಮೇರಿಕಾ ಸ್ಥಿತ್ಯಂತರ

ರಿಪಬ್ಲಿಕನರಿಗೆ ಎಲ್ಲಿಲ್ಲದ ಸೋಲು

ಐಕರ ವಿದೇಶ ನೀತಿಯು ಅಮೆರಿಕೆಯ ಪ್ರಜಾಜನರ ಟೀಕೆಗೆ ಗುರಿಯಾಯಿತು.

ಅಮೇರಿಕೆಯ ಸಂಯುಕ್ತ ರಾಷ್ಟ್ರಗಳ ಕಾಂಗ್ರೆಸ್‌ನಲ್ಲಿ ರಿಪಬ್ಲಿಕನ್ ಮತ್ತು ಡೊಮೆಕ್ರಟಿಕ್ ಪಕ್ಷಗಳ ಬಲಾಬಲಗಳಲ್ಲಿ ವಿಶೇಷ ಪರಿವರ್ತನೆಯು ನೊನ್ನೆ ನಡೆದ ಚುನಾವಣೆಯಲ್ಲಿ ಕಂಡು ಬಂದು ಇದರಿಂದ ಅಧ್ಯಕ್ಷ ಐಸನ್ ಹಾವರರ ಕೈಯು ವಿಪುಲವಾಗಿ ಶಿಥಿಲಗೊಂಡಿದೆ. ಇವರ ವಿದೇಶ ನೀತಿಯು ವಿರೋಧಕ್ಕೆ ಗುರಿಯಾಗಿದೆಯೆಂದೂ ತಟಸ್ಥ ರಾಷ್ಟ್ರಗಳಿಗೆ ಸಹಾಯ ವೀಯುವ ಯೋಜನೆಯು ಮನ್ನಿಸಲ್ಪಟ್ಟಿರುವುದೆಂದೂ ಈ ಚುನಾವಣಾಪರಿಣಾಮ ದಿಂದೂಹಿಸಬಹುದು. ಸಿನೇಟಿನ ವಿದೇಶ ಸಂಬಂಧದ ಸಮಿತಿಯಲ್ಲಿ ನಾಲ್ವರು ಮಹತ್ವಪೂರ್ಣ ಡೆಮೊಕ್ರೆಟಿಕನರು ಬಂದುದರಿಂದ ಇದು ಸ್ಪಷ್ಟವಾಗುತ್ತದೆ. ಡೆಮೊಕ್ರೆಟಿಕರಿಗೆ ಎಂಡೂ ಸದನಗಳಲ್ಲಿ ಆಪೂರ್ವ ಬಹುಸ್ಥೀ ವಿಜಯವು ದೊರೆತಿದೆ. ಈ ಪಕ್ಷದ ಧುರೀಣರು ಅಮೇರಿಕೆಯ ಮಿತ್ರರಾಷ್ಟ್ರಗಳಿಗೆ ಸೈನಿಕ ಸಹಾಯದ ಪ್ರಮಾಣವನ್ನು ತಗ್ಗಿಸುವ ಮತ್ತು ಹಿಂದುಳಿದ ರಾಷ್ಟ್ರಗಳಿಗೆ ದೀರ್ಘಕಾಲೀನ ಸಹಾಯನ್ನೀಯುವ ಧೋರಣೆಯನ್ನು ಮುಂದಿಟ್ಟಿದ್ದಾರೆ.

ಅಧ್ಯಕ್ಷ ಐಸನ್ ಹಾವರರ ಅಧ್ಯಕ್ಷೀಯ ಅಧಿಕಾರವು ಇನ್ನೆರಡು ವರ್ಷಗಳ ವರೆಗಿದ್ದು ಈಗ ನಡೆದುದು ಮಧ್ಯಕಾಲೀನ ಚುನಾವಣೆಗಳಾಗಿವೆ. ಇದರ ಪರಿಣಾಮವು ಸರಕಾರೀ ಪಕ್ಷಕ್ಕೆ ಬಲವಾದ ಏಟನ್ನಿತ್ತರೂ ಅಧ್ಯಕ್ಷ ಐಸರು ಕಂಗೆಟ್ಟಂತೆ ತೋರಿಸದೆ ಧೈರ್ಯಶಾಲಿಯಾಗಿಯೇ ಉಳಿದಿದ್ದಾರೆ. ತನ್ನ ವಿದೇಶೀಯ ನೀತಿಯ ಪರಿಣಾಮವಾಗಿಯೇ ಈ ಬಲವಾದ ಸೋಲು ಉಂಟಾದುದೆಂದು ಐಕರು ತಿಳಿದಿದ್ದರೂ, ಅವರಪನ್ನು ವಿಶೇಷವಾಗಿ ಗಮನಿಸದೆ, ವಿದೇಶಗಳಿಗೆ ಅಮೆರಿಕೆಯು ಸಲ್ಲಿಸುತ್ತಿರುವ ಆರ್ಥಿಕ ಸಹಾಯ ಯೋಜನೆಯು ಜನತೆಯ ಬೆಂಬಲ ಸಂಪಾದಿಸಿದುದಕ್ಕೆ ಸಂತೋಷ ವ್ಯಕ್ತಪಡಿಸುತಿದ್ದಾರೆ.

ಪ್ರಕೃತದ ಚುನಾವಣೆಯಲ್ಲಿ ಡೆಮೊಕ್ರೆಟಿಕರು ಕೆಲವೆಡೆ ರಿಪಬ್ಲಿಕನರನ್ನು ಸಂಪೂರ್ಣವಾಗಿ ಸೋಲಿಸಿದ್ದಾರೆ. ರಿಪಬ್ಲಿಕನ್ ಧುರೀಣ ಶ್ರೀ ಚಾರ್ಲ್ಸ್ ಟ್ರಿಕರ್ (ಓಹಿಯೋ) ಶ್ರೀ ಜಾರ್ಜ್ ಮೆಲೋನ್ (ನೇವಡಾ) ಮತ್ತು ಶ್ರೀ ಥೈಸಮೆನ್ ಪಿತ್ಸೋಮ (ಪಶ್ಚಿಮ ವರ್ಜೀನಿಯಾ)ರು ಪರಾಜಿತರಾಗಿದ್ದಾರೆ. ಇನ್ನು ಕೆಲವರು ಅತ್ಯಂತ ಅಲ್ಪನುಷಗಳಿಂದಾಗಿ ಬಿದ್ದು ಹೋಗಿದ್ದಾರೆ.

ಭಾರತದ ದೃಷ್ಟಿಯಿಂದ ಈ ಪರಿವರ್ತನೆಯು ಸ್ವಾಗತಾರ್ಹವೆನ್ನಬಹುದು. ಅಧ್ಯಕ್ಷರು ರಿಪಬ್ಲಿಕನರಿದ್ದರೂ ಅಮೆರಿಕೆಯ ಕಾಂಗ್ರೆಸ್‌ನಲ್ಲಿ ಡೆಮೊಕ್ರೆಟಿಕರಿಗೆ ಮೊದಲೇ ಬಹು ಮತವಿದ್ದುದರಿಂದ ಆವರ ಭಾರತಪರ ಧೋರಣೆಯಿಂದ ಇದು ವರೆಗೂ ಸಾಕಷ್ಟು ಸಹಾಯವು ಅಮೆರಿಕೆಯಿಂದ ದೊರೆತಿದೆ. ಈಗ, ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿದು ಪ್ರಾಪ್ತಿಸುವ ನಿರೀಕ್ಷೆಯಿದೆ; ಅಲ್ಲದೆ ಇದಕ್ಕಾಗಿ ವಿಶೇಷ ವಿಧಾನಗಳನ್ನೂ ಹೊಂದಿಸಿಕೊಳ್ಳಲಾಗುತ್ತಿದೆ.

ಪಶ್ಚಿಮ ಆಗ್ನೇಯ ಏಶ್ಯಾ ಮತ್ತು ಲೆಟಿನ್ ಅಮೆರಿಕೆಗಳ ಆರ್ಥಿಕಾವಶ್ಯಕತೆಯಿರುವ ರಾಷ್ಟ್ರಗಳಿಗೆ ಅಧಿಕ ಸಹಾಯವೀಯುವ ಶ್ರೀ ಐಸನ್‌ಹಾವರರ ಪೂರ್ವಘೋಷಿತ ಆಪೇಕ್ಷೆಯನ್ನು ಗಮನಿಸಿದರೆ, ಕಾಂಗ್ರೆಸ್‌ನಲ್ಲಿನ ಸ್ಥಿತ್ಯಂತರಗಳು ಅತ್ಯಂತ ಮಹತ್ವಪೂರ್ಣವೆಂದು ಹೇಳಬಹುದು. ಈ ಪ್ರದೇಶಗಳಲ್ಲಿ ಅರೋಗ್ಯ ಮತ್ತು ನೀರಿನ ವ್ಯವಸ್ಥೆಯಲ್ಲಿ ಸುಧಾರಣೆ ಮಾಡುವ ಯೋಜನೆಗಳು ಐಕರ ಹಾಗೂ ವಿದೇಶಾಂಗ ಕಾರ್ಯದರ್ಶಿಡಲ್ಲೆಸರ ತಲೆಯಲ್ಲಿ ಭ್ರಮಿಸುತ್ತಿವೆಯೆಂದೂ ತಿಳಿದು ಬರುತ್ತದೆ.

ಭಾರತದ ರ್ಗರ್ಜರ ಮಾರ್ಚ್ ತಿಂಗರವರೆಗಿನ ೩೫ ಕೋಟಿ ಡಾಲರುಗಳಷ್ಟು ವಿದೇಶೀ ವಿನಿಮಯ ನಾಣ್ಯಗಳ ಆವಶ್ಯಕತೆಯಿಂಗ ಪೂರ್ತಿಗೊಂಡಿದೆ. ಆದರೆ, ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯು ಉಳಿದ ಅವಧಿಗಾಗಿ ಇನ್ನೂ ಸುಮಾರು ೬೦ರಿಂದ ೭೫ಕೋಟಿ ಡಾಲರುಗಳ ಸಹಾಯ ಒದಗಿಸುವ ಭಾರವು ಅಮೆರಿಕೆಯ ಮೇಲೆಯೇ ಬೀಳುವುದು. ಡೊಮೊಕ್ರೆಟಿಕ್ ಕಾಂಗ್ರೆಸ್ ನಾಯಕರು ವಿದೇಶನೀತಿಯಲ್ಲಿ ತಮ್ಮ ಹೇಳಿಕೆಗಳನ್ನು ಮನ್ನಿಸಬೇಕೆಂದು ಕರಹಿಡಿಯುವ ಸಂಭವವಿದೆ ಅಣ್ವಸ್ತ್ರಗಳ ಪರೀಕ್ಷಣೆಗಳ ಮೇಲೆ ಪ್ರತಿಬಂಧ ಹೇರುವ ಸಂಬಂಧದಲ್ಲಿಯೂ ಇದರ ಪರಿಣಾಮವು ಪ್ರಭಾವ ಬೀರುವುದೆಂದು ನಂಬಬಹುದು.

ಡೆಮೊಕ್ರೆಟಿಕರ ಪ್ರಚಂಡ ವಿಜಯಕ್ಕೆ ಮೂಲ ಕಾರಣವೆಂದರೆ, ಶ್ರೀ ಜೆಫ್ಲಸರ ನೀತಿಯು ಇಂದು ಹಳೆಯದೆಂದು ತಿಳಿಯಲ್ಪಡುತ್ತಿರುವುದು. ಅದರಿ, ನಿರೀಕ್ಷಮಂತ್ರಿ ರಾಜಿನಾಮೆಯ ಕುರಿತಾದ ಮಾತುಕತೆಗಳಲ್ಲಿಯೂ ಕೇಳಿಬರುವುದಿಲ್ಲ. ರಿಪಬ್ಲಿಕನರು ತಮ್ಮ ಚುನಾವಣಾ ಪ್ರಚಾರ ಮಾಡುತ್ತಿರುವಾಗ, ಡೆಮೊಕ್ರೆಟಿಕನರ ಮೇಲೆ "ಎಲ್ಲರನ್ನೂ ಮೆಚ್ಚಿಸುವವರು" ಎಂಬ ಆರೋಪವನ್ನು ಹೊರಿಸಿ, ಪಕ್ಷದ ಮೇಲೆ "ಯುದ್ಧವನ್ನು ಬಯಸುತ್ತಿರುವ ಪಕ್ಷ"ವೆಂಬ ದೂರನ್ನು ಹೊರಿಸುತಿದ್ದರು. ಆದರೆ, ಈ ಆಪಾದನೆಗಳನ್ನು ಎದುರಿಸಿ ವಿಜಯಶಾಲಿಗಳಾದ ಡೆಮೊಕ್ರೆಟಿಕನರು ಶ್ರೀ ಜೆಫ್ಲಸರನ್ನು ನೆನ್ಮುಡಿಯಿಂದಿರಲು ಬಿಡುವರೇ ಎಂಬುದು ಸಂದೇಹಾಸ್ಪದವಾಗಿದೆ ಆದರೂ ಕೆಲವರು ಇದನ್ನು ಹೆಚ್ಚಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ, ಅಣ್ವಾಸ್ತ್ರ ಮತ್ತು ಚೀನದ ಸಂಬಂಧದಲ್ಲಿ ಆವಶ್ಯಕ ಕಾರ್ಯಗಳು ನಡೆಯಬೇಕಾಗಿವೆ ಎಂಬುದಾಗಿ ಅಭಿಪ್ರಾಯಪಡುತ್ತಾರೆ.

ಜಗತ್ತಿನ ನಾಯಕ ರಾಷ್ಟ್ರವಾದ ಅಮೆರಿಕೆಯ ಸಂಪತ್ತಿನ ಮಹತ್ವದಸ್ಥಿತ್ಯಂತರಗಳು ಜಾಗತಿಕ ಶಾಂತಿಯ ಮೇಲೂ ಕೊಂಚ ಮಟ್ಟಿನ ಪರಿಣಾಮವನ್ನು ಬೀರಲು ಸಮರ್ಥವಾಗಬಹುದು ಜಗತ್ತಿನಲ್ಲಿ ರಣಭೀತಿಯುನ್ನಾಗಲೀ ಶಾಂತಿ ಸಂರಕ್ಷಣೆಯನ್ನಾಗಲೀ ಮಾಡಬಲ್ಲ ಶಕ್ತಿ ಅಮೆರಿಕೆಗಿರುವುದು ನಿರ್ವಿವಾದ ಈಜಿಪ್ಟಿನ ಕಾಲುವೆ ಬಿಕ್ಕಟ್ಟಿನ ಸಂದರ್ಭದಲ್ಲಿ ಅದು ಶಾಂತಿಗಾಗಿ ಮಹತ್ವ ಪ್ರದಪದನ್ಯಾಸ ಮಾಡಿದೆ. ಆದರೆ, ಇತ್ತೀಚೆಗೆ ಮಧ್ಯಪೂರ್ವ ಹಾಗೂ ದೂರಪೂರ್ವಗಳಲ್ಲಿ ತಾನೇ ಸ್ವಯಂ ಕಲುಷಿತ ವಾತಾವರಣವನ್ನುಂಟು ಮಾಡಲು ಹವಣಿಸಿ, ಟೀಕೆಗೆ ಗುರಿಯಾಯಿತು. ಜಗತ್ತಿನ ಜೊತ್ತ ಜನಾಂಗಗಳಲ್ಲಿ ಒಂದಾದ ಕಮ್ಯುನಿಸ್ಟ್ ಚೀನದ ವಿರುದ್ಧವಾಗಿ ನಿಂತು ಚಿಯಾಂಗ್ ಕೈಶೇಖರ ಕೈ ಹಿಡಿದು ಅವರ ಪುಟ್ಟ ಚೀನವನ್ನೇ ಚೀನವೆಂದು ನುನ್ನಿಶ್ಚಿತಿದೆ ಕೆಲವಾರು ಸೈನಿಕ ಒಪ್ಪಂದಗಳನ್ನು ಮಾಡಿಕೊಂಡು ಪಾಕಿಸ್ತಾನದಂತಹ ರಾಷ್ಟ್ರಕ್ಕೆ ಸೇನಾ ಸಹಾಯವನ್ನಿತ್ತಿದೆ. ಇಂತಹ ಕೊರತೆಗಳಿಂದ ಅಮೆರಿಕೆಯು ವಿದೇಶ ನೀತಿಯಿಂದ ತುಂಬ ಟೀಕೆಗೆಡೆನೂಡಿಕೊಟ್ಟಿದೆ. ಸದ್ಯ ನಡೆದ ಸಂಸದ್ ಸ್ಥಿತ್ಯಂತರದಿಂದ, ಇವೆಲ್ಲವಲ್ಲವಾದರೂ ಹೆಚ್ಚಿನವು ದೂರವಾಗಿ ಜಾಗತಿಕ ಶಾಂತಿಗಾಗಿ ಹೆಚ್ಚಿನ ಅವಕಾವು ಒದಗಬಹುದೆಂದು ಊಹಿಸಿದರೆ, ತವ್ಪಾಗಲಾರದು.

ಸಂಪಾದಕ ರೀಶರ್ಮನರು ಟೈಮ್‌ಸೆಟ್ಟರ್ ನೈಲ್ ಕೋವ್‌ಲಾಂಡರೊಡನೆ ಒಂದು ಪಟ ಬಿಚ್ಚುವ ಕುರಿತು ಚರ್ಚಿಸುತಿದ್ದಾರೆ

ಕೊಪ್ಪ

ವಿಶಾಲವಾಗಿ ಹಬ್ಬುತ್ತಿರುವ
ಸಿಂಡಿಕೇಟ್ ಬ್ಯಾಂಕಿನ
ನೂರಹದಿನೈದನೆಯ ಶಾಖೆ

ಅಕ್ಟೋಬರ ೨೦, ೧೯೫೮ರಂದು
ಕೊಪ್ಪದಲ್ಲಿ ಆರಂಭವಾಗಿದೆ.

ಕೆ. ಎನ್. ಶಂಕರ ಶೆಟ್ಟಿ,
ಏಜಂಟ್, ಕೊಪ್ಪ.

ಡಾ। ಟಿ. ಎಂ. ಎ ಪೈ,
ಮೆನೇಜಿಂಗ್ ಡೈರೆಕ್ಟರ್.

ಕೆ. ಟಿ. ಎ. ಪೈ,
ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್, ಲಿ.
THE CANARA INDUSTRIAL & BANKING
SYNDICATE LTD., UDIPI

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್ ಪಿತಾಳ, ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
(ಬಡಕ್ಕೈಲ ಕೃಷ್ಣ ಭಟ್ಟ ಎಲ್.ಎಲ್.ಬಿ.)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮಕ್ಕಳ ಮಗ್ಗಿ ಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

Edited Printed & Published by K H. Shetty, at the Navayuga Press Udipi S. India

ನಾಯುಧ

ವಾ.ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನ ಪೈಸೆ.

ವರುಷ ೩೮. ವಾರ ೧೧. 20-11-1953 Vol 38 No. 11.

ಶಾಸನ ಪ್ರಣಾಳಿ

ರಾಜ್ಯ ಶಾಸನದಲ್ಲಿ ರಾಜ್ಯ ಪಾಲರಿಗೆ ಗುರುತರ ಅಧಿಕಾರವಿದೆ

ಎಲ್ಲ ರಾಜ್ಯಪಾಲರೂ ಇವನ್ನು ಅರಿತು ಕಾರ್ಯರಂಗಕ್ಕಿಳಿದಿಲ್ಲ!

ಕಳೆದವಾರ ರಾಜ್ಯಗಳ ಮಂತ್ರಿಗಳ ಅನೌಪಚಾರಿಕ ಸಭೆಯೊಂದರಲ್ಲಿ ಕೇಂದ್ರೀಯ ಗೃಹ ಮಂತ್ರಿ ಪಂಡಿತ ಪಂತರು ಸ್ವರ್ಗೀಯ ಸರದಾರ ಪಟೇಲರ ಮೂಲಕ ಪ್ರತಿಪಾದಿತ ಕಾರ್ಯನಿಯಮಗಳನ್ನು ಲಕ್ಷ್ಯಪೂರ್ವಕವಾಗಿ ಗಮನಿಸಿದರೆ, ರಾಜ್ಯಪಾಲರಿಗೆ ತಮ್ಮ ರಾಜ್ಯ ಸಂಬಂಧದಲ್ಲಿ ವ್ಯಾಪಕವಾದ ಅಧಿಕಾರವಿದೆಯೆಂದು ತಿಳಿಯುತ್ತದೆ ಎಂದು ಹೇಳಿದರು. ಶ್ರೀ ಪಂತರು ಏಕರೂಪದ ನಿಯಮಗಳು ಎಲ್ಲಾ ರಾಜ್ಯಪಾಲರಿಗೂ ಇರಬೇಕೆಂದು ಪ್ರತಿಪಾದಿಸಿದರು. ಈ ನಿಯಮಗಳಲ್ಲಿ ಮುಖ್ಯ ಮಂತ್ರಿಯು ಅದೇಶ—ವೀಯುವುದಕ್ಕೆ ಮೊದಲು, ರಾಜ್ಯಪಾಲರ ಮುಂದ ಅವನ್ನು ಮಂಡಿಸಬೇಕೆಂದು ಹೇಳಲಾಗಿದೆ ಕೆಲವು ವಿಶೇಷ ಸಂದರ್ಭಗಳಲ್ಲಿ ರಾಜ್ಯಪಾಲ—ಮುಖ್ಯ ಮಂತ್ರಿಯರ ನಡುವೆ ಏಕಮತ ಅಸಾಧ್ಯವಾದ ಪಕ್ಷದಲ್ಲಿ ಯಾವ ಕಾರ್ಯಕ್ರಮಕ್ಕೆ ಗೊಳ್ಳಬೇಕು ಎಂಬುದನ್ನೂ ನಿಯಮಗಳಲ್ಲಿ ಹೇಳಲಾಗಿದೆ. "ಇತರ ಕಾರ್ಯಪ್ರಣಾಲಿಯು ಆಗಬೇಕು; ಅಥವಾ ಅಧಿಕಾರ ಮಂತ್ರಿಯ ಆದೇಶಕ್ಕೆ ಅತಿರಿಕ್ತವಾದ ಕಾರ್ಯಕ್ರಮವು ಏರ್ಪಡಬೇಕು ಎಂದು ರಾಜ್ಯಪಾಲರು ಬಯಸುವುದಾದರೆ, ಅವನ್ನು ರಾಜ್ಯಪಾಲರು ಮಂತ್ರಿಮಂಡಲಿಯ ಮುಂದಿಡಬಹುದು; ಕಾರ್ಯಪದ್ಧತಿಯು ರಾಜ್ಯಪಾಲರ ಅಪೇಕ್ಷೆಯಂತೆ ರೂಪಿಸಲ್ಪಡಲೂ ಬಹುದು. ಇಂತಹ ಯಾವುದೇ ಕಾಗದ-ಪತ್ರ, ಚರ್ಚೆ ಅಥವಾ ಆಲೋಚನೆಗಳು ರಾಜ್ಯಪಾಲರ ಇಚ್ಛೆಗೆ ವಿರೋಧವಾಗಿ ಸಚಿವಾಲಯದ ದಾಖಲೆಗಳಲ್ಲಿ ಸೇರಲಾರದು" ಎಂದು ಈ ನಿಯಮಗಳಲ್ಲಿ ಉಲ್ಲೇಖಿಸಲಾಗಿದೆ.

ಆಡಳಿತೆಯ ವಿಧಾನ ಸಂಬಂಧದಲ್ಲಿ ರಾಜ್ಯಪಾಲರಿಗೆ ಕೆಲವೊಂದು ತಿಳುವಳಿಕೆಗಳನ್ನು ಪಡೆಯಲು ವಿಶೇಷಾಧಿಕಾರವಿದೆ. "ಮುಖ್ಯಮಂತ್ರಿಯು ರಾಜ್ಯಾಡಳಿತೆಯ ಪದ್ಧತಿಯಲ್ಲಿ ರಾಜ್ಯಪಾಲರು ಬಯಸುವ ಎಲ್ಲಾ ತಿಳುವಳಿಕೆಗಳನ್ನು ಕೊಡಬೇಕು; ಮಂತ್ರಿಮಂಡಲಯ ನಿರ್ಣಯವಾಗದೆ ಒಂದು ಖಾತೆಯ ಮಂತ್ರಿಯು ಕೈಗೊಂಡ ಕಾರ್ಯಪದ್ಧತಿಯನ್ನು ರಾಜ್ಯಪಾಲರು ಮಂಡಿಳಯ ಮುಂದಿಡುವಂತೆ ಕೇಳಿಕೊಳ್ಳಬಹುದು

ಕ್ಷಮಾದಾನ, ಶಿಕ್ಷೆಯನ್ನು ಸ್ಥಗಿತಗೊಳಿಸುವುದು ಕಡಿಮೆ ಮಾಡುವುದು, ರದ್ದುಗೊಳಿಸುವುದು; ಇವುಗಳ ಅನುಜ್ಞೆ ದದಂತೆ ಶಿಕ್ಷೆಯನ್ನು ಸ್ಥಗಿತಗೊಳಿಸುವುದು ಇಲ್ಲವೆ ಇಳಿಸುವುದು, ನೀತಿಸಂಬಂಧಿ ವಿಷಯಗಳು; ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಗಳ ನೋಟ ಪ್ರಧಾನ ವಿಚಾರ ಬಲ್ಲ ವಿಷಯಗಳು; ಪರಿಗಣಿತ ಜಾತಿ ಅನುಸೂಚಿತ ವನ್ಯಜಾತಿ ಮತ್ತು ಇ ದುಳಿದ ವರ್ಗಗಳ ಹಿತಸಂಬಂಧಿ ವಿಷಯಗಳು; ಭಾರತ ಸರಕಾರ ಅನ್ಯ ರಾಜ್ಯೇಯ ಸರಕಾರ, ಸರ್ವೋಚ್ಚನ್ಯಾಯಾಲಯ ಅಥವಾ ಹೈಕೋರ್ಟುಗಳೊಡನೆ ರಾಜ್ಯಸರಕಾರದ ಸಂಬಂಧಿಸಿ ರಾಜ್ಯಪಾಲರ ವ್ಯಕ್ತಿಗತ ಪ್ರತಿಷ್ಠೆ ಮತ್ತು ರಾಜ್ಯ ಭವನಗಳ ವಿಷಯ, ರಾಜ್ಯದ ಪಬ್ಲಿಕ್ ಸರ್ವಿಸ್ ಕಮಿಶನ್ನಿನ ಆದ್ಯಕ್ಷ, ಸದಸ್ಯರು ಮತ್ತು ಕಾರ್ಯದರ್ಶಿಗಳ ನಿಯುಕ್ತಿಯ ಸೂಚನೆ, ಸಂಪತ್ತಿನ ತಿಥವಾ ರಾಜ್ಯ ವಿಧಾನ ಮಂಡಲಗಳ ಕಾನೂನುಗಳನ್ನು ಪರಿಗಣಿತ ಕ್ಷೇತ್ರಗಳಲ್ಲಿ ಜ್ಯಾರಿಗೊಳಿಸುವುದು ಮತ್ತು ಆ ಕ್ಷೇತ್ರಗಳಲ್ಲಿ ಶಾಂತಿ ವ ತ್ತು ಉತ್ತಮ ಪೀಠಿಯ ಆಡಳಿತೆ ನಡೆಸುವುದು, ಈ ನಿಯಮಗಳೊಡನೆ ಮುಖ್ಯ ಕಾರ್ಯದರ್ಶಿಯಿಂದ ಆಥವಾ ಯಾವುದೇ ವಿಭಾಗದಲ್ಲಿ ಅವಶ್ಯಕವೆಂದು ತೋರಿಬಂದ ಭಿನ್ನ ಮಾರ್ಗಗಳನ್ನು ರೂಪಿಸುವುದು; ಮುಖ್ಯ ಮಂತ್ರಿಯು ಆವಶ್ಯಕವೆಂದು ಕಂಡು ಬಂದ ಇತರ ಆಡಳತಾತ್ಮಕ ವಿಷಯಗಳು—ಈ ಸಂಬಂಧದಲ್ಲಿ ರಾಜ್ಯಪಾಲರಿಗೆ ಸಂಪೂರ್ಣ ಅಧಿಕಾರವಿದೆ.|ಮುಖ್ಯ ಮಂತ್ರಿಯ. ಇವನ್ನು ಕಾರ್ಯಾಚರಣೆಗೊಳಿಸುವುದಕ್ಕೆ ಮೊದಲು ರಾಜ್ಯಪಾಲರ ಅನುಮತಿಯನ್ನು ಪಡೆದೇ ತೀರಬೇಕಾಗಿದೆ.

ಈ ನಿಯಮಗಳು ಕೆಲವು ವರ್ಷಪೂರ್ವದಲ್ಲಿಯೇ ಮಾಡಲ್ಪಟ್ಟಿದ್ದರೂ, ಕೆಲವೊಂದು ರಾಜ್ಯಗಳಲ್ಲಿ ವ್ಯವಹಾರವು ಇದರಿಂದ ಬೇರೆಯಾಗಿದೆ ಎಂದು ತಿಳಿಯುಬರುತ್ತದೆ ಮದರಾಸು ರಾಜ್ಯವು ಸಂದಾರರು ರೂಪಿಸಿದ ನಿಯಮಗಳನ್ನು ಕೊಂಚ ಏಕಪಿಸಿಕೊಂಡು ಒಂದು ಹೆಜ್ಜೆ ಮುಂದು ವರಿದಿದೆ ಎಂದು ಅನುಭವದಿಂದ ಗೊತ್ತಾಗುತ್ತದೆ ಎಲ್ಲ ರಾಜ್ಯಗಳೂ ಮದ್ರಾಸಿನ ಪ್ರಗತಿಯನ್ನು ಈ ವಿಷಯದಲ್ಲಿ ಸಾಧಿಸಬೇಕಾಗಿದೆ. ಕಳೆದ ತಿಂಗಳಲ್ಲಿ ರಾಜ್ಯಪಾಲರ ಸಮ್ಮೇಳನವೊಂದು ನಡೆದಿದ್ದು ಅದರಲ್ಲಿ ರಾಜ್ಯಪಾಲರ ಸಾಮಾನ್ಯಿಕ ಕಾರ್ಯಗಳ ಮೇಲೆಯೂ ವಿಚಾರ ಮಾಡಲಾಗಿತ್ತೆಂದು ತಿಳಿಯುತ್ತದೆ.

ಈ ಮಾಸದಾದಿಯಲ್ಲಿ ಒಂದು ಪತ್ರಿಕಾ ಸಮ್ಮೇಳನದಲ್ಲಿ, "ರಾಜ್ಯಪಾಲರು ಸಮಯಾನುಗುಣವಾಗಿ ಅತಿ ಮಹತ್ವದ ಇಲ್ಲವೆ ಅಲ್ಪ ಮಹತ್ವಿಕೆಯ ಕೆಲಸವನ್ನು ಮಾಡಬಲ್ಲರು. ಇಂತಹ ಕಾರ್ಯಗಳು ಸಂವಿಧಾನ ನ್ನು ಅಂತರತಃ ಹೊಂದಿಕೊಂಡು ಅಧಿಕತಃ ನಿಯಮಗಳನ್ನು ಅವಲಂಬಿಸಿಯೇ ಮಾಡಲಾಗುತ್ತದೆ. ವ್ಯಕ್ತಿಗತ

(ಆ ನೇ ಪುಟ ನೋಡಿರಿ)

ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಭೆಯಿಂದ ಹಿಂತಿರುಗಿ ಬಂದ ಶ್ರೀಮತಿ ಪಂಡಿತ್ ಮತ್ತು ಶ್ರೀ ರೋಡ್ಗ್ (ಎಡ) ರವರನ್ನು ರಾಷ್ಟ್ರಪತಿ ಡಾ॥ರಾಜೇಂದ್ರ ಪ್ರಸಾದರು ಸಾಂತ್ವನಾತಿಥ್ಯವಿತ್ತಿದ್ದಾರೆ. ಜತೆಯಲ್ಲಿ ಸುಪ್ರಸಿದ್ಧ ಸಂಗೀತ ವಿದುಷಿ ಕುಮಾರಿ ಎಂ.ಎಲ್. ವಸಂತಕುಮಾರಿ ಇದ್ದಾಳೆ

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H O MANGALORE. Estd. 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ದುಡ್ಡು ಉಳಿಸುವುದು ಉತ್ತಮ| ಸಿಂಡಿಕೇಟ್ ಬೇಂಕ್
ಬೇಂಕಿನಲ್ಲಿಡುವುದು ಅತ್ಯುತ್ತಮ|

ಕಥಾ ವಿಹಾರ

ಹೆಣ್ಣು ಪಡೆದ ಗಂಡು ಗೆಲುವು

ಅವನು ಗೆದ್ದವನಂತೆ ನಟಿಸಿದ್ದ; ಆದರೆ, ನಿಜವಾಗಿ ಗೆದ್ದವರಾರು?

ರೈಲಿನಿಂದಿಳಿದೊಡನೆ ಎತ್ತಕಡೆ ಹೋಗಬೇಕೆಂದು ತಿಳಿಯಲಿಲ್ಲ. ಕೂಲಿಗಳು ನನ್ನ ಸುತ್ತಲೂ ರಂಗ ಮಾಡುತ್ತಿದ್ದರು. ಅವರಿಂದ ತಪ್ಪಿಸಿಕೊಳ್ಳುವುದು ನನ್ನ ಶಕ್ತಿಗೆ ನಿಲುಕದ ಪ್ರಶ್ನೆಯಾಗಿತ್ತು. ನನ್ನ ವೇಷ-ಭೂಷಣಗಳನ್ನು, ನನ್ನ ಕೈಯಲ್ಲಿದ್ದ ಕನ್ನಡ ಪತ್ರಿಕೆಗಳನ್ನು ನೋಡಿ ಒಬ್ಬ ಮನುಷ್ಯ ನನ್ನೆಡೆಗೆ ಧಾವಿಸಿ ಬಂದನು. ಅವನ ವರ್ತನೆ ಯಾರನ್ನೋ ಬರಸುವಂತಿತ್ತು. ನನ್ನನ್ನು ನೋಡಿ, (ಸಮಾಧಾನಗೊಂಡು) ಬೇಕಾಗಿದ್ದ ವ್ಯಕ್ತಿ ಇದೇ ಎಂದು ತಿಳಿದು ನನ್ನೆಡೆಗೆ ಬಂದು ನಗುತ್ತಾ ನುಡಿದ: "ತಾವು ಕನ್ನಡಿಗರಲ್ಲವೇ ಸಾರ್?" ಧೈರ್ಯ ಹಾಗೂ ವಿನಯದಿಂದ ನನ್ನೊಡನೆ ಸ್ನೇಹ ಗಳಿಸಿದ ಆ ವ್ಯಾಪಾರಿ.

"ಹೌದು."

"ಬಹುಕಃ ಮುಂಬಾಯಿಗೆ ಪ್ರಥಮ ಸಂದರ್ಶನವೆಂದು ಕಾಣುತ್ತದೆ. ಎಲ್ಲಿ ಉಳಕೊಂಡಿಯವಿರಿ?" ಗೊತ್ತಿದ್ದೂ, ಬೇಕೆಂತಲೇ ಆ ಪ್ರಶ್ನೆ ಕೇಳಿದ್ದ.

"ಇಷ್ಟೇ ಈಗ ತಾನೇ ರೈಲಿನಿಂದಿಳಿದೆ. ಎಲ್ಲಿ ಹೋಗಬೇಕೋ ತಿಳಿದಿಲ್ಲ. ಹೀಗೆ ಎಲ್ಲಾದರೂ ಹೋದರೆ ಸೈ!"

"ತಾವು ಸಂಕೋಚಪಟ್ಟುಕೊಳ್ಳದೇ ಇದ್ದರೆ—ಅನ್ಯಥಾ ಭಾವಿಸುವುದಿಲ್ಲವಾದರೆ ತನ್ನೊಡನೆ ಒಂದು ವಿಚಾರ ಹೇಳಲು ಆತುರನಾಗಿದ್ದೇನೆ. ಇಲ್ಲೇ ಮಲಬಾರಿನಲ್ಲಿ ಕನ್ನಡಿಗರದ್ದೇ ಒಂದು ನಿವಾಸ ಸ್ಥಳವಿದೆ. ತಾವು ದೊಡ್ಡ ಮನಸ್ಸು ಮಾಡಿ ಅಲ್ಲಿಯೇ ಉಳಕೊಳ್ಳುವುದಾದರೆ ಬಹಳ ಸಂತೋಷ. ಹೀಗೆ ಶಮ್ಮೊಡನೆ ಏಕಾಏಕಿ ಬಂದು ಕೇಳಿದೆನೆಂದು ಬೇಸರಿಕೆ ಬೇಡಿ" ಎಂದು ಒಂದೇ ಉಸಿರಿಗೆ ಹೇಳಬೇಕಾಗಿದ್ದುದೆಲ್ಲವನ್ನೂ ಉಸುರಿದ. ನನಗೂ ಅದೇ ಬೇಕಾಗಿತ್ತು. ಒಂಥ ಒಬ್ಬ ವ್ಯಕ್ತಿ ತಾನಾಗಿಯೇ ನನ್ನ ಸ್ನೇಹಿತನಾದದ್ದು ನನ್ನ ಅತಿ ಆಶ್ಚರ್ಯಕ್ಕೆ ಕಾರಣವಾಯಿತು.

ತನ್ನದೇ ಆದ 'ಓಟೋರಿಕ್ಷಾ'ದಲ್ಲಿ ನನ್ನನ್ನು ಕುಳ್ಳಿರಿಸಿ ಮಲಬಾರಿನ ಕಡೆಗೆ ಹೊರಟನು. ಮುಂಬಾಯಿಯ ಕ್ಷಣಿಕ ನೋಟವು ಕಾಣಿಸಿಕ್ಕಿದರೂ ಅವರ ಕಡೆಗೆ ನನ್ನ ಗಮನ ನಿಲ್ಲಲಿಲ್ಲ. ನನ್ನ ಹೊಸ ಸ್ನೇಹಿತನ ಉದಾರತೆಯ ಬಗ್ಗೆ ಬಹಳವಾಗಿ ಆಲೋಚಿಸಿದೆ. ಈ ಕಲಿಕಾಲದಲ್ಲಿ ಅದೂ ಕೂಡಾ ಮುಂಬಾಯಿಯಂತಹ ಪಟ್ಟಣದಲ್ಲಿ ಇಂತಹ 'ಉದಾರ ವ್ಯಕ್ತಿ'ಗಳೂ ಇರುವರೇ? ಇವು ಯಾವ ರೀತಿಯಲ್ಲಾದರೂ ಶಕ್ಯವಿದೆಯೇ? ಕನ್ನಡಿಗರಲ್ಲವೇ? ಕನ್ನಡ ದೇಶಕ್ಕೆ ಸೇವೆ ಸಲ್ಲಿಸುವ ಉದ್ದೇಶದಿಂದ ಇಂಥ ಕ್ಷೇತ್ರಗಳಲ್ಲಿ ಕನ್ನಡ ಜನತೆಯ ಸೇವೆನಿಗಾಗಿ ಎಲ್ಲಾ ಸುಖವನ್ನು ಬದಿಗಿಟ್ಟು ಟೊಂಕಕಟ್ಟಿರುವ ಮಹಾಪುರುಷರುಗಳಿರುವುದು ಎಂಬ ವಿಚಾರಂಗಳೇ ನನ್ನ ಆಲೋಚನೆಗೆ ಅಲ್ಪ ಶಾಂತಿಯನ್ನಿತ್ತುದು.

ಕೊನೆಗೆ ಒಂದು ದೊಡ್ಡ ಮಹಡಿ ಮನೆಯ ಮುಂದೆ ನಾವು ಇಳಿದೆವು. ಸ್ನೇಹಿತನು ಹೊಡಕಡೆ ನಾನೂ ಹೋದೆನು. ಮಹಲಿನ ಒಂದನೇ ಅಂತಸ್ತಿನ ಮಧ್ಯ ಭಾಗಕ್ಕೆ ಕರೆದೊಯ್ದನು. ಅದೊಂದು ಅತಿ ಸುಂದರವಾದ ಮನೆಯಾಗಿತ್ತು. ಮನೆಯ ಮುಂಗಡೆ ಅತಿ ಆಕರ್ಷಕವಾಗಿರುವ ಸುಂದರ ಹೂದೋಟ. ಮನೆಯ ಒಳಗಡೆಯ ಚಿತ್ರಣವು ಶ್ರೀಮಂತ ಜೀವನವನ್ನು ಪ್ರತಿಬಿಂಬಿಸುತ್ತಿತ್ತು. 'ಡ್ರಾಯಿಂಗ್ ರೂಮ್'ನಲ್ಲಿ ನನ್ನನ್ನು ಕುಳ್ಳಿರಿಸಿ ಹೇಳಿ ಒಳಹೊಕ್ಕನು ನನ್ನ ಮಿತ್ರ. ಆಶ್ಚರ್ಯವಾದರೂ ಅವನ ಸಂಸ್ಕೃತಿಯ ಮನೋದ್ರೇಕ ಭಂಗಿಯಲ್ಲಿರುವ ಮಹಿಳೆಯರ ಭಾವ ಚಿತ್ರಗಳು ಕೋಣೆ ತುಂಬಾ ತೂಗು ಹಾಕಲ್ಪಟ್ಟಿದ್ದವು. ಮುಂಬಾಯಿಯು ಜೀವನಕ್ಕೆ ಯೋಗ್ಯವಾದ ರೀತಿಯ ವ್ಯವಸ್ಥೆ, ಪದ್ಧತಿಗಳು ಆ ಕೋಣೆಯಲ್ಲಿಯೇ ನನಗೆ ಕಂಡು ಬಂದುವು. ಭಾವನಾ ಲೋಕದಲ್ಲಿ ತೇಲುತ್ತಿರುವಾಗ ದ್ವಾರಗಡೆಯಲ್ಲಿ "ಹಲ್ಲೋ ಮಿ ಶೇಖರ್!" ಎಂಬ ಹೆಣ್ಣಿನ ಕಂಠದಿಂದ ಹೊರಬಿದ್ದ ಶಬ್ದ ನನ್ನನ್ನು ಪ್ರಕೃತ ಸನ್ನಿವೇಶಕ್ಕೆ ಎಳೆದು ತಂದಿತು. ಅಪರಿಚಿತ ಪ್ರದೇಶದಲ್ಲಿ ನನ್ನ ಹೆಸರು ಹಿಡಿದು ಕೂಗುತ್ತಿರುವ ಸ್ತ್ರೀ ಸಂಗಾತಿ ಯಾರೆಂದು ಚಕಿತನಾಗಿ ನೋಡಿದೆ. ಎಲ್ಲಿಯೋ ನೋಡಿದ ಮುಖ ಛಾಯೆ, ಆದರೆ ಯಾರೆಂದು ಖಂಡಿತ ಹೇಳಲಾಗುತ್ತಿದ್ದಿಲ್ಲ. ತುಂಬಿದ ಸುಂದರ ದೇಹ ಉದ್ದಕ್ಕೂ —ಅಗಲಕ್ಕೂ ಶಕ್ಯವೇ ಚಾಚಿತ್ತು. ಪ್ರಾಕೃತಿಕತೆಯ ಮೇಲೆ ನಡೆಸಿದ ಕೃತಕತೆಯ ಪ್ರಯೋಗವು ಅವಳ ಸೌಂದರ್ಯವನ್ನು ಮತ್ತೂ ಆಕರ್ಷಕವಾಗಿ ಮಾಡಿತ್ತು. ಮುಂಬಾಯಿಗೆ ಒಂದುದು ನನಗೆ ಸ್ವಪ್ನದಂತೆ ಕಂಡಿತು.

ಅದರಿ ಹಾಗಾಗಲಿಲ್ಲ. ಆಕೆ ನನ್ನ ಕೈ ಸ್ಕೂಲಿನ ಸಣ್ಣಿನ ಸಂಗಾತಿಯೆಂದು ಅವಳೇ ಪರಿಚಯ ಮಾಡಿಕೊಡಬೇಕಾಯಿತು. ನಾನೂ ಮುನಂದೆಯೂ ಹೈಸ್ಕೂಲು ಕ್ಲಾಸುಗಳಲ್ಲಿ ಒಟ್ಟಿಗೇ ಕಲಿತವರು, ಮತ್ತು ನಾಟಕ ಸಂಘಗಳಲ್ಲಿ ನಾವಿಬ್ಬರೂ ಕಾರ್ಯದರ್ಶಿಯಾಗಿದ್ದು, ಅನೇಕ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿದ್ದೆವು. ನಮ್ಮಿಬ್ಬರ ಸ್ನೇಹ ಸ್ನೇಹಕ್ಕೆ ಮುಖ್ಯ ಕಾರಣ—ನಾವಿಬ್ಬರು ಒಟ್ಟಿಗೆ ಅಭಿನಯಿಸುತ್ತಿದ್ದುದು. ನಾಟಕ ರಂಗವೇ ನಮ್ಮ ಸ್ನೇಹದ ಪ್ರಥಮ ಉಸ್ಥಿವಾರ. 'ಗಂಡು ಹೆಣ್ಣಿನ ರೂಪದಲ್ಲಿರುವ ಒಂದೇ ಜೀವ' ಎಂದು ನನ್ನನ್ನು ಕರೆದರೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಇವೆಲ್ಲವಕ್ಕಿಂತಲೂ ಮೆಟ್ರಿಕ್ ರಜೆಯ ಮೂರು ತಿಂಗಳುಗಳ ಅನುಭವದ ಚಿತ್ರಣವು ನನ್ನ ಜೀವನವನದಲ್ಲೇ ಮರೆಯಲಾರದ ಘಟನೆಯಾಗಿತ್ತಾದರೂ ನಾನು ಸಂಪೂರ್ಣ ಚರಿತ್ರೆಯನ್ನೇ ಮರೆತಿದ್ದೆ. ಈ ಕಪ್ಪಿನ ಅಪಾಧಿ 'ಮರೆವು.'

ಕ್ಷಣ ಕಾಲದಲ್ಲೇ ಮುಖ್ಯ ಘಟನೆಗಳು ನನ್ನ ಗಮನದಲ್ಲಿ ಹೊಳೆದುವು. ನಾನು ಸೀನಿಯರ್ ಇಂಟರ್‌ನಲ್ಲಿ ಕಲಿಯುತ್ತಿದ್ದಾಗ ಸುನಂದಾ ನನ್ನ ಕಾಲೇಜಿಗೆ ಬಂದು ನನ್ನನ್ನು ಪ್ರತ್ಯೇಕ ಕರೆದು ಬಹಳ ಹೊತ್ತಿನ ವರೆಗೆ ಮಾತನಾಡಿ, ತಾನು ಮುಂಬಾಯಿಗೆ ಹೋಗುವೆನೆಂತಲೂ, ತನ್ನನ್ನು ಮರೆಯಬಾರದೆಂದೂ, ನನ್ನ ಚಟುವಟಿಕೆಗಳನ್ನು ಪದೇ—ಪದೇ ತಿಳಿಸುತ್ತಿರಬೇಕೆಂದೂ, ನನ್ನನ್ನು ಬಿಡಲಾರದ ತುತ್ತಾಗಿ ಬಿಟ್ಟು ಹೋಗುತ್ತೇನೆಂದೂ ಪ್ರೀತಿಯ ಬಿಳುವಿನೊಡನೆ ನನ್ನಿಂದ ಬೀಳ್ಕೊಂಡಿದ್ದಳು.

ಅಂದಿನ ಸುನಂದಾ ಇಂದಿನ ನನ್ನ ಭಾಗ್ಯ ದೇವತೆಯಾಗಿ ನನ್ನ ಆಶ್ರಯವಾಗಿದ್ದಳು. ನನ್ನ ಜೀವನದಲ್ಲಿ ಒಂದು ಅನುಭವದ ಬೇಕಾಗಿನ್ನು ನೀಡಿದ ಬಾಲ್ಯ ಸ್ನೇಹಿತಳಿಗೆ ಅನೇಕ ವರ್ಷಗಳಿಂದ ಅನಂತರ ಮನಃ ಒಟ್ಟಾದದಕ್ಕೆ ಕೃತಜ್ಞತೆ ಸಲ್ಲಿಸಿದೆ ನಮ್ಮ ಅಂದಿನ ಸಂಬಂಧವೇ ಇಂದು ಮುಂಬಾಯಿಗೆ ಬರುವಂತೆ ಮಾಡಿ, ಸ್ನೇಹಿತನ ಮೂಲಕ ಗೆಳತಿಯ ಪರಿಚಯವಾಯಿತೆಂದೆಣಿಸಿದರೆ ತಪ್ಪಾಗಲಿಕ್ಕಿಲ್ಲವಷ್ಟೇ?

ನಾವು ಬಹಳ ಹೊತ್ತು ಪರಸ್ಪರ ಮಾತನಾಡುತ್ತಾ ಕಳೆದೆವು. ಸುನಂದಾಳನ್ನಲ್ಲದೆ ಇತರ ಯಾರೊಬ್ಬ ಸಂಬಂಧಿಕರನ್ನೂ ನಾನು ಆ ಮನೆಯಲ್ಲಿ ಕಾಣಲಿಲ್ಲ. ಕೆಲವರ್ಷದ ನೌಕರರು ಹಾಗೂ ಎಳೆ ಪ್ರಾಯ ಪರಿಚಾರಿಕೆಯರು. ಅವಳ ವರ್ತನೆಯಲ್ಲಿ ಯಜಮಾನಿಕೆಯ ಸಂಶಯ ಬೇಡವೆಂದೂ ನನ್ನ ಮನದೊಳಗೆ ಇಣಿಕಿ ನೋಡಿತು.

"ನಿನ್ನ ತಂದೆ ತಾಯಿ, ಸಹೋದರ-ಸಹೋದರಿಯರು, ಗಂಡ—ನೊದಲಾದವರು ಕಾಣಿಸುವುದಿಲ್ಲವಲ್ಲ! ಅವರೆಲ್ಲ ಎಲ್ಲಿ?" ಎಂದು ಕಳಕಳ ಕುತೂಹಲದಿಂದ ನಾನು ಕೇಳಿದೆ.

(ನಂತೇ ಸುಟ ನೋಡಿರಿ)

ಅಮರಿಕೆಯ ರಾಜ್ಯಾಂಗ ಕಾರ್ಯದರ್ಶಿಜಾನ್ ಫಾಸ್ಟರ್ ಡಲ್ಲೆಸರು (ಮಧ್ಯ) ಸಂ. ರಾಜ್ಯ ಟಿನ್ಸಿಸ್ ಪದವಿಗಳನ್ನು ಅಲ್ಲೇ ಕೂಪರ್ (ಎಡ) ಮತ್ತು ಅಲ್ಫಿಯೊ ಗಿಬ್ಸನರಿಗೆ (ಬಲ) ಈ ಯಿತ್ತಿದ್ದಾರೆ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
4 ತಿಂಗಳ ವರೇಗೆ 4%
5 ರಿಂದ 12 ,, 4½%
13 ,, 24 ,, 4¾%
ರೂ. 10,000/- ಮತ್ತ ನೋಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ರೇವಣಾತಿಗೆ ¾%
ಸುಲಭ ಒಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯು. ಪೂಂಜ, ಮೆನೇಜರ್.
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆದಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ದೇಶ ಪರಿಚಯ

ಭಾರತದ ನೆರೆನಾಡ ಇಸ್ಲಾಮೀ ಪ್ರಜಾರಾಜ್ಯ

ಪ್ರಪಂಚದ ಹಳೆಯ ನೀರಾವರಿ ಕಾಲುವೆಗಳೂ ಏಕ್ಯದ ಹಿರಿಯ ವಿಮಾನ ನಿಲ್ದಾಣವೂ ಇಲ್ಲಿದೆ

ಭಾರತದಿಂದ ೧೯೪೭ನೆ ಆಗಸ್ಟ್ ೧೫ ರಂದು ಸಿಡಿದು ಹೋದ ಪಾಕಿಸ್ತಾನವು ಇಸ್ಲಾಮೀ ಪ್ರಜಾ ರಾಜ್ಯವಾಗಿದೆ. ಭಾರತದ ಇಕ್ಕಡೆಗಳಲ್ಲಿ ಹರಡಿರುವ ಈ ದೇಶವು ಪ್ರಪಂಚದ ದೊಡ್ಡ ದೇಶಗಳಲ್ಲಿ ಒಂದು. ಭಾರತದ ಈಶಾನ್ಯ ಮತ್ತು ವಾಯವ್ಯಗಳಲ್ಲಿ ಎರಡು ಹೋಳುಗಳಾಗಿದೆ, ಇದು. ಇದರ ವಿಸ್ತೀರ್ಣವು ಸುಮಾರು ೩,೬೪,೭೩೭ ಚದರ ಮೈಲಿಗಳಿದ್ದು ೧೯೫೧ ಸಾವಿರ ಜನರಿರುವರು. ಇಸ್ಲಾಮೀ ನಂಬಿಕೆಯಿರುವ ಅಧಿಕ ಸಂಖ್ಯಾಕರ ಆಪೇಕ್ಷೆಯ ಮೇರೆಗೆ ಅದು ಭಾರತ ಉಪಖಂಡದಿಂದ ಪ್ರತ್ಯೇಕಿಸಲ್ಪಟ್ಟಿತು. ೩,೧೦,೨೬೬ ಚದರ ಮೈಲಿ ವಿಸ್ತೀರ್ಣದ ಪಶ್ಚಿಮ ಪಾಕಿಸ್ತಾನದಲ್ಲಿ ಹಿಂದಿನ ಪಂಜಾಬು, ಸಿಂಧ, ಬಲೂಚಿಸ್ತಾನ ಮತ್ತು ವಾಯವ್ಯ ಗಡಿ ಪ್ರಾಂತ್ಯಗಳೂ ವಾಯವ್ಯ ಗಡಿ ರಾಜ್ಯಗಳೂ ಖಾಯರಪುರ ಮತ್ತು ಬಹವಾಲಪುರಗಳ ರಾಜ್ಯಗಳು ಸೇರಿವೆ. ಪಶ್ಚಿಮ ಮತ್ತು ವಾಯವ್ಯಗಳಲ್ಲಿ ಅಫಘಾನಿಸ್ತಾನವೂ ಪೂರ್ವದಲ್ಲಿ ಭಾರತವೂ ದಕ್ಷಿಣದಲ್ಲಿ ಅರಬಿ ಸಮುದ್ರವೂ ಸುತ್ತಿಕೊಂಡಿದೆ. ಪೂರ್ವ ಪಾಕಿಸ್ತಾನವು ಪೂರ್ವ ಬಂಗಾಳ ಮತ್ತು ಸಿಲ್ಹೆಟ್‌ಗಳಿಂದಲೂ ಚಿತ್ತಗೊಂಗ್ ಗುಡ್ಡ ಪ್ರದೇಶಗಳಿಂದಲೂ ಕೂಡಿದ್ದು ಕೇವಲ ೫೫,೧೨೬ ಚದರ ಮೈಲಿ ವಿಸ್ತಾರವಿದೆ. ಪಶ್ಚಿಮೋತ್ತರಗಳಲ್ಲಿ ಭಾರತವೂ ಪೂರ್ವದಲ್ಲಿ ಬ್ರಹ್ಮವೂ ಬಂಗಾಳ ಆಖಾತವು ದಕ್ಷಿಣದಲ್ಲೂ ಇದೆ.

ಪಶ್ಚಿಮ ಪಾಕಿಸ್ತಾನವನ್ನು ಏಕಘಟಕ ರಾಜ್ಯವನ್ನಾಗಿ ಮಾರ್ಪಡಿಸಿ, ಅದರ ರಾಜಧಾನಿಯನ್ನು ಲಾಹೋರಿನಲ್ಲಿ ೧೪—೧೦—೫೫ರಂದಿಡಲಾಯಿತು. ಇದರಲ್ಲಿ ೫೦ ಜಿಲ್ಲೆಗಳಿದ್ದು ಇವುಗಳನ್ನು ೧೧ ವಿಭಾಗಗಳಾಗಿ ವಿಭಜಿಸಲಾಗಿದೆ.

ಕರಾಚಿಯ ರಾಷ್ಟ್ರದ ರಾಜಧಾನಿಯೂ ಪ್ರಧಾನ ಬಂದರವೂ ಆಗಿದ್ದು ವಿಶ್ವದಲ್ಲಿಯೆ ಅತಿದೊಡ್ಡ ವಿಮಾನ ನಿಲ್ದಾಣವುಳ್ಳುದಾಗಿದೆ. ಪದಿನೈದು ಅಂತಾರಾಷ್ಟ್ರೀಯ ವಿಮಾನಯಾನಗಳು ಇಲ್ಲಿ ಒಂದು ಗೂಡುತ್ತವೆ.

ಪಶ್ಚಿಮದ ನದಿಗಳು ಒಂದಕ್ಕೊಂದು ಸಮಾನಾಂತರವಾಗಿ ಹರಿದು ಸಿಂಧೂನದಿಗೆ ಸಂಗಮಿಸುತ್ತವೆ. ಅರಬೀಸಮುದ್ರಕ್ಕೆ ಸೇರುವ ಈ ನದಿಯೂ ಇದರಶಾಖೆಗಳೂ ಜಗತ್ತಿನಲ್ಲಿಯೇ ಹಳೆಯದಾದ ಮತ್ತು ದ್ವಿತೀಯ ಸ್ಥಾನವನ್ನು ಪಡೆದ ಪಾಕ್‌ನೀರಾವರಿ ಪದ್ಧತಿಗೆ ಸಹಾಯಕವಾಗಿವೆ.

೨೦ ಡಿಗ್ರಿಯಿಂದ ೩೫ ಡಿಗ್ರಿಗಳ ನಡುವಿರುವ ಈ ರಾಷ್ಟ್ರದ ಎರಡೂ ತುದಿಗಳಲ್ಲಿ ಮಳೆ ಬೆಳೆ ಮತ್ತು ಬೇಸುಗೆಯೆಂಬ ಮೂರು ಕಾಲಗಳಿವೆ. ಹವಾಗುಣ ಉಷ್ಣ. ಪೂರ್ವ ಪಾಕಿಸ್ತಾನವು ಬೆಚ್ಚಗಿದ್ದು ತುಂಬ ಮಳೆಸುರಿಯುವ ಪ್ರದೇಶವಾಗಿದೆ ಈ ಎರಡು ಭಾಗಗಳಿಗೂ ವಾಯು, ಸಮುದ್ರ ಮತ್ತು ರೇಡಿಯೋ, ಟೆಲಿಫೋನುಗಳಿಂದ ಸಂಬಂಧ ಕಲ್ಪಿಸಲ್ಪಟ್ಟಿವೆ.

ಎಳು ಸಾವಿರ ಮೈಲು ಉದ್ದರಸ್ತೆ, ೫೮ ಸಾವಿರ ಮೈಲು ಉನ್ನತ ಮಾರ್ಗಗಳಿಂದ ರೇಡಿಯೋ ಟೆಲಿಫೋನ್‌ಗಳ ಮೂಲಕವೂ ಸಾರಿಗೆ ಸಂಪರ್ಕ ವ್ಯವಸ್ಥೆಯು ನಡೆದಿದೆ. ಹೆಚ್ಚಾಗಿ ನೀರಾವರೀ ಕಾಲುವೆಗಳು ಜಲಮಾರ್ಗಕ್ಕೆ ಅನುಕೂಲವಾಗಿವೆ. ಪಾಕಿಸ್ತಾನದ ಜನಸಂಖ್ಯೆಯಲ್ಲಿ ಐದರಲ್ಲಿ ನಾಲ್ಕು ಪಾಲಷ್ಟು ಕೃಷಿ ಜೀವನವನ್ನು ಬಾಳುವರಾದರೂ ಒಂದು ಲಕ್ಷ ಜನಸಂಖ್ಯೆಗೆ ಏರಿದ ೧೫ ನಗರಗಳು ಅಲ್ಲಿವೆ.

ಪಾಕಿಸ್ತಾನವು ಕೃಷಿಪ್ರಧಾನ ರಾಷ್ಟ್ರ. ಭತ್ತ ಹಾಗೂ ಗೋದಿಗಳು ಮುಖ್ಯ ಬೆಳೆಗಳು. ವರ್ಷಕ್ಕೆ ಸುಮಾರು ೬೦ ಲಕ್ಷ ಬೇಲು ಕಚ್ಚಾ ಸೆಣಬು ಇಲ್ಲಿ ದೊರೆಯುತ್ತದೆ. ಹತ್ತಿಯು ೧೫೫ ಲಕ್ಷ ಬೇಲುಗಳಷ್ಟು ಇದ್ದು, ಉಣ್ಣೆ, ತುಪ್ಪಳ, ಚರ್ಮ, ಜಾನುತ್ತು ಎಣ್ಣೆ ಬೀಜ ಇವುಗಳೆಲ್ಲಾ ಸಾಕಷ್ಟು ನಿರ್ಯಾತವಾಗುತ್ತವೆ.

ಪೂರ್ವಪಾಕಿಸ್ತಾನದಲ್ಲಿ ಸೆಣಬು, ಹತ್ತಿ, ಆಹಾರ ಸಂಬಂಧದ ಉದ್ದಿಮೆಗಳಿವೆ. ಪಶ್ಚಿಮದಲ್ಲಿ ಹಲವಾರು ಕಬ್ಬಿಣ ಮತ್ತು ಉಕ್ಕಿನ ಕೇಂದ್ರಗಳಿದ್ದು ಹಲವಾರು ರೇಲ್ವೆ ಅಂಗಡಿಗಳಿವೆ. ಸರಕಾರೀ ಸಹಾಯದಿಂದ ಆಲ್ಲಿ ಸೆಣಬು, ಕಾಗದ, ಯಾಂತ್ರಿಕ ಸಲಕರಣೆಗಳು, ಸಕ್ಕರೆ, ಸಿಮೆಂಟು ಇತ್ಯಾದಿಗಳ ಖಾರಕಾನೆಗಳು ತೆರೆಯಲಾಗಿವೆ. ಕರಾಕರಣೆ, ನಿರ್ಯಾತಗಳ ಸುಂಕಾದಿಗಳನ್ನು ತಗ್ಗಿಸಿ ಖಾಸಗಿ ಕ್ಷೇತ್ರವನ್ನು ಉತ್ತೇಜಿಸಲಾಗಿದೆ. ಕಾಬುಲ್ ಮತ್ತು ಕರ್ಣಫುಲ್ಲಗಳ ನಡುವಿನ ನದಿಯ ನೀರಿಂದ ಜಲವಿದ್ಯುತ್ತನ್ನು ಸಂಪಾದಿಸಿಕೊಂಡಲ್ಲಿ ವಿವಿಧೋದ್ಯೋಗಗಳಿಗೆ ಸಹಾಯವಾಗುವುದು. ೫೫ ವರ್ಷಗಳ ಆದ ಒಪ್ಪಂದವೊಂದರಂತೆ ಅಮೆರಿಕೆಯು ಕೃಷಿ ಸಂಬಂಧದಲ್ಲಿ ಪಾಕಿಗೆ ನೆರವೀಯುತ್ತಿದೆ.

ಗಂಧಕ, ಕ್ರೋಮೈಟ್, ಪೆಟ್ರೋಲಿಯಂ, ಅಣಿಲು, ಇದ್ದಲು, ಇಲ್ಲಿ ಧಾರಾಳವಿವೆ. ವರ್ಷಕ್ಕೆ ೨೫೦ ಸಾವಿರ ಟನ್ ಕಬ್ಬಿಣವನ್ನೊದಗಿಸಬಲ್ಲ ಹೊಸ ಅದುರುಗಳು ದೌಡ್‌ಮೇಲ್‌ನಲ್ಲಿ ಕಂಡು ಬಂದಿವೆ. ಉಪ್ಪು, ಸುಣ್ಣದ ಕಲ್ಲು, ಮೆಗ್ನೆಸೈಟ್ ಮೊದಲಾದುವೂ ಇಲ್ಲಿ ದೊರೆಯುತ್ತವೆ. ೧೯೫೫ರಲ್ಲೊಂದು ಪಾಂಚವಾರ್ಷಿಕ ಯೋಜನೆಯು ಘೋಷಿಸಲ್ಪಟ್ಟು ಅದರಂತೆ ಈ ಅವಧಿಯಲ್ಲಿ ೩೦ ಲಕ್ಷ ಉದ್ಯೋಗಾವಕಾಶಗಳೂ ಏರ್ಪಡಲಿವೆ.

ಸಿಂಧೂ ನದಿಯ ಕಣಿವೆಯೆಂಬುದು ಆನಾದಿಕಾಲದ ನಾಗರಿಕ ಕೇಂದ್ರವಾಗಿತ್ತು. ಕ್ರಿ. ಪೂ. ೫೦೦೦ರಲ್ಲಿ ಪರ್ಷಿಯದ ದೇರಿಯಸ ಪ್ರಭುವೂ ಕ್ರಿ. ಪೂ. ೩೩೬ರಲ್ಲಿ ಅಲೆಗ್ಸಾಂಡರನೂ ಕ್ರಿ. ಶ. ೭೧೧ರಲ್ಲಿ ಮಹಮದ ಬಿನ್ ಕಾಸೀಮನ ನಾಯಕತ್ವದಲ್ಲಿ ಮುಸ್ಲಿಮರೂ ಇಲ್ಲಿಗೆ ಬಂದಿದ್ದರು. ಕ್ರಿ. ಶ. ೧೧೧೦ರಿಂದಿಲ್ಲಿ ಇಸ್ಲಾಂ ಪ್ರಚಾರವಾಗತೊಡಗಿತು. ೧೩ನೆಯ ಶತಮಾನದ ಕಾಲದಲ್ಲಿ ಶಾಹಜಹಾನನ ಆಸುತನದಲ್ಲಿ ಈ ದೇಶವು ಆತ್ಯನ್ನತಸ್ಥರ ಕ್ಕೆಯಿತ್ತು.

ಭಾರತದೊಂದಿಗೆ ಬ್ರಿಟಿಷರ ಸಶವಾವ ಪಾಕಿಸ್ತಾನವು ೧೯೪—೮—೪೭ರಲ್ಲಿ ಸ್ವತಂತ್ರ ರಾಜ್ಯವಾಯಿತು. ಆಗ ಲಘು ಡೊಮಿನಿಯನ್ ಆಗಿತ್ತು. ಮುಂದದು ತನ್ನದೇ ಆದ ಸಂವಿಧಾನವನ್ನು ತಯಾರಿಸಿ ಪಾರ್ಲಿಮೆಂಟರಿ ಪದ್ಧತಿಯ ಸರಕಾವನ್ನೂ ಇಸ್ಲಾಂಧರ್ಮವನ್ನೂ ಮನ್ನಿಸಿ ೨೩ನೆ ಮಾರ್ಚ್ ೧೯೫೦ರಂದು ಕಾಮನ್‌ವೆಲ್ತಿನೊಳಗಿನ ಪ್ರಜಾರಾಜ್ಯವಾಯಿತು. ೪೭ನೆ ಸಪ್ತಂಬರದಲ್ಲಿ ಯುಕ್ತರಾಷ್ಟ್ರ ಸಂಘದ ೬೭ನೆಯ ರಾಷ್ಟ್ರವೆಂದೆನಿಸಿ ಅದರಲ್ಲಿ ಪ್ರವೇಶಪಡೆಯಿತು. ಕೊಲಂಬೊ ಯೋಜನೆಯ ಸದಸ್ಯ ರಾಷ್ಟ್ರವಾಗಿದ್ದು ೩೫೦ ರ ಜುಲೈಯಲ್ಲಿ ಕಮ್ಯುನಿಸ್ಟರ ಮೇಲೆ ನಿಬಂಧನೆಯನ್ನಿಲ್ಲಿ ೯ರಲ ಯಿತು ಜಮು ಕಾಶ್ಮೀರದ ಒಂದು ಭಾಗವನ್ನಿದು ತನ್ನ ಕೈಯಲ್ಲಿರಿಸಿ, ಉಳಿದುದನ್ನು ಭಾರತದಿಂದ ಪಡೆಯಲು ಹೆಣಗುತ್ತಿದೆ.

ಜನಸಂಖ್ಯೆ ಸೇಕಡಾ೮೬ಷ್ಟು ಮುಸ್ಲಿಮರು. ಒಂದು ಕೋಟಿ ಹಿಂದುಗಳು, ೫ ಲಕ್ಷ ಕ್ರಿಶ್ಚಿಯನ್ನರು, ಕೆಲವರು ಪಾರ್ಸಿ ಬೌದ್ಧರೂ ಇಲ್ಲಿದ್ದಾರೆ. ಅನಿವಾರ್ಯ ನಿಶ್ಯುಲ್ಕ ವಿದ್ಯೆಯು ಕೊಡಲ್ಪಡುತ್ತಿದೆ. ವಯಸ್ಕರ ಶಿಕ್ಷಣಕ್ಕೆ ಪ್ರೋತ್ಸಾಹವಿದೆ. ಉರ್ದು, ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಗಳು ಸರಕಾರೀ ಭಾಷೆಗಳಾಗಿವೆ.

ಪ್ಲೈನ್ಸ್, ನಾರ್ಕಾದಳ, ವಾಯುದಳಗಳು ಪಾಕಿಸ್ತಾನಕ್ಕಿವೆ. ಸೀಟೋ ಮತ್ತು ನಾಟೋಗಳ ಸದಸ್ಯ ರಾಷ್ಟ್ರವೂ ಹೌದು; ಅಮೆರಿಕೆಯೊಡನೆ ಸೈನಿಕ ಒಡಂಬಡಿಕೆಯನ್ನೂ ಇದು ಮಾಡಿಕೊಂಡಿದೆ.

ಇತ್ತೀಚೆಗೆ ಇಲ್ಲಿ ನಡೆದ ಗೊಂಬಲದಿಂದ ಎಲ್ಲ ರಾಜಕೀಯ ಪಕ್ಷಗಳೂ ನಿರ್ನಾಮವಾಗಿ, ಪ್ರಜಾಸ್ವಭುತ್ವವು ಕೊನೆಗೊಂಡು, ಸೈನಿಕ ಕಾಯದೆಯಂತೆ ಮುನ್ನಡೆಯುತ್ತಿದೆ. ಅಯೂಬ ಖಾನರೇ (ಮೇಜರ್ ಜನರಲ್) ಅಧ್ಯಕ್ಷರೂ ಪ್ರಧಾನಿಯೂ ಆಗಿ ರಾಜ್ಯವಾಡುತಿದ್ದಾರೆ.

ವಿನೋದ ವಿಹಾರ

ಓದುವಿರಾದರೆ ನಕ್ಕುನಲಿಯಿ ಬಹುದು.

ಇದೀಗ ಸಲಹೆ

ನುಗನೊಬ್ಬ ಹಿಂದಿನ ರಾತ್ರಿ ಸ್ವಪ್ನದಲ್ಲಿ ಒರ್ವ ದುಷ್ಟನು ಕಾಣಿಸಿಕೊಂಡು ತನ್ನನ್ನು ಜೀನ್ನಾಗಿ ಥಳಿಸಿದನೆಂದೂ ಹೇಳಿ ಅದಕ್ಕೆ ಪರಿಹಾರೋಪಾಯವನ್ನೇನೆಂದೂ ವಿಚಾರಿಸಿದನು.

ತಂದೆ ಗಂಭೀರವಾಗಿ ವಿಚಾರವನ್ನು ವಿಮರ್ಶಿಸಿ ಸಲಹೆಯಿತ್ತನು; ಹಾಗಾಗದೆ ಇಂದು ರಾತ್ರಿ ನಲಗುವ ಸಮಯ ಒಂದು ದೊಣ್ಣೆಯನ್ನು ಸಮೀಪದಲ್ಲಿಟ್ಟುಕೊಂಡು ನೀನೆ ಸುನಃ ನಿನ್ನೆದುರು ಆತ ಬಂದರೂ ಆದಂಡ ಹೆದರದೆ ನೀನೂ ನಾಲ್ಕು ಥಳಿಸಿಬಿಡು.

ಅನುಭವ ಸಿದ್ಧ

ಹುಲ್ಲು ತಿಂದರೆ ಕಣ್ಣು ಕುರುಡಾಗುತ್ತದೆ' ಎಂಬ ಗಂಭೀರ ವಿಷಯದ ಮೇಲೆ ಇರ್ವರೊಳಗೆ ಚರ್ಚೆ ನಡೆದಿತ್ತು. ಆಗ, ಅದು ವಿಕೋಪಕ್ಕೆ ಹೋಗುವ ಸಂದರ್ಭವಿತ್ತು. ಇದನ್ನು ಸಮರ್ಥಿಸುವಾತ ವಿರೋಧಿಸುವವನೊಡನೆ ಪ್ರಶ್ನಿಸಿದ -ಇದರಿಂದ ಕಣ್ಣು ಕುರುಡಾಗುವುದಿಲ್ಲ ಎಂಬುದಕ್ಕೆ ನೀನೇನು ಆಧಾರಗಳನ್ನು ಕೊಡಬಲ್ಲೆ;ನೋಡೋಣ,

ವಿಷಯವನ್ನು ಪ್ರತಿಭಟಿಸುವವನು ಶಾಂತ ಮನಸ್ಕನಾಗಿ ತನ್ನ ಅನುಭವವನ್ನು ವಿವರಿಸಿದ -ನೋಡಪ್ಪ, ಸ್ಪಪಂಚದಲ್ಲಿ ಹುಲ್ಲುಮೇಯುವ ಪ್ರಾಣಿಗಳಿವೆ.

ಹೌದು, ಇದ್ದರೇನು ?—ಮೊದಲಿನವ ಪ್ರಶ್ನಿಸಿದ.

(೯ನೇ ಪುಟ ನೋಡಿರಿ)

ಉತ್ತರ ಇಂಡಿಯಾ ೬೦ ತೀರ್ಥಯಾತ್ರೆಗಳಿಗೆ ಹಾಗೂ ಮಹಾಶಿವರಾತ್ರಿ-ಮಹೋತ್ಸವಕ್ಕೆ-
ಭೋಳೇಕೈಲಾಸ ಶ್ರೀ ಕಾಶೀಕ್ಷೇತ್ರದಲ್ಲಿ
ಮುಖ್ಯಾಮ್-
ರೈತರಿಗೆ ಅರ್ಧ ಚಾರ್ಜು
ಕೇವಲ ೧೧೦ ರೂಪಾಯಿ
ಮೈಸೂರು ಸರಕಾರದ ಪ್ರತಿನಿಧಿಗಳಾಗಿ
ಅತ್ಯಂತ ಸುಲಭ ದರದಲ್ಲಿ ಒಳ್ಳೆಯ
ಸುಖಕರವಾದ ಪ್ರವಾಸ:—
[ದ್ವಾರಕಾ ಸೋಮನಾಥಕ್ಕೂ ಹೋಗಿ ಬರುವದು]
೫೦೦ ಜನರ ಸ್ಪೆಶಲ್ ಟ್ರೇನ್
ಶ್ರೀ ಕಾಶೀ, ಗಯಾ, ಸಮೇದಶಿಖರ, ದಿಲ್ಲಿ ಹರಿದ್ವಾರ, ಆಗ್ರಾ, ಮಥುರಾ, ಮುಂಬಯಿ ಮೊದಲಾದ ಅನೇಕ ೬೦ ತೀರ್ಥಯಾತ್ರೆಗೆ ಬರತಕ್ಕೆವರು ತ್ವರೆ ಮಾಡಿರಿ. ಪೂರ್ಣ ಮಾಹಿತಿ ಜಾಹೀರಾತು ನೋಡಿರಿ. ಲಗತ್ತ ೩ ಆಣೆ ತಿಕೀಟ ಕಳಿಸಿರಿ—ವಿವರಗಳಿಗೆ—
ಶ್ರೀ ಶಿವಾನಂದ ಯಾತ್ರಾ ಕಂಪನಿ,
ಬನಹಟ್ಟಿ,
ಪೋಸ್ಟ ಬನಹಟ್ಟಿ. (ಜಿ. ವಿಜಾಪೂರ)

ಯಾವ ಮನುಷ್ಯನಿಗಾದರೂ, ಯಾವ ವೇಳೆಯಲ್ಲೂ, ಯಾವುದೇ ಕಾರಣಕ್ಕಾಗಿ ಉಳಿತಾಯಗಳ ಬೆಂಬಲವು ಬೇಕಾಗಬಹುದು. ಅಂತಲೇ ನೀವು ಯೋಗ್ಯವಿರುವ ಉಳಿತಾಯ ಯೋಜನೆಯನ್ನು ಈಗಿಂದೀಗಲೇ ಅನುಸರಿಸುವುದು ಅತೀ ಅಗತ್ಯ. ಇದಕ್ಕಾಗಿ ನಿನಗೆ ಬೇಕಾದ ಸಲಹೆ-ಸಹಕಾರಗಳನ್ನು ಕೊಡಲು ನಾವು ಸದಾ ಸಿದ್ಧರಿದ್ದೇವೆ!

ಇಂದೇ ವಿಚಾರಿಸಿರಿ!

ವಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಛೇರಿ: ಉಡುಪಿ (ದ. ಭಾರತ)

ಬಾಲಹಿತ ಚಿಂತನ

ದಿನಾಚರಣೆಯಿಂದಲೇ ಏಳಿಗೆಯಾಗಲಾರದು

ದಿನನಿತ್ಯ ಪ್ರಯಾಸಪಟ್ಟಕ್ಕೇನೇ ಬಾಲಕ ಬಾಲಿಕೆಯರ ಹಿತ ಸಾಧಿಸಲು ಸಾಧ್ಯವೆನಿಸೀತು.

ನವೆಂಬರ್ ೧೪ ಮಕ್ಕಳ ದಿನಾಚರಣೆ. ಆ ದಿನ ಮಕ್ಕಳದು ವಿಶೇಷ ಸಂಭ್ರಮ; ಅವರ ನಕ್ಕುನಲಿಯುವ ದಿನ. ಮಕ್ಕಳು ರಾದ ನಮ್ಮ ಪಾಲಿಗೆ ಅದು ಒಂದು ಗಂಭೀರ ಸಿಧಾರಕ್ಕೆ ಬರುವ ದಿನ.

ಪ್ರತಿ ವರ್ಷ ಈ ದಿನ ವಯಸ್ಕರಾದ ನರು ಅನುಸರಿಸಬೇಕಾದ ಹಿಂದಲ್ಲ ಒಂದು ಕಾರ್ಯಕ್ರಮದ ಕಡೆಗೆ ಮಕ್ಕಳ ಯೋಗಕ್ಷೇಮಕ್ಕೆ ಸಂಬಂಧಿಸಿದ ಅಂತಾ ರಾಷ್ಟ್ರೀಯ ಸಂಸ್ಥೆ ಯುನ್ನು ವಿಶ್ವಸಂಸ್ಥೆಯ ಅಂಗ ಸಂಸ್ಥೆಯಾದ 'ಯೂನಿಸೆಫ್' ಸಾರ್ವಜನಿಕ ಗಮನವನ್ನು ಸೆಳೆಯುತ್ತವೆ.

"ಕಾಯಿಲೆ ಬಿದ್ದಿರುವ ಮಕ್ಕಳ ಶುಶ್ರೂಷೆ ಮಾಡಿ; ಅಂಗವಿಹೀನರಾಗಿರುವ ಮಕ್ಕಳಿಗೆ ನೆರವು ನೀಡಿ," ಎಂಬುದು ಈ ವರ್ಷದ ಸೂಚನೆ.

ಕಾಯಿತಂದೆಗಳು ಮತ್ತು ಮಕ್ಕಳ ಹಿತೈಷಿಗಳೆಲ್ಲರೂ ಈ ಸೂಚನೆಯನ್ನು ತುಂಬಾ ಮೆಚ್ಚತ್ತಾರೆಂಬ ದು ನಿಜ. ನಲಿಯುತ್ತಿರುವ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸರ್ಕಾರದ ಹಾಗೂ ಸಮಾಜದ ಅದ್ಯ ಕರ್ತವ್ಯವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಈ ಕಾರ್ಯ ನಿರ್ವಹಿಸುವಾಗ, ಬೆಳೆಯುತ್ತಲೇ ಇರುವ ಜನಸಂಖ್ಯೆ, ಮಕ್ಕಳ ಯೋಗ ಕ್ಷೇಮ ನೋಡಿಕೊಳ್ಳುವವರಲ್ಲಿ ಒಳ್ಳೆ ತಜ್ಞರಾದವರ ಅಭಾವ ವೈದ್ಯರು, ನರ್ಸುಗಳು, ಆಸ್ಪತ್ರೆಗಳು ಇವರೇ ನೋದಲಾದವರ ಅಭಾವ—ಹೀಗೆ ನಾನಾ ರೀತಿಯ ಅಡ್ಡಿ ಆತಂಕಗಳನ್ನು ನಾವು ಎದುರಿಸಬೇಕಾಗುತ್ತದೆ. ಇವುಗಳನ್ನು ಒದಗಿಸುವುದಕ್ಕೆ ಬೇಕಾದ ಹಣಸಾಲಭ್ಯದ ಭಾರಿ ಕೊರತೆಯೂ ಒಂದು ದೊಡ್ಡ ಆತಂಕವಾಗಿದೆ. ಇವೆಲ್ಲಕ್ಕೂ ಮೇಲಾಗಿ ನರಳುತ್ತಿರುವ ಮಗು ಬಯಸುವ ವಿಶೇಷ ಅಗತ್ಯಗಳೇನು ಎಂಬುದನ್ನು ಸಮಾಜ ತಿಳಿಯದಿರುವುದು ಇನ್ನೂ ದೊಡ್ಡ ಕೊರತೆ.

ಈ ವಿಚಾರದಲ್ಲಿ ಸಾರ್ವಜನಿಕ ಆಕ್ತಿಯನ್ನು ಮುಖ್ಯವಾಗಿ ಕೆರಳಿಸಬೇಕು ಮತ್ತು ಮಕ್ಕಳ ಯೋಗ ಕ್ಷೇಮಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಯೋಗ್ಯ ಅವಕಾಶ ಕಲ್ಪಿಸಬೇಕು.

ಅದರೆ ಯೋಜನೆಗಳ ಮೂಲಕನೇ ಕಾರ್ಯಸಿದ್ಧಿಗಾಗಿ ಕಾಯುವುದರಿಂದ ಕಾಲವಿಳಂಬವಾಗುತ್ತದೆ. ಇದೊಂದು ತುರ್ತಿನ ಸಮಸ್ಯೆ. ಆದದರಿಂದ ಕೂಡಲೆ ಇದನ್ನು ಪರಿಹರಿಸಲು ಪ್ರಯತ್ನಿಸಬೇಕಾದ ಅಗತ್ಯವಿದೆ. ಇಂದಿನ ಮಗುವು ಮಗುವಾಗಿಯೇ ಉಳಿಯಲು ಸಾಧ್ಯವಿಲ್ಲ; ಹೋದ ಬಾಲ್ಯ ಮತ್ತೆ ಬರದು. ಮಮ ಸ್ಯೆಗೆ ಸಂಬಂಧಿಸಿದಂತೆ ನಾವು ಕಯಾರಿಸುವ ಯೋಜನೆ ಕಾಯಬಹುದು. ಆದರೆ ಮಕ್ಕಳ ಯೋಗಕ್ಷೇಮಕ್ಕೆ ಸಂಬಂಧಿಸಿದ ಯೋಜನೆಯಲ್ಲಿ ಕಾರ್ಯವಿಳಂಬವಾದರೆ ಆ ಒಂದು ಪೀಳಿಗೆಯ ವರ್ಗಕ್ಕೆ ನಾವು ಸೇವೆ ಸಲ್ಲಿಸುವ ಅವಕಾಶವನ್ನೇ ಕಳೆದುಕೊಳ್ಳುತ್ತೇವೆ. ಕೇವಲ ಯೋಜನೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದರಿಂದ ನಾವಿನ್ನು ಸುಮ್ಮನೆ ಕೋಟ್ಯಂತರ ಮಕ್ಕಳ ಯೋಗಕ್ಕನ್ನು ನೋಡಿಕೊಂಡುತಾಗುವುದಿಲ್ಲ ಒಂದೊಂದು ಮಗುವಿನ ಹಿತ ಕಾಪಾಡುವುದಕ್ಕೂ ನಾವು ಗಮನ ಕೊಡಬೇಕು.

ಮಕ್ಕಳ ಯೋಗಕ್ಷೇಮದ ಜವಾಬ್ದಾರಿಯನ್ನು ಪ್ರತಿಯೊಬ್ಬರೂ ನಿರ್ವಹಿಸಬೇಕಾಗಿದೆ ಒಂದು ಸಂಸ್ಥೆಯೇ ಆಗಲಿ, ಒಬ್ಬ ವ್ಯಕ್ತಿಯೇ ಆಗಲಿ, ತಾಯಿತಂದೆಗಳೇ ಆಗಲಿ, ಉಪಾಧ್ಯಾಯನೇ ಆಗಲಿ ಅವನ ಜವಾಬ್ದಾರಿ ಹಿರಿದು.

ನಮ್ಮಲ್ಲೀ ರೀತಿಯ ಸಮಸ್ಯೆಗಳಿರುವ ಚೀನಾದಲ್ಲಿ ಈ ಸಮಸ್ಯೆಗಳನ್ನು ಎದುರಿಸಿ ನಿಲ್ಲುವ ಪ್ರಯತ್ನ ನಡೆಯುತ್ತಿದೆ. ಮಕ್ಕಳಿಗೆ ರೋಗಗಳು ಬರದಂತೆ ನೋಡಿಕೊಳ್ಳುವ ಅಥವಾ ಕೂಡಲೇ ರೋಗದ ಚಿಕಿತ್ಸೆಗೆ ವ್ಯವಸ್ಥೆ ಮಾಡುವ ಪ್ರಯತ್ನ ವಡೆದಿದೆ. ಹೀಗೆ ಮಾಡುವುದರಿಂದ ಸಮಸ್ಯೆ ಎಷ್ಟೋ ಸುಲಭವಾಗುತ್ತದೆ.

ಮಕ್ಕಳ ಆರೋಗ್ಯವನ್ನು ಕಾಪಾಡುವ ಕಾರ್ಯಕ್ಕೆ ಕೈಯಾಕ್ಯವಾಗ ಇಂತಹ ಮುಂಜಾಗರೂಕತೆ ಕ್ರಮಕ್ಕೆ ಹೆಚ್ಚಿನ ಪ್ರಾಮು ಖ್ಯ ಕೊಡಬೇಕಾಗುತ್ತದೆ. ಬಾಲ್ಯದಲ್ಲಿಯೇ ಮಕ್ಕಳಿಗೆ ಉಪ್ಪನು ಅರೋಪನ್ನು ಕಾಪಾಡಿಕೊಂಡು ಹೋಗಲು ಬೇಕಾಗುವ ಪರಿಪಾಟ ಹಾಕಬೇಕಾಗುತ್ತದೆ. ಇಂದಿನ ಪದಪಾಟವೇ ನಾಳೆಯೂ ಅವರಲ್ಲಿ ಉಳಿಯುತ್ತದೆ.

ಉತ್ತಮ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಆಹಾರ ಮುಖ್ಯವಾಗುತ್ತದೆ. ಇದಕ್ಕೆ ಸಂಬಂಧವಾದ ಪರಿಪಾಟದಿಂದ ಒಳ್ಳೆಯ ಪರಿಣಾಮಗಳೂ ಆಗಬಹುದು; ಕೆಟ್ಟ ಪರಿಣಾಮಗಳೂ ಆಗಬಹುದು. ಮಾನವನ ವ್ಯಕ್ತಿತ್ವಕ್ಕೂ ಆಹಾರದ ಸೇವನೆಗೂ ನಿಕಟವಾದ ಸಂಬಂಧವಿದೆ. ಹಿತಮಿತವಾದ ಆಹಾರ ಸೇವನೆಯಿಂದ ವ್ಯಕ್ತಿತ್ವದ ಸೀಲೆ ತುಂಬಾ ಪರಿಣಾಮವಾಗುತ್ತದೆ.

ಆಹಾರ ಸೇವನೆಗೆ ಸಂಬಂಧಿಸಿದಂತೆ ಒಳ್ಳೆ ಪರಿಪಾಟ ಹಾಕುವುದು ತಾಯಿ-ತಂದೆಗಳ ಜವಾಬ್ದಾರಿ ಮಕ್ಕಳ ಮನೋವೃತ್ತಿ ಹಾಗೂ ಆಹಾರದ ಪೌಷ್ಟಿಕತೆಗಳಿಗೆ ಸಂಬಂಧಿಸಿದ ಅರಿವು ಬೇಕಾಗುತ್ತದೆ. ಬಾಲ್ಯದಲ್ಲಿ ಮಕ್ಕಳಿಗೆ ಹಾಕುವ ಪರಿಪಾಟ ಕೊನೆಯ ವರೆಗೂ ಉಳಿಯುತ್ತದೆಯಲ್ಲದೆ ಅವರ ಆರೋಗ್ಯ ಮತ್ತು ಸಾಮಾಜಿಕ ಸ್ಥಾನಮಾನಗಳ ಮೇಲೆ ಮುಂದೆ ಅದು ತುಂಬಾ ಪರಿಣಾಮಕಾರಿಯಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಮಕ್ಕಳ ಈ ಪರಿಪಾಟಗಳು ಅವರ ಪೋಷಕರ ಜೀವನ ಕ್ರಮದ ಮೇಲೂ ಸಾಕಷ್ಟು ಬೆಳಕು ಚೆಲ್ಲುತ್ತದೆ ಯಾವ ಮನೆಯಲ್ಲಿ ಹಿತಮಿತವಾಗಿ ಯಾವ ಮಾನಸಿಕ ಒತ್ತಾಯವೂ ಇಲ್ಲದೆ ಆಹಾರ ಬಡಿಸಲ್ಪಡುತ್ತದೆಯೋ ಆ ಮನೆಯ ಮಕ್ಕಳು ಜೀವನದಲ್ಲಿ ಹೊಂದಿಕೊಂಡು ಹೋಗುವ ಮನೋಭಾವನವನ್ನು ಬೆಳಸಿಕೊಳ್ಳುತ್ತವೆ.

ದೊಡ್ಡವರಿಗಿಂತಲೂ ಮಕ್ಕಳು ಹೆಚ್ಚು ಸೂಕ್ಷ್ಮ ಸ್ವಭಾವದವರು. ಆವುದೇ ಬಹು ಬೇಗ ಭಾವಪರವಶವಾಗುತ್ತವೆ. ಹೆದರಿಸಿ ಬೆದರಿಸಿ ಕಲಿಸಲು ಹೋಗುವುದರಿಂದ ಅವು ಗಾಬರಿಗೊಳ್ಳುತ್ತವೆ. ಗೊತ್ತಾದ ಸಮಯಕ್ಕೆ ಊಟಮಾಡುವುದು ಮತ್ತು ಗೊತ್ತಾದ ಸಮಯಕ್ಕೆ ಮಲಗುವುದ ಈ ಪರಿಪಾಟ ಹಾಕುವುದು ಬಹಳ ಅಗತ್ಯ.

ಶಾಲೆಗೆ ಹೋಗುವ ಅಸಂಖ್ಯಾತ ಮಕ್ಕಳು ಸಾಕಷ್ಟು ಆಹಾರ ವ್ಯವಸ್ಥೆಯಿಲ್ಲದೆ ತುಂಬಾ ಹಿಂದುಳಿದಿವೆ. ಎಷ್ಟೋ ಕಡೆ ಅವರಿಗಾಗಿಯೇ ಎಂದೆ ಮಧ್ಯಾಹ್ನದ ಊಟದ ವ್ಯವಸ್ಥೆಯೂ ನಡೆದಿದೆ. ಈ ವ್ಯವಸ್ಥೆ ಇಡೀ ದೇಶಕ್ಕೆ ವ್ಯಾಪಿಸುವಂತೆ ವಿಸ್ತರಿಸಲ್ಪಡಬೇಕು.

ಪ್ರತಿಯೊಂದು ಮಗುವಿಗೂ ಕಡ್ಡಾಯವಾಗಿ ಶಾಲೆಗಳಲ್ಲಿ ವೈದ್ಯಕೀಯ ಪರೀಕ್ಷೆ ನಡೆಯುವ ವ್ಯವಸ್ಥೆ ಆಗಬೇಕು. ಆಗ ತೆಗೆದು ಬರುವ ಸಂದರ್ಭಗಳಲ್ಲಿ ಮುಂದಿನ ಚಿಕಿತ್ಸೆಗೂ ವ್ಯವಸ್ಥೆಯಾಗಬೇಕು. 'ಇಮ್ಯುನೈಸೇಷನ್' ಹಾಕಿಸುವ ಅಗತ್ಯವನ್ನು ಈಗಂತೂ ಮಾನ್ಯಮಾಡಲಾಗಿದೆ. ಆದರೆ 'ಇನಾಕ್ಯುಲೇಷನ್' ಇತ್ಯಾದಿ ಇತರ ಮುಂಜಾಗರೂಕತೆ ಕ್ರಮಗಳನ್ನು ಅನುಸರಿಸಲು ಜನ ಇನ್ನೂ ಮುಂದೆ ಬರುತ್ತಿಲ್ಲ.

ಪೌಷ್ಟಿಕ ಆಹಾರದ ಪರೀಕ್ಷೆ, ಶಾಲಾ ವಿದ್ಯಾರ್ಥಿಗಳ ಆರೋಗ್ಯ ರಕ್ಷಣೆ ಹಾಗೂ ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ, ರಸ್ತೆ ಅನಾಹುತಗಳಿಂದ ರಕ್ಷಣೆ ಇತ್ಯಾದಿಗಳ ಬಗ್ಗೆ ಸಾಮಾನ್ಯ ತಿಳಿವಳಿಗೆ ಕೊಡುವುದನ್ನೂ ಪಾಠಶಾಲಾ ವಿಜ್ಞಾನಗಳಲ್ಲಿ ಸೇರಿಸಬೇಕು. ಆಸ್ಪತ್ರೆ ಮತ್ತು ವೈದ್ಯಕೀಯ ಸಲಹೆ ಇವುಗಳ ಪ್ರಯೋಜನ ಪಡೆಯುವ ಮನೋಭಾವ ಬೆಳೆಯುವಂತೆಯೂ ನೋಡಿಕೊಳ್ಳಬೇಕು. ಇದರಿಂದ ಜೀವನದ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸುವ ಒಂದು ಮನೋಭಾವ ಮಕ್ಕಳ ವ್ಯಕ್ತಿತ್ವ ದಲ್ಲಿ ಬೆಳೆಯುತ್ತದೆ.

ಶಾಲೆಗಳಲ್ಲಿ ಅತ್ಯಾವಶ್ಯಕ ವ್ಯವಸ್ಥೆಯಾಗಬೇಕಾದ ಇನ್ನೊಂದು ಕಾರ್ಯಕ್ರಮವೆಂದರೆ ವ್ಯಾಯಾಮ. ಇದು ಮಕ್ಕಳಿಗೆ ತುಂಬಾ ಆವಶ್ಯಕ. ಹಠಹೋಗದಲ್ಲಿ ಸೂಚಿತವಾಗಿರುವ ಭಾರತೀಯ ವ್ಯಾಯಾಮ ಪದ್ಧತಿ ದೇಹಕ್ಕೂ ಮನಸಿಗೂ ತುಂಬಾ ತುಷ್ಟಿದಾಯಕವಾಗುತ್ತದೆ; ನಮ್ಮ ಎಷ್ಟೋ ಶಾಲೆಗಳಲ್ಲಿ ಬಳಕೆಯಲ್ಲಿರುವ 'ಡಮ್ಬೆಲ್ ಡ್ರಿಲ್' ವ್ಯಾಯಾಮಕ್ಕಿಂತಲೂ ಹೆಚ್ಚು ಪ್ರಯೋಜನಕಾರಿಯಾಗುತ್ತದೆ.

ಭಾರತದಲ್ಲಿ ನೀರಿನ ಅಸಹಜತೆಗಳಿಗೆ ಸಿಕ್ಕಿ ಸಾಯುವ ಮಕ್ಕಳ ಸಂಖ್ಯೆ ವಿಪರೀತವಾಗಿದೆ. ಈಜುವ ವಿಧಾನಗಳಲ್ಲಿ ಶಿಕ್ಷಣ ಕೊಟ್ಟು ಅಂಥ ಅಪಘಾತಗಳಿಂದ ಪಾರಾಗುವ ವಿಧಾನಗಳನ್ನು ಕಲಿಸುವುದೂ ಮಕ್ಕಳಿಗೆ ತುಂಬಾ ಲಾಭದಾಯಕವಾಗುತ್ತದೆ. ಈ ವ್ಯಾಯಾಮ ಶಿಕ್ಷಣದಿಂದ ಮಕ್ಕಳಲ್ಲಿ ಆತ್ಮವಿಶ್ವಾಸವೂ ಬೆಳೆಯುತ್ತದೆ.

ದೈಹಿಕವಾಗಿ ಮತ್ತು ಮಾನಸಿಕವಾಗಿ ಅಂಗವಿಹೀನರಾಗಿರುವ ಮಕ್ಕಳ ಯೋಗ ಕ್ಷೇಮ ನೋಡಿಕೊಳ್ಳುವ ಸಂಸ್ಥೆಗಳು ಬಹಳ ವಿರಳ. ಭಾರತಾದ್ಯಂತ ಇಂತಹ ನೂರಿಪ್ಪತ್ತು ಸಂಸ್ಥೆಗಳಿದ್ದರೆ ಹೆಚ್ಚು. ಈ ವಿಚಾರದಲ್ಲಿ ತಜ್ಞರ ಆವಶ್ಯಕತೆಯೂ ಬಹಳವಿದೆ.

ನಮ್ಮ ದೇಶದಲ್ಲಿ ಡಿಸ್ಟ್ರೋಗೀಕರಣ ಬೇಕಿದಂತೆಲ್ಲ ಮಕ್ಕಳಿಗೆ ಸುರಕ್ಷತೆಗೆ ಸಂಬಂಧಿಸಿದ ಶಿಕ್ಷಣದ ಆವಶ್ಯಕತೆ ಹೆಚ್ಚುತ್ತದೆ. ಯೂರೋಪ್ ಮತ್ತು ಅಮೆರಿಕಗಳಲ್ಲಿನ ವಿದ್ಯಾ ಸಂಸ್ಥೆಗಳು ಈ ಅಂಶಕ್ಕೆ ವಿಶೇಷ ಪ್ರಾಧಾನ್ಯ ಕೊಟ್ಟಿವೆ. ಸರ್ಕಾರ ವಿಧಿಸುವ ರಸ್ತೆ ನಿಯಮಗಳು ಇತ್ಯಾದಿ ಆಡಳಿತ ವ್ಯವಸ್ಥೆಗಳು ಸಾರ್ವಜನಿಕ ಹಿತ ದೃಷ್ಟಿಯಿಂದ ಕೈಗೊಂಡಿರುವ ವ್ಯವಸ್ಥೆಗಳು ಎಂಬ ತಿಳಿವಳಿಕೆ ಬಾಲ್ಯದಿಂದಲೇ ಮಕ್ಕಳಲ್ಲಿ ಉಂಟಾದರೆ ಅವಾಲ್ಲಿ ಸರ್ಕಾರದ ಬಗ್ಗೆ ಒಂದು ಸರ್ಕಾರ ಮನೋಭಾವ ಬೆಳೆಯಲೂ ಸಾಧ್ಯವಾಗುತ್ತದೆ.

ಮಕ್ಕಳ ದಿನಾಚರಣೆ ಇಂದು ನಮ್ಮ ರಾಷ್ಟ್ರೀಯ ಜೀವನದ ಒಂದು ಭಾಗವಾಗಿ ಹೋಗಿದೆ. ಆದರೆ ಮಕ್ಕಳ ದಿನಾಚರಣೆಯಿಂದಿನ ಕೆಲಸ ಒಂದು ದಿನದ ಮಟ್ಟಿನ ಕೆಲಸವಲ್ಲ; ಇಡೀ ವರ್ಷದಲ್ಲಿ ಪ್ರತಿಯೊಂದು ದಿನವೂ ನಡೆಯಬೇಕಾದ ಕೆಲಸ. ಈ ಕಾರಣ, ಭಾರತದಲ್ಲಿ ಮಕ್ಕಳ ಹಿತರಕ್ಷಣೆ ಕಾರ್ಯದ ಚಿಳವಳಿಯನ್ನು ಬಲಗೊಳಿಸಲು ಸಾರ್ವಜನಿಕರು ಸಂಘಟಿತರಾಗಿ ಮುಂದೆ ಬಂದು ನಿಲ್ಲುವ ರೆಂದು ಭಾವಿಸಿದ್ದೇನೆ.

(ಆಕಾಶವಾಣಿ ಸೌಜನ್ಯದಿಂದ)

NOTICE

In the Court of the District Munsif of Coondapoor

O. S. No. 288/58.

Between:

Subraya Mithanthaya ... Plaintiff.

and

Venkatakrishna Maiya ... Defendant.

To,

Sri. Venkatakrishna Maiya son of Anantha Maiya residing at Geraje of Haladi village Coondapoor Taluk.

Please take notice that the plaintiff had filed the above suit against you for recovering the sum of Rs. 560—00 N.P. due from you in respect of the promote executed by you in favour of the plaintiff on 5—9—1952. The said suit stands posted to 10—12—1958 before the above court. You are hereby requested to appear before the above court on 10—12—58 at 11 A. M. either in person or through a duly instructed pleader, failing which you will be declared exparte and further orders will be passed in your absence.

(By order of court)

Sd K. Ramappayya-B.A.B.L.
Advocate for Plaintiff.

Coondapoor, 14 -11—1958.

೨೦ ವರ್ಷ ಗಳಿಂದಲೂ ಪ್ರಸಿದ್ಧ ಇದೆ.

ಮಲೇರಿಯಾ ಇನ್ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ

ಎಲ್ಲ ಕೆಮಿಸ್ಟರಲ್ಲಿ ಗ್ರೋಸರಿಯಲ್ಲಿ ದೊರೆಯುತ್ತವೆ.

ಬಾಟಿವಾಲಾ ಎಗ್ಮೂಮಿಕ್ಶರ

ಮತ್ತು ಗುಳಿಗೆಗಳು

ತಯಾರು ಮಾಡುವ ನಿರ್ಮಾಪಕರು: ಹರ್ಬರ್ಟ್‌ಸನ್ಸ್ ಫಾರ್ಮಾಸ್ಯೂಟಿಕಲ್ ಲಿಮಿಟೆಡ್, ಬ್ರಾಡ್ವೇ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಹುಸೇಪೆ ಮಾತುವನವರೂ ನಿರ್ಧನರೂ ಬಡವರಲ್ಲ; ಆತ್ಮಾಭಿಮಾನ ವ್ಯಕ್ತಿತ್ವಗಳನ್ನು ಕಳೆದುಕೊಂಡು ಸ್ವಪ್ರತಿಭೆಗೆ ಕಲಂಕ ತಂದು ಕೊಳ್ಳುವವರೂ ತನ್ನ ಆದಾಯಕ್ಕಿಂತ ಮಿಕ್ಕಿ ವೆಚ್ಚಮಾಡುವವರೂ ನಿಜವಾದ ದರಿದ್ರರು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೨೦-೧೧-೧೯೫೮	೧೧

ವ್ಯಕ್ತಿ ಮತ್ತು ಪಕ್ಷಗಳು

ನಿರಂಕುಶಾಧಿಕಾರಿಯಿಂದ ಬೇಸತ್ತ ಜನತೆಯು ಸ್ವಾತಂತ್ರ್ಯವನ್ನು ಪಡೆದು ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಂಡಿತು; ಪಕ್ಷಪದ್ಧತಿಯ ಶಾಸನಕ್ರಮವನ್ನು ರೂಪಿಸಿಕೊಂಡಿತು. ಆದರೆ, ಈ "ಪಕ್ಷ ಪದ್ಧತಿ"ಯೇ ಒಂದು ನಿರಂಕುಶಾಧಿಕಾರೀ ರೂಪವನ್ನು ಕೆಲವು ವೇಳೆ ತಾಳುತ್ತದೆ. ಇಂತಹ ಕಡೆಗಳಲ್ಲಿ ಪಕ್ಷದ ಹಿಡಿತವು ಬಲವಾಗಿದ್ದು, ತನ್ನ ಸದಸ್ಯರೆಲ್ಲರನ್ನೂ ಅದು ತನ್ನ ಮುಷ್ಠಿಯಲ್ಲಿಟ್ಟುಕೊಳ್ಳುತ್ತದೆ; ಆ ಪಕ್ಷದ ನಾಯಕತ್ವವನ್ನು ತಾನು ಕಪಿಲಿಗಿಂತಲೂ ಧಾರಾಳಿಗೊಳಿಸಿರುವುದಾಗಿಯೂ ಘೋಷಿಸಿ ಸೋವಿಯತ್ತನ್ನು ಪ್ರಪಂಚವು ತಪ್ಪಾಗಿ ತಿಳಿದಿದೆಯೆಂಬಂತೆ ದೂರಿ, ತಮ್ಮ ಉದಾರ ಧೋರಣೆಯನ್ನು ಜಗತ್ತು ಅಥವಿಸಬೇಕೆಂಬಂತೆ ನಾನಾ ಭಂಗಿಯಿಂದ ಅಭಿವ್ಯಾಪಿಸುತ್ತಿದ್ದರು. ಆದರೆ ತನ್ನನ್ನು ನೆರೆಯಂತೆ ಅನುಸರಿಸುತ್ತಿದ್ದ ಅಂತಹ "ಬೋಳು ತಲೆಯ ಬಲ್ಗಾನಿನ"ರನ್ನೂ ಪಟ್ಟದಿಂದ ದೂಡಿ, ತಾನು ಸ್ವಯಂ ಉಭಯಾಧಿಕಾರಗಳನ್ನೂ ವಿರಾಜಮಾನರಾಗಿದ್ದಾರೆ. ಆದರೆ, ಇಷ್ಟೇ ಆಗಿದ್ದರೆ ತೊಂದರೆಯೆನಿಸುತ್ತಿರಲಿಲ್ಲ. ಪ್ರಪಂಚದ ರಾಷ್ಟ್ರಗಳೂ ರಷ್ಯದ ಬಗ್ಗೆ ಈಗ ಪುನಃ ತಪ್ಪು ಭಾವನೆ ಕಟ್ಟಿಕೊಳ್ಳುವ ಪ್ರಮೇಯವಿರಲಿಲ್ಲ ಸದ್ಯ. ಅಂತಹ ಬಲ್ಗಾನಿನರನ್ನು ಈಗ, ಹಿಂದೆ "ಪಕ್ಷ ದ್ರೋಹಿ"ಗಳ ಸಾಲಿಗೆ ಸೇರಿದ ಮೆಲಂಕೋವ್, ಕಗನೋವಿಚ್, ಮೊಲೆಟೋವ್ ಮತ್ತು ಶೆಪಿಲೋವರ ಕೂಡೆ ಏಪನೆಯವರಾಗಿ ದೂರಲಾಗಿದೆ. ಇವರಿಗೂ ಈಗ "ಪಕ್ಷ ದ್ರೋಹ" ಗೌರವ ಪಾರಿತೋಷಕವನ್ನು ಈಯಲಾಗಿದೆ. ಕಿಶ್ಚೆವ ಸ್ಟೇಟ್ ಬೇಂಕಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವರೆಂದು ವರದಿ ಬಂದಿದ್ದರೂ ಅವರೀ ಹುದ್ದೆಯನ್ನು ಸ್ವೀಕರಿಸಿದುದಕ್ಕೆ ಪ್ರಮಾಣ ತಿಳಿದು ಬಂದಿಲ್ಲ. ಕಳೆದ ಅಗಸ್ಟಿಂದ ದಕ್ಷಿಣ ರಶ್ಯದ ಪ್ರಾಂತೀಯ ಆರ್ಥಿಕ ಸಲಹೆಗಾರರೆಂದು ಅಧ್ಯಕ್ಷ ಖ್ರುಶ್ಚೇವ್ ಅವರನ್ನು ಇಳಿಸಲಾಯಿತು ಈಗ ಪಕ್ಷಕ್ಕೆ ಎರಡು ಬಗೆಯ ಅಪರಾಧವನ್ನು ಹೊರಿಸಿ ಅವರನ್ನು ಪಂಚ ಮರನ್ನಾಗಿ ದ್ರೋಹಿಗಳ ಸಾಲಿಗೆ ಸೇರಿಸಲಾಗಿದೆ. ಇದರೊಂದಿಗೆ ಮೆಲೆಂಕೋವರನ್ನು ಗುಂಡಿಕ್ಕಿ ಕೊಲ್ಲಲಾಗಿದೆ ಎಂಬ ವಾರ್ತೆಯು ತಲಪಿ, ಈ ಪ್ರಕರಣದ ಭೀಕರತೆಯನ್ನು ಹೆಚ್ಚಿಸಿದೆ. ಸೋವಿಯತ್ತಿನ "ಪಕ್ಷ ದ್ರೋಹಿ"ಗೆ ಇಂತಹ ಗತಿ ಬರಬೇಕಾದರೆ, ಅಲ್ಲಿ ಆ ಪಕ್ಷದ ಶಕ್ತಿಯು ಎಷ್ಟು ಪ್ರಧಾನ ಶಾಲಿಯಾಗಿದೆ; ಮತ್ತು ಅಲ್ಲಿ ಪಕ್ಷದ ಹೆಸರಿನಲ್ಲಿ ಎಷ್ಟೊಂದು ಕ್ರೂರ ಸಿದ್ಧಾಂತಗಳ ದಕ್ಷ ವ್ಯಕ್ತಿಗಳ ಅವಶ್ಯಕತೆಯನ್ನು ವಾಗುತ್ತಿದೆ ಎಂಬುದರ ಮನವರಿಕೆಯಾಗುವುದು. ಪಕ್ಷದ್ರೋಹಿಗಳನ್ನು, ಅರ್ಥಾತ್ ಸ್ವಯಂ ಪ್ರತಿಭೆಯುಳ್ಳವರನ್ನು ನಾಶ ಮಾಡದೆ ಪಕ್ಷದ ಸೂತ್ರಧಾರನ ಏಳಿಗೆಯಾಗುವುದು ಅಸಾಧ್ಯ ಮತ್ತು ಅತನ ಅಭಿಲಾಷೆ ಹಾಗೂ ಮಹತ್ವಾಕಾಂಕ್ಷೆಗಳು ಪೂರ್ಣಗೊಳ್ಳುವುದೂ ಕಷ್ಟ. ಎಂತಲೇ ಸೋವಿಯತ್ತಿನಲ್ಲಿ ಇಂತಹವರನ್ನು ಮೊದಲು ಪಕ್ಷದಿಂದ ಉಚ್ಚಾಟನೆ ಮಾಡಿ ಮುಂದೆ ಪ್ರಪಂಚದಿಂದಲೇ ಒಡಿಸಿ ತಮ್ಮ ಬೇಳೆಯನ್ನ ಬೇಯಿಸಿಕೊಳ್ಳುವ ಕೆಲಸ ನಡೆಯುತ್ತಿದೆ. ವ್ಯಕ್ತಿ ಗೌರವ, ಮರ್ಯಾದೆ, ಪ್ರತಿಭೆಗಳಿಗೆ ಇಂತಹ "ಪಕ್ಷ"ದಲ್ಲಿ ಎಂದೆಂದಿಗೂ ಸ್ಥಾನವಿಲ್ಲ. ಎಂತಲೇ ಈ ರೀತಿಯ ಕೊಲೆಗಳು—ಅಧಿಕಾರ ವಂಚನೆಗಳು ಪದೇಪದೇ ನಡೆಯುತ್ತಿವೆ. ಹಂಗೇರಿಯ ಜನನಾಯಕರಾದ ಇಮ್ರೆ ನಾಗಿಯವರನ್ನು ನೋಸದಿಂ ಕೊಂದ ಪ್ರಕರಣವು ಜನಮನಸಾಟಲದಿಂದ ದೂರ ಸರಿಯುವಷ್ಟರಲ್ಲಿಯೇ ನೆಲೋಂಕೋವರ ಕೊಲೆ ಹಾಗೂ ಬಲ್ಗಾನಿನರ ಪತನದ ಪ್ರಕರಣ ಬೆಳಕು ಕಂಡಿತು ಇನ್ನು ಕೆಲವು ಸಮಯ ಕಳೆದೊಡನೆಯೇ ಈ ದ್ರೋಹಿಗಳಲ್ಲಿ ಉಳಿದ ನಾಲ್ವರಲ್ಲಿ ಒಬ್ಬೊಬ್ಬರೇ ಇದೇ ರೀತಿ ತಮ್ಮಕೊನೆಯನ್ನು ಕಾಣುವುದು ಏನೂ ಅಸಾಧ್ಯವಲ್ಲ.

ಪ್ರಜಾ ಪ್ರಭುತ್ವದಲ್ಲಿ ವ್ಯಕ್ತಿಪೂಜೆ ಸಲ್ಲದೆಂಬುದನ್ನು ಒಪ್ಪಬೇಕು: ಆದರೆ, ಎಲ್ಲರೂ ಪಕ್ಷಕ್ಕಾಗಿ ದುಡಿಯುವಾಗ ಪಕ್ಷವೂ ಎಲ್ಲರ ಅಭಿಪ್ರಾಯಗಳನ್ನ ಕೇಳಿ ಒಂದು ಸಾಮಾನ್ಯ ಧೋರಣೆಯನ್ನು ರೂಪಿಸಬೇಕು. ಹೊರತು, ಸ್ವತಂತ್ರಾಭಿಪ್ರಾಯಗಳನ್ನು ಅಲ್ಲಗಳೆದು, ಅಂತಹ ಸ್ವತಂತ್ರಾಭಿಪ್ರಾಯಗಳನ್ನು ನಾಶಮಾಡಿ ತಾನೆ ತೃಪ್ತಿಪಡುವುದು ಸರ್ವಾಧಿಕಾರದ ಹಿಂದು ಅನುಕರಣವಲ್ಲವೆ? ಇಂತಹ ಸರ್ವಾಧಿಕಾರವನ್ನು ನಡೆಸುವ ಕಮ್ಯುನಿಸ್ಟ್ ಪಕ್ಷದಲ್ಲಿ ಜನತೆ ವಿಶ್ವಾಸವಿಡುವುದೂ ಮರದ ದಿಮ್ಮಿಯಲ್ಲಿ ಸಾಗರವನ್ನು ದಾಟುವಪ್ರಯಾಸಕ್ಕೆ ಕೈಗೊಳ್ಳುವುದೂ ಸಮಾನ ಸ್ವರೂಪದ ಸಾಹಸವೆಂದೇ ಹೇಳಬಹುದು. ಬೆರಳು ತೋರಿಸಿದೊಡನೆಯೇ ಕೈಯನ್ನೇ ನುಂಗುವ ಈ ಸೋವಿಯತ್ತಿನ ರಾಜಕಾರಣವು ಕುತೂಹಲದಾಯಕ ವಿದುವಂತೆಯೇ ಭೀದನಾರ್ಹವಿದೆ. ನಮ್ಮ ಜನತೆಯು ಇಂತಹ ಸರ್ವಾಧಿಕಾರೀ ಮನೋವೃತ್ತಿಗೆಂದೂ ಸೊಪ್ಪು ಹಾಕಬಾರದು. ಇಂತಹ ಗಂಡಾಂತರ ಪರಿಸ್ಥಿತಿಯು ಭಾರತಕ್ಕೆಂದಿಗೂ ಕಾಲಿಡದಿರಲಿ.

ಸಂಕ್ಷಿಪ್ತ ಸುದ್ದಿಗಳು

ಆರ್ಥಿಕ ಸಂಸ್ಥೆ ಸಾಲ ಪಡೆಯುದು

ಭಾರತೀಯ ಔದ್ಯೋಗಿಕ ಆರ್ಥಿಕ ಸಂಸ್ಥೆಯು ತನ್ನ ಬಂಡವಳವನ್ನು ಹೆಚ್ಚಿಸುವ ಸಲುವಾಗಿ ನವಂಬರ ತಿಂಳನೆ ದಿನಾಂಕದಿಂದ ೪ ಕೋಟಿ ರೂಪಾಯಿಗಳ ಸಾಲವನ್ನು ಸಾಲಪತ್ರಗಳ ದ್ವಾರಾ ಪಡೆಯಲಿದೆ. ಈ ಹಣವನ್ನು ಹತ್ತು ವರ್ಷಗಳ ನೀಲಿ ಹಂತಿಯಿಸಲಿದ್ದು ಮತ್ತು ಆ ವರೆಗೆ ಸೇಕಡಾ ನಾಲ್ಕೂಕಾಲರ ಸಲೆಯಲ್ಲಿ ಬಡ್ಡಿಯನ್ನೀಯಲಾಗುವುದು. ಈ ಸಾಲವನ್ನು ಮುಂಬಯಿ, ಮದರಾಸು, ಕಲಕತ್ತೆ, ದಿಲ್ಲಿ ಮತ್ತು ಬೆಂಗಳೂರುಗಳಲ್ಲಿರುವ ಎರಿಯರ್ಸ್ ಬೇಂಕಿನ ಕಚೇರಿಗಳಲ್ಲಿ ೨೯ ತಾರೀಕಿನ ವರೆಗೆ ಅಥವಾ ಪೂರ್ಣವಾಗಿ ಬಲಗು ತುಂಬುವ ವರೆಗೆ ತೆರೆದಿಡಲಾಗುವುದು. ಸಾಲಪತ್ರಗಳ ಬೆಲೆ ನೂರಕ್ಕೆ ೯೯.

ಎನ್.ಜಿ.ಓ ಮಕ್ಕಳಿಗೆ ಉಚಿತ ಶಿಕ್ಷಣ

ಮೈಸೂರು ರಾಜ್ಯದ ಎನ್. ಜಿ. ಓ. ಗಳ ಸಂಘದ ಆರನೆಯ ಅಧಿವೇಶನವು ಬೆಂಗಳೂರಲ್ಲಿ ನಡೆಯಿತು. ಇದರಲ್ಲಿ ರಾಜ್ಯದ ಎನ್. ಜಿ. ಓ.ಗಳ ವೇತನ ಪ್ರಮಾಣ ಹಾಗೂ ವಿವಿಧ ಬತ್ತೆಗಳು ಕೇಂದ್ರ ಮತ್ತು ರಾಜ್ಯ ಸರಕಾರವೆರಡರಲ್ಲಿಯೂ ಸಮಾನವಾಗಿರಬೇಕೆಂದು ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯದ ಆರ್ಥಿಕ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಎನ್. ಜಿ. ಓ ಗಳ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆಯೊಂದನ್ನು ತಯಾರಿಸಲು ಮೈಸೂರು ಸರಕಾರವು ರಾಜ್ಯದ ಶಿಕ್ಷಣ ಶಾಖೆಯ ಡೈರೆಕ್ಟರರನ್ನು ವಿನಂತಿಸಿದೆಯೆಂದೂ ಈ ಯೋಜನೆಯು ತೀವ್ರವಾಗಿ ಸರಕಾರದ ಕೈಸೇರುವ ನೀರೀಕ್ಷೆಯಿದೆಯೆಂದೂ ತಿಳಿಸಿದರು. ಅಲ್ಲದೇ ಪಂಚ ವಾರ್ಷಿಕ ಯೋಜನೆಯ ಮೂರನೆ ವರ್ಷದ ಗುರಿಯಾದ ೨೫ ಕೋಟಿ ನಿಚ್ಚವಾಗುವ ಬದಲು ಕೇವಲ ೨೦ ಕೋಟಿಯಷ್ಟೇ ವೆಚ್ಚವಾಗಬಹುದೆಂದೂ, ಯೋಜನೆಯ ಗುರಿಯನ್ನು ಸಾಧಿಸಲು ಸಾಧ್ಯವಾಗುವಂತೆ ಎನ್. ಜಿ. ಓ.ಗಳು ಪೂರ್ಣ ಕಳಕಳಿಯಿಂದ ಕಾರ್ಯಶೀಲರಾಗಬೇಕೆಂದೂ ವಿನಂತಿಸಿಕೊಂಡರು

ಕಾಗದದ ಹೊಸ ಕಾರಖಾನೆ

ದಾಂಡೇಲಿಯಲ್ಲಿ ಕಟ್ಟಲಾಗುತ್ತಿರುವ ಪಶ್ಚಿಮ ಕರಾವಳಿ ಕಾಗದ ಕಾರಖಾನೆಯು ದಿನಾಂಕ ೧೭ರಂದು ಉತ್ಪಾದನೆಗೆ ಮೊದಲುಮಾಡಿತು. ಪ್ರಕೃತ ಪಲ್ಪನ್ನು ತಯಾರಿಸುವ ವಿಭಾಗವು ಸಂಪೂರ್ಣ ಸ್ಥಾಪಿಸಲ್ಪಡದಿರುವುದರಿಂದ ಆಯಾತದ ಪಲ್ಪಿನಿಂದ ಕಾರ್ಯವಿಸೆಗಿತು. ಇನ್ನು ಎರಡು ತಿಂಗಳುಗಳಲ್ಲಿ ಈ ಪಲ್ಪು ತಯಾರಿಯೂ ಸಾಧ್ಯವಾಗಿ ಸ್ವಯಂಪಿದ್ದಗೊಳಿಸಿದ ಪಲ್ಪಿನಿಂದಿ ಕಾಗದ ತಯಾರಿಸುವುದು. ಈಗ ಇಲ್ಲಿ ಸಾಮಾನ್ಯವಾಗಿ ದಿನವೊಂದಕ್ಕೆ ೩೦ ಟನ್ನುಗಳಷ್ಟು ಕಾಗದವು ತಯಾರಾಗುವುದು ಮತ್ತು ಕಾರಖಾನೆಯು ಸಂಪೂರ್ಣವಾಗುವಾಗ ಸುಮಾರು ೬೦ ಟನ್ನುಗಳಷ್ಟು ಕಾಗದವನ್ನು ಉತ್ಪಾದಿಸಬಲ್ಲುದು. ಸದ್ಯ ಬರೆಯುವ ಕಾಗದವನ್ನಷ್ಟೇ ಇಲ್ಲಿ ಸಿದ್ಧಮಾಡಲಾಗುವುದು. ಕಾಗದ ತಯಾರಿಕೆಗೆ ಅವಶ್ಯಕವಾದ ಭಿನ್ನ ಭಿನ್ನ ಪಲ್ಪುಗಳಲ್ಲಿ ಧಾರಾಳವಾಗಿ ದೊರೆಯುವುದು ಜಾಜ ಮಧ್ಯದೆಲ್ಲಿ ಈ ಕಾರಖಾನೆಯನ್ನು ಸ್ಥಾಪಿಸಲು ನಿಶ್ಚಯವಾಯಿತು. ಇನ್ನೂ ಮುಂದಕ್ಕೆ ದಿನವೊಂದರ ೧೦೦ ಟನ್ನುಗಳ ಉತ್ಪಾದನೆಯನ್ನು ಪಡೆಯುವಂತೆ ಇದನ್ನು ವಿಸ್ತರಿಸುವ ಕಾರ್ಯಕ್ರಮವನ್ನು ಕಾರಖಾನೆಯ ವ್ಯವಸ್ಥಾಪಕ ವರ್ಗದವರು ಇಟ್ಟುಕೊಂಡಿರುವರು.

ಸುಡಾನಿನಲ್ಲಿಯೂ ಸೈನಿಕ ಕ್ರಾಂತಿ

ಎತ್ತಾದ ನಾಲ್ಕು ರಾಷ್ಟ್ರಗಳೊಡನೆ ಈಗ ಆಫ್ರಿಕದ ಸುಡಾನಿನಲ್ಲಿಯೂ ಎಲ್ಲ ರಾಜಕೀಯ ಪಕ್ಷಗಳನ್ನು ವಿಸರ್ಜಿಸಿ ಮಹಾದಂಡ ನಾಯಕ ಜ| ಇಬ್ರಾಹಿಮ ಅಲ್ಬೌಬರು ಸೇನಾಡಳಿತೆಯ ಸಂಪೂರ್ಣ ಅಧಿಕಾರವನ್ನು ಹೊತ್ತುಕೊಂಡಿದ್ದಾರೆ. ಆಗ ಅಲ್ಲಿ ಅಬ್ದುಲ್ಲ ಖಲೀಲರ ನಾಯಕತ್ವದ ಸರಕಾರವಿತ್ತು. ಸೈನಿಕ ಕ್ರಾಂತಿಯ ಬಳಿಕ ಖಲೀಲರು ಮತ್ತು ಅವರ ಸಚಿವರು ಬಂಧನಕ್ಕೊಳಗಾಗಿದ್ದಾರೆ. ಸುಡಾನಿನ ಸೈನಿಕ ಕ್ರಾಂತಿಯು ಈಜಿಪ್ಟಿನ ಸೈನಿಕ ಕ್ರಾಂತಿಯಂತೆ ಅಷ್ಟೊಂದು ರಕ್ತಪಾತವಿಲ್ಲದೆ ಸಾಗಿದೆ. ಸುಡಾನಿನ ಸೈನಿಕ ಕ್ರಾಂತಿಯ ಹಿಂದೆ ಈಜಿಪ್ಟಿನ ಕೈವಾಡವಿದೆಯೆಂದು ಹೇಳಲಾಗುತ್ತಿದೆ.

ಅಲ್ಲಲ್ಲಿಯ ಸುದ್ದಿಸಾರ

ಮಂಗಳೂರು ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬೇಂಕಿನಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. 10ರಂದು ಸಾರ್ವಜನಿಕ ಸಭೆಯೊಂದು ಜರಗಿತು. ಈ ಸಭೆಯಲ್ಲಿ ಮುಡಿಕೇರಿಯ ಸರಕಾರಿ ಸಹಕಾರೀ ತರಬೇತಿ ಸಂಸ್ಥೆಗೆ 89 ವಿದ್ಯಾರ್ಥಿಗಳು ಮತ್ತು ಒಟ್ಟು ಉಪಾಧ್ಯಾಯರು ವಿಶೇಷತಃ ಹಾಜರಿದ್ದರು. ಶ್ರೀ ಕೆ. ಆರ್. ಆಚಾರ್, ಎಂ. ಪಿ. ಯವರು ತರಬೇತಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ಭಾರತದ ಪಲ್ಲಿಯ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕಾದ ಈ ಸಮಯದಲ್ಲಿ ಸಹಕಾರಿ ತರಬೇತಿ ಹೊಂದಿದ ವಿದ್ಯಾರ್ಥಿಗಳು ಆ ಕಡೆಗೆ ಹೆಚ್ಚಿನ ನಿಗಾ ಕೊಡಬೇಕಾಗಿದೆ ಎಂದರು.

ಅಧ್ಯಕ್ಷ ಶ್ರೀ ಹೆಗ್ಡೆಯವರು ಭಾಷಣ ಮಾಡಿ ತರಬೇತಿ ಹೊಂದಿದ ವಿದ್ಯಾರ್ಥಿಗಳು ಸಹಕಾರಿ ತತ್ವವನ್ನು ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕೆಂದರು. ಶ್ರೀಗಳಾದ ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ, ಕೆ. ಬಿ. ಜಿನರಾಜ ಹೆಗ್ಡೆ, ಬಿ. ವಿ. ಕೃಷ್ಣಯ್ಯ, ವಿ. ಜಿ. ವೇಣುಗೋಪಾಲ ಹಿಲ್ಯೆ ಮೊದಲಾದವರು ಭಾಷಣಮಾಡಿದರು. ಶ್ರೀ ಎಸ್. ಟಿ. ಅಪ್ಪಯ್ಯನವರು ಧನ್ಯವಾದವಿತ್ತರು.

ಮೈಸೂರು ನೇತಿನಲ್ ಸೇವಿಂಗ್ಸ್ ಆಫೀಸರ್ ಶ್ರೀ ಎಚ್. ನರಶಿಂಹನವರು ತಾ 13ರಂದು ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತಾ, ಭಾರತದ ಪ್ರತಿಯೊಬ್ಬ ಪ್ರಜೆಯೂ ಆತನು ಬಡವನಾಗಿರಲಿ, ಬಲ್ಲವನಾಗಿರಲಿ ಚಿಕ್ಕ ಉಳಿತಾಯ ಯೋಜನೆಯ ಯಶಸ್ಸಿಗಾಗಿ ಪ್ರಯತ್ನಿಸಿ, ಈ ಚಳವಳಿಯನ್ನು ಜನತಾಚಳವಳಿಯಾಗಿ ಮೂಡಿಸಿಸಲು ಯತ್ನಿಸಬೇಕೆಂದರು. ಚಿಕ್ಕ ಉಳಿತಾಯ ಯೋಜನೆಯಲ್ಲಿ ಈ ವರ್ಷಕ್ಕೆ ಅರುವತ್ತು ಲಕ್ಷ ರೂಪಾಯಿ ದ. ಕ. ಜಿಲ್ಲೆಯು ಗುರಿಯಾಗಿದೆ. ಮೈಸೂರು ರಾಜ್ಯವಲ್ಲ ಪ್ಲಾಟಿಲ್ ಪ್ರೂಜೆಕ್ಟ್ ಯೋಜನೆಗಾಗಿ ಆಯ್ಕೆ ಮಾಡಲ್ಪಟ್ಟ ನಾಲ್ಕು ಸ್ಥಳಗಳಲ್ಲಿ ದ. ಕ. ಜಿಲ್ಲೆಯ ಮೂಲ್ಕಿ ಒಂದು ಸ್ಥಳವಾಗಿರುವುದು. ಈ ಪ್ರದೇಶದ ರಾಷ್ಟ್ರೀಯ ವಿಸ್ತರಣಾ ಯೋಜನಾ ಸ್ಥಳವನ್ನು ಬಂದು ಪರಿಶೀಲಿಸಿದ ಆಫಿಯಲ್ಲಿ ಚಿಕ್ಕ ಉಳಿತಾಯ ಯೋಜನೆಯೊಳಗೆ ಕರಲಾಗುವುದೆಂದರು. ಅಸಿಸ್ಟಾಂಟ್ ನೇಶನಲ್ ಸೇವಿಂಗ್ಸ್ ಆಫೀಸರ್ ಶ್ರೀ ಎನ್. ಎಸ್. ಶೆಲ್ವರಾಜ್ ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಪುತ್ತೂರಿನ ತರುಣ ವೃಂದದವರು ತಾ 12ರಂದು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ವಠಾರದಲ್ಲಿ ಜಿಲ್ಲಾ ಕೃಷಿ ಅಧಿಕಾರಿ ಶ್ರೀ ಯು ಆನಂದ ಆಳ್ವ ಅಧ್ಯಕ್ಷತೆಯಲ್ಲಿ ಜಾನಪದ ಪ್ರದರ್ಶನ ಏರ್ಪಡಿಸಿದರು. ಉಡುಪಿಯ ವೆಟರ್ನರಿ ಸರ್ಜನ್ ಶ್ರೀ ಕೆ. ವಿ. ಮಲ್ಲಿ ಮತ್ತು ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರ್ ಶ್ರೀ ಎಸ್. ಪಿ. ರೆಬೆಲ್ಲೊರು ಪಠ್ಯಕ್ಕಳಾಗಿದ್ದರು. ವೃಂದದ ಅಧ್ಯಕ್ಷ ಶ್ರೀ ಪಿ. ಪಯ್ಯಡಪತಿ ಭಟ್ಟರು ಸ್ವಾಗತಿಸಿದರು. ಶ್ರೀಗಳಾದ ಕೆ. ವಿ. ಮಲ್ಲಿ ಮತ್ತು ಸಿ. ಕೆ ಕೃಷ್ಣ ನಂಜರು ಕಾರ್ಯಕ್ರಮ ನಿರೂಪಣೆಗೈದರು. ಅಧ್ಯಕ್ಷರು ಭಾಷಣ ಮಾಡಿದ ಬಳಿಕ ವಂದನಾರ್ಪಣೆ ರೂಪಗಿತೆಯೊಂದಿಗೆ ಸಮಾರಂಭ ಕೊನೆಗೊಂಡಿತು. ಪ್ರದರ್ಶನಕ್ಕೆ ಸುಮಾರು 175 ಜನರು ವಾರುಗಳು ಬಂದಿದ್ದುವು.

ಮರಡಿಹಳ್ಳಿ ಟೂರ್ನಮೆಂಟ್ ಶ್ರೀ ಬಾಳೆಕಾಯಿ ಹನುಮಂತ ರೆಡ್ಡಿ ಸ್ಮಾರಕ ವಿಕಾಲ ಮೈಸೂರು ವಾಲಿಬಾಲ್ ಟೂರ್ನಮೆಂಟ್, ಇವೇ ತಾ. 29ರಂದು ಪ್ರಾರಂಭಗೊಳಗಲಿರುವುದರಿಂದ ಪ್ರವೇಶ ಧನ ಕಳುಹಿಸುವ ಸಂಬಂಧ ಕೊನೆಯ ತಾರೀಕು ತಾ. 21 ಇರುವುದರಿಂದ ಟೀಮುಗಳು ಒಂದಕ್ಕೆ ಆರು ರೂಪಾಯಿಯಂತೆ ಪ್ರವೇಶ ಧನ ಕಳುಹಿಸಬೇಕಾಗಿ ಸೂಚಿಸೋಣಾಗಿದೆ ಹೆಚ್ಚಿನ ವಿವರಗಳಿಗೆ ಸೆಕ್ರೆಟರಿ ಟೂರ್ನಮೆಂಟ್ ಕಮಿಟಿ, ಮರಡಿಹಳ್ಳಿ (ದಯಾ) ಚಿತ್ರದುರ್ಗ ಇವರಿಗೆ ಬರೆಯಬಹುದಾಗಿದೆ.

ದಿಪಾವಳಿ ಆಚರಣೆಯು ಉಡುಪಿ ಸರಕಾರಿ ಬುನಾದಿ ತರಬೇತಿ ಶಾಲೆಯಲ್ಲಿ ತಾ. 8ರಂದು ಶ್ರೀ ನ್ಯಾಯಾಯ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. 'ಬೆಳಕು' ಹಸ್ತಲಿಖಿತ ಪತ್ರಿಕೆಯನ್ನು ಅಧ್ಯಕ್ಷರು ಉದ್ಘಾಟಿಸಿದರು. ಶ್ರೀ ಶೀನಪ್ಪ ಹೆಗ್ಡೆಯವರು ದೀಪಾವಳಿಯ ಮಹತ್ವದ ಕುರಿತು ಸೂಕ್ತವಾಗಿ ಶಾಲಾ ಸಮಿತಿಯ ಶ್ರೀ ಬಿ. ರಾಮಚಂದ್ರ ಆಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಗ್ರಾಮೋದ್ಯೋಗಿಸ್ಥರ ಸಂಘದ ನೇತೃತ್ವದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಸ್. ವೆಂಕಟರಾಜರ ಮನೆಯಲ್ಲಿ, ಬೆಂಗಳೂರಿಗೆ ವರ್ಗಾಯಿಸಲ್ಪಟ್ಟ ಉಡುಪಿ ತಹಶೀಲ್ದಾರ್ ಶ್ರೀ ಕೆ. ಮುಮ್ಮದ್ ಬ್ಯಾರಿಯವರಿಗೆ ಅಭಿವಂದನಾರ್ಪಣೆ ವಿದಾಯಸೂಚಿಸಲಾಯಿತು. ಶ್ರೀ ವೆಂಕಟರಾಜರು ಮುಖ್ಯ ಅತಿಥಿಗಳ ಗುಣಗಾನಮಾಡಿದರು.

ಮಂಗಳೂರು ನಗರಸಭೆಯು ತಾ. 14ರಂದು ನಗರ ಸಭಾಪತಿ ಶ್ರೀ ಕೆ ಸೂರ್ಯ ನಾರಾಯಣ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರಲ್ಲಿ ಫಿಶ್ಶಿಂಗ್ ಗೃಹ ಮತ್ತು ಕಾರ್ಯ ಗೃಹವನ್ನು ನಡೆಸಲು ಸರಕಾರವು ಕೊಡುವ ಸಹಾಯವನ್ನು ಕಳೆದು ಇತರ ಏಜೆನ್ಸಿಯನ್ನು ನಡೆಸಲು ನಗರಸಭೆಯು ಸಮ್ಮತಿ ದೊರೆಯಿತು.

ಕದ್ರಿಯಲ್ಲಿ ಹೊಸತಾಗಿ ಸ್ಥಾಪಿಸಲು ನಿರ್ಣಯಿಸಿದ ಎಲೋಪತಿ ಆಸ್ಪತ್ರೆಯ ಆವರ್ತಿತ ವೆಚ್ಚಕ್ಕಾಗಿ ರೂ. 7800 ಮತ್ತು ಸ್ಥಾಯಿ ವೆಚ್ಚಕ್ಕಾಗಿ ರೂ. 4400ನ್ನು ಮಂಜೂರು ಮಾಡಲಾಯಿತು.

ಮಂಗಳೂರು ನಗರಸಭೆಯ ಹೊಸ ಕಟ್ಟಡಗಳನ್ನು ಕಟ್ಟಿಸಲು ಲ್ಯಾಟ್ ಹೌಸ್ ಹಿಲ್ಲಿನಲ್ಲಿ ಸ್ಥಳವನ್ನು ಪಡೆಯಲು ನಿರ್ಣಯಿಸಾಯಿತು. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವದಕ್ಕೆ ನಗರಸಭಾ ಕ್ಷೇತ್ರದ ಲ್ಯಾಟ್ ಹೌಸ್ ಹಿಲ್ಲಿನಲ್ಲಿ ಮುನಿಸಿಪಲ್ ಹೊಸ ಕಟ್ಟಡಗಳು ಹೊಸ ಸಿಟಿ ಬಸ್ ಸ್ಟೇಂಡ್, ಕದ್ರಿ, ಜೆಲ್ಲು, ಉರ್ವ ಮತ್ತು ಫಳ್ಳೀರುಗಳಲ್ಲಿ ಹೊಸ ಪಾವತಿ ಬೂತಿಬಾನೆಗಳನ್ನು ಕಟ್ಟಿಸುವುದು ಉರ್ವದಲ್ಲಿ ಮುನ್ಸಿಪಲ್ ಆಫೀಸರರಿಗೆ ಕ್ವಾರ್ಟರ್‌ಗಳನ್ನು ಕಟ್ಟಿಸುವುದು, ಮಂಗಳೂರಲ್ಲೊಂದು ಸ್ಟೋರ್ಟ್ಸ್ ಪೆವಿಲಿಯನ್ ಕಟ್ಟಿಸುವುದೆ, ಈಜುಗ ಕೊಳ ರಚಿಸುವುದು. ಈ ಕಾರ್ಯವನ್ನು ಸೇರಿಸ ಬೇಕೆಂದು ನಿರ್ಣಯಿಸಲಾಯಿತು.

ಉಡುಪಿಯಲ್ಲಿ ಮಕ್ಕಳ ದಿನಾಚರಣೆಯು ತಾ. 14ರಂದು ಜರಗಿತು. ಅಜ್ಜರ ಕಾಡು ಗಾಂಧಿ ಮೈದಾನದಲ್ಲಿ ನಗರಸಭೆಯ ಉಪಾಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರು ಧ್ವಜಾರೋಹಣ ಮಾಡಿದರು. ಶ್ರೀಮತಿ ವಿ. ಕೆ ಲಕ್ಷ್ಮಿನಾರಾಯಣರಿಂದ ಕೊಡಲ್ಪಟ್ಟ ತಿಂಡಿತಿನಿಸನ್ನು ಮಕ್ಕಳಿಗೆ ಪಂಚಲಾಯಿತು. ಸಂಜೆ ವಿಕ್ಟೋರಿಯಾ ಜುಬಿಲೀ ಕ್ಲಬ್ಬಿನಲ್ಲಿ ಸಾರ್ವಜನಿಕ ಸಭೆಯು ಡಾ| ಯು ಸುಂದರ ಶೇಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಜೆ. ಆಳ್ವ ಯವರು ಮಾತನಾಡಿ ಸ್ವಾಗತಿಸಿದ ಬಳಿಕ ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಕುಂದಾಪುರ ಅಸಿಸ್ಟಂಟ್ ಕಮಿಶನರ್ ಶ್ರೀ ಪಿ. ಎಮ್. ಕಾಮತರು ಬಹುಮಾನ ವಿತರಣೆ ಮಾಡಿದರು ಅಧ್ಯಕ್ಷರ ಕಾರ್ಯೋಚಿತ ಮಾತುಗಳಾದ ಬಳಿಕ ಮುನಿಸಿಪಲ್ ಹೆಲ್ತ್ ಆಫೀಸರ್ ಡಾ| ವಿ. ಎಲ್. ಪಂಡಿತರು ವಂದನೆಗಳನ್ನರ್ಪಿಸಿದರು.

ಮಂಗಳೂರಿನ ಬೆಸೆಂಟ್ ಹಾಸ್ಟೆಲ್ ದಿನ ಮತ್ತು ಥಿಯೋಸೋಫಿಕಲ್ ಸೊಸ್ಯಾಟಿಯ ಸ್ಥಾಪನಾದಿನವು ತಾ. 17ರಂದು ಗವರ್ನಪೇಟ್ ಸೆಕೆಂಡರಿ ಮತ್ತು ತರಬೇತಿ ಶಾಲೆಯ ಶ್ರೀಮತಿ ಪಿ. ಕೃಷ್ಣವೇಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ ಅನಂತರಾಯರು ಸ್ವಾಗತ ಭಾಷಣ ಮಾಡಿದರು. ಹಾಸ್ಟೆಲ್ ವಾರ್ಡನ್ ಕುಮಾರಿ ಶೀಲಾ ಕಟ್ಟಿರು ವಂದಿಯನ್ನೋದಿದರು. ಪ್ರೊ ಬೇಜನರ್ ಆಫೀಸರ್ ಶ್ರೀ ಎಚ್. ಎಸ್. ಬಾಲಚಿತ್ತೇಶ್ವರರವರು ಭಾಷಣಗೈದರು. ಕು ಮಾರಿ ಕೆ. ಸುಜಯರವರು ಧನ್ಯವಾದ ಗೈದಿರುತ್ತಾರೆ.

ಪುತ್ತೂರು ತಾಲೂಕಿನಲ್ಲಿ ಸಣ್ಣ ನೀರಾವರಿ ಕೃಷಿ ಕೈಕೊಳ್ಳುವ ಉದ್ದೇಶದಿಂದ 11 ದಿವಸಗಳ ವಿಶೇಷ ಸಮಾಕ್ಷಿ ಶಿಬಿರ ಪೋವ. ಕಳವ ತಿಂಗಳ ತಾ. 27ರಿಂದ ಇದೇ ತಾ. 7ರ ತನಕ ಮಂಗಳೂರಿನ ಪಿ ಡಬ್ಲ್ಯು ಡಿ. ಸುವರ್ಣಲೆಂಡಿಂಗ್ ಇಂಜಿನಿಯರ್ ಡಾ| ಆತ್ಮೆಯವರ ನೇತೃತ್ವದಲ್ಲಿ ಜರಗಿತು. ಶ್ರೀ ಕೆ. ವಿ. ಗೌಡ, ಎಮ್. ಎಲ್. ಎ. ಆವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಸ್. ಸುಬ್ಬಯ್ಯ ನಾಯಕ್ ಎಮ್. ಎಲ್. ಎ., ವೈ. ಸಿ. ಜೋಬಾಳಯ್ಯ, ಜಿಲ್ಲಾ ದಿಸ್ಟ್ರಿಬ್ಯೂಟಿ ಕಮಿಶನರ್ ಸಿ ಟಿ. ಸೆಟ್ಟಿ, ಅಸಿಸ್ಟಾಂಟ್ ಕಮಿಶನರರು ಭಾಷಣಗೈತ್ತರು. ಶ್ರೀ ವಿ ಎಲ್. ನಾಗೇಂದ್ರನವರು ಧನ್ಯವಾದಗಳನ್ನರ್ಪಿಸಿದರು.

ಬಳಿಕ ಎಕ್ಸಿಕ್ಯೂಟಿವ್ ಇಂಜಿನಿಯರುಗಳ ನೇತೃತ್ವದಲ್ಲಿ ಎಂಟೆಂಟು ಪಾಲಿಟೆಕ್ನಿಕ್ ವಿದ್ಯಾರ್ಥಿಗಳನ್ನೊಳಗೊಂಡ ನಾಲ್ಕು ತಿಂಡಿಗಳು, ವಿಚ್ಚು ಹುತ್ತೂರು, ಸುಳ್ಯ ನಮ್ಮತ್ತು ಗುತ್ತಿಗಾರಿನಲ್ಲಿ ನವೆಯವು ಆದೇ ಸಂದರ್ಭದಲ್ಲಿ ಸುಮಾರು 4 1 ಲಕ್ಷ ರೂಪಾಯಿ ವೆಚ್ಚದ 50 ಯೋಜನೆಗಳ ಅಂದಾಜು ತಯಾರಿಸಲಾಯಿತು.

ಉಡುಪಿ ಬೋರ್ಡು ಹೈಸ್ಕೂಲಿನಲ್ಲಿ ಮಕ್ಕಳ ದಿನಾಚರಣೆಯು ದಿನಾಂಕ ೧೪ರಂದು ಜರಗಿತು. ಬೆಳಿಗ್ಗೆ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಅನಂತ ಕೃಷ್ಣ ಸಾಮಂರಿಂದ ಧ್ವಜಾರೋಹಣವಾಯಿತು. ಶಾಲೆಯ ಯನ್. ಸಿ. ಸಿ., ಎ ಸಿ. ಸಿ. ಸ್ಕೌಟುದಳ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನೂ ಮತ್ತು ಆ ಧ್ಯಾಪಕ, ಅಧ್ಯಾಪಿಕೆಯರನ್ನೂ ಕೂಡಿಕೊಂಡು ಒಂದು ನೆರವಣಿಗೆಯು ಹೊರಟು ಗಾಂಧಿಮೈದಾನದ ಸಾರ್ವಜನಿಕ ಸಮಾರಂಭವನ್ನು ಸೇರಿಕೊಂಡಿತು.

ಸಾಯಂಕಾಲ ಕಾರ್ನಾಡು ಮಂಗೇಶರಾಯರಿಂದ ಕೊಡಲ್ಪಟ್ಟ ಸಿಹಿ ತಿಂಡಿಯನ್ನು ಮಕ್ಕಳಿಗೆ ಹಂಚಿದ ಬಳಿಕ ಶ್ರೀ. ಶಿವಾಜಿ ಸೆಟ್ಟಿ ೮ ಅಧ್ಯಕ್ಷತೆಯಲ್ಲಿ ಸಭೆಜರಗಿ ಬಯಲಾಟ ವಿತರಣೆ ಭಾಷಣಾನಂತರ ವಿವಿಧ ವಿನೋದಾವಳಿಗಳಾದವು ರಾತ್ರಿ ಅಧ್ಯಾಪಕವೃಂದದವರು ಏರ್ಪಡಿಸಿದ ಭೋಜನ ಕೂಟವಾದಬಳಿಕ ಜರಗಿದ ಗಾಯನಕಾರ್ಯದಲ್ಲಿ ಕುಮಾರಿ ಜಯಂತಿ ಸಾಮಂತ, ಶ್ರೀ ದಿನೇಶ ರಾವ್, ಶ್ರೀ ಅಣ್ಣಿಕ ನಾಯ್ಕರು ಭಾಗವಹಿಸಿದ್ದರು. ಕಾರ್ಯಕ್ರಮ ಶ್ರೀ ಬಾಮಿರಿಯನರು ಧನ್ಯವಾದಸಲ್ಲರ್ಪಿಸಿದರು.

ಹಡುಕಳಿತ್ತೂರು ಹಾರ್ಬರ್ ಎರಿ ಮೆಂಟರಿ ಶಾಲೆಯಲ್ಲಿ "ಮಕ್ಕಳ ದಿನಾಚರಣೆ" ಯು 14—11—58ರಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ಜಗದೀಶರಿಂದ ಧ್ವಜಾರೋಹಣವಾಯಿತು. ಶ್ರೀ ಹರಿಶ್ಚಂದ್ರನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಹಿ ತಿಂಡಿ ಹಂಚೋಣ ಹಾಗೂ ವಿವಿಧ ವಿನೋದಾವಳಿಗಳಿಂದ ಕಾರ್ಯಕ್ರಮವು ಮುಕ್ತಾಯವಾಯಿತು.

ದೀಪಾವಳಿ ದಿನಾಚರಣೆ— ತಾ. ೩ರಂದು ಶ್ರೀ ಮುಖ್ಯಪ್ರಾಣ ತಂತ್ರಿ ವಿದ್ಯಾನ್ ಇವರ ಸಾರ್ವಜನಿಕ ಅಧ್ಯಕ್ಷತೆಯಲ್ಲಿ ಬೈಲೂರು ಯಂ. ಯಂ. ಕಿರಿಯ ಬುನಾದಿ ಶಾಲೆಯಲ್ಲಿ ದೀಪಾವಳಿ ಪಬ್ಬದ ಆಚರಣೆಯು ನಡೆಯಿತು. ಮುಖ್ಯೋಪಾಧ್ಯಾಯರಾದ ಶ್ರೀ ಗ್ಲೇಡ್ವಿನ್ ಜತ್ತನ್ನರು ಸ್ವಾಗತಿಸಿದರು. ಕಲಿತ ವಿದ್ಯಾರ್ಥಿಗಳೂ ಅಧ್ಯಾಪಕರೂ ಭಾಷಣ ಮಾಡಿದ ನಂತರ ಅಧ್ಯಕ್ಷರು ದೀಪಾವಳಿ ಪಬ್ಬವನ್ನು ಆಚರಿಸಲು ಕಾರಣವೇನೆಂಬುದನ್ನೂ ಅವರ ವೈಶಿಷ್ಟ್ಯಗಳನ್ನೂ ತಿಳಿಸಿದರು.

ಸಾದರ ಸ್ವೀಕಾರ

ಸ್ನೇಹಸ್ಮೃತಿ- ಬರೆದವರು: ನಚಿಕೇತ. ಪ್ರಕಾಶಕರು: ಗಾಯತ್ರಿ ಪ್ರಕಾಶನ, ಚಾಮುಂಡಿಪುರಂ, ಮೈಸೂರು. ಪುಟಗಳು: ೧೮೮. ಬೆಲೆ: ರೂ. ೦-೭೫.

ನಾರೀಲೋಕದಲ್ಲಿ ನಾರದರು— ರೇಖಿಕರು: ಹೆಚ್ ಆರ್. ನಾಗೇಶರಾವ್. ಪ್ರಕಾಶಕರು: ಚಾತಕ ಪ್ರಕಾಶನ ಬೆಂಗಳೂರು-೩. ಪುಟಗಳು:೫೭ ಬೆಲೆ:ರೂ ೦-೭೫.

ಏಳಿಗೆಯ ಹಾದಿ— ಪ್ರಕಾಶಕರು: ಭಾರತ ಸರಕಾರದ ಕಮಾರ್ಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ-೬. ಪುಟಗಳು: ೮೦. ಬೆಲೆ. ರೂ ೦-೭೫.

ಸಂದೇಶ— ದೀಪಾವಳಿ ಸಂಚಿಕೆ) ಸಂಪಾದಕರು ಶ್ರೀ ಗೋ ಅ ದೇಶಾಂಡೆ. ಭುವನೇಶ್ವರಿ ಮುದ್ರಣಾಲಯ, ೧೫೫೩, ಪಾಪಟಿ ಬೀದಿ, ಬೆಳಗಾವಿ. ಬೆಲೆ: ೦-೫೦.

ಚಿತ್ರವಾಣಿ (೧೧೧-೪೪) ಸಂಪಾದಕರು: ಎಂ. ಕೃಷ್ಣನ್, 55 ಹಾಸ್ಪಿಟಲ್ ರೋಡ್, ಬೆಂಗಳೂರು-೧. ಬೆಲೆ: ಎರಡು ಆಣೆಗಳು.

ನೋಟೀಸು

ಉಪ್ಪಿ. ಡಿ. ಮುಂ ಕೋರ್ಟಿನಲ್ಲಿ

S-C 387/1958

ಕೂಸು ಮರಕಾಲ—ವಾದಿ

ಮತ್ತು

ಬಾಬು ಮರಕಾಲ ಕೂಡಾ ಪ್ರತಿವಾದಿರು

ಇವರಿಬ್ಬರಿಗೆ—

ತಿಳಿದ ಪ್ರತಿವಾದಿ:—ಗುತ್ತಿನಮರಕಾಲ-ಬಾಬು ಮರಕಾಲನ ಆಳು-ಉಪ್ಪಿ ತಾಲ್ಲೂ ಉಪ್ಪೂರು ಗ್ರಾಮದ—

ಸದ್ರಿತಿನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ವಾದಿಗೆ ಪ್ರತಿವಾದಿಯು ತಾರೀಕು 12-7-55ರಲ್ಲಿ ಬರೆಸಿಕೊಟ್ಟ ವಿಸ್ಸಾಂಡು ನೋಟಿನ ಮೇಲೆ ನೂಡಿದ ವಾದಿಯು ಮೇಲ್ಕಂಡ ದಾವೆಯು ತಾರೀಕು 1-12-58ಕ್ಕೆ ಯಿಟ್ಟಿವೆ. ಆ ಕುರಿತು ನೀವೇನಾದರೂ ಉದಾಸೀನರುತಾರಾದಿದ್ದರೆ ಆ ದಿನ್ನ ಪೂರ್ವಾಹ್ನ 10ಗಂಟೆಗೆ ಈ ಕೋರ್ಟು ನುಂದೆ ಹಾಜ್ರಾಗಿ ಜ್ಞಾಪಿಸಿಕೊಳ್ಳತಕ್ಕ್ದು. ಕಪ್ಪುದೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾಗುವುದೀತು.

P.N Krishna Murthi Rao.
Advocate for Plaintiff.
Udipi, Date 8-11-58

ಜಂಟಾಹಣ ಭಾಕಿ ಇರುವವರು ದಯಮಾಡಿ ಕಳುಹಿಸಿಕೊಡ ಬೇಕಾಗಿ ವಿನಂತಿ.

ಸೌಂದರ್ಯೋಪಾಸನೆ

ಕವಿಕುಲಗುರುವು ಮಹಾ ಸೌಂದರ್ಯೋಪಾಸಕ

ಎಲ್ಲಿ ಸೌಂದರ್ಯವಿದೆಯೋ ಅಲ್ಲಿ ಕಾಲಿದಾಸನ ದೃಷ್ಟಿ ಹರಿದು ಅದನ್ನು ಸೆರೆಹಿಡಿದು ಕಾವ್ಯ ರೂಪಕ್ಕಿಳಿಸಿವೆ

"ಪುರಾ ಕವೀನಾಂ ಗಣನಾ ಪ್ರಸಂಗೇ
ಕನಿಷ್ಠಿಕಾಧಿಷ್ಠಿತ ಕಾಲಿದಾಸಃ
ಅದರ್ಯಮಾಪಿ ತತ್ತುಲ್ಯ ಕವೇರಭಾವಾತ್
ಅನಾಮಿಕಾ ಸಾರ್ಥವತೀ ಬಭೂವ॥"

ಹಿಂದೂ ಧರ್ಮದ ಪುನರುದ್ಧಾರವಾಗುತ್ತಿರುವ, ಬೌದ್ಧ ಧರ್ಮವು ಈ ದೇಶದಿಂದ ಮರೆಯಾಗುತ್ತಿರುವ, ಯಜ್ಞಾದಿ ವೈದಿಕ ಕೃತುಗಳು ಪುನಃ ಪ್ರಾರಂಭವಾಗತೊಡಗಿದ, ಅಶ್ವಮೇಧಾದಿ ಯಾಗಗಳು ಪುನರಾಂಭಿಸುತಿದ್ದ, ಜೀವನದ ದೃಷ್ಟಿಯು ಬದಲಾಗುತ್ತಿರುವ ಒಂದು ಸಂಧಿಗ್ಧಕಾಲದಲ್ಲಿ ಕವಿಕುಲಗುರುವೆನಿಸಿದ ಕಾಲಿದಾಸನು ಜನ್ಮಿಸಿದನು. ಇಹಲೋಕದ ಬಗ್ಗೆ ತಿರಸ್ಕಾರ ಭಾವನೆಯು ದೂರವಾಗುತಿದ್ದು, ಈ ಜೀವನವು ಸ್ವತಂತ್ರವೆನ್ನುವ ಜ್ಞಾನವೂ ಆಗಿನ ಜನತೆಯಲ್ಲಿತ್ತು. ಸಂಸಾರವನ್ನೂ ತ್ಯಜಿಸೆನೆಂದು ಅವಹೇಳನದೆ, ಭಿಕ್ಷು ಇಲ್ಲವೇ ಸನ್ಯಾಸಿಯಾಗುವುದರಲ್ಲೇ ಜೀವನದ ಸಾರ್ಥಕತೆ ಏದೆ ಎಂಬ ಭಾವನೆಯು ದೂರವಾಗುತಿತ್ತು. ಇದೊಂದು ಮಹಾ ವಿಚಾರ ಕ್ರಾಂತಿಯಾಗಿದ್ದು, ಈ ಕ್ರಾಂತಿ ನಾಯಕನು ಕವಿ ಕುಲ ಗುರು ಕಾಳಿದಾಸನಾಗಿದ್ದನು.

ವಿಸ್ತಾರ ವಿಶ್ವದ ಕಣಕಣದಲ್ಲಿ ಕಾಳಿದಾಸನು ಸೌಂದರ್ಯ ಮತ್ತು ಪ್ರೇಮವನ್ನು ಕಂಡುಕೊಂಡನು. ಅವನ ಸೌಂದರ್ಯ ಗ್ರಹಣ ಶಕ್ತಿ ಅತ್ಯಪಾರವಾಗಿದೆ. ಜಡ ಇಲ್ಲವೆ ಜೀವನಗಳೆಲ್ಲವುಗಳಲ್ಲಿಯೂ ಈ ವಿಭೂತಿಯ ದರ್ಶನವಾಗುತ್ತದೆ. ಈ ಸೌಂದರ್ಯ ವಿಭೂತಿಯಿಂದಲೇ ಜೀವನವು ಧನ್ಯವಾಗಬಲ್ಲುದು. ಪವಿತ್ರವಾಗಬಲ್ಲುದು ತನ್ಮಯವಾಗ ಬಲ್ಲುದು- ಮತ್ತು ಧಾನಮಯ ವೆನಿಸಬಲ್ಲುದು.

ಶಕುಂತಲಾ ನಾಟಕದಲ್ಲಿ ರಾಜ ದುಷ್ಯಂತನ ದೃಷ್ಟಿಯು ಶಕುಂತಲೆಯತ್ತ ಬೀಳುತ್ತದೆ. ಆಗ ರಾಜನಬಾಯಿಂದ ಅನಾಯಾಸವಾಗಿ ಮಾತು ಹೊರಬೀಳುತ್ತದೆ- ಅಹಾ, ನೇತ್ರಶೃಷ್ಟಿಯನ್ನೆಂದು ನಾನು ಪಡೆದೆನು. ಅಥವಾ, ನನ್ನ ನೇತ್ರಗಳಂದು ತೃಪ್ತವಾದುವು. "ಅಯೇಲಬ್ಧಂ ನೇತ್ರ ನಿರ್ವಾಣಮ್".

ಈ ನಾಲ್ಕು ಪದಗಳಲ್ಲಿ ಮಹಾಕವಿಯು ಶಕುಂತಲೆಯ ಸೌಂದರ್ಯಾತಿಶಯವೆಲ್ಲವನ್ನೂ ನಮ್ಮ ಮುಂದಿಡುತ್ತಾನೆ. ಶಕುಂತಲೆಯ ಸೌಂದರ್ಯ ದೈವೀಯವಾದುದು; ಅನುಪಮವಾದುದು- ಆಕೆಯ ಅಪ್ರತಿಮ ರೂಪರಾಶಿಯನ್ನು ಕಂಡು ದುಷ್ಯಂತನು ಯಾವುದೋ ದಿವ್ಯ ಜ್ಯೋತಿ ವಸ ಧಾತಳದ ಮೇಲೆ ಅವತಾರವೆತ್ತಿತೆ ಎಂದುಕೊಂಡನು.

ಮಾನುಷೀಷು ಕಥಂ ವಾ ನ್ಯಾದಸ್ಯ ರೂಪಸ್ಯ ಸಂಭವಃ ! ನ ಪ್ರಭಾತರಳ ಜ್ಯೋತಿರುದೇತೆ ವಸುಧಾತಲಾತ್॥

ಶಕುಂತಲೆಯು ಸೌಂದರ್ಯದಲ್ಲಿ ಕೃತ್ರಿಮತೆಯು ಎಳ್ಳಷ್ಟೂ ಇರುವುದಿಲ್ಲ. ಅದು ಸರ್ವಥಾ ನೈಸರ್ಗಿಕವಾಗಿತ್ತು; "ಅಲಿ ವ್ಯಾಜ ಮನೋಹರೈ ವಪುಃ" ಆಗಿತ್ತು. ವಸ್ತ್ರಗಳಲ್ಲಿ ಅಲಂಕಾರವಿಲ್ಲ; ಸೌಂದರ್ಯವು ವಲ್ಕಲ ವಸನಗಳಲ್ಲಿಯೇ ಇದೆ. ಹಾಸನೆಗಳಿಂದಾವೃತವಾದ ಕಮಲವು ಸುಂದರವಲ್ಲವೆ! ಹಾಗಿರುವಾಗ ವಲ್ಕಲ ಬಟ್ಟೆಗಳಲ್ಲಿ ಶಕುಂತಲೆಯ ಸೌಂದರ್ಯವು ಪ್ರಕಟವಾಗುವುದಿಲ್ಲವೆ? ಚಿಂದ್ರನ ಶೋಭೆಯಾತನ ಕಲಂಕದಿಂದ ಕುಂದದೆ ಬೆಳೆಯುತ್ತದೆ. ಹಾಗೆಯೇ ವಲ್ಕಲ ವಸನಧಾರಿಯಾದ ಶಕುಂತಲೆಯು ಮತ್ತಷ್ಟು ಸುಂದರಿಯಾಗಿ ತೋರುತಿದ್ದಳು ಆಕೃತಿ ಸುಂದರವಾಗಿರುವುದರಿಂದಲೇ ಎಲ್ಲ ವಸ್ತ್ರಾಲಂಕಾರಗಳು ಒಪ್ಪುತ್ತವೆ. ಆದುದರಿಂದಲೇ "ಮಧುರಾಣಾಂ ಮಂಡನಂ, ನಾಕೃತೀನಾಮ್."

ಸೌಂದರ್ಯವು ಪಾಪಪ್ರೇರಕವೆ? ಇದಕ್ಕೆ ಕಾಲಿದಾಸನು ಸೌಂದರ್ಯವು ಶೀಲ ಮತ್ತು ಸದಾಚಾರಗಳತ್ತ ಒಯ್ಯುವುದು ಎನ್ನುತ್ತಾನೆ. ಸತ್ಯ ಸೌಂದರ್ಯ ಪವಿತ್ರವಾಗಿದೆ. ಪಾರ್ವತಿಯ ಸೌಂದರ್ಯವು ತಪಸ್ವಿಗಳಿಗೂ ಶೀಲ ಮತ್ತು ಸದಾಚಾರಗಳನ್ನು ಉಗಡೇತಿಸುತಿತ್ತೆಂದು ಹೇಳುತ್ತಾನೆ: "ತೇ ಶೀಲಾಮುದಾರಾ ದರ್ಶನೇ ತಪಸ್ವಿನಾಮಪ್ಯಪಸೇಶತಾಂ ಗತಮ್" ಎಂದು.

ಇನ್ನೆಡೆಗಳಲ್ಲಿಯೂ ಉತ್ಕಂತೆತೆ ಹಾಗೂ ಆಕರ್ಷಕತೆಗಳಿದ್ದಲ್ಲಿ ಸೌಂದರ್ಯವು ವಿಕಸಿತವಾಗುವುದು ಎರಡರಲ್ಲಿ ಯಾವುದಾದರೊಂದರ ಕೊರತೆಯಿದ್ದರಲ್ಲಿ ಸೌಂದರ್ಯವು ಸೊರಗುವುದಿಲ್ಲ. ಇಬ್ಬರು ಪ್ರೇಮಿಗಳು ವಿಲನವಾಗಲು ಉತ್ಕಂಠಿತರಾದರೆ, ಅವರ ವಿಲನವಾಗದೆ ಸರಾಶಯಾಗಿ ಬೇಕಾಗಿ ಬಂದರೆ, ಆಗ, ಶರೀರತ್ಯಾಗ ಮಾಡುವುದು ನ್ಯಾಯೋಚಿತ ಮತ್ತಲ್ಲಿಯೇ ಪ್ರೇಮವು ಅಭಿವ್ಯಕ್ತಗೊಳ್ಳುತ್ತದೆ ಎನ್ನುತ್ತಾನೆ ಕಾಲಿದಾಸ: "ಶರೀರ ನಾಶೋಪಿ ಸಮಾಸುರಾಗಯೋಃ"

ಪ್ರೇಮಿಯೇ ಇನ್ನೊಬ್ಬ ಪ್ರೇಮಿಯನ್ನು ರಿಯಬಲ್ಲ. ಪ್ರೇಮವ್ಯಾಕುಲನೇ ಪ್ರೇಮವ್ಯಗ್ರನೊಡನೆ ಸೇರಬಲ್ಲ. ಕಾದ ಕಬ್ಬಿಣವೇ ಕಾದಕಬ್ಬಿಣದೊಡಗೂಡಬಲ್ಲದು- ಅದುದರಿಂದಲೇ ಪ್ರೇಮವ್ಯಾಕುಲನಾದ ಪುರೂರವನೇ ಊರ್ವಶಿಯೊಡನೆ ಕೂಡಬಲ್ಲನು ಏಕೆಂದರೆ, ಪ್ರೇಮಿಯರ ಉತ್ಕಂಠತೆ ಮತ್ತವರ ಸಂತಾಪಗಳು ಸರಾಕಾಷ್ಠೆಯನ್ನು ಮುಟ್ಟಿ ಬಿಟ್ಟಿವೆ.

ಕಾವ್ಯನ ಬಾಣ ವತ್ತು ಸೌಂದರ್ಯಗಳು ನೆನೂಧಿಗ್ದನಾಗಿದ್ದ ತಿವನನ್ನು ಕ್ಷಣ ಮಾತ್ರಕ್ಕೆ ವಿಚಲತಗೆಯ್ದುವು. ಆದರೆ ಕೂಡಲೇ ಆತ ಸ್ಥಿರನಾದನು. ಆತನ ಮೂರನೆಯ ಕಣ್ಣು ತೆರೆಯಿತ; ದೇವತೆಗಳು ಗಾಬರಿಯಾದರು; ಕ್ಷಮಿಸು ಕ್ರೋಧಿಶೇಡ, ಶಾಂತನಾಗ ಪ್ರಭೂ ಎಂದವರು ಪ್ರಾರ್ಥಿಸಿದರು; ಆದರೆ, ಈ ಶಬ್ದಗಳು ಕೇಳಿಸುವುದಕ್ಕೆ ಮೊದಲೇ "ಭಸ್ಮಾವಶೇಷಂ ಮದನಂ ಚಕಾರ"—

ಶಕುಂತಲೆಯು ತಾಳು ತಂದೆ ಕಣ್ವರನ್ನು ಬೀಳ್ಕೊಳ್ಳುತಿದ್ದಾಳೆ, ಅಶ್ರುವನ್ನಾಕೆ ಬಿಟ್ಟು ತೆರಳುವ ಅವಸರದಲ್ಲಿ ತಂದೆಯ ಕೃದಯವು ತುಂಬಿಬರುತ್ತದೆ. "ಎಲೆ ಮರಗಳೇ, ಜಾರು ನಿವುಗೆ ನೀರುಣಿಸದೆ ತಾನು ನೀರಡಿಸಿದ್ದರೂ ನೀರು ಕುಡಿಯುಯುತ್ತಿರಲಿಲ್ಲವೋ, ಆ ಭೂಷಣಗಳಲ್ಲಿ ಬಯಕೆಯಿದ್ದರೂ ನಿಮ್ಮ ಮೇಲಿನ ಪ್ರೇಮದಿಂದ ಪುಷ್ಪಾದಿಗಳನ್ನು ಕೊಯ್ಯುತ್ತಿರಲಿಲ್ಲವೋ, ನಿಮ್ಮಲ್ಲಿ ಹೂಕಂಡಿಡಿನೆ ಉತ್ಸವ ಮಾಡುತಿದ್ದಳೋ ಅವಳು ನಿಮ್ಮನ್ನು ತೊರೆದು ಹೋಗುತಿದ್ದಾಳೆ; ಆಕೆಯನ್ನು ಬೀಳ್ಕೊಡಿ" ಎನ್ನುತ್ತಾನೆ.

ನವವಧುವು ತನ್ನ ಪರಿವಾರವನ್ನು ಬೀಳ್ಕೊಡುವ ದೃಶ್ಯವು ನಿಜವಾಗಿಯೂ ಹೃದಯವಿದ್ರಾವಕವಾದೆ. ಶಕುಂತಲೆಯು ಹೊರಟು ನಿಂತುದರಿಂದ ಮೃಗಗಳು ಹುಲ್ಲು ತಿನ್ನುವುದನ್ನು ಬಿಟ್ಟುಬಿಟ್ಟವು; ಮಯೂರಿಯು ನರ್ತಿಸುತ್ತಿದನ್ನು ತ್ಯಜಿಸಿತು, ಮರಗಿಡಗಳು ಎಲೆಯುದುರಿಸುವ ರೂಪದಿಂದ ಕಣ್ಣೀರು ಸುರಿಸಿದುವು. ಶಕುಂತಲೆ ಮುಂದುವರಿಯುತ್ತಾಳೆ. ಆದರೆ, ಆಕೆಯು ಸೀರೆಯ ಸೆರಗನ್ನು ಹರಿಣ ಶಾಬಕವು ಎಳೆಯುತ್ತದೆ. ಆಕೆ ತಂದೆಯೊಡನೆ ಕೇಳುತ್ತಾಳೆ; ಅಪ್ಪಾ, ಯಾರು ನನ್ನನ್ನು ತಡೆಯುತಿದ್ದಾರೆ? ಆಗ ಕಣ್ವನು "ಯಸ್ಯ ತ್ವಯಾ ವ್ರಣ ವಿರೋಪಣ ಮಿಂಗುದೀ ನಾಂ ತೈಲಂ ನ್ಯಷಿಚ್ಯತ ಮುಖೇ ಕುಶ ಸೂಚಿ ವಿದ್ಧೇ' -ಎನ್ನುತ್ತಾನೆ! ಅವನು ಮತ್ತಾರು? ಮುಖದಲ್ಲಿ ದರ್ಭೆತಾಗಿ ಗಾಯವಾದಾಗ, ನೀನು ಇಂಗುದೀ ತೈಲ ಹಚ್ಚಿ ಪುತ್ರಸವಾನೆ ಲಾಲನೆ ಪಾಲನೆಗಳಿಂದ ಸಾಕಿ, ಸಲಹಿದ ಮೃಗನಂದನನೇ ಆಗಬೇಕು ಅಲ್ಲವೆ?

ಭವಭೂತಿಯು ಕರುಣಾರಸದ ದೃಶ್ಯವನ್ನು ಚಿತ್ರಿಸಿ ಆದರಲ್ಲಿ ಯಶಸ್ಸು ಪಡೆದಿದ್ದರೂ ಇದಕ್ಕವನಿಗೆ ಒಂದಿಡಿ ಅಂಕವೇ ಬೇಕಾಯಿತು. ಆದರೆ, ಅಂತಹ ಸಾಧನೆಯನ್ನು ಕವಿ ಕಾಲಿದಾಸನು ಕೆಲವೇ ಪದಗಳಲ್ಲಿ ಸಾಧಿಸಿ ಬಿಟ್ಟಿದ್ದಾನೆ. ಕವಿ ಜಿಮ್ಮ ತ್ಯಾರವೆಂಬರೆ, ಇದೇ' ಅದುದರಿಂದಲೇ ಬಾಣ ನಂತಹ ಮಹಾ ಕವಿಯೂ ಕಾಲಿದಾಸನ ಬಗ್ಗೆ ತನ್ನ ಶ್ರದ್ಧಾಂಜಲಿಯನ್ನು ಈ ಶಬ್ದಗಳ ಮೂಲಕ ಅರ್ಪಿಸಿದ್ದಾನೆ:

ನಿರ್ಗತಾಸು ನ ವಾ ಕಸ್ಯ |
ಕಾಲಿದಾಸಸ್ಯ ಸೂಕ್ತಿಷು |
ಪ್ರೀತಿರ್ಮಧುರಸ್ಯಂದಿನೀಷು |
ಮಂಜರೀಷ್ವಿವ ಜಾಯತೇ ॥

ಕಾಲಿದಾಸ ಸೌಂದರ್ಯವನ್ನು ಎಳ್ಳಿದ್ದರೂ ಆಸ್ವಾದಿಸಬಲ್ಲ ಎಂತಹವೇ ಕವಿ ಕುಲ ಗುರುವಾಗಿ ಮೆರೆದಿದ್ದಾನೆ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ಶಾಸನ ಪ್ರಣಾಳಿ

(೧ನೇ ಪುಟದಿಂದ)

ಸಂಬಂಧ, ರಾಜ್ಯಪಾಲ, ಮುಖ್ಯ ಮಂತ್ರಿ ಸಂಬಂಧ, ಮಕ್ತು ಸರಕಾರಗಳನ್ನೂ ಕೆಲವಾರು ತಕ್ಷಗಳನ್ನೂ ಹೊಂದಿಕೊಂಡು ಈ ಕಾರ್ಯಗಳು ನಡೆಯುತ್ತವೆ. ಆದರೆ, ವಿಭಿನ್ನ ಪಕ್ಷಗಳ ದೃಷ್ಟಿಕೋಣ ಹಾಗೂ ಸಾರ್ವಜನಿಕ ದೃಷ್ಟಿಕೋಣದಿಂದ ಯಾವುದೂ ಅಸಂಗತವಾಗಬಾರದು. ರಾಜ್ಯಪಾಲರು ನಿಜವಾಗಿಯೂ ಬಹಳಕಾರ್ಯವನ್ನು ಸಾಧಿಸಬಲ್ಲರು ಸಾಮಾನ್ಯತಃ ಸರಕಾರದ ಮೇಲೆ ಅವರು ತಮ್ಮ ಬಯಕೆಯನ್ನು ಹೇರಬಯಸುವುದಿಲ್ಲ." ಎಂದು ಪ್ರಧಾನಿ ನೆಹರೂರವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಮೇಲಿನ ವಿವರಣೆಯಿಂದ, ರಾಜ್ಯಪಾಲರ ಅಧಿಕಾರಗಳು ಎಷ್ಟು, ರಾಜ್ಯದ ಹಿತದ ದೃಷ್ಟಿಯಿಂದ ಅವರಿಗೆ ಕಾರ್ಯಕಾರಿಗೊಳಿಸಬಹುದಾದ ಅವಕಾಶಗಳು ಎಷ್ಟು, ಅವರು ಬಯಸಿದರೆ, ರಾಜ್ಯದ ಆಡಳಿತ ಯಂತ್ರವು ಯಾವ ರೀತಿಯಲ್ಲಿ ಸುಧಾರಿಸಬಲ್ಲುದು ಎಂಬವು ಸುವ್ಯಕ್ತವಿದೆ. ಆದರೆ, ರಾಜ್ಯಪಾಲರು ಮಾತ್ರ ತಮಗಿರುವ ಈ ಅಧಿಕಾರಗಳನ್ನು ಎಷ್ಟರ ಮಟ್ಟಿಗೆ ಸದುಪಯೋಗಿಸ ತ್ತಾರೆ ಎಂಬುದೂ ಒಂದು ಪ್ರಶ್ನೆ. ಒಂದು ರಾಜ್ಯದ ಪ್ರಧಾನಾಧಿಕಾರಿಯಾಗಿದ್ದು, ರಾಜ್ಯ ಶಾಸನವನ್ನು ನಿರೂಪಿಸುವವನಾಗಿದ್ದು ಒಬ್ಬ ರಾಜ್ಯಪಾಲನು ತನ್ನ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸುವುದು ಮತ್ತು ಮಂತ್ರಿ ಮಂಡಳಿಗೆ ಮಾರ್ಗದರ್ಶನ ಮಾಡುವುದು ಅಗತ್ಯವಿದೆಯೆನ್ನುವುದು ನಿರ್ವಿವಾದ. ಇನ್ನಾದರೂ ಭಾರತದ ವಿವಿಧ ರಾಜ್ಯಗಳ ರಾಜ್ಯಪಾಲರು ಕಣ್ಣುತೆರೆಯುವರೆ? ತಮ್ಮ ಅಧಿಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಾಪಕನಿಯಮಗಳಿಂದ ಶಾಂತಿಗೂ ಸುವ್ಯವಸ್ಥೆಯೊಡನೆ ತಮ್ಮ ರಾಜ್ಯದ ಮೇಲ್ಮೈಯನ್ನು ನಾಧಿಸುವ ಚಟುವಟಿಕೆಗಳು ರಾಜ್ಯಪಾಲರಲ್ಲಿ ಹೆಚ್ಚಬೇಕು.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಪಿತಾಳ, ಎಂ.ಬಿ.ಬಿ.ಎಸ್.)
ಭೌತಿಕ ದರ್ಶನ
(ಬಡಕೈಲ ಕೃಷ್ಣ ಭಟ್ಟ ಎಲ್.ಎಲ್.ಬಿ)
ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ವಿನೋದ ವಿಹಾರ

(೪ನೇ ಪುಟದಿಂದ)

ಆದರೆ, ಆ ವ್ಯಾಜಿಗಳಾವುವೂ ಕೃಷ್ಣಡಕವನ್ನು ಧರಿಸುವುದಿಲ್ಲವೆ? —ಎರಡನೆಯ ವಕೀಲ ಮೊದಲನೆಯ ವಕೀಲನಿಗೆ ಕಟ್ಟಿಸಿಬಿಟ್ಟ

ಏಕೇಯತೆ

ವಕೀಲರೊಬ್ಬರು ತನ್ನ ಕಕ್ಷಿಗಾರನ ಬಾಯಿಂದ ಸತ್ಯವನ್ನು ಹೊರಗೆಡಹಲು ಹೇಳಿದರು—"ನೋಡು, ನೀನು ಪ್ರತ್ಯಕ್ಷವಾಗಿ ಕಂಡುದನ್ನೇ ಹೇಳಬೇಕು."

"ಸರಿ, ಆಗಬಹುದು".

"ಈಗ, ನಿನ್ನ ಹೆಸರೇನು ಹೇಳು, ಕಕ್ಷಿಗಾರ ನಿರುತ್ತರನಾಗಿದ್ದ.

ಏನಪ್ಪ ನಿನ್ನ ಹೆಸರೇನು ಹೇಳು

"ಮಹಾಸ್ವಾಮಿ, ನನ್ನ ಹೆಸರನ್ನು ನಾನು ಕಣ್ಣಿನಿಂದ ನೋಡಿಯೇ ಇಲ್ಲವಲ್ಲಾ? ಈಗೇನು ಮಾಡಲಿ?,,

ಮರೆವಿನ ಪರಿಣಾಮ

ತಾಯಿ ಏನೋ ಇದು? ಈದಿನವೂ ನಿನ್ನ ಅಂಗಿಯಲ್ಲಿ ಕೆಸರುಕಾಗಿದೆ?

ಮಗ.. (ಚಿಂತೆಯಿಂದ) ಏನುಮಾಡಲಮ್ಮ ಕಾಲುಜಾರಿ ಬೀಳುವ ಅವಸರದಲ್ಲಿ ಕೋಟು ಕಳಚಿಡಲೂ ಮರೆತು ಬಿಟ್ಟೆ.

ನಿಜವಾದ ಕಾರಣ

ನ್ಯಾಯಾಸ್ಥಾನದಲ್ಲಿ ವಕೀಲನೊಬ್ಬ ಅಪರಾಧಿಯನ್ನು ಪ್ರಶ್ನಿಸುತ್ತಿದ್ದ.

"ನೀನು ಪ್ರದೀಪನ ಮನೆಗೆ ಹೋಗಲು ಕಾರಣವೇನು?"

ಅಪರಾಧಿ—"ಏನು ಕೇಳ್ತೀರಿ ಸ್ವಾಮೀ, ಬಾಗಿಲಲ್ಲಿ "ಸುಸ್ವಾಗತಂ" ಎಂದು ಬರೆದಿತ್ತು. ನಾನೂ ಹೋಗಬಹುದೆಂದು ಹೊಕ್ಕು ಬಿಟ್ಟೆ."

ಹೆತ್ತಾತ ಬರೋಕೆ....

ಅಧ್ಯಾಪಕ—"ಲೋ ರಾಮಯ್ಯ, ನೀ ನೀಗೀಗ ಶಾಲೆಯ ಕೆಲಸಗಳನ್ನು ಸರಿಯಾಗಿ ಮಾಡುತ್ತಿಲ್ಲ. ನಾಳೆ ಬರುವಾಗ ನಿನ್ನ ತಂದೆಯನ್ನು ಸಂಗಡ ಕರೆದು ತರಬೇಕು.

ರಾಮಯ್ಯ—ಓ, ಅದಕ್ಕೇನಡ್ಡಿ? ಆದರೆ...

ಅಧ್ಯಾಪಕ—ಆದರೆ...ಏನೋ ಅದು?

ರಾಮಯ್ಯ—ಅಲ್ಲ ಸರ್, ನಮ್ಮಪ್ಪ ಡಾಕ್ಟರು. ಅವ್ರು ಶಾಪು ಬಿಟ್ಟು ಇಲ್ಲಿ ಬರೋಕೆ ಹತ್ತು ರೂಪ್ಯಾ ಫೀಸಾಗುತ್ತೆ. ಅದರಲ್ಲೊಂದೈದು ಅಡ್ವಾನ್ಸ್ ಕೊಟ್ಟು ಬಿಡ್ತೀಯಾ?

ಮಗ ಬೇಕಾದರೆ....

ಮಗ ಸ್ನಾನ ಮಾಡಲು ಒಪ್ಪದಿರಲು ತಾಯಿ ಜೋರು ಮಾಡತೊಡಗಿದಳು ಆಗ,

ಮಗ—"ಅಮ್ಮಾ, ಉಪಾಧ್ಯಾಯರು ನಿನ್ನೆ ಹೆಳಿದ್ದಾರೆ...."

ತಾಯಿ—"ಹೌಹಾದು, ಅವರು ಸ್ನಾನ ಮಾಡಬಾರದು ಎಂದು ಅಂದಿದ್ದಾರೆ."

ಮಗ—"ಹಾಗಲ್ಲಮ್ಮ, ಮನುಷ್ಯನು ಮಣ್ಣಿನಿಂದಲೇ ಆದನು ಎಂದಿದ್ದಾರೆ. ನಾನು ಸ್ನಾನ ಮಾಡಿದರೆ ಕೆಸರಾಗಿ ಕದಡಿ ಹೋದರೆ ಮತ್ತೆ ನಿನಗೆ ಮಗನೆಲ್ಲಿಯವ್ವಾ?"

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಕಲಾ ಕುಸುಮ

ಅನ್ಯ ಕಲೆಗಳಂತೆ ಸಂಗೀತವೂ ಸ್ಫೂರ್ತಿಜನ್ಯ

ಭಕ್ತಿ, ಜಾನಪದ ಮತ್ತು ಶಾಸ್ತ್ರೀಯ ಸಂಗೀತಗಳೆಲ್ಲವೂ ಮೂಲತೀಯ ಇಲ್ಲವೇ ಆಧ್ಯಾತ್ಮಿಕ ಹಿನ್ನೆಲೆಯಿಂದ ಕೂಡಿವೆ

ಅನ್ಯ ಕಲೆಗಳಂತೆ ಸಂಗೀತವೂ ಕಲಾವಿದನು ಅನುಭವಿಸುವ ಸ್ಫೂರ್ತಿ ಜಾಗೂ ತಾಳುವ ಸುನೋಧರ್ಮದ ಫಲವಾಗಿ ಅವನ ಹೃದಯಾಂತರಾಳದಿಂದ ಹೊರ ಹೊಮ್ಮುತ್ತದೆ. ಇಂತಹ ಅನುಭವವಿಲ್ಲದೆಯೇ ಕೃತಿ ರಚಿತವಾಗಲೂಬಹುದು. ಒಬ್ಬರ ಮರ್ಜಿಗಾಗಿಂದೇ ತಯಾರಾಗಬಹುದಾದ ಕೃತಿ ಶಾಸ್ತ್ರೀಯ ದೃಷ್ಟಿಯಿಂದ ಸಿಯಮಬದ್ಧವಾಗಿದ್ದು ಸುಂದರವಾಗಿಯೂ ಇರಬಹುದು. ಆದರೆ ನಿಜವಾದ ಸ್ಫೂರ್ತಿಯಿಲ್ಲದೆ ರಚಿತವಾದ ಇಂದು ದೊಡ್ಡ ಕೊರತೆ ಮಾತ್ರ ಇದ್ದೇ ಇರುತ್ತದೆ. ನಿಜವಾದ ಕಲೆ ಯಾವತ್ತೂ ಜೀವಂತ. ಅದಕ್ಕೆ ಹೃದಯಾಂತರಾಳದ ಸ್ಫೂರ್ತಿ ಬೇಕು. ಅದರ ಫಲವಾಗಿಯೇ ಅದು ಮೂಡಬೇಕು.

ಒಂದು ಗೊಂಬೆ ನೋಡುವುದಕ್ಕೆ ತುಂಬಾ ಸೊಗಸಾಗಿರಬಹುದು, ನಿಜವಾದ ಗೊಂಬೆಯಷ್ಟೇ ಮುದ್ದು ಮುದ್ದಾಗಿ ಕಾಣಬಹುದು. ಆದರೆ ನಿಜವಾದ ಮಗು, ಅದು ನೋಡುವುದಕ್ಕೆ ಅಷ್ಟು ಜೆನ್ನಾಗಿ ಲ್ಲದಿದ್ದರೂ ಹೇಗೆ ಜೀವಂತವೋ ಹಾಗಿರಬೇಕು ಒಂದು ಕೃತಿ ಗೊಂಬೆಯೇ ಹೊರತು ನಿಜವಾದ ಮಗು ಎಂದಿಗೂ ಆಗಲಾರದು.

ನಿಜವಾದ ಕಲಾಕೃತಿ ಮನುಷ್ಯನ ಹೃದಯಾಂತರಾಳವನ್ನು ನೇರವಾಗಿ ಮುಟ್ಟುತ್ತದೆ ಮನೋಧರ್ಮದ ಮೇಲೆ ಆಗುವ ಈ ಪರಿಣಾಮ ಮುಖ್ಯ.

ಭಾಷೆ ಹುಟ್ಟುವುದಕ್ಕೆ ನೊದಲಿನಿಂದಲೂ ಮಾನವ ವಿಧ್ಯಾನವಿದೆ ಅನುಭವವನ್ನು ಸನಿಯುತ್ತಾ ಬಂದಿದ್ದಾನೆ ಸಂಗೀತ ಮತ್ತು ನೃತ್ಯ ಇವೆರಡೂ ಇದರ ಸಂಕೇತವಾಗಿ ಬೆಳೆದಿವೆ.

ಶಬ್ದಗಳ ಹಾಗೂ ಸ್ವರಗಳ ನಿಯಂತ್ರಣದಿಂದ ಉಟ್ಟಾಗುವ ಮಧುರ ನಾದವನ್ನು ಮಾನವನು ಹಾಗೆ ಮೆಚ್ಚಿದ ಪರಿಣಾಮವಾಗಿಯೇ ಸಾಧಾರಣ ಕೊಳಲು ಮತ್ತು ತಂಬೂರಿ ಹುಟ್ಟಿಕೊಂಡವು. ಮುಂದೆ ಬಗಬಗೆಯ ಸಂಗೀತ ವಾದ್ಯಗಳು ಹುಟ್ಟಿಕೊಳ್ಳುವುದಕ್ಕೆ ಇದೇ ಮೂಲ.

ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಮರೆಯಲಾಗದು. ಭಾಷೆಗಿರುವ ಪ್ರೇ ಉರ್ಧ ಸಂಗೀತಕ್ಕೂ ಇದೆ. ಅವರದೇ ಒಂದು ಪ್ರತ್ಯೇಕ ಸಂಕೇತ—ಭಾಷೆ, ವ್ಯಾಪ್ತಿ ಉಚ್ಚ ಮಟ್ಟದ್ದು ಆದರ ಪರಿಣಾಮವೆಲ್ಲ ಮಾನವನ ಹೃದಯದ ಮೇಲೆ ಬಾಹ್ಯವ್ಯಾಪ್ತಿಗೂ ಒಂದು ಹೆಜ್ಜೆ ಮುಂದೆ ಒದ್ದ ಸಂಗೀತದ ಬಗ್ಗೆಯಂತೂ ತೀ ಮಾತು ತುಂಬಾ ನಿಜ.

ಒಂದು ಸಂಗೀತ ಕೃತಿಯ 'ಉರ್ಧ' ಹೀಗೇ ಎಂದು ಮಾತುಗಳಲ್ಲಿ ಹೇಳಲು ಸಾಧ್ಯವಾಗದೆ ಹೋಗಬಹುದು ಆರ್ಥ ಎಂಬ ಒಂದು ಪದವ ವ್ಯಾಪ್ತಿ ಸಂಗೀತದ ವಿಚಾರವಲ್ಲಿಂತೂ ಬಹಳ ದೊಡ್ಡದು.

"ಜಗ ಒನ್ಮೊಮ್ಮೆ ಈ ಕಲಾಕೃತಿಯ ಅರ್ಥ ನನು ನೀವು ಕೇಳುತ್ತಾರೆ. ಅರ್ಥ? ಅದರ ಮನೆ ಹತ್ತಾಳಾಯಿತು." ಎಂದೆ ಪ್ರಸಿದ್ಧ ಕಾರ್ನೆಂಟರ್ ಹೇಳುವ ಮಾತು ಇಲ್ಲಿ ತುಂಬಾ ಒಪ್ಪುತ್ತದೆ ನೋಡಿ ಅನಂದಿಸುವುದು ನಿಜವಾದ ಅರ್ಥ ಎಂಬುದು ಇವರ ಅಭಿಪ್ರಾಯ.

ಸಂಗೀತ ಕೃತಿಗಳನ್ನು ನಾವೆ ಮೂರು ವಿಧವಾಗಿ ವಿಂಗಡಿಸಬಹುದು

ಮೊದಲನೆಯದು ಭಕ್ತಿರಸ ಪ್ರಧಾನ ಸಂಗೀತ. ವೇದಮಂತ್ರಗಳೇ ಈ ವರ್ಗದ ಕೃತಿಗಳಿಗೆ ಮೂಲ ಎಂದು ಹೇಳಬಹುದು ಸಾಮಾನ್ಯವಾಗಿ ಎಲ್ಲ ಕೀರ್ತನೆಗಳೂ ಈ ವರ್ಗಕ್ಕೆ ಸೇರುತ್ತವೆ. ಇವುಗಳಲ್ಲಿ ಬಾಷೆಗೆ ಹೆಚ್ಚಿನ ಪ್ರಾಧಾನ್ಯ. ಸಂಗೀತಕ್ಕೆ ದ್ವಿತೀಯ ಸ್ಥಾನ. ರಾಮಾಯಣ ಕಾವ್ಯವನ್ನು ಶ್ರೀರಾಮನ ಮಕ್ಕಳು ಅವನ ಆಸ್ಥಾನದಲ್ಲಿ ಹಾಡಿದ ರೆಂಬ ಪ್ರತೀತಿ ಇದೆ. ಯಾವ ಘಟನೆಯ ಲ್ಲಿ ಅದನ್ನವರು ಹಾಡಿದರು ಎಂಬುದು ನಮಗೆ ಗೊತ್ತಿಲ್ಲ. ಆದರೂ ಒಂದಲ್ಲ ಒಂದು ರಾಗಕ್ಕೆ ಅವನ್ನವರು ಅಳವಡಿಸಿಕೊಂಡಿರಬೇಕು. ದಾಸರು ಸಾಧು ಸಂತರು ರಚಿಸಿದ ಕೃತಿಗಳನ್ನು ನಾವಿಂದು ಹೊಸ ರಾಗಕ್ಕೆ ಅಳವಡಿಸಿಕೊಂಡು ಹಾಡುವುದಿಲ್ಲವೇ? ಅದೇ ರೀತಿ ಅವರೂ ಒಂದು ರಾಗಕ್ಕೆ ಅಳವಡಿಸಿಕೊಂಡು ಹಾಡಿರಬೇಕು.

ಇನ್ನು ಜಾನಪದ ಗೀತೆಗಳ ವಿಷಯ ಎರಡನೆಯ ವರ್ಗಕ್ಕೆ ಸೇರುವ ಇವು ಹೆಸರೇ ಸೂಚಿಸುವಂತೆ ಜನತೆ ಆನಂದೋತ್ಸಾಹದಿಂದ ಹುಟ್ಟಿದ್ದು. ಹಾಡುವ ಗೀತೆಗಳು, ಇದರಲ್ಲಿ ರಾಗಕ್ಕಾಗಲಿ ಸಂಗೀತದ ನೀತಿ ನಿಯಮಗಳಿಗೇ ಆಗಲಿ ಅಷ್ಟು ಮಟ್ಟಿನ ಪ್ರಾಧಾನ್ಯ ಇಲ್ಲ. ಇಂತಹ ಹಾಡುಗಳ ವಸ್ತು ಆಯಾ ಕಾಲದ ಸಾಮಾಜಿಕ ವ್ಯವಸ್ಥೆಯಿಂದ ಸ್ಫೂರ್ತಿ ಪಡೆಯುತ್ತದೆ. ಕಥೆ ಹೇಳುವುದೂ ವೀರಾಗ್ರಣಿಗಳ ಗುಣಗಾನ ಮಾಡುವುದೂ ಇದರ ಉದ್ದೇಶ.

ಶಾಸ್ತ್ರೀಯ ಸಂಗೀತ ಬೇರೊಂದು ವರ್ಗಕ್ಕೆ ಸೇರುತ್ತದೆ. ಮೊದಲು ಸರಳ ರೂಪದ ಸಾಮಾನ್ಯ ಭಕ್ತಿಗೀತೆ ಮತ್ತು ಜಾನಪದ ಗೀತೆಗಳಿಂದ ಆರಂಭವಾದ ಸಂಗೀತ ಕಲೆ ಮುಂದೆ ತುಂಬಾ ಶಾಸ್ತ್ರೀಯ ಪ್ರಬುದ್ಧ ಕಲೆಯಾಗಿ ಬೆಳೆಯಿತು.

ಆದರೆ, ಒಂದು ಮಾತು ಇದು ಭಾರತದಲ್ಲಿನ ಒಂದು ವೈಶಿಷ್ಟ್ಯ. ಯಾವಕೃತಿಯೇ ಆಗಲಿ, ಅವಕ್ಕೊಂದು ಸುತೀಯ ಅಥವಾ ಆಧ್ಯಾತ್ಮಿಕ ಹಿನ್ನೆಲೆಯಿದ್ದೇ ರಚಿತವಾಗುವುದು ಸಾಮಾನ್ಯ ನಿಯಮ. ಭಾರತದಲ್ಲಿ ಸಂಗೀತಕ್ಕೂ ಭಕ್ತಿಗೂ ಬಹಳ ನಿಕಟವಾದ ಸಂಬಂಧ. ವೈಣಿಕರ ರಸಪ್ರಧಾನ ಕೃತಿಗಳೂ ಈ ನಿಯಮಕ್ಕೆ ಹೊರತಾಗಿಲ್ಲ. ಇಲ್ಲಿ ವ್ಯಕ್ತವಾಗುವ ಶೃಂಗಾರಮಯ ಭಾವನೆಗಳೂ ಭಕ್ತಿ ರಸದಿಂದ ಕೂಡಿರುತ್ತವೆ

—ಪ್ರೊ. ಆರ್. ಶ್ರೀನಿವಾಸನ್.

ಪದ್ಮಶ್ರೀ ಶ್ರೀಮತಿ ಕೃಷ್ಣಾಪಟ್ಟವರ್ಧನ ತಮ್ಮ ೧೦ ವರ್ಷ ಪ್ರಾಯದ ಅವಿವಾಹಿತೆ ಗಿಬ್ಬಿಸಳನ್ನು ನ್ಯೂಯೋರ್ಕ್ ನಗರದಲ್ಲಿ ಗಾರ್ಡಿಸಿಲಾಯಿಸ್ಸು.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಉಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಶುದ್ಧ ಹರಟೆ

ಮಕ್ಕಳ ದಿನಾಚರಣೆ ಎಂದರೆ ಹೀಗಿರಬೇಕು

ಅನುಭವದಿಂದ ಕಂಡುಕೊಂಡ ಸತ್ಯವು ಎಂದಿಗೂ ಸುಳ್ಳಾಗಿಸಬಾರದು

ನೆಹರೂ ಜಯಂತಿಯ ಆಚರಣೆಯನ್ನು ಶಿಶುದಿನಾಚರಣೆಯೆಂದೋ ಮಕ್ಕಳ ದಿನಾಚರಣೆಯೆಂದೋ ನಾನಾ ಪ್ರಕಾರದ ವೈಭವಗಳಿಂದ ನೆರವೇರಿಸಿ ಭಾವಿ ಭಾರತದ ಪುನರ್ನಿರ್ಮಾತರನ್ನು ಯೋಗ್ಯ ರೀತಿಯಲ್ಲಿ ಮುನ್ನಡೆಸುವ ಗುರುತರ ಜವಾಬುದಾರಿಯನ್ನು ತಮ್ಮ ಹೆಗಲಿನಿಂದಿಳಿಸಿ ತಾತ್ಕಾಲಿಕವಾಗಿ ನಿಟ್ಟುಸುರು ಬಿಡುತ್ತ ಬಂದ ಓರ್ವ ಮಹಾನ್ ಯುರನ್ನು ಕಂಡಾಗ, ನನಗೆ ತುಂಬಿದ ನಗು ಒಂದು ಬಿಟ್ಟಿತು. ಅದೂ ಎಂಥ ನಗು ಅಂತೀರಿ? ಜೊತೆಗೆ ಒಂಟೊಂಟಿ ಸೀನುಗಳು!

ನಮ್ಮನೇ ಸೀನು ಅಂದು ಮುಂಜಾನೇನೇ ಮನೇಬಿಟ್ಟು ತನ್ನ ಹಾಗೂ ತನ್ನವರ ದಿನಾಚರಣೆಗೆಂದು ಹೋಗಿಬಿಟ್ಟದ್ದೂ ಆಗ ನೆನಪಿಗೆ ಬಂದು. ಆತನನ್ನೆ ಆರಿಸಿವಾಂಗೂ ಆಯ್ತು ದಿನಾಚರಣೆಯ ಭಗ್ನಾವಶೇಷಗಳನ್ನು ಕಣ್ಣಾರೆ ಕಂಡಂಗೂ ಆಯ್ತೂಂತ ಯೋಚಿಸಿ ಸಾರ್ವಜನಿಕ ರನ್ನೆಯನ್ನು ಮೆಟ್ಟುತ್ತ ಸಾರ್ವಜನಿಕ ವೈದ್ಯಾಸಿನ ಕಡೆ ಕಂಬಿಕಿತ್ತೆ.

ಮಕ್ಕಳ ದಿನಾಚರಣೆ ಬಗ್ಗೆ ಹಲವಾರು ಸಂಗತಿಗಳು ಆಲ್ಲಿ ಇಲ್ಲಿ ಕೇಳಿಬರತೊಡಗಿದುವು. ಆವುಗಳು ಒಂದರಿನ್ನಿಂದೊಂದು ಕರ್ಣಪಟಲವನ್ನು ಭೇದಿಸುವಂತೆಯೇ ಇದ್ದುವು ಎನ್ನಬಹುದು. ಪಾಪ, ಮುಂಜಾನೆ ಬಿಸ್ಲಿಗೆ ಮೈಲುದ್ದ ಮೆರವಣಿಗೆ ತೆಗ್ಸಿದ ಮೇಲೆ ಆವುಗಳಿಗೆ ಸೀಹಂಚಿದಾಗುತ್ತೆಯೆ? ಆದಕ್ಕೆ ಯಾರ್ಯಾರ ಕೈಕಾಲು ಕಟ್ಟಿ ಹಳಸಲು ಬೆಲ್ಲ ಭತ್ತ ತುಂಬಿದೆ ತರಳು ತಂದು ಕಲಸಿ ಆವುಗಳಿಗೆ ಕೊಟ್ಟರೆ, ಪಾಪ, ಆವು ಓಕರಿಕೆ ಮಾಡಿ ಬಿದ್ದುಕೊಳ್ಳಬೇಕೆ? ಆಸ್ಪತ್ರೆ ಸಾಗಿಸೋ ಜವಾಬುದಾರಿ, ಮದ್ದುಗಿದ್ದುನ ವೆಚ್ಚ ಕೊಡೋರಾರು? ಇನ್ನೂ ಈ ಸಂಜಗಜ್ಜಾಯದಿಂದ ಹೋಗದುಳಿದವರಿಬ್ರೆ ನಾನಾ ವಿಧದ ಸ್ಪರ್ಧೆ ಪಂದ್ಯಾಟಗಳಿಂದು ಆ ಮಟನಟ ಮಧ್ಯಾಹ್ನದ ಊರಿಬಿಸಿಲಲ್ಲಿ ನಿಲ್ಲಿಸಿ ಓಡಿಸಿ, ಕುಣಿಸಿ, ತಲೆ ತಿರುಗಿಸಿ ಕಳಿಸ್ಬಿಟ್ರೆ. ಆಲ್ಲಿಗೇ ಈ ಜೇಹಾವಳಿ ಮುಗೀಲಿಲ್ಲ; ಮಧ್ಯಾಹ್ನ ಮನೆಯಲ್ಲೂ ಸರಿ ಊಟನೂಡದೆ ಓಡ್ಕೊಂಡು ಹಿಂದೆ ಬಂದು ಮನಃ ಸಭೆ-ಸಮಾರಂಭಗಳಲ್ಲಿ ಆನಾಚೂನವಾಗಿ ಭಾಗವಹಿಸಿ ರಂತ್ರೆ ಹೊತ್ತಲ್ಲಿ ದಾರೀ ತಪ್ಪಿ ಯಾರ್ಯಾರ ಮನೇ ಹಿಣಿ ಹಿಡಿಯೋರನ್ನ ಯಾರು ಅರಸೋದು?ಎಂದಿವೇ ಪ್ರಕಾರವಾದ ವಿವಿಧಾಭಿವ್ಯಾಂಗಗಳನ್ನು ಮನಸ್ಸಿನಲ್ಲಿ ಕ್ರೋಢೀಕರಿಸಿ ಮುಂದುವರಿಯುತ್ತಿರುವಾಗ ನಾಲ್ಕು ರಸ್ತೆ ಕೂಡುವಲ್ಲಿ ನಮ್ಮ ಪಂಡಿತ ಮಹಾಶಯರು ತಮ್ಮ ಉಪನ್ಯಾಸವನ್ನೇ ಪ್ರಾರಂಭಿಸಿಬಿಟ್ಟಿದ್ದರು: ಆಪುತ್ರಸ್ಯ ಗತಿರ್ನಾಸ್ತಿ ಎನ್ನುತಿದೆ ಲೋಕ: ಕಳಿ ಹಂಸಂ ನುಳಿಯದ ಪೂಗೋಳ ನಮ್ಮಜ ಮರೀಚಿಯಿಲ್ಲದಂಬರ ಚಕ್ರಂ ಕಳಭಂ ಸಂಜಂತಿದವನವಳಯಂ ಸುತ ನಾಡದಂಗಳಂ ರಂಜಿಸುದೇ ಎಂದ ಕವಿಯ ಮಾತನ್ನ ನಂಬಿ, ನಮ್ಮನೇಯಂಗ್ಯದಲ್ಲಿ ಹಾದಬಿದ್ದಿರಲಿ ಎಂದ್ರೆ ಇವ ಎಲ್ಲಿ ಹೋಗಿ ಗತ್ತುಂಟೀರಿ ಈ ಒತ್ತೆಯೆಲ್ಲಿ ಎಲ್ಲಿ ದಾರಿಕಪ್ಪಿ ಬೀದಿ ಬೀದಿ ತಿರುಗ್ತಿದಾನೋ ಏನೋ ? ಹೋಗುವುದು ಬೇಡಾಂದೆ. ಆದ್ರೆ ಹಿಡಿದ ಹಠವಬಿಡುಬೇಕೇ ? ಈ ಕ್ಷಣಿಗೆ.....'' ಇನ್ನೂ ಏನೇನೋ. ನಾನಂತೂ ಕೊನೆಯ ಪರಮಪ್ರೀತಿವಾದ ನುಡಿಮುತ್ತನ್ನ ಕರ್ಣ ಬೆಲೆಯ ತಂತ್ರಾನದಿಂದರಿದು ಶಾಂತಂ ಪಾಪಂ ಎಂದು ಮೂರುಬಾರಿ ಉಚ್ಚ ಸುತ್ತ ಮುಂದುವರಿದೆ. ಆಷ್ಟರಲ್ಲಿ ಒಬ್ಬ ತಾಯಿಯು ಕೂಗು ಕೇಳಿಸಿತು.

ಎಲ್ಲಿ ಹೋದೊನ್ನೆ ಹಾಳುಮಗ ಬೆಳಿಗ್ಗೆ ಏನೇನೋ ತಿಂದ್ಕೊಂಡ್ಬಂದು ಹೊಟ್ಟೆ ನೋವೆಂತ ಕೂಗ್ತಿದ್ದೆ. ಮಧ್ಯಾಹ್ನ ಆ ಬಿಸ್ಲಿಗೆ ಎಂಥಾ ಬಿಸ್ಲೆಂತೀರಿ, ನೆತ್ತಿ ಚುಚ್ಚಿದಂತಾಗುತ್ತಿತ್ತು. ಬೇಡಾಂದ್ರೂ ಕೇಳದೆ, ಕಣ್ಣಪ್ಪಿಸಿ ಓಡೋಗಿಬಿಟ್ಟದ್ದಾನೆ. ಬರ್ಲಿ ಮನೆಗೆ ಪಾಠ ಓದೋಕಿಲ್ಲ; ಬರೆಯೋಕಿಲ್ಲಾ. ದಿನ ಇಡೀ ತಿರುಗಾಡುತ್ತಾ ಇದ್ರೆ ವಿದ್ಯೆ ಬರುತ್ತೆ. ಆ ಗಾಂಧಿ ನೆಹ್ರೂ ಎಲ್ಲಾ ಹೀಗೇ ಮಾಡ್ತಾ ಇದ್ದೂಂತ ತೋರುತ್ತೆ! ಕಲಿಗಳು! ಶುದ್ಧ ಸೋಮಾರಿಗಳು!''

ಮಕ್ಕಳ ಪೆಸೆಯಿಂದ ಈ ರೀತಿಯಾಗಿ ಸಿಕ್ಕಿದವರೆಲ್ಲರೂ ದೂರಲ್ಪಡುವುದು ನನಗೆ ಹಿಡಿಸಲಿಲ್ಲ. ಆದ್ರೇನು ಮಾಡಲಿ? ನನ್ನ ಹಾವಭಾವ ಇದೇ ರೀತಿಯಾಗಿ ಹೋಗಿ ಬಿಟ್ಟಿದ್ದ. ಅವನನ್ನು ಅರಸೋದಕ್ಕೆ ಈಗ ಒಂದಾ ಗಂಟೆ ಹಾಳಾಯಿತು ಇನ್ನೂ ಸಿಕ್ಕೆಲ್ಲು, ಆದರೆ, ಕರ್ಣ ರಸಾಯನ ಮಾತ್ರ ಸಿಕ್ಕಿತಷ್ಟೆ. ಒಬ್ಬೊಬ್ಬರು ಒಂದೊಂದು ವಿಧವಾಗಿ ತಮ್ಮ ಮಕ್ಕಳನ್ನು ಒಯ್ಯುವವರೇ ಇದ್ದರು. ''ಬರಲಿ, ಅವನ ತಲೆ ಒಡೀತೇನೆ, ನುಗ್ಗೆಕಾಯ್ಯಾಯ್ತು; ಇನ್ನೂ ಕಾಣೋಕಿಲ್ಲ'' ಎಂದೊಬ್ಬಾಕೆ ಗರ್ಜಿಸಿದರೆ, ''ಪಾಪ, ಮಗು ಮಧ್ಯಾಹ್ನ ಹೋಗಿದ್ದಾನೆ, ಯಾಕೆ ಬರ್ಲಿ ಅಲ್ಲಾ?'' ಎಂದು ಇನ್ನೊಬ್ಬಾಕೆ ಕನಿಕರ ಪಡುತಿದ್ದಳು. ಇಂತಹುದೇ ಹಲವಾರು ಮಾತುಗಳ ಬಿರುಸು-ಸರಪಗಳನ್ನು ಆಕರ್ಷಿಸುತ್ತ ನಡೆನಡೆದು ಕಾಲು ಸೋತು ಹೋಗಲು, ಸುಸ್ತಾಗಿ, ನಾನೂ ಬಂದಾನು, ಎಲ್ಲಿ ಹೋದಾನು ಎಂದು ಮನೆಗೆ ಹಿಂತಿರುಗಿ ಬಂದೆ. ಆಗ, ನಮ್ಮಾಕೆ ಕಾದು ಕೂತು ಅಳುತಿದ್ದಳು. ದೂರದಲ್ಲಿ ಕಂಡವಳೇ ಓಡಿಬಂದು, ''ನಿಮ್ಮ ದಮ್ಮಯ್ಯ, ಹುಡ್ಗ ಆಸ್ಪತ್ರೆಲಿದ್ದಾನಂತೆ.ನೀನಾಯ್ತೋ ಗೊತ್ತಿಲ್ಲಾ'' ಎಂದಳು. ನಾನು ದಿಗ್ಭ್ರಮೆಹೊಂದಿ, ಆಸ್ಪತ್ರೆಯತ್ತ ಕಾಲು ಎಳೆದು ಓಡಿ ಹೋಗಿ ನೋಡುವಾಗ ಭಾರೀ ತಮಾಷೆಯಾಗಿತ್ತು:ಆತ ''ಅಪ್ಪಾ ಬಂದುಬಿಟ್ಟೆಯ?'' ಎಂದು ದಿಗ್ಗನೆ ಎದ್ದು ನನ್ನೆಡೆ ಬಂದ.

ಎಲ್ಲರಿಗೂ ಆಶ್ಚರ್ಯ. ಡಾಕ್ಟರೆರೂ ಹತ್ತಿರ ಬಂದರು. ಆಗ ಆ ಮಗು ಹೇಳಿದ—''ಅಪ್ಪಪ್ಪ, ನನ್ನೇನೂ ಆಗ್ಲಿಲ್ಲ. ಕಬ್ಬಿ ಮುನ್ಸಿ ಮನೇ ಬರೋಗ ಹೆದ್ರಿ ಕಾಯ್ತು. ಬೆಳಗ್ಗೆ ನಮ್ಮ ಕೆಟ್ಟು ಮೈದಾನಲ್ಲಿ ಬಿದ್ದಾಗ ಗಾಡಿ ತಲ್ಸಿ ಆಸ್ಪತ್ರೆಗೆ ಒಯ್ದುದ್ದು ಅಲ್ಲಿಂದ ಮನೆಗೆ ಮನೆಗೆ ಜನಕಳ್ಸಿದ್ದಂತೆ. ನನಗೂ ಬೇರೆ ಉವಾಮ ಕಾಣದೆ ಅಯ್ಯಂಯ್ಯೊ ಎಂಬುರಸ್ತೆ ಪಕ್ಕದಲ್ಲಿ ಬಿದ್ದು ಬಿಟ್ಟೆ. ಆಗ, ಯಾರೋ ಯಾರೋ ಬಂದ. ನೇರಾ ಇಲ್ಲಿತಂದು ಹಾಕಿದ್ರು. ಡಾಕ್ಟರು, ತಲೆಗೆ ಬಟ್ಟೆಕಟ್ಟುತ್ತ, ನಿನ್ನ ಹೆಸ್ರುಕೇಳಿ. ಆವರಿಗೆ ಹೇಳಿಕಳಿಸ್ತೇನೆ ಎಂದ್ರು. ಹ್ಞೂಂ ಎಂದೆ. ಇನ್ನು ಹೊಗೋಣಪ್ಪ—ಎಂದ. ತನ್ನ ರಾಮಾಯಣಬಿಚ್ಚಿದ.

ಮಕ್ಕಳ ದಿನಾಚರಣೆ ಎಂದ್ರೆ ಹೀಗೇ ಅಲ್ವೇ ? ಪಾಪ, ನೆಹ್ರೂ ಹಣೆ ಬರಹ ಹೀಗಿದೆಯೋ ?

—ಗೋರಾ.

ರಾಷ್ಟ್ರಾಭಿವೃದ್ಧಿ

(೩ನೇ ಪುಟದಿಂದ)

ನುವಾಗಿ ಕಳೆಯಲ್ಲಿ ಸುಭಿಕ್ಷೆನೆಲಸುವ ವ್ಯವಧಾನವಿದೆ- ಹಾಗೂ ಓರ್ವ ಬೇಸಾಯಗಾರ ತನ್ನ ಬೆಳೆಕಡಿವ ಸಂದರ್ಭದಲ್ಲಿ ರೋಗದಲ್ಲಿ ಬಿದ್ದರೆ ಆತ ಕೆಲಸಮಾಡಲು ಅಶಕ್ತನಾಗುತ್ತಾನೆ, ತನ್ನ ದಿನ ಕೂಲಿಯನ್ನು ಕಳಕೊಳ್ಳುತ್ತಾನೆ. ಹೀಗೆ ತುಂಬಾ ದಿನಕೂಲಿಯನ್ನು ಕಳಕೊಳ್ಳಲು ಬೇಸಾಯಗಾರನಿಗೆ ಎಡೆಯಿರುವಾಗ, ಆತನಿಗೆ ಎಷ್ಟೋ ನಷ್ಟವಾದಂತೆಯೇ ಸರಿ- ಆದುದರಿಂದ ಈ ಯೋಜನೆಯಿಂದ ಹಳ್ಳಿಗಳಲ್ಲಿ ಇಲ್ಲಲ್ಲಿ ವೈದ್ಯಾಸಿಲಯಗಳನ್ನು ತೆರೆದು ಎಲ್ಲಿ ರೋಗ ರುಜೆ ನೆಲೆಯಿದೆಯೋ, ಆಲ್ಲಿ ವೈದ್ಯರ ಸಂದರ್ಶನವಾಂತೆಮಾಡಿ ಅವರನ್ನು ಗುಣಪಡಿಸುವಂತೆ ಮಾಡಿರುವರು. ಇದರಿಂದ ಬೇಸಾಯಗಾರ ತನ್ನ ಆರೋಗ್ಯವನ್ನು ಪುಷ್ಟಿಕೊಂಡು ಎಂದಿನಂತೆ ದಿನಕೂಲಿ ಸಂಪಾದಿಸಬಲ್ಲನು ಹೀಗೆ ಸಮಾಜ ವಿಕಾಸಯೋಜನೆಯವರು ಆದಷ್ಟು ಪುಟ್ಟಿಗೆ, ತನ್ನುಕೈಲಾದಷ್ಟು ಯತ್ನಿಸಿ ಆಲ್ಲಲ್ಲಿ ವೈದ್ಯಾ, ಸಿವ್ಯಾನಿಲಯಗಳನ್ನು ನಿರ್ಮಿಸಿರುವರು- ಈ ರೀತಿಯಿಂದ ಸಮಾಜ ವಿಕಾಸಯೋಜನೆಗಳು ಆದಷ್ಟು ಬೇಗ ಪುಟ್ಟಿಗೆ ವಿದ್ಯಾ ಸಮಸ್ಯೆ? ಆರೋಗ್ಯ ಸಮಸ್ಯೆಗಳನ್ನು ಪರಿಹರಿಸುವುದು.

—ಕೆ. ರಮೇಶ ಪೈ, ಉಡುಪಿ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 39/1957

ಕೆಂಡ ಶಂಕರನಾರಾಯಣ ರಾವ್.. ವಾದಿ ಮತ್ತು

ವೆಂಕಣ್ಣ ಕೂಡಾ 15 ಜನರು- ಪ್ರತಿವಾದಿರು ಇವರೊಳಗೆ

15ನೇ ಪ್ರತಿವಾದಿ ಶ್ರೀಧರ ಭಟ್ ಶ್ರೀನಿವಾಸ ಭಟ್ಟರ ಮಗ—ಕಾರ್ಕಳ ತಾಲ್ಲೂ ಪುತ್ತಿಗೆ ಗ್ರಾಮದ ಕಂಬಳ್ಳೆಯ ಎಂಬವರು ಪತಿವಾದಿಗೆ—

ನಾಡಿಯು ಹಿರಿಯ ಬಗ್ಗೆ ವಾಕಿಲು ಮಾಡಿದ ಜೀರಿನ ವಾನೆಯು ಮೇಲ್ಕಾಂಡ ಕೋರ್ಟಿನಲ್ಲಿ ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 28—11—58ನೇ ಬೆಳಿಗ್ಗೆ 10 ಗಂಟೆಗೆ ಇಶ್ಟೀನವರಿಂದ ಸದರಿ ವಾದಿಯು ವಿನಯವಲ್ಲಿ ನಿಮ್ಮ ಉವಾಕರಣೆಯಿರುವಲ್ಲಿ ನೀವು ಪ್ರತಿವಾದಿ ತಾರೀಕಿನೆಲ್ಲು ವೇಳ್ಕಂಡ ಕೋರ್ಟು ಮುಂದೆ ಸ್ವತಃವಾ ಆಥವಾ ವಕೀಲರ ಮುಖಾಂತರ ಹಾಜರಾಗಿ ಜ್ಞಾಪೀರುಮಾಡಿಕೊಳ್ಳಲು ಪಾಡಾಗಿಯೂ, ತಪ್ಪಿದರೆ ಸದರಿ ವಾದಿಯು ನಿಮ್ಮ ಗೈರುಹಾಜರಿಯಲ್ಲಿ ವಿಚಾರಣೆ ಲ್ಪಡುವಂತಾಗಿಯೂ, ಈ ಮೂಲಕ ನಿಮಗೆ ಕೋರ್ಟು ಹುಕುಮು ಪ್ರಕಾರ ತಿಳಿಯುವಡಿ ಸೋಣಾಗುತ್ತದೆ.

A. N. S. Achar,
Advocate for Plaintiff.

ಕಾರ್ಕಳ, ತಾರೀಕು 18-11-1958.

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ರೈತರ ಅನುಕೂಲತೆಯ ಬಗ್ಗೆ ಕಾರ್ಕಳ ತಾಲೂಕು ಸೋಮೇಶ್ವರದ ಬಳಿ, ಅಂದರೆ ಸೋಮೇಶ್ವರ ಫಾಟಿಯ ಬುಡದಿಂದ 3 ಕೈಲು ಕೆಳಗೆ ಹುಲ್ಲುಗಾವಲಿನ ಸೌಂದರ್ಯವಿರುವ ''ಸೀತಾನದಿ'' ಎಂಬಲ್ಲಿ.

ತಾ. 21-12-'58ರಿಂದ 1-1-'59ರ ನವರೆಗೆ—

ಜಾನುವಾರು ಜಾತ್ರೆಯು

ಈ ಹಿಂದಿನ ವರ್ಷಗಳಂತೆ ಆತೀ ವಿಜೃಂಭಣೆಯಿಂದ ಜರಗುವುದು.

2. ಈ ಜಾತ್ರೆಯಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಜಾನುವಾರುಗಳು ಆಧಿಕ ಸಂಖ್ಯೆಯಲ್ಲಿ ಕೂಡುವುದು. ಎಲ್ಲದಕ್ಕೆ ದೊಡ್ಡ ಜನಸಂದಣಿಯೂ ಸೇರುವುದು.

3. ಜಾನುವಾರು ನಮ್ಮ ಪ್ರಮುಖ ಸಂಪತ್ತಾಗಿರುವುದರಿಂದ, ಉತ್ತಮ ತಳದ ವಿವಿಧ ಜಾತಿಯ ಜಾನುವಾರುಗಳ ಪ್ರದರ್ಶನ, ಆಕ್ಷಗಳ ಸೀಳಿಗೆಯ ಆಧ್ಯಯನ, ಕೃತಕ ಗರ್ಭ ಧಾರಣೆ ಮತ್ತು ಜಾನುವಾರುಗಳ ಯೋಗ್ಯ ಪೋಷಣೆಯ ವಿಷಯ ಪ್ರಜಾರಣೆಯೇ ಇವರ ಮುಖ್ಯ ಧ್ಯೇಯ. ಉತ್ತಮ ತಳದ ಜಾನುವಾರುಗಳ ಮಾಲಿಕರನ್ನು ಪುರಸ್ಕರಿಸುವುದಲ್ಲದೆ, ಉತ್ತಮ ವಾಚವೈಗಳೆಂದು ಪರಿಗಣಿಸಲ್ಪಡುವ ಜಾನುವಾರುಗಳ ನಾಲಾಕರಿಗೆ ಬಹುಮಾನವನ್ನು ಕೊಡಲಾಗುವುದು

4. ಈ ಜಾತ್ರೆಗೆ ಉತ್ತರ ಕನ್ನಡ, ಪೈ ಸೂರು ಮತ್ತಿತರ ಪ್ರದೇಶಗಳಿಂದ ಉತ್ತಮ ತಳದ ಜಾನುವಾರುಗಳನ್ನು ಕಳುಹಿಸಿ, ಎಲ್ಲರೂ ಸಹಕರಿಸಿ, ಇದನ್ನು ಯಶಸ್ವಿಗೊಳಿಸಬೇಕಾಗಿ ಸರಕಾರದ ಪರವಾಗಿ ಅಪೇಕ್ಷಿಸುತ್ತೇವೆ.

ವಿ. ಎಸ್. ಕಾಮತ್,
ಅಸಿಸ್ಟಾಂಟ್ ಕಮಿಷನರ್.

ಅಸಿಸ್ಟಾಂಟ್ ಕಮಿಷನರರ ಆಫೀಸು,
ಕುಂದಾಪುರ, ತಾ. 27-10-'58.



ಕುಮಾರಿ ಬಿಸ್ಕಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ವಾಧಿಕಾರಿಗಳು: ಪೈ ಕಂಪೆನಿ, ಮಂಗಳೂರು—1.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction Madras.

ಕಥಾ ನಿಹಾರ

(ಶೇಷ ಪುಟದಿಂದ)

ಆದರೆ ನನಗೆ ಅವಳಿಂದ ದೊರೆತುದು ಆಸಮರ್ಪಕವಾದ ಉತ್ತರ. ಅದೂ ಕೆಲವೇ ವಾಕ್ಯಗಳಲ್ಲಿ. ಅವರ ಸಂಬಂಧವೆಲ್ಲವನ್ನು ಕಡಿದುಕೊಂಡು ನನೆಯೆಂದು ಹೇಳಿದ್ದರೂ, ನಾನೆಣಿಸಿದಂತೆ ವಸ್ತುಸ್ಥಿತಿ ಹಾಗಿತ್ತು.

"ಕ್ಷಮಿಸಿ, ಡಿಯರ್ ಸುನಂದಾ! 'ನನಗೂ, ಮನೆಯ ರಿಗೂ ಏನೊಂದೂ ಸಂಪರ್ಕವಿಲ್ಲ' ಎನ್ನು ನನ್ನಲ್ಲೇಕೆ ಸಾ ಕೋಚ? ಅದುಲ್ಲೇನೊ ದೊಡ್ಡ ಸಂಗತಿ. ನಿನ್ನ ಗುಣ ಇವತ್ತು ನನಗೆ ಹೊಸತೇನ ಲ್ಲ" ಎಂದು ಸ್ವಲ್ಪ ಕಟುವಾಗಿಯೇ ನುಡಿದೆ.

"ಹಾಗಾದರೆ ಹಾಗೇ ಅಂದುಕೆಳ್ಳಿ" ಎಂದಳು ಕತ್ತು ಬಳಕಿಸುತ್ತ, ಕಣ್ಣು ಕೊಂಕಿಸುತ್ತ, ತುಟಿಯ ಕುಡಿಗಳನ್ನು ಬಿರಿಯುತ್ತ.

"ಆದರೆ ನೀನು ಇಲ್ಲಿ ಕೆಲಸದಿಂದ ಜೀವನ ಮಾಡುತ್ತಿಯಾ? ನಿನ್ನ ಜೀವನ ಕ್ಕೂ ಸಂಬಳಕ್ಕೂ ತಾಳೋಲಿಸುವುದಾದರೆ ನಿನಗೆ ದೊಡ್ಡ ಹುದ್ದೆಯೇ ಸಿಕ್ಕಿರಬೇಕು. ಅಲ್ಲವೇ?"

"ಹ್ಞೂ, ನಿಜ; ನಿಜ."

"ಎಲ್ಲಿ?"

'ಇಲ್ಲೇ!' ತನ್ನ ಮನೆಯನ್ನು ತೋರಿ ಸುತ್ತಾ ನುಡಿದಳು.

"ಛೆ!" ಎಂದು ನಾನು ಗಾಬರಿಗೊಂ ಡೆನು.

"ಹೌದು! ನಿಜವಾಗಿಯೂ. ಸಂಕೋ ಚನೇಕೆ? ವ್ಯಾಪಾರ ಮಾಡಬಾರದೇನು? ಗಂಡು-ಹೆಣ್ಣೆಂಬ ಭೇದ ತೊರೆದರೆ ಲೋ ಕದಲ್ಲಿ ಎಲ್ಲರಿಗೂ ಸಮಾನ ಹಕ್ಕಿದೆ. ಇ ಚ್ಛೆ ಪ್ರಕಾರ ಒಬ್ಬೊಬ್ಬರು ಒಂದೊಂದ ನ್ನು ಆರಿಸಿಕೊಳ್ಳುತ್ತಾರೆ. ಇದು ತಪ್ಪೆ? ಯೋಚಿಸಿ ನೋಡಿ."

ನನಗೆ ಬಹಳ ಪಶ್ಚಾತ್ತಾಪವೆನಿಸಿತು. ಸಂಗತಿ ತಿಳಿಯಲು ಒಡಿಕರಿದಿ ನಂತೆ ಮಂಕನಾದೆ.

"ಯೋಚಿಸುವುದರಲ್ಲೇನಿದೆ? ನಿನ್ನಂತ ಹವ ಕ್ತಿ ಈ ವಾಸವಿ ಕೈತ್ಯ ವಾತಬಾ ರದಾಗಿತ್ತು. ನಿನ್ನ ೇಸದಲ್ಲಿ ಕುಬಿರ.ವ ರಕ್ತ, ನೂಂಕಗಳು ಶಕ್ತಿಯುತವಾಗಿರು ನ ವರೆಗೆ ನೀನು 'ರಾಣಿ' ಯಾಗಿ ಮೆರೆಯು ಬಹುದು. ನಿನ್ನ ಈ ದೋಷ ವ ತ್ತು ಉ ದ್ಯೋಗ ಇಹ-ಪರಗಳೆರಡರಲ್ಲೂ ನಿನಗೆ ಅಸಾಖವನ್ನು ತಂದೊಡ್ಡುತ್ತವೆ. ನೀನು ಪೆತ್ತವರ ಕೈಕೆಳಗೆ ಇದ್ದು, ವಿದ್ಯಾವಂತ ಯುವಕನನ್ನು ಮದುವೆಯಾಗಿ, ಆದರ್ಶ ವಾಗಿ ಬಾಳಬಹುದಿತ್ತು. ಹಾಗಾಗಲು ಸಾಧ್ಯವಿದೆ" ಎಂದೆನು.

ನನ್ನ ಹಿಂದಿನ ಕಡಿದು ಹೋಗಿದ್ದ ಸ್ನೇಹ ಸಂಬಂಧ ಸುನಮ್ಮಿಸಲದಿಂದ ಬೆಳೆದು ಮರವಾಯಿತು. ನಾನು ಹೇಳಿದ ಎಲ್ಲಾ ವಿಷಯಗಳನ್ನೂ ಜೆನ್ನಾಗಿ ಗ್ರಹಿ ಸಿದಂತೆ ನಟಿಸಿದಳು. ನನ್ನ ಬಾಲ್ಯದ ಗೆಳ ತಿಯೊಡನೆ ಅವಳ ಹಿತಕ್ಕಾಗಿ ಮನಬಿಚ್ಚಿ ಹೇಳುವ ಹಕ್ಕಿದೆ. ಅವಳು ಕೇಳಲೇಬೇ ಕಾದ ಪ್ರಸಂಗದಲ್ಲಿ ಸಿಕ್ಕಿಬಿದ್ದಳು, ನಾನು ಮಾಡಿದ ಬೋಧನೆಯು ಅವಳ ಮೇಲೆ ಪರಿಣಾಮವನ್ನುಂಟು ಮಾಡಿತ್ತು. ನಾ ನೇ ಆ ರೀತಿ ಹಾಳಾಗಿ ಹೋದೆನು ಎಂ ದು ತಿಳಿದು, ಅವಳ ಹಿತಚಿಂತನೆ ನನ್ನ ದು—ನನ್ನ ಹಿತಚಿಂತನೆ ಅವಳದು ಎಂದು ಬಗೆದಿನು ವಿಷಯದ ಕಡೆಗೆ ಗಮನವಿತ್ತ ಸುನಂದಾ ತನ್ನ ನಡತೆಗೆ ಸಚ್ಚಾತ್ತಾಪ ಪಟ್ಟಳು. ಅವೆಷ್ಟು ಹೊತ್ತು ನಾವಿಬ್ಬರೂ ಆ ರೀತಿ ವ್ಯಕಾರ್ಯ ಮುರೆತು ಮಾತುಕತೆ ಮಾಡುತ್ತಿದ್ದೆವೋ ತಿಳಿಯದು. ಪಶ್ಚಾ ತ್ತಾಪದ ಕಣ್ಣೀರು ಸುರಿಸುತ್ತ ಇನ್ನು ಮುಂದೆ ಈ ದುರ್ವ್ಯಾವಾರ ನಡೆಸುವುದಿ ಲ್ಲವೆಂದು ನನ್ನಿಂದ ಪ್ರಮಾಣ ವಚನ ತೆ ಗೆದು ಕೊಂಡಳು. "ಅಣ್ಣಾ! ನಿನ್ನಂತಹ ಒಬ್ಬ ಆತ್ಮೀಯನು ನನ್ನನ್ನು ಇದು ವರೆ ಗೆ ತಡೆಯಲಿಲ್ಲ. ಎಂತಲೇ ಇ ೀ ಕಾರ್ಯ ಸ್ಫೋತ್ಸಾಹತವಾಗಿ ಮುನ್ನಡೆಯಿತು" ಎಂದಳು. ಈ ಆಕಸ್ಮಾತ್ ಭೇಟಿಯಿಂದ ಒಂದು ಸ್ತ್ರಿಯ ವ್ಯಕ್ತಿಯನ್ನು ಸುಧಾರಿಸಿ, ಉದ್ಧರಿಸಿದೆನೆಂಬ ಆತ್ಮಾಭಿಮಾನ ನನ್ನ ಲ್ಲಿತ್ತು.

ಆಂದು ರಾತ್ರಿ ನನ್ನ ನಿಗವುಸದ ಸಂ ತೋಷಕ್ಕಾಗಿ ವಿಶೇಷ ಸಂಭ್ರಮ ಜರಗಿ ತ್ತು. "ಅಣ್ಣಾ! ನಿನಗಾಗಿ ನಾನು ಮಾ ಡುತ್ತಿರು ವಿಲಾಸಗಳಿಗಾಗಿ ಅಡ್ಡಬರ ಬೇಡ. ಈ ಒಂದು ದಿನ ನನ್ನ ಪಾಲಿಗೆ ಅಮೃತ ಪ್ರಾಪ್ತವಾಗಿಸಿ" ಎಂದಳು. ವಿ ಶೇಷತರದ ಷಡಿಸಿ ಭಕ್ಷ್ಯ-ಭೋಜ್ಯಗಳ ನೊಗಸಾದ ಊಟವಾಯಿತು. "ನಂತರ ತನ್ನ ಶಯ್ಯಾಗಾರಕ್ಕೆ ನನ್ನನ್ನು ಕರೆದೊ ಯ್ದಳು. ನಾನು ಕಲಿತ ಸಂಗೀತ ಮತ್ತು ನೃತ್ಯವನ್ನು ನಿನ್ನೆದರಿಗೆ ಈಗ ಪ್ರದರ್ಶಿಸು ವೆನು. ಸಂತೋಷದಿಂದಿ ರೀಕ್ಷಿಸು" ಎಂ ದಳು.

ರಂಭೆ, ಊರ್ವಶಿ ಸುರನ್ನು ಮೀರಿಸುವ ರೀತಿಯಲ್ಲಿ ಅರೆ ನಗ್ನವೇಷದಿಂದ ಕಂಗೊ ಳಿಸಿದಳು. ವಿಲಾಸಿ ರಾಣಿ ಎಂದೆನಿಸುವ ತರದಲ್ಲಿ ಅಲಂಕರಿಸಿ ಕೊಂಡಿದ್ದಳು. ಮೃ ದುವಾದ ಅವಳ ಹಾಸಿಗೆಯ ಮೇಲೆ ನಾ ನು ಪವಡಿಸಿ ಒಂದೊಂದೇ ಹಣ್ಣು ದ್ರಾ ಕ್ಷೆ, ಪನ್ನೇ-ಳೆ ದಾಳಿಂಬೆ ಬೀಜಗಳನ್ನು ತಿನ್ನುತ್ತಾ, ಹಾಲು ಕುಡಿಯುತ್ತಾ, ವೀಳ್ಯ ವನ್ನು ಹಾಕ ತ್ತಾ ಉನ್ಮತ್ತನಾಗಿ ನೋ ಡುತ್ತಿದ್ದೆ. ಆಹ್ಹಾ! ಎಂತಹ ಮೋಹಕ ಹೆಣ್ಣು ಸುನಂದಾ! ಬಳುಕುವ ಅಂಗಾಂಗ ಗಳು, ಕುಣಿದು ಕುಪ್ಪಳಿಸುವ ತಂಗಿ ಸೌ ಷ್ಠವ, ಉಬ್ಬಿದ ಕುಚಗಳು, ಮೊಟವಾದ ತೊಡೆ, ಸೊಂಟ ನಡು, ಗೆಜ್ಜೆಗಳ ಝಣ ತ್ಕಾರ, ಲಯ ಬದ್ಧವಾದ ಹೆಜ್ಜೆ; ಪಾದರೆ ಸದ ಕಣಜಂತೆ ಮಿಂಚಿನಲೆಯುವ ನಯ ನಗಳು. ಅತೀ ಸೂಕ್ಷ್ಮವಾದ ಎಳೆಗಳಿಂದ ಕೂಡಿದ ಕನ್ನಡಿಯಂತಹ ಬಟ್ಟೆಯನ್ನು ಧರಿಸಿದ್ದಳು.

ಇವುಗಳೆಲ್ಲೇ ತಲ್ಲೀನನಾದ ನಾನು, ನ ನಗರಿವಿಲ್ಲದೀನೇ ನನ್ನ ಮನಸ್ಸು ಉನ್ಮ ತ್ತಗೊಂಡಿತು; ಕಾಮದ ಬಯಕೆ ತೆರೆ ವಾಯಿತು. ಅಂದು ನಾವಿಬ್ಬರೂ ಬೇ ರೊಂದು ಪ್ರಪಂಚದಲ್ಲಿದ್ದಂತೆ ಭಾಸವಾ ಯಿತು. ವಿಚಿತ್ರ ಅನುಭವ! ಅವಳ ಕ್ಷಣ —ಸ್ಪರ್ಶದ ನೋಟವು ಉದ್ರೇಕಗೊಂಡಿ ದ್ದ ನನ್ನ ನುನಸ್ಸನ್ನು 'ಜಾ' ಎಂದು ಕರೆ ಯುವಂತಿತ್ತು. ಎದ್ದು ಅವಳ ಬಳಿ ಸಾರಿ ಅವಳೊಡನೆ ನಾನೂ ನರ್ತಿಸಲು ಪ್ರಯ ತ್ನಿಸಿದೆ. ಹಾಳಾದ್ದಾಗಿ ಹೆಜ್ಜೆ ಜಾಳಲು ನೋಡಿ ನಾನು ಅವಮಾ ಕೋ ಸರಿಗಿಳ್ಳಿ ವಿಮಿಷಿಕೊಂಡೆ. ವೈದು, ನಯ, ಪೋ ಹಕ, ತಂತ್ರಾವಾ ಕಲ್ಪಿದ ವೇಶಿ ಹಾಸಿದ್ದ ವೈದು, ಕೋಮಲ, ಪೊಹಕ, ಶಾಂತ ಭೆವು-ಭೆವಿ ಸುವ ತಂಪಿನ ಹಾಸಿಗೆ ಮಲ್ಲಿ ಮಲಗಿದ್ದ ನನ್ನನ್ನು ಇಾಕರೀಕ್ಷ ತನ್ನ ದೇ ಹದಿಂದ ಬಿಗಿದಂತಾಯಿ ತು. ನೈಕ್ಯವಾಣಿ ನೋಕ ನಾನು ನೆರಿಸು ಗುಂಗಿನೆದ್ದೆ. ಇದರ ಸುಖಾನುಭವವು ಅಮರಿಸಿದ್ದ ನಗ ನಾಗ ತಿಳಿದು ಬಾಲಿಲ್ಲ. ಉದ್ರೇಕಗೊಂಡ ಸಪ್ತ ಜೀವಧಗಳಿಗೆ ಆಶ್ರಯ ಸ್ಥಾನ ಸಿಕ್ಕಿ, ಅವು ಸಂತೆ-ಗೊಂಡವು.

೦೦ ೦೦ ೦೦

ನಯನಾಕರ್ಷಕವಾದ ಸುಂದರ ಕಲಾಕೃತಿಯ ಕೆತ್ತನೆಗಳು ಭವ್ಯ ಹಂಸತೂಲಿಕಾಕಲ್ಪವಂತಿರುವ ಮಂಚದ ಮೇಲೆ ಬೆಣ್ಣೆಯಂತೆ ಮೃದುವೂ, ಶೀತ ಲವೂ ಆದ ದಪ್ಪವಾದ ಜಾಸಿಗೆ ಹಾಸಿ ದ್ದಿತ.. ಮೈಯಿಂದ ಜಾರಿ ಜೋಗುವಂತ ಹ ಸಿಲ್ಕಿನ ಬಟ್ಟೆಗಳು ಹಾಸಿದ್ದುವು, ಪವ ನದಷ್ಟೇ ಧಪ್ಪವಾದ ಮತ್ತು ಸುಂದರವಾ ದ ಬಲೆಯೊಂದು—ಸೊಗಮೀರನು ತನ್ನ ಬಲೆಯನ್ನು ಒಣ ಹಾಕಿದ ರೀತಿಯಲ್ಲಿ— ಮಂಚವನ್ನು ಆವರಿಸಿತ್ತು. ಹಾಲು, ಮಾದಕ ಪದಾರ್ಥ— ಹೊದಲಾದ ವಾ ನೀಯುಗಳನ್ನೊಳಗೊಂಡ ಪಾತ್ರೆಗಳೆಲ್ಲಾ ಆಸ್ತವ್ಯಸ್ತವಾಗಿ ಚೆಲ್ಲಿದುವು. ಹೆಣ್ಣು-ಹೊಸಲುಗಳು ಅರೆ ಸ್ತ್ರೀಕಾಳ್ಬಟ್ಟೆಯು, ಕೃ ತ್ರಿಮತೆಯಾಮುವಿಂದ ಕೋಪಗೊಂಡು ಎಲ್ಲೆಲ್ಲೋ ಹೋಗಿದ್ದುವು. ಬುಟ್ಟಿದ್ದ ಬಟ್ಟೆಗಳು ಸ್ವಸ್ಥಾನ ಬಿಟ್ಟು ಕದಲಿದ್ದವು. ಒಂದೇ ಮಂಚದ ನೆಲೆ ಎರಡು ಜೀವ ಗಳು ವಿಂಮಿಸಿಕೊಂಡಿದ್ದವು. ಸುನಂದಾ ನನ್ನಳಾಗಿ ಮಲಗಿದ್ದಳೂ, ಕಿಟಕಿಯಿಂದ ಹೊರಿ ಬಂದ ಉಷೆಯ ಬೆಳಕಿನಲ್ಲಿ ನಿ ಯಾಗಿ ಕಾಣಿಸುತ್ತಿರಲಿಲ್ಲ. ಗಂತಸಿನ ದೀಕ್ಷೆ; ಫಲಗಳು ಯಾವ ಹೆಣ್ಣಿಗೂ ಕಡಿಮೆ ಇಲ್ಲ. ಅವಳ ಮುಂದೆ ಅವೆಲ್ಲ ತೃಣ ಸಮಾನ. ದೀಕ್ಷೆ ಕೊಟ್ಟ ಫಲವಾಯಿ ನ್ನು ಗೆದ್ದೆನೆಂಬ ಹೆಮ್ಮೆಯನ್ನು ಮಂದ ಸ್ಮಿತವಾದ ನ ಖವಲ್ಲಿ ಕಟ್ಟಿ ಸುತಿಗೆ ಕೆಡು ತೋರಿಸುತ್ತಿತ್ತು. ಅಯ್ಯೋ! ಎಂಥಾ ಸೋಲಾಯಿತು! ಎಂದು ಅವ ನಾನದ ನಾಚಿಕೆಯಿಂದ ಚೇಲಾ ನು ಜನನ್ನು ಮುಮುಡಿಸಿಕೊಂಡಿನ್ನೆನು. ಕಳೆ ಗುಂದಿದ ಮುಖ, ಗೆಲುವಿನೆ ನುಪ ಕಾ ನುವಾಗಿ ಗಂಡ ಚಿತ್ಕಾಗಲ್ಲಿ ನ್ನನೆ ಬವಳಾಯಿಸಿ ನೆಲೆಗೊಂಡಿತ್ತು.

—ಶ್ರೀ. ನಾರಾಯಣ ಬಿಳ್ಳಾಳ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O S. No. 354/1958

ಬಾಳಪ್ಪ ಸೀತಾರಾಮ್—ವಾದಿ.

K. ವಾಸುದೇವರಾವ್ ಕೂಡಾ. ಪ್ರತಿ ವಾದಿರು.

ಮಂಗಳೂರು ತಾಲೂಕು ಶಿಮಂತೂರು ಗ್ರಾಮವಲ್ಲಿರುವ ವೆಂಕಟ ಕೃಷ್ಣಯ್ಯನವರ ಮಗ 1ನೇ ಪ್ರತಿವಾದಿ ಶ್ರೀ ಕೆ. ವಾಸುದೇವ ರಾಯರಿಗೆ ಈ ಮೂಲಕ ತಿಳಿಸುವದೇನಂದ್ರೆ

ನೀವು ಸ್ವತಹಾ ಮತ್ತು ನಿಮ್ಮ ಪ್ಯಾನರ ಮಕ್ಕಳ ಗಾರ್ಡಿಯಾನರಂಗಿ ಕೂಡಾ ತಾ. ೨೪.7.1957ರಲ್ಲು ರಿಜಿಸ್ಟ್ರಿ ನಿಶಿ ವಾದಿಗೆ ಬರಕೊಟ್ಟ ತೋರಡವು ದಸ್ತಾವೇಜಿನ ಪ್ಲಾಲು ಬಡ್ಡಿ ಏನೇಬು ವಸೂಲಿ ಬಗ್ಗೆ ನಿಮ್ಮ ಮತ್ತು ನಿಮ್ಮ ಪ್ಯಾನರ ಮಕ್ಕಳ ಮೇಲೆ ಕೂಡಾ ವಾದಿಯು ದಾಖಲು ಮಾಡಿದ ಮೆಲ್ಕಂಡ ದಾವೆಯು ನಿಮಗೆ ನೋಟೀಸಿನ ಬಗ್ಗೆ ತಾ. 6.12.1958ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮಿದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿನ್ನ ಪೂರ್ವಾಪ್ಹ ಘಂಟೆ11ಕ್ಕೆ ಮೇ ಲ್ಕಂಡ ಕೋರ್ಟಿನಲ್ಲಿ ನೀವು ಸ್ವತಹಾ ಯಾ, ವಕೀಲರ ಮೂಲಕ ಹಾಜರಾಗಿ ಉದಬರಿಸತ ಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.—

(ಕೋರ್ಟು ಹುಕುಂ ಪ್ರಕಾರ.)

ಬೈಕಾಡಿ ವಾಸುದೇವರಾವ್,
ವಾದಿಯ ಕಡೆ ಎಡ್ವೋಕೇಟ್.

ಕಾರ್ಕಳ, ತಾ. 19.11.1958.

N A V A Y U G A
REGD. NO. M. 3618

UDIPI, THURSDAY
20—11—1958

LICENSE NO. 31
Licensed to Post without Prepayment

ರಕ್ಷಣೋಪಾಯ

ಗ್ರಾಮೀಣ ಪ್ರದೇಶಗಳಲ್ಲಿ ಬೆಂಕಿಯ ಅನಾಹುತಗಳು

ಇಬರಿಂದ ದೂರವುಳಿಯಲು ಇಲ್ಲಿ ಕೆಲವು ಸಲಹೆ ಸೂಚನೆಗಳಿವೆ

ನಗರಗಳ ವೈಭವ ಮತ್ತು ಆಡಂಬರಗಳಿಂದ ಬಹುದೂರವಿರುವ ಹಳ್ಳಿಗಳಲ್ಲಿ ಕೋಟ್ಯಂತರ ಜನ ರೈತರು ಕಷ್ಟಪಟ್ಟು ದುಡಿದು ಇತರರಿಗಾಗಿ ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆ. ಅದರೂ ಗುಡಿಸಲುಗಳಲ್ಲಿ ಮತ್ತು ಸಣ್ಣ ಪುಟ್ಟ ಗ್ರಾಮಗಳಲ್ಲಿ ವಾಸಮಾಡುವ ಈ ಜನ ಯಾವಕ್ಷಣ ಬೆಂಕಿಯ ಆಪಾಯಕ್ಕೆ ಗುರಿಯಾಗಿರುತ್ತಾರೆ. ಇವರು ವಾಸ ಮಾಡುವುದು ಬಯಲು ಮೈದಾನದಲ್ಲಿ; ಗಾಳಿ ರಭಸದಿಂದ ಬೀಸುತ್ತಿರುತ್ತದೆ. ಒಂದು ಕಿಡಿ ಹಾರಿದರೂ ಸಾಕು, ಅದು ಜ್ವಾಲೆಯಾಗಿ ಹಬ್ಬಿ ಇವರ ಗುಡಿಸಲುಗಳನ್ನ ಸುಡುವುದಕ್ಕೆ; ಇಡೀ ಗ್ರಾಮವೇ ಎಷ್ಟೋ ವೇಳೆ ಸುಟ್ಟು ಬೂದಿಯಾಗುತ್ತದೆ. ಪಾಪ, ಬಡಪಾಯಿ ರೈತನ ಮುರುಕಲು ಜೋಪಡಿ ಹೀಗೆ ಜ್ವಾಲೆಗೆ ಆಹುತಿಯಾದಾಗ ಅವನಿಗೆ ಆ ದೆಷ್ಟು ದುಃಖವಾಗಬೇಕು! ಅವನು ಕಷ್ಟಪಟ್ಟು ದುಡಿದು ಸಂಪಾದಿಸಿದ್ದ ಸರ್ವಸ್ವವೂ ಹೀಗೆ ಬೆಂಕಿಯ ಪಾಲಾಗುವಾಗ ಅವನ ಗತಿ ಏನಾಗಬೇಕು! ಇಂತಹ ಅನಾಹುತಗಳಿಗೆ ಕಾರಣಗಳನ್ನು ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದಾಗ ಇಂತಹ ಎಷ್ಟೋ ಅನಾಹುತಗಳನ್ನು ತಪ್ಪಿಸಲು ಸಾಧ್ಯವಿತ್ತು ಅಥವಾ ಅನಾಹುತದಿಂದ ಆದ ನಷ್ಟವನ್ನು ಕಡಿಮೆ ಮಾಡುವುದಕ್ಕಾದರೂ ಅವಕಾಶವಿತ್ತೆಂಬುದು ಸ್ಪಷ್ಟವಾಗುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ರೀತಿಯ ಅನುಕೂಲಗಳು ಇವೆ. ಗುಡಿಸಲುಗಳಿಗೂ ಬೆಂಕಿಗೂ ಬಹಳ ನಿಕಟ ಸಂಬಂಧ. ಒಂದು ಕಿಡಿ ಹಾರಿದರೂ ಸಾಕು; ಬಹು ಬೇಗ ಅದು ಒಂದು ಜ್ವಾಲೆಯಾಗಿ ಪರಿಣಮಿಸಿ ಗುಡಿಸಲನ್ನು ಆಹುತಿಗೆದುಕೊಳ್ಳುತ್ತದೆ. ಹುಲ್ಲಿನ ಮೆದೆಗೆ ಬೆಂಕಿ ತಗಲುವುದು ಕಸ್ಟವಾದೀತೆ? ಬೇಸಿಗೆ ಕಾಲದಲ್ಲಿ ನೀರಿನ ಅಭಾವದ ದೊಡ್ಡ ಕೊರತೆ ಬೇರೆ, ಅಗ್ನಿಶಾಮಕ ಯಂತ್ರಗಳು ಸಕಾಲಕ್ಕೆ ಬಗವಿಸಲು ಒಳ್ಳೆಯ ರಸ್ತೆಯ ಸೌಕರ್ಯವಾದರೂ ಎಲ್ಲಿರುತ್ತದೆ? ಅದೂ ಅಲ್ಲದೆ ಬೆಂಕಿ ಒಂದು ಮನೆಯಿಂದ ಇನ್ನೊಂದು 'ಮನೆ'ಗೆ ಹರಡುವುದೂ ಬಹಳ ಸುಲಭ.

ಗ್ರಾಮಾಂತರ ಪ್ರದೇಶಗಳಲ್ಲಿ ಬೆಂಕಿ ಅನಾಹುತಗಳಿಗೆ ಸಾಮಾನ್ಯ ಕಾರಣವೆಂದರೆ, ಗುಡಿಸಲುಗಳಲ್ಲಿ ಕಟ್ಟಿಗೆಯ ಸಹಾಯದಿಂದ ಉರಿಯುವ ಒಲೆಗಳು. ಕಟ್ಟಿಗೆ ಧಗಧಗ ಉರಿಯುತ್ತಿರುತ್ತದೆ. ಬೆಂಕಿ ನಾಲಿಗೆ ಚಾಚುತ್ತದೆ. ಹೀಗೆ ಹೊರಚಾಚುವ ಬೆಂಕಿಯ ನಾಲಿಗೆ ಅನೇಕ ವೇಳೆ ಬಹಳ ಎತ್ತರಕ್ಕೆ ಕಿಡಿಗಳನ್ನು ಹಾರಿಸಬಹುದು ಅಥವಾ ಕೈಚಾಚಿ ಮಾಡು ಮುಟ್ಟಿಬಹುದು.

ಎಣ್ಣೆ ದೀಪಗಳ ಉಪಯೋಗವೂ ಒಂದು ಕಾರಣ. ಸ್ವಲ್ಪ ಕೈತಪ್ಪಿದರೂ ಅದು ಬೆಂಕಿ ಅನಾಹುತಕ್ಕೆ ಕಾರಣವಾಗಬಹುದು.

ಮನೆಮಂದಿ ಮಲಗಿರುವ ಸಮಯದಲ್ಲಿ ಒಲೆಯಲ್ಲಿ ಉಳಿದುಳಿದ ಕೆಂಡ ಮತ್ತೆ ಪ್ರಜ್ವಲಿಸ ತೊಡಗಿ ಕಿಡಿಕಾರಬಹುದು. ನುತ್ತು ಈ ಕಿಡಿಗಳು ಅನಾಹುತಕ್ಕೆ ಕಾರಣವಾಗಬಹುದು. ಸಾಕಷ್ಟು ಜಾಗರೂಕತೆಯಿಲ್ಲದೆ ಧೂಮ್ರಪಾನ ಮಾಡುವುದೂ ಬೆಂಕಿ ಅನಾಹುತಗಳಿಗೆ ಕಾರಣವಾಗಬಹುದು. ಅರ್ಧ ಸೇದಿ ಸಂದಿಗೊಂದಿಗಳಲ್ಲಿ ಬಿಸಾಡುವ ಬೀಡಿ ಅಥವಾ ಸಿಗರೇಟ್ ತುಂಡುಗಳು ಬೆಂಕಿ ಅನಾಹುತಕ್ಕೆ ಕಾರಣವಾಗಬಹುದು.

ಚಿಮಣಿಯಿಂದ ಹಾರಿ ಬರುವ ಕಿಡಿಗಳು ಮತ್ತು ಬೆಂಕಿ ಕಾಯಿಸಿಕೊಳ್ಳುವ ಹಳೆಕಾಲದ ವಿಧಾನಗಳು; ಒಲೆ ಹತ್ತಿಸುವ ರೀತಿ. ಹೊಲಗಳಲ್ಲಿ ಮುಂಜಾಗರೂಕತೆ ವಹಿಸದೆ ಹುಲ್ಲಿಗೆ ಬೆಂಕಿ ಹಚ್ಚುವುದು; ಬೇಸಿಗೆ ಕಾಲದಲ್ಲಿ ಹರಡಿಕೊಂಡಿರುವ ಹೊಟ್ಟಿಗೆ ಆಕಸ್ಮಿಕವಾಗಿ ಬೆಂಕಿ ತಗಲುವುದು—ಇತ್ಯಾದಿ ಹಲವು ಕಾರಣಗಳಿಂದಾಗಿ ದೊಡ್ಡ ದೊಡ್ಡ ಅನಾಹುತವೇ ನಡೆದು ಹೋಗುತ್ತದೆ. ಹಬ್ಬಹುಣ್ಣಿಮೆಗಳ ಕಾಲದಲ್ಲಿ ಪಟಾಕಿ, ಬಾಣ ಬಿರುಸು ಇತ್ಯಾದಿಗಳ ಪ್ರಯೋಗದಿಂದಾಗಿ ಅನಾಹುತಗಳು ನಡೆಯುವುದೂ ಉಂಟು. ಅಲ್ಲದೆ, ಪಕ್ಷವೈಷಮ್ಯ ತಲೆದೋರಿ ಒಂದು ಗುಂಪು ಇನ್ನೊಂದು ಗುಂಪಿಗೆ ಸೇರಿದ ಹುಲ್ಲಿನ ಮೆದೆಗಳಿಗೆ ಬೆಂಕಿ ಇಡಬಹುದು.

ಇಂತಹ ಅನಾಹುತಗಳಿಗೆ ಗಮನಕೊಡಲು ಗ್ರಾಮಾಂತರ ಪ್ರದೇಶಗಳಲ್ಲಿಯೇ ಪ್ರತ್ಯೇಕ ಅಗ್ನಿಶಾಮಕ ವ್ಯವಸ್ಥೆಗಳನ್ನು ಏರ್ಪಡಿಸುವುದು ಸುಲಭಸಾಧ್ಯವಾಗದು, ಇಂತಹ ವ್ಯವಸ್ಥೆ ಇರುವ ಪಟ್ಟಣಗಳಿಂದ ದೂರದಲ್ಲಿರುವ ಗ್ರಾಮಗಳಿಗನ್ವಯಿಸಿ ಈ ಕಾರ್ಯ ನಡೆಯುವುದಂತೂ ಇನ್ನೂ ಕಷ್ಟ. ಈ ಕಾರಣ ಇಂತಹ ಅನಾಹುತಗಳು ನಡೆಯದಂತೆ ಮುಂಜಾಗರೂಕತೆ ವಹಿಸಿ ಇಂತಹ ಅನಾಹುತಗಳ ಸಂಖ್ಯೆಯನ್ನು ಮಿತಿಗೊಳಿಸುವುದೇ ಸರಿಯಾದ ಮಾರ್ಗ.

ಗುಡಿಸಲುಗಳನ್ನು ಕಟ್ಟುವಾಗ ಬಹು ಸುಲಭವಾಗಿ ಬೆಂಕಿ ತಗಲುವ ವಸ್ತುಗಳನ್ನು ಉಪಯೋಗಿಸದೆ ಹಸಿ ಮಣ್ಣು, ಇಟ್ಟಿಗೆ, ಕಲ್ಲು ಇತ್ಯಾದಿ ವಸ್ತುಗಳನ್ನೇ ಆದಷ್ಟು ಉಪಯೋಗಿಸಬೇಕಲ್ಲದೆ ಮೇಲ್ಛಾವಣಿಗೆ ತಗಡು, ಕಲ್ನಾರು ಅಥವಾ ಹೆಂಚು ಇತ್ಯಾದಿಗಳನ್ನೇ ಉಪಯೋಗಿಸುವುದು ಒಳ್ಳೆಯದು; ಅಡಿಗೆ ಮನೆಗಂತೂ ಈ ರೀತಿಯ ಮುಂಜಾಗರೂಕತೆ ಅತ್ಯಾವಶ್ಯಕ.

ಸೀಳದ ಗಳು ಮತ್ತು ಬಿದಿರುಗಳನ್ನು ಉಪಯೋಗಿಸುವಾಗ ಅವುಗಳ ಮೇಲೆ ಹಸಿಮಣ್ಣಿನ ದಪ್ಪ ಸದರವನ್ನು ಹಾಕಿ ಅದರ ಮೇಲೆ ಸುಣ್ಣ ಬಳಿಯಬೇಕು. ಇದರಿಂದ ಬೆಂಕಿಯ ಅನಾಹುತ ನಡೆಯುವಂತೆ ನೋಡಿಕೊಳ್ಳಲು ಸ್ವಲ್ಪ ಮಟ್ಟಿನ ಮುಂಜಾಗರೂಕತೆ ವಹಿಸಿದಂತಾಗುತ್ತದೆ.

ಮನೆ ಮಂದಿ ಮಲಗುವ ಸಮಯದಲ್ಲಿ ಎಣ್ಣೆ ದೀಪಗಳು ಉರಿಯುತ್ತಿರಲು ಯಾವತ್ತೂ ಅವಕಾಶ ಕೊಡಬಾರದು.

ಬೀಡಿ, ಸಿಗರೇಟ್ ತುಂಡುಗಳನ್ನಾಗಲಿ ಹಚ್ಚಿದ ಕಡ್ಡಿಗಳನ್ನಾಗಲಿ ಎಸೆಯುವಾಗ ಅವು ಪೂರ್ಣ ಆರಿಸಿಯೇ ಎಂಬುದನ್ನು ನೋಡಿಕೊಂಡು ಬಿಸಾಡಬೇಕು.

ಹುಲ್ಲಿನ ಮೆದೆಗಳು ರಸ್ತೆಯ ಪಕ್ಕದಲ್ಲಾಗಲಿ ಅಥವಾ ರೈಲ್ವೆ ನಿಲ್ದಾಣದ ಪಕ್ಕದಲ್ಲಾಗಲಿ ಇರದಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ಕಿಡಿಗಳು ಹಾರಿ ಬಂದು ಅನಾಹುತ ಸಂಭವಿಸಬಹುದು. ಹೊಲ ರಸ್ತೆ ಅಥವಾ ರೈಲ್ವೆ ನಿಲ್ದಾಣದ ಪಕ್ಕದಲ್ಲಿಯೇ ಇದ್ದರೆ ಮಧ್ಯೆ ಒಂದಷ್ಟು ಜಾಗ ಬಿಟ್ಟುಕೊಂಡು ಆ ಬದಿಗೆ ಮೆದೆ ಹಾಕಬೇಕು. ಮತ್ತು, ಹುಲ್ಲಿನ ಮೆದೆಗಳನ್ನು ಕಟ್ಟುವಾಗ ಒಂದಕ್ಕೊಂದು (ಅಥವಾ ಹೊಲದ ಮನೆಯಿಂದ) ೬೦ ಅಡಿಗಳಷ್ಟಾದರೂ ದೂರ ಕಟ್ಟಬೇಕು. ಅಲ್ಲದೆ ಯಾವ ಮೆದೆಯೇ ಆಗಲಿ ಊರಕೆದಲ್ಲಿ ೫೦೦ ಮಣಗಳಿಗಿಂತ ಮತ್ತು ಎತ್ತರದಲ್ಲಿ ೨೫ ಅಡಿಗಳಿಗಿಂತ ಹೆಚ್ಚಿರದಂತೆ ನೋಡಿಕೊಳ್ಳಬೇಕು.

ಈ ರೀತಿಯ ಮುಂಜಾಗರೂಕತೆ ಕಾರ್ಯಗಳನ್ನು ಅನುಸರಿಸುವುದರಿಂದ ಬೆಂಕಿ ಅನಾಹುತಗಳನ್ನು ತಡೆಗಟ್ಟಲು ಬಹು ಮಟ್ಟಿಗೆ ಸಾಧ್ಯವಾಗುತ್ತದೆಯಲ್ಲದೆ, ಆಗ ಬಹುದಾದ ಅನಾಹುತಗಳನ್ನು ಮಿತಿಗೊಳಿಸಲೂ ಸಾಧ್ಯವಾಗುತ್ತದೆ.

ಸುಲಭವಾಗಿ ಬೆಂಕಿ ತಗಲುವ ಎಣ್ಣೆ, ಕಟ್ಟಿಗೆ, ಮರಮುಟ್ಟು, ಬಣ್ಣ ಮತ್ತು ಸ್ಪಿರಿಟ್ ಇತ್ಯಾದಿಗಳನ್ನು ವಾಸದ ಮನೆಗಳಲ್ಲಿ ಪ್ರತ್ಯೇಕವಾಗಿ ಇಡಬೇಕು. ಅಂಗಡಿ ಬೀದಿಗಳನ್ನು ಕಟ್ಟುವಾಗ ಅಂಗಡಿಗಳ ಮಧ್ಯೆ ಅಲ್ಲಲ್ಲೇ ಸಣ್ಣ ಬಿಟ್ಟಿರಬೇಕು.

ಆಗಾಗ ಸಂಭವಿಸಬಹುದಾದ ಬೆಂಕಿ ಅನಾಹುತಗಳನ್ನು ಎದುರಿಸುವುದಕ್ಕಾಗಿ ಗ್ರಾಮಸ್ಥರಿಗೆ ಸಾಮಾನ್ಯ ವಿಧಾನಗಳನ್ನು ತಿಳಿಸಬೇಕು. ಎಷ್ಟೋ ಗ್ರಾಮಗಳಲ್ಲಿ ಬೆಂಕಿ ಅನಾಹುತಗಳು ನಡೆದಾಗ ಪೋಲೀಸರಿಗೆ ಅಥವಾ ಅಗ್ನಿಶಾಮಕ ಪಡೆಗಳಿಗೆ ಕರೆಕೊಡಲು ಗ್ರಾಮಸ್ಥರು ಹೆದರುತ್ತಾರೆ. ಈ ಹೆದರಿಕೆಯನ್ನು ನೋಡಲು ಹೋಗಲಾಡಿಸಬೇಕು. ಮತ್ತು ಆ ರೀತಿ ಕರೆದರೆ ಯಾವುದೇ ರೀತಿಯ ಶಿಕ್ಷೆಗೂ ಅವರು ಗುರಿಯಾಗುವುದಿಲ್ಲವೆಂಬುದನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು ಗ್ರಾಮಸ್ಥರು ಇಂತಹ ಸಂದರ್ಭಗಳಲ್ಲಿ ಧೈರ್ಯವಾಗಿ ಮುನ್ನುಗ್ಗಿ ಕೆಲಸ ಮಾಡಲು ಮತ್ತು ತಮ್ಮ ನೆರೆಹೊರೆಯ ಬಂಧುಗಳ ಸಹಾಯಕ್ಕೆ ನಿಲ್ಲಲು ಪ್ರೋತ್ಸಾಹಿಸಬೇಕು.

ಬೆಂಕಿ ಅನಾಹುತ ಗೊತ್ತಾದೊಡನೆಯೇ ದೂರಕ್ಕೆ ಕೇಳಿಸುವಂತೆ ಅದರ ಕುರಿತು ಸೂಚನೆಕೊಡಬೇಕು. ಮರಳು ಎಸೆಯುವುದು, ಮಣ್ಣೆರಚುವುದು, ಇತ್ಯಾದಿ ಎಲ್ಲ ಕಾರ್ಯಕ್ರಮಗಳಲ್ಲಿ ಪೂರ್ಣ ವ್ಯವಸ್ಥೆ ಇರಬೇಕು. ಮಣ್ಣು ಅಗೆಯಲು ಬೇಕಾದ ಗುದ್ದಲಿ, ಹಾರೆ, ಪಿಕಾಸಿ ಇತ್ಯಾದಿ ಉಪಕರಣಗಳು ಸಿದ್ಧವಾಗಿರಲೇಕು. ಮತ್ತು; ಬೆಂಕಿ ಅನಾಹುತ ಕಂಡುಬಂದಾಗ ಅದು ಹರಡದಂತೆ ನೋಡಿಕೊಳ್ಳಲು ಪಕ್ಕದ ಮನೆಗಳನ್ನು ಕೆಡವಬೇಕಾಗಿ ಬಂದರೂ ಅಂಥ ಕಾರ್ಯಕ್ಕೆ ಗಮನ ಕೊಡಬೇಕು. ಮತ್ತು, ಯಾರಾದರೊಬ್ಬರು ಗ್ರಾಮದ ಪೋಲೀಸ್ ಠಾಣೆಗೊ, ರೆವಿನ್ಯೂ ಅಧಿಕಾರಿ ಬಳಿಗೋ ಓಡಿ ಹೋಗಿ ಸುದ್ದಿ ಕೊಡಬೇಕು. ಇದರಿಂದ ಅವರು ಅಗ್ನಿಶಾಮಕ ಪಡೆ ಕರೆಯಲು ಸಾಧ್ಯವಿದ್ದರೆ ಕರೆಯುತ್ತಾರೆ.

ಬೆಂಕಿ ಆರಿಸಲು ನೀರು ಅತ್ಯಾವಶ್ಯಕ. ಆದುದರಿಂದ ಗ್ರಾಮಸ್ಥರು ಬಾವಿ, ಕೊಳ, ನಾಲೆ, ನದಿ ಮತ್ತು ಹೊಳೆ ಇಂತಹ ನೀರಿನ ಸೌಲಭ್ಯ ಸಾಧನಗಳನ್ನೂ ಒಳ್ಳೆ ಉಪಯೋಗಕರ ರೀತಿಯಲ್ಲಿ ಟ್ಟು ಕೊಂಡಿರಲು ಕಲಿಯಬೇಕು. ಅಗ್ನಿಶಾಮಕ ಕಾರ್ಯದಲ್ಲಿ ಉಪಯೋಗಕ್ಕೆ ಬರುವ ಸ್ಪ್ರೇಪ್ ಪಂಪ್ಸ್, ಬಕೆಟ್ಸ್, ಹಾರೆ, ಪಿಕಾಸಿ, ಗುದ್ದಲಿ ಇತ್ಯಾದಿ ಉಪಕರಣಗಳನ್ನು ಒಂದು ಕಡೆ ಸಿದ್ಧಮಾಡಿಕೊಂಡಿದ್ದು ಅಗತ್ಯಕಂಡು ಬಂದಾಗ ಅವುಗಳು ಉಪಯೋಗಕ್ಕೆ ಬರುವಂತೆ ನೋಡಿಕೊಳ್ಳಬೇಕು. ಮತ್ತು ಅವುಗಳು ಉತ್ತಮ ಸ್ಥಿತಿಯಲ್ಲನೇ ಎಂಬುದನ್ನು ಆಗಾಗ ನೋಡಿಕೊಳ್ಳುತ್ತಿರುವ ಉತ್ಸಾಹಶಾಲಿ ಜನರು ಕೆಲವರಿಗೆ ಅಲ್ಪ ಸಂಭಾವನೆಯೂ ದೊರಕುವಂತೆ ಮಾಡಬಹುದು.

—ಎಂ. ಜೆ. ಪ್ರಧಾನ್.

ಕೊಪ್ಪ

ವಿಶಾಲವಾಗಿ ಹಬ್ಬುತ್ತಿರುವ
ಸಿಂಡಿಕೇಟ್ ಬ್ಯಾಂಕಿನ
ನೂರಹದಿನೈದನೆಯ ಶಾಖೆ

ಅಕ್ಟೋಬರ ೨೦, ೧೯೫೮ರಂದು
ಕೊಪ್ಪದಲ್ಲಿ ಆರಂಭವಾಗಿದೆ.

ಶ್ರೀ. ಎನ್. ಶಂಕರ ಶೆಟ್ಟಿ,
ಏಜಂಟ್, ಕೊಪ್ಪ.

ಡಾ| ಟಿ. ಎಂ. ಎ. ಪೈ,
ಮೆನೇಜಿಂಗ್ ಡೈರೆಕ್ಟರ್.

ಶ್ರೀ. ಟಿ. ಎ. ಪೈ,
ಜನರಲ್ ಮೆನೇಜರ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.

THE CANARA INDUSTRIAL & BANKING SYNDICATE LTD., UDIPI

Edited Printed & Published by K. H. Shetty, at the Navayuga Press Udipi S. India

ನವಯುಗ

ವಾ.ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ ಪೈಸೆ.

ವರುಷ ೩೮. ವಾರ ೧೨. 27-11-1958 Vol 38 No. 12.

ಭೂ ಶಾಸನ

ಶಾಸನ ಸಭೆಯ ಮುಂದೆ ಬರಲು ತಡವಾಗದು

ಪ್ರಾದೇಶಿಕ ಕಾಂಗ್ರೆಸ್ ಮತ್ತು ಶಾಸನಸಭೆಯ ಕಾಂಗ್ರೆಸ್ ಪಕ್ಷಗಳಿಂದ ವಿವೇಚನೆ

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯೊಂದು ಜರಗಿ ಆದರಲ್ಲಿ ಮೈಸೂರು ಭೂ ಶಾಸನದ ಬಗ್ಗೆ ಕೆಲವಾರು ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಆಲ್ಲದೆ ನವೆಂಬರ ೨ ರಂದು ವ್ಯಾರಂಭವಾದ ಈ ಚರ್ಚೆಯು ಕೆಲವು ದಿನಗಳ ವರೆಗೆ ಮುಂದುವರಿಯಿತು. ಪಕ್ಷದ ಸದಸ್ಯರು ಭೂಸುಧಾರಣೆಯ ಬಗ್ಗೆ ಯೋಜನಾ ಆಯೋಗವು ಮುಂದಿಟ್ಟ ಕೆಲವಾರು ಶಿಫಾರಸುಗಳನ್ನೂ ಯೋಜನಾ ಆಯೋಗದ ಕೇಂದ್ರ ಸಮಿತಿಯ ಸಿಫಾರಸುಗಳನ್ನೂ ಜಿಲ್ಲಾ ಸಮಿತಿಯ ವರದಿಯಲ್ಲಿ ಮಾಡಲಾದ ಪ್ರಧಾನ ಸೂಚನೆಗಳನ್ನೂ ಗಂಭೀರವಾಗಿ ವಿವೇಚಿಸಿತು. ಕಾಂಗ್ರೆಸ್ ಪಕ್ಷದ ಸಭೆಯ ಸದಸ್ಯರಿಗೂ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಸಮಿತಿ ಮತ್ತು ಕಾಂಗ್ರೆಸ್ ಪಕ್ಷ ಹಾಗೂ ಪ್ರಾದೇಶಿಕ ಸಂಯುಕ್ತ ಸಮಿತಿಗಳ ಬೆಂಗಳೂರು ಸಭೆಯ ನಿರ್ಣಯಗಳ ಮತ್ತು ಗೊತ್ತುವಳಿಗಳ ಸಾರಾಂಶವನ್ನು ಒಪ್ಪಿಸಲಾಯಿತು.

ಈ ಸಭೆಯಲ್ಲಿ ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರೂ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷರಾದ ಶ್ರೀ ಎಚ್. ಕೆ. ವೀರಣ್ಣ ಗೌಡರೂ ಭೂ ಸುಧಾರಣೆಯ ಕುರಿತಾಗಿಯೂ ಮೈಸೂರು ಕಾಂಗ್ರೆಸಿನ ನಿಲುವಿನ ಬಗ್ಗೆಯೂ ಮಾತಾಡಿದರೆಂದು ತಿಳಿಯಲ್ಪಟ್ಟಿದೆ. ವಿವಿಧ ವಿಷಯಗಳ ಬಗ್ಗೆ ಗಂಭೀರವಾದ ಚರ್ಚೆಯು ನಡೆದು, ಕೆಲವು ಮಹತ್ವದ ನಿರ್ಣಯಗಳನ್ನು ಸ್ವೀಕರಿಸಲಾಯಿತು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಸಮಿತಿಯು, ಒಕ್ಕಲುಗಳಿಂದ ಸ್ವಂತ ಸಾಗುವಳಿಗೆ ಹಿಂತಿರುಗಿ ಪಡೆಯುವ ಭೂಪರಿಮಿತಿಯನ್ನು ಹೇರಬೇಕು, ಈಗ ವೈಯಕ್ತಿಕ ಸಾಗುವಳಿಯಾಗುತ್ತಿರುವ ಭೂಮಿಯು ಮೇಲೆ ಯಾವ ಮಿತಿಯನ್ನೂ ಹೇರಬಾರದು ಮತ್ತು ಮುಂದೆ ಪಡೆಯಬಹುದಾದ ಹಿಡುವಳಿಯು ಮೇಲೆ ಮಿತಿಯೊಂದನ್ನು ಹೇರಬೇಕು ಎಂಬ ಮೂರು ತತ್ವಗಳ ಆಧಾರದಲ್ಲಿ ಈ ಶಾಸನವನ್ನು ತಯಾರಿಸಬೇಕೆಂದು ನಿರ್ಧರಿಸಿತ್ತು.

ಮೂಲಹಿಡುವಳಿಯು ರೂ ೬೦೦ ವಾರ್ಷಿಕ ನಿವ್ವಳ ಆದಾಯ ಬರುವಂತಹ ದಿರಬೇಕು; ಕೌಂಟುಂಬಿಕ ಹಿಡುವಳಿಯು ಮೂಲಹಿಡುವಳಿಯ ಮೂರು ಪಟ್ಟಿರಬೇಕು, ಅತ್ಯಧಿಕ ಹಿಡುವಳಿಯು ಕೌಟುಂಬಿಕ ಹಿಡುವಳಿಯ ಮೂರುಪಟ್ಟಿರಬೇಕು ಎಂಬುದಾಗಿ ಎಂ. ಪಿ. ಸಿ ಸಿಯ ಕಾರ್ಯಕಾರೀ ಸಮಿತಿಯು ಸ್ವಯಂ ಹಿಡುವಳಿಯ ಬಗ್ಗೆ ಒಮ್ಮತದ ಅಭಿಪ್ರಾಯಕ್ಕೆ ಬಂದಿತ್ತು.

ಕಾಂಗ್ರೆಸ್ ಚುನಾವಣಾ ಘೋಷಣೆಯಲ್ಲಿ ಸೂಚಿಸಲಾದ ಗೇಣಿದಾರತನವನ್ನು ಸಂಪೂರ್ಣ ಕೆತ್ತು ಹಾಕಬೇಕು ಮತ್ತು ಮುಂದಿನ ಗೇಣಿತನದ ಬಗ್ಗೆ ಜಿಲ್ಲಾ ಸಮಿತಿಯು ನಿರೂಪಿಸಿದ ಕೆಲವಾರು ನಿಬಾಯತಿಯನ್ನೀಯಬಹುದು ಎಂದೂ ಎಂ. ಪಿ. ಸಿ ಸಿಯ ಕಾರ್ಯಕಾರೀ ಸಮಿತಿಯು ನಿರ್ಧರಿಸಿತ್ತು.



ಅಮೆರಿಕೆಯ ಉದಾರವೃತ್ತಿ
ರಿಚರ್ಡ್ ಎಂ. ನಿಕ್ಸನ್

ನ್ಯಾಯಗೇಡಿಯು ಇಷ್ಟಪಟ್ಟು ಪಾಲಪಟ್ಟು ಪರಿಹಾರದನವನ್ನೆ ಕುಯ್ಯಬೇಕು; ಈ ಪರಿಹಾರಧನವು ೧೫ ವರ್ಷಗಳಿಗೆ ಕಡಿಮೆಯಿದ್ದರೆ, ಈ ಮೊಬಲಗನ್ನು ಕೂಡಲೇ ನಗದಿಯಾಗಿ ಒಂದೇ ಮತ್ತದಲ್ಲಿ ಕೊಡಬೇಕು; ೧೫ ವರ್ಷಗಳಿಗೆ ಮಿರಿದ ಸಂದರ್ಭದಲ್ಲಿ

(೨ನೇ ಪುಟ ನೋಡಿ)

38 ವರ್ಷಗಳ
ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಾರ್ಯಾಲಯ: ಉಡುಪಿ, ದ. ಕ.

ನಮ್ಮ 3 ವರ್ಷಗಳ ವ್ಯಾದೆಯ ಕೇಶ್ ಸರ್ಟಿಫಿಕೇಟು ಗಳಲ್ಲಿ ತೇವಣಿಮಾಡಿರಿ. ಬಡ್ಡಿ ಸೇಕಡಾ 5ರಂತೆ.

ರೂ. 87/- 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100/-ನ್ನು ಒದಗಿಸುವುದು.

ಕರೆ, ಟಿಕ್ಕ ವ್ಯಾದೆ, ನಿರಖು ತೇವಣಾತಿಗಳ ಮೇಲೆ ಆಕರ್ಷಣೀಯ ಕರ್ತಗಳು.

ಬಡ್ಡಿ ಸೇಕಡಾ $4\frac{3}{4}$ರ ವರೆಗೆ.

ದೊಡ್ಡ ತೇವಣಿಗಳ ಮೇಲೆ ಹೆಚ್ಚಿನ ಬಡ್ಡಿ.

ಶಾಖೆಗಳು: ಮಂಗಳೂರು—ಬೆಂಗಳೂರು—ಬೇಲೂರು—ಶಿವಮೊಗ್ಗ, ಕಾಸರಗೋಡು ಇತ್ಯಾದಿ.

ಸ್ಥಾಪನೆ : : 1920

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O **MANGALORE.** Estd: 1931.

BRANCHES

Bombay. Bangalore. Mysore. Mercara, Kanhangad Kasaragod and throughout the District of South Kanara.

ಬೆವರಿಳಿಸಿ ಗಳಿಸುವವ ಜಾಣ}
ಗಳಿಸಿ ಉಳಿಸುವವ ಅತಿಜಾಣ} **ಸಿಂಡಿಕೇಟ್ ಬೇಂಕ್**

ಕಥಾ ವಿಹಾರ

ಹೌದು, ಪೀಡೆ ತೊಲಗಿತು!

ಆದಾವ ಪೀಡೆ? ಎಂದು ಪ್ರಶ್ನಿಸುವಿರಾದರೆ, ನೀವೇ ಉತ್ತರವರಸಿರಿ

ಎಂದೋ ಬಯಸಿದ್ದ ಕೋಕೆಯನ್ನು ದೇವರು ಕೊನೆಗಾದರೂ ಕರುಣಿಸಿದ. ಆತನ ಇಚ್ಛೆಯನ್ನು ಮೀರಿ ನಡೆವ ಎದೆಗಾರಿಕೆ ಧೀರರಿಗೇ ಇಲ್ಲವೆಂದ ಮೇಲೆ ನನಗೆ —ಸಮಾಜದಲ್ಲೆಲ್ಲಾ ಅನಿಷ್ಟಳು, ನೀಚಳು, ಕುಲ ಘಾತಕಿ ಎನ್ನುವ ವಿವಿಧ ಬಿರುದುಗಳ ಸುರಿಮಳೆಗರೆಸಿಕೊಂಡು ಇನ್ನೂ ನಾಚದೆ, ಕೊಂಕದೆ, ಈ ದೇಹದಲ್ಲಿ ಉಸಿರು ಹಿಡಿದು ಬಾಳುತ್ತಿರುವ ನನಗೆ -ಆದೆಲ್ಲಿ ಸಾಧ್ಯ? ಎಂದೂ ನಾನು ಬಲ್ಲೆ.

ಸಮಾಜದಲ್ಲಿ ನೀತಿಯ ಕಟ್ಟಳೆಯ ದಾರಿತೋರುವ ಮಡಿವಂತರು ನನ್ನನ್ನೇ ದಿಟ್ಟಿಸಿ ನೋಡಿ ವ್ಯಂಗ್ಯ ನಗೆ ಬೀರುತ್ತಿರುವ ಗಂಡಸು ಜಾತಿ ಅವರ ಆಸೆಯ ಕಣ್ಣು ತೀರದ ಬಯಕೆಗಾಗಿ ನನ್ನನ್ನು ಯಾಚಿಸಿದರೂ, ಅಪವಾದದ ಉಡುಗೊರೆಯಿತ್ತು ಹಿಂಸಿಸಿದರೂ, ತೋರಿಕೆಗೆ ತಾವು ಸಭ್ಯರೆನಿಸಿ, ನಾನು ಕುಲಘಾತಕಿ, ಕೊಲೆಪಾತಕಿ, ಎಂದು ಒಕ್ಕೊರಲಿನಿಂದ ಸಾರುವುದೆಂದೂ ನಾನು ಬಲ್ಲೆ.

ಸಭ್ಯ ನನ್ನ ಯೋಚನೆಯನ್ನೇ ನ್ಯಾಯಾಲಯವೂ ಸಮರ್ಥಿಸಲಿಲ್ಲವೆ? ಮಾನವ ಕೃತ್ಯವನ್ನು ಕಾನೂನಿನ ಒರೆಗಲ್ಲಿಗೆ ಹಚ್ಚಿ, ಕಿಕ್ಕಿತೀಡಿ ನ್ಯಾಯದಾನವೀವ ನ್ಯಾಯಾಧಿಪತಿಗಳಿಗಾದರೂ ನನ್ನ ಬಡ ಹೃದಯದ ಮೊರೆ ಕೇಳಿಸಿರಬಹುದೇ? ಇಲ್ಲ ಸರ್ವಥಾ ಇಲ್ಲ. ಮಾನವನ ಹೃದಯವನ್ನರಿಯಲು ಜಡ ಕಾನೂನಿನ ಪುಸ್ತಕದ ಶರಣು ಹೋಗುವ ಅವರಿಗೆ ನನ್ನ ಎದೆಯಾಳದಲ್ಲಿ ತಾಂಡವವಾಡುತ್ತಿರುವ ನೋವು ಅರಿಯಲು ಸಾಧ್ಯವೇ ಇಲ್ಲವೆಂದೂ ನಾನು ಬಲ್ಲೆ.

ಆದರೆ ನಾನು ಬಯಸಿದ್ದಾದರೂ ಏನು? ವಂಚಕರಿಂದ, ವಿವಿಧ ಸೋಗಗಳನ್ನು ಹಾಕಿ, ಹೆಂಗಸನ್ನು ತಮ್ಮ ಬಗಲಿಗೆ ಹಾಕುವ ಕುಹಕಿಗಳಿಂದ, ಹೆಣ್ಣಿನ ಶೀಲವನ್ನು ಧನದ ಆಸೆತೋರಿಸಿ ಕೊಳ್ಳೆಯಿಡಲು ಯತ್ನಿಸುತ್ತಿರುವ, ಕ್ರೂರ ಸಿರಿವಂತರಿಂದ ಕೂಡಿವ, ಈ ಹೊಲಸು ಸಮಾಜದಿಂದ ದೂರ – ಬಲು ದೂರ ಇರಲಿಕ್ಕೆಲ್ಲವೇ? ಇಂದು ನ್ಯಾಯಾಲಯ ನನಗೆ ಆಜನ್ಮಪರ್ಯಂತ ತುರಂಗ ವಾಸಕಟ್ಟಳೆ, ನನ್ನ ಬಯಕೆಯನ್ನು ಈಡೇರಿಸದಕ್ಕಾಗಿ, ಕಾನೂನಿನ ಪುಸ್ತಕದ ಮರೆಹೊಕ್ಕ, ಈ ನ್ಯಾಯಾಧಿಪತಿಗಳಿಗೆ ನಾನು ಚಿರಋಣಿ. ಇನ್ನಿರಕ್ಷಣದಲ್ಲಿ. ಈ ಸಮಾಜವನ್ನೇ ತೊರೆದು ಬಲುದೂರ ಹೋಗ ಬೇಕೆನಿಸಿದೆ ಬಲ್ಲೆ. ಇದರಿಂದಾಗಿ ಮನಸ್ಸಿಗೆ ವೇದನೆಯಾಗುತ್ತಿದೆಯೇ ಎಂದು ಪ್ರಶ್ನಿಸಬೇಡಿ. ನಿಜಕ್ಕೂ ಈ ಕುರುಡು ಸಮಾಜಕ್ಕಿಂತ, ಕಬ್ಬಿಣದ ಸರಳ ಕೋಣೆ, ಕತ್ತು ಆಂಬಲಿ ನನಗೆ ಸಾವಿರ ಪಾಲು ಹಿತ.

"ಪೀಡೆ ತೊಲಗಿತು!" ತರುಣನನ್ನು ಮರುಳುಗೊಳಿಸಿ ತನ್ನೆಡೆಗೆ ಎಳೆದು ಅವರ ಅಧಪತನವನ್ನು ಸಾಧಿಸುತ್ತಿದ್ದ, ನಾನು ಹೋದುದರಿಂದ ಸಮಾಜದ ಪೀಡೆಯೊಂದು ತೊಲಗಿತೆಂದು ಮಡಿವಂತರ ಸಂತಸದಲ್ಲಿ ನಗಬಹುದಲ್ಲವೇ?

ಆದರೆ! ಅಂಧಕಾರದಲ್ಲೂ ದಾರಿತೋರವ, ದಾರುಣ ಕಷ್ಟಕಾಲದಲ್ಲೂ, ಸಮಾಧಾನದ ತನಿರಸವನ್ನು ಸೂಸುವ, ಮಾನವೀಯತೆಯನ್ನು ಕ್ಷಲ್ಪವಾದರೂ ಉಳಿಸಿಕೊಂಡಿರುವ, ನನ್ನ ಸೋದರ ಸೋದರಿಯರಿಗೆ ನನ್ನೀ ಬಾಳಿನ ಗುಟ್ಟನ್ನು ಹೇಳಲೇ?

ಮನಸ್ಸನ್ನು ಹರಿಹರಿ ಹಿಗ್ಗಿಸುವ ಹಾಸ್ಯದ ಬುಗ್ಗೆ ಮನಸ್ಸನ್ನು ಕೆರಳಿಸುವ ಶೃಂಗಾರ ಕತೆ, ನನ್ನ ಬರಡು ಬಾಳಿನಲ್ಲಿ ಹಸಿರೆನ್ನಲು ನಾನೂ ಒಪ್ಪಿಕೊಳ್ಳುತ್ತೇನೆ. ಆದರೂ ಹೇಳಿಯೇ ಬಿಡಲೇ?

ಹೂಂ—ಹೇಳಿಯೇ ಬಿಡುವೆ ಸಮಾಜಕ್ಕೆ ವಿದಾಯ ಬಯಸುವ ನನಗೆ ಇದೇ ಕೊನೆಯ ಸಂದರ್ಭವಲ್ಲವೇ? ಬಡವೆಯ ಬಾಳಿನ ಒಳಗುಟ್ಟನ್ನು ಕೇಳುವ ಷ್ಟಾದರೂ ಸಹನೆ ತೋರಬಲ್ಲಿರಾ? ಆಪೀ ನನ್ನ ಭಾಗ್ಯ.

ಅಂದು—ನಕ್ಷತ್ರಗಳಿತ್ತಿರುವ ನನ್ನ ಪುಟ್ಟ ಸಂಸಾರದ ಒಲವಿನ ಪತಿ, ಮುದ್ದು ಮಗ! ಆರಳಿದ ಹೂಗಳನ್ನು ಹೊತ್ತ ನಿಡಂತೆ ಹೆಮ್ಮೆಯಿಂದ ಸಾಗುತಿತ್ತು ನನ್ನ ಬಾಳು ವಿಧಿಗೂ ಮತ್ಸರ ಬರಿಸುವಂತಿದ್ದ ನನ್ನ ಬಾಳ ನಾಕ, ಆತನ ಮಾಯಾಜಾಲದಿಂದಲೇ ಹೀಗಾಗುತಿತ್ತೆಂದು ಯಾರು ತಾನೆ ಭಾವಿಸಿದ್ದರು?

ಭಯಂಕರ ಜ್ವರದಿಂದ, ಅಸಹ್ಯ ವೇದನೆಯಿಂದ, ವಿಲವಿಲನೆ ಒದ್ದಾಡುತಿದ್ದ ನನ್ನ ಪತಿ "ನಿನ್ನನ್ನು ಬಿಟ್ಟೆಲ್ಲಿ ಹೋಗಲಿ ಚಿನ್ನಾ" ಎಂದು ಕೊನೆಯುಸಿರು ಬಿಡುವ ತನಕ ನನ್ನೆಡೆ ಬೀರಿದ ಆ ನೋಟ, ಆ ದಿನ ಹೇಗೆ ತಾನೇ ಮರೆಯಲಿ?

ಗತಿಗೆಟ್ಟ ನನ್ನನ್ನು ರಕ್ಷಿಸುವ ಸೋಗು ಹಾಕಿ ಕವಿ ಮಾತುಗಳಿಂದ ಸಂತೈಸಿ, ಅಕ್ಷರಲ್ಲೇ ಆಸರೆಯನ್ನಿತ್ತ ಸಮಾಜ ಸುಧಾರಕ ರಮಾನಂದ ತಂಗಿಯಂತೆ ಸ್ವೀಕರಿಯಿಂದ ನೋಡಿಕೊಳ್ಳುತ್ತೇನೆಂದಾಗ ಸತ್ಯವೆಂದು ನಂಬಿದೆ. ರಮಾನಂದ ನನ್ನೆಡೆಗೆ ಬಂದುದು ಪರೋಪಕಾರ ಬುದ್ಧಿಯಿಂದಲ್ಲ, ಅನಾಥೆಯರ ಶೀಲವನ್ನು ಸೂರೆಗೊಳ್ಳುವುದೇ ಪುಣ್ಯಕಾರ್ಯವೆಂದು ಭಾವಿಸಿಕೊಂಡಿದ್ದಾತ ನನ್ನ ದುರ್ದೆಸೆಯ ಲಾಭ ಪಡೆಯಲು ಕರುಣೆಯ ಹೊದಿಕೆ ಹೊದ್ದುಕೊಂಡೇ ಬಂದ.

ಆದರೆ, ಕರುಣೆಯ ಮೊಗವಾಡಗಳ ಒಳಗಡೆ?

ಆಸ್ಪತ್ರೆಯಲ್ಲಿ ಮಕ್ಕಳ ವಾರ್ಡಿನ ಚಿತ್ರವಿದು ಇಲ್ಲಿ ಮಕ್ಕಳ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ರಕ್ಷಿಸಿಕೊಡಲಾಗುತ್ತಿದೆ.

ಸಮಾಜ ಸುಧಾರಕ, ಊರಿನ ನಾಯಕ, ಗಣ್ಯ ವ್ಯಕ್ತಿ ಎಂದು ಕೇಳಿಸಿಕೊಂಡು ಮೆರೆವ ರಮಾನಂದ, ಅನೀತಿ ಅತ್ಯಾಚಾರಗಳ ಭಂಡವಾಗಿದ್ದ. ಧನ ಬಲವಿಲ್ಲದ ನಿರ್ಗತಿಕ ಹೆಣ್ಣುಗಳ ಕಣ್ಣೀರು ಸುರಿಸಿ, ಅವರ ಶೀಲವನ್ನು ತನ್ನ ತೀರದ ಬಯಕೆಯ ಅಗ್ನಿಕುಂಡದಲ್ಲಿ ಸುಂದು ಸಮಾಜದ ಮಾರಣ ಹೋಮ ಮಾಡುತಿದ್ದ ರಮಾನಂದ. ಅನಾಥೆಯರ ಪಾಲಿಗೊಂದು ಪೀಡೆಯೆಂದು ಅರಿಯಲು ನನಗೇನೂ ಕಷ್ಟವಾಗಲಿಲ್ಲ.

ಅದೊಂದು ದಿನ! ನಿನೆ ಕಾಸೇ ನಡೆದಂತೆ ಇನ್ನೂ ಅಚ್ಚಳಿಯದೆ ಕಣ್ಣಿಗೆ ಕಟ್ಟುತ್ತಿದೆ ನನ್ನ ಪುಟ್ಟ ಮಗು— ಈ ಲೋಕದ ನನ್ನ ಸಂಪತ್ತು— ಕಾಯಿಲೆಯಿಂದ ನರಳುತ್ತಿದ್ದಾಗ ಬೆಣ್ಣೆಯಂತಹ ಮಾತುಗಳನ್ನಾಡುತ್ತಲೇ, ತನ್ನ ಕಪಟ ನಾಟಕಕ್ಕೆ ಅಣಿವಾಡಿದ ಲಜ್ಜೆಗೇಡಿ!

ನನ್ನ ಪ್ರತಿಭಟನೆ—ಸಮಾಜದಲ್ಲಿ ನನಗೆ ತೊಳೆದರೂ ಮಾಸಲಾರದ ಬಿರುದನ್ನಿತ್ತಿತು. ಕುಟಿಲೆ! ಪತಿಯನ್ನು ಕೊಂದ ದುಷ್ಟೆ!! ರಮಾನಂದನಂತಹ ಪುಣ್ಯಾತ್ಮನನ್ನು.....ಅಯ್ಯೋ ಅದೆಲ್ಲಾ ಹೇಳಲಿಕ್ಕೆ ನಾಚಿಕೆಯಾಗುತ್ತದೆ.

ಇಷ್ಟಾದರೂ ಅವನ ಪೈಶಾಚಿಕ ನೀತಿ ನಿಲ್ಲಬೇಡವೇ? ನುಗ್ಗು ಕೊನೆಯುಸಿರೆಳೆಯಲು ಸಿದ್ಧವಾಗಿದ್ದಾಗಲೇ ಆ ದುಷ್ಟ ಅಯ್ಯೋ.....

ಅನಾಥೆ— ಜತೆಗೆ ಕರುಳಿನ ತುಂಡು ಕೊನೆಯುಸಿರೆಳೆಯುತ್ತಿರುವ ಕಾಲ...

ಛೀ.ಛೀ.ಲ! ನನ್ನ ಕೃತ್ಯ ನೆನೆವಾಗ ನನಗೇ ಹೆದರಿಕೆಯಾಗುತ್ತಿದೆ. ಕರಿಯ ಕೊರಳು ಕೊಯ್ದಂತೆ ಆ ದುಷ್ಟನ ಕೊರಳು ತರಿದೆ! ಹೌದು. ಅಂದು ನಾನು ಕಾಳಿ ಆತ ನನ್ನ ಆಹುತಿಗೆ ಬಲಿಯಾದ ಕರಿ! ಹೆಣ್ಣು, ಮುನಿದರೆ ಮಾರಿ ಎಂಬುದನ್ನು ತೋರಿಸಿಯೇ ಬಿಟ್ಟೆ ಇಲ್ಲ. ಇಲ್ಲವಾದರೆ ಪಶ್ಚಾತ್ತಾಪವಿಲ್ಲ ನನ್ನ ಮಗುವು ಹೋಯಿತು. ನಾನೂ ಹೋಗುತ್ತಿರುವೆ, ಆದರೆ, ದುಷ್ಟ ರಮಾನಂದ ಸತ್ತ. ಸಮಾಜದ ಪೀಡೆ—ಸುಶೀಲೆಯಂತಹ ಅಬಲೆಯರನ್ನು ವಂಚಿಸುತ್ತಿದ್ದ ಆ ಪೀಡೆ ತೊಲಗಿತು.

"ಪೀಡೆ ತೊಲಗಿತು" ನಿಜ; ಆದರೆ ನೀವೇ ಹೇಳಿ, ಯಾರು ಆ ಪೀಡೆ? ಅನಾಥೆಯಾಗಿ ಪತಿಯನ್ನೂ ಮಗುವನ್ನೂ ಕಳೆದುಕೊಂಡು ಶೀಲವನ್ನುಳಿಸಲು "ಕೊಲೆ ಪಾತಕಿ" ಎನ್ನಿಸಿಕೊಂಡ ನಾನೇ?

ಅಲ್ಲಾ—

ನನ್ನಂತಹ ಅಬಲೆಯರ ಶೀಲವನ್ನು ಕೆಳಗಿಸಿದ ರಮಾನಂದನೇ?

—"ಗಿರಿಜಾಪ್ರಿಯ", ಹಜಮಾಡಿ.

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಅಗತ್ಯ. ಕಳ್ಳರ, ಸುಳುಪ್ಪಟಿಗಳ ಭೀತಿ ಇಲ್ಲದೆ ಒಟ್ಟಿ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. 3 ಸ್ಟೈಲುಗಳಿವೆ, ಪಿ.ಜೆಟ್, ಪಾಲ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು| ಮತ್ತು ಭದ್ರವಾದ ಬೀಗವುಳ್ಳ ಒಳಕೋಣೆಗಳನ್ನೆ.

ಅಲ್ಲದೆ

ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್, ಡೆಸ್ಕ್‌ಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು, ವಿ. ಕೆ. ರಾಜ್ ಇಂಡಸ್ಟ್ರೀಸ್, ಆಲಿಘರ್ ಇವರ

ಉತ್ತಮ ಬೀಗಗಳು

ಇವೆಲ್ಲ ಸ್ಟಾಕಿವೆ.

ಸ್ಟೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು. 7 ಲಿವರ್‌ಗಳ ಬೀಗ. ಅದರದೇ ಆಕ್ಷರದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.

ಶೋ ರೂಮನ್ನು ಸಂದರ್ಶಿಸಿ.

ಶಾಸ್ತ್ರೀ ಅಂಡ್ ಕಂಪೆನಿ

ಹಂಪನಕಟ್ಟೆ — — ಮಂಗಳೂರು

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ

ವ್ಯಕ್ತಿ ಪರಿಚಯ

ವಿನೋಬಾನುಯಾಯಿ ಜಯಪ್ರಕಾಶ

ಆವರೆ ಅಧ್ಯಾಪಕರು ಸಮತಾವಾದದ ಪಾಠ ಮಾಡಿದಾಗ, ಇವರೂ ಸಮತಾವಾದದ ಕನಸು ಕಂಡರು

ಮೂವತ್ನಾಲ್ಕು ವರ್ಷಗಳ ಹಿಂದೆ ಬಿಹಾರಿನ ಒಬ್ಬ ಯುವಕ ತನ್ನ ಮನೆಯನ್ನು ಬಿಟ್ಟು ಅನ್ವೇಷಕಾದ ಕ್ಯಾಲಿಫೋರ್ನಿಯಕ್ಕೆಂದು ಹೊರಟ. ಬಹಳ ಆಶಾವಾದಿ ಆತ. ಮುಖ ತೇಜಪೂರ್ಣವಾಗಿತ್ತು. ಅವನೇ ಇಂದಿನ ಸಮಾಜವಾದಿ ಧುರೀಣ ಶ್ರೀ ಜಯಪ್ರಕಾಶ್ ನಾರಾಯಣ್. ಅದರೆ ಎಲ್ಲಾ ವಿದ್ಯಾರ್ಥಿಗಳಂತೆ ನಾರಾಯಣರಿಗೆ ಸ್ವಜೀವನವನ್ನು ನಡೆಸಲಾಗಲಿಲ್ಲ. ಕಾರಣ—ಅವರಿಗೆ ಮನೆಯಿಂದ ಹಣವೂ ದೊರಕುವಂತಿರಲಿಲ್ಲ. ಬುದ್ಧಿವಂತರಾದ ಜಯಪ್ರಕಾಶರು ತಮ್ಮ ಬಿಡುವಿನ ಸಮಯದಲ್ಲಿ ಹಣಕ್ಕಾಗಿ ಉಪ ಕೆಲಸ ಮಾಡಲಾರಂಭಿಸಿದರು.

ಕ್ಯಾಲಿಫೋರ್ನಿಯಾವು ಕಿತ್ತಳೆ ಹಣ್ಣುಗಳಿಗಾಗಿ ಹೆಚ್ಚು ಪ್ರಸಿದ್ಧಿ ಪಡೆದಿದೆ. ಕಿತ್ತಳೆ ಹಣ್ಣುಗಳನ್ನು ಬುಟ್ಟಿಗಳಿಗೆ ತುಂಬಿಸಿ ಹೊತ್ತುಕೊಂಡು ಹತ್ತಿರದ ಲಾರಿಗಳಿಗೆ ಜಯಪ್ರಕಾಶರು ಸಾಗಿಸುತ್ತಿದ್ದರು. ಕೂಲಿಗಳಿಗಿಂತಲೂ ವೇಗವಾಗಿಯೂ, ಚುರುಕಾಗಿಯೂ ಇವರು ಕೆಲಸ ಮಾಡುತ್ತಿದ್ದರು. ಇದರ ಸಹಾಯದಿಂದ ಕಾಲೇಜಿನ ಕೋಣೆಯ ಬಾಡಿಗೆ, ಊಟ, ಪುಸ್ತಕಗಳ ಖರ್ಚು—ಇವುಗಳಿಗೆಲ್ಲಾ ಧಾರಾಳವಾಗಿ ಹಣ ದೊರಕುತ್ತಿತ್ತು. ಭಾರತದಲ್ಲಿ ಇಂದು ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಮಂದಿ ಈ ರೀತಿ ಕಲಿಯುತ್ತಿದ್ದಾರೆ?

ವಿಶ್ವವಿದ್ಯಾನಿಲಯದಲ್ಲಿ ಇವರು ವಿಜ್ಞಾನವನ್ನು ಪ್ರಧಾನವಾಗಿ ತೆಗೆದುಕೊಂಡಿದ್ದರೂ ಅರ್ಥಶಾಸ್ತ್ರದಲ್ಲಿ ಪದವಿ ಪಡೆದರು. ಜಯಪ್ರಕಾಶರು ಎಷ್ಟು ರುದ್ರ ಭೇಕರವಾದ ಬಡತನವನ್ನು ನೋಡಿದ್ದರೋ, ಅದರ ಹತ್ತು ಪಾಲಷ್ಟು ಶ್ರೀಮಂತಿಕೆಯನ್ನೂ ಅಮೇರಿಕಾ ದೇಶದಲ್ಲಿ ನೋಡಿದ್ದರು. ಜಗತ್ತಿನ ರಾಷ್ಟ್ರಗಳಲ್ಲಿ ಬಡತನಕ್ಕೆ ಕಾರಣವಾಗಿರುವ ಭೂತಗಳನ್ನು ಊಹಾಟನೆ ಮಾಡಲು ಸಾಧ್ಯವಿಲ್ಲವೇ? ಎಂದವರು ಸದಾ ಚಿಂತಿಸುತ್ತಿದ್ದರು.

ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯದಲ್ಲಿ ಇವರು ಕಲಿಯುತ್ತಿರುವಾಗ ಅಲ್ಲಿನ ಪ್ರೊಫೆಸರೊಬ್ಬರು 'ಕಾರ್ಲ್ ಮಾರ್ಕ್ಸ್'ನ ತತ್ವಗಳನ್ನು ಬೋಧಿಸಿ ಮಾತನಾಡುತ್ತಾ "ಲಾಭದಾಯಕ ಉದ್ಯಮಗಳು ಮತ್ತು ವಿಶೇಷ ಆಸ್ತಿಗಳು ಯಾವೊಬ್ಬ ವ್ಯಕ್ತಿಗೂ ಇರಕೂಡದು. ಇವೆಲ್ಲವನ್ನೂ ಸರಕಾರ ವಶಪಡಿಸಿಕೊಳ್ಳಬೇಕು. ಸರಕಾರವೂ ತಮ್ಮ ಲಾಭವನ್ನು ಹೆಚ್ಚಿಸುವ ದೃಷ್ಟಿಯನ್ನಿಡದೆ 'ಒಬ್ಬರಿಗೆ ಮತ್ತು ಎಲ್ಲರಿಗಾಗಿ' ಎಂಬ ಜನತೋದ್ಧಾರದ ದೃಷ್ಟಿಯನ್ನಿಡಬೇಕು ಬಂಡವಾಳಶಾಹಿ ಇಂದಿನವರೆಗೆ ರಾಷ್ಟ್ರದ ಬಡತನ ದೂರವಾಗುವುದು ಸಾಧ್ಯವಿಲ್ಲ. ಸಮತಾವಾದವೇ ರಾಷ್ಟ್ರದ ಉನ್ನತಿಗೆ ಒಂದೇ ಒಂದು ಪರಿಹಾರೋಪಾಯ" ಎಂದು ಹೇಳಿದರು. ಅದುವರೆಗೆ ಜಯಪ್ರಕಾಶರನ್ನು ಬಾಧಿಸುತ್ತಿದ್ದ ಸಮಸ್ಯೆಯು ಈ ಉಪದೇಶದಿಂದ ತೊಲಗುವಂತಾಯಿತು. ಹೀಗಾಗಿ ಜಯಪ್ರಕಾಶರಿಗೂ, ಪ್ರೊಫೆಸರರಿಗೂ ಸ್ನೇಹ ಬೆಳೆಯಿತು. ಇದರಿಂದಾಗಿ ಜಯಪ್ರಕಾಶರು ಅವರಿಂದ ಹಲವು ಪುಸ್ತಕಗಳನ್ನು ಪಡೆದರು. ಮಾರ್ಕ್ಸಿಸಂ ಅವರಿಗೆ ಸ್ಪಷ್ಟವಾಗಿ ಒಪ್ಪಿತು. ಇವರಿಗೆ ಉಪದೇಶವನ್ನಿತ್ತ ಪ್ರೊಫೆಸರರು ಸಮತಾವಾದಿಯಾಗಿದ್ದರು. ಮುಂದೆ ಜಯಪ್ರಕಾಶರೂ ಕೂಡಾ ಸಮತಾವಾದಿಯಾದರು. ಇವರ ಮುಂದಿನ ವಿದ್ಯಾಭ್ಯಾಸ ನ್ಯೂಯಾರ್ಕಿನಲ್ಲಿ ನಡೆಯಿತು. ಅಲ್ಲಿ ಇವರು ಕಾಯಿಲೆ ಬಿದ್ದು, ಅನೇಕ ಮಾಸಗಳ ಪರ್ಯಂತ ಆಸ್ಪತ್ರೆ ಸೇರಬೇಕಾಯಿತು.

ಅಂದಿನಿಂದ ನಾರಾಯಣರ ತಲೆಯಲ್ಲಿ ಸೋಶಿಯಲಿಸ್ಟ್ ಪಕ್ಷವನ್ನು ಸ್ಥಾಪಿಸಿ, ಬಡ ಜನತೆಯ ಉದ್ಧಾರಕ್ಕಾಗಿ ಹೋರಾಡಬೇಕು ಎಂದು ದೃಢ ಸಂಕಲ್ಪವಾದರು. ರಾಷ್ಟ್ರದ ಶಕ್ತಿಯನ್ನು ಒಂದುಗೂಡಿಸಿ, ಪ್ರತಿಯೊಂದು ಲಾಭದಾಯಕ ಉದ್ಯಮವನ್ನು ರಾಷ್ಟ್ರೀಕರಣ ಮಾಡಬೇಕೆಂದು ನಿಶ್ಚಯ ಮಾಡಿದರು. ಕುದಿ-ಬವಿಲ್ಲದೆ ಸಂಪೂರ್ಣ ನಗ್ನರಾಗಿ ಕೃಶರಾಗಿದ್ದ ಭಾರತದ ಜನತೆಯು ಭವ್ಯ ನೋಟವನ್ನು ಎಂಸಿನಲ್ಲಿ ನೋಡಿ, ಅವರಿಗೆ ಅಮೇರಿಕಾವಲ್ಲದ್ದು ಸಮಯವನ್ನು ಸ್ವೇಚ್ಛೆಯಾಗಿ ಹಾಳು ಮಾಡುವುದು ಸರಿಯಲ್ಲ ವೆಂದು ತೋಚಿತು. ಕೂಡಲೇ ಭಾರತಕ್ಕೆ ಮರಳಿ ಬಂದವರೇ ತನ್ನ ಜೀವನವನ್ನು ಸಾರ್ವಜನಿಕ ಕಾರ್ಯದಲ್ಲಿಯೇ ಮುಡಿಪಾಗಿರಿಸಲು ನಿಶ್ಚಯ ಮಾಡಿದರು. ಸ್ವಾತಂತ್ರ್ಯವನ್ನು ಪಡೆಯಲು ಭಾರತದ ವೀರರೊಂದಿಗೆ ಶಾಂತಿಸಮ್ಮತವನ್ನು ಹೂಡಿದ ಶ್ರೀ ಜವಾಹರಲಾಲ್ ನೆಹರೂರವರನ್ನು ಭೇಟಿಯಾದರು. ನೆಹರೂ ಇವರನ್ನು ಅಖಿಲ ಭಾರತ ಕಾಂಗ್ರೆಸಿನ ಲೇಬರ್ ರೀಸರ್ಚ್ ಡಿಪಾರ್ಟ್‌ಮೆಂಟಿನ ಅಧಿಕಾರದಲ್ಲಿ ನೇಮಿಸಿದರು.

ಜಯಪ್ರಕಾಶರು ಸತ್ಯಾಗ್ರಹ ಕಾಲದಲ್ಲಿ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯಾಗಿಯೂ ಕೆಲಸಮಾಡಿದರು. ಮುಂದೆ ಇವರಿಗೂ ನೆಹರುವಿಗೆ ಸೇರಬೇಕಾದ ಪ್ರಸಂಗ ಬಂತು. ಹೀಗಾಗಿ ಇಲ್ಲಿ ವಿಚಾರ ವಿನಿಮಯ ಮಾಡಲು ಜಯಪ್ರಕಾಶರಿಗೆ ಬೇಕಾದಷ್ಟು ಸಮಯ ಸಿಕ್ಕಿತು. ಇವರೆಲ್ಲಾ ಒಂದುಗೂಡಿ ಆಲೋಚನೆ ಮಾಡಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷವೆ ಜನಪರವೆಯನ್ನು ನಿರ್ಣಯಿಸಿ, ಭರದಿಂದ ಆ ದಾರಿಯಲ್ಲಿ ಕಾರ್ಯ ಮಾಡಲು ನಿಶ್ಚಯಿಸಿಕೊಂಡರು. ಸೋಶಿಯಲಿಸ್ಟ್ ಪಾರ್ಟಿಯ ಜನನದ ನಂತರ ಜಯಪ್ರಕಾಶ್ ನಾರಾಯಣರು ಬ್ರಿಟಿಷರ ಪಟ್ಟ ಭದ್ರ ಹಿತಗಳಿಗೆ ಗಾಂಧೀಜೀ, ನೆಹರೂರವರಿಗಿಂತಲೂ ಕಂಟಕಕಾರಿಯೆಂದು ಬ್ರಿಟಿಷ್ ಸಾಮ್ರಾಜ್ಯಶಾಹಿ ಬಗೆಯಿತು.

೧೯೪೨ರಲ್ಲಿ ಗಾಂಧೀಜೀ, ಪಟೇಲ್, ನೆಹ್ರೂ—ಮೊದಲಾದವರು ಜೈಲಿನಲ್ಲಿದ್ದಾಗ, ಜಯಪ್ರಕಾಶರು ರಾಷ್ಟ್ರವನ್ನು ರಾಷ್ಟ್ರೀಯರು ಕಾಪಾಡಿ ಸರದಾಸ್ಯ ವಿಮೋಚನೆಯೇ ಧ್ಯೇಯವಾಗುಳ್ಳ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. "ಭ್ರಾಂತವನ್ನು ಬಿಟ್ಟು ತೊಲಗಿರಿ" ಸತ್ಯಾಗ್ರಹದಲ್ಲಿ ಜಯಪ್ರಕಾಶರು ಹಾಗೂ ಅವರ ಬಳಗದವರು ನಾಡಿದ ಕೆಲಸಗಳು ರೋಮಾಂಚಕಾರಿ ವತ್ತು ಚಿರಸ್ಮರಣೀಯವಾದುವು. ಇವರು ಮತ್ತವರ ಬಳಗದವರು ಅಹಿಂಸಾಮಯ ಕ್ರಾಂತಿಯನ್ನು ಗುಪ್ತ ಉಜ್ಜೀವಕರಾಗಿಸಿಗಳಾಗಿ ಸಾಗಿಸಿದರು. ಅದಕ್ಕೆ ಸರಕಾರದವರು ಇವರನ್ನು ಇವರ ಬಳಗದೊಡನೆ ಬಂಧಿಸಿದರು. ಆದರೂ ಸೆರೆಮನೆ ಕಾವಲುಗಾರರ ಕಣ್ಣು ತಪ್ಪಿಸಿ, ಉಪಾಯದಿಂದ ನಾಲ್ವರು ಪ್ರಮುಖ ವ್ಯಕ್ತಿಗಳೊಂದಿಗೆ ಹಜಾರಿಬಾಗ್ ಜೈಲಿನ ಮಹಾಗೋಡೆಯನ್ನು ಜಿಗಿದು ಪರಾರಿಯಾದವರೇ—ಸ.ನಃ ದೇಶದ ಸ್ವಾತಂತ್ರ್ಯ ಕೋರಾಟವನ್ನು ಭರದಿಂದ ನಡೆಸಿದರು. ಇವರನ್ನು ಪತ್ತೆಹಚ್ಚುವ ಪ್ರಯತ್ನದಲ್ಲಿ ನೇಪಾಳರಾಜರೂ ಕೂಡ ನೆಗೆ ಹೇಗೂ ಇವರ ಬಂಧನವಾಯಿತು. ಈ ಬಂಧನದಲ್ಲಿ ಇವರಿಗೆ ವಿಧ—ವಿಧದ ರೀತಿಯ ಚಿತ್ರಹಿಂಸೆಗಳನ್ನು ಕೊಟ್ಟಿದ್ದಾರಂತೆ.

ಸಮಾಜವಾದದ ಧ್ಯೇಯಕ್ಕನುಗುಣವಾಗಿ ರಾಷ್ಟ್ರೀಯ ಸರಕಾರವು ಪ್ರತಿಯೊಬ್ಬ ಪ್ರಜೆಗೆ ಆಹಾರ, ಬಟ್ಟೆ-ಬರೆ, ಮನೆ, ವಿದ್ಯಾಭ್ಯಾಸ, ವೈದ್ಯಕೀಯ ರಕ್ಷಣೆಗಳನ್ನು ಕಡ್ಡಾಯವಾಗಿ ಕೊಡಬೇಕು. ಈ ಎಲ್ಲಾ ಬದಲಾವಣೆ ಅನುಕೂಲತೆಗಳ ಸಾಧ್ಯತೆಗಾಗಿ ಸ್ವತಂತ್ರವಾದ ಪಕ್ಷವನ್ನು ಕಟ್ಟುವುದು ಸೂಕ್ತವೆಂದರು ಇವರು. ಈ ಸಮಾಜದ ಧ್ಯೇಯವನ್ನು ಅನುಸರೋದಿಸಿ ಆಗ ಕಾಂಗ್ರೆಸಿಗರಾಗಿದ್ದ ಶ್ರೀ ಆಚಾರ್ಯ ಕೃಪಲಾನಿಯವರು ಜಯಪ್ರಕಾಶರೊಡನೆ 'ಪ್ರಜಾಸೋಶಿಯಲಿಸ್ಟ್ ಪಕ್ಷ" ಎಂಬ ಹೊಸತೊಂದು ಪಕ್ಷವನ್ನು ಇತರ ಪಕ್ಷಗಳ ಒಮ್ಮತದಿಂದ ಸ್ಥಾಪಿಸಿದರು.

ಹೊಸ ವಿಚಾರ ಮತ್ತು ಹೊಸ ತಿಳುವಳಿಕೆಗಾಗಿ ನಾರಾಯಣರು ಸದಾ ಹಾತೊರೆಯುತ್ತಾರೆ. ಇದರಲ್ಲಿ ಅವರ ದುರ್ಬಲತೆಯೂ, ಶಕ್ತಿಯೂ ಅಡಗಿದೆ. ಸಮಯಕ್ಕನುಸಾರವಾಗಿ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಯನ್ನು ಆವಲಂಬಿಸಲು ಇದೇ ಕಾರಣ. ಅವರು ಎಂದೂ ತಮ್ಮ ಸ್ಥಾನ—ಮರ್ಯಾದೆಯನ್ನು ಕಳೆದುಕೊಳ್ಳುವುದಿಲ್ಲ. ತನ್ನ ವಾದದಲ್ಲಿ ತಪ್ಪುಗಳಿದ್ದರೆ ಅಪವಾ ತನ್ನ ವಾದದಿಂದ ತಾನು ಸೋಲಲ್ಪಟ್ಟರೆ ಅವರು ನಾಚಿಕೆಪಟ್ಟುಕೊಳ್ಳುವುದಿಲ್ಲ. ಇಂದು ಜಯಪ್ರಕಾಶರು ಹುಚ್ಚು ವಿಷಯಗಳ ಕಡೆ ಗಮನ ಕೊಡದೆ ಹೊಸ ಧ್ಯೇಯದ ಸಾಧನೆಗಾಗಿ ಹೋರಾಡುತ್ತಿದ್ದಾರೆ. ಕ್ಯಾಲಿಫೋರ್ನಿಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ದೊಡ್ಡ ವಿಚಾರಗಳು—ತತ್ವಗಳು ಅವರನ್ನು ಉದಾತ್ತ ವಿಚಾರದೆಡೆಗೆ ಒಯ್ದಿತ್ತು. ಇನ್ನೊಬ್ಬಕ್ಕಿಂತ ಹೆಚ್ಚಾಗಿ ಕಾರ್ಲ ಮಾರ್ಕ್ಸ್‌ರವ ತತ್ವ ವಿಚಾರಗಳು ಇವರು ಭಾರತಕ್ಕೆ ಬಂದ ಮೇಲೆ ಗಾಂಧಿ—ನೆಹ್ರೂರವರ ಧ್ಯೇಯವನ್ನರಿತು ಸ್ವಾತಂತ್ರ್ಯದ ಶಂತಿ ಸನ್ಮಾರ್ಗಕ್ಕೆ ಧುಮುಕಿದರು. ಆಗ ಗಾಂಧೀಜೀ—ನೆಹ್ರೂ ಇವರಿಗೆ ಗುರುವೂ, ಮಾರ್ಗದರ್ಶಕರೂ ಆಗಿದ್ದರು.

ಈಗ ಇವರು ಆಚಾರ್ಯ ಶ್ರೀ ವಿನೋಬಾ ಭಾವೆಯವರ ಭೂದಾನ ಯಜ್ಞದಲ್ಲಿ ಅವರೊಡನೆ ದುಡಿಯುತ್ತಿದ್ದಾರೆ. 'ಸಮಾಜವಾದಿ ತತ್ವಕ್ಕೆ ಇಂದು ಎಲ್ಲಿಯೇ ಇಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಆದರೆ ನನ್ನ ಎಳೆತನದ ಕನಸುಗಳು ನನ್ನ ದೇಶದಲ್ಲಿ ಅನುಸರಿಸಲ್ಪಡದಿದ್ದರೂ ಚೀನಾ, ರಷ್ಯಾ ದೇಶದಲ್ಲಿ ಸಮಾಜವಾದವು ರಾಷ್ಟ್ರೀಯ ತತ್ವವಾಗಿದೆ ಎಂದು ಜಯಪ್ರಕಾಶರು ಹೇಳುತ್ತಾರೆ. ಬಹಳ ಸಮಯದ ಕಷ್ಟ-ಕಾರ್ಪಣ್ಯಗಳಿಂದೊಡಗೂಡಿದ ಅನುಭವದಿಂದ ಜಯಪ್ರಕಾಶರು ಕಲಿತ ಪಾಠವೆಂದರೆ ಒಕ್ಕುತ್ಯ'ವು ನಮ್ಮ ವ್ಯಕ್ತಿಯಲ್ಲಿ ಎನ್ನೆನ್ನೂ ಸಾಧಿಸಲಾರದು. ಒಕ್ಕುತ್ಯ ಮತ್ತು ಬಲಾತ್ಕಾರವನ್ನು ಪ್ರಯೋಗಿಸಿ ಒಳ್ಳೆಯದನ್ನು ಪಡೆಯುತ್ತೇನೆಂದರೆ ಅದು ಕೆಟ್ಟದ್ದನ್ನಲ್ಲದೆ ಒಳ್ಳೆಯ

(೧೦ನೇ ಪುಟ ನೋಡಿರಿ)

ಕೇಶ ಸೌಂದರ್ಯವೇ—ಯುವತಿ, ಯುವಕರ ಶೃಂಗಾರ.

ಅಂಧ ಕೇಶವೃದ್ಧಿ (ಕೂದಲು ಬೆಳವಣಿಗೆ)ಗಾಗಿ ಅನೇಕ ತಲೆ ಎಣ್ಣೆಗಳನ್ನು (Hair Oils) ಉಪಯೋಗಿಸಿ ನಿರುತ್ಸಾಹರಾಗಿರುವುದು ಸಹಜ. ಆದರೆ:—

ಹಿಮಗಿರಿ ತೈಲ ಉಪಯೋಗಿಸುವುದರಿಂದ

ತಲೆನೋವು, ಕಣ್ಣುರಿ, ಕಣ್ಣಿನಲ್ಲಿ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೂದಲು ಉದುರುವಿಕೆ, ಕಣ್ಣು ಮಂಜು, ನಿದ್ರಾಭಂಗ ಈ ವ್ಯಾಧಿಗಳನ್ನು ಪರಿಹರಿಸಿ ಕೇಶವೃದ್ಧಿ ಮಾಡುವುದು.

ಸೂಚನೆ:— ಹಿಮಗಿರಿ ತೈಲವೆಂದು "ಬೇರೆ ಗಿರಿಗಳ" ಹೆಸರುಳ್ಳ ನಕಲಿ ಮಾಲನ್ನು ಕೊಂಡು ಮೋಸಹೋಗಬೇಡಿರಿ.

Wanted Agents & Stockists

Manufacturers: RATAN MISRI DEPOT
Avenue Road Cross, BANGALORE-2

ಶಿಶು ಹಿತ

ಇಂದಿನ ಮಗುವೇ ಮುಂದಿನ ಒಡೆಯ

ಮಗುವಿನ ಆರೈಕೆಗಾಗಿ ಪಾಲನೆ ಪೋಷಣೆಗಾಗಿ ಸರಕಾರದ ವಿವಿಧ ಯೋಜನೆಗಳು

"ಮಾನವ ಕಲ್ಯಾಣ ನಮ್ಮ ಗುರಿ– ಯಾದರೆ ವಯಸ್ಕರ ಯೋಗಕ್ಷೇಮ ನೋಡುವುದಕ್ಕಿಂತ ಮಕ್ಕಳ ಯೋಗ ಕ್ಷೇಮ ನೋಡುವುದು ನಮ್ಮ ಮುಖ್ಯ ಗುರಿಯಾಗಬೇಕು." ಎಂದು ಪ್ರಧಾನಿ ಶ್ರೀ. ಜವಾಹರಲಾಲ್ ನೆಹರೂರವರು ಹೇಳಿ ಮಕ್ಕಳ ಯೋಗಕ್ಷೇಮಕ್ಕೆ ಸಂಬಂಧಿಸಿದ ನಮ್ಮ ಯೋಜನೆಗಳಿಗೆ ಇರುವ ಸ್ಫೂರ್ತಿಯನ್ನು ಸೂಚಿಸಿರುತ್ತಾರೆ.

ಪ್ರಧಾನಿಗಳ ಅಭಿಪ್ರಾಯದ ಅರ್ಥವನ್ನು ಗಮನದಲ್ಲಿಟ್ಟುಕೊಂಡೇ ಕೇಂದ್ರ ಸಮಾಜ ಕಲ್ಯಾಣ ಬೋರ್ಡು ತನ್ನ ಹಲವು ಯೋಜನೆಗಳನ್ನು ಸಿದ್ಧಗೊಳಿಸಿದೆ.

ಸಮಾಜ ಕಲ್ಯಾಣ ಮಂಡಲಿ ಮಕ್ಕಳ ಹಿತರಕ್ಷಣೆಗೆ ಸಂಬಂಧಿಸಿದಂತೆ ಮೂರು ಮುಖ್ಯ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಮೊದಲನೆಯ ದಾಗಿ, ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು ೬೬೦ ಕೇಂದ್ರಗಳನ್ನು ಆರಂಭಿಸಿ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ನಿರ್ದಿಷ್ಟ ಕಾರ್ಯಕ್ರಮ ಸೂಚಿಸಿದೆ.

ಎರಡನೆಯದಾಗಿ, ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ಸ್ಥಾಪಿತವಾಗಿರುವ ಖಾಸಗಿ ಸಂಸ್ಥೆಗಳಿಗೆ ಧನ ಸಹಾಯದ ರೂಪದಲ್ಲಿ ಹಣ ನೀಡಿ ಪ್ರೋತ್ಸಾಹಿಸುತ್ತದೆ.

ಮೂರನೆಯದಾಗಿ, ಖಾಸಗಿ ಸ್ವಯಂ ಸೇವಕ ಸಂಘಗಳು ಮಕ್ಕಳ ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಮಾರ್ಗದರ್ಶನ ನೀಡುವುದಲ್ಲದೆ ಅಂತಹ ಕಾರ್ಯಕ್ರಮಗಳು ಯಶಸ್ವಿಯಾಗಿ ಕಾರ್ಯಗತವಾಗಲು ಬೇಕಾದ ಸಹಾಯ ನೀಡುತ್ತದೆ.

ಈ ಮಂಡಲಿ ಕಳೆದಾರಿರುವ ಮಕ್ಕಳ ಯೋಗಕ್ಷೇಮದ ಯೋಜನೆಗಳ ವ್ಯಾಪ್ತಿ ೧೫,೦೦೦ಕ್ಕೂ ಹೆಚ್ಚು ಗ್ರಾಮಗಳು ಮತ್ತು ಸುಮಾರು ಒಂದು ಕೋಟಿ ಜನರ ಮೇಲಿದೆ

ಈ ಯೋಜನೆಗಳ ಪರಿಣಾಮವಾಗಿ ಗ್ರಾಮಾಂತರ ಪ್ರದೇಶದ ಮಕ್ಕಳು ಮಂಡಲಿಯು ಹಲವು ಯೋಗಕ್ಷೇಮ ಯೋಜನೆಗಳಿಂದ ಪ್ರಯೋಜನ ಪಡೆಯುವಂತಾಗಿದೆ. ಹಿಂದೆ ಇಂತಹ ಯಾವ ಒಂದು ಯೋಜನೆಯೂ ಅವುಗಳ ಪಾಲಿಗೆರಲಿಲ್ಲ.

ಬಾಲವಾಡಿಗಳ ಸ್ಥಾಪನೆಯಾಗಿ ಅಲ್ಲಿ ಮಕ್ಕಳಿಗೆ ವಿಶಿಷ್ಟವಾದ ಸರಣೇತಿಯನ್ನು ಬಾಲ್ಯದಲ್ಲೇ ಆರಂಭಿಸಲಾಗುವುದು. ಮೂಲ ಶಿಕ್ಷಣಕ್ಕೆ ತಳ್ಳಿ ಸೀಕೆ ಹಾಕಲಾಗುವುದು. ಈ ಶಿಬಿರಗಳಲ್ಲಿ ನೇವಿ ತರಬೇತಿ ಗ್ರಾಮ ಸೇವಿಕೆಯರು ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವರು. ಹಾಲು ಕುಡಿಸುವುದು, ಲೈಂಗಿಕ ಯುವುದ , ಶುಚಿತ್ವ ಕಲಿಸುವುದು, ಹೀಗೆ ಹಲವು ರೀತಿಯಲ್ಲಿ ಮಕ್ಕಳ ಶುಶ್ರೂಷೆ ನಡೆಸುವುದು ಈ ಗ್ರಾಮ ಸೇವಿಕೆಯರ ಕೆಲಸ; ಇಂತಹ ಸೌಲಭ್ಯಗಳು ಮತ್ತು ಒಳ್ಳೆ ಬೆಳೆವಣಿಗೆಗೆ ಬೇಕಾದ ಅವಕಾಶ ಹಿಂದೆ ಮಕ್ಕಳ ಪಾಲಿಗೆ ಇರಲಿಲ್ಲ.

ಮಕ್ಕಳ ಯೋಗಕ್ಷೇಮ ಮತ್ತು ಮಹಿಳೆಯರ ಯೋಗಕ್ಷೇಮ ಇವೆರಡನ್ನೂ ಸೇರಿಸಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಇಂದಿನ ಹೊಸ ಕಾರ್ಯ ವಿಧಾನವಾಗಿದೆ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಕಾರ್ಯವನ್ನು ಮಹಿಳೆಯರ ಯೋಗಕ್ಷೇಮಕ್ಕೆ ಸಂಬಂಧಿಸಿದ ಕಾರ್ಯದ ಒಂದು ಭಾಗವಾಗಿ ಪರಿಗಣಿಸಿ ಯೋಜನೆ ತಯಾರಿಸುವುದು ಇದರ ಉದ್ದೇಶ. ಅಷ್ಟೇ ಅಲ್ಲ, ಮಕ್ಕಳ ಯೋಗಕ್ಷೇಮದ ಕಾರ್ಯ ಪ್ರತಿಯೊಂದು ಕಲ್ಯಾಣಯೋಜನೆಯ ಒಂದು ಅಂಗವಾಗಿರಬೇಕು; ಅದು ಕುಟುಂಬಯೋಜನೆಯೇ ಆಗಲಿ ಸಾಮುದಾಯಿಕ ಯೋಜನೆಯೇ ಆಗಲಿ ಇದು ಅತ್ಯಾವಶ್ಯಕ.

ಸಾಮುದಾಯಿಕ ಯೋಜನೆಗಳು ಜಾರಿಗೆ ಬಂದಿರುವ ಕ್ಷೇತ್ರಗಳಲ್ಲಿ ಈ ಅಂಶವನ್ನು ಮುಖ್ಯವಾಗಿ ಗಮನಕ್ಕೆ ತಂದು ಕೊಂಡು ಪ್ರತಿಯೊಂದು ಕಾರ್ಯಕ್ರಮವನ್ನೂ ನಿರೂಪಿಸಲಾಗುವುದು.

ಗ್ರಾಮಾಂತರ ಪ್ರದೇಶಗಳಲ್ಲಿ ಹೀಗೆ ಮಕ್ಕಳ ಹಿತರಕ್ಷಣೆಗಾಗಿ ಕೈಗೊಳ್ಳುವ ಕಾರ್ಯಕ್ರಮಗಳ ಜೊತೆಗೆ, ನಗರ ಪ್ರದೇಶಗಳಲ್ಲಿ ಈ ವಿಷಯದಲ್ಲಿ ಅಷ್ಟಕ್ಕೆ ವಹಿಸಿ ಕೆಲಸ ಮಾಡುತ್ತಿರುವ ಖಾಸಗಿ ಸಂಘ ಸಂಸ್ಥೆಗಳಿಗೆ ಧನಸಹಾಯದ ರೂಪದಲ್ಲಿ ಹಣ ನೀಡಿ ಕೇಂದ್ರ ಸಮಾಜ ಕಲ್ಯಾಣ ಮಂಡಲಿ ಮಕ್ಕಳ ಹಿತರಕ್ಷಣೆ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತದೆ.

ಈ ಸಹಾಯ ಧನದಿಂದ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳ ಫಲವಾಗಿ ಈ ವರೆಗೆ ಅನಾಥ ಮಕ್ಕಳಿಗೆ ಎಷ್ಟೋ ಸೌಲಭ್ಯಗಳು ದೊರೆಯುತ್ತಿವೆ ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು ತಮ್ಮ ಮಕ್ಕಳನ್ನು ಈ ಹಣ ಸಹಾಯದಿಂದ ನಡೆಯುತ್ತಿರುವ ಶಿಶುಗೃಹಗಳಲ್ಲಿ, ಬಿಟ್ಟು ತಮ್ಮ ಕೆಲಸಕ್ಕೆ ನೆಮ್ಮದಿಯಾಗಿ ಹೋಗಬಹುದಾಗಿದೆ. ಅನಾಥ ಶಿಶುಗಳ ವಿದ್ಯಾಭ್ಯಾಸ ವ್ಯವಸ್ಥೆಗೂ ಈ ಸಹಾಯ ಧನ ವಿನಿಯೋಗವಾಗುತ್ತಿದೆ. ಮಕ್ಕಳ ಉದ್ಯಾನವನಗಳ ನಿರ್ಮಾಣ, ಆಟವಾಟಗಳಿಗೆ ಮೈದಾನಗಳ ವಿಸ್ತಾರ, ಮನೆಯೊಳಗೆ ಆಟವಾಟಗಳಿಗೆ ವಿಶೇಷ ಸೌಲಭ್ಯಗಳ ವ್ಯವಸ್ಥೆ, ಇನ್ನೇ ಮೊದಲಾದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಖಾಸಗಿ ಸಂಸ್ಥೆಗಳಿಗೆ ಸಹಾಯಧನವನ್ನೂ ಒದಗಿಸಲಾಗುತ್ತಿದೆ.

ಇದರ ಜೊತೆಗೆ ಅಂಗ ವಿಕಲರಾಗಿರುವ ಮಕ್ಕಳಿಗಾಗೆಂದೇ ಪ್ರತ್ಯೇಕವಾಗಿ ಈ ಸಂಬಂಧದ ಸೇವಾಕಾರ್ಯದಲ್ಲಿ ತೊಡಗಿರುವ ಸಂಘ ಸಂಸ್ಥೆಗಳಿಗೆ ಸಹಾಯವನ್ನು ಒದಗಿಸಲಾಗುತ್ತಿದೆ. ವಿದ್ಯಾಭ್ಯಾಸ ಸೌಕರ್ಯ ಮತ್ತು ಔದ್ಯೋಗಿಕ ಶಿಕ್ಷಣ ಒದಗಿಸುವ ಕಾರ್ಯಗಳಿಗೆ ಈ ಹಣ ವಿನಿಯೋಗವಾಗುತ್ತಿದೆ.

ಪರ್ವತ ಪ್ರದೇಶಗಳಲ್ಲಿ ಮಕ್ಕಳಿಗೆ ವಿಹಾರಕ್ಕಾಗಿ ಪ್ರತ್ಯೇಕ ಮಕ್ಕಳ ಗೃಹಗಳನ್ನು ಕಟ್ಟುವ ವಿಶೇಷ ಕಾರ್ಯಕ್ರಮ ಮೊದಲನೆಯದನ್ನು ಮಕ್ಕಳ ಯೋಗಕ್ಷೇಮಕ್ಕೆರುವ ಭಾರತೀಯ ಪರಿಷತ್ತು ಅಂಗೀಕರಿಸಿದೆ. ಈ ಕಾರ್ಯಕ್ರಮದ ಪ್ರಕಾರ ದ್ವಿತೀಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಇಂತಹ ೧೦೦ ಮಕ್ಕಳ ಗೃಹಗಳನ್ನು ಸಿದ್ಧಗೊಳಿಸುವ ಉದ್ದೇಶವಿದೆ. ಬಡ ಕುಟುಂಬಗಳಿಂದ ಬರುವ ಮಕ್ಕಳು ಈ ವಿಹಾರ ಗೃಹಗಳಲ್ಲಿ ವರ್ಷದಲ್ಲಿ ಹಲವು ದಿನ ಇದ್ದು ಒಳ್ಳೆ ಆಹಾರ, ಆಟಪಾಟಗಳು. ಮತ್ತು ಒಳ್ಳೆ ವಾತಾವರಣದ ಪ್ರಯೋಜನ ಪಡೆಯುವ ಅವಕಾಶವನ್ನು ಹೊಂದಿದ್ದಾರೆ. ಈ ಪ್ರಯೋಜನ ಪಡೆಯುವ ಮಕ್ಕಳ ವಯೋಮಿತಿ ಎಂಟರಿಂದ ಹದಿನಾರು.

ಮಗು ಭವಿಷ್ಯದ ಒಡೆಯನಾದುದರಿಂದ "ಅನನೊಬ್ಬ ಪ್ರಮುಖ ವ್ಯಕ್ತಿ" ನಮ್ಮ ದೇಶ ಸಿದ್ಧಗೊಳಿಸುವಂತೆ ಪ್ರತಿಯೊಂದು ಸಮಾಜ ಕಲ್ಯಾಣ ಯೋಜನೆಯಲ್ಲಿಯೂ ಅವನ ಹಿತರಕ್ಷಣೆಗೆ ಗಮನ ಕೊಡಲು ಸರಕಾರಣಗಳವೆ ಯೆಂತಲೇ, ಕೇಂದ್ರ ಸಮಾಜಕಲ್ಯಾಣ ಮಂಡಲಿ ಅಂಗೀಕರಿಸಿರುವಂತಹ ಯೋಜನೆಗಳಲ್ಲಿ ಮಕ್ಕಳ ಯೋಗ ಕ್ಷೇಮಕ್ಕೆ ವಿಶೇಷ ಪ್ರಾಮುಖ್ಯ ಕೊಡಲಾಗಿದೆ.

ಗಣನೆಯ ಯುಕ್ತರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಅಧ್ಯಕ್ಷ ಲೆಬನಾನಿನ ಡಾ. ಚಾರ್ಲ್ಸ್ ಮಾಲಿಕ್ (ಬಲ) ರೊಡನೆ ಕಾರ್ಯದರ್ಶಿ ಡಾಗ್ ಹೆಮ್ಮರ್‌ಶೀಲ್ಡರು (ಎಡ) ಮಾತಾಡುತಿದ್ದಾರೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 306/1958

ಮಹಾಬಲ ಶೆಟ್ಟಿ—ವಾದಿ

ಮತ್ತು

ಮಂಜುನಾಥ ಬಾಳಿಗ ಕೂಡಾ—ಪ್ರತಿವಾದಿರು.

ಯಿನರೊಳಗೆ

೨ನೇ ಪ್ರತಿವಾದಿ:— G. Sanny, Lorry Driver, 141. ಸಿಂಟೋ ನಹಲ. ಮೈದಾನ್ ಕ್ರೋಸ್ ರಸ್ತೆ ಮಂಗಳೂರು—ಎಂಬಲ್ಲಿರುವವ:—

ವಾದಿಯು ಮೆಲ್ಕಂಡ ದಾವೆಯಲ್ಲಿ ನಷ್ಟ ವಗೈರೆ ಬಾಬ್ತು ರೂಪ್ಯಾ 2000/ನ್ನು ಕೆಳಿ ದಾಕ್ಲೆ ನೂಡಿದ ಸದ್ರಿ ದಾವೆಯು ನಿಮ್ಮ ಹಾಜರಾತಿ ಬಗ್ಗೆ ಯದೇ ತಾರೀಕು 13-12-58 ಕ್ಕೆ ಬಿಟ್ಟಿದೆ. ಆದ್ರಿಂದ ನೀವು ಆ ದಿನ್ಸ ಬೆಳಿಗ್ಗೆ ಘಂಟೆ10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಉದಪಕಸಲಿಕ್ಕೆ ತಪ್ಪಿದ್ರೆ ನಿಮ್ಮನ್ನು ಶಿವ್ಯಾ ನಿ ಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

Sd/ P. Vittaldas Hegde.

ವಾದಿಯತೆ ಎಡ್ವೋಕೇಟ್

ಕಾರ್ಕಳ ತಾ. 21—11—58.

ನಿಮಗಾಗಿ—

ನಿಮ್ಮ ಜನರ ನಿರ್ದೇಶನದಲ್ಲಿ—

ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: ಮಾರ್ಚ್ 12, 1906)

ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ತಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಸ್ವಾವಲಂಬನೆ

ವ್ಯವಸಾಯ ಕ್ಷೇತ್ರವನ್ನು ಸ್ವತಂತ್ರವಾಗಿರಿಸಿರಿ

ಆಹಾರ ಸಮಸ್ಯೆ ಕೊನೆಗೊಂಡು ನಾವು ಆಹಾರ ಸ್ವಾವಲಂಬಿಯಾಗ ಬೇಕಾದರೆ, ಇಲ್ಲಿ ಶಾಸನ ಸವಾರಿ ನೂಡಬಾರದು

ನಮ್ಮ ಆಹಾರ ಪ್ರಶ್ನೆಯಲ್ಲಿ ಏನೋ ಒಂದು ತಪ್ಪಾಗಿದ್ದುದರಿಂದ, ಅದು ಉಲ್ಬಣಾವಸ್ಥೆಗೇರಿದ ಸಮಸ್ಯೆಯೆನಿಸಿಕೊಂಡಿದೆ. ಈ ವಿಷಯದಲ್ಲಿ ಕೊಡುವ ಒಂದು ಸೂಚನೆಯು ಕ್ಷುಲ್ಲಕವೆನಿಸಬಹುದು; ಆದರೆ, ಅದು ಮೂಲಭೂತ ಪರಿಹಾರವೆಂದು ತಿಳಿಯದಿರದು. ಹಿಂದಿನಂತೆ ಹುನಃ ಗುತ್ತಿಗೆ ಕೊಡುವ ಪದ್ಧತಿಯನ್ನು ಸ್ಥಾಪಿಸುವುದು, ಶಾಸನಕ್ಕೆ ನ್ಯಾಯವಾದ ಸ್ಥಾನ ಮತ್ತು ಆಸ್ಥಾನಗಳನ್ನು ನಿರ್ಧರಿಸುವುದು ಇಂದಿನ ಮುಖ್ಯ ಕರ್ತವ್ಯವಾಗಿದೆ. ಇತ್ತೀಚೆಗೆ ಸಾರ್ವಜನಿಕ ಅಭಿವೃದ್ಧಿಯ ಕೇಳಿಕೆಗಳು ಶಾಸನಿಕ ಕ್ಷೇತ್ರವು ಗುತ್ತಿಗೆಯ ಸ್ಥಳವನ್ನು ಆಕ್ರಮಿಸುವಂತೆ ಮಾಡಿವೆ.

ವ್ಯವಸಾಯವು ನೆಲೆಯಿಂದ ಗುತ್ತಿಗೆಯತ್ತ ಧಾವಿಸಿತು. ಮಾನವ ಜೀವನವು ಪಾರಸ್ಪರಿಕ ಸಹಕಾರವನ್ನೇ ಹೊಂದಿಕೊಂಡಿದೆ. ಈ ಸಹಕಾರವು ಹಿಂದಿನ ಕಾಲದಲ್ಲಿ ಯಾವ ಸ್ಥಿತಿಯಲ್ಲಿಯೂ ಜನನ, ಗೌರವದಲ್ಲಿಯೂ ಸಾಕಷ್ಟಿತ್ತು. ಆದರೆ, ಮುಂದಿದು ಗುತ್ತಿಗೆಯ ತಳಹದಿಯ ಮೇಲೆ ತಳವೂರಿತು. ಈಗ, ರಾಜ್ಯ ಅಥವಾ ಸಮಾಜದ ಪ್ರಧಾನಾಂಗವು ಗುತ್ತಿಗೆಯನ್ನು ಹುನಃ ಸ್ಥಾಪಿಸಿ ಪ್ರತ್ಯಕ್ಷವಾಗಿ ಎಲ್ಲವನ್ನೂ ಸರಿಪಡಿಸಬಯಸುತ್ತದೆ.

ವ್ಯಾವಹಾರಿಕೋತ್ಪನ್ನದಲ್ಲಿ ಮಾಲಿಕ ಮತ್ತು ಒಕ್ಕಲುಗಳ ಸಂಬಂಧದ ಚಿತ್ರವನ್ನಿದು ತೋರಿಸುತ್ತದೆ. ಭಾರತದಲ್ಲಿ ರಾಜ್ಯವು ಗುತ್ತಿಗೆಯ ಸ್ವಾತಂತ್ರ್ಯದ ಸಾಧ್ಯತೆಗಳನ್ನು ಬಳಸುವುದಕ್ಕೆ ಮೊದಲೇ ಆಹಾರಧಾನ್ಯೋತ್ಪಾದನೆಯಲ್ಲಿ ತೀವ್ರತರವಾದ ಸಮಸ್ಯೆಯನ್ನು ಸರಿಪಡಿಸಿ ಬಯಸುತ್ತದೆ. ಆದರ್ಶ ರಾಜ್ಯವು ಹೆಚ್ಚಿನ ಉತ್ತಮ ಫಲಿತಾಂಶದೊಡನೆ ಏನನ್ನೂ ಮಾಡಬಹುದು. ಆದರೆ, ಎಲ್ಲ ಸರಕಾರಗಳ ದುರ್ದೈವದ ಮಿತಿಯೇನೆಂದರೆ, ರಾಜ್ಯವು ಆದರ ಆಡಳಿತಯನ್ನು, ಅದು ನಿರಂಕುಶ, ಕುಲೀನ ಪ್ರಭುತ್ವ, ನೌಕರ ಶಾಹಿ ಅಥವಾ ಲೋಕತಂತ್ರವಿರಲಿ ನಿರ್ವಹಿಸುವವರಷ್ಟೇ ಉತ್ತಮವೂ ವಿವೇಕಪೂರ್ಣವೂ ಆಗಬಲ್ಲುದು. ಆದುದರಿಂದ, ರಾಜ್ಯಶಾಸನ ಸೂತ್ರಗಳಲ್ಲಿ ಗುತ್ತಿಗೆ ಕೊಡುವ ಪದ್ಧತಿಯುಂಟಾದರೆ, ಆಗ, ಆಯೋಗ್ಯಾಡಳಿತೆ, ಉತ್ಪತ್ತಿ ತೆಗೆಯುವುದರಲ್ಲಿ ಸೋಮಾರಿತನ ಮತ್ತು ಬಗಾಲವೆನಿಸುವಷ್ಟು ಕೊರತೆಗಳು ತಲೆದೋರಲಾರವು.

ನೌಕರನು ಮಾಲಿಕನನ್ನು ಹಿಡಿದು ಕೊಳ್ಳಬೇಕೆ ಅಥವಾ ಮಾಲಿಕನು ನೌಕರನನ್ನು ಹಿಡಿಯಬೇಕೆ ಎಂಬ ಮಾತಿನಲ್ಲಿದು ಕ್ಷುಲ್ಲ ಪರಿವರ್ತನೆ ಮಾಡುತ್ತದೆ. ಮಾಲಿಕ ಮತ್ತು ನೌಕರರಿಬ್ಬರಿಗೂ ಕಾನೂನು ಏಕರೀತಿಯ ಅಧಿಕಾರವನ್ನಿತ್ತಿರುವಾಗ, ಇಬ್ಬರಲ್ಲಿ ಯಾರೊಬ್ಬರಬಾದರೂ ಹಿಡಿತದಲ್ಲಿದ್ದರೆ. ಅದು ಗುಲಾಮಗಿರಿಯಾಗುವುದು. ಒತ್ತಾಯದಿಂದ ಶಾರೀರಿಕ ಸೇವೆ ಸಲ್ಲಿಸಬೇಕಾದರೂ ಒಬ್ಬನು ಸ್ವಯಂ ಪ್ರಯಾಸಪಟ್ಟು ಕಟ್ಟಿದಿದ್ದರೂ, ಶಾಸನಿಕ ವಿಧಾನದಿಂದ ಆದರ ಲಾಭ ಪಡೆಯುವುದಾದರೂ ಎರಡೂ ಒಂದು ವಿಧದ ದಾಸ್ಯನೇ ಎಂದು ಹೇಳಬಹುದು. ಹಿಂದಿನ ಸ್ಥಿತಿಯನ್ನು ತಿದ್ದಿ, ದನಿಯನ್ನು ಒಕ್ಕಲಿನ ಸೇವಕನನ್ನಾಗಿ ಮಾಡಿದಂತಾಗುತ್ತದೆ.

ಶಾಸನಿಕವತ್ತಾಯತನವಿಂದ ವ್ಯವಸಾಯದಲ್ಲಿ ಮಾನವನ ಪರಿಶ್ರಮ ದೂರವಾಗಬೇಕು. ಹಿಂದಿನ ಕಾಲದಲ್ಲಿದ್ದ ಆನುವಂಶಿಕತೆಯೇ ನಿಜವಾಗಿಯೂ ಉತ್ತಮ. ಶ್ರೀಮಂತರಿರಲಿ, ಅಥವಾ ಸಾಮಾನ್ಯ ಜನರಿದ್ದರಲಿ, ಎಲ್ಲವೂ ಸ್ವತಂತ್ರವಾಗಿ ನಡೆಯುವುದಕ್ಕೆ ಅವಕಾಶವಿರಬೇಕು. ಇದರಿಂದಲೇ ಆತ್ಮತೃಪ್ತಿ, ಶಾಸನಿಕ ವಿಧಾನದಿಂದ ಹೇರಿದ ಒತ್ತಾಯವು ಶಾಸನಿಕ ಪಕ್ಷಗಳ ಬದಲಾವಣೆ, ಅಧಿಕಾರಿಕ ವ್ಯಕ್ತಿಗಳಲ್ಲಿ ಪರಿವರ್ತನೆಗಳಾದರೆ ಮಾರ್ಪಾಟಾಗುವುದೂ ಸಾಧ್ಯ.

ಧರ್ಮ ಪದ್ಧತಿಯು ಒಂದು ಕಾಲದಲ್ಲಿ ರಾಜ್ಯವನ್ನು ಪಾಲಿಸಿತ್ತು. ಆಗ, ಅದು ವಿಧೇಯತೆಯಿಂದ ನಡೆಯುತ್ತಿತ್ತಲ್ಲದೆ ಆದರ್ಶವೂ ಆಗಿತ್ತು. ಮಾನವನ ಚಟುವಟಿಕೆಗಳನ್ನದು ಮುನ್ನಡೆಸುತಿತ್ತು. ಆದರಿಂದ ಎಲ್ಲವನ್ನೂ ಶಾಸನ ಪ್ರಣಾಳಿಯು ತನ್ನ ವಶ ಪಡಿಸಿಕೊಳ್ಳಲು ಹವಣಿಸುತ್ತಿದೆ. ಆದರೆ, ಆಡಳಿತ ಬಿಸುತ್ತಮುತ್ತ ಕೊಳೆಚೆ ತುಂಬಿ ಬಿಟ್ಟಿದೆ ಎಂದು ಗೋಚರವಾಗದಿರದು.

ಶಾಸನ ಪ್ರಣಾಳಿಯು ಈ ವ್ಯವಸಾಯೋತ್ಪನ್ನಗಳ ಕ್ಷೇತ್ರದಲ್ಲಿ ತನ್ನ ಗುರಿ ಸಾಧಿಸುವಲ್ಲಿ ಅಸಮರ್ಥವಾಗಿದೆ. ಯೋಗ್ಯ ರೀತಿಯಲ್ಲಿ ವ್ಯವಸಾಯಿಕ ಕ್ಷೇತ್ರವನ್ನು ಸರಿಗೊಡುವುದೇ ನಮಗೆ ಆಗಕ್ಯವಿದೆ. ಎಲ್ಲರೂ ಸ್ವತಂತ್ರ. ವ್ಯಕ್ತಿಸಿಂದ ತನ್ನು ಸಹಕಾರ ನೀಡುವಂತಾಗಬೇಕು; ತನ್ನು ಹಳೆಯ ಪದ್ಧತಿಯಂತೆಯೇ ಮುನ್ನಡೆಯಲಿ.

ರಾಜಕೀಯ ಕಾರಣಗಳಿಂದ ಒಬ್ಬರಿಂದ ಕಿತ್ತು ಇನ್ನೊಬ್ಬರಿಗೆ ಭೂಮಿಯನ್ನು ನೀಡುವ ಕಾರ್ಯ ನಡೆಯಬಾರದು. ಆತ್ಮವಿಶ್ವಾಸ, ಮತ್ತು ಪರವಿಶ್ವಾಸಗಳನ್ನು ಉದ್ಬುದ್ಧಗೊಳಿಸಿ, ಶಾಸನದ ಹೆದರಿಕೆಯನ್ನು ದೂರಮಾಡಿ, ಪರಸ್ಪರ ಸೌಹಾರ್ದದಿಂದ ಈ ವ್ಯಾವಸಾಯಿಕ ಕ್ಷೇತ್ರದಲ್ಲಿ ಅಭಿರುಚಿಯುಳ್ಳವರು ದುಡಿಯುವಂತಾಗಬೇಕು. ಶಾಸನಕ್ಕೆ ತಲೆಬಾಗ್ಗಿಸುವ ನ್ಯಾಯವು ಧರ್ಮಕ್ಕೆ ಮಾತ್ರ ತಲೆಬಾಗ್ಗಿಸುವಂತಾಗಬೇಕು.

ಈಗೀಗ ಶಾಸನಿಕ ಪ್ರಣಾಳಿಯು ವ್ಯವಸಾಯ ಕ್ಷೇತ್ರದಲ್ಲಿ ತಳವೂರಿ ಬಿಟ್ಟಿದೆ. ರಿಂದ ಅದನ್ನು ಹಿಂತೆಗೆದು ಕೊಳ್ಳುವುದು ಪ್ರಯಾಸವಾಗಬಹುದು. ಆದರೆ, ಹೀಗೆ ಮಾಡಿದರೆ, ಎಂದರೆ ವ್ಯವಸಾಯ ಕ್ಷೇತ್ರವನ್ನು ಸ್ವತಂತ್ರ ವಾತಾವರಣದಲ್ಲಿ ಇರಗೊಟ್ಟರೆ, ಇದುವರೆಗೆ ತೋರದಂತಹ ಉತ್ಸಾಹದಿಂದ ಒಕ್ಕಲತನವು ನಡೆದು, ಅದರಿಂದ ಉತ್ಪಾದನೆಯು ಅಧಿಕವಾಗುವುದು. ಪ್ರತಿಯೊಬ್ಬ ವೈಯಕ್ತಿಕವಾಗಿ, ದನಿಯೇ ಆಗಲಿ, ಒಕ್ಕಲೇ ಆಗಲೀ ಪ್ರಾಮಾಣಿಕನಾಗಿ ವರ್ತಿಸುವುದಿಲ್ಲವೆಂಬುದನ್ನು ಗಮನಿಸಿದರೆ, ಇಂದಿನ ನಮ್ಮ ಆಹಾರ ಸಮಸ್ಯೆಯನ್ನು ಬಗೆಹರಿಸುವ ಏಕ ಮಾತ್ರ ಸಾಧನವೆಂದರೆ, ಒಕ್ಕಲತನದ ಅಭಿವೃದ್ಧಿ ಮಾತ್ರದ ಹಿತಾಕಾಂಕ್ಷೆಗಳನ್ನು ಸ್ವತಂತ್ರವಾಗಿರಗೊಡುವುದೇ ಆಗಿದೆ.

(ಸಾಧಾರ)

ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಡಲ್ ವೆಂಕಟ್ರಾವ್, ಎಲ್. ವಿ. ಎಮ್ಮೆ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮಾನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

●

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ— ದಿ। ಶ್ರೀ. ಕೊರಡ್ಡಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%
5 ರಿಂದ 12 ,, 4½%
13 ,, 24 ,, 4½%
ರೂ. 10,000/- ಮುತ್ತ ಮೇಲಣ ಹಣಕ್ಕೆ ½% ಹೆಚ್ಚು.
ಸೇವಿಂಗ್ಸ ಬ್ಯಾಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1939

ಅತಿಥಿ ಸತ್ಕಾರ

ಕೆನೆಡದ ಪ್ರಧಾನಿ ಬೇಕರರು ಭಾರತದಲ್ಲಿ

ಸ್ವತಂತ್ರ ರಾಷ್ಟ್ರಗಳಿಗೆ ಭಾರತ-ಕೆನೆಡಗಳು ಆದರ್ಶವಾಗಲಿ

ಬ್ರಿಟಿಷ ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರವಾದ ಕೆನೆಡದ ಪ್ರಧಾನಮಂತ್ರಿ ಶ್ರೀಮಾನ್ ಜಾನ್ ಜಾರ್ಜ್ ಡೀಫನ್ ಬೇಕರ್‌ರವರ ಭಾರತವನ್ನು ಈಗಾಗಲೇ ಸಂದರ್ಶಿಸಿದ್ದಾರೆ. ಇವರು ೧೮೯೫ರ ಸಪ್ತಂಬರ ತಿಂಗಳಲ್ಲಿ ಜನಿಸಿ, ತಮ್ಮ ೨೦ನೆ ವಯಸ್ಸಿನಲ್ಲಿ ಬಿ. ಎ ಪದವಿಯನ್ನೂ ೧೯೧೯ರಲ್ಲಿ ಎಂ. ಎ. ಪದವಿಯನ್ನೂ ೨೪ರಲ್ಲಿ ಎಲ್. ಎಲ್. ಬಿ. ಪದವಿಯನ್ನೂ ಪಡೆದರು, ಮೊದಲನೆಯ ಮಹಾಯುದ್ಧದ ಕಾಲಲ್ಲಿ ಶ್ರೀಯುತರು ಸೈನ್ಯಕ್ಕೆ ಸೇರಿ ಹೊರದೇಶಗಳಲ್ಲಿ ಯುದ್ಧದಲ್ಲಿ ಬಹಳ ಸೇವೆ ಸಲ್ಲಿಸಿರುವರು.

೧೯೪೨ನೆ ವರ್ಷದಿಂದಲೂ ಶ್ರೀ ಡೀಫನ್ ಬೇಕರರು ವಕೀಲ ಸಂಘದ ಪರಿಷತ್ತಿನ ಸದಸ್ಯರಾಗಿದ್ದಾರೆ. ೧೯೪೫ನೆ ಇಸವಿಯಿಂದ ಶ್ರೀಯುತರು ಸಾಮಾನ್ಯ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೫೩ರಲ್ಲಿ ಪ್ರೋಗ್ರೆಸಿವ್ ಕನ್ಸರ್ವೇಟಿವ್ ಪಕ್ಷವನ್ನು ಸಂಘಟಿಸಿ ಇವರು ಮುಂದಿರುವರು. ಸಾಗೆಯೇ ೧೯೫೩ರಲ್ಲಿ ಕೆನೆಡದ ಪಾರ್ಲಿಮೆಂಟಿನಲ್ಲಿ ವಿರೋಧೀ ಪಕ್ಷದ ನಾಯಕರಾಗಿಯೂ ಇದ್ದರು.

ಕಳೆದ ವರ್ಷ, ಕೆನೆಡದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು, ಸಾಮಾನ್ಯರ ಸಭೆಯ ೨೬೫ ಸ್ಥಾನಗಳಲ್ಲಿ ೧೧೩ ಸ್ಥಾನಗಳನ್ನು ಪ್ರೋಗ್ರೆಸಿವ್ ಕನ್ಸರ್ವೇಟಿವ್ ಪಕ್ಷವು ಪಡೆಯಿತು. ಲಿಬರಲ್ ಪಕ್ಷದ ಸರಕಾರವು ರಾಜೀನಾಮೆಯಿತ್ತುದರಿಂದಾಗಿ ಕಳೆದ ವರ್ಷ ಜೂನ್ ೨೧ರಂದು ಶ್ರೀ ಡೀಫನ್ ಬೇಕರರು ಪ್ರೋಗ್ರೆಸಿವ್ ಕನ್ಸರ್ವೇಟಿವ್ ಪಕ್ಷದ ಉಮೇದ್ವಾರರಾಗಿ ಪ್ರಧಾನಿಗಳ ಸ್ಥಾನಕ್ಕೆ ಬಂದಿರು. ಕನ್ಸರ್ವೇಟಿವ್ ಪಕ್ಷದ ನಾಯಕರು ಪ್ರಧಾನಿಪಟ್ಟವೇರಿದುದು ಈ ಹಿಂದೆರ್ಪಡಿಸಿರಲ್ಲಿ, ಆ ಮೇಲಿನ ೨೨ ವರ್ಷಗಳ ದೀರ್ಘ ಕಾಲದಲ್ಲಿ ಈ ಪಕ್ಷಕ್ಕೆ ಪ್ರಧಾನಿ ಸ್ಥಾನ ದೊರೆಯದೆ ಹೋಗಿತ್ತು. ಈ ವರ್ಷದಾರಿಯಲ್ಲಿ, ಎಂದರೆ, ಫೆಬ್ರುವರಿ ತಿಂಗಳಲ್ಲಿ ಪಾರ್ಲಿಮೆಂಟು ವಿಸರ್ಜನೆಯಾಗಿ ಅಲ್ಲಿ ಮರು ಚುನಾವಣೆಗಳು ನಡೆದಾಗ, ಶ್ರೀ ಡೀಫನ್ ಬೇಕರರು ಪ್ರಚಂಡ ಬಹುಮತವನ್ನು ಪಡೆದರು.

(ಎನೇ ಪುಟ ನೋಡಿರಿ)

ಶಿಶು ಹಿತ

ಇಂದಿನ ಮಗುವೇ ಮುಂದಿನ ಒಡೆಯ

ಮಗುವಿನ ಆರೈಕೆಗಾಗಿ ಪಾಲನೆ ಪೋಷಣೆಗಾಗಿ ಸರಕಾರದ ವಿವಿಧ ಯೋಜನೆಗಳು

"ಮಾನವ ಕಲ್ಯಾಣ ನಮ್ಮ ಗುರಿ– ಯಾದರೆ ವಯಸ್ಕರ ಯೋಗಕ್ಷೇಮ ನೋಡುವುದಕ್ಕಿಂತ ಮಕ್ಕಳ ಯೋಗ ಕ್ಷೇಮ ನೋಡುವುದು ನಮ್ಮ ಮುಖ್ಯ ಗುರಿಯಾಗಬೇಕು," ಎಂದು ಪ್ರಧಾನಿ ಶ್ರೀ. ಜವಾಹರಲಾಲ್ ನೆಹರೂರವರು ನೇಫಾ ಮಕ್ಕಳ ಯೋಗಕ್ಷೇಮವನ್ನು ಕುರಿತು ಸಂಬಂಧಿಸಿದ ನಮ್ಮ ಯೋಜನೆಗಳಿಗೆ ಇರುವ ಪ್ರಾಮುಖ್ಯವನ್ನು ಸೂಚಿಸಿರುತ್ತಾರೆ.

ಪ್ರಧಾನಿಗಳ ಅಭಿಪ್ರಾಯದ ಅರ್ಥವನ್ನು ಗಮನದಲ್ಲಿಟ್ಟುಕೊಂಡೇ ಕೇಂದ್ರ ಸಮಾಜ ಕಲ್ಯಾಣ ಬೋರ್ಡು ತನ್ನ ಹಲವು ಯೋಜನೆಗಳನ್ನು ಸಿದ್ಧಗೊಳಿಸಿದೆ.

ಸಮಾಜ ಕಲ್ಯಾಣ ಮಂಡಲಿ ಮಕ್ಕಳ ಹಿತರಕ್ಷಣೆಗೆ ಸಂಬಂಧಿಸಿದಂತೆ ಮೂರು ಮುಖ್ಯ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ.

ಮೊದಲನೆಯ ದಾಗಿ, ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು ೬೭೦ ಕೇಂದ್ರಗಳನ್ನು ಆರಂಭಿಸಿ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ನಿರ್ದಿಷ್ಟ ಕಾರ್ಯಕ್ರಮ ಸೂಚಿಸಿದೆ.

ಎರಡನೆಯದಾಗಿ, ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ಸ್ವಾಧೀನತೆಯಲ್ಲಿರುವ ಬಾಸೆಗಿ ಸಂಸ್ಥೆಗಳಿಗೆ ಧನ ಸಹಾಯದ ರೂಪದಲ್ಲಿ ಹಣ ನೀಡಿ ಪ್ರೋತ್ಸಾಹಿಸುತ್ತದೆ.

ಮೂರನೆಯದಾಗಿ, ಬಾಸೆಗಿ ಸ್ವಯಂ ಸೇವಕ ಸಂಘಗಳು ಮಕ್ಕಳ ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಮಾರ್ಗದರ್ಶನ ನೀಡುವುದಲ್ಲದೆ ಅಂತಹ ಕಾರ್ಯಕ್ರಮಗಳು ಯಶಸ್ವಿಯಾಗಿ ಕಾರ್ಯಗತವಾಗಲು ಬೇಕಾದ ಸಹಾಯ ನೀಡುತ್ತದೆ.

ಈ ಮಂಡಲಿ ಕಳಿಸಿರುವ ಮಕ್ಕಳ ಯೋಗಕ್ಷೇಮದ ಯೋಜನೆಗಳ ವ್ಯಾಪ್ತಿ ೧೫.೦೦ ಲಕ್ಷಕ್ಕೂ ಹೆಚ್ಚು ಗ್ರಾಮಗಳು ಮತ್ತು ಸುಮಾರು ಒಂದು ಕೋಟಿ ಜನರ ಮೇಲಿದೆ

ಈ ಯೋಜನೆಗಳ ಪರಿಣಾಮವಾಗಿ ಗ್ರಾಮಾಂತರ ಪ್ರದೇಶದ ವಕ್ಕಳು ಮಂಡಲಿಯು ಹಲವು ಯೋಗಕ್ಷೇಮ ಯೋಜನೆಗಳಿಂದ ಪ್ರಯೋಜನ ಪಡೆಯುವಂತಾಗಿದೆ. ಹಿಂದೆ ಇಂತಹ ಯಾವ ಒಂದು ಯೋಜನೆಯೂ ಅವುಗಳ ಪಾಲಿಗಿರಲಿಲ್ಲ.

ಬಾಲವಾಡಿಗಳ ಸ್ಥಾಪನೆಯಿಂದಾಗಿ ಅಲ್ಲಿ ಮಕ್ಕಳಿಗೆ ವಿಶಿಷ್ಟವಾದ ತರಬೇತಿಯನ್ನು ಬಾಲ್ಯದಲ್ಲೇ ಆರಂಭಿಸಲಾಗುವುದು. ಮೂಲ ಶಿಕ್ಷಣಕ್ಕೆ ಇಲ್ಲಿ ಪೀಠಿಕೆ ಹಾಕಲಾಗುವುದು. ಈ ಶಿಬಿರಗಳಲ್ಲಿ ನೇವಿ ತರಂಗಿರವ ಗ್ರಾಮ ಸೇವಿಕೆಯರು ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವರು. ಹಾಲು ಕುಡಿಸುವುದು, ವೈತೊಳೆಯುವುದ , ಶುಚಿತ್ವ ಕಲಿಸುವುದು; ಹೀಗೆ ಹಲವು ರೀತಿಯಲ್ಲಿ ಮಕ್ಕಳ ಶುಶ್ರೂಷೆ ನಡೆಸುವುದು ಈ ಗ್ರಾಮ ಸೇವಿಕೆಯರ ಕೆಲಸ; ಇಂತಹ ಸೌಲಭ್ಯಗಳು ಮತ್ತು ಒಳ್ಳೆ ಬೆಳವಣಿಗೆಗೆ ಬೇಕಾದ ಅವಕಾಶ ಹಿಂದೆ ಮಕ್ಕಳ ಪಾಲಿಗೆ ಇರಲಿಲ್ಲ.

ಮಕ್ಕಳ ಯೋಗಕ್ಷೇಮ ಮತ್ತು ಮಹಿಳೆಯರ ಯೋಗಕ್ಷೇಮ ಇವೆರಡನ್ನೂ ಸೇರಿಸಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು. ಇಂದಿನ ಹೊಸ ಕಾರ್ಯ ವಿಧಾನವಾಗಿದೆ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಕಾರ್ಯವನ್ನು ಮಹಿಳೆಯರ ಯೋಗಕ್ಷೇಮಕ್ಕೆ ಸಂಬಂಧಿಸಿದ ಕಾರ್ಯದ ಒಂದು ಭಾಗವಾಗಿ ಪರಿಗಣಿಸಿ ಯೋಜನೆ ತಯಾರಿಸುವುದು ಇದರ ಉದ್ದೇಶ. ಅಷ್ಟೇ ಅಲ್ಲ; ಮಕ್ಕಳ ಯೋಗಕ್ಷೇಮದ ಕಾರ್ಯ ಪ್ರತಿಯೊಂದು ಕಲ್ಯಾಣಯೋಜನೆಯ ಒಂದು ಅಂಗವಾಗಿರಬೇಕು; ಅದು ಕುಟುಂಬಯೋಜನೆಯೇ ಆಗಲಿ ಸಾಮುದಾಯಕ ಯೋಜನೆಯೇ ಆಗಲಿ ಇದು ಆತ್ಯಾವಶ್ಯಕ.

ಸಾಮುದಾಯಿಕ ಯೋಜನೆಗಳು ಜಾರಿಗೆ ಬಂದಿರುವ ಕ್ಷೇತ್ರಗಳಲ್ಲಿ ಈ ಅಂಶವನ್ನು ಮುಖ್ಯವಾಗಿ ಗಮನಕ್ಕೆ ತಂದುಕೊಂಡು ಪ್ರತಿಯೊಂದು ಕಾರ್ಯಕ್ರಮವನ್ನೂ ನಿರೂಪಿಸಲಾಗುವುದು.

ಗ್ರಾಮಾಂತರ ಪ್ರದೇಶಗಳಲ್ಲಿ ಹೀಗೆ ಮಕ್ಕಳ ಹಿತರಕ್ಷಣೆಗಾಗಿ ಕೈಗೊಳ್ಳುವ ಕಾರ್ಯಕ್ರಮಗಳ ಜೊತೆಗೆ, ನಗರ ಪ್ರದೇಶಗಳಲ್ಲಿ ಈ ವಿಷಯದಲ್ಲಿ ಆಕ್ತಿವೆ ಹಿಸಿ ಕೆಲಸ ಮಾಡುತ್ತಿರುವ ಖಾಸಗಿ ಸಂಘ ಸಂಸ್ಥೆಗಳಿಗೆ ಧನಸಹಾಯದ ರೂಪದಲ್ಲಿ ಹಣ ನೀಡಿ ಕೇಂದ್ರ ಸಮಾಜ ಕಲ್ಯಾಣ ಮಂಡಲಿ ಮಕ್ಕಳ ಹಿತರಕ್ಷಣೆ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತದೆ.

ಈ ಸಹಾಯ ಧನದಿಂದ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳ ಫಲವಾಗಿ ಸನಾಥ ಅನಾಥ ಮಕ್ಕಳಿಗೆ ಎಷ್ಟೋ ಸೌಲಭ್ಯಗಳು ದೊರೆಯುತ್ತಿವೆ. ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು ತಮ್ಮ ಮಕ್ಕಳನ್ನು ಈ ಹಣ ಸಹಾಯದಿಂದ ನಡೆಯುತ್ತಿರುವ ಶಿಶುಗೃಹಗಳಲ್ಲಿ, ಬಿಟ್ಟು ತಮ್ಮ ಕೆಲಸಕ್ಕೆ ನೆಮ್ಮದಿಯಾಗಿ ಹೋಗಬಹುದಾಗಿದೆ. ಅನಾಥ ಶಿಶುಗಳ ವಿದ್ಯಾಭ್ಯಾಸ ವ್ಯವಸ್ಥೆಗೂ ಈ ಸಹಾಯ ಧನ ವಿನಿಯೋಗವಾಗುತ್ತಿದೆ. ಮಕ್ಕಳ ಉದ್ಯಾನವನಗಳ ನಿರ್ಮಾಣ, ಆಟಪಾಟಗಳಿಗೆ ಮೈದಾನಗಳ ಏರ್ಪಾಟು, ಮನೆಯೊಳಗೆ ಆಟಪಾಟಗಳಿಗೆ ವಿಶೇಷ ಸೌಲಭ್ಯಗಳ ವ್ಯವಸ್ಥೆ, ಇವೇ ಮೊದಲಾದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಖಾಸಗಿ ಸಂಸ್ಥೆಗಳಿಗೆ ಸಹಾಯಧನವನ್ನೂ ಒದಗಿಸಲಾಗುತ್ತಿದೆ.

ಇದರ ಜೊತೆಗೆ ಅಂಗ ವಿಕಲರಾಗಿರುವ ಮಕ್ಕಳಿಗಾಗೆಂದೇ ಪ್ರತ್ಯೇಕವಾಗಿ ಈ ಸಂಬಂಧದ ಸೇವಾಕಾರ್ಯದಲ್ಲಿ ತೊಡಗಿರುವ ಸಂಘ ಸಂಸ್ಥೆಗಳಿಗೆ ಸಹಾಯವನ್ನು ಒದಗಿಸಲಾಗುತ್ತಿದೆ. ವಿದ್ಯಾಭ್ಯಾಸ ಸೌಕರ್ಯ ಮತ್ತು ಔದ್ಯೋಗಿಕ ಶಿಕ್ಷಣ ಒದಗಿಸುವ ಕಾರ್ಯಗಳಿಗೆ ಈ ಹಣ ವಿನಿಯೋಗವಾಗುತ್ತಿದೆ.

೧೫ನೆಯ ಯುಕ್ರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಅಧ್ಯಕ್ಷ ರೆಜನಾಲ್ಡ ಡಾ. ಚಾರ್ಲ್ಸ್ ಮಾಲಿಕ್ (ಬಲ) ರೊಡನೆ ಕಾರ್ಯದರ್ಶಿ ಡಾಗ್ ಹೆಮ್ಮಾರ್‌ಶೀಲ್ಡರು (ಎಡ) ಮಾತಾಡುತ್ತಿದ್ದಾರೆ

ಪರ್ವತ ಧಾಮಗಳಲ್ಲಿ ಮಕ್ಕಳ ವಿಹಾರ ಕ್ಕಾಗಿ ಪ್ರತ್ಯೇಕ ಮಕ್ಕಳ ಗೃಹಗಳನ್ನು ಕಟ್ಟುವ ವಿಶೇಷ ಕಾರ್ಯಕ್ರಮವು ಮೊದಲನ್ನು ಮಕ್ಕಳ ಯೋಗಕ್ಷೇಮಕ್ಕಿರುವ ಭಾರತೀಯ ಪರಿಷತ್ತು ಅಂಗೀಕರಿಸಿದೆ. ಈ ಕಾರ್ಯಕ್ರಮದ ಪ್ರಕಾರ ದ್ವಿತೀಯ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಇಂತಹ ೧೦೦ ಮಕ್ಕಳ ಗೃಹಗಳನ್ನು ಸಿದ್ಧಗೊಳಿಸುವ ಉದ್ದೇಶವಿದೆ. ಬಡ ಕುಟುಂಬಗಳಿಂದ ಬರುವ ಮಕ್ಕಳು ಈ ವಿಹಾರ ಗೃಹಗಳಲ್ಲಿ ವರ್ಷದಲ್ಲಿ ಹಲವು ದಿನ ಇದ್ದು ಒಳ್ಳೆ ಆಹಾರ, ಆಟಪಾಟಗಳು, ಮತ್ತು ಒಳ್ಳೆ ವಾತಾವರಣದ ಪ್ರಯೋಜನ ಪಡೆಯುವ ಅವಕಾಶವನ್ನು ಹೊಂದಿದ್ದಾರೆ. ಈ ಪ್ರಯೋಜನ ಪಡೆಯುವ ಮಕ್ಕಳ ವಯೋಮಿತಿ ಎಂಟರಿಂದ ಹದಿನಾರು.

ಮಗು ಭವಿಷ್ಯದ ಒಡೆಯನಾದುದರಿಂದ "ಅನನ್ಯೊಬ್ಬ ಸ್ವಯಂಪ್ರ ವ್ಯಕ್ತಿ" ನಮ್ಮ ದೇಶ ಸಿದ್ಧಗೊಳಿಸುವಂತೆ ಪ್ರತಿಯೊಂದು ಸಮಾಜ ಕಲ್ಯಾಣ ಯೋಜನೆಯಲ್ಲಿಯೂ ಅವನ ಹಿತರಕ್ಷಣೆಗೆ ಗಮನ ಕೊಡಲು ಸರಕಾರಗಳಿವೆ ಯೆಂತಲೇ, ಕೇಂದ್ರ ಸಮಾಜಕಲ್ಯಾಣ ಮಂಡಲಿ ಅಂಗೀಕರಿಸಿರುವಂತಹ ಯೋಜನೆಗಳಲ್ಲಿ ಮಕ್ಕಳ ಯೋಗ ಕ್ಷೇಮಕ್ಕೆ ವಿಶೇಷ ಪ್ರಾಮುಖ್ಯ ಕೊಡಲಾಗಿದೆ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 306/1958.

ಮಹಾಬಲ ಶೆಟ್ಟಿ — ವಾದಿ

ಪಾತ್ರ

ಮಂಜುನಾಥ ಬಾಳಿಗೆ ಕೊಡಂ–ಪ್ರತಿವಾದಿರು. ಯವರೊಳಗೆ

ಪ್ರತಿವಾದಿ.– G Sanny, Lorry-Driver, 141. ಸಿಂಟೋ ಮಹಲ್. ಮೈದಾನ್ ಕ್ರಾಸ್ ರಸ್ತೆ ಮಂಗಳೂರು— ಎಂಬವರಿರುವರು: —

ವಾದಿಯು ಮೇಲ್ಕಂಡ ದಾವೆಯಲ್ಲಿ ನಷ್ಟ ವಗೈರೆ ಬಾಬ್ತು ರೂಪ್ಯಾ 2000/ನ್ನು ಕೇಳಿ ದಾಕ್ಲು ಮಾಡಿದ ಸದ್ರಿ ದಾವೆಯು ನಿಮ್ಮ ಹಾಜರಾತಿ ಬಗ್ಗೆ ಯಿದೇ ತಾರೀಕು 19-12-58 ಕ್ಕೆ ಯಿಟ್ಟಿದೆ. ಆದ್ರಿಂದ ನೀವು ಆ ದಿವ್ಸ ಬೆಳಿಗ್ಗೆ ಘಂಟೆ10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಉದಯರಿಸಲಿಕ್ಕೆ ತಪ್ಪಿದ್ರೆ ನಿಮ್ಮನ್ನು ತಿರ್ವಾ ನಿಸ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯಿದೆ.

Sd/ P. Vittaldas Hegde.

ವಾದಿತರ ಎಡ್ವಕೇಟ್

ಕಾರ್ಕಳ ತಾ. 21 – 11 – 58.

ನಿಮಗಾಗಿ—

ನಿಮ್ಮ ಜನರ ನಿರ್ದೇಶನದಲ್ಲಿ—

ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: ಮಾರ್ಚ್ 12, 1906)

ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫುಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಸ್ವಾವಲಂಬನೆ

ವ್ಯವಸಾಯ ಕ್ಷೇತ್ರವನ್ನು ಸ್ವತಂತ್ರವಾಗಿರಿಸಿರಿ

ಆಹಾರ ಸಮಸ್ಯೆ ಕೊನೆಗೊಂಡು ನಾವು ಆಹಾರ ಸ್ವಾವಲಂಬಿಯಾಗ ಬೇಕಾದರೆ, ಇಲ್ಲಿ ಶಾಸನ ಸವಾರಿ ನಡಾಬಾರದು

ನಮ್ಮ ಆಹಾರ ಪ್ರಶ್ನೆಯಲ್ಲಿ ಏನೋ ಒಂದು ತಪ್ಪಾಗಿದ್ದುದರಿಂದ, ಅದು ಉಲ್ಬಣಾವಸ್ಥೆಗೇರಿದ ಸಮಸ್ಯೆಯೆನಿಸಿಕೊಂಡಿದೆ. ಈ ವಿಷಯದಲ್ಲಿ ಕೊಡುವ ಒಂದು ಸೂಚನೆಯು ಕ್ಷುಲ್ಲಕವೆನಿಸಬಹುದು; ಆದರೆ, ಅದು ಮೂಲಭೂತ ಪರಿಹಾರವೆಂದು ತಿಳಿಯದಿರದು. ಹಿಂದಿನಂತೆ ಪುನಃ ಗುತ್ತಿಗೆ ಕೊಡುವ ಪದ್ಧತಿಯನ್ನು ಇಚ್ಛಿಸುವುದು, ಶಾಸನಕ್ಕೆ ನ್ಯಾಯವಾದ ಸ್ಥಾನ ಮತ್ತು ಆಜ್ಞಾವನಗಳನ್ನು ನಿರ್ಧರಿಸುವುದು ಇಂದಿನ ಮುಖ್ಯ ಕರ್ತವ್ಯವಾಗಿದೆ. ಇತ್ತೀಚೆಗೆ ಸಾರ್ವಜನಿಕ ಅಭಿವೃದ್ಧಿಯ ಕೇಳಿಕೆಗಳು ಶಾಸನಿಕ ಕ್ಷೇತ್ರವು ಗುತ್ತಿಗೆಯ ಸ್ಥಳವನ್ನು ಆಕ್ರಮಿಸುವಂತೆ ಮಾಡಿದೆ.

ವ್ಯವಸಾಯವು ಸೆಲೆಯಿಂದ ಗುತ್ತಿಗೆಯತ್ತ ಧಾವಿಸಿತು. ಮಾನವ ಜೀವನವು ಪಾರಸ್ಪರಿಕ ಸಹಕಾರವನ್ನೇ ಹೊಂದಿಕೊಂಡಿದೆ. ಈ ಸಹಕಾರವು ಹಿಂದಿನ ಕಾಲದಲ್ಲಿ ಯಾವ ಸ್ಥಿತಿಯಲ್ಲಿಯೂ ಜನನ, ಗಾಢವದಲ್ಲಿಯೂ ಸಾಕಷ್ಟಿತ್ತು. ಆದರೆ, ಮುಂದಿದು ಗುತ್ತಿಗೆಯ ತಳಹದಿಯ ಮೇಲೆ ತಳವೂರಿತು. ಈಗ, ರಾಜ್ಯ ಅಥವಾ ಸಮಾಜದ ಪ್ರಧಾನಾಂಗವು ಗುತ್ತಿಗೆಯನ್ನು ಪುನಃ ಸ್ಥಾಪಿಸಿ ಪ್ರತ್ಯಕ್ಷವಾಗಿ ಎಲ್ಲವನ್ನೂ ಸರಿಪಡಿಸಬಹುದು ಸತ್ತದೆ.

ವ್ಯವಸಾಯಿಕೋತ್ಪನ್ನದಲ್ಲಿ ಮಾಲಿಕ ಮತ್ತು ಒಕ್ಕಲುಗಳ ಸಂಬಂಧದ ಚಿತ್ರವನ್ನಿದು ತೋರಿಸುತ್ತದೆ. ಭಾರತದಲ್ಲಿ ರಾಜ್ಯವು ಗುತ್ತಿಗೆಯ ಸ್ವಾತಂತ್ರ್ಯದ ಸಾಧ್ಯತೆಗಳನ್ನು ಬಳಸುವುದಕ್ಕೆ ಮೊದಲೇ ಆಹಾರಧಾನ್ಯೋತ್ಪಾದನೆಯಲ್ಲಿ ತತ್ಪರರಾದ ವರೆಲ್ಲಿ ಸಂಬಂಧವನ್ನು ಸರಿಪಡಿಸಬಯಸುತ್ತಿದೆ. ಆದರ್ಶ ರಾಜ್ಯವು ಹೆಚ್ಚಿನ ಉತ್ತಮ ಫಲಿತಾಂಶದೊಡನೆ ಏನನ್ನೂ ಮಾಡಬಹುದು. ಆದರೆ, ಎಲ್ಲ ಸರಕಾರಗಳ ದುರ್ದೈವದ ಮಿತಿಯೇನೆಂದರೆ, ರಾಜ್ಯವು ಅದರ ಆಡಳಿತಯನ್ನು, ಅದು ನಿರಂಕುಶ, ಕುಲೀನ ಪ್ರಭುತ್ವ, ನೌಕರ ಶಾಹಿ ಅಥವಾ ಲೋಕತಂತ್ರವಿರಲಿ ನಿರ್ವಹಿಸುವವರಷ್ಟೇ ಉತ್ತಮವೂ ವಿವೇಕಪೂರ್ಣವೂ ಆಗಬಲ್ಲುದು. ಆದುದರಿಂದ, ರಾಜ್ಯಶಾಸನ ಸೂತ್ರಗಳಲ್ಲಿ ಗುತ್ತಿಗೆ ಕೊಡುವ ಪದ್ಧತಿಯುಂಟಾದರೆ, ಆಗ, ಅಯೋಗ್ಯಾಡಳಿತ, ಉತ್ಪತ್ತಿ ತೆಗೆಯುವುದರಲ್ಲಿ ಸೋಮಾರಿತನ ಮತ್ತು ಬಗಾಲವೆನಿಸುವಷ್ಟು ಕೊರತೆಗಳು ತಲೆದೋರಲಾರವು.

ನೌಕರನು ಮಾಲಿಕನನ್ನು ಓಡಿದು ಕೊಳ್ಳಬೇಕೆ ಅಥವಾ ಮಾಲಿಕನು ನೌಕರನನ್ನು ಹಿಡಿಯಬೇಕೆ ಎಂಬ ಮಾತಿನಲ್ಲಿದು ಕ್ಷುಲ್ಲ ಪರಿವರ್ತನೆ ಮಾಡುತ್ತದೆ. ಮಾಲಿಕ ಮತ್ತು ನೌಕರರಿಬ್ಬರಿಗೂ ಕಾನೂನು ಏಕರೀತಿಯ ಅಧಿಕಾರವನ್ನಿತ್ತಿರುವಾಗ, ಇಬ್ಬರಲ್ಲಿ ಯಾರೊಬ್ಬರಬಾದರೂ ಹಿಡಿತದಲ್ಲಿದ್ದರೆ. ಅದು ಗುಲಾಮಗಿರಿಯಾಗುವುದು. ಒತ್ತಾಯದಿಂದ ಶಾರೀರಿಕ ಸೇವೆ ಸಲ್ಲಿಸಬೇಕಾದರೂ ಒಬ್ಬನು ಸ್ವಯಂ ಪ್ರಯಾಸಪಟ್ಟು ಕಟ್ಟಿದ್ದರೂ, ಶಾಸನಿಕ ವಿಧಾನದಿಂದ ಅದರ ಲಾಭ ಪಡೆಯುವುದಾದರೂ ಎರಡೂ ಒಂದು ವಿಧದ ದಾಸ್ಯವೇ ಎಂದು ಹೇಳಬಹುದು. ಹಿಂದಿನ ಸ್ಥಿತಿಯನ್ನು ತಿನ್ದಿದನಿಯನ್ನು ಒಕ್ಕಲಿನ ಸೇವಕನನ್ನಾಗಿ ಮಾಡಿದಂತಾಗುತ್ತದೆ.

ಶಾಸನಿಕವತ್ತಾಯತನದಿಂದ ವ್ಯವಸಾಯದಲ್ಲಿ ಮಾನವನ ಪರಿಶ್ರಮ ದೂರವಾಗಬೇಕು. ಹಿಂದಿನ ಕಾಲದಲ್ಲಿದ್ದ ಆನುವಂಶಿಕತೆಯೇ ನಿಜವಾಗಿಯೂ ಉತ್ತಮ. ಶ್ರೀಮಂತರಿರಲಿ, ಅಥವಾ ಸಾಮಾನ್ಯ ಜನರಿದ್ದಿರಲಿ, ಎಲ್ಲವೂ ಸ್ವತಂತ್ರವಾಗಿ ನಡೆಯುವುದಕ್ಕೆ ಅವಕಾಶವಿರಬೇಕು. ಇದರಿಂದಲೇ ಆತ್ಮತೃಪ್ತಿ. ಶಾಸನಿಕ ವಿಧಾನದಿಂದ ಹೇರಿದ ಒತ್ತಾಯವು ಶಾಸನಿಕ ಪಕ್ಷಗಳ ಬದಲಾವಣೆ, ಅಧಿಕಾರಿಕ ವ್ಯಕ್ತಿಗಳಲ್ಲಿ ಪರಿವರ್ತನೆಗಳಾದರೆ ಮಾರ್ಪಾಟಾಗುವುದು ಸಾಧ್ಯ.

ಧರ್ಮ ಪದ್ಧತಿಯು ಒಂದು ಕಾಲದಲ್ಲಿ ರಾಜ್ಯವನ್ನು ಪಾಲಿಸಿತ್ತು. ಆಗ, ಅದು ವಿಧೇಯತೆಯಿಂದ ನಡೆಯುತ್ತಿತ್ತಲ್ಲದೆ ಆದರ್ಶವೂ ಆಗಿತ್ತು. ಮಾನವನನ್ನು ಚಟುವಟಿಕೆಗಳನ್ನಾದು ಮುನ್ನಡೆಸುತಿತ್ತು. ಆದರಿಂದ ಎಲ್ಲವನ್ನೂ ಶಾಸನ ಪ್ರಣಾಳಿಯು ತನ್ನ ವಶ ಪಡಿಸಿಕೊಳ್ಳಲು ಹವಣಿಸುತ್ತದೆ. ಆದರೆ, ಆತಳಿತವು ಸುತ್ತಮುತ್ತ ಕೊಳಚೆ ಕುಂಬಿ ಬಿಟ್ಟದೆ ಎಂದು ಗೋಚರವಾಗದಿರದು.

ಶಾಸನ ಪ್ರಣಾಳಿಯು ಈ ವ್ಯವಸಾಯೋತ್ಪನ್ನಗಳ ಕ್ಷೇತ್ರದಲ್ಲಿ ಕನ್ನ ಗುರಿ ಸಾಧಿಸುವಲ್ಲಿ ಅಸಮರ್ಥವಾಗಿದೆ. ಯೋಗ್ಯ ರೀತಿಯಲ್ಲಿ ವ್ಯಾವಸಾಯಿಕ ಕ್ಷೇತವನ್ನಿರಗೊಡುವುದೇ ನಮಗೆ ಆಗತ್ಯವಿದೆ. ಎಲ್ಲರೂ ಸ್ವತಂತ್ರ ಮನಸ್ಸಿನಿಂದ ತನ್ನ ಸಹಕಾರ ನೀಡುವಂತಾಗಬೇಕು; ತಮ್ಮ ಹಳೆಯ ಪದ್ಧತಿಯಂತೆಯೇ ಮುನ್ನಡೆಯಲಿ.

ರಾಜಕೀಯ ಕಾರಣಗಳಿಂದ ಒಬ್ಬರಿಂದ ಕಿತ್ತು ಇನ್ನೊಬ್ಬರಿಗೆ ಭೂಮಿಯನ್ನು ನೀಡುವ ಕಾರ್ಯ ನಡೆಯಬಾರದು. ಆತ್ಮವಿಶ್ವಾಸ, ಮತ್ತು ಪರವಿಶ್ವಾಸಗಳನ್ನು ಉದ್ಬುದ್ಧಗೊಳಿಸಿ, ಶಾಸನದ ಹೆದರಿಕೆಯನ್ನು ದೂರಮಾಡಿ, ಪರಸ್ಪರ ಸೌಹಾರ್ದದಿಂದ ಈ ವ್ಯವಸಾಯಿಕ ಕ್ಷೇತ್ರದಲ್ಲಿ ಅಭಿರುಚಿಯುಳ್ಳವರು ದುಡಿಯುವಂತಾಗಬೇಕು. ಶಾಸನಕ್ಕೆ ತಲೆ ತಗ್ಗಿಸದೆ ನ್ಯಾಯಕ್ಕೆ ಧರ್ಮಕ್ಕೆ ಮಾತ್ರ ತಗ್ಗಿಸುವಂತಾಗಬೇಕು.

ಈಗೀಗ ಶಾಸನಿಕ ಪ್ರಣಾಳಿಯು ವ್ಯವಸಾಯ ಕ್ಷೇತ್ರದಲ್ಲಿ ತಳವೂರಿ ಬಿಟ್ಟಿದುದರಿಂದ ಆದನ್ನು ಹಿಂತೆಗೆದು ಕೊಳ್ಳುವುದು ಪ್ರಯಾಸವಾಗಬಹುದು ಆದರೆ, ಹೀಗೆ ಮಾಡಿದರೆ, ಎಂದರೆ ವ್ಯವಸಾಯ ಕ್ಷೇತ್ರವನ್ನು ಸ್ವತಂತ್ರ ವಾತಾವರಣದಲ್ಲಿ ಇರಗೊಟ್ಟರೆ, ಇದುವರೆಗೆ ತೋರದಂತಹ ಉತ್ಸಾಹದಿಂದ ಒಕ್ಕಲತನವು ನಡೆದು, ಆದರಿಂದ ಉತ್ಪಾದನೆಯು ಅಧಿಕವಾಗುವುದು. ಸಪ್ತರ ವೈವಸ್ಯವಿರುವಾಗ, ದನಿಯೇ ಆಗಲಿ, ಒಕ್ಕಲೇ ಆಗಲೀ ಪ್ರಾಮಾಣಿಕನಾಗಿ ವರ್ತಿಸುವುದಿಲ್ಲವೆಂಬುದನ್ನು ಗಮನಿಸಿದರೆ, ಇಂದಿನ ನಮ್ಮ ಆಹಾರ ಸಮಸ್ಯೆಯನ್ನು ಬಗೆಹರಿಸುವ ಏಕ ಮಾತ್ರ ಸಾಧನವೆಂದರೆ, ಒಕ್ಕಲತನದ ಅಭಿವೃದ್ಧಿ ಮತ್ತದರ ಹಿತಾಕಾಂಕ್ಷೆಗಳನ್ನು ಸ್ವತಂತ್ರವಾಗಿರಗೊಡುವುದೇ ಆಗಿದೆ.

(ಸಾಧಾರ)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%
5 ರಿಂದ 12 ,, 4½%
13 ,, 24 ,, 4¾%
ರೂ. 10,000/- ಮತ್ತ ಮೇಲಣ ಜಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%
ಚಾಲ್ತಿ ಶೇವಣಾತಿಗೆ ¾%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ಮನೆಯಿಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

●

ನಿನ್ನುಚ್ಚಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಒಂದೊವರೆ. ಒಂಭಾ ರೂಪಾಯಿ 75 ನಯೇ ಪೈಸೆ ಮನಿಯಾರ್ಡರ್ ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅತಿಥಿ ಸತ್ಕಾರ

ಕೆನೆಡದ ಪ್ರಧಾನಿ ಬೇಕರರು ಭಾರತದಲ್ಲಿ

ಸ್ವತಂತ್ರ ರಾಷ್ಟ್ರಗಳಿಗೆ ಭಾರತ-ಕೆನೆಡಗಳು ಆದರ್ಶವಾಗಲಿ

ಬ್ರಿಟಿಷ ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರವಾದ ಕೆನೆಡದ ಪ್ರಧಾನಮಂತ್ರಿ ಶ್ರೀಮಾನ್ ಜಾನ್ ಜಾರ್ಜ್ ಡೀಫನ್ ಬೇಕರ್‌ರವರ ಭಾರತವನ್ನು ಈಗಾಗಲೇ ಸಂದರ್ಶಿಸಿದ್ದಾರೆ. ಇವರು ೧೯೫೭ರ ಸಪ್ಟೆಂಬರ ತಿಂಗಳಲ್ಲಿ ಜನಿಸಿ, ತಮ್ಮ ೨೦ನೆ ವಯಸ್ಸಿನಲ್ಲಿ ಬಿ. ಎ ಪದವಿಯನ್ನೂ ೨೧ರಲ್ಲಿ ಎಂ. ಎ. ಪದವಿಯನ್ನೂ ೩೪ರಲ್ಲಿ ಎಲ್. ಎಲ್. ಬಿ. ಪದವಿಯನ್ನೂ ಪಡೆದರು, ಮೊದಲನೆಯ ಮಹಾಯುದ್ಧದ ಕಾಲಲ್ಲಿ ಶ್ರೀಯುತರು ಸೈನ್ಯಕ್ಕೆ ಸೇರಿ ಹೊರದೇಶಗಳಲ್ಲಿ ಯುದ್ಧದಲ್ಲಿ ಬಹಳ ಸೇವೆ ಸಲ್ಲಿಸಿರುವರು.

೧೯೪೩ನೆ ವರ್ಷದಿಂದಲೂ ಶ್ರೀ ಡೀಫನ್ ಬೇಕರರು ವಕೀಲ ಸಂಘದ ಪರಿಷತ್ತಿನ ಸದಸ್ಯರಾಗಿದ್ದಾರೆ. ೧೯೪೫ನೆ ಇಸವಿಯಿಂದ ಶ್ರೀಯುತರು ಸಾಮಾನ್ಯ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ೧೯೫೬ರಲ್ಲಿ ಪ್ರೋಗ್ರೆಸಿವ್ ಕನ್ಸರ್ವೇಟಿವ್ ಪಕ್ಷದ ನಾಯಕತ್ವ ವಹಿಸಿ ಇವರು ದುಡಿದರು. ಕಾಗೆನೇ ೧೯೫೭ರಲ್ಲಿ ಕೆನೆಡದ ಪಾರ್ಲಿಮೆಂಟಿನಲ್ಲಿ ವಿರೋಧೀ ಪಕ್ಷದ ನಾಯಕರಾಗಿಯೂ ಇದ್ದರು.

ಕಳೆದ ವರ್ಷ, ಕೆನಡದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು, ಸಾಮಾನ್ಯರ ಸಭೆಯ ೨೬೫ ಸ್ಥಾನಗಳಲ್ಲಿ ೧೧೩ ಸ್ಥಾನಗಳನ್ನು ಪ್ರೋಗ್ರೆಸಿವ್ ಕನ್ಸರ್‌ವೇಟಿವ್ ಪಕ್ಷವು ಪಡೆಯಿತು. ಲಿಬರಲ್ ಪಕ್ಷದ ಸರಕಾರವು ರಾಜೀನಾಮೆಯಿತ್ತುದರಿಂದಾಗಿ ಕಳೆದ ವರ್ಷ ಜೂನ್ ೨೦ರಂದು ಶ್ರೀ ಡೀಫನ್ ಬೇಕರರು ಪ್ರೋಗ್ರೆಸಿವ್ ಕನ್ಸರ್‌ವೇಟಿವ್ ಪಕ್ಷದ ಉಮೇದ್ವಾರರಾಗಿ ಪ್ರಧಾನಿಗಳ ಸ್ಥಾನಕ್ಕೆ ಬಂದರು. ಕನ್ಸರ್ವೇಟಿವ್ ಪಕ್ಷದ ನಾಯಕರು ಪ್ರಧಾನಿಪಟ್ಟವೇರಿದುದು ಈ ಹಿಂದೆಗೆಷ್ಟೋ ವರ್ಷಗಳಲ್ಲಿ, ಆ ಮೇಲಿನ ೨೨ ವರ್ಷಗಳ ದೀರ್ಘ ಕಾಲದಲ್ಲಿ ಈ ಪಕ್ಷಕ್ಕೆ ಪ್ರಧಾನಿ ಸ್ಥಾನ ದೊರೆಯದೆ ಹೋಗಿತ್ತು. ಈ ವರ್ಷದಾದಿಯಲ್ಲಿ ಎಂದರೆ, ಫೆಬ್ರುವರಿ ತಿಂಗಳಲ್ಲಿ ಪಾರ್ಲಿಮೆಂಟು ವಿಸರ್ಜನೆಯಾಗಿ ಅಲ್ಲಿ ಮರು ಚುನಾವಣೆಗಳು ನಡೆದಾಗ, ಶ್ರೀ ಡೀಫನ್ ಬೇಕರರು ಪ್ರಚಂಡ ಬಹುಮತವನ್ನು ಪಡೆದರು.

(ಇನೇ ಸುಟ ನೋಡಿರಿ)

ಕೊಳಕು ಪಾತ್ರೆಯಲ್ಲಿ ಎರೆದ ಪರಿಶುದ್ಧ ನೀರಾದರೂ ಕ್ಷಣದಲೇ ಅಶುದ್ಧವಾಗಿ ಪರಿಣಮಿಸುವುದು; ಹೀಗೆಯೇ ಕಲ್ಮಷಯುಕ್ತವಾದ ಮನಸ್ಸಿನಲ್ಲಿ ಯಾವ ಸುವಿಚಾರವಾದರೂ ಸೇರಿಕೊಂಡರೆ, ಆ ಕೂಡಲೇ ಅದು ದುರ್ವಿಚಾರವಾಗಿ ಮಾರ್ಪಡುವುದು.

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ ೩೮	ಉಡುಪಿ ೨೭-೧೧-೧೯೫೮	ವಾರ ೧೨

ಕೈ ಸುಟ್ಟುಹೋಯಿತೆ?

ಆಧುನಿಕ ಯುಗದ ಬಲಭೀಮನೆಂದು ಕರೆಯಬಹುದಾದ ವಿದ್ಯುತ್ತು ನಿಜವಾಗಿಯೂ ಔದ್ಯೋಗಿಕ ಅಭಿವೃದ್ಧಿಗೆ ಮೂಲ ಕಾರಣ. ಇಂದು ಪ್ರಗತಿಪರ ರಾಷ್ಟ್ರಗಳಲ್ಲಿ ಈ ವಿದ್ಯುತ್ತು ವಿಪುಲವಾಗಿ ದೊರೆಯುವುದರಿಂದಲೇ ಅವು ಅಂತಹ ಉಚ್ಚ ಸ್ತರವನ್ನೇರಲು ಸಾಧ್ಯವಾಗಿದೆ. ಇದರಲ್ಲಿ ಜಲವಿದ್ಯುತ್ತನ್ನು ಸುಲಭದಲ್ಲಿ ಮಸ್ತು ಬಹಳ ಲಾಭಪ್ರದವಾಗಿ ಸಿದ್ಧಗೊಳಿಸಬಹುದು—ಆನುಕೂಲತೆಗಳಿದ್ದರೆ. ಇದಕ್ಕೆ ಜಲಪಾತಗಳು ಸಹಕಾರಿಯಾಗುತ್ತವೆ. ಅಮೆರಿಕೆಯ ಪೂರ್ವ ಕರಾವಳಿಯಲ್ಲಿ ಹಲವಾರು ನದಿಗಳು ಜಲಪಾತಯುಕ್ತವಾಗಿ ಹರಿಯುವುದರಿಂದಲೇ ಅಲ್ಲಿ ಔದ್ಯೋಗಿಕ ಕೇಂದ್ರಗಳು ಬೆಳೆಯಲು ಸಾಧ್ಯವಾಯಿತು. ಇಂತಹ ನೈಸರ್ಗಿಕ ಸೌಲಭ್ಯಗಳಿರುವಾಗ, ಅವುಗಳ ಉಪಯೋಗವನ್ನು ಅವಶ್ಯಕತೆ ನಮಗೆ ಅತಿಯಾಗಿರುವಾಗ, ಅವುಗಳಿಂದ ಸದುಪಯೋಗ ಅಧವಾ ಲಾಭವನ್ನು ಪಡೆಯದೆ ಹೋದರೆ, ನಾವು ಮುರ್ಖರೆಂದೇ ಹೇಳಬೇಕು. ನಮ್ಮ ಭಾರತವಾದರಂತೂ ಔದ್ಯೋಗಿಕ ಕ್ಷೇತ್ರದಲ್ಲಿ ದಿಟ್ಟ ಹೆಜ್ಜೆಯಿಡುತ್ತಿದೆ. ಇಷ್ಟಕ್ಕೂ ವಿದ್ಯುದ್ಯೋಜನೆಗಳು ರೂಪಗೊಳ್ಳುತ್ತಿವೆ. ನಾವಿನೂತನ ಪ್ರದೇಶಗಳಿಗೆ ನೀರಾವರಿಯ ಸೌಕರ್ಯಕ್ಕೆ ಮತ್ತು ನಗರಗಳಲ್ಲಿ ಕಾರಖಾನೆಗಳನ್ನು ನಡೆಸಲು, ದೀಪವುರಿಸಲು ವಿದ್ಯುತ್ತು ಅತ್ಯಗತ್ಯವಾಗಿ ಇಂದಿನ ದಿನಗಳಲ್ಲಿದು ಅವಶ್ಯಕ ವಸ್ತುವೆನಿಸಿದೆ. ನಮ್ಮ ಮೈಸೂರು ರಾಜ್ಯವಾದರೂ ಕೆಲವಾರು ದೃಷ್ಟಿಯಿಂದ ಮುಂದುವರಿಯುತ್ತಿರುವುದಾದರೆ,ಅದು ಶಿವಸಮುದ್ರ ಮತ್ತು ಜೋಗದ ಜಲವಿದ್ಯುತ್ತಿನಿಂದಲೇ ಎಂದು ಹೇಳಲೇ ಬೇಕಾಗುತ್ತವೆ.

ಆದರೆ, ರಾಜ್ಯ ವಿಸ್ತಾರವಾದೊಡನೆಯೇ ಜನತೆಯು ಬೇಡಿಕೆಗಳು ಹೆಚ್ಚಿದೊಡನೆಯೇ ಅಭಿವೃದ್ಧಿ ಯೋಜನೆಗಳು, ಔದ್ಯಮಿಕ ಕ್ಷೇತ್ರಗಳು ಬೆಳೆದೊಡನೆಯೇ ಅವುಗಳನ್ನು ಶೃಪ್ತಿ ಪಡಿಸಲು ಇನ್ನೂ ವಿದ್ಯುಚ್ಛಕ್ತಿ ಬೇಕು. ನಮ್ಮಲ್ಲಿಯೂ ಬೇಡಿಕೆಗಳು ದಿನೇದಿನೇ ಹೆಚ್ಚುತ್ತಿದ್ದು, ಕವನ್ನು ಪೂರೈಸಲೇಗ ಸಾಧ್ಯವಲ್ಲವಾಗಿದೆ. ಇನ್ನೂ ದಿನದಿಂದ ದಿನಕ್ಕೆ ಈ ಬೇಡಿಕೆಗಳು ಏರುತ್ತಲೇ ಹೋಗುತ್ತವೆ, ಆಗ, ನಮಗೊಂದು ವಿದ್ಯುದ್ಯೋಜನೆಯು ಆಗತ್ಯವೆಂಬುದು ನಿರ್ವಿವಾದ. ಜಲವಿದ್ಯುತ್ತನ್ನು ಉತ್ಪಾದಿಸುವ ಸೌಕರ್ಯಗಳಲ್ಲವಾದರೆ, ಅದೂಂದು ತೆರ. ಆದರೆ, ನಮ್ಮಲ್ಲ ಇಂತಹ ಅನುಕೂಲಜೆ ನೂರುಪಟ್ಟಿರುವಾಗ, ನೈಸರ್ಗಿಕ ಸ್ರೋಮವನ್ನು ನಾವು ಕಂಡೂ ಕಾಣದಂತೆ ಕೂತರೆ, ಅದರಿಂದ ಬರುವ ಸುರುಷಾರ್ಧವೇನೂ ಇಲ್ಲ. ಶರಾವತಿ ಮತ್ತು ಶಿಂಷಾ ಎಂಬ ಎರಡು ಯೋಜನೆಗಳಲ್ಲಿ ಶರಾವತಿಯೊಂದನ್ನು ಪ್ರಾರಂಭಿಸುವ ಆಲೋಚನೆಯು ದ್ವಿತೀಯ ಯೋಜನೆಯ ಕರಡು ಸಿದ್ಧವಾಗುವಾಗ ಇದ್ದರೂ, ಈಗ ಈ ದ್ವಿತೀಯ ಯೋಜನೆಯು ಅರ್ಧದಷ್ಟು ಮುಗಿಯುತ್ತ ಬಂದರೂ ಶರಾವತಿಯ ಪ್ರಸ್ತಾಪನೇ ಇಲ್ಲ. ಮೈಸೂರು ಸರಕಾರವಾದರೂ ತನಗೆ "ಶರಾವತಿ" ಯೋಜನೆಯು ಬೇಕೇ ಬೇಕು ಎಂದು ಈಗ ಅನ್ನುತ್ತಿದೆ ಯಾದರೂ ಈ ಬಗ್ಗೆ ಯೋಜನೆಯು ಸಿದ್ಧವಾಗುವಾಗ, ಅದರ ತಿರುಳನಲ್ಲಿ ಸೇರಿಸಲಿಂತೆ ಯಾವ ಕಾರ್ಯಕ್ರಮವು ಕೈಗೊಂಡಿತು ಎಂದು ತಿಳಿಯುತ್ತಿಲ್ಲ. ಜನತೆಯೂ ಪತ್ರಿಕೆಗಳೂ ಇಂತಹ ಯೋಜನೆ ಅತ್ಯಗತ್ಯವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ; ನಮ್ಮ ಮಂತ್ರಿಗಳೂ ನಾಯಕರೂ ಸಂಚರಿಸುತ್ತಿರುವಾಗ ಒಪ್ಪಿಸಿದ ಮನವಿಗಳಲ್ಲಿಯೂ ಇದನ್ನು ಸೂಚಿಸಿದ್ದಾರೆ. ಆದರೆ, ಮಹಶೀಯರು ಯೋಜನೆ ಆಗತ್ಯವೆಂದೂ ಸರಕಾರ ಪ್ರಯತ್ನಿಸುವುದೆಂದೂ ಹೇಳಿ ಹೋಗುತ್ತಾರೆ; ಆದರೆ, ಇಂತಹ ಪ್ರಯತ್ನ ದೃಢವಾಗಿ ನಡೆದಿದೆ ಎಂದು ಕಳಿ ಬರುವುದಿಲ್ಲ. ನೆರೆರಾಜ್ಯಗಳವರು ತಮಗೆ ಬೇಕಾದುದನ್ನು ಯೋಜನೆಯಲ್ಲಿ ಸೇರಿಸುವಲ್ಲಿ ರಜ್ಜೆಹಿಡಿದಾದರೂ ಜಯಶೀಲರಾಗುತ್ತಿರುವಾಗ ಮೈಸೂರಿನಿಂದ ಮಾತ್ರ ಇಂತಹ ಕೆಲಸವಾಗುವುದಿಲ್ಲವೆಂಬುದರ ಅರ್ಥವೇನೆಂದು ತಿಳಿಯುವುದಿಲ್ಲ. ಇತ್ತೀಚೆಗೆ ಮೈಸೂರಿಗೆ ಯಾವುದೇ ನ್ಯಾಶನವು ದೊರೆಯುತ್ತಿಲ್ಲವೆಂಬುದೂ ಒಂದು ದೂರು. ಪ್ರಬುದ್ಧ ಬಂದರು, ಹಡಗು ಕಟ್ಟುವ ಅಂಗಣ, ಅದರೊಂದಿಗೆ ಶರಾವತೀ ಯೋಜನೆ. ಇವೆಲ್ಲವೂ ಕೈಬಿಟ್ಟುಂತೆಯೆ ಆದರೆ, ಮತ್ತೆ ಮೈಸೂರಿಗೇನು? ಸುಮ್ಮನುಮ್ಮನೆ ಸಾಧಿಸದೆ ಕೇಂದ್ರ ಸರಕಾರವು ದಕ್ಷಿಣ ಭಾರತವನ್ನು ಮಲತಾಯಿ ದೃಷ್ಟಿಯಿಂದ ನೋಡುತ್ತಾರೆಂದು ಪೂರಕೊಂಡರೆ ಪ್ರಯೋಜನವಿದೆಯೆ? ಸಮದೃಷ್ಟಿಯಿಂದೀಕ್ಷಿಸುವಂತೆ, ರಾಜ್ಯ ಸರಕಾರವೂ ಲೋಕಸಭಾ ಸದರೂ ಸಾಧಿಸಬೇಕು; ಕಾರ್ಯಪ್ರವೃತ್ತರಾಗಬೇಕು. ಅದು ಬಿಟ್ಟು, ಮನೆಗೆ ಬೆಂಕಿ ಬಿದ್ದಿತೆಂದು ತಿಳಿದಾಗ ಕೇವಲ ಕೂಗಾಡಿದರ ಕೈಗೆ ದೊರೆಯುವುದೇನು? ದ್ವಿತೀಯ ಯೋಜನೆಯ ತಿರುಳಲ್ಲಿ ಶರಾವತಿ, ಬರೆಬೊಳೆ ಇಲ್ಲವೆ ಶಿಂಷಿ ಇವುಗಳಲ್ಲಿ ಒಂದೂ ಸೇರುವಂತೆ ಪ್ರಯತ್ನಿಸದೆ ಅಂಥ್ಯ, ಮದ್ರಾಸಗಳ ಸಾಧನೆಗೆ ಕದುಬಿ ಕೊಂಡರೆ ವ್ಯರ್ಥಪ್ರಯತ್ನ ತಾನೆ?

ಈ ಎಲ್ಲಾ ಸೋಲುಗಳಿಗೆ ಕಾರಣವನ್ನರಸುವಾಗ, ಸರಕಾರದ ದುರ್ಬಲತೆಯೇ ಎದುರು ಬರುತ್ತದೆ. ವಿಧಾನ ಸಭೆಯಲ್ಲಿ ಶರಾವತಿ ಯೋಜನೆಯನ್ನು ದ್ವಿತೀಯ ಯೋಜನೆಯ ತಿರುಳಲ್ಲಿ ಸೇರಿಸಬೇಕೆಂಬ

ಸಂಕ್ಷಿಪ್ತ ಸುದ್ದಿಗಳು

ಸಂಕುಚಿತ ರಾಷ್ಟ್ರೀಯತೆ

ತೀವ್ರಗತಿಯಲ್ಲಿ ಬದಲಾಗುತ್ತಿರುವಸ್ಥ ಸಂಚದ ಪರಿವರ್ತನೆಯ ವೇಗದಲ್ಲಿ ರಾಷ್ಟ್ರೀಯವಾದವೂ ಸಂಕುಚಿತವಾಗಿ ಕಂಡು ಇದರ ಸ್ಥಳದಲ್ಲಿ ಅಂತಾರಾಷ್ಟ್ರೀಯತೆಯು ಕಂಡುಬರುತ್ತಿದೆ. ಆದರೆ, ಜನರ ಮನಸ್ಸಿನಲ್ಲಿ ಮಾತ್ರ ಈ ಬದಲಾವಣೆಯು ಆಗದಿರುವುದು ಆಶ್ಚರ್ಯ. ಅತ್ಯಂತ ಉಚ್ಚಮಟ್ಟದ ಮತ್ತು ಉದಾತ್ತ ವಿಚಾರಗಳನ್ನು ಪ್ರತಿಪಾದಿಸುವ ದೇಶಗಳಲ್ಲಿಯೇ ಮಾರಕಾಸ್ತ್ರಗಳ ದೊಡ್ಡ ಸಂಗ್ರಹವಿರುತ್ತದೆ. ಈಗ ಎದ್ದಿರುವ ತೊಡಕುಗಳನ್ನು ನಾವು ಪರಿಷತ್ತಿನಲ್ಲಿ ಶ್ರೀ ನಿಜಲಿಂಗಪ್ಪ, ಶ್ರೀ ಎಂ. ಎಂ. ಜೆನ್ನ ಬಸಪ್ಪ ಶ್ರೀ ಜಗನಾಥರಾವ ಜೋಡರಕೆಯವರೂ ಭಾಗ ವಹಿಸಿದ್ದರು. ಮೈಸೂರು ಪ್ರ. ಸ. ಪಕ್ಷದ ಧುರೀಣ ಶ್ರೀ ಜೆ. ಎಂ. ಇಮಾಮರು ಈ ಪರಿಷತ್ತನ್ನು ಉದ್ಘಾಟಿಸಿದರು.

ಡಿಗಾಲೆ ದಿಗ್ವಿಜಯ

ಫ್ರಾನ್ಸಿನಲ್ಲಿ ನಡೆದ ಚುನಾವಣೆಗಳಲ್ಲಿ ಜ| ಡಿಗಾಲೆ ಸಂಪೂರ್ಣ ಯಶಸ್ಸು ಪಡೆದಿದ್ದಾರೆ. ಅವರನ್ನು ಬೆಂಬಲಿಸುವ ಹೆಚ್ಚಿನ ಉಮೇದವಾರರು ಗೆದ್ದು ಬಂದಿದ್ದಾರೆ. ವಿರೋಧೀ ಪಕ್ಷಗಳ ಬಾಲಮುಡುಕು ಹೋಗಿದೆ. ಫ್ರಾನ್ಸಿನ ಜನತೆಯ ಪ್ರಜಾರಾಜ್ಯದ ಸ್ಥಾಪಕರೂ ಅದರ ಪ್ರಧಾನ ಮಂತ್ರಿಯೂ ಆದ ಡಿಗಾಲೆಯವರ ಸರಕಾರದಲ್ಲಿ ಜನತೆಗಿರುವ ವಿಶ್ವಾಸದಿಂದಲೇ ಅವರ ಮಂತ್ರಿ ಮಂಡಳಿಯ ಅರು ಜನರೂ ಗೆದ್ದು ಬಂದಿದ್ದಾರೆ. ಮುಖ್ಯ ವಿರೋಧೀ ಪಕ್ಷವಾದ ಕಮ್ಯುನಿಸ್ಟ್ ಪಕ್ಷವು ಈ ಬಾರಿ ನೂರಕ್ಕೆ ಕೇವಲ ಗಿಪರಷ್ಟು ಮತಗಳನ್ನು ಪಡೆದು ವಿಪರೀತ ಸೋಜಯಕ್ಕೆ ಈಡಾಗಿದೆ. ಉಳಿದ ವಿರೋಧೀ ಪಕ್ಷಗಳಿಗೆ ಇದಕ್ಕಿಂತಲೂ ಕಡಿಮೆ ಮತಗಳು ಬಿದ್ದಿದ್ದುದರಿಂದ ಡಿಗಾಲೆಯವರ ಕೆರಿಟಕ್ಕೆ ನವಿಲುಗರಿ ಸಿಕ್ಕಿಸಿದಂತಾಗಿದೆ.

ಮನರಂಜನಾಕರ

ಮೈಸೂರು ವಿಧಾನ ಸಭೆಯಲ್ಲಿ ಮನರಂಜನೆಯಕರನಲ್ಲಿ ನ್ಯಾಶನಿಕ ಸಂಸ್ಥೆಗಳಿಗೆ ವಾಲೀಯುವ ಒಂದು ವಿಧೇಯಕವನ್ನು ಸ್ವೀಕಾರವಾಯಿತು ವಾಣಿಜ್ಯಕರ ಕಮಿಶನರಿಂದ ಮನ್ನಣೆ ಪಡೆದ ಯಾವುದೇ ಲಾಭವಿಲ್ಲದ ಶಿಕ್ಷಣಸಂಸ್ಥೆಗಳು, ಮತ್ತು ಕ್ರೀಡಾ ಸಂಘಗಳು ನಡೆಸುವ ಆಟಗಳು ಮತ್ತು ಕ್ರೀಡೆಗಳ ಮೇಲೆ ಕರವನ್ನು ಈ ವಿಧೇಯಕದಂತೆ ಆಕರಿಸಲಾಗುವುದಿಲ್ಲ. ವಾಣಿಜ್ಯಕರ ಕಮಿಶನರಿಂದ ಮನ್ನಣೆ ದೊರೆತ ಸಂಘಗಳು ನಡೆಸುವನಾಟಕ ಕಾರ್ಯಕ್ರಮಗಳು, ಕಂಸ್ತಿ ಪಂದ್ಯಾವಳಿಗಳು ಹಾಗೂ ಸಂಗೀತ ಕಾರ್ಯಕ್ರಮಗಳಿಗೂ ಈ ಕರವು ಹೇರಲ್ಪಡುವುದಿಲ್ಲ.

ಗೊತ್ತುವಳಿಯನ್ನು ಶ್ರೀ ಕೆಂಗಲ್ ಹನುಮಂತಯ್ಯನವರು ತಂದಾಗ ಎಲ್ಲರೂ ಸ್ವಾಗತಿಸಿದರೆಂದು ವರದಿಯಾಗಿದೆ. ಈ ಸಂದರ್ಭದಲ್ಲಿ, ಶ್ರೀ ಹನುಮಂತಯ್ಯನವರು ಆಡಿದ "ನೈಸೂರಿನ ನಾಯಕರು ಹೆಚ್ಚೆಚ್ಚು ದುರ್ಬಲರಾಗುತ್ತ ನಡೆದಿರುವುದು ವಿಷಾದಕರ ಸಂಗತಿ" ಎಂಬ ಮತ್ತು ವಿರೋಧೀ ಪಕ್ಷದ ಶ್ರೀ ಸಿ. ಜೆ. ಮಲ್ಲಾರಾಧ್ಯರ "ಅಧಿಕಾರಾರೂಢ ಪಕ್ಷವು ಕಾಲ ಕಾಲಕ್ಕೆ ಮಂತ್ರಿ ಮಂಡಳಿಗಳನ್ನುರುಳಿಸುವುದರಲ್ಲಿಯೇ ವೇಳೆಕಳೆಯದೆ ಇಂಥ ಯೋಜನೆಗಳ ಬಗ್ಗೆ ಲಕ್ಷ್ಯಹರಿಸಿದ್ದರೆ ಎಷ್ಟೋ ಪ್ರಗತಿ ಸಾಧ್ಯವಿತ್ತು" ಎಂಬ ಉದ್ಗಾರಗಳು ಉಲ್ಲೇಖಾರ್ಹವಿವೆ. ಪ್ರಾಯಃ ಈ ಜಾರಿ ನಮ್ಮೆಲ್ಲ ಯೋಜನೆಗಳೂ ಕೈ ಬಿಟ್ಟುವೆಂದೇ ಹೇಳಬಹುದು. ಕೇಂದ್ರ ಸರಕಾರವು ಅಖಿಲ ಭಾರತದ ದೃಷ್ಟಿಯನ್ನಿಟ್ಟುಕೊಳ್ಳಲೇಬೇಕಾದರೂ ಆದರಲ್ಲಿ ರಾಜ್ಯಗಳ ಹಿತಚಿಂತನೆಯನ್ನು ಅಲಕ್ಷಿಸುವುದು ಸಮವಲ್ಲವಾದುದರಿಂದ, ನಮ್ಮ ರಾಜ್ಯ ಶಾಸನ ಸಭೆಯು ಈ ಬಗ್ಗೆ ಕೇವಲ ಗೊತ್ತುವಳಿಯನ್ನು ಸ್ವೀಕರಿಸಿ ಸುಮ್ಮನಿರದೆ, ಈ ಯೋಜನೆಯು ಕೂಡಲೇ ಕೈಗೊಳ್ಳಲ್ಪಡುವಂತೆ ತ್ವರಿತಗತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು; ಯೋಜನಾ ಆಯೋಗದೊಡನೆ ಚರ್ಚಿಸಿ, ಬಲವಂತದಿಂದಾದರೂ ಶರಾವತಿ ಯೋಜನೆಯನ್ನು ಈಗಾಗಲೇ ವ್ಯಾಪಾರಂಭಿಸುವಂತೆ ನೋಡಿಕೊಳ್ಳಬೇಕು; ನಮ್ಮ ಮಂತ್ರಿಮಂಡಲಿಯ ಹಾಗೂ ಇತರ ನಾಯಕ ಪ್ರಧಾನರ ಪಾತ್ರವೂ ಈ ವಿಷಯದಲ್ಲಿ ಕಿರಿದಲ್ಲ. ನಮ್ಮ ಪ್ರತಿನಿಧಿಗಳು ಈ ಸಾಹಸದ ಕಾರ್ಯದಲ್ಲೇಗ ಕೃತಕೃತ್ಯರಾದರೆ, ಆಗ ನಿಜವಾಗಿಯೂ ಆಭಿನಂದನಾರ್ಹರಾಗುತ್ತಾರೆ; ನಮ್ಮ ಪ್ರಾತಿನಿಧ್ಯವನ್ನು ಸಂಯಾಗಿ ಉಪಯೋಗಿಸಿಕೊಂಡ ಕೀರ್ತಿಗೆ ಭಾಗಿಗಳಾಗುತ್ತಾರೆ. ಈಗಂದೀಗಲೇ ಇವರು ಕಾರ್ಯೋನ್ಮುಖರಾಗಿ ಮುನ್ನಡೆಯಲಿ ನಿರ್ದೇಯಿಂದೆಚ್ಚತ್ತಿರುವಾಗಲೇ ಕರ್ತವ್ಯ ಸಾಧಕರಾಗಲಿ.

ಕಾರವಾರ ಜಿಲ್ಲೆಗಳ ಕನ್ನಡಿಗರ ಪರಿಷತ್ತು

ದಿನಾಂಕ ೩೦ರಂದು ಶ್ರೀ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರ್ಪಿ ಒಮ್ಮೆ ನಿಶ್ಚಿತವಾದ ಗಡಿ ಪ್ರಶ್ನೆಯನ್ನು ಮುನಃ ಎತ್ತಬಾರದು ಎಂದು ನಿರ್ಣಯಿಸಿತು. ಈ ಪರಿಷತ್ತಿನಲ್ಲಿ ಸುಮಾರು—೨೦ ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದರು. ಮಹಾರಾಷ್ಟ್ರೀಯರು ಈಗ ಕೈಗೊಂಡಿರುವ ಸತ್ಯಾಗ್ರಹವು ಕೇವಲ ದುರಾಗ್ರಹವಾಗಿದೆ; ಅಲ್ಲದೇ ಮಹಾರಾಷ್ಟ್ರೀಯರಿಗೆ ಅಪಕೀರ್ತಿಯನ್ನು ತರುವಂತಹುದಾಗಿದೆ ಸದ್ಯದ ಮೈಸೂರಿನ ಗಡಿಯಲ್ಲಿ ಒಂದಿಂಚು ಸ್ಥಳವೂ ಹೊರಗೆ ಹೋಗುವುದಿಲ್ಲವೆಂದು ಶ್ರೀ ಹನುಮಂತಯ್ಯನವರು ಘೋಷಿಸಿದರು. ಈ ಪರಿಷತ್ತಿನಲ್ಲಿ ಶ್ರೀ ನಿಜಲಿಂಗಪ್ಪ, ಶ್ರೀ ಎಂ. ಎಂ. ಜೆನ್ನ ಬಸಪ್ಪ ಶ್ರೀ ಜಗನಾಥರಾವ ಜೋಡರಕೆಯವರೂ ಭಾಗ ವಹಿಸಿದ್ದರು. ಮೈಸೂರು ಪ್ರ. ಸ. ಪಕ್ಷದ ಧುರೀಣ ಶ್ರೀ ಜೆ. ಎಂ. ಇಮಾಮರು ಈ ಪರಿಷತ್ತನ್ನು ಉದ್ಘಾಟಿಸಿದರು.

ಸೂಚನೆ

'ನವಯುಗ'ದ ಚಂದಾಹಣ ಬಾಕಿ ಇರುವ ಚಂದಾದಾರರಿಗೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಿಕೊಡಲಾಗುವುದು. ದಯವಾಡಿ ಅವರು ಅದನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕಾಗಿ ಕೇಳಿಕೊಳ್ಳುತ್ತೇವೆ.

—ಮೆನೇಜರ್.

ಅಲ್ಲಲ್ಲಿಯ ಸುದ್ದಿಸಾರ

ಗ್ರಾಮ ಪಂಚಾಯತುಗಳ ನಿಯೋಗ—ದ. ಕ ಜಿಲ್ಲೆಯ ಗ್ರಾಮ ಪಂಚಾಯತುಗಳ ಕಡೆಯಿಂದ ಶ್ರೀ ಎ. ಭೀಮ ಭಟ್ಟರ ನಾಯಕತ್ವದಲ್ಲಿ ಶ್ರೀಗಳಾದ ಎ. ಕೃಷ್ಣ ಶೆಟ್ಟಿ, ಕೆ. ಸೀತಾರಾಮ ಶೆಟ್ಟಿ, ವಿ. ಸುಬ್ರಾಯ ಭಟ್, ಎಮ್. ಗೋಪಾಲ ಕೃಷ್ಣ ಪೈ ಮತ್ತಾ ಜತ್ತಕ್ಕ ರೈಗಳಿರುವ ನಿಯೋಗವೊಂದು ಬೆಂಗಳೂರಿಗೆ ಹೋಗಿ ತಾ. 19ರಂದು ಸ್ಥಾನಿಕ ಸ್ವರಾಜ್ಯ ಮಂತ್ರಿಗಳಿಗೆ ಮತ್ತು 1958ನೇ ಗ್ರಾಮ ಪಂಚಾಯತ ಕಾಯಿದೆಗೆ ಹೊಗೂ ರೂಲ್ಸ್ ಬೋರ್ಡುಗಳ ವಿಶೇಷತೆಗಳನ್ನು ಪರಿಶೀಲಿಸುತ್ತಿರುವ ಪರಿಶೀಲಕ ಸಮಿತಿಗೆ ಮನವಿಯೊಂದನ್ನು ಅರ್ಪಿಸಿತು. ಮನವಿಪತ್ರದಲ್ಲಿ ಈ ಕೆಳಗಿನ ಬೇಡಿಕೆಗಳಿವೆ: (1) ಪಂಚಾಯತುಗಳಿಗೆ ಹೆಚ್ಚಿನ ಅಧಿಕಾರ ಹಾಗೂ ಸಂಪೂರ್ಣ ಸ್ವಾಯತ್ತತೆ ಕೊಡಬೇಕು (2) ಗ್ರಾಮ ಪಂಚಾಯತುಗಳ ಚೇರ್ಮನ್ ಹುದ್ದೆಗಳಿಗಾಗಿ ಪ್ರತ್ಯೇಕ ಖಾತೆ ಇರಬೇಕು. (3) ಪಂಚಾಯತುಗಳಿಗೆ ಪ್ರತ್ಯೇಕ ಇಂಜಿನಿಯರಿಂಗ್ ಕಾಖೆಯಿರಬೇಕು (4) ಜಿಲ್ಲಾ ಅಭಿವೃದ್ಧಿ ಮಂಡಲಕ್ಕೆ ಅಧಿಕಾರೇತರರೇ ಅಧ್ಯಕ್ಷರಾಗಬೇಕು (5) ಪಂಚಾಯತುಗಳಿಗೆ ನ್ಯಾಯದಾನದ ಅಧಿಕಾರ ಕೊಡಬೇಕು (6) ಪಂಚಾಯತುಗಳಿಗೆ ಭೂಕಂದಾಯದಲ್ಲಿ ನೂರಕ್ಕೆ 35 ಭಾಗವನ್ನು ಕೊಡಬೇಕು (7) ಯಾವುದೇ ಸ್ಥಳೀಯ ಸಂಸ್ಥೆಗಳಿಗೆ ನಾಮಕರಣ ಮಾಡುವ ಪದ್ಧತಿ ಇರಬಾರದು.

ಯೋಜನಾ ವಿಚಾರ ಗೋಷ್ಠಿ—ಬೆಳ್ತಂಗಡಿ ತಾಲೂಕಿನ ತೋಟತ್ತಡಿ ಎಂಬಲ್ಲಿ ಇದೇ ತಾ. 22ರಲ್ಲಿ ಕೆಸ್ತೂರ್ಬಾ ಗ್ರಾಮಾಂತರ ಆರೋಗ್ಯ ಕೇಂದ್ರದಲ್ಲಿ ಅಖಿಲ ಭಾರತ ಮಹಿಳಾ ಪರಿಷತ್ತಿನ ಕರ್ನಾಟಕ ಶಾಖೆಯ ಆಶ್ರಯದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನಾ ವಿಚಾರ ಗೋಷ್ಠಿಯು ಕಸ್ತೂರ್ಬಾ ಟ್ರಸ್ಟಿನ ಕರ್ನಾಟಕ ಶಾಖೆಯ ಸಂಘಟನಾಧಿಕಾರಿಣಿ ಶ್ರೀಮತಿ ಉಮಾಬಾಯಿ ಕುಂದಾಪುರ ಇವರಿಂದ ಉದ್ಘಾಟಿಸಲ್ಪಟ್ಟಿತು. ಶೇಕಡಾ 80ರಷ್ಟು ಜನರು ಹಳ್ಳಿಗಳಲ್ಲಿರುವುದರಿಂದ ಸಣ್ಣ ಸಣ್ಣ ಗ್ರಾಮೋದ್ಯೋಗಗಳೇ ಭಾರತದ ಉನ್ನತಿಗೆ ಮೂಲವೆಂದೂ, ನನ್ನಲ್ಲಿ ಸ್ವಾವಲಂಬನ ಅತ್ಯಗತ್ಯವೆಂದೂ ಶ್ರೀಮತಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು. ಆರೋಭದಲ್ಲಿ ಶ್ರೀ ರಾಘವ ಹೆಬ್ಬಾರರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಬಿ. ಅನಂತ ಇವರತ್ತಾಯರು ಆಭಾರ ಸೂಚಿಸಿದರು.

ಇದೇ ಸಂದರ್ಭದಲ್ಲಿ ಶ್ರೀಮತಿ ಉಮಾಬಾಯಿ ಕುಂದಾಪುರ ಇವರ ಅಧ್ಯಕ್ಷತೆಯಲ್ಲಿಯೇ ಮಂಗಳೂರಿನ ಭಗಿನೀ ಸಮಾಜದ ಆಶ್ರಯದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವು ನೆರವೇರಿ, ಸ್ತ್ರೀಯರ ಉನ್ನತಿಪರವಾದ ರಚನಾತ್ಮಗಳಾದುವು. ಆಲ್ಲದೆ ಜಂಧ್ಯಗಿರಿ ಹೊಳೆಯು ಉತ್ತರ ಭಾಗವು ಮೈಸೂರಿಗೆ ಸೇರಬೇಕೆಂಬ ಶ್ರೀಮತಿ ಉಮಾ ವಿ. ಕಾನಾಡರ ನಿರ್ಣಯವೂ ಮಂಜೂರಾಯಿಸಿ ಅಂತ್ಯದಲ್ಲಿ ಶ್ರೀಮತಿ ಕಲ್ಯಾಣಿ ಡಿ. ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಶ್ರೀರಾಮಕೃಷ್ಣ ಯಕ್ಷಗಾನ ಮಂಡಳಿ ಅನಂತಾಡಿ—ಇದರ ಆಶ್ರಯದಲ್ಲಿ ಶ್ರೀ ಬಿ ವಿ ರೈ ಸ್ಮಾರಕ ಯಕ್ಷಗಾನ ಕಲಾ ಭವನದ ಶಂಕು ಸ್ಥಾಪನೆಯನ್ನು ತಾ 17ರಂದು ಪುತ್ತೂರು ಬಿ ಮುನ್ಸಿಫ್ ಶ್ರೀ ಚಂದ್ರಶೇಖರ ಹೆಗ್ಡೆಯವರು ನೆರವೇರಿಸಿದರು. ಪುತ್ತೂರು ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಕೆ ವೇದಾ ಗೋಪಾಲ ನಾಯಕ್, ಪಿ. ಶ್ರೀನಿವಾಸರಾವ್ ಮೊದಲಾದವರು ಕಾರ್ಯೋಚಿತ ಭಾಷಣಗೈತ್ತರು ಶ್ರೀ ಡಿ ವಿಶ್ವನಾಥ ಶೆಟ್ಟರು ಧನ್ಯವಾದ ಗಳನ್ನಿತ್ತರು.

ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಮನ್ನಣೆ—ಕರ್ನಾಟಕ ಯುನಿವರ್ಸಿಟಿಗೆ ಸಂಯೋಜಿಸಲ್ಪಟ್ಟಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಎಮ್. ಬಿ ಬಿ ಎಸ್. ಡಿಗ್ರಿಗೆ ಇಂಡಿಯನ್ ಮೆಡಿಕಲ್ ಕೌನ್ಸಿಲು ಮನ್ನಣೆ ಕೊಟ್ಟಿರುವುದಾಗಿ ತಿಳಿದು ಬರುತ್ತದೆ. ಮೆಡಿಕಲ್ ಕಾಲೇಜು ಪ್ರಾರಂಭವಾದ ಇಷ್ಟು ಅಲ್ಪ ಸಮಯದಲ್ಲೇ ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಮನ್ನಣೆಯನ್ನು ಪಡೆಯುತ್ತಿರುವುದು ಬಹುಶಃ ಇದು ಮೊದಲನೇ ಬಾರಿಯಾಗಿದೆ ಎಂದೆನ್ನಲಾಗಿದೆ

ಭಾವ ಚಿತ್ರಗಳ ಅನಾವರಣಉಡುಪಿ ನಗರಸಭಾಧ್ಯಕ್ಷರಾದ ಶ್ರೀ ಯು. ಎಸ್ ನಾಯಕ್ ಎಂ ಎಲ್. ಎ; ಮತ್ತು ಡಾ| ಪಿ. ವಿ. ಖಾನ್ಕರಾಯರ ಭಾವಚಿತ್ರಗಳನ್ನು ಇದೇ ತಾ 23ನೇ ನಂಜೆ ಮಹಾತ್ಮಗಾಂಧಿ ಬೇಸಿಕ್ ಎಜುಕೇಶನ್ ಕಾಲೆಯಲ್ಲಿ ಶ್ರೀಗಳಾದ ಆರೂರು ಲಕ್ಷ್ಮಿನಾರಾಯಣರಾವ್ ಮತ್ತು ರಿಟೈರ್ಡ್ ಕಲೆಕ್ಟರ್ ಶ್ರೀ ಯಂ. ಬಿ. ಶಂಕರರಾಯರು ಅನುಕ್ರಮವಾಗಿ ಅನಾವರಣ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವಕೀಲ ಸಂಘದ ಅಧ್ಯಕ್ಷ ಶ್ರೀ ಬಿ. ಶೀನಪ್ಪ ಹೆಗ್ಡೆಯವರು ವಹಿಸಿದ್ದರು. ರಾವ್ ಬಹದ್ದೂರ್ ಶ್ರೀ ಕೆ ಕೃಷ್ಣಯ್ಯನವರೂ ಶ್ರೀ ಬೈಲೂರು ವಾಸುದೇವರಾಯರೂ ಸಂದರ್ಭೋಚಿತ ಭಾಷಣವಿತ್ತರು. ಆರಂಭದಲ್ಲಿ ಸ್ವಾಗತ ಸಮಿತಿಯ ನಿತಿಯಿಂದ ಶ್ರೀ ಎನ್ ಸೀತಾರಾಮ ಕಾಮತರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ ಬೈಲೂರು ವಾಸುದೇವರಾಯರು ಧನ್ಯವಾದಗಳನ್ನರ್ಪಿಸಿದರು ಈ ಭಾವ ಚಿತ್ರಗಳು ಉಡುಪಿ ನಗರ ಸಭಾಭವನದಲ್ಲಿ ಇಡಲಾಗುವಂತೆ ನಗರ ಸಭೆಗೆ ಉಚಿತವಾಗಿ ಕೊಡಲ್ಪಡುವುವು.

ಉಡುಪಿ ಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಶ್ರೀ ಕೆ ಆರ್ ಕಾರಂತರು ರಾಜಕೀಯ ಪಕ್ಷಗಳ ಭವಿಷ್ಯದ ಕುರಿತು ಭಾಷಣವಿತ್ತರು ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಟಿ ಚಂದ್ರಶೇಖರಯ್ಯರು ಸ್ವಾಗತಿಸಿದರು. ಕೊನೆಗೆ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ಶ್ರೀ ಎಂ ಎಸ್. ಆಧಿಕಾರಿಗಳು ಆಭಾರ ಮನ್ನಿಸಿದರು.

ಎಂ ಜಿ ಎಂ. ಕಾಲೇಜಿನ-ಕಾಮರ್ಸ್ ಎಸೋಸಿಯೇಶನ ಆಶ್ರಯದಲ್ಲಿ ಇದೇ ತಾ 22ರಂದು ಡಾ|ಯು. ಸುಂದರರಾಯ ವೈಗಳ ಅಧ್ಯಕ್ಷತೆಯಲ್ಲಿ 'ಬ್ಯಾಂಕಿಂಗ್' ಎಂಬ ಕುರಿತು ವಿಚಾರ ಗೋಷ್ಠಿಯೊಂದು ಯಶಸ್ವಿಯಾಗಿ ನೆರವೇರಿತು ಶ್ರೀ ಟಿ ಕೃಷ್ಣರಾಯರಿಂದ ಸ್ವಾಗತ, ಪ್ರಿನ್ಸಿಪಾಲ್ ಶ್ರೀ ಟಿಜಿ ಸುಂದರರಾಯರಿಂದ ವಿಚಾರ ಗೋಷ್ಠಿಯ ಆರಂಭೋತ್ಸವ ಶ್ರೀ ಟಿ ಎ. ವೈಗಳಿಂದ ಸಭಯ ಸೂಚನಾ ಭಾಷಣಗಳಾದ ಮೇಲೆ ಶ್ರೀಗಳಾದ ಸಿ ಜಿ ಕಿಣಿ, ಕೆ ಎಸ್ ಕಾಮತ್, ಎಚ್.ಎನ್ ರಾವ್ ಟಿ ವಾಸುದೇವರಾವ್ ಇವರು ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿ ವಿಚಾರ ಪರವಾದ ತಮ್ಮ ತಮ್ಮ ಪತ್ರಗಳನ್ನು ಓದಿದರು. ಅಧ್ಯಕ್ಷ ಭಾಷಣವಾದ ಮೇರೆ ಕಾರ್ಯದರ್ಶಿ ಕೆ ರಾಘವೇಂದ್ರ ಪೈಯವರು ಧನ್ಯವಾದಗಳನ್ನರ್ಪಿಸಿದರು.

ಮರವಂತೆ ಟೂರ್ನಮೆಂಟ್—ಶ್ರೀ ಬಾಳೆಕಾಯಿ ವೆಂಕಟಾಂತ ರೆಡ್ಡಿ ಸ್ಮಾರಕ ನಿಶಾಲ ಮೈಸೂರು ವಾಲಿಬಾಲ್ ಟೂರ್ನಮೆಂಟು ಇದೇ ತಾ 29ರಂದು ಪ್ರಾರಂಭವಾಗಬೇಕಾಗಿದ್ದನ್ನು ತಾ. 5-12-58ಕ್ಕೆ ಮುಂದಕ್ಕಿಡಲಾಗಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ

ಧರ್ಮಸ್ಥಳ ದೀಪೋತ್ಸವ—ತಾ. 6-12-58ರಲ್ಲಿ ಆರಂಭವಾಗಿ ತಾ 10-12-58ರಲ್ಲಿ ಕಡೇ ದೀಪೋತ್ಸವ ನಡೆದು ಅವಭೃತವಾಗುವುದು. ತಾ. 9-12-58 ರಲ್ಲಿ ಸರ್ವ ಧರ್ಮ ಸಮ್ಮೇಳನವೂ ತಾ 10-12-58ರಲ್ಲಿ ಸಾಹಿತ್ಯ ಸಮ್ಮೇಳನವೂ ಜರಗುವುವು ಸರ್ವಧರ್ಮ ಸಮ್ಮೇಳನವನ್ನು ಮೈಸೂರಿನ ಮುಮ್ಮಡಿ ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಉದ್ಘಾಟಿಸುವರೆಂದು ಬೇಳಲಾಗಿದೆ.

ಭಾರತೀಯ ಕಲಾ ಸಂಸ್ಕೃತಿ ಸಂಗೀತ ಪ್ರಸಾರ—ಅಖಿಲ ಭಾರತ ಪ್ರವಾಸಿಗಳಾದ ಸಂಗೀತ ಭೂಷಣ ವಿದ್ವಾದ ಬಿ. ವಿ. ಸುಂದರರಾಜ ಅಯ್ಯಂಗಾರರು ಉಡುಪಿಯಲ್ಲಿ ಮೊಕ್ಕಾಂ ಮಾಡಿ, ಮನೆಮನೆ ಗೀತಾ ಮಂದಿರ, ಲ್ಯಾಬ್ ಇನ್ಸ್ಟಿಟ್ಯೂಟ್ ಕೋಚಿಂಗ್ ಕ್ಲಾಸ್ ಮೊದಲಾದ ಕಡೆಗಳಲ್ಲಿ ಭಾರತ ಕ್ಷೇತ್ರಗಳ ಚಿತ್ರ ಸ್ಲೈಡ್ಸಗಳನ್ನು ತೋರಿಸಿ ಅವುಗಳ ವೈಶಿಷ್ಟ್ಯವನ್ನು ಸಂಗೀತ ಸೂಳಕ ವ್ಯಾಖ್ಯಾನಸಹಿತ ಪ್ರಚಾರ ಮಾಡುತ್ತಿದ್ದಾರೆ.

ಉಡುಪಿ ಅಷ್ಟಮೀ ಪೊತ್ಸವವು—ಶ್ರೀಕೃಷ್ಣ ಮಠದಲ್ಲಿ ಪರ್ಯಾಯ ಕೃಷ್ಣಾಪುರ ಸುಗಿ ಶ್ರೀವಿಶ್ವೇಶತೀರ್ಥ ಶ್ರೀಪಾದಂಗಳವರ ನಾಯಕತ್ವದಲ್ಲಿ ಇದೇ ತಾ 26ರಿಂದ 28ರ ತನಕ ವಿಶೇಷಾರ್ಚನೆ ಜರಗಿತು.

ಭಾರತದ ಒಂಭತ್ತನೇ ಕ್ಷಯೆಮು ಬೈಗಳೆ ಮಾಬಲೆ ಚಳವಳಿಯ ಉತ್ಸಾಹವನ್ನು ಸಮಾರಂಭವು ಇದೇ ತಾ 24ರಂದು ಡಾ| ಎಸ್ ಆರ್ ಬೈಗಳವರಿಂದ ನೆರವೇರಿಸಲ್ಪಟ್ಟಿತು. ಉಡುಪಿ ವಿಕೆಟ್ಟರಿಯಾ ಜ್ಯುಬಿಲಿ ಮೂಸಿಯಮ್ ಕ್ಲಬ್ಬಿನಲ್ಲಿ ಜರುಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ನಗರಸಭೆಯ್ಯಾಧಿಕಾರಿಗಳಾದ ಡಾ| ವಿ ಎಲ್ ಪದ್ಮಿತಯ ಇಷ್ಟಿದ್ದರು ಡಾ| ಸುಂದರರಾಯ ಶೆಟ್ಟರು ಸ್ವಾಗತ ಭಾಷಣಗೈದರು. ಸೈಬೋಗದ ಜಾವಳಿಯನ್ನು, ಅದನ್ನು ತರ್ಪಡಿಸಲು ಕೈಗೊಳ್ಳಬಹುದಾದ ಕ್ರಮಗಳನ್ನೊಳಗೊಂಡ ಚಿಕ್ಕಪ್ಪಯ ಸೂಚನೆಯನ್ನು ಒಪಗಿಸಿದವರು ವಕೀಲರಾದ ಅಲ್ಮೆಯ ಸ್ಟೂ ಕುರಿತು ಡಾ ಕೆ. ಆರ್ ನಾಯಕ್, ಶ್ರೀ ಟಿ ಎ. ವೈ. ವಾ| ಪಿ ಜೆ ಆಚಾರ್, ಶ್ರೀ ಎ ಜೆ ಆಲ್ಮೆ ಇವರು ಬಾಷಣಿಸಿದರು ಆಧ್ಯಕ್ಷರ ಭಾಷಣದ ಒಕೆ ಶ್ರೀ ಪಿ. ಶೀನ ಶೆಟ್ಟರು ವಂದನಾರ್ಪಣೆ ಮಾಡಿದರು. ಸಭೆಯು ಪ್ರಾರಂಭವಾಗುವ ಮೊದಲು ಸರಕಾರೀ ಅಕ್ಷರತೆಯ ನಿವಾರಣೆಗೆ "ಕ್ಷಯೆ ಮುಕ್ತಿಕೆಗಳನ್ನು ಕೊಲ್ಲಿ" ಕ್ಷಯರೋಗ ನಿರೋಧಕ್ಕೆ ಸಜ್ಜರಾಗಿ, ಎಂಬ ಘೋಷಣಾ ಪತ್ರಿಕೆಗಳನ್ನು ಸಮಾ ಪ್ರತಿನಿಧಿಗಳಿಗೆ ಮೊದಲೇ ಹಂಚಲಾಗಿತ್ತು.

ಹೊಸ ಪುಸ್ತಕ
ಇದೀಗ ಪ್ರಕಟವಾಗಿದೆ.
ಅದೃಷ್ಟಶಾಲಿ ರಾಷ್ಟ್ರನಾಯಕ
ಜೋಸೆಫ್ ಸ್ಟಾಲಿನ್
ಲೇಖಕರು
ಯು ಎಲ್. ಆಚಾರ್ಯ,
ಎಸ್. ಎ ಎಲ್. ಬಿ.
ಬೆಲೆ: ರೂಪಾಯಿ ಒಂಭೈತ್ತಾಲು
ಅಮೇರಿಕದ ಸೊದಲ ಅಧ್ಯಕ್ಷನ ಜೀವನ ಚರಿತ್ರೆಯಷ್ಟೆ ಅಲ್ಲ, ಜಗತ್ತಿನ ಸಾರಸ ಸಮಯ ಜೀವನವನ್ನು ಚಿತ್ರಿಸಿ ಮುಂದೆ ಈ ಜೀವನ ಅಮೇರಿಕದ ಜನರ ಮೇಲೆ ಮಾಡಿರಬಹುದಾದ ಅಂತ. ಅದಕ್ಕೆ ಕಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೊಗಿದಪೆಂಬುದನ್ನು ಈ ಜೀವನ ಚರಿತ್ರೆಯಿಂದ ನಿವಿಸಲಾಗಿದೆ.
ಒಂದು ರೂಪಾಯಿ ಎಂಟಾಣೆ (ರೂ. 1-8-0 ನಯೇಪೈಸೆ) ಸಾಧಿಯಾರ್ಡರ್ ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್‌ನಲ್ಲಿ ಪಾಡಲಾಗುವುದು
1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ,
ಉಡುಪಿ.

AUCTION SALE NOTICE.

Notice is hereby given that by way of enforcing the lien of the Bank under Articles, 33, 34 and 35 of the Articles of Association of the Bank, the Shares of the Bank mentioned in the Schedule herein below, will be sold by Public Auction at the Registered Office of the Bank Light House Hill Road, Mangalore--3, on 20—12—1958 at 2 P M . or on such other later date and time as will be fixed by the Bank, if the amounts due to the Bank from the Shareholders concerned as detailed in the Schedule herein-below, are not paid by 15—12—1958

CONDITIONS OF SALE

1. The upset price will be fixed on the date of sale.
2. The amount by which the bids are to be increased will be determined by the Officer conducting the sale
3. If any disputes arise regarding the bids or the payment of the Price the Shares will be forthwith sold again.
4. The highest Bidder in whose favour the shares are knocked down shall forthwith pay the full price of the Shares and take immediete steps to get the Shares transferred in his Name at his own cost
5. The Shares are open to only the members of the Bunt alias Nadava Community.
6. The Bank reserves the right to reject the highest bid without assigning any reason therefor
7. The sale may be cancelled by the Bank in case the bid is found insufficient or for any other reasons whatsoever.

SCHEDULE.

Loan No.	Amount Due.	Name and Address of the Shareholder	No of Shares.	Description of the Shares.
Decree Loan No. 22/52 of our Bombay Office.	Rs. 442-09 N.P with interest.	Sri K. Vittala Sheena Shetty Popular Bhavan, Opposite Elphinston Market, Parel, BOMBAY—12.	10 Shares of the nominal value of Rs. 50/. each.	Numbered from 17687 to 17691 in respect of which Rs 25/- per share has been paid up.
Decree Loan No. 23/52 of our Bombay Office.	Rs. 2,012. 19 N.P. with interest.	Sri Vasu Naga Shetty Om Hindu Restaurant, Neo Chal, Building No. 15, Prabhadevi Akkan Bari Galli,BOMBAY-13	5 Shares of the nominal value of Rs 50/- each.	Shares Numbers 2534, 2435, 7274, 7275 and 9582, in respect of which Rs.20/-per share has been paid up

The Vijaya Bank, Ltd , Head Office.
Light House Hill Road. MANGALORE-3
Dated. 24 —11—1958

(*Sd*) P Jayarama Shetty.
Secretary

ಅಭಿನಂದನೆ

(ಜನೇ ಪುಟದಿಂದ)

ಸಭ್ಯ, ಶ್ರೀ ಜೇಕರರ ಭಾರತ ಸಂದರ್ಶನವು ತುಂಬ ಪ್ರಧಾನ ಪಾಠ್ರವನ್ನು ವಹಿಸಿದೆ. ಕೆನೆಡವು ಬ್ರಿಟಿಷ ಕಾಮನ್ ವೆಲ್ತ್‌ನ ಸದಸ್ಯ ರಾಷ್ಟ್ರವಾಗಿದ್ದು, ತನ್ನಂತೆಯೇ ಇನ್ನೊಂದು ಸದಸ್ಯ ರಾಷ್ಟ್ರವಾದ ಭಾರತಕ್ಕೆ ಇದು ಅಭಿವೃದ್ಧಿ ಯೋಜನೆಗೆ ತುಂಬ ನೆರವು ನೀಡಲು ಮುಂದೆ ಬಂದಿದೆ ಅಲ್ಲವೇ ಕಾಮನ್‌ವೆಲ್ತ್ ಸಲ್ಲೆದ್ದುಕೊಂಡೇ ಸ್ವತಂತ್ರ ರಾಷ್ಟ್ರವಾಗಿ ಉಳಿಯಬಹುದು ಎಂಬುದನ್ನು ಭಾರತಕ್ಕದು ತೋರಿಸಿಕೊಟ್ಟಿದೆ. ಇದರಿಂದಲೇ ಭಾರತವೂ ಇಂತಹ ಸ್ವತಂತ್ರ ರಾಷ್ಟ್ರವಾಗಿ ಜಗದ್ವಂದ್ಯವಾಗಿ ಪರಿಣಮಿಸಿದೆ. ಬೇರೆ ಬೇರೆ ರಾಷ್ಟ್ರಗಳ ಮತ್ತು ಜನಾಂಗಗಳ ಅಭಿಪ್ರಾಯಗಳಲ್ಲಿ ಸಾಮರಸ್ಯವನ್ನುಂಟು ಮಾಡಿ ಎಲ್ಲ ರಾಷ್ಟ್ರಗಳೂ ಒಂದೇ ಕುಟುಂಬವೆಂಬ ಭಾವನೆಯಿಂದ ಬದುಕುವಂತೆ ಮಾಡಲು ಕಾಮನ್‌ವೆಲ್ತ್ ಶ್ರಮಿಸಿದ್ದು, ಈ ಕಾರ್ಯದಲ್ಲಿ ಕೆನೆಡದ ಪಾತ್ರವು ಸಹಕ್ತ್ವದ್ದಾಗಿದೆ.

ಜಗತ್ತಿನಲ್ಲಿ ಶಾಂತಿ ಮತ್ತು ಸುಭದ್ರತೆಗಳನ್ನು ಕಾಣಬಯಸುವ ಮತ್ತು ನಿಷ್ಠಾಪಿಸಲು ಹೆಣಗುವ ಭಾರತಕ್ಕೆ ಆದೇ ಮನೋವೃತ್ತಿಯ ಇನ್ನೊಂದು ರಾಷ್ಟ್ರದ ಪ್ರಧಾನಿಗಳ ಭೇಟಿಯು ಉಭಯ ರಾಷ್ಟ್ರಗಳ ನೈತ್ರಿಯು ಚಿರಸ್ಥಾಯಿಗೊಳಿಯುವಂತೆ ಮಾಡುವಲ್ಲಿ ಸಹಕಾರಿಯಾಗದುಳಿಯದು.

ರಾಷ್ಟ್ರಪತಿಗಳು ಅಕ್ಟೋಬರ ೬ರಂದು ರಾಷ್ಟ್ರಪತಿ ಭವನದಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನರ್ಪಿಸಿ ಇತ್ತರು.
ಎಡದಿಂದ ಬಲಕ್ಕೆ — ೧ನೆ ಸಾಲು: "ಪದ್ಮಭೂಷಣ ಪ್ರಶಸ್ತಿ" ಶ್ರೀ ಕೆ. ಪಿ. ಎಸ್. ಮೆನನ್, ಶ್ರೀ ಉಸ್ತಾದ್ ಅಲಾದಿನ್ ಖಾನ್, ಪ್ರೊ. ಪಿ. ಟಿ. ರಾಜು. ೨ನೆಯ ಸಾಲು: ಶ್ರೀ ಸೂರ್ಯನಾರಾಯಣ ವ್ಯಾಸ್, ಶ್ರೀ ಆರ್ಯಕವಿ ರಾಮಾನುಜ ಅಯ್ಯಂಗಾರ್, ಶ್ರೀ ಜಹಂಗೀರ್ ಭೆಂಡಿ, ಶ್ರೀ ರಾವ್ ರಾಜ ಹಂಕ ಸಿಂಘ್. ಮೂರನೆ ಸಾಲು: ಡಾ. ರುಸ್ತುಮ್ ಜಾಲ್ ವಕೀಲ್, ಶ್ರೀ ಸಾಲಿಮ್ ಅಲಿ, ಶ್ರೀಮತಿ ಕಮಲೇಂದುಮತಿ ಶಹ, ಮಹಾರಾಜಕುಮಾರ ವಿಜಯ ಆನಂದ. ನಾಲ್ಕನೆ ಸಾಲು: ಶ್ರೀ ಎ. ಸಿ. ಎನ್. ನಂಬಿಯಾರ್, ಶ್ರೀ ಡಿ. ಎನ್. ವಾಡಿಯ, ಡಾ. ಎನ್. ಎಸ್. ಹರ್ದಿಕರ, ಶ್ರೀ ಡಿ. ಪಿ. ರಾಯ್ ಚೌಧುರಿ.

ಪುಸ್ತಕ-ವಿಮರ್ಶೆ

. (ವಿಮರ್ಶೆಗಾಗಿ ಸುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಸ್ವಾಮಿ ಶ್ರದ್ಧಾನಂದ ಸೇವಾಶ್ರಮ ಮೊಂಗೆಳೂರು—ಇದರ ೫೦-೩-೫೮ಕ್ಕೆ ಆಂತೃವಾಗುವ ಒಂದು ವರುಷದ ವರದಿ ಹಾಗೂ ಲೆಕ್ಕಪತ್ರಗಳು ಕೈಸೇರಿವೆ. ಊರಪರವೂರದಾನಿಗಳ ಕೊಡುಗೆಯಿಂದ ಕಳೆದರ್ಸವರ್ಷಗಳಿಂದ ಆನಾಥ ಮಕ್ಕಳ ಲಾಲನೆಪಾಲನೆಗಳೊಡನೆ ಅವರ ಭಾವೀ ಜೀವನಕ್ಕತ್ಯವಾದ ವಿದ್ಯೆಯನ್ನೂ ಇತ್ತು ಆನಾಥರನ್ನು ಸನಾಥರನ್ನಾಗಿ ಮಾಡುವ ಈ ಆಶ್ರಮಕ್ಕೆ ಯಶಸ್ಸನ್ನು ಕೋರುವುದಲ್ಲದೆ, ಉದಾರಿಗರು ಉದಾರ ದಾನವಿತ್ತು ಸಮಾಜ ಸೇವೆಯಸಗಿದೆಂದು ಹಾರೈಸುತ್ತೇವೆ.

ಯುಗಪುರುಷ—(ದಸರಾ ವಿಶೇಷ ಸಂಚಿಕೆ) ಸಂಪಾದಕರು ಕೊ. ಅನಂತಪದ್ಮನಾಭ ಉಡುಪ; ಕಿನ್ನಿಗೋಳಿ, ವಾ. ಚಂದಾ. ೩.೫೫ ವಿಶೇಷ ಸಂಚಿಕೆಯ ಬೆಲೆ: ರೂ. ೧.

ದಸರಾ ಹಾಗೂ ದೀಪಾವಳಿಗಳು ವಿಶೇಷ ಸಂಚಿಕೆಗಳನ್ನು ಪ್ರಕಟಿಸುವ ಕಾಲ. ಆಕ್ಕನುಕೂಲವಾದ ಸಮಯವೆಗಳು. ಯುಗಪುರುಷವು ಆದಿಯಿಂದಲೂ ಈ ದಸರಾ ಸಂದರ್ಭದಲ್ಲಿ ಒಂದು ಉತ್ತಮ ವಿಶೇಷ ಸಂಚಿಕೆಯನ್ನು ಜನತೆಗೀಯುತ್ತಿದೆ. ಈ ಸಂಚಿಕೆಯಲ್ಲಿ ರಾಷ್ಟ್ರಕವಿ ಗೋವಿಂದ ಪೈ, ಶ್ರೀಗಳಾದ ಕೆ. ಎಸ್. ಪದ್ಮನಾಭಾಚಾರ್ಯ, ಸದಾನಂದ ನಾಯಕ್, ಗೋಪಾಲಕೃಷ್ಣ ರಾವ್, ಕೆ. ಆರ್. ಉಡುಪ, ಶಿವರಾಮ ಕಾರಂತ, ವಿಜ್ಞಾನಿಗಳಾದ ಯು. ಆ. ಗೌ. ಕಿನ್ನಿಗೋಳಿ, ಜಿ. ಆರ್. ಪಾಂಡೇಶ್ವರ ಮೊದಲಾದ ಶ್ರೇಷ್ಠ ಕವಿಲೇಖಕರ ಕೃತಿಗಳೊಡನೆ ಕೆಲವು ಎಳೆಯರ ಕೃತಿಗಳೂ ಬೆಳಕು ಕಂಡಿವೆ. ಮುಖಚಿತ್ರ ಕಲಾಪೂರ್ಣವೂ ಆಕರ್ಷಣವೂ ಆಗಿದೆ. ಸಂಪಾದಕರ ಪರಿಶ್ರಮವು ಸಾರ್ಥಕವಾಗಿದೆಯೆನ್ನಬಿರುವುದು ಸಾಧ್ಯವೇ ಇಲ್ಲ

ವಿಕ್ರಮ— (ವಿಜಯದಶಮಿ ಸಂಚಿಕೆ) ಸಂಪಾದಕರು: ಬಿ. ಎಸ್. ಎನ್. ಕುಲ್ಕುಂದ ವಿಕ್ರಮ ಪ್ರಕಾಶನ ಟ್ರಸ್ಟ್, ಬೆಂಗಳೂರು ೩. ವಿಶೇಷ ಸಂಚಿಕೆಯ ಬೆಲೆ: ರೂ. ೧.೦೦.

ರಾಷ್ಟ್ರೀಯ ಹಬ್ಬವಾದ ವಿಜಯದಶಮಿ ಕ್ಷತ್ರಿಯರ ಹಬ್ಬವೆಂಬುದಾಗಿ ಪ್ರತೀತಿಯಿರುವುದು ಇಂದು ವಿಜಯವನ್ನು ಸಂಪಾದಿಸಿದ ಹಲವಾರು ವ್ಯಕ್ತಿಗಳ ಕಥೆಗಳು ನಮಗೆ ದೊರೆಯುತ್ತಿವೆ. 'ವಿಜಯದಶಮಿ' ಈ ಸಂಚಿಕೆಯೂ ತನ್ನ ವಿಜಯಭೇರಿಯನ್ನೂ ಬಾರಿಸಿ ವಿಕ್ರಮವನ್ನು ಸ್ಥಾಪಿಸಿದೆ. ವಿವಿಧ ಕ್ಷೇತ್ರಗಳಿಗೆ ಸಂಬಂಧಪಟ್ಟ ಲೇಖನಗಳು ಇಲ್ಲಿ ಕೂಡುರುತ್ತವೆ. ಅಲ್ಲದೆ, ಆವನ್ನು ಆಯಾ ಕ್ಷೇತ್ರಗಳಲ್ಲಿ ನುರಿತವರೇ ಬರೆದಿರುವರೆಂಬುದರಿಂದ, ಪ್ರಮಾಣವೆಂದೂ ಅಂಗೀಕರಿಸಬಹುದು. ಡಾ. ವೆಂಕಟಸ್ವಾಮಿ ರೆಟ್ಟಿಯವರ ಆಕಾಶದಲ್ಲಿ ಮಾನವ, ಭಾಳಚಂದ್ರ ಹರಿದಾಸರ ವಿಜ್ಞಾನ, ತಿರುವಾಲೇಶ್ವರ ಭಟ್ಟರ ದೇವಿ ಒಲಿದು ಬಾ ಇತ್ಯಾದಿಗಳು ಕೆಲವು ಉದಾಹರಣೆಗಳು. ಸಂಪಾದಕರು ಇನ್ನೂ ಮುಂದಿನ ವರ್ಷಗಳಲ್ಲಿ ಇನ್ನೂ ಉತ್ತಮ ಸಂಚಿಕೆಗಳನ್ನೀಯುವಂತಾಗಲೆಂದೂ ಬಯಸುತ್ತೇವೆ.

ಸಂದೇಶ — (ದೀಪಾವಳಿ ಸಂಚಿಕೆ, ೧೯೫೮) ಸಂಪಾದಕರು: ಗೋ. ಅ. ದೇಶಪಾಂಡೆ, ಬೆಳಗಾವಿ. ಬೆಲೆ: ಸಂ ನ ಪೈ.

ಗಡಿನಾಡ ಕನ್ನಡಿಗರಿಂದ ಬೆಳಗಾವಿಯ ಮೆರೆ 'ಸಂದೇಶ'ವು ತನ್ನ ದೀಪಾವಳಿ 'ಸಂದೇಶ'ವನ್ನಿತ್ತಿದೆ. ಸಂಚಿಕೆಯಲ್ಲಿ ಹೆಚ್ಚಾಗಿ ರಾಜಕೀಯ ಕ್ಷೇತ್ರವೊಂದಕ್ಕೆ ಮಾತ್ರ ಸಂಬಂಧಿಸಿದ ಲೇಖನಗಳಿವೆ. ಸಂಪಾದಕರು ಇನ್ನೂ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಲೇಖನ ಕವಿತೆಗಳುಳ್ಳ ಉತ್ತಮ ಸಂಚಿಕೆಯನ್ನು ಇನ್ನು ಮುಂದಿನ ದೀಪಾವಳಿಯೊಸಗೆಯಲ್ಲಿ ನೀಡುವಂತಾಗಲಿ.

ದೀಕ್ಷಾ—ಸಂಪಾದಕರು. ಶ್ರೀ ಯು. ಎನ್. ರಾವ್; ಬೊಂಬಾಯಿ-೪. ವಾರ್ಷಿಕ ಚಂದಾ ರೂ. ೪ - ೦೦. ಬಿಡಿ ಸಂಚಿಕೆ ರೂ. ೧—೩೫.

ಬೊಂಬಾಯಿ ದಕ್ಷಿಣ ಕನ್ನಡ ಬ್ರಾಹ್ಮರ ಸಂಘದಿಂದ ಪ್ರಕಟವಾಗ ತೊಡಗಿದ ಈ 'ದೀಕ್ಷೆ'ಯನ್ನು ನಾವು ಹೃತ್ಪೂರ್ವಕ ಸ್ವಾಗತಿಸುತ್ತೇವೆ. ಈ ಸಂಘವು ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸುವ ಇರಾದೆಯಿಂದ ಈ ಪತ್ರಿಕೆಯನ್ನೂ ಪ್ರಕಟಿಸುವ ಸಾಹಸಕ್ಕಿಳಿದಿದೆ. ಹೈದರಾಬಾದಿನಲ್ಲಾದ ಸಾಧ್ವಿ ಸಮ್ಮೇಳನದ ಸಂಕ್ಷಿಪ್ತ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಈ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಶ್ರೀಗಳಾದ ಬಿ. ಪಿ. ಅಚಾರ್ಯ, ಎನ್. ವಿ ಬಲ್ಲಾಳ್, ಡಾ. ಎಸ್. ಎನ್. ಮಾರ್ಪ ಮತ್ತು ಯು. ಬಿ. ನಾರಾಯಣ ರಾವ್, ಶ್ರೀಗಳಾದ ಕೆ. ಎಸ್. ರಾವ್ ಮತ್ತು ಯು. ಜಿ. ರಾವ್ ಇರುತ್ತಾರೆ. ರೂ. ೩ ತೆರುವ ಗಂಡುಸರೂ ರೂ. ೧.೫೦ ತೆರುವ ಹೆಂಗಸರೂ ಸಂಘದ ಸದಸ್ಯರಾಗ ಬಯಸುವಾದುದರಿಂದಲೂ ಅವರಿಗೆ ಈ 'ದೀಕ್ಷೆ' ಯು ಧರ್ಮಾರ್ಥವಾಗಿ ಸಿಗುವುದರಿಂದಲೂ ವಾರ್ಷಿಕ ಚಂದಾ ನಾಲ್ಕು ರೂಪಾಯಿಯೇನೂ ಹೆಚ್ಚೆಲ್ಲ. ಹೈದರಾಬಾದ ಸಮ್ಮೇಳನದಲ್ಲಿ ರಾಷ್ಟ್ರಾಧ್ಯಕ್ಷ ಪ್ರಸಾದ ಮತ್ತು ಮಾಧ್ವ ಯತಿಗಳ ಭೇಟಿಯ ಚಿತ್ರ ಮುಖಪೃಷ್ಠದಲ್ಲಿದೆ.

ಚಿತ್ರವಾಣಿ—ಸಂಪಾದಕರು: ಬಿ. ಕೃಷ್ಣಪ್ಪ, ಬೆಂಗಳೂರು-೩. ೧—೧೧—೫೮ರ ಈ ಸಂಚಿಕೆಯ ಬೆಲೆ: ಕೇವಲ ೨ ಆಣೆ.

ಹೆಸರು ಸೂಚಿಸುವಂತಿದು ಚಲಚ್ಚಿತ್ರಕ್ಕೆ ಸಂಬಂಧಿಸಿದ ಪತ್ರಿಕೆಯೆನ್ನಬಹುದು. ಆದರೆ, ಇದರಲ್ಲಿ ಆ ಬಗ್ಗೆ ವಿಶೇಷ ಸಂಗತಿಗಳೇನೂ ತಿಳಿಯುವುದಿಲ್ಲ. ನೀರಸವೂ ಸಾಮಾನ್ಯವೂ ಆದ ಈ ಸಂಚಿಕೆಯನ್ನು ಏನುರ್ಚೆಗೆ ಕಳುಹಿಸಿದುದೇಕೆಂಬ ಅರ್ಥವಾಗುತ್ತಿಲ್ಲ. ಕನ್ನಡದಲ್ಲಿ ಸಾಮಾನ್ಯ ಪೆಚ್ಚಿನ ವಾರಪತ್ರಿಕೆಗಳಲ್ಲಿ ತಿಳಿದು ಬರುವುದಕ್ಕಿಂತಲೂ ಅಲ್ಪ ತಿಳುವಳಿಕೆಯಿಂದಿದು ಕೂಡಿರುವುದು ನಿಜವಾಗಿಯೂ ಇದು ಕೇಜಿನೀಯ. ಪೀಗಾಗದಿರಲಿ.

—ಗೋರಾ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಶುದ್ಧ ಹರಟೆ

ಗೋಹತ್ಯಾ ನಿರೋಧ ಮತ್ತು ಮಂಡೂಕ ಬ್ರಹ್ಮಚಾರಿ

ನಮ್ಮ ದುರ್ಬಲತೆಗೆ, ರೋಗರುಜಿನಗಳಿಗೆ ಪ್ರಧಾನ ಕಾರಣವೇನು?

ಭಾರತೀಯರ ಧನವಾಗಿ ಒಂದುಕಾಲದಲ್ಲಿ ದನಗಳಿದ್ದುವೆಂದು ಪ್ರತೀತಿ. "ಧೇನು" ಎಂಬ ಹೆಸರು ಬರುವುದೇ "ಧನ"ಕ್ಕಿಂದಿರುವ ಗುಣವೇ ಅಂದು ದನ ಕೈದ್ದಿರುವುದೇ ಕಾರಣವಾಗಿರಬಹುದು ಕಾಮಧೇನು ಬೇಕಾದುದನ್ನು, ನಾವು ಕೇಳಿದುದನ್ನು ನಮಗೆ ಕೊಡುವ ದನವಾಗಿದ್ದರೆ, ಆದರ ಮಕ್ಕಳನ್ನು ಬಿಟ್ಟುಳಿದುವು ಕೇವಲ ತನ್ನುಲ್ಲಿದ್ದುದನ್ನೇ ನಮಗೆ ಕೊಡುವ "ಧೇನು"ಗಳಾಗಿವೆ. ಪರಶುರಾಮನು ಕ್ಷತ್ರಿಯ ಹತ್ಯೆಗೆ ತೊಡಗಲಿಕ್ಕಾ ವಶಿಷ್ಠನು ವಿಶ್ವಾಮಿತ್ರನ ಅವಕೃಪೆಗೆ ಪಾತ್ರನಾಗುವುದಕ್ಕೂ ಪ್ರಾಯಃ ದಾನವರೂ ದೈತ್ಯರೂ ಸದಾಕಾಲ ದೇವಲೋಕಕ್ಕೆ ಆಕ್ರಮಣ ಮಾಡಲಿಕ್ಕೂ ಈ ಧೇನು (ರಾಮ)ಗಳೇ ಕಾರಣವೆಂದು ನನ್ನು ಪುರಾಣಗಳು ಉದ್ಘೋಷಿಸುತ್ತವೆ. ದುರ್ಯೋಧನನು ಗೋಗ್ರಹಣ ಮಾಡಿದುದನ್ನೂ ಉತ್ತರನ ಪೌರುಷವನ್ನೂ ನಾವೆ ದೂ ಮರೆಯುವಂತಿಲ್ಲ. ಈ ಗೋವುಗಳು ತಮ್ಮಲ್ಲಿದ್ದುದನ್ನು ನಮಗೆ ಕೊಡುತ್ತವೆ; ಹಾಗಿರುವಾಗ, ಆವುಗಳನ್ನು ದಾನಶೂರರು ಯಾರೂ ಇಷ್ಟವೆನ್ನುತ್ತಾರೆ; ಗಾವೋವಿಶ್ವಸ್ಯ ಮಾತರ; ಎಂದು ಹಾಡಿದ್ದಾರೆ; ಗೋವನ್ನು ದೇವರೆಂದು ಪೂಜಿಸುತ್ತಾರೆ; ದನವೇ ಧನವೆಂದು ಹಾಡುತ್ತಾರೆ. ಸರಿಯೇ. ಅಂತಹ ಗೋವಧೆ ಮಾಡಲಾಗದು ಎಂಬುದು ನಿಜವಾಗಿಯೂ ನ್ಯಾಯವೇ. ನಮ್ಮ ಹಣದ ನೋಟನ್ನು ಹರಿದು ಬಿಸಾಡಲು ನಾವು ಸಿದ್ಧರಿಲ್ಲ ಹೇಗೆಯೋ ಅದೇ ಕಾರಣದಿಂದ ನಾವು ಗೋವಧೆಯನ್ನು ಮಾಡಬಾರದು.

ಆದರೆ, ಭಾರತದಲ್ಲಿಯೂ ಅದರ ಜೊರಗಡೆಯೂ ಬೇಕಷ್ಟು ದನಗಳನ್ನು ಕೊಲ್ಲಲಾಗುತ್ತಿದೆ; ಪರದೇಶಗಳಲ್ಲಿ ದನಗಳನ್ನು, ಇತರ ಪ್ರಾಣಿಗಳಂತೆಯೇ ಪುಷ್ಟಿಕರವಾದ ಆಹಾರ ನೀಡಿ ಸಾಕಿಸಲಹಿ ಸಾಕಷ್ಟು ಕೊಬ್ಬು, ಮಾಂಸ ಶೇಖರಣೆಯಾಯಿತೆಂದಾಗ, ವಿದ್ಯುತ್ತಿನ ಸಹಾಯದಿಂದ ಕ್ಷಣಾರ್ಧದಲ್ಲಿ ಆವುಗಳ ಇಹಲೋಕ ಬಂಧನವನ್ನು ಬಿಡಿಸುವ ಮಹಾಪುಣ್ಯ ಕಾರ್ಯವು ನಡೆಯುವುದಾದರೆ, ನಮ್ಮ ದೇಶದಲ್ಲಾದರೋ ಆವುಗಳಿಗೆ ಸಾಕಷ್ಟು ಹೊಟ್ಟೆಗೆ ಹಾಕದೆ ಬತಕಲಾಗಿ ಬೆಳೆಸಿ, ಸಾಯಲು ನಾಲ್ಕು ದಿನಗಳಿರುವಾಗ "ಸಿಕ್ಕೆ ದಷ್ಟು ಸಿಗಲಿ" ಎಂಬವರಿಂದ ಕೊಂಡು ಎರಡೇ ದಿನಗಳೊಳಗೆ ಚಿತ್ರಹಿಂಸೆಯಿಂದ ಅವನ್ನು ಕಡಿದು ಕೊಂದು ಬಿಡುವ ಮಹಾ ಪಾಪ ಕಾರ್ಯವು ಆನಾಚೂನವಾಗಿ ನಡೆದು ಬರುತ್ತಿರುವುದು ಶೋಚನೀಯವೆಂದೇ ಹೇಳಬೇಕು. ಆವುಗಳ ಹೊಟ್ಟೆಯಲ್ಲಿ ಬೆಂಕಿಯಾದರೂ ಉರಿಯುತ್ತಿರಲಿ;ನಮ್ಮ ಹೊಟ್ಟೆಯಲ್ಲಿ ಉರಿಯುವುದಿಲ್ಲವೆ? ಆವುಗಳನ್ನು ಘಾತಿಸುವ ಕೆಲಸ ನಿಜವಾಗಿಯೂ ಅಹಿಂಸಾ ಧರ್ಮಕ್ಕೆ ಅಂಟಿ ಕುಳಿತ ಭಾರತಕ್ಕೆ ಲಾಂಛನಪ್ರಾಪ್ತ; ಚಂದ್ರನಿಗೆ ಕಲಂಕವಿದ್ದಂತೆಯೇ ಸ.. ಉಪವಾಸ ಬಿದ್ದು ಸತ್ತರೂ ಅದು ಸ್ವಾಭಾವಿಕ; ಆದರ ಬ್ರಹ್ಮ ಬರೆದ ಬರಹ; ಅದನ್ನು ವಿಮರುವುದು ಯಾರಿಂದ ತಾನೇ ಸಾಧ್ಯ? ಇದರೆ. ಅದರ ಆಯುಷ್ಯವನ್ನು ಅರ್ಧದಲ್ಲಿಯೇ ನಿಲ್ಲಿಸಿಬಿಡುವ ದು ಮಹಾಪರಾಧವಲ್ಲವೆ ಮತ್ತೇನು?

ಜನರು ಗೋವಧೆ ಮಾಡಬಾರದು; ಗೋವಾತೆಯನ್ನು ಪೂಜಿಸಬೇಕು; ಸರಕಾರ ಆದನ್ನು ಕಾಯದೆ ಮೂಲಕ ಪ್ರತಿಬಂಧಿಸಬೇಕು ಎನ್ನುತ್ತಾರೆ ನಿಜವಾಗಿಯೂ ಬುದ್ಧ, ಜಿನರ ಆವಾಸಸ್ಥಾನದಲ್ಲಿ ಅಹಿಂಸೋಕ್ತ ಹರ್ಷರಾಳಿದ ದೇಶದಲ್ಲಿ ಅಹಿಂಸೆಯನ್ನೇ ಪಾಲಿಸಿ ವಹಾತ್ಮರಾದ ಗಾಂಧೀಯವರ ರಾಷ್ಟ್ರದಲ್ಲಿ ಪ್ರಾಣಿಹಿಂಸೆಯಾಗುವುದು ಎಷ್ಟಕ್ಕೂ ನ್ಯಾಯವಲ್ಲ. ನಮ್ಮ ಮುಸ್ಲಿಮ್ ಸೋದರರಿಗೆ ಪ್ರಿಯವಾದ ಆಡು ಕೀರ್ತಿಯಲ್ಲಿ ಕಡಿಮೆಯೆ? ಆದೂ ಹಾಲು ಕೊಡುತ್ತದೆ. ಮಕ್ಕಳ ಆಹಾರಕ್ಕೆ ಇದು ಮುಖ್ಯ. ಕುರಿಯಿಲ್ಲವಾದರೆ ನಾವು, ಮುಖ್ಯವಾಗಿ ಛಳಿಟ್ಟದ ಮೇಲಿನ ನಮ್ಮ ಬಾಂಧವರು ಜಳಿಯಲ್ಲಿ ಗಡಗಡ ನಡುಗುವಾಗ ಹೊದ್ದುಕೊಳ್ಳುವುದೇನು? ನಮ್ಮ ಕಾಲೇಜು ವಿದ್ಯಾರ್ಥಿಗಳು ಆಟೋಗ್ರಾಫ್ ಶ್ಯಾಂಗೈರ ಮಾಡುವುದು ಕೈಗೆ? ಲಾಂಡ್ರಿಯವನು 'ಡ್ರೈವಾಷ್' ಮಾಡಿ ಹಣಗಿಟ್ಟಿಸುವುದು ಹೇಗೆ? ಹಾಗೆಯೇ ಹಂದಿ, ಕೋಳಿ, ಮೀನು, ಕಾಗೆ, ಕಪ್ಪೆಗಳು ಇವೆಲ್ಲವೂ ಕೆಲಕಳೆಯನ್ನು ತಿನ್ನದೆ ಹೋಗರೆ. ನಮ್ಮನ್ನು ಅಂಗಳವೆಷ್ಟು ದಪ್ಪಗಾಗಿ ಭೂಭಾರ ಹೆಚ್ಚುತಿತ್ತೋ! ಕಪ್ಪೆ ಪ್ರಶ್ನೆಯಾರ ತಾನೆ? ಅನನ್ನು ಮೆಡಿಕಲ್ ಕಾಲೇಜುಗಳಲ್ಲಿ ಸೀಳಿ ಚಿತ್ರಹಿಂಸೆಮಾಡುತ್ತಾರಲ್ಲ! ಏನಿದು ಬ್ರಹ್ಮಹತ್ಯಾದೋಷ! ನಿಜವಾಗಿಯೂ ಡಾಕ್ಟರರು ಕ್ಷುಲ್ಲಕವೂ ಕೃಣಮಾನವೂ ನಶ್ವರವೂ ಆದ ಬೆಂಕಿಗೆ ಹಾಕಿದರೆ, ಅರೆಕ್ಷಣದಲ್ಲಿಯೇ ಸುಟ್ಟು ಬೂದಿ ಆಗುವ, ಬೇಂಕಿನೆಲ್ಲಿಟ್ಟರೆ ಮತ್ತಷ್ಟು ಹೆಚ್ಚುವ ಕಾಗದದ ಜೊರುಗಳ ನೋಟುಕಟ್ಟುಗಳನ್ನು ಮಾತ್ರ ಸಂಪಾದಿಸುವುದಕ್ಕೆ ಆವರ ಈ "ಮಂಡೂಕ ಹತ್ಯಾ ದೋಷ" ವೇ ಕಾರಣವೆಂದು ಊಹಿಸಿದರೆ ತಪ್ಪಾಗಲಾರದು.

ಹೀಗೆಯೇ ನಮ್ಮ ಮುನಿಸಿಪಾಲಿಟಿಯವರು ಕೊಲ್ಲುವ ನಾಯಿ, ಓಡಿಸಿದರೂ ಓಡಿ ಹೋಗದ ಬೆಕ್ಕು, ನಮ್ಮ ಕಣ್ಣು ತಪ್ಪಿಸಿ ಸುಳಿಯುವ ಇಲಿ, ಎಲ್ಲೆಲ್ಲಿಯೂ ಇರುವ ಇರುವೆ, ಡಿ. ಡಿ. ಟಿ. ಚುಮುಕಿಸುವ ಸೊಳ್ಳೆ ಛೆ, ಛೆ, ಸಮುದ್ರ ನದಿಕೆರೆ ಕುಂಟೆಗಳ ನೀರನ್ನು ಕುದ್ದವಾಗಿಡುವ ಮೀನು.....ಎಲ್ಲವೂ ನಮಗೆ ದನಂತೆಯೇ ಉಪಕಾರಕ್ಕೆ ಬೀಳುತ್ತವೆ! ಮೀನಿಲ್ಲವಾದರೆ, ನೀರಲ್ಲಿ ಕೊಳೆನಿಂತು ನಾವು ಅನಾರೋಗ್ಯ ಹೊಂದಿ ಸತ್ತು ಹೋಗಬಹುದು! ಈಗೀಗ ಹೆಚ್ಚಿದಂತಹ ರೋಗರುಜನಗಳಿಗೆ ಇಂತಹ ಕಸಗೋರುವ ಪ್ರಾಣಿಗಳನ್ನು ಕೊಲ್ಲುತ್ತಿರುವುದೇ ಏಕೆ ಕಾರಣವಾಗಬಾರದು? ಆದುದರಿಂದ, ನಮ್ಮ ಸರಕಾರ ಮೆಡಿಕಲ್ ಕಾಲೇಜುಗಳನ್ನು ಹೆಚ್ಚು ಹೆಚ್ಚು ಸ್ಥಾಪಿಸುವುದಕ್ಕೆಂತ ನಾಯಿ, ಮೀನು, ಹಂದಿ, ಬೆಕ್ಕು, ಎರೆಕುಳ ಸೊಳ್ಳೆ ಇದ್ಯಾದಿಗಳ ಸಂತಾನಾಭಿವೃದ್ಧಿಯಾಗುವ ಹಾಗೆ ಯೋಜನೆಯೊಂದನ್ನು ಕೈಗೊಂಡರೆ, ಅದರಿಂದ ಅನಾರೋಗ್ಯಕ್ಕೆ ಕಾರಣೀಭೂತವಾದ ಕೊಳಕು ಇಲ್ಲದಂತಾಗಿ ವರ್ಷಂಪ್ರತಿ ಆಪ್ಪತ್ರೆಗಳ ನೀರಿಗೆ ಸುರಿಯುವ ಕೋಟಿಗಟ್ಟಲೆಯ ಆವ್ಯತ ವೆಚ್ಚವುಳಿಯಲಾರದೆ? ಈ ಹಣವನ್ನು ಉಕ್ತವಾರೀತಿಯಲ್ಲಿ, (ತಿನ್ನಾಲಿರಾಮನಂತೆ!) ದನ ಸಾಕುವವರಿಗೆ ಕೊಟ್ಟು ಅವು ಸಾಯುವವರೆಗೆ ಉತ್ತಮ ರೀತಿಯಿಂದ ಆಲೈಕೆ ನಡೆಯುವ ವ್ಯವಸ್ಥೆ ಮಾಡಬಾರದೆ? ಆಗ, ಉಪವಾಸ ನರಳುವ ಪ್ರಸಂಗವು ತಪ್ಪು ಅವನ್ನು ಕ್ರೂರ ಪ್ರಾಣಿಗಳು ಹೃದಯಹೀನಳಿಗೆ ಮಾರುವ ಅವಕಾಶವೇ ಇಲ್ಲದಂತಾಗಿ ಅವರವರ ಧನಗಳು ಅವರವರ ಮನೆಯಂಗಳದಲ್ಲಿಯೇ ಪ್ರಾಣ ಬಿಡುವ ಸದವಕಾಶವು ಒದಗುವುದು. ನಿಜವಾಗಿಯೂ ಗೋಮಾತೆಯಂದರೆ ಅಷ್ಟಾಗಿ ಬೇಕು. ಒಂದು ವೇಳೆ, ನಾವು ನಮ್ಮ ದನಗಳನ್ನು ಪುಷ್ಟಿಯಾಗಿ ಸಾಕಿದುದು ಭಾರತೀಯ ಸರಕಾರದ ವಿದೇಶ ವಿನಿಮಯಗಳ ಕೊರತೆನೀಗಿಸಲಿಕ್ಕೂ ಅವಕಾಶ ಒದಗಿಸಿ ಕೊಟ್ಟೀತು. ಆಗ ರಾಷ್ಟ್ರ ಸೇವೆಗಾಗಿ, ರಾಷ್ಟ್ರೋದ್ಧಾರಕ್ಕಾಗಿ ನಾವು ಆತ್ಯಧಿಕ ಪ್ರೀತಿಪೂರಸ್ಸರವಾಗಿ ಸಾಕಿದ ಗೋಮಾತೆಯರನ್ನ ದಾನಮಾಡಿದ ತ್ಯಾಗ ಶೂರಿದ ಮಹಾಂತಷ್ಟ ಸೇವಕರಾಗುತ್ತೇವೆ! ಇದಕ್ಕಾಗಿ ನಾವಿಂದು ಮುಖ್ಯ ಗಮನಿಸಬೇಕಾದ ವಿಷಯವಿದು: ಹಿಂದುಳಿದ ಪ್ರಾಣಿಗಳಾದ ಮೀನು, ಸೊಳ್ಳೆ ಇತ್ಯಾದಿಗಳಿಗೂ ಗೋಮಾತೆಯ ಸ್ಥಾನವನ್ನು ಕಲ್ಪಿಸಿಕೊಟ್ಟು ಪ್ರಗತಿಪರರೆಂಬೆ ಳೆ, ತನ್ಮೂಲಕ ಸಮತಾವಾದದ ಗಂಧಗಿಲ್ಲದಿದ್ದರೂ ಈ ಗಾಗಲೇ ಗಹಲಪ್ಪೆ ಮೃಯದ ಗೋಮಾತೆಯನ್ನು ಇನ್ನೂ ಮುಂದುವರಿಯ ನಂತೆ ಮಾಡಬೇಕು; ಅದುದರಿಂದಲೇ ಹೇಳಿರಿ: "ಮಷ್ಟಿಕ ಮಹಾರಾಷ್ಟ ಕೀ ಜೈ; ಮಂತಾಕ ಬ್ರಹ್ಮಚಾರೀಕೀ ಜೈ; ಗಾವೋ ವಿಶ್ವಸ್ಯ ಮಾತರ ಸರ್ವೇ ಪ್ರಾಣಿಯಃ ಗಾವಃ ಸಂತು."

— ಗೋರಾ.

ದಿ. ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ನೋಟೀಸು.

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಾಣಿಸಿದ ಮಜಬೂತಿಯರು ನಮ್ಮ ಬೇಂಕಿನಿಂದ ಚಿನ್ನಾಬರಣವ ಆಡಸಿನಲ್ಲಿ ಸಾಲ ಪಡಕೊಂಡು ದೀರ್ಘಕಾಲದಿಂದ ಅಸಲು-ಬಡ್ಡಿಯನ್ನು ಬಾಕಿ ಮಾಡಿರುವುದರಿಂದ, ರಿಜಿಸ್ಟ್ರಿ ನೋಟೀಸು ಕೊಟ್ಟಿಲ್ಲೂ ಆಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ, ಸದ್ರಿಯವರ ನಗಗಳನ್ನು ತಾ. 17-12-1958ನೇ ಬುಧವಾರ ಅಪರಾಹ್ನ ಗಂಟೆ ಮೂರಕ್ಕೆ ಯಾ ತದನಂತರ ಯುಕ್ತ ಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ತಾ 30-9-1958ರ ನಲೇಗಿನ ಬಡ್ಡಿ ಸಮೇತ ಬಾಕಿ
445/58	ರಾಮು ಪೂಂಜಾ, S/o ಮುದರ, ಚಿತ್ರಾಪು, ಮುಲ್ಕಿ.	66-17
365/56	ಎಲ್ಲು ಪೂಜಾರಿ, S/o ಕೊರಗ ಪೂಜಾರಿ, ಮಂಚಾಡಿ, ಆತಿಕಾರಿಬೆಟ್ಟು.	37-08
376/57	— do —	18-96
489/56	ಯಂ ಸುಬ್ಬಣ್ಣ ಹೆಗ್ಡೆ, C/o ಮಂಜುನಾಥ ಮೋಟರ್ ಸರ್ವಿಸ್, ಮುಲ್ಕಿ.	72-24
484/56	— do —	167-25
496/56	ಯಂ. ಕೆ. ಯುಸುಫ್, S/o ಯಂ. ಕೆ. ಅಬ್ದುಲ್ ರಹಿಮಾನ್, ಗೇರಿಕಟ್ಟು ಮುಲ್ಕಿ.	35-13
611/56	ಶೇಕ್ ಹುಸೇನ್, C/o ಪೋಸ್ಟು ಆಫೀಸು, ಮುಲ್ಕಿ.	13-11
868/56	— do —	12-37
10/57	— do —	14-23
1157/56	ವಾಸು ಶೆಟ್ಟಿ, S/o ಮೆಣ್ಣು ಶೆಡ್ತಿ, ಮರಿಯರ ಭೂಮಿ, ಕೆಳ್ಳಾರ್ಪು, ಹಳೆಯಂಗಡಿ.	419-47
974/57	ಮುತ್ತಪ್ಪ ಬಿ ಕೋಟ್ಯಾನ್, S/o ಬೊಗ್ಗು, ಮಂಚಾಡಿ, ಆತಿಕಾರಿಬೆಟ್ಟು.	28-28
444/57	ಪಮ್ಮಿಬ್ಬಿ, S/o ಬಾವು ಬ್ಯಾರಿ, ಸಾಗು, ಹಳೆಯಂಗಡಿ.	9-49
700/57	ಅಂಗರ ಕಾಂಚನ್, S/o ಪುದ್ದು, ಮೋನಪ್ಪ ತೋಟ, ಕೋಡಿ, ಹೆಜಮಾಡಿ.	22-44
1051/57	ಅಣ್ಣು ಶೆಟ್ಟಿ, S/o ನಕ್ರ ಶೆಟ್ಟಿ, ಆತಿಕಾರಿಬೆಟ್ಟು.	71-06
992/57	ದೇಜಪ್ಪ ಪೂಜಾರಿ, S/o ಅಂಗರ, ಒಡಿಯರಬೆಟ್ಟು, ಮುಲ್ಕಿ.	33-05.

ಮುಲ್ಕಿ,
ತಾ. 22-11-1958.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಉತ್ತರ ಇಂಡಿಯಾ ೬೦ ತೀರ್ಥಯಾತ್ರೆಗಳಿಗೆ ಹಾಗೂ ಮಹಾಶಿವರಾತ್ರಿ-ಮಹೋತ್ಸವಕ್ಕೆ-
ಭೋಳೇಶ್ವರಾಸ ಶ್ರೀ ಕಾಶೀಕ್ಷೇತ್ರದಲ್ಲಿ ಮುಕ್ಕಾಮ್-
ರೈತರಿಗೆ ಅರ್ಧ ಚಾರ್ಜು ಕೇವಲ ೧೦೦ ರೂಪಾಯಿ
ಮೈಸೂರು ಸರಕಾರದ ಪ್ರತಿನಿಧಿಗಳಾಗಿ ಅತ್ಯಂತ ಸುಲಭ ದರದಲ್ಲಿ ಒಳ್ಳೇ ಸುಖಕರವಾದ ಪ್ರವಾಸ:—
[ದ್ವಾರಕಾ ಸೋಮನಾಥಕ್ಕೂ ಹೋಗಿ ಬರುವದು]
೫೦೦ ಜನರ ಸ್ಪೆಶಲ್ ಟ್ರೇನ್
ಶ್ರೀ ಕಾಶೀ ಗಯಾ, ಸಮೇದಶಿಖರ, ದಿಲ್ಲಿ ಹರಿದ್ವಾರ, ಆಗ್ರಾ, ಮಧುರಾ, ಮುಂಬಯಿ. ಮೊದಲಾದ ಅನೇಕ ೬೦ ತೀರ್ಥಯಾತ್ರೆಗೆ ಬರತಕ್ಕವರು ತ್ವರೆ ಮಾಡಿರಿ. ಪೂರ್ಣ ಮಾಹಿತಿ ಜಾಹೀರಾತು ನೋಡಿರಿ. ಲಗತ್ತಿಸಿ ಆಣೆ ತಿಕೀಟು ಕಳಿಸಿರಿ—ವಿವರಗಳಿಗೆ—
ಶ್ರೀ ಶಿವಾನಂದ ಯಾತ್ರಾ ಕಂಪನಿ, ಬನಹಟ್ಟಿ,
ಪೋಸ್ಟ್ ಬನಹಟ್ಟಿ. (ಜಿ. ವಿಜಾಪುರ)

ದೇಶ ಪರಿಚಯ

ನೀಲ ನದಿಗಳ ಆಫ್ರಿಕೆಯ ನುಡಾನ

ಮೂರು ವರ್ಷದ ಸ್ವಾತಂತ್ರ್ಯದ ಲ್ಲಿಯೂ ಸೈನಿಕ ಕ್ರಾಂತಿಯಾಗಿ ಹೋಯಿತು

ಕಳೆದವಾರ ಸುಡಾನಿನಲ್ಲಿ ರಕ್ತರಹಿತ ಸೈನಿಕಕ್ರಾಂತಿಯಾಗಿ ಅಲ್ಲಿನ ಸೇನಾಧಿಕಾರಿ ಲೆ| ಜ| ಇಬ್ರಾಹಿಮ್ ಅಬ್ಬೂದರು ಪ್ರಧಾನಿಯಾಗಿ ಮತ್ತು ರಕ್ಷಣಾ ಮಂತ್ರಿಯಾಗಿ ಹಾಗೂ ಸಶಸ್ತ್ರ ಸೇನೆಗಳ ಸರ್ವೋಚ್ಚ ಸಮಿತಿಯ ಅಧ್ಯಕ್ಷರಾಗಿ ದಿನಾಂಕ ೧೭ರಂದು ಪ್ರತಿಜ್ಞಾವಿಧಿಯನ್ನು ಮುಗಿಸಿದರು; ಅಂತೆಯೇ ತನ್ನು ಪ್ರಥಮ ಬಾನುಲಿ ಭಾಷಣದಲ್ಲಿ ಬ್ರಿಟಿಷ ಸಾಮ್ರಾಜ್ಯವಾದವನ್ನು ಖಂಡಿಸಿದರೆಂದೂ ವರದಿಗಳು ಬಂದಿವೆ.

ಖಾರ್ಟೂಮ್ ರಾಜಧಾನಿಯಾಗಿರುವ ಸುಡಾನವು ೧೨,೭೨,೫೦೦ಚದರ ಮೈಲುಗಳಷ್ಟು ವಿಸ್ತಾರಕ್ಕೆ ಹರಡಿದ್ದು, ಸುಮಾರು ೧೫ಕೋಟಿ ಜನಸಂಖ್ಯೆಯುಳ್ಳದಾಗಿದೆ. ಆಂಗ್ಲೊ ಈಜಿಪ್ಟಿಯನ್ ಕೂಟದಿಂದ ೧೯೨೯ ಜನವರಿ ಮೊದಲನೆಯ ದಿನಾಂಕದಂದಿದು ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಉತ್ತರದಲ್ಲಿ ಈಜಿಪ್ತ ಮತ್ತು ಲಿಬಿಯಗಳೂ ಕೆಂಪು ಸಮುದ್ರ, ಇಥಿಯೋಪಿಯ ಮತ್ತು ಇಥಿಯೋಪಿಯಗಳು ಪೂರ್ವದಲ್ಲಿಯೂ ಬ್ರಿಟಿಷ್ ಉಗಾಂಡ ಮತ್ತು ಬೆಲ್ಜಿಯಂಕಾಂಗೋಗಳು ದಕ್ಷಿಣದಲ್ಲಿಯೂ ಫ್ರೆಂಚ್ ನಿಷುವಿದ್ರೇಖಾ ಆಫ್ರಿಕೆ ಮತ್ತು ಲಿಬಿಯಗಳು ಪಶ್ಚಿಮದಲ್ಲಿಯೂ ಹರಡಿಕೊಂಡಿವೆ.

ದೇಶದ ಉತ್ತರ ಭಾಗವು ಪಶ್ಚಿಮದಲ್ಲಿ ಲಿಬಿಯದ ಮರುಭೂಮಿಯಿಂದಲೂ ಪರ್ವತಗಳ ಅರೇಬಿಯನ್ ಸುರುಳುಗಾಡುಗಳಿಂದಲೂ ಕೂಡಿದ್ದು ಇದು ಪೂರ್ವದಲ್ಲಿ ಕೆಂಪು ಸಮುದ್ರದ ವರೆಗೂ ಪಸರಿಸಿದೆ. ಈ ಎರಡು ಮರುಳುಗಾಡುಗಳು ನೈಲ್ ನದೀ ಕಣಿವೆಯಿಂದ ಬೇರ್ಪಡಿಸಲ್ಪಟ್ಟಿವೆ. ಮಧ್ಯವಿಭಾಗವು ಹಸನುಭೂಮಿಯಿಂದಲೂ ಕಾಸಿಯಾ, ಜೋಕಾರ್- ಎಂಬ ಮಳೆ ಬೀಳುವ ಪ್ರದೇಶಗಳಿಂದಲೂ ಕೋರ್ಡೊಫಾನಿನ ಕಾಡುಗಳಿಂದಲೂ ಕೂಡಿದೆ. ದಕ್ಷಿಣ ಭಾಗವು ವಿಷುವದ್ರೇಖಾ ಪ್ರದೇಶದ ಹವಾಗುಣದಿಂದ ಮಳೆಯು ಬೇಕಾಷ್ಟು ಸುರಿಯುತ್ತದಾದರೂ ಹೊಗೆಯ ಪ್ರದೇಶವಾಗಿದೆ. ಬಿಳಿ ನೈಲ ನದಿಯು ದೇಶದ ಮಧ್ಯಭಾಗದಲ್ಲಿ ಉತ್ತರಕ್ಕೆ ಹರಿಯುತ್ತದೆ; ನೀಲ ನೈಲನದಿಯು ಇಥಿಯೋಪಿಯದ ಪರ್ವತದಲ್ಲಿ ಹುಟ್ಟಿ, ವಾಯವ್ಯದಲ್ಲಿ ಹಂದು. ಬಿಳಿ ನೈಲ ನದಿಯೊಡನೆ ಖಾರ್ಟೂಮಿನ ಸಮೀಪದಲ್ಲಿ ಸೇರಿ, ಮುಂದೆರಡೂ ನೈಲನದಿಗೆ ಸೇರುತ್ತವೆ. ಖಾರ್ಟೂಮ್ ನಗರವು ಸಮುದ್ರ ಮಟ್ಟದಿಂದ ೧೭೫೫ ಅಡಿ ಎತ್ತರದಲ್ಲಿದೆ. ಕೈರೊವಿನಿಂದ ಇಲ್ಲಿಗಿರುವ ಅಂತರವು ೧೫೨೪ ಮೈಲುಗಳು.

ಸುಡಾನಿನಲ್ಲಿ ತಾನ್ಯ, ಚಿನ್ನ, ಕಬ್ಬಿಣ ಮತ್ತಿತರ ಕೆಲವು ಖನಿಜ ಪದಾರ್ಥಗಳು ಇವೆ ಇಲ್ಲಿನ ಅಂಟು ಲೋಕ ವಿಖ್ಯಾತವಾಗಿದೆ. ಅಲ್ಲಲ್ಲಿ ಹತ್ತಿಯೂ ಸಾಕಷ್ಟು ಬೆಳೆಯುತ್ತದೆ. ಸಾಸಿವೆ, ನೆಲಗಡಲೆ, ಖರ್ಜೂರ, ಜೀರ್ಮ, ತುಪ್ಪ, ಬೀನುಗಳು ಶುಷ್ಕಧಾನ್ಯಗಳು ದಂತ ಮೊದಲಾದುವು ನಾನಾನ್ಯವಾಗಿ ದೊರೆಯುತ್ತವೆ. ದುರ (ದೊಡ್ಡ ಜೋಳ)ವು ಇಲ್ಲಿನ ದೇಶವಾಸಿಗಳ ಮುಖ್ಯಾಹಾರ. ಸುಡಾನಿನ ಒಂದು ಭಾಗವು ಬ್ರಹತ್ ಬ್ರಿಟಿಷ ಜಲವಿದ್ಯುದ್ಯೋಜನೆಯಲ್ಲಿ ಆಡಕವಾಗಿದೆ.

೧೯೫೪—೫೫ರಲ್ಲಿ ನಡೆದ ನೂದಿಸ್ಟ ದಂಗೆಯು ಖಾರ್ಟೂಮಿನ ಪತನಕ್ಕೆ ಕಾರಣವಾಗಿದ್ದರೂ ಸುಡಾನಿನಿಂದ, ಅದರ ಗಡಿಯ ಬಂದರಗಳಾದ ನೈಲ್‌ನದೆಂಡೆಯ ವಾದಿ ಹಾಲ್ಫ ಮತ್ತು ಕೆಂಪು ಸಮುದ್ರ ದಂಡೆಯ ಸವಾಕಿನ್‌ಗಳನ್ನುಳಿದು, ಈಜಿಪ್ತ ಸರಕಾರ ಹಿಂಜರಿಯ ಬೇಕೆಂದು ಒತ್ತಾಯಿಸಿತು. ಇದರ ನಂತರ, ದೇಶಿಯ ಆಡಳಿತೆಯು ಬಂದು ಇದರ ನ್ಯೂನತೆಗಳಿಂದ ೨೯-೧೨-೫೫ರಂದು ಲಾರ್ಡ್ ಕಿಚನೀರಿನಿಂದ ಆಂಗ್ಲೊ ಈಜಿಪ್ತಿಯನ ಸೇನೆಯ ಬಲದಿಂದ ಅದು ತಳ್ಳಿ ಹಾಕಲ್ಪಟ್ಟಿತು. ಈಜಿಪ್ತ ಮತ್ತು ಬ್ರಿಟನುಗಳ ನಡುವೆಯೊಂದು ಒಪ್ಪಂದನೀ ಸಮಯದಲ್ಲಾಗಿ ಒರ್ವ ಗವರ್ನರ ಜನರಲ್ಲನ ಮೂಲಕ ಶಾಸನ ನಡೆಸುವ ನಿರ್ಧಾರವಾಯಿತು. ೧೯೫೫ರಲ್ಲಿ ಬ್ರಿಟಿಷ ನುತ್ತು ಸೂಡಾನಿಗಳು ಸವಾನ ಸಂಖ್ಯೆಯಲ್ಲಿರುವ ಒಂದು ಆಡಳಿತಾ ಸಮಿತಿಯನ್ನೂ ಆಂತಿಕವಾಗಿ ಚುನಾಯಿತರಿರುವ ಶಾಸನ ಸಭೆಯನ್ನೂ ರಚಿಸುವ ಅವಕಾಶ ನೀಡಬಲ್ಲ ಒಂದು ಸಂವಿಧಾನವು ನಿರ್ಮಿಸಲ್ಪಟ್ಟಿತು. ೧೯೫೫ರ ಆಕ್ಟೋಬರಿನಲ್ಲಿ ಈಜಿಪ್ತದ ಪಾರ್ಲಿಮೆಂಟು ಬ್ರಿಟಿಷರೊಡನೆ ತಾನು ೧೯೫೭ ಮತ್ತು ೧೯೫೮ರಲ್ಲಿ ಮಾಡಿಕೊಂಡ ಒಪ್ಪಂದವನ್ನು ರದ್ದುಮಾಡಿ, ಪ್ರತ್ಯೇಕ ಸೂಡಾನಿನ ಘೋಷಣೆಯೊಂದನ್ನು ಸಿದ್ಧಪಡಿಸಿತು.

೧೯೫೬ರ ಫೆಬ್ರವರಿಯಲ್ಲಿ ಒಂದು ಒಪ್ಪಂದಕ್ಕೆ ಕೈರೊದಲ್ಲಿ ಎರಡು ದೇಶಗಳವರೂ ಸಹಿಹಾಕಿದರು. ಇದರಲ್ಲಿ ಈಜಿಪ್ತಿನೊಡನೆ ಸೇರುವ ಇಲ್ಲವೇ ಪ್ರತ್ಯೇಕ ಸ್ವತಂತ್ರ ರಾಜ್ಯವಾಗಿ ಉಳಿಯುವ ಅಧಿಕಾರವನ್ನು ಕೊಡಲಾಯಿತು. ಜನವರಿ ೧೯೫೬ರಿಂದ ಸಂಪೂರ್ಣ ಸ್ವತಂತ್ರವಾಗುವ ನಿರ್ಧಾರವನ್ನು ಸುಡಾನು ಮಾಡಿತು. ಹೀಗಾಗಿ ಒಂದು ರಾಷ್ಟ್ರ ಸಭೆಯೂ ಪಾರ್ಲಿಮೆಂಟೂ ರಚನೆಯಾಗಿ ೫ ಜನವರಿ ಸಮಿತಿಯೆಂದು ಜನವರಿ ೧೫ರಂದು ಅಧಿಕಾರ ಸ್ವೀಕರಿಸಿತು. ಫೆಬ್ರವರಿಯಲ್ಲಿ ಮಂತ್ರಿ ಮಂಡಳಿಯು ಪ್ರತಿಜ್ಞೆ ಸ್ವೀಕರಿಸಿತು.

ಸೂಡಾನ್ ದೇಶೀಯರು ಅರಬರು, ನಿಗ್ರೋಗಳು, ಅಪಟ ಮತ್ತು ನಿಗ್ರೋ ರಕ್ತ ಸಂಬಂಧವುಳ್ಳ ನುಬಿಯನರು. ಅರಬರೂ ನುಬಿಯನರೂ ಮಹಮ್ಮದೀಯರಾಗಿದ್ದಾರೆ. ದಕ್ಷಿಣ ಭಾಗದಲ್ಲಿ ಕ್ರೈಸ್ತರೆ ಅಂತರದಲ್ಲಿದ್ದ ವಿದ್ಯಾಸಂಸ್ಥೆಗಳನ್ನು ಸರಕಾರವೀಗ ತನ್ನ ವಶಕ್ಕೆ ತಂದುಕೊಂಡಿದೆ. ಜುಲೈ ೫ರಲ್ಲಿ ಗೋರ್ಡನ್ ವಿಶ್ವವಿದ್ಯಾಲಯದ ಸ್ಥಾಪನೆಯಾಯಿತು. ಇದನ್ನೀಗ ಖಾರ್ಟೂಮ್ ವಿಶ್ವವಿದ್ಯಾಲಯವೆನ್ನುತ್ತಾರೆ. ಅರಬ್ಬಿ ಭಾಷೆಯು ರಾಷ್ಟ್ರ ಭಾಷೆಯ ಸ್ಥಾನವನ್ನಪರಿದೆ.

ಸುಡಾನಿಗೆ ತನ್ನದೇ ಆದ ರಕ್ಷಣಾ ಬಲವಿದೆ. ಇತ್ತೀಚೆಗಿನ ವರೆಗೆ ಪ್ರಧಾನಿಯಾಗಿದ್ದ ಅಬ್ದುಲ್ಲ ಖಲೀಲ್ ಉಮ್ಮರವರು ರಾಷ್ಟ್ರೀಯ ಪಕ್ಷಕ್ಕೆ ಸೇರಿದವರಿದ್ದು, ಈ ವರ್ಷ ಜುಲೈಯಲ್ಲಿ ಚುನಾಯಿತರಾಗಿದ್ದರು. ಈಗಿನ ಸರ್ವಾಧಿಕಾರಿಯಾದ ಇಬ್ರಾಹಿಮ್ ಅಬ್ಬೂದರು ಈಜಿಪ್ತದ ಕಡೆಗೆ ಒಲಿದಿರುವಂತೆ ತೋರಿಕೊಡುತಿದ್ದಾರೆ. ಅವರು ಸಾಮ್ರಾಜ್ಯವಾದದ ಖಂಡಕರೆಂದು ಇಷ್ಟರಲ್ಲಿಯೇ ತಿಳಿದಿದೆ. ಇವರಿಗೀಗ ಜಸ ವರ್ಷ ವಯಸ್ಸು. ಇವರ ನಾಯಕತ್ವ ಸುಡಾನನನ್ನೆತ್ತ ಎಳೆದೊಯ್ಯುತ್ತದೆಯೆಂದು ನೋಡಬೇಕಷ್ಟೆ.

ಎನ್. ಸಿ. ಸಿ. ಹುಡುಗೆಯರು ಗ್ರಾಮೀಣ ಪ್ರದೇಶಗಳಲ್ಲಿರುವ ತಮ್ಮ ಸೋದರಿಯರಿಗೆ ತಮ್ಮ ಕೈಕೆಲಸಗಳನ್ನು ತೋರಿಸುತಿದ್ದಾರೆ.

ವ್ಯಕ್ತಿ ಪರಿಚಯ
(೩ನೇ ಪುಟದಿಂದ)

ವನ್ನು ಎಂದಿಗೂ ತಿರಲಾರದು ಎಂಬುದು.

೧೯೫೬ನೇ ಆಗಸ್ಟ್‌ರಂದು ಜೈಲಿಗೆ ಸೋದ ಜಯಪ್ರಕಾಶರಿಗೂ, ಈಗಿನ ಜಯಪ್ರಕಾಶರಿಗೂ ಗುಣದಲ್ಲಿ ಬಹಳ ವ್ಯತ್ಯಾಸವಿದೆ. ಇಂದು ಅವರು ವಿನೋಬಾ ಭಾವೆಯವರ ಭೂದಾನ ಪ್ರಚಾರಕ್ಕಾಗಿದ್ದಾರೆ. ಇವರಿಗೆ ಗುಡಿಕೈಗಾರಿಕೆ ಮತ್ತು ಗ್ರಾಮ ಪಂಚಾಯತುಗಳ ಬಗ್ಗೆ ವಿಶೇಷ ಅಭಿಮಾನವಿದೆ. ಅವುಗಳ ಉದ್ಧಾರದಿಂದ ದೇಶ ಉದ್ಧಾರವಾಗಬಹುದೆಂದು ಇವರು ನಂಬಿದ್ದಾರೆ. ಅವರ ರೀತಿ-ನೀತಿಗಳು ಬದಲಾದರೂ, ಧ್ಯೇಯ ಒಂದೇ. ಇವರು ಸಾಧು ಪ್ರವೃತ್ತಿಯವರಾದರೂ ಸಂದರ್ಭ ಬಂದಲ್ಲಿ ಹರಿದಿಂದ ಸಾಧಿಸುವ ಪ್ರವೃತ್ತಿಯವರಾಗಿದ್ದಾರೆ.

ಬಿಹಾರದ ಸಿತಾಬ್ದಾರಿಯಾ ಎಂಬಲ್ಲಿ 56 ವರ್ಷಗಳ ಹಿಂದಲು ರೈತ ಕುಟುಂಬವೊಂದರಲ್ಲಿ ಜನಿಸಿ, ಇಂದು ಲಕ್ಷಾಂತರ ಜನರಿಂದ ಪ್ರೀತ್ಯಾಭಿಮಾನಗಳಿಗೊಳಗಾದ ಜನನಾಯಕ "ಶ್ರೀಮಾನ್ ಜಯಪ್ರಕಾಶ್ ನಾರಾಯಣ್"

—ಶ್ರೀ ನಾರಾಯಣ ಬಲ್ಲಾಳ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ನಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳಿಗೂ
ಸ್ಕೂಲ್ ಮೆಗಜೀನ್‌ಗಳನ್ನೂ ಬುಕ್‌ವರ್ಕನ್ನೂ
ಚಟೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ಸೇವಾ ಕ್ಷೇತ್ರ

ರಾಷ್ಟ್ರಾಭಿವೃದ್ಧಿಗೆ ಅಧಿಕೃತ ವಲಯದ ಸೇವೆ

ಸಮಾಜವಿಕಾಸ ಯೋಜನೆಗಳ ಸ್ಥಾಪನೆಯು ಮತ್ತು ಮೂಲೋದ್ದೇಶ

ಇಡಿಯ ಇಂಡಿಯದಲ್ಲಿ ಚಿತ್ರಕ್ಷೇತ್ರಗಳು ಸಮಾಜವಿಕಾಸ ಯೋಜನಾ ಕ್ಷೇತ್ರಗಳೆಂದು ಪರಿಗಣಿಸಲ್ಪಟ್ಟಿವೆ. ಈ ಪ್ರಮುಖ ಕ್ಷೇತ್ರಗಳಲ್ಲಿ ಅಲ್ಲಲ್ಲಿ ಅದರ ಶಾಖೆಗಳಿವೆ. ಹಾಗೂ ಪ್ರತಿಯೊಂದು ಕ್ಷೇತ್ರಗಳೊಳಗೆ ೫೦೦ ಹಳ್ಳಿಗಳನ್ನು ಗಣನೆಗೆ ತಂದುಕೊಳ್ಳಲಾಗಿದೆ. ಮತ್ತು ಈ ಪ್ರತಿ ೫೦೦ಹಳ್ಳಿಗಳಲ್ಲಿ ಇಲ್ಲವೇ ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ಸಮಾಜವಿಕಾಸ ಯೋಜನಾ ಕ್ಷೇತ್ರವೊಂದಾಲ್ಲಿ ಎರಡು ಲಕ್ಷ ಜನಸಂಖ್ಯೆ ಸಾಧಾರಣ ಮಟ್ಟಿಗಿರುವುದು. ಈ ಎರಡು ಲಕ್ಷ ಜನರ ಮೇಲ್ವಿಚಾರಣೆಯನ್ನು ಅದು ನೋಡುವುದು. ಈಗ ಪ್ರತಿ ಕ್ಷೇತ್ರವನ್ನು ಮೂರು ವಿಭಾಗವಾಗಿ ವಿಂಗಡಿಸಿ ಪ್ರತಿಯೊಂದನ್ನು "ಅಭಿವೃದ್ಧಿ ಕ್ಷೇತ್ರ" ಎಂದೆನ್ನುತ್ತೇವೆ. ಈ ಪ್ರತಿಯೊಂದು ಕ್ಷೇತ್ರ ಅರುವತ್ತು ಸಾವಿರದಷ್ಟು ಜನರಂಖ್ಯೆಯಿಂದ ಲಿಪ್ತವಾಗಿದೆ.

ಈ ರೀತಿಯ ವಿಭಾಗಗಳನ್ನು ಮಾಡಿಕೊಂಡು ಸಮಾಜ ವಿಕಾಸ ಯೋಜನೆಗಳು ತಮ್ಮ ಉದ್ಯಮವನ್ನು ಶ್ರದ್ಧೆಯಿಂದ ನಿರ್ವಹಿಸುತ್ತವೆ. ಈ ರೀತಿಯ ಯೋಜನೆಗಳು ಎಂದು ಹುಟ್ಟಿ ಬಂದುವು? ಅದರ ಬೆಳವಣಿಗೆ ಹೇಗಾಗಿದೆ? ಗುರಿಯೇನು? ಎಂಬುವುದನ್ನು ಈಗ ಅವಲೋಕಿಸೋಣವೆ?—ಈ ಕಮ್ಯೂನಿಟಿ ಪ್ರೊಜೆಕ್ಟ್‌ಗಳು ೧೯೫೨ರ ಅಕ್ಟೋಬರ್ ತಿಂಗಳ ೨ರಂದು ಹುಟ್ಟಿಬಂದುವು. ಆನಂತರ ೧೯೫೩ನೇ ಒಕ್ಟೋಬರ್ ತಿಂಗಳಂದು ಭಾರತದ ೧/೨ರಷ್ಟು ಹಳ್ಳಿಗಳು ಇವುಗಳ ಸಹಾಯವನ್ನಲು ಶಕ್ಯವಾದುವು. ೧೯೫೬ರೊಳಗೆ ಭಾರತದ ಕಾಲುವಾಸಿಯಷ್ಟು ಹಳ್ಳಿಗಳು ಇವುಗಳ ಸಹಾಯ ಅನುಭವಿಸುತ್ತವೆ ಎಂದು ಊಹಿಸುತ್ತಾರೆ. ಆದೂ ಕಳೆದ ಬಳಿಕ ೧೯೬೧ರಲ್ಲಿ ಇಡಿಯ ಭಾರತದ ಕೋಟಿ ಹಳ್ಳಿಗಳು ಕಮ್ಯೂನಿಟಿ ಪ್ರೊಜೆಕ್ಟ್‌ಗಳ ಪರಿಧಿಗೆ ಬಂದು ಉದ್ಧಾರವಾಗಲಿವೆ ಎಂದು ಸಮಾಜ ವಿಕಾಸ ಯೋಜನೆಯ ಪ್ರಮುಖರೆಣಿಸಿರುತ್ತಾರೆ. ಅಂತಾದರೆ ೧೯೫೧ರಲ್ಲಿ ಸಮಾಜ ವಿಕಾಸ ಯೋಜನೆಗಳು ತಮ್ಮ ಗುರಿಮುಟ್ಟಬಲ್ಲುವೆಂದಾಯಿತು. ಆಗ ಗಾಂಧೀಜಿಯವರ ಕನಸು ನೆನಸಾಗಲಿದೆ. ಅಂದು ಭಾರತವು "ರಾಮರಾಜ್ಯವಾಗುವುದರಲ್ಲಿ ಸಂದೇಹವಿಲ್ಲ. ಆಗ ಭಾರತದ ಕೋಟಿ ಕೋಟಿ ಹಳ್ಳಿಗರ ಜೀವನ ಮಟ್ಟ ವಿಶೇಷವಾಗಿ ಸುಧಾರಿಸಲ್ಪಟ್ಟು,ಅವರ ಆಹಾರ ಸಮಸ್ಯೆ, ಬಟ್ಟೆಬರೆಗಳ ಸಮಸ್ಯೆ, ವಸತೀಸಮಸ್ಯೆ, ವಿದ್ಯಾ ಸಮಸ್ಯೆಗಳಿಗೆಲ್ಲ ಉತ್ತರ ದೊರೆಯಬಲ್ಲುದು. ಈ ಕಮ್ಯೂನಿಟಿ ಪ್ರೊಜೆಕ್ಟ್‌ಗಳ ಅನುಕಂಪನದಿಂದ ೧೯೬೧ರಲ್ಲಿ ಅಂತೆ ಕನ್ನ ಗುರಿಮುಟ್ಟಿ ಭಾರತವನ್ನು ಉದ್ಧಾರ ಪಥದಲ್ಲಿ ಸಮಾಜ ವಿಕಾಸ ಯೋಜನೆಗಳು ನಡೆಸಲೆಂದು ಬೇಕೋಣ!

ಮತ್ತಷ್ಟಾನ ಕಾರ್ಯಗಳು ಸಮಾಜ ವಿಕಾಸ ಯೋಜನಾ ಕ್ಷೇತ್ರದಲ್ಲಿ ಜರುಗುತ್ತವೆ! ಜರಗಲಿವೆ! ಎಂಬುವುದನ್ನು ಅವಲೋಕಿಸೋಣವೆ? ಕಮ್ಯೂನಿಟಿ ಪ್ರೊಜೆಕ್ಟಿನವರು ಎಲ್ಲಾ ಹಳ್ಳಿಗರಿಗೆ ವಿಧವಿಧದಿಂದ ಸಹಾಯ ನೀಡುತ್ತಾರೆ. ಹಳ್ಳಿಯ ಬೇಸಾಯಗಾರನಿಗೆ ಅವರು ಕೊಡುವ ಸಹಾಯ, ತರಬೇಕು ಸ್ಮರಣೀಯ. ಅಂದರೆ ಅವರಿಂದ ಬೇಸಾಯಗಾರ ತುಂಬು ಸಹಾಯ ಪಡೆಯುತ್ತಾನೆ. 'ಬೇಸಾಯದವ ಬೇಗ ತಾ ಸಾಯ' ಎಂಬ ನುಡಿಯಿದ್ದರೂ ಕೆಚ್ಚಿನ ರೈತರು ಬಹಳ ಬಡವರು. ಕೆಲವರಲ್ಲಿ ಎಮ್ಮೆ ಬಡತನ ನೆಲೆಸಿರುವುದು ಎಂದರೆ ಅವರಿಗೆ ಒಂದು ಹಾರಿ ಇಲ್ಲವೆ ಒಂದು ನೇಗಿಲು ಕೊಳ್ಳಲು ತ್ರಾಣವಿರದು. ಇದನ್ನೆಲ್ಲ ಸಮಾಜ ವಿಕಾಸ ಯೋಜನೆಯವರು ಪರಾಮರ್ಶಿಸಿ ಅವರಿಗೆ ಉಚಿತಯುಕ್ತವಾದ ಬೇಸಾಯ ಸಲಕರಣೆಗಳನ್ನು ದಯಪಾಲಿಸಿರುತ್ತಾರೆ. ಕೆಲವು ಆಧುನಿಕ ಬೇಸಾಯ ಸಲಕರಣೆಗಳು ಅವರಿಗೆ ದಯಪಾಲಿಸಲ್ಪಟ್ಟು, ಅದನ್ನು ಹಿಡಿವ ಬಗೆ ಹೇಳಿಕೊಡಲ್ಪಡುತ್ತದೆ.

ಯಾವ ರೀತಿಯಿಂದ ಎತ್ತುಗಳ ಅರೈಕೆ ಮಾಡಬಹುದು? ಯಾವರೀತಿಯಿಂದ ನಡೆದರೆ ಆ ಅವರ ಎತ್ತುಗಳು ದಷ್ಟಪುಷ್ಟವಾಗಿ ಬೆಳೆಯಬಲ್ಲುವು? ಎಂಬ ಅನುಭವಾಮೃತವನ್ನು ಅವರಿಗೆ ಧಾರೆಯೆರೆಯುವರು. ಯಾವ ರೀತಿಯಿಂದ ಆರೋಗ್ಯವನ್ನು ಆ ರೈತ ರಕ್ಷಿಸಿಕೊಳ್ಳಬಹುದು? ಎಂದು ಅವರಿಗೆ ಹೇಳಿ, 'ಆರೋಗ್ಯವೇ ಭಾಗ್ಯ'ವೆಂದು ಬೋಧಿಸಿ ಮಲೇರಿಯಾ, ಸಿಡುಬು ರೋಗಗಳನ್ನು ಹೊತ್ತು ತರುವ ಕ್ರಿಮಿಗಳಿಂದ ಹೇಗೆ ದೂರವಿರಬೇಕೆಂದೂ ಈ ಯೋಜನೆಯವರು ಅಲ್ಲಲ್ಲಿನ ಹಳ್ಳಿಗಳಿಗೆ ಭೇಟಿಕೊಟ್ಟು ಸೂಚಿಸುತ್ತಾರೆ. ಇದರಿಂದ ರೈತನು ಆದಷ್ಟು ಮಟ್ಟಿಗೆ ತನ್ನ ಆರೋಗ್ಯದ ಕಡೆಗೆ ಕಿಂಚಿತ್ ದೃಷ್ಟಿ ಹರಿಯಿಸುವಂತಾಗುತ್ತದೆ. ಈ ರೀತಿಯಿಂದ ಬೇಸಾಯಗಾರನಿಗೆ ವಿವಿಧ ಸಲಕರಣೆಗಳನ್ನು ದಯಪಾಲಿಸಿದುದು ಪರಿಣಾಮವಾಗಿ ಅವರು ಆನಂದದಿಂದ ತುಂಬಿದವರಾಗಿ ಗೊಬ್ಬರದ ಹೊಂಡಗಳನ್ನು ಇವರು ರವಾನಿಸಿದ ನುರಿತ ಕೆಲಸಗಾರ ಸಲಹುಭವದಿಂದ ತೋಡುವರು; ರಸ್ತೆಗಳನ್ನು ರಚಿಸುವರು; ಭಾವಿಗಳನ್ನು ಇವರು ದಯಪಾಲಿಸಿದ ಸರ್ವ ಸಾಮಗ್ರಿಗಳಿಂದ ತೋಡಿ ಹಳ್ಳಿಗಳಲ್ಲಿ ನೀರಿನ ಸರಬರಾಯಿ ಮಾಡುವರು. ಹಾಗೂ ಹೆರುವಿಕೆಯಿಂದ '...ಓ...' ಪದ್ಯ ಹಾಡುತ್ತ ಬಂಜರು ಭೂಮಿಯನ್ನು ಬೇಸಾಯಕ್ಕೆ ಬೇಕಾಗುವಂತೆ ಮಾಡುವರು. ಇಷ್ಟೆಲ್ಲಾ ಎಲ್ಲಿಂದ? ಸಮಾಜ ವಿಕಾಸ ಯೋಜನೆಯವರು ದಯಪಾಲಿಸಿದ ಸಾಧನಗಳಿಂದ, ಅದಕ್ಕೆಂತ ಮೊದಲು ಅವರ ಅನುಭವದಿಂದ ತಾನೆ?

—ಕೆ. ರಮೇಶ ಪೈ, ಉಡುಪಿ.

ಸಂಗೀತ ಸಮೀಕ್ಷೆ

ಭಾರತೀಯ ಸಂಗೀತದ ಪ್ರಾಚೀನ ಪರಂಪರೆ

ಕರ್ನಾಟಕ ಸಂಗೀತವು ಉಳಿದ ಸಂಗೀತಗಳನ್ನು ಮೆಟ್ಟಿ ನಿಂತಿದೆ

ಇಂದಿನ ಸಂಗೀತ ಕೃತಿಗಳ ವಿವಿಧ ಪರಂಪರೆಗಳು ಹಲವು ಶತಮಾನಗಳ ಸತತ ಪ್ರಯತ್ನದಿಂದ ಇಂದಿನ ಸ್ವರೂಪಕ್ಕೆ ಬೆಳೆದು ಬಂದಿವೆ. ಮುಖ್ಯವಾಗಿ ಇಂದು ಕರ್ನಾಟಕ ಸಂಗೀತವೆಂದು ಕರೆಯಲ್ಪಡುವ ಸಂಗೀತ ಪರಂಪರೆಗೆ ಅಡಿಪಾಯ ಶಾಕೆದವನು ಆಥವಾ ಶೂಕ್ಯ ಒದಗಿಸಿದವನು ಪ್ರಾಯಶಃ ಜಯದೇವನೆಂದೇ ಹೇಳಬಹುದು.

ಭಾರತದಲ್ಲಿ ಸಂಗೀತ ಕಲೆಗೆ ಮುಖ್ಯ ಆಧಾರ ಹಾಡುಗಾರಿಕೆ; ವಾದ್ಯ ಸಂಗೀತ ಕ್ಕೆ ಇರುವ ಸ್ಥಾನ ಎರಡನೆಯದು ಅದರದು ಪೋಷಕ ಸ್ಥಾನವೆನ್ನಲೂಬಹುದು ಹಾಡುಗಾರಿಕೆಯಿಂದ ಭಿನ್ನವಾದ ರಂಗೀತಕ್ಕೆ ಭಾರತದ ಸಂಗೀತ ಕಲೆಯಲ್ಲಿ ಸ್ಥಾನವೇ ಇಲ್ಲವೆನ್ನಬಹುದು.

ಸಂಗೀತಕಲೆ ಬೆಳೆದಂತೆ ಕೃತಿ ರಚನೆಯ ಕಾರ್ಯದಲ್ಲಿ ಕೆಲವು ಮೂಲ ನಿಯಮಗಳು ರೂಪಿತವಾದುವು. ಅವುಗಳನ್ನು ಅನುಸರಿಸಿ ಹಲವು ಪಂಥಗಳು ಹುಟ್ಟಿಕೊಂಡುವು. ಸಂಪ್ರದಾಯಗಳು ಬೆಳೆದುವು. ತಾಳ ಮತ್ತು ರಾಗಕ್ಕೆ ಬಹುಮುಖ್ಯ ಪ್ರಾಧಾನ್ಯವನ್ನು ಕೊಡಲಾಯಿತು.

ಹಿಂದಿನ ಸಂಸ್ಕೃತ ಕೃತಿಗಳಲ್ಲಿ ಅಂತ್ಯ ವ್ಯಾಸ ಸಾಮಾನ್ಯವಾಗಿರುತ್ತಿದ್ದುದು ಒಂದು ವೈಶಿಷ್ಟ್ಯ. ಜಯದೇವನ ಈ ಅಂತ್ಯ ಪ್ರಾಸವನ್ನು ಬಹುಮಟ್ಟಿಗೆ ಉರಿಯೋಗಿಸಿಕೊಂಡಿದ್ದಾನೆ. ಶ್ರೀ ಶಂಕರಾಚಾರ್ಯರ ಕೃತಿಗಳಲ್ಲೂ ನಾವು ಇದರ ಉಪಯೋಗವನ್ನು ಕಾಣಬಹುದು. ಉತ್ತರ ಭಾರತದಲ್ಲಿ ಇಂದಿಗೂ ಈ ಅಂತ್ಯಪ್ರಾಸದ ಬಳಕೆ ಒಂದು ಮುಖ್ಯ ವೈಶಿಷ್ಟ್ಯ.

ಕೃಷ್ಣಶಕೆಯ ಆರಂಭವನ್ನು ಹಿಂದೆಯೇ ದ್ರಾವಿಡ ಸಂಪ್ರದಾಯದ ಸಂಗೀತ ಪದ್ಧತಿಯು ಉಚ್ಚ್ರಾಯ ಸ್ಥಿತಿಯನ್ನು ಮುಟ್ಟಿದ್ದಿತು ದ್ರಾವಿಡ ಸಂಪ್ರದಾಯದ ಸಂಗೀತ ಕೃತಿಗಳಲ್ಲಿ 'ಯತಿ' ಅಥವಾ 'ಎಡುಕೈ' ಎಂಬ ಪ್ರಾಸಪ್ರಯೋಗವನ್ನು ನೋಡಬಹುದು. 'ನೊಸ್ಸೆ' ಎಂಬ ಇನ್ನೂ ಒಂದು ಪ್ರಾಸಪ್ರಯೋಗವನ್ನು ನಾವು ಗಮನಿಸಬಹುದು. ಇದರಲ್ಲೇ ಒಂದು ಪ್ರತ್ಯೇಕ ಗುಣ. ಪ್ರತಿಯೊಂದು ಪಂಕ್ತಿಯು ಎರಡನೆಯ ಚರಣದ ಆರಂಭ ನೊದಲನೆ ಪಂಕ್ತಿಯ ಎರಡನೆಯ ಚರಣ ಯಾವುದರಿಂದ ಆರಂಭವಾಗುತ್ತದೆಯೋ ಅದರಿಂದಲೇ ಆಗುತ್ತದೆ. ಕರ್ನಾಟಕ ಸಂಗೀತ ಪದ್ಧತಿಯ ಆಧಾರದ ಮೇಲೆ ರಚಿತವಾಗಿರುವ ಅನೇಕ ಧಾರ್ಮಿಕ ಕೃತಿಗಳಲ್ಲಿ ಇವೆರಡೂ ಒಗೆಯ ಸ್ವರೂಪಗಳನ್ನು ಕಾಣಬಹುದು. ಇವೆಂದೂ ಸಂಗೀತದ ಅಂಶವನ್ನು ಕೃತಿಗಳಿಗೆ ಹೆಚ್ಚಾಗಿ ಒದಗಿಸಿ ಕೃತಿಗಳ ಮಾಧುರ್ಯ ಹೆಚ್ಚಲು ಇವು ಕಾರಣವಿರುವುದರಿಂದ ದಕ್ಷಿಣದಲ್ಲಿ ಇವುಗಳ ಉಪಯೋಗ ಹೇರಳವಾಗಿ ನಡೆಯಿದೆ ಮತ್ತು ಸಾಮಾನ್ಯವಾಗಿ ಎಲ್ಲ ಕೃತಿಗಳಲೂ ಇದನ್ನು ಕಾಣಬಹುದು.

ವಿಖ್ಯಾತ ಕೃತಿ ರಚನೆಕಾರರಾದ ಪುರಂದರದಾಸರು, ಕ್ಷೇತ್ರಜ್ಞನ ರಾಯಣ ತೀರ್ಥ, ಸದಾಶಿವ ಬಹ್ಮಂ, ತ್ಯಾಗರಾಜ ದೀಕ್ಷಿತರು, ಶ್ಯಾಮ ಶಾಸ್ತ್ರಿ ಮತ್ತು ಸ್ವಾತಿ ತಿರುನಾಳ್ ಇವರೇ ಮೊದಲಾದವರು ಈ ಅಲಂಕಾರ ವಿಶೇಷಗಳನ್ನು ತಮ್ಮ ಕೃತಿ ರಚನೆಯಲ್ಲಿಯೇ ಅತ್ಯಾವಶ್ಯಕವಾಗಿ ಬಳಸಬೇಕಾದ್ದೆಂದು ಅಂಗೀಕರಿಸಿದ್ದಾರೆ.

ಈ ಅಲಂಕಾರ ವಿಶೇಷಗಳ ಜನಪ್ರಿಯತೆ ಪ್ರಬಲವಾಗಿ ತಮ್ಮುಗಳನ್ನು ರಂಜಿಸಿ ಕೃತಿಗಳಲ್ಲಾ ಬಳಸಿ ತೊಡಗಿರುವುದನ್ನು ಕಾಣಬಹುದು. (ಸಂಸ್ಕೃತ ಕೃತಿಗಳಿಗೆ ತಾಳ ಹೆಚ್ಚು ಮುಖ್ಯವೇ ಹೊರತು ಪ್ರಾಸ ಅಷ್ಟು ಮುಖ್ಯವಲ್ಲ.)

ಸಂಗೀತ ಕೃತಿಗಳಿಗೆ ಸರಸ್ವತಿ, ಗೋಪಾಲ ಇತ್ಯಾದಿಗಳೂ ಒಳ್ಳೆ ಅಲಂಕಾರ ವಿಶೇಷಗಳು. ಸ್ವಾತಿ ತಿರುನಾಳ್, ದೀಕ್ಷಿತರ್ ಮತ್ತು ತ್ಯಾಗರಾಜರ ಕೃತಿಗಳಲ್ಲಿ ಇವುಗಳನ್ನು ಹೇರಳವಾಗಿ ಕಾಣಬಹುದು.

ಸಂಗೀತದ ಅಭ್ಯುದಯಕ್ಕೆ ಸ್ವರ ಪ್ರಸ್ತಾರ ತಾಳದ ಪರಿಚಯ ಪ್ರಾಥಮಿಕ ಸೂಕ್ಷ್ಮ ಸೂಚನೆ ಕೊಡಬೇಕಾದ್ದೆಂದೇ ರಚಿತವಾಗಿರುವ ಕೆಲವು ಕೃತಿ ಕಿರಿದು. ಪುರಂದರದಾಸರು ರಚಿಸಿರುವಂತಹ ಇಂತಹ ಕೃತಿಗಳು ಇಂದಿಗೂ ದಕ್ಷಿಣ ಭಾರತದಲ್ಲಿ ಬಳಕೆಯಲ್ಲಿವೆ. ಪುರಂದರದಾಸರು ಜೊತೆ ಅಭ್ಯಾಸಿಗಳಿಗೆಂದೇ ಕೆಲವನ್ನು ಕ್ರಮವಾಗಿ ರಚಿಸಿದರು.

ನಾನು ಮೊದಲೇ ತಿಳಿಸಿದಂತೆ ಭಾರತದಲ್ಲಿ ಎಲ್ಲ ಸಂಗೀತ ಕಂತೆ ಪುರಂದರ್ಯ ಕ್ಕೆ ಪ್ರಾಧಾನ್ಯ ಕೊಟ್ಟು ಬೆಳೆದಿವೆ. ಪದ್ಯೋಚ್ಚಾರವಿಲ್ಲದ ಸಂಗೀತವೇ ಕುಂಬಳಕಾಯಿ ಪದಗಳ ಅವಶ್ಯಕತೆಯೇ ಇಲ್ಲದ ಜತಿ, ಥ್ವನಿ ಮತ್ತು ತಿಲ್ಲಾನದಂತಹ ಕೃತಿಗಳೂ ಇಲ್ಲದಿಲ್ಲ. ಅವೆಲ್ಲ ಇವುಗಳ ಬಳಿಕ ಇರುವುದು ನೈಕ್ಯ ಬೆಲೆಯುಳ್ಳ ಮಾತ್ರ. ತಾಳವಾನಸದೇ ಇವೆಲ್ಲ ಮುಖ್ಯ ಉಪಯೋಗ. ತಿಲ್ಲಾನವಲ್ಲಿ ಪದಗಳಿಂದ ಸ್ವರಗಳು ಮತ್ತು ರೋಲ್ತುಬ್ಬ ಇತ್ಯಾದಿ ತಾಳ ಪ್ರಯೋಗಗಳು ಇರುತ್ತವೆ. ಉದಾ:— ತಾಧಿಂ ಧಿಮಿಕಿಟ ಇತ್ಯಾದಿ.

—ಪ್ರೊ. ಆರ್. ಶ್ರೀನಿವಾಸನ್.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಳಿಕೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA-40

ಸ್ಥಾಪಕರು: ಷಾ ಕಂಜೆನಿ, ಪುಂಗಳೂರು—1.

NAVAYUGA
REGD. NO. M. 3619

UDIPI, THURSDAY
27—11—1958

LICENSE NO. 31
Licensed to Post without Prepayment

ಪ್ರೇಕ್ಷಣೀಯ ಸ್ಥಳ

ಅಜಂತೆ ಮತ್ತು ಎಲ್ಲೋರಗಳ ಮಹಾ ಗುಹ್ಯರಾಲಯಗಳು

ವರ್ಷಂಪ್ರತಿ ಲಕ್ಷಾಂತರ ಯಾತ್ರಿಕರು ಇಲ್ಲಿ ಬರುತ್ತಾರೆ

ಅಜಂತಾ ಮತ್ತು ಎಲ್ಲೋರಾಗಳ ಗುಹಾಲಯಗಳನ್ನು ಪ್ರತಿಯೊಬ್ಬ ಭಾರತ ಪ್ರವಾಸಿಯೂ ನೋಡಲೇಕು. ಸೌಂದರ್ಯಾನು ಸೋದಕ ಪ್ರವಾಸಿಯು ಈ ಗುಹಾಲಯಗಳ ಪ್ರಾಚೀನ ಕಲಾ ಪೌಢಿಯನ್ನು ಕಂಡು ತೆಲೆದೂಗದಿರಲಾಹ ಮಾನವನ ಕಲಾಕುಶಲತೆಯು ಅತ್ಯುಚ್ಚ ನೂದರಿ ಈ ಗ ಹಾಲಯಗಳ.

ವನ ಮಾರ್ಗದ ಮಧ್ಯದಲ್ಲಿ, ಪ್ರಾಕೃತಿಕ ದೃಶ್ಯಗಳ ನಡುವೆ ಇಪ್ಪತ್ತನಾಲ್ಕು ಆಶ್ರಮಗಳು ಹಾಗೂ ಏದು ದೇವಾಲಯಗಳನ್ನೊಳಗೊಂಡ ಅಜಂತಾ ಗುಹೆಗಳು ಇವೆ. ಇವುಗಳಲ್ಲಿ ಕೆಲವಂತೂ ೨೦೦೦ ವರ್ಷಗಳಿಗೂ ಹಿಂದಿನವು. ಅರ್ಧಚಂದ್ರಾಕೃತಿಯ ಇಲ್ಲಿಯ ಬಂಡೆಗಳು, ಭಾದ್ಧ ಸನ್ಯಾಸಿಗಳನ್ನು ಆಕರ್ಷಿಸಿದುವು. ಅವರು ಈ ಸ್ಥಳವನ್ನು ತಮ್ಮ ಆಶ್ರಮಕ್ಕೆ ಹಾಗೂ ಧ್ಯಾನಕ್ಕಾಗಿ ಆರಿಸಿದರು. ಸುಮಾರು ಒಂದು ಸಾವಿರ ವರ್ಷಗಳಲ್ಲಿ ಈ ಭಿಕ್ಷುಗಳು ಈ ಬಂಡೆಗಳನ್ನು ಕೊರೆದು ಗುಹಾಲಯಗಳನ್ನು ನಿರ್ಮಿಸಿ, ಇಂದು ತಚ್ಚರಿ ಪಡುವ ಕೃತಿಗಳಿಗೆ ಕಾರಣಕರ್ತರೆನಿಸಿದರು.

ಈ ಗುಹಾಲಯಗಳು ವ್ಯಾಪಾರದ ಹೆದ್ದಾರಿಗಳಲ್ಲಿಯೇ ಇರುವುದೊಂದು ವೈಶಿಷ್ಟ್ಯ. ಈ ಗುಹಾಲಯಗಳನ್ನು ಹಾದೇ ವ್ಯಾಪಾರದ ಮಾರ್ಗಗಳು ಹೋಗುತ್ತಿದ್ದುವು. ಪ್ರಾಚೀನ ಕಾಲದಲ್ಲಿ ಅಜಂತಾವು ಉತ್ತರ ಮತ್ತು ದಕ್ಷಿಣ ರಾಜ್ಯಗಳ ನಡುವಣ ಒಂದು ಪ್ರಮುಖ ಮಾರ್ಗವಾಗಿದ್ದು ಕದನ್ನು 'ದಕ್ಷಿಣದ ಮಹಾದ್ವಾರ' ಎಂದು ಕರೆಯಲಾಗುತ್ತಿದ್ದರಂತೆ!

ಗುಹಾಂತರ್ಗತ ಕಲಾ ಕೃತಿಗಳು ಮುಖ್ಯವಾಗಿ ಎರಡು ಭಾಗಗಳನ್ನೊಳಗೊಂಡಿವೆ. ಮೊದಲನೆಯದು ಚೈತ್ಯಾಲಯ ಅಥವಾ ಪೂಟ್ಟ ದೇವಾಲಯಗಳು. ಎರಡನೆಯದು ವಿಹಾರಗಳು ಅಥವಾ ಆಶ್ರಮಗಳು. ಇವುಗಳು ಇಪ್ಪತ್ತೊಂಭತ್ತು ಇದ್ದು ಅವುಗಳಲ್ಲಿ ಆತಿ ದೊಡ್ಡ ಗುಹಾಲಯವು ಅಧುನಿಕ ಪ್ರೇಕ್ಷಕ ರಂಗದಪ್ಪು ವಿಶಾಲವಾಗಿದೆ ಇವುಗಳ ನಿರ್ಮಾಣವು ಅದ್ಭುತವಾಗಿದ್ದು ಹೆಗಲಿನ ಕೆಲವು ಸಮಯ ಮಾತ್ರ ಇವುಗಳೊಳಗೆ ಬೆಳಕು ಬೀಳುವುದು. ಈ ಗುಹಾಲಯಗಳು ಶಿಲ್ಪದಿಂದ ಕೃಂಗರಿಪಲ್ಪಟ್ಟಿವೆ. ಗೋಡೆಗಳಲ್ಲಿ ಅತ್ಯುತ್ತಮ ಚಿತ್ರಗಳಿವೆ. ಇವುಗಳ ಬಣ್ಣಗಳು ಇನ್ನೂ ಕಳೆಗುಂದಿಲ್ಲ. ಈ ಚಿತ್ರಗಳ ರಚನೆಯು ಪ್ರತಿಯೊಬ್ಬನ ಮನದಲ್ಲೂ ಒಂದು ಅಚ್ಚಳಿಯದ ಪರಿಣಾಮವನ್ನುಂಟು ಮಾಡುವುದು. ಇಲ್ಲಿಯ ಚಿತ್ರ ಕಲೆಯು ಸುಧಾರಿತವಾಗಿದೆ. ಭಾರತೀಯ ಕಲೆಯು ಇಲ್ಲಿ ಕಲಾತ್ಮಕ ಬೆಳವಣಿಗೆ ಹೊಂದಿ, ಜೀವಕಳೆಪಡೆದು ಉಚ್ಚ ಸ್ಥಾನದಲ್ಲಿ ನಿಲ್ಲುವುದನ್ನು ಬೆರಗುಗೊಳಿಸುವುದ. ಒಬ್ಬ ಇಂಗ್ಲಿಷ್ ತಜ್ಞ ಕಲಾಕಾರನ ಅಭಿಪ್ರಾಯದಂತೆ ಈ ಗುಹಾಲಯಗಳಲ್ಲಿ ಚಿತ್ರ, ಶಿಲ್ಪ ಹಾಗೂ ವಾಸ್ತುಗಳ ಸಮ್ಮಿಲನವಾಗಿದ್ದು ಇದು ಒಂದು ಕಲಾಗಾರವಾಗಿದೆ.

ಈ ಗುಹಾಲಯಗಳ ಪ್ರಾಚೀನತೆಯು ಕ್ರಿ. ಪೂ. ೨ನೇ ಶತಮಾನ ಹಾಗೂ ಕ್ರಿ. ಶ. ೬ನೇ ಶತಮಾನಗಳ ನಡುವೆ ಇದೆ ಎನ್ನಲಾಗಿದೆ. ಇಲ್ಲಿಯ ಕಲಾ ಕೆಲಸಗಳಲ್ಲಿ ಸಮಯಕ್ಕನುಗುಣವಾದ ವಿಂಗಡಣೆ ಇದ್ದರೂ ಅವುಗಳು ಒಂದೇ ಮಾದರಿಯಲ್ಲಿರುವುದು ಗವುನಾರ್ಹವಾದ ಅಂಶ.ಇಲ್ಲಿಯ ಚಿತ್ರಗಳು ಬುದ್ಧನ ಜೀವನಕ್ಕೆ ಸಂಬಂಧಿಸಿದವುಗಳಾಗಿವೆ. ಚಿತ್ರಗಳ ವಸ್ತು ಧಾರ್ಮಿಕ ಸ್ವರೂಪದ್ದಾಗಿದ್ದರೂ ಅವುಗಳ ಸೈಜತೆ ಹಾಗು ರಚನಾ ವಿನ್ಯಾಸಗಳು ಜನಜೀವನದೊಂದಿಗೆ ಮಿಲನಹೊಂದಿರುವುದು ಇನ್ನೊಂದು ವಿಶಿಷ್ಟ ಕುರುಹು!

ಗುಹೆಗಳು ಬಂಡೆಯ ಎರಡನೆಯ ಅಂತಸ್ತಿನಲ್ಲಿವೆ. ಉರ್ಧ್ವಬಂಡೆಯು ಅರ್ಧ ಚಂದ್ರಾಕೃತಿಯ ರೂಪದಲ್ಲಿದ್ದು ೨೫೦ ಅಡಿ ಎತ್ತರವಾಗಿದೆ. ಈ ಗುಹಾಲಯಗಳ ಶಿಲ್ಪಗಳು ಹಾಗೂ ರಚನಾ ಕೌಶಲ್ಯದ ಜೊತೆಗೆ ನಾವು ಈ ಪ್ರಕೃತಿದತ್ತ ಪ್ರದೇಶಕ್ಕೆ ಆಯ್ಕೆ ಮಾಡಿದ ಆ ಸೌಂದರ್ಯಾನುಭೋದಕ ಗುಣಕ್ಕೂ ತಲೆದೂಗದೇಕು.

ಅಜಂತಾದಿಂದ ನೂರು ಮೈಲಿಗಳ ದೂರದಲ್ಲಿ ಇನ್ನೊಂದು ಅರ್ಧ ಚಂದ್ರಾಕೃತಿಯ ಎಲ್ಲೋರಾ ಗುಹೆಗಳು ಇವೆ. ಇಲ್ಲಿಯ ಗುಹಾಲಯಗಳು ಹಾಗೂ ದೇವಾಲಯಗಳು ಬೌದ್ಧ ಮತಕ್ಕೆ ಸಂಬಂಧಿಸಿದರೂ ಇಲ್ಲಿಯ ಉಂತ್ಯದ ರಚನೆಗಳಲ್ಲಿ ಬ್ರಾಹ್ಮಣ ಹಾಗೂ ಜೈನರ ಕೈವಾಡಗಳನ್ನು ಕಾಣಬಹುದು. ಇಲ್ಲಿಯ ಕೈಲಾಸ ದೇವಾಲಯವೇ ಪ್ರಮುಖವಾದುದು. ಇದು ೧೫೪ ಅಡಿ ಉದ್ದ, ೧೦೭ ಅಡಿ ಅಗಲ ಹಾಗೂ ೧೫೪ ಅಡಿ ಎತ್ತರವಾಗಿದ್ದು ಒಂದೇ ಬಂಡೆಯಿಂದ ಕೊರೆಯಲ್ಪಟ್ಟಿದೆ. ಈ ದೇವಾಲಯವು ಶಿಲ್ಪಮಯವಾಗಿದ್ದು, ಪ್ರಾಣಿಗಳು, ದೇವತೆಗಳು, ದೇವರುಗಳ ಪ್ರತಿಮೆಗಳನ್ನೊಳಗೊಂಡಿದೆ.

ಬಂಡೆಯಲ್ಲಿ ಕೊರೆಯಲ್ಪಟ್ಟಿದ್ದರೂ ಈ ದೇವಾಲಯದಲ್ಲಿ ಸ್ತಂಭಗಳೂ, ಅಂತಸ್ತುಗಳೂ, ನುಚ್ಚಿಗೆಗಳೂ ಇವೆ. ಇದರ ಗೋಡೆಗಳಲ್ಲಿ ರಾಮಾಯಣ ಮತ್ತು ಮಹಾ ಭಾರತಕ್ಕೆ ಸಂಬಂಧಿಸಿದ ಚಿತ್ರಗಳು ಇವೆ. ಇತರ ಗುಹೆಗಳು ಈ ದೇವಾಯದ ಇನ್ನೊಂದು ಬದಿಯಲ್ಲಿ ಚಾಚಿವೆ.

ಎಲ್ಲೋರಾ ಗುಹೆಗಳ ರಚನೆಯ ಕುಶಲತೆ ಅಸ್ಪತಿಮವಾನುದು. ಅಪರಾಹ್ನದ ಬಳಿಕ ಸೂರ್ಯನ ಕಿರಣಗಳು ನೇರವಾಗಿ ಈ ಗುಹೆಗಳ ಒಳಗೆ ಬಿದ್ದು ಇಲ್ಲಿಯ ಶಿಲ್ಪಗಳು ಕೆತ್ತಲೆ ಬಣ್ಣವನ್ನು ಪಡೆಯುತ್ತವೆ. ಬುದ್ಧನ ಜೀವನದ ಸುತ್ತ ಹೆಣೆದ ಚಿತ್ರಗಳು ಇಲ್ಲಿ ಕೆತ್ತಲ್ಪಟ್ಟಿವೆ.

ಹೈದರಾಬಾದ್ ಸೆಕಂದರಾಬಾದಿನಿಂದ ೩೫೦ ಮೈಲು ದೂರದಲ್ಲಿರುವ ಬೊಂಬಾಯಿಂದ ೩೫೫ ಮೈಲು ದೂರದಲ್ಲಿರುವ ಔರಂಗಾಬಾದ್‌ನಿಂದ ಅಜಂತಾ ಎಲ್ಲೋರಾಗಳನ್ನು ನೇರವಾಗಿ ಸೇರಬಹುದು ಭಾರತೀಯ ಕಲಾ ಮಾದರಿಗಳಲ್ಲಿ ಉಚ್ಚಸ್ಥಾನ ಪಡೆದ ಈ ಪ್ರಾಚೀನ ಗುಹಾಲಯಗಳು ಪ್ರೇಕ್ಷಣೀಯ.

—ಯಸ್. ಸದಾಶಿವರಾವ್.

ಭೂ ಶಾಸನ

(ರನೇ ಪುಟದಿಂದ)

ಮಾತ್ರ ಭೂಮೂಲಕನ ಅಪೇಕ್ಷೆಯಂತೆ ಳಿ ಸೇಕಡಾ ದರದ ತಾಲಪತ್ರಗಳ ಮೂಲಕವೀಯಬಹುದು; ಒಕ್ಕಲು ಭೂಮಿನ್ನು ಸಹಕಾರಿ ಭೂಮಿ ಅಡವಿನ ಬೇಂಕಿನ ಪ್ರಾತಿನಿಧ್ಯದಲ್ಲಿ ಕ್ರಯಕ್ಕೆ ಪಡೆಯುವ ಸೌಕರ್ಯವನ್ನು ಸರಕಾರವು ಒದಗಿಸಬೇಕು; ಮೂಲಗೇಣಿಯು ಸಂದರ್ಭದಲ್ಲಿ, ಭೂಮೂಲಕನಿಗೆ ಕೊಡಬೇಕಾದ ಪರಿಹಾರ ಧನದಿಂದ, ಈಗಾಗಲೇ ಮೂಲ ಗೇಣಿಯ ಮುಂಗಡವಾಗಿ ಇತ್ತ ಮೊಬಲಗನ್ನು ಕಳೆದುಳಿದುದನ್ನೇ ಕೊಡಬೇಕು; ಭೂಮಿಯ ಮೇಲೆ ಸುಧಾರಣೆಗಳು ಪರಿಣಾಮಕಾರಿಯಾಗಿದ್ದರೆ, ಅದರ ಬೆಲೆಯೂ ಪರಿಹಾರಧನಕ್ಕೆ ಸೇರಿಸಲ್ಪಡಬೇಕು ಎಂದು ನಿರ್ಧರಿಸಿದೆ.

ಧಾರ್ಮಿಕ ಸಂಸ್ಥೆ ಮತ್ತು ಧರ್ಮಾರ್ಥ ಸೇವೆಸಲ್ಲಿಸುವ ಸಂಘ ಸಂಸ್ಥೆಗಳ ಭೂಮಿಯ ಬಗ್ಗೆ ಪರಿಹಾರ ನೀಡುವ ಸಂದರ್ಭದಲ್ಲಿ ಈ ಪರಿಹಾರಧನವು ಅವುಗಳ ಪ್ರಜಲಿತ ಆದಾಯದ ಸೇಕಡಾ ೭೫ಕ್ಕಿಂತ ಕಡಿಮೆಯಾಗಬಾರದೆಂದೂ ಈ ಧನವು ಸೇಕಡಾ ೫ಕ್ಕಿಂತ ಕಡಿಮೆಯಲ್ಲದ ಬಡ್ಡಿಯ ದರದಲ್ಲಿರುವ ದೀರ್ಘಾವಧಿ ತಾಲಪತ್ರಗಳ ಮೂಲಕ ಕೊಡಲ್ಪಡಬೇಕೆಂದೂ ಏಕಕಂಠದಿಂದ ನಿರ್ಧಾರಕ್ಕೆ ಬರಲಾಗಿದೆ. ಕಾಫಿ, ಚಾ, ಅಡಿಕೆ, ಏಲಕ್ಕಿ, ತೆಂಗು ಮೊದಲಾದ ತೋಟಗಳ ಬಗ್ಗೆ ಪರಮಾವಧಿ ಮಿತಿಯನ್ನು ಹೇರಬಾರದು; ಇದೇ ರೀತಿಯಲ್ಲಿ ಸಹಕಾರೀ ವ್ಯವಸಾಯ ಪದ್ಧತಿಯಲ್ಲಿ ನಾಗುವಳಿ ನಡೆಯುತ್ತಿರುವ ಭೂಮಿಯ ಬಗೆಗೂ ಪರಮಾವಧಿ ಮಿತಿಯನ್ನು ಅನ್ವಯಿಸಬಾರದು ಎಂದೂ ಒಮ್ಮತದಿಂದ ನಿಶ್ಚಯಿಸಲಾಯಿತು.

ಕಾಟುಂಬಿಕ ಹಿಡುವಳಿಗಿಂತ ಕಡಿವೆ, ಭೂಮಿಯಿದ್ದವರು ತಮ್ಮ ಭೂಮಿಯನ್ನು ಹಿಂತೆಗೆದುಕೊಳ್ಳಬಹುದು ಮತ್ತು ಧಾರ್ಮಿಕ ಮತ್ತು ಧರ್ಮಾರ್ಥ ಸಂಸ್ಥೆಗಳಿಗೆ ಪರಿಹಾರ ನೀಡುವ ಕುರಿತಾದ ವಿಶೇಷ ಸವಲತ್ತುಗಳನ್ನು ಬಿಟ್ಟುಕೊಡಬಹುದೆಂಬ ತಿದ್ದುಪಡಿಯೊಡನೆ ಈ ಸೂಚನೆಗಳು ಮೊನ್ನೆ ನಡೆದ ಸಭೆಯಲ್ಲಿ ಸ್ವೀಕೃತವಾಯಿತು.

ಮೂಲ ಹಿಡುವಳಿಗಿಂತ ಕಡಿಮೆ ಭೂಮಿಯಿರುವವರು ತಮ್ಮ ಹೊಲಗಳನ್ನು ಗೇಣಿಗೆ ಕೊಟ್ಟು ನಾಗುವಳಿ ಮಾಡಿಸಬಹುದು; ಮತ್ತು ಮೂಲ ಹಿಡುವಳಿಯನ್ನು ನಿರ್ಧರಿಸುವಾಗ, ಒಕ್ಕಲುತನವನ್ನುಳಿದು ಬರುವ ಇತರ ಆದಾಯಗಳನ್ನು ಗಣನೆಗೆ ತರಬಾರದು ಎಂಬ ನಿರ್ಣಯಗಳನ್ನೂ ಸಭೆಯಲ್ಲಿ ಮಾಡಲಾಗಿದೆ.

ಬಹಳ ತ್ವರಿತಗತಿಯಲ್ಲಿ ರೂಪಿಸಲ್ಪಡಬೇಕಾದ ಮೈಸೂರ ಭೂಶಾಸನವು ಈ ಸಮಿತಿಯ ನಿರ್ಣಯಗಳ ಮೇಲೆ ಹೊಂದಿಕೊಂಡಿದ್ದು, ಸದ್ಯ ನಡೆಯುತ್ತಿರುವ ಶರದ್ವಧಿವೇಶನದಲ್ಲಿಯೇ ಶಾಸನ ಸಭೆಯ ಮುಂದೆ ಏದನ್ನು ತರಲಾಗುವುದೆಂದು ಹೇಳಲಾಗುತ್ತಿದೆ. ಕಾಯದೆಯ ಕರಡನ್ನು ಸಿದ್ಧಪಡಿಸಿದನಂತರ, ಇದನ್ನು ಕಾಂಗ್ರೆಸ್ ವರಿಷ್ಠರ ಅವಗಾಹನೆಗೆ ತಂದು ಆ ಮೇಲೆ ಶಾಸನ ಸಭೆಗೆ ಬರಬೇಕಾಗಿದೆ. ಹೀಗಾಗಿ, ಭೂಶಾಸನ ತಾರದೆ ಅನ್ಯವಿಧಿಯಿಲ್ಲ ಎಂದು ತಿಳಿದ ಸರಕಾರ ಈ ವಿಷಯದಲ್ಲಿ ಆಸಕ್ತಿ ತಾಳಿದಂತೆ ಗೋಚರಿಸಿವಾಗುತ್ತದೆ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್. ಉಡುಪಿ, ದ. ಭಾರತ.

ಪಶ್ಚಿಮ ಕರಾವಳಿಯಲ್ಲಿ ನಮ್ಮ ಶಾಖೆಗಳು

ಮುಂಬಯಿ	ಗಂಗೊಳ್ಳಿ	ಕಾಂಞಂಗಾಡ್
ರತ್ನಗಿರಿ	ಕುಂದಾಪುರ	ನೀಲೇಶ್ವರ
ಮಾಲ್ವಾನ್	ಮಲ್ಪೆ	ಪಯ್ಯನೂರು
ಮೆಂಗಳೂರು	ಉಡುಪಿ	ಕಣ್ಣಾನೂರು
ಕಾರವಾರ	ಕಾಪು	ತಲಚೇರಿ
ಗೋಕರ್ಣ	ಮುಲ್ಕಿ	ಬಡಗರ
ಕುಮಟಾ	ಮಂಗಳೂರು	ಕಲ್ಲಿಕೋಟೆ
ಹೊನ್ನಾವರ	ಕುಂಬಳೆ	ಕೊಚ್ಚಿ
ಭಟ್ಕಳ	ಕಾಸರಗೋಡು	ಅಲೆಪ್ಪಿ

ಶೇತ್ತ ಭಂಡವಾಳ ರೂ. ೨೮ ಲಕ್ಷ.
ರಕ್ಷಣನಿಧಿ:— ರೂ. ೨೨ ಲಕ್ಷ.

THE CANARA INDUSTRIAL & BANKING SYNDICATE LTD., UDIPI

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

Edited Printed & Published by K. H. Shetty, at the Navayuga Press, Udipi S. India

ನವಯುಗ

ನಾ ಜಲಹಾರು 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನಯೆ ಪೈಸೆ

ವರುಷ ೩೮ ವಾರ ೧೩. 4-12-1958 Vol 38 No 13.

ಗೋ ಸಂವರ್ಧನೆ

ಭಾರತದಲ್ಲಿ ಗೋ ಸಂವರ್ಧನೆ

ಈ ಬಗ್ಗೆ ಅನಾಸಕ್ತಿಯನ್ನು ತೋರಿಸಲಾಗುತ್ತಿಲ್ಲ

ದೇಶದ ಗೋಸಂಪತ್ತನ್ನು ಹೆಚ್ಚಿಸುವ ಸಲುವಾಗಿ ಗ್ರಾಮಾಂತರ ವ್ಯಾಪ್ತಿಯ ಮೂಲ ಕಾರ್ಯಕ್ರಮಗಳು ಕೆಲವನ್ನು ಸರ್ಕಾರ ಹಾಕಿಕೊಂಡಿದೆ

ಕರಕಟಾಲು ಹೋರಿಗಳನ್ನು ನಿರ್ವೀರ್ಯಗೊಳಿಸಿ ಅವುಗಳಿಂದ ಒಳ್ಳೆ ಹಸುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದು. ಬೀಡದ ಹೋರಿಗಳ ಆಭಾವನಿರುವ ಕಡೆಗಳಲ್ಲಿ ಕೃತಕ ವಿಧಾನಗಳಿಂದ ಉತ್ತಮ ರಾಸುಗಳಿಗೆ ಗರ್ಭದಾನ ನೀಡುವ ಕೇಂದ್ರಗಳನ್ನು ಸ್ಥಾಪಿಸುವುದು, ಒಳ್ಳೆ ಜಾತಿಯ ಕರುಗಳನ್ನು ಬೆಳೆಸುವುದು, ಪನಗಳಿಗೆ ಬೇಕಾಗುವ ಒಳ್ಳೆ ಮೇವು ಬೆಳೆಯಲು ವ್ಯವಸ್ಥೆಮಾಡಿ ಅದನ್ನು ಒದಗಿಸುವುದು ಮತ್ತು ಪಶುಪಾಲನೆಗೆ ಸಂಬಂಧಿಸಿದ ವಸ್ತುಗಳ ಮಾರಾಟಕ್ಕೆ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು ಇತ್ಯಾದಿ ಕೆಲವು ಕಾರ್ಯಕ್ರಮಗಳು ಈ ಯೋಜನೆಯಲ್ಲಿ ಮುಖ್ಯವಾಗಿವೆ

ಪ್ರಥಮ ಪಂಚವಾರ್ಷಿಕ ಯೋಜನೆ ಸಮಯದಲ್ಲಿ ಒಟ್ಟು ೫೫೫ ಇಂತಹ ಗ್ರಾಮಯೋಜನೆ ಕೇಂದ್ರಗಳೂ ೧೪೬ ಕೃತಕ ಗರ್ಭದಾನ ಕೇಂದ್ರಗಳೂ ಭಾರತದ ನಾನಾ ಕಡೆ ಸ್ಥಾಪಿತವಾದವು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಗುರಿ ೧೫೫ ಗ್ರಾಮಯೋಜನಾ ಕೇಂದ್ರಗಳು ಮತ್ತು ೨೪೫ ಕೃತಕ ಗರ್ಭದಾನ ಕೇಂದ್ರಗಳನ್ನು ಸ್ಥಾಪಿಸುವುದೇ ಆಗಿದೆ. ಜೊತೆಗೆ ೨೫೪ ಎಕ್ಸ್ಟೆನ್ಶನ್ ಕೇಂದ್ರಗಳೂ ಸ್ಥಾಪಿತವಾಗಲಿವೆ. ಈ ಎಲ್ಲ ಕಾರ್ಯಕ್ರಮಗಳ ಮೂಲಕ ೨೨,೦೦೦ ಬೀಡದ ಹೋರಿಗಳು, ೬೫೦,೦೦೦ ಒಳ್ಳೆ ಎತ್ತುಗಳು ಮತ್ತು ಸುಮಾರು ೧೦ ಲಕ್ಷ ಒಳ್ಳೆ ಹಸುಗಳು—ಇಷ್ಟು ಗೋಸಂಪತ್ತು ಸಿದ್ಧವಾಗಬೇಕೆಂಬುದು ಯೋಜನೆಯ ಗುರಿ.

"ಗೋಸದನ"ಗಳ ಸ್ಥಾಪನೆಯ ಯೋಜನೆ ಗುಂ ಅನುಪಯುಕ್ತ ಹಾಗೂ ರೋಗಗ್ರಸ್ತ ರಾಸುಗಳನ್ನು ಪ್ರತ್ಯೇಕಿಸಿ ಅವುಗಳನ್ನು ದೂರವಿಡುವುದೇ ಆಗಿದೆ ದ್ವಿತೀಯ ಪಂಚವಾರ್ಷಿಕ ಯೋಜನೆ ಪ್ರಕಾರ ಸುಮಾರು ೩೧,೦೦೦ ರಾಸುಗಳಿಗೆ ಆಶ್ರಯ ನೀಡುವ ೬೦ ಗೋಸದನಗಳು ಭಾರತದ ನಾನಾಕಡೆ ಸ್ಥಾಪಿತವಾಗುತ್ತವೆ, ಈ ಪೈಕಿ ೩೪ ಗೋಸದನಗಳನ್ನ, ಸಾರ್ವಜನಿಕರೇ ಪ್ರಾಯೋಗಿಯವಾಗಿ ನೋಡಿಕೊಳ್ಳುತ್ತಾರೆ

ದೇಶದಲ್ಲಿ ಪ್ರಾಯೋಗಿಯಾಗಿ ಕೆಲಸ ಮಾಡುತ್ತಿರುವ ಕೆಲವು ಗೋ ಶಾಲೆಗಳನ್ನು ಆರಿಸಿಕೊಂಡು ಅವುಗಳ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಾಯವನ್ನು ಸರ್ಕಾರ ನೀಡುತ್ತಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆ ಪ್ರಕಾರ ಈ ಗೋ ಶಾಲೆಗಳನ್ನು ಅಭಿವೃದ್ಧಿಗೊಳಿಸಿ ಒಳ್ಳೆ ಪಶು ಸಂವರ್ಧನ ಕೇಂದ್ರಗಳನ್ನಾಗಿ ಅವುಗಳನ್ನು ಪರಿವರ್ತಿಸುವ ಮೂಲಕ ಪಟ್ಟಣ ಪ್ರದೇಶಗಳಿಗೆ ಉತ್ತಮ ಹಾಲು ದೊರಕುವಂತೆ ಮಾಡುವ ಯೋಜನೆಯೂ ಕಾರ್ಯಕ್ರಮಗಳಲ್ಲಿವೆ ಇದರ ಪರಿಣಾಮವಾಗಿ ಸುಸಜ್ಜಿತ ಗೋ ಶಾಲೆಗಳು ಅಭಿವೃದ್ಧಿ ಹೊಂದಿ ಒಂದೊಂದು ಗೋ ಶಾಲೆಯೂ ಒಳ್ಳೆ ಜಾತಿಯ ತುಂಬು ಉತ್ತಮ ರಾಸು ಕೊಡುವ ೨೦ ಹಸುಗಳನ್ನೂ ಮತ್ತು ಒಂದೊಂದು ಹೋರಿಯನ್ನೂ ಹೊಂದಿರುತ್ತವೆ. ಇಂತಹ ಒಂದೊಂದು ಗೋ ಶಾಲೆಯೂ ಸುತ್ತಮುತ್ತಲ ಪ್ರದೇಶಗಳಿಗೆ ಒಂದು ಅತ್ಯುತ್ತಮ ಪಶು ಸಂವರ್ಧನಾ ಕೇಂದ್ರವಾಗಿ ಕೆಲಸ ಮಾಡುವುದು ಈ ಕೇಂದ್ರಗಳಿಗೆ ತಾಂತ್ರಿಕ ನೆರವು, ಕಚ್ಚಾವಸ್ತು ಸೌಲಭ್ಯ ಇವೇ ಮೊದಲಾದವು ದೊರಕುವುವು.

ಗ್ರಾಮೀಣ ಪ್ರದೇಶದ ಇಂಥ ಪ್ರತಿಯೊಂದು ಕೇಂದ್ರವೂ ಪಶುಸಂವರ್ಧನೆಗೆ ಸಂಬಂಧಿಸಿದ ಎಲ್ಲ ಸೌಲಭ್ಯಗಳನ್ನು ಕೊಡುವುದರ ಜೊತೆಗೆ ಪಶುಪಾಲನೆಗೆ ಸಂಬಂಧಿಸಿದ ಶಿಕ್ಷಣವನ್ನೂ ನೀಡುತ್ತದೆ.

ಇಂಥ ಪ್ರತಿ ಸ್ಥಾಪಿತವಾದ ಕೇಂದ್ರ ಗೋ ಸಂವರ್ಧನೆ ಬಗ್ಗೆ ಸರಿಯಾದ ಕೇಂದ್ರ ಸರ್ಕಾರಕ್ಕೂ ರಾಜ್ಯ ಸರ್ಕಾರಗಳೂ ಗೋ ಸಂವರ್ಧನೆ ವಿಷಯಗಳನ್ನೆಲ್ಲಾ ಆಗಾಗ ತಾಂತ್ರಿಕ ಸಲಹೆಗಳನ್ನೂ ಕಾರ್ಯ ವಿಧಾನಗಳನ್ನೂ ಕಾಲಕಾಲಿಗೆ ಸೂಚಿಸಿ ಮೇಲಿನ ಗೋ ಸಂಪತ್ತು ಅಭಿವೃದ್ಧಿ ಹೊಂದುವ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿವೆ.

ಮೇಲಿನ ಚಿತ್ರ.

ರಾಷ್ಟ್ರಪತಿಯವರಿಂದ ಉದ್ಘಾಟಿಸಲ್ಪಟ್ಟ ಗೋಕುಲ ಪದ್ಧತಿಯ ಗ್ರಾಮಲಕ್ಷ್ಮಿ ಗೋಶಾಲೆಯ ಕೆಲಸವನ್ನು ಅಚ್ಚುಮೆಚ್ಚಿಸುತ್ತಿರುವ್ದಾರೆ.

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd 1931.

BRANCHES

Bombay, Bangalore, Mysore. Mercara, Kanhangad. Kasaragod and throughout the District of South Kanara

ಸಂಪಾದನೆಯನ್ನು ಮಾಡಬೇಕು
ಸಂಚಯವನ್ನೂ ಮಾಡಬೇಕು

ಸಿಂಡಿಕೇಟ್ ಬೇಂಕ್

ಕಥಾ ವಿಹಾರ

ಮೃಗರಾಜನುದರದಲ್ಲಿ ಜಂಬುಕನು ಜನಿಸಿದನು!

ತಾನು ನಾಟಿದ ವಿಷನೈಷ್ಣನನ್ನಾ ದರೂ ಸ್ವಹಸ್ತಗಳಿಂದಲೇ ಕೀಳುವುನು ಸಾಧ್ಯವೆ?

ರಾಯರ ಕುಟುಂಬ ಆ ಹಳ್ಳಿಯಲ್ಲಿ ಬಹು ಪ್ರತಿಷ್ಠೆಯನ್ನು ಪಡೆದಿತ್ತು. ಅವರ ಆ ಕುಟುಂಬದ ಒಬ್ಬ ಸಿಳ್ಳೆ ಹಳ್ಳಿಯ ಜನರೆಮಾದರೆ ಸಳ್ಳಿಯವರು ಅವನಲ್ಲಿ ಆಪಾರ ಗೌರವವನ್ನು ತೋರಿಸುತ್ತಿದ್ದರು. ಅವರ ನಡವಳಿಯೆ ಆದಕ್ಕೆ ಕಾರಣ ವಾಗಿತ್ತು.

ರಾಮರಾಯರ ಹಿರಿಯರು ನಿಷ್ಠಾವಂತ ರಾಜಮನೆತನದವರೂ ಬ್ರಾಹ್ಮಣರೂ ಆಗಿದ್ದರು. ಜಪ, ತಪ, ನೇಮ ನಿಷ್ಠೆಗಳನ್ನು ಅವರಿಂದೂ ಬಿಟ್ಟವರಲ್ಲ. ಅವರ ಜಪ ಪ್ರಭಾವದಿಂದ ಅಂದಮ್ದೆ ಆಂದ ಹಾಗೆಯೆ ಆಗುತಿತ್ತು. ದೀನ ದುಃಖಿತರಿಗೆ ಸಹಾಯಮಾಡುವುದು ಅವರ ಪ್ರತಿದಿನದ ಪ್ರಮುಖ ಕೆಲಸವಾಗಿತ್ತು. ಹಳ್ಳಿಯಲ್ಲಿ ಜಗಳವೇನಾದರೂ ಆದರೆ ಆದನ್ನು ಯಾರೂ ಕೋರ್ಟಿಗೊಯ್ಯುತ್ತಿರಲಿಲ್ಲ. ರಾಯರ ಪೇಗುಲವೇ ಹಳ್ಳಿಯ ಕೋರ್ಟಾಗಿತ್ತು. ದೀಗುಲದ ದೇವರಿಗೆ ದೀಪವನ್ನು ಹಚ್ಚಿಟ್ಟು ದೇವರಿಗೆ ಸರಿಯಾಗಿ ದಾಪೆಗಳನ್ನೆ ರಾಯರು ತೀರ್ಮಾನಿಸುತ್ತಿದ್ದರು. ಬಡ ಜನ ಮಾನ ಹಾನಿಯಾಗುವ ಸಂದರ್ಭದಲ್ಲಿ ಆದು ತನ್ನ ಮಾನಹಾನಿಯೆಂದು ನಂಬಿ ಅವರು ಬಿಗು ಧೋರಣೆಯನ್ನು ಅನುಸರಿಸುತ್ತಿದ್ದರು. ನ್ಯಾಯ ಪರಿಪಾಲನೆ ಮಾಡುತಿದ್ದ ಅವರನ್ನು ಜನರು ಗೌರವಿಸುತ್ತಿದ್ದರು.

ರಾಯರ ನಿಷ್ಠೆಗೆ ತಕ್ಕಂತೆ ಆಸ್ತಿಯು ತುಂಬಾ ಬೆ.ತ್ತು. ಪ್ರತಿಯೊಂದು ತರದ ಅನುಕೂಲತೆ ಅವರಿಗಿತ್ತು. ಅದ್ದರಿಂದ ಅವರು ತಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ನಿರ್ವಂಚಿತರಾಗಿದ್ದರು,

ರಾಮರಾಯರ ಹಿರಿಯರು ಯಾಗವನ್ನು ಮಾಡಿ ಯಜ್ಞದೀಕ್ಷೆಯನ್ನು ತಮ್ಮ ಮನೆಯಲ್ಲಿ ಉಂಡಿಸಿದ್ದರು. ಮಾಡಿದ ಯಜ್ಞದಲ್ಲಿ ಕೊಟ್ಟ ದಾನದಿಂದ ಊರಿನ ಬಡ ಜನರು ತುಂಬಾ ತಣಿದಿದ್ದರು. ರಾಮರಾಯರ ಹಿರೀ ಅಜ್ಜ ಭೀಮರಾಯರ ಕಾಲದಲ್ಲೊಮ್ಮೆ ಕ್ಷಾಮ ಹಳ್ಳಿಯನ್ನು ಸುತ್ತಿತು. ಆ ಸಂದರ್ಭದಲ್ಲಿ ಭೀಮರಾಯರು ತನ್ನ ಭಂಡಾರವನ್ನೆ ಜನರಿಗೆ ಸೂರೆಬಿಟ್ಟು ಜನರ ಪ್ರೀತ್ಯಾದರಗಳಿಗೆ ಪಾತ್ರರಾದರು.

ಅವರ ಕಾಲದಲ್ಲಿ ಹಳ್ಳಿಯ ಜಾತ್ರೆಯಲ್ಲೊಮ್ಮೆ ಒಂದು ಚಿಕ್ಕ ಘಟನೆ ನಡೆಯಿತು. ನೆರೆದ ಜನಜಂಗುಳಿಯು ನಡುವಿನಲ್ಲೊಂದು ಆರ್ತನಾದ ಕೇಳಿಸಿತು. ಆದು ಕೇಳಿದೊಡನೆ ರಾಯರು ಆಕಡೆ ಧಾವಿಸಿದರು. ಒಂದು ಅಬಲೆಗಾಗಿ ಐದಾರು ಸಬಲರು ಗುದ್ದಾಡಿಕೊಳ್ಳುತ್ತಿದ್ದರು. ಈ ಭಯಂಕರ ದೃಶ್ಯದಿಂದ ಬೆದರಿ ಅಬಲೆ ಬೊಬ್ಬಿಡುತ್ತಿದ್ದಳು. ರಾಯರು ಆಕೆಯ ಮಾನರಕ್ಷಣೆ ಎನ್ನು ಮಾಡಿ ಸಬಲರು ಇನ್ನು ಮುಂದೆ ಇಂತಹ ಕುಕೃತ್ಯವನ್ನೆಸಗದಂತೆ ಮಾಡಿಬಿಟ್ಟರು. ಆ ಎಲ್ಲಾ ಪದ್ಧತಿಗಳನ್ನು ಇಂದು ರಾಮರಾಯರು ವಿೂರಿದವರಲ್ಲ.

ರಾಮರಾಯರಿಗೆ ನಾಲ್ಕು ಮಕ್ಕಳು ಗಳಿದ್ದರು. ಮೂರು ವ ಕ್ಕಿಳನ್ನು ಅವರು ವಿಶೇಷ ಪ್ರೀತಿಸುತ್ತಿರಲಿಲ್ಲ. ಅಂದರೆ ಕಡಿಮೆಯೆಂಬ ಅಭಿಪ್ರಾಯವಲ್ಲ. ಮಕ್ಕಳಿನ್ನು ಪ್ರೀತಿಸುವುದಕ್ಕೂ ಒಂದು ಗಾಂಭೀರ್ಯವಿದೆ. ಆ ಗಾಂಭೀರ್ಯವನ್ನು ಅವರು ಮೀರಿದವರಲ್ಲ. ಆದರೆ ನಾಲ್ಕನೆಯ ಮಗ ಕೃಷ್ಣನಲ್ಲಿ ಅವರ ಅಭಿಮಾನ ಬಹು ಹೆಚ್ಚು. ಕಾರಣ ಕಡೆಕಂಜಿಯಲ್ಲವೆ? ಅವರಲ್ಲಿ ಯಾವನದ ಮದ ಕಡಿಮೆಯೆನಾಗತ್ತು. ರಕ್ತದ ಬಲ ಉಡುಗಿದೆ. ಹಾಗಾಗಿ ತನ್ನಿಂದ ತಾನೆ ಮಕ್ಕಳಲ್ಲಿ ಪ್ರೀತಿ ಹೆಚ್ಚಿದೆ. ಅವರು ಪ್ರೀತಿಯ ಪ್ರತಿರೂಪಕರಾದಂತೆ ಕೃಷ್ಣನನ್ನು ಸಾಕಿ ಸಲಹಿದ್ದರು. ತಮ್ಮ ವೃತ್ತಿಯಲ್ಲಿ ಅತನನ್ನು ಹಚ್ಚಬೇಕೆಂದು ಯತ್ನಿಸಿ ವಿಫಲರಾಗಿ ಅವನನ್ನು ಈಗ ಲಗಾಮು ಇಲ್ಲದ ಕುದುರೆಯಂತೆ ರಾಯರು ಬಿಟ್ಟುಬಿಟ್ಟಿದ್ದರು.

ಒಂದು ದಿನ ಬೆಳಗ್ಗೆ ಹಳ್ಳಿಯ ಜನರು ಹಾಸಿಗೆಯಿಂದೆದ್ದವರೆ ಸಿಟಿಸಿಟಿ ಮಾತಾಡಲಾರಂಭಿಸಿದ್ದರು. ವಿಷಯ ಕೃಷ್ಣನಿಗೆ ಸಂಬಂಧಿಸಿದಾಗಿತ್ತು. ಳೆದಿದ ರಾತ್ರಿ

ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡಲ್ಲೆಸ್ (ಎಡ) ಮತ್ತು ರಾಜಭಾರಿ ಹೆನ್ರಿ ಕಬೋಟ್ ಲಾಜರು (ಬಲ) ಯುಕ್ತರಾಷ್ಟ್ರ ಸಾಮಾನ್ಯ ಸಭೆಯ ೧೬ನೇ ಅಧಿವೇಶನದಲ್ಲಿ ಭಾಗವಹಿಸುತಿದ್ದಾರೆ.

ಯಲ್ಲಿ ಆತನು ಊರಿನ ಧನಿಕ ಬಂಟರ ಮನೆಗೆ ಕನ್ನ ಹಾಕಿ ಆಪ್ಪಿದ್ದ ಚಿನ್ನಾದಿಗಳನ್ನು ದೋಚಿಕೊಂಡು ಒರ್ವ ಸ್ತ್ರೀಯ ಮಾನಹಾನಿಯನ್ನು ಮಾಡಿದ್ದನು.

ಇದಾಗಿ ಕೆಲದಿನಗಳು ಕಳೆದಿರಬಹುದು. ಒಂದು ದಿನ ರಾತ್ರಿಯ ಸಮಯ. ಕೃಷ್ಣನು ಒಂದು ಮುಸಲ್ಮಾನರ ಗುಡಿಸಲನ್ನು ಕಳ್ಳತನದಿಂದ ಪ್ರವೇಶಿಸಿದ್ದನು. ಮನೆಯ ಗಂಡಸರೆಲ್ಲಾ ಹೊರಗೆ ಹೋಗಿದ್ದರು. ಗುಡಿಸಲಿನೊಂದು ತುದಿಗಿ.ಲ್ಲಿ ದೀಪದ ತುಣುಕು ಉರಿಯುತಿತ್ತು. ದೀಪದ ಬೆಳಕನ್ನು ಆಶ್ರಯಿಸಿ ಒರ್ವ ನವ ತರುಣಿಯು ಚೆಂದಿಬಟ್ಟೆಯು ದುರಸ್ತಿ ಕಾರ್ಯದಲ್ಲಿ ಮಗ್ನಳಾಗಿದ್ದಳು, ಆಕನು ಬಂದುದನ್ನು ಕಂಡು ಹೆದರಿ ಚೀರಿದಳು. ಆತನು ಇಲಿಯನ್ನು ಕಂಡ ಬೆಕ್ಕಿನಂತೆ ಆಕೆಯನ್ನು ಗಬಕ್ಕನೆ ಹಿಡಿದನು. ಆ ದೃಶ್ಯವನ್ನು ಕಾಣಲಾರೆನೆಂದು ದೀಪ ನಂದಿತು.

ಈ ಸದ್ದಿಯು ಊರಲ್ಲೆಲ್ಲಾ ಹಬ್ಬಿತ್ತು. ಮೌನ ಆವರಿಸಿತ್ತು. ರಾಮರಾಯರು ಕಣ್ಣುಮುಚ್ಚಿ ಕುಳಿತ ದೇವರಂತೆಯಿದ್ದರು.

ಅಂದು ರಾಮರಾಯರ ಹಿರಿಯರ ಶ್ರಾದ್ಧದ ದಿನ. ರಾಯರ ಮನಸ್ಸು ಅಂದು ಹಿಂದಿನವರ ಚಾರಿತ್ರ್ಯ ಶುದ್ಧಿಯ ಕಡೆಗೆ ಆಕರ್ಷಿಸಲ್ಪಟ್ಟಿತು. ತನ್ನ ಕುಲವು ಇದು ತನಕ ಮಾಡಿದ ಧರ್ಮಾಚರಣೆಗಳು ವಿಚಾರ ತಲೆಯಲ್ಲಿ ಸುಳಿಯತೊಡಗಿತು. ಇಂದು ಮಗನ ದುರವಸ್ಥೆಯು ಯೋಚನೆ ತಲೆಯಲ್ಲಿ ಸುಳಿದು ಕಣ್ಣೀರು ಮಿಡುಕುವಂತೆ ಮಾಡಿತು. ಆಂದೇ ಎಗನನ್ನು ಕರೆದು ರಾಯರು-- "ನೀನು ಒಂದೊ ತೆಟ್ಟ ಚಾಳಿಯನ್ನು ಬಿಡು. ಇಲ್ಲವೆ ಮನೆಯಿಂದ ಹೊರನಡೆ" ಎಂದು ಖಂಡಿತೂಂಡವಾಗಿಯೆ ಹೇಳಬಿಟ್ಟರು.

ಮರುದಿನದಿಂದ ಕೃಷ್ಣನು ಮನೆಗೆ ಬರಲಿಲ್ಲ. ಅವನ ಅತ್ಯಾಚಾರಗಳು ದಿನದಿಂದ ದಿನಕ್ಕೆ ಕಿಚ್ಚೆಬ್ಬಿದ್ದುವು. ಅವನು ಮಾಡಿದ ಅಪರಾಧದ ನಿವೇದನೆಯನ್ನು ಜನರು ಯಾರಲ್ಲಿ ಹೇಳಬಹುದು? ರಾಮರಾಯರೆ ಕೋರ್ಟಿಗೆ ಅದನ್ನು ತರುವುದಾದರೂ ಎಂತು?" ಯೆಂಬ ಪ್ರಶ್ನೆ ಹಳ್ಳಿಯವರ ತಲೆ ತಿನ್ನುತಿತ್ತು. ಬಂಟರ ನೋಮಪ್ಪ ರಾಯರ ಅತ್ಯಂತ ಮಿತ್ರರಾಗಿದ್ದರು. ಅವರ ಮುಖಂಡತ್ವದಲ್ಲಿ ಹಳ್ಳಿಯವರ ಶಿಷ್ಟಮಂಡಲ ರಾಯರನ್ನು ಕಂಡು ತಮ್ಮ ಕಷ್ಟಗಳನ್ನು ನಿವೇದಿಸಿಕೊಂಡರು.

ಅಂದು ರಾಯರು ರಾತ್ರಿ ಪೂಜೆಯನ್ನು ತೀರಿಸಿ ದೇವಸ್ಥಾನದಿಂದ ಹೊರನಡೆಯುತ್ತಿದ್ದರು. ದಾರಿಯಲ್ಲಿ ಕನ್ನ ಮಗ ಮುಸಲ್ಮಾನರ ಮನೆ ಸ್ತ್ರೀಶಿಸುವುದನ್ನು ಕಂಡು ಆವರ ಮೈ ಝುಂ ಎಂದಿತು. "ಸಿಂಹದುದರದಲ್ಲಿ ಜಂಬುಕವು ಜನಿಸುವುದೆ? ಕುಲಗೇಡಿ! ಕುಲಕಲಂಕಿ!" ಎಂದು ಮುಂತಾಗಿ ಅವರು ಹೇಳುತ್ತಾ ಅತ್ತ ಧಾವಿಸಿದರು. ಅಲೆಯು ವಸ್ತ್ರವನ್ನೆಳೆದು ಜೂರ್ಯ ಜೂರು ಮಾಡುವ ದೃಶ್ಯವನ್ನು ರಾಯರು ಕಂಡೊಡನೆ ಅವರ ಎದೆ ಜೂರು ಜೂರಾಯಿತು.

ಅವರ ಹೃದಯದಲ್ಲಿ ಅಭಿಪ್ರಾಯಗಳ ತಾಕಲಾಟ ನಡೆದಿತ್ತು. "ನನ್ನ ಕುಟುಂಬ ಗೌರವವನ್ನು ಉಳಿಸುವುದು ಅವಶ್ಯವಾಗಿದೆ. ನನ್ನ ಮನೆತನದ ಮರ್ಯಾದೆ ಖ್ಯಾತಿ ಇಂದು ನನ್ನ ಮಗನಿಂದಲೇ ಅಂತ್ಯಗೊಳ್ಳುವುದನ್ನು ನಾನು ಕಾಣಬೇಕೆ? ಒಡ ಜನರ ಅಭಿಮಾನದ ಕುರುಹಾದ ನಮ್ಮ ಮನೆತನ ಇಂದು ತೀರ ಅವನತಿಗಿಳಿಯಿತೆ? ಸ್ತ್ರೀಯರ ಮಾನರಕ್ಷಣೆ ಮಾಡಿದ, ಬಡ ಜನರ ಉದರ ಪೋಷಣೆ ಮಾಡಿದ ನನ್ನ ಈ ಮನೆ ಇಂದು ಇದಕ್ಕೆ ತೀರಾ ವಿರುದ್ಧವಾಗಿರುವುದೆ? ನನ್ನ ಮನೆತನದ ಮರ್ಯಾದೆಯನ್ನು ತೆಗೆದ ಕುನ್ನಿಯ ಕತ್ತನ್ನು ಹಿಚುಕಲೆ? .. ಆದರೆ --ಆ ಕು

(೧೦ನೇ ಪುಟ ನೋಡಿರಿ)

The Moolky Bank, Ltd.

MULKI.

ಡಿಪೋಸಿಟು ನೋಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ಪರೇಗೆ 4%
5 ರಿಂದ 12 ,, 4½%
13 ,, 24 ,, 4¾%
ರೂ. 10,000/- ಮುತ್ತ ನೋಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಜಾಲ್ತಿ ದೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾ ಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಂಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ ತೈಲ



ಪೈಶ್ಚಾ ನಂ ೧] [ಪೆಡಕೇಟಿಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ವ್ಯಕ್ತಿ ಪರಿಚಯ

ಭಕ್ತಿ ಪ್ರೇಮ ಸೇವೆಗಳ ಉಪದೇಶಕ-ನಾನಕ

ಭಕ್ತಿಮಾರ್ಗಕ್ಕೀತ ಎರೆದ ನೀರು ಅಪಾರ ಸಮುದ್ರವಾಗಿದೆ!

ಸಿಕ್ಖ ಮತಪ್ರವರ್ತಕನಾದ ಗುರು ನಾನಕನು ಸರ್ವ ಧರ್ಮೋಯರ ಅನುರಾಗಕ್ಕೆ ಪಾತ್ರನೂ ಸ್ವಯಂ ಮತಬಂಧನರಹಿತನೂ ಮಾನವತೆಯ ಪ್ರೇಮಿ ಹಾಗೂ ಭಕ್ತನೂ ಸೇವೋಪದೇಶವನ್ನು ಮಾಡಿದವನೂ ಆದ ಮಹಾವ್ಯಕ್ತಿ. ಭಕ್ತಿ, ಪ್ರೇಮ ಮತ್ತು ಸೇವೆಗಳಿಂದ ಮುಪ್ಪುರಿಗೊಂಡ ಜೀವನ ಸೂತ್ರವೇ ಗುರು ನಾನಕನ ಉಪದೇಶಸಾರವಾಗಿದೆ.

ಒಬ್ಬ ಪರಮಾತ್ಮನಲ್ಲಿ ಭಕ್ತಿ, ಸರ್ವ ಮಾನವ ಪ್ರೇಮ ಮತ್ತು ಅನಂತ ಸೃಜೀಗಳ ಸೇವೆಗಳ ಪಾಠವನ್ನು ಓದಿಸಿದ ಗುರು, ಗುರುನಾನಕ. ಅಲ್ಲದೆ, ಈ ಮೂಲ ತತ್ವಗಳಿಗನುಸಾರವಾಗಿ ತನ್ನ ಜೀವನವನ್ನು ಸಾಗಿಸಿದ ಮಹಾತ್ಮ ಗುರು ನಾನಕ.

ಮನೆಮಾರುಗಳನ್ನು ತೃಣೀಕರಿಸಿ ಘೋರಾರಣ್ಯಗಳಲ್ಲಿ ತಪಸ್ಸು ಮಾಡುವವರಿಗೆ ಗುರುನಾನಕನು ಉಪದೇಶಿಸಲಿಲ್ಲ. ಜೀವನಕ್ಕೆ ಹೆದರಿ ಅದರಿಂದ ಪರಾವೃತ್ತನಾಗುವುದು ಜೀವನದ ಉದ್ದೇಶವಲ್ಲ. ವಿರಕ್ತ ಸಾಧುಗಳ ಧರ್ಮವು ಅರ್ಧಂಬರ್ಧವಾಗಿರುವುದರಿಂದ, ಇದರಿಂದ ಜನಸಾಮಾನ್ಯರ ಕಲ್ಯಾಣವಾಗದು. ಕೇವಲ ಕೆಲವೇ ವ್ಯಕ್ತಿಗಳು ಸನ್ಯಾಸಿಗಳಾಗಿ ಮೋಕ್ಷಗಾಮಿಗಳಾಗಬಹುದಾದರೂ ಜನಸಾಮಾನ್ಯರಿಗೆ ಆದರಿಂದೊದಗಬಹುದಾದ ಪ್ರಯೋಜನವೇನು? ಜೀವನದ ಗುರಿಗಳನ್ನು ಸಾಧಿಸುವುದಕ್ಕೆ ಸಾಂಸಾರಿಕ ವ್ಯವಹಾರ ಬಂಧನಗಳಿಂದ ಶಿಥಿಲಗೊಳ್ಳಬೇಕಾಗಿಲ್ಲ; ಸಾಧಾರಣ ಜೀವನವನ್ನು ಬದುಕುತ್ತ ಸಾಂಸಾರಿಕ ಸುಖಗಳಲ್ಲಿ ಲಿಪ್ತರಾಗದೆ, ತನ್ನ ಉದ್ದೇಶ ಮತ್ತು ಕರ್ತವ್ಯಗಳನ್ನು ಪೂರೈಸುವವನೇ ಅತ್ಯುತ್ತಮ ಸಾಧು ಎನ್ನುತ್ತಾನೆ, ಗುರುನಾನಕ.

ಗುರುನಾನಕನು ಭಕ್ತಿಯನ್ನು ಜೀವನದ ಪರಮ ಲಕ್ಷ್ಯವೆಂದು ಗಣಿಸುತ್ತಾನೆ. ಭಕ್ತಿಸಾಧನೆಯಲ್ಲ; ಸಾಧ್ಯವಾಗಿದೆ. ಮಾರ್ಗವಲ್ಲ; ವಿಶ್ರಾಮಧಾಮವಾಗಿದೆ.

ಪ್ರೇಮವು ಸಾಂಸಾರಿಕ ಮತ್ತು ಆಧ್ಯಾತ್ಮಿಕ ಸುಖಗಳ ಸಾಧನವಾಗಿದೆ; ದ್ವೇಷದಿಂದ ತಿರಸ್ಕಾರ ಮತ್ತು ಕ್ರೋಧಗಳು ಉದ್ಭವಿಸುತ್ತವೆ. ಪ್ರೇಮದಿಂದಲೇ ಶಾಂತಿ ಮತ್ತು ಸುಖ ಪ್ರಾಪ್ತಿಯಾಗುತ್ತವೆ.

ಪರಸೇವೆಯು ಮಾನವನ ಜೀವನವನ್ನು ಸಾರ್ಥಕಗೊಳಿಸುತ್ತದೆ. ತನಗಾಗಿಯೇ ಜೀವಿಸುವ ಮಾನವ ಪಶುತುಲ್ಯನಾಗುತ್ತಾನೆ; ಏಕೆಂದರೆ, ಆತನು ಸ್ವಕಾಮಿಯಾಗಿರುತ್ತಾನೆ. ನಿಜವಾಗಿಯೂ ಪರರಿಗೋಸ್ಕರ ಬದುಕುವವನೇ ನಿಜಮಾನವನು.

ಗುರುನಾನಕನ ದೃಷ್ಟಿಯಲ್ಲಿ ಸರ್ವ ಜನರೂ ಸಮಾನರು. ನಮ್ಮೆಲ್ಲರನ್ನೂ ಒಬ್ಬ ಪರಮಾತ್ಮನೇ ಸೃಷ್ಟಿಸಿರುವಾಗ, ಆತನ ಕೃತಿಗಳಾದ ನಮ್ಮಲ್ಲಿ ಕೆಲವರು ಉತ್ತಮರು, ಇನ್ನು ಕೆಲವರು ಅಧಮರೆಂಬ ಪೇಳುವವನಾರು?

"ಅವರಿಬ್ಬರು ವಿವಾಹಿತರಾದರು; ಇವರು ಪುತ್ರರೂ ಜನಿಸಿದರು. ಆದರೆ, ಅವರು ಸಾಂಸಾರಿಕ ಸುಖಗಳಿಂದ ಲಿಪ್ತರಾಗಿರಲಿಲ್ಲ ಅವರು ದೇಶ ವಿದೇಶಗಳಲ್ಲಿ ಸಂಚರಿಸಿ ಶತ್ರು ಮಿತ್ರು ಭಕ್ತಿಯ ಪ್ರಜ್ಞಾರವೆಸಗಿದರು. ಇವರೂ ವ್ಯಕ್ತಿಗಳು ಅವರೊಡನೆ ಸದಾ ಸಂಗಾತಿಗಳಾಗಿದ್ದರು. ಅವರೆಲ್ಲೊಬ್ಬನು ಹಿಂದೂ, ಇನ್ನೊಬ್ಬನು ಮುಸಲ್ಮಾನ!" ನಾನಕನು ಈ ಕಥೆಯ ಉಪದೇಶ ಮಾಡುತ್ತಾನೆ. ಜಿತನ ಉಪದೇಶ ಎಲ್ಲರಿಗಾಗಿತ್ತು. ಅವನ ಶಿಷ್ಯರಲ್ಲಿ ಹಿಂದೂ—ಮುಸಲ್ಮಾನರೆಲ್ಲರೂ ಇದ್ದರು.

ಗುರುನಾನಕನು ಆಧ್ಯಾತ್ಮಿಕ ನೇತಾರನಿದ್ದಂತೆಯೇ ಅತಿರಿಕ್ತ ಸಮಾಜ ಸುಧಾರಕನೂ ಉನ್ನತಶ್ರೇಣಿ ಕವಿಯೂ ಆಗಿದ್ದನು. ಜನ ಸಾಧಾರಣರಿಗೆ ಆಧ್ಯಾತ್ಮಿಕ ಕೋಪದೇಶವಿಕ್ಷಂತೆಯೇ ವ್ಯಕ್ತಿ ಮತ್ತು ಸಮಾಜದ ಕೆಡುಕುಗಳನ್ನು ದೂರೀಕರಿಸುವ ಪ್ರಯತ್ನವೆಸಗಿ, ಲೋಕಪ್ರಿಯ ಮತ್ತು ಸರಳವಾಣೀ ಯುಕ್ತವಾದ ಸಂದೇಶವಿತ್ತನು. ಧರ್ಮ ಮತ್ತು ಭಕ್ತಿಗಳಿಗೆ ಬಾಹ್ಯ ಸ್ವರೂಪ ಮಹತ್ವವೆಲ್ಲ ಕರ್ಮಕಾಂಡ, ತೀರ್ಥಸ್ಥಳ, ಅಂಧವಿಶ್ವಾಸ ಮತ್ತು ನಿಯಮಗಳ ವಿರುದ್ಧ ಧ್ವನಿಯೆತ್ತಿದನು. ಮಾನವರನ್ನು ವರ್ಗಗಳಾಗಿ ವಿಂಗಡಿಸಿದ ಮತ್ತು ಉಚ್ಚ ನೀಚವೆಂದು ವಿಭಾಗಿಸಿದ ಧರ್ಮವನ್ನೀತ ತಿರಸ್ಕರಿಸಿದನು.

ಒಂದು ಬಾರಿ ನಾನಕನು ಹರಿದ್ವಾರಕ್ಕೆ ಹೋದನು. ಅವನು ಗಂಗಾ ಸ್ನಾನ ಮಾಡುತ್ತಿರುವಾಗ,ಉದಯಿಸುವ ಸೂರ್ಯನಿಗೆ ಅಂಜಲಿಪ್ರದಾನ ಮಾಡುವ ಕೆಲವರನ್ನು ಕಂಡನು. ನಾನಕನು ಪಶ್ಚಿಮ ಕಡೆಗೆ ಮುಖ ಮಾಡಿ ಕೈಬೊಗಸೆಗಳಿಂದ ನೀರನ್ನು ಸುರಿಯಲುಪಕ್ರಮಿಸಿದನು. "ಪಶ್ಚಿಮದಲ್ಲಿ ಯಾರಿಗೆ ನೀರು ಕೊಡುತ್ತಿರುವೆ?" ಎಂದು ಜನರು ಕೇಳಿದರು. ಆಗ ನಾನಕ ಪ್ರಶ್ನಿಸಿದನು— "ನೀವು ಪೂರ್ವದಲ್ಲಿ ಯಾರಿಗೆ ನೀರಿರೆಯುತ್ತಿರುವಿರಿ? ಎಂದು. "ನಾವು ಪೂರ್ವ ದಿಕ್ಕಿನಲ್ಲಿ ಸೂರ್ಯನಿಗೆ ಅರ್ಘ್ಯಪ್ರದಾನಮಾಡುತ್ತಿರುವೆವು"-ಅವರೆಂದರು. ಆಗ ನಾನಕ ನುಡಿಸಿದನು: "ನಾನು ಪಂಜಾಬಿನಲ್ಲಿರುವ ನನ್ನ ಗದ್ದೆಗಳಿಗೆ ನೀರಿರೆಯುತ್ತಿರುವೆನು. ನೀವಿಲ್ಲಿ ಅರ್ಪಿಸಿದ ನೀರು ಕೋಟ್ಯಂತರ ಮೈಲಿ ದೂರದಲ್ಲಿರುವ ಸೂರ್ಯನನ್ನು ಸೇರುವುದಾದರೆ ಇನ್ನೂರು—ಇನ್ನೂರೈವತ್ತು ಮೈಲು ದೂರದ ನನ್ನ ಗದ್ದೆಗಳಿಗೆ ನಾನು ಎರೆದ ನೀರು ಅವಶ್ಯ ಸೇರಲೇಬೇಕು!" ಈ ಒಂದು ಕಥೆಯು ಜನಜಿಹ್ವಾಗ್ರದಲ್ಲಿ ಕುಣಿಯುತ್ತಿದೆ.

ದರಿದ್ರ ನತ್ತು ದೀನರನ್ನು ಕಂಡರೆ, ನಾನಕನ ದಯಾರ್ದ್ರ ಹೃದಯವು ಯಾಗ್ನಿತಿದ್ದನು. ಧನ ವಸ್ತು ವಸ್ತ್ರ್ಯಗಳನ್ನು ನಾನಕನೆಂದೂ ಸ್ವೀಕರಿಸಲಿಲ್ಲ. ಒಂದು ಬಾರಿ, ಒರ್ವ ಧನಿಕನ ಭೋಜನ ಸಮಾರಂಭದಲ್ಲಿ, ಇನ್ನರಲ್ಲಿ ಬಡವರ ರಕ್ತ ಸುರಿದಿದೆಯೆಂದು ಹೇಳಿ, ಕಾಯಕಕಷ್ಟ ಪಡುವ ಒರ್ವ ದರಿದ್ರ ಬಡಗಿಯ ರೊಟ್ಟಿಯನ್ನು ಸ್ವೀಕರಿಸಿದನೆನ್ನುತ್ತಾರೆ.

ನಾನಕನ ಮಾತುಗಳು ಸರಸವೂ ಮಧುರವೂ ಆಗಿವೆ.ಹೃದಯಾಂತರಾಳದಿಂದ ಹೊಂಟಿವುಗಳಾಗಿವೆ. ದರ್ಶನದ ಶುಷ್ಕ ತತ್ವಗಳನ್ನೂ ಶಬ್ದಜಾಲ ವೈಭವನ್ನೂ ಅವನು ಅಳವಡಿಸಲಿಲ್ಲ. ಸರಳ ಪದಪುಂಜಗಳಲ್ಲಿಯೇ ತನ್ನ ದೇವನನ್ನು ಹೆಸರಿಗಿ, ಜನತೆಗೆ ಧರ್ಮಮಾರ್ಗವನ್ನು ಬೋಧಿಸಿದನು. ಅವನು ಒಂದು ಸಾಧಾರಣ ಉಪಮೆಯಿಂದ ಸುಂದರ ನುಡಿಯನ್ನು ಸಾಡಿದ್ದಾನೆ:

"ತೂ ದರಿಯಾವೋ ದಾನಾ ಬೀನಾ
ಮೈ ಮಛಲೀ ಕೈಸೇ ಅಂತ ಲಹಾಂ!"

ತನ್ನ ಸ್ವಾಮಿಯು ಆರಾಧನೆಯಲ್ಲಿ ಆನಂದ ತುಂದಿಲನಾಗಿ ಅವನೆನ್ನುತ್ತಾನೆ: "ಆಕಾಶವು ಒಂದು ಹರಿವಾಣ; ಸೂರ್ಯ ಚಂದ್ರರು ಅದರಲ್ಲಿನ ದೀಪಗಳು. ಮಲಯಾಸಿಲನು ಸುಗಂಧಿತಧೂಪ ನೀರು; ವನಸ್ಪತಿಯು ಇದರಲ್ಲಿ ಹೂತುಂಬಿ ಅಂಳಿವೆ. ನಿಷ್ಪತ್ರಗಳ ಮುತ್ತು ಸುತ್ತುವರಿದಿವೆ; ಗಾಳಿಯು ಚಾಮರ ಬೀಸುತ್ತಿದೆ. ಈ ರೀತಿಯಾಗಿ ಸಮಸ್ತ ಪ್ರಕೃತಿಯೂ ನನ್ನ ಸ್ವಾಮಿಗೆ ಆರತಿಯೆತ್ತುತ್ತಿದೆ."

"ನಿನ್ನ ಮನಸ್ಸು ನಿನ್ನ ಚರಣ ಕಮಲ ಲೋಲುಪನಾದ ಭೃಮರವಾಗಿದೆ. ನಾನಕನೊಂದು ಬಾಯಾರಿದ ಖಾರಂಗ; ಇದನ್ನು ನಿನ್ನ ಹೆಸರಿನಿಂದ ಉರಿಸು; ಇದರಿಂದಾಗಿ ಜನ್ಮಜನ್ಮಾಂತರಗಳ ಬಯಕೆಗಳು ದೂರವಾಗಲಿ."

ಗುರು ನಾನಕನ ಕಾಲದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಅತ್ಯಾಚಾರೀ ಶಾಸನದಿಂದ ಜನತೆಯ ಪರಿಸ್ಥಿತಿ ಕೆಟ್ಟು ಹೋಗಿತ್ತು. ಇದರ ವರ್ಣನೆಯನ್ನಾತ ಮಾರ್ಮಿಕ ಶಬ್ದಗಳಲ್ಲಿ ಮಾಡಿದ್ದಾನೆ. ಅವನೆಂದಿದ್ದಾನೆ:

"ಯಮನು ಸಿಂಹ ಆತನು ಮೆದಲು ಜನತೆಯ ಬೇಟೆಯಾಡಿ ರಕ್ತ ಕುಡಿಯುತ್ತಾನೆ. ಮತ್ತು ನಾಯಿಯಂತೆ ಎಲುಬನ್ನು ನೆಕ್ಕುತ್ತಾನೆ. ಎಲ್ಲೆಡೆಯೂ ಮಿಥ್ಯವಾದದ ಅಮವಾಸ್ಯೆಯು ರಾತ್ರಿಯಲ್ಲಿ ಸಚಂದ್ರನು ಗೋಚರಕ್ಕೆ ಬರುವುದಿಲ್ಲ."

ಭಾರತದ ಮೇಲೆ ಬಾಬರನ ಆಕ್ರಮಣವನ್ನು ವರ್ಣಿಸುತ್ತ ಒರ್ವ ಶಿಷ್ಯನೆನ್ನು ಸಂಬೋಧಿಸುವಂತಾತ ಹೇಳುತ್ತಾನೆ:

"ಏ, ಲಾಲೀ, ಬಾಬರನು ಪಾಪದ ಮೆರವಣಿಗೆಯನ್ನು ಹೊರಡಿಸಿ. ಅದರ ಮುಂದೆ ತಾನು ಬಂದಿದ್ದಾನೆ. ಬಲಾತ್ಕಾರದಲ್ಲಿ ದಾನವನ್ನು ತೆಗೆದುಕೊಳ್ಳುತ್ತಾನೆ.

"ಹಿಂದೂ ಮುಸಲ್ಮಾನರ ಲಾಜಾರ್ಕ್ಷತೆಗಳು ಸುರಿಯುತ್ತಿವೆ. ಈ ವಿವಾಹದಲ್ಲಿ ಒತ್ತಾಯದ ಬೇಡಿಕೆಗಳು ತುಂಬಿ ಹೋಗುತ್ತಿವೆ. ಏ, ಲಾಲೀ, ನಾವೂ ಈ ಖನಕನ ಮಂಗಲಗಾನವನ್ನು ಹಾಡೋಣ."

ಗುರು ನಾನಕನ ಜನ್ಮವು ವಿಕ್ರಮ ಸಂವತ್ಸರಾಭಿಕರಲ್ಲಿ ಪಂಜಾಬದ ತಲವಂಡಿ ಎಂಬ ಗ್ರಾಮದಲ್ಲಾಯಿತು. ತನ್ನ ಎಪ್ಪತ್ತನೆಯ ವರ್ಷದಲ್ಲಿ ಈತನು ಕರತಾರಪುರದಲ್ಲಿ ಸಮಾಧಿ ಹೊಂದಿದನು.

ಭಾರತದ ಇತಿಹಾಸಾವಲೋಕನದಿಂದ, ನಾನಕನ ಕಾಲಕ್ಕೆ ಕೊಂಚ ಮೊದಲೇ ಭಕ್ತಿ ಮಾರ್ಗವು ಪ್ರಬಲವಾಗಿತ್ತೆಂದು ತಿಳಿಯುತ್ತದೆ. ಬಂಗಾಳ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕಗಳಲ್ಲಿ ಆಗಾಗಲೇ ಈ ಭಕ್ತಿ ಮಾರ್ಗವು ಪರಾಗವ್ಯೆಯಸ್ನಪಡಿತ್ತು. ಗುರು ನಾನಕನೂ ಈ ಭಕ್ತಿಮಾರ್ಗ ಲತೆಗೆ ನೀರಿರೆದನು. ಎಂತಲೇ ಇಂದು ಆತನಿಗೆ ಅಖಿಲ ಭಾರತೀಯ ಪ್ರಾಧಾನ್ಯವಿದೆ.

(ಸಂಗೃಹಿತ)

—ಗೋರಾ.

ಕೇಶ ಸೌಂದರ್ಯವೇ—ಯುವತಿ, ಯುವಕರ ಶೃಂಗಾರ.
ಅಂಧ ಕೇಶವೃದ್ಧಿ (ಕೂದಲ ಬೆಳವಣಿಗೆ)ಗಾಗಿ ಅನೇಕ ತಲೆ ಎಣ್ಣೆಗಳನ್ನು (Hair Oils) ಉಪಯೋಗಿಸಿ ನಿರುತ್ಸಾಹರಾಗಿರುವುದು ಸಹಜ. ಆದರೆ:—
ಹಿಮಗಿರಿ ತೈಲ ಉಪಯೋಗಿಸುವುದರಿಂದ
ತಲೆನೋವು, ಕಣ್ಣುರಿ, ಕಣ್ಣಿನಲ್ಲಿ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೂದಲು ಉದುರುವಿಕೆ, ಕಣ್ಣು ಮಂಜು, ನಿದ್ರಾಭಂಗ ಈ ವ್ಯಾಧಿಗಳನ್ನು ಪರಿಹರಿಸಿ ಕೇಶವೃದ್ಧಿ ಮಾಡುವುದು.
ಸೂಚನೆ:— ಹಿಮಗಿರಿ ತೈಲವೆಂದು "ಭೀರೆ ಗಿರಿಗಳ" ಹೆಸರುಳ್ಳ ನಕಲಿ ಮಾಲನ್ನು ಕೊಂಡು ಮೋಸಹೋಗಬೇಡಿರಿ.
Wanted Agents & Stockists
Manufacturers: RATAN MISRI DEPOT
Avenue Road Cross, BANGALORE-2

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ್

ರಾಜಕೀಯ

ಮಹಾಯುದ್ಧ ಅನಿವಾರ್ಯವೆ?

ಭಾರತೀಯ ನಿಶ್ಶಸ್ತ್ರೀಕರಣ ನೀತಿಯೊಂದೇ ಇವಕ್ಕೆ ತಾರಕ

ಇಂದು ಪ್ರಪಂಚದ ಎಲ್ಲೆಡೆಗಳಲ್ಲೂ ಒಂದು ಭೀತಿಯ ವಾತಾವರಣವಿದೆ. ಅದೇ ಯುದ್ಧ. ಶಾಂತಿ ಮಂತ್ರವು ಆದೆಷ್ಟು ಗಂಭೀರವಾಗಿ – ಘೋಂಟಾಘೋಷವಾಗಿ ಪರಿಠಲ್ಪಡುತ್ತಿದ್ದರೂ, ಆ ಮಂತ್ರದ ಹಿಂದೆ ಯುದ್ಧ ತಂತ್ರವೇ ಹೆಣೆಯಲ್ಪಟ್ಟಿರುವುದು ಸ್ಪಷ್ಟವಾಗಿ ಕಾಣಲ್ಪಡುತ್ತಿದೆ. ಜಗತ್ತು ಇಂದು ತಾತ್ಪಿಕವಾಗಿ ಇದ್ವಾಗವಾಗಿದೆ. ಈ ಎರಡು ತತ್ವಗಳ ಮೂಲೋದ್ದೇಶವು ಸಾಮಾನ್ಯವಾಗಿ ಜನತಾ ಕಲ್ಯಾಣವೇ ಆಗಿದ್ದರೂ, ಈ ಎರಡು ಬಣಗಳ ದ್ವೇಷಾಸೂಯೆಯಿಂದ ಒಂದನ್ನೊಂದು ನೋಡುತ್ತಿವೆ. ಇಲ್ಲೇ ಯುದ್ಧದ ಕೆಡಿ ಹಾರುತ್ತಿದೆ. ಈ ಕಿಡಿ ಜಗತ್ತನ್ನೇ ದಾವಾನಲದಂತೆ ಸುಡಲು ಶಕ್ತಿಯುತವಾಗಿದೆ.

ಹಾಗಾದರೆ ಯುದ್ಧ ಅನಿವಾರ್ಯವೇ? ಇಂದಿನ ಪರಿಸ್ಥಿತಿಯಲ್ಲಿ ಹೌದೆಂದು ಒಪ್ಪ ಬೇಕಾದ ಭೀಕರ ಪ್ರಮೇಯ ಬಂದಿದೆ. ಅಮೇರಿಕನ್ ರಾಷ್ಟ್ರಕೂಟವಾಗಲೀ, ರಷ್ಯನ್ ಪಾಳಯ ರಾಷ್ಟ್ರಗಳಾಗಲೀ ಯುದ್ಧದ ಶಸ್ತ್ರಾಸ್ತ್ರಗಳ ಮೇಲೆ ನಿಂತೇ ಶಾಂತಿಯನ್ನು ಬಯಸುತ್ತಿವೆ. ಆದರೆ ಮೊದಲಾಗಿಯೇ ಈ ಎರಡು ರಾಷ್ಟ್ರಗಳು ಪರಸ್ಪರ ಪೋರಾಡಲು ಇಷ್ಟವುಳ್ಳವಾಗಿಲ್ಲ. ಭೂಲೋಕದಶಸಂಖ್ಯಾತ ಬಡ ಹಾಗೂನಿರ್ಬಲ ರಾಷ್ಟ್ರಗಳರಾಜಕಾರಣಗಳಲ್ಲೂ ಅನ್ಯಥಾ ಪ್ರವೇಶಿಸಿ ಆಧವಾ ಪ್ರಜೋದನೆ ನಡೆಸಿ, ಆ ಮೂಲಕ ಇವಿರ ಬಣವನ್ನು ಕೆಣಕುವ ಕುಹಕ ನಡೆಸುತ್ತಿವೆ. ಇವೆಂದಾಗಿ ಶಾಂತಿಯನ್ನು ಸರ್ವದಾ ಬಯಸುವ, ಆಸ್ಯ, ಮಧ್ಯ ಪ್ರಾಚ್ಯ, ಆಫ್ರಿಕಾದಂತಹ ಪ್ರದೇಶಗಳು ಈ ಶಕ್ತಿಕೂಟದ ಚದುರಂಗದಾಟದ ಅಸಹಾಯ ಬಂತ್ತೆಗಳಂತಾಗಿವೆ. ಇಂದು ದಿನ ಬೆಳಗಾದರೆ ರಷ್ಯಾದಲ್ಲೋ, ಅಮೇರಿಕಾದಲ್ಲೋ ನೇರ ತಿಕ್ಕಾಟ ನಡೆದ ವರ್ತಮಾನ ಬರುವುದಿಲ್ಲ. ಬದಲು ಬಲು ಸಣ್ಣ ರಾಷ್ಟ್ರಗಳ ಆಂತರಿಕ ಹಿತಕ್ಷೋಭೆಯ ಘಟನೆಗಳ ಬಗ್ಗೆ ಅಮೇರಿಕಾವೋ, ರಷ್ಯಾವೋ ಟೀಕೆ-ಪ್ರತಿಟೀಕೆ ನಡೆಸುತ್ತಿರುವುದನ್ನು ಕಾಣುತ್ತೀವೆ ಆ ರಾಷ್ಟ್ರವು ಮಳಣಮಯವಾಗುತ್ತಿರುವುದನ್ನು ಕಾಣುತ್ತೀವೆ; ಅಲ್ಲಿನ ಜನತೆಯ ಜೀವನವು ದಾರುಣವಾಗುತ್ತಿರುವುದನ್ನು ಕಾಣುತ್ತೀವೆ. ಇದಕ್ಕೆ ಅಂತ್ಯವಿಲ್ಲವೇ?

ಇಂದು ಭೂಲೋಕದಲ್ಲಿ ಭೂ, ಜಲ, ವಾಯು ಪಡೆಗಳಲ್ಲಿ ಸರ್ವ ಶಕ್ತಿಯನ್ನು ಪಡೆದ ರಾಷ್ಟ್ರ ರಷ್ಯವೇ ಎನ್ನಬಹುದು. ರಷ್ಯಾವು ಸಂಪೂರ್ಣವಾಗಿ ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಸೈನ್ಯ ಪಡೆಯನ್ನೊಳಗೊಂಡಿದೆ. ಜಲದ ಭೂಸೇನೆಯು ಜೀನಾದ ಭೂಸೇನೆಯೊಂದಿಗೆ ಕೂಡಿಕೊಂಡರೆ ಇಡೀ ಭೂಲೋಕದ ಇತರ ಮಿತ್ರ ರಾಷ್ಟ್ರಗಳಿಗಿಂತಲೂ ಹೆಚ್ಚಿನದೆಂದು ಯುದ್ಧ ತಂತ್ರಜ್ಞರು ಲೆಕ್ಕ ಹಾಕಿದ್ದಾರೆ. ರಷ್ಯನ್ ಯೋಧರು ಯಾವ ವಾತಾವರಣದಲ್ಲೂ ಧಾಳಿಯಿಡಬಲ್ಲಂತಹ ಶಕ್ತಿಯುತರು. ಅವರ ಸೈನ್ಯ ಸರಂಜಾಮಕ್ಕೆ ಹೊಂದಿಕೊಂಡಿರುವ ಸರಬರಾಯಿ ಪಡೆಯೂ ಆಧುನಿಕರಿಸಲ್ಪಟ್ಟಿರುತ್ತದೆ. ಸೈನ್ಯದ ಬೆಂಬಲವಾಗಿ ವೈಜ್ಞಾನಿಕ ಯುಗದ ಆಧುನಿಕ ಶಸ್ತ್ರಗಳು ಸುಸಜ್ಜಿತಗೊಳಿಸಲ್ಪಟ್ಟಿವೆ. ಹಾಗೆಯೇ ಅದಕ್ಕೆ ಪೂರಕವಾದ ವಾಯುಪಡೆ ಹಾಗೂ ಜಲಯಾನಗಳ ಸಂಪೂರ್ಣ ಸೌಲಭ್ಯ ರಷ್ಯಾಕ್ಕಿದೆ. ಈ ದೃಷ್ಟಿಯಿಂದ ಅಮೇರಿಕಾವಾಗಲೀ, ಅದಕ್ಕೆ ಹೊಂದಿಕೊಂಡಿರುವ ಮಿತ್ರ ರಾಷ್ಟ್ರಗಳಾಗಲೀ ಬಹಳ ಹಿಂದುಳಿದಿವೆ ಎಂಬುದನ್ನು ಮಿತ್ರ ರಾಷ್ಟ್ರಗಳ ಯುದ್ಧ ತಂತ್ರ ವಿಶಾರದರೇ ಒಪ್ಪಿರುತ್ತಾರೆ. ಹಾಗಿದ್ದರೂ ರಷ್ಯಾ ಏಕೆ ಯುದ್ಧ ಸಾರಿ ಒಮ್ಮೆ ಈ ತಾತ್ಪಿಕ ಘರ್ಷಣೆಯ ನಿವಾರಣೆ ಮಾಡುವುದಿಲ್ಲ?

ರಷ್ಯಾಕ್ಕೆನುವ ಈ ಎಲ್ಲ ಸೌಲಭ್ಯಕ್ಕೂ ತಲೂ ಮಿಗಿಲಾದ ಶಕ್ತಿಯುತ ನೈತಿಕ ಸ್ಥೈರ್ಯವೊಂದು ಅಮೇರಿಕಾಕ್ಕಿದೆ. ಅಮೇರಿಕವು ಬೇರೆಲ್ಲಾ ಯುದ್ಧ ಸಂಗ್ರಹ ಶಕ್ತಿಯಿಂದ ಹಿಂದುಳಿದಿದ್ದರೂ, ಇಂದಿನ ವಿಜ್ಞಾನಯುಗದ ಅಪೂರ್ವ ಶಕ್ತಿಯಾದ ಅಣುತಂತ್ರ ಶಕ್ತಿಯಿಂದ ಸಂಪೂರ್ಣ ಸಂಪನ್ನವಾಗಿದೆ. ಸಂಪನ್ನ ರಾಷ್ಟ್ರವಾದ ಅಮೇರಿಕಾವು ಅಣು ಶಸ್ತ್ರಾಸ್ತ್ರಗಳಲ್ಲಿ ತೀರ ಭಯಂಕರವೂ, ಅಮಾನುಷವೂ ಆದ ಖಂಡಾಂತರ ಕ್ಷಿಪಣಿ (ಮಿಸ್ಯಾಲ್ಸ್)ಗಳನ್ನು ಅವಿರಾರ ಸಂಖ್ಯೆಯಲ್ಲಿ ತಯಾರಿಸಿ ಸಂಗ್ರಹಿಸಿದೆ. ಇವು ಸಂಪೂರ್ಣ ತೃಪ್ತಿಕರವಾಗಿ ಸಿದ್ಧಗೊಳಿಸಲ್ಪಟ್ಟಿವೆ. ಇಂತಹ ಅಸ್ತ್ರಗಳನ್ನು ರಷ್ಯಾವು ತಯಾರಿಸಿದೆಯಾದರೂ, ಅಧಿಕ ಪ್ರಮಾಣದಲ್ಲಿ ಸಯೋಗ್ಯವಾಗಿ ಹಾಗೂ ತನ್ನ ಕಾರ್ಯ ಸಾಧಿಸಬಲ್ಲ ನಂಬಿಕೆಯುಳ್ಳಂತಹ ಅಸ್ತ್ರಗಳಾಗಿ ಆ ಪ್ರಕಾರಗಳನ್ನು ತಯಾರಿಸುವ ಸಾಮರ್ಥ್ಯವನ್ನು ಇನ್ನೂ ಪಡೆದಿಲ್ಲ. ಹೀಗಾಗಿ ರಷ್ಯಾವು ನೇರ ಯುದ್ಧದ ಬಗ್ಗೆ ಜೇಕೆಂದೇ ಹಿಂದೆ ಹಿಂದೆ ಸರಿಯುತ್ತ ಕಾಲಹರಣ ಕ್ಕಾಗಿ ತವಕಿಸುತ್ತಿದೆ.

ಮುಂದಿನ ಮಹಾಯುದ್ಧದಲ್ಲಿ ಭೂ, ಜಲ, ವಾಯು ಸೈನ್ಯಗಳಿಗೆ ಏನೇನೂ ಬೆಲೆಯಿಲ್ಲ. ಯಾರು ಮೊದಲು ಯುದ್ಧ ಪ್ರಾರಂಭಿಸುವರೋ, ಅವರು ನಿರ್ನಾಮಾರ್ಥದಲ್ಲಿ ಶತ್ರು ಪ್ರದೇಶವನ್ನು ಧ್ವಂಸೀಪಟ ಮಾಡಬಹುದು. ಯುದ್ಧ ಘೋಷಣೆ ಹಾಗೂ ಶತ್ರು ನಿರ್ನಾಮದ ವಾರ್ತೆಗಳು ಒಟ್ಟೊಟ್ಟಾಗಿ ಬರುವ ಸಂಭವವೇ ಜಾಸ್ತಿ. ಹಾಗೆಂದೇ ರಷ್ಯಾದ ಸುತ್ತಲೂ ಅಮೇರಿಕನ್ ರಾಷ್ಟ್ರವು ವಿಮಾನ ನಿಲ್ದಾಣಗಳನ್ನು ಸಂಘಟಿಸಿದ್ದು, ರಷ್ಯಾದ ಎಲ್ಲಾ ಭಾಗಗಳನ್ನು ಒಮ್ಮೆಗೇ ಭಸ್ಮೀಭೂತಮಾಡುವ ಸಾಮರ್ಥ್ಯ ಪಡೆದಿದೆ. ಈ ಎಲ್ಲಾ ನಿಲ್ದಾಣಗಳು ಅಣುಶಕ್ತಿ ಜಾಲಿತ ವಿಸ್ಫೋಟಕಗಳನ್ನು ಸಂಪೂರ್ಣ ಸೌಲಭ್ಯ ರೀತಿಯಲ್ಲಿ ಪ್ರಯೋಗಿಸುವ ಶಕ್ತಿಯುಳ್ಳದ್ದಾಗುವಂತೆ ನಿರ್ಮಿತಗೊಂಡಿವೆ. ಆದರೆ ರಷ್ಯಾವನ್ನು ಅಮೇರಿಕಾವು ಸುತ್ತುವರಿದಂತೆ, ಅಮೇರಿಕಾವನ್ನು ಸುತ್ತುವರಿಯಲು ರಷ್ಯಾಕ್ಕೆ ಸಾಧ್ಯವಿಲ್ಲ. ಅಮೇರಿಕಾದ ಭೌಗೋಲಿಕ ರಕ್ಷಣೆಯು ರಷ್ಯಾದ ಅಣುಶಕ್ತಿ ಪ್ರಯೋಗಕ್ಕೆ ಒಂದು ದೊಡ್ಡ ಪಡೆಯಾಗಿ ಇಂದಿನ ತನಕ ಉಳಿದಿದೆ. ಅಮೇರಿಕಾವಿಂದು ಸುಧ್ಯಪ್ರಾಚ್ಯದಲ್ಲಿ ಈ ದೂರದೃಷ್ಟಿಗಾಗಿಯೇ ಹಸ್ತಕ್ಷೇಪ ನಡೆಸಿದೆ. ರಷ್ಯಾ ಕೂಡಾ ಇದನ್ನು ಎದುರಿಸುವ ನೆವದಲ್ಲೇ ಅಮೇರಿಕನ್ ವಿರೋಧಿ ನೀತಿಗೆ ಬೆಂಬಲ ಕೊಡುತ್ತಿದೆ.

ಅಮೇರಿಕಾದ ಈ ಒಂದು ಯೋಗ್ಯತೆಯಿಂದಾಗಿಯೇ ರಷ್ಯಾ ಕೂಡಾ ಒಳಗಿಂದೊಳಗೆ ತನ್ನ ವೈಜ್ಞಾನಿಕ ರಕ್ತಿಯನ್ನು ಹೆಚ್ಚಿಸಲು ಅಹರ್ನಿತಿ ಪ್ರಯತ್ನಿಸುತ್ತಿರುವಂತೆ, ಪ್ರತ್ಯಕ್ಷವಾಗಿ ಶಾಂತಿಯ ಮಂತ್ರವನ್ನು ಪಠಿಸುತ್ತ ಶಾಂತಿಪ್ರೇಮಿ ರಾಷ್ಟ್ರಗಳ ಒಲವನ್ನು ಸಂಪಾದಿಸಲೆತ್ನಿಸುತ್ತಿದೆ.

ಆದರೆ ಇದೇ ರೀತಿ ಕಾಲಹರಣಕ್ಕೆ ಎಡೆಗೊಟ್ಟುಪಾದರೆ ವೈಜ್ಞಾನಿಕ ಖಂಡಾಂತರ ಕ್ಷಿಪಣಿ, ಹೊಸ—ಹೊಸ ಶಸ್ತ್ರಾಸ್ತ್ರಗಳ ಸಂಶೋಧನೆಯಿಂದ ರಷ್ಯಾವು ಅಮೇರಿಕಾಕ್ಕಿಂತ ಅಜೇಯಮವೆನಿಸುವುದು ಖಂಡಿತ ಇದಕ್ಕಾಗಿಯೇ ಅಮೇರಿಕಾವು ಯುದ್ಧ ಪ್ರಜೋದನೆಗೆ ನಾಕಷ್ಟು ನೆವ ಹುಡುಕುತ್ತ ರಷ್ಯಾವನ್ನು ನಿರ್ನಾಮ ಮಾಡಲು ತವಕಿಸುತ್ತಿದೆ. ಇಂದು ದುರ್ಬಲ ಸ್ಥಿತಿಯಲ್ಲಿರುವಾಗ ರಷ್ಯಾವನ್ನು ಹಣ್ಣು ಮಾಡದಿದ್ದರೆ, ಮುಂದೆ ರಷ್ಯಾ ಇಡೀ ಭೂಲೋಕದ ಏಕೈಕ ಪ್ರಬಲ ಶಕ್ತಿಯಾಗಿ ಪ್ರಜಾ ಪ್ರಭುತ್ವದ ಬುಡಕ್ಕೆ ಕೊಡಲಿ ಏಟು ಹಾಕುವುದೆಂಬ ಅಮೇರಿಕನ್ ಭೀತಿ ಎಂದಿಗೂ ಸುಳ್ಳಲ್ಲ!

ಹಾಗಾದರೆ ಇಂದು ರಷ್ಯಾ—ಅಮೇರಿಕಾದ ಪ್ರಬಲ ಸ್ಪರ್ಧೆಯಿಂದ ಮುಕ್ತಿ ಮಾರ್ಗ ಜಗತ್ತಿಗಿಲ್ಲವೇ? ಇದೆ. ಅದೇ ಅಣು ಶಸ್ತ್ರಗಳ ಸಂಪೂರ್ಣ ಬಹಿಷ್ಕಾರ ಹಾಗೂ ಪ್ರಯೋಗ, ಸಂಶೋಧನೆಗಳಿಗೆ ನಿಷೇಧ! ಇದನ್ನು ಸರ್ವ ವಿಧದಲ್ಲೂ, ಸರ್ವ ಶಕ್ತಿಯಿಂದಲೂ ಬಹಿಷ್ಕರಿಸಬೇಕು. ಪೂರ್ಣ ಕಾರಿನೊಂದಿಗೆ ಜಗತ್ತಿಗೆ ಉತ್ಪಾದನೆ, ಸಂತೋಷನೆಗೆ ನೇರವಾದ ವಿನಾಶ ತಂದೊಡ್ಡಬೇಕು. ಇದೇ ಜಗತ್ತಿನ ಶಾಂತಿಪ್ರಿಯ ರಾಷ್ಟ್ರಗಳ ಸಮಿತಿಯು ಈ ವಿಚಾರದಲ್ಲಿ ಮೇಲ್ಪನಿಕೆ ನಡೆದಬೇಕು. ಆಗ ವಿನಾಶಕಾರಿ ಆಪತ್ಕಾಯದಿಂದ ಜಗತ್ತು ಮುಕ್ತಗೊಳ್ಳಬಹುದು. ಜಗತ್ತಿನ ಮಾರಣಾಸ್ತ್ರಗಳಿಂದ ನೆನಸದಷ್ಟು ಬೇಗ ವಿನಾಶವಾಗುವುದನ್ನು ಸರ್ವಥಾ ತಪ್ಪಿಸಬಹುದು.

ಈ ರೀತಿ ಮಾಡಿದರೆ, ರಷ್ಯಾವು ಭೂ, ಜಲ, ವಾಯು ಪಡೆಗಳಲ್ಲಿ ಮುಂದಿರುವುದರಿಂದ ಅಮೇರಿಕನ್ ರಾಷ್ಟ್ರ ಬಣಕ್ಕಿಂತ ವರ್ಚಸ್ವಿಯಾದಂತಾಗುವುದಿಲ್ಲವೆ? ಆದರೆ ಇಂದು ಜಗತ್ತಿನಲ್ಲಿ ತಾತ್ಕಾಲಿಕವಾಗಿ ಘರ್ಷಣೆಗೊಳಗಾದ ಬಣಗಳು ಎರಡಾದರೂ, ಮೂರನೆಯ ಒಂದು ಬಣವಿದೆ. ಅದೇ ಶಾಂತಿಯುತ ರಾಷ್ಟ್ರಗಳ ಬಣ. ಇವು ಸ್ವಾತ್ರಗಳಲ್ಲಿ ಈ ಬಣಗಳೊಂದಿಗೆ ಸ್ಪರ್ಧಿಸಲು ಸಾಧ್ಯವಿಲ್ಲವಾದರೂ, ಅವುಗಳ ನೈತಿಕವಾಪತ್ತೆಕ್ಕೆ ಇಂದು ಎರಡು ರಾಷ್ಟ್ರಗಳೂ ಹೆದರುತ್ತಿವೆ. ಅಲ್ಲದೆ ಈ ಮೂರನೇ ರಾಷ್ಟ್ರ ಬಣಗಳು ಏಕತ್ರವಾಗಿ ಅನ್ಯಾಯದ ವಿರುದ್ಧ ಕೈ ಎತ್ತಿದರೆ ಸಮಸ್ತೂಕವಾಗಿ ಎದುರಿಸಬಲ್ಲುವು. ಜಾಗತಿಕ ಶಾಂತಿಯನ್ನು ಜೇಕೆಂದೇ ಕೆದಕಿ ಮೊದಲಾಗಿ ಯಾರು ಯುದ್ಧ ಸಾರುತ್ತಾರೋ, ಅವರ ವಿರುದ್ಧ ಈ ಶಾಂತಿ ರಾಷ್ಟ್ರಗಳು ಕೂಡಿಕೊಂಡರೆ ವೈರಿ ನಿರ್ನಾಮವಾಗುವುದು ಶತಸಿದ್ಧ. ಸಂಪೂರ್ಣ ಆಧುನೀಕರಿಸಲ್ಪಟ್ಟ ಜರ್ಮನಿಯ ದ್ವಿತೀಯ ಮಹಾಯುದ್ಧದಲ್ಲಿ ಯಾವ ಪಾಡನ್ನು ಪಡೆಯಿತು? ಜಪಾನಿನ ಗತಿ ಏನಾಯಿತು? ಯುದ್ಧ ಕೃಷೆಗೆ ಅಲ್ಪ ಕಾಲದ ಆಯಸ್ಸಿಂಬುದನ್ನು ನಾವು ಪರಂಪರಾಗತವಾದ ಅನುಭವದಿಂದ ಕಂಡುಕೊಂಡಿದ್ದೇವೆ. ಅಣುಶಸ್ತ್ರ ನಿಶ್ಶಸ್ತ್ರೀಕರಣವಾದರೆ ಮಾತ್ರ ಈ ಮಾತಿಗೆ ಬೆಲೆ. ಏಕೆಂದರೆ ಅಣುಶಸ್ತ್ರ ಪ್ರಯೋಗಕ್ಕೆ ಅಸ್ಪದ ಕೊಟ್ಟರೆ, ಅದನ್ನು ಪ್ರತಿಘಟಿಸುವುದರೊಳಗೆ ಎದುರು ಬಣ ನಿರ್ನಾಮಗೊಳ್ಳಲು ಸಾಧ್ಯವಿದೆ. ಆದ್ದರಿಂದಲೇ ಧಾರಾಳದಂತಹ ಶಾಂತಿಪ್ರಿಯ ರಾಷ್ಟ್ರಗಳು ಜಗತ್ತಿನ ಮಾರಣ ಹೋಮದ ವಿರುದ್ಧ ನಿಶ್ಶಸ್ತ್ರೀಕರಣದ ವಿಚಾರದಲ್ಲಿ ಅನುಕಂಪವಿಂದಲಾದರೂ, ಆತ್ಮಾಹುತಿಯಿಂದಲೂ ಮನವಿ ಮಾಡಿಕೊಳ್ಳುತ್ತಿವೆ.

ಇಂದಲ್ಲ ನಾಳೆ ಭಾರತದ ಈ ಬೋಧನೆಗೆ ಬೆಲೆ ಕೊಡದಿದ್ದರೆ, ಜಗತ್ತಿನ ವಿನಾಶ ಅತೀ ಸನಿಹದಲ್ಲಿದೆ ಎನ್ನಬಹುದು.

—ಶ್ರೀ ಎನ್. ನಾರಾಯಣ ಬಲ್ಲಾಳ

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೊಪೊರೇಶನ್ ಲಿಮಿಟೆಡ್

(ಸ್ಥಾಪನೆ: ಮಾರ್ಚ್ 12, 1906)

ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಟಿಗೆ ಪುಸ್ತಕಗಳು, ಸೊನ್ನೆಟ್ ರತೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫೊಂಡು ಪುಸ್ತಕ, ರಶೀದಿಗಳು, ಕೋರ್ಟ್‌ಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಜಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ನಗರ ವರ್ಣನೆ

ಡಾಂಭಿಕ ವೈದ್ಯರ ನೆಲೆವೀಡು-ಬಗ್ದಾದ

ಇಲ್ಲಿ, ಎಲ್ಲ ಉದ್ಯೋಗಗಳಿಗಿಂತಲೂ ವೈದ್ಯನಾಗುವುದು ಸುಲಭ

ಬಗ್ದಾದ ಎಂಬ ಹೆಸರನ್ನು ಉಚ್ಚರಿಸಿ ದೊಡನೆಯೇ ಗತಕಾಲದ ಹಲವು ವಿಷಯಗಳು ನಮಗೆ ಹಂಬಲಾಗಾಗುವವು: ಈ ಪಟ್ಟಣಕ್ಕೆ ಸಂಬಂಧಪಟ್ಟ ಹಲವು ವಿಚಿತ್ರ ಕಥೆಗಳನ್ನು ನಾವು ಪಠ್ಯ ಪುಸ್ತಕಗಳಲ್ಲಿ ಓದಿರುವೆವು ಮುಖ್ಯವಾಗಿ ನಾವಿರದ ಒಂದು ರಾತ್ರಿಯ ತ್ತು ಅರೇಬಿಯನ್ ನೈಟ್ಸ್ ಇವುಗಳ ನೆನಪಾಗುವುದು. ಅಲ್ಲದೆ ಬಗ್ದಾದ ಪಟ್ಟಣವನ್ನು ವೃದ್ಧಿಗೆ ತಂದು ಚರಿತ್ರೆಯಲ್ಲಿ ಪ್ರಸಿದ್ಧಿ ಹೊಂದಿದ ಖಲೀಫ್ ಹರೂನ್ ಆಲ್‌ರಶೀದ್ ಇವರ ಸ್ಮರಣೆ ವಾಗುವುದು. ಆ ಕಾಲದಲ್ಲಿ ಬಗ್ದಾದ ಎಂಬುದು ಸೆರೆಸೆನ್ ಸಾಮ್ರಾಜ್ಯದ ಮುಖ್ಯ ಪಟ್ಟಣವಾಗಿತ್ತು. ಈ ಪಟ್ಟಣವು ಆಂದು ಇಡಿ ಆಸ್ಯ ಖಂಡಕ್ಕೆ ಕೇಂದ್ರ ವ್ಯಾಪಾರ ಸ್ಥಳವಾಗಿತ್ತು. ಇದು ವಿಚಿತ್ರ ತರವಾದ ಕಟ್ಟುಕಥೆಗಳು ಕಾದಂಬರಿಗಳಲ್ಲಿ ತುಂಬಿರುವದಲ್ಲದೆ ಸಂಸ್ಕೃತಿ ಕಲೆಗಳಲ್ಲಿ ಬಹಳ ಮುಂದುವರಿದಿತ್ತು. ಆಧುನಿಕ ಬಗ್ದಾದ ಎಂಬುದು ಪ್ರಾಚೀನ ಅರೇಬಿಯನ್ ನೈಟ್ಸು ಕಾಲದ ಬಗ್ದಾದ ಅಲ್ಲವೇ ಅಲ್ಲ. ಆದರ ವಿಶಿಷ್ಟ ಸಂಪ್ರದಾಯವು ಮಾಯವಾಗಿ ಹೆಸರು ಅಡಿಗೆ ಹೋಗಿರುವುದು. ಆರ್ವಾಚೀನದ ಬಗ್ದಾದ ಎಂಬುದು ಪ್ರಾಚೀನ ಬಗ್ದಾದ ಪಟ್ಟಣದ ಅಜು ಬಾಜಿನ ಸ್ಥಳವಾಗಿದೆ. ಹೇಗೆ ಬಗ್ದಾದನ್ನೂ ನವಬಗ್ದಾದವನ್ನೂ ಒಂದು ಕಾಲು ಸಂಕವು ಜೋಡಿಸುವದಂತೆ.

ಬಗ್ದಾದ ಪಟ್ಟಣದಲ್ಲಿ ಆದೃಷ್ಟ, ಭವಿಷ್ಯ ಹೇಳುವವರು ಎಲ್ಲಿ ನೋಡಿದರೂ ಕಾಣುವರಂತೆ. ಸ್ವಲ್ಪ ಹಣವನ್ನು ಕೊಟ್ಟರೆ ಒಬ್ಬ ಮನುಷ್ಯನಿಗೆ ಆತನ ಇಡೀ ಜೀವಮಾನಕ್ಕೆ ಬೇಕಾಗುವ ಮಹತ್ಕಾದ ಸುಖಸಂಪತ್ತನ್ನು ದಯಪಾಲಿಸುವಂತೆ. ಬಗ್ದಾದ ಜನರಿಗೆ ಸಾರ್ವತ್ರಿಕ ಶಿಕ್ಷಣ ಹಾಗೂ ವ್ಯಾಧಿಮಿಶ್ರ ಶಿಕ್ಷಣವೇ ಕಡಮೆ ಯಾದುದರಿಂದ ಅವರಿಗೆ ಯಾವಾಗಲೂ ಬರಹಗಾರರ ಸಹಾಯವು ಬೇಕೇಬೇಕು. ರಸ್ತೆಯ ಮೂಲೆಮೂಲೆಯಲ್ಲಿ ಸಹ ಬರಹಗಾರರು ಕಂಡುಬರುವರು ಕಾಲನ್ನು ಕಾಲಿನೊಳಗೆ ಮಡಚಿ ಚಕ್ರವರ್ತಿಯಂತೆ ಕುಳಿತುಕೊಂಡು ಕಾಗದವನ್ನು ತೊಡೆಯ ಮೇಲಿಟ್ಟುಗೊಂಡು ಹೇಳಿದುದನ್ನೆಲ್ಲಾ ಬರೆಯುವರು. ಹೀಗೆಯೇ ದಸಾವೇಜು ಮತ್ತು ಕಾಗದಗಳನ್ನು ಸಹಾ ಬರೆಯುವರು.

ಪೌರ್ವಾತ್ಯ ದೇಶಗಳಲ್ಲಿ ಯೋಗ್ಯ ವೈದ್ಯ ಚಿಕಿತ್ಸೆ ದೊರೆಯುವುದು ವಿರಳವಾದುದರಿಂದ ಯಾರಿಂದಲಾದರೂ ಯಾವ ದಾದರೊಂದು ಚಿಕಿತ್ಸೆ ಮಾಡಿಸಿಕೊಂಡು ಕಾಯಿಲೆ ಗುಣಹೊಂದಿ ಜೀವಿಸಿಕೊಳ್ಳ ಬೇಕೆಂಬ ಆಶೆಯುಳ್ಳ ಜನರನ್ನು ವೈದ್ಯ ನೆನಿಸಿಕೊಂಡ ಡೋಂಗಿ ವೈದ್ಯಕೀಯ ಚಿಕಿತ್ಸೆ ನಡೆಸುವ ಜನರು ಈ ಕಸಬಿನಿಂದಲೇ ಜೀವನೋಪಾಯವನ್ನು ಕಂಡುಕೊಂಡಿರುವರು. ಮಾನವನಿಗೆ ಸೋಂಕುವ ಮತ್ತು ತಗಲುವ ಎಲ್ಲಾ ರೋಗಗಳನ್ನು ಗುಣಪಡಿಸಬಲ್ಲೆನೆಂಬವರಿಗೆ ಬಹಳ ಆದರ ಮತ್ತು ಮನ್ನಣೆ ಸಿಕ್ಕುವದು. ಇಂಥ ಜನರು ಇಲ್ಲಿ ಕಡಮೆಯಿಲ್ಲ. ಈ ಡೋಂಗಿ ವೈದ್ಯರ ಕುರಿತು ಲಟಕ ಮೇಕನೆಂಬ ಸಂಸ್ಕೃತಪಾಠ್ಯ ಗ್ರಂಥದಲ್ಲಿ ಈ ರೀತಿ ಹೇಳಿಯಿದೆ. "ಅಸ್ಯಕಸ್ಯ ತರೋರ್ಮೂಲಯೇ ನಕೇನಾಪಿ ಪೇಷಯೇತ್ ಯಸ್ಮೈಕಸ್ಮೈ ಪ್ರಯಾಕಾಶ್ಯಂ ಯದ್ವಾ ತದ್ವಾ ಭವಿಷ್ಯತ್||" ಯಾವದಾದರೊಂದು ಬೇರನ್ನು ಯಾವಜಾದರೊಟ್ಟಿಗೆ ತೇದಿ, ಯಾರಿಗಾದರೂ ಕೊಟ್ಟರೆ ಏನಾದರೂ ಆಗಿತು ಎಂಬುದೇ ಇದರ ತಾತ್ಪರ್ಯ. ಇಂಥ ವೈದ್ಯರ ಕುರಿತು ಒಂದು ಚಂತ್ರೆಯ ಸ್ತುತಕದಲ್ಲಿ ಓದಿದ ನೆನಪಾಗುವುದು. ಅದು ಹೀಗಿದೆ: ಒಬ್ಬ ಯಜಮಾನನು ತನ್ನ ಮನೆಯ ಕುದುರೆ ಪಾಕಣೆಯವನ ಕೆಲಸವು ಶಿಕ್ಷಿಸಿಕರನೆಂದು ಕಂಡು ಆತನನ್ನು ಕೆಲಸದಿಂದ ನಿವೃತ್ತಿಪಡಿಸಿದನು. ನಿವೃತ್ತಿಹೊಂದಿದ ಸ್ವಲ್ಪ ಸಮಯದೊಳಗೆ ಬಹು ಸುಲಭದಿಂದ ಜೀವನೋಪಾಯವನ್ನು ಹುಡುಕಿ ವೈದ್ಯವೃತ್ತಿಯೇ ಒಳ್ಳೆಯದೆಂದು ತಿಳಿದು ಒಂದು ಕೋಣೆಯ ಬಾಗಿಲಲ್ಲಿ ಬೋರ್ಡು ಹಾಕಿ ಕೋಣೆಯೊಳಗೆ ಆಫೀಸುಮಾಡಿ ಕೂತುಕೊಂಡನು. ಅನೇಕ ಜನರು ನಾನಾ ರೋಗಗಳಿಗೆ ಅವನಿಂದ ಚಿಕಿತ್ಸೆ ಪಡೆಯುತ್ತಿದ್ದರು. ಗುಣ ಹೊಂದಿದವರ ಹೆಸರನ್ನು ನೆನೆಪಿಸಲ್ಲಿಟ್ಟು ಕೊಂಡಿರುವನು. ಗುಣ ಹೊಂದದ ಜನರಿಗೆ ಅವರ ಆರೈಕೆಯೇ ಕಷ್ಟವೆಂದು ಸಮಾಧಾನ ಪಡಿಸುವನು ಒಂದು ದಿನ ಆತನನ್ನು ಹಿಂದೆ ಕುದುರೆ ಪಾಕಣೆ ಗೆಂದು ಇಟ್ಟುಕೊಂಡು ಆ ಕೆಲಸದಲ್ಲಿ ಅತೃಪ್ತಿಪಟ್ಟು ಆತನನ್ನು ಕೆಲಸದಿಂದ ನಿವೃತ್ತಿ ಪಡಿಸಿದ ಯಜಮಾನನು ಅದೇ ಮಾರ್ಗವಾಗಿ ಹೋಗುವ ಅಗತ್ಯ ಬಿದ್ದು ತನ್ನ ಮೊದಲಿನ ಈ ಸೇವಕನ ಶೋಷನ್ನು ಸಮೀಪಿಸಿದನು. ಅವನ ಕೋಣೆಯೊಳಗೆ ತುಂಬಾ ಗಿಡಮೂಲಿಕೆಗಳು ಇವೆ. ಹೊರಗೊಂದು ಬೋರ್ಡು ಇದೆ. ವೈದ್ಯನು ಒಂದು ಸೀಶೆಯನ್ನು ಲಂಕರಿಸಿದನು. ಜನರು ಕೋಣೆಯ ಒಳಗೂ ಹೊರಗೂ ಕಿಕ್ಕಿರಿದು ನೆರೆದಿದ್ದರು. ಸಲಹೆ ಕೇಳುವ ಕೋಣೆಯಲ್ಲಿ ತುಂಬಾ ಜನರಿದ್ದರು. ವೈದ್ಯನು ಔಷಧಿ ಕೊಡುವುದಕ್ಕಿಂತ ಸೊಪಲು ರೋಗಿಯ ನಾಡಿಯನ್ನು ಹಿಡಿದು ಪರೀಕ್ಷಿಸುವಂತೆ ನಟಿಸುತಿದ್ದನು. ಮತ್ತು ಪಾಶ್ಚಾತ್ಯ ಡಾಕ್ಟರರಂತೆ ಬಾಯಿ ತೆರೆಯಲು ಹೇಳುತಿದ್ದನು. ನಾಲಗೆಯನ್ನು ಪರೀಕ್ಷಿಸಿದಂತೆ ಮಾಡಿ ನಿದ್ದೆ ನುಲುಮಾತ್ರೆಗಳ ವಿಚಾರಮಾಡಿ ಒಂದು ಪುಸ್ತಕವನ್ನು ತೆರೆದು ಔಷಧೋಪಕ್ರಮವನ್ನು ಶಾಸ್ತ್ರದ್ದು ಬರೆದ್ದನ್ನು ತಿಳಿಯುವವನಂತೆ ನರ್ತಿಸಿ ಕೆಲವು ಔಷಧಗಳನ್ನು ಶಾಸ್ತ್ರೋಕ್ತವಾಗಿ ಹೊಕ್ಕೆ ತೆಗೆದುಕೊಟ್ಟಂತೆ ಮಾಡುತ್ತಿದ್ದನಷ್ಟೆ. ಯಜಮಾನನಿಗೆ ಇದನ್ನೆಲ್ಲಾ ನೋಡಿ ಆಶ್ಚರ್ಯವಾಯಿತು. ತನ್ನ ಸೇವಕನಿಗೆ ಎಲ್ಲಿಂದ ಈ ವಿದ್ಯೆಯು ಬಂತೆಂದು ತಿಳಿಯಲಾಗಲಿಲ್ಲ. ಕೊನೆಗೆ ಆತನು ಅನುಭವ ಪಡೆದ ಆ ಪುಸ್ತಕವನ್ನು ನೋಡಲು ಕುತೂಹಲ ಹುಟ್ಟಿ ಅ ನ್ನು ನೋಡುವಾಗ ತನ್ನ ಕುಸ್ತಕ ಭಂಡಾರದಲ್ಲಿದ್ದ ಒಂದು ಕಾದಂಬರಿ ಪುಸ್ತಕವೆಂದು ತಿಳಿದು ಬಂತು.

ಬಗ್ದಾದ ಪಟ್ಟಣದ ಮನೆಗಳು ಹೃದಯಂಗಮವಾಗಿರುವವು. ಅವುಗಳು ಅಲ್ಲಿನ ಉಷ್ಣತೀಕ್ಷ್ಣತೆಯ ಪರಿವಾಗುಣಕ್ಕನು ಕೂಲವಾಗಿ ಕಟ್ಟಲ್ಪಟ್ಟಿವುಗಳು. ಈ ಕಟ್ಟಡಗಳ ಕೆಲವಂಶವು ಭೂಮಟ್ಟದಿಂದ ಕೆಳಗಿರುವವು. ಗಾಳಿ ಮತ್ತು ಬೆಳಕಿಗಾಗಿ ಕಿಟಿಕಿಗಳು ಬಹುಎತ್ತರದಲ್ಲಿರುವವು. ಸೆಕೆ ಕಾಲದ ರಾತ್ರೆ ಸಮಯ ಮೇಲಿನ ಭೂಭಗೆಯುಲ್ಲಿ ಮನೆಯವರು ಮಲಗುವರು. ಬೆಳಿಗ್ಯೆ ಸೂರ್ಯ ಪ್ರಕಾಶವು ಜೋರಾಗಿ ಸೆಖೆಯುಂಟಾದಾಗ ಕೆಳಗಿನ ನೆಲ ಮಾಳಿಗೆಯನ್ನು ಸೇರುವರು.

ಬಗ್ದಾದಿನಲ್ಲಿ ಹೆಚ್ಚಿನಂಶದ ಶಾಲೆಗಳು ಮಸೀದಿಗಳ ಆಡಳಿತೆಗೆ ಒಳಪಟ್ಟವುಗಳು. ಆವರ ವಲ್ಲಾ ಮತ್ತು ಗುರುಗಳು ಸಾಪೇಬರು ಶಾಲೆಗಳನ್ನು ನಡೆಸುವವರು. ಈ ಶಾಲೆಗಳಲ್ಲಿ ಓದುವುದಕ್ಕೆ, ಬರೆಯಲಿಕೈ ಮತ್ತು ಖುರಾನಿನ ಕೆಲವು ಶ್ಲೋಕಗಳನ್ನು ಬಾಯಿಪಾಠ ಮಾಡುವುದೇ ಹೊರತು ಮತ್ತೇನನ್ನೂ ಇಲ್ಲಿ ಕಲಿಸುವುದಿಲ್ಲ. ಕೆಲವು ಉಪಾಧ್ಯಾಯರು ಅವಿದ್ಯಾವಂತರೆಂದೇ ಹೇಳಬೇಕು. ಶಾಲಾ ಮಕ್ಕಳೆಲ್ಲರೂ ನೆಲದ ಮೇಲೆ ಕೂತುಕೊಳ್ಳುವರು. ಮರದ ತುಂಡುಗಳನ್ನು ಡೆಸ್ಕುಗಳನ್ನಾಗಿ ಉಪಯೋಗಿಸುವರು. ವಿದ್ಯೆಯು ಮಂದ ಟ್ಟಾಗುವರೆ ಕಣ್ಣುಗಳಿಗಿಂತ ಕೀಲಗಳೇ ಮುಖ್ಯವೆಂಬ ಭಾವನೆ ಅವರದ್ದಾದ್ದರಿಂದ ತಾವು ಕಲಿತದ್ದೆಲ್ಲವನ್ನೂ ಗಾನವಾಡಿ ಬಾಯಿಯಿಂದ ಹೇಳುವರು.

ಜಾತಿ ಭೇದಗಳು ಅವರಲ್ಲಿಲ್ಲ. ಜೀವನ ಕ್ಕಾಗಿ ಯಾವ ಉದ್ಯೋಗವನ್ನು ಮಾಡಬಹುದು. ಹೀನವೃತ್ತಿಯವನೆಂದು ಯಾವನಾದರೊಬ್ಬನು ಹೀಯಾಳಿಸಲ್ಪಡುವುದಿಲ್ಲ. ಪೌರ್ವಾತ್ಯ ದೇಶಗಳಲ್ಲೆಲ್ಲಾ ಕೂಟ ಮತ್ತು ಬೀದಿಗಳಲ್ಲಿ ಸಂಗೀತ ಕೇಳಬಂದಂತೆ ಆಲ್ಲಿಯೂ ಇವೆ. ಆದರೆ ಅವಷ್ಟು ಉತ್ಸಾಹದ್ದಲ್ಲ. ಅವರ ಸಂಗೀತವು ಸಾಧಾರಣ ರೀತಿಯದ್ದು ಮತ್ತು ಒಂದೇ ಸ್ವರದ್ದಾಗಿರುವದು. ಕಾಫಿ ಹೋಟೆಲುಗಳಿಗೆ ಮಾತ್ರವಲ್ಲಿ ಮತ್ತು ಬಯಲು ಪ್ರದೇಶದಲ್ಲಿರುವವು ಊರ ಹೊರಮನೆ ತಿಳಿಯಬೇಕಾದ್ರೆ ಇಲ್ಲಿಗೆ ಹೋಗಬೇಕು. ಈ ಹೋಟೆಲುಗಳಲ್ಲಿ ಎಲ್ಲಿಲ್ಲದ ಸುದ್ದಿಗಳಿವೆ. ಯಾವಾಗಲೂ ವಾತಾವರಣ ನಡೆಯುವದು ಅನೇಕ ಸಂಜ್ಞಾತಿಕೆಗಳ ತೀರ್ಮಾನವು ಸಹಾ ಇಲ್ಲಿಯೇ ಆಗುವದು. ಟೈಗ್ರಿಸ್ ನದಿಯಲ್ಲಿ ಮಕ್ಕಳು "ಈಸೋ" ಎಂಬ ಚಿಕ್ಕ ದೋಣಿಗಳನ್ನು ಮತ್ತು ದೊಡ್ಡ ದೋಣಿಗಳ ಮಾದರಿ "ಟೆಲ್ಲಮ್ಮ" ಇವುಗಳನ್ನು ಜಲ್ಲು ಮತ್ತು ತೊಲೆಗಳಿಂದ ಒತಿರುಸುತ್ತಿವರು. ಇವುಗಳಲ್ಲದೆ ಇನ್ನೊಂದು ತರದ "ಗುಫ್" ಎಂಬ ದೊಡ್ಡಗಳಲ್ಲಿ ಕತ್ತೆ, ಆಡುಗಳನ್ನೊಯ್ಯುವರು. ಬಗ್ದಾದ ಜನರ ಉಡಿಗೆ ದುಸ್ತುಗಳಷಂ ಪೂರ್ಣ ಪರಿಚಯ ಮಾಡಿಕೊಳ್ಳಬೇಕಾದರೆ ಆಓರ ಸಂತೆಯ ದಿವ್ಸ ಆವರನ್ನು ಕಾಣಬೆ ಕಾಗುವುದು. ಒಂದು ಉದ್ದದ ಒಳತಂಗಿಯನ್ನು ಧರಿಸಿ ಅದರ ಮೇಲೊಂಬಣ್ಣದ ಅಂಗಿಯನ್ನು ಹಾಕಿವರು. ಇದನ್ನು ಒಂದ ಕಟಬಂಧ ಅಥವಾ ನಡುಕಟ್ಟಿನಿಂದ ಸೊಂಟದಲ್ಲಿ ಕಟ್ಟುವರು. ಇದರ ಮೇಲೆ ಒಂಟೆ ಕೂದಲಿನಿಂದ ನೇಯಿದ ಕಸ್ಸು ಅಥವಾ ಬಿಳಿಗೀಟಿಗಳಿರುವ ನಿಲುವಂಗಿಯನ್ನು ಹಾಕಿವರು. ತಲೆಗೆ ಒಂದು ಶಲ್ಲೆಯನ್ನು ರುಮಾಲಿನಂತೆ ಸುತ್ತುವರು. ಇದರ ಒಂದು ತುದಿಯು ಹೆಗಲ ಮೇಲೆ ಕೂಗಾಡುವುದು. ಬಿಸಿಲೇರಿದ ಗಇದನ್ನು ತಲೆಯ ಮೇಲೆಳೆದ ಕೊಳ್ಳುವರು ಈ ತರದ ತಲೆ ದುಸ್ತು ಬೇಸಗೆಯ ರಾತ್ರೆಯದಲ್ಲಿರುವ ಆವರಿಗೆ ಅನುಕೂಲವಾಗಿರುವುದು. ಅವರು ಹೆಚ್ಚಾಗಿ ಕಾಫಿಯನ್ನು ಕುಡಿಯುವರು. ಖರ್ಜೂರವೇ ಅವರ ಪ್ರಮುಖ ಆಹಾರ. ಖರ್ಜೂರವನ್ನು ಅನು ತಾಯಿ, ತಂದೆ ಎಂಬಂತೆ ಭಾವಿಸಬೇಕೆಂದು ಮಹಮ್ಮದ್ ಪೈಗಂಬರನು ಆದೇಶವಿತ್ತಿದ್ದನಂ.

ಬಗ್ದಾದ ಜನರು ಶ್ರದ್ಧಾವಂತ ಮಹಮ್ಮದೀಯರು. ಗವಥ್ರಾನ್ ಉಪವಾಸವನ್ನು ಬಹು ನಿಷ್ಠೆಯಿಂದ ಆಚರಿಸುವರು. ಆ ಮಾಸದಲ್ಲಿ ದೇವರು ಪೈಗಂಬರರಿಗೆ ಖುರಾನಿನ ಉಪದೇಶವನ್ನಿತ್ತಿದ್ದನ್ನುವರು. ಈ ಉಪವಾಸ ಮಾಸದಲ್ಲಿ ಸೂರ್ಯೋದಯದಿಂದ ಅಸ್ತಮಾನದ ವರೆಗೆ ನಿರಾಹಾರವಾಗಿದ್ದು, ಸಾಯಂಕಾಲ ಆಹಾರ ತೆಕ್ಕೊಳ್ಳುವರು. ಇಡೀ ತಿಂಗಳಲ್ಲಿ ರಾತ್ರೆ ಸಮಯ ಹೋಟೆಲುಗಳಿಲ್ಲವು ತೆರೆದಿರುವವು. ಶ್ರೀಮಂತರುಗಳು ರಾತ್ರೆಯನ್ನು ಹಗಲಾಗಿ ಪರಿವರ್ತಿಸಿ ಉತ್ಸಾಹದಿಂದ ಕಳೆಯುವರು. ಬಡವರಿಗೆ ವಾಸ್ತವ ಈ ಮಾಸವು ಬಹಳ ಕಷ್ಟದ ಕಾಲ.

—ಡಿ.ಸಿ.ಎಚ್.ಬೈಂದೂರು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯುಪಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ

"ಹೇ ನುನುಷ್ಯಾ, ನೀನು ಮುಂದರಿಯುತ್ತಿರು. ಯಾರು ಕೂಡು ಕೊಳ್ಳುವರೋ ಅವರ ಭಾಗ್ಯವೂ ಕೂಡುಕೊಳ್ಳುತ್ತದೆ. ಯಾರು ನಿದ್ರಿಸುವರೋ ಅವರ ಭಾಗ್ಯವೂ ನಿದ್ರೆ ಮಾಡುತ್ತದೆ. ಯಾರು ಕ್ರಿಯಾಶಾಲಿಯಾಗಿ ನಡೆಯುತ್ತಿರುವರೋ ಅವರ ಭಾಗ್ಯವು ಅವರ ನೆರಳಿನಂತೆ ಅವರನ್ನು ಹಿಂಬಾಲಿಸುತ್ತದೆ. ಆದ್ದರಿಂದ ಮಾನವಾ, ಮುನ್ನಡೆ!

NAVAYUGA

Founder:—

A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ ೩೮	ಉಡುಪಿ ೪-೦೨-'೫೮	ವಾರ ೧೩

ಭೂನಿಧೇಯಕ

ಭಾರತದ ಬೃಹತ್ಸಮಸ್ಯೆಗಳಲ್ಲಿ ಒಂದಾದ ನಮ್ಮ ಸರ್ವನಾಯಕರ ಶಿರೋವೇದನೆಗೆ ಕಾರಣೀಭೂತವಾದ ಭೂ ಸಮಸ್ಯೆಯನ್ನು ಪರಿಹರಿಸುವ ಸ್ಪಯತ್ನಗಳು ಅಲ್ಲಲ್ಲಿ ನಡೆಯುತ್ತಿವೆ. ದೇಶದ ಸ್ವಮುಖ ರಾಜಕೀಯ ಪಾಠಗಳ ಅಧಿಕಾರಾರೂಢ ಪಕ್ಷವಾದ ಕಾಂಗ್ರೆಸ್ಸು ಈ ದಿಸೆಯಲ್ಲಿ ನಿರ್ದಿಷ್ಟ ನಿರ್ಣಯವನ್ನು ಸ್ವೀಕರಿಸಿದೆ. ಯೋಜನಾ ಆಯೋಗವೂ ಈ ಬಗ್ಗೆ ದೃಢನಿರ್ಧಾರ ಮಾಡಿದೆ. ಹೀಗಾಗಿ ವಿಶಾಲ ಮೈಸೂರಿನಲ್ಲಿ, ಭೂಸುಧಾರಣೆಯನ್ನು ಯಾವ ರೀತಿಯಲ್ಲಿ ಮಾಡಬಹುದೆಂಬುದನ್ನು ವಿವಿಧೆಡೆಯ ಭೂಪರಿಸ್ಥಿತಿಯನ್ನು ಅಭ್ಯಸಿಸಿ ಸಲಹೆ ನೀಡಲು ಈಗಿನ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರ ನೇತೃತ್ವದಲ್ಲಿ ಹಿಂದೊಮ್ಮೆ ನೇಮಿಸಿದ ಒಂದು ಸಮಿತಿಯು ಹಲವಾರು ಸಲಹೆ ಸೂಚನೆಗಳನ್ನು ನೀಡಿದೆ. ಈ ವರದಿಯನ್ನೂ ಈ ಬಗ್ಗೆ ವಿವಿಧ ಕ್ಷೇತ್ರಗಳಲ್ಲಿ ವ್ಯಕ್ತಪಡಿಸಲಾದ ಅಭಿಪ್ರಾಯಗಳನ್ನೂ ಯೋಜನಾ ಆಯೋಗದ ಮತಗಳನ್ನೂ ಅನುಲಕ್ಷಿಸಿ, ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರೊಂದು ಭೂಶಾಸನವನ್ನು ಕೇವಲ ಆಲ್ಪಾವಧಿಯಲ್ಲಿ ರಚಿಸಿ, ವಿಧಾನ ಸಭೆಯ ಮುಂದಿಟ್ಟಿರುವರು. ಈ ಶಾಸನದ ಮೇಲೆ ಚರ್ಚೆಯು ನಡೆಯುತ್ತಿದೆ.

ನಮ್ಮ ರಾಜ್ಯದ ಹಾಗೂ ದೇಶದ ಭೂಸ್ಥಿತಿಯು ನೆಮ್ಮದಿಯಿಲ್ಲವೆಂಬುದು ಸರ್ವಶ್ರುತವಿದ್ದು, ದೇಶದ ಆಹಾರ ಸಮಸ್ಯೆಗೆ ಒಕ್ಕಲಿತನದಲ್ಲಿ ವೈಮನಿಸಲಿಡಿವ ರೈತ ಜನರಿಗೆ ತಕ್ಕ ಭದ್ರತೆಯನ್ನೀಯುವುದೇ ತಾರಕವೆಂದೂ ವ್ಯಸ್ಪಿಯಾಗುತ್ತಿರುವ ಭೂಮಿಯನ್ನು ಸಮಷ್ಟಿಯಾಗಿಸುವುದೇ ತಳಹದಿಯೆಂದೂ ಮನದಂದು ಒಡೆಯರಿಂದ ಲಾವಣಿಗೆಗೆ ಪಡೆದಿರುವವರ ಹಿತರಕ್ಷಣೆಯನ್ನು ಸಾಧಿಸುವ ಜೊತೆಗೆ ರಾಜ್ಯದಲ್ಲಿ ದೊಡ್ಡ ದೊಡ್ಡ ಜಮೀನುದಾರರನ್ನೂ ನಿರ್ಮೂಲ ಮಾಡುವ ಇರಾದೆಯಿಂದ ಈ ಶಾಸನವು ಬಂದಿದೆ. ಶ್ರೀ ಜತ್ತಿಯವರು ಸರಕಾರಕ್ಕೊಪ್ಪಿಸಿದ ವರದಿಯ ಎಲ್ಲಂಶಗಳನ್ನು ಇಲ್ಲಿ ಅಡಕಗೊಳಿಸಲಾಗಿಲ್ಲ. ಈ ಶಾಸನವನ್ನು ಸಿದ್ಧಗೊಳಿಸುವಲ್ಲಿಯೇ ವಿಧಾನ ಸಭೆಯ ಕಾಂಗ್ರೆಸ್ ಸದಸ್ಯರಿಂದಲೂ ಕಿಚ್ಚಾಗಿ ಸುಂತಿ ಮುಂಡಳಿಯ ಕೆಲವು ಸದಸ್ಯರಿಂದಲ್ಲೂ ಕಟ್ಟು ವಾಗಿ ಟೀಕೆಸಲಾಗಿತ್ತೆಂದು ತಿಳಿದು ಬಂದಿದೆ. ಇನ್ನು ಈಗ ವಿಧಾನ ಸಭೆಯಲ್ಲೂ ಸುದೀರ್ಘ ಚರ್ಚೆಯು ನಡೆದು ಕೆಲವಾರು ತಿದ್ದುಪಡಿಗಳೂ ಮುಂಬರುವುದು ಶಕ್ಯವೆಂದೇ ಹೇಳಬಹುದು. ಈ ಶಾಸನದ ಮೂಲ ತತ್ವಗಳನ್ನು ನಾವು ಇದೀ ಸಂಚಿಕೆಯ ಇನ್ನೊಂದು ಪುಟದಲ್ಲಿ ಕೊಟ್ಟಿದ್ದೇವೆ. ನಿಸ್ಸಳ ಆದಾಯ ಎಂದರೆ, ಉತ್ಪತ್ತಿಯಲ್ಲಿ ಮೂರರಲ್ಲೊಂದು ಪಾಲು ಇತರ ಭೂಮಿಗಳಿಗೂ ಎರಡರಲ್ಲೊಂದು ಪಾಲು ತರಿಭೂಮಿಗೂ ಇನ್ನಿಯಸುವುದು. ಬೊಂಬಾಯಿ ರಾಜ್ಯದ ಭೂಶಾಸನವನ್ನೇ ಇದು ಕೆಲವೆಡೆ ಹೋಲುತ್ತಿರುವುದಾದರೂ ಆದಕ್ಕಿಂತ ಉದಾರವಾಗಿದೆಯೆಂಬು ಹೇಳಬಹುದು. ಆದರೆ, ಈ ಶಾಸನದನ್ವಯ, ಮೂಲಭೂಮಿಯಳಿಕೆ, ಕೌಟುಂಬಿಕ ಹಿಡುವಳಿ ಹಾಗೂ ಸರ್ವಸಾಮಾನ್ಯ ಹಿಡುವಳಿ ಮೊದಲಾದುವನ್ನು ಳಿದರೆ, ಹೆಂಚಲು ದೊರೆಯುವ ಭೂಮಿಯು ಕೇವಲ ೫೫ ಲಕ್ಷ ಎಕ್ರೆಗಳೆಂದು ತಿಳಿಯುತ್ತದೆ. ತೋಟಾದಿಗಳಿಗೆ ವಿನಾಯಿತಿಯನ್ನಿತ್ತಿದೆ. ಹಾಗಿರುವಾಗ, ಕೇವಲ ೫೫ ಲಕ್ಷ ಎಂದರೆ, ಒಟ್ಟು ಸಾಗು ಭೂಮಿಯಲ್ಲಿ ಸುಮಾರು ಹತ್ತರಲ್ಲೊಂದು ಪಾಲನ್ನು ಮಾತ್ರ ಸರಕಾರವು ತನ್ನ ವಶಕ್ಕೆ ತಂದುಕೊಂಡು ಅದನ್ನು ರೈತರಿಗೆ ಹಂಚಿದರೆ, ಅದರಿಂದ ಎಷ್ಟುಮಟ್ಟಿಗೆ ಸಮಸ್ಯೆ ಬಗೆಹರಿದೀತು? ಅಲ್ಲದೆ, ಸಹಕಾರೀ ವ್ಯವಸಾಯ ಕ್ರಮವು ಸಂಪೂರ್ಣ ಅನಿವಾರ್ಯವಾಗಿದೆ ಎಂದು ಕೆಲವರಾಡಿಕೊಳ್ಳುತ್ತಿದ್ದಾರೆ. ಇದು ತಥ್ಯವಾದರೆ, ಸಹಕಾರೀ ಪದ್ಧತಿಯಲ್ಲಿ ಬೇಸಾಯ ಮಾಡಬಯಸುವ ರೈತರಿಗೆ ಭೂಮಿಯನ್ನು ಹೆಂಚುವಲ್ಲಿ ಸವಲತ್ತೀಯುವುದರಿಂದ ವಿಶೇಷ ಪ್ರಯೋಜನವಿಲ್ಲ. ಧಾರ್ಮಿಕಾದಿ ಸಂಘ ಸಂಸ್ಥೆಗಳ ಭೂಮಿಯನ್ನೂ ಪಕಪಡಿಸಿ ಪರಿಹಾರಕ್ಕೆ ಸೇಕಡಾ ೫೦ರದರದ ಬಡ್ಡಿಯು ದೊರೆಯುವಂತೆ ಮಾಡುವುದರಿಂದ ಅಂತಹ ಧಾರ್ಮಿಕ, ಶಿಕ್ಷಣ ಸಂಸ್ಥೆಗಳ ಆದಾಯವು ಮಿತಿಮೀರಿ ಕಡಿಮೆಯಾಗುವುದೂ ಅದರಿಂದ ಸಮಾಜದಲ್ಲಿ ಗೊಂದಲ ವೇಳುವುದೂ ಸ್ವಾಭಾವಿಕ. ತೋಟಗಳಿಗೆ ವಿನಾಯಿತಿಯನ್ನಿತ್ತ ಮೇಲೆ, ಮಠಸಂಸ್ಥಾನ, ಶಿಕ್ಷಣಾಲಯಗಳಿಗೂ ವಿನಾಯಿನ್ನಿತ್ತರೆ ಹೆಚ್ಚಿನ ಹಾನಿಯಾಗುತ್ತಿತ್ತೆನ್ನ ಬರುವುದಿಲ್ಲ. ಆದರೂ ನ್ಯಾಯಯುಗ್ಮೇಣಿಯು ನೀರಾವರಿ ಭೂಮಿಗೆ ಉತ್ಪತ್ತಿಯ ಸೇಕಡಾ ೫೫ನ್ನು ತೆರಿಗೆಗೆ ಸೇಕಡಾ ೨೦ನ್ನಿಟ್ಟಿರುವುದು ಸಾಮಾನ್ಯವಿದೆ. ಈ ಗೇಣಿಯ ಗಾತ್ರವನ್ನು ಪರಿಹಾರವು ಕೊಂಚ ಕಡಿಮೆಯಾದರೂ ಅದನ್ನು ಸರಕಾರವೇ ನೀಡುವುದೂ ಅದಕ್ಕೆ ಳಿಸೇಕಡಾ ಬಡ್ಡಿಯನ್ನೀಯುವುದೂ ಸಮಂಜಸವಿದೆ. ಆದರೆ, ರೈತರಿಂದ ತಿಂವಾರ್ಷಿಕ ಕಂತುಗಳಲ್ಲಿ ಆತನಿಗೀಯಬಹುದಾದ ಭೂಮಿಯ ಮೌಲ್ಯವನ್ನು ಪಡೆಯವ ಜವಾಬುದಾರಿ ಹಾಗೂ ಕೊಡದೆ ಹೋದ ರೈತರ ಹಾಲೆಹಾಕಲೆಗಳನ್ನು ಹೊರುವುದು ಮುಂ ಕಷ್ಟ ಭೂ ಆಯೋಗ ಒಂದನ್ನು ಈ ಶಾಸನದನ್ವಯ ನೇಮಿಸಲಾಗುವುದು ಮೈಸೂರು ಶಾಸನದ ವೈಶಿಷ್ಟ್ಯ. ಈ ಆಯೋಗದ ಕಾರ್ಯದಕ್ಷತೆಯಿಂದ ಕಾರ್ಯಕಲಾಪವು ಯಶಸ್ವಿಯಾಗಬಹುದು.

ಒಟ್ಟಿನಲ್ಲಿ ಈ ಶಾಸನವನ್ನು ಬಹು ಕಾಲದಿಂದ ನಿರೀಕ್ಷಿಸಲಾಗಿತ್ತು. ಒಕ್ಕಲಿಗೆ ಹಿತ ಮಹೂಡಿಯನ್ನು ತರಬೇಕೆಂದು ಜನತೆಯಿಂದಲೂ ಬೇಡಿಕೆ ಕೇಳಿಕೆಗಳು ಹೋಗಿದ್ದುವು. ಕಾಂಗ್ರೆಸ್ಸೂ ತನ್ನ ಜುನಾವಣಾ ಘೋಷಣೆಯಲ್ಲಿ ಈ ಬಗ್ಗೆ ಉಲ್ಲೇಖಿಸಿದೆ ಹಾಗಾಗಿ ಬಂದ ಭೂ ಶಾಸನವು ಕೆಲವು ತಿದ್ದುಪಡಿಗಳೊಂದಿಗೆ ಸ್ಥೀಕಾರವಾಗುವುದು ನಿಶ್ಚಯ. ಜತ್ತಿ ಸಮಿತಿಯ ವರದಿಯ ಕೆಲವೆಡೆಗಳು ಉಗ್ರವಾಗಿದ್ದರೂ, ಅವರದೇ ಮುಖ್ಯಮಂತ್ರಿತ್ವದಲ್ಲಿ ಮಂಡಿಸಲ್ಪಟ್ಟ ಭೂಶಾಸನವು ಮಾತ್ರ ಅದಕ್ಕಿಂತ ಉದಾರವಾಗಿದೆ. ಆದ್ದರಿಂದ, ಶಾಸನವನ್ನು ವಿರೋಧಿಸುವವರೂ ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವ ಧೋರಣೆಯಿಂದ ಕ್ಷಣಕ್ಷಣಕ್ಕೆ ಪರಿವರ್ತನೆಗೊಳ್ಳುತ್ತಿರುವ ಪ್ರಪಂಚದಲ್ಲಿ ತಾವಿರುವೆವೆಂದು ಗಮನಿಸಿ ಈಗ ಒದಗಿಸಲಾಗುವ ಉದಾರತೆಯನ್ನು ಸದುಪಯೋಗಿಸಿಕೊಳ್ಳಲಿ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಲಾ ಕಾಲೇಜ್ ಯೂನಿಯನ್

ಆಶ್ರಯದಲ್ಲಿ ತಾ. ೨೮ರಂದು ಯುಕ್ತ ರಾಷ್ಟ್ರ ಸಂಘದಲ್ಲಿ ಪಿ. ಟಿ. ಐ. ಪ್ರತಿನಿಧಿಯಾಗಿದ್ದ ಉಡುಪಿಯ ಎಸ್. ವಿ. ಕಾಮತರು ತಮ್ಮ ವಿದೇಶ ಸುದ್ದಿ ಕ್ಷೇತ್ರದ ಅನುಭವಗಳನ್ನಿತ್ತರು.

ಆರಂಭದಲ್ಲಿ ಯೂನಿಯನ್ ಅಧ್ಯಕ್ಷ ಶ್ರೀ ಚಂದ್ರಶೇಖರ ರಾಯರು ಸ್ವಾಗತ ಮಾತುಗಳನ್ನಾಡಿದರು. ಅಂತ್ಯದಲ್ಲಿ ಯೂನಿಯನ್ ಕಾರ್ಯದರ್ಶಿ ಶ್ರೀ ಕೇಜರ ಸೆಟ್ಟರು ಧನ್ಯವಾದಗಳನ್ನಿತ್ತರು.

ಸುವರ್ಣ ಮಹೋತ್ಸವ- ಮಂಗಳೂರಿನ ಬಂಟರ ಯಾನೆ ನಾಡವರ ಸಂಘ ಮತ್ತು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸುವರ್ಣ ಮಹೋತ್ಸವವು ಮುಂಬರುವ ಜನವರಿ ತಿಂಗಳ ಕೊನೆಯ ವಾರದಲ್ಲಿ ಜರಗಲಿರುವುದು. ಈ ಅವಧಿಯೊಳಗೆ ರೂಪಾಯಿ 50,000 ಸಂಗ್ರಹಿಸಬೇಕಾಗಿ ನಿರ್ಣಯವಾಗಿದ್ದು ಈಗಾಗಲೇ ಇಪ್ಪತ್ತು ಮಹಾಪುರುಷರು ರೂ. 10,000 ಸುತ್ತು ರೂ. 5,000 ಸಹಾರು ಧನವಾಗಿ ಕೊಟ್ಟಿರುತ್ತಾರೆ. ಸಂಘದ ಪಳೆ ಸದಸ್ಯರು, ವಿದ್ಯಾರ್ಥಿ ಭವನದ ಹಳೆ ನಿವಾಸಿಗಳು ಹಾಗೂ ಇತರ ಸಮಾಜ ಬಂಧುಗಳು ಹೊಸ ಮೆಂಬರರನ್ನು ಸೇರಿಸಿಯೂ ಇತರ ರೀತಿಯಲ್ಲಿಯೂ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಜೇಶ್ವರದಲ್ಲಿ ಕೇರಳ ರಾಜ್ಯ ಪಾಲರು

—ಕೇರಳದ ರಾಜ್ಯಪಾಲರಾದ ಡಾ. ಜಿ. ರಾಮಕೃಷ್ಣ ರಾಯರು ತಾ. 28ರಂದು ಸಂಜೆ ಎಸ್. ಎ. ಟಿ. ಹೈಸ್ಕೂಲಿನ ವಜ್ರ ರದಲ್ಲಿ ಕಟ್ಟಿಸಲಾದ ಶ್ರೀಮದನಂತೇಶ್ವರ ಕಲಾಮಂದಿರವನ್ನು ಉದ್ಘಾಟಿಸುತ್ತಾ, ವಿನ ಇಂದಿನ ದಿನಕ್ಕೆ ಪ್ರಗತಿ ಹೊಂದುತ್ತಿರುವ ಇಂದಿನ ವಿಜ್ಞಾನದ ಯುಗದಲ್ಲಿ ದೇಶದ ಯುವಕರು ವಿಜ್ಞಾನದ ಬೆಳಕಿನೆಡೆಯೊಂದಿಗೆ ಮಾನವತೆಯನ್ನೂ ಮರೆಯಬಾರದೆಂಬುದಾಗಿ ಉಸಾದೇಶವಿತ್ತರು.

ಶ್ರೀ ಟಿ. ಎ. ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ, ವಿದ್ಯಾಕ್ಷೇತ್ರದಲ್ಲಿ ಬಹಳ ಮುಂದುವರಿದಿರುವ ಡಿ.ಕನ್ನಡ ಕೇರಳಗಳು ನಿರುದ್ಯೋಗದ ಸಮಸ್ಯೆಯನ್ನು ಎದುರಿಸಬೇಕಾಗಿದೆ ಎಂದು ಹೇಳಿದರು. ಆರಂಭದಲ್ಲಿ ಶ್ರೀ ಕೆ. ಪಿ. ಮಾಧವರಾಯರು ಸ್ವಾಗತಿಸಿದರು. ಶ್ರೀ ಎಂ. ಪಿ. ಭಟ್ಟರು ಸಂದೇಶಗಳನ್ನೊದಿಸಿದರು. ಕೊನೆಯಲ್ಲಿ ಶ್ರೀ ಎಸ್. ಪಿ. ಕಿಣಿಯರು ಧನ್ಯವಾದಗಳನ್ನಿತ್ತರು.

ಕುಮಟಾದಲ್ಲಿ ಸರ್ವೋದಯ

ಮಂಡಳಿಯವರು ದೀಪಾವಳಿ ಹಬ್ಬದ ಕಾಲದಲ್ಲಿ ಜಾ ಪದ ಧಾರವಾಡದಲ್ಲಿ ಭೂದಾನ-ಸರ್ವೋದಯ ಗೀತಗಳನ್ನು ಹೇಳುತ್ತ ಮನೆ ಮನೆಗೂ ಹೋಗಿ ಜ್ಞಾನ ದೀಪೋತ್ಸವನವನ್ನು ನೆರವೇರಿಸಿದರು. ಸರ್ವೋದಯ ಮಂಡಳಿಗೆ ಕಾಣಿಕೆ ರೂಪದಲ್ಲಿ ರೂ. 400ರಷ್ಟು ಸಂಗ್ರಹವಾಯಿತು.

ನುದ್ದಣ ಕವಿ ಜಯಂತಿಯು ತಾ. 29ರಲ್ಲು ಮುಂಗಳೂರು ಎಜ್ಯೂಸಿಯೆಸ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಹುದಲಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ. ಕೃ. ಪಾಡರ್ತ್ಯರು, ಅವರು ಮುಖ್ಯ ಭಾಷಣಕರ್ತರಾಗಿದ್ದರು.

ಆರಂಭದಲ್ಲಿ ಶ್ರೀ ಟಿ. ನೋಪಾಲಕೃಷ್ಣ ರವರು ಸ್ವಾಗತಿಸಿದರು ಜಿಲ್ಲಾ ಬೋರ್ಡ್ ಸದಸ್ಯ ಶ್ರೀಪಾರ್ಯ ಲಕ್ಷ್ಮೀನಾರಾಯಣ ಆಳ್ವರು ಕಾರೋಚಿತ ಭಾಷಣವಿತ್ತರು. ಕೊನೆಯಲ್ಲಿ ಯಕ್ಷಗಾನ ಕಾರ್ಯಕ್ರಮವಾಯಿತು.

ನಿಧನ—ಅಧನಾರು ಸುದ್ದಿ ದಿವಾನರಾಗಿದ್ದ ದಿ ಎಸ್. ವೆಂಕೋಬರಾಯರ ಪತ್ನಿ ಶ್ರೀಮತಿ ಕಮಲಾಕ್ಷಮ್ಮನವರು ಕಳೆದ ತಾ. 26ರಂದು ತಮ್ಮ ಅಂಬಲಪಾಡಿ ನಿವಾಸದಲ್ಲಿ ವಿಧಿವಶರಾದರು. ದಿವಂಗತೆಯರು ಕೆಲವು ಗ್ರಂಥಗಳನ್ನು ಬರೆದು ಸಾಹಿತ್ಯ ಸೇವೆಯನ್ನು ಸಾದಿದ್ದರು.

ಪಡುಬಿದ್ರೆ ಶ್ರೀ ಕೆ. ಕರಿಯಣ್ಣ ಸೆಟ್ಟಿ ತಂಗಿ ಮೊನಾಕ್ಕೆ ಸೆಟ್ಟಿಯವರು ಯೆನ್ನರ್ ಕೊಡಂಜಿಲ್ಲ ಪುತ್ರ ಶಿವಣ್ಣ ಸೆಟ್ಟಿರವರ ತಾ. ೩೫ರಲ್ಲು ಹೃದ್ರೋಗದಿಂದ ತನ್ನ 64ನೇ ವಯಸ್ಸಿನಲ್ಲಿ ನಿಧನಹೊಂದಿದರೆನ್ನಲು ವಿಷಾದವಾಗುತ್ತದೆ. 52 ವರ್ಷ ಕಾಲ್ಲು ಕಾಣದೆ ಕುರುಡಿಯಾಗಿ ಜೀವಿಸುತ್ತಿದ್ದ ಇವರು ಯವ್ವನ ಕಾಲದಲ್ಲಿ ಉತ್ತಮ ನೂಲು ತೆಗೆಯುತ್ತಿದ್ದರು.

ಬಿ. ಡಿ. ಎಸ್. ಪರೀಕ್ಷೆಯಲ್ಲಿ ಶ್ರೇಗ್ರಡೆ ಬೆಂಗಳೂರಿನಲ್ಲಿ ಪೆಡಿಕಲ್ ಪ್ರಾಜೆಕ್ಟಿನ ಮೆನೇಜರ್ ಶ್ರೀ ಟಿ ಸುಬ್ಬರಾಯರ ಪುತ್ರ ಶ್ರೀಧರರಾಯರು ಕಳೆದ ಅಕ್ಟೋಬರ್ ದಲ್ಲಿ ಜರಗಿದ ಬಿ.ಡಿ ಎಸ್ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾಗಿರುತ್ತಾರೆ. ಬೊಂಬಾಯಿಯಲ್ಲಿರುವ ಜಿ. ಕ. ಜೆಲ್ಲಯ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಲ್ಲಿ ಈ ರೀತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಲ್ಲಿ ಇವರೇ ಮೊದಲಿಗರೆನ್ನಲಾಗಿದೆ.

ಪ್ರಮಾಣಪತ್ರ ವಿತರಣೋತ್ಸವ

ಆಂಬಲಪಾಡಿ ಗೀತಾಭವನದಲ್ಲಿ ನಡೆಯುತ್ತಿರುವ ಅಖಿಲಭಾರತೀಯ ಸಂಸ್ಕೃತಭಾಷಾ ಪ್ರಚಾರ ಸಮಿತಿಯ ಸಂಸ್ಕೃತ ಮತ್ತು ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಹಿಂದೀ ಪರೀಕ್ಷೆಗಳ ಪಪ್ರಮಾಣಪತ್ರ ವಿತರಣೋತ್ಸವವು ದಿನಾಂಕ೭ರಂದು ಉಡುಪಿ ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕ ಶ್ರೀ ಕೆ.ಸುಬ್ರಾಯ ಪುರಾಣಿಕರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರ್ಥನೆಯಾದ ತರುವಾಯ ಸ್ವಾಗತಕರಾದ ಶ್ರೀ ಕೆ. ಎ. ದೇವದಾಸರು ಸ್ವಾಗತ ಭಾಷಣವನ್ನಿತ್ತರು. ಕಾರ್ಯದರ್ಶಿ ಶ್ರೀ ಎಸ್. ಗೋಪಿ ಚಂದರಾಯರು ವರದಿಯನ್ನೊದಿ ಆರ್ಪಿಸಿದರು. ಶ್ರೀ ಕೆ.ಅನಂತರಾಮ ಉಡುಪರ ಕಾವ್ಯ ಪಾಚನದಾ ಮೇಲೆ ಶ್ರೀ ಎ.ಕೃಷ್ಣರಾಯರು ನಾನೆಷ್ಟು ಭಾಷೆಗಳನ್ನು ಕಲಿಯಬೇಕು ಎಂಬುದನ್ನುತರಿಸುತ್ತ, ನಮ್ಮ ಪ್ರಾದೇಶಿಕ ಭಾಷೆಯನ್ನು ಅನಸ್ಯ ಅಭ್ಯಸಿಸಬೇಕಲ್ಲವೆ, ಮುಂದೆ ಹಿಂದಿ,ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳನ್ನೂ ಅನಸ್ಯಸಿದ್ದವಾಗಿ ಅಳವಡಿಸಿಕೊಳ್ಳಬೇಕೆಂದರು. ಈ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸುತ್ತ ಅಧ್ಯಕ್ಷರು ದೇಶೀಯರು ಭಾಷೆಗಳು ಬೆಳೆದು ಬರಬೇಕಾದರೆ ಸಂಸ್ಕೃತಭಾಷೆಯು ಸಹಾಯವು ಅತ್ಯಗತ್ಯವೆಂದೂ ಅದರಿಂದಲೇ ಇತರ ಪ್ರಾದೇಶಿಕ ಭಾಷೆಗಳಿಗೆ ಕಸುವುಬರುವುದೆಂದೂ ಅಭಿಪ್ರಾಯಿಸಿದರು. ಭವನದ ಅಧ್ಯಕ್ಷ ಶ್ರೀ ಕೆ. ಎಲ್. ಎನ್ ಉಪಾಧ್ಯಾಯರು ಉಪಕಾರವನ್ನು ಸ್ಮರಿಸಿ ಸಮಾರೋಪ ಭಾಷಣ ಮಾಡಿದರು.

ಜಿಲ್ಲಾ ಹಿಂದೂ ಮಹಾಸಭಾ ಸಮಿತಿ ಸಭೆಯು ತಾ 26ರಂದು ಡಾ. ಬಿ. ಕೆ. ಕರ್ಣರ ಅಧ್ಯಕ್ಷತೆಯಲ್ಲಿ ಶ್ರೀ ವೆಂಕಟೇಶ ಅಯ್ಯಂಗಾರ್ಯರ ಭವನದಲ್ಲಿ ಜರಗಿ ಪೊಳಲಿ ದೇವಸ್ಥಾನದ ಪೊಕ್ಕಸರೂ, ಗ್ರಂಥಕಾರರೂ ಆದ ಶ್ರೀ ಎನ್. ಎ ಶೀನಪ್ಪ ಹೆಗ್ಡೆಯವರನ್ನು ಜಿಲ್ಲಾ ಕಾರ್ಯಕಾರೀ ಸಮಿತಿಗೆ ಸೇರಿಸಲಾಯಿತು

ಮಂಗಳೂರು ನಗರಸಭೆಯು ತಾ. 28ರಂದು ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ, ಇದೇ ತಾ 9ರಂದು ಮಂಗಳೂರಿಗೆ ಬರಲಿರುವ ಮೈಸೂರಿನ ಮುಖ್ಯಮಂತ್ರಿ ಶ್ರೀ ಬಿ. ಡಿ ಜತ್ತಿಯವರಿಗೆ ಪೌರಸ್ವಾಗತ ನೀಡಬೇಕೆಂದು ನಿರ್ಣಯವಾಯಿತು. ಕುದ್ರೋಳಿ ಸಂಕದ ರಚನೆಯ ಒಟ್ಟು ಖರ್ಚಿನ 1 10 ಲಕ್ಷ ಇದೀ ಬಜೆಟ್ಟಿನ್ನು ಸರಕಾರವೇ ಪಹಸಬೇಕೆಂದು ಸರಕಾರನನ್ನು ಕೇಳಿಕೊಳ್ಳಬೇಕೆಂದಾಯಿತು ಕಡ್ರಿ ಮುನಿಸಿಪಲ್ ಹಾ. ಎ. ಶಾರೆಯಲ್ಲಿ ಶ್ರೀ ಸೂರ್ಯನಾರಾಯಣ ಅಡಿಗರ ಭಾವಚಿತ್ರ ಅನಾವರಣ ಮಾಡಲು ಒಪ್ಪಿಗೆ ಕೊಡಲಾಯಿತು

ಎಮ್ ಜಿ ಎಮ್ ಕಾಲೇಜಿನಲ್ಲಿ ಯ ಭಾಷಾ ಸಂಘದ ಆಶ್ರಯದಲ್ಲಿ ಮುದ್ದಣ ಸ್ಮಾರಕ ಸಾಹಿತ್ಯೋತ್ಸವವು ತಾ 28ರಂದು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಶ್ರೀ ಯಮುನಾಚಾರ್ಯರ ಅಧ್ಯಕ್ಷತೆಯಲ್ಲಿ ಜರಿಗಿತು ಕಾಲೇಜಿನ ಪ್ರಾಧ್ಯಾಪಕ ಶ್ರೀ ಎಸ್ ಕೆ ಶ್ರೀಪತಿ ಅಜ ಸ್ವಾಗತಿಸಿದರು ಪ್ರಾಧ್ಯಾಪಕ ಶ್ರೀ ಟಿ ಕುಪ್ಪುಸ್ವಾಮಿಯವರು ಕಾಳಿದಾಸನ ಗೀತೆಗಳನ್ನು ಹಾಡಿದರು ಪ್ರಾಧ್ಯಾಪಕ ಶ್ರೀ ಪಿ ಗೋಪಾಲಕೃಷ್ಣ ಚಟ್ಟರು ಕಾಳಿದಾಸನ ಧರ್ಮಪತ್ನಿ ಕುರಿತು ಭಾಷಣಕರ್ತರು ಶ್ರೀ ಕೃಷ್ಣಮೂರ್ತಿ ಹೊಳ್ಳರು ಧನ್ಯವಾದಗಳನ್ನರ್ಪಿಸಿದರು

ಅಖಿಲ ಭಾರತ ಸಮಾಜ ಶಿಕ್ಷಣ ದಿನಾಚರಣೆಯು—ಉಡುಪಿ ಸಂಸ್ಕೃತ ಕಾಲೇಜು ಸಭಾಭವನದಲ್ಲಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು ಶ್ರೀಗಳಾದ ಕೆ ಎಂ ಶೇಷಾಚಾರ್ಯ, ಎ. ಟಿ. ಅಲ್ಪೆ, ಡಾ| ವಿ ಎಲ್ ಪಂಡಿತ್, ಕು ಶಿ. ಹರಿದಾಸ್ ಭಟ್ ಮೊದಲಾದವರು ಭಾಷಣ ಮಾಡಿದರು ಪ್ರಧಾನ ಭಾಷಣ ಮಾಡಿದ ಶ್ರೀ ಬಿ ವಿ. ಸುಂದರರಾಜ ಅಯ್ಯಂಗಾರರು ಶೈಕ್ಷಣಿಕ ಕ್ಷೇತ್ರಗಳ ವರ್ಣನೆಯನ್ನು ಸಂಗೀತ ಮುಖೇನ ವಿವರಿಸಿದರಲ್ಲದೆ ಸಮಾಜ ಶಿಕ್ಷಣಕ್ಕೆ ಸಂಬಂಧಿಸಿದ ಚಿತ್ರ ಪ್ರದರ್ಶನವನ್ನೂ ತಾಲೂಕು ಡಿಪ್ಯುಟಿ ತಹಶೀಲ್ದಾರ್ ಶ್ರೀ ಸೋಜಾರವರು ಧನ್ಯವಾದಗಳನ್ನರ್ಪಿಸಿದರು. ತಾ 30ರಂದು ಶ್ರೀ ಅಯ್ಯಂಗಾರರು ಸಂಸ್ಕೃತ ಕಾಲೇಜಿನಲ್ಲಿ ಭಾರತ ಕ್ಷೇತ್ರಗಳ ಚಿತ್ರ ಪ್ರದರ್ಶನ ಮಾಡಿ ಸಂಗೀತ ಮೂಲಕ ವಿಶಾಲ ಮೈಸೂರಿನ ಎಲ್ಲ ಕ್ಷೇತ್ರಗಳನ್ನು ವರ್ಣಿಸಿದರು.

ಬಾಳೆಮುಹೂರ್ತ—ಉಡುಪಿ ಪತ್ತಿನ ಸೆಹಕಾರಿ ಸಂಘದ ಶ್ರೀ ಸುಜ್ಞಾನೇಂದ್ರ ತೀರ್ಥ ವಿದ್ಯಾಪ್ರಸನ್ನ ಸ್ವಾಮಿಗಳವರ ಪರ್ಯಾಯ ಮಹೋತ್ಸವದ ಸಿದ್ಧತೆಗಳಲ್ಲೊಂದಾದ ಬಾಳೆ ಮುಹೂರ್ತ ಸಮಾರಂಭವು ತಾ. 28ರಂದು ಸೈ ಭವದಿಂದ ಜರಗಿತು.

ಉಡುಪಿ ಮುನಿಸಿಪಲ್ ಕಾನ್ಸಿಲಿ ನ ಸಭೆಯು—ತಾ 28ರಂದು ಚೆರ್‌ಮೆನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ತಾ 10ರ ಸುಮಾರಿಗೆ ಉಡುಪಿಗೆ ಬರಲಿರುವ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಜತ್ತಿಯವರಿಗೆ ಮಾನಪತ್ರ ಪೀಯಬೇಕೆಂದು ನಿರ್ಧರಿಸಲಾಯಿತು.

ಪೊಳಲಿಯಲ್ಲಿ ಜಾನುವಾರು ಸಂತೆ—ಯು ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಬಡಗಿನ ವಿಶಾಲಸ್ಥಳದಲ್ಲಿ ಈ ವರ್ಷ ಜೊಸತಾಗಿ ಇದೇ ತಾ 6ರಿಂದ 8ರವರೆಗೆ ಜರಗಲ್ಪಟ್ಟಿ ಮೈಸೂರಿನ ವೆಟರ್ನರಿ ಡ್ಯಾರೆಕ್ಟರ್ ಡಾ| ಕೆ. ಎಸ್ ಪೆಟ್ಟರು ಇದನ್ನು ಉದ್ಘಾಟಿಸುವರು ಡಾ| ಕೆ ನಾರಾಯಪ್ಪ ಆಳ್ವ ಎಂ ಎಲ್. ಎ ಅವರು ವಸ್ತು ಪ್ರದರ್ಶನವನ್ನು ಉದ್ಘಾಟಿಸುವರು ಹೆಚ್ಚು ಜಾನುವಾರು ತಂದವರಿಗೂ ಉತ್ತಮ ಜಾನುವಾರುಗಳಿಗೆ ಬಹುಮಾನವಿದೆ.

ಭಾರತದಲ್ಲಿ ಮಕ್ಕಳ ಏಳಿಗೆಗಾಗಿ ವಿವಿಧ ಯೋಜನೆಗಳನ್ನು ಕೈಕೊಳ್ಳಲಾಗುತ್ತಿದೆ. ಇಂತಹ ಯೋಜನೆಗಳ ಎರಡು ದೃಶ್ಯಗಳನ್ನು ಚಿತ್ರದಲ್ಲಿ ಕಾಣಬಹುದು.

ತುದಿಯ ಚಿತ್ರ. ನವದೆಹಲಿಯ ಆಸ್ಪತ್ರೆಯೊಂದರಲ್ಲಿ ಮಕ್ಕಳಿಗಾಗಿ ನಿರ್ಮಿಸಿದ ವಿಶೇಷವಾರ್ಡು. ಇಂತಹ ವಾರ್ಡುಗಳನ್ನು ದೇಶದ ಹಿರಿಯ ಚಿಕಿತ್ಸಾಲಯಗಳೆಲ್ಲವುಗಳಿಗೂ ಜೋಡಿಸುವ ಯೋಜನೆಯಿದೆ

ಅಡಿಯ ಚಿತ್ರ ಅಪೂರ್ವ ಚಾರಿತ್ರ ವಾಹಿನಿಯವರು ಮಕ್ಕಳ ಮನಸ್ಸಂತೋಷ ಮತ್ತು ವಿದ್ಯಾ ಪ್ರಚಾರಗಳಿಗಾಗಿ ಕೆಲವು ವಿಶೇಷ ಕಾರ್ಯಕ್ರಮಗಳ ಪ್ರಸಾರ ಮಾಡುತ್ತಿದ್ದಾರೆ ಇಂತಹ ಕಾರ್ಯಕ್ರಮಗಳಲ್ಲಿ ಒಂದನ್ನು ಇಲ್ಲಿ ಕಾಣಬಹುದು

ಸಂಕ್ಷಿಪ್ತ ಸುದ್ದಿಗಳು

ವಾಷಿಂಗ್ಟನ್ನಿನಲ್ಲಿ ಕಾಲುಬೆ ನೀರಿನ ಸಮಸ್ಯೆಯ ಬಗ್ಗೆ ಪರಿಹಾರವನ್ನು ಕಂಡು ಹಿಡಿಯಲು ಪ್ರಾರಂಭವಾಗಿರುವ ಮಾತುಕತೆಗಳಲ್ಲಿ ಪಾಕೀಸ್ತಾನೀ ನಿಯೋಗದ ಧುರೀಣರಾದ ಶ್ರೀ ಮೊಯಿನುದ್ದೀನರು ಈ ಮಾತುಕತೆಗಳಿಂದ ಯಾವ ಶೀತಿನು ಪರಿಹಾರವೂ ದೊರೆಯಲಾರದೆಂದು ನಿರಾಶೆ ವ್ಯಕ್ತ ಪಡಿಸಿದ್ದಾರೆ ಹಾಗಿದ್ದರೂ ಅಂತಿಮ ಪರಿಹಾರ ಪೂರ್ಣದಲ್ಲಿ ಇನ್ನೊಂದು ಹೆಜ್ಜೆ ಮುಂದುವರಿಯಲು ಈ ಮಾತುಕತೆಯು ಪ್ರೇರೇಪಿಸಬಹುದೆಂದು ಅನಂದ ಅಭಿಪ್ರಾಯಪಟ್ಟರು. ಭಾರತವು ಗಾಟ್ಟಿಂದ ಈಗ ಕಲ್ಲಿಸುತ್ತಿರುವ ನೀರಿನ ಸೂರ್ಯೆಕಯನ್ನು ನಿಲ್ಲಿಸಿಬಡಲು ನಿರ್ಧರಿಸಿದೆ.

ಕಡಿಯೊಂಪೇ ಆವರೂ

ದೇಶದಲ್ಲಿ ಕೆಲವೇ ಮಂದಿ ಬುದ್ಧಿವಂತರಿರುವುದಿಂದಲೂ ಅಂಥವರು ಜಗತ್ತಿನಲ್ಲಿ ಆದ್ಭುತ ಪರಿವರ್ತನೆಗಳನ್ನು ಮಾಡುವಲ್ಲಿ ಶಕ್ತರಾಗುವರು ಆದರೆ ಅಂತಹ ಬುದ್ಧಿವಂತರು ಜನರ ದೃಷ್ಟಿಗೆ ಸುಲಭದಲ್ಲಿ ಗೋಚರವಾಗುವುದಿಲ್ಲ. ಆದುದರಿಂದ ಪ್ರತಿಯೊಬ್ಬ ಸ್ತ್ರೀ ಪುರುಷನಿಗೂ ತನ್ನ ತನ ಬುದ್ಧಿಮತ್ತೆಯನ್ನು ಬಾಹ್ಯಪ್ರಪಂಚಕ್ಕೆ ವ್ಯಕ್ತಗೊಳಿಸುವ ಅವಕಾಶವನ್ನು ನೀಡುವುದೂ ಅಗತ್ಯ ಇಂಗ್ಲೆಂಡಿನ ಔದ್ಯೋಗಿಕ ಕ್ರಾಂತಿಯು ಅದೇಶದ ಸಾಮಾನ್ಯ ಜನರಿಂದಲೇ ಆಗಿದೆಯೇ ಹೊರತು ದೊಡ್ಡವರಿಂದ ಅಗಲಿಲ್ಲ ಆದುದರಿಂದ ಪ್ರತಿಯೊಬ್ಬನಿಗೂ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಇದು ಖಾರಿ ಹೇಳುತ್ತದೆ ಎಂದು ಪ್ರಧಾನಿ ಪಂಡಿತನೆಹರು ಸಮಾಜಕಲ್ಯಾಣ ಮತ್ತು ವ್ಯವಹಾರ ಮೇಲ್ವಿಚಾರಣೆಯ ಭಾರತೀಯ ಸಂಸ್ಥೆಯ ಕಟ್ಟಡವನ್ನು ಕೂಸ ವಿತ್ತರಣೆಯ ಶಂಕುಸ್ಥಾಪನೆ ಮಾಡುತ್ತಾ ಅಭಿಪ್ರಾಯ ಪಟ್ಟರು.

ಜನವರಿಯಲ್ಲಿ ಅಧಿವೇಶನ

ಮೈಸೂರು ವಿಧಾನ ಸಭೆಯಲ್ಲಿ ಈಗಾಗಲೇ ವಂಡಿಸಲ್ಪಟ್ಟ ಮೈಸೂರು ಭೂ ಸುಧಾರಣಾ ವಿಧೇಯಕವನ್ನು ಅಭ್ಯಾಸ ಮಾಡಲು ತನಗೆ ಅವಕಾಶವೀಕೆಂದು ವಿಧಾನ ಸಭೆಯ ಹೆಚ್ಚಿನ ಸದಸ್ಯರು ಅಭಿಪ್ರಾಯಪಟ್ಟ ಮೇರೆಗೆ ಈ ಉದ್ದೇಶಕ್ಕಾಗಿ ಜನವರಿ ತಿಂಗಳಲ್ಲಿ ವಿಶೇಷಾಧಿ ವೇಶನವನ್ನು ಕರೆಯಲಾಗುವುದೆಂದೂ ಪ್ರಕೃತದ ಅಧಿವೇಶನದಲ್ಲಿ ಈ ವಿಧೇಯಕದ ಮೇಲೆ ಚರ್ಚೆಯು ನಡೆಯುವುದೆಂದೂ ಅಧಿಕೃತ ವಲಯಗಳಿಂದ ತಿಳಿದು ಬಂದಿದೆ.

ಶರಾವತಿ ಯೋಜನೆ

ವೈಸೂರು ವಿಧಾನ ಸಭೆಯುಲ್ಲಿ ಶರಾವತಿ ಯೋಜನೆಯನ್ನು ದ್ವಿತೀಯ ಪಂಚವರ್ಷಿಕ ಯೋಜನೆಯ ತಿರುಳಿನಲ್ಲಿ ಸೇರಿಸಲೇ ಬೇಕೆಂಬ ಹಿಂದಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಗೊತ್ತುವಳಿಯು ಸರ್ವಾನು ಮತದಿಂದ ನಡೆದುದಾಗಿತ್ತು ಈ ಯೋಜನೆಯ ಬಗ್ಗೆ ಲೋಕ ಸಭೆಯಲ್ಲಿ ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆಗಳ ಉಸ ಮಂತ್ರಿಗಳವರು ಈ ಯೋಜನೆಗೆ ಅವಶ್ಯವಾದ ವಿದೇಶ ವಿನಿಮಯವನ್ನು ಒದಗಿಸುವ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದೆಂದೂ ಈ ವಿಷಯದಲ್ಲಿ ಇನ್ನೂ ಖಾತ್ರಿಯಾದ ನಿರ್ಣಯ ತನ್ನು ವಾಡಿಲ್ಲವಾದರೂ ಯೋಜನಾ ಆಯೋಗವೊಡನೆ ಮಾತುಕತೆಗಳನ್ನು ನಡೆಸಲಾಗಿದೆಯೆಂದೂ ಹೇಳಿದರು ಮೈಸೂರಿನ ಲೋಕ ಸಭಾ ಸದಸ್ಯರು ಈ ಯೋಜನೆಯ ಸದ್ಯದ ವಿಶೇಷ ವಿನಿಯೋಜಿತ ಅವಶ್ಯಕತೆಗಳನ್ನು ಪೂರೈಸಲು ಒಂದು ಕೋಟಿ ರೂಪಾಯಿಗಳು ಮಂಜೂರಾಗಬಹುದೆಂದು ನಿರೀಕ್ಷಿಸಿರುತ್ತಾರೆ.

ಭೂ ವಿಧೇಯಕ

ಮೈಸೂರು ವಿಧಾನ ಸಭೆಯ ಮುಂದೆ ಭೂಶಾಸನ

ಉಳುವವನೇ ಹೊಲದೊಡೆಯನಾಗಲು ಮೈಸೂರಿನ ಕಾರ್ಯಕ್ರಮ

ಹಲವಾರು ಸಮಯದಿಂದ ಜನತೆಯು ನೀರೀಕ್ಷಿಸಿದ್ದ ಮತ್ತು ಆತ್ಯಂತಾವಶ್ಯಕ ಸುಧಾರಣೆಯೆನಿಸಿದ ಬೂಸುಧಾರಣೆಯ ಸಂಬಂಧದ ವಿಧೇಯಕವನ್ನು ಮೈಸೂರು ವಿಧಾನಸಭೆಯಲ್ಲಿ ಮಂಡಿಸಲ್ಪಟ್ಟಿದೆ. ಆಖಂತ ಮೈಸೂರಿನಲ್ಲಿ ಜತ್ತಿ ಸಮಿತಿಯ ವಂದಿ ಎನ್ನು ಅದರಿಸಿ, ವಿಧಾನ ಮಂಡಳದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಹಾಗೂ ಯೋಜನಾ ಆಯೋಗದ ಭೂಸುಧಾರಣಾ ಕೇ ವ್ಯ ಸಮಿತಿಯು ಸೂಚನೆಗಳನ್ನು ಅನುಸರಿಸಿ ಈ ವಿಧೇಯಕವು ಬಂದಿದೆ.

ಅಂಗವಿಕಲರಾಗಿದ್ದವರ ಮತ್ತು ಸಶಸ್ತ್ರಪಡೆಗಳಲ್ಲಿ ಸೇವೆ ಸಲ್ಲಿಸುವವರ ಮತ್ತು ಮೂಲಹಿಡುವಳಿಗಿಂತ ಕಡಿಮೆ ಹಿಡುವಳಿಗಿಂತ ಕಡಿಮೆ ಹಿಡುವಳಿಯಿದ್ದವರ ಭೂಮಿಗಳನ್ನು ಮಾತ್ರ ಲಾವಣಿಯಿಂದ ಸಾಗುಮಾಡಲು ಅನುಮತಿಯನ್ನು ಈ ವಿಧೇಯಕದಲ್ಲಿ ನೀಡಲಾಗಿದೆ. ರೂ. ೪೦೦೦ಗಳ ನಿವ್ವಳ ವಾರ್ಷಿಕಾದಾಯ ಬರುವ ಭೂಮಿಯೇ ಮೂಲ ಹಿಡುವಳಿಯೂಗಿದೆ. ರೂ. ೧೫೦೦ ನಿವ್ವಳ ಆದಾಯ ತರುವ ಭೂಸುಯು ಕೌಟುಂಬಿಕ ಹಿಡುವಳಿಯೆಂದೂ ಗಣಿಸಲ್ಪಟ್ಟಿದೆ. ಪರಮಾವಧಿ ಮಿತಿಯು ಇದರ ಮೂರು ಪಾಲಿರುವುದು. ದೊಡ್ಡ ಕುಟುಂಬದವರಲ್ಲಿ, ಸ್ವಂತ ಬೇಸಾಯದಲ್ಲಿ ತೊಡಗಿದ ಐದಕ್ಕಿಂತ ಹೆಚ್ಚು ಜನರು ಇರುವ ಒಡೆಯನ ಇಲ್ಲವೇ ರೈತನ ಕುಟುಂಬದಲ್ಲಿ ಪ್ರತಿಯೊಬ್ಬ ಹೆಚ್ಚಿನ ವ್ಯಕ್ತಿಗೆ ಒಂದು ಕೌಟುಂಬಿಕ ಹಿಡುವಳಿಯಂತೆ ಒಳಿಯ ಸಂತಾನದವರು ಒಂಬತ್ತು ಹಿಡುವಳಿ ಮತ್ತಿತರರು ಆರು ಹಿಡುವಳಿಯನ್ನು ಇಟ್ಟು ಕೊಳ್ಳಬಹುದು.

ಪರಮಾವಧಿ ಲಾವಣಿಯುಒಟ್ಟು ಉತ್ಪಾದನೆಯಲ್ಲಿ ನೀರಾವರಿ ಭೂಮಿಯಿದ್ದರೆ, ನಾಲ್ಕರಲ್ಲಿ ಒಂದಂಶವೆಂದೂ ಇತರ ಭೂಮಿಗಳಿಗೆ ಎರಡರಲ್ಲೊಂದಂಶವೆಂದೂ ವಿಧೇಯಕದಲ್ಲಿ ಹೇಳಲಾಗಿದೆ. ಕಾಫಿ, ರಬ್ಬರು, ಚಾ ತೋಟಗಳಿಗೆ ೧೦೦ ಎಕ್ರೆ, ಏಲಕ್ಕಿ ತೋಟಕ್ಕೆ ೨೫, ತೆಂಗಿನ ತೋಟಕ್ಕೆ ೭೦, ಅಡಿಕೆ ಹಾಗೂ ಮೆಣಸಿನ ತೋಟಗಳಿಗೆ ೧೦ ಎಕ್ರೆಗಳು ಪರಮಾವಧಿ ಮಿತಿಯಾಗಿದೆ.

ರಾಜ್ಯ ಸರಕಾರದ ಅಭಿಪ್ರಾಯದಲ್ಲಿ ಹೆಚ್ಚಿನ ತೋಟಗಳು, ದನಗಳ ತಳಿ ಸುಧಾರಣೆ, ಹೈಸೋತ್ಪತ್ತಿ ಉಣ್ಣೆ ತಯಾರಿಕೆ ಮೊದಲಾದವುಗಳ ಫಾರ್ಮುಗಳೂ ಸಕ್ಕರೆ ಕಾರಖಾನೆಗಳ ಒಡೆತನದ ಕಬ್ಬಿನ ತೋಟಗಳೂ ಈ ಹಿಡುವಳಿ ನಿರ್ಧಾರಣೆಗೆ ಅಪವಾದವಿವೆ.

ಭೂಕಂದಾಯ ಮೊತ್ತವನ್ನು ಕಳೆದು, ಉಳಿದ ಗೇಣಿಯ ಹದಿನೈದು ಪಟ್ಟು ಪರಿಹಾರಧನವೆಂದೂ, ಇದರಂತೆ ಸಾಮಾನ್ಯ ಒಂದು ಎಕ್ರೆಗೆ ೧೫೦ ರೂಪಾಯಿ ದೊರೆಯುವುದೆಂದೂ ಹೇಳಲಾಗಿದೆ. ಸಾಗು ಮಾಡುತ್ತಿರುವ ರೈತರಿಗೆ ಆ ಭೂಮಿಯನ್ನು ಕೊಟ್ಟು ಅವರಿಂದ, ಅದರ ಮೊತ್ತವನ್ನು ೪೫ ಸಲೆಯ ಬಡ್ಡಿಯೊಡನೆ ೨೦ ವಾರ್ಷಿಕ ಕಂತುಗಳಲ್ಲಿ ವಸೂಲು ಮಾಡಲಾಗುವುದು. ಅದೇ ರೀತಿ ಒಡೆಯನಿಗೂ ಪರಿಹಾರಧನವನ್ನು ಇದೇ ದಂದಲ್ಲಿ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಇಲ್ಲವೇ ನೆಗೋಶಿಯೆಬಲ್ ಖಾಂದುಗಳಲ್ಲಿ ಕೊಡಬೇಕು ಇಪ್ಪತ್ತು ವರುಷಗಳ ಅವಧಿಯಲ್ಲಿ ಅವನ್ನು ಬಿಡಿಸಿಕೊಳ್ಳಬಹುದಾಗಿದೆ ಎಂಬಾ ಹಿಡುವಳಿಗಿಂತ ಕಡಿಮೆ ಹಿಡುವಳಿಯಿದ್ದವರಲ್ಲಿ ಪರಿಹಾರವನ್ನು ಒಮ್ಮೆಲೆ ಕೊಡಬೇಕಾಗಿರುವುದು.

ಅಧಿಕ ಮಿತಿಯಿಂದ ವಿಕ್ಕಿಗುವ ಭೂಮಿಯನ್ನು ಸರಕಾರವು ತನ್ನ ವಶದಲ್ಲಿರಿಸಿಕೊಂಡು, ಒಕ್ಕಲುಗಳಿಗೆ ಅವನ್ನು ಹಂಚಿ, ಅವರಿಂದ ಅದರ ಬೆಲೆಯನ್ನು ವಾರ್ಷಿಕ ಕಂತುಗಳಲ್ಲಿ ವಸೂಲು ಮಾಡಲಾಗುವುದು.

ಭೂಮಿಯು ಒಡೆಯನಿಗೆ ಸ್ವಂತ ಸಾಗುವಳಿಗಾಗಿ ಭೂಮಿಯು ಬೇಕಾಗಿದ್ದಲ್ಲಿ ಇಪ್ಪತ್ತೇ ಒಕ್ಕಲತನೇತರ ಉದ್ದೇಶಗಳಿಗಾಗಿ ಬೇಕಾಗಿದ್ದಲ್ಲಿ ಕಾಯಂಕುಳಗಳಿಗೆ ಹೊರತಾಗಿ ಉಳಿದ ರೈತರನ್ನು ಎರಡು ವರುಷಗಳ ಮುನ್ನೂಚನೆ ಕೊಟ್ಟು ಬಿಡಿಸಬೇಕಾಗುವುದು. ಈ ಸೂಚನೆಯಲ್ಲಿ ಯಾವ ಕಾರಣಕ್ಕಾಗಿ ಬಿಡಿಸಲಾಗುತ್ತಿದೆಯೆಂಬುದನ್ನು ತಿಳಿಸಬೇಕಾಗುವುದು. ರೈತನನ್ನು ಹೊಲ ಬಿಡಿಸುವ ಭೂ ಒಡೆಯನ ಹಕ್ಕು ಕೆಲವೊಂದು ಕರಾರುಗಳಿಗೊಳಪಟ್ಟಿರುವುದು.

ಸರಕಾರವು ಮೊದಲು ಈ ಭೂಮಿಯಲ್ಲಿದ್ದ ರೈತರ ಹಿತ ಸಂಬಂಧಗಳನ್ನು ಅನುಲಕ್ಷಿಸಿ ತನ್ನ ವಶಕ್ಕೆ ಬಂದ ಭೂಮಿಯನ್ನು ದಂಗು ಬುವುದು. ಸಹಕಾರಿ ಹಿಡುವಳಿ ಸಂಘಗಳಿಗೆ ಸದಸ್ಯರಾಗುವವರಿಗೆ ಭೂಮಿಯನ್ನು ಕೊಡುವಲ್ಲಿ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗುವುದು. ಹೀಗೆ ಯಾರು ಭೂಮಿಯಲ್ಲಿ ನಿಜವಾಗಿಯೂ ಗೇಯುತ್ತಿರುವನೋ ಅಂತಹ ರೈತನ ಕೈಗಳಿಗೇನೇ ಭೂಮಿಯ ಮೇಲಣ ಹಕ್ಕು ಈ ವಿಧೇಯಕವು ವ್ಯವಹಾರಕ್ಕೆ ಬಂದ ದಿನದಿಂದ ಬರುವುದು.

ಈ ವಿಧೇಯಕದಂತೆ ಧಾರ್ಮಿಕ ಹಾಗೂ ಧರ್ಮಸಂಸ್ಥೆಗಳ ಭೂಮಿಯೂ ಅವರ ಕೈತಪ್ಪಿ ಒಕ್ಕಲುಗಳ ಕೈಸೇರುವುದು. ಈ ಸಂಸ್ಥೆಗಳಿಗೆ ಪರಿಹಾರವೀರುವಾಗ, ಸೇರಿಡಿಸಿ ಸಲೆಯ ಬಡ್ಡಿಬರುವಂತೆ ಕೊಡಬೇಕೆಂದೂ ಹೀಗೆ ಕೊಡುವ ಪರಿಹಾರಧನವು ಆವುಗಳ ಈಗಿನ ಉತ್ಪತ್ತಿ ಅಥವಾ ಆದಾಯದ ಮುಕ್ಕಾಲು ಪಾಲಾದರೂ ಇರಬೇಕು ಎಂದು ಈ ಹಿಂದೆ ಹೇಳಲಾಗಿತ್ತು ಆದರೆ, ವಿಧೇಯಕದಲ್ಲಿ ಇದಾವುದರ ಬಗ್ಗೆಯೂ ಉಲ್ಲೇಖವಿರದೆ ಕೇವಲ ದೀರ್ಘಕಾಲೀನ ಸೇರಿಡಾ ಖರಂತೆ ಬಡ್ಡಿ ಸಂಪಾದಿಸುವ ಬಾಂಡುಗಳ ರೂಪದಲ್ಲಿ ಪರಿಹಾರವೀಯಬೇಕೆಂದು ಮಾತ್ರ ಹೇಳಲಾಗಿದೆ. ಇದರಿಂದ ಮಠ ಸಂಸ್ಥೆಗಳ ಆದಾಯವು ನಿಜಕ್ಕೂ ಕುಸಿಯುವುದು.

ಭೂಸುಧಾರಣೆಯ ವಿಧೇಯಕವು ಬಹಳ ಕಾಲದಿಂದ ಬರುತ್ತದೆ ಎಂದಿದ್ದರೂ, ಬಾಂದೆ ಹೋಯಿತು. ಇದೀಗ ಕೇಂದ್ರ ಸರಕಾರವೂ ಈ ಬಗ್ಗೆ ಒತ್ತಾಯವನ್ನು ಮಾಡಿದುದರಿಂದ ಮತ್ತು ಜನತೆಯಲ್ಲಿ ಅಧಿಕ ಸಂಖ್ಯಾಧರಾದ ಒಕ್ಕಲಿಗರ ಹಿತ ಸಂಬಂಧವನ್ನು ನೋಡಿಕೊಳ್ಳಲಿಕ್ಕೂ ಅವರಲ್ಲಿ ಭದ್ರತಾ ಮನೋಭಾವನೆಯನ್ನು ಹುಟ್ಟಿಸುವುದಕ್ಕೂ ನೆರವಾಗಿ, ಇವುಗಳಿಂದ ಅಧಿಕ ಆಹಾರೋತ್ಪಾದನೆಯೇ ಮೊನಲಾದ ಗುರಿಯನ್ನು ಸಾಧಿಸುವುದಕ್ಕೂ ಈ ವಿಧೇಯಕವು ಅವಶ್ಯವಾಗಿತ್ತು. ಮೈಸೂರು ಸರಕಾರವು ಈ ಬಗ್ಗೆ ಹಿಂದೆಯೇ ಕಾರ್ಯಕ್ರಮಗಳನ್ನು ಕೈಗೊಂಡಿದ್ದರೂ, ಅವು ಕೊನೆಗೊಳ್ಳದೆ, ಇದೀಗ ವಿಧಾನ ಸಭೆಯ ಮುಂದೆ ಬಂತು ಈ ವಿಧೇಯಕವನ್ನು ಸಿಟಿತಾಸುಗಳಲ್ಲಿ ರಚಿಸಲಾಗಿದೆಯೆಂದು ತಿಳಿದುಬಂದಿದೆ.

ಸ್ವಾಯತ್ತ ಇಷ್ಟೊಂದು ಅಲ್ಪಕಾಲದಲ್ಲಿ ಇಷ್ಟೊಂದು ವಿಷಯದ ವಿಧೇಯಕವನ್ನು ನಮ್ಮ ಮೈಸೂರು ಸರಕಾರ ತಯಾರಿಸಿ ಬಿಟ್ಟಿರುವುದು ಆಶ್ಚರ್ಯದಲ್ಲಿ ಆಶ್ಚರ್ಯವಾಗಿದೆ

ಕೆಲವೇ ವರ್ಷಗಳಲ್ಲಿ ಭಾರತೀಯ ಸಮಾಜ ವಿಕಾಸ ಯೋಜನೆಗಳು ಜನಪ್ರಿಯವಾಗಿವೆ ಎಲ್ಲೆಲ್ಲಿಯೂ ಇವು ತಮ್ಮ ಜಯಭೇರಿಯನ್ನು ಮೊಳಗಿಸುತ್ತವೆ ಈಗ ಭಾರತದಲ್ಲಿ ಸುಮಾರು ಅರ್ಧಾಂಶದಷ್ಟು ಜನಸಂಖ್ಯೆ ಯಿರುವ ಪ್ರದೇಶಗಳಲ್ಲಿ ಈ ಯೋಜನೆಯು ಕಾರ್ಯಶೀಲವಾಗಿದೆ. ಚಿತ್ರದಲ್ಲಿ ಈ ಸಂಬಂಧದ ಕೆಲವು ದೃಶ್ಯಗಳನ್ನು ನೋಡಿರಿ.

೧ನೆ ದೃಶ್ಯ: ಇವನ್ನು ಅಕ್ಟೋಬರ ೩ರಂದು ಪ್ರಧಾನಿ ನೆಹರು ದಿಲ್ಲಿಯಸಮೀಪ ಮೂರ್ಗ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದರು.

೨ನೆ ದೃಶ್ಯ: ಈ ಯೋಜನೆಯ ಮೂಲಕನಿತ್ತ ಬೀಜಗಳಿಂದ ಉತ್ತಮ ಫಲವಡೆದ ಉತ್ತರ ಪ್ರದೇಶದ ರೈತನನ್ನು ವೃನಸಾಯ ವಿಸ್ತರಣಾ ಕರ್ಮಚಾರಿಯೊಬ್ಬನು ಪ್ರಶಂಸಿಸಿದನು.

೩ನೆ ದೃಶ್ಯ: ಅಸ್ಸಾಮಿನಲ್ಲಿ ಈ ಯೋಜನೆಯ ದ್ವಾರಾತೆರೆಯಲ್ಪಟ್ಟ ಒಂದು ಹೆಣ್ಮಕ್ಕಳ ಶಾಲೆಯಲ್ಲಿ ವಿದ್ಯಾರ್ಥಿನಿಯರು ಅಭ್ಯಸಿಸುತಿದ್ದಾರೆ.

೬೦ ವರ್ಷಗಳಿಂದಲೂ ಪ್ರಸಿದ್ಧ ಇವೆ
ಮಲೇರಿಯಾ
ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ
ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.
ಬಾಟ್ಲಿವಾಲಾ ಎಗ್ಲೂಮಿಕ್‌ಶ್ಚರ
ಮತ್ತು ಗುಳಿಗೆಗಳು
ಪೂರಾಟಿ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಪ್ರೈವೇಟ್ ಲಿಮಿಟೆಡ್,
ಬ್ರಾಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ಗೌರವಾರ್ಪಣೆ

ಭಾರತೀಯ ಐಕ್ಯಕ್ಕೆ ಕಾಲಿದಾಸನ ಮಾರ್ಗದರ್ಶನ

ಆದರೆ, ನಮ್ಮವನನ್ನು ಮಾತ್ರ ನಾವು ಗೌರವಿಸುತ್ತಿಲ್ಲವೆಂಬುದು ಶೋಚನೀಯ!

ಜಗತ್ತಿನಲ್ಲಿಯ ಇದು ವರೆಗಿನ ಶ್ರೇಷ್ಠ ಸಾಹಿತಿಗಳಲ್ಲಿ ಮಹಾಕವಿ ಕಾಲಿದಾಸನ ಗಣನೆಯಾಗುತ್ತಿದೆ. ಹೀಗೆ ಈತನಿಗೆ ಇಡೀ ಜಗತ್ತಿನ ಮನ್ನಣೆ ದೊರೆತಿರುವುದರಿಂದಲೇ ಆತನನ್ನೂ ಆತನ ಕೃತಿಗಳನ್ನೂ ಸಂಪೂರ್ಣತಃ ಗೌರವಿಸುವದು ಭಾರತೀಯರಾದ ನಮ್ಮ ಹೊಣೆಗಾರಿಕೆಯಾಗುತ್ತದೆ. ಕಾಲಿದಾಸನ ಕೃತಿಗಳು ಕಾಲೇಜುಗಳಲ್ಲಿ ಸ್ಥಾನಬದ್ಧವಾಗಿ ಉಳಿದುಕೊಳ್ಳದೆ ಆ ಕೃತಿಗಳಲ್ಲಿ ಕಂಡು ಬರುವ ಸಂಸ್ಕೃತಿ ದೇಶದ ಸಕಲರ ಸೊತ್ತಾಗಬೇಕು.

ಕವಿ ಕಾಲಿದಾಸನ ಗೌರವಾರ್ಥ ಭಾರತ ಸರಕಾರವು ವಿಶೇಷ ಅಂಚೆ ತಿಕೀಟುಗಳನ್ನು ಹೊರಡಿಸಬೇಕೆಂದು ನಿರ್ಧರಿಸಿದೆ.

ಕಾಲಿದಾಸನನ್ನು ಗೌರವಿಸುವದು ಸ್ವತಂತ್ರ ರಾಷ್ಟ್ರ ನಾಗರಿಕರಾದ ನಮ್ಮ ಕರ್ತವ್ಯ. ಆದರೆ ಆತನ ಸ್ಮಾರಕವು ಆತನ ಕೃತಿಗಳಲ್ಲಿಯೆ ಇದೆ ಎಂದು ನೆನ್ನೆ ಭಾವನೆ. ಆ ಕೃತಿಗಳನ್ನು ಅಭ್ಯಸಿಸಿ ಪ್ರಕಾಶಿಸಿ ಆರಿಸಿಕೊಂಡಷ್ಟೂ ನಮಗೆ ಪ್ರಯೋಜನ ಉಂಟಲ್ಲದೆ ಆತನಿಗೆ ಗೌರವವನ್ನೂ ಸಲ್ಲಿಸಿದಂತಾಗುತ್ತದೆ. ಪ್ರತಿಯೊಬ್ಬನಿಗೂ ಆತನ ಕೃತಿಗಳ ಮೂಲ ಸಂಸ್ಕೃತ ಸಾತ ಹಾಗೂ ಅದರ ಭಾಷಾಂತರ ದೊರೆಯುವಂತೆ ಆವುಗಳನ್ನು ಸಕಲ ದೇಶೀಯ ಭಾಷೆಗಳಿಗೆ ಅನುವಾದಿಸಬೇಕು ಎಂದು ನನ್ನ ಸೂಚನೆ. ಆತನ ಕೃತಿಗಳಲ್ಲಿ ಕಂಡು ಬರುವ ಸಾಮಾಜಿಕ ಚಿತ್ರ, ರಾಜಕೀಯ ಪರಿಸ್ಥಿತಿ, ಕಾವ್ಯ ಸೌಂದರ್ಯ ಮುಂತಾದ ಅಂಶಗಳನ್ನು ಆರಿತು ಕೊಳ್ಳುವದಕ್ಕೆ ಅಭ್ಯಾಸ ಮಂಡಲಗಳನ್ನು ರಚಿಸಿ ಅವುಗಳ ಅಧ್ಯಯನ ನಡೆಸಬೇಕು. ಈ ಎಲ್ಲ ಕಾರ್ಯಗಳ ಕಡೆಗೆ ಕಾಳಿದಾಸ ಸ್ಮೃತಿ ಸಮಾರೋಹವು ಜನರ ಲಕ್ಷವನ್ನು ಸೆಳೆದರೆ ಅದರ ಮುಖ್ಯೋದ್ದೇಶವು ಸಾಧ್ಯವಾದಂತೆ.

ಕಾಲಿದಾಸನ ನಾಟಕಗಳು ಜಗತ್ತಿನ ಪ್ರಮುಖ ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿವೆಯೆಲ್ಲದೆ ಇಂಗ್ಲೆಂಡ ಬ್ರಿಟನ್, ಫ್ರಾನ್ಸ, ಚೀನ ಮುಂತಾದ ದೇಶಗಳಲ್ಲಿ ಅವು ರಂಗಭೂಮಿಯ ಮೇಲೆ ಅಭಿನಯಿಸಲ್ಪಟ್ಟಿವೆ.

ಆದರೆ ಕಾಲಿದಾಸನ ದೇಶವಾದ ಭಾರತದಲ್ಲಿ ಆತನಿಗಿನ್ನೂ ಯಥಾಯೋಗ್ಯ ಸ್ಥಾನ ದೊರೆಯದಿರುವದು ವಿಚಿತ್ರವೆನಿಸುತ್ತದೆ. ಕಾಲಿದಾಸನ ನಾಟಕಗಳು ಬರಿ ಪಠ್ಯ ಪುಸ್ತಕಗಳಲ್ಲ; ಮನೋರಂಜನೆಯ ಸಾಧನೆಗಳೂ ಅಲ್ಲ. ಅಂದಿನ ಬೌದ್ಧಿಕ, ಮಾನಸಿಕ, ಸಾಹಿತ್ಯಿಕ ಬೆಳವಣಿಗೆಯನ್ನು ನಿರೂಪಿಸುವ ಗ್ರಂಥಗಳಾಗಿವೆ. ಭಾರತದ ಉದಾತ್ತ ಸಂಸ್ಕೃತಿಯು ಅವುಗಳಲ್ಲಿ ಪ್ರತಿಬಿಂಬಿತವಾಗಿದೆ.

ಭಾರತದ ಸಾಮಾನ್ಯ ನಾಗರಿಕರಿಗೆ ಕಾಲಿದಾಸನ ಕೃತಿಗಳ ಅಥವಾ ಅವುಗಳ ಪಾತ್ರಗಳಲ್ಲಿ ಗುಪ್ತವಾಗಿರುವ ಅಮೂಲ್ಯ ಸಾಂಸ್ಕೃತಿಕ ಸಂಪತ್ತಿನ ಪರಿಚಯವಿರುವದಿಲ್ಲ. ಇದು ಶೋಚನೀಯ ಸಂಗತಿ. ಕಾಲಿದಾಸನಿಗೆ ಸಲ್ಲಬೇಕಾದ ಗೌರವವನ್ನು ನಾವು ಸಲ್ಲಿಸಲೇಬೇಕು. ತಮ್ಮ ಕವಿಗಳನ್ನು ಗೌರವಿಸುವಲ್ಲಿ ನಾವು ಇತರ ದೇಶಗಳ ಜನರಿಂದ ಪಾಠ ಕಲಿಯಬೇಕಾಗಿದೆ. ಈ ಉದ್ದೇಶದಿಂದ ಸನ್ಯ ಈ ಜಯಂತಿಯನ್ನು ಏರ್ಪಡಿಸಿರುವದು ಅಭಿನಂದನೀಯ.

ಕಾಲಿದಾಸನು ಎಂದು ಬಾಳಿದ್ದನೆಂಬ ಬಗ್ಗೆ ವಿವಾದವಿದ್ದರೂ ಆತನು ಭಾರತೀಯನೆಂಬ ಬಗ್ಗೆ ಯಾರಲ್ಲಿಯೂ ಸಂದೇಹವಿಲ್ಲ. ಆತನ ಕೃತಿಗಳಲ್ಲಿ ಇದಕ್ಕೆ ಸಾಕಷ್ಟು ದೃಷ್ಟಾಂತಗಳಿವೆ. ಈತನು ಭಾರತೀಯನೆಂಬ ಹೆಮ್ಮೆ ನಮಗಿದ್ದರೂ ಈತನು ವಿಶ್ವಮಾನವನಾಗಿದ್ದಾನೆ. ಪಾಶ್ಚಾತ್ಯರು ಕಾಲಿದಾಸನ ಗ್ರಂಥಗಳ ಮೂಲಕ ಭಾರತದ ಪರಿಚಯವನ್ನು ಹೊಂದಿದರು. ಅಷ್ಟೇ ಏಕೆ, ಪಾಶ್ಚಾತ್ಯರ ಪ್ರಯತ್ನಗಳಿಂದಲೇ ಇಂದಿನ ಭಾರತೀಯರು ತಮ್ಮ ಪ್ರಾಚೀನ ಸಾಹಿತ್ಯ ಸಂಪತ್ತನ್ನು ಕಂಡು ಕೊಳ್ಳುವಂತಾಯಿತು. ಸಂಸ್ಕೃತ ಸಾಹಿತ್ಯದ ಸ್ವರ್ಣ ಯುಗದಲ್ಲಿ ಕಾಲಿದಾಸನು ಅದ್ವಿತೀಯನಾಗಿ ಮೆರೆದಿದ್ದಾನೆ ಮಾನವ ಸ್ವಭಾವ ಚಿತ್ರಣದ ಅಪೂರ್ವ ಕೌಶಲ್ಯದಿಂದ ಆತನು ವಿಶ್ವಕವಿಯಾಗಿದ್ದಾನೆ.

(ದಿನಾಂಕ ೫ನೇರಂದು ಉಜ್ಜಯಿನಿಯಲ್ಲಿ ಕಾಲಿದಾಸ ಜಯಂತಿಯ ಉದ್ಘಾಟನೆಯ ಸಂದರ್ಭದಲ್ಲಿ ರಾಷ್ಟ್ರಪತಿ ರಾಜೇಂದ್ರಪ್ರಸಾದರು ಮಾಡಿದ ಭಾಷಣದಿಂದ)

ಜೊಸ ಪುಸ್ತಕ

ಇದೀಗ ಪ್ರಕಟವಾಗಿದೆ.

ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್

ಲೇಖಕರು: ಜೆನೇ ಇಯೇಟನ್.

ಅನುವಾದಕರು:

ಯು. ಎಲ್. ಆಚಾರ್ಯ,

ಎಮ್. ಎ. ಎಲ್. ಟಿ.

ಬೆಲೆ: ರೂಪಾಯಿ ಒಂದೊಕ್ಕಾಲು.

ಅಮೇರಿಕದ ಮೊದಲ ಅಧ್ಯಕ್ಷನ— ಜಾರ್ಜ್ ವಾಶಿಂಗ್‌ಟನ್‌ನ ಜೀವನ ಚರಿತ್ರೆಯಿದು. ಈತನಬಾಲ್ಯ, ಯೌವನದ ಸಾಮಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಒಂದು ರೂಪಾಯಿ ಎಂಟಾಣೆ (ರೂ. 1=5೦ ನಯೇಪೈಸೆ) ಮನಿಆರ್ಡರ್ ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಲಾಗುವುದು.

1. ನವಯುಗ ಪ್ರೆಸ್, ಉಡುಪಿ.

2. ನವಭಾರತ ಪುಸ್ತಕ ಭಂಡಾರ, ಉಡುಪಿ.



"ಎಕ್ಸ್ ಪ್ರೆಸ್ ಆಫ್ ಬ್ರಿಟನ್" ಎಂಬ ಹಡಗು. ಇದರಲ್ಲಿ ೧೫೦ ಮೊದಲನೆಯ ವರ್ಗದ ಮತ್ತು ೯೦೦ ಎರಡನೆ ವರ್ಗದ ಪ್ರಯಾಣಿಕರು ಪ್ರಯಾಣಿಸಬಹುದು.

ಪ್ರಗತಿಪಥ

ಮಹೋದ್ಯಮಗಳೊಡನೆ ಕುಟೀರೋದ್ಯೋಗಗಳು

ಪ್ರಧಾನಿ ನೆಹರೂವರ ಉತ್ತಮಾಭಿಪ್ರಾಯ

ಭಾರತವು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಉದ್ಯಮಗಳ ಬೆಳವಣಿಗೆಯು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಒಕ್ಕಲಕಸುವ ಅಭಿವೃದ್ಧಿಯ ಬಗ್ಗೆ ನಾವು ಬಲವಾಗಿ ಪ್ರತಿಪಾದಿಸಿ ಮಾತುತ್ತಿರುವುದು ನ್ಯಾಯೋಚಿತವಾಗಿದೆ. ಏಕೆಂದರೆ,ನಾವು ಕೈಗೊಳ್ಳುವ ಎಲ್ಲ ಯೋಜನೆಗಳೂ ಇದರ ತಳಪಾಯದಲ್ಲಿಯೇ ನೆಲೆಯೂರುತ್ತವೆ.ಆದರೆ,ಇದರೊಂದಿಗೆ ಉದ್ದಿಮೆಗಳು ಬೆಳೆಯುವುದೂ ಆವಶ್ಯಕ.

ಇದುವರೆಗೆ ನಾವು ಹಿರಿಯ ಮತ್ತು ಅತ್ಯಂತಾವಶ್ಯಕ ಮೂಲೋತ್ಪಮಗಳನ್ನು ವೃದ್ಧಿಗೊಳಿಸುತ್ತಿದ್ದೇವೆ. ಈ ಮಹಾ ಕೇಂದ್ರಗಳು ಕಾರ್ಯಮಗ್ನವಾಗುತ್ತಿರುವಷ್ಟರಲ್ಲಿಯೇ ನಮ್ಮ ದೇಶದಲ್ಲಿ ಸಣ್ಣ ಉದ್ದಿಮೆಗಳು ಬೆಳೆಯುವುದೂ ಆವಶ್ಯಕವಾಗಿದೆ.

ಇದೇ ಸಮಯದಲ್ಲಿ ನಾವು ಸಣ್ಣ ಉದ್ದಿಮೆ ಮತ್ತು ಕುಟೀರೋದ್ಯೋಗಗಳಿಗೆ ವಿಶಿಷ್ಟ ಮಹತ್ತಿಕೆಯನ್ನು ನೀಡುವುದೂ ಆಗತ್ಯವಾಗಿದೆ. ನಮ್ಮ ದೇಶದಲ್ಲಿ ದಿನೇ ದಿನೇ ಬೆಳೆಯುತ್ತಿರುವ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡುವುದರ ಜೊತೆಗೆ ನಮ್ಮ ಉತ್ಪಾದನೆಯ ಹೆಚ್ಚಳವನ್ನೂ ಈ ಸಣ್ಣ ಉದ್ದಿಮೆ ಮತ್ತು ಕುಟೀರೋದ್ಯೋಗಗಳು ಮಾತ್ರವೇ ಸಾಧಿಸಬಲ್ಲವು. ಇವುಗಳಿಗೆ ಗಣನೀಯ ಪ್ರಮಾಣದ ವಿದೇಶವಿನಿಮಯ ನಾಣ್ಯಗಳ ಅಗತ್ಯವೂ ಇರುವುದಿಲ್ಲ. ಇವುಗಳಿಗೆ ಮೂಲ ತಃ ಕಾರ್ಯಶೀಲತೆ ಮತ್ತು ಸಹಕಾರ ಮಾತ್ರ ಅವಶ್ಯವಾಗುವು. ಈ ಸಣ್ಣ ಮತ್ತು ಗೃಹೋದ್ಯೋಗಗಳು ವಿಕೇಂದ್ರೀಕೃತ ವಿಭಾಗದಲ್ಲಿ ನಮ್ಮ ಆರ್ಥಿಕ ಸ್ಥಿತಿಯನ್ನು ಸಮತೋಲದಲ್ಲಿರಿಸುವುದರಲ್ಲಿಯೂ ಸಹಾಯಕವಾಗುವು.

ಸಾಧ್ಯವೆನಿಸಿದಲ್ಲೆಲ್ಲ ಸಹಕಾರ ವಿಧಾನದಿಂದಲೇ ಈ ಕಿರಿಯುದ್ದಿಮೆಗಳು ಮತ್ತು ಗೃಹಕೈಗಾರಿಕೆಗಳು ಕಟ್ಟಲ್ಪಡಬೇಕು. ಈ ರೀತಿಯಲ್ಲಿ ಹಿರಿಯ ಪ್ರಮಾಣದಲ್ಲಿ ಕಾರ್ಯನಿರತವಾಗುವುದರಿಂದ ಪಡೆಯಬಹುದಾದ ಲಾಭವನ್ನೂ ವಿಕೇಂದ್ರೀಕರಣದ ಸಮೃದ್ಧಿಯನ್ನೂ ಏಕಕಾಲದಲ್ಲಿ ಇವು ಪಡೆಯುವಂತಾಗಬೇಕು.

ಭಾರತದ ವಿಭಿನ್ನ ಸ್ಥಳಗಳಲ್ಲಿ ಈಗಾಗಲೇ ಸ್ಥಾಪಿತವಾದ ಔದ್ಯಮಿಕ ಕ್ಷೇತ್ರಗಳು ತಮ್ಮ ಪ್ರಾಥಮಿಕ ಸ್ಥಿತಿಯಲ್ಲಿ ಉನ್ನತಿಕೆಯನ್ನು ತೋರಿಸಿವೆ. ಆದರೆ, ನಾವಿನ್ನೂ ಕೈಗೊಳ್ಳಬೇಕಾದುದು ಅಪಾರವೂ ಆನಂತವೂ ಆಗಿವೆ. ಮತ್ತು ಇವೆಲ್ಲವೂ ಸಾಧಿಸಲ್ಪಡುತ್ತವೆ ಎಂದು ನಂಬಬಹುದು.

ಯೋಗ್ಯ ನಿಯೋಜಿತ ಕ್ಷೇತ್ರಗಳಲ್ಲಿ ಉತ್ತಮ ಕಾರ್ಖಾನೆಯ ಅವಕಾಶ, ನೀರು, ವಿದ್ಯುತ್ತು, ಹೊಲಸು ನೀರಿನ ಸಾಗಾಟ, ಅಂಚೆಮನೆ, ಬ್ಯೆಂಕು, ಅಗ್ನಿ ಶಾಮಕ ಕೇಂದ್ರ, ಮಾರ್ಗ ಮತ್ತು ರೇಲ್ವೆ ಸಂಪರ್ಕ ಮೊದಲಾದುವುಗಳ ಹಿನ್ನೆಲೆಯಲ್ಲಿ ಔದ್ಯಮಿಕ ಕ್ಷೇತ್ರಗಳನ್ನು ಸ್ಥಾಪಿಸುವ ಯೋಜನೆಯಡಗಿದೆ. ಜನಪಟ್ಟಣಿಯ ನಗರ ಪ್ರದೇಶಗಳಲ್ಲಿ ಸಣ್ಣ ಉದ್ದಿಮೆಗಳೂ ಬೆಳೆದಿದ್ದರೆ, ಅವನ್ನು ಈ ಕ್ಷೇತ್ರಕ್ಕೆ ಸೇರಿಸಲಾಗಿದೆ. ಇದು ನಗರದ ಹೊಲಸನ್ನು ದೂರೀಕರಿಸುವುದರಲ್ಲಿಯೂ ಕೂಲಿಗಾರರಿಗೆ ಉತ್ತಮ ವಾತಾವರಣವನ್ನೊದಗಿಸುವಲ್ಲಿಯೂ ವಿಪುಲ ಸಹಕಾರಿಯಾಗಿದೆ. ಇಂತಹ ಕೇಂದ್ರಗಳಲ್ಲಿನ ಕೈಗಾರಿಕೋದ್ಯಮದಲ್ಲಿ ಯುವಕರ್ಮಚಾರಿಗಳಿಗೆ ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕೂ ಇದು ನೆರವಾಗುತ್ತದೆ. ಆದ್ದೂ, ಎಲ್ಲವುಗಳಿಂದ ಹೆಚ್ಚಾಗಿ, ಈ ಔದ್ಯಮಿಕ ಕ್ಷೇತ್ರಗಳ ನಿರ್ಮಾಣವು ಸಣ್ಣ ಉದ್ದಿಮೆಗಳ ಅಭಿವೃದ್ಧಿಯನ್ನು ಧಾರಾಳವಾಗಿ ಮಾಡುವುದೆಂಬುದು ನಿರ್ವಿವಾದವಾಗಿದೆ. ಎಂತಲೇ, ಭಾರತದಲ್ಲಿ ಇಂತಹ ಹಲವಾರು ಕ್ಷೇತ್ರಗಳು ಸ್ಥಾಪನೆ ಹೊಂದಬೇಕು; ಆಗಲೇ ನಮ್ಮ ನಿರುದ್ಯೋಗ ಪ್ರಶ್ನೆಯು ದೂರವಾಗಿ, ಆರ್ಥಿಕ ಸ್ಥಿತಿಗತಿಗಳು ಉನ್ನತವಾಗುವುವು.

(ಪ್ರಧಾನಿ ನೆಹರೂ ಭಾರತದ ಹಿರಿಯ ಉದ್ದಿಮೆಗಳ ವಾರ್ಷಿಕಾಂಕಕ್ಕೆತ್ತ ಸಂದೇಶದಿಂದ.)

ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅನಿವಾರ್ಯ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೆ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-

(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಥಾಪಕರು: **ಪಾ ಕಂಪೆನಿ, ಮಂಗಳೂರು—1.**

ಭೂ ವಿಜ್ಞಾನ

...ಸ್ನ ತೆದಿದು. ಬೇಸಾಯ
...ಲವು ವಿಧದಿಂದ ಸಹಾಯ
...ಸೂ ತಮ್ಮ ಜೀವನ ಮಟ್ಟವನ್ನು
...ಸ್ತೂ ಮತ್ತೂ ಇವರು ಸುಧಾರಿಸಲಿತ್ತಿ
ಸುತ್ತಿದ್ದಾರೆ. ಅದೇನೆಂದರೆ ಬೇಸಾಯ
ಗಾರರಿಗೆ ವರುಷವೊಂದರಲ್ಲಿ ತಿಂಗಳಾರೇ
ಕೆಲಸ. ಉಳಿದ ತಿಂಗಳನ್ನು ಅವರು ನೀರಿ
ನಂತೆ ವ್ಯಯಿಸುತ್ತಾರೆ. ಇದರಿಂದ ಅವ
ರಿಗೆ ತಿಳಿದಿರುವ ಸಮಯದ ಬೆಲೆ ವ್ಯಕ್ತ
ಗೊಳ್ಳುತ್ತದೆ.

ಸಮಯ ಕಳೆದುಕೊಂಡರೆ,ಎಲ್ಲವನ್ನೂ
ಕಳೆದು ಕೊಂಡಂತೆ ಎಂದು ಸ್ವಾಮೀ ವಿ
ವೇಕಾನಂದರು ಸಮಯದ ಬೆಲೆ ತಿಳಿಸಿ
ರುವರು. ಹೀಗೆ ಬೇಸಾಯಗಾರರು ಸಮ
ಯವನ್ನು ಹಾಳುಗೆಡಹುವುದನ್ನು ಕಂಡು,
ನೋಡು ಅವರಿಗೆ ಸಮಯದ ಬೆಲೆ ತಿಳಿ
ಸುತ್ತಾರೆ. ಆ ಸಮಯವನ್ನು ಅವರು
ಕೋಳಿ ಜೂಜಿಗಾಗಿ ಕಂಬಳಕ್ಕಾಗಿ ವಿನಿ
ಸಲಾಗಿಡ ತ್ತಾರೆ ಎಂಬ ಮಾತು ಬಲ್ಲವ
ರದು. ಆ ನಿಯಮಗಳನ್ನು ಮುಂದು
ಕೋಳಿ ಸಾಕಣೆ, ಜೇನು ನೊಣ ವ್ಯವಸಾ
ಯ, ವಿವಿಧ ಕೈಗಾರಿಕೆಗಳನ್ನು ತೊಡಗಿ
ಸಲು ಬೇಳಿಯವರು. ಕೈಕೆಸರಾದರೆ ಬಾ
ಯಿ ಮೊಸರೆಂದು ಪ್ರಾಯಶಃ ಸಮಾಜ
ವಿಕಾಸ ಯೋಜನಾ ನಿರ್ಮಾತರಿಗೆ ತಿಳಿ
ದಿರಬೇಕು. ಬಿಡು ಸಮಯದಲ್ಲಿ ರೈತರು
ಹತ್ತಿಗಿದ ಬೆಳೆಸಿ, ನೂಲು ತೆಗೆದು, ಗರ
ಗರಗರ ಚರಕ ತಿರುಗಿಸಿ ಖಾದಿಯು ನುಡಿ
ದಿರುವ ಬಾಪು' ಎಂಬ ಗಾಂಧಿಯ ಆಸೆ
ಯು ಈಡೇರುವುದು. ಒಟ್ಟಿಗಾಗಿ ಪರದೇಶವನ್ನು
ಹೊಂದಿರದೆ, ಸ್ವಾವಲಂಬಿಯಾಗಿರಬ
ಹುದು

ಮತ್ತೊಂದು ಮರೆತ ವಿಷಯ! ಹೀಗೆ
ಎಲ್ಲಾ ಕಾರ್ಯಕಲಾಪಗಳನ್ನು ನಿರ್ವಹಿಸಲು
ಸ. ವಿ ಯೋ ಗಳಿಗೆ ಬೇಕಾದ ಹಣ ಎ
ಲ್ಲಿಂದ ಬರುತ್ತದೆ? ಅವರು ಹೊಸ ಹೊಸ
ವಿಕ್ಷಣಾಲಯ ತೆರೆದಿರುತ್ತಾರೆ, ಬೇಸಾಯ
ಗಾರರಿಗೆ ಬೇಕಾದ ಸಲಕರಣೆ ದಯಪಾ
ಲಿಸಿರುತ್ತಾರೆ ಇವಕ್ಕೆ ಹಣ ಬೇಡವೆ?ಹಣ
ವಿಲ್ಲದಿದ್ದರೆ ನಡೆವ ಕಾರ್ಯವಾದರೂ ಅದಾ
ವುದು? "ಹಣವೊಂದಿದ್ದರೆ ಎಲ್ಲಾ ಇದೆ
ತಾನೆ?"

ಈ ರೀತಿಯ ಹೆಣದ ಒಂದಂಶವು—
ಸಂಯುಕ್ತ ರಾಷ್ಟ್ರ ಸರಕಾರದಿಂದಲೂ,
ಇನ್ನೊಂದಂಶ ಭಾರತದ ಕೇಂದ್ರ ಸರಕಾ
ರದಿಂದಲೂ,ಮತ್ತೊಂದಂಶ ನಮ್ಮರಾಜ್ಯ
ಸರಕಾರದಿಂದಲೂ, ಮಗದೊಂದಂಶ ಆಲ್ಲಿನ
ಊರ ಪ್ರಮುಖರಿಂದಲೂ ಬರಬ
ಲ್ಲದು.

ಪ್ರಧಾನಮಂತ್ರಿ ನೆಹರೂರವರು ಕೆನಡದ ಮಕ್ಕಳಿಗೆ 'ಆಂಬಿಕಾ' ಎಂಬ ಆನೆಯನ್ನು ಉಡುಗೊರೆ ಕೊಟ್ಟಿದ್ದರು ಆ ಆನೆಯನ್ನೂ ಕೊಟ್ಟಿ ಬಂದರವನ್ನೂ ಇಲ್ಲಿ ಕಾಣ ಬಹುದು.

ವಿನೋದ ವಿಹಾರ

ಓದುವಿರಾದರೆ ನಕ್ಕುನಲಿಯ ಬಹುದು!

ಪಕೇಲ: ಈಗ ನಾನು ನಿನ್ನ ವರವಾಗಿ ವಾದ ಮಾಡಿದರೆ, ನನಗೆ ಏನನ್ನು ಕೊಡುವೆ?

ಅಂತೂ ಸ. ವಿ. ಯೋ.ಗಳ ಉಚ್ಚಿ ಧ್ಯೇಯವೆಂದರೆ ಜನರು ತಮ್ಮನ್ನು ತಾವೇ ಸುಧಾರಿಸಿಕೊಂಡು ತಮ್ಮ ದೇಶವನ್ನು ಉದ್ಧಾರ ಮಾಡುವಂತಹದಾಗಿದೆ. ಇಂತಹ ಯೋಗ್ಯ, ಸಯೋಗ್ಯ, ಯೋ ಜನೆಗಳಿಗಾಗಿ ನಾವು ತನು ಮನವೆ, ಪಿ ಹೋರಾತ್ರಿ ದುಡಿದು ನಮ್ಮ ದೇಶೋ ದ್ಧಾರ ಕಾರ್ಯಕ್ಕೆ ಕೈಗೊಡೋಣ! ಅಂತೂ ಸ. ವಿ. ಯೋ.ಗಳು ತಮ್ಮ ಗುರಿಯನ್ನು ಮೊದಲೆಂದಂತೆ ಗಾಂಧಿಗಿರಿಯಲ್ಲಿ ಸಾಧಿಸಬಲ್ಲುದೆಂಬ ಅಚಲಶ್ರದ್ಧೆ ವಾಚಕರಂತೆ ನನಗೂ ಇದೆ.

—ಕೆ. ರಮೇಶ ಪೈ, ಉಡುಪಿ.

ಅಪಾದಿತ: ನೋಡಿ ಸ್ವಾಮಿ ನಾನು ಬಡವನಾದರೂ ನನ್ನ ಹೆಣ್ತಿರವಿರುವ ಎಂಮ ಚಿನ್ನದ ಸರವನ್ನು ನಿಮಗೆ ಕೊಡುತ್ತೇನೆ.

ಪಕೇಲ: ಇರಲಿ, ಈಗ ನಿನ್ನ ಮೇಲಿರುವ ಲಕ್ಷತನದ ಅಪಾದನೆಯು ಯಾವುದರ ಮೇಲೆ?

ಅಪಾದಿತ: ಅದೇ ಸ್ವಾಮಿ, ಅದೇ ಚಿನ್ನದ ಸರದ ಮೇಲೆ!"

ಂ ಂ ಂ

ಗೋವಿಂದ. ಬಾರೋ ರಾಮೂ,ಕೈಕೇ ಟ್ ಆಡೋಣ.

ರಾಮು: ಅಯ್ಯೋ, ಬೇಡ ಕಣೋ, ನನ್ ಕೈಲಿ ಓಡೋಕೆ ಆಗೋಲ್ಲ.

ಗೋವಿಂದ:ಕೈನಲ್ಲಿ ಓಡಬೇಡ ಕಣೋ, ಬೆಪ್ಪು! ಕಾಲಿನಲ್ಲಿ ಓಡು.

ಂ ಂ

ಶಾಲೆಯಲ್ಲಿ ವಿಕ್ಷಣಕು:ಲೋ, ಕಿಟ್ಟಿ! ನಿನ್ನನ್ನು ಜರೆಹುಚ್ಚ'ನೆಂದು ಕರೆದೆಯಾ? ಸತ್ಯ ಹೇಳು ಇಲ್ಲದಿದ್ದರೆ ಸಿಗಿದು ಬಿಟ್ಟೀನು

ಕಿಟ್ಟ(ಮೆಲ್ಲನೆ): ಹಾ....ದು.. ಇಾ....ರ್! ವಿಕ್ಷಕ: ಭೇಷ್, ನೀನು ಸತ್ಯವನ್ನೇ ಹೇಳಿದ್ದಕ್ಕೆ ನಂತೋಷಪಡುತ್ತೇನೆ (?!)

ಂ ಂ

ನಿನಿಮಾ ಮಾಲಿಕ:ಯಾಕ್ರಿ ಗೋಡೆ ಮೇಲೆ ಉಗುಳೋದು?

ಅನಾಗರಿಕ ಪ್ರೇಕ್ಷಕ:ಕಾಣೋದಿಲ್ವೇನ್ರೀ ನೆಲದ ಮೇಲೆ ಉಗುಳಬಾರದೆಂದು ಬರೆದಿರೋದು?

ಎಚ್. ಶಾಂತರಾಜ ಐತಾಳ, ಉಡುಪಿ.

In the High Court of Mysore at Bangalore.

L P. A. (M) No 6/1958

Santhamma and others ... Appellants.

Vs.

Dasa Rai and others ... Respondents.

To

Jayarama (91st respondent)
Eliya Sangabettu village.
Mangalore Taluk, South Kanara District

TAKE NOTICE that the Hon'ble High Court of Mysore has ordered substituted service to you and you are hereby notified that the above Appeal has been admitted and will be posted for hearing in the usual course If no appearance is made on your behalf by yourself or by advocate within 30 days from the date of this publication, you will be set exparte and the above appeal will be heard and decided in your absence.

104 Bull Temple Road,
Bangalore, 4
25—11—1958

S. Ramayya Nayak,
Advocate for Appellant

ವಿಶಾಲ ಪ್ರಜಾವಾದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಕ್ಕೆ ಪ್ರತಿಫಲ ಪಡೆಯಿರಿ.

ಸಂದಿಗ್ಧ ಸಂಶೋಧನೆ

ಇದನ್ನು ನಂಬಿದರೆ ನಂಬಿ, ಬಿಟ್ಟರೆ ಬಿಡಿ

ತನ್ನನ್ನು ಇರಿದ ಘೋರಿ ಮಹಮ್ಮದನ ಸೇನೆಗೆ ಪೃಥ್ವೀರಾಜನೇ ಕಾರಣನಾದ!

ತಾರಾಯಣ ಯುದ್ಧದ ಕಾಲವದು. ತಾರಾಯಣ ಬಯಲಿನಲ್ಲಿ ಪೃಥ್ವೀ ರಾಜನ ಸೇನೆಯೂ ಘೋರಿ ಮಹಮ್ಮದನ ಸೇನೆಯೂ ವೀರಾವೇಶದಿಂದ ಒಂದನ್ನೊಂದು ಎದುರಿಸುತ್ತಿದ್ದುವು. ಬರಬರುತ್ತ ಪೃಥ್ವೀ ರಾಜನ ಸೋಲಿಗಾರಂಭವಾಯಿತು. ಘೋರಿಯದೇ ಮೇಲ್ಗೈಯಾಯಿತು. ಕೊನೆಗೆ ವೃಥ್ವೀ ರಾಜನು ಧರೆಗೊರಗಿದನು. ಘೋರಿ ಅವನ ಕಣ್ಣುಗಳೆರಡನ್ನೂ ಕೀಳಿಸಿ, ಚಿತ್ರ ವಧೆಗಾರಂಭಿಸಿದ. ಪೃಥ್ವೀ ರಾಜ ಸಾವನ್ನಪ್ಪಿರದಿದ್ದರೂ, ಜೀವಚ್ಛವದಂತಾಗಿದ್ದ.

ತನ್ಮಧ್ಯೆ ಘೋರಿಗೊಂದು ತಮಾಷೆ ನೋಡಬೇಕೆಂಬ ಮನಸ್ಸಾಯಿತು. ಪೃಥ್ವೀ ರಾಜನು, ಶಬ್ದವನ್ನು ಕೇಳಿ ಗುರಿ ಹೊಡೆಯುವುದರಲ್ಲಿ ಚತುರನಾಗಿದ್ದನೆಂಬ ವಿಷಯ ಅವನಿಗೆ ತಿಳಿದಿತ್ತು. ಹೇಗೂ ಪೃಥ್ವೀ ತನ್ನ ಜೀವನದ ಕೊನೆಯು ಹಂತದಲ್ಲಿದ್ದನು. ಅವನ ಕೊನೆಯ ಕಾಲದಲ್ಲಾದರೂ, ಒಂದು ತಮಾಷೆ ನೋಡಬೇಕೆಂದು ಘೋರಿ ಸಂಕಲ್ಪಿಸಿದ, ಹಾಗೂ ತನ್ನ ಉಭಲಾಷೆಯನ್ನು ಪೃಥ್ವೀಗೆ ತಿಳಿಸಿದ. ಪೃಥ್ವೀ ರಾಜನು ಕೂಡ ಇದನ್ನೆಲ್ಲಗಳೆಯದೇ, ತನ್ನೊಡನೆಯೇ ಮೃತ್ಯು ಶಯ್ಯೆಯಲ್ಲಿದ್ದ ಇನ್ನೋರ್ವ ಸಂಗಡಿಗ ಯೋಧನನ್ನು ತನ್ನನ್ನು ಘೋರಿಯ ಆ ನಿಷ್ಠುರ ಕೈ ಕರೆದುಕೊಂಡು ಹೋಗುವಂತೆ ಕೇಳಿಕೊಂಡನು.

ಪೃಥ್ವೀರಾಜನ ಶಾರ್ಯವನ್ನು ಕಣ್ಣಾರೆ ಕಾಣಬೇಕೆಂದು ಕುತೂಹಲಿಗಳಾಗಿದ್ದ ಪ್ರಜೆಗಳೆಲ್ಲರೂ ಆ ಸ್ಥಾನದಲ್ಲಿ ಕಿಕ್ಕಿರಿದು ನೆರೆದಿದ್ದರು. ಘೋರಿ ಸಿಂಹಾಸನದಲ್ಲಿ ಸುಖಾಸೀನನಾಗಿದ್ದ. ಅವನೆದುರು, ಮೇಲ್ಗಡೆಯಲ್ಲಿ ಒಂದು ಗಂಟೆಯನ್ನು ತೂಗಾಡಿಸಲಾಗಿತ್ತು. ಆದನ್ನು ಬಾರಿಸಿದಾಗ ಆದರ ಶಬ್ದವನ್ನು ಕೇಳಿಯೇ ಅದರೆಡೆಗೆ ಗುರಿಯಿಡಬೇಕೆಂದು ಘೋರಿಯ ಆಜ್ಞೆ. ಕೆಲ ಸಮಯದಲ್ಲೇ ಕಪ್ಪು ಮಿಶ್ರ ನೊಡನೆ ಪೃಥ್ವೀರಾಜನ ಆಗಮನವಾಯಿತು. ನಿರ್ದಿಷ್ಟ ಸ್ಥಳದಲ್ಲಿ ಇವನನ್ನು ನಿಲ್ಲಿಸಿ, ಗಂಟೆ ಬಾರಿಸುವಂತೆ ಘೋರಿ ಸೇವಕರಿಗಾಜ್ಞಾಪಿಸಿದ್ದನು. ಕೂಡಲೇ ಗಂಟಾನಿನಾದವಾಯಿತು. ಶಬ್ದ ಕೇಳಿದೊಡನೆಯೇ ಅದು ಕೇಳಿಸಿದೆಡೆಗೆ ಪೃಥ್ವೀರಾಜನು ಬಲವಾಗಿ ಜೂರಿಯನ್ನೊಗೆದನು. ಹೊಡೆತ ತಾಳಲಾರದೆ ಗಂಟೆ ಜೂರು ಚೂರಾಗಿ ನೆಲದ ಮೇಲೆ ಬಿತ್ತು. ಇದನ್ನು ನೋಡಿದ ಘೋರಿಯು ಆನಂದ ಪರವಶತೆಯಿಂದ ಭಾವೋದ್ರಿಕ್ತನಾಗಿ "ಶಹಭಾಸ್" ಎಂದು ಕೂಗಿದನು. ಕೂಡಲೇ ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಇನ್ನೊಂದು ಜೂರಿಯನ್ನು ಪೃಥ್ವೀರಾಜನು "ಶಹಭಾಸ್" ಶಬ್ದ ಕೇಲಬಂದೆಡೆಗೆ ಬಲವಾಗಿ ಎಸೆದನು. ಅದು ಕೂಡಲೇ ಘೋರಿಯ ದೇಹ ಪ್ರವೇಶ ಮಾಡಿ, ಅವನದನ್ನು ತಾಳಲಾರದೇ ಅಲ್ಲೇ ಗತಪ್ರಾಣನಾದನು. ಮಿತ್ರಬ್ಬರೂ ಮೊದಲೇ ನಿಶ್ಚಿತವಾದಂತೆ ಒಬ್ಬರನ್ನೊಬ್ಬರು ಇರಿದುಕೊಂಡು ಅಲ್ಲೇ ಸತ್ತು ಬಿದ್ದರು. ಅಂತೂ ಪೃಥ್ವೀರಾಜನು ಘೋರಿಯಿಂದ ನೋತರೂ, ಘೋರಿಯ ಪ್ರಾಣಾಪಹರಣ ಯಶಸ್ವಿಯಾಗಿ ನಡೆಯಿತು.

—ಎನ್ವಿ. ರಘುನಂದನ ರಾವ್,
ತಲ್ಲೂರು.

ಕಥಾ ವಿಹಾರ

(೩ನೇ ಪುಟದಿಂದ)

ನ್ನಿಯನ್ನು ಸಾಕುವುದಕ್ಕೆ ನಾನು ಎಷ್ಟು ಕಷ್ಟಪಟ್ಟಿಲ್ಲ! ಎಂದೂ ಇಂತಹ ಪಾಪ ಕೃತ್ಯವನ್ನೆಸಗದ ಕುಟುಂಬದಲ್ಲಿ ಜನಿಸಿದ ನಾನು ಮಗನನ್ನು ಕೊಂದು ಏನು ಪುಣ್ಯ ಕಟ್ಟಿಕೊಳ್ಳಲಿ? ಪುಣ್ಯವೆ.....? ಮನೆತನದ ಮರ್ಯಾದೆ ಉಳಿಸಿದ ಹಾಗಾಗಲಿಕ್ಕಿಲ್ಲನೆ? ...ಇಲ್ಲ ...ಇಲ್ಲ, ಎಲ್ಲಾದರೂ ಎಂತಾದರೂ ಆತನ ಈ ಲೋಕದಲ್ಲಿರಲಿ. ನಾನೇ ....." ಎಂದು ರಭಸವಾಗಿ ರಾಯರು ಹುಚ್ಚರಂತೆ ಎಲ್ಲಿಗೋ ಓಡಿ ಹೋದರು.

ಎರಡು ದಿನಗಳ ಆನಂತರ ಅವರ ಅರ್ಧ ಮೈನು ತಿಂದ ಶವವನ್ನು ಊರವರು ತಂದು ಬಹು ವಿಜೃಂಭಣೆಯಿಂದ ಸಂಸ್ಕರಿಸಿದರು.

—ಕೆ. ದಾಮೋದರ ಐತಾಳ, ಉಡುಪಿ.

(ಮರಾಠಿ ಕತೆಯೊಂದರ ಆಧಾರದಿಂದ).

ಉತ್ತರ ಇಂಡಿಯಾ ೬೦ ತೀರ್ಥ ಯಾತ್ರೆಗಳಿಗೆ ಹಾಗೂ ಮಹಾಶಿವರಾತ್ರಿ-ಮಹೋತ್ಸವಕ್ಕೆ- ಭೂಕೈಲಾಸ ಶ್ರೀ ಕಾಶೀಕ್ಷೇತ್ರದಲ್ಲಿ ಮುಕ್ಕಾಮ್-

ರೈತರಿಗೆ ಅರ್ಧ ಚಾರ್ಜು ಕೇವಲ ೧೦೦ ರೂಪಾಯಿ

ಮೈಸೂರು ಸರಕಾರದ ಪ್ರತಿನಿಧಿಗಳಾಗಿ ಅತ್ಯಂತ ಸುಲಭ ದರದಲ್ಲಿ ಒಳ್ಳೇ ಸುಖಕರವಾದ ಪ್ರವಾಸ:—

[ಪ್ಯಾರಿಸ್ ಸೋಮನಾಥಕ್ಕೂ ಹೋಗಿ ಬರುವದು]

೫೦ ಜನರ ಸ್ಪೆಶಲ್ ಟ್ರೇನ್

ಶ್ರೀ ಕಾಶೀ, ಗಯಾ, ಸಮೇತಶಿಖರ ದಿಲ್ಲಿ, ಹರಿದ್ವಾರ, ಆಗ್ರಾ, ಮಥುರಾ, ಮುಂಬಯಿ ಮೊದಲಾದ ಅನೇಕ ೬೦ ತೀರ್ಥಯಾತ್ರೆಗೆ ಬರತಕ್ಕವರು ಶ್ವರಿ ಮಾಡಿರಿ. ಪೂರ್ಣ ಮಾಹಿತಿ ಜಾಹೀರಾತು ನೋಡಿರಿ. ಲಗತ್ತ ೩ ಆಣೆ ತಿಕೀಟ ಕಳಿಸಿರಿ—ವಿವರಗಳಿಗೆ—

ಶ್ರೀ ಶಿವಾನಂದ ಯಾತ್ರಾ ಕಂಪನಿ, ಬನಹಟ್ಟಿ,

ಸೌಥ್ ಬನಹಟ್ಟಿ. (ಜಿ. ವಿಜಾಪೂರ)

ಆದರ್ಶ ಕೃತಿ

ಯಾವ ಹುಲು ಮಾನವನ ಆಜ್ಞೆಗೂ ತಲೆಬಾಗಬಾರದು

ಅತ್ಯುತ್ತಮ ಹಾಗೂ ಆದರ್ಶ ಕೃತಿಗಳ ಗುಟ್ಟು ಇದೇ ಆಗಿರುತ್ತದೆ

ಎಲ್ಲ ಸಂಗೀತ ಕೃತಿಗಳಲ್ಲೂ ಒಂದು ಮಾತ್ರ ಬಹು ಮುಖ್ಯ. ಪದ, ಭಾವ, ರಾಗ ಮತ್ತು ಪದಗತಿ ಇವೇ ಮೊದಲಾದುವುಗಳ ಯೋಗ್ಯ ಸಂಯೋಜನೆ ಸಾಧ್ಯವಾದರೆ ಮಾತ್ರ ಒಂದು ಉತ್ತಮ ಕೃತಿ ಹುಟ್ಟುತ್ತದೆ. ಒಂದಕ್ಕೊಂದು ಪೂರಕವಾಗಿ ಮತ್ತು ಪೋಷಕವಾಗಿ ಇವು ಸೈವೆತ್ತು ನಿಲ್ಲಬೇಕು. ಮನುಷ್ಯನ ಮನಸ್ಸಿನ ಪೇಲೆ ಆಗ ಮಾತ್ರ ಅದು ಪರಿಣಾಮಕಾರಿಯಾಗಿ ಅವನಿಗೊಂದು ಉಚ್ಚ ಸಂಸ್ಕಾರ ಕೊಡುತ್ತದೆ. ಪ್ರತಿಯೊಂದೂ ರಾಗಕ್ಕೂ ತನ್ನದೇ ಆದ ಒಂದು ಭಾವಲಕ್ಷಣವಿದೆ. ಹಾಡಿನ ಭಾವನೆಗನುಸರಿಸಿ ರಾಗದ ಆಯ್ಕೆ ಮಾಡಿಯುತ್ತದೆ.

ಲಯಭಾವವೆಂದು ಇದೆಯೆಂಬುದನ್ನು ಜನ ಅನೇಕ ವೇಳೆ ಮರೆಯುತ್ತಾರೆ. ಇದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಕೃತಿಯ ಮಾಧುರ್ಯ ಮಾಸ್ಪಡುತ್ತದೆ. ಕೆಲವು ಗೀತೆಗಳನ್ನು ಕ್ಷೀಣಗತಿಯಲ್ಲೇ ಹಾಡಬೇಕು, ಕೆಲವನ್ನು ತ್ವರಿತಗತಿಯಲ್ಲೇ ಹಾಡಬೇಕಾಗುತ್ತದೆ. ಪ್ರತಿಯೊಂದು ಸಂಗೀತ ಕೃತಿಗೂ ಕಾಲ ಪ್ರಮಾಣ ವೆಂಬ ಒಂದು ನಿರ್ದಿಷ್ಟ ಗತಿ ಇದೆ. ನಮ್ಮ ಕೆಲವು ಸಂಗೀತಗಾರರು ಈ ಅಂಶಕ್ಕೆ ಅಷ್ಟಾಗಿ ಗಮನ ಕೊಟ್ಟಿಲ್ಲ.

ಸಂಗೀತ ಕೃತಿ ರಚಿಸುವವನು ಮಾತ್ರ ಸ್ವತಃ ಸಂಗೀತಗಾರನೇ ಆಗಿರಬೇಕು. ಇದು ನಿರ್ವಿವಾದ. ಆದರೆ ಒನ್ಮೊಮ್ಮೆ ಹೀಗೂ ನಡೆಯುತ್ತದೆ: ಸಾಹಿತ್ಯ ವಿದ್ವಾಂಸನೊಬ್ಬನು ಕೃತಿ ರಚಿಸುತ್ತಾನೆ. ಬೇರೆ ಯಾರಾದರೋ ಅದಕ್ಕೊಂದು ರಾಗ ಒದಗಿಸುತ್ತಾರೆ. ಹಿಂದಿನ ಕಾಲದಲ್ಲಿ ಯಾರೋ ಸಂಗೀತಗಾರರೊಬ್ಬರು ಕೃತಿ ರಚಿಸಿ ಇಟ್ಟದ್ದು ಅದರ ರಾಗ ತಿಳಿಯದೆ ಇರುವ ಪರಿಸ್ಥಿತಿಯಲ್ಲಿ ವಿಖ್ಯಾತ ಸಂಗೀತಗಾರರೊಬ್ಬರು ಆ ಉತ್ತಮ ಸಾಹಿತ್ಯವನ್ನು ಒಂದಲ್ಲ ಒಂದು ರಾಗಕ್ಕೆ ಅಳವಡಿಸಿ ಹಾಡುವುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಆದರೆ ಸಂಗೀತಗಾರನಲ್ಲದೆ ಸಾಹಿತಿಯೊಬ್ಬನು ರಚಿಸುವ ಕೃತಿಗೆ ಇನ್ನೊಬ್ಬ ಕೃತಿ ರಚನೆ ತಿಳಿಯದೆ ಸಂಗೀತಗಾರನು ರಾಗ ಒದಗಿಸುವುದನ್ನು ಆದಷ್ಟು ಮಟ್ಟಿಗೆ ತಪ್ಪಿಸಬೇಕು. ಅವರಂತೆಯೇ ಇನ್ನೊಂದು ಪ್ರವೃತ್ತಿ ಇದೆ. ವಿಖ್ಯಾತ ಕೃತಿ ರಚನಕಾರರು ಮತ್ತು ಸ್ವತಃ ಸಂಗೀತಗಾರರಾದವರು ಇಂತಹ ಕೃತಿಯನ್ನು ಇಂತಹ ರಾಗದಲ್ಲೇ ಹಾಡಬೇಕೆಂದೂ ಗೊತ್ತುಮಾಡಿಟ್ಟಿದ್ದಾರೆ. ಇದನ್ನು ಬದಲಿಸಿ ಬೇರೆ ರಾಗದಲ್ಲಿ ಹಾಡಲು ಹೋಗುವ ಈ ಪ್ರವೃತ್ತಿಯನ್ನು ತಡೆಗಟ್ಟಬೇಕು. ಸಂಗೀತವು ಕೊಲೆ ನಡೆಯುತ್ತಿರುವ ಹತ್ತಾರು ನಿದರ್ಶನಗಳನ್ನು ನಾನಿಲ್ಲಿ ತಿಳಿಸಬಲ್ಲೆ. ಕೆಲವು ಸಂದರ್ಭಗಳಲ್ಲಂತೂ ಅಂತಹ ಪರಿವರ್ತನೆ ತುಂಬಾ ಅನಿವಾರ್ಯವೆಂದು ನಾನಿಲ್ಲಿ ತಿಳಿಸಬಯಸುತ್ತೇನೆ.

ಕೃತಿ ರಚನೆಗೆ ಮುಖ್ಯವಾಗಿ ಸಂಸ್ಕೃತಿ, ಅದಕ್ಕೇ ಬೇಕಾದಂಥ ಮನೋಧರ್ಮ ಬೇಕು. ಕೇವಲ ಒಬ್ಬರ ಮರ್ಜಿಗಾಗಿಯೇ ತಯಾರಾಗುವ ಕೃತಿ ಶುದ್ಧ ಕೃತಿಯಾಗಲಾರದು ಮತ್ತು ಶ್ರೋತೃವಿನ ಹೃದಯವನ್ನು ಮುಟ್ಟಲಾರದು. ಯಾವ ಕೃತಿಯಿಂದ ಈ ಅಂತಿಮ ಉದ್ದೇಶ ಸಾಧ್ಯವಾಗುವುದಿಲ್ಲವೋ ಅದು ನಿಜವಾದ ಕಲಾಕೃತಿಯಾಗದು.

ಹೊಗಳಿ ಕೀರ್ತನೆ ಬರೆಯಿರಿ ಎಂಬ ಸೂಚನೆ ತ್ಯಾಗರಾಜರೇ ಮೊದಲಾದ ಹೆಸರಾಂತ ಕೃತಿ ರಚನಕಾರರಿಗೆ ಬಂದಾಗ ಅವರು ಅಂತಹ ಸೂಚನೆಯನ್ನು ತಿರಸ್ಕರಿಸಿದರು. ತ್ಯಾಗರಾಜರು ತಂಜಾವೂರಿನ ರಾಜನ ಅಂತಹ ಬೇಡಿಕೆಯನ್ನೇ ಹುಟ್ಟೀ ಕರಿಸಿದರು. ಮೈಸೂರು ಸಂಗೀತಗಾರ ತಾನ್‌ಸೇನನ ಗುರು ಹರಿದಾಸ ಸ್ವಾಮಿಯು ಪರಿ ಸಂಗೀತ ಕಲೆಯು ಪ್ರತಿಭೆಗೆ ಚಕ್ರವರ್ತಿ ಸಾರ್ವಭೌಮನಾದ ಅಕ್ಬರನು ಹೇಗೆ ಮರುಳಾಗಿ ಹೋದನು ಎಂಬುದು ನಮಗೆ ತಿಳಿಯದ ವಿಷಯವಲ್ಲ. ಹರಿದಾಸ ಸ್ವಾಮಿಯವರು ಇಂತಹ ತನ್ಮಯಗೊಳಿಸುವಂತಹ ದೈವಿಕ ಸಂಗೀತವನ್ನು ಹೇಗೆ ತಾನೇ ಹಾಡುತ್ತಾರೆ ಎಂದು ವಿಸ್ಮಯದಿಂದ ಅಕ್ಬರನು ಕೇಳಿದಾಗ, ತಾನ್‌ಸೇನ್ ಕೊಟ್ಟ ಉತ್ತರವಾವನೂ ಇಷ್ಟೆ "ಇದರ ಗುಟ್ಟು ಇಷ್ಟೇ ಮಹಾ ಸ್ವಾಮಿ, ಅವರು ಯಾವನೊಬ್ಬ ಹುಲು ಮಾನವನ ಆಜ್ಞೆಗೆ ತಲೆಬಾಗಿ ಹಾಡುವುದಿಲ್ಲ."

ಶ್ರೀರ್ತಿ ಮತ್ತು ಮನೋಧರ್ಮ ಇವುಗಳಿಂದ ಉಗಮಿಸಿದ ಅತ್ಯುಚ್ಚ ಸಂಗೀತ ಕೃತಿಗಳ ಗುಟ್ಟಾವರೂ ಇದೇ ಆಗಿದೆ.

— ಪ್ರೊ. ಶ್ರೀನಿವಾಸನ್.



ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

NAVAYUGA
REGD. NO. M. 3619

UDIPI, THURSDAY
4—12—1958

LICENSE NO. 31
Licensed to Post without Prepayment

ಅಧಿಕೋತ್ಪತ್ತಿ

ಹೆಚ್ಚು ಬೆಳೆತೆಗೆದ ಭಾರತೀಯ ರೈತರು

ಅವರು ಕೆಲವು ಕ್ಷೇತ್ರಗಳಲ್ಲಿ ವಿಶ್ವ ದಾಖಲೆಯನ್ನೂ ನಿರ್ಮಿಸಿರುವರು

ಸುಧೀಂದ್ರು ನಾರಾಯಣ್ ಸರ್ಕಾರ್ ಪಶ್ಚಿಮ ಬಂಗಾಳದ ಬಂಗಾವ್ ಗ್ರಾಮದ ಒಬ್ಬ ರೈತ; ಆತನಿಗೆ ತನ್ನದೇ ಆದ ಒಂದಿಷ್ಟು ಭೂಮಿ ಇದೆ. ಹಿಂದೆ ಬೆಳೆಯಾಗದೆ ಪಾಳು ಬಿದ್ದಿದ್ದ ಆ ಭೂಮಿಯನ್ನು ಕಳೆದ ನಾಲ್ಕು ವರ್ಷಗಳಲ್ಲಿ ಆತ ಆಬಾದು ಮಾಡಿ ಒಳ್ಳೆ ಫಸಲು ಕೊಡುವ ಸ್ಥಿತಿಗೆ ತಂದಿದ್ದಾನೆ. ಕಳೆದ ವರ್ಷ ಈ ಭೂಮಿಯಲ್ಲಿ ಆತ ಬೆಳೆದ ಭತ್ತದ ಬೆಳೆ ಸ್ವಮಾಣ ಎಕರೆಗೆ ೫೭ ಮಣ! ಭಾರತದಲ್ಲಿ ಭತ್ತದ ಬೆಳೆ ಸರಾಸರಿ ಆಗುತ್ತಿರುವುದು ಎಕರೆಯೊಂದಕ್ಕೆ ಕೇವಲ ೧೫ ಮಣ; ಜಪಾನಿನಲ್ಲಿ ಎಕರೆಯೊಂದಕ್ಕೆ ೪೭ ಮಣ ಭತ್ತ ಬೆಳೆಯುವ ದಾಖಲೆ ಇದೆ.

ಒಮ್ಮೆ ಪಾಳು ಭೂಮಿಯೆನಿಸಿದ್ದ ಪ್ರದೇಶದಲ್ಲಿ ಎಕರೆಯೊಂದಕ್ಕೆ ೫೭ ಮಣದಷ್ಟು ಭತ್ತ ಬೆಳೆಯಲು ಸುಧೀಂದ್ರ ನಾರಾಯಣ್ ಸರ್ಕಾರ್‌ಗೆ ಹೇಗೆ ಸಾಧ್ಯವಾಯಿತೆಂಬುದು ಸದ್ಯದ ಪ್ರಶ್ನೆ.

ಪಾಳು ಬಿದ್ದಿದ್ದ ಭೂಮಿಯನ್ನು ಮೊದಲು ಫಲಕಾರಿ ಯೋಗ್ಯ ಭೂಮಿಯನ್ನಾಗಿ ಮಾಡುವುದು ಅತ್ಯಾವಶ್ಯಕವಾಗಿತ್ತು. ಒಂದು ಹದ ವ.ಳೆ ಬಿದ್ದ ಕೂಡಲೇ ಭೂಮಿಯನ್ನು ಉಳುವ ಕಾರ್ಯ ಆರಂಭವಾಯಿತು. ಈ ಕಾರ್ಯ ಆರು ಹದ ನಡೆಯಿತು. ಬಿತ್ತನೆಗೆ ಒಂದು ವಾರ ಇರುವಾಗ ಸೀಮೆ ಗೊಬ್ಬರ (ಉಪ್ಪು)ವನ್ನು ಭೂಮಿಗೆಲ್ಲ ಹಾಕಲಾಯಿತು. ಈ ರೈತ ಬೇಸಾಯ ಕಾರ್ಯದಲ್ಲಿ ತೊಡಗುತ್ತಿದ್ದ ಆ ಶಕ್ತಿಯನ್ನು ಕಂಡ ಎಸ್ತರಣಾ ಕೇಂದ್ರದ ಅಧಿಕಾರಿಗಳು ಅವನ ಭೂಮಿ ಇರುವ ಕಡೆಯೇ ಪ್ರಯೋಗ ಪ್ರದರ್ಶನ ಕೇಂದ್ರವೊಂದನ್ನು ತೆರೆದರು.

ಮಧ್ಯ ಪ್ರದೇಶದ ಚಂಪಾರಿಯ ಎಂಬ ಗ್ರಾಮದಲ್ಲಿ ಓಂಕಾರ್ ಪ್ರಸಾದ್ ಶುಕ್ಲಾ ಎಂಬ ಒಬ್ಬ ರೈತ ಸಹ ಅದೇ ರೀತಿಯ ಸಮಸ್ಯೆಗಳನ್ನು ಎದುರಿಸಿ ತನ್ನ ಭೂಮಿಯನ್ನು ಫಲವತ್ತಾಗಿ ಮಾಡಿದ ಕಥೆ ಇನ್ನೊಂದು. ತನ್ನ ಹಿರಿಯರು ಬಿಟ್ಟು ಹೋಗಿದ್ದ ಭೂಮಿ ಐವತ್ತು ವರ್ಷಗಳಿಂದಲೂ ಪಾಳು ಬಿದ್ದಿತ್ತು. ಈ ಮಣ್ಣಿನಲ್ಲಿ ಸತ್ವವೇ ಇಂಗಿಲ್ಲ. ಹಕ್ಕದಲ್ಲಿಯೇ ಇದ್ದ ನಾಲೆ ಮಣ್ಣಿನ ಸವತೆಕ್ಕೆ ಕಾರಣವಾಗಿತ್ತು. ಈ ಪ್ರದೇಶವನ್ನು ಬೇಸಾಯಕ್ಕೆ ಸಿದ್ಧಗೊಳಿಸಬೇಕೆಂಬ ಮನಸ್ಸಾಗಿ ಆತ ಕೆಲವು ವರ್ಷಗಳ ಹಿಂದೆ ಅದಕ್ಕೆ ಕೈಹಾಕಿದ. ಆತ ಕೈಗೊಂಡ ಒಂದೊಂದೇ ಕ್ರಮದಿಂದ ಈ ಕಾರ್ಯ ಕೊನೆಗೂ ಸಾಧ್ಯವಾಯಿತು. ಮೊದಲು ಗೊಡ್ಡು ಮಣ್ಣಿನ ಸಂಗ್ರಹಕ್ಕೆ ವ್ಯವಸ್ಥೆ ಮಾಡಿದ; ಆನಂತರ ಹಲವು ಗಾಡಿ ಗೊಬ್ಬರ ತುಂಬಿದ. ಹೀಗೆ ಆತ ನಡೆಸಿದ ಕ್ರಮಬದ್ಧ ಫಸಲು ತೆಗೆಯುವ ಪ್ರಯತ್ನದಿಂದಾಗಿ ಆತನ ಮೊದಲ ವರ್ಷ ಇದೇ ಭೂಮಿಯಲ್ಲಿ ಆತ ಎಕರೆಗೆ ೭೯॥ ಮಣಗಳಷ್ಟು ಗೋಧಿ ಬೆಳೆಯಲು ಸಾಧ್ಯವಾಯಿತು.

ಈ ಬೆಳೆ ಪ್ರಮಾಣ ನಮ್ಮ ದೇಶದಲ್ಲಿ ಅಲ್ಲದೆ ಬೇರೆ ಕಡೆಗಳಲ್ಲಿಯೂ ಸರಾಸರಿ ಬೆಳೆ ಪ್ರಮಾಣಕ್ಕಿಂತ ನಾಲ್ಕು ಪಾಲು ಹೆಚ್ಚು!

ಜಪಾನಿನಲ್ಲಿ ಈ ಬೆಳೆಯು ಸರಾಸರಿ ಪ್ರಮಾಣ ಇರುವುದು ಎಕರೆಗೆ ೩೩-೫ ಮಣ. ಆಸ್ಟ್ರೇಲಿಯಾ, ೧೨॥ ಮಣ. ರಷ್ಯಾ, ೧೦॥ ಮಣ.

ಈ ಎಲ್ಲ ಪ್ರಮಾಣಗಳನ್ನು ಮೀರಿಸಿ ನಿಂತ ಸಾಹಸಿ ಭಾರತೀಯ ರೈತ ಓಂಕಾರ್ ಪ್ರಕಾಶ್ ಶುಕ್ಲಾನಮ! ಅಂತೆಯೇ ಆತ ಕಳೆದ ಎರಡು ಮೂರು ವರ್ಷಗಳಿಂದಲೂ ಒಂದೇ ಸಮನೆ ಗೋಧಿ ಫಸಲಿಗೆ ಬಹುಮಾನ ಪಡೆಯುತ್ತಿದ್ದಾನೆ.

ಸ್ಪರ್ಧಾ ಮನೋಭಾವದಿಂದ ಪ್ರೋತ್ಸಾಹಿತರಾಗಿ ಬೆಳೆ ತೆಗೆದಿರುವ ನಿದರ್ಶನಗಳೂ ಇವೆ. ಆಂಧ್ರ ಪ್ರದೇಶದ ಮಲ್ಯಾಜ್‌ಗಿರಿ ಗ್ರಾಮದ ರೈತ ಸರಿಸಿ ಕೊಂಡ ಮಧುಸೂದನ್ ರೆಡ್ಡಿ ಒಳ್ಳೆ ರೈತ ನೆಂದು ಖ್ಯಾತಿಗೆ ಬರಲು ಬೇಸಾಯ ಸ್ಪರ್ಧೆ ಕಾರಣವಾಯಿತು. "ಕೇವಲ ತಮಾಷೆಗೆ" ಆತ ಆಲೂಗೆಡ್ಡೆ ಬೆಳೆಯ ಸ್ಪರ್ಧೆಯಲ್ಲಿ ಭಾಗ ವಹಿಸಿದನು. ಕೊನೆಗೆ ಅವನು ಬೆಳೆದ ಫಸಲನ್ನು ನೋಡಿ ಅವನೇ ಆಶ್ಚರ್ಯವಾಯಿತು. ಆತ ಎಕರೆಯೊಂದಕ್ಕೆ ೩೨ ಮಣದಷ್ಟು ಬೆಳೆತೆಗೆದು ತುಂಬಾ ಖ್ಯಾತನಾದುದಷ್ಟೇ ಅಲ್ಲ, ಸಂಸ್ಥಾನ ವ್ಯಾಪ್ತಿಯ ಸ್ಪರ್ಧೆಯಲ್ಲಿ ಆತನೇ ಪ್ರಥಮ ಬಹುಮಾನ ಪಡೆದ. ಒಳ್ಳೆ ಗೊಬ್ಬರ ಹಾಗೂ ಸೀಮೆ ಉಪ್ಪು ಇವುಗಳಿಂದಾಗಿ ಇಷ್ಟು ಬೆಳೆ ತೆಗೆಯಲು ನನಗೆ ಸಾಧ್ಯವಾಯಿತು ಎಂದು ಹೇಳುತ್ತಾನೆ, ಈ ವಿದ್ಯಾವಂತ ರೈತ.

ಹೀಗೆ ಹೆಚ್ಚು ಬೆಳೆ ತೆಗೆಯಲು ನಿರ್ದಿಷ್ಟ ಹಾಗೂ ವ್ಯವಸ್ಥಿತ ಒಂದು ಸ್ಪರ್ಧೆಯೇ ಏರ್ಪಡಬೇಕೆಂಬ ನಿಯಮವೂ ಇಲ್ಲ. ಪಂಜಾಬಿನ ಇಬ್ಬರು ಸೋದರರು ತಾವಾಗಿಯೇ ಪೈಪೋಟಿಗೆ ನಿಂತು ಒಳ್ಳೆ ಬೆಳೆ ತೆಗೆದರು.

ಅವರ ಭೂಮಿ ಇರುವುದು ಫಿರೋಜ್‌ಪುರ್ ಜಿಲ್ಲೆಯ ಆಬೋಹರ್ ಗ್ರಾಮದಲ್ಲಿ. ಪ್ರೇಮನಾಥ್ ವಿಜಯ್ ತರಕಾರಿ ಬೆಳೆಗೆ ಕೈಹಾಕಿ ನಿಂತ; ವೇದ ಪ್ರಕಾಶ್ ವಿಜ್ ಹೆತ್ತಿ ಬೆಳೆಯಲು ನಿರ್ಧರಿಸಿದ. ಆಧುನಿಕ ವಿಧಾನಗಳನ್ನು ಅನುಸರಿಸಿ ಇಬ್ಬರೂ ಎರಡು ಮಾದರಿ ಬೇಸಾಯ ಕ್ಷೇತ್ರಗಳನ್ನೇ ನಿರ್ಮಿಸಿ ಇತರರಿಗೆ ಮಾರ್ಗದರ್ಶಕರಾಗಿದ್ದಾರೆ.

ವೈಜ್ಞಾನಿಕ ವಿಧಾನಗಳ ಸಹಾಯದಿಂದಾಗಿ ಪ್ರೇಮನಾಥ್ ಎಕರೆಯೊಂದಕ್ಕೆ ೪೦೦ ಮಣಗಳಷ್ಟು ಬದನೆಕಾಯಿ ಬೆಳೆಯುವ ಸಾಹಸ ಮಾಡಿದ್ದಾನೆ.

ಆತ ಬದನೆಕಾಯಿ ಬೆಳೆಗೆ ಕೈಹಾಕಿದಾಗ ಇದು ಸಾಧ್ಯವಾದೀತೆಂದು ಯಾರೂ ನಂಬಿರಲಿಲ್ಲ; ಆಲ್ಲಿ ಸಾಮಾನ್ಯವಾಗಿ ಎಲ್ಲರೂ ಹತ್ತಿ ಬೆಳೆ ಬೆಳೆಯುತ್ತಿದ್ದರು. ಈ ಸಂಪ್ರದಾಯವನ್ನು ಬದಿಗಿಟ್ಟು ಪ್ರೇಮನಾಥ್ ಬದನೆಕಾಯಿ ಬೆಳೆಗೆ ಕೈಹಾಕಿ ಸಾಹಸದ ಕೆಲಸ ಮಾಡಿದ. ಎಷ್ಟೋ ತರಕಾರಿ ಸಂಸ್ಥಾನದ ಬೀಜ ಕಡೆಗಳಿಂದ ಅಲ್ಲಿಗೆ ಬರುತ್ತಿದ್ದಿತು. ಅದನ್ನು ಗಮನಿಸಿ ತನ್ನ ಬದನೆಕಾಯಿ ಬೆಳೆಗೆ ಮಾರುಕಟ್ಟೆಯಲ್ಲಿ ಒಳ್ಳೆ ಬೆಲೆ ಗಿಟ್ಟುತ್ತಿದೆಯೆಂಬುದನ್ನು ಆತ ಗ್ರಹಿಸಿದ್ದ. ಅಂತೆಯೇ ಅವನ ಗುರಿಯಲ್ಲಿ ದೃಢತೆ ಇತ್ತು.

ಒಮ್ಮೊಮ್ಮೆ ಸವಾಲು ಹಾಕಿ ನಿಲ್ಲುವ ಘೋರಣಿಯೂ ಸಹ ಯಶಸ್ವಿಕವಾಗುತ್ತದೆ. ರೈತರಿಗೆ ಬೇಕಾಗುವ ಉತ್ತಮ ದರ್ಜೆಯ ಬೀಜಗಳನ್ನು ಒಗಿಸುವ ಸಮಸ್ಯೆ ಅಲಹಾಬಾದ್ ಜಿಲ್ಲೆಯಲ್ಲಿ ಕಂಡು ಬಂದು ರಾಮಚಂದ್ರ ಪಾಂಡೆ ತನ್ನ ಗ್ರಾಮದಲ್ಲಿಯೇ ಇವುಗಳನ್ನು ಬೆಳೆದುಕೊಡಲು ಸಾಧ್ಯವಾಗುತ್ತದೆಯೆಂದು ಸವಾಲು ಹಾಕಿದ. "ಈ ಗ್ರಾಮಗಳಲ್ಲಿಯೇ ಇವುಗಳನ್ನು ಬೆಳೆಸಿದರೆ ಗ್ರಾಮಕ್ಕೆ ೧೫೦೦೦ ರೂಗಳಷ್ಟು ಲಾಭವಾಗುತ್ತದೆ. ಬಿತ್ತನೆ ಬೀಜವನ್ನು ಬೆಳೆಯುವ ಈ ಕಾರ್ಯವನ್ನು ಗ್ರಾಮದ ೯೦ ಕುಟುಂಬಗಳಿಗೆ ಹಂಚಿದರೆ ಒಂದು ವರ್ಷಕ್ಕೆ ಪ್ರತಿಯೊಂದು ಕುಟುಂಬದ ಆದಾಯ ೧೫೦ ರೂ.ಗಳಷ್ಟು ಹೆಚ್ಚುತ್ತದೆ" ಎಂದು ಆತ ವಾದಿಸಿದ. ಅವನು ಗ್ರಾಮಸ್ಥರಲ್ಲಿ ತುಂಬಿದ ಹುರುಪು ನಿಜಕ್ಕೂ ಸಹಾಯಕವಾಯಿತು.

ಯಂತ್ರಗಳ ಸಹಾಯದಿಂದ ಜಮೀನು ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಲು ಬಯಸುವ ರೈತರನ್ನೂ ನಾವು ಕಾಣಬಹುದು. ಇದಕ್ಕಾಗಿ ಸಣ್ಣ ಪುಟ್ಟ ಯಂತ್ರೋಪಕರಣಗಳನ್ನು ತಾವೇ ತಯಾರಿಸಿಕೊಳ್ಳುವ ನಿದರ್ಶನಗಳೂ ಸಿಗುತ್ತವೆ.

ಸೆಗಣಿಯಿಂದ "ಗ್ಯಾಸ್"ನ್ನು ಸಂಗ್ರಹಿಸುವ ವಿಧಾನವನ್ನು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಕೆಂಡಾಗಿ ಅದು ರಾಮ ಬಕ್ಸ್ ಸಿಂಗ ಎಂಬ ರೈತನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಕಾರಿಯಾಯಿತು. ಆತನ ಊರು ಉತ್ತರ ಪ್ರದೇಶದ ಸೀತಾಪುರ ಬಳಿ ಇರುವ ಹಳ್ಳಿ ರಾಮನಗರ. ದೆಹಲಿಯ ಸಂಶೋಧನಾ ಸಂಸ್ಥೆಗೆ ಆತದೀಟಿಯತ್ತು. ಅಲ್ಲಿ ಗ್ಯಾಸ್ ತಯಾರಿಕೆ ವಿಧಾನದಲ್ಲಿ ವಿಶೇಷ ತರಬೇತಿ ಪಡೆದ. ಮುಕ್ತು ತನ್ನ ಮನೆಯಲ್ಲಿಯೇ ೨೦೦ರೂಗಳ ವೆಚ್ಚದಲ್ಲಿ ಯಂತ್ರ—ವ್ಯವಸ್ಥೆ ಮಾಡಿಕೊಂಡ. ಇದರಿಂದಾಗಿ ಅವನಿಗೆ ಎಷ್ಟೋ ಕಟ್ಟಿಗೆ ಹಾಗೂ ಎಣ್ಣೆಯ, ಉಳಿತಾಯ ಆಯಿತು, ಆವನಿಗೆ ಬೇಕಾದಷ್ಟು ಗ್ಯಾಸಿನ ತಯಾರಿಕೆಗೆ ಅವನು ಸೆಗಣಿಯನ್ನು ಹುಡುಕಿ ಕೊಂಡು ಹೋಗಬೇಕಾಗಿಲ್ಲ.!

ಸೆಗಣಿಯಿಂದ ತಯಾರಿಸಿದ ಗ್ಯಾಸಿನಿಂದ ಕೆಲವು ಮೂಡಬಹುದಾದ ಒಂದು ಹೀಟರ್ ಹಾಗೂ ಫ್ಯಾನ್‌ಗಳನ್ನು ಆತ ತಯಾರಿಸಿ ಕೊಂಡಿದ್ದಾನೆ!

ಹೀಗೆ ಗ್ಯಾಸ್ ಹೋದ ಮೇಲೂ ಸಹ ಸೆಗಣಿ ಸೆಗಣಿಯಾಗಿಯೇ ಉಳಿಯುತ್ತದೆಯಾವ ರೀತಿಯಲ್ಲೂ ಗೊಬ್ಬರ ಅಂಶಕ್ಕೆ ಲೋಪವಾಗದೆ. ಆ ದನ್ನು ಹಿಂದಿನಂತೆಯೇ ಗೊಬ್ಬರಕ್ಕಾಗಿ ಉಪಯೋಗಿಸ ಬಹುದೆಂಬ ವಿಷಯ ರಾಮ ಬಕ್ಸ್ ಸಿಂಗನಿಗೆ ಗೊತ್ತು.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ವಿತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಎಲ್ಲರಿಗೂ ಬೇಕಾಗಿದೆ.

ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬನ ಅರ್ಥಿಕ ಅನುಕೂಲತೆ ಮತ್ತು ಆವಶ್ಯಕತೆಗಳಿಗೆ ಒಪ್ಪುವ ಫಲದಾಯಕ ಯೋಜನೆಗಳು ನಮ್ಮಲ್ಲಿವೆ.

ಪಿಗ್ಮಿ ದೇವನಾತಿ ಯೋಜನೆ. ಪ್ರತಿದಿನವೂ ಉಳಿಸಬೇಕೆಂಬ ಅಪೇಕ್ಷೆಯುಳ್ಳವರಿಗೆ ಅಗತ್ಯ. ನಾಲ್ಕಾಣೆಯಷ್ಟು ಆಲ್ಪ ಮೊತ್ತದಿಂದಲೂ ಆರಂಭಿಸಬಹುದು. ಪಿಗ್ಮಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.

ಕ್ಯುಮ್ಯುಲೇಟಿವ್ ದೇವನಾತಿಗಳು ರೂಪಾಯಿ ಐದು ಆಥವಾ ಆದರ ಗುಣಕಗಳಲ್ಲಿ ಸಂಗ್ರಹಿಸಿದಲು ಉತ್ತಮ ಸಾಧನ. ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಅಕರ್ಷಕವಾಗಿದೆ.

ಲಕ್ಷ್ಮಿ ಕೇಶ ಸರ್ಟಿಫಿಕೇಟ್. ನಿಮ್ಮಲ್ಲಿರುವ ಬಂಡವಾಳಕ್ಕೆ ಲಾಭದಾಯಕ ಪ್ರತಿಫಲ ದೊರೆಯುವುದು. ಸುಪ್ತ ಧನದ ಕದ್ದಿನಯೋಗಕ್ಕೆ 'ಲಕ್ಷ್ಮಿ'ಯ ಆಹ್ವಾನ ಮನೋಹರವಾಗಿದೆ.

ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯ. ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯವು ಸಾಧವಿದೆ. ಮಾತ್ರವಲ್ಲದೆ, ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಧನ ಶಾವತಿಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ಆದರ್ಶ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್.

THE CANARA INDUSTRIAL & BANKING SYNDICATE LTD., UDIPI.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಗೋ ವಿಜಯ
(ಗೋವಿನಕಥೆ)

ಶ್ರೀ ಮುಖ್ಯಪ್ರಾಣ ಅವಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮವ್ವಕ್ಕೆ ತಾವೇ ಕತೆ, ಹಾಡು, ಅರ್ಥ ಸಂಧಾನಗಳು, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ಪೊದಲಾದವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಆವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

Edited Printed & Published by S. H. Shetty, at the Navayuga Press Udipi S. India

ನವಯುಗ

ವಾ.ಚಂದಾ ರೂ. 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ. 13 ನ.ಪೈಸೆ.

ವರುಷ ೩೮. ವಾರ ೧೪. 11-12-1958 Vol. 38 No. 14.

ಗ್ರಾಮೋದ್ಯೋಗ ವಾಣಿ

ಉತ್ತರದ ಮತ್ತು ದಕ್ಷಿಣದ ಭೂಸ್ವಾಮಿಗಳು ಸಮಾನರಲ್ಲ

ಅಲ್ಲಿ ಧರ್ಮಕ್ಕೆವರು ಭೂಮಿ ಹಡೆದಿದ್ದರೆ ಇಲ್ಲಿ ಬೆನರಬೆಲೆಯಿಂದ ಗಳಿಸಿದ್ದಾರೆ

೧೯೫೦ನೆಯ ವರ್ಷವು ದಕ್ಷಿಣದ ರಾಜ್ಯಗಳಾದ ಕೇರಳ, ಆಂಧ್ರ ಮತ್ತು ಮೈಸೂರುಗಳಲ್ಲಿ ಭೂಸುಧಾರಣೆಗಳಿಗೆ ಆಡಿಗಲ್ಲು ಹಾಕಲ್ಪಡುತ್ತಿರುವುದರಿಂದ, ಅಲ್ಲಿನ ರೈತರಿಗದೊಂದು ಪ್ರಾರಬ್ಧಕರ್ಮವಾಗಿ ಪರಿಣಮಿಸಿದೆ. ಬೊಂಬಾಯಿ ರಾಜ್ಯವು ಈ ಮೊದಲೇ ಭೂಸುಧಾರಣೆಯನ್ನು ಮಾಡಿದೆ; ಮದ್ರಾಸು ಮಾಡಲಿರುವುದರಲ್ಲಿದೆ.

ಈ ಭೂಸುಧಾರಣೆಯ ಸೂಚನೆಗಳು ಉಚಿತಾನುಭವಿ ಜನರಿಂದಲೂ ಸಾಮಾನ್ಯವಾಗಿ ಬರಹೆಗಾರರಿಂದಲೂ ಆರ್ಥಿಕ ಮತ್ತು ಸಾಮಾಜಿಕ, ಸಣ್ಣ ಪ್ರಾಸ್ತಿ ಮತ್ತು ದೊಡ್ಡ ಕಾಲಾವಧಿ, ವಿಕಾಸವಾದ ಮತ್ತು ಕ್ರಾಂತಿಕಾರ್ಯ ಮೊದಲಾದ ಎಲ್ಲ ವಿಷಯಗಳ – ದೃಷ್ಟಿಯಿಂದಲೂ ವಿಮರ್ಶಿಸಲ್ಪಡುವುದು ಪ್ರಜಾಪ್ರಭುತ್ವದ ಭವಿಷ್ಯ ಮತ್ತು ದೀರ್ಘಕಾಲ ಬಾಳುವ ಭಾರತ ಸರಕಾರಗಳಗೋಸುಗವಾಗಿಯೂ ಅತ್ಯಂತ ಪ್ರಮುಖವಾದುದು ಇದರಿಂದಲಿನ ಭವಿಕ ಮತ್ತು ವಿಚಾರಶೀಲ ವ್ಯಕ್ತಿಗಳ ಒಪ್ಪಿಗೆಯನ್ನು ಪಡೆಯಲುಸಾಧ್ಯರಾಗುವುದು ಪ್ರಜಾಪ್ರಭುತ್ವವೆಂದರೆ, ಕೇವಲ ಒಪ್ಪಿಗೆ ಹಾಗೂ ಅನುಮತಿಗಳಿಂದಲೇ ನಡೆಯುವ ಸರಕಾರೀ ಪದ್ಧತಿಯೇ ಹೊರತು ಒರ್ವ ವ್ಯಕ್ತಿಯೇ ಅಂತಿವ ವೆಂದು ನಿರ್ಧರಿಸಿ ಆ ರೀತಿ ನಡೆಯುವುದಲ್ಲ. ಅದು ನ್ಯಾಯವೂ ಆಗಿರಲಾರದು. ಯೋಜನಾ ಆಯೋಗದ ಮೊದಲನೆಯ ಮತ್ತು ಎರಡನೆಯ ವರದಿಗಳಆರ್ಥಿಕಾರಿಕ ಸೂಚನೆಗಳು ನ್ಯಾಯವೆಂದು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ. ಹಾಗೆಯೇ ಆವುಗಳಿಂದ ಪರಿಣಾಮ ಹೊಂದಬಹುದಾದ ಎಲ್ಲ ವರ್ಗಗಳ ಸಮ್ಮತಿಯನ್ನು ಪಡೆಯುವುದೂ ಅಸಾಧ್ಯ.

ಪ್ರಬಲಪರಿಣಾಮಕಾರಿಯಾದ ಮತ್ತು ಕ್ರಾಂತಿಕಾರಕ ಸೂಚನೆಗಳಿಗೆ ರಾಜ್ಯಗಳ ವಿಧಾನ ಸಭೆಗಳ ಸದಸ್ಯರಲ್ಲಿ ಬಹು ಜನರ ಮತಗಳನ್ನು ಪಡೆಯುವುದಕ್ಕೆ ಸರಕಾರ ಸಮರ್ಥವಾದರೆ, ಆದ ಪ್ರಜಾತಂತ್ರದ ಸ್ಫೂರ್ತಿಯನ್ನು ಪರಿಶೀಲಿಸಿದಂತೆಯೂ, ಸೌರವಿಸಿದಂತೆಯೂ ಆಗುವುದಿಲ್ಲ ಏಕೆಂದರೆ ಅದಂಬಹುಮತವೆಂಬುದು ಪೀಡೆಯಿಂದಇಲ್ಲವೇ ನತ್ತಾಗುದಿಂದ ಎಳೆದುತಂದ ಬಹುಮತವಾಗಿವೆ ಹೀಗಾಗಿ ಅದು ಆತ್ಮ ಸಂತುಷ್ಟಿಯಿಂದ ಕೊಟ್ಟ ಮತವಾಗಿಲಾರವು ಹೆಚ್ಚಿನ ಶಾಸನಸಭಾಸದರುಭೂಮಿಹ ತರೂ ಅಲ್ಪ ಹಿಡುವಳಿದಾರರೂಆಗಿರುವುದರಿಂದ. ಈ ವಿಧೇಯಕಗಳಿಂದ ಅವರ ಸಂಸಾರಕ್ಕೆ ಅಧಿಕ ಭೂಮಿಯನ್ನು ಪಡೆಯುವುದು ಸಾಧ್ಯವೆನಿಸುತ್ತದೆ. ಇನ್ನು ಕೆಲವರು ತಮ್ಮ ಆಸ್ತಿಯನ್ನು ಮಾರಿಬಿಟ್ಟು ನಗರಗಳಲ್ಲಿ ಕಟ್ಟಡಾದಿಗಳನ್ನು ಕೊಂಡುಕೊಂಡಿದ್ದಾರೆ ಹೀಗಾಗಿ. ಈ ಅನೀತಿಯ ಸುಧಾರಣೆಗಳು ಮಂಜೂರು ಮಾಡಲ್ಪಟ್ಟು ಹೆಚ್ಚಿನ ಜನರ ಆಪೇಕ್ಷೆಯನ್ನು ಪಡೆಯುವುದು. ಜನತೆಯಲ್ಲಿಯೂ ಅಸಂತುಷ್ಟಿಯು ತುಂಬುವುದು ಈ ಅಸಂತೋಷವು ಕಾಂಗ್ರೆಸಿನ ಒಳಡೆಯೇ ಉರಿಯುತ್ತಿರುವ ದ್ವೇಷಾಗ್ನಿಗೆ ತುಪ್ಪವನ್ನೆರೆಯುವುದು ಇಂತಹ ಉರಿಯಿಂದಾಗಿ ಈಗಾಗಲೇ ಅಪರೂಪವಾಗಿ ಸ್ಫೋಟಗೊಳ್ಳುವ ಮಾತ್ಸರ್ಯವು ಪದೇ ಪದೇ ಎದ್ದುತೋರುವಂತಾಗುವುದು.

ಯೋಜನಾ ಆಯೋಗದ ೧ ಮತ್ತು ೨ನೆಯ ವರದಿಗಳನ್ನೀಕ್ಷಿಸಿದಾಗ, ಕಮ್ಯೂನಿಸ್ಟರ ಭೂಸುಧಾರಣೆಯನ್ನೇ ನಾವು ಗಮನಿಸಬಹುದು ೧೯೫೦ರ ಮೊದಲನೆಯ ವರದಿಯಲ್ಲಿ, ಭೂಸುಧಾರಣೆಯ ಮೂಲ ಗುರಿಯು ಎಲ್ಲ ಜಮೀನ್ದಾರಿಯನ್ನೂ ಹಿಂದುಗೊಡಿಸಿ ಗ್ರಾಮ ಪಂಚಾಯತಿನ ಅಡಿಯಲ್ಲಿ ಸಾಗುಮಾಡಿ ಗ್ರಾಮಾತಳಕ್ಕೆತೆಯನ್ನು ಸ್ಥಾಪಿಸುವುದು ಎಂದು ನೀಳಲಾಗಿದೆ. ೧೯೫೨ರ ದ್ವಿತೀಯ ವರದಿಯು ವ್ಯವಸಾಯದಲ್ಲಿ "ಸಾಧ್ಯಮ ಗಳನ್ನು ದೂರಮಾಡಿ, ಗೇಣಿದಾರನನ್ನೇ ಭೂಸ್ವಾಮಿಯಾಗಿ ಮಾಡುವುದು, ಬಾಡಿಹುಡಿಯಲು ಬೇಕಿರುವ ಮಿತಿ ಹೇರುವುದು ಮತ್ತು ಹೀಗೆ ಮಿತಿ ಹೇರಿ ಸಾವತಿಸಿಕೊಂಡ ಹೆಚ್ಚಿನ ಭೂಮಿಯನ್ನು ಭೂರಹಿತರಿಗ ಹಂಚುವುದು ಹಾಗೂ ಜಿಲ್ಲ ಹಿಡುವಳಿದಾರರಿಗೆ ಕೊಡುವುದು ಎಂಬ ತತ್ವಗಳನ್ನು ಮುಖ್ಯವಾಗಿಟ್ಟುಕೊಂಡಿದೆ ಹೊಸ ಒಡೆಯನು ಭೂಮಿಗೆ ಕೊಡಬೇಕಾದ ಪರಿಹಾರವು ಸಾಮಾನ್ಯತ ರವಿದ್ದ ಇದನ್ನು ಗರಿಂದ ೩೦ ವರ್ಷಗಳ ಅವಧಿಯಲ್ಲಿ ಪಡಯಲಾಗುವುದು ಹಾಗೆಯೇ ಭೂಸ್ವಾಮಿಗಳಿಗೆ ಜಮೀನವಾರರಿಗೀಯುವಂತೆ ಸರಕಾರದ ತಂವರ್ಷಗಳಲ್ಲಿ ಮರುಪಾವತಿ ಮಾಡುವ ಸಾಲಪತ್ರಗಳ ರೂಪದಲ್ಲಿ ಈ ಸಾಮಾನ್ಯ ಪರಿಹಾರವನ್ನು ಕೊಡಲಾಗುವುದು

ದಕ್ಷಿಣ ರಾಜ್ಯಗಳಲ್ಲಿರುವ ಭೂಸ್ವಾಮಿಗಳು ಉತ್ತರ ರಾಜ್ಯಗಳ ಜಿಮೀನುದಾರರಿಗಿಂತ ಭಿನ್ನರಾಗಿದ್ದಾರೆ. ಅವರಲ್ಲಿ ಬಹುಮಂದಿ ಜಮೀನುದಾರರಂತೆ ಅಧಿಕಾರವಿಜನ್ಮನವ ಜಾಗೀರುದಾರರಂತೆ ಖಾಸ್ಥಿತ ಕಂದಾಯ ಪದ್ಧತಿ ವಿನ್ಯಾಯಿಯಿಂದ ಭೂಸ್ವಾಮಿಗಳ ಸ್ಥಿತಿಯಲ್ಲಿಲ್ಲ ಎಂದು ನೋತ್ತನೊದಲು ಹಾಗೂ ಸ್ಪಮುಖವಾಗಿ ತಿಳಿದುಕೊಳ್ಳಬೇಕ ಈ ಉತ್ತರ ಭಾರತದ ಜಮೀನುದಾರರು ರಾಜ್ಯಗಳಿಂದ "ಬಳುವಾಣಿ"ವಾಗಿ ಭೂಮಿಯನ್ನು ಪಡೆದಿದ್ದು, ಮೊಡಲಿಗೆ ಕಂದಾಯ ವಸೂಲು ಮಾಡುವವರು ಇಲ್ಲವೇ ರಾಜ್ಯಕ್ಕೆ ಸಲ್ಲಲೇಕಾದ ನಿಯಮಿತ ಕಂದಾಯ ಮೊಬಲಗಿಗೆ ಹೊಣೆಗಾರರಾಗಿರುವ ರೈತರಾಗಿದ್ದು, ತಮ್ಮ ಅಸಂಖ್ಯಾತ ಒಕ್ಕಲುಗಳೊಡನೆ ತಮ್ಮ ಸಂಬಂಧವನ್ನು ಸರಕಾರದ

(೧೨ನೇ ಪುಟ ನೋಡಿರಿ)



ಕಳೆದ ಸಪ್ಟಂಬರ ತಿಂಗಳಲ್ಲಿ ಭಾರತವನ್ನು ಹಾದು ಹೋದ 'ಕೈಮೆಟ್ ಪೋರ್' ಎಂಬ ಜೆಟ್ ವಿಮಾನದ ಪ್ರಧಾನ ಪರೀಕ್ಷಕ ನಾವಿಕರಾದ ಹೆಲೀಂಡರು ಜೆಟ್ಟಿನ ಮೂಲ ಯಂತ್ರಗಳನ್ನು ತೋರಿಸುತ್ತಿರುವುದನ್ನು ಇಲ್ಲಿ ಕಾಣಬಹುದು ಅವರ ಜತೆಯಲ್ಲಿ ಇವರ ಸಾಧನೆ ತಯಾರಿಸಿದ ಶ್ರೀ ಫರ್ಡಿನೆಂಡರಿಮೆರು

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK LTD.

H. O. MANGALORE. Estd. 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಹೆಚ್ಚು ಸಂಖ್ಯಾದಿನ ಕಡಿಮೆ ವೆಚ್ಚಮಾಡುವ ಹಾಗಿವೆ ರೇನೇ ಉಳಿತಾಯವಾಗುವುದು. ಸ್ವಂತ ಕೈಕಸುಬಿಗೆ ಪೀಠಿಕೆ

ಕಥಾ ವಿಹಾರ

ಇವನೇ ಭಲೇ ಬುದ್ಧಿವಂತ!

ಅವನ ಚಮತ್ಕಾರ ಬುದ್ಧಿವಂತಿಗೆಗೆ ನಾನು ತಲೆದೂಗಿದೆ; ನೀವು....?

''ನಮಸ್ಕಾರ ಸರ್''—ಕೇಳಿ ಬರೆಯುತ್ತಿದ್ದ ರಾಮಣ್ಣ ತಲೆಯೆತ್ತಿ ನೋಡಿದ. ಸಾಮಾನ್ಯ ನೈಯ್ಯ ಯುವಕನೊಬ್ಬ ಅವನ ಮೇಜಿನಿದಿರು ನಿಂತಿದ್ದ.

ರಾಮಣ್ಣ ಪ್ರತಿನಮಸ್ಕಾರ ಮಾಡಿ ''ಏನು ಬೇಕಿತ್ತು?'' ಎಂದು ಕೇಳಿದ.

''ಶ್ರೀಯುತ ರಾಮರಾಯರು ತಾವೇ ತಾನೆ?''

''ಹೌದು. ಕೂತುಕೊಳ್ಳಿ'' ಎಂದು ರಾಮಣ್ಣ ತನ್ನೆದಿರಿನ ಕುರ್ಚಿಯನ್ನು ತೋರಿಸಿದ. ಪೇನಾವನ್ನು ಮುಚ್ಚಿ ಬರೆದ ಹಾಳೆಗಳ ಮೇಲೆ ವೈಟಿಂಗ್ ಸ್ಕೋನ್ ಎತ್ತಿಟ್ಟ.

''ನಿಮಗೆ ತೊಂದರೆ ಕೊಟ್ಟ ಹಾಗಾಯಿತಂತ ಕಾಣುತ್ತೆ?'

''ಹಾಗೇನಿಲ್ಲ. ನನ್ನಿಂದೇನಾಗಬೇಕಿತ್ತು? ತಾವಾರು?'

''ನನ್ನದು ಮಂಗಳೂರು ಪ್ರಾಂತ. ಹೀಗೇ ಒಂದು ಕೆಲಸಕ್ಕಾಗಿ ಮದರಾಸಿಗೆ ಬಂದೆ. ತಮ್ಮ ಸಾಹಿತ್ಯವನ್ನು ನಾನು ತುಂಬಾ ಓದಿದ್ದೇನೆ. ಹಾಗೇ ತಮ್ಮನ್ನೂ ನೋಡಿ ಹೋಗೋಣಾಂತ ಬಂದೆ.''

''ಓಹೋ, ಸಂತೋಷ. ತಮ್ಮ ಹೆಸರು?'

''ವಾಸುದೇವ. ನಾನೂ ಪತ್ರಿಕೆಯಲ್ಲಿ ಆದೂ ಇದೂ ಬರೆಯೋದುಂಟು. ಒಟ್ಟಾರೆ ಜರ್ನಲಿಸ್ಟ್ ಲೈಫಿನಲ್ಲಿದ್ದೇನೆ.'

ರಾಮಣ್ಣ ಆಫೀಸು ಹುಡುಗನ್ನ ಕರೆಯು, ಎರಡಾಣೆ ಕೊಟ್ಟು, ಕಾಫಿ ತರುವಂತೆ ಹೇಳಿದ. ವಾಸುದೇವ ತನ್ನ ಮಾತನ್ನು ಮುಂದುವರಿಸುತ್ತಾ ಇದ್ದ. ರಾಮಣ್ಣ ಬರೆದ ಇತ್ತೀಚಿನ ಕೆಲವು ಲೇಖನಗಳ ಹೆಸರನ್ನು ಹೇಳಿ ಅತ ಬಹಳ ಕೊಂಡಾಡಿದ. ಹಾಗೆಯೇ ಮತ್ತೆ ಕೆಲವು ಕನ್ನಡದ ಪ್ರಸಿದ್ಧ ಸಾಹಿತಿಗಳ ಹೆಸರನ್ನೆತ್ತಿಕೊಂಡು ಅವರ ಗುಣಗಳನ್ನೂ ಜೀವನ ವಿಶೇಷಗಳನ್ನೂ ಹೇಳಿದ. ಆಂತಹ ಮಹನೀಯ ಪ್ರತಿಭಾಶಾಲಿಗಳ ಪರಿಚಯ ಈ ವಾಸುದೇವನಿಗಿರುವುದನ್ನು ತಿಳಿದು ರಾಮಣ್ಣನಿಗೆ ಅವನ ಮೇಲೆ ಹೆಚ್ಚಿನ ಗೌರವ ಕುಳಿತಿತು. ಅಂತಹರ ಪರಿಚಯ ತನಗಿಲ್ಲದೆ ಕೋದುದಕ್ಕೆ ಒಳಗೊಳಗೇ ಸ್ವಲ್ಪ ಕಳವಳವೂ ಆಗದೆ ಬಿಡಲಿಲ್ಲ.

ಕಾಫಿ ಬಂತು. ಬೇಡಿತ್ತೆನ್ನುತ್ತಾ, ರಾಮಣ್ಣನ ಒತ್ತಾಯಕ್ಕೆ ನಿರುಪಾಯನಾಗಿ ಪುಚ್ಚಿ ಮಾಡಿದ. ಮತ್ತೆ ಅತ ತನ್ನ ವಿಷಯ ಹೇಳಲಾರಂಭಿಸಿ, ''ಖಾಯಂ ಉದ್ಯೋಗವೊಂದಿಲ್ಲದೆ ಬರೀ ಲೇಖನ ವ್ಯವಸಾಯದಲ್ಲಿ ಜೀವಿಸಲು ಕನ್ನಡದಲ್ಲಿ ಸಾಧ್ಯವೇ ಇಲ್ಲ. ಆದಕ್ಕೇ ನಾನೊಂದು ಉದ್ಯೋಗಕ್ಕೆ ಪ್ರಯತ್ನಪಟ್ಟು ಈ ಊರಿಗೆ ಬಂದೆ. ನಿನ್ನೆ 'ನವಜೀವನ' ಪತ್ರಿಕೆ ಕೊಂಡುಕೊಂಡು ನೋಡಿದಾಗ ನಿಮ್ಮ ಲೇಖನ ನೋಡಿತು. ನಿಮ್ಮ ನೆನವಾಯಿತು ಸರ್. ನವ ಜೀವನ ಒಳ್ಳೇ ಪತ್ರಿಕೆ. ಲೇಖಕರಿಗೆ ಒಳ್ಳೆ ರೆಮ್ಯುನರೇಷನ್ ಕೊಡುತ್ತಾರೆ. ನಿಮಗೆಷ್ಟು ಕೊಡುತ್ತಾರೆ ಸರ್?''

ಫಕ್ಕನೆ ಏನು ಹೇಳಬೇಕೆಂದು ರಾಮಣ್ಣನಿಗೆ ಗೊತ್ತಾಗಲಿಲ್ಲ. ನವಜೀವನನೇ ಏಕೆ, ಯಾವ ಪತ್ರಿಕೆಯಿಂದಲೂ ಆವನೊಂದು ಕಾಸು ಕೂಡಾ ಈ ವರೆಗೆ ಪಡೆದುದಿಲ್ಲ. ಅದರ ಆಸೆ ಕೂಡ ಅವನಿಟ್ಟುರಲಿಲ್ಲ. ಆದರೆ ಈಗ ರಾಮಣ್ಣನಲ್ಲಿ ಏನೋ ಒಂದು ಕೇಳಿದ ಹಾಗಾಗಿತ್ತು. ''ಅ! ಎಲ್ಲಾ ಲೇಖನಕ್ಕೂ ಎಲ್ಲಿಗೌರವಧನ ಕೊಟ್ಟಾರು ಬಿಡಿ'' ಅಂದ.

''ಕೊಡತ್ತಾರೆ ಸರ್. ನಾನೇ ಇಪ್ಪತ್ತೈದು ದೊಪ್ಪು, ಹದಿನೈದು ಇನ್ನೊಪ್ಪು ಪಡೆದಿದ್ದುತ್ತೇನಲ್ಲಾ? ನಿಮಗೆ ಕಳಿಸಿಲ್ಲವೆ?'' ಕೇಳಿದ.

''ಅದೇ ಹುಂದೆ ಏನೋ ಕಳಿಸುತ್ತಾ ಇದ್ದೆರು. ಇತ್ತೀಚೆಗೆ ಮಾತ್ರ ಏನೂ ಬರಲಿಲ್ಲ.'' ಎಂದು ರಾಮಣ್ಣ ಸುಳ್ಳೇ ಹೇಳಿದ ಅವನಿದಿರಿನಲ್ಲಿ ತನ್ನ ಗೌರವ ಕಡಮೆಯಾಗಬಾರದಷ್ಟೆ?

''ನೀವು ಸುಮ್ಮನೆ ಏಕೆ ಕುಳಿತುಕೊಳ್ಳುತ್ತೀರಿ? ಎರಿಗೆ ಜ್ಞಾಪಕವಿಲ್ಲದೆ ಹೋಗಬಹುದು. ಒಂದು ಕಾಗದ ಬರೆಯಿರೇನು? ಖಂಡಿತಾ ಕಳಿಸುತ್ತಾರೆ. ಸಂಪಾದಕ ರಾಮಮೂರ್ತಿಗಳು ಬಹಳ ಒಳ್ಳೆಯವರು. ನಾನು ಜೆನ್ನಾಗಿ ಬಲ್ಲೆ.'

''ಸರಿ. ನೋಡುತ್ತೇನೆ'' ಎಂದ ರಾಮಣ್ಣ. ಆ ಪತ್ರಿಕೆಗೆ ಲೇಖನ ಬರೆದು ಪ್ರತಿಫಲ ಪಡೆಯುವ ಮತ್ತೆ ಕೆಲವರ ಹೆಸರನ್ನೂ ಅತ ಹೇಳಿದ. ಹೀಗೆ ಸ್ವಲ್ಪ ಹೊತ್ತಿದ್ದು, ರಾಮಣ್ಣನ ಪರಿಚಯವಾಗುವುದಕ್ಕೆ ಬಹಳ ಸಂತೋಷ ವ್ಯಕ್ತಪಡಿಸುತ್ತಾ ಎದ್ದ. ರಾಮಣ್ಣನೂ ಹೊರದ್ವಾರದ ವರೆಗೂ ಅವನೊಂದಿಗೆ ಸಾಗಿ ಬೀಳ್ಕೊಟ್ಟು ಹಿಂದಿರುಗಿದ.

ಈ ಸಾಮಾನ್ಯ ಲೇಖಕ ವಾಸುದೇವ ಕೂಡ ಪತ್ರಿಕೆಗೆ ಲೇಖನ ಬರೆದು ಹಣಗಳಿಸಿಕೊಂಡಿದ್ದಾನೆ. ರಾಮಣ್ಣ ಅನೇಕ ಗ್ರಂಥಗಳನ್ನೆ ಬರೆದವು; ಸೃಕಟಿಸಿದವ. ಪತ್ರಿಕೆಗಳಲ್ಲಂತೂ ಅಗಾಗ ಏನಾದರೂ ಬರೆಯುತ್ತಲೇ ಇರುತ್ತಾನೆ. ಅನೇಕವಾಗಿ ಕನ್ನಡಿಗರಿಗೆಲ್ಲಾ ರಾಮಣ್ಣನ ಹೆಸರು ಗೊತ್ತು. ಹಾಗದ್ದೂ ಪತ್ರಿಕೆಯವರಿಂದ ತಾನೇನೂ ಪ್ರತಿಫಲ ಪಡೆದಿಲ್ಲವಲ್ಲ! ಇದೊಂದು ತನ್ನ ಆಭಿಮಾನಕ್ಕೇ ಕುಂದೆನಿಸಿತು. 'ನವಜೀವನ'ಕ್ಕೆ ಒಂದು ಪತ್ರ ಬರೆಯೋಣವೆನ್ನಿಸಿತು. ತಿನ್ನ ಯಾವಾವ ಲೇಖನ ಯಾವಾಗ ಪ್ರಕಟವಾಗಿದೆ ಎಂಬುದೆಲ್ಲಾ ನೋಡಿ ಒಂದು ಪಟ್ಟಿ ತಯಾರಿಸಿಟ್ಟುಕೊಂಡ ರಾಮಣ್ಣ.

ಆದಷ್ಟು ಬೆಳಿಗ್ಗಿನ ಹೊತ್ತಿನಲ್ಲಿ ನಡೆದ ಕಛೇ. ಮತ್ತೆ ಸಂಜೆಯ ೫ ಗಂಟೆಯ ಹೊತ್ತಿಗೆ ಅದೇ ವಾಸುದೇವ ಬಂದು ''ನಮಸ್ಕಾರ ಸಾರ್'' ಎಂದ.

ರಾಮಣ್ಣ ಪ್ರತ್ಯಭಿವಾದನೆ ಸೂಚಿಸುತ್ತ, ಪ್ರಶ್ನಾರ್ಥಕವಾಗಿ ನೋಡುತ್ತ ಕೂದುವಂತೆ ಹೇಳಿದ. ಅತ ಕುಳಿತ. ಅನಂತರ ಬಾಡಿದ ಮುಖದಿಂದ ಬಹಳ ಚಿಕ್ಕದನಿಯಲ್ಲಿ— ''ಸಾರ್, ನಿಮ್ಮಿಂದೊಂದು ಸಣ್ಣ ಉಪಕಾರ.''

''ಏನದು? ಸಾಧ್ಯವಿದ್ದರೆ....''

''ಅಸ್ಟಬಾರದು ನಾನು. ಏಕೆಂದರೆ ನನ್ನ ಹಾಗೇ ನೀವೂ ಒಬ್ಬರು ಬರೆಹಗಾರರು...''

''ಅದು ಸರಿ. ಜೇಳಿ ಹೇಳಿ''

''ಮತ್ತೇನಿಲ್ಲ. ನಾನೊಂದು ಕೆಲಸಕ್ಕಾಗಿ ಬಂದೆನೆಂದೆನಲ್ಲ. ಅನರು ಮೋಸ ಮಾಡಿ ಬಿಟ್ಟರು. ಆದರೆ ದೇವರ ದಯದಿಂದ ಬೆಂಗಳೂರಿನಿಂದ ಇನ್ನೊಂದು ಆರ್ಡರ್ ಬಂದಿದೆ. ಏನು ಮಾಡಲಿ? ಪ್ರಯಾಣಕ್ಕೆ ಕೂಡ ಹಣ ಸಾಲದು. ಯಾತಂದರೆ ಇನೊಂದು ಆಸೆಕ್ಸ್‌ಪೆಕ್ಟೆಡ್!''

''ಆರ್ಥವಾಯಿತು. ಬಹಳ ಫಜೀತಿಯಲ್ಲಿದ್ದೀರಿ. ನಿಜ. ಹಣವೂವನ ಸಹಾಯ ನನಗಲು ಮಾತ್ರ ನಾನೆ. ತೀರಾ ತಿರಕ್ತ. ವೆಂಕೆರಿ ಸಾರೀ.''

''ಅಯ್ಯೋ! ಅದು ನನಗೂ ಗೊತ್ತಿದೆ. ಹಾಗೆ ನಾನು ಕೇಳಿ ನಿನ್ನನ್ನು ಛಾದಿಸಲಾರೆ. ತಾವು ದೊಡ್ಡ ಮನಸ್ಸು ಮಾಡಿ ತನ್ಮು ಒಂದು ಲೇಖನದ ರೆಮ್ಯುನರೇಷನ್ ಮಾತ್ರ ನನಗೆ ಕೊಡುವ ಕೃಪೆ ಮಾಡಿ ಸಾಕು''

''ಹಾ!! ಹಾಗಾದರೆ? ನನಗೆ ಯಾವ ರೆಮ್ಯುನರೇಷನ್ನೂ ಬಂದಿಲ್ಲವಲ್ಲಾ!''

''ನವಜೀವನದಲ್ಲಿ ಪ್ರಕಟವಾದ ನಿಮ್ಮ ಕೆಲವು ಲೇಖನಗಳಿಗೆ ಬಂಲಿಕ್ಕಿಡೆ ಎನ್ನು ವಿರಲ್ಲಾ; ಅವುಗಳಲ್ಲಿ ಒಂದರ ಹಣವನ್ನು ನನಗೆ ಒಪ್ಪಿಸುವಂತೆ, ನೀವೊಂದು ಪತ್ರ, ನಿಮ್ಮ ಲೆಟರ್ ಹೆಡ್ಡಿನಲ್ಲಿ ಬರೆದು ಕೊಟ್ಟರೆ ಸಾಕು.''

''ಕೊಟ್ಟರೆ?''

''ಕೊಟ್ಟರೆ ನಾನು ಅಲ್ಲಿಗೇ ಹೋಗುತ್ತೇನಷ್ಟೆ? ಆ ಪತ್ರಿಕೆಯ ಆಫೀಸಿನಲ್ಲಿರುವ ಜೆ ಡಿ. ಭಟ್ಟರಂತೂ ನನ್ನ ಪರಿಚಯದವರು. ಸಂಪಾದಕರೂ ನನಗೆ ಗೊತ್ತು. ನಿಮ್ಮ ಕಾಗದ ತೋರಿಸಿ ನಿಮ್ಮ ಒಂದು ಲೇಖನದ ರೆಮ್ಯುನರೇಷನ್ ನಾನು ಪಡೆದುಕೊಂಡು ಉಳಿದುದನ್ನು ನಿಮಗೆ ಕಳಿಸುವ ಏರ್ಪಾಡು ಕೂಡ ಮಾಡುತ್ತೇನೆ.''

(೧೦ನೇ ಪುಟ ನೋಡಿರಿ)

ವಿದ್ಯುದ್ಯಂತ್ರದ ಮೂಲಕ ಹಾಲುಕರೆವ ಯಂತ್ರಕೋಪಕರಣದ ಉಪಯೋಗವನ್ನು ವಿದ್ಯಾರ್ಥಿಗಳಿಗೆ ವಿವರಿಸಿ ಹೇಳುತಿದ್ದಾರೆ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%

5 ರಿಂದ 12 ,, 4½%

13 ,, 24 ,, 4½%

ರೂ. 10,000/- ಮತ್ತ ಮೇಲಣ ಹಣಕ್ಕೆ ½% ಹೆಚ್ಚು.

ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%

ಚಾಲ್ತಿ ದೇವಣಾತಿಗೆ ½%

ಸುಲಭ ಒಡ್ಡಿ ದರದಲ್ಲಿ ಜಿನ್ನಾ ಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಜ್ಞ. ಪೂಂಜ, ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1949

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಮಗೆ ಒಂದು ಕ್ಯಾಬಿನೆಟ್ ಆಗತ್ಯ. ಕಳ್ಳರ, ಸುಳಿಹುಪ್ಪಟಿಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಆದರ್ಶವಾದುವು. 3 ಶೈಲಿಗಳಲ್ಲಿ; ಮಿಟ್ಟೆ, ಪಾಪ್ಯುಲರ್, ಯಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಲೆಲ್ಫುಗಳು ಮತ್ತು ಭದ್ರವಾದ ಬೀಗದುಳ್ಳ ಒಳಕೋಡಿಗಳಿವೆ.

ಅಲ್ಲದೆ

ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್, ಡೆಸ್ಕ್‌ಗಳು, ಸ್ಪ್ರಿಂಗ್‌ಲೆಸ್ ಸ್ಟೀಲ್ ಪಾತ್ರೆಗಳು, ವಿ. ಕೆ. ರಾಜ್ ಇಂಡಸ್ಟ್ರೀಸ್, ಆಲಿಘರ್ ಇವರ

ಉತ್ತಮ ಬೀಗಗಳು

ಇವೆಲ್ಲ ಸ್ವಾಕವೆ.

ಸ್ಪೈನ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.

7 ಲಿವರ್‌ಗಳ ಬೀಗ. ಅವರೆದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.

ಶೋ ರೂಮನ್ನು ಸಂದರ್ಶಿಸಿ:

ಶಾಸ್ತ್ರೀ ಆಂಡ್ ಕಂಪೆನಿ

ಹಂಸನಕಟ್ಟೆ — — ಮಂಗಳೂರು

ಶುದ್ಧ ಹರಟೆ

ಆಯೂಬ ಖಾನರ ಯಶಸ್ವಿ ನಾಯಕತ್ವ

ಎಲ್ಲೆಡೆಯ "ಗ್ವಾಮಿ"ಯೂ ತನ್ನ ಉದ್ದಿಮೆಯಲ್ಲಿ ದಂಡಿನಾಡಳಿತ

ಸಾರಬಯಸುತ್ತಾರೆ.

ಕಳೆದ ಕೆಲವು ದಿನಗಳ ಹಿಂದೆ ಪಾಕಿಸ್ತಾನದಲ್ಲಿ ನಡೆದ ಮಿಲಿಟರಿ ಆಡಳಿತೆಯ ನಂತರ ಬೆಳಕಿಗೆ ಬಂದ ಆಯೂಬ್ ಖಾನರ ಹೆಸರು ಈಗ ಎಲ್ಲೆಡೆಯಲ್ಲೂ ಬಲು ಬಿರುಸಿನಿಂದ ಪ್ರಚಾರವಾಗುತ್ತಿದೆ. ಕೆಲ ದಿನಗಳ ಹಿಂದೆ ಸಿಂಹಳದಲ್ಲಿ ಪಾಪದ ಪೋಲೀಸು ಸುಪರಿಂಟೆಂಡೆಂಟರ ಮೇಲೆ ಆಯೂಬ್ ಖಾನರ ಆರೋಪನವನ್ನು ಅನೇಕ ಜನ ಹೊರಿಸಿ ಆ ಪ್ರಕರಣವನ್ನು ಸಿಂಹಳೆ ಪ್ರಧಾನಿ ಸೊಲಮನ್ ಭಂಡಾರ ನಾಯಕೆಯವರು ವಿಚಾರಿಸಿ ತಮ್ಮ ಮುಂದಿರುವ ಮಹಾ ವಿಪತ್ತನ್ನು ತಪ್ಪಿಸಿಕೊಳ್ಳಲು ಯತ್ನಿಸಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿದ್ದನ್ನು ನೀವೆಲ್ಲಾ ಕಂಡಿರಬಹುದು.

ಈಗ ಎಲ್ಲೆಡೆಯಲ್ಲೂ ಆಯೂಬ್ ಖಾನರ ಆಸ್ತುತ್ವವು ಕೆಂಡು ಬರುತ್ತಿದೆ. ಮಿಲಟರಿ ಆಡಳಿತದ ಅಂಟು ರೋಗ ಎಲ್ಲಾ ದೇಶಗಳಲ್ಲೂ ವ್ಯಾಪಿಸಿದೆ. ನಮ್ಮನ್ನು ಅನೇಕ ಆಯೂಬರು ಸುತ್ತಿರುವರೆಂಬ ವಿಚಾರವನ್ನು ನೀವು ಕೇಳಿದಾಗ ಗಾಬರಿಯಾಗದಿರಲಾರಿರಿ.

೦೦ ೦೦ ೦೦

ಕಾಲೇಜಿನ ಯನ್. ಸಿ. ಸಿ. ಕವಾಂಡರನ್ನು ನಾನು ಕೆಲ ದಿನಗಳ ಹಿಂದೆ ಭೇಟಿಯಾದೆನು. ಅವರು ಉಳಿದ ತನ್ನ ಸಹೋದ್ಯೋಗಿಗಳನ್ನು ಮನಬಂದಮ್ಮೆ ದೂರಲಾರಂಭಿಸಿದರು—"ಆಲ್ಲ! ನೀವೆ ಹೇಳಿ, ಪ್ರಿನ್ಸಿಪಾಲರೆ ಆಗಲಿ, ಬಹಿರಂಗವಾಗಿ ಒಬ್ಬನನ್ನು ಟೀಕಿಸುವುದು ಸರಿಯೆ? ವಿದ್ಯಾರ್ಥಿಗಳಿಗೆ ನಾವು ಗೌರವಾದರಗಳನ್ನು ತೋರಿಸಿದರೆ ವಿದ್ಯಾರ್ಥಿಗಳು ನಮಗೆ ಗೌರವವನ್ನು ನೀಡುತ್ತಾರೆ. ಕಾಲೇಜಿನ ಪ್ರಮುಖಾಧಿಕಾರಿ ವಿದ್ಯಾರ್ಥಿಗಳೊಂದಿಗೆ ಬೇರೆ ತನ್ನ ಸ್ವಾಸಿನ ವ್ಯಕ್ತಿಗಳನ್ನು ದೂಷಿಸುವುದು ತಪ್ಪಷ್ಟೆ? ಅವರು ಅಂದದಕ್ಕೆ ಅಸ್ತು ಎನ್ನುನ ಅಂಜಕುಳ ಲೆಕ್ಚರರು ನಮ್ಮಲ್ಲಿದ್ದಾರನ್ನು ಅಂಜಕುಳಿಗಳ ಹೆಣೆಬರಹ ಅವರಿಗೆ ಗೊತ್ತಿ ಇದೆ. ಆದರೆ ನನ್ನನ್ನು ಪ್ರಿನ್ಸಿಪಾಲರು ಇದು ತನಕ ಬಹಿರಂಗ ಟೀಕಿಸಿಲ್ಲ. ಅವರೇನಾದರೂ ಹೇಳಿ ನೋಡಲಿ. ನಾನೇನು ಮಾಡಿಯೇನು? ಗೊತ್ತೆ ನನ್ನ ಬೆಂಬಲಕ್ಕೆ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಅರ್ಧ ವಿದ್ಯಾರ್ಥಿಗಳು ಬಂದು ನಿಂತಾರು! ಪ್ರಿನ್ಸಿಪಾಲರ ಮನೆಯ ಹಂಚನ್ನು ಉಳಿಸುವ ಅಳಿಸುವ ಸಾಮರ್ಥ್ಯ ನನ್ನಲ್ಲಿದೆ. ಅವರ ಬೆಂಬಲಿಗರಾದ ಲೆಕ್ಚರರು ಜೀವಕ್ಕೆಯಲ್ಲಿ ಹಿಡಿದುಕೊಂಡು ಕಾಲೇಜಿನ ಕಾಂಪೌಂಡಿಗೆ ಬರಬೇಕಾದ ಸಂದರ್ಭ ಸಂಭವನೀಯವೆಂಬುದನ್ನು ಅವರು ತಿಳಿದಿರಲಿ". ಎಂದು ಹೇಳುತ್ತಿ ಅವರು ಮಾತು ಮುಂದುವರಿಸುವುದರಲ್ಲಿದ್ದರು. ನಾನು ಆದನ್ನು ಹರಿಯುವ ನೀರಿಗೆ ಅಡ್ಡವಾಗಿ ಕಟ್ಟುವ ಆಣೆಕಟ್ಟಿನಂತೆ ತಡೆದು ನಿಲ್ಲಿಸಿದೆನು.

೦೦ ೦೦ ೦೦

ನಾನು ನನ್ನ ಸ್ವಂತ ಹೊ ಟೇಲಿನಲ್ಲಿ ಆಯೂಬ್ ಖಾನರ ಆಡಳಿತೆಯನ್ನು ಜಾರಿಗೊಳಿಸುತ್ತೇನೆ. ಆರಂಭಿಸಿದರು ನನ್ನ ಮಿತ್ರರು ಧಾಷಣವನ್ನು "ಈಗಿನ ಕಾಲದಲ್ಲಿ ಕೆಲಸಕ್ಕೆ ಜನರು ಬೇಕಾದಷ್ಟು ಸಿಗುತ್ತಾರೆ. ನನ್ನ ಹೋಟೆಲಿನ ಮಾಣಿಗಳು ಬೇಕಾದಷ್ಟು ತಿಂದು ಸೊಕ್ಕಿ ಹೋಗಿದ್ದಾರೆ. ಮಾತ್ರವಲ್ಲ ಹೋಟೆಲಿನ ಹ್ಯಾಂಡಲುಗಳನ್ನು ಕಳ್ಳಸಂತೆಯಲ್ಲಿ ಮಾರಿ ಹಣ ಸಂಗ್ರಹಿಸಲು ಸುರುಮಾಡಿದ್ದಾರೆ. ಇಷ್ಟರ ತನಕ ನಾನು 'ಅವರು ಸಾಯಲಿ' ಎಂದುಬಿಟ್ಟಿದ್ದೆನು. ಈಗ ಧೈರ್ಯ ಬಂದಿದೆ ಆಯೂಬ್ ಖಾನರಿಂದಾಗಿ. ಈಗಿರುವ ಕೆಲಸಗಾರರನ್ನು ಬರ್ಖಾಸ್ತು ಮಾಡಿ ಆ ಸ್ಥಾನದಲ್ಲಿ ಹೊಸಬರನ್ನು ನೇಮಿಸುತ್ತೇನೆ. ಕಳ್ಳಸಂತೆ ನಡೆಸಿದವರಿಗೆ ಮೂರು ತಿಂಗಳ ಸಂಬಳವನ್ನು ನಾಮಹಾಕುತ್ತೇನೆ. ನೋಡುತ್ತೇನೆ ಹೋಟೆಲು ಆಡಳಿತೆ ನರಪಡಿಸಲು ಸಾಧ್ಯವಿದೆಯೋ? ಇಲ್ಲ ಪೊ? ಎಂದು" ಇಷ್ಟು ಹೇಳಿ ಒಂದೇ ಬಾರಿ ಮೇಲೆಳೆದ ಉಸಿರನ್ನು ಒಂದೇ ಸವನೆ ಬಿಟ್ಟರು.

೦೦ ೦೦

ನಮ್ಮಲ್ಲಿಯ ಪ್ರಭಾವಿ ರಾಜಕಾರಣಿಗಳು ಇಂದಿನ ಮೈಸೂರಿನ ರಾಜಕೀಯದ ಬಗ್ಗೆ ಈ ರೀತಿಯಾಗಿ ಹೇಳಿದರು—"ಮೈಸೂರಲ್ಲಿ ಹೊಲಸು ರಾಜಕೀಯ ಮತ್ತು ಕೊಳೆತು ನಾರಲಾರಂಭಿಸಿದೆ. ಸಮರ್ಥ ನಾಯಕನ ಅಭಾವ ಎದ್ದು ಕಾಣುತ್ತಿದೆ. ಆಡಳಿತೆಯಲ್ಲಿ ಬಿಗು ಆಡಗಿದೆ. ಪಕ್ಷ ಕೋಮುವಾರು ಭಾವನೆ ಹುಣ್ಣಿಮೆಯ ಚಂದಿರನಂತೆ ವೃದ್ಧಿಯಾಗುತ್ತಿದೆ. ಆಹಾರಧಾನ್ಯಗಳ ಬೆಲೆ ಮಿತಿಮೀರಿ ಏರುತ್ತಿದೆ. ಕೋರ್ಟು ಕಚೇರಿಗಳ ಕಂಬಗಳು ಬಾಯಿ ಬಿಡುತ್ತಿವೆ. ಧನಸಿಶಾಚಿಯ ಛಾಯೆ ಎಲ್ಲರೂ ಗುರಿಯಾಗಿದ್ದಾರೆ. ಕಳ್ಳ ಸಂತೆ, ದ್ರೋಹಗಳ ಸುದ್ದಿ ಎಲ್ಲೆಡೆಯಿಂದಲೂ ಕೇಳಿಬರುತ್ತಿದೆ.

ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಯಾದರೆ.....? ಮುಖ್ಯಮಂತ್ರಿಯಾದ ಮರುದಿನ ಹದಿನೈದು ದಿನಗಳೊಳಗಾಗಿ ಸರಕಾರಿ ಬಾಕಿಯಾದ ಫೈಲುಗಳನ್ನು ತೀರಿಸಬೇಕೆಂದೂ ತಪ್ಪಿತಸ್ಥರಿಗೆ ಕಠಿಣ ಸಜೆಯನ್ನು ವಿಧಿಸುವೆನೆಂದೂ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ತಿಳಿಸುತ್ತೇನೆ. ಸರಕಾರಿ ನೌಕರರು ಲಂಚರುಶ್ವತ್ತುಗಳನ್ನು ತೆಗೆದುಕೊಂಡಲ್ಲಿ ಆಂಧವರನ್ನು ಮರಣದಂಡನೆಗೆ—ಸೋರಿ—ಮರಣದಂಡನೆ ಜಾಸ್ತಿಯಾಯಿತೆಂದು ತೋರುತ್ತದೆ—ಅದರ ಬದಲಾಗಿ ಇಪತ್ತೈದು ಯಾ ಇಪ್ಪತ್ತು ವರ್ಷಗಳ ಕಠಿಣ ಸಜೆಗೆ ಗುರಿಪಡಿಸುತ್ತೇನೆ. ನಾನು ಮುಖ್ಯಮಂತ್ರಿಯಾದ ವೇಳು ಪಕ್ಷ ಹಂಗಡಗಳ ಗಲಾಟೆಗಳು ತಲೆದೋರಿದರೆ ಅಂತಹ ರಾಜಕೀಯ ಮುತ್ಸದ್ದಿಗಳನ್ನು ರಾಜಕೀಯದಿಂದ ನಿವೃತ್ತಿಗೊಳಿಸುತ್ತೇನೆ ಮದ್ಯಸೇವಿಸಿದವರನ್ನೂ ಮಾಡಿದವರನ್ನೂ ನಡುರಸ್ತೆ ಮುಲ್ಲಿ ನಗ್ನ ಶರೀರಿಗಳಾಗಿ ಮಾಡಿ ಮರದಲ್ಲಿರುವ ಕೆಂಪು ಇರುವೆ ತೊಟ್ಟೆಯನ್ನು ತಂದು ಅವರ ಮೈಗೆ ಚಿಲ್ಲಿಸುತ್ತೇನೆ ಕದ್ದವರ ಕೈಯನ್ನು ತುಂಡರಿಸಬೇಕೆಂದು ಆಜ್ಞೆಯನ್ನು ಹೊರಡಿಸುತ್ತೇನೆ. ಸತ್ಯಾಗ್ರಹಗಳನ್ನು ಸಮುದ್ರಕ್ಕೆ ನೂಕಿಕುತ್ತೇನೆ.

ಅವರು ಇನ್ನು ಮಂತ್ರಿಯಾಗುವ ಹುಮ್ಮಸ್ಸಿನಲ್ಲಿ ಜೇಳಬೇಕೆಂದಿದ್ದರು. ನನಗೆ ಅಷ್ಟು ಮಾತನ್ನು ಕೇಳಿ ಇನ್ನು ಮುಂದೆ ನನಗೆಯೇನು ಗಂಡಾಂತರ ಕಾದಿದೆಯೋ ಎಂದು ನಾನು ಹೆದರಿ 'ಶಾಂತಂ ಪಾಪಂ' ಎಂದು ಕಿವಿ ಮುಚ್ಚಿಕೊಂಡೆನು.

ಈ ಆಯೂಬ್ ಖಾನರ ಮಧ್ಯೆ ಪಾಪದ ನಮ್ಮಂತವರು ಬದುಕುವುದೆಂತು ಎಂಬ ವಿಚಾರ ನನ್ನ ತಲೆತಿನ್ನುತ್ತಿದೆ.

—ಕುಂತಳಾಪ್ರಿಯ

ಹೊಸ ಪುಸ್ತಕ
ಇದೀಗ ಪ್ರಕಟನಾಗಿದೆ.

ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್

ಲೇಖಕರು: ಜಿನೇ ಇಯೇಟನ್.
ಅನುವಾದಕರು:
ಯು. ಎಲ್. ಆಚಾರ್ಯ,
ಎಮ್. ಎ. ಎಲ್. ಟಿ.

ಬೆಲೆ: ರೂಪಾಯಿ ಒಂದೂಕಾಲು.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‌ಟನ್‌ನ ಜೀವನ ಚರಿತ್ರೆಯಿದು. ಈತನಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಆದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ವಾಶನೆಗಾಗಿ ಹೆಣಗಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಒಂದು ರೂಪಾಯಿ ಎಂಟಾಣೆ (ರೂ. 1=50 ನಯೇಪೈಸೆ) ಮನಿಯಾರ್ಡರ್ ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು.

1. ನವಯುಗ ಪ್ರೆಸ್, ಉಡುಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಜಾಹೀರಾತು

ಭವಿಷ್ಯತ್ತಿನ ಭರವಸೆ—
ಜೀವ ವಿಮೆ

ನಿಮ್ಮ ಮಕ್ಕಳ ಮುಂದಿನ
ಪ್ರಯೋಜನಕ್ಕಾಗಿ ನೀವು
ಇಂದೇ ಜೀವ ವಿಮೆ ಮಾಡಿರಿ

ಲೈಫ್ ಇನ್‌ಷೂರನ್ಸ್ ಕಾರ್ಪೋರೇಷನ್ ಆಫ್ ಇಂಡಿಯ

ಡಿವಿಜನಲ್ ಆಫೀಸ್— ಕೆನರಾ ಮ್ಯುಚುವಲ್ ಬಿಲ್ಡಿಂಗ್, ಉಡುಪಿ.
ಶಾಖೆಗಳು:- ಉಡುಪಿ, ಧಾರವಾಡ, ಮಂಗಳೂರು.

ಸುಲಭ ದರದಲ್ಲಿ ಸಿಗುತ್ತವೆ

ವೆರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫುಡು ಪುಸ್ತಕ, ರಶೀದಿಗಳು, ಕೋರ್ಟ್‌ಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಜಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ವಿಚಾರ ವರ್ಷ

ಜೀವ ವಿಮೆಯಂತೆ ಧಾನ್ಯವಿಮೆ

ಮರುಗುವ ರೈತನಿಗೆ ಧಾನ್ಯವಿಮೆಯೊಂದೇ ರಕ್ಷಣೆಯೊಯ ಬಲ್ಲುದು

ಭಾರತದಲ್ಲಿ ಸುವಿಶಾಲವಾಗಿ ಹರಡಿರುವಿಮೋಯೋಜನೆಯೆಂದರೆ, ಜೀವವಿಮೆ. ನೌಕೆ, ಅಗ್ನಿ ಹಾಗೂ ವಾಹನಗಳ ವಿಮೋಯೋಜನೆಗಳೂ ಇವೆ. ಆದರೆ, ಇನ್ನೆಲ್ಲವುಗಳಲ್ಲಿ, ಜೀವವಿಮೆಯ ನಂತರದ ಸ್ಥಾನವನ್ನು ಧಾನ್ಯವಿಮೆಯು ಏರಬೇಕೆತ್ತು. ಆದರೆ, ಧಾನ್ಯವಿಮೆ ಅಥವಾ ಇದೇ ವಿಧದ ಬೇರೊಂದು ವಿಮೋಯೋಜನೆಯು ಭಾರತದಲ್ಲೆನ್ನೂ ಪ್ರಾರಂಭವಾಗಿಲ್ಲ. ಇದಕ್ಕೆ ಹಲವಾರು ಕಾರಣವಿರಬಹುದು.ನಮ್ಮವರಡು ಯೋಜನೆಗಳ ಗುರಿಯು ವಿಶಾಲವಾಗಿದ್ದರೂ ಭಾರತೀಯ ರೈತನ ಬೆಳೆಯು ಕಾರಣಾಂತರದಿಂದ ನಾಶವಾಗಿ ಅವನು ತೊಳಲಾಡುವಾಗ ಅತನ ಸಹಾಯ ಸೆಯ್ಯಬಲ್ಲ ಒಂದು ಭದ್ರತಾ ಯೋಜನೆಯು ಇದರಲ್ಲಿ ಆಡಕವಾಗಿರುವುದು ಶೋಚನೀಯ.

ಎಲ್ಲ ವ್ಯಾಪಾರಗಳಲ್ಲಿ ಲಾಭದ ಮೇಲೆ ಮಾತ್ರ ಕರವನ್ನು ಹೇರುವುದಾದರೂ ಕೃಷಿ ತೆರಿಗೆಯು ಮಾತ್ರ ಲಾಭದ ಮೊತ್ತವನ್ನು ಹೊಂದಿಕೊಂಡು ಹೇರಲ್ಪಡುವುದಿಲ್ಲ. ಅಲ್ಲದೇ ವ್ಯಾಪಾರಿಯೊಬ್ಬನು ತನಗೆ ದರಿಂದ ನಷ್ಟವಾಯಿತೆಂದಾಗ ವ್ಯಾಪಾರವನ್ನು ನಿಲ್ಲಿಸಿಬಿಡಬಹುದು. ಆದರೆ, ರೈತನು ಹಾಗೆ ಮಾಡಲಾರು ತನ್ನ ಆನುವಂಶಿಕ ಜೀವನೋಪಾಯವನ್ನಾತ ತ್ಯಜಿಸಲಾರು; ಇದನ್ನು ಹೊರತು ಬೇರೆ ಉದ್ಯೋಗವನ್ನು ಮಾಡಲಾರು. ಅಥವಾ ಇದಕ್ಕೆಂತ ಹೆಚ್ಚಿನ ಬೆಳೆ ತೆಗೆದೇನು ಎಂದು ಧೈರ್ಯಗೊಳ್ಳಲಾರ. ಆದರೂ ತನಗೆ ಆಂಟಿಕೊಂಡಿರುವ ಈ ಕೃಷಿಯನ್ನೇ ಮುಂದಕ್ಕಾದರೂ ಒಳ್ಳೆಯದಾಗಿತು ಎಂಬ ಬರವಸೆಯಿಂದ ಬಿಗಿಹಿಡಿಯು ಬೇಕಾದ ಪ್ರಯತ್ನವನ್ನು ಬರುತ್ತಾನೆ ಹೀಗಾಗಿಯೇ ಅಲ್ಪ ಹಿಡುವಳಿಯ ರೈತರು ಹೆಚ್ಚಾಗಿ ಸಾಲಗಾರರಾಗಿಯೇ ಇರುತ್ತಾರೆ. ಇದಕ್ಕೆ ಹಲವಾರು ಕಾರಣಗಳಿರಬಹುದು., ಇಲ್ಲಿ ಒಂದನ್ನು ಮಾತ್ರ ಪ್ರಸ್ತಾಪಿಸಬಹುದು.

ರೈತನೆಂದರೆ, ರಾಷ್ಟ್ರದ ಬೆಂಗೋಲೆಂಬ ಉತ್ತಮ ಹೆಸರಿನಿಂದ ನಾವು ಕರೆಯುತ್ತೇವೆ. ತನ್ನ ಅಜ್ಜಂದಿರ ಕಾಲದಿಂದಲೂ ನಮ್ಮ ಮೇಲ್ಮೈಯನ್ನು ಹಾರೈಸಿದ ರೈತ ನಮ್ಮ ಸಹಾನುಭೂತಿಗೆ ಅರ್ಹನಾಗಿರ್ವಾನೆ. ಕೈಮಗ್ಗ, ಕುಕ್ಕೆ ಹೆಣೆಯುವುದು ಮೊದಲಾದ ವೃತ್ತಿಗಳಂತೆಯೇ ಕೃಷಿಯೂ ಒಂದು ಕಲೆಯೆನ್ನಬಹುದು. ಆದರೆ, ಕೈಮಗ್ಗ ನೇಯುವವರು ಪಡೆಯುವಷ್ಟು ಭಾಗ್ಯವನ್ನು ರೈತರು ಪಡೆಯುತ್ತಿರುವುದಿಲ್ಲ. ಈ ಮಾತಿನಿಂದ ಇತರ ಕಲೆಗಳಿಗೆ ಪ್ರೋತ್ಸಾಹ ಕೊಡಬಾರದೆಂದರ್ಥವಲ್ಲ; ಆದರೆ, ಅದೇ ರೀತಿಯಲ್ಲಿ ರೈತರನ್ನೂ ನೋಡಿಕೊಳ್ಳಬೇಕು.

ರೈತರಿಗೆ ಸರಕಾರದ ಮೂಲಕ ಭೂಕಂದಾಯ ಹಾಗೂ ಸರಕಾರಕ್ಕೆ ಅವರಿಂದ ಸಲ್ಲಬೇಕಾದ ಮೊಬಲಗುಗಳಲ್ಲಿ ಕರುಣೆದೋರಲಾಗುತ್ತದೆ. ಹಳ್ಳಿಯ ಪರೀಲಾದಿಗಳ ಕ್ರೂರ ದಯೆಯಿಂದ ಇದರ ಫಲಾಫಲಗಳನ್ನು ಗಮನಿಸದಿದ್ದರೆ, ಇದೂ ಒಂದು ವರವೆನ್ನಲೇ ಬೇಕು. ಆದರೂ ಗ್ರಾಮಾಧಿಕಾರಿಗಳ ಕೃಪಾಕಟಾಕ್ಷದಿಂದ ಈ ವಿನಾಯಿತಿ ದೊರೆತರೂ ಅದೆಷ್ಟು? ಬೆಳೆ ತೆಗೆಯುವ ವೆಚ್ಚವನ್ನು ಹೋಲಿಸಿದರೆ, ಇದೇನು ತೃಣವೆನ್ನಲೇ ಬೇಕು. ಹಾಗಾಗಿ ಧಾನ್ಯವಿಮೆಯು ಅವಶ್ಯಕತೆ ತುಂಬ ಇದೆಯೆಂಬುದು ನಿರ್ವಿವಾದ. ಇದು ಮಾತ್ರ ರೈತರಿಗೆ ಭದ್ರತೆಯನ್ನೀಯ ಬಲ್ಲುದು.

ಆದರೆ, ಧಾನ್ಯವಿಮೆ ಯೆಂಬುದನ್ನು ತೊಡಗಿಸಲು ಸಾಧ್ಯವೆ? ಎಂಬುದೀಗ ಏಳುವ ಮುಖ್ಯ ಪ್ರಶ್ನೆ. ಬೆಳೆಯು ಸಂಪೂರ್ಣ ನಾಶವಾದಾಗ, ರೈತನಿಗೆ ಭದ್ರತೆಯಿಯಬಲ್ಲ ಪೂರ್ಣ ಧಾನ್ಯವಿಮೆ ಮತ್ತು ಆಂಶಿಕವಾಗಿ ನಾಶವಾದಾಗ ನೆರವಾಗಬಲ್ಲ ಆಂಶಿಕ ಧಾನ್ಯವಿಮೆಗಳು ಮೊದಲಾಗಬೇಕು. ಪೂರ್ಣ ಧಾನ್ಯವಿಮೆಯ ಯೋಜನೆಯೇ ಪ್ರಯೋಜನಕಾರಿಯೆನ್ನಬಹುದು. ರಾಜ್ಯ ಸರಕಾರ ಅಥವಾ ಕೇಂದ್ರ ಸರಕಾರಗಳ ಆರ್ಥಿಕ ಪರಿಸ್ಥಿತಿಯಿಂದಾಗಿ ಧಾನ್ಯವಿಮೆಯ ಯೋಜನೆಯನ್ನು ಅವುಗಳು ಕೈಗೊಳ್ಳುವ ಸ್ಥಿತಿಯಲ್ಲಿಲ್ಲ. ಆದುದರಿಂದ, ಈ ಕ್ಷೇತ್ರದಲ್ಲಿ ಸದ್ಯ ಮುಖ್ಯವಾಗಿ ಕೆಲವೇ ಧಾನ್ಯಗಳಿಗೆ, ಬೆಳೆಸುವ ವೆಚ್ಚದ ಮಟ್ಟದ ವರೆಗೆ ಪರಿಹಾರ ನೀಡುವಂತೆ ಖಾಸಗಿ ಸಂಸ್ಥೆಗಳನ್ನು ಏಕೆ ಕಟ್ಟಬಾರದು? ಸರಕಾರವೂ ಈಗಿನಂತೆಯೇ (ಮುಂದಕ್ಕೂ ತನ್ನ ಸಹಾಯಧನವನ್ನಿತ್ತರೆ, ರೈತನಿಗೆ ಮುಂದಿನ ಬೆಳೆ ಬೆಳೆಯಲು ಸರಿಯಾಗುವುದು.



ಕೆಲವೋರ್ನಿಯಾ ರಿಯನ್ನರು ಅಣುವಿನಿಂದ ವಿದ್ಯುಚ್ಛಕ್ತಿಯನ್ನು ತಯಾರಿಸುವಲ್ಲಿ ಯಶಸ್ಸು ಪಡೆದಿದೆ. ಚಿತ್ರದಲ್ಲಿ ಇಂಜಿನಿಯರು ಈ ವಿಧಾನವನ್ನು ಪರೀಕ್ಷೆಸುತ್ತಿರುವುದನ್ನು ಕಾಣಬಹುದು.

ಪ್ರೀಮಿಯಂ ಕಂತನ್ನು ಯಾರು ತೆರಬೇಕು ಎಂದರೆ, ಸಾಮಾನ್ಯ ವಿಮೆಯ ಕ್ರಮವನ್ನು ಬಿಟ್ಟು, ಅಗ್ನಿ ವಿಮೆ, ಅಕಸ್ಮಿಕ ವಿಮೆಗಳ ಮಾದರಿಯನ್ನು ಇದಕ್ಕೆ ಹೊಂದಿಸಿಕೊಳ್ಳಬಹುದು.

ಬರಗಾಲ ಪ್ರದೇಶದ ರೈತರು ಈ ವಿಮೆಗೆ ಸ್ವಯಮಾಗಿಯೇ ಮುಂಬರಬಹುದು; ಆದರೆ. ಉಳಿದೆಡೆಯವರು ಬರದಿರುವುದೂ ಸಾಧ್ಯವಾದುದರಿಂದ ಸಾರ್ವಜನಿಕ ರಕ್ಷಣೆಯ ದೃಷ್ಟಿಯಿಂದ, ಮೋಟಾರು ವಾಹನಗಳಿಗೆ ಕಡ್ಡಾಯ ವಿಮಾ ಯೋಜನೆಯಿರುವಂತೆ, ಇಲ್ಲಿಯೂ ಹೀಗಿರಬೇಕು. ಹೀಗಾದರೆ, ಈ ಯೋಜನೆಯೂ ಫಲಕಾರಿಯಾಗುವುದು.

ಯಾವುದೇ ವಿಧದ ಭೂಮಿಯಿರಲಿ, ಅದು ಕೃಷಿಯೋಗ್ಯವೆಂಬಾದ ಮಾತ್ರಕ್ಕೆ ಆ ಸ್ಥಳವನ್ನು ಧಾನ್ಯವಿಮೆಗೆ ಗುರಿ ಪಡಿಸುವುದರಿಂದ, ಬಂಜರು ಭೂಮಿಗಳಲ್ಲಿಯೂ ಸಾಗುವಳಿ ಮಾಡುವ ಅಭ್ಯಾಸವು ಹುಟ್ಟುವುದು ಸಾಧ್ಯ. ಆದೇ ರೀತಿ ಬಂಜರಾಗಿದ್ದ ಭೂಮಿಯಲ್ಲಿ ಹೊಸತಾಗಿ ಕೃಷಿ ಮಾಡುವಾಗ, ಕೊಂಚ ನಷ್ಟವಾಗಬಹುದಾದುದರಿಂದ ಹಾಗಾಗದಂತೆ, ಕೃಷಿ ವೆಚ್ಚಕ್ಕೆ ವಿಮೆ ಮಾಡುವ ಸೌಲಭ್ಯವಿರಬೇಕು.

ಪ್ರಾಥಮಿಕಸ್ತರದಲ್ಲಿ ಆಹಾರ ಧಾನ್ಯಗಳಿಗೆ ಈ ವಿಮೆಯನ್ನು ಅನ್ವಯಿಸಬೇಕು. "ಹೆಚ್ಚು ಆಹಾರ ಬೆಳೆಯಿರಿ" ಚಳುವಳಿಗಿಂತ ಇದರಿಂದ ಉತ್ಪತ್ತಿಯೂ ಉತ್ತೇಜನವೂ ಬೆಳೆಯುವುದು ಸಾಧ್ಯ. ಹಾಗೆಯೇ ವ್ಯಾಪಾರೀ ಬೆಳೆಗಳಿಗೂ ಇದೇ ರೀತಿಯಂ ವಿಮೆಯನ್ನು ಇಳಿಸುವ ಸೌಕರ್ಯವನ್ನಿತ್ತಲ್ಲಿ ರೈತರಿಗೆ ಸಾಕಷ್ಟು ಭದ್ರತೆಸಿಗವುದು. ಬೆಳೆಯ ರೋಗಾಣುಗಳಿಂದಲೋ ನೆರೆಯಿಂದಲೋ ಹಾಳಾಗಾಗ, ಅವರ ಬೆವರಿಳಿತವು ನೀರು ಪಾಲಾಗದಂತಿದು ನೋಡಿಕೊಳ್ಳುವುದು.

ದೇಶದ ಅಭಿಮಾನಿಗಳು ಈ ಕಾರ್ಯವನ್ನು ಕೈಗೊಳ್ಳಲು ನೊದಲುಮಾಡಿದರೆ ಆಗ ನಮ್ಮ ಮೂಲಭೂತ ಸಮಸ್ಯೆಯೊಂದು ಪರಿಹಾರವಾಗುವುದು. ನಮ್ಮ ರೂಪಿತವಾಗುತ್ತಿರುವ ತೃತೀಯ ಯೋಜನೆಯಲ್ಲಿಯೂ ಈ ಯೋಜನೆಯನ್ನು ಸೇರಿಸುವ ಸಾಧ್ಯಾಸಾಧ್ಯತೆಗಳನ್ನು ನಿಮುಶಿಸಲಿ.

—ಯೋಜನಾ.

ಕೇಶ ಸೌಂದರ್ಯವೇ—ಯುವತಿ, ಯುವಕರ ಶೃಂಗಾರ.

ಅಂಥ ಕೇಶವೃದ್ಧಿ (ಕೂದಲ ಬೆಳವಣಿಗೆ)ಗಾಗಿ ಅನೇಕ ತಲೆ ಎಣ್ಣೆಗಳನ್ನು (Hair Oils) ಉಪಯೋಗಿಸಿ ನಿರುತ್ಸಾಹರಾಗಿರುವುದು ಸಹಜ. ಆದರೆ:—

ಹಿಮಗಿರಿ ತೈಲ ಉಪಯೋಗಿಸುವುದರಿಂದ

ತಲೆನೋವು, ಕಣ್ಣಾರಿ, ಕಣ್ಣಿನಲ್ಲಿ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೂದಲು ಉದುರುವಿಕೆ, ಕಣ್ಣು ಮಂಜು, ನಿದ್ರಾಭಂಗ ಈ ವ್ಯಾಧಿಗಳನ್ನು ಪರಿಹರಿಸಿ ಕೇಶವೃದ್ಧಿ ಮಾಡುವುದು.

ಸೂಚನೆ:— ಹಿಮಗಿರಿ ತೈಲವೆಂದು "ಬೇರೆ ಗಿರಿಗಳ" ಹೆಸರುಳ್ಳ ನಕಲಿ ಮಾಲನ್ನು ಕೊಂಡು ಮೋಸಹೋಗಬೇಡಿರಿ.

Wanted Agents & Stockists

Manufacturers: RATAN MISRI DEPOT
Avenue Road Cross, BANGALORE-2

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S.No.384/1958

ಧನಾಯಮ್ಮ—ವಾದಿಳು

ಶ್ರೀನಿವಾಸಭಟ್ಟ ಸಹಾ—ಪ್ರತಿವಾದಿಥ

2ನೇಪ್ರತಿವಾದಿ ಕಾರ್ಕಳ ತಾಲ್ಲು ಕಡಂದಲೆ ಗ್ರಾಮದಲ್ಲಿರುವ ಶ್ರೀನಿವಾಸ ಭಟ್ರ ಮಗ ಸೀತಾರಾಮಭಟ್ಟರಿಗೆ—

ನೀವು ವ 1ನೇಪ್ರತಿವಾದಿ ಕೊಡಾ ತಾ26.9.1952ರಲ್ಲು ರೂ1000/=ಕ್ಕೆ ವಾದಿಳಿಗೆ ರಿ.ನಿಕಿಂ.ಬರಕೊಟ್ಟ ತೋರಡಪಿನ ಅಕ್ಷರಬದ್ಧ ವನ್ನೆರೆ ಬರಮಾಡಿಕೊಳ್ಳುವಲೆ ವಾದಿಳು ಬಾಳ್ಳ ವಾದಿದ ಮೇಲ್ಕಂಡ ವಾಯೆಯು ನಮ್ಮ ಹಾಜರಾತಿ ಬಗ್ಗೆ ತಾ10.1.1959ಕ್ಕೆ ಇಟ್ಟಿದೆ. ನೀವು ಆ ದಿನ ಪೂರ್ವಾಪ್ಞ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿಮ್ಮದೇನಾದರೂ ಅಕ್ಷೇಪಣೆಗಳಿದ್ದಲ್ಲಿ ಉಯರ ಸತಕ್ಕದ್ದು. —ಇಲ್ಲದಿದ್ದಲ್ಲಿ ವಿಕಪಕ್ಷವಾಗಿ ತೀರ್ಮಾನಿಸಲಾದೀತು.

(By order of the Court)

K. S. Hegde,
Advocate for Plff.

Karkala, 3-12-1958

ಭೂ ವಿಧೇಯಕ

ಮೈಸೂರು ಭೂ ವಿಧೇಯಕದ ಮುಖ್ಯ ತತ್ವಗಳು

ವಿಧಾನ ಸಭೆಯಲ್ಲಿ ನೊನ್ನೆ ತಾನೇ ಮಂಡಿಸಲಾದ ಈ ವಿಧೇಯಕದ ಮೇಲೆ ಮುಂದಿನ ಅಧಿವೇಶನದಲ್ಲಿ ತೀವ್ರ ಚರ್ಚೆ ಸಂಭವನೀಯ

೧. ರೂ. ೪೦೦ ವಾರ್ಷಿಕ ನಿವ್ವಳ ಆದಾಯವನ್ನು ತರುವ ಜಮೀನು ಮೂಲ ಹಿಡುವಳಿಯಾಗಿದೆ. ಇಂತಹ ಮೂರು ಮೂಲ ಹಿಡುವಳಿ, ಎಂದರೆ, ೧,೨೦೦ ರೂವಾಯಿ ವಾರ್ಷಿಕ ನಿವ್ವಳ ಆದಾಯ ತರುವ ಭೂಮಿಯು ಕೌಟುಂಬಿಕ ಹಿಡುವಳಿ. ಒಂದು ಕುಟುಂಬವು ಮೂರು ಕೌಟುಂಬಿಕ ಹಿಡುವಳಿ; ಎಂದರೆ, ರೂ. ೩,೬೦೦ ಆದಾಯ ತರುವ ಭೂಮಿಯನ್ನು ಹೊಂದಬಹುದು.

೨. ನಿವ್ವಳ ಆದಾಯವೆಂದರೆ, ನೀರಾಶ್ರಯವಿರುವ ಭೂಮಿಯ ವಾರ್ಷಿಕ ಉತ್ಪನ್ನದ ಮೌಲ್ಯದ ಅರ್ಧ ಮತ್ತು ಇತರ ಭೂಮಿಗಳ ವಾರ್ಷಿಕ ಉತ್ಪನ್ನದ ಮೂರರಲ್ಲೊಂದಂಶ. ಈ ಧಾರಣೆಯನ್ನು ನಿರ್ಧರಿಸಲು, ೧೯೫೨-೫೩ರ ಬೆಲೆಯನ್ನು ಪರಿಗಣಿಸಲಾಗುವುದು.

೩. ಗೇಣಿಯ ಕ್ರಮ ಇಂತಿದೆ. ನೀರಾಶ್ರಯ ವಿರುವ ಕಡಿ ಒಟ್ಟು ಉತ್ಪನ್ನದ ೩ನಾಲಂಶ, ಇತರೆಡೆ ೪ ರಲ್ಲೊಂದಂಶ. ಇದುವರೆಗೆ ಈ ಗೇಣಿಗಿಂತ ಪ್ರಚಲಿತ ಗೇಣಿಯು ಕಡಿಮೆಯಿದ್ದರೆ, ಅದನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಆದರೆ, ಇನ್ನು ಮುಂದೆ ಗೇಣಿಗೆ ಭೂಮಿಯನ್ನು ಕೊಡುವವರು ಈ ಹೊಸ ದರದಲ್ಲಿಯೇ ಗೇಣಿ ಪಡೆಯಲು ಬಾಧ್ಯರಾಗುತ್ತಾರೆ. ಮೂಲ ಹಿಡುವಳಿಗಿಂತಲೂ ಕಡಿಮೆ ಭೂಮಿ ಉಳ್ಳವರು, ಅಪ್ರಾಪ್ತರು, ಅವಿವಾಹಿತ ಸ್ತ್ರೀಯರು ವಿಧವೆಯರು ಊನ ಹೊಂದಿದವರು ಶಾಶ್ವತ ಆಶಕ್ತರು ಹಾಗೂ ರಕ್ಷಣಾ ದಳದಲ್ಲಿರುವವರುಮಾತ್ರ ಇನ್ನು ಮುಂದೆ ಭೂಮಿಯನ್ನು ಗೇಣಿಗೆ ಕೊಟ್ಟು ಸಾಗುಮಾಡಿಸಬಹುದು. ಭೂಕಂದಾಯವನ್ನು ಧನಿಯೇ ಕೊಡಬೇಕು. ಬೇಸಾಯ ಮಾಡುವ ವಿಚ್ಛೇದವು ಒಕ್ಕಲಿನದು ಬಿಟ್ಟಿ ಇತ್ಯಾದಿಗಳನ್ನು ಧನಿಗಳು ಪಡೆಯಬಾರದು.

೪. ಈ ಶಾಸನವು ವ್ಯವಹಾರಕ್ಕೆ ಬರುವಂದಿನಿಂದ ಕೌಟುಂಬಿಕ ಹಿಡುವಳಿಯ ಮೂರು ಪಾಲಿಗಿಂತ ಹೆಚ್ಚು ಭೂಮಿಯನ್ನು ಯಾರೂ ಹೊಂದುವುದು ಸಾಧ್ಯವಿಲ್ಲ. ಆದರೆ, ತೋಟಗಳು, ಹಣ್ಣಿನತೋಟ, ಪಶುಪಾಲನೆ, ಹೈನುಉದ್ಯೋಗ ಕಟ್ಟು ಇತ್ಯಾದಿಗಳ ತೋಟಗಳನ್ನು ಛಿದ್ರಗೊಳಿಸುವುದರಿಂದ ಪರಿಣಾಮ ನೆಟ್ಟಗಾಗಲಾರದೆಂದು ರಾಜ್ಯಸರಕಾರವು ಮನಗಂಡರೆ, ಅವನ್ನು ಈ ನಿಯಮಕ್ಕೆ ಬಾಹಿರಗೊಳಿಸಬಹುದು.

೫. ಸ್ವಂತ ಬೇಸಾಯ ಮಾಡುವವನ ಕುಟುಂಬದಲ್ಲಿ ೫ಕ್ಕಿಂತಲೂ ಹೆಚ್ಚು ಸದಸ್ಯರು ಇದ್ದರೆ, ಅಂತಹ ಸಂದರ್ಭದಲ್ಲಿ ಪ್ರತಿ ಹೆಚ್ಚಿನ ವ್ಯಕ್ತಿಗೊಂದು ಕೌಟುಂಬಿಕ ಹಿಡುವಳಿಯಂತೆ ಒಟ್ಟು ಆರು ಕೌಟುಂಬಿಕ ಹಿಡುವಳಿಯನ್ನಿಟ್ಟುಕೊಳ್ಳಬಹುದು ಅಂತಿಯವಂತಾನ ಕಟ್ಟಿನವರೆಗೆ ಈ ಪರಮಾವಧಿ ಮಿತಿಯನ್ನು ೬ ಕೌಟುಂಬಿಕ ಹಿಡುವಳಿಯೆಂದು ನಿರ್ಧರಿಸಿದೆ ಕಾಫಿ, ಚಾ, ರಬ್ಬರು ತೋಟಗಳಿಗೆ ೧೦೦ ಎಕ್ರೆ,ಏಲಕ್ಕಿ ೨೫ ಎಕ್ರೆ,ತೆಂಗು ೨೦ ಎಕ್ರೆ, ಅಡಿಕೆ ಮತ್ತು ಮೆಣಸು ೧೦ ಎಕ್ರೆ ತೋಟಗಳು ಪರಮಾವಧಿ ಮಿತಿಗಳಾಗಿವೆ.

೬. ಭೂಮಾಲಿಕನಿಗೆ ಬೇಸಾಯಕ್ಕೆ ಭೂಮಿ ಇರಲಿ ಇಲ್ಲದಿರಲಿ, ಅವನ ಭೂಮಿ ಕೃಷಿ ಮಾಡುವವನು ಕನಿಷ್ಟ ಮೂಲ ಹಿಡುವಳಿಯನ್ನು, ಭೂಮಿಯನ್ನು ಪಡೆಯುತ್ತಾನೆ. ಹಿಡುವಳಿಯ ಮಿತಿಮೀರಿದ ಭೂಮಿಯನ್ನು ಮಾಲಿಕರು ಸರಕಾರಕ್ಕೊಪ್ಪಿಸಬೇಕು. ಸರಕಾರವು ಈ ಭೂಮಿಯನ್ನು ಭೂರಹಿತ ಗೇಣಿದಾರ, ಭೂರಹಿತ ಬೇಸಾಯಗಾರ, ವ್ಯಾವಸಾಯಿಕ ಕೂಲಿಗಾರ, ಮೂಲಹಿಡುವಳಿಗಿಂತ ಕಡಿಮೆ ಭೂಮಿಯಿರುವ ಗೇಣಿದಾರ ಮತ್ತು ಸ್ವಯಂ ಬೇಸಾಯ ಮಾಡುವ ಅಥವಾ ಮಾಡಲು ಇಷ್ಟ ಪಡುವವರಿಗೆ ಕ್ರಮಾನುಗುಣ ಪ್ರಾಶಸ್ತ್ಯದಲ್ಲಿ ಹಂಚುವುದು.

೭. ಮಾಲಿಕನು ತನ್ನ ಗೇಣಿದಾರನಿಂದ ಮರಳಿ ಪಡೆಯುವ ಮತ್ತು ಸ್ವಂತ ಬೇಸಾಯೆದಲ್ಲಿರುವ ಭೂಮಿಯು ಮೂರು ಕೌಟುಂಬಿಕ ಹಿಡುವಳಿಗೆ ಮೀರಬಾರದು.

೮. ಗೇಣಿದಾರನಿಗೆ ಮೂಲಹಿಡುವಳಿಯ ಅರ್ಧಾಂಶಕ್ಕೆ ಕಡಿಮೆಯಿಲ್ಲದಂತೆ ಅಧವಾ ಅವನಲ್ಲಿರುವ ಒಟ್ಟು ಭೂಮಿಯ ಅರ್ಧದಷ್ಟು ಉಳಿಯುವಂತೆ ಸ್ವಂತ ಬೇಸಾಯಕ್ಕೆ ಭೂಮಾಲಿಕನು (ಮೇಲಿನ ನಿಯಮಗಳಿಗೊಳಪಟ್ಟು) ಭೂಮಿಯನ್ನು ವಶಪಡಿಸಿಕೊಳ್ಳಬಹುದು. ಈಗಲೇ ಮೂರು ಕೌಟುಂಬಿಕ ಹಿಡುವಳಿಗಿಂತ ಅವನೊಡನಿರುವ ಭೂಪ್ರಮಾಣವು ಮೀರಿರುವುದಾದರೆ, ಅಂಥ ಭೂಮಾಲಿಕನಿಗೆ ಭೂವಶಪಡಿಸುವ ಅಧಿಕಾರವಿಲ್ಲ.

೯. ಭೂಸ್ವಾಮಿಯು ಸ್ವಂತ ಬೇಸಾಯಕ್ಕೆ ಗೇಣಿದಾರನಿಂದ ಭೂಮಿಯನ್ನು ಬಿಡಿಸಿಕೊಳ್ಳುವಾಗ, ಅವನಲ್ಲಿ ಮೂಲ ಹಿಡುವಳಿಗಿಂತ ಕಡಿಮೆ ಭೂಮಿಯಿರಬೇಕು. ಅವನು ಸೂಚನೆಯಿತ್ತು ಆ ಸೂಚನೆಯ ಅವಧಿ (೧೯೫೯ ನಿಯಮದಂತೆ) ಮುಗಿಯುವ ತನಕ ಬೇರೆ ಯಾವುದೇ ಭೂಮಿಯನ್ನು ಕೃಷಿ ಮಾಡದೇ ಇದ್ದಲ್ಲಿ ಮಾತ್ರ ರಕ್ಷಣೆ ಪಡೆದ ಒಕ್ಕಲನ್ನುಳಿದ ಇತರ ಗೇಣಿದಾರನಿಂದ ಮಾತ್ರ ಧನಿಯು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು.

೧೦. ಶಾಶ್ವತ ಒಕ್ಕಲುಗಳಲ್ಲದೆ ಬೇರೆ ರೀತಿಯ ಗೇಣಿದಾರರಿಂದ ಸ್ವಂತ ಬೇಸಾಯ ಮಾಡುವ ಸದುದ್ದೇಶದಿಂದ ಭೂಸ್ವಾಮಿಯು ಭೂಮಿಯನ್ನು ಬಯಸಿದರೆ ಅಧವಾ ವ್ಯವಸಾಯೇತರ ಕಾರಣಗಳಿಗಾಗಿ ಅಪೇಕ್ಷಿಸಿದರೆ, ಒಕ್ಕಲನ್ನು ರದ್ದುಗೊಳಿಸುವ ತನ್ನ ಉದ್ದೇಶವನ್ನು ೨ ವರ್ಷಕ್ಕೂ ಮೊದಲು ಒಕ್ಕಲಿಗೆ ಬರಹ ಮೂಲಕ ಸೂಚನೆಕೊಡಬೇಕು. ಅಯಾಯ ಸಂದರ್ಭದಲ್ಲಿ ಕೌಟುಂಬಿಕ ಹಿಡುವಳಿಯ ವಿಸ್ತೀರ್ಣವನ್ನು ನಿರ್ಧರಿಸಿದ ದಿನದಿಂದ ಮೂರು ವರ್ಷಗಳೊಳಗೆ ಮನವಿಸಲ್ಲಿಸಿದವರಿಗೆ ಮಾತ್ರ ಗೇಣಿತನವನ್ನು ರದ್ದುಗೊಳಿಸುವ ಇಂತಹ ಸೂಚನೆ ಕೊಡುವ ಅಧಿಕಾರವಿದೆ ರಕ್ಷಣೆ ಪಡೆದ ಅಧವಾ ಶಾಶ್ವತ ಗೇಣಿದಾರನಾಂಬ, ಒಂದೇ ಭೂಮಿಯನ್ನು ಕಡಿಮೆ ಪಕ್ಷ ೧೨ ವರ್ಷ ಸಾಗುವಳಿ ಮಾಡುತ್ತಿರುವವನೆಂದು ಅರ್ಥ.

೧೧. ಈ ರೀತಿ ಶಾಸನವು ವ್ಯವಹಾರಕ್ಕೆ ಬಂದ ದಿನದಿಂದ ಸರಕಾರದ ಸ್ವಾಧೀನವಾಗುವ ಭೂಮಿಗೆ ಭೂ

(ಅನೇ ಪುಟ ನೋಡಿರಿ)

ಕ್ಷಯರೋಗಿಗಳ ವೈಯಕ್ತಿಕ ವೈಶಿಷ್ಟ್ಯಗಳು ಮತ್ತು ಅವರ ಪುನರ್ನಿವೇಶನದ ಆವಶ್ಯಕತೆ

ಆರ್ಥಿಕ ಮತ್ತು ಉದ್ಯೋಗ ಶರ್ತಗಳ ವ್ಯತ್ಯಾಸವನ್ವಯ ಕ್ಷಯರೋಗಿಗಳ ಪುನರ್ನಿವೇಶನವು ಆದರಿಸಿಕೊಂಡು ಸತತ ಮುಂದರಿಯತಕ್ಕ ವಿಧಾನವಾಗಿದೆ. ಆದರಲ್ಲೂ ವಿಶೇಷತಃ ರೋಗಿಯ ವೈಯಕ್ತಿಕ ಉಪೇಕ್ಷಾವಿಕೆಯನ್ನು ಆತನ ವೈಶಿಷ್ಟ್ಯ ಮತ್ತು ಆವಶ್ಯಕತೆಯ ದೃಷ್ಟಿಯಿಂದ ಪರಿಶೀಲಿಸಬೇಕು. ಈ ರೀತಿಯ ಕಾರ್ಯವು ಜಯಶೀಲವಾಗಬೇಕಾದರೆ ಜನತೆಯ ಆರ್ಥಿಕ ನೆರವು ಬೇಕು. ಈ ಕ್ಷಯರೋಗ ನಿವಾರಣಾ ಚಳವಳಿಯಲ್ಲಿ ಭಾಗವಹಿಸಿ ಹೆಚ್ಚು ಸಂಖ್ಯೆಯಲ್ಲಿ ಟಿ. ಬಿ. ಮೊಹರುಗಳನ್ನು ಕೊಂಡುಕೊಳ್ಳುವುದೇ ಅತ್ಯಧಿಕ ಮಟ್ಟದಲ್ಲಿ ಸಹಕಾರ ನೀಡುವ ವಿಧಾನವಾಗಿದೆ.

ಇವುಗಳು ದೊರೆಯುವ ಸ್ಥಳಗಳು:

1. ಗೌರವ ಕಾರ್ಯದರ್ಶಿ, ಮುದ್ರೆ ಮಾರಾಟ ಸಮಿತಿ, ಗೋಪಾಲಕೃಷ್ಣ ದೇವಸ್ಥಾನ ರಸ್ತೆ, ನುಂಗಳೂರು.
2. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್, ಮಡಿಕೇರಿ, ಕೊಡಗು.
3. ಗೌರವ ಕಾರ್ಯದರ್ಶಿ ಮೈಸೂರು ರಾಜ್ಯ ಕ್ಷಯರೋಗ ಎಸೋಸಿಯೇಶನ್, 'ಲೇಡಿ ವಿಲ್ಲಿಂಗ್ಡನ್' ಟಿ. ಬಿ. ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ರಾಜ್ಯದಲ್ಲಿನ ಇತರ ಎಜನ್ಸಿಗಳು.

ಭಾರತದಲ್ಲಿ ಒಂಭತ್ತನೇ ಕ್ಷಯರೋಗ ಮುದ್ರೆ ಮಾರಾಟ ಚಳವಳಿ

(ಭಾರತ ಕ್ಷಯರೋಗ ಸಂಘ, ನ್ಯೂ ಡೆಲ್ಲಿ ಇವರ ಆಶ್ರಯದಲ್ಲಿ ವಿಶೇಷವಾಗಿ ಏರ್ಪಟ್ಟಿದ್ದು)

ಈ ಸ್ಥಳ ದಾನಿಗಳು:-

ಮೆಸರ್ಸ್ ಮಾಫಟ್‌ಲಾಲ್ ಗಾಗಲ್‌ಭಾಯಿ ಎಂಡ್ ಕೊ. ಪ್ರೈ. ಲಿ. ಮುಂಬಯಿ.

ತಪ್ಪಮಾನ, ಅನ್ಯಾಯ ಮತ್ತು ಅಸತ್ಯಗಳನ್ನು ಪ್ರತ್ಯಕ್ಷವಾಗಿ ಕಂಡೂ ಕುರುಡನಂತೆ ವರ್ತಿಸುವವನನ್ನು ಉದಾರಿಯೆಂದು ಕರೆಯುವುದಿಲ್ಲ. ಅಂತ ಹವನನ್ನು ಅಂಜುಬುರುಕನೆಂದೇ ಲೋಕ ತಿಳಿದುಕೊಳ್ಳುವುದು. ಆದುದ ರಿಂದ ಉದಾಹರಚರಿತನು ಇವನೆಂದೂ ಸಹಿಸಿಕೊಂಡು ಸುಮ್ಮನುಳಿಯ ಲಾರನು.

NAVAYUGA

Founder:—

A. B. SHETTY,

Former Minister for Public Health Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೪	೧೧-೧೨-'೫೮ಜಿಲ	೧೪

ಮರೆಯಂದುಳಿಯಲಿ

ಭಾಷಾವಾರು ಪ್ರಾಂತರಚನೆಯನ್ನು ಬೇಡಿ ಮಾಡಿದ ಚಳುವಳಿ, ಫಟ್ಟು ಸ್ರ ಯಾಸಗಳಿಂದ ರಾಜ್ಯ ಪುನಾರಚನಾ ಆಯೋಗವೊಂದು ನೇಮಕವಾಗಿ, ಅದರ ಶಿಫಾರಸುಗಳನ್ನು ಮುಖ್ಯಾಧಾರವಾಗಿ ಟ್ಟುಕೊಂಡು, ಲೋಕ ಸಭೆಯು ರಾಜ್ಯ ಪುನಾರಚನಾ ವಿಧೇಯಕವನ್ನ ಸ್ವೀಕರಿ ಸಿತು. ಆದರಂತೆ ರಾಜ್ಯಗಳೂ ರಚಿತವಾ ದುವು. ಮೈಸೂರು ರಾಜ್ಯದೊಡನೆ ಮುಂ ಬಯಿ, ಹೈದರಬಾದ, ಮದ್ರಾಸು ಕೊಡ ಗುಗಳ ಭಾಗಗಳ ಸೇರಿ ಮಹಾ ಮೈಸೂ ರು ರೂಪುಗೊಂಡಿತು. ಈಗ, ರಾಜ್ಯ ಪು ನರ್ಘಟನೆಯ ಕಾಲದ ಕಿರುಕುಳವನ್ನು ಗಡಿ ಪ್ರಶ್ನೆಗಳು ಪಡೆದು, ಅದು ಗಂಭೀರ ರೂಪವನ್ನು ತಾಳಿದೆ. ಮೈಸೂರು ರಾಜ್ಯ ದಲ್ಲಿ ಅಡಕವಾದ ಕಾರವಾರ, ಬೆಳಗಾವಿ, ನಿಪ್ಪಾಣಿ ಮೊದಲಾದುವುಗಳು ಮೈ ಸೂರಿನಲ್ಲಿ ಹಲವಾರು ಕಾರಣಗ ಳಿಂದ ಸೇರುವುದು ಉಚಿತವೆಂದು ಮನಗಂಡು, ರಾಜ್ಯಪುನರ್ಘಟನಾ ಆಯೋಗವು ಇವನ್ನು ಮೈಸೂರಲ್ಲಿ ಸೇರಿ ಸಿತು. ಆದರೆ, ಆ ಪ್ರದೇಶಗಳಲ್ಲಿ ತುಂಬಿ ಹೋದ ಕೆಲವು ಮಂರಾಠಿಗರ ಕೆರುಕುಳ ತನದಿಂದ ಅಲ್ಲಿ ಗಲಭೆಯಾಗಿ ದೌರ್ಜನ್ಯಹ ರೂಸೀ ಸತ್ಯಾಗ್ರಹವು ನಡೆಯುತ್ತಿದೆ. ಮುಂಬಯಿಯ ಮುಖ್ಯ ಮಂತ್ರಿ ವೈ. ಬಿ. ಚವಾಣರು ಹಿಂಗಡೆಯಲ್ಲಿ ನಿಂತೇ ಈ ಚಳುವಳಿಯನ್ನು ಬೆಂಬಲಿಸುತ್ತಿರುವರೆಂ ದೂ ಹೇಳಲಾಗುತ್ತಿದೆ. ವಿಧಾನ ಸಭೆಯು ಲ್ಲೂ ಈ ಬಗ್ಗೆ ಆಗಾಗ ಪ್ರಶ್ನೋತ್ತರಗ ಳೂ, ಸಧಾತ್ಯಾಗಗಳೂ ನಡೆಯುತ್ತಲೇ ಇರುತ್ತವೆ. ಅಲ್ಲದೆ ಇತ್ತೀಚೆಗೆ ಭಯಾನ ಕವಾದ ಸತ್ಯಾಗ್ರಹವನ್ನೂ ಆ ಕಡೆಯ ಮರಾಠಿಗರು ಕೈಗೊಂಡಿದ್ದಾರೆ.

ಒಂದೆಡೆ ಮಂತಾಟಿಗರು ಇಂತಹ ಅಸ ಭ್ಯ ವರ್ತನೆಗೆ ಎಡೆಕೊಟ್ಟಿದ್ದರೆ, ಅಲ್ಲಿನ ಕನ್ನಡಿಗರು ಸಭೆ ನೇರಿ, ತಾವು ಸ್ಯೆಯೂ ರಿಲ್ಲಿಯೇ ಉಳಿಯುವ ದೃಢ ನಿರ್ಧಾರವನಾ ಡಿದ್ದಾರೆ, ಇದನ್ನು ಯಾರೂ ಅಲ್ಲಗಳೆಯು ವುದು ಸಾಧ್ಯವಿಲ್ಲ. ಮೈಸೂರು ಸರಕಾರವೂ ಈ ಗಡಿ ಪ್ರದೇಶಗಳನ್ನು ಬಿಟ್ಟು ಕೊಡಲು ನಕಾರಾತ್ಮಕ ಉತ್ತರವನ್ನೇ ಕೊಟ್ಟಿದೆ. ಮೈಸೂರು–ಮುಂಬಯಿ ರಾಜ್ಯಗಳ ಗಡಿ ಪ್ರಶ್ನೆಯು ಈ ಮೊದಲೇ ಹಲವಾರು ಬಾರಿ ಚರ್ಚಿಸಲ್ಪಟ್ಟಿದ್ದರೂ ಈ ವಿಷಯ ದಲ್ಲಿ ಯಾವುದೇ ಒಂದು ಸಾಮಾನ್ಯ ಒಪ್ಪಂ ದಕ್ಕೆ ಬರಲಾಗಲಿಲ್ಲ. ಅಲ್ಲದೇ ಚವಾಣ-ಜತ್ತಿಯವರ ನಡುವೆ ವಿರಸವೂ ಆಗಿ ತ್ತೆಂದು ತಿಳಿದಿದೆ. ಪಶ್ಚಿಮ ವಲಯದ ಸಭೆಯಲ್ಲಿ, ಕಾಂಗ್ರೆಸ್ ವರಿಷ್ಠರ ಸಮ್ಮು ಖದಲ್ಲಿ ಈ ಪ್ರಶ್ನೆಯು ಪ್ರಸ್ತಾಪಿಸಲ್ಪ ಟ್ಟರೂ ನಿರ್ಧಾರಕ್ಕೆ ಬರುವುದು ಸಾಧ್ಯ ವಾಗಲಿಲ್ಲ. ಅಲ್ಲದೇ ಗೃಹಮಂತ್ರಿ ಪಂ ತರ ಕೆಲವೊಂದು ಸೂಚನೆಗಳಿಗೆ ಮೈಸೂ ರಿನ ಮುಖ್ಯ ಮಂತ್ರಿ ಜತ್ತಿಯವರು ಒಪ್ಪಿ ಕೊಂಡಿದ್ದರೆಂದೂ, ಆದರೆ, ಮುಂದಕ್ಕೆ ವನ್ನು ಅಲ್ಲ ಗಳೆದರೆಂದೂ ವರದಿಯಾಗಿದೆ. ಕಾರವಾರದಲ್ಲಿ ನೇರಿದ ಕನ್ನಡಿಗರ ಸಮ್ಮೇ ಳನದಲ್ಲಿ ಮಾಜಿ ಮುಖ್ಯ ಮಂತ್ರಿ ನಿಜ ಲಿಂಗಪ್ಪನವರು ಗಡಿಪ್ರದೇಶದ ಕೆಲವೊಂ ದು ಗ್ರಾಮ ಯಾನೆ ಹಳ್ಳಿಗಳ ಹಸ್ತಾಂ ತರಕ್ಕೆ ಮಾತ್ರ ಅವಕಾಶವಿರುವುದೆಂದೂ ತಾಲೂಕಾದಿಗಳು ಆತ್ತಿತ್ತ ಹೋಗುವುದು ಅಸಾಧ್ಯವೆಂದೂ ಹೇಳಿದರೆ, ಕೆಂಗಲ್ ಹ ನು.ಮಂತಯ್ಯನವರು ಈಗ ಮೈಸೂರಿಗೆ ಸೇರಿರುವ ಸ್ಥಳಪಟ್ಟಿ ಒಂದಂಗಲ ಸ್ಥಳವೂ ಮೈಸೂರಿನಿಂದ ಅಗಲಿ ಹೋಗಲಾರದೆಂ ದು ನಿರ್ದುಷ್ಟವಾಗಿ ಪಡಿರುವರು. ಈಗ, ಸೂನ್ಯ ಜತ್ತಿಯವರು ನವದೆಹಲಿಗೆ ಈ ವಿಷಯದಲ್ಲಿ ಮೈಸೂರು ಸರಕಾರದ ಅ ಭಿಪ್ರಾಯವನ್ನು ತಿಳಿಸುವ ಸಲುವಾಗಿ ತೆ ರಳಿರುವರೆಂದು ವರದಿಗಳು ಬಂದಿವೆ, ಆ ನುದರಿಂದ ಮೂನ್ಯ ಮಂತ್ರಿಗಳು ಪ್ರಜಾ ಅಭಿಪ್ರಾಯವನ್ನು ಕಂಡುಕೊಂಡು, ಅ ವನ್ನು ಪ್ರತಿವಾದಿಸುವುದು ಅಗತ್ಯವಾದು ದರಿಂದ, ಈ ಬಗ್ಗೆ ನಾವು ಈ ಹಿಂದೆ ಕೊ ಟ್ಟ ಅಭಿಪ್ರಾಯಗಳನ್ನೇ ಪುನಃ ಬಲವಾ ಗಿ ಪ್ರತಿಪಾದಿಸುತ್ತೇವೆ. ಕನ್ನಡದ ನೆಲ ಸಿದ್ಧವಾದ ಕಾರವಾರ, ನಿಪ್ಪಾಣಿ, ಬೆ ಳಗಾಂವಿಗಳ ಬಗ್ಗೆ ಇರುವ ಮಂರಾಠಿಗಳ ಕೇ ಳಿ ಕೆಯು ಸರ್ವತಾ ಮೂನ್ಯವಲ್ಲ; ಅದು ಸಾಧುವೂ ಅಲ್ಲ; ಆದರೊಂದಿಗೆ ದಕ್ಷಿಣ ಕನ್ನಡದ ಅವಿಭಾಜ್ಯ ಅಂಗವಾ ಗಿರುವ ಕಾಸರಗೋಡು ತಾಲೂಕಿನಲ್ಲಿ ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಭಾಗವು ಕೇರಳಕ್ಕೆ ಸೇರಿಬೇಕಾದುದೂ ಅಲ್ಲ. ಅಲ್ಲಿ ಸಾಗಾಗಲೇ ಕೇರಳೀಕರಣವು ಪ್ರಾರಂಭವಾಗಿರುವುದರಿಂದ, ಅದು ಉ ಲ್ಬಣಾವಸ್ಥೆಗೇರುವುದಕ್ಕೆ ಬಿಟ್ಟರೆ ಕ್ಷಿತ ಗತಿಯಲ್ಲೇ ಅದನ್ನು ಕನ್ನಡದ ನೆಲದೊಂ ದಿಗೆ ಸೇರ್ಪಡೆಗೊಳಿಸಬೇಕಾದುದು ಚಿರ ಸತ್ಯ. ಮುಂಗಳೂರಿನ ಕಾಸರಗೋಡು ಕನ್ನ ಡಿಗರ ಸಮ್ಮೇಳನವನ್ನು ಮರೆಯುವುದ್ಕೆ ಸಾಧ್ಯವಿಲ್ಲ ಕನ್ನಡಿಗನೆನ್ನುವುದು ಸಂಕು ಚಿತ ಭಾವನೆಯೆನ್ನು ಸೂಚಿಸಿ,ವುದೆಂದು ಕೇಂದ್ರ ಮಂತ್ರಿಗಳು ಹೇಳುವುದು ಸರಿ ಯಿರಬಹುದಾದರೂ, ಊರಿಗೆ ಅರಸನಾ ದರೂ ತಾಯಿಗೆ ಮಗನೇ, ಆದುದರಿಂದ, ಭಾರತೀಯನಿರುವಂತೆಯೇ ನಾವು ಕನ ಡಿಗರೂ ಆಗಿರುವುದರಿಂದ, ಕನ್ನಡಿಗರ ನಾಡಿಗೆ, ನುಡಿಗೆ ಸೇ ೋಲಾಗುವುದನ್ನು ಕಂಡೂಕಂಡೂ ಸುಮ್ಮನುಳಿಯುವುದು ಉಚಿತವಲ್ಲ.

ನಮ್ಮ ಮುಖ್ಯ ಮಂತ್ರಿಯವರು ಹೈ ದರಬಾದಿನಲ್ಲಿ ತಮ್ಮ ಕಿರಿಯತನ ಪ್ರಕಟ ಮಾಡಿದ್ದರೆಂದು ಬಂಪ ವರದಿ ನಿಜವಾ ದರೆ, ಈ ವಾರಿಯ ಆವರ ದಿಲ್ಲಿ ಚಂದರ್ಶ ನದ ಕಥೆ ಪಾರಾಗದಿರಲಿ ಎಂದು ಪರ ಮಾತ್ಮನಲ್ಲಿ ಪ್ರಾರ್ಥಿಸ ಬೇಕಾಗುತ್ತದೆ. ಜನತಾಭಿಪ್ರಾಯಕ್ಕೆ ಮನ್ನಣೆಯೂಯು ವ ಕಾರಣಕ್ಕಾಗಿ, ಮೈಸೂರಿನ ಜನರ ಖ ಚಿತಾಭಿಪ್ರಾಯವನ್ನೂ ಮೈಸೂರು ಸರ ಕಾರದ ನೀತಿಯನ್ನೂ ಕೇಂದ್ರದವರಿಗೆ ಸ ರಿಯಾಗಿ ಮನಗಾಣಿಸಿ ಕನ್ನಡಿಗರ ವಾದ ವು ನ್ಯಾಯೋಚಿತವೆಂದು ಹೇಳಿಸಿಕೊಂ ಡು ಬರಬೇಕು. ಆವರೆಂದುದಕ್ಕೆಲ್ಲಾ ಸೈ ಗುಟ್ಟಿ ಕುಳಿತರೆ, ನಮ್ಮ ಶರಾವತಿ, ಶಿವಂತಿ, ಬರಿಹೊಳೆಯೋಜನೆಗಳುಕ್ಕೆ ಬಿಟ್ಟಂತೆಯೇ ಈ ಗಡಿನಾಡುಗಳೂ ಕ್ರಮೇಣ ನಮ್ಮಿಂದ ದೂರವಾಗಿಯೇ ಹೋಗುವುದು ಖಂಡಿತ. ಆದುದರಿಂದ ಮಾನ್ಯ ಮುಖ್ಯಮಂತ್ರಿವ ರ್ಯರು ಕನ್ನಡಿಗರ ಈ ನಮ್ರವಿನಂತಿ ಯನ್ನು ಗಮನಿಸಿ, ಅದನ್ನು ನಡೆಸಿಕೊ ಡುವಂತೆ ತನ್ನ ದಿಲ್ಲಿಪ್ರವಾಸದಲ್ಲಿ ಕಾರ್ಯ ಶೀಲರಾಗಲಿ; ತದ್ಗೀತಿಯಿಂದ ಕನ್ನಡಿಗರ ಕೃಪೆಗೆಪಾತ್ರರಾಗಲಿ.

ಸುವರ್ಣ ಮಹೋತ್ಸವ

ಮಂಗಳೂರಿನ ಬಂಟರ ಯಾನೆ ನಾಡ ವರ ಸಂಘ ಮತ್ತು ಇದರ ನೇತೃತ್ವದಲ್ಲಿ ನಡೆಯುತ್ತಿರುವ ಶ್ರೀರಾಮಕೃಷ್ಣ ವಿದ್ಯಾ ರ್ಥಿಭವನ ಇವುಗಳ ಸುವರ್ಣ ಮಹೊ ತ್ಸವವು ಮುಂದಿನ ಫೆಬ್ರುವರಿ ಮೊದಲ ನೆಯ ದಿನ ನಡೆಯಲಿದೆ. ಈ ಸಂದರ್ಭ ದಲ್ಲಿ ಸಮಾಜದವರಲ್ಲಿ ಸುಧಾರಿತ ರೀತಿ ಯ ಕೃಷಿ ಗ್ರಂಥರಚನೆ, ಭಾಷಣ, ಯಕ್ಷಗಾನ, ಸಂಗೀತ ಹಾಗೂ ಇನ್ನಿತರ ಲಲಿತಕಲೆಗಳಲ್ಲಿ ಪ್ರಾವೀಣ್ಯ ಪಡೆದಿರುವ ಸ್ತ್ರೀ ಪುರುಷರನ್ನು ಗೌರವಿಸುವ ಕಾರ್ಯ ಕ್ರಮವನ್ನೂ ಇಟ್ಟುಕೊಳ್ಳಲಾಗಿದೆ. ಇದು ಸ್ತುತ್ಯ. ಇದರಂತೆಯೇ ಸಮಾಜ ಸೇವಾ ಕ್ಷೇತ್ರದಲ್ಲಿ ದುಡಿಯುತ್ತಿರುವವರನ್ನೂ ಗೌರವಿಸುವ ಯೋಜನೆಯೊಂದನ್ನಿಟ್ಟು ಕೊಳ್ಳಬಹುದಿತ್ತು. ಇಂತಹ ಕಾರ್ಯ ಕ್ರಮಗಳಿಗೆ ಉದಾರ ಧನ ಸಹಾಯವೂ ಅಗತ್ಯವಿದೆ.ಈಗಿನ ಸುಧಾರಿತ ಕಾಲದಲ್ಲಿ ಕ್ಷಣ ಕ್ಷಣ ಬದಲಾಗುತ್ತಿರುವ ಸಮಾಜ ಪದ್ಧತಿಯಲ್ಲಿ ಜಾತೀಯ ಸಂಘ ಸಂಸ್ಥೆ ಗಳ ಸ್ಥಾನಮಾನಗಳು ಕಳೆಕುಂದುತ್ತಿರು ವುದಾದರೂ ಈ ಸಂಘವು ಕಳೆದ ಐವ ತ್ತು ವರ್ಷಗಳ ದೀರ್ಘ ಕಾಲಾವಧಿಯ ಸ್ವಸಕೂಜದ ಹಾಗೂ ಇನ್ನಿತರರ ಉನ್ನ ತಿಗೆ ಒಂದಲ್ಲ ಹಲವಾರು ವಿಧದಿಂದ ನೆರ ವಾಗಿದೆ; ಆಗುತ್ತಿದೆ. ಆದುದರಿಂದ, ಹತ್ತು ಹಲವಾರು ವಿಧದ ಸೇವೆ ಗಳಲ್ಲಿ ಇದೂ ಒಂದೆಂದು ಭಾವಿಸಿ ದುಡಿ ಯುವ ಈ ಸಂಘದ ಸುವರ್ಣ ಮಹೋ ತ್ಸವವನ್ನು ವಿಜೃಂಭಣೆಯಿಂದ ಹಾಗೂ ನಿಯೋಜಿತ ಯೋಜನೆಯನ್ವಯ ಆಚರಿ ಸಲು ಉದಾರ ದೇಣಿಗೆಯನ್ನು ಸಮಾಜ ಬಂಧುಗಳು ಸಕಾಲದಲ್ಲಿಕೊಟ್ಟು ಸಹಕರಿ ಸುವುದು ಅಗತ್ಯವೆಂದು ವಿನಂತಿಸು ತ್ತೇವೆ.

ವಿಜಯಾ ಬ್ಯಾಂಕು ಶೆಡ್ಯೂಲ್ಡ್ ಬ್ಯಾಂಕ್ ಆಗಿರುವುದೆಂಬ ಸಂತೋಷದ ಸುದ್ದಿ ಬಂದಿದೆ.

ಅಲ್ಲಲ್ಲಿಯ ಸುದ್ದಿಸಾರ

ದ. ಕ ಜಿಲ್ಲೆಯಲ್ಲಿ ಮೈಸೂರು ಮುಖ್ಯ ಮಂತ್ರಿ ಮತ್ತು ಆರೋಗ್ಯ ಮಂತ್ರಿಗಳು-ಮೈಸೂರಿನ ಮುಖ್ಯ ಮಂ ತ್ರಿ ಶ್ರೀ ಬಿ. ಡಿ. ಜತ್ತಿಯವರು ಮತ್ತು ಆ ರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆಯವರು ತಾ. ೨೦ರಂದು ಧರ್ಮಸ್ಥಳಕ್ಕೆ ಆಗಮಿಸಿ ಮು ಖ್ಯ ಮಂತ್ರಿಗಳು ಅಲ್ಲಿಂದು ಸರ್ವಧರ್ಮ ಸ ಮ್ಮೇಳನವನ್ನು ಉದ್ಘಾಟಿಸಿದರು. ಬಳಿಕ ಇ ಬ್ಬರು ಮಂತ್ರಿಗಳೂ ಮಂಗಳೂರಿಗೆ ಪ್ರಯಾ ಣ ಬೆಳೆಸಿ ನಗರ ಸಭೆಯ ಮಾನಪತ್ರ ಸ್ವೀಕರಿಸಿದರು. ನಂತರ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಏರ್ಪಡಿಸಿದ ಭೋಜನ ಸ ಮಾರಂಭದಲ್ಲಿ ಭಾಗವಹಿಸಿದರು.

ಮರುದಿವಸ ತಾ. ೧೭ರಂದು ಬೆಳಿಗ್ಗೆ ಮಂಗಳೂರಿಂದ ಹೊರಟು ಮೂಡುಬಿದ್ರೆಗೆ ಬಂದು ಸಾರ್ವಜನಿಕರನ್ನು ಕಂಡು ಕಾರ್ಕ ಳಕ್ಕೆ ಬಂದು ಅಲ್ಲಿಯ ಬೋ ರ್ಡು ಹೈಸ್ಕೂಲಿನ ಎಳೆಡೆನುಪಾಲನ್ನು ಉದ್ಘಾಟಿಸಿ ಬೈಲೂರು, ಹಿರಿಯಡ್ಕ ಕೇಂದ್ರಗಳಲ್ಲಿ ಜನವಿ ಗಳನ್ನು ಸ್ವೀಕರಿಸಿ ಮಣಿಪಾಲಕ್ಕೆ ಬಂದು ಅ ಲ್ಲಿಯ ಶಿಲ್ಪಕಲಾ ಸಂಸ್ಥೆಗಳನ್ನು ಸಂದರ್ಶಿಸಿ ಉ ಡುಪಿ ಎಮ್. ಜಿ. ಎಮ್ ಕಾಲೇಜಿಗೆ ಬಂದು ಉಪೇಂದ್ರ ಅನಂತ ಪೈ ಪೆವಿಲಿಯನ್ ಹಾ ಲೇಜ್ ಆಫ್ ಕಾಮರ್ಸ್ ಬ್ಲಾಕಿನ ರಂಕು ಸ್ಥಾ ಪನೆಮಾಡಿ ಶ್ರೀಕೃಷ್ಣ ಮಠ ಸಂದರ್ಶಿಸಿದರು. ಬಳಿಕ ಉಡುಪಿ ನಗರ ಸಭೆಯ ಮಾನಪತ್ರ ಸ್ವೀ ಕರಿಸಿ ಕಲ್ಯಾಣಪುರಕ್ಕೆ ಪ್ರಯಾಣ ಬೆಳೆಸಿದರು

ಮಧ್ಯಾಹ್ನ ಕಲ್ಯಾಣಪುರ ಸೇತುವೆಯ ಶಂ ಕು ಸ್ಥಾಪನೆಮಾಡಿ ಬ್ರಹ್ಮಾವರಕ್ಕೆ ಬಂದು ಭೋಜನ ತೀರಿಸಿ ಮೂರುಕಳ ಸೇತುವೆ ಶಂಕು ಸ್ಥಾಪನೆ ಮಾಡಿದರು ಅಲ್ಲಿಂದ ಪಾಲಾಡಿಗೆ ಹೋಗಿ ಅಲ್ಲಿಯ ಸೇತುವೆ ಶಂಕು ಸ್ಥಾಪನಾಕಾ ರ್ಯವನ್ನು ಮುಗಿಸಿ ಕುಂದಾಪುರಕ್ಕೆ ಬಂದು ಚಿಕ್ಕ ನೀರಾವರಿ ಕಾರ್ಯಾಶ್ರಾರಂಭಿಸಿದರು ಸಂ ಜೆ ಕೊಟೇಶ್ವರದೇವಸ್ಥಾನಕ್ಕೆ ಸಂದರ್ಶನವಿ ತ್ತು ಅಲ್ಲಿಯ ಭೋಜನ ಸತ್ಕಾರ ಸ್ವೀಕರಿಸಿ ರಾ ತ್ರಿಮಂಗಳೂರಿಗೆ ಹಿಂತೆರಳಿದರು. ನೂತನ ರಂ ಕು ಸ್ಥಾಪನಾ ಕಾರ್ಯಗಳನ್ನು ಮುಖ್ಯ ಮಂ ತ್ರಿಗಳು ಜರಗಿಸಿದರು, ಆರೋಗ್ಯ ಮಂತ್ರಿಗ ಳು ಸಭಾಧ್ಯಕ್ಷತೆ ವಹಿಸಿದ್ದರು. ಈ ದಿವಸ ಮುಖ್ಯ ಮಂತ್ರಿಗಳು ಬೆಳಿಗ್ಗೆ ಮಂಗಳೂರು ಕಾರ್ಯಕ್ರಮ ಮುಗಿಸಿ ವಿಮಾನ ಮೂಲಕ ಹಿಂತೆರಳುವರು. ಆರೋಗ್ಯ ಮಂತ್ರಿಗಳು ಇ ನ್ನೆರೆಡು ಮೂರು ದಿವಸಗಳ ಕಾರ್ಯಕ್ರಮ ವಿಟ್ಟುಕೊಂಡಿರುವರಾಗಿ ತಿಳಿದು ಬರುತ್ತದೆ. (ಮೇರೆ ಮುಂದಿನ ವಾರ).

ಕೊಡಿಗೆ ಮಂಡಲ ಯು ವಕ ಕಾಂಗ್ರೆಸ್ ಸಮಿತಿಯು ಸಾಪ್ತಾಹಿಕ ಸಭೆಯು ಕಳೆದ ತಾ೩೦ ರಂದು ಸಂಜೆ ಶ್ರೀ. ಬಿ. ಸಿ. ರುದ್ರಪ್ಪನವರ ಅಧ್ಯಕ್ಷೆ ತೆಯಲ್ಲಿ ಜರಗಿತು. ಶ್ರೀಗಳಾದ ಬಿ ಪನಂಮ ಪ್ಪ, ವೀರಭದ್ರಪ್ಪ, ಸಿದ್ದಪ್ಪನೊಡಲಾದವರು ಯುವಕ ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳನ್ನೆ ತ್ತಿ ಭಾಷಣ ಮಾಡಿದರು. ಅಂದು ಬೆಳಿಗ್ಗೆ ಸ ಮಿತಿಯ ಮುಖ್ಯ ಕಾರ್ಯದರ್ಶಿ ಶ್ರೀ ಟಿ. ಟಿ ಜನಾರ್ಧನ ಆಚಾರ್ಯರವರ ವ್ಯವಸ್ಥಾಪಕ ತ್ವದಲ್ಲಿ ಆಸುಪಾಸು ಸ್ಥಳಗಳಲ್ಲಿ ಸ್ವಾತಂತ್ರ್ಯ ಸೈನಿಕರ ಮೆರವಣಿಗೆ ತೆಗೆಯಲಾಗಿತ್ತು.

ಕಟಪಾಡಿಯಲ್ಲಿ ಶ್ರೀ ಕಾಳಿಕಾಂಬಾ ವಿಶ್ವಕರ್ಮೇಶ್ವರ ದೇವಸ್ಥಾನದಲ್ಲಿ ತಾ೩೦ರಂದು ಶ್ರೀ ಆನೆಗುಂಡಿ ಹಿಗದ್ಗುರು ಶ್ರೀ ನಾರಾಧ ಮೋಂದ್ರ ತೀರ್ಥಸ್ವಾಮಿಗಳವರ ಆರಾಧನೆ ನಡೆಯಿತು. ಈ ಸಂದರ್ಭದಲ್ಲಿ ಅದಮಿತೆ ಮೊ ಕ್ತೇಸರ್ ಶ್ರೀ ಪಿ. ಬಿ. ಆಚಾರ್ಯರು ಶ್ರೀ ಜಗದ್ಗುರುಗಳ ತೈಲ ಭಾವಚಿತ್ರವನ್ನು ಅನಿ ಸಿದರು. ಭದ್ರಾವತಿಯ ಕೀರ್ತನ ಕಲಾ ಭೂ ಷಣ ಶ್ರೀ ಕೆ ವಿ. ತಮ್ಮಣ್ಣಾಚಾರ್ಯರಿಂದ ಗುರು ಮಹಿಮೆಯ ಕುರಿತು ಭಾಷಣವೂ ನರಿ ಕಥಾ ಕಾಲಕ್ಷೇಪವೂ ರಾತ್ರಿ ದೀಪೋತ್ಸವೂ ನಡೆಯಿತು

ಉಡುಪಿ ನಗರ ಸಭೆಯ ಚುನಾವ ಣೆಯು ಇದೇ ತಿಂಗಳ ತಾ೨೭ರಂದು ಜರಗಿ ಸುವ ಗಣನೆಯು ಮರುದಿನ ನಡೆಯುವುದು.

ಇದೇ ತಾ 15, 16, 17 ರಂದು ನಾ ವ

ಪತ್ರ ಸ್ವೀಕಾರ. ನಾಮ ಪತ್ರ ಪರಿಶೀಲನೆ 18ರಂದು, ನಾಮ ಪತ್ರ ಹಿಂತೆಗೆಯುವುದಾ ದರೆ ತಾ 20ರಂದು, ಆಬೈರು ಸಿಂಧಾವಾದ ನಾಮ ಪತ್ರಗಳ ಪ್ರಕಟಣೆ ತಾ. 26 ರಂದು ಎಂದು ಪ್ರಕಟನೆ ಹೊರಟಿದೆ ಮತದಾರರ ಅ ನುಕೂಲತೆಗಾಗಿ 17 ವಾರ್ಡುಗಳಲ್ಲೂ ಪೋ ರಿಂಗ್ ಸ್ಟೇಷನುಗಳಿವೆ.

ಮಂಗಳೂರು ನಗರ ಸಭಾ ಚುನಾವಣೆಯು ಜನವರಿ ತಾ. ೫ರಂದು ನಡೆಯುವುದು.

ಇದೇ ತಾ. 15, 16, 17ರಲ್ಲಿ ನಾಮಪತ್ರ ಸಲ್ಲಿಸುವುದು, ತಾ. 18ರಂದು ನಾಮ ಪತ್ರಗಳ ಪರಿಶೀಲನೆ, ತಾ. 20ರಂದು ವೇಳ ಚಾತಿ ಕಳಕೊಳ್ಳದೆ ನಾಮಪತ್ರ ಹಿಂತೆಗೆದು ಕೊಳ್ಳುವುದು, ತಾ. 22ರಂದು ಸಿಂಧುವಾದ ನಾಮಪತ್ರಗಳ ಪ್ರಕಟಣೆ.

ಮೂಡಬಿದ್ರೆಯಲ್ಲಿ ವಿದಾಯ ಸತ್ಕಾರವೊಂದು ಆಲ್ಲಿಯ ಜೈನ್ ಹೈಸ್ಕೂಲ್ ಸಹಾಯಕ ಅಧ್ಯಾಪಕರಾಗಿದ್ದ ಶ್ರೀ ಸಿ. ಕೃಷ್ಣಯ್ಯನವರಿಗೆ ತಾ. 5ರಂದು ಶಾಲಾ ಪ ಡ್ಡಾಸ್ಟರ್ ಶ್ರೀ ಎ. ಸೋಮಪ್ಪ ರೈಗಳ ಅ ಧ್ಯಕ್ಷತೆಯಲ್ಲಿ ಜರಗಿತು ಹಲವರು ಮುಖ್ಯ ಅತಿಥಿಗಳ ಗುಣಗಾನ ನುಡಿದರು.

ಮೂಡಬಿದ್ರೆ ಜೈನ ಪ್ರಾಥಮಿಕ ಶಾಲೆಯ ವರ್ಧಂತಿಯು ಇದೇ ತಾ. 24ರಂದು

ಶ್ರೀ ಕೆ. ಆರ್. ಆಚಾರ್, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಕಡಿಯೊಳಿ ಕೇಂದ್ರದ ಅಧ್ಯಾಪಕ ಸಂಘದ ಕೇಂದ್ರ ದಿನಾಚರಣೆಯು

ತಾ. 6ರಂದು ಪ್ರೊಫೆಸರ್ ಪಿ. ಗುರುರಾಜ ಬಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯ ದರ್ಶಿ ಶ್ರೀ ಎಸ್. ಸದಾಶಿವರಾಯರು ಸ್ವಾಗ ತ ಭಾಷಣ ಮಾಡಿದರು. ಶ್ರೀ ಪಿ. ನರಸಿಂಹ ಉಪಾಧ್ಯರು ಕಾವ್ಯವಾಚನ ಗೈದರು. ಶ್ರೀ ಎಮ್. ರಘುನಾಥ ಶ್ಯಾನುಭಾಗರು ಸಭಿಕರ ಪರವಾಗಿ ಮಾತನಾಡಿದ ಬಳಿಕ ಸಂಘದ ಅ ಧ್ಯಕ್ಷರಾದ ಶ್ರೀ ಎಸ್. ವಿತ್ತನಾಥನವರು ಪಾಠನಡಿತ್ತಾ ಸೂತ್ರ ಸಲಕೆಗಳನ್ನಿತ್ತರು. ಅಧ್ಯಕ್ಷರ ಸಮಯೋಚಿತ ಭಾಷಣವಾದ ಬಳಿಕ ವಿವಿಧ ಕಾರ್ಯಗಳ ವಿದ್ಯಾರ್ಥಿಗಳಿಂದ ಮನ ರಂಜನೆ ಕಾರ್ಯಕ್ರಮಗಳಾದುವು. ಅಧ್ಯಾಪ ಕರು ವಿಕಾಂಕ ಸ್ಪರ್ಧನವನ್ನು ಆಭಿನಯಿಸಿ ದರು. ಆ ದಿನ ಆವರಾಪ್ತ ಸಂಘದ ಸದಸ್ಯರ ಸಭೆ ಜರಗಿ ಹೊಸ ಆಧಿಕಾರಿ ವರ್ಗದ ಚುನಾ ವಣೆ ನಡೆಯಿತು.

ಎನ್. ಸಿ. ಸಿ. ದಿನಾಚರಣೆಯು

ತಾ 7ರಂದು ಸಂಜೆ ಆಜ್ಜರಕಾಡು ಗಾಂಧಿ ಮೈದಾನದಲ್ಲಿ ಕುಂಡ್ಯಾಪುರ ದಿವಿಜನ್ ಆಸಿ ಸ್ಟಾಂಟ್ ಕಮಿಷನರ್ ಶ್ರೀ ಏ ಎನ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಅದಂ ದಲ್ಲಿ ಎನ್. ಸಿ. ಸಿ. ದಳದವರಿತ್ತ ವಂದನೆ ಯನ್ನು ಅಧ್ಯಕ್ಷರು ಸ್ವೀಕರಿಸಿದರು. ಬಳಿಕ ವಿವಿಧ ಡ್ರಿಲ್ಲುಗಳ ಪ್ರದರ್ಶನವಾಯಿತು. ತದ ನಂತರ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಸ್ವಾಗತಿಸಿದರು. ಶ್ರೀ ಜಿ. ಡಿ. ಕುಂ ದರ್‌ರವರು ವರದಿಯನ್ನೋದಿದರು. ಅಧ್ಯಕ್ಷ ರು ಸಮಯೋಚಿತ ಮಾತುಗಳನ್ನಾಡಿ ಬಳಿ ಮೂನ ನಿತರಿಸಿ ಮಾಡಿದರು.

ಧನ್ವಂತರಿ ಜಯಂತಿಯು ಉಡುಪಿಯ ಕವಿರಾಜ ದವಾಖಾನೆಯಲ್ಲಿ

ತಾ.7ರಂದು. ಶ್ರೀಕಾಶೀ ಮಠಾಧೀಶರ ಅಧ್ಯಕ್ಷ ತೆಯಲ್ಲಿ ಜರಗಿತು. ಕೆ. ವಾಸುದೇವ ಕಾಮಾ ತರು ಸ್ವಾಗತಿಸಿದರು ಡಾ! ಮೂಡಿ ಪೈಗಳ ವರೆ ಆರುವತ್ತು ವರ್ಷಗಳ ಸಫಲ ಜೀವನದ ಕುರಿತು ಪ್ರಿನ್ಸಿಪಾಲ್ ಕೌಲಗಿ ರೇಸಾಡಾ ರ್ಯರು ಪ್ರಾರ್ಥನಾಮುಖೇನ ಮಾತನಾಡಿದ ರು. ಕವಿರಾಜ ಎಂ. ಜಿ. ವೇಣೈಯನವರು ಸ್ವಾ ಮಿಗಳವರಿಗೆ ಪಾದಪೂಜೆ ನಡಾಡಿ ಗೌರವಿಸಿ ದರು. ಈ ಸಮಾರಂಭದಲ್ಲಿ ಅಧ್ಯಕ್ಷೆ ಸ್ವಾಮಿ ಗಳವರು ಶ್ರೀ ಧನ್ವಂತರಿಯ ಭಾವಚಿತ್ರ ಅನಾ ವರಣ ಮಾಡಿದರು.

ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯು ಇದೇ ತಾ.

8ರಂದು ಚೇರ್‌ಮೆನ್ ಶ್ರೀ ಕೆ ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ 1957-58ರ ಆಡಿಟಿತ ವರದಿ ಕುರಿತು ಡಾ. ಏ. ಜಿ. ಆಚಾರ್ ಮೊದಲಾದವರು ಕೆಲವೊಂದಿ ದೋಷಗಳನ್ನೆತ್ತಿ ವಾತನಾಡಿದರು. ಕವಿಮಲಕ ರಿಂದ ಹೆಚ್ಚಿನ ಸ್ಪಷ್ಟೀಕರಣಕ್ಕೆ ಬಗ್ಗೆ ವರದಿ ಸ್ವೀಕಾರವನ್ನು ಬಾಕಿಯಿಡಲಾಯಿತು.

ವರದಿಯಲ್ಲಿಯ ಮುಖ್ಯ ವಿಷಯಗಳು: ಕೌನ್ಸಿಲಿನ ಆರ್ಥಿಕ ಪರಿಸ್ಥಿತಿಯು ತೃಪ್ತಿಕರ ವಾಗಿಲ್ಲ. ಆಂತೆಯೇ ವಸೂಲಿನ ಕೆಲಸವೂ ಆಸಪೇಕ್ಷಿತ ರೀತಿಯಲ್ಲಿ ನಡೆಯಲಿಲ್ಲ ಹೊರ ಬಾಕಿಯಿರುವ ತೆರಿಗೆ ಜಬಿದಲ್ಲಿ ಸರಕಾರದಿಂದ ಲೇ ರೂಪಾಯಿ 88080 ಬರಕಕ್ತಿದ್ದಿರುವು ದು. ವರದಿ ವರುಷದಲ್ಲಿ 1045 ಜನನಗಳೂ 899 ಮರಣಗಳೂ ಆಗಿದ್ದುವು.

ನಗರದಲ್ಲಿ ತೆರಿಗೆದಾರರಿಗೆ ಸಾಕರ್ಯ ಸೀ ಮಿತ ಕಾರ್ಯಕ್ರಮಕ್ಕೆ ಕೆನರಾ ಬೆಂಕಿಂಗ್ ಕೊರ್ಪೋರೇಷನನವು ರೂಪಾಯಿ 1000 ವನ್ನೂ ಮಣಿಪಾಲ ಏಕೆಡೆಮಿ ಆಫ್ ಜನ ರಲ್ ಎಡ್ಮಿನಿಸ್ಟ್ರೇಷನಿನವರು ತಮ್ಮ ಕಟ್ಟಡ ವೊಂದನ್ನು ಜಾಲಬಾಲಿಕೆಯರಿಗೆ ಹಾಲು ಬಡಿ ಗಿಸುವ ಕೇಂದ್ರದ ಉಪಯೋಗಕ್ಕೆ ಬಾಡಿಗೆ ಯಿಲ್ಲದೆನೇ ಕೊಟ್ಟು ಸಹಕರಿಸಿರುವರು. ಚೇರ್‌ಮೆನ್, ವೈಸ್ ಚೇರ್‌ಮೆನ್ ಹಾಗೂ ಮೆಂಬರರು ಕವಿಮಲನರಿಗೆ ಸಹಕಾರ ನೀಡಿ ದ್ದರು. ಆಂತೆಯೇ ಹೆಲ್ತ್ ಆಫೀಸರೂ ಸಿ ಬಂಧಿಯ ಜಲಕಲವರೂ ಸಹಕರಿಸಿದ ಬಗ್ಗೆ ಅವರೆಲ್ಲರ ಉಪಕಾರ ಸ್ಮರಿಸಲಾಗಿದೆ.

ಎಮ್. ಜಿ ಎಮ್. ಕಾಲೇಜಿನ ಲ್ಲಿಯ ನುದ್ದಣ ಸ್ಮಾರಕೋತ್ಸವದ ಎರಡನೆ ದಿವಸದ ಸಮಾರಂಭವು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರ ಗಿತು ಮೈಸೂರು ಸ್ಟೇಟ್ ಫಿರೋಮಿನಾಸ್ ಕಾಲೇಜಿನ ಇಂಗ್ಲಿಸ್ ಪ್ರಾಧ್ಯಾಪಕ ಶ್ರೀ ಎಮ್. ಗೋವಾಲಕೃಷ್ಣ ಆಡಿಗರು ನನ್ನ ಕಾವ್ಯದ ಉರಿತು ಭಾಷಣವಿತ್ತರು. ರಾತ್ರಿ ಕವಿನ, ಹಾಗು ನಾಟಕಗಳು ಆಭಿನಯಿಸಲ್ಪ ಟ್ಟವು.

ಕೋಟ ಕೃಷಿಕ ಸಹಕಾರಿ ಬೇಂಕನ್ನು ಕಳದ ತಾ. 30ರಂದು ಶ್ರೀ ಟಿ. ಎ. ಪೈಗಳು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಕೀಲ್ ಶ್ರೀ ಕೆ. ವೆಂಕಪ್ಪ ಶೆಟ್ಟರು ವಹಿಸಿದ್ದರು. ಶ್ರೀ ಬಿ. ಸುಬ್ಬಣ್ಣ ಶೆಟ್ಟರು ಸ್ವಾಗತಿಸಿದರು. ಶ್ರೀ ಕೆ. ಅರ್. ಸುಂದೆ, ಮತ್ತು ಸಹಕಾರಿ ಸಂಘಗಳ ಸ್ಪೆಶಲ್ ಆಸಿಸ್ಟಾಂಟ್ ರಿಜಿಸ್ಟ್ರಾರರು ಭಾಷಣವಿತ್ತರು. ಶ್ರೀ ಬಿ. ಸಿ. ಪೊಳ್ಳರು ಧನ್ಯವಾದವಿತ್ತರು

ದಾನವಿತ್ತು ಮೆಡಿಕಲ್ ಕಾಲೇಜುಗಳಿಗೆ ಪ್ರವೇಶ

ಮಾನ್ಯ ಆರೋಗ್ಯಮಂತ್ರಿಯರ್ಯೆ ರಿಂದ ಪ್ರೋತ್ಸಾಹ

ಲೋಕ ಸಭೆಯಲ್ಲಿ ಮೆಡಿಕಲ್ ಕಾಲೇಜು ಗಳಿಗೆ ದಾನವಿತ್ತು ಪ್ರವೇಶ ಪಡೆಯುವ ವಿಷ ಯವು ಸರಕಾರದ ಗಮನಕ್ಕೆ ಬಂದಿರುವುದೆ, ಬಂದಿದ್ದರೆ, ಸರಕಾರವು ಅದನ್ನು ತಡೆಗಟ್ಟ ಲು ಯಾವ ಕ್ರಮ ಕೈಗೊಂಡಿದೆ ಎಂದು ಶ್ರೀ ಆಸ್ಕೇರರು ಕೆಲವಿನಗರ ಹಿಂದೆ ಪ್ರಶ್ನಿಸಿ ದ್ದರು. ಈ ವಿಷಯದಲ್ಲಿ ಸರಕಾರದ ನಿಲುವಿ ಯನ್ನು ಸ್ಪಷ್ಟಪಡಿಸಲು ಮಾನ್ಯ ಅಧ್ಯಕ್ಷರು ಕಳೆದ ದಿನಾಂಕ ೧೪ರಂದು ಕೇಳಿಕೊಂಡು ಮೇರೆಗೆ ಆರೋಗ್ಯ ಮಂತ್ರಿ ಶ್ರೀ ಕರಮಂಕ ರರು ಸರಕಾರದ ಧೋರಣೆಯನ್ನು ಈ ರೀತಿ ಯಾಗಿ ವಿವರಿಸಿದರು: ಸಹಾಯಧನ ಪಡೆದು ಪ್ರವೇಶ ನೀಡುವ ಪದ್ಧತಿಯನ್ನು ಸರಕಾರವು ಪ್ರೋತ್ಸಾಹಿಸುತ್ತಿದೆ. ಏಕೆಂದರೆ, ಅವು ಪೂರ ಕವಾಗಿ ಉಪಯುಕ್ತ ಸೇವೆ ಸಲ್ಲಿಸುತ್ತಿವೆ. ಸರಕಾರವು ನೀಡುತ್ತಿರುವ ಸಹಾಯಧನವು ಇಂತಹ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ತ ರಬೇತಿಗಾಗಿ ಹೋಗುವುದರಿಂದ, ಕಾಲೇಜುಗ ಳನ್ನು ಸ್ವಯಂಪರಿಪೂರ್ಣಗೊಳಿಸುವ ಸಲುವಾ ಗಿ ಈ ಸಹಾಯ ಧನವನ್ನು ಉಪಯೋಗಿಸ ಲಾಗುತ್ತಿದೆ. ಈ ದಿಸೆಯಲ್ಲಿ ಮುಂಬಂದ ಮೊದಲನೆಯ ಕಾಲೇಜು ಜೀಕಪಲ್ಲಿನ ಧಕ್ಷ ಕಾಲೇಜುಗಳಲ್ಲಿ ಒಂದಾಗಿದೆ.

ಆಗ ವರ್ಷಕ್ಕೆ ೧೦,೦೦೦ ರೂಪಾಯಿಗಳಿ ಗಿಂತ ಕಡಿಮೆ ಆದಾಯವಿರುವ ಕುಟುಂಬಗ ಳಿಗೆ ವೈದ್ಯಕೀಯ ಶಿಕ್ಷಣಪಡೆಯುವುದು, ಈ ಪದ್ಧತಿಯನ್ನು ಸರಕಾರವು ಪ್ರೋತ್ಸಾಹಿಸುವು ದರಿಂದ ಇದನ್ನು ತಡೆಗಟ್ಟಲು ಸರಕಾರವು ಯಾವ ಕಾರ್ಯಕ್ರಮ ಕೈಗೊಂಡಿದೆ ಎಂದು ಶ್ರೀ ಎಚ್. ಸಿ. ಮೂಹೋರರು ಪ್ರಶ್ನಿಸಿದರು.

ಇದಕ್ಕೆ ಮಾನ್ಯ ಮಂತ್ರಿಯರ್ಯ ರು, ಈ ವಿಷಯವು ನಮ್ಮ ಕೈಸೂರಿದುದು ನಾವು 11ಕೋಟಿ ರೂಪಾಯಿ ಹೊಸ ಕಾಲೇ ಜುಗಳ ಸ್ಥಾಪನೆಗೂ ಇತರ ಕಾಲೇಜುಗಳ ವಿ ದ್ಯಾರ್ಥಿಗಳ ಸಂಖ್ಯೆಯನ್ನುಹೆಚ್ಚಿಸುವುದಕ್ಕೂ ತೆಗೆದಿರಿಸಿದ್ದೇವೆ. ಈ ಪಣವನ್ನು ಹಂಚಿಕೊ ಟ್ಟೂ ಆಗಿದೆ. ಮತಿಣಾಲದ ಒಂದು ಕಾಲೇ ಜು ವಿದ್ಯಾರ್ಥಿಗಳಿಂದ ಅಭ್ಯಸನ ಶುಲ್ಲವಲ್ಲದೆ ದಾನವನ್ನೂ ಸ್ವೀಕರಿಸುವೆಂದು ತಿಳಿದು ಬಂ ದಿದೆ. ಆಲ್ಲಿ ದೇ ೧೯೬೪ ರವರೆಗಿ ನ ಸ್ಥಳವು ವಿಪರೀತ ದಟ್ಟಣೆಯಿಂದಾಗಿ ತುಂ ಬಿ ಹೋಗಿರುವುದೆಂದೂ ಗೊತ್ತಾಗಿದೆ. ನಾವು ಈ ವಿಷಯವನ್ನು ಪರಿಶೀಲಿಸುತ್ತಿದ್ದೇವೆ. ಮೆಡಿಕಲ್ ಕಾಲ್ಲೆಜು ಮತ್ತು ವಿಶ್ವವಿದ್ಯಾ ಲಯದ ಸಹಾಯಧನ ಆಯೋಗದ ಮುಖ್ಯ ಸ್ಥರು ಇಲ್ಲಿಗೆ ಸಂದರ್ಶನ ವಿತ್ತಿದ್ದಾರೆ. ಆಲ್ಲಿನ ಶಿಕ್ಷಣವು ಸಂಪೂರ್ಣ ತೃಪ್ತಿಕರವಾಗಿದೆ ಯೆಂದವರು ಕಂಡುಕೊಂಡಿದ್ದಾರೆ. ಈ ಅವ ಸರದಲ್ಲಿ ಸಹಾಯಧನವ ವೆಚ್ಚದಲ್ಲಿ ಆಲ್ಲಿ ಮೂಲ ವೆಚ್ಚದಲ್ಲಿಯೇ ಶಿಕ್ಷಣವಿಯುವ ಈ ಕಾಲೇಜಿನ ಬಗ್ಗೆ ದೂರುವ ಕಾರಣವಿದೆ ಯೆಂದು ನಾವು ತಿಳಿಯುವುದಿಲ್ಲ ಎಂದು ಅಭಿ ಪ್ರಾಯ ಪಟ್ಟರು.

ಸಂಕ್ಷಿಪ್ತ ಸುದ್ದಿಗಳು

ವಿಷಮಿಶ್ರಣ ನಿಯಂತ್ರಣ

ಆಹಾರದಲ್ಲಿ ವಿಷ ಬೆರೆಕೆಯಾಗುವುದ ನ್ನು ನಿಯಂತ್ರಿಸುವಲ್ಲಿ ಆಹಾರ ವಸ್ತು ಗಳನ್ನು ಸರಿಯಾದ ವಿಧಾನದಿಂದ ಕಾ ಯ್ದಿಡು ವು ದು, ಆಹಾರ ಪ ದಾರ್ಥಗಳಿದ್ದ ಪಾತ್ರೆಗಳನ್ನು ಪ ರಿ ಯಾಗಿ ಮ-ಚ್ಚಿಡ-ವುದು ಮೊದಲಾದ ಕ್ಷುಲ್ಲಕವೆನಿಸಬಹುದಾದ ವಿಷಯಗಳು ಕೂಡ ಪ್ರಮು ಖ ಸಾಧನಗಳ ಗಿ ಪರಿಣ ಮಿಸಬಹುದಾದುದರಿಂದ. ಸಾರ್ವಜನಿಕ ರು ಆಹಾರ ಪದಾರ್ಥಗಳ ರಕ್ಷಣಾವಿಚಾ ರದಲ್ಲಿ ನಾಕಷ್ಟು ಗಮನವೀಯ-ಬೇಕು ಆಹಾರ ನಮ್ಮುಗಳನ್ನು ಸಿದ್ಧಪಡಿಸುವಾ ಗಲೂ ಆನಮ್ಮ ಆರೋಗ್ಯಕರ ಕೃಮು ಗಳನ್ನು ಅನುಸರಿಸಬೇಕು ಇವರಿಂದ ಕೆಲವೊಮ್ಮೆ ಮಹಾಮಾರಿ ಪೇನೆಗಳನ್ನೂ ದೂರವಿರಿಸಬಹುದು ಎಂದು ಸಾರ್ವಜನಿಕ ಆರೋಗ್ಯ ಶಾಖೆಯ ಡೈರೆಕ್ಟರರು ಒಂದು ಪ್ರಕಟಣೆಯ ಮೂಲಕ ಜನತೆಯನ್ನು ಕೇಳಿಕೊಂಡಿದ್ದಿರೆ.

ಅಪರಿಮಾಣಕಾರೀ ಆಟಂ

ಮಂತ್ರಿಗಳು ತಮ್ಮ ದುರಾಗ್ರಹವನ್ನು ಇನ್ನೂ ಬೆಳೆಸುತ್ತಲಿದ್ದಾರೆ. ಬೆಳಗಾವಿ—ಕಾರವಾರಗಳ ಗಡಿ ಪ್ರಶ್ನೆಯು ಇತ್ಯರ್ಥ ವಾಗದಿರುವುದರಿಂದ, ಮತ್ತು ಗಡಿ ಸೋ ಧಾಟವು ವೀರ್ಯವಾಗಿ ನಡೆಯುತ್ತಿರುವುದ ರಿಂದ, ಈ ಬಾರಿಯ "ರಾಜ್ಯೋತ್ಸವ ಪರ ಶುಧರನ ಜನಸಿ" ಯಾದಯಲ್ಲಮ್ಮನ ಜಾತ್ರೆಯನ್ನು ಬಹಿಷ್ಕರಿಸಿ ಎಲ್ಲ ಮರಾಠಿ ಗರೂ ತಮ್ಮ ಗ್ರಾಮಗಳಲ್ಲಿಯೇ ಯಲ್ಲ ಮ್ಮನ ಮೂರ್ತಿಯನ್ನು ಕೂಡಿಸಿ ಧಾ ರ್ಮಿಕ ವಿಧಿಗಳನ್ನು ಪೂರೈಸಬೇಕೆಂದು ಘೋರಕರೆಯಿತ್ತಿದ್ದಾರೆ! ಅಲ್ಲದೇ ಈ ಕ ರೆಯನ್ನು ವಿರೋಧಿಸಿದವರಿಗೆ ದಂಡವ ನ್ನೂ ಹಾಕಲಾಗುವುದೆಂದು ಹೆದರಿಕೆಯ ನ್ನು ಹುಟ್ಟಿಸಲಾಗಿದೆ. ಹಿಂದಿನ ಬಾರಿ ನವ ರಾತ್ರೆ ಕಾಲದಲ್ಲಿ ನಾಡ ಹಬ್ಬದ ಕಾರ್ಯ ಕ್ರಮವು ಕನ್ನಡಿಗರದ್ದೆದು ಅದನ್ನು ಬಹಿ ಷ್ಕರಿಸಿ ಉತ್ಸವ ನೆರವೇರಲಿದ್ದ ಜಪ್ಪರಕ್ಕೆ ಬೆಂಕಿ ಉರಿಸಿದ ಮರಾಠಿಗರ ಕಿಡಿಗೇಡಿತನ ವನ್ನೂ ಇಲ್ಲಿ ಸ್ಮರಿಸಿಕೊಳ್ಳಬಹುದು.

ಅಮೆರಿಕೆಯ ನಿಷ್ಫಲಚಂದ್ರ

ಅಮೆರಿಕೆಯ ನಾಲ್ಕನೆಯ ಚಂದ್ರಗ್ರ ಹ ನಿರ್ದೇಶಿತ ಆಕಾಶ ಬಾಣ ವಾದ ಪಾಯೋನೀರವು ಭೂಮಿಯ ವಾತಾವರಣ ದೊಡನೆ ಪ್ರುವೇಶಿಸಿ ಸಹರಾಮರುಭೂ ಮಿಯ ಹತ್ತಿರ ಸ್ಫೋಟಬವಾಯಿತು. ಆಕಾ ಶ ಬಾಣವು ಲಿಬಿಯದ ದಕ್ಷಿಣಕ್ಕೆ ಫ್ರೆಂಚ್ ಭೂಮಧ್ಯ ಆಫ್ರಿಕೆಯಲ್ಲಿ ಸಹರಾಮರು ಭೂಮಿಯ ಮೇಲೆ ಉತ್ತರ ಅಕ್ಷಾಂಶ ೧೩.೪ ನುತ್ತು ಪೂರ್ವ ರೇಖಾಂಶ ೧೫.೬ ರಲ್ಲಿ ಬಿದ್ದಿದೆಂದು ತಿಳಿದು ಬಂದಿದ. ಈ ಉಪಗ್ರಹದೆಡೆ ವೇಗವು ಕಡಿಮೆಯಾಗಿ ನಿಂತು ಭೂಮಿಯ ಕಡೆಗೆ ಬೀಳುವ ಮೊ ದಲು ಅಂತರಿಕ್ಷದಲ್ಲಿ ೬೫೬೬ಗಳ ಮೈಲು ಎತ್ತರಕ್ಕೆ ಹೋಗಿತ್ತೆಂದು ತಿಳಿದುಬಂದಿದೆ.

ಇತಿಹಾಸದ ಮೇಲೆ ಬೆಳಕು

ಇತ್ತೀಚೆಗೆ ಭಾರತದ ರಾಷ್ಟ್ರೀಯ ಪಕ್ಷಾಗಾರಸಲ್ಲಿ ಪನ್ನಾದ ಮಹಾ ರಾಜರ ಸೌಜನ್ಯದಿಂದ ಹಾಗೂ ಡಿಳಾ ಭಿಗವಾನದಾಸ ಗುಪ್ತಾರವರ ಪ್ರಯತ್ನಗ ಳಿಂದ ಬುಂದೇಲಖಂಡ ಮತ್ತು ಪರ್ಷಿ ಯನ್ ಭಾಷೆ ಳಲ್ಲಿರುವ ೧೭೭ ದಾಖಲೆ ಪತ್ರಗಳ ಮೈಕ್ರೋಫಿಲ್ಮ್ ತೆಗೆಯಲಾ ಯಿತು. ಈ ದಾಖಲೆ ಪತ್ರಗಳು ಬುಂದೇ ಲ ಖಂಡದಲ್ಲಿರುವ ಪನ್ನಾದ ೧೭ನೆಯ ಶ ತಮಾನದ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲುವುದು. ಬುಂದೇಲ ಖಂ ಡದ ಇತರರು ಮೊಗಲ ಚಕ್ರವರ್ತಿಗಳು ಮತ್ತು ಮರಾತರೊಂದಿಗೆ ಹೊಂದಿದ್ದ ಸಂಬಂಧವನ್ನು ಈ ದಾಖಲೆ ಪತ್ರಗಳಿಂದ ತಿಳಿಯಬಹುದಾಗಿದೆ.

ನವಯುಗ ವಾರ ಪತ್ರಿಕೆಗೆ
ಚೆಂದಾದಾರರಾಗಿ ಪ್ರೋತ್ಸಾಹಿಸಿರಿ

NOTICE

Notice is hereby given that Share Certificate Nos. 1175, 1863, 2125 & 2527 issued by the Vijaya Bank, Limited in respect of 58 Shares numbered 8138 to 8147, 13485 to 13492, 14891 to 14910 & 23608 to 23627, standing in the name of Sri H. Sanjiva Shetty, B. A., B. L., Advocate, now residing in Mangalore Town, are reported to be lost and an application has been received from him for the issue of a fresh Share Certificate in the place of the originals. Any person having any objection whatsoever for the issue of a fresh Share Certificate to the applicant, should communicate immediately the same to the undersigned. If objection is not filed with the undersigned within 15 days from this date a fresh Share Certificate in the place of the said original Share Certificate Nos 1175, 1863, 2125 & 2527 for the total number of 58 Shares, will be issued in the name of the applicant, Sri H. Sanjiva Shetty.

The Vijaya Bank, Ltd.,
Head Office, MANGALORE-3.
Dated 6—12—1958.

(*Sd.*) P. Jayarama Shetty,
Secretary.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಸುಸ್ತಕಗಳನ್ನು ಕಳುಹಿಸುವವರು ದಯಮಾಡಿ ಎರಡು ಪ್ರತಿಗಳನು ಕಳುಹಿಸಬೇಕೆಂ. ಸಂ.ನ.)

ಜಿನಮಾಪತಮ್–ಸಂಪಾದಕರು: ಕೆ. ನಾಗುದೇವ ಶಾಸ್ತ್ರಿ, ತಂಜಾವೂರು ಸರಸ್ವತಿ ಮಹಲ್ ಲೈಬ್ರರಿ, ತಂಜಾವೂರು ಪ್ರಕಾಶಕರು: ಸಾರ್ವಾನು ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಭಾಂಡಾರ, ಮದ್ರಾಸು. ಪುಟಗಳು: XIV + ೬೫. ಬೆಲೆ: ರೂ. ೨-೦-೦.

ನಟಂಜಜನವ ಈಶ್ವರನು ತನ್ನ ರಮಣಿಯಾದ ಉಮೆಗೆ ನಾಟ್ಯ ಶಾಸ್ತ್ರ ಸಂಬಂಧವಾದ ಸಮಸ್ತ ವಿಚಾರಗಳನ್ನು ತಿಳಿಸುವನೆಂಬ ಕಲ್ಪನೆಯಿಂದ ಬರೆಯಲ್ಪಟ್ಟ ರಾಗ, ಸಂಗೀತ ಹಾಗೂ ನಾಟ್ಯಿಶಾಸ್ತ್ರ ಸಂಬಂಧಿ ಗ್ರಂಥವಿದು. ಶೈವಾಗಮಕ್ಕನುಸಾರವಾಗಿ ಇಲ್ಲಿ ವಿಷಯವನ್ನು ನಿರೂಪಿಸಲಾಗಿದೆ. ಇದು ಶ್ರುತಿ ಮತ್ತು ಸ್ವರಗಳ ಸಂಬಂಧ ಗಂಭೀರ ವಿವೇಚನೆಯೂ ಇದ್ದಿದೆ. ಈ ಗ್ರಂಥವಲ್ಲಿ ಒಟ್ಟು ೬೫ ಅಧ್ಯಾಯಗಳಿವೆ. ನಾದವೇಹೋತ್ಪತ್ತಿ, ಗ್ರಾಮಸ್ಪಸ್ಥಾನ ಲಕ್ಷಣ, ಜೀವಜಾತಿ ಪ್ರಸ್ತಾರ, ಜಾತಿಪ್ರಸ್ತಾರ, ಸ್ವರನಾಮ ಪ್ರಸ್ತಾರ, ಸ್ವರಾಧಿಕಾರ, ಶ್ರುತಿ ಪ್ರಸ್ತಾರ, ಮೂರ್ಛನಾಕ್ರಮ ಮೂರ್ಛನಾಗೇಯ ಪ್ರಕರಣ, ಮೂರ್ಛನಾ ನುಂಡಲ ಲಕ್ಷಣ, ಶುದ್ಧರಾಗ ಲಕ್ಷಣ, ರಾಗ ಪ್ರಸ್ತಾರ, ರೂಪ ಲಕ್ಷಣ, ಮರ್ಮ ಲಕ್ಷಣ, ಕೂರ್ಮರೂಪಾದಿಧ್ರುವಾಲಕ್ಷಣ, ದೇವಲೋಕಧ್ರುವಾಲಕ್ಷಣ, ಧ್ರುವಾಲಕ್ಷಣ, ಶ್ರಿಪದ ಲಕ್ಷಣ, ಅಡ್ಡತಾಲೀ ಲಕ್ಷಣ, ಸೂಡಾದಿಗೀತ ಲಕ್ಷಣ ವೇಣು ಲಕ್ಷಣ, ವೀಣಾ ಲಕ್ಷಣ, ನಾಟ್ಯ ಕಾವ ಪ್ರಬಂಧ, ಚಂಚತ್ಪುಟಾದಿತಾಲ್ಯೆಕೊಕ್ತರ ಪ್ರಸ್ತಾರ ಲಕ್ಷಣ, ಮೇರು ಪ್ರಸ್ತಾರ ಲಕ್ಷಣ, ಪೋಡಶಕೋಷ್ಠಮೇರು ಪ್ರಸ್ತಾರ, ಮಾರ್ಗಪ್ರಸಾದ ಶುದ್ಧಪ್ರಸಾದ ಲಕ್ಷಣ, ಚಕ್ರಾದಿ ಸಂಚಿತಾಲ ಪ್ರಸ್ತಾರ ತಾಲ ಲಕ್ಷಣ, ಮಾರ್ಗಲ ಲಕ್ಷಣ, ಅವಜಾದಿ ಲಕ್ಷಣ, ಅಷ್ಟವಿಧ ನೃತ್ಯಕಥನ, ಶಿರೋಭೇದ ಲಕ್ಷಣ, ಅಂಗಾಭಿನಯ ಲಕ್ಷಣ, ನೃತ್ಯ ಲಕ್ಷಣ, ಕುಂಡಲೀ ಶಬ್ದ ಪ್ರಬಂಧ, ಗೀತವಾದ್ಯನೃತ್ಯ ಸಮವಾಸ್ಯಾಯಶೇಷಭೇತೆರೆ ಸಭಾವ ಲಕ್ಷಣ. ಪ್ರಬಂಧಭೇದ (ತಾಳ, ಗೀತ, ಶಬ್ದ ಪ್ರಬಂಧಗಳು) ಎಂಬ ಬೇರೆ ಬೇರೆ ಅಧ್ಯಾಯಗಳಲ್ಲಿ ಆಯಾ ವಿಷಯಕ್ಕೆ ಸಂಬಂಧಪಟ್ಟ ವಿಷಯ ಹಾಗೂ ವಿಚಾರಗಳನ್ನು ಸುಸ್ಪಷ್ಟವಾಗಿ ಸುಲಭ ಸರಳವಾಗಿ ಇಲ್ಲಿ ನಿರೂಪಿಸಲ್ಪಟ್ಟಿದೆ.

ಇಲ್ಲಿನ ಸಾರಲ್ಯಕ್ಕೆ ಒಂದು ಉದಾಹರಣೆಯನ್ನು ಎತ್ತಿ ತೋರಿಸಬಹುದು. ಉಮೆಯು "ಭಗವನ್ ಶ್ರೋತುಮಿಚ್ಛಾಮಿ ವೇಣುವೀಣಾದಿ ಲಕ್ಷಣಮ್" ಎಂದು ಶಿವನೊಡನೆ ಕೇಳಲು, ಆಗ ಶಿವನು ಆದನ್ನು ತಿಳಿಸುತ್ತಾನೆ.

"ಸಜೀವನಿರ್ಜೀವ ಮಿಶ್ರಶ್ಚ ನಿರ್ಜೀವ
ಇತಿ ಚತ್ರಿಧಾ |
ವಾಗೋ ಭವತಿ ತತ್ರಾದ್ಯೌ ಸಜೀವೌ
ನರಕಂರಜಃ ||
ಮಿಶ್ರಃ ಸ್ಯಾದ್ವೈಣಾ ಸಂಜ್ಞಾತೋ
ನಿರ್ಜೀವೌ ವೈಣಿಕೋ ಭವೇತ್ |"

ಎಂದು ರಾಗ ಭೇದಗಳನ್ನು ತಿಳಿಸಿ ತಿರಿದಿಂದ ಒಂದೆಂಗಲ ಬಿಟ್ಟು ನುಡಿದ್ದಾರೆವಿರುವ ೬೪ ಅಂಗುಲ ಉದ್ದದ ಮೂಲಶಕ್ತಿ ಎಂಬ ವೇಣು ವಿನ ವಿವರವೀಯುತ್ತಾನೆ. ಇದೇ ರೀತಿಯಲ್ಲಿ ಬಹಳ ಸುಲಭಗ್ರಾಹ್ಯವಾಗುವಂತೆ ಇಲ್ಲಿ ವಿಷಯ ಪ್ರತಿಪಾದನೆ ಮಾಡಲಾಗಿದೆ.

ಈ ಗ್ರಂಥವು ಮೂಲತಃ ಶಾಸ್ತ್ರಗ್ರಂಥವಾಗಿರುವುದರಿಂದಲೂ ಅದರಲ್ಲಿಯೂ ರಾಗ ತಾಳಾದಿ ಕ್ಲಿಷ್ಟ ವಿಚಾರ ಪ್ರತಿಪಾದನೆಯನ್ನು ಬಿಡಲೂ ಸುಲಭ ಗ್ರಾಹಿಭಾಷೆಯನ್ನೇ ಉಪಯೋಗಿಸುವುದು ಅವಶ್ಯಕತೆ. ಇಂತಹ ಸರ್ವ ಜನರಿಗೂ ಅರ್ಥವಾಗಬಲ್ಲ ಭಾಷೆಯನ್ನು ಬಳಸುವುದರಿಂದ ಗ್ರಂಥ ಗೌರವವು ಅಧಿಕವೇ ಆಗುವುದು ಈ ಗ್ರಂಥವು ನಮ್ಮ ಪ್ರಾಚೀನ ಸಂಗೀತ, ಸಂಗೀತ ಶಾಸ್ತ್ರ ನೃತ್ಯ ಸಾಹಿತ್ಯಗಳ ಬಗ್ಗೆ ನಡೆಸುವ ಸಂಶೋಧನೆಗಳಿಗೆ ನೆರವಾಗುವ ನಿಸಯಗಳಿಂದ ಆಡಕವಾಗಿದೆ. ಆದರೂ ಈ ರೀತಿ ಶೋಧನೆಗೆ ತೊಡಗುವುದಕ್ಕೆ ಮೊದಲು ತಾತ್ಪರ್ಯದಿಂದ, ಸಾಧ್ಯವಾದಷ್ಟು ಅತ್ಯಪ್ರತಿಗಳನ್ನು ಸಂಗ್ರಹಿಸಿ, ಅವುಗಳ ಸಹಾಯದಿಂದ ಮೂಲರೂಪ ಗಳನ್ನು ನಿರ್ಧರಿಸಿಕೊಳ್ಳುವುದೂ ಅಗತ್ಯವಾಗಿದೆ. ಈ ಗ್ರಂಥದಲ್ಲಿ ಆಡಕವಾದ ವಿಷಯಗಳು ಪ್ರಾಚೀನ ಸಾಪ್ರದಾಯಕ್ಕೆ ಹೊಂದುತ್ತವೆ "ಜಿನಾಪತಮ್" ಮತ್ತು "ಉಮಾಪತಿ" ಎಂದಿರುವ ಸಂಗೀತ ರತ್ನಾಕರದ ರಾಗ ವಿಭಜನೆಯ ಪ್ರಕರಣಕ್ಕೆ ಟೀಕೆ ಬರೆಯುವಾಗ ಕಲ್ಲಿನಾಥನಿಂದ ಪ್ರಸ್ತಾಪಿಸಲ್ಪಟ್ಟಿದೆ ಯೆಂದೂ ತಿಳಿಯುತ್ತದೆ. ಹೀಗಾಗಿ, ಈ ಗ್ರಂಥವು ಶಿಸ್ತುಪ್ರಕೆಯ ಪ್ರಾರಂಭಿಕ ಕಾಲದ್ದೆಂದು ಸಂಪಾದಕರು ಊಹಿಸಿರುವುದು ಸರಿಯೆಂದೇ ಹೇಳಬೇಕಾಗುತ್ತದೆ

ಈ ಗ್ರಂಥವನ್ನು ಸಪ್ಪೆ ಮದ್ರಾಸ ಸರಕಾರದ ಪ್ರಾಚ್ಯ ಹಸ್ತಪ್ರತಿಗಳ ಪುಸ್ತಕ ಭಂಡಾರದ ಪ್ರತಿಯ ಸಹಾಯದಿಂದಲೂ ಪೂನದ ಭಂಡಾರಕರ ಸಂಶೋಧನಾ ಸಂಸ್ಥೆಯ ಪ್ರತಿಯ ಸಹಾಯದಿಂದಲೂ ಸರಿನೋಡಲ್ಪಟ್ಟು ಅಚ್ಚಾಗಿದೆ. ಒಲ್ಲಲ್ಲಿ ಗ್ರಂಥಪಾತವಾಗಿರುವುದನ್ನು ಹೊಗಳೆಯೇ ಉಳಿಯಬೊಡದೆ ಸಂಪಾದಕರು ತುಂಬಿಸಿವ್ವಾರೆ ಅಲ್ಲಲ್ಲಿನ ಪಾಠಾಂತರಗಳ ನ್ನೂ ಅಡಿ ಟಿಪ್ಪಣಿಯಲ್ಲಿ ಕೊಟ್ಟಿರುವುದು ಉಪಯುಕ್ತವಿದೆ ಆರಂಭದಲ್ಲಿ ಭಾಂಡಾಗಾರದ ಕ್ಯೂರೇಟರರಾದ ಶ್ರೀ ಟಿ. ಗಿಂದ್ರ ಶೇಖರನವರು ಭಾಂಡಾಗಾರವು ಹಳೆಯ ಗ್ರಂಥಗಳ ಪ್ರಸಿದ್ಧಿಗಾಗಿ ಕೈಗೊಂಡ ಕಾರ್ಯಕಲಾಪಗಳನ್ನೆಲ್ಲ ಸವಿವರವಿರುತ್ತಾರೆ. ಅಲ್ಲದೇ ಈ ಗ್ರಂಥದ ಸಂಪಾದಕರಿಂದ ಶ್ರೀ ಶಾಸ್ತ್ರಿಗಳು ತಮ್ಮ ವಿದ್ವತ್ಪೂರ್ಣ ಭಾಷೆಯಲ್ಲಿ "ಜೀವಾಪತಸ್ತವ್" ಗೆ ಒಂದು ಅಭಾ ವ್ಯಾಖ್ಯಾನವನ್ನೇ ಬರೆದಿರುತ್ತಾರೆ. ಇದರಿಂದ ಗ್ರಂಥವನ್ನು ಅಧ್ಯಾಸಮಾಡುವವರಿಗೆ ಬಹಳ ಉಪಕಾರವಾಗುತ್ತದೆ ಶ್ರೀ ಶಾಸ್ತ್ರಿಯವರು ಇಡೀ ಗ್ರಂಥವನ್ನು ಶಬ್ದ ಶಬ್ದಾರ್ಥದೊಡನೆ ಅರ್ಥಮಾಡಿಕೊಂಡೇ ಸಂಪಾದಿಸಿರುವುದು ಪ್ರಸ್ಫೋಟವಾಗಿರುತ್ತದೆ. ಹೀಗಾಗಿ, ಗ್ರಂಥದಲ್ಲಿ ತಪ್ಪುಗಳಿರುವ ಶಕ್ಯತೆ ಕಡಿಮೆಯೆಂದೇ ಹೇಳಬೇಕು. ಹಾಗಾಗಿ, ಶಾಸ್ತ್ರಜ್ಞೇಮಿಗಳಿಗೂ, ಶಾಸ್ತ್ರಾಭ್ಯಾಸಿಗಳಿಗೂ ಸಂಶೋಧಕರಿಗೂ ಇದೊಂದು ಸಹಾಯಕ ಗ್ರಂಥವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ ಪ್ರಕಾಶಕರಿಗೆ ಹಾಗೂ ಸಂಪಾದಕರ ಪರಿಶ್ರಮವು ಸುಶ್ಲಾಘ್ಯವಿದೆ.

—ಗೋರಾ.

ಸಾದರ ಸ್ವೀಕಾರ

೧. **ಕಥಾಸಂಕಲನ**-(ವಿವಿಧ ಲೇಖಕರಿಂದ) ಪ್ರಕಾಶಕರು: ಕಲಾಮ್ಮಂದ್ರ, ಉಡುಪಿ. ಪುಟಗಳು: ೧೦೫. ಬೆಲೆ: ೩ ರೂಪಾಯಿಗಳು

ಅದ್ವಿಷ್ಟಶಾಲಿ ರಾಷ್ಟ್ರನಾಯಕ ಜೋರ್ಜ್ ವಾಶಿಂಗ್‌ಟನ್ ಮೂಲ: ಜಿನೇ ಇಯೇಟನ್ ಅನುವಾದಕ: ಉಡುಪಿ ಲಕ್ಷ್ಮೀನಾರಾಯಣ ಆಡಾರ್ಯ, ಎಂ.ಎ.ಎಲ್.ಟಿ ಪ್ರಕಾಶಕರು: ನವಯುಗ ಎಂಟರ್ ಪ್ರೈಸಸ್ ಲಿಮಿಟೆಡ್, ಉಡುಪಿ. ಪುಟಗಳು: ೧೧೪. ಬೆಲೆ: ರೂ. ೧.೫೦.

೧. **ಸ್ವಯಂಪ್ರಭಾ ಪರಿಣಯ**-(ಯಕ್ಷಗಾನ) ರಚನೆಕಾರರು ಮತ್ತು ಪ್ರಕಾಶಕರು: ತೀರ್ಥಹಳ್ಳಿ ಮಾಸ್ತರ್ ವಿಷ್ಣುಭಟ್ಟ, ದೇಲಂಪಾಡಿ. ಪುಟಗಳು: ೩೮. ಬೆಲೆ: ಜಂ.ನ. ೫೦.

ಭೂ ವಿಧೇಯಕ

(ಜನೇ ಪುಟದಿಂದ)

ಕಂಪಾಯವನ್ನು ಕಳೆದು ಉಳಿದ ವಾರ್ಷಿಕ ಗೇಣಿಯ ೧೫ರಷ್ಟನ್ನು ಪರಿಹಾರವಾಗಿ ಕೊಡಲಾಗುವುದು. ಈ ಭೂಮಿಯಲ್ಲಿರುವ ಕಟ್ಟಡ, ಬಾವಿ ಮೊದಲಾದುವುಗಳಿಗೆ ಸದ್ಯದ ಮಾರುಕಟ್ಟೆಯ ದರದಲ್ಲಿ ಬೆಲೆಯಿಯಲಾಗುವುದು.

೧೨. ಸರಕಾರಕ್ಕೆ ಬಿಟ್ಟುಕೊಡಬೇಕಾದ ಭೂಮಿಯು ಮೂರು ಹಿಡುವಳಿಗಿಂತ ಕಡಿಮೆಯಿದ್ದರೆ, ಪರಿಹಾರಧನವನ್ನು ಏಕ ಗಂಟಿನಲ್ಲಿ ನೆಗದಿಯಾಗಿ ಕೊಡಲಾಗುವುದು. ಉಳಿದವರಿಗೆ ೨೦ ವರ್ಷಗಳ ಅವಧಿಯಲ್ಲಿ ನೂರಕ್ಕೆ ೪॥ ಬಡ್ಡಿಯಲ್ಲಿ ಕಂತುಗಳಾಗಿ ಕೊಡಲಾಗುವುದು. ಅಥವಾ ಜಲಾವಣೆ ಮಾಡಬಲ್ಲ ನೂರಕ್ಕೆ ೪॥ ಬಡ್ಡಿಯಲ್ಲಿ ೨೦ ವರ್ಷಗಳಲ್ಲಿ ಹಣಕೊಟ್ಟು ಬಿಡುಗಡೆ ಮಾಡಬಲ್ಲ ಸಾಲಪತ್ರಗಳ ರೂಪದಲ್ಲಿ ಕೊಡಲಾಗುವುದು. ಧಾರ್ಮಿಕ ಹಾಗೂ ಶಿಕ್ಷಣ ಸಂಸ್ಥೆಗಳ ಮಟ್ಟಿಗೆ ಈ ಪರಿಹಾರವನ್ನು ನಗದಿ ಮಾಡಲಾಗದ ನೂರಕ್ಕೆ ೫ರ ದರದ ಬಡ್ಡಿಯಲ್ಲಿನ ಸಾಲಪತ್ರಗಳ ರೂಪದಲ್ಲಿಯೇ ಪರಿಹಾರ ನೀಡಲಾಗುವುದೆ. ಎಂದೆನೆ, ಇವುಗಳಿಗೆ ವರ್ಷಂಪ್ರತಿ ೫ರ ಸಲೆಯಲ್ಲಿ ಬಡ್ಡಿ ಮಾತ್ರ ಸಿಗುವುದು.

೧೩. ಈ ಶಾಸನವನ್ನು ವ್ಯವಹಾರಕ್ಕೆ ತರಲು ಪ್ರತಿ ಜಿಲ್ಲೆಯಲ್ಲೂ ಒಂದು ನ್ಯಾಯಾಲಯವನ್ನು ಸ್ಥಾಪಿಸಲಾಗುವುದು. ಮೂರು ವರ್ಷಗಳ ಮಟ್ಟಿಗೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ಒಂದು ಭೂ ಆಯೋಗವನ್ನು ನೇಮಿಸಲಾಗುವುದು.

ಬಂಟರ ಯಾನೆ ನಾಡವರ ಸಂಘ ಸುವರ್ಣ ಮಹೋತ್ಸವ

ಸಂಘದ ಮತ್ತು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸುವರ್ಣೋತ್ಸವವು ಇದೇ ಬರುವ ಫೆಬ್ರವರಿ ತಾ. 1ನೇ ಆದಿತ್ಯವಾರ (1—2—59) ಆಚರಿಸಲಾಗುವುದು. ಧನಸಹಾಯ ಕೊಡಲಿರುವ ಮಹನೀಯರು ಮತ್ತು ಮಹಿಳೆಯರು ತಮ್ಮ ವಂತಿಗೆ ಮೊಬಲಗುಗಳನ್ನು ದಯವಿಟ್ಟು ಆದಷ್ಟು ಬೇಗ ತಲ್ಪಿಸಿದರೆ ಉಪಕಾರವಾಯಿತು. ಸಮಾಜದವರಲ್ಲಿ ಸುಧಾರಿತ ರೀತಿಯ ಕೃಷಿ, ಗ್ರಂಥರಚನೆ, ಹಾಷಣ, ಯಕ್ಷಗಾನ ಸಂಗೀತ ಮ ಇತರ ಲಲಿತ ಕಲೆಗಳಲ್ಲಿ ಪ್ರವೀಣತೆ ಪಡೆದಿರುವ ಸ್ತ್ರೀಯರು ಯಾ ಪುರುಷರಿಗೆ ಸಂಘದ ಹೆಸರಲ್ಲಿ ಮೆಡಲು ಯಾ ಸರ್ಟಿಫಿಕೇಟ್ ಕೊಡಬೇಕಾಗಿ ಜುಬಿಲಿ ಕಮಿಟಿಯವರು ನಿರ್ಣಯಿಸಿರುತ್ತಾರೆ.

ಕೆ. ಟಿ. ಆಳ್ವ
ಅಧ್ಯಕ್ಷ
ಸಂಘ ಮತ್ತು ಜುಬಿಲಿ ಕಮಿಟಿ.
ಮಂಗಳೂರು, ೨—12—58.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 401/1958

ಕೊಲ್ಲೂ ಶೆಟ್ಟಿ ಸಹಾ 5 ಜನರು— ವಾದಿರು.

ಮತ್ತು

ಕಾಳೇರಿ ಶೆಟ್ಟಿ ಕೊಡಾ 45 ಜನರು—
ಪ್ರತಿವಾದಿರು.

ಇವರೊಳಗೆ

ಸದ್ರಿ ನಾನೆಯ 45ನೆ ಪ್ರತಿವಾದಿ ಶ್ರೀ. ಮುದ್ದಣ್ಣ ಶೆಟ್ಟಿ—ತೀನಿ ಶೆಟ್ಟರ ಮನೆ, ಉಡ್ಪಿ ತಾಲ್ಲೂ ನಂದಿಕೂರು ಗ್ರಾಮದ ಕೆಲ್ಲಾರು ಕೆಳಮನೆಯಲ್ಲಿರುವವರಿಗೆ ಈ ಮೂಲಕ ತಿಳಿಸುವದೇನಂದ್ರೆ—

ವಾದಿರು ಹಿಂದೆ ಬಗ್ಗೆ ಮಾಡಿದ ಮೇಲ್ಕಂಡ ದಾವಾ ನಿಮ್ಮ ಹಾಜರತಿ ಬಗ್ಗೆ ತಾರೀಕು 18—1—59ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ನೀವು ನೋಲ್ಟಂದ ಕೋರ್ಟು ಮುಂದೆ ಸ್ವತಹಾ ಯಾ ವಕೀಲ್‌ದ್ವಾರಾ ಹಾಜರಾಗಿ ಉದಪಾಸಿಸಕ್ಕಮ್ಮ. ತಪ್ಪಿದಲ್ಲಿ ನಿಮ್ಮ ಗೈರುಹಾಜರಿ ಸಮ್ಮಂದೆ ನಿಮ್ಮನ್ನು ವಿರುದ್ಧ ದಾವಾ ತೀರ್ಮಾನಿಸಲಾದೀತು.

(By order of the Court)
N. M. Adyanthaya.
Advocate for Plffs.

Karkala, 8—12—58.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಸಾಹಸಿಯರು ನನ್ನ ಬೇಂಕಿನಿಂದ ಚಿನ್ನಾಭರಣ ನೆಗನಗೆ ಈಡಿನ ಮೇಲೆ ಪಡೆದ ಸಾಲಬನ್ನು ಮರುಪಾವತಿ ಮಾಡುವರೆ ವಿಜಿಪ್ತಿ ನೋಟೀಸು ಮೂಲಕ ಕೇಳಿ ಕೊಂಡಾಗ್ಯೂ ಅಸ್ಪಷ್ಟ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿ ಕೊಡಿರುವುದರಿಂದಲೂ ಅಲ್ಲದೆ ಕೆಲವರಿಗೆ ಬಿಟ್ಟರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇತನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ದಶಂಬರ ತಿಂಗಳ ತಾರೀಕು 19ನೇ ಶುಕ್ರವಾರ ಬೆಳಗಾಪ್ಪ ಗಂಟೆ 8-00ಕ್ಕೆ —ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ವರಾರದಲ್ಲಿ ಬಹಿರಂಗವಾಗಿ ಪರಾಜುಮಾಡಲಾದೀತು. ತಿಳಿದರಿಲಿ.

ಸಾಲದ ಜಂಜ್ರಿ ನಂಬರು	ಹೆಸರು ಮತ್ತು ವಿಳಾಸ	ಮೊಬಲಗು ರೂ. ನ ಪೈ.
1140/56	ಶ್ರೀ ಸುಬ್ಬಯ್ಯ ಪೇತಡಿಗ, ಹಾಳುಹಿತ್ಲು ಮುರ್ಡೆ ಆಳಿಯ, ಹೊಂಟೆ, ಪಡುವರಿ ಗ್ರಾಮ.	17 13
470/57	,, ರಾಮಬಿಲ್ಲವ, ಸಸಿಹಿತ್ಲು ಮುರ್ಡನ ಆಳಿಯ, ಮಯ್ಯಾಡಿ	108 56
331/57	,, ಬಿ. ಶಂಕರ ಸೇರುಗಾರ, ಪೆಂಕಟ್ಟಮಣ ಸೇರುಗಾರರ ಮಗ, ಜತ್ತಲೆ ವ್ಯಾಪಾರಿ, ಬಿಜಾಡಿ.	238 19
525/57	,, ಮಣಿಗಾರ ಮಹ್ಮದ್ ಮೀರಾ ಸಾಹೇಬ್, ಕಾದಿರ್ ಸಾಹೇಬರ ಮಗ, ಕೇರಿ, ಶಿರೂರು.	175 50
526/57	do	103 13
687/57	,, ಸೂರ್ಕುಂದ ಬಾಲಯ್ಯ ಶೆಟ್ಟಿ, ಮಂಜಯ್ಯ ಶೆಟ್ಟರ ಆಳಿಯ, ಕುಂಜೋಳ್ಳಿ ಮನೆ, ಬೈಂದೂರು ಗ್ರಾಮ P. O. ಮಯ್ಯಾಡಿ.	28 69
757/57	,, H. ಕೊಗ್ಗಣ್ಣ ರಾವ್, C/o B. ಭವಾನಿ ಶಂಕರ ಭಟ್ಟ, ಐಂಬಡ ಕೋಣೆ.	34 25
898/57	,, ಸಂಜೀವ ಶೆಟ್ಟಿ, ಹಳಗೇರಿ ದೊಡ್ಡ ಮನೆ ಗೋವಿಂದ ಶೆಟ್ಟರ ಆಳಿಯ, ಐಂಬಡ ಕೋಣೆ ಗ್ರಾಮ, ಐಂಬಡ ಕೋಣೆ.	112 81
1024/57	,, ತೇಜಪ್ಪ ಶೆಟ್ಟಿ, ಕಾಪ್ಪಯ್ಯ ಶೆಟ್ಟರ ಆಳಿಯ, ಕರ್ಕುಂಡಿ, ಕಾಲ್ತೋಡು ಗ್ರಾಮ, ಕಾಲ್ತೋಡು.	56 12

ಬೈಂದೂರು,
5-12-1958.

ಎಚ್. ರಾಜೀವ ಶೆಟ್ಟಿ,
ಏಜಂಟ್.

ವಿಚಿತ್ರ ಸಾಧನೆ

ನಿನ್ನೆ ಮೊನ್ನೆಯ ಬೆಂಗಾಡು ನಾಳೆಯ ಬಂಗಾರದ ನಾಡು

ಭಾಕ್ರಾ ಆಣೆಕಟ್ಟು ಪೂರ್ತಿಯಾದೊಡನೆಯೇ ಅದರ ಪರಿಣಾಮ ಅಸಾಧಾರಣವಾಗುವುದು

ಭಾಕ್ರಾ ಆಣೆಕಟ್ಟಿಗೆ 'ಕಾಂಕ್ರೀಟ್' ಹಾಕುವ ಕಾರ್ಯ ಆರಂಭವಾಗಿ ಇನ್ನೂ ಮೂರು ವರ್ಷ ಕಳೆದಿಲ್ಲ. ಆಗಲೇ ಈ ಆಣೆಕಟ್ಟಿನಿಂದ ಪಂಜಾಬಿನ ದಕ್ಷಿಣ ಜಿಲ್ಲೆಗಳಿಗೆ ನೀರಿನ ಸೌಲಭ್ಯ ದೊರೆತು ನೀರಾವರಿ ಸೌಕರ್ಯ ಬೇಸಾಯ ಕಾರ್ಯ ಲಭಿಸಿದಂತಾಗಿದೆ.

೭೪೦ ಅಡಿಗಳ ಎತ್ತರದ ಈ ಆಣೆಕಟ್ಟಿನ ಉದ್ದೇಶ ದ್ವಿಮುಖವಾದುದು. ಒಂದು ಬೇಸಾಯಕ್ಕೆ ನೀರಾವರಿ ಸೌಕರ್ಯ ಒದಗಿಸುವುದು. ಇನ್ನೊಂದು ವಿದ್ಯುತ್ ತಯಾರಿಕೆ.

ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳ ವರೆಗೆ ಸಟ್ಲೆಜ್ ಪ್ರವಾಹ ಹೆಚ್ಚಿರುವ ನಾಲ್ಕು ತಿಂಗಳಲ್ಲಿ ಎಂದಿನಂತೆ ನೀರಾವರಿ ಸೌಕರ್ಯ ದೊರಕುವುದರ ಜೊತೆಗೆ ಇನ್ನು ಮೇಲೆ ವರ್ಷದ ಇತರ ತಿಂಗಳುಗಳಲ್ಲೂ ಈ ಆಣೆಕಟ್ಟಿನಿಂದ ಬೇಸಾಯಕ್ಕೆ ನೀರಿನ ಸೌಕರ್ಯ ಲಭಿಸುತ್ತದೆ.

ಪಂಜಾಬಿನ ದಕ್ಷಿಣ ಜಿಲ್ಲೆಗಳೂ ಅಲ್ಲದೆ ರಾಜಾಸ್ಥಾನದಲ್ಲಿರುವ 'ಕೇಂದ್ರ ಸೂರತ್ ಫೀರ್ ಫಾರಂ'ಗೆ ಸೇರಿದ 30,000 ಎಕರೆ ಜಮೀನಿನಲ್ಲಿ ರಾಬಿ ಬೆಳೆ ತೆಗೆಯಲು ಅನುಕೂಲವಾಗುವಂತೆ ನೀರಿನ ಸೌಕರ್ಯ ಲಭಿಸುವುದು.

ಪಂಜಾಬ್ ಮತ್ತು ರಾಜಾಸ್ಥಾನದ ಬೆಂಗಾಡಿನಲ್ಲಿ ಬೇಸಾಯದ ಮೂಲಕ ಜೀವನ ಸಾಗಿಸುವುದೇ ದುಸ್ತರವಾಗಿದ್ದ ರೈತರ ಜೀವನದಲ್ಲಿ ಈಗೊಂದು ಹೊಸ ಆಧ್ಯಾಯ ಆರಂಭವಾಗುತ್ತಿದೆ. ೧೯೬೦ರಲ್ಲಿ ಭಾಕ್ರಾ ಆಣೆಕಟ್ಟಿನ ಕಾರ್ಯಮುಗಿದಾಗ ಈ ಭಾಗದ ರೈತರಿಗೆ ವರ್ಷ ಪೂರ್ತಿ ನೀರಿನ ಸೌಕರ್ಯ ಲಭಿಸುತ್ತದೆ. ದೇಶದಲ್ಲಿ ಗೋಧಿ ಬೆಳೆಯುವ ಎರಡು ಪ್ರಮುಖ ರಾಜ್ಯಗಳಾದ ರಾಜಾಸ್ಥಾನ ಮತ್ತು ಪಂಜಾಬಗಳ ಪ್ರದೇಶದಲ್ಲಿ ಜನತೆಯ ಜೀವನವನ್ನು ಸಂಪದಭಿವೃದ್ಧಿಯ ಗುರಿಯತ್ತ ಕೊಂಡೊಯ್ಯುವ ಒಂದು ಹೊಸ ಪರ್ವವೇ ಆರಂಭವಾಯಿತು.

ಭಾರತದ ಮರಳು ಕಾಡಿನ ಕೊಂಬೆಯೆನಿಸಿದ್ದ ಪ್ರದೇಶ ಈ ಪರಿವರ್ತನೆಯಿಂದಾಗಿ 'ಗೋಧಿಯ ಕಣಜ'ವಾಗುವ ನೀರೀಕ್ಷೆ ಇಟ್ಟುಕೊಳ್ಳಬಹುದು.

ಈ ಗುರಿ ಮುಟ್ಟುವುದಕ್ಕೆ ಇನ್ನೂ ಎರಡು ವರ್ಷಗಳಿರುವಾಗಲೇ ಆಣೆಕಟ್ಟಿನ ಪ್ರಯೋಜನ ದೊರಕಲು ಆರಂಭವಾಗಿರಬೇಕು ಎಂಬ ಉದ್ದೇಶದಿಂದ ಆಣೆಕಟ್ಟಿನ ಎತ್ತರ ಒಂದು ಗೊತ್ತಾದ ಮಟ್ಟಕ್ಕೆ ಬಂದ ಕೂಡಲೇ ನೀರಿನ ಶೇಖರಣೆಯ ಕಾರ್ಯವನ್ನು ಶೀಘ್ರವಾಗಿ ಆರಂಭಿಸಿಕೊಳ್ಳುವ ಪ್ರಯತ್ನಕ್ಕೆ ಕೈಹಾಕಿ ಭಾರತೀಯ ಎಂಜಿನಿಯರುಗಳು ಒಂದು ಯಶಸ್ವಿಕಾರ್ಯ ನಿರೂಪಿಸಿದರು.

ಆಣೆಕಟ್ಟಿನ ಎತ್ತರ ಹೆಚ್ಚಿದಂತೆಲ್ಲ ನೀರು ಶೇಖರಣೆಯ ಕಾರ್ಯವೂ ಕನ್ನವಾಪ್ತಿಯನ್ನು ಹೆಚ್ಚಿಸಿಕೊಂಡು ಹೋಗಬೇಕು, ಎಂಬುದು ಅವರ 'ಗುರಿ'ಯಾಗಿತ್ತು. ಉತ್ತರ ಭಾರತದಲ್ಲಿ ಈ ಸಲ ಮಳೆಗಳು ಆರಂಭವಾದಾಗ ಸಟ್ಲೆಜ್ ಪ್ರವಾಹದ ನೀರನ್ನು ಆದಷ್ಟು ಹೆಚ್ಚು ಪ್ರಮಾಣದಲ್ಲಿ ಇಲ್ಲಿ ಶೇಖರಣೆಯಾಗಬೇಕೆಂಬ ಉದ್ದೇಶ ಇಟ್ಟುಕೊಂಡು ಕೆಲಸಮಾಡಿದುದರಿಂದಾಗಿ ೧೯೬೦ರಲ್ಲಿಯೇ ನೀರಿನ ಶೇಖರಣೆಗೆ ಈ ಆಣೆಕಟ್ಟಿನಲ್ಲಿ ಸಾಧ್ಯವಾಗುವಂತೆ ಆಣೆಕಟ್ಟಿನ ಕಾರ್ಯವನ್ನು ತ್ವರಿತಗೊಳಿಸಲಾಯಿತು. ಜೂನ್ 3ನೇ ತಾರೀಕು ಪ್ರವಾಹವನ್ನು ಬೇರೆಕಡೆಗೆ ಹರಿಸುವ ಎರಡು "ಸುರಂಗ"ಗಳ ಪೈಕಿ ಒಂದನ್ನು ಮುಚ್ಚಿ ಆಣೆಕಟ್ಟಿನ ಕಡೆಗೇ ನೀರು ಹರಿಯುವುದಕ್ಕೆ ಅವಕಾಶ ಮಾಡಲಾಯಿತು. ಇದರಿಂದಾಗಿ ೬೮೪ ಚದರ ಮೈಲಿ ವಿಸ್ತಾರದ ಗೋವಿಂದ ಸಾಗರ ಜಲಾಶಯ ಉಪಯೋಗಕ್ಕೆ ಬರತೊಡಗಿತು.

ಜೂಲೈ ಮತ್ತು ಆಗಸ್ಟ್ ಒರೆನು ಫ್ಯೆ ಸಟ್ಲೆಜ್ ನದಿಯು ಪ್ರವಾಹ ಕುಂಬಾ ಹೆಚ್ಚಾಯಿತು. ಸ್ಪಿಲ್‌ವೇ ಚಾನೆಲ್ಲುಗಳ ವ್ಯವಸ್ಥೆ ಹೆಚ್ಚಿಗೆ ನೀರನ್ನು ಸುರಕ್ಷಿತವಾಗಿ ಸಾಗಿಸಲು ಸಾಧ್ಯವಾಯಿತು.

ಈ ಕಾರ್ಯಕ್ರಮಗಳ ಮೂಲಕ ಆಣೆಕಟ್ಟಿನ ಹಿಂದೆ ಗೋವಿಂದ ಸಾಗರ ಜಲಾಶಯದಲ್ಲಿ ಳಲಕ್ಷ ಎಕರೆ-ಅಡಿಗಳಷ್ಟು ನೀರು ಶೇಖರಣೆಯಾಗಲು ಅವಕಾಶ ಕಲ್ಪಿಸಲಾಯಿತು (ಒಂದು ಎಕರೆ ಭೂಮಿಯಲ್ಲಿ ಒಂದು ಅಡಿಯಷ್ಟು ನೀರು ನಿಂತರೆ ಎಷ್ಟಾಗುತ್ತದೆಯೋ ಅಷ್ಟು ನೀರಿನ ಅಳತೆ ಒಂದು ಎಕರೆ-ಅಡಿ)- ವರ್ಷದ ಇತರ ಸಮಯಗಳಲ್ಲಿ ಈ ನೀರನ್ನು ಭಾಕ್ರಾ ನಾಲೆಗಳ ಮೂಲಕ ಬೇಸಾಯಕ್ಕೆ ಒದಗಿಸಲಾಗುವುದು.

ಭಾಕ್ರಾನಾಲಾ ಯೋಜನೆಗೆ ಸೇರಿದಂತೆ ಒಟ್ಟು 700ಮೈಲಿಗಳಷ್ಟು ಉದ್ದದ ಮುಖ್ಯ ನಾಲೆಗಳೂ, 4,200ಮೈಲಿ



ಆಧಿಕ ಪೋಟೆಜಿನ ಸ್ವಿಚ್‌ಗೇರ್ ಇದನ್ನು ಲಂಡನ್ನಿನ ಫರ್ಗ್ಯೂಸನ್ ಕಂಪೆನಿಯು ತಯಾರಿಸಿದೆ

ಗಳಷ್ಟು ಉದ್ದದ ಉಪನಾಲೆಗಳೂ ಇವೆ. ಇವು ಪಂಜಾಬಿನಲ್ಲಿ ಹರಡಿಕೊಂಡಿದ್ದು ಕೊನೆಗೆ ರಾಜಾಸ್ಥಾನಕ್ಕೆ ಹೋಗಿ ಸೇರುತ್ತವೆ.

ಹೀಗೆ ಶೇಖರಣೆಯಾಗಿರುವ ನೀರಿನ ಉಪಯೋಗದಿಂದಾಗಿ ಪಂಜಾಬ್ ಮತ್ತು ರಾಜಾಸ್ಥಾನಗಳಲ್ಲಿ ೧೯೬೧ರಲ್ಲಿ ಆಹಾರ ಧಾನ್ಯಗಳ ಉತ್ತಮ ಬೆಳೆ ಬರುವ ನೀರೀಕ್ಷೆ ಇದೆ.

ಭಾಕ್ರಾ ಆಣೆಕಟ್ಟಿನ ಎತ್ತರ ಮುಂದಿನ ವರ್ಷ ಇನ್ನೂ ಹೆಚ್ಚಾದಾಗ ೧೯೬೧ರ ಮಳೆಗಾಲದನಂತರ ೫.೧ದಶಲಕ್ಷ ಎಕರೆ-ಅಡಿಗಳಷ್ಟು ನೀರನ್ನು ಜಲಾಶಯದಲ್ಲಿ ಶೇಖರಿಸಲು ಸಾಧ್ಯವಾಗುವುದು. ನಿರೀಕ್ಷೆಯಿಟ್ಟಿರುವ ಇತರ ಪೈಕಿ ಅರ್ಧದಷ್ಟನ್ನು ೧೯೬೦ರಲ್ಲಿ ನೀರಾವರಿಗೂ ವಿದ್ಯುತ್ ತಯಾರಿಕೆಗೂ ವಿನಿಯೋಗಿಸಬಹುದು. ಉಳಿದರ್ಧ ನೀರು ಜಲಾಶಯದಲ್ಲಿಯೇ ಮಿಸಲಾಗಿರುವುದು.

೧೯೬೦ರಲ್ಲಿ ಈ ಜಲಾಶಯದಲ್ಲಿ ಒಟ್ಟು ೭.೪ದಶಲಕ್ಷ ಎಕರೆ-ಅಡಿಗಳಷ್ಟು ನೀರು ಶೇಖರಿಸಲು ಸಾಧ್ಯವಾಗುವುದು; ಈ ವೈಕೆ ೫.೬ದಶಲಕ್ಷ ಎಕರೆ-ಅಡಿಗಳಷ್ಟು ಉಪಯೋಗಕ್ಕೆ ಬರುವುದು. ಇದರ ಸಹಾಯದಿಂದ ಪಂಜಾಬಿನಲ್ಲಿ ೫.೬ದಶಲಕ್ಷ ಎಕರಗಳಷ್ಟೂ ರಾಜಾಸ್ಥಾನದಲ್ಲಿ ೧.೦ದಶಲಕ್ಷ ಎಕರೆಗಳಷ್ಟೂ ಹೀಗೆ ಒಟ್ಟು ೬.೬ದಶ ಲಕ್ಷ ಎಕರೆ ಭೂಮಿಯಲ್ಲಿ ಸಾಗುವಳಿ ಮಾಡಲು ಸಾಧ್ಯವಾಗುವುದು.

ಅದರೆ ಕೂತಲೇ ಬೇಸಾಯಕ್ಕೆ ಬರುವ ಭೂಮಿ ಪಂಜಾಬಿನಲ್ಲಿ ೩.೦೩ ದಶಲಕ್ಷ ಎಕರೆ ರಾಜಾಸ್ಥಾನದಲ್ಲಿ ೦.೫೬ ದಶಲಕ್ಷ ಎಕರೆ ಇಷ್ಟುಮಾತ್ರ.

ಈ ಪರಿಸ್ಥಿತಿ ಬಂದಾಗ ಗೋವಿಂದ ಸಾಗರ ಜಲಾಶಯದ ನೀರು ರಾಜಾಸ್ಥಾನದ ಮುಖ್ಯ ಭಾಗದವರೆಗೂ ಹೋಗುತ್ತದೆ. ಮರಳು ಕಾಡಿನಂತಿರುವ ಬರಡು ಭೂಮಿ ಆಗ ನಂದನವನವಾಗಿ ಪರಿವರ್ತನೆ ಹೊಂದಿ ಜನ ಸಂತೋಷದಿಂದ ನಳ್ಳು ನಲಿಯುತ್ತಾರೆ.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: ಮಾರ್ಚ್ 12, 1906)

ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ ಎಲ್. ಶಿತಾಳ, ಎಂ.ಡಿ ಡಿ ಎಸ್.)

ಭೌತಿಕ ದರ್ಶನ
ಬಡಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಆರೋಗ್ಯ ಭಾಗ್ಯ

ಆಗ್ನೇಯ ಏಶ್ಯಾದಲ್ಲಿ ಮಲೇರಿಯಾ ನಿರ್ಮೂಲನ

೫೦ಕೋಟಿ ಜನರು ನರಕದಿಂದ ಸ್ವರ್ಗವನ್ನಡರುವರು

ಕಳೆದ ಹತ್ತು ವರ್ಷಗಳಲ್ಲಿ ಆಗ್ನೇಯ ಏಷಿಯಾದಲ್ಲಿ ಸಾರ್ವಜನಿಕ ಆರೋಗ್ಯ ಅಂಭೋಲನದ ಇತಿಹಾಸದಲ್ಲಿ ವಿನೂತನ ಅಧ್ಯಾಯವೊಂದು ಪ್ರಾರಂಭವಾಗಿದೆ.

ಹತ್ತು ವರ್ಷಗಳ ಹಿಂದೆ ೧೯೪೮ರಲ್ಲಿ ಆಗ್ನೇಯ ಏಷಿಯಾದ ಬಹುತೇಕ ರಾಷ್ಟ್ರಗಳು ಪರದಾಸ್ಯದಿಂದ ವಿಮೋಚನೆಗೊಂಡವು. ಅಫ್ಘಾನಿಸ್ತಾನ, ನೇಪಾಳ, ಭಾರತ, ಸಿಲೋನ್, ಬರ್ಮಾ, ಥೈಲೆಂಡ್, ಇಂಡೋಚೀನಾ ಮುಂತಾದ ಆಗ್ನೇಯ ಏಷಿಯಾದ ರಾಷ್ಟ್ರಗಳಲ್ಲಿ ಲಕ್ಷಾಂತರ ಗ್ರಾಮಗಳು ಮತ್ತು ನಗರಗಳಲ್ಲಿ ವಾಸಿಸುವ ಸುಮಾರು ೫೦ ಕೋಟಿ ಜನರು ಉತ್ತಮ ಜೀವನ ನಡೆಸುವ ಅಪೇಕ್ಷೆಯನ್ನು ವ್ಯಕ್ತಪಡಿಸಿರುವುದಲ್ಲದೆ ತಮ್ಮ ಹಾಗೂ ತಮ್ಮ ಮಕ್ಕಳ ಭವಿಷ್ಯವನ್ನು ನಿರ್ಧರಿಸುವ ಪ್ರಯತ್ನ ನಡೆಸಿರುವರು.

ಈ ಸಮಯದಲ್ಲಿ ಆಗ್ನೇಯ ಏಷಿಯಾದ ಐದು ರಾಷ್ಟ್ರಗಳ ಪ್ರತಿನಿಧಿಗಳು ೧೯೪೬ರ ಡಿಸೆಂಬರ್ ತಿಂಗಳಲ್ಲಿ ಸಭೆ ಸೇರಿ ಆಗ್ನೇಯ ಏಷಿಯಾಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯ ಪ್ರಾದೇಶಿಕ ಸಮಿತಿಯನ್ನು ರಚಿಸಿದರು. ಈ ಸಮಿತಿಯು ಈ ಪ್ರದೇಶದ ಆರೋಗ್ಯ ಸಂಬಂಧವಾದ ಸಮಸ್ಯೆಗಳತ್ತ ಲಕ್ಷ್ಯ ಹರಿಸ ಬೇಕಾಯಿತು. ಈ ಪ್ರದೇಶದ ಪ್ರತಿ ಜನರಲ್ಲಿ ನಾಲ್ವರು ಬೇಸಾಯಗಾರರು. ಇವರು ಅನಾದಿಕಾಲದ ಬೇಸಾಯ ತಂತ್ರವಿಧಾನಗಳನ್ನೇ ಬಳಸುತ್ತಾರೆ. ಇವರು ವರ್ಷಾಕಾಲವೂ ರೋಗ ರುಜಿನಾದಿಗಳಿಗೆ ಬಲಿಯಾಗುತ್ತಿರುವರು. ಇವರಿಗೆ ಪುಷ್ಟಿಕರವಾದ ಆಹಾರವೂ ಸಹ ದೊರೆಯುತ್ತಿಲ್ಲ.

೧೯೪೭ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಪ್ರಾದೇಶಿಕ ಸಮಿತಿಯ ಪ್ರಥಮ ಅಧಿವೇಶನವು ನಡೆಯಿತು. ಈ ಸಮಯದಲ್ಲಿ ಈ ಪ್ರದೇಶದಲ್ಲಿ ಮಲೇರಿಯ ಭಯಾನಕ ರೋಗವೆನಿಸಿತ್ತು. ಈ ಪ್ರದೇಶದಲ್ಲಿ ಪ್ರತಿ ವರ್ಷವೂ ಸುಮಾರು ೧೦ ಕೋಟಿ ಜನರು ಈ ರೋಗಕ್ಕೆ ಬಲಿಯಾಗುತ್ತಿದ್ದರಲ್ಲದೆ ಸುಮಾರು ೧೦ ಲಕ್ಷ ಜನರು ಮರಣ ಹೊಂದುತ್ತಿದ್ದರು. ಗ್ರಾಮಾಂತರ ಪ್ರದೇಶಗಳ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ಮಲೇರಿಯಾ ರೋಗವು ದೊಡ್ಡದೊಂದು ಪ್ರತಿಬಂಧಕವಾಗಿ ಪರಿಣಮಿಸಿತು. ಇದಕ್ಕೆ ಪೂರ್ವದಲ್ಲಿ ಮಲೇರಿಯಾ ರೋಗವನ್ನು ನಿಯಂತ್ರಿಸುವುದಕ್ಕಾಗಿ ಡಿಡಿಟಿ ಮುಂತಾದ ಕೀಟಾಣು ನಾಶಕ ವಸ್ತುಗಳನ್ನು ಪ್ರಯೋಗಾರ್ಥವಾಗಿ ಕೇವಲ ನಗರಗಳು ಮತ್ತು ದೊಡ್ಡ ದೊಡ್ಡ ಊರುಗಳಲ್ಲಿ ಮಾತ್ರ ಉಪಯೋಗಿಸಲಾಗುತ್ತಿತ್ತು. ಹೀಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಯಾವ ರೀತಿಯ ಪ್ರಯೋಜನವೂ ಲಭಿಸುತ್ತಿರಲಿಲ್ಲ.

ಇಂದು ಪರಿಸ್ಥಿತಿ ಬದಲಾಯಿಸಿದೆ. ಮಲೇರಿಯಾ ರೋಗದ ವಿರುದ್ಧ ನಡೆಸುತ್ತಿರುವ ಹೋರಾಟವು ವ್ಯಾಪಕರೂಪವಾಗಿದ್ದು ಸಫಲಗೊಳ್ಳುತ್ತಿದೆ. ಈ ಪ್ರದೇಶದಲ್ಲಿರುವ ಎಲ್ಲ ರಾಷ್ಟ್ರಗಳು ಮಲೇರಿಯಾ ರೋಗ ನಿಯಂತ್ರಣದ ಬದಲಾಗಿ ಮಲೇರಿಯಾ ರೋಗದ ನಿರ್ಮೂಲನ ಕಾರ್ಯವನ್ನು ಕೈಗೊಂಡಿವೆ.

ಸಿಲೋನ್ ೧೯೫೬ರಲ್ಲಿ ಮಲೇರಿಯಾ ರೋಗದ ನಿರ್ಮೂಲನ ಜಳಿಳಿಯನ್ನು ಉಪಕ್ರಮಿಸಿತು. ಇಂದು ಈ ರಾಷ್ಟ್ರದಲ್ಲಿ ಬಹುಮಟ್ಟಿಗೆ ಈ ರೋಗ ನಾಮಾವಶೇಷವಾಗಿದೆ ಅಫ್ಘಾನಿಸ್ತಾನ ಮತ್ತು ಥೈಲೆಂಡ್‌ಗಳು ಈ ರೋಗದ ವಿರುದ್ಧ ಕೈಗೊಂಡಿರುವ ಪ್ರಯತ್ನ ಸಫಲಗೊಳ್ಳುತ್ತಿವೆ. ಬರ್ಮಾದಲ್ಲಿ ಇನ್ನು ಮೂರು ನಾಲ್ಕು ವರ್ಷಗಳಲ್ಲಿ ಆ ದೇಶದ ಸುಮಾರು ಜನರನ್ನು ಮಲೇರಿಯಾ ರೋಗದಿಂದ ರಕ್ಷಿಸುವ ವ್ಯವಸ್ಥೆ ನಡೆದಿದೆ. ಇಂದು ಇಂಡೋನೇಷಿಯಾದಲ್ಲಿ ೧೯೫೯ರಿಂದ ಮಲೇರಿಯಾ ಮೂಲೋತ್ಪಾಟನ ಕಾರ್ಯಕ್ರಮವನ್ನು ಪ್ರಾರಂಭಿಸುವ ನಿರೀಕ್ಷೆಯಿದೆ. ೧೦ ಕೋಟಿ ಡಾಲರುಗಳ ವೆಚ್ಚದ ಈ ಯೋಜನೆಯನ್ನು ೧೦ ವರ್ಷಗಳ ಅವಧಿಯಲ್ಲಿ ಪೂರ್ಣವಾಗಿ ಅನುಷ್ಠಾನಕ್ಕೆ ತರಲಾಗುವುದು. ನೇಪಾಳವೂ ಸಹ ಮಲೇರಿಯಾ ಮೂಲೋತ್ಪಾಟನೆಗಾಗಿ ರಾಷ್ಟ್ರವ್ಯಾಪ್ತಿ ಯೋಜನೆಯನ್ನು ಪ್ರಾರಂಭಿಸಲಿದೆ.

ಮಲೇರಿಯಾ ರೋಗ ಮೂಲೋತ್ಪಾಟನ ಕಾರ್ಯದಲ್ಲಿ ಭಾರತವೇನು ಹಿಂದುಳಿದಿಲ್ಲ. ರಾಷ್ಟ್ರೀಯ ಮಲೇರಿಯ ನಿಯಂತ್ರಣ ಕಾರ್ಯಕ್ರಮದ ಪ್ರಕಾರ ಭಾರತದ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರು ಮಲೇರಿಯಾ ರೋಗದಿಂದ ರಕ್ಷಣೆ ಪಡೆದಿರುವವರು. ೧೯೫೩ರಿಂದ ಮಲೇರಿಯಾ ನಿರ್ಮೂಲನ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ೫೬ ಕೋಟಿ ರೂ.ಗಳ ಅಂದಾಜಿನ ವೆಚ್ಚದಲ್ಲಿ ಸುಮಾರು ಆರು ವರ್ಷಗಳ ಅವಧಿಯಲ್ಲಿ ಮಲೇರಿಯಾ ನಿರ್ಮೂಲನದ ರಾಷ್ಟ್ರವ್ಯಾಪ್ತಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು. ಆಗ್ನೇಯ ಏಷಿಯಾದ ದೇಶಗಳಲ್ಲಿ ಮಲೇರಿಯಾ ರೋಗವನ್ನು ನಿರ್ಮೂಲನಗೊಳಿಸುವ ವಿಚಾರದಲ್ಲಿ ವಿಶ್ವ ಆರೋಗ್ಯ ಸಂಸ್ಥೆ, ಸಂಯುಕ್ತ ರಾಷ್ಟ್ರಸಂಘದ ಮಕ್ಕಳ ತುರ್ತಿನ ನಿಧಿ (ಯೂನಿಸೆಫ್) ಮತ್ತು ಅಮೇರಿಕಾದ ಅಂತರರಾಷ್ಟ್ರೀಯ ಸಹಕಾರ ಆಡಳಿತ ಸಂಸ್ಥೆಗಳು ನೆರವು ನೀಡುತ್ತಿವೆ.

ಈ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗಗಳು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿವೆ. ಮಲೇರಿಯಾ ನಿರ್ಮೂಲನ ಕಾರ್ಯವನ್ನು ಈಗಾಗಲೆ ತೆಗೆದುಕೊಂಡಿದ್ದು, ಕ್ಷಯ, ಗುಯ್ಯೆರೋಗಗಳು, ಟ್ರಕೊಮ, ಕುಷ್ಟರೋಗ ಮುಂತಾದ ಸೋಂಕು ರೋಗಗಳನ್ನು ನಿಯಂತ್ರಿಸುವ ಕಾರ್ಯಗಳಿಗೆ ಆಗ್ರ ಪ್ರಾಧಾನ್ಯವೀಯಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯು ಆಗ್ನೇಯ ಏಷಿಯಾದಲ್ಲಿ ಈ ಸೋಂಕು ರೋಗಗಳನ್ನು ಹತೋಟಿಗೆ ತರುವ ಬಗ್ಗೆ ಈ ಪ್ರದೇಶದಲ್ಲಿರುವ ವಿವಿಧ ಪ್ರದೇಶಗಳ ಆರೋಗ್ಯ ಸೇವಾ ವಿಭಾಗಗಳಿಗೆ ವಿಶೇಷ ಪರಿಣಿತರ ಸೇವೆಗಳನ್ನು ಒದಗಿಸಿದೆ. ೧೯೫೯ರ ಮೇ ತಿಂಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆಯವರು ಸಿಲೋನಿನ ಹೊರತಾಗಿ ಉಳಿದ ದೇಶಗಳಿಗೆ ಮಲೇರಿಯಾ ನಿಯಂತ್ರಣ ಪ್ರತ್ಯಕ್ಷ ಪ್ರದರ್ಶನ ತಂಡಗಳನ್ನು ಕಳುಹಿಸಿಕೊಟ್ಟರು. ಕೆಲವು ತಂಡಗಳಲ್ಲಿ ವೈದ್ಯರು, ಸಾರ್ವಜನಿಕ ಆರೋಗ್ಯ ನರ್ಸ್‌ಗಳು, ಕೀಟ ವಿಜ್ಞಾನಿಗಳು, ಮುಂತಾದವರು ಇದ್ದರು. ವಿಶ್ವ ಆರೋಗ್ಯ ಸಂಸ್ಥೆಯ ನೆರವಿನೊಂದಿಗೆ ಆಗ್ನೇಯ ಏಷಿಯಾದ ಆರು ದೇಶಗಳಲ್ಲಿ ಕ್ಷಯರೋಗ ನಿಯಂತ್ರಣಕ್ಕಾಗಿ ಪ್ರತ್ಯಕ್ಷ ಪ್ರದರ್ಶನ ಹಾಗೂ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಥಾಯ್‌ಲೆಂಡಿನಲ್ಲಿ ಕೈಗೊಂಡಿರುವ ಬಿ. ಸಿ. ಜಿ. ವ್ಯಾಕ್ಸಿನೇಷನ್ ಕಾರ್ಯಕ್ರಮವು ಇಡೀ ವಿಶ್ವದಲ್ಲಿಯೇ ಅತಿ ಭಾರಿ ಪ್ರಮಾಣದ್ದಾಗಿದೆ. ಐದು ದೇಶಗಳಲ್ಲಿ ಕ್ಷಯರೋಗ ನಿಯಂತ್ರಣ ಕಾರ್ಯವನ್ನು ಕೈಗೊಳ್ಳಲಾಗಿದೆ.

ಕ್ಷಯರೋಗಿಗಳಿಗೆ ಅವರವರ ಗೃಹಗಳಲ್ಲಿಯೇ ಔಷಧೋಪಚಾರ ನಡೆಸಿ ರೋಗ ವಿಮುಕ್ತರನ್ನಾಗಿ ಮಾಡುವ ಅಶಾತೀತ ಯೋಜನೆಯನ್ನು ಭಾರತವು ಕಾರ್ಯರೂಪಕ್ಕೆ ತರುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಆಶ್ರಯದಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಬ್ರಿಟಿಷ್ ಮೆಡಿಕಲ್ ರಿಸರ್ಚ್ ಕೌನ್ಸಿಲಿನ ಸಹಕಾರದೊಂದಿಗೆ ಈ ಕಾರ್ಯವನ್ನು ನಡೆಸುತ್ತಿದೆ.



ಟೊಟೇಕೋ ಮೋಥ್ (ಎಡ) ಮತ್ತು ಕೊಲೆರೊಮೊ ಬೀಟಲ್ (ಬಲ) ಎಂಬ ಪೈರೆತ್ತನ್ನು ನಾಶಮಾಡುವ ಹೂಗಳು. ಎರಡನೆಯದು ಅಮೆರಿಕೆಯಲ್ಲಿ ಮೊದಲು ಕಂಡುಬಂತು. ಈ ಪೈರುನಾಶಕಗಳು ಭಾರತದಲ್ಲಿ ಇನ್ನೂ ಪೈರನ್ನು ನಾಶಗೊಳಿಸುವ ಪರ್ಯಾಯಕ್ಕೆ ಇಳಿದಿಲ್ಲ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S. 420/58

ಪಾರ್ಟಿಷನ್ ಪಿಟ್ಟಿ — ವಾದಿ

ನಂಜಿಪ್ಪಪಿಟ್ಟಿ ಸಹಾ — ಪ್ರತಿವಾದಿರು

ಸದ್ರಿವಾದಿ ಕಡೆಯಿಂದ ಈ ಮೂಲಕ ಜಾಹೀರು ಮಾಡಿಕೊಳ್ಳುವದೇನೆಂದರೆ

ಪ್ರತಿವಾದಿರು 1. ನಂಜಿಪ್ಪಪಿಟ್ಟಿ ಲಿಂಗಮ್ಮ ಶೆಟ್ತಿರ ಮಗ.

2. ಮಂಜಯ್ಯ ಶೆಟ್ಟಿ ಸುಬ್ಬಕ್ಕ ಶೆಟ್ತಿ ಮಗ

ತಲ್ಲೂರ ಗ್ರಾಮದ ಮೊಸ ಮಟಪ ಕಡೆ ಮನೆಯಲ್ಲಿರುವವರು.

ವಾದಿಗೆ ಪ್ರತಿವಾದಿಂದ ತಾ 24-9-55ರ ದಿನದಂದ ನೋಟಿನ ಅಸ್ಸಲು ಬಡ್ಡಿ ರೂಪ್ಯಾ 1164.1.4ನ್ನು ಬರಮಾಡಿ ಕೊಳ್ಳುವರೆ ಮಾಡಿದ ಮೇಲ್ಕಂಡ ದಾವೆಯು ತಾ. 6.1.59ಕ್ಕೆ ಆಪ್ಸೇರಿ ತನ್ನಿಗೆ ಬಿ.ಟ್ಟಿದೆ. ಆ ಕಾರಿತ ಉದಾಹರಣೆಯಿಂದ ಸದ್ರಿ ದಿನ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರ ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ಏಕಪಕ್ಷದಿಂದ ತೀರ್ಮಾನಿಸಲ್ಪಡುವದೆಂಬ ಸಂಗತಿ ಈ ಮೂಲಕ ತಿಳಿಯಪಡ್ಸುವದೆ.

M. A. Shetty,
Advocate.

Coondapur, Date4-12-58

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಪೂಜಾ ಕಂಪೆನಿ, ಮಂಗಳೂರು—1.

ಗೋ ವಿಜಯ

(ಗೋವಿನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಆರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಶಾರೀರಿಕ ಶಿಕ್ಷಣ ನೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಾದ್ದರೆ ಈ ಪುಸ್ತಕವನ್ನು ಅವಶ್ಯ ಆವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ಕಥಾ ವಿಹಾರ

(೨ನೇ ಪುಟದಿಂದ)

'ಇದೆಲ್ಲಾ ನಡೆದೀತೆ?"

"ಖಂಡಿತಾ ನಡೆಯುತ್ತೆ, ಸಾರ್. ನಿನ್ಮ ಈ ಉಪಕಾರ ನಾನೆಂದೂ ಮರೆಯಲಾರೆ. ನೋಡಿದಿರಾ, ಹೇಳಬಾರದು ನಾನು. ಇದೇ ಊರಿನಲ್ಲಿ ಸಂಜೀವಯ್ಯ ನವರು ಅಂತ ಒಳ್ಳೇ ಲೇಖಕರು, ನಿಮಗೂ ಗೊತ್ತಿರಬಹುದು. ಬೆಂಗಳೂರಿನ ರಾಷ್ಟ್ರ ಮಿತ್ರದಲ್ಲಿ ಪ್ರತಿವಾರವೂ ಅವರ ಲೇಖನ ಬರುತ್ತಾ ಇದೆ. ವಾರಕ್ಕೆ ೧೫ ರೂಪಾಯಿ ರೆಮ್ಯುನರೇಷನ್ ಬರುತ್ತಾ ಇರುತ್ತೆ ಅವರಿಗೆ. ಬಹಳ ಕರೆಕ್ಟು ಸಾರ್. ಬಹಳ ಒಳ್ಳೆಯ ಜನ ಸಂಜೀವಯ್ಯ. ಕಳೆದ ವಾರದ ರೆಮ್ಯುನರೇಷನ್ ನನಗೆ ಕೊಡುವ ಹಾಗೆ ಒಂದು ಕಾಗದ ಬರೆದು ನನ್ನ ಹತ್ತಿರ ಕೊಟ್ಟದ್ದಾರೆ. ನೋಡೀ ಸಾರ್. ನನ್ಮುಂಥವರಿಗೆ ನಮ್ಮಂಥವರೇ ಸಹಾಯಮಾಡುವರಲ್ಲದೆ ಮತ್ತೆ ಯಾರು ಸಾರ್? ದೊಡ್ಡವರ ಹತ್ತರ ಹೋಗಿ ಹೀಗೆಲ್ಲಾ ಹೇಳಿಕೊಳ್ಳಲಿಕ್ಕೆ ಆಗುತ್ತೆಯೆ? ಹೀಗೇ ನೀವೂ ಒಂದು ಕಾಗದ ಬರೆದು ಕೊಟ್ಟ ಪುಣ್ಯಕಟ್ಟಿಕೊಳ್ಳೀ ಸಾರ್. ಈ ವಿಷಯ ಕುರಿತು ನವಜೀವನ ಪತ್ರಿಕೆಯವರಿಗೂ ಒಂದು ಪತ್ರ ನೀವೂ ಬರೆಯಿರಿ.'

ಆತ ತೋರಿಸಿದ ಸಂಜೀವಯ್ಯನ ಕಾಗದವನ್ನು ಓದಿ ನೋಡಿದ ಮೇಲೆ ರಾಮಣ್ಣನಿಗೂ ಹಾಗೆ ಬರೆದುಕೊಡೋಣವೆನಿಸಿತು. ಆದರಿಂದಾಗುವ ನಷ್ಟವೇನೂ ಇಲ್ಲವಷ್ಟೆ? ಆತನಂದಂತೆಯೇ ಎಲ್ಲಾ ನಡೆದರೆ ತನಗೂ ಹಣಬಂದರೆ ಯಾಕಾಗದು?

ಈ ಮೊದಲೇ ಸಿದ್ಧಪಡಿಸಿಟ್ಟಿದ್ದ ಪಟ್ಟಿ ಸಮಯಕ್ಕೆ ಒದಗಿದಂತಾಯಿತು. ಒಟ್ಟು ಅವನಿಗೆ ನವಜೀವನದಿಂದ ಒಂಬತ್ತು ಲೇಖನಗಳಿಗೆ ಪ್ರತಿಫಲ ಬರಬೇಕಾಗಿತ್ತು. ಅವುಗಳಲ್ಲಿ ಒಂದರ ಹಣವನ್ನು ಈ ಪತ್ರ ತರುವ ವಾಸುದೇವರ ಕೈಗೆ ಕೊಟ್ಟು, ಉಳಿದುದನ್ನು ತನಗೆ ಕಳುಹಿಸ ಬೇಕೆಂದು ಪತ್ರವೊಂದನ್ನು ಬರೆದ, ವಾಸುದೇವನ ಕೈಗೊಪ್ಪಿಸಿದ.

ಆತ ಅದನ್ನು ಓದಿನೋಡಿ ತೃಪ್ತನಾಗಿ "ಹೂಂ. ಒಂಬತ್ತು ಲೇಖನಗಳಿಗೆ ಕಡೇ ಪಕ್ಷ ತೊಂಬತ್ತು ಖಂಡಿತಾ ಬರಬೇಕಷ್ಟೆ. ಬಹಳ ಥ್ಯಾಂಕ್ಸು ಸಾರ್" ಎಂದ. ಎಲ್ಲಾ ವಿವರಕ್ಕೆ ಕಾಗದ ಬರೆಯುವೆನೆಂದ. ತನ್ನ ಅಡ್ರೆಸ್ ಕೂಡಾ ರಾಮಣ್ಣನಿಗೆ ಕೊಟ್ಟ. ರಾತ್ರಿ ರೈಲಿಗೆ ಬೆಂಗಳೂರಿಗೆ ಹೋಗುವುದಾಗಿ ಹೇಳಿ ಹೊರಟ.

ಮರುದಿನ ಬೆಳಿಗ್ಗೆ ಆತ ಮತ್ತೆ ಆಫೀಸಿಗೆ ಬಂದುದನ್ನು ನೋಡಿ ರಾಮಣ್ಣನಿಗೆ ಆಶ್ಚರ್ಯವಾಯಿತು.

"ಏನು ಮಾಡಲಿ ಸಾರ್? ಆ ಸಂಗೀತ ಡಾಯರೆಕ್ಟರು ವೆಂಕಟಸಾಮಿ ನಾಯ್ಡು ನನಗೆ ಹದಿನೈದು ರೂಪಾಯಿ ಕೊಡಲಿಕ್ಕಿತ್ತು. ಅವರೂ ನನ್ನ ಜತೆಗೇ ಬೆಂಗಳೂರಿಗೆ ಬರುವವರಿದ್ದರು. ಆದರೆ ನಾನು ಸ್ಟೇಶನ್ನಿಗೆ ಸ್ವಲ್ಪ ಎಷ್ಟು ಗಾಳಿಸಿದರೂ ಅವರ ಪತ್ತೆ ಸಿಕ್ಕದೆ ಅವಸ್ಥೆಪಟ್ಟೆ. ಮತ್ತೆ ಮನೆಗೆ ಹೋಗಿ ಕೇಳಿದರೆ, ಅವರು ಬೆಂಗಳೂರಿಗೆ ಹೊರಟು ಹೋದರಾಯಿತೆಂದೇ ತಿಳಿಯಿತು. ಏನು ಗ್ರಹಚಾರವೋ ಬಿಡಿ! ಈಗ ನನ್ನಲ್ಲಿ ಕೇವಲ ಏದೇ ರೂಪಾಯಿ ಇದೆ. ಇನ್ನೊಂದು ಏದನ್ನು ತಾವು ಹೇಗಾದರೂ ದಯಮಾಡಬೇಕು. ಹೋದ ಕೂಡಲೇ ಕಳಿಸಿ ಬಿಡುತ್ತೇನೆ.'

'ನಾನೆಲ್ಲಿಂದ ಕೊಡಲಿ? ನೀರೀ ಸಾರೀ'

"ಹಾಗನ್ನಬಾರದು. ನೆಮ್ಮಂಥವರೇ ಸಹಾಯ ಮಾಡಬೇಕು. ಕಡೆಗೆ ನಾನು ಕ್ಷೇಮವಾಗಿ ಬೆಂಗಳೂರಲ್ಲಿಳಿದು ಪತ್ರಿಕೆಯ ಆಫೀಸಿನ ವರೆಗೆ ಮುಟ್ಟಲಿಕ್ಕಾದರೂ ಚಿಲ್ಲರೆ ಬೇಕಲ್ಲ? ಅದ್ದರಿಂದ ಸ್ವಲ್ಪವಾದರೂ ..."

'ನೋಡುತ್ತೇನೆ, ತಡೀರಿ" –ಹೀಗೆಂದು ರಾಮಣ್ಣ ಆಫೀಸಿನ ಕ್ಯಾಶಿಯರ ಹತ್ತಿರ ಹೋಗಿ ಎರಡು ರೂಪಾಯಿ ಸಾಲ ಪಡೆದು ತಂದು ಆಪಫಗೆ ಕೊಟ್ಟ. ಆತ ಭಾರೀದೊಡ್ಡ ನಮಸ್ಕಾರವನ್ನು ಕೈತ ಜ್ಞತಾ ಮುಖಭಾವದಿಂದ ರಾಮಣ್ಣನ ಮೇಲೆ ಹಾಕಿದ. "ನವಜೀವನಕ್ಕೆ ನೀವೂ ಪತ್ರಬರೀರಿ ಸಾರ್" ಅಂದ.

"ನಿನ್ನೆಯೇ ಬರೆದಿದ್ದೇನೆ."

"ರೈಟ್ ಸಾರ್. ನಾನು ನಾಳೆ ನಾ ಳಿದ್ದೇ ಆಲ್ಲಿಗೆ ಹೊದೇನು."

ಹಾಗೆ ಹೋದ ಆತ ಮತ್ತೆ ಬರಲಿಲ್ಲ. ದಿನ, ವಾರ, ತಿಂಗಳು, ವರ್ಷಗಳೆಲ್ಲಾ ಕಳೆದು ಹೋದುವು ಸತ್ತೆ "ನವಜೀವನ" ಕ್ಕೆ ರಾಮಣ್ಣ ಲೇಖನ ಕಳುಹಿಸುವುದೂ ನಿಂತಿತು. ಪಾಪ! ಆ ಸಂಪಾದಕರಿಗೆ ಪತ್ರ ಬರೆದು ತನ್ನ ತಾ ಕೇಳಿ,ಪಡಿಸಿ ನಾಚಿ ಕೊಂಡಿದ್ದ ರಾಮಣ್ಣ!

ಮುಂದೆ ಒಂದಾನೊಂದು ದಿನ ರಾಮಣ್ಣ ಸಂಜೀವಯ್ಯನನ್ನು ಸಂಧಿಸಿದ. ಹಾಗೇ ಅವನೊಡನೆ ಆಮಾತೀಮಾತಾಡುತ್ತ ವಾಸುದೇವನ ಹೆಸರೆತ್ತಿದ. ಆ ವ್ಯಕ್ತಿ ರಾಮಣ್ಣನ ದಾತಾಗುಣವನ್ನು ಅವನ ಹತ್ತರ ಹೊಗಳಿ ರಾಮಣ್ಣ ಬರೆದುಕೊಟ್ಟ ಪತ್ರವನ್ನೂ ತೋರಿಸಿ ಅವನಿಂದಲೂ ಒಂದು ಕಾಗದ ಬರೆಸಿಕೊಂಡಿತಂತೆ! ಆ ನಂತರ ಮೂರು ರೂಪಾಯಿ ಸಾಲ ಕೂಡಾ ಪಡೆಯಿತಂತೆ! ಆರ್ಥಾತ್ ಸಂಜೀವಯ್ಯನ ಲೇಖನ ವಾರವಾರ ಪತ್ರಿಕೆಯಲ್ಲಿ ಬರುತ್ತಿದ್ದರೂ ಯಾವ ಬಗೆಯ ರೆಮ್ಯುನರೇಷನ್ ಕೂಡಾ ಅವನು ಪದೆದವನಲ್ಲವೆಂಬುದೇ ರಾಮಣ್ಣನಿಗೊಂದು ಸವಾಧಾನವಾಯಿತು. ಸಂಜೀವಯ್ಯನ ಪತ್ರವೆಂದು ಆತ ರಾಮಣ್ಣನಿಗೆ ತೋರಿಸಿದ್ದು ಸುಳ್ಳು ಪತ್ರ! ಆಪಾ! ಎಷ್ಟು ಬುದ್ಧಿವಂತನಾದ ಸಾಹಿತಿಯಪ್ಪ ಅವನು!

—"ನವಗಿರಿನಂದ"

ವಿನೋದ ವಿಹಾರ

ಓದುವಿರಾದರೆ

ನಕ್ಕುನಲಿಯಿರಿ ಬಹುದು

ಸ್ವಧರ್ಮ ನಿರ್ಣಯ

ಓರ್ವ ಮೂರ್ಖ ಎತ್ತಿನ ಹೊರಳಿಕೆ ಚಕ್ರದಂತಿರುವ ನುಂದೇವಾದ ಕೊಂಬುಗಳನ್ನು ನೋಡಿ ತನ್ನಲ್ಲೇ ಹೀಗೆ ಆಲೋಚಿಸಿದ:'ನಾನು ಈ ಕೊಂಬುಗಳ ನಡುವೆ ನನ್ನ ಕಾಲನ್ನು ಹಾಕಿದಲ್ಲಿ ಎಷ್ಟು ಆಹ್ಲಾದಕರವಾಗಿರಬಹುದು!'

ಕೊನೆಗೊಂದು ದಿನ ಆತನು ನಿಶ್ಚಯಿಸಿಯೇ ಬಿಟ್ಟ.ತನ್ನ ಕಾಲುಗಳನ್ನು ಇದರ ಕೊಂಬುಗಳ ನಡುವೆ ಹಾಕಿದ. ಇದರಿಂದಾಗಿ ಎತ್ತಿಗೆ ಒಂದು ತರದ ಸ್ಫೂರ್ತಿ ಬಂದು ಒಂದೇ ನವನೆ ಓಡತೊಡಗಿತು. ಆ ಮೂರ್ಖನ ಅವಸ್ಥೆ ನೋಡುವಂತಾದ್ದಾಗಿತ್ತು! ಕೊನೆಗೆ ಬಹಳ ಕಷ್ಟದಿಂದ ಆ ಎತ್ತನ್ನು ನಿಲ್ಲಿಸಲಾಯಿತು.ಜನರು ಮೂರ್ಖನನ್ನೂ ನೆತ "ನೀನು ಇಂತಹ ಮೂರ್ಖತನವನ್ನಾಡುವ ಮೊದಲು ಸ್ವಲ್ಪ ಜೆನ್ನಾಗಿ ಯೋಚಿಸಬೇಕಾಗಿತ್ತು"ಎಂದನು.

"ನಾನು ಆರು ತಿಂಗಳುಗಳ ಕನಕ ಚಿನ್ನಾಗಿ ಯೋಚಿಸಿಯೇ ಈ ಕಾರ್ಯವನ್ನು ಕೈಕೊಂಡೆ"ಎಂದು ಮೂರ್ಖ ಉತ್ತರಿಸಿದ.

ಸ್ವಾರಂಭವಾಗಲಿಲ್ಲ

ಮಗಳನ್ನು ತಾಯಿ ಕರೆಯುತ್ತಿದ್ದಳು. ಆ ಮಗಳು ತಾಯಿಯ ಕರೆಯ ಕಡೆಗೆ ನಿರ್ಲಕ್ಷ್ಯಳಾಗಿಯೇ ಇದ್ದುದನ್ನು ಕಂಡು ಜೊತೆಗಾತಿ ಹೇಳಿದಳು:

ತಾಯಿ ಕರೆಯುತ್ತಿದ್ದಾರಲ್ಲಾ, ಕೇಳಿಸಲಿಲ್ಲವೇ? ಏಕೆ ಓಗೊಡುವುದಿಲ್ಲಾ"

"ಕೇಳಿಸಿದೆ.ಆದರೆ ಇನ್ನೂ ಬೈಯಲು ಪ್ರಾರಂಭಿಸಿಲ್ಲವಲ್ಲಾ!"—ಆ ಮಗಳು ಮತ್ತೂ ಆಡುತ್ತಲೇ ಉತ್ತರಿಸಿದಳು.

ಪರಸ್ಪರ ಸಹಾಯ

ಒಬ್ಬನು ದಿನಾಲೂ ಟೆಲಿಫೋನ್ ಓಪರೇಟರ್‌ರೊಡನೆ ಬೆಳಿಗ್ಗೆ ಗಂಟೆ ಎಷ್ಟಾಯಿತೆಂದು ಕೇಳುತಿದ್ದ.ಕೆಲವು ತಿಂಗಳ-ಗಳು ಹೀಗೆಯೇ ಕಳೆದುವು.ಓಪರೇಟರ್‌ರಿಗೆ ಕೂಡಾ ಆಸಕ್ತಿ ಹೆಚ್ಚಿತು. ಒಂದು ದಿನ ಅವನು ಗಂಟೆಗಾಗಿ ಪ್ರಶ್ನಿಸುತಿದ್ದ ವ್ಯಕ್ತಿಯನ್ನು ಕೇಳಿಯೇ ಬಿಟ್ಟ.

"ನೀವು ಏಕೆ ದಿನಾಲೂ ಗಂಟೆ ಕೇಳುತ್ತಿದ್ದೀರಿ?'

"ನನಗೆ ಸರಿಯಾಗಿ ಹನ್ನೆರಡು ಗಂಟೆಗೆ 'ಸೈರನ್' ಹೊಡೆಯ ಬೇಕಾಗಿದೆ.'

"ಶಹಭಾಷ್! ನಾನು ಕೂಡಾ ದಿನಾಲೂ ನಿಮ್ಮ 'ಸೈರನ್' ಕೇಳಿಕೊಡನೆಯೇ ಆಫೀಸಿನ ಗಡಿಯಾರವನ್ನು ಸರಿಯಾಗಿ ಇಡುವ ನರಿವಪಡಿಸಿಕೊಂಡಿದ್ದೆ.

ಬೇಕಾಗಿದ್ದ ಭಾವ ಚಿತ್ರ

ಒಬ್ಬ ರೈತನು 'ವರ ಬೇಕಾಗಿದೆ' ಎಂದು ಪತ್ರಿಕೆಯಲ್ಲಿ ಜಾಹಿರಾತನ್ನಿತ್ತ. ವಧು ಬೇಕಾಗಿದ್ದ ಮಹಾಲಯದಲ್ಲಿ ಒಬ್ಬರು ಉಮೇದ್ವಾನಿ ಪತ್ರವನ್ನು ರೈತನಿಗೆ ಬರೆದು, ವರದಕ್ಷಿಣೆಯ ವಿಚಾರವನ್ನು ಕೆಳಿಗೆ ನಮೂದಿಸಲು ಮರೆಯದಿರಲಿಲ್ಲ. ರೈತ ಉತ್ತರದಲ್ಲಿ ಮಗಳ ಭಾವ ಚಿತ್ರವನ್ನು ಇರಿಸಿ, 'ವರದಕ್ಷಿಣೆ ಎಂದು ಒಂದು 'ಟ್ರಾಕ್ಟರ್'ನ್ನು ಕೊಡುವುದಾಗಿ ನಿಶ್ಚಯಿಸಿದ್ದೇನೆ' ಎಂದು ಬರೆದ.

ಭಾವೀ ವರ ಉತ್ತರ ಬರೆದ: 'ಮುಂದಿನ ಕೆಲಸಕ್ಕೆ ಅಡಿ ಇರಿಸ ಬೇಕಾದರೆ 'ಟ್ರಾಕ್ಟರ್'ನ ಭಾವ ಚಿತ್ರವನ್ನು ಕೂಡಲೇ ಕಳುಹಿಸಿ ಕೊಡಿ."

ನೆನಪಿಲ್ಲ

ಆತ ಪತ್ರವನ್ನು ಹೀಗೆ ಬರೆದ:

ಪ್ರೀತಿಯ ಕ್ಲಾರಾ!

ನನಗೆ ಮರವೆ ಬಹಳ ಎಂದು ನಿನಗೆ ಗೊತ್ತಿದೆ.ನಿನ್ನೆ ರಾತ್ರಿ ನಾನು ಹೇಳಿದ ಆ ವಿಷಯಕ್ಕೆ ನೀನು 'ಆದೀತು' ಎಂದೋ, 'ಆಗುವುದಿಲ್ಲ' ಎಂದೋ ಹೇಳಿದ್ದಿ. ಆದರೆ ಹೀಗೇ ಹೇಳಿದ್ದಿಯೆಂದು ನನಗೆ ಈಗ ಹೇಳಲು ಸಾಧ್ಯವಿಲ್ಲವಾಗಿದೆ. ದಯವಿಟ್ಟು, ಏನು ಹೇಳಿರುವಿ ಎಂದು ಬರೆ."

ಆಕೆ ಹೀಗೆ ಬರೆದಳು:

"ಪ್ರಿಯ ನಿಲ್!

ನಿನ್ನ ಪತ್ರವನ್ನೋದಿ ಸಂತೋಷವಾಯಿತು.ನಿನ್ನೆ ರಾತ್ರಿ ನಾನು ಯಾರಿಗೋ 'ಆಗುವುದಿಲ್ಲ'ಎಂದು ಹೇಳಿದ್ದೆ.ಆದರೆ ಯಾರಿಗೆ ಹಾಗೆ ಹೇಳಿದೆನೆಂಬ ಈಗ ನೆನಪಿಲ್ಲ.

ಅಭ್ಯಾಸ ಮಾಡುತ್ತಲೇ ಇದ್ದೆ

ಗುಂಡೂ! ನೀನು ಪರೀಕ್ಷೆಯಲ್ಲಿ ಪಡೆದು ಕೊಂಡಿರುವ ಮಾರ್ಕುಗಳನ್ನು ನೋಡಿದರೆ ನನಗೆ ನಿರಾಶೆಯಾಗುತ್ತದೆ. ನೀನು ಹೆಚ್ಚು ಮಾರ್ಕುಗಳನ್ನು ಗಳಿಸಿದರೆ ತಂದೆಯವರು ನಿನಗೆ ಒಂದು ಸೈಕಲನ್ನು ಕೊಡಿಸುತ್ತಾರೆಂದು ನೀನೇ ನನಗೆ ಹೇಳಿದ್ದೆಯಲ್ಲಾ. ಹಾಗಾದರೆ ಪರೀಕ್ಷೆಯ ಸಮಯದಲ್ಲಿ ಎನ್ನುನೂಡುತಿದ್ದ ವ್ಯವನದಿಂದ ಉಪಾಧ್ಯಾಯರು ಪ್ರಶ್ನಿಸಿದರು.

"ಸೈಕಲ್ ಬಿಡುವುದನ್ನೇ ಅಭ್ಯಾಸ ಮಾಡುತಿದ್ದೆ. ಗುಂಡೂ ಉತ್ತರಿಸಿದ.

–ಎ ಎನ್. ನಾರಾಯಣ ಬಲ್ಲಾಳ.

JUST PUBLISHED!
A NEW BOOK WITHIN THE REACH OF EVERYBODY
"LETTER WRITING MADE EASY"
(75 EVERY DAY LETTERS)
Written by An Experienced Teacher.
Useful to one and all, the teacher, the student and the layman.
Price: Rs. 1 = 25. (Postage extra)
If Rs. 1=50 is sent by M. O. one copy will be sent by Bookpost.
Copies can be had from the Publishers:
Navayuga Enterprise Ltd.
Navayuga Press,
Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

NAVAYUGA
REGD. NO. M. 3619

UDIPI, THURSDAY
11-12-1958

LICENSE NO. 31
Licensed to Post without Prepayment

ಗ್ರಾಮೀಣ ವಾಣಿ

(ಕಿಂಸೇ ಪಟ್ಟಿದಿಂದ)

ಪ್ರವೇಶವಿಲ್ಲದೇನೇ ತಮ್ಮದೇ ಮೂಗದಲ್ಲಿ ರೂಪಿಸಿ ಕೊಳ್ಳಲು ಸ್ವತಂತ್ರರಿರುವರು ರಾಜಸ್ತಾನದಲ್ಲಿ ತಮ್ಮ ಅಧಿಕಾರಕ್ಷೇತ್ರದಲ್ಲಿನ ಎಲ್ಲ ನ್ಯಾಯ ವ್ಯವಹಾರಗಳ ಮಟ್ಟಿಗೆ ಸರಕಾರದ ಪರವಾಗಿ ಅಧಿಕಾರ ಹೊಂದಿದವರೂ ಇವರೇ ಆಗಿದ್ದಾರೆ. ಆವರ ಪಾಲಿಗೆ ಇರುವ ಭೂಮಿಯಲ್ಲಿ ನೆಚ್ಚಿನ ಭಾಗವನ್ನು ಅವರು ಸ್ವಾಮಿಗಳಲ್ಲ. ಏಕೆಂದರೆ, ಆ ದನ್ನು ಆವರು ಬೆಲೆಗೆಕೊಳ್ಳುವುದಿಲ್ಲ, ಮೂಕಮುಕ್ತ ನೂರುಶಟ್ಟೆಯಲ್ಲಿ ಸಂಪಾದಿಸಿಲ್ಲ. ಆದುದರಿಂದ,ಅವರ ಹಿಡುವಳಿಯು ನ್ಯಾಯದಿಂದಗಳಿಸಿದುದೆಂದು.. ವಾದಿಸಬಾರದು.

ಆದರೆ, ದಕ್ಷಿಣದ ರಾಜ್ಯಗಳ ರೈತವಾರಿ ಪ್ರದೇಶಗಳಲ್ಲಿ ಭೂಮಾಲಿಕರು ವಾರು ಕಟ್ಟಿಯಲ್ಲಿಯೇ ಮಿತಿಯಿಂದ ಒತ್ತಡವಿರುವಾಗಲೇ ಬೆಲೆಕೊಟ್ಟು ಕೊಂಡುಕೊಂಡ ಭೂಮಿಗಳನ್ನಷ್ಟೆ ಹೊಂದಿದ್ದಾರೆ. ಇದುವರೆಗೂ ಅವರು ಭೂಕಂಪಾಯವನ್ನಿತ್ತಿರುವರು. ಆದರೆ, ಇವರ ಭೂಮಿಯು ಮಾತ್ರ—ಒಕ್ಕಲುಗಳಿಗೆ ಗೇಣಿ ರೂಪದಲ್ಲಿ ಕೊಡಲ್ಪಟ್ಟಿದ್ದು, ಅವರಿಂದ ನಗದಿಯಾಗಿಯೋ ಇನ್ನಿತರ ರೂಪದಲ್ಲಿಯೋ ಗೇಣಿಯನ್ನು ಪಡೆಯುತಿದ್ದಾರೆ.

ಆದರೆ, ಈಗ ಸೂಚಿತವಾಗಿರುವ ಭೂಸುಧಾರಣೆಯು ಯಾವ ಬೆಲೆಯನ್ನೂ ತೆರದೆ ಭೂಸ್ವಾಮಿಗಳಿಂದ ಜಮೀನುದಾರರು ಮತ್ತು ತಮ್ಮ ಸಂಪಾದನೆಯನ್ನು ತೆತ್ತುಕೊಂಡ ಭೂಮಿಗೊಡೆಯರಾದ ರೈತವಾರಿ ಭೂಸಾಮಿಗಳಲ್ಬರನ್ನೂ ಒಂದೇ ತಕ್ಕಡಿಯಲ್ಲಿ ತೂಗಲಾಗುತ್ತದೆ ಭೂರಹಿತ ಕೆಲಸಗಾರರ ಮತ್ತು ಅಲ್ಪ ಭೂಸ್ವಾಮಿಗಳ ಉಪಕಾರಕ್ಕಾಗಿ ಎಂಬ ಪಲ್ಲವಿಯನ್ನು ಹಾಡಲಾಗುತ್ತದೆ.

ಕೇರಳ ಭೂಮಸೂದೆಯು ಭೂಸ್ವಾಮಿಗಳಿಂದಆವರ ಮೂಲ ಹಿಡುವಳಿಯಾದ ೧೫ ಎಕ್ರೆಗಳ ತರಿ ಭೂಮಿ ಇಲ್ಲವೇ ಅದಕ್ಕೆ ಸಮಾನವೆನಿಸಿದಷ್ಟು ಭೂಮಿಗಿಂತ ಹೆಚ್ಚಿಗಿರುವುದನ್ನು ಭೂಸ್ವಾಮಿಗಳಿಂದ ಪಡೆಯುವಂತೆ ನಿರ್ದೇಶಿಸುತ್ತದೆ. ಆಂಧ್ರ ಮತ್ತು ಮೈಸೂರುಗಳ ವಿಧೇಯಕಗಳು ಸರಾಸರಿ ರೂ. ೫೪೪೦೦ನ್ನು ವಾರ್ಷಿಕ ಆದಾಯವೀಯುವುದಕ್ಕಿಂತ ಹಚ್ಚಿನದನ್ನು ಸರಕಾರಗಳು ವಶಪಡಿಸುವಂತೆ ವಿಧಿಸುತ್ತವೆ. ಯೋಜನಾ ಆಯೋಗವು ಸೂಚಿಸಿದ ಮಿತಿಗಿಂತ ಇದು ನಾಲ್ಕಾವರೆ ಪಟ್ಟು ಹೆಚ್ಚಿದೆ. ಆಯೋಗವು ರೂ. ೩೬೦೦ನ್ನು ನಿವ್ವಳ ಆದಾಯವಾಗಿ ಈಯಬಲ್ಲ ಮೂರು ಕ್ವಿಂಟಾಲಿಂಬಿಕ ಹಿಡುವಳಿಯು ಪರಮಾವಧಿ ಮಿತಿಯೆಂದೂ ಇದಕ್ಕಿಂತ ಹೆಚ್ಚಿನ ದನ್ನು ಪುನರಪಿ ಹಂಚುವುದಕ್ಕಾಗಿ ಸರಕಾರವು ಕೊಳ್ಳಬೇಕೆಂದೂ ಹೇಳಿದೆ. ಜಿಲ್ಲಾ ಸಮಿತಿಯು ಆಂಧ್ರ ಸಮಿತಿಯನ್ನು ಹಿಂಬಾಲಿಸಿ ಅವನ್ನು ನಾಲ್ಕಾವರೆ ಪಟ್ಟು ಏರಿಸಿ ರೂ ೫೪೪೦೦ ವಾರ್ಷಿಕಾದಾಯವೀಯುವುದನ್ನು ಅನುಮತಿ ಹಿಡುವಳಿಯನ್ನಾಗಿ ಮಾಡಿತು.

ಇದರಂತೆ, ಮೈಸೂರು ಹಾಗೂ ಆಂಧ್ರಗಳಲ್ಲಿ ಭೂಮಿಯ ಗುಣ ನೈಲಕ್ಷಣ್ಯಗಳನ್ನು ಹೊಂದಿಕೊಂದಿಕೊಂಡು, ಇಂದಿಂದ ೫೦ ಎಕ್ರೆಗಳಷ್ಟು ಭೂಮಿಯನ್ನು ಇಟ್ಟುಕೊಳ್ಳುವುದು ಸಾಧ್ಯವಾಗಿದೆ.

(ಆಧಾರ— ‘‘ರೂರಲ್ ಪ್ರೋಸ್’’)

ನುಡುವೆಗಳು ಜರಗತಕ್ಕ
ಸಮಯವು ಸಮೀಪಿಸಿದೆ,
‘ಮದುವೆ ಸೀರೆ’
ಇದೀಗ ಪ್ರಕಟವಾಗಿದೆ.
ಜೀವನದ ಬೇರೆ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಸುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪರಿಚಯ

ಭಾರತ ಭ್ರಮಣಕ್ಕೆ ಈವರ ಗೆರ್ಹಾರ್ಡ್‌ಸನ

ಬಡಕೂಲಿಗಾರರಾಗಿದ್ದ ಇವರು ಸ್ವಪರಿಶ್ರಮದಿಂದಲೇ ಇಂದು ನಾರ್ವೆಯ ಪ್ರಧಾನಿಗಳಾಗಿರುವರು

ನಾರ್ವೆಯ ಪ್ರಧಾನಿ ಶ್ರೀ ಈವರ್ ಗೆರ್ಹಾರ್ಡ್‌ಸನರು ಭಾರತ ಭ್ರಮಣಕ್ಕಾಗಿ ಬಂದರು. ನಾರ್ವೆ ಮತ್ತು ಭಾರತಗಳ ಸಂಬಂಧ ಉತ್ತಮವಾಗಿಯೇ ಇದೆ. ಶ್ರೀ ಗೆರ್ಹಾರ್ಡ್‌ಸನರ ಈ ಸಂಚಾರದಿಂದ ಮೈತ್ರಿಯು ಇನ್ನಷ್ಟು ಸುದೃಢವಾಗುವುದು. ‘‘ನಾರ್ವೆ ನಿವಾಸಿಗಳು ಭಾರತವನ್ನು ಏತಿಯಾದಲ್ಲಿ ಪ್ರಜಾಪ್ರಭುತ್ವದ ಮಾರ್ಗಪ್ರವರ್ತಕ’’ವೆಂದು ತಿಳಿಯುತ್ತಾರೆ ಎಂದಿದ್ದಾರೆ, ಆವರು. ಕಳದ ವರ್ಷ ಜೂನಿನಲ್ಲಿ ಭಾರತೀಯ ಪ್ರಧಾನಿಗಳು ನಾರ್ವೆಗೆ ತೆರಳಿದಾಗ, ಜಲ್ಲಿ ಇವರಿಗೆ ಭವ್ಯ ಸ್ವಾಗತವು ದೊರೆತಿತ್ತು. ನಾರ್ವೆಯು ಭಾರತವನ್ನು ಗೌರವ ದೃಷ್ಟಿಯಿಂದ ನೋಡುತ್ತದೆನ್ನಲು ಇದೂ ಒಂದು ದೃಷ್ಟಾಂತವೆನ್ನಬಹುದು.

೧೯೪೭ರಲ್ಲಿ ಗೆರ್ಹಾರ್ಡ್‌ಸನರು ಜನಿಸಿದರು. ಆವರ ತಾರುಣ್ಯವು ಓಸ್ಲೋ ನಗರದಲ್ಲಿಯೇ ಕಳೆಯಿತು. ಆವರು ತಮ್ಮ ಜೀವನವನ್ನು ಒರ್ವ ಮೂಗರಿಕೇರಿ ಮಾಡುವ ಕೂಲಿಗಾರ ತನದಿಂದ ಪ್ರಾರಂಭಿಸಿದರು. ಕೆಲ ಸಮಯದ ವರೆಗೆ ಆವರು ಸಂದೇಶವಾಹಕರಾಗಿಯೂ ಇದ್ದರು. ಮಜೂರ ಸಂಘಟನೆಯಲ್ಲಿ ಇವರು ತೊಡಗಿ ಕೆಲವೇ ವರ್ಷಗಳಲ್ಲಿ ಸಂಘದ ಶ್ರೇಷ್ಠ ವ್ಯಕ್ತಿಗಳ ಶ್ರೇಣಿಯಲ್ಲಿ ನಿಂತರು. ೨೫ನೆ ವರ್ಷದಲ್ಲಿಯೇ ಇವರು ಮುನಿಸಿಪಲ್ ಕೂಲಿಗಾರರ ರಾಷ್ಟ್ರೀಯ ಸಂಘದ ಕಾರ್ಯದರ್ಶಿಯಾದರು.

ಇವರು ಕೆಲವು ವಾರಗಳ ಮಟ್ಟಿಗೆ ಮಾತ್ರ ಪ್ರಾಥಮಿಕ ಶಾಲೆಗೆ ಹೋಗಿದರು. ಮುಂದೆ ಪ್ರಾಯಸ್ಥರಾದಾಗ ಓಸ್ಲೋ ನಗರದಲ್ಲಿ ಸಾಯಂಕಾಲದ ಪ್ರತಿಕ್ಷಣ ವಿದ್ಯಾಲಯದಲ್ಲಿ ಅಭ್ಯಾಸ ಮಾಡಿದರಲ್ಲದೇ ಎಳೆತನದಲ್ಲಿ ಬೇರೆ ಯಾವ ಶಾಲೆಗೂ ಹೋಗಿರಲಿಲ್ಲ. ೧೯೩೩ರಲ್ಲಿ ನಾರ್ವೆ ಕೂಲಿಗಾರ ಪಕ್ಷದ ಕಾರ್ಯದರ್ಶಿಗಳಾದರಿವರು. ಎರಡು ವರ್ಷಾನಂತರ ಓಸ್ಲೋದಲ್ಲಿನ ಮಜೂರ ಪಕ್ಷದ ಶಾಖಾ ಕಾರ್ಯದರ್ಶಿಯಾಗಿಯೂ, ೧೯೩೬ರಿಂದ ಮೂರು ವರ್ಷ ಕಾಲಪರ್ಯಂತರಾಜಕೀಯ ಕಚೇರಿಯಾಗಿಯೂ ದುಡಿದರು. ೧೯೩೯ರಲ್ಲಿ ಪಕ್ಷದ ಅಧ್ಯಕ್ಷರಾಗಿ ಳಿಸಿರಿಂದ ನಿರಂತರವಾಗಿ ಇದೇ ಸ್ಥಾನದಲ್ಲಿಯೂ ಇವರಿರುವರು. ೩೫ರಲ್ಲಿ ನಗರ ಸಭೆಯ ಸದಸ್ಯರಾಗಿಯೂ ೩೯ರಲ್ಲಿ ಉಪ ಮೇಯರರಾಗಿಯೂ ಸೇವೆ ಸಲ್ಲಿಸಿದರು.

೧೯೪೦ರಲ್ಲಿ ಜರ್ಮನಿಯು ನಾರ್ವೆಯ ಮೇಲೆ ಆಕ್ರಮಣ ಮಾಡಿತು. ಆಗ ಶ್ರೀ ಗೇರ್ಹಾರ್ಡ್‌ಸನರು ನಾರ್ವೆಯ ಶಾಹ ಮತ್ತವರ ಸರಕಾರದೊಡನಿದ್ದರು. ಅನಂತ್ಯದಲ್ಲಿ ಶಾಹ ಮತ್ತವರ ಬಳಗದವರು ಬ್ರಿಟನ್ನಿಗೆ ಓಡಿಹೋಗಬೇಕಾಯಿತು. ಆಗ ಶ್ರೀ ಗೇರ್ಹಾರ್ಡ್‌ಸನರು ಜರ್ಮನಿಯ ವಶದಲ್ಲಿದ್ದ ಓಸ್ಲೋವಿಗೆ ಬಂದರು. ಅವರು ಮೇಯರರಾಗಿ ಕಾರ್ಯ ಪ್ರಾರಂಭಿಸಿದರು. ಆದರೆ, ಇದರಿಂದ ಅಸಂತುಷ್ಟರಾದ ಜರ್ಮನರು ಅವರನ್ನು ಮೇಯರ ಪದದಿಂದವರನ್ನು ಚ್ಯುತಿಗೊಳಿಸಿದರು ಆಗ ಶ್ರೀ ಗೆರ್ಹಾರ್ಡ್‌ಸನರು ಪುನಃ ಮಜೂರ ರೂಪದಲ್ಲಿ ಕೆಲಸಮಾಡುತ್ತ ಜರ್ಮನ್ ರೆದುರು ಆಂದೋಲನವನ್ನೆಬ್ಬಿಸಿದರು.

೪೧ರಲ್ಲಿ ಇವರನ್ನು ‘ಅಪಾಯಕಾರಕ ವ್ಯಕ್ತಿ’ ಎಂದು ಘೋಷಿಸಿ ಜರ್ಮನ್ ಅಧಿಕಾರಿಗಳು ಸೆರೆಹಿಡಿದರು. ಇವರನ್ನು ಜರ್ಮನಿಯ ಶಾಲೇನಹಸನ್ ವೈತ್ಯ ಶಿಬಿರಕ್ಕೆವರನ್ನು ಒಯ್ಯಲಾಯಿತು ಅಲ್ಲಿ ಇವರಿಗೆ ಅನೇಕ ಪ್ರತಿಷ್ಠಿತ ನಾರ್ವೆಯ ಜನರ ಪರಿಚಯವಾಯಿತು. ಜರ್ಮನಿಯ ಪತನವಾದ ಮೇಲೆ, ೧೯೪೫ರ ಮೇ ೭ ರಂದು ಇವರು ಬಿಡುಗಡೆ ಹೊಂದಿದರು. ಆಗ ಆವರು ಪುನಃ ಓಸ್ಲೋವಿಗೆ ಬಂದು ಮೇಯರರ ರೂಪದಲ್ಲಿ ಇನ್ನೊಮ್ಮೆ ಕಾರ್ಯವಾರಂಭಿಸಿದರು. ಆ ವರ್ಷ ಜೂನಿನಲ್ಲಿ ನಾರ್ವೆಯ ಶಾಸಕಸಭ್ಯರು ಮಂತ್ರಿಮಂಡಲವನ್ನು ರಚಿಸುವಂತೆ ಆದೇಶವಿತ್ತರು. ೪೫ರ ಚುನಾವಣೆಯಲ್ಲಿ ನಾರ್ವೆಯ ಸಂಸತ್ತಿನಲ್ಲಿ ಮಜೂರ ಪಕ್ಷಕ್ಕೆ ವಿಪರೀತ ಬಹುಮತ ಸಿಕ್ಕಿತು. ಶ್ರೀ ಗೆರ್ಹಾರ್ಡ್‌ಸನರ ನೇತೃತ್ವದಲ್ಲಿ ಮಜೂರ ಪಕ್ಷದ ಮಂತ್ರಿಮಂಡಲ ಸ್ಥಾಪನೆಯಾಯಿತು. ಕೆಲವು ಕಾರಣಗಳಿಂದ ೫೭ರಲ್ಲಿ ತನ್ನ ಪ್ರಧಾನ ಮಂತ್ರಿಯ ಸ್ಥಾನಕ್ಕೆ ಇವರು ರಾಜೀನಾಮೆಯನ್ನಿತ್ತರು. ೧೯೫೫ರಲ್ಲಿ ನಡೆದ ಚುನಾವಣೆಯಲ್ಲಿಯೂ ಮಜೂರ ಪಕ್ಷವೇ ವಿಜಯಿಯಾಗಿ, ಆಗ ಶ್ರೀ ಗೆರ್ಹಾರ್ಡ್‌ಸನರೆ ಪ್ರಧಾನಿತ್ವದಲ್ಲಿಯೇ ಪುನಃ ಸರಕಾರವು ಸ್ಥಾಪನೆಗೊಂಡಿತು. ಮುಂದೆ, ಕಳೆದ ವರ್ಷ ನಡೆದ ಚುನಾವಣೆಯಲ್ಲಿಯೂ ಮತ್ತೊಮ್ಮೆ ಮಜೂರ ಪಕ್ಷವು ಗೆದ್ದು ಬಂದುದರಿಂದ, ಅವರ ನಾಯಕತನವು ಏಕ ಸಮನಾಗಿಯೇ ಮುಂದುವರಿಯುತ್ತಿದೆ.

ಶ್ರೀ ಗೆರ್ಹಾರ್ಡ್‌ಸನರಿಗೆ ೧೯೩೩ರಲ್ಲಿ ಶ್ರೀಮತಿ ಬೆರ್ನಾರ್ಡ್‌ರೊಡನೆ ವಿವಾಹವಾಗಿತ್ತು. ಶ್ರೀಮತಿಯವರೂ ಸಕ್ರಿಯ ಮಜೂರ ಕಾರ್ಯಕರ್ತೆಯಾಗಿದ್ದಾರೆ. ಇವರಿಗೆ ಏಕಮಾತ್ರ ಪುತ್ರನೂ ಇವರು ಪುತ್ರಿಯರೂ ಇರುವರು. ಪರ್ವತಾರೋಹಣವೆಂದರೆ ಇವರು ಜೀವ ಬಿಡುತ್ತಾರೆ.

ಭಾರತದಲ್ಲಿ ೧೯೫೭ರಿಂದ ಪಂಡಿತ ನೆಹರೂವರ ನಾಯಕತನವು ಮುಂದುವರಿಯುತ್ತಿರುವುದಾದರೆ, ನಾರ್ವೆಯಲ್ಲಿ ೧೯೫೫ರಿಂದಲೂ ಒಂದೇ ನಾಯಕತ್ವವು ತೋರಿ ಬರುತ್ತಿದೆ. ಈ ದೀರ್ಘಕಾಲೀನ ಅಧಿಕಾರತನದಿಂದಲೇ ಎರಡೂ ರಾಷ್ಟ್ರಗಳ ಮೈತ್ರಿಯು ದಿನೇ ದಿನೇ ಬೆಳೆದು ಬರುತ್ತಿದೆ ಎಂದು ತಿಳಿದುಕೊಂಡರೆ, ಅದರಲ್ಲಿ ಆಶ್ಚರ್ಯವಿಲ್ಲ. ತಮ್ಮ ದೇಶವನ್ನು ಸಂದರ್ಶಿಸಿ ತನ್ನು ಅಭಿಮಾನವನ್ನೆನ್ನಿಸಿದ ಭಾರತೀಯ ಪ್ರಧಾನಿಯನ್ನು ಅವರ ದೇಶದಲ್ಲಿಯೇ ಕಾಣುವ ತಹತಹದಿಂದ ಬಂದಿರುವ ಶ್ರೀ ಗೆರ್ಹಾರ್ಡ್‌ಸನರನ್ನು ಭಾರತೀಯರು ಅಭಿನಂದಿಸುತ್ತಾರೆ. ಎರಡೂ ರಾಷ್ಟ್ರಗಳ ಮೈತ್ರಿಯು ಚಿರಸ್ಥಾಯಿಯಾಗಲೆಂದು ಹಾರೈಸುತ್ತಾರೆ.

ಎಲ್ಲರಿಗೂ ಬೇಕಾಗಿದೆ.
ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬನ ಆರ್ಥಿಕ ಅನುಕೂಲತೆ ಮತ್ತು ಆವಶ್ಯಕತೆಗಳಿಗೆ ಒಪ್ಪುವ ಫಲದಾಯಕ ಯೋಜನೆಗಳು ನಮ್ಮಲ್ಲಿವೆ.
ಪಿಗ್ಮಿ ರೇವಣಾತಿ ಯೋಜನೆ. ಪ್ರತಿದಿನವೂ ಉಳಿಸಬೇಕೆಂಬ ಆಪೇಕ್ಷೆಯುಳ್ಳವರಿಗೆ ಅಗತ್ಯ. ನಾಲ್ಕಾಣೆಯಷ್ಟು ಅಲ್ಪ ಮೊತ್ತದಿಂದಲೂ ಆರಂಭಿಸಬಹುದು ಪಿಗ್ಮಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.
ಕ್ಯುಮ್ಯುಲೇಟಿವ್ ರೇವಣಾತಿಗಳು ರೂಪಾಯಿ ಐದು ಆಥವಾ ಅದರ ಗುಣಕಗಳಲ್ಲಿ ಸಂಗ್ರಹಿಸಿದಲು ಉತ್ತಮ ಸಾಧನ. ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಆಕರ್ಷಕವಾಗಿದೆ.
ಲಕ್ಷ್ಮಿ ಕೇಶ್ ಸರ್ಟಿಫಿಕೇಟ್. ನಿಮ್ಮಲ್ಲಿರುವ ಬಂಡವಾಳಕ್ಕೆ ಲಾಭದಾಯಕ ಪ್ರತಿಫಲ ದೊರೆಯುವುದು. ಸುಪ್ತ ಧನದ ಸದ್ವಿನಿಯೋಗಕ್ಕೆ ‘ಲಕ್ಷ್ಮಿ’ಯೆ ಆಪ್ತಾನ ಮನೋಹರವಾಗಿದೆ.
ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯ. ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಖಾತೆವರೆ. ಪಾತ್ರವಲ್ಲದೆ, ನಮ್ಮ ಶಾಖೆಯಿಂದ ಧರ್ಮಾರ್ಥವಾಗಿ ಪಣ ಪಾವತಿಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.
ಆದರ್ಶ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.
THE CANARA INDUSTRIAL & BANKING SYNDICATE LTD., UDIPI

ನಿಶಾಲ ಪ್ರಜಾವನದಲ್ಲಿರುವ ‘ನವಯುಗ’ ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

Edited Printed & Published by K. H. Shetty, at the Navayuga Press Udipi S. India

ನವಯುಗ

ವಾ ಚಂದಾರೂ 5 75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನಯೆ ಪೈಸೆ

ವರುಷ ೩೮ ವಾರ ೧೫. 18-12-1958 Vol 38 No. 15.

ರಾಜಕೀಯ

ಪಶ್ಚಿಮ ವಲಯ ಪರಿಷತ್ತಿನ ಸಮಾವೇಶ

ಭಾರತದ ಇದರಲ್ಲೊಂದರಷ್ಟು ವಿಸ್ತೀರ್ಣವನ್ನೂ ಜನಸಂಖ್ಯೆಯನ್ನೂ ಇದು ಪಡೆದಿದೆ

ಮೈಸೂರು ಮತ್ತು ಮುಂಬೈ ರಾಜ್ಯಗಳನ್ನೊಳಗೊಂಡ ಪಶ್ಚಿಮ ವಲಯ ಪರಿಷತ್ತಿನ ಎರಡನೆಯ ಸಮಾವೇಶವು ಮುಂಬೈನಲ್ಲಿ ಡಿಸೆಂಬರ್ ೨೮ರಂದು ನಡೆಯುವುದು ಕೇಂದ್ರ ಗೃಹಾಡಳಿತ ಶಾಖೆಯ ಮಂತ್ರಿಗಳಾದ ಶ್ರೀ ಗೋವಿಂದ ವಲ್ಲಭ ಪಂತರು ಅಧ್ಯಕ್ಷತೆ ವಹಿಸುವರು.

೧೯೫೬ರಿಂದ ರಾಜ್ಯಗಳ ಪುನರ್ವಿಂಗಡಣಾ ಕಾನೂನಿನ ಪ್ರಕಾರ ಪುನರ್ವ್ಯವಸ್ಥೆಗೊಂಡ ರಾಜ್ಯಗಳಿಗೆ ಸಂಬಂಧಿಸಿದ ಯೋಜನೆಯ ಅಂಗವಾಗಿ ವಲಯ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದವು. ಆಯಾ ವಲಯದಲ್ಲಿರುವ ರಾಜ್ಯಗಳು ತಮ್ಮ ವಲಯದ ಆರ್ಥಿಕ ಹಾಗೂ ಸಾಮಾಜಿಕ ವಿಕಾಸಕ್ಕಾಗಿ ಸಹಕರಿಸಿ ಶ್ರಮಿಸಲು ಸಾಧ್ಯವಾಗುವಂತೆ ಮಾಡುವ ಉದ್ದೇಶದಿಂದ ಈ ಪರಿಷತ್ತುಗಳನ್ನು ರಚಿಸಲಾಗಿದೆ. ಅಲ್ಲದೆ ಇಡೀ ರಾಷ್ಟ್ರದ ಏಕ್ಯ ಹಾಗೂ ಹಿತರಕ್ಷಣೆಯ ದೃಷ್ಟಿಯಿಂದ ಈ ಪರಿಷತ್ತುಗಳು ಕೆಲಸಮಾಡುವುವು.

ಪಶ್ಚಿಮ ವಲಯವು ೨೬೫ ಸಹಸ್ರ ಚದರ ಮೈಲಿಗಳ ವಿಸ್ತಾರವುಳ್ಳದ್ದಾಗಿದೆ. ಅಂದರೆ ಈ ವಲಯವು ಇಡೀ ದೇಶದ ಒಟ್ಟು ವಿಸ್ತೀರ್ಣದಲ್ಲಿ ನೂರಕ್ಕೆ ೨೦-೮ ರಷ್ಟು ವಿಸ್ತೀರ್ಣವನ್ನಿದೆ. ಈ ವಲಯದ ಜನಸಂಖ್ಯೆ ೩೭೭ ಲಕ್ಷಗಳು ಅಥವಾ ದೇಶದ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ ಸುಮಾರು ೧೧ ಪ್ರಮಾಣವಿದೆ.

ಈ ವಲಯದಲ್ಲಿರುವ ಎಂಡು ರಾಜ್ಯಗಳಲ್ಲಿಯೂ ಮುಖ್ಯವಾಗಿ ಬೇಸಾಯವೇ ಜೀವನಾಧಾರ. ನೂರಕ್ಕೆ ೬೧ರಷ್ಟು ಜನ ಬೇಸಾಯಾವಲಂಬಿಗಳು.

ವಿದ್ಯುಚ್ಛಕ್ತಿಯ ಉತ್ಪಾದನೆಯ ವಿಷಯದಲ್ಲಿ ಪಶ್ಚಿಮ ವಲಯವು ಐದು ವಲಯಗಳಲ್ಲಿ ಪ್ರಥಮ ಸ್ಥಾನ ಗಳಿಸಿದೆ. ದ್ವಿತೀಯ ಯೋಜನಾವಧಿಯ ಅಂತ್ಯದ ವೇಳೆಗೆ ಈ ವಲಯದಲ್ಲಿ ವಿದ್ಯುಚ್ಛಕ್ತಿ ಸ್ಥಾಪಿತ ಸಾಮರ್ಥ್ಯವು ೧೬,೦೬,೦೦೦ ಕಿಲೋವಾಟ್‌ಗಳಿಗೆ ಹೆಚ್ಚಲಿದೆ

ಈ ವಲಯವು ಕೈಗಾರಿಕಾಭಿವೃದ್ಧಿಯಲ್ಲಿ ಸ್ಪರ್ಧಿಗಳಿಗಿಂತ ಮುಂಚೆ ಇದೆ. ಮುಂಬೈ ರಾಜ್ಯದಲ್ಲಿ ವಸ್ತ್ರ, ಸಿಮೆಂಟ್, ಕುಂಭಕಲೆ, ತೈಲಗಳು, ಸಕ್ಕರೆ ಮತ್ತು ಸಾಧಾರಣ ಹಾಗೂ ವಿದ್ಯುತ್ ಎಂಜಿನಿಯರಿಂಗ್ ಉದ್ಯಮಗಳಿವೆ, ಮೈಸೂರು ರಾಜ್ಯದಲ್ಲಿ ವಸ್ತ್ರ, ಖನಿಜ ವಸ್ತುಗಳು, ಲೋಹ ಮತ್ತು ಎಂಜಿನಿಯರಿಂಗ್ ಉದ್ಯಮಗಳಿರುವುವು

ಮೈಸೂರು ರಾಜ್ಯದ ಪ್ರಮುಖ ಉದ್ಯಮಗಳಲ್ಲಿ ಅತಿ ಮುಖ್ಯವಾದುದೆಂದರೆ ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಶಾಹಬಾದ್ ಮತ್ತು ಭದ್ರಾವತಿಗಳಲ್ಲಿರುವ ಸಿಮೆಂಟ್ ಕಾರ್ಖಾನೆಗಳು ಶಿವನೊಗ್ಗದಲ್ಲಿರುವ ಬೆಂಕಿಕಡ್ಡಿ ಕಾರ್ಖಾನೆ, ಬೆಂಗಳೂರು ಮತ್ತು ಮೈಸೂರುಗಳಲ್ಲಿರುವ ಉಣ್ಣೆ ಮತ್ತು ರೇಷ್ಮೆ ಗಿರಣಿಗಳು, ಬೆಂಗಳೂರಿನಲ್ಲಿರುವ ಹಿಂದೂಸ್ತಾನ ವಿಮಾನ ಕಾರ್ಖಾನೆ, ಹಿಂದೂಸ್ತಾನ ಮೆಷಿನ್ ಟೂಲ್ಸ್ ಕಾರ್ಖಾನೆ, ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಭಾರತೀಯ ಟೆಲಿಫೋನ್ ಕಾರ್ಖಾನೆ

ಇಡೀ ದೇಶದಲ್ಲಿರುವ ಹತ್ತಿ ವಸ್ತ್ರದ ಗಿರಣಿಗಳ ಪೈಕಿ ಮೂರನೆ ಗಿರಣಿಗಳು ಮುಂಬೈ ರಾಜ್ಯದಲ್ಲಿಯೇ ಇರುವುವು. ಈ ಗಿರಣಿಗಳು ದೇಶದ ಒಟ್ಟು ವಸ್ತ್ರದ ಉತ್ಪಾದನೆಯಲ್ಲಿ ನೂರಕ್ಕೆ ಐವತ್ತೈದನ್ನು ಮತ್ತು ನೂಲಿನ ಉತ್ಪಾದನೆಯಲ್ಲಿ ನೂರಕ್ಕೆ ಹನ್ನೆರಡನ್ನು ಉತ್ಪಾದಿಸುತ್ತಿವೆ. ಮುಂಬೈ ರಾಜ್ಯದಲ್ಲಿರುವ ಎರಡು ತೈಲ ಶುದ್ಧೀಕರಣ ಕಾರ್ಖಾನೆಗಳು ದೇಶದ ಪೆಟ್ರೋಲಿಯಂ ವಸ್ತುಗಳ ಅಗತ್ಯತೆಗಳಲ್ಲಿ ಅರ್ಧದಷ್ಟನ್ನು ಅಂದರೆ ಸುಮಾರು ೫೫ ಲಕ್ಷ ಟನ್ನುಗಳನ್ನು ತೈಲವನ್ನು ಸಂಸ್ಕರಿಸುತ್ತಿವೆ. ದೇಶದಲ್ಲಿರುವ ವಿವಿಧ ಅಣು 'ರಿಯಾಕ್ಟರ್' ಮುಂಬೈ ರಾಜ್ಯದಲ್ಲಿ ಸ್ಥಾಪಿತವಾಗಿದೆ.

ಪ್ರಥಮ ಯೋಜನೆಯಲ್ಲಿ ಈ ವಲಯಕ್ಕಾಗಿ ತೊಡಗಿಸಿದ ಹಣ ಸುಮಾರು ೪೪ ಕೋಟಿ ರೂಗಳು. ದ್ವಿತೀಯ ಯೋಜನೆಯಲ್ಲಿ ಈ ವಲಯಕ್ಕಾಗಿ ಇಡಲಾದ ಹಣ ಸುಮಾರು ೧೭೫ ಕೋಟಿ ರೂಗಳು. ದ್ವಿತೀಯ ಯೋಜನೆಯ ವಧಿಯಲ್ಲಿ ಈ ವಲಯಕ್ಕಾಗಿ ಖರ್ಚಾಗಿರುವ ಕೋಟಿ ರೂಗಳನ್ನು ತೊಡಗಿಸಲಾಗಿದೆ. ಈ ಪೈಕಿ ಮುಂಬೈ ರಾಜ್ಯಕ್ಕಾಗಿ ತೊಡಗಿಸಿದ ಹಣ ಸುಮಾರು ಕೂಟಿ ರೂ.ಗಳು ಮತ್ತು ಮೈಸೂರು ರಾಜ್ಯಕ್ಕಾಗಿ ತೊಡಗಿಸಿದ ಹಣಗಳಿಗೆ ಸುಮಾರು ಕೋಟಿ ರೂ.ಗಳು. ಈ ಎರಡು ರಾಜ್ಯಗಳು ನೀಡುವ ಒಟ್ಟು ಹಣ ಸುಮಾರು ಕೋಟಿ ರೂ.ಗಳೆಂದು ಅಂದಾಜು ಮಾತಲಲಂಗಿದ.

ಬ್ರುಸೆಲ್ಸ್‌ನಲ್ಲಿ ನಡೆದ ಬ್ರಿಟಿಷ್ ಸರಕಾರೀಯ ಪೆವಿಲಿಯನ್‌ನಲ್ಲಿ ಜಯಶೀಲರಾದ ಡಾ|| ಚಾರ್ಲ್ಸ್ ಹಿಲ್ ಮತ್ತು ಜಾನ್ ಬಲ್‌ಫರ್‌ರನ್ನು ಎಮ್ಮೆಗೊಳ್ಳಿತ್ತಿರುವುದನ್ನು ಇಲ್ಲಿ ಕಾಣಬಹುದು.

Our Humble Tributes to All Those past and present, who laboured to make this Bank what it is to-day.

THE VIJAYA BANK, LTD.

(A SCHEDULED BANK)

Head Office:

"Vijaya Bank Building"

MANGALORE-3.

ESTD: 1931.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಉಳ್ಳಿಕೆ ಆಸ್ಪತ್ರೆಗೆ ಒದಗುವ ನಿಧಿ — ಸಿಂಡಿಕೇಟ್ ಬ್ಯಾಂಕ್

ಕಥಾ ನಿಹಾರ

ಕೇವಲ ಎಂಟೇ ನೂರು

ಎಂಟುನೂರರ ಮಾತಿಗೆ ಕಟ್ಟುಬಿದ್ದ; ಕಟ್ಟು ಕಳಚಿದಾಗ....?

ಶಂಕಣ್ಣ ನಗು ಮೊಗದಿಂದಲೇ ಧನಿಗಳ ಮನೆಯಂಗಳದಲ್ಲಿ ಕುಳಿತಿದ್ದ. ಧನಿಗಳೂ ಪ್ರಸನ್ನ ಮುಖಮುದ್ರೆಯಿಂದಿದ್ದರು.

"ಜೆಣ್ಣೆಲ್ಲಿದು ಸಂಕಣ್ಣ?"

"ಕೆಳಗೆದ್ದೆ ತೌಡನ ಮಗಳು."

"ಓಹೋ!"

"ನಮ್ಮ ರಾವ.ನಿಗೆ ಸಾಕು. ಹೆಣ್ಣಿನೊಡನೆ ಎಂಟು.ನೂರು ರೂಪಾಯಿಯೂ ಒರುತ್ತದೆ!"—ಶಂಕಣ್ಣನ ಪೊದೆ ಮೀಸೆಯ ಎಡೆಯಿಂದ ನಗು ಹೊರ ಹೊಮ್ಮುದುದನ್ನು ಧನಿಗಳು ಕಾಣದಿರಲಿಲ್ಲ.

ಶಂಕಣ್ಣ ಕೂಲಿ-ನಾಲಿ ಮಾಡಿಕೊಂಡು ಜೀವಿಸುವಾತ. ಆತನಿಗೆ ಎಂಟು ನೂರು ರೂಪಾಯಿಯೆನ್ನುವುದು ದೊಡ್ಡ ಗಂಟೇ ಆಗಿತ್ತು. ತನ್ನ ಮಗ ರಾಮನಿಗೆ ಮದುವೆಯಾಗಿ, ಮನೆ ಒಂದು ಹದಕ್ಕೆ ಬಂದು, ಸುಖವಾಗಿ ಬಾಳಿಕೊಂಡಿರುವುದನ್ನು ಆತ ಬಯಸಿದ್ದ.

ರಾಮನದು ತಾರುಣ್ಯದ ಸುಂದರ ರೂಪ— ದೇಹ ಬುಕ್ಕಿನಂತೆ ಬಲವಾಗಿತ್ತು. ತಂದೆ ನಿಶ್ಚಯಿಸಿದ ಸಂಬಂಧವನ್ನು ಆತ ಅಲ್ಲಗಳೆದಿರಲಿಲ್ಲ. ತೌಡನ ಮಗಳು, ಲಕ್ಷ್ಮಿಯನ್ನು ಆತ ಹಿಂದೆ ನೋಡಿದ್ದ. ಆಗ ಅವಳು ಊರಲ್ಲಿರುವ ಓರ್ವ ಸಾಮಾನ್ಯ ಸ್ತ್ರೀಯಾಗಿ ಕಾಣಿಸಿದ್ದಳು. ಈಗ ನೋಡಿದ. ಈಗ..? 'ನಾಳೆ' ಎಂದರೆ ತನ್ನ ಬಾಳಿನ ಜೊತೆಗಾತಿಯಾಗುವಾಕೆ! —ಹಲವಾರು ಬಂಧು ಜನರ ಮಧ್ಯೆ ತಾನು ಕೈಹಿಡಿಯುವಾಕೆ! ಆಹುದು, ರಾಮನಿಗೆ ಆಕೆ ಮಂಚಿನಂತೆ ಕಾಣಿಸಲಿಲ್ಲ— ಬೇರೆಯಾಗಿದ್ದೇ ಕಂಡಳು.

ಆ ಊರಿನ ಒಕ್ಕಲುಗಳ ಕೂಟದಲ್ಲಿ ಸಂಕಣ್ಣನ ವ್ಯಕ್ತಿತ್ವ ದೊಡ್ಡದಾಗಿತ್ತು— ಆ ಊರಿನ ಗುರಿಕಾರನಂತಿದ್ದ. ಕೆಳಗದ್ದೆ ತೌಡನ ಮಗಳನ್ನು ತನ್ನ ಮನೆಗೆ ತರುವುದಕ್ಕೆ ಆತನ ಅಭಿಮಾನ ತಡೆಹಾಕಿತ್ತು; ಆದರೆ ಜೊತೆಯಲ್ಲಿ ಬರುವ ಎಂಟು ನೂರು ನೋಟುಗಳು ಆ ಅಭಿಮಾನವನ್ನು ಹುಡಿಗೊಳಿಸಿದ್ದುವು.

ತಾನು ಅಭಿಮಾನ ಶೂನ್ಯನೆಂದು ಕೊಳ್ಳಲು ಸಂಕಣ್ಣ ತಯಾರಿದ್ದಿಲ್ಲ.

"ಈಗೇನೋ ನಾವೂ ಅವರೂ ದೂರಾಗಿದ್ದೇವೆ; ಆಚೆ, ಮುಂಚೆ ನಮ್ಮಜ್ಜನ ಕಾಲದಲ್ಲಿ ನಮ್ಮೊಳಗೆ ಕೂಡು-ನೆಂಟಸ್ತಿಕೆ ಇದ್ದಿತ್ತು" ಎಂದು ಧನಿಗಳೊಡನೆ ಹೇಳಿದ, ಸಂಕಣ್ಣ.

"ಆ ಮೇಲೇಕೆ ವಿಚ್ಛೇದವಾಯಿತು?" ಎಂದು ಪ್ರಶ್ನಿಸಲಿಲ್ಲ, ಧನಿಗಳು. ಅದೇಕೆಂದು ತಿಳಿದೇ ಇತ್ತು; ಮತ್ತೆ ಕೆದಕಿ ಕೇಳುವ ಮನಸ್ಸಿರಲಿಲ್ಲ. ಅವರಿಗೆ!

ತೌಡನ ತಂಗಿ ಬೊಂಬಾಯಿಗೆ ಹೋದಂದಿನಿಂದ ಸಂಕಣ್ಣ ಆ ಮನೆಯ ಸಂಬಂಧ ಕಡಿದು ಬಿಟ್ಟಿದ್ದ. 'ದೈವದೇವರಿಗೆ ಹೆಚ್ಚಾದ ಕೆಲಸ ಮಾಡಿಬಿಟ್ಟಳು" ಎಂದು ಇದೇ ಧನಿಗಳೊಡನೆ ಹೇಳಿ ಟೀಕಿಸಿದ್ದ, ಸಂಕಣ್ಣ. "ನೂನ ಬಿಟ್ಟವರು ಊರಿಗೆ ದೊಡ್ಡವರು" ಎಂದು ಬೀಯಾಳಿಸಿ ನಕ್ಕಿದ್ದ, ಇದೇ ಸಂಕಣ್ಣ! ಈಗ ಹಣದ ಮುಖ ನೋಡಿ ನೆಂಟಸಿಕೆಗೆ ಕೈಚಾಚಿದ್ದ.ಇದನ್ನೆಲ್ಲಾ ನೆನಸಿ ಧನಿಗಳಿಗೆ ಒಳಗೊಳಗೇ ನಗು!

'ಆಗಲಿ, ರಾಮನೇನೆನ್ನುತ್ತಾನೆ?" ವ್ಯರ್ಥವಾಗಿದ್ದರೂ ಪ್ರಶ್ನಿಸಿದರು, ಧನಿಗಳು.

"ಅವನೇನೆನ್ನುತ್ತಾನೆ? ಎಲ್ಲ ನಾನೆಂದಂತೆ; ಬಂಗಾರದಂಥಾ ಹುಡುಗಿ, ಲಕ್ಷ್ಮಿಯೊಡನೆ ಬರುತ್ತಾಳೆಂದರೆ ಬೇಡವೆನ್ನುತ್ತಾನೆಯೇ ಮಂಕ? —ಸಹಜವಾದ ತನ್ನ ದರ್ಪಕ್ಕೆ ಯುಕ್ತವಾಗಿಯೇ ನುಡಿದ ಸಂಕಣ್ಣ

ಈ ಮಾತು ಸಂಪೂರ್ಣ ಸತ್ಯವಾಗಿತ್ತು. ತಂದೆಗೆ ಇದಿರಾಡುವವ ರಾಮನಲ್ಲ. ಲಕ್ಷ್ಮಿಯೂ ಕುರೂಪಿಯಾಗಿರಲಿಲ್ಲ. ಹಣದ ಬಿಸ್ಸಿಲೆಯಿಲ್ಲದೆ ಆಕೆಯನ್ನು ರಾಮ ಬಯಸಿದ್ದರೆ ಬಲವತ್ತರವಾಗಿ ವಿರೋಧಿಸುತಿದ್ದ, ಸಂಕಣ್ಣ! ಈಗ ಜಾಗಲ್ಲ. ತೌಡನೇ ರೂಪಾಯಿಯನ್ನು ಮುಂದೆ ಮಾಡಿ, ಮಾತಾಡಿ ಒಪ್ಪಿಸಿದ್ದ, ಆತನನ್ನು.

ಎಂಟುನೂರು ರೂಪಾಯಿ!

ಹೌದು! ಏಳೆಂಟು ವರ್ಷಗಳ ಹಿಂದೆಯೇ ಹೆಂಡತಿಯನ್ನು ಕಳೆದುಕೊಂಡು, ಬಾಳಿನಲ್ಲಿ ಕತ್ತಲೆ ವ್ಯಾಪಿಸಿರಲು, ಈ ಗೊಂದು ಹೊಂಗಿರಣ ಹೊಳೆದಿತ್ತು! ಇನ್ನು ಒಲೆಯ ಮುಂದೆ ಕುಳಿತು, ಮುಖ —ಮೈಯೆಯಲ್ಲಾ ಬೂದಿ ಮಾಡಿಕೊಂಡು ಒಲೆ ಊದ ಬೇಕಾಗಿಲ್ಲ—ಲಕ್ಷ್ಮಿ ಬರುತ್ತಾಳೆ. ಅವಳ ಜೊತೆಗೆ ಲಕ್ಷ್ಮಿಯೂ ಬರುತ್ತಾಳೆ. ಅದರ ಭಂಡವಾಳದಿಂದ ಒಂದು ಚಿಕ್ಕ ಅಂಗಡಿ ತೆರೆದರೆ. . . .

ಸಂಕಣ್ಣನವನು ಹಲವು ವರ್ಷಗಳ ಕನಸು. ಮುನುಕನಾದುದುದಿಂದ ಅಂಗಡಿಯಲ್ಲೇ ಕುಳಿತು ಮುಡಿಯುವ ಹಂಚಿಕೆ ಆತನದು.!

"ಜೊಸಬೆಲು ದೇನಾಬ್ಬನದಲ್ಲಿ ಮದುವೆ" ಧನಿಗಳಿಗೆ ಮದುವೆಯು ಆಮಂತ್ರಣವಿತ್ತು, ಆತರು ಕೊಟ್ಟ ಎಲೆಯಡಿಕೆಯನ್ನು ಜಗಿಯುತ್ತಾ ಹೊರಟು ಹೋದ, ಸಂಕಣ್ಣ. ಧನಿಗಳು ಬರುವರೆಂದಲ್ಲ, ಆವರನ್ನು ಆಮಂತ್ರಿಸುವುದೊಂದು ಸಂಪ್ರದಾಯ ಆಗ ಧನಿಗಳು ನವದಂಪತಿಗಳಿಗಾಗಿ ಒಂದು ಮುಡಿ ಅಕ್ಕಿ ಉಡುಗೊರೆ ಕೊಡುವುದು, ಅವರಿಗೇ ಒಂದು ಗೌರವ. ಹೀಗಿತ್ತು ಆ ಊರ ಪದ್ಧತಿ.

ಆ ದಿನ ಮದುವೆಯ ಸಡಗರ ಸಂಭ್ರಮ ದಲ್ಲೇ ಸಾಗಿತ್ತು!

ಬಿರುಸು ಬಾಣಗಳಿಂದಾಗಿ ಬಾನು ತೂತಾಗಿಲ್ಲಿ. ಸಿಡಿಮದ್ದುಗಳ ಮೊಳಗಿನಿಂದ ದಿಬ್ಬಣಿಗರ ಕಲಕಲ ರವಕ್ಕೆ ಚ್ಯುತಿ ಒರಲಿಲ್ಲ. ಮದುವೆ ನಡೆದೇ ಹೋಯಿತು. ಸಿಲ್ಕಿನ ಹೊಸ ಅಂಗಿಯ ರಾವು, ಪಟ್ಟಿಯ ಸೀರೆಯನ್ನುಟ್ಟ ಲಕ್ಷ್ಮಿಯ ಕೊರಳಿಗೆ ಮಾಲೆಯಿಕ್ಕಿದ. ಇಂದೀಗ ಲಕ್ಷ್ಮಿ ರಾಮನವಳು!

ರಾವು ತನ್ನಲ್ಲಿಯೇ ವಿಚಾರಿಸಿಕೊಳ್ಳುತಿದ್ದ.

"ಈಕೆ ನನ್ನವಳು.....ಈಕೆ ನನ್ನವಳಾದಳಲ್ಲಾ ಎಂದ. ನಾನು ಹೆಮ್ಮೆಪಡುತ್ತಿರುವಂತೆ ಇನಳೂ ಹೆಮ್ಮೆಪಡಲಾರಳೇ .... ? ನನ್ನನ್ನು ಹೊಂದಿದುದು ತನ್ನ ಭಾಗ್ಯ ಎಂದು ಕೊಂಡಿರಬಹುದೆ?....."

ಆ ಎಂಟುನೂರು ರೂಪಾಯಿಯ ವಿಚಾರವು ಮುದುಕ ಸಂಕಣ್ಣನನ್ನು ತರುಣನನ್ನಾಗಿ ಮಾಡಿತ್ತು, ಮದುವೆಯ ಮನೆಯಲ್ಲಿ!

ತೌಡನಿಗೆ ಸಂಕಣ್ಣನ ಮನೆಯ ಸಂಬಂಧ ಸಿಕ್ಕಿದುದು ಬಹಳ ಹಿತವೆನಿಸಿತ್ತು. ಅವನ ತಂಗಿ ಹೇಳಿದ್ದಳು - "ಅಣ್ಣಾ, ನಾನೇನೋ ಆಡ್ಡ ಹಾದಿಗೆ ತಿರುಗಿದೆ; ಆದರೂ ಹಣಗಳಿಸಿದೆ ಯಾರಲ್ಲಿ ಹಣವಿದೆಯೋ ಅತನಿಗೆ ಗೌರವವಿದ್ದೇ ಇದೆ. ನನ್ನು, ಲಕ್ಷ್ಮಿ ಸಂಕಣ್ಣನ ಮನೆಗೆ ಸೇರಲೇಬೇಕು. ನಾವಿರಿ ಕೈಬಿಟ್ಟರೂ ಚಿಂತಿಲ್ಲ. ನಾನಿದ್ದೇನೆ."

ಅಣ್ಣನನ್ನು ಪ್ರೋತ್ಸಾಹಿಸಿ, 'ಮದುವೆಗೆ ಬರುತ್ತೇನೆ' ಎಂದು ಹೇಳಿ ಬೊಂಬಾಯಿಗೆ ಹೊರಟು ಹೋದವಳು, ಮದುವೆಯದಿನ ಇಷ್ಟು ಹೊತ್ತಿನ ವರೆಗೂ ಬಂದಿರಲಿಲ್ಲ. ದಂಪತಿಗಳಿಗೆ ಆರತಿ ಮುಗಿಯಿತು.

(೧೦ನೇ ಪುಟ ನೋಡಿರಿ)

ಕೆಲಿಫೋರ್ನಿಯಾದ ಅಮೆರಿಕನ್ ಪೈಪ್ ಮತ್ತು ಕನ್‌ಸ್ಟ್ರಕ್ಷನ್ ಆಫ್ ಸೌತ್ ಗೇಟ್‌ನಲ್ಲಿ ತಯಾರಿಸಲ್ಪಟ್ಟ ೮೦ ಟನ್ ಭಾರವುಳ್ಳ ಪೈಪ್ ಸೋಬಲ್ ಯಂತ್ರ. ಇದರಿಂದ ಕೆಲಿಫೋರ್ನಿಯಾದ ಜಲಪ್ರಣಾಲಿಯನ್ನು ವೇಗಯುಕ್ತವನ್ನಾಗಿ ಮಾಡಬಹುದು.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೆಗೆ 4%
5 ರಿಂದ 12 ,, 4½%
13 ,, 24 ,, 4½%
ರೂ. 10,000/- ಮತ್ತು ಮೇಲಣ ಹಣಕ್ಕೆ ½% ಹೆಚ್ಚು.
ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%
ಚಾಲ್ತಿ ರೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಜಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯು. ಆರ್. ಯು. ಪೂಂಜ,
ಮೇನೇಜರ್.

ಮೂಲ್ಕಿ ಬೇಂಕ್ ಲಿ. ಮೂಲ್ಕಿ.
ಸ್ಥಾಪನೆ: 1929

ರಾಮತೀರ್ಥ ಬ್ರಾಹ್ಮೀ -ತೈಲ

ಸೈಕ್ಷಲ್ ನಂ ೧] [ಮೆಡಿಕೇಟಿಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಶ.ದ್ದ ಹರಟೆ

ರಾಮದಾಸನಂತೆಯೇ ಹೆಂಡ್ತಿದಾಸ

ಆದು ಜೇಯನೆಂಬು ತಿಳಿಯಬೇಡಿ ನಿಜವಾಗಿಯೂ ಅದೊಂದು ಭೂಷಣ

"ಹೆಂಡ್ತೀದಾಸ" ಅಂತ ಯಾರನ್ನೋ ಹೆಸರಿಸಿ ನಾನು ಹೇಳುವುದಲ್ಲ! ಊರವರಿಂದ "ಹೆಂಡ್ತೀದಾಸ" ಅಂತ ನಾನು ಕರಣ ಮಾಡಿಸಿಕೊಂಡ ನನ್ನ ಸುದ್ದಿಯನ್ನೇ ನಾನಿಲ್ಲಿ ಹೇಳ್ಕುವುದು.ಅಲ್ಲಾ-ಹೇಳುವವರ್ಯಾರೂ ನನ್ನ ಮುಂದೆ ಹೇಳ್ತಿರ್ಲಿಲ್ಲ ಆದರೂ ನನಗೀವಿಚಾರ ತಿಳಿಯಿತು!—ಯಾರು ಏನು "ಹೇಳಿದ್ರೆ ನನಗೇನಂತೆ! ವಾಹ್ ಸ್ವಾತಂತ್ರ್ಯ ಸೂರಾ ಇರುವ ಈ ಕಾಲ—ನಾನೇನೂ ಅವರ ಬಾಯಿ ಕಟ್ಟಿ ಸುವಂತಿಲ್ಲ.

ಪರೋಪದೇಶಪಾಂಡಿತ್ಯದಿಂದ ಜನರನ್ನು ಮರುಳು ಮಾಡುವ ಬಣ್ಣದ ಮಾತುಗಳನ್ನು ಬಾಯಿ ಪಾಠವಾಗಿ ಕಲಿತು ಸ್ವಾರ್ಥ ಪ್ರೇಮದಿಂದ ಇಡೀ ದೇಶವನ್ನೇ ಉದ್ಧಾರ ಮಾಡಲು ಹೊರಟಿರುವ ರಾಜಕಾರಣಿಗಳನ್ನೂ ಜನ ಬಾಯಿಗೆ ಬಂದಂತೆ ಟೀಕಿಸುತ್ತಾರೆನ್ನುವಾಗ ನನ್ನಂತವನದೇನು ಮಹಾ? ಹೆಂಡ್ತೀಪಾದನಾಪ್ರೇಮಿ? ಲದರಲ್ಲೂ ಮಹಾ ಪುಣ್ಯವಿದ!—ಎಂದು ನನ್ನ ತೀರ್ಮಾನ ಯಾಕಂದ್ರೆ—ಹೆಂಡ್ತಿಯಾಗಿಯವಳು ಹೆಣ್ಣು ಜಾತಿ ಎಂಬುದು ನಿಮಗೂ ತಿಳಿದಿರಬಹುದು ಲೋಕವಂದ್ಯಳಾದ ಹೆಣ್ಣಿನ ಸೇವೆ ಮಾಡಬೇಕಾಗಿದ್ರೆ ಪೂರ್ವ ಪುಣ್ಯವೇ ಬೇಕು. "ನಾರಿ ಸ್ವರ್ಗಕ್ಕೆ ದಾರಿ" ಎಂದಿದ್ದಾನೆ ಸರ್ವಜ್ಞ, ಅನ್ನುವಾಗ ನಾನೇನೂ ಅಷ್ಟು ತಿಳಿಯದೆ ನನ್ನಾಕಯ ಸೇವೆ ಮಾಡ್ತೇನಂತ ತಿಳಿಕೊಳ್ಬೇಡಿ! ಅದೂ—ನನ್ನಂಥವನಿಗೆ ಆ ಪುಣ್ಯ ದೈವದತ್ತವಾಗಿಯೇ ಲಭ್ಯವಾಗಿದೆ, ಎನ್ನುವಾಗ ಒಪ್ಪಿ ಬಂದ ಸಂದರ್ಭವನ್ನು ಬಿಡುವುದು ಬುದ್ಧಿವಂತರ ಲಕ್ಷಣವಲ್ಲ'—ನಾನಾಗಿಯೇ ನನ್ನ ವಳ ಸೇನೆಗೆ ಮುಂದಾಗಿ ಹೋಗಿಲ್ಲ!—ಅವಳೇ ನನ್ನಿಂದ ಸೇವೆ ಮಾಡಿಸಿ ಕೊಳ್ತಾಳೆಂದ್ರಾ ನಾನಾದ್ರು ಈ ಪುಣ್ಯ ಕಾರ್ಯದಲ್ಲಿ ಹಿಂದ ಳಿಯಬೇಕೆ?

ಸರ್ವಜೀವಕೋಟಿಗಳಿಗೂ ಜನ್ಮದಾತೆಯಾದ ಹಣ್ಣಿನ ಸೇವೆ ಮಾಡಲು ಅದೆಷ್ಟು ಭಾಗ್ಯಬೇಕೋ ನಿಮಗೇನು ಗೊತ್ತಾ? ನನ್ನವಳಿಗಂತೂ ಏಕಪ್ರಕಾರ ಸತಿಯಾಗಿದ್ದ ನನ್ನ ಮೇಲೆ ಕುಂಬ ಪ್ರೀತಿ. ನನ್ನನ್ನೊಂದು ಬೇಗನೆ ಸ್ವರ್ಗಕ್ಕೆ ಕಳುಹಿಸಿ ಬಿಡಬೇಕೆಂದೇ ಅವಳ ಅಂತರ್ಯದ ಆಸೆಯೋ ಏನೋ!-ನನಗೂ ಅವಳೆಂದರೆ ಜೀವದ ಜೀವ ಅವಳ ಮಾತೇ ವೇದ ವಾಕ್ಯವೆಂದು ತಿಳಿದು ಹೋಳಿದ ಕೆಲಸವನ್ನು ಚಾ-ಚೂ ಎನ್ನದೆ ಶಿರಸಾ ವಹಿಸಿ ಭಾಡುತ್ತಿದ್ದೆ ನನ್ನ ಮೇಲೆ ಅವಳಿಗೆ ಸರ್ವಾಧಿಕಾರವಿತ್ತು. ಆದೂ ಸ್ವತಂತ್ರ ಸಿಕ್ಕಿದ ಮೇಲೆ ಹೆಂಡ್ತಿಯಾಗುವವಳು ಅರ್ಧಾಂಗಿಯಲ್ಲ—ಅವಳು ಇಡಿ ಅಂಗಿಯಾಗಿಯೇ ಇದ್ದಾಳೆ—ಈ ಅಧಿಕಾರವನ್ನು ಅವಳು ಕ್ರಯ ಕೊಟ್ಟೇ ಪಡೆದು ಒಂದಿದ್ದಳು. ಪೂರ್ವಾರ್ಜಿತವಾಗಲೀ—ಸ್ವಾರ್ಜಿತವಾಗಲೀ ನನ್ನವೆಂಬುದು ಏನೂ ಇಲ್ಲವ ನಾನು ಅವಳ ಆಶ್ರಯ ಪಡೆಯಲೇ ಬೇಕಾಗಿತ್ತು. ನನ್ನಾಕೆಯೊಡನೆ ನನಗೆ ಮದ ವೆಯಾಗುವ ಒಂದು ದೈವ ಘಟನೆಯನ್ನು ಬ್ರಹ್ಮ—ಮಾಡದೆ ಮರೆತು ಬಿಡುತ್ತಿದ್ದರೆ ಗಂಡಾಗಿ ಹುಟ್ಟಿದ ನನ್ನ ಗತಿ ಗೋಳಾಗುತಿತ್ತು. ನನ್ನ ಮಾವನಿಗೆ ಎಂಟನೆಯ ಮಗಳಾಗಿ ನನ್ನಾಕೆ ಎಲ್ಲಿ ಯಾದರೂ ಹುಟ್ಟದೆ ಹೋಗುತ್ತಿದ್ದರೆ—ಗಂಡಾಗಿ ಹುಟ್ಟಿ ನನಗೆ ಸಿಗಬೇಕಾದ ವರದಕ್ಷಿಣೆಯ ವಾರಿಸು ಹಕ್ಕು ಎಲ್ಲ ತಪ್ಪಿ ಹೋಗುತ್ತಿತ್ತೋ ಏನೋ? — ಅಂತೂ ಲೋಕದಲ್ಲಿ ಹೆಣ್ಣಿ ಸಂತಾನ ಹೆಚ್ಚಾಗಿ ಹುಟ್ಟುವುದರಿಂದಲೇ ನನ್ನಂಥ ಪುರುಷರ ಪುಣ್ಯ ಮಹತ್ಕರವಾದುದೆಂದು ಕೇಳಲೇಬೇಕು. "ಕೆರೆಯ ನೀರನ್ನು ಕರೆಗೆ ಚೆಲ್ಲಿ—" ಎನ್ನುವಾತಿನಲ್ಲಿ ಗೂಢಾರ್ಥವಿರುವಂತೆ—ಅವಳದ್ದನ್ನೇ ಅವಳಿಗೆತಿನ್ನಿಸಿ—ನನ್ನಾಕೆಯನ್ನು ಸುಧಾರಿಸುವ ಆಸಾಮಿ—ನಾನು ಎಂದಾದರೂ ನನ್ನೆ ಆ ವಶ್ಯಕತೆಗೆ ಒಂದಿರಿಡಾಣೆ ಬೇಕಾಗಿದ್ದರೂ ಮೂರು ದಿನಕ್ಕೆ ಮಂಚಿತವಾಗಿಯೇ ನಾನವಳಿಗೆ ನೋಟೀಸು ಕೊಡಬೇಕಾಗಿತ್ತು-ಹೀಗಿರುವಾಗ-ನಾನಾದರೂ ಹೇಗೆ ಅಷ್ಟು 'ಕಡಕ್' ಆಗಿ ಇರಬೇಕು ಹೇಳಿ?

ಸತಿಪತಿಯರು ಹಾಲು ನೀರಿನಂತೆ ಸಮರಸವಾಗಿ ಬೆರೆತಿರಬೇಕೂಂತ-ಬಲ್ಲವರಾ ನೀವೇ ಹೇಳ್ತೀರಿ'—"ರಸವೆ ಜನನ—ವಿರಸಮರಣ—ಸಮರಸವೆ ಜೀವನ —' ಎನ್ನುವ ಕವಿವಾಣಿಯನ್ನು ನೀವೂ ಕೇಳಿರಬಹುದು. ಹೀಗಿದ್ದು ಸಮರಸವಾಗಿಯೇ ನನ್ನಾಕೆಯ ಒಂದಿಗೆ ಇದ್ದಷ್ಟಕಾಲ ಜೀವನವಾಡಿಕೊಂಡಿರೋಣಾಂತ ನನ್ನಾಸೆ!

ಅರಿಡ ಏದಿಂಬು ಉನ್ನತೋಲ್ಲಂಘನವನ್ನು ಮಾಡಿದ ಒರ್ವ ಸೈಜೀರಿಯನಾದ ಒಲಾಡಿಪೊ ಒಳುವೋಬಿಯು (ಎಡ) ಟೆರಿ ಡೆವೇಸ್ ಎಂಬ ೧೦ ವರ್ಷದ ಬಾಲಕನಿಗೆ (ಬಲ) ತರಬೇತಿಯನ್ನುಟಿತ್ತಾನೆ.

ತಾಳಿದವ ಬಾಳಿಯಾನಂತೆ'—ಹೀಗೆ ನಾನು ತಾಳಿಕೊಂಡಿರುವುದರಿಂದಲೇ ನನ್ನಾಕೆಯ ಕೈಬಾಯಿಮುಂದೆ ಈ ವರೆಗೆ ಉಳಿದಿದ್ದೇನೆ ಅಪ್ಪತಿಂದರೆ ಸರಿ—ಅದರ ಲೆಕ್ಕಮಾಡುವ ಅನಗತ್ಯ ಅಧಿಕ ಪ್ರಸಂಗ ನನಗೇಕೆ?—ಯಾರುಏನೇ ಹೇಳಿದರೇನು ಹೇಗೆ ಕರೆದ್ರೇನು? ಹೇಳುವವರು ಹೇಳ್ತಾ ಇದ್ದಾರೆ! ಭಗವಾನ್ ಶ್ರೀ ಕೃಷ್ಣನನ್ನೇ -ಶ್ರೀಲೋಲ,, ದೆಣ್ಣಾ ಕಳ್ಳ ನಾರೀ ಜೋರ" ಎಂದು ಮುಂತಾದ ಅಡ್ಡ ಹೆಸರಿಟ್ಟು ಕರೆಯುತ್ತಿರಲಿಲ್ಲವೇ? —ಆದೂ ಭಂಡತನಸ್ವಾತಂತ್ರ್ಯವಾದ ಮೇಲೆ—ಸ್ತ್ರೀಸ್ವಾತಂತ್ರ್ಯಕ್ಕಾಗಿ ಚಳವಳಿಯೇ ನಡೆಯುತ್ತಿರುವಾಗ ನಾನಾದರೂ ನನ್ನಾಕೆಯ ಸ್ವತಂತ್ರ ವ್ಯವಹಾರಕ್ಕೆ ಅಡ್ಡಿಯಾಗಿ ಅನಾಗರಿಕನೆನ್ನಿಸಿಕೊಳ್ಳಬೇಕೆ ?

ಕೆಲವು ವೇಳೆ ನನ್ನಾಕೆ ನನ್ನೆದರು ಇಲ್ಲದಾಗ— ನನ್ನ ಹುಟ್ಟಿಯೊಳಗಿನ ಸಿಟ್ಟು ಉಕ್ಕಿ ಬರುವುದುಂಟು ! ಆದರೂ ಊರವರ ಮುಂದೆ ನನ್ನ ಮರ್ಯಾದೆ—ಗೌರವಗಳು ಮೂರು ಕಾಸಿಗೆ ಏಲಂ ಆಗಿ ಹೋಗ ಬಾರದೆಂದು ಆ ಸಿಟ್ಟನ್ನು ಅಲ್ಲಿಗೇ ತಣಿಸಿಕೊಳ್ಳುತ್ತೇನೆ. ಕೆಲವು ವೇಳೆ ಎಂಥಾ ವೈರಾಗ್ಯ ಬರುತ್ತೇ ಅಂತ ಹೇಳಿದ್ರೆ ನಿನಿಯವರ ತೆಂಗಿನ ತೋಟದ ನಡೂ ಮಧ್ಯೆತುಳಿತು ತಪಸ್ಸು ಮಾಡೋಣಾಂತ ಅನ್ನಿಸುತ್ತದೆ. ಆದ್ರೆ—ಇದಾರೋ ಕಾಯಿ ಕಳ್ಳಂತ ತಿಳಿದು ಅವರೆಲ್ಲಿ ನನ್ನನ್ನು ಬೆನ್ನೆಟ್ಟುತ್ತಾರೋಂತ ತುಂಬ ಭಯವುಂದ ಸುಮ್ಮನಿರಬೇಕಾಗಿದೆ. ಕಲಿಕಾಲವಪ್ಪಾ!—ಈ ಊರಲ್ಲಿ ಒಂದೇ ಒಂದು ದಟ್ಟವಾದ ಕಾಡಾದರೂ ಇದೇ ಅನ್ತೀರಾ? ಈಗೀಗ ಅಲ್ಲಲ್ಲಿಗೂ ಪೇಟೆಯಿಂದ ಕಟ್ಟೆಗೆ ಅಮದಾಗುತ್ತಾ ಇದೆ..... ಇನ್ನು....ಸಕ್ತವರನ್ನು ಸೀಮೆಯೆಣ್ಣೆ ಹಾಕಿಯೇ ಸುಡಬೇಕೋ ಏನೋ?.... ಅಂದಂತೆ .ನನಗೂ ನನ್ನಾಕೆಗೂ ಮದುವೆಯಾದುದು ಒಂದೇ ಬಾರಿ! ನಮ್ಮಿಬ್ಬರ ಯೋಗವೂ ಒಂದೇ ಗೃಹದಲ್ಲಿ ಕೂಡಿಕೊಂಡಿರುವಾಗಿನ ಸುಮುಹೂರ್ತದಲ್ಲೇ ನನಗಿಂತರಿಗೂ ಒಟ್ಟಿಗೆ ಮದುವೆಯಾಗಬೇಕೆಂದು ಭಟ್ಟರು ದಿನ ಹೇಳಿದ್ದರು ಆವಸು ಹೇಳಿದ ಘಳಿಗೆಯಲ್ಲಿಯೇ ನಾವು ಕೈಹಿಡಿದುಕೊಳ್ಳದಿದ್ದರೂ,-ಅದೇ ದಿನ ಸೂರ್ಯ ಮುಳುಗುವುದರೊಳಗೆ ಹೇಗೂ ಎರೆದ ಧಾರೆಯ ನೀರಿನಿಂದ ಕೈತೊಳೆದುಕೊಂಡೆ ?! ಅಲ್ಲಾ-ಗೊತ್ತುಮಾಡಿದ ಘಳಿಗೆಯಲ್ಲಿ ಈ ವರೆಗೆ ಈ ಲೋಕದಲ್ಲಿ ಯಾರಿಗಾದರೂ ಮದುವೆಯಾಗಿದೆಯೇ? ಆಮೂ ನನಗಂಕೂ ನನ್ನಾಕೆಯೊಡನೆ ಮದುವೆಯಾದ ದ್ದು ಆ ದಿನವೇ ಪ್ರಥಮ ಬಾರ! ಈ ಮೊದಲು ಆದರ ಅನುಭವವೇ ನಮಗಿರಲಿಲ್ಲ ಹಾಗಾಗಿಯೇ ಏನೋ ಈ ಆಧುನಿಕ ಯುಗದಲ್ಲಿ ಗಂಡಹೆಂಡಿರ ೭೫ ಸಂಖ್ಯೆಯಿರುವಂತೆ ಒಮ್ಮುಖವಾಗಿ ಏಕಮತದಿಂದಿರುವ ಬದಲು ಕದ್ರಿರುದ್ಧವಾದ '೩೭' ಸಂಖ್ಯೆಯ ಸೂಚ್ಯಾರ್ಥದಂತೆ "ಎತ್ತ ಏರಿಗೆಳೆದಾಗ ಕೋಣ ನೀರಿಗಿಳಿಯುವ" ಗಾದೆಯಂತಿರುವುದು ಸ್ವಾಭಾವಿಕವಾಗಿದೆ ಹಾಗಾಗಿಯೇ ಬೆಳಿಗ್ಗೆ ಮದುನೆ—ಮಧ್ಯಾಹ್ನದ ಸಂಸಾರದಲ್ಲಿ ವೈರಾಗ್ಯ —ಸಂಜೆಗೆ ಇದರಿಂದ ಬಿಡುಗಡೆ— ರಾತ್ರಿ ಮತ್ತೊಂದು ವಿವಾಹದ ಯೋಚನೆ!—ಹೀಗೆಲ್ಲಾ ಅನರ್ದವಾಗುವುದು ಹೆಚ್ಚು. ಆದ್ದರಿಂದಲೇ ನನ್ನನ್ನು ಯಾರು ಏನೆಂದರೂ ಚಿಂತಿಲ್ಲ' ಸಾಯುವ ವರೆಗಾದರೂ ನನ್ನಾಕೆಗೆ ನಾನೊಬ್ಬನೇ ಗಂಡನೆಂಬ ಬಿಳಿಯಬೇಕೆಂದೂ, ಅವಳಿಗೆ ಮತ್ತೊಬ್ಬ ವಿಧುರನ ಕೈಕೊಡುವ ಭಾಗ್ಯ ಬಾರದಿರಲೆಂದೂ ನನ್ನ ಶತಪ್ರಯತ್ನ!

ನೀವೂ ಕೈಹಿಡಿದ ಹೆಂಡ್ತಿಗೆ ನಿತ್ಯ ಉಪದ್ರಕೊಡುವ ಪ್ರೇತಗಳಾಗಿರಬೇಡಿರೆಂದೇ ನನ್ನ ಕೊನೆಯ ಕೇಳಿಕೆ!!

— ಕೆ. ಜೆ ಶೆಟ್ಟಿ

ಕೇಶ ಸೌಂದರ್ಯವೇ—ಯುವತಿ, ಯುವಕರ ಶೃಂಗಾರ.

ಅಂಥ ಕೇಶವೃದ್ಧಿ (ಕೂದಲ ಬೆಳವಣಿಗೆ)ಗಾಗಿ ಅನೇಕ ತಲೆ ಎಣ್ಣೆಗಳನ್ನು (Hair Oils) ಉಪಯೋಗಿಸಿ ನಿರುತ್ಸಾಹರಾಗಿರುವುದು ಸಹಜ. ಆದರೆ:-

ಹಿಮಗಿರಿ ತೈಲ ಉಪಯೋಗಿಸುವುದರಿಂದ

ತಲೆನೋವು, ಕಣ್ಣುರಿ, ಕಣ್ಣಿನಲ್ಲಿ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೂದಲು ಉದುರುವಿಕೆ, ಕಣ್ಣು ಮಂಜು, ನಿದ್ರಾಭಂಗ ಈ ವ್ಯಾಧಿಗಳನ್ನು ಪರಿಹರಿಸಿ ಕೇಶವೃದ್ಧಿ ಮಾಡುವುದು

ಸೂಚನೆ:— ಹಿಮಗಿರಿ ತೈಲವೆಂದು "ಬೀರೆ ಗಿರಿಗಳ" ಹೆಸರುಳ್ಳ ನಕಲಿ ಮೂಲನ್ನು ಕೊಂಡು ಮೋಸಹೋಗಬೇಡಿರಿ.

Wanted Agents & Stockists

Manufacturers: RATAN MISRI DEPOT
Avenue Road Cross, BANGALORE-2

ವಿಚಾರ ವರ್ಷ

ಇವರೇ ನಮ್ಮ ವಿದ್ಯಾರ್ಥಿಗಳು

ಶಿಸ್ತುಗೇಡಿ ವಿದ್ಯಾರ್ಥಿಗಳು

ಪ್ರಾಸವಿಲ್ಲದ ಹಾಡು

'ಪ್ರಾಸವಿಲ್ಲದ ಪದವ ನಾನು ಹಾಡಿ
ದೊಡೇನ ?
ನಾಸಿನೆಯಿಜ್ಜೆ ಹದಗೈದು
ಹೂಸಿಕೊಂಡಂತೆ'

ಎಂಬ ಕವಿ ಕರ್ವಜ್ಞನ ಮಾತಿನ ಮೇರೆಗೆ ಪ್ರಾಸವು ಪದ್ಯನ ಜೀವಾಳವಾಗಿದೆ ತಪ್ಪೀ ತಿಯಲ್ಲಿ ಹೇಳುವುದಿದ್ದರೆ ಪ್ರಾಸವಿಲ್ಲದ ಪದ್ಯವು ಶಿಸ್ತುದುಂಬಿದ ವಿದ್ಯಾರ್ಥಿಯಂತೆ; ಕಲೆಯಡಗಿದ ಚಂದಿರನಂತೆ, ಸೌಸವ ಸೂಸುವ ಮಿಸುಮಿಯಂತೆ. ಆದುದರಿಂದ ಪದ್ಯವೆಂದ ಮೇಲೆ ಪ್ರಾಸವಿರಬೇಕು, ವಿದ್ಯಾರ್ಥಿ ಎಂದ ಮೇಲೆ ಆತನಲ್ಲಿ ಶಿಸ್ತು ದುಂಬಿರಬೇಕು. ರನ್ನವಿರಚಿತ ಗದಾಯುದ್ಧವಿಂದಾಯ್ತು ಈ ವ್ಯಾಸಭೆರತ ಕವಿತ ಹೇಗ ರಂಜಿಸುತ್ತದೆಂದು ಅವಲೋಕಿಸಿ ಆನಂದಿಸಿರಿ'

'ದಪ್ಪರಿಧಟ್ಟಂ ಪೊಟ್ಟನೆ ದೊಪ್ಪದೊ-
ಗಪ್ಪನೆ ದಿಧಿಲ್ ಬುಧಿಲ್ಲನೆ ನದೆಗಳ್ |
ಸೊಪ್ಪು ಸೊವದಪ್ಪಿನಂ ಸೂಳ್
ತಪ್ಪದೆ ಕಡುಕೆಯ್ದು ಪೊಯ್ತರೊರ್ವರ
ನೊರ್ವರ್'

ಭೀಮನು ದುರ್ಯೋಧನರ ಗದಾಯುದ್ಧ ಸಂದರ್ಭದ ಈ ಪದ್ಯದಲ್ಲಿ ಕ್ಷಣ ಕ್ಷಣಕ್ಕೂ ಕಾಣುವ ಪಟಲಕಾಗಳು ಪಟಪಟ್ಟನೆ ಕೆನ್ನೆಗೆ ಬಡಿವಂತೆ ಕರ್ಣ ತಮ್ಮಟಿಗೆ ಬಡಿದು ಮನಸ್ಸನ್ನು ಅದೆಷ್ಟು ಆನಂದ ತುಂದಿಲವಾಗುವಂತೆ ಮಾಡೀತ ? ಅದೆಷ್ಟ ಬಾರಿ ಕೇಳೋಣವೆಂದ ತೋರಿತು! ತದೆಸ. ಬಾರಿ ಅದನ್ನು ಪರಿಶೀಲಿಸಬೇಕೆಂದು ಮನದಂದೀತು? ಇದಕ್ಕೆಸೇ ಎನ್ನುತ್ತಾರೆ ಕಾವ್ಯ' ರಚಯಿತನನ್ನೇ ಎನ್ನುತ್ತಾರೆ ಕವಿ! ತಪ್ಪೀ ತಿಯಲ್ಲಿ ಶಿಸ್ತೆಂಬ ಪ್ರಾಸಭರಿತ ವಿದ್ಯಾರ್ಥೀ ಕಾವ್ಯವು ಸರ್ವ ಜನರಿಂದಲೂ ಮನ್ನಣೆಗೆ ಪಾತ್ರವಾಗದಿರದು ಶಿಸ್ತು ದುಂಬಿದ ವಿದ್ಯಾರ್ಥಿಯೆಂದರೆ ಕಹರಹಿತ ಹಾಲ್ಬೆಸೆಕ್ಕೆಯ ಚಿನ್ನೆಂತೆ, ಚೇತನ ದುಂಬಿದ ಶಿಲ್ಪದಂತೆ ಎಂದೆಲ್ಲ ಹಲವಾರು ಉಪಮೆ-ಗಳನ್ನು ಕೊಡಬಹುದು.

ಈ ಜೀವನ ಹೊತ್ತಗೆಯಲ್ಲಿ ವಿದ್ಯಾರ್ಥಿಗಳು ಪುಷ್ಪಗಳಿರುವುದಂತೂ ಬಸೂ ಅಲ್ಲ. ಆಗಲೇ ಆ ವಿದ್ಯಾರ್ಥಿಗಳು ಶಿಸ್ತಿನ ಬೆಲೆ ಅರಿತಲ್ಲಿ ಮುಂದಿನ ಜೀವನದಲ್ಲಿ ಎಂತಹ ಕಷ್ಟವನ್ನೂ ಅವರು ಎದುರಿಸಲಕ್ಕರಾಗುವರು. ಆದುದರಿಂದ ವಿದ್ಯಾರ್ಥಿಗಳಲ್ಲಿ ಬರೀಯ ವಿದ್ಯೆಯಲ್ಲದೆ ಶಿಸ್ತೂ ಪ್ರಾಮುಖ್ಯ ಎಂಬಾದರೂ ನಿಡವಾಗಿ ಬಗ್ಗದ್ದು ವಂತವಾಗಿ ಬಗ್ಗಿತೆ? ಗುರುಹಿರಿಯರಿಗೆ ಅವಿಧೇಯರಾಗದೇ ಇರುವುದು, ಕರ್ತವ್ಯ ಚ್ಯುತರಾಗದಿರುವುದು ರಾಷ್ಟ್ರಾಭಿವೃದ್ಧಿಗೂ ಪೂರಕವಾಗುವುದು.

ವಿಧೇಯತೆ

'ಗುರುವ ನಿಂದಿಸಬೇಡ' ಸರ್ವಜ್ಞ ಅನ್ನುತ್ತಾ ಇಪ್ಪಾನೆ ಒಂದೆಡೆ, ಇನ್ನೊಂದೆಡೆ, 'ದಾನಗಳಲ್ಲಿ ಶ್ರೇಷ್ಠ ದಾನವೆಂದರೆ ಜ್ಞಾನದಾನ' ಎನ್ನುವರುಮಗುದೊಬ್ಬಪ್ಪು ವುಮಕರು ಹಾಗಿರುವಾಗ ಅಜ್ಞಾನವಿತ್ತವ ರನ್ನು ಅಂದರೆ ಗುರುಗಳನ್ನು ವಿದ್ಯಾರ್ಥಿಗಳು ಶಿಸ್ತು ಭಕ್ತಿಯಿಂದ ಕಾಣತಕ್ಕದ್ದು, ಅವರಿಗೆ ಸದಾ ವಿಧೇಯರಾಗಿರುವುದು ಅಂದರೆ ಶಿಸ್ತೆಂಬ ಗಿಡಕ್ಕೆ ಚಿಗುರು ಬರಿಸಿದಂತೆ ಸರಿ. ಎಂದಾದರೂ ಅವರು ನಮಗಿಂತ ವಯಸ್ಸಲ್ಲಾದರೂ, ಜ್ಞಾನದಲ್ಲಾದರೂ ಕಿರಿಯರಾಗುವರೆ? ಇಲ್ಲ, ಅವರು ನಮಗಿಂತ ವಯೋವೃದ್ಧರೂ, ಜ್ಞಾನವೃದ್ಧರೂ ಆಗಿರುತ್ತಾರೆ. ಹಾಗಿರುವಾಗ ಅವರಿಗೆ ಅವಿಧೇಯರಾಗಿದ್ದು ಅವರನ್ನು ತೆಗಳುವುದು ವಿದ್ಯಾರ್ಥಿಗಳಿಗೆ ಭೂಷಣ ಪ್ರಾಯವೆ? ಅವರ ಅನುಗ್ರಹಸ್ವೀಕಾರಕ್ಕೆ ಮೊತ್ತಮೊದಲು ವಿದ್ಯಾರ್ಥಿಗಳು ತಯಾರಾಗಿರಬೇಕಲ್ಲದೆ, ಅವರುಗಳ ಆಗ್ರಹ ಶಾಪಕ್ಕೆ ವೈಯೆಡ್ಡುವುದಕ್ಕೆ ವಿದ್ಯಾರ್ಥಿಗಳು ಸರ್ವಥಾ ತಯಾರಾಗಿರಕೂಡದು. ಅವರ ಅನುಗ್ರಹವು ಎಂತಹ ಶಕ್ತಿಯನ್ನೂ ಎದುರಿಸಬಲ್ಲದಾಗಿದೆ. ಅವರೊಡನೆ ಜೇನೆ ಹರಿಯುವರೊಡನೆ ಮಾತುಕತೆ ನಡೆಸಮಾಗುಬಹುದಜನ'ದಿಂದಲೇ ಅವರನ್ನು ಸಂಪೂರ್ಣಿಸತಕ್ಕದ್ದು ಇದರಿಂದ ವಿದ್ಯಾರ್ಥಿಗಳಲ್ಲಿನ ಶಿಸ್ತು ಆದರ್ಶಲ್ಲೇ ಉಳಿಯುಬಹುದಾಗಿದೆ ಮತ್ತು ಅವರನ್ನು ಕಂಡಾಕ್ಷಣ ತಮ್ಮಲ್ಲಿನ ಭಕ್ತಿ ಪದ್ಧಾವಗಳ ಮ್ಯೋತಕವಾಗಿ ಅವರನ್ನು ನಮ್ರ ಭಾವದಿಂದ ನಮಸ್ಕರಿಸತಕ್ಕದ್ದು. ಇದರಿಂದಲೂ ವಿದ್ಯಾರ್ಥಿಗಳಲ್ಲಿ ಶಿಸ್ತು ಲೋಪವಾಗದ..

ಕರ್ತವ್ಯನಿಷ್ಠೆ

'ನೀನು ಕರ್ತವ್ಯಚ್ಯುತನಾದರೆ ನಿನಗೆ ಮೋಕ್ಷವಿಲ್ಲ'ಎಂಬ ನಿಷೇಧವಾಕ್ಯ ಅರ್ಜುನನಿಗೆ ಶ್ರೀಕೃಷ್ಣನ ಬಾಯಿಯಿಂದ ಹೊರ ಬಂದಿದ. ಅಂದಂತೆ ನಾವು ಕರ್ತವ್ಯಬಾಹಿರರಾಗಕೂಡದು ನಾವು ಮಾಡುವ ಕರ್ಮದಲ್ಲಿ ಮೋಸ ವಂಚನೆಗಳಿರಕೂಡದು, ಭೇದ ಭಾವಗಳಿಗೆ ಎಡೆಯಿರಕೂಡದು, ಹೀಗಿದ್ದರೆನೇ ಆ ಕರ್ತವ್ಯವನ್ನು 'ಕರ್ತವ್ಯ'ನೆನ್ನುತ್ತೇವೆ ಇಲ್ಲದಿದ್ದಲ್ಲಿ ಅದನ್ನು ಕಳ್ಳತನ' ವೆನ್ನುತ್ತೇವೆ. ಪರರಾಧೀನವಲ್ಲದ್ದು ನಾವು ಕರ್ತವ್ಯ ಜರಗಿಸಬೇಕಾದ ಸಂದರ್ಭದಲ್ಲಿ ನಾವು ಮೇಲಧಿಕಾರಿಗಳ ಪ್ರೇಮಪೂರ್ವಕಪ್ರಶ್ನೆವನ್ನೆ ಡೆಸಿರಿಯುವಂತೆ ಯತ್ನಿಸಬೇಕು ಅದೆಂತು? ಆದೇ ಶಿಸ್ತಿನ ಸಾಲನೆ ಆದಕ್ಕಾಗಿ ಒಂದು ಸಂದರ್ಭವನ್ನು ಇಲ್ಲಿ ಉದಾಹರಿಸಲೆ?



ಬ್ರುಸೆಲ್ಸ್ ಪ್ರದರ್ಶನವನ್ನು ಫ್ರಿಟ್ಸ್‌ನೆ ಚಾನ್ಸಲರ್ ಆಫ್ ಎಕ್ಸ್‌ಚೆಕ್ವರ್ ಶ್ರೀ ದೀನಿಕ್ ಹೀತ್‌ಕೋಟ್ ಅಮೋರಿಯವರು ಸಂದರ್ಶನಿಸಿತ್ತಾಗ ತೆಗೆದ ಚಿತ್ರ.

ಅದೊಂದು ಕಾರು ವಾಯು ವೇಗದಿಂದ ಧಾವಿಸುತ್ತಿತ್ತು. ಅಷ್ಟರಲ್ಲಿ ಶೈಲ್ಪೆ ಕೆಲಸಗಾರ ಆ ಕಾರನ್ನು ನಿಲ್ಲುವಂತೆ ಸನ್ನೆಗೈದ, ಅದಕ್ಕಾಗಿ ಕಾರು ನಿಲ್ಲಿಬೇಕಾಯಿತು. 'ವಾಹನಗಳಿಗೆ ಈಗ ಪ್ರವೇಶವಿಲ್ಲ, ಕ್ಷಮಿಸತಕ್ಕದ್ದು!" ಆ ಶೈಲ್ಪೆ ಕೆಲಸಗಾರನ ಬಾಯಿಯಿಂದ ಮಾತುಹೊರಟಿತು. "ಇದೋ ರೈಲು ಬರುವ ಸಮಯ ಸಮೂಪಿಸಿತು, ದಯತೋರಿಸಲಾರಿರಾ? "ನಮ್ರತೆಯ ದೃಶ್ಯ ಆತನ ವಾಕ್ಯದಲ್ಲಿ ಕಾಣ ಬರುತಿತ್ತು.

"ಎಲೋ ಬಾಲಕ. ಅಷ್ಟರಲ್ಲಿ ನಾವು ನಮ್ಮ ಸ್ಥಳಕ್ಕೆ ತಲಪಬಲ್ಲೆವು" ಕಾರಿನೊಳಗಿಂದ 'ಕಾಕೀ ಉಡುಪು-ಧಾರಿಯ ಬಾಯಿಯಿಂದ ಮಾತು ಹೊರಟಿತು, ಮಾತುಕತೆ ಬೆಳೆಯಿತು

"ಇಲ್ಲ" ದೃಢ ನಿರ್ಧಾರ ಆ ಕೆಲಸಗಾರನದು.

"ಇಲ್ಲವೆ?" ಡ್ರೈವರ್ ರೆಸ್ಪೆ ಹಿಂದಕ್ಕೆ ಎಳೆಯುತ್ತ.

"ಎಂದೆನಲ್ಲ."

"ಆಇ, ಕಾರಿನೊಳಗೆ ಇಂಡಿಯಾ ನೆ ಹೈಕಮಿಶನರರು ವಾಗಲೂ ದರ್ಪನೆ?" ಕಾರು ಮುಂದೆ ಹೋಗಲನುವಾಯಿತು.

ಮನೆ ತಡೆಯ ತ್ತ ಆ ಬಾಲಕ, 'ಆವರೂ ಇರಲಿ. ಆವರ ಕುದ್ದೆ ಮಿಂಚಿನುವ ಮೆತ್ತೊಬ್ಬ ಪ್ರಮುಖರೂ ಇರಲಿ! ನಾನು ಮಾತ್ರ - .." ಕರ್ತವ್ಯಶಾಲೀ ಬಾಲಕನ ಅಂತಿಮ ನಿರ್ಧಾರ.

ತಕ್ಷಣ ಕಾರಿನ ಕದ ಒಡೆಯಿತು. ತಾವರೆಯಿಸಳಿನ ನಯನಪುಳ್ಳಾತರೂ, 'ಹೌದೊ? ಹಾಗೂ ಉಂಟೊ-' ಎಂಬಂತೆ ಪ್ರಶ್ನಿಸುವ ಪ್ರಶ್ನಾರ್ಥಕ ಚಿಹ್ನೆಯಂತೆ ತೋರುವ ಕರ್ಣಗಳಿರುವವರೂ, ನಮ್ಮ ಪ್ರಧಾನಮಾತ್ಯರೂ ಆದ ಭಾರತರತ್ನ, ನೋತಿಲಾಲರ ಪುತ್ರರೂ ಎಂದೆನಿಸಿದ ಶಾಂತಿದೂತರೂ, ಗಾಂಧೀಸಬರೂ ಆಗಿರುವರೂ ಆದ ಶ್ರೀ ಜವಾಹರರು ಕಾಣಿಸಿದರು ಆ ಬಾಲಕನಿಗೆ. 'ಇತಹ ಭಾಷ' ಕರ್ತವ್ಯಶಾಲೀ ಬಾಲಕ' ಎನ್ನುತ್ತ ಆ ಬಾಲಕನ ಬೆನ್ನು ಚಪ್ಪರಿಸುತ್ತ ಆತನಿಗೆ ತನ್ನ ಹೊಗಳಿಕೆಯ ಕಾಣಿಕೆ ಕೊಟ್ಟರು. "ಧಾರತ ಉಪ್ಪಾರವಾಗುವುದು ಇಂತಹವರಿಂದಲೇ " ಎಂದು ಹೇಳಿದರು. ಆಗಲೇ ಕಾರು ಹಿಂದಕ್ಕೆ ತಿರುಗಿತ.

—ನೇಲ್ಯಾಡಿಸಿದ ವ್ಯಕರಣದಿಂದ ಶಿಸ್ತಿಗೆ ಅಥವಾ ನೀತಿಗೆ ಬೆಲೆ ವ್ಯಕ್ತವಾ

(೧೨ ಪುಟ ನೋಡಿರಿ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಉಳಿಗ ಪುಸ್ತಕಗಳು, ಸೊಸ್ಯಟ ರಶೀದಿ, ವಾರ್ಷಿಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುಬಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಜಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ನಿಮಗಾಗಿ—
ನಿಮ್ಮ ಜನರ ನಿರ್ದೇಶನದಲ್ಲಿ—
ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ. ಮಾರ್ಚ್ 12, 1906)

ಪ್ರಧಾನ ಕಚೇರಿ; ಉಡುಪಿ (ದ. ಭಾರತ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಪರ್ಯಾಲೋಚನೆ

ನಾಗಪುರ ಕಾಂಗ್ರೆಸ್‌ನಲ್ಲಿ ಭೂ ಸುಧಾರಣಾ ಪ್ರಸ್ತಾಪ

ಕಾರ್ಯಕಾರೀ ಸಮಿತಿಯು ಭೂ ಸುಧಾರಣಾ ವಿಷಯವನ್ನು ಗಂಭೀರವಾಗಿ ಚರ್ಚಿಸಿತು.

ನವದೆಹಲಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿಯು ಭಾರತದ ವಿವಿಧ ರಾಜ್ಯಗಳಲ್ಲಿ ಭೂಸುಧಾರಣಾ ಸಂಬಂಧದ ಶಾಸನವು ೧೯೫೯ನೆ ದಶಂಬರ ತಿಂಗಳಾಂತ್ಯದೊಳಗೆ ಕಾರ್ಯರೂಪಕ್ಕೆ ಬರಬೇಕೆಂದು ನಿರ್ಧರಿಸಿ ಈ ಅವಧಿಯನ್ನು ಬೆಳೆಸಿತು. ಈ ಶಾಸನದಲ್ಲಿ ಅತ್ಯಧಿಕ ಹಿಡುವಳಿಯ ಪ್ರಮಾಣವನ್ನೂ ಅಡಕ ಪಡಿಸಲಾಗುವುದು.

ಕಾಂಗ್ರೆಸ್ ಮಹಾ ಸಭೆಯ ಕೃಷ್ಯತ್ಪಾದನೋಪ ಸಮಿತಿಯು ಮೂರು ವರ್ಷಾವಧಿಯಲ್ಲಿ ಈ ಕಾರ್ಯವನ್ನು ಪೂರೈಸಬೇಕೆಂದು ಸೂಚಿಸಿತ್ತು. ಆದರೆ, ಕಾಂಗ್ರೆಸ್ ಸಮಿತಿಯ ಈಗಿನ ನಿರ್ಧಾರವು ಆ ಉಪಸಮಿತಿಯ ಸಿದ್ಧಾಂತಗಳಿಗೆ ವಿರುದ್ಧವಾಗಿದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕೃಷ್ಯುತ್ಪಾದನೋಪಸಮಿತಿಯ ಸಲಹೆಗಳನ್ನು ಪ್ರಾರೂಪದಿಂದ ವ್ಯಾವಹಾರಿಕ ರೂಪಕ್ಕೆ ತಂದು ಕೊಂಡು ಅವನ್ನು ಸ್ವೀಕರಿಸಿತು. ಮೂಲ ಸಿದ್ಧಾಂತಗಳಲ್ಲಿ ಅಲ್ಲಲ್ಲಿ ಕೆಲವು ಪರಿವರ್ತನೆಗಳು ನಡೆದಿದ್ದರೂ ಅವನ್ನೂ ವಿಶೇಷ ಮಹತ್ವದ್ದಲ್ಲವೆಂದೇ ಹೇಳಬೇಕು. ಆದರೂ ಒಂದು ಮಹತ್ತರಾಂಶದ ಪರಿವರ್ತನೆಯು ನಡೆದಿದೆ: ಉಪಸಮಿತಿಯ ಮೂಲ ಪ್ರಾರೂಪಗಳಲ್ಲಿ ನಗರಗಳ ಆಸುಪಾಸಿನ ಮಿತಿ ನಿರ್ಧರಿಸುವ ತಿದ್ದುಪಡಿಗಳನ್ನು ಹೊಂದಿಕೊಂಡು ಕಾಂಗ್ರೆಸ್ ಮಹಾಸಭೆಯ ಕಾರ್ಯದರ್ಶಿಯವರು ಒಂದು ಗೊತ್ತುವಳಿಯನ್ನು ಸಿದ್ಧಪಡಿಸುವರು ಮೊದಲು ಈ ಗೊತ್ತುವಳಿಯ ಮೇಲೆ ಆನೌಪಚಾರಿಕ ವಿಚಾರ ವಿಮರ್ಶನವು ತೊಡಗಿ, ಆನಂತರ ಮುಂದೆ, ಕಾಂಗ್ರೆಸ್‌ನ ನಾಗಪುರದ ಅಧಿವೇಶನದಲ್ಲಿ ಔಪಚಾರಿಕ ರೂಪದಲ್ಲಿ ಚರ್ಚಿಸಲಾಗುವುದು.

ಸಂಪ್ರತಿಗಳ ನಡುವಣ ಒಂದನ್ನು ಆರಿಸಿ, ತನ್ನ ರಾಜ್ಯದಲ್ಲಿ ಅತ್ಯಧಿಕ ಹಿಡುವಳಿಯನ್ನು ನಿರ್ಧರಿಸುವುದು.

ಆಯವೆಲ್ಲಿ ಅತ್ಯಧಿಕ ಮಿತಿಯನ್ನು ನಿರ್ಧರಿಸುವಾಗ, ಇಂದಿನ ಜೀವನಸ್ತರವು ಕುಸಿಯದಂತೆ ನೋಡಿಕೊಳ್ಳಬೇಕೆಂಬ ವಿಚಾರದ ಬಗ್ಗೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಚರ್ಚಿಸಿ, ಅದನ್ನು ಸ್ಥಿರೀಕರಿಸಿತು. ಕೃಷಿಯ ಬಗ್ಗೆ ಪ್ರೇರಣೆಯೊಯುನಂತಹ ರೀತಿಯಲ್ಲಿ ಈ ಅತ್ಯಧಿಕ ಮಿತಿಯನ್ನು ಹೇರಬೇಕು. ಹಾಗೆಯೇ ಕೃಷಿ ಸಂಬಂಧದಲ್ಲಿ ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶವೊದಗುವಂತೆ ಯೋಗ್ಯ ಯುವಕರಿಗೆ ಸಹಕಾರೀ ಸಂಸ್ಥೆಗಳು ಅಥವಾ ಸರಕಾರಗಳ ಪಡೆಯಿಂದ ವಿದ್ಯಾರ್ಥಿವೇತನವು ದೊರೆಯುವಂತಾಗಬೇಕು, ಎಂದು ಸಮಿತಿಯು ಸೂಚಿಸಿತು.

ಸಂಯುಕ್ತ ಸಹಕಾರೀ ವ್ಯವಸಾಯವೇ ಭಾರತದ ಅಂತಿಮ ಗುರಿಯಾಗಬೇಕೆಂಬುದನ್ನು ಬಲವಾಗಿ ಸಮರ್ಥಿಸಲಾಯಿತು. ಈ ಧ್ಯೇಯವನ್ನೇ ಮುಖ್ಯವಾಗಿಟ್ಟುಕೊಂಡು ಎಲ್ಲ ಭೂಶಾಸನಗಳನ್ನೂ ತಯಾರಿಸಬೇಕೆಂದು. ವತ್ತಾಯ ಹೇರಲಾಯಿತು.

ಭೂಸಂಬಂಧದಲ್ಲಿ ಅತ್ಯಧಿಕ ಮಿತಿಯನ್ನು ಹೇರಿದ ಮೇಲೆ, ಆಗ ಸರಕಾರದ ವಶಕ್ಕೆ ಬರುವ ಭೂಮಿಯನ್ನು ಯಾವನೇ ವ್ಯಕ್ತಿಗೆ ಕೊಡದೆ, ಪಂಚಾಯತುಗಳಿಗೆ ಒಪ್ಪಿಸಬೇಕು ಮತ್ತು ಈ ಭೂಮಿಯ ವ್ಯವಸ್ಥೆಯ ಕಾರ್ಯಭಾರವನ್ನು ಸಹಕಾರೀ ಸಮಿತಿಗಳು ಸ್ವೀಕರಿಸಬೇಕು; ಈ ವಿಷಯದಲ್ಲಿ ವಾಸ್ತವಿಕ ರೂಪರೇಷೆಗಳನ್ನು ಸ್ಥಾನೀಯ ಪರಿಸ್ಥಿತಿಗಳನ್ನು ಹೊಂದಿಕೊಂಡೇ ತಯಾರಿಸಬೇಕು ಎಂದು ಈ ಕಾರ್ಯಕಾರೀ ಸಮಿತಿಯು ಸೂಚಿಸಿತು ಸರಕಾರೀ ವ್ಯವಸಾಯ ಸಂಬಂಧದಲ್ಲಿ ಜನಾದರಣೆಯು ಬೆಳೆಯುವಂತೆ ಮಾಡಲು, ತೀವ್ರ ಕಾರ್ಯಕ್ರಮ ಕೈಕೊಳ್ಳಲ್ಪಡಬೇಕೆಂದು ಈ ಸಮಿತಿಯು ಸಲಹೆಯಿತ್ತಿತು.

ಉಪಸಮಿತಿಯ ಸೂಚನೆ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ತಿದ್ದುಪಡಿಗಳನ್ನು ಹೊಂದಿಕೊಂಡು ಕಾಂಗ್ರೆಸ್ ಮಹಾಸಭೆಯ ಕಾರ್ಯದರ್ಶಿಯವರು ಒಂದು ಗೊತ್ತುವಳಿಯನ್ನು ಸಿದ್ಧಪಡಿಸುವರು ಮೊದಲು ಈ ಗೊತ್ತುವಳಿಯ ಮೇಲೆ ಆನೌಪಚಾರಿಕ ವಿಚಾರ ವಿಮರ್ಶನವು ತೊಡಗಿ, ಆನಂತರ ಮುಂದೆ, ಕಾಂಗ್ರೆಸ್‌ನ ನಾಗಪುರದ ಅಧಿವೇಶನದಲ್ಲಿ ಔಪಚಾರಿಕ ರೂಪದಲ್ಲಿ ಚರ್ಚಿಸಲಾಗುವುದು.



ಎಪ್ಪತೊಂಭತ್ತು ಸಾವಿರ ಮೈಲುಗಳನ್ನು ಎತ್ತರಕ್ಕೆ ಪಯೋನೀರ್‌ನ್ನು ಹಾರಿಸಬಲ್ಲ ಅಮೆರಿಕನ್ ರಾಕೆಟು.

ಪಾಕಿಸ್ತಾನ

ಸಿಂಹದ ನಿಜಬಣ್ಣ ಬಯಲಾಗಿ ಹೋಯಿತು

ಸ್ವಾರ್ಥಿಗಳ ಕೈಯಿಂದ ಮಹಾ ಸ್ವಾರ್ಥಿಗಳ ಕೈಗೇನೇ ಅಧಿಕಾರ ಹಸ್ತಾಂತರವಾಯಿತೆ?

ಪಾಕಿಸ್ತಾನವನ್ನು ಭ್ರಷ್ಟಾಚಾರ ನುಸುಳು ದೇಶ ದ್ರೋಹಗಳ ಕೃಯಿಂದ ಮುಕ್ತಿಗೊಳಿಸಲು ಅಕ್ಟೋಬರಂದು ದಂಡಿ ನಾಳಿಕೆಯನ್ನು ಸಾರುವಾಗ, ಅಕ್ಟೋಬರ ೧೯೫೮ರಂದು ಬಲೂಚೀ ಗಾಂಧಿಯವರಾದ ಖಾನ್ ಅಬ್ದುಲ್ ಸಮದ್ ಖಾನರನ್ನು ದೇಶ ವಿರೋಧೀ ಘಾತಕ ಕಾರ್ಯಗಳನ್ನೆಸಗಿದರೆಂಬ ಆರೋಪ ಹೊರಿಸಿ ಕೈದು ಮಾಡುವಾಗ, ಅವರು ೧೪ ವರ್ಷಗಳ ಕಾರಾಗೃಹವಾಸದಲ್ಲಿ ನವೆಯಬೇಕೆಂದು ಹೆಚ್ಚಿನವರು ತಿಳಿದುಕೊಂಡಿರಲಾರರು. ಪಾಕ್ ಸೈನಿಕ ಸರಕಾರವು ಇದುವರೆಗೆ ಯಾವನೇ ಲಂಚಗುಳಿ ವ್ಯಾಪಾರಿ ಅಥವಾ ಅಧಿಕಾರಿಗೆ ಇದರ ಅರ್ಧದಷ್ಟು ಶಿಕ್ಷೆ ವಿಧಿಸಲಿಲ್ಲ. ಆದರೆ, ಖಾನರೊಡನೆ ಈ ರೀತಿಯ ವ್ಯವಹರಣೆಯಿಂದ, ಕ್ಷುಲ್ಲಕ ರಾಜನೀತಿಯ ಪ್ರಬಲ ವಿರೋಧಿಗಳನ್ನು ಹುದಕ್ಕೆ ತರುವ ಬುದ್ಧಿಯನ್ನಷ್ಟೇ ಪ್ರಕಟ ಮಾಡಿದಂತಾಯಿತು.

ಇವರನ್ನು ಆರೋಪ ಹೊರಿಸಿ ಬಂಧಿಸುವಾಗ, ಪಾಕಿಸ್ತಾನ ಏಳು ವರ್ಷಗಳ ಕಠಿಣ ಶಿಕ್ಷೆಯೊಯವಾಗಿ, ಇವರ ಮೇಲೆ ಯಾವುದೇ ಸ್ಪಷ್ಟ ಆರೋಪ ಹೊರಿಸಲೂ ಇಲ್ಲ; ಅವನ್ನು ಪ್ರಮಾಣೀಕರಿಸಲೂ ಇಲ್ಲ. ಹೀಗಾಗಿ ಶ್ರೀ ಖಾನರು ನಾಲ್ಕನೆಯ ಬಾರಿ ಜೀಲು ವಾಸದ ಅನುಭವವನ್ನೆ ಪಡೆಯಬೇಕಾಯಿತು. ಇಲ್ಲವೇ ಈ ಬಾರಿ ಪಾಕ್ ಸೈನಿಕಾಡಳತೆಯುವ್ತಿ ಅವರಿಗೆಯು ಲಾದ ಶಿಕ್ಷೆಯು ಬ್ರಿಟಿಷರತ್ತಾವಧಿಯಲ್ಲಿನ ಕಠಿನ ಶಿಕ್ಷೆಗೇನೇ ಸಮಾನವಾಗಿಡಿ.

ಬಲೂಚಿ ಗಾಂಧಿಯವರ ಮೇಲೆ ಪಾಕಿಸ್ತಾನದ ಅಪಕೃಪೆ ಏಕೆತ್ತು; ಅಖಂಡ ಭಾರತದ ಮೇಲೆ ಬ್ರಿಟಿಷ ಸರಕಾರದ ಕುಟಿಲ ನೋಟದಂತೆ ಖಾನರ ಮೇಲೆ ಪಾಕ್ ವಕ್ರದೃಷ್ಟಿ ಬಿದ್ದಿತ್ತು. ಖಾನರಿಗೆ ಈ ಜೀಲು ವಾಸವೆಂಬುದೇನೂ ಹೊಸ ಅನುಭವವಲ್ಲ; ಕಳೆದ ೩೦ ವರ್ಷಗಳಲ್ಲಿ ಇವರು ಹಲವು ಬಾರಿ ಇವರ ರುಚಿ ನೋಡಿ ಬಿಟ್ಟಿದ್ದಾರೆ.

ಕಮ್ಯೂನಾಜರೇಯ ಗುರುವೆನಿಸಿದ ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫ್ಫರ್ ಖಾನರೊಡನೆ ಭಾರತವ ಅಹಿಂಸಾತ್ಮಕ ಸ್ವಾತಂತ್ರ್ಯ ಸಮರದಲ್ಲಿ ಸಮರ ಖಾನ್ ಮುಮುಖರಾಗಿ ಅಖಂಡ ಭಾರತೀಯರಿಗೆ ಬಲೂಚಿ ಗಾಂಧಿಯವರು ಪರಿಚಯವಾಯಿತು. ದೇಶಭಕ್ತಿ ಸಂಘಟನಾಚಾತುರ್ಯ, ರಾಜನೀತಿಕ ಕೌಶಲ ಮತ್ತು ಅಹಿಂಸಾ ಶ್ರದ್ಧೆಗಳಿಂದ ಅವರು ಶೀಘ್ರದಲ್ಲಿಯೇ ತನ್ನ ಪ್ರಾಂತದಲ್ಲಿ (ಬಲೂಚೀಸ್ತಾನ) ಬಲೂಚೀ ಗಾಂಧಿಯೆಂಬ ನಾಮಧೇಯದಿಂದ ಪ್ರಖ್ಯಾತರಾದರು. ೧೯೩೦ರಿಂದ ಆರಂಭಿಸಿ ಇವರು ಸತ್ಯಾಗ್ರಹ ಆಂದೋಲನಗಳಲ್ಲಿ ಶ್ರೀಯುತರು ತಾನು, ತನ್ನ ಅನುಯಾಯಿಗಳೊಡನೆ ಸಹಯೋಗಿಗಳಾಗಿ ಓಡಿಬರುತ್ತಿದ್ದರು.

ಶ್ರೀಯುತರು ಪಾಕಿಸ್ತಾನ ಸ್ಥಾಪನೆಯ ಪ್ರಬಲ ವಿರೋಧಿಗಳು. ಹಾಗಿದ್ದರೂ ಭಾರತೀಯ ಮುಸ್ಲಿಮರ

(ಅನೇ ಪುಟ ನೋಡಿ)

ಓಂ ವರ್ಷಗಳಿಂದಲೂ ಪ್ರಸಿದ್ಧ ಇದೆ
ಮಲೇರಿಯಾ ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ
ಎಲ್ಲ ಕೆಮಿಸ್ಟರಲ್ಲಿ ಗ್ರೋಸರ್‌ರಲ್ಲಿ ದೊರೆಯುತ್ತವೆ.
ಬಾಟಿವಾಲಾ ಎಗ್ಮೂಮಿಕ್ಶ್ಚರ್ ಮತ್ತು ಗುಳಿಗೆಗಳು
ಮಾರಾಟ ಮಾಡುವ ಏಜಂಟರು: ಹರ್ಬರ್ಟ್‌ಸನ್ಸ್ ಫ್ಯಾಮಿಲಿ ಲಿಮಿಟೆಡ್,
ಬ್ರೂಸ್ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಸ್ನೇಹಿತರಲ್ಲಿ ಮೊರ್ಖರೂ ಇರಬಹುದು; ಪಂಡಿತರೂ ಇರಬಹುದು; ಆದರೆ, ಮೂರ್ಖನಾದ ಸ್ನೇಹಿತನೊಡನೆ ಸ್ನೇಹವನ್ನು ಬೆಳೆಸುವುದಕ್ಕಿಂತ, ಪಂಡಿತನನ್ನೇ ಶತ್ರುವಾಗಿ ಮಾಡಿಕೊಳ್ಳುವುದು ಶ್ರೇಯಸ್ಕರ. ಏಕೆಂದರೆ, ಮೊದಲನೆಯವನು ನಮ್ಮನ್ನೇ ಕೆಡಿಸುತ್ತಾನೆ; ಎರಡನೆಯವನು ನಮ್ಮನ್ನು ಹಾನಿಯನ್ನು ಬಯಸಲಾರನು.

NAVAYUGA

Founder:—

A. B. SHETTY,

Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೮	೧೪-೧೨-೧೯೫೫	೧೫

ಉದ್ರೇಕದ ಪರಮಾವಧಿ

"ನೆರೆಮನೆಯ ಒಕ್ಕಲೆದ್ದರೆ, ದನಕಟ್ಟಲು ಅವಕಾಶವೊದಗಿತು", ಎಂಬ ಮೊತ್ತನ್ನು ಭಾರತಕ್ಕೆ ಅನ್ವಯಿಸಿ ನಮ್ಮ ನೆರೆ ರಾಷ್ಟ್ರ ಪಾಕಿಸ್ಥಾನದ ದಂಡಿನಾಳಿಕೆಯ ಸೇವಾಧಿಕಾರಿ ಜನರಲ್ ಅಯುಬಖಾನರು ತಮ್ಮಲ್ಕ್ರದ್ಧಭಾವನೆಯನ್ನು ವ್ಯಕ್ತ ಪಡಿಸಿದ್ದಾರೆ. ಭಾರತವು ಪಾಕಿಸ್ತಾನದ ಅಸ್ತಿತ್ವವನ್ನೇ ನಾಶಗೊಳಿಸಲು ಹವಣಿಸಿ ಸೈನ್ಯ ತನ್ನನ್ನು ವಕ್ರ ದೃಷ್ಟಿಯಿಂದ ನೋಡುತ್ತಿದೆ ಎಂಬ ದುರಾಲೋಚನೆಯ ನುಡಿಯನ್ನೂ ಆಡಿದ್ದಾರೆ. ಭಾರತ-ಪಾಕ್‌ಗಳ ಸೀಮಾ ಸಮಸ್ಯೆಗಳು, ಕಾಶ್ಮೀರ ಹಾಗೂ ಕಾಲುವೆ ನೀರು ತಂಟೆಗಳನ್ನು ಎತ್ತಿಕೊಂಡು, ಅವನ್ನು ಬಗೆಹರಿಸಲು ಅಸಾಧ್ಯವೆಂದೂ, ಇವನ್ನು ಭಾರತವು ಮತ್ತಷ್ಟೂ ಹೆಚ್ಚಿಸಲು ಹಾಗೂ ಪಾಕಿಸ್ತಾನವನ್ನು ಬಗ್ಗಬಡಿಯಲು ಬಯಸುತ್ತಿದೆಯೆಂದೂ ಪಾಕ್ ಮಿತ್ರ ರಾಷ್ಟ್ರಗಳಲ್ಲಿ ಪಾಕಿಸ್ತಾನದ ಬಗ್ಗೆ ಪರ್ಭಾವನೆಯನ್ನು ಬೆಳೆಸಲು ಭಾರತವು ಪ್ರಯತ್ನಿಸುತ್ತಿದೆಯೆಂದೂ ಇವೆಲ್ಲವುಗಳ ದುರ್ನಿರೀಕ್ಷಣಾ ಮಾಗಳನ್ನು ತಡೆಗಟ್ಟುವುದಕ್ಕಾಗಿ ಪಾಕಿಸ್ತಾನವು ತನ್ನ ಸರ್ವಸ್ವವನ್ನೂ ಮುಡುವಾಗಿಟ್ಟು ಹೋರಾಡಲು ಸಿದ್ಧವಿದೆಯೆಂದೂ ಗುಡುಗುಡಿಯುದ್ಧಕ್ಕೆ ಮುಂದೊಡ್ಡುವ ತನ್ನ ಅವಕ್ತ ಭಾವನೆಯನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ ಭಾರತೀಯರಿಗೆ ಇದೊಂದು ಹೊಸ ಸಂಗತಿಯಲ್ಲವಾದರೂ ಕಳವಳಕಾರಿಯಾಗಿದೆ. ಭಾರತವಿಂದು ಪ್ರಪಂಚದ ಗಣ್ಯ ದೇಶಗಳಲ್ಲಿ ಒಂದೆಂದು ಗಣಿಸಲ್ಪಡುವುದಾದರೆ, ಅದು ಭಾರತದ ನೀತಿ ಘೋರಣೆಗಳಿಂದಲೇ ಹೊರತು, ಪಾಕಿಸ್ತಾನವನ್ನು ಕೆಣಕುತ್ತಿದೆ ಎಂಬುದರಿಂದಲ್ಲ ಭಾರತದ ನ್ಯಾಯಪ್ರಿಯತೆ, ಶಾಂತಿಪ್ರಿಯತೆಗಳೇ ವಿಶ್ವ ಮಾನ್ಯವಾಗಿ ಮಾಡಿರುತ್ತವೆ. ಭಾರತದ ಜನತೆಯೂ ಕ್ಯಾಂತಿಪೂರ್ವ ಪಾಕಿಸ್ತಾನದ ಜನತೆಯಂತೆಯೇ ಇರುವರೆಂದೆ. ಆಯೂಬರಂದಿದ್ದಾರೆ. ಆದರೆ ಪಾಕಿಸ್ತಾನದ ಸರ್ವಾಧಿಕಾರಿಯು ಸ್ವಾನದಲ್ಲಿವಿಹರಿಸುತ್ತಿರುವ ಆಯೂಬ ಖಾನರ ಅಭಿಪ್ರಾಯದಂತೆ, ಅಲ್ಲಿನ ಜನತೆಯನ್ನು ಹಾಗೂ ರಾಷ್ಟ್ರವನ್ನು ಲಂಚಿಗುಳಿಗಳ ಮತ್ತು ಸ್ವಾರ್ಥಸಾಧಕರ ಕೈಯಿಂದ ರಕ್ಷಿಸುವುದಕ್ಕಾಗಿ ಪ್ರಪಂಚದಲ್ಲಿ ಪಾಕಿಸ್ತಾನದ ಮಾನ ಮರ್ಯಾದೆಗಳನ್ನೂ ಅಸ್ತಿತ್ವವನ್ನೂ ಉಳಿಸುವುದಕ್ಕಾಗಿಯೇ ಸೈನಿಕ ಆಡಳಿತೆಯನ್ನು ಸಾರಿರುವಾಗ, ತನ್ನ ರಾಷ್ಟ್ರದ ಜನತೆಯ ಸೈಜಸ್ಥಿತಿಯನ್ನು ಕಂಡುಕೊಂಡಿರುವರಾದರೂ ಭಾರತದ ಬಗ್ಗೆ ಮಾತ್ರ ಯೋಗ್ಯ ಕಲ್ಪನೆಯಿಲ್ಲವೆಂದು ಹೇಳಲೇ ಬೇಕಾಗಿದೆ.

ಪಾಕಿಸ್ತಾನದ ಹಿತವನ್ನು ಬಯಸುವ, ಪಾಕಿಸ್ತಾನದ ಏಳಿಗೆಯನ್ನು ಹಾರೈಸಿ, ಅದು ಉತ್ತರೋತ್ತರಾಭಿವೃದ್ಧಿ ಯನ್ನು ಅಪೇಕ್ಷಿಸಿ ತನ್ನಂತೆಯೇ ಆಗಬೇಕೆಂದು ಅಹರ್ನಿಶಿ ಇಚ್ಛಿಸುವ, ಆದರ ಸ್ನೇಹವನ್ನೇ ಇದಿರು ನೋಡುತ್ತಿರುವ ಕೆಲವೇ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ. ಪಾಕಿಸ್ತಾನದ ಅಸ್ತಿತ್ವವನ್ನಾಗಲೀ ಅದರ ಆಗು ಹೋಗುಗಳನ್ನಾಗಲೀ ನಾಶಗೊಳಿಸುವ ಇರಾದೆಯೂ ಭಾರತಕ್ಕೆಂದೂ ಇಲ್ಲ; ಈ ರೀತಿಯಲ್ಲಿನ ಪದಾಧಿಕಾರಿಗಳುತಿಳಿದುಕೊಂಡಿದ್ದರೆ, ಅದು ಬುನಾದಿಯಿಲ್ಲದ ಕಲ್ಪನೆ, ಈ ಮಾತುಗಳನ್ನು ಭಾರತೀಯ ಪ್ರಧಾನಿ ಪಂ. ನೆಹರೂರವರು ರಾಜ್ಯಸಭೆಯಲ್ಲಿ ಸವಿವರವಾಗಿ ಆಡಿದ್ದಾರೆ. ಅವಿಭಾಜ್ಯ ಭಾರತವು ಕಾರಣಾಂತರಗಳಿಂದ ವಿಭಜಿತವಾಗಬೇಕಾಗಿ ಬಂದರೂ, ಇನ್ನು ಅವು ಒಂದಾಗಲೇಬೇಕೆಂಬ ವಾದವು ಪುರುಳಿಲ್ಲದುದು; ಭಾರತದ ಮೂಲ ಧ್ಯೇಯಗಳಿಗೆ ಜ್ಯತಿ ತರುವಂಥದು ಎಂಬುದು ನಿರ್ವಿವಾದ. ಪ್ರಭುಬದ ಎಲ್ಲ ರಾಷ್ಟ್ರಗಳೊಡನೆ ಸ್ನೇಹ ಸೌಹಾರ್ದಗಳಿಂದ ಕೂಡಿರಬೇಕೆಂದು ಬಯಸುವಂತೆಯೇ ತನ್ನ ಸಹೋದರ ರಾಷ್ಟ್ರವೆನಿಸಿದ ಪಾಕಿಸ್ತಾನ ದೊಡನೆಯೂ ವರ್ತಿಸಬೇಕು; ಅದೂ ಅಲ್ಲದೆ, ತನ್ನ ಗಡಿ ಪ್ರವೇಶದಲ್ಲಿರುವುದರಿಂದ, ತನ್ನ ಭದ್ರತೆಗಾಗಿಯೂ ಪಾಕಿಸ್ತಾನದೊಡನೆ ಅತ್ಯುತ್ತಮ ವ್ಯವಹಾರದೊಡನೆ ನಡೆದುಕೊಳ್ಳಬೇಕೆಂದು ಭಾರತವು ಬಯಸುತ್ತದೆ, ಅಲ್ಲದೇ ತನ್ನ ಹಾಗೂ ಪಾಕಿಸ್ತಾನಗಳ ನಡುವಣ ಸಂಬಂಧವು ಉತ್ತಮಗೊಳ್ಳಬೇಕೆಂದೇ ಆಲೋಚಿಸುತ್ತದೆ. ಈ ಅಭಿಪ್ರಾಯವನ್ನು ಸಂ. ನೆಹರೂ ಅವರು ಖಚಿತೋಕ್ತಿಯಲ್ಲಾಡಿರುತ್ತಾರೆ.

ಕಳೆದ ಮನಸ್ಸು ಹುಳ್ಳಹುಳ್ಳಗೆಂಬಂತೆ ಭಾರತದ ಪ್ರಗತಿ, ಗೌರವಗಳಿಗೆ ಕರುಬುತ್ತ ಅಧಿಕಾರದಾಹದಲ್ಲಿ ಮತ್ತೇರಿ ಬಾಯ್ಗೆ ಬಂದಂತೆ ಅರಚುತ್ತಿರುವ ಪಾಕಿಸ್ತಾನೀ ಅಧಿನಾಯಕರ ಗುಡಾಟಕ್ಕೆ ಭಾರತವೆಂದೂ ಬೆದರದು. ಬಾಂತ-ಪಾಕಿಸ್ತಾನಗಳ ನಡುವೆ ವೈಮನಸ್ಯವನ್ನು ಹೆಚ್ಚಿಸಬಹುದಾದ ಅನೇಕ ಪ್ರಶ್ನೆಗಳಿಂದಬಹುದು; ಆದರೆ, ಇವೆಲ್ಲಕ್ಕೂ ಮೂಲ ಹೇತು ಪಾಕಿಸ್ತಾನವೇ ಎಂಬುದು ನಿರ್ವಿವಾದ. ಪಾಕಿಸ್ತಾನವು ಬಗ್ಗಾದ ಸೀಟೋ ಮೊದಲಾದ ಸೈನಿಕ ಒಪ್ಪಂದಗಳಲ್ಲಿ ಸಹಭಾಗಿಯಾಗಿದ್ದುದರಿಂದ, ಭಾರತವೂ ತನ್ನ ಸೈನಿಕ ವೆಚ್ಚದ ಪ್ರಮಾಣವನ್ನು ಏರಿಸಿ, ಪ್ರಗತಿ ಪರಯೋಜನೆಗಳಲ್ಲಿ ಕಡಿತ ಮಾಡಬೇಕಾಗಿ ಬಂದಿದೆ. ಅಲ್ಲದೇ ತನ್ನ ಭದ್ರತೆ ಹಾಗೂ ತನ್ನ ಜನತೆಯ ರಕ್ಷಣೆಯನ್ನು ಕಣ್ಣಿನಲ್ಲಿ ಎಣ್ಣೆ ಸುರಿದು ನೋಡಿಕೊಳ್ಳಬೇಕಾಗಿದೆ. ಕಾಶ್ಮೀರದ ಪ್ರಶ್ನೆಯನ್ನು, ಅದೆಂದೋ ಮುಗಿದಂತಿದ್ದರೂ ಮತ್ತೂ ಮತ್ತೂ ಕೆದಕಿನೋಡಿ ಇಕ್ಕಡೆಯ ಸಂಬಂಧವನ್ನು ಕೆಡಿಸುತ್ತಿದೆ. ಗಡಿದುರ್ಘಟನೆಗಳಿಗೆ ಬೆಂಬಲವಿತ್ತು, ಕಾಲವೆ ನೀರ ತಂಟೆಯು ಬಗೆಹರಿಸುವಲ್ಲಿ ವಿಲಂಬವೂಡುತ್ತಿದೆ. ಅಮೆರಿಕೆಯೇ ಮೊದಲಾದ ರಾಷ್ಟ್ರಗಳೊಡನೆ ಸೇನಾ ಕರಂಡಿ ಒಪ್ಪಂದಗಳನ್ನು ಮಾಡಿಕೊಂಡು ಯುದ್ಧೋಪಕರಣಗಳನ್ನೂ ಸೈನ್ಯವನ್ನೂ ಹೆಚ್ಚಿಸುತ್ತಿದೆ. ತನ್ನ ಆದಾಯದ ಬಹ್ವಂಶವನ್ನು ಈ ರೀತಿಯಾಗಿ ಅನಾವಶ್ಯಕವಾಗಿ ಪೋಲು ಮಾಡುತ್ತಿರುವುದರಿಂದಲೇ ಅಲ್ಲಿ ರಾಜಕೀಯ ಬುರುತಗಳು ನಡೆಯುತ್ತಿವೆ ಜನತೆಯಲ್ಲಿಯೂ ಅಭದ್ರತಾ ಭಾವನೆಯು ಬೆಳೆಯುತ್ತಿದೆ. ಇವೆಲ್ಲಾ ಪಾಕಿಸ್ತಾನೀ ನಾಯಕರು ಭಾರತವೇ ಕಾರಣವೆಂದು ಬೊಟ್ಟುಮಾಡಿ ತೋರಿಸುತ್ತಾರೆ. ಭಾರತದ ಮೇಲೆ ಯುದ್ಧ ಹೊಡುವ ಘೋಷಣೆಯನ್ನೂ ಮಾಡುತ್ತಾರೆ. ಕಾಶ್ಮೀರವನ್ನು ಪೋಕ್ಷಕಡಿಸುವ ನೆವನವನ್ನು ಹೂಡಿ ರಣಕೋಲಾಹಲವನ್ನು ಗೆಯ್ಯುತಿದ್ದಾರೆ. ಇಂತಹ ಆಕ್ರಮಣ ಪಥದಲ್ಲಿ ಸಾಗುತ್ತಿರುವ ಪಾಕಿಸ್ತಾನೀ ಅಧಿಕಾರಿಗಳಿಗೆ ಪ್ರಧಾನಿ ನೆಹರೂ ಇತ್ತ ಎಚ್ಚರಿಕೆ ನ್ಯಾಯೋಚಿತ; ಹಾಗೂ ಕಾಲೋಚಿತವೇ ಆಗಿದೆ. ಕಾಶ್ಮೀರದ ಮೇಲೆ ಧಾಳಿ ನಡೆದರೆ, ಅನು ಭಾರತದ ನೆಲೆ ಮೇಲೆ ಮಾಡಿದಂತೆಂದು ಈ ಹಿಂದಿನ ಪಾಕ್ ನಾಯಕರಿಗಿತ್ತ ಎಚ್ಚರಿಕೆಯನ್ನೀಗ ಅವರು ಜನರಲ್ ಆಯೂಬ ಖಾನರಿಗೂ ಇತ್ತಿದ್ದಾರೆ. ತಮ್ಮ ಹಿಂದಿನ ನಾಯಕರು ತಮ್ಮನ್ನವರಿಂದಲೂ ಜಗತ್ತಿನಿಂದಲೂ ಮುಖಭಂಗಿತರಾಗಿರುವುದನ್ನು ಕಂಡೂ ಕಂಡೂ ಅಯೂಬ ಖಾನರು ಉಗುರುಡಿದ ಸಿಂಕದಂತೆ ಗರ್ಜಿಸಿದರೆ, ಆದರಿಂದೇನು ಫಲ?

ಆದುದರಿಂದ, ತಮ್ಮೊಳಗಿನ ವೈವನಸ್ಯಗಳನ್ನು ದೂರವಾಡಿ, ತಮ್ಮ ಶ್ರೇಯೋಭಿವೃದ್ಧಿಯನ್ನೇ ಹಾರೈಸುವ ಸದ್ಬುದ್ಧಿಯು ಪಾಕ್ ನಾಯಕರಿಗೊದಗಲಿ; ಇದರಿಂದ, ಎರಡೂ ರಾಷ್ಟ್ರಗಳಲ್ಲಿ ಶಾಂತಿ ಸುಭಿಕ್ಷೆಗಳು ತಾಂಡವವಾಡಲಿ.

ಸಂಕ್ಷಿಪ್ತ ಸುದ್ದಿಗಳು

ಕಾಂಗ್ರೆಸ್ ಅಧ್ಯಕ್ಷರು

ಕಾಂಗ್ರೆಸ್ ಮಹಾ ಸಭೆಯ ಮುಂದಿನ ಅಧಿವೇಶನವು ಗಯಾದ ಆದಿಯಲ್ಲಿ ನಾಗಪುರದಲ್ಲಿ ಸಮಾವೇಶಗೊಳ್ಳಲಿರುವುದು. ಅದರಲ್ಲಿ ಸ್ವೀಕೃತವಾಗುವ ಗೊತ್ತುವಳಿಗಳಲ್ಲಿ ಕಾಂಗ್ರೆಸ್‌ನ ಅಧಿಕಾರೀ ವರಿಷ್ಠರು ಒಂದೇ ಸವನೆ ಒಂದು ಬಾರಿಗಿಂತ ಹೆಚ್ಚುಸಲ ತಮ್ಮ ಪದದಲ್ಲಿರಬಾರದೆಂಬುದೂ ಒಂದು. ಈ ಗೊತ್ತುವಳಿಯು ಸ್ವೀಕೃತವಾದರೆ, ಈಗಿನ ಅಧ್ಯಕ್ಷ ಶ್ರೀ ಯು. ಎನ್. ಧೇಬಾರರು ತಮ್ಮ ಹುದ್ದೆಯಿಂದ ಹೊರ ಬರುವರು. ಆದರೆ, ಇದಿಗ ಬಂದ ವರ್ತಮಾನದಂತೆ, ಈ ಅಧಿವೇಶನಾ ನಂತರವೂ ಕೆಲ ದಿನಗಳ ವರೆಗೆ ಶ್ರೀ ಧೇಬಾರರೇ ಕಾಂಗ್ರೆಸ್ ಅಧ್ಯಕ್ಷರಾಗಿ ಮುಂದುವರೆಯ ಬೇಕಾಗಬಹುದು. ಕಾಂಗ್ರೆಸ್ ವರಿಷ್ಠ ಮಂಡಳಿಯು ಈ ಸ್ಥಾನಕ್ಕೆ ಯೋಗ್ಯನನ್ನು ಅನುಮತಿದ್ದಾಗಿರಾದರೂ ಆದಕ್ಕೆ ತಕ್ಕ ವ್ಯಕ್ತಿಯಾರೆಂದು ನಾಗಪುರ ಅಧಿವೇಶನಕ್ಕೆ ನೊದಲೇ ಗೊತ್ತುಪಡಿಸಲು ಅಸಾಧ್ಯವಾದುದರಿಂದ, ಈ ಅಭಿಪ್ರಾಯಕ್ಕೆ ಬರಲಾಗಿದೆಯೆಂದು ತಿಳಿದು ಬಂದಿದೆ.

ಗಡಿನಾಡ ದುರಂತಗಳು

ಗಡಿ ಪ್ರಶ್ನೆಯ ಬಗ್ಗೆ ಮೈಸೂರು ಮುಖ್ಯ ಮಂತ್ರಿ ಜತ್ತಿಯವರು ತಮ್ಮ ಅಭಿಪ್ರಾಯವನ್ನು ನವದೆಹಲಿಯಲ್ಲಿ ಹೊರಗೆ ಡಹುದ್ದಾರೆ. ಈಗಿರುವ ಸ್ಥಿತಿಯನ್ನೇ ಕಾಪಾಡಿಕೊಳ್ಳಬೇಕು; ಕೆಲವೊಂದು ಗಡಿಬದಲಾವಣೆಗಳು ಅನಿವಾರ್ಯ ವೆನಿಸಿದೆ, ಪರಸ್ಪರ ವಿಚಾರ ವಿನಿಮಯದಿಂದ ಚಿಕ್ಕ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬಹುದೆಂಬುದೇ ಅವರ ನಿಲುವು. ಗಡಿಯನ್ನು ನಿರ್ಧರಿಸುವಲ್ಲಿ ಗ್ರಾಮವು ಘಟಕವಾಗಬೇಕು; ಮತ್ತು ನೂರರಲ್ಲಿ ಐದರಷ್ಟು ಜನಸಂಖ್ಯೆಯಿಗಬೇಕು ಎಂಬ ತಳಹದಿಯ ಮೇಲೆ ಮುಂಬಯಿಯ ಮುಖ್ಯ ಮಂತ್ರಿ ಶ್ರೀ ಚವ್ಹಾಣರು ಬೆಳಗಾವಿ, ಕಾರವಾರ, ನಿಪ್ಪಾಣಿಗಳ ಪ್ರಶ್ನೆಯನ್ನು ಪುನಃ ಎತ್ತಬೇಕೆಂದು ಪ್ರಯತ್ನ ನಡೆಸಿದ್ದರೂ ಇದನ್ನು ಶ್ರೀ ಜತ್ತಿಯವರು ಬಲವಾಗಿ ವಿರೋಧಿಸಿ ಸಂಸತ್ತು ಸ್ವೀಕರಿಸಿರುವ ರಾಜ್ಯ ಪುನರ್ಘಟನಾ ಆಯೋಗದ ಸಿಫಾರಸುಗಳನ್ನೆ ಅನುಸರಿಸಬೇಕೆಂದು ಕಾಂಗ್ರೆಸ್ ವರಿಷ್ಠ ವರ್ಗದವರನ್ನು ಕೇಳಿಕೊಂಡಿದ್ದಾರೆ

ಘಾನ ಪ್ರಧಾನಿ ನುಕ್ರುಮಾ

ಘಾನಾದ ಪ್ರಧಾನಿ ಶ್ರೀ ನಿಕ್ರುಮಾರವರು ಈ ಶನಿವಾರ ಭಾರತ ಸಂದರ್ಶನಾರ್ಥವಾಗಿ ಆಕ್ರಾದಿಂದ ಹೊರಡಲಿದ್ದಾರೆ. ಅವರಲ್ಲಿ ಸುಮಾರು ಎರಡು ವಾರಗಳ ಸೌಹಾರ್ದಮಯ ಸಂಚಾರವನ್ನು ಕೈಗೊಳ್ಳುವರು ಈ ಪ್ರವಾಸದ ಪೂರ್ವಭಾವಿಯಾಗಿ ಘಾನಾದಲ್ಲಿ ಭಾರತೀಯ ಹೈಕಮಿಶನರರಾದ ಶ್ರೀ ಬಿ. ಕೆ. ಕಪೂರರು ಈಗಾಗಲೇ ನವದೆಹಲಿಗೆ ಆಗಮಿಸಿದ್ದು, ಇವರು ಘಾನೀಯ ಪ್ರಧಾನಿಯವರ ಸಂಚಾರ ಕಾಲದಲ್ಲಿ ಅವರೊಡನೆ ಕೂಡಿಕೊಳ್ಳಲಿರುವರು.

ಬೆನಾರಸ್ ವಿಶ್ವವಿದ್ಯಾಲಯ

ಆಖಿಲ ಭಾರತೀಯರ ಗಮನವನ್ನು ಸೆಳೆದಿದ್ದ ಬೆನಾರಸ್ ವಿಶ್ವವಿದ್ಯಾಲಯದ ದುರಂತವೀಗ ಕೊನೆಗೊಳ್ಳುವ ಹಂತಕ್ಕೆ ಬಂದು ಮುಟ್ಟಿದಂತಿದೆ. ವಿದ್ಯಾರ್ಥಿಗಳ ಕಿಡಿಗೇಡಿತನದಿಂದ ಮುಚ್ಚಲಾದ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ನೈಜ್ಞಾನಿಕ ಕಾಲೇಜು, ಟೆಕ್ನೋಲೊಜಿ ಕಾಲೇಜು ಮತ್ತು ಸೆಂಟ್ರಲ್ ಹಿಂದೂ ಕಾಲೇಜುಗಳನ್ನು ದಶಂಬರ ತಾರೀಕು ೨೦ರಂದು ತೆರೆಯುಲಾಗುವುದೆಂದೂ ಈ ಕಾಲೇಜಿನ ಅಭ್ಯಸನಾಧಿಗಳು ಆದಿನ ತಂತಮ್ಮ ಪ್ರಿನ್ಸಿಪಾಲರೆದುರು ಉಪಸ್ಥಿತರಾಗಬೇಕೆಂದೂ ಒಂದು ಪ್ರಕಟಣೆ ಹೊರಟಿದೆ. ಈ ಮೂರು ಕಾಲೇಜುಗಳಿಗೆ ಸಂಬಂಧಿಸಿದ ವಿದ್ಯಾರ್ಥಿ ನಿಲಯಗಳೂ ತಾ ೧೯ರಿಂದ ವಿಶ್ರಾಂಭವಾಗುವುದೆಂದು ತಿಳಿದು ಬಂದಿದೆ. ಆದರೆ ಉಳಿದ ಕಾಲೇಜುಗಳು ಎಂದು ಪ್ರಾರಂಭವಾಗುವುವೆಂದು ಮಾತ್ರ ತಿಳಿದು ಬಂದಿಲ್ಲ.

ಸ್ವತಂತ್ರಗಿನಿಗೆ ಸಂ. ರಾ. ಸದಸ್ಯತ್ವ

ಫ್ರೆಂಚ್ ಗಿನಿಯಲ್ಲಿ ಹಾಗೂ ಅದರ ವಸಾಹತುಗಳಲ್ಲಿ ಫ್ರೆಂಚ್ ಸಂವಿಧಾನಕ್ಕೆ ಅನುಮತಿಸೂಚಕ ಮತದಾನ ನಡೆದಾಗ ಅದಕ್ಕೆ ವಿರುದ್ಧವಾಗಿ ಫ್ರೆಂಚ್ ಗಿನಿ (ಆಫ್ರಿಕಾ)

ಅಲ್ಲಲ್ಲಿಯ ಸುದ್ದಿಸಾರ

ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಮೈಸೂರಿನ ಮುಮ್ಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ತಾ೨೧ರಂದು ಉದ್ಘಾಟಿಸುತ್ತಾ, ಯಾವ ಮತದ ಆಚರಣೆಯು ಉಲ್ಲಾಸಕರ ನಮ್ಮ ಜೀವನವನ್ನು ಶುದ್ಧಮಾಡಿಕೊಂಡು ಪರಮಾತ್ಮನನ್ನು ಕೂಡುವುದೇ ಗುರಿಯಾಗಿದೆ. ಆದುದರಿಂದ ಒಂದು ಧರ್ಮದ ಪರ ಇನ್ನೊಂದು ಧರ್ಮದವರ ವಿಚಾರದಲ್ಲಿ ಅಸೂಯೆಗೊಳ್ಳಬಾರದು. ಒಂದು ಧರ್ಮದವರು ಇನ್ನೊಂದು ಧರ್ಮದ ತತ್ವಗಳನ್ನು ಪರಿಚಯ ಮಾಡಿಕೊಂಡು ವಿಶ್ವ ಭ್ರಾತೃತ್ವವನ್ನು ಸ್ಥಾಪಿಸಲು ಪ್ರಯತ್ನಿಸಬೇಕಾಗಿದೆ ಎಂದರು. ಶ್ರೀ ಹೊಂಬುಜ ಕ್ಷೇತ್ರದ ಶ್ರೀ ಮದಾಧಿಪತಿಗಳಾದ ಜಗದ್ಗುರು ಸ್ವಸ್ತಿ ಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಮಹಾ ಸ್ವಾಮಿಯವರು ಸಭಾಧ್ಯಕ್ಷತೆ ವಹಿಸಿದ್ದರು. ಅರಿಂಜೆದಲ್ಲಿ ಶ್ರೀ ರತ್ನವರ್ಮ ಹೆಗ್ಗಡೆಯವರು ಸ್ವಾಗತಭಾಷಣ ಮಾಡಿದರು.ಶ್ರೀಕೆ. ಎಸ್. ಧರಣೀಂದ್ರಯ್ಯನವರು ಹಲವರಿಂದ ಬಂದ ಸಂದೇಶಗಳನ್ನೋದಿದರು ಮುಖ್ಯ ಸುಂಕ್ರಿಗಳಿಗೆ ಗಂಧದ ಕರಂಡಕವಲ್ಲಿ ಬಿಸ್ಸನ್ನತ್ತಳೆ ಯೊಂದನ್ನು ಶ್ರೀ ರತ್ನವರ್ಮ ಹೆಗ್ಗಡೆಯವರು ಒಪ್ಪಿಸಿದರು. ಶ್ರೀ ಮಧಭಿನವ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯರು ಶ್ರೀ ರತ್ನವರ್ಮ ಹೆಗ್ಗಡೆಯವರಿಗೆ ಆಶೀರ್ವಚನ ಪತ್ರಿಕೆಯನ್ನು ಒಪ್ಪಿಸಿದರು

ಮಂಗಳೂರು ನಳ್ಳಿನೀರು ಸರಬರಾಜು ಯೋಜನೆಯ ಹೊಸ ಶುದ್ಧಿಕರಣ ಯಂತ್ರವನ್ನು ತಾ ೨೧೦ ರಂದು ಮೈಸೂರು ಮುಖ್ಯ ಮಂತ್ರಿ ಶ್ರೀ ಜತ್ತಿಯವರು ಉದ್ಘಾಟಿಸಿದರು

ಮಂಗಳೂರು ನಗರ ಸಭಾಸದ್ಯ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾನಪತ್ರ ಅರ್ಪಿಸಿದರು ಶ್ರೀ ಜತ್ತಿಯವರು ಉತ್ತರಿಸುತ್ತಾ ಮಂಗಳೂರಿನ ರೂ. 137 ಲಕ್ಷ ವೆಚ್ಚದ ಭೂಗತ ಜರಂಡಿಯೋಜನೆಗೆ ಮೈಸೂರು ಸರಕಾರವು ಒಪ್ಪಿಗೆಯನ್ನಕ್ಕಿಯ್ದು ಆದೆನ್ನು ಒಪ್ಪಿಗೆಗಾಗಿ ಕೇಂದ್ರಸರಕಾರಕ್ಕೆ ಕಳುಹಿಳಿಲಾಗಿದೆಯೆಂದರು.

ಮಂಗಳೂರಿನ ಪರಿಧನಕ್ಕೆ ಸರಕಾರದ ಗ್ರಾಂಟು ಕೊಡುವುದು ಸಾಧ್ಯವಿಲ್ಲವೆಂದೂ ಆ ಪರಿ ಇಡೀ ವೆಚ್ಚವನ್ನು ಸಾಲ ರೂಪವಾಗಿ ಒದಗಿಸಬಹುದೆಂದೂ ಹೇಳಿದರು. ಮೈಸೂರು ಸರಕಾರದ ಚೀಫ್ ಇಂಜೀನಿಯರ್ ಶ್ರೀ ಜಿ. ಎಸ್. ಗಣಪತಿಯವರು ಮಂಗಳೂರು ನಳ್ಳಿನೀರು ಸರಬರಾಜು ಯೋಜನೆಯ ಕುರಿತಾಗಿ ವರದಿಯೊಪ್ಪಿಸುತ್ತಾ, ಈ ಹೊಸ ಪಿಲ್ಟರ್ ಸ್ಥಾಪನೆಯ ಉದ್ಘಾಟನೆಯಿಂದಾಗಿ ಮಂಗಳೂರು ಜನತೆಗೆ ಕುಡ್ಡನೀರು ದೊರಕಿದಂತಾಯಿತು ತಿಂದರು.

ಶ್ರೀ ಜತ್ತಿಯವರು ಕಾಂಗ್ರೆಸ ಕಾರ್ಯಕರ್ತರ ಸಭೆಯಲ್ಲೂ ಭಾಷಣಮಾಡಿದರು. ಶ್ರೀ ಕೆ. ಕೆ. ಸೆಟ್ಟರು ಸ್ವಾಗತಿಸಿದರು ಡಾ|ಕೆ.ಬಾಳಪ್ಪ ಸೆಟ್ಟರು ಧನ್ಯವಾದವಿತ್ತರು ರಾತ್ರಿ ಮುಖ್ಯಮಂತ್ರಿಗಳೂ ಆರೋಗ್ಯ ಮಂತ್ರಿಗಳೂ ಗಣಪತಿ ಹ್ಯಾಸ್ಕೂಲಿನಲ್ಲಿ ನಾಟಕ ಕಲಾ ಮಂಡಲಿಯವರ ಸನ್ಮಾರಂಭದಲ್ಲೂ, ಶರವು ಗಣಪತಿ ದೇವಸ್ಥಾನದಲ್ಲಿ ಯಕ್ಷಗಾನ ಕಾರ್ಯಕ್ರಮದಲ್ಲೂ ಭಾಗವಹಿಸಿದರು. ಶ್ರೀ ಕೆ. ಲಾಲಕೃಷ್ಣ ರಾವ್, ಎಮ್ ಎಲ್ ಸಿ.ಯವರು ಸ್ವಾಗತಿಸಿ ಯಕ್ಷಗಾನಕ್ಕೆ ಇತರ ಕಲೆಗಳಲ್ಲಿ ಪ್ರಾಮುಖ್ಯತೆಯಿದೆ ಎಂದರು.

ಪುತ್ತೂರು ಸಾರ್ವಜನಿಕ ಸಭೆ

ಯಲ್ಲಿ ತಾ. 9ರಂದು ಬೆಳಿಗ್ಗೆ ಶ್ರೀ ಜತ್ತಿಯವರು ಭಾಷಣವೀಯುತ್ತಾ, ಮೊದಲಿನ ಮೈಸೂರು ಸರಕಾರವು ನೇಮಿಸಿದ ಭೂಕಾಯಿದೆ ಸಮಿತಿಯು ಒಪ್ಪಿಸಿದೆ ವರದಿಯನ್ನೆ ಮುಸರಿಸಿ ಪ್ರಕೃತ ಮೈಸೂರು ಸರಕಾರವು ಒಂದು ಭೂಶಾಸನ ಮಸೂದೆನ್ನು ತಯಾರಿಸಿ ಶಾಸನಸಭೆಯ ಮುಂದಿರಿಸಿದೆ. ಕಾಂಗ್ರೆಸ್ ಶಾಸನಸಭಾ ಪಕ್ಷಕ್ಕೆ ಈ ಮಸೂದೆಯ ಕುರಿತು ಚರ್ಚಿಸಿ ಅದರಲ್ಲಿ ಸರಿಯಾದ ಬದಲಾವಣೆಯೆನ್ನು ಮಾಡುವುದಕ್ಕೆ ಸಾಕಷ್ಟು ಅನುಕೂಲವಿದೆ. ಈ ಚರ್ಚೆಯ ಬಳಿಕ ಬಯಸುವದದ ಅಭಿಪ್ರಾಯವನ್ನು ಸುಸರಿಸಿ ಭೂಕಾಯಿದೆಯೆನ್ನು ರಚಿಸಲಾಗುವುದೆಂದು ಆಶ್ವಾಸನೆಯಿತ್ತರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ ಸೆಟ್ಟಿಯವರು ಸಭಾಧ್ಯಕ್ಷತೆ ಸಹಿಸಿದ್ದರು. ಶ್ರೀ ವಿಠಲದಾಸ ಸೆಟ್ಟರು ಸ್ವಾಗತಿಸಿದರು ಶ್ರೀ ಎ ಭೀಮ ಭಟ್ಟರು ಸುನಸಿಯೊಂದನ್ನು ಒಪ್ಪಿಸಿದರು ಡಾ ಮುಸಸ್ಸಾದರು ಧನ್ಯವಾದವಿತ್ತರು ಈ ಸನ್ಮಾರಂಭಕ್ಕೆ ಆರೋಗ್ಯ ಮಂತ್ರಿ ಡಾ. ಕೆ ಕೆ ಹೆಗ್ಡೆ ಮತ್ತು ಶ್ರೀ ದಿನಪಯೂಳು ನಾಯ್ಡು, ಎಮ್. ಎಲ್ ಎ. ಆಗಮಿಸಿದ್ದರು.

ಕಾರ್ಕಳ ಬೋರ್ಡು ಹ್ಯಾಸ್ಕೂಲಿನ ಸಭಾ ಭವನವನ್ನು ತಾ೨೦ ರಂದು ಸುಮುಖಮಂತ್ರಿ ಶ್ರೀ ಜತ್ತಿಯವರು ಉದ್ಘಾಟಿಸಿದರು ಶ್ರೀ ಬಿ ಎಸ್. ಭಾಸ್ಕರಶೆಟ್ಟಿಗಳು ಸ್ವಾಗತ ಭಾಷಣ ಮಾಡಿದರು ಶ್ರೀ ಕೆ ಪಿ ಮುಕುಂದಪ್ರಭುಗಳು ಮನವಿ ಗಳನ್ನೊಪ್ಪಿಸಿದರು ಜಿಲ್ಲಾಬೋರ್ಡಿನ ಅಧ್ಯಕ್ಷ ಶ್ರೀ ಬಿ ಮಂಜಯ್ಯಹೆಗ್ಡೆಯವರು ಸಭಾಧ್ಯಕ್ಷತೆ ವಹಿಸಿದ್ದರು. ಶಾಲಾ ಹೆಡ್ಮಾಸ್ಟರ್ ಶ್ರೀ ಎಸ್. ಆರ್. ಆಚಾರ್ಯರು ಧನ್ಯವಾದಗಳನ್ನಿತ್ತರು.

ಮಾಣಿಪಾಲಕ್ಕೆ—ಮೈಸೂರು ಮುಖ್ಯಮಂತ್ರಿ ಶ್ರೀ ಜತ್ತಿಯವರೂ, ಆರೋಗ್ಯ ಸಚಿವ ಡಾ| ಕೆ. ಕೆ ಹೆಗ್ಡೆಯವರೂ ತಾ 10 ರಂದು ಸಮರ್ಪಣೆ ಆಗಮಿಸಿ ಅಲ್ಲಿಯ ಕೆಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಸಂದರ್ಶಿಸಿ ತಮ್ಮ ಮೆಚ್ಚುಗೆಯನ್ನು ನ್ಯಕ್ತಪಡಿಸಿದರು.

ಎಮ್ಜೆ ಎಮ್. ಕಾಲೇಜಿನಲ್ಲಿ ತಾ. 10ರಂದು ಪೂರ್ವಾಹ್ನ ಆರೋಗ್ಯ ಸಚಿವ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಮುಖ್ಯ ಸಚಿವರು ಅಲ್ಲಿಯ ಶ್ರೀ ಉಪೇಂದ್ರ ಪೈ ಮೆಮೋರಿಯಲ್ ಕಾಮರ್ಸ್ಸು, ಎಜ್ಯಿನ ಸ್ಟ್ರೇಶರ್ ಜ್ಞೋಕಿನ ಶಂಕರ ಸ್ಥಾಪನೆ ಗೈದರು. ಕಾಲೇಜು ಕರೆಸ್ಪಾಂಡೆಂಟ್ ಶ್ರೀ ಟಿ ಎ. ಪೈಗಳು ಸ್ವಾಗತಿಸಿದರು. ಮುಖ್ಯ ಮಂತ್ರಿಗಳು ಮಾತನಾಡುತ್ತಾ, ಉಡುಪಿಯಲ್ಲಿ ನಿಶ್ಚಯದ್ಯಾನಿಲಯ ಸ್ಥಾಪನೆಯು ಅನುಕೂಲ ವಾತಾವರಣವಿದೆಯೆಂದೂ ಈ ಕಾರ್ಯಗನ್ನಡಿಸಲು ಶ್ರೀ ಪೈಗಳು ಮುಂದಾಗಬೇಕೆಂದೂ ಕೇಳಿಕೊಂಡರು. ಸರಕಾರವು ಕೂಡಾ ಈ ಕೆಲಸಕ್ಕೆ ಸಹಾಯ ನೀಡುವುದಾಗಿ ತಿಳಿಸಿದರು ಪ್ರಿನ್ಸಿಪಾಲ್ ಶ್ರೀ ಎಚ್ ನಂದರಂಗಯ್ಯನವರು ಧನ್ಯವಾದಗಳನ್ನಿತ್ತರು

ಆಷ್ಟಮತೆಗಳ ಅಭಿನಂದನೆ ಪತ್ರ ಅರ್ಪಣೆ ಮುಮ್ಮಂತ್ರಿ ಶ್ರೀಜತ್ತಿಯವರು ಶ್ರೀಕೃಷ್ಣಮಠಕ್ಕೆ ಬಂದು ಸ್ವಾಮಿದರ್ಶನ ಮಾಡಿ ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾತೀರ್ಥ ಸ್ವಾಮಿಗಳವರಿಂದ ಫಲಮಂತ್ರಾಕ್ಷತೆಯನ್ನು ಪಡೆದರು. ವಸಂತ ಮಹಲಿನಲ್ಲಿ ಎಂಟು ಮಠಗಳ ಪರವಾಗಿ ಪ್ರಿನ್ಸಿಪಾಲ ಶ್ರೀ ಕಾಲಗಿ ಶೇಷಾಚಾರ್ಯರು ಅಭಿನಂದನಾ ಪತ್ರವನ್ನೊಪ್ಪಿಸಿದರು

ಉಡುಪಿ ನಗರ ಸಭೆಯ ಮಾನಪತ್ರವನ್ನು—ತಾ. 10ರಂದು ನಗರ ಸಭಾ ಪತಿ ಶ್ರೀ ಕೆ ಕೆ. ಹೆಗ್ಡೆಯವರು ಮುಖ್ಯ ಮಂತ್ರಿ ಶ್ರೀ ಜತ್ತಿಯವರಿಗೂ ಆರೋಗ್ಯ ಮಂತ್ರಿ ಡಾ|| ಕೆ. ಕೆ; ಹೆಗ್ಡೆಯವರಿಗೂ ಒಪ್ಪಿಸಿದರು. ಮುಖ್ಯಮಂತ್ರಿಗಳು ಉತ್ತರಿಸುತ್ತಾ ಉಡುಪಿಯು ಹಲವಾರು ಕೈಕ್ಷಣಿಕ ಚಟುವಟಿಕೆಗಳ ಜನ್ಮಸ್ಥಾನವಾಗಿದ್ದೂ ಈ ವಿದ್ಯಾ ನಗರವು ಒಂದು ವಿಶ್ವವಿದ್ಯಾಲಯವಂತಿದೆ ಎಂದು ಮುಂತಾಗಿ ಹೇಳಿದರು ಭೂ ಕಾಯಿದೆ ಮಲ್ಪಿ ಬಂದರ ಇತ್ಯಾದಿ ಕುರಿತು ಪ್ರಸ್ತಾಪಿಸಿ ಶಕ್ಯ ವಿದ್ದುದನ್ನು ಮಾಡಲಾಗುವುದೆಂದರು. ಡಾ| ಪಿ. ಬಿ. ಆಚಾರ್ಯರು ಧನ್ಯವಾದಗರ್ಪಿಸಿದರು

ಕಲ್ಯಾಣಪುರ, ಮಾಬುಕಳ ಸೇತುವೆಗಳಿಗೆ—ತಾ. 10ರಂದು ಮುಖ್ಯ ಮಂತ್ರಿ ಶ್ರೀ ಜತ್ತಿಯವರು ಶಂಕುಸ್ಥಾಪನೆ ಗೈದರು. ಆರೋಗ್ಯ ಸಚಿವ ಡಾ. ಕೆ. ಕೆ. ಹೆಗ್ಡೆಯವರು ಸಭಾಧ್ಯಕ್ಷತೆ ವಹಿಸಿದ್ದರು. ಚೀಫ್ ಇಂಜಿನಿಯರ್ ಶ್ರೀ ಗಣಪತಿಯವರು ವರದಿಯನ್ನೋದಿದರು. ಶ್ರೀ ಅಡ್ಡೆಯವರು ಧನ್ಯವಾದ ವಿತ್ತರು.

ಕಾಯಿದೆ ಸಚಿವ ಶ್ರೀ. ಸುಬ್ರಹ್ಮಣ್ಯಂ—ಆವರು ತಾ. 11ರಂದು ಉಡುಪಿಯ ಲಾ ಕಾಲೇಜಿಗೆ ಸಂದರ್ಶನವಿತ್ತು, ಆ ಲ್ಲಿಯ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ವಕೀಲ ವೃತ್ತಿಯು ಜನತೆಯ ಗೌರವಕ್ಕೆ ಪಾತ್ರವಾದದರಿಂದ ವಕೀಲರೆಲ್ಲರೂ ಸತ್ಯಸಂಧರಾಗಬೇಕೆಂದು ಹೇಳಿದರು ಅರಂಭಗೆಟ್ಟ ಮಟ ರಾಷ್ಟ್ರದ ಪೈಗಳು ಸ್ವಾಗತಿಸಿರು ಅಂತ್ಯದಲ್ಲಿ ಕಾಲೇಜು ಪ್ರಾಂಶುಪಾಲ ಅಧ್ಯಕ್ಷ ಶ್ರೀ ಚಂದ್ರಶೇಖರಯ್ಯನವರು ಧನ್ಯವಾದಗರ್ಪಿಸಿದರು

ಬಳಿಕ ಮುಂತ್ರಿಗಳು ಮಲ್ಪೆಗೆ ಹೋಗಿ ಅಲ್ಲಿಯ ಬಂದರವನ್ನು ಪರಿಶೀಲಿಸಿ ಶ್ರೀ ಕೃಷ್ಣ ಮಠಕ್ಕೆ ಬಂದರು ಪರ್ಯಾಯ ಮಠದ ಕಡೆಯಿಂದ ಶ್ರೀ ರಾಜಗೋಪಾಲ ಆಚಾರ್ಯರು ಸಚಿವರಿಗೆ ಸೂಮಾರೆ ಹಾಕಿ ಸ್ವಾಗತಿಸಿದರು ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ಸನ್ನಿಧಾನದ ಫಲಮಂತ್ರಾಕ್ಷತೆ, ಪ್ರಸಾದವಿತ್ತು ಆಶೀರ್ವದಿಸಿದರು

ನಂತರ ಶ್ರೀ ಸುಬ್ರಹ್ಮಣ್ಯಂರವರು ಕಾಂಗ್ರೆಸ್ ಕೆಲಸಗಾರರ ಸಭೆಗೆ ಆಗಮಿಸಿದಾಗ ಶ್ರೀ ಟಿ ಎ. ಪೈಗಳು ಸ್ವಾಗತ ನೀಡಿದರು. ಮುಂಬರುವ ಮುನಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಭಾಗವಹಿಸುವ ಆವಶ್ಯಕತೆಯನ್ನು ತಿಳಿಸಿದರು, ಮಧ್ಯಾಹ್ನ ಮಣಿಪಾಲಕ್ಕೆ ಹೋಗಿ ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಸಂದರ್ಶಿಸಿ ಡಾ. ಟಿ ಎಸ್. ಎ. ಪೈಗಳಲ್ಲಿ ಭೋಜನ ತೀರಿಸಿದರು.

ಆಪರಾಹ್ನ ಉಡುಪಿಗೆ ಬಂದು ಮುನ್ಸಿಫ್ ಕೋರ್ಟಿಗೆ ಭೇಟಿಯಿತ್ತರು. ಬಳಿಕ ಮುನಸಿಪಲ್ ಬುನಾದಿ ಶಿಲ್ಪಣ ಎಲಿಪೆಂಟರಿ ಶಾಲೆಯಲ್ಲಿ ನಗರಸಭೆಯು ಪರವಾಗಿ ಅವರ ಚೇರ್ಮೆನ್ ಶ್ರೀ ಕೆ ಕೆ ಪೈಗಳು ಅರ್ಪಿಸಿದ ಮಾನಪತ್ರವನ್ನು ಸ್ವೀಕರಿಸಿದರು ಅದರಲ್ಲಿ ಪ್ರಜಾ ಪ್ರಭುತ್ವದ ಯಶಸ್ಸಿಗೆ ಸ್ಥಾನಿಕ ಸರಕಾರಗಳ ಭದ್ರತೆ ಅವಶ್ಯ. ಈಗಿರುವ ಮುನ್ಸಿಪಲ್ ಕಾನೂನು ಬದಲಾಗಬೇಕು ಸರ್ಕಾರದಿಂದ ನಗರಭಿಗೆ ಬರತಕ್ಕ ಸರಕಾರಿ ಬಾಲಿ ಜಾಗದ ತೆರಿಗೆ ಹಣ ಪಾವತಿಯಾಗಬೇಕು ಇತ್ಯಾದಿ ವಿಷಯಗಳು ಸೂಚಿಕಲ್ಪಟ್ಟವ್ವವು.

ಮುಂತ್ರಿಗಳು ಉತ್ತರಿಸುತ್ತಾ, ರಾಜ್ಯದ ಎಲ್ಲಾ ನಗರಸಭೆಗಳಿಗೆ ಆನ್ವಯಿಸುವಂತಹ ಹೊಸ ಮುನಸಿಪಲ್ ಕಾನೂನು ಇನ್ನೆ ತಡ ಪರಿಷತ್ತಿನಲ್ಲಾಗಿ ಜ್ಯಾರಿಗೆ ಬರಲಿರುವುದು ನಗರ ಸಭೆಯು ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅಕ್ಕ್ಯತೆರಿಗೆ ಹೇರುವುದು ಸೂಕ್ತವಿದೆ ಎಂದು ಮುಂತಾಗಿ ಹೇಳಿ ಬರಲಿರುವ ಮುನಿಸಿಪಲ್ ಚುನಾವಣೆ ಶಾಂತ ವಾತಾವರಣದಲ್ಲಿ ನಡೆಯಬೇಕೆಂದರು. ಪ್ರೆಸಿಡೆಂಟ್ ಮೇನ್ ಶ್ರೀ ಪಿ. ವಿ. ಆಚಾರ್ಯರು ಧನ್ಯವಾದವಿತ್ತರು. ಬಳಿಕ ಶ್ರೀ ಯು ಎಸ್. ನಾಯರ್ ಎಮ್. ಎಲ್. ಎ ಆವರಲ್ಲಿ ಉಪಾಹಾರ ಸ್ವೀಕರಿಸಿದರು.

ಭೂಕಾಯಿದೆಯೂ ಅಳಿಯ ಸಂತಾನದವರೂ—ಅಳಿಯ ಸಂತಾನ ಕುಟುಂಬದವರ ಪರವಾಗಿ ಶ್ರೀಮತಿಯರಾದ ಸೀರಾ ಸೆಟ್ಟಿ, ಕಮಲಾ ಎಸ್. ಆಳ್ವ ಮತ್ತು ಕಲ್ಯಾಣಿ ಡಿ. ಸೆಟ್ಟಿಯವರು ಮೈಸೂರು ಮುಖ್ಯ ಮಂತ್ರಿ ಶ್ರೀ ಜತ್ತಿಯವರನ್ನು ನೂಂಗಳೂರಲ್ಲಿ ಭೇಟಿ ಮಾಡಿ ಭೂಶಾಸನ ಕಾಯಿದೆಯನ್ನು ಇನ್ನು 15 ವರ್ಷಗಳ ವರೆಗೆ ಅಳಿಯ ಸಂತಾನದವರಿಗೆ ಲಾಗಾಯಿದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಂಡರು, ಶ್ರೀ ಬಿ. ಎಸ್. ಭಾಸ್ಕರ ಶೆಟ್ಟಿಗಳು ಅಳಿಯ ಸಂತಾನಿಗರ ಪರವಾಗಿ ಅರ್ಪಿಸಿದ ಮನವಿಯಲ್ಲಿ ಪ. ಕ. ಜಿಲ್ಲೆಯ ಅಳಿಯ ಸಂತಾನಿಗರಲ್ಲಿನ ಪ್ರತ್ಯೇಕ ಒಂದು ಕಟ್ಟಡಿತಿಯನ್ನು ಪರಿಶೀಲಿಸಿ ಅದಕ್ಕನು ಗುಣವಾಗಿ ಯೋಗ್ಯ ರೀತಿಯು ಭೂಶಾಸನವನ್ನು ತಯಾರಿಸಬೇಕೆಂಬ ಈಜಿಗೆ ಶಾಸನ ಸಭೆಯ ಮುಂದಿರಿಸಲಾದ ಭೂಶಾಸನ ಮಸೂದೆಯಂತೆ ಕೃಷಿಕರನ್ನು ಬರೇ ಒಬ್ಬ ಕೂಲಿಗಿಂತ ಲೂ ಬಡವನನ್ನಾಗಿ ಮಾಡತಲು ನರ್ಧರಿಸಲಾಗಿದೆ ಇದು ರಾಷ್ಟ್ರದ ಕೃಷಿ ಉತ್ಪಾದನೆಯ ವೈಪ್ಲವಿಯುಂಟಲೂ ರಾಷ್ಟ್ರಘಾತುಕವಾದ ಕಾರ್ಯವಾಗಿದೆ ಎಂದು ಹೇಳಲಾಗಿತ್ತು.

ಪೊಳಲಿಯಲ್ಲಿ ಜಾನುವಾರು ಪ್ರದರ್ಶನ ಮತ್ತು ಜಾನುವಾರು ಸಂತೆಯನ್ನು ತಾ 11ರಂದು ಪುತ್ತೂರು ವಿನಿಜಾ ಅಸಿಸ್ಟಾಂಟ್ ಕಮಿಶನರ್ ಶ್ರೀ ಪಿ ತಿಮ್ಮಪ್ಪ ಸೆಟ್ಟಿರು ಉದ್ಘಾಟಿಸಿದರು. ಶ್ರೀ ಎ ಎನ್ ಬಲ್ಲಾಳರು ಮುಖ್ಯ ಅತಿಥಿಗಳನ್ನೆ ಸ್ವಾಗತಿಸಿದರು. ಕೃಷಿ ಮತ್ತು ಪ್ರದರ್ಶನವನ್ನು ಶ್ರೀ ಆನಂದರವರು ಉದ್ಘಾಟಿಸಿದರು. ಎಚ್ಕೋರ್ಟ್ ಶ್ರೀ ಗಂಗಾಧರಮಾಸರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ನೂಲ್ಕಿ ಪರಮೇಶ್ವರಪ್ಪಾತೆ ಕಾರ್ಯೋಚಿತ ನುಡಿಗಳನಾಡಿದರು. ಉದ್ಘಾಟಕರೂ ಸಭಾಧ್ಯಕ್ಷರೂ ಉಪದೇಶಪರ ಮಾತುಗಳನ್ನಾಡಿ ಜನ ಜಾಗೃತಿಮನ್ನುಂಟು ಮಾಡಿದರು

ಉಡುಪಿಯಲ್ಲಿ ಪಶುವೈದ್ಯ ಶಾಲಾ ಕಟ್ಟಡಯೋಜನೆಯನ್ನು ಕಾರ್ಯಗತಗೊಳಿಸಲು ತಾ 12 ರಂದು ಸ್ಥಳೀಯ ಸಂಸ್ಥೆಕ ಕಾರ್ಯಚಿಣಿಯಲ್ಲಿ ಶ್ರೀ ಅದಮಾರು ಸ್ವಾಮಿಗಳವರ ನೇತೃತ್ವದಲ್ಲಿ ಸಭೆಯೊಂದು ಜರಗಿ ವಿಚಾರವಿನಿಮಯ ನಡೆಯಿತು. ಆಸ್ಪತ್ರೆಯ ಕಟ್ಟಡದ ವಿಚಾರ ಕಾರ್ಯಕ್ರಮ ಕೈಕೊಳ್ಳಲು ಶ್ರೀ ಅದಮಾರು ಸ್ವಾಮಿಗಳವರು, ಅಧ್ಯಕ್ಷರು, ಶ್ರೀಗಳಾದ ಯು ಎಸ್. ನಾಯಕ್ಕ್, ಎಮ್ ಎಲ್. ಎ ಮತ್ತು ಟಿ ಎ ಪೈ ಉಪಾಧ್ಯಕ್ಷರು, ಡಾ|ಪಿ. ಜಿ ಆಚಾರ್ಯ, ಕೋಶಾಧಿಕಾರಿ ಶ್ರೀ ಎ ಜೆ. ಆಳ್ವ ಕಾರ್ಯದರ್ಶಿ, ಮತ್ತಿತರರು ಸದಸ್ಯರಾಗಿರುವ ಸಮಿತಿಯೊಂದು ರಚಿಸಲ್ಪಟ್ಟಿತು.

ಪರ್ಕಳದಲ್ಲಿಆರೋಗ್ಯ ಸಚಿವ ಡಾ|ಕೆ. ಕೆ. ಹೆಗ್ಡೆಯವರನ್ನು ತಾ 13ರಂದು ಸ್ವಾಗತಿಸಿ ಸತ್ಕರಿಸುವ ಸಮಾರಂಭವು ಶ್ರೀ ಟಾಳ್ಪಟ್ಟಿ ದಿಣ್ಣಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಜರಗಿತು ಭೂಸುಧಾರಣೆ ಮಸೂದೆಯು ಅನ ಸರವಲ್ಲಿ ಜ್ಯಾರಿಗೊಳಿಸವೆ, ನ್ಯಾಯರಹಿತವಲ್ಲಿ ಆಗಬೇಕೆಂದು ಸಭಾಧ್ಯಕ್ಷರು ಮಂತ್ರಿಗಳ ಗಮನಕ್ಕೆ ತಂದರು.

ವಿವಾಹ ಸಮಾರಂಭ—ಪುತ್ತೂರು ಅಸಿಸ್ಟಾಂಟ್ ಕಮಿಶನರ್ ಶ್ರೀ. ಪಿ ಎಸ್. ತಿಮ್ಮಪ್ಪ ಸೆಟ್ಟರ ಪುತ್ರಿ ಕುಮಾರಿ ಆಕಾಲತಳ ಸ್ಥ ಭಗ್ವಾತಿಯ ಶ್ರೀ. ಮಂಜಯ್ಯನವರ ಪುತ್ರ ಚಿ। ಗೋಪಿನಾಥರು ತಾ. 14ರಂದು ಮಂಗಳೂರಿನ "ಡೋನಾಬೋಸ್ಕೊ ಹಾಲಿ" ನಲ್ಲಿ ವಿಜೃಂಭಣೆಯಿಂದ ವಿವಾಹವಾದರು ಈ ಸಮಾರಂಭಕ್ಕೆ ಊರ ಪರವೂರ ಬಂಧುಮಿತ್ರರು ಅಧಿಕ ಸಂಖ್ಯೆಯಲ್ಲಿ ಬಂದು ನವೂವರರನ್ನು ಆಶೀರ್ವದಿಸಿದರು.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ಪಾಕಿಸ್ತಾನ

(೫ನೇ ಪುಟದಿಂದ)

ಪಾಕಿಸ್ತಾನ ಕಲ್ಪನೆಯು ನೆನಸಾಗಿ ಪರಿಣಮಿಸಿದಾಗ, ಬಲೂಚೀ ಗಾಂಧೀಯವರು ಪಾಕ್ ಮತ್ತು ಪಾಕ್ ಜನತೆಯ ಮೇಲೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿದರು. ಆದರೆ, ಪಾಕ್ ಶಾಸಕರಿಗಿದು ಸಮಾಪ್ತನೆಂದು ತೋರದೆ ೧೯೪೭ನೆ ಇಗಸ್ಟ್ ೬ರಂದು ಇವರನ್ನು ಕೈದು ಮಾಡಿ ಸುಮಾರು ಏಳು ವರ್ಷಗಳ ಸೆಜೆಗೆ ಗುರಿಪಡಿಸಿ ೧೯೫೫ನೆ ಮಾರ್ಚ್ ೨೨ರಂದು ಬಿಡುಗಡೆಮಾಡಿತು.

ಅಷ್ಟರ ವರೆಗೆ ಪಶ್ಚಿಮ ಪಾಕಿಸ್ತಾನವನ್ನು ಏಕ ಘಟಕವಾಗಿ ಮಾಡುವ ಚರ್ಚೆಯು ಬಲವತ್ತರವಾಗಿತ್ತು. ಬಲೂಚಿಸ್ತಾನದ ಗಾಂಧಿ ಈ ಅಭಿಪ್ರಾಯವನ್ನು ಕಟುವಾಗಿ ವಿರೋಧಿಸಿದರು. ೧೯೫೨ರ ಜುಲಾಯಿಯಲ್ಲಿ ತನ್ನ ಅಹಿಂಸಾ ವಿಶ್ವಾಸವನ್ನು ಪ್ರಕಟಿಸುತ್ತಿರುವಾಗ, ಅಕ್ಟೋಬರ ದಲ್ಲಿ ಅವರನ್ನು ಪುನಃ ಸೆರೆಹಿಡಿಯಲಾಯಿತು. ಭಾರತೀಯ ಸ್ವಾತಂತ್ರ್ಯ ಸಮರದಲ್ಲಿ ಇವರ ಸಂಗಾತಿಗಳಾಗಿ ಆಗ ಪಾಕಿಸ್ತಾನದ ಪ್ರಧಮ ಮುಖ್ಯ ಮಂತ್ರಿ ಯಾಗಿದ್ದ ಡಾ. ಖಾನ್ ಸಾಹೇಬರ ಬಾಯಿಯಿಂದಲೂ ರಾಜ ದ್ರೋಹಿಯೆಂಬ ಕಟು ವಾಕ್ಯವನ್ನು ಕೇಳುವ ಭಾಗವಾಗಿತ್ತು. ವ್ಯಕ್ತಿಗತ ಸ್ವಾತಂತ್ರ್ಯದ ಕೇಳಿಕೆಯ ಮೇರೆಗೆ ಫೆಬ್ರವರಿ ೧೯೫೫ರಲ್ಲಿ ಅವರನ್ನು ಪುನಃ ಬಿಡುಗಡೆ ಮಾಡಲಾಯಿತು.

ಇವರನ್ನು ಬಿಡುಗಡೆ ಮಾಡಿ ನಾಲ್ಕು ತಿಂಗಳೂ ಕಳೆದಿರಲಿಲ್ಲ. ಅಷ್ಟರಲ್ಲಿಯೇ ವಿಭಿನ್ನ ಜಾತಿಗಳಲ್ಲಿ ಪಾರಸ್ಪರಿಕ ದ್ವೇಷ ಪ್ರಸಾರಗೈದೆಂಬ ಆರೋಪದ ಮೇಲೆ ಜೂನ್ ೫ರಲ್ಲಿ ಮೂರನೆಯ ಬಾರಿಗೆ ಇವರನ್ನು ಬಂಧಿಸಿ ಆರೂವರೆ ತಾಸಿರ ರೂಪಾಯಿ ದುಡದ ಶಿಕ್ಷೆಯಿಂಡಲಾಯಿತು.

ಈ ಬಾರಿ ಪುನಃ ಏಳು ವರ್ಷಗಳ ಕಠಿಣ ಸೆಜೆಯಾದರು ಗುರಿಯಾಗಿದ್ದಾರೆ. ಇವರ ಮೇಲಿನ ಆರೋಪವು ಸಿದ್ಧವಾಗಿಲ್ಲದಿರುವಾಗ ರಾಜಕಾರಣದ ಸುತಂತ್ರದಿಂದಲೇ ಈ ಗತಿಯು ಒಂದಿತೆಂದು ತಿಳಿಯಬಹುದು. ಆದರೆ, ಬಲೂಚೀ ಗಾಂಧಿಯವರನ್ನು ಪಾಕ್ ಸರಕಾರವು ನೋಡಿಕೊಂಡ ಕ್ರಮವನ್ನು ಈಕ್ಷಿಸುವಾಗ, ಶ್ರೀ ಸಮದ ಖಾನರ ಹಿಂಬಾಲಕರನ್ನು ಬಡಿಪಿಟ್ಟಿಸಿ ಜಾಗ್ರತರನ್ನಾಗಿ ಮಾಡುವುದರಲ್ಲಿ ಈ ಘಟನೆ ಪರಿಣಾಮಕಾರಿ ಪರಿಣಾಮವನ್ನು ಮಾಡುವುದಂತೂ ದೃಢ ನಿಶ್ಚಯ. ಎಲ್ಲವುಗಳಿಗಿಂತಲೂ ದೇಶವನ್ನು ಲಂಚಿಂಗುಳಿಗಳ ಕೈಯಿಂದಲೂ ಸ್ವಾರ್ಥಿಗಳ ದವಡೆಗಳಿಂದಲೂ ಉಳಿಸಿ ಆದರ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೋಸ್ಕರ ದಂಡಿನಾಳಿಕೆಯನ್ನು ಸಾರಿ, ಅದರ ಅಭಿನೇತಾರರಾದ ಮೇ. ಜ. ಅಯೂಬ ಖಾನರು ಹಾಗೂ ಅದರ ಸೌಖ್ಯವಾಕ್ಯಗಳ ಸತ್ಯ ಪ್ರದರ್ಶನವಾಗಿ ಮುಖವರ್ಣ ಬಹಿರಂಗವಾಗಿ ತೋರ್ಪಡಿಸುವಂತಾಯಿತು. ಆದರೆ, ಜನರಲ್ ಅಯೂಬ ಖಾನರು ಸಿಟ್ಟುಗೆದ್ದ ನಾಗರ ಹಾವಿನ ಆಗಿಯುವ ಮಹಾ ಕಾರ್ಯವನ್ನು ಸಾಧಿಸಿ ಹೊರಟಿದ್ದಾರೆಂದು ಮಾತ್ರ ತಿಳಿದಿರಲಾರರು.

ಮಿನುಗಾರಿಕೆ

ಮಿನುಗಾರಿಕೆಯಲ್ಲಿ ನೂತನ ಸುಧಾರಣೆ

ನಾರ್ವೆ ಸರಕಾರದ ಸಹಕಾರದಿಂದ

ಕೇರಳ ಕರಾವಳಿಯಲ್ಲಿ ನವೋತ್ಸಾಹ

ಕೇರಳದ ಕರಾವಳಿ ಪ್ರದೇಶದಲ್ಲಿ ಇದೀಗ ಅಂಬಿಗರ ಸಡಗರ ನೋಡಬೇಕು! ಅವರ ಉದ್ಯಮದಲ್ಲಿ ಹೊಸ ಹೊಸ ವಿಧಾನಗಳು ಇವೇ ಡಿಸೆಂಬರ್ ೭ರಿಂದ ವ್ಯವಹಾರಕ್ಕೆ ಬಂದಿವೆ. ಯಂತ್ರೋಪಕರಣಗಳಿಂದ ಮಿನುಗಾರಿಕೆಯನ್ನು ಸುಲಭಗೊಳಿಸುವುದು ಮತ್ತು ಉದ್ಯಮವನ್ನು ಆರ್ಥಿಕ ದೃಷ್ಟಿಯಿಂದ ಲಾಭದಾಯಕಗೊಳಿಸುವುದು ದೋಣಿ ಕಟ್ಟುವ ಕಲೆ ಕಲಿಸುವುದು, ಮಿನುಗಳು ಕೆಡದಂತೆ ರಕ್ಷಿಸಿಡಲು ಮಂಜಿನ ಕೋಣೆಗಳನ್ನು ನಿರ್ಮಿಸುವುದು—ಇತ್ಯಾದಿ ಸೌಕರ್ಯಗಳು ಅವರಿಗೀಗ ದೊರಕಿವೆ. ಈ ವ್ಯವಸ್ಥೆ ಕಾರ್ಯರೂಪಕ್ಕೆ ಬರುತ್ತಿರುವುದು ನಾರ್ವೇಜಿಯನ್ ಸರ್ಕಾರದ ಸಕಾರಾದಿಂದ ಎಂಬುದು ಇನ್ನೊಂದು ವೈಶಿಷ್ಟ್ಯ; ಭಾರತ ನಾರ್ವೇಜಿಯನ್ ಮಿನುಗಾರಿಕೆ ಯೋಜನೆಯನ್ನು ಡಿಸೆಂಬರ್ ೭ರಂದು ನಾರ್ವೆಯ ಪ್ರಧಾನಿ ಶ್ರೀ ಗೆರ್ಹಾರ್ಡ್‌ಸೆನ್‌ರವರು ಉದ್ಘಾಟಿಸಿದರು.

ಹೊಸ ವಿಧದ ಯಾಂತ್ರಿಕ ದೋಣಿಗಳು

ಎಂಟ್ಟಿಪ್, ಐ. ಎನ್. ಪಿ. ಟೈಪ್ ಎಂಬ ಹೆಸರಿನ 'ನೂಡಿಯಂ' ಆಕಾರದ ದೋಣಿಗಳನ್ನು ಹತ್ತಿ ಕೇರಳದ ಅಂಬಿಗರು ಮಿನ ಗಾರಿಕೆಗೆ ಇಳಿಯಲು ತುಂಬಾ ಉತ್ಸುಕರಾಗಿರುವುದನ್ನು ಕಾಣಬಹುದು. ಈ ಹೊಸ ಮಾದರಿಯ ದೋಣಿಗಳನ್ನು ನಾರ್ವೇಜಿಯನ್ ಪ್ರವೀಣರ ಸಲಹೆ ಪಡೆದು ಸ್ಥಳೀಯ ಕುಶಲಕರ್ಮಿಗಾರರೇ ನಿರ್ಮಿಸಿದ್ದಾರೆ. ಈ ದೋಣಿಗಳು ಮಿತವ್ಯಯ ಬಾಳಿಕೆ ಇವುಗಳ ದೃಷ್ಟಿಯಿಂದ ತುಂಬಾ ಚೆನ್ನಾಗಿವೆ ಮತ್ತು ಇವುಗಳನ್ನು ನಮ್ಮ ದೇಶದ ಅಂಬಿಗರು ಸುಲಭವಾಗಿ ನಡೆಸಲು ಸಮರ್ಥರಿರುವರು.

ಇಂತಹ ದೋಣಿಗಳನ್ನು ನಿರ್ಮಿಸಲು ಒಂದು ಕರ್ಮಶಾಲೆ ಸ್ಥಾಪಿತವಾಗಿರುವುದಲ್ಲದೆ ಡೀಸೆಲ್ ಎಂಜಿನ್ನುಗಳನ್ನು ಕೂಡಿಸಿರುವ ಒಲ ದೋಣಿಗಳು ಈಗಾಗಲೇ ಸಿದ್ಧವಾಗಿ ನಿಂತಿವೆ. ಈ ದೋಣಿಗಳನ್ನು ತುಂಬಾ ರಿಯಾಯಿತಿ ದರದಲ್ಲಿ ಉತ್ಸಾಹಶಾಲಿಗಳಾದ ಅಂಬಿಗರಿಗೆ ಒದಗಿಸಲಾಗುವುದು.

ಈ ದೋಣಿಗಳನ್ನು ಉಪಯೋಗಿಸುವುದರಿಂದ ಹೆಚ್ಚು ಮಿನು ಸಂಗ್ರಹಿಸಲು ಸಾಧ್ಯವಾಗುತ್ತದೆ, ಉದ್ಯಮ ತುಂಬಾ ಲಾಭದಾಯಕವೂ ಆಗುತ್ತದೆ.

ಅಲ್ಲದೆ ಅಂಬಿಗರು ಹೆಚ್ಚು ಪ್ರಯಾಣದಲ್ಲಿ ಹಿಡಿಯಲು ಸಾಧ್ಯವಾಗುವ ಮಿನಿನ ದಾಸ್ತಾನನ್ನು ಕೆಡದಂತೆ ಇಟ್ಟು ಮಾರಾಟಮಾಡಲು ಒಂದು ಸಹಕಾರ ಸಂಘದ ಸ್ಥಾಪನೆಯೂ ಆಗಿದೆ

ಭಾರತ–ನಾರ್ವೇಜಿಯನ್ ತಾಂತ್ರಿಕ ಸಹಕಾರ

೧೯೫೩ರಲ್ಲಿ ನಾರ್ವೆ ಮತ್ತು ಭಾರತಗಳ ಮಧ್ಯೆ ಆಂಗೀಕೃತನಾದ ಭಾರತ–ನಾರ್ವೇಜಿಯನ್ ತಾಂತ್ರಿಕ ನೆರವಿನ ಯೋಜನೆ ರೀತ್ಯಾ ಕೇರಳದಲ್ಲಿ ಕೈಲಾಸಿನ ಬಳಿ ೧೯ ಚದರ ವೈಲಿಗಳ ವಿಸ್ತಾರದ ಭೂಮಿಯನ್ನು ಮಿನುಗಾರಿಕೆಗೆ ಅಭಿವೃದ್ಧಿ ಯೋಜನೆಗಾಗಿ ಒದಗಿಸಲಾಯಿತು. ಈ ಪ್ರದೇಶದ ಮೊಗವೀರರ ಜೀವನವನ್ನು ಸುಧಾರಿಸಿ ಅವರ ಮಿನುಗಾರಿಕೆ ಉದ್ಯಮವನ್ನು ಲಾಭದಾಯಕವಾಗುವ ರೀತಿಯಲ್ಲಿ ಹೊಸ ಹೊಸ ವಿಧಾನಗಳನ್ನು ಅನುಸರಣೆಗೆ ತರುವ ಉದ್ದೇಶದಿಂದ ಈ ಯೋಜನೆ ಅಂಗೀಕೃತವಾಗಿದೆ.

ಈ ಯೋಜನೆಗೆ ಸಂಬಂಧಿಸಿದ ಪಸ್ತುವಾರಿ ಸಮಿತಿಯಲ್ಲಿ ನಾರ್ವೇಜಿಯನ್ ಸರ್ಕಾರದ ಅಧಿಕಾರಿಗಳೂ ಭಾರತ ಮತ್ತು ಕೇರಳ ಸರ್ಕಾರಗಳ ಅಧಿಕಾರಿಗಳೂ ಇರುವರು. ಭಾರತ ಸರ್ಕಾರದ ಆಹಾರ ಮತ್ತು ವೇಸಾಯ ಮಂತ್ರಿ ಖಾಯೆಯಲ್ಲಿ ಸಹಕಾರ್ಯದರ್ಶಿಗಳಾಗಿರುವ ಶ್ರೀ. ಕೆ. ಶಣ್ ಚಂದ್ರರವರು ಈ ಸ್ಥಾಯಿ ಸಮಿತಿಯ ಅಧ್ಯಕ್ಷರು. ಸಮಿತಿಯ ಸದಸ್ಯ ಸಂಖ್ಯೆ ೧೦

ಯೋಜನೆಗೆ ಅರ್ಥರೂಪಕ್ಕೆ ಬರಲು ಆರು ವರ್ಷಗಳಾದರೂ ಇಂದಿನ ಅನುಭವಾದಾರಿಂದ ನಾರ್ವೇ ಸರ್ಕಾರವು ಸಲಕರಣೆಗಳು ಮತ್ತು ಪ್ರವೀಣರ ಸಂಬಳ ಸಾರಿಗೆಗಳ ರೂಪದಲ್ಲಿ ಒಟ್ಟು ಲಕ್ಷ ರೂಗಳ ಸಹಾಯ ನೀಡಿದೆ; ಯೋಜನೆಯು ವೆಚ್ಚಕ್ಕಾಗಿ ಭಾರತ ಮತ್ತು ಕೇರಳ ಸರ್ಕಾರಗಳೂ ಇಷ್ಟೇ ಪ್ರಮಾಣದಲ್ಲಿ ಹಣ ಒದಗಿಸಿವೆ.

ಯುವಕರಿಗೆ ಉತ್ತಮ ತರಬೇತಿ ಸೌಲಭ್ಯ

ಈ ಯೋಜನಾ ಕ್ಷೇತ್ರದಲ್ಲಿ ಹೊಸ ಯಾಂತ್ರಿಕ–ದೋಣಿಗಳನ್ನು ನಿರ್ಮಿಸಲಾಗುತ್ತಿರುವ ಜೊತೆಗೆ ನಾರ್ವೆಯಿಂದ ದೊಡ್ಡ ಪ್ರಮಾಣದ 'ಡೋರಿ' ದೋಣಿಗಳು ಮತ್ತು ಮತ್ತು ಮೂರು 'ಸ್ಕೂ ನರ್ಸ್' ಸಹ ಭಾರತಕ್ಕೆ ಬಂದಿವೆ; ಈ ಆಧುನಿಕ ಸಲಕರಣೆಗಳ ಸಹಾಯದಿಂದಲೂ ವಿಶೇಷ ಪ್ರಯೋಗಗಳು ನಡೆಯುತ್ತಿದ್ದು ಈ ಪ್ರದೇಶದ ನಾವಿಕರು ಇವುಗಳಿಂದ ಉಚ್ಚಿನ ಸೌಕರ್ಯಗಳ ಲಾಭ ಪಡೆಯತೊಡಗಿದ್ದಾರೆ. ಯುವಕರಿಗೆ ಇಲ್ಲಿ ದೊರಕುವ ಶಿಕ್ಷಣ ಅವರಿಗೆ ತಮ್ಮ ಉದ್ಯಮದಲ್ಲಿ ಹೊಸ ಆಸಕ್ತಿಯನ್ನು ತುಂಬುತ್ತದೆ.

ಮಿನುಗಳನ್ನು ಕೆಡದಂತೆ ಸಂಗ್ರಹಿಸಿಡಲು "ಐಸ್" ಹಾಗೂ 'ಕೋಲ್ಡ್ ಸ್ಟೋರೇಜ್' ವ್ಯವಸ್ಥೆ ಸಹ ನಡೆದಿದೆ. ಇವುಗಳ ಸಹಾಯದಿಂದ ೧೦೦ ಟನ್ನು ಗಳಷ್ಟು ಮಿನನ್ನು ಮತ್ತು ೫೫೦ ಟನ್ನು ಗಳಷ್ಟು "ಮಂಜಿನಲ್ಲಿ ಹೆಪ್ಪುಗಟ್ಟಿಸಿದ" ಮಿನನ್ನೂ ಶೇಖರಿಸಿಡಲು ಅವಕಾಶವಿದೆ.

ಆಸ್ಪತ್ರೆ ಮತ್ತು ಕುಡಿಯುವ ನೀರು

ಅಂಬಿಗರ ಕುಟುಂಬಗಳ ಉಪಯೋಗಕ್ಕಾಗಿ ಈ ಕ್ಷೇತ್ರದಲ್ಲಿ ಒಂದು ಆಸ್ಪತ್ರೆ ಮತ್ತು ಆರೋಗ್ಯ ಕೇಂದ್ರ ಸಹ ಸ್ಥಾಪಿತವಾಗಿವೆ. ಕುಡಿಯುವ ನೀರಿನ ಸೌಕರ್ಯ ಕೂಡಾ ಇದೀಗ ದೊರತಿದೆ.

ಈ ಕ್ಷೇತ್ರದಲ್ಲಿ ೬೫೦ ಜನರಿಗೆ ಉದ್ಯೋಗಾವಕಾಶ ಲಭಿಸಿದೆ.

ಕೆಲವೇ ವರ್ಷಗಳ ಹಿಂದೆ ಸೋಮಾರಿ ಕಟ್ಟೆಯಂತಿದ್ದ ಈ ಪ್ರದೇಶ ಇಂದು ಹೊಸ ಚೈತನ್ಯದಿಂದ ಉತ್ಸಾಹ ಪೂರ್ಣ ಜೀವನ ಕ್ಷೇತ್ರವಾಗಿ ಪರಿಣಮಿಸಿದೆ.

ಮನೆಯೆಂದಾದಲ್ಲಿ ಇರಲೇಬೇಕಾದ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳಿಗೆ, ಹೆಂಗಸರಿಗೆ, ಗರ್ಭಿಣಿಯರಿಗೆ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ಎರಡು. ಎರಡು ರೂಪಾಯಿ 25 ನಯೇ ಪೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಲಪಡುವುದು.

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ಬಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಪೇಯುಕ್ತವಾದುದು.

ಬೆಲೆ: ರೂ. ಒಂದೂವರೆ. ಒಂದು ರೂಪಾಯಿ 75 ನಯೇ ಪೈಸೆ ಮನಿಯಾರ್ಡರ್ ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಲಪಡುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋಟೀಸು

ಪೆರ್ಡೂರು ಶ್ರೀ ಅನಂತಪದ್ಮನಾಭ ದೇವರ ಭಂಡಾರದ ಬಾಬ್ತು ಬತ್ತಮುಡಿ ಸುಮಾರು 400-00 (ನಾಲ್ನೂರು) ಮಾರುವುದಿದೆ. ಈ ಬಗ್ಗೆ ಇದೇ ತಾರೀಕು 24-12-'58ನೇ ಬುಧವಾರ ಈಸರಾತ್ರಿ ಗಂಟೆ 4ಕ್ಕೆ ಭಂಡಾರದ ಕರ್ತಾಳಿಗೆ ಒಳಪಟ್ಟು ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆಸೇಕ್ಷೆ ಉಳ್ಳವರು ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

K. B. Shetty,
Executive Officer.
Sri Ananthapadmanabha. Temple, Perdur.

ಪೆರ್ಡೂರು ತಾ.15 12.58.

ವಿಚಾರ ವರ್ಷ

(ಳನೇ ಪುಟದಿಂದ)

ಗುತ್ತದೆ ಆರ್ಥಿಕ ಶಿಸ್ತಿಗೆ ಬೆಲೆ ಕಟ್ಟಿದಂತೆ ವೈದೇಶಿ ಸೌಸವ ಬೀರಿದ ಮೋಜಿಗೆ ಬೆಲೆ ಕಟ್ಟಿದಂತೆ

ರಾಷ್ಟ್ರಾಭಿಮಾನ

ಧ್ವಜವೆಂದರೆ ಕೇವಲ ಒಟ್ಟೆಯಲ್ಲ!. ಪ್ರಾಯಶಃ ಸರ್ವಜನರೂ ತಿಳಿದಿರುವ ಗಾದೆ. ಅಂದಂತೆ ಧ್ವಜವೆಂದರೆ ಕೇವಲ ಬಟ್ಟೆಯಲ್ಲ, ಅದು ಹೊನ್ನಿಗೆ ಸಮಾನ. ಅದಕ್ಕೆ ವಂದನೆಗೆಯ್ಯುವುದು—ಇದರಿಂದ ನಮ್ಮಲ್ಲಿ ರಾಷ್ಟ್ರಾಭಿಮಾನ ಬರಬಲ್ಲುದು. ಈಗೀಗ ವಿದ್ಯಾರ್ಥಿಗಳು ಇದನ್ನು ಮರೆತಿರಬಹುದು ಉತ್ಸವೋತ್ಸವ ಸಮಾರಂಭಗಳಲ್ಲಿ ಧ್ವಜವರಳಿಸುವ ಸಂದರ್ಭದಲ್ಲಿ ಸ್ತಂಭದಂತೆ ನಿಂತಿದ್ದು, ತಮ್ಮ ಭಕ್ತಿ ಅಭಿಮಾನಗಳ ಸುದ್ಯೋತಕವಾಗಿ ಬಲಗೈಯಿಂದ ಧ್ವಜವಂದನೆಗೈಯ್ಯುವುದು ಬಿಟ್ಟು ಯಾವುದೋ ಕೆಲಸದಲ್ಲವರು ನಿರತರಾಗಿರುತ್ತಾರೆ ತಪ್ಪುತಪ್ಪು ವಂದನೆ ಕೊಡುತ್ತಾರೆ. ಇದು ಶಿಸ್ತಿನ ರೀತಿ, ಚಂದಮುರಿವ ಸಾಧನೆಯೆನ್ನಬಹುದು. ಆದರೆ ಇದು ತರವಲ್ಲ; ಶಿಸ್ತಲ್ಲ! ಇದರಿಂದ ರಾಷ್ಟ್ರವು ಅವನತಿ ಹೊಂದಲು ಸಾಧ್ಯವಿದೆ ಹೊರತು ಉನ್ನತಿ ಹೊಂದಲು ಸಾಧ್ಯವಿಲ್ಲ ಎಂದಾದರೂ ಹೊಂದೀತೆ? ಆನುದರಿಂದ ವಿದ್ಯಾರ್ಥಿಗಳು ಶಿಸ್ತಿನ ಬೆಲೆ ಅರಿತುಕೊಂಡಲ್ಲಿ ರಾಷ್ಟ್ರದ ಅವನತಿಯಾಗದು. ಏಕೆಂದರೆ ಇಂದಿನ ಮಕ್ಕಳೇ ಮುಂದಿನ ಜನಾಂಗ ತಾನೆ? ಹೀಗೆ ಶಿಸ್ತಿನಿಂದ ಧ್ವಜವಂದನೆಗೈದಲ್ಲಿ ಫಲ ದೊರೆಯದೆ ನಿಲ್ಲದೆಂದು ನಿದ್ಯಾರ್ಥಿಗಳು ತಿಳಿದಿರಬೇಕು. 'ಕೊಟ್ಟುದು ಹಿಂದೆ ಬಂದೇ ಬರುವುದು' ಎಂಬಂತೆ ಆ ಧ್ವಜ ಆ ಬಾಲವೀರರನ್ನು ರಾಷ್ಟ್ರದ ನಾಯಕರನ್ನಾಗಿಯೋ ಮತ್ತೇನನ್ನೋ ಮಾಡಬಲ್ಲುದು ಅದಕ್ಕೆನೇ ಎನ್ನುತ್ತಾರೆ ಆ ಧ್ವಜವನ್ನು, 'ಧ್ವಜವೆಂದರೆ ಕೇವಲ ಬಟ್ಟೆಯಲ್ಲ!' ಇನ್ನು ಹೆಚ್ಚಿನ ಗುಣಗಳನ್ನು ಕರ್ಣನಿಂದ ಪಡೆಯೋಣವೆ?

"ನೆನೆಯದಿರಣ್ಣ! ಭಾರತದೊಳಿಂ
ಪರರಾರುನುನೊಂವೆ ಚಿತ್ತದಿಂ
ನೆನೆವೊಡೆ ಕರ್ಣನ ನೆನೆಯ, ಕರ್ಣ
ನೊಳಾರ್ದೊರೆ ಕರ್ಣನೇರು ಕರ್ಣನ
ಕಡುನನ್ನಿ ಕರ್ಣನಳವಂಕದ ಕರ್ಣನ
ಚಾಗಮೆಂದು".

ಈ ಎಲ್ಲಾ ಗುಣಗಳನ್ನು ಕರ್ಣನಿಂದ ಕಲಿತು, ಸಕಲ ಭಾರತೀಯರಲ್ಲಿ ಅದರಲ್ಲೂ ವಿದ್ಯಾರ್ಥಿಯೆನಿಸತಕ್ಕವರಲ್ಲಿ ಶಿಸ್ತು, ನೆಲೆಸುವಂತೆ ಯತ್ನಿಸಿ ಭಾರತವನ್ನು ಉದ್ಧಾರ ಪಥದಲ್ಲಿ ಸಾಗಿಸಲು ಅಹೋರಾತ್ರಿ ಶ್ರಮಿಸೋಣವೆ?

— ಕೆ. ರಮೇಶ ಪೈ.

ಧ್ವಜ ದಿನಾಚರಣೆ

ಭಾರತೀಯ ಸೈನಿಕರ ಯಶಸ್ಸೀ ಮುನ್ನಡೆ

ಭಾರತೀಯರು ಈ ಸೈನಿಕರಿಗಾಗಿ ತಮ್ಮ ಚಂದಾ ನೀಡಬೇಕು

"ಈ ವರ್ಷ ಭಾರತೀಯ ಪಡೆಗಳು ಇನ್ನೊಮ್ಮೆ ವಿಶ್ವರಾಂತಿಯ ರಕ್ಷಣೆಗೆ ಹೆಣಗಬೇಕಾದ ಅಗತ್ಯ ಬಂತು. ಲೆಬನಾನಿಗೆ ಭಾರತೀಯ ಸೈನಿಕರನ್ನು ಕಳುಹಿಸಲಾಯಿತು. ತಮಗೆ ವಹಿಸಲಾಗಿರುವ ಕೆಲಸವನ್ನು ಪೂರೈಸಿ ಭಾರತೀಯ ಸೈನಿಕರು ಸದ್ಯದಲ್ಲಿಯೇ ಭಾರತಕ್ಕೆ ಹಿಂದಿರುಗುವರೆಂದು ನಿರೀಕ್ಷಿಸಲಾಗಿದೆ. ಲೆಬನಾನಿನ ಜನ ಮೆಚ್ಚಿಕೊಳ್ಳುವ ರೀತಿಯಲ್ಲಿ ಭಾರತೀಯ ಸೈನಿಕರು ತುಂಬಾ ದಕ್ಷತೆಯಿಂದ ತಮ್ಮ ಪಾಲಿನ ಕಾರ್ಯವನ್ನು ನಿರ್ವಹಿಸಿದ್ದಾರೆ.

"ಭಾರತೀಯ ಪಡೆಗಳು ಎಲ್ಲಿಗೇ ಹೋಗಲಿ ನಮ್ಮ ದೇಶಕ್ಕೆ ಅವರು ಒಳ್ಳೆಯ ಹೆಸರು ತರುವ ಕೆಲಸ ಮಾಡುತ್ತಿರುವುದು ನನಗೆ ತುಂಬಾ ಸಂತೋಷವನ್ನುಂಟು ಮಾಡಿದೆ. ಇದರಿಂದ ನಮ್ಮ ನಾಡಿನ ಗೌರವ ಮತ್ತು ಪ್ರತಿಷ್ಠೆ ಹೆಚ್ಚುತ್ತಿದೆ

* ಭಾರತದಲ್ಲಿ ಸಕ ಭಾರತೀಯು ಸೈನಿಕರು ಇದೇ ರೀತಿ ವರ್ತಿಸಿಕೊಂಡು ಜನರ ಮೆಚ್ಚುಗೆಗೆ ಅವರು ಪಾತ್ರವಾಗುವ ಕೆಲಸ ಮಾಡಬೇಕು. ಶಿಸ್ತಿನಿಂದ ಅವರು ವರ್ತಿಸಿಕೊಳ್ಳುವುದರಿಂದ ಮಾತ್ರ ಇದು ಸಾಧ್ಯ

"ತಮ್ಮ ತಮ್ಮ ಹೆಣ್ಣುಗಳಿಗಾಗಿ ಒತ್ತಾಯ ಹಾಕುವ ಕಾಲ ಇದು, ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳ ಕುರಿತು ಅಷ್ಟಾಗಿ ಯಾರೂ ಮಾತನಾಡುವುದಿಲ್ಲ. ತಮ್ಮತಮ್ಮ ಪಾಲಿನ ಕರ್ತವ್ಯವನ್ನು ಪಾಲಿಸಿ ತಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸಿದರೆ ಹಕ್ಕುಗಳು ತಾವಾಗಿಯೇ ಹಸ್ತಗತವಾಗುತ್ತವೆಯೆಂಬುದನ್ನು ಜನ ಅಷ್ಟಾಗಿ ಗಮನಿಸುತ್ತಿಲ್ಲ. ಭಾರತದಲ್ಲಿ ನಾವು ಎದುರಿಸಬೇಕಾದ ದೊಡ್ಡ ದೊಡ್ಡ ಸಮಸ್ಯೆಗಳು ಅನೇಕವಿವೆ ಮತ್ತು ನಾವು ದಿಟ್ಟತನದಿಂದ ಅವನ್ನು ಎದುರಿಸಬೇಕಾಗಿದೆ

* ಪ್ರತಿಯೊಬ್ಬ ನಾಗರಿಕನೂ ಹಾಗೂ ಮುಖ್ಯವಾಗಿ ರಕ್ಷಣಾ ಪಡೆಗಳ ವಾಲಿಗೆ ಇರುವ ಪ್ರಥಮ ಕರ್ತವ್ಯ ನಾಡಿನ ಸ್ವಾತಂತ್ರ್ಯವನ್ನು ಕಾಪಾಡುವುದೇ ಆಗಿದೆ; ಇದನ್ನು ಗಳಿಸಲು ನಾವು ಮಾಡಿರುವ ತ್ಯಾಗ ಅಪಾರವಾದುದು.

* ಸ್ವತಂತ್ರ್ಯದ ರಕ್ಷಣೆಯ ಹೊಣೆ ನಮ್ಮ ಪಾಲಿನ ಕರ್ತವ್ಯವಲ್ಲ; ರಾಷ್ಟ್ರ ನಿರ್ಮಾಣ ಕಾರ್ಯವೂ ಅತ್ಯಾವಶ್ಯಕವಾಗಿ ಆಗ ಬೇಕಾಗಿದೆ. ಈ ದಿಶೆಯಲ್ಲೂ ರಕ್ಷಣಾ ಪಡೆಗಳ ಸಾತ್ರ ವಿಶೇಷವಾಗಿದೆ.

ದೇಶದ ರಕ್ಷಣಾ ಪಡೆಗಳು ನಿರ್ವಹಿಸಬೇಕಾಗಿರುವ ಪಾತ್ರ ಕಠಿಣತರವಾದುದು. ಭೂಸೇನೆ, ನೌಕಾ ಸೇನೆ ಮತ್ತು ವಿಮಾನ ಸೇನೆ—ಈ ಮೂರು ರಕ್ಷಣಾ ಪಡೆಗಳಲ್ಲೂ ಯುವಕರು ದುಡಿಯುತ್ತಿದ್ದಾರೆ ಅವರ ಬಗ್ಗೆ ಜನರ ಪಾಲಿಗೂ ಒಂದು ರೀತಿಯ ಕರ್ತವ್ಯವಿದೆ. ಈ ಕರ್ತವ್ಯವನ್ನು ನಿರ್ವಹಿಸಲು ಧ್ವಜ ದಿನಾಚರಣೆಯಂದು ಜನತೆಯ್ಮ ಪಾಲಿನ ಚಂದಾ ತುಂಬಬೇಕು".

(ಧ್ವಜ ದಿನಾಚರಣೆಯಂದು ಪ್ರಧಾನಿ ನೆಹರು ಇತ್ತ ಸಂದೇಶ)



ಆಸ್ಟ್ರೇಲಿಯಾದಲ್ಲಿ ತಯಾರಾದ ಟ್ರಾಕ್ಟರೊಂದಕ್ಕೆ ಬ್ರಿಟನ್ನಿನಲ್ಲಿ ತಯಾರಾದ ಡೀಸೆಲ್ ಇಂಜಿನ್ನನ್ನು ಜೋಡಿಸಲಾಗಿದೆ. ಇದು ಗಂಟೆಗೆ ೩೩ ಮೈಲು ವೇಗದಲ್ಲಿ ಓಡಬಲ್ಲುದು

ಕವಿತಾ ವಿತಾನ

ಸಿದ್ಧನ

ಗಿರಿಯು ಬನದ ನಡುವೊಳಿರುವ ಸಿದ್ಧನನು ಬಿಮ।
ವನವಿಹಾರ ತೆರೆದೊಳಿರುವ ಸಿದ್ಧ ನೆಲನಿದು।
ಸಿದ್ಧ ನೆನವ ಕಾವ್ಯಸೈರಿ।
ಬಿದ್ದ ತಳದ ಮೀನೊಳಿದ್ದ
ಹದ್ದು ಕಾಕ ಸರಿದ ನೆಲವ।
ಇವ್ವ ಸೊಗಸ ನರಿವ ತೆರವ
ನುನವ ಜನದ ನಾಡೆನೆರೆವ ಸಿದ್ಧನನಿನಿ।
ಜನುನುರಾತಿ ಮಾತೆ ಕನ್ನಡ ನೈಜ ಸೊಗ
ಸಿದು ॥ ೧ ॥

ಇದರಂಳಿರುವೆ ಸಹಜಪ್ರೀತಿ ಪ್ರಕೃತಿ
ಮಾತೆಯು।
ಪ್ರಕೃತಿಮಾತೆಜ್ಞಾನದಾತೆ ರಕ್ತಲೀಲೆಯು।
ಬಿದ್ದೆಸರಿನ ನಲವು ಚಂದ
ಸಜ್ಜನರಿಯು ನಲವು ಚಂದ ॥

ಹೆಜ್ಜೆಯಿಡುವ ಪಾರಿ ಚಂದ।
ಹೆಜ್ಜೆಬಿಡದ ಗಿಡವು ಚಂದ ॥
ಸಹಜ ಸೊಂಪು ಪಡೆದು ನೆರೆನ ಸಿದ್ಧ
ಭೂಮಿಯು।
ಅಹಸ ಸೊಗಸ ಸೇಳಲೆಂತು ವೈನ ಲೀಲೆಯೆ
॥ ೨ ॥

ಅನತಿದೂರ ನುಂಜುನಾಥ ದೇನ ನಿಲಯವು।
ನಿನುತ ಚರಿತ ದನ್ಯದರ್ಮ ನಿಕ್ಕಾಯವು
ದಾನದಗ್ಗದೊಂದು ದಾರಿ।
ನೂನದಿಂದ ಜಗಕೆ ತೋರಿ ॥
ಏನು ಸೊಗಸು ಮುದವ ಬೀರಿ।
ತಾನೆ ಬಳೆಯೊಳಿಯಾದು ವಾರಿ ॥
ಸಕಲ ಸುಲಭ ಪಡೆದ ಕಳದಿ ಶಾಲಿ ಮೆರೆ
ಪುದು।
ಶಾರೆಗಳದಿ ನುಂಪಿನಪುವೆ ಸಿದ್ಧ ನನವಿದು॥೩॥

ಸಿದ್ಧಿಪಡೆವ ಉದ್ಧಯೋಗಿ ಬಜ್ಜೆನೆರೆಪದು।
ಸಿದ್ಧನನದಿ ರಾವರಾಜ್ಯ ಕಾಂಬಕನಸಿದು ॥
ಸಿದ್ಧ ವನನೆ ಶೌರ್ಯ ಸ್ಥಳವು।
ಇದ್ದ ನಿಲಯ ಬಹಳ ಜೀವಂತ ॥
ಬದ್ಧ ಕರ್ಮಿಯಾವ ಜನವು।
ಸಿದ್ಧಿ ಪಡೆವ ದದುವ ನಿಲುವು ॥
ಇಂದ ಶೋಭೆ ಪಡೆವ ನೆಲನದೇನು ಧನ್ಯವು॥
ಇಂಥ ನೆಲದಿ ನೆಲೆಯ ಪಡೆದ ಜನವು
ಮಾನ್ಯವು ॥ ೪ ॥

— ನಂವಳಿಕೆ ಸಾಂಬಶಿವ್ಪ

ಮದುವೆಗಳು ಜರಗತಕ್ಕ ಸಮಯವು ಸಮೀಪಿಸಿದೆ;

'ಮದುವೆ ಸೀರೆ'

ಇದೀಗ ಪ್ರಕಟವಾಗಿದೆ!

ಜೀವನದ ಬೇರೆ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸಿದ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ನಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ನೂಡಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೋ ವಿಜಯ

(ಗೋಮಿನಕಥೆ)

ಶ್ರೀ ಮುಳ್ಳಿಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಸ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗೂ ಕಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಆವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ ೧—೪—೦

ನವಯುಗ ಪ್ರೆಸ್, ಉಡುಪಿ



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗಳ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವತಂತ್ರರು: ಷಾ ಕಂಪೆನಿ, ಮಂಗಳೂರು—1.

ನೆಹರೂ ಉವಾಚ

ನಮ್ಮ ಶಕ್ತಿಗೆ ಮೀರಿದ ಚಿನ್ಮಯ ವಸ್ತುವೊಂದಿದೆ

ಕರಿನ ಪರಿಶ್ರಮದಿಂದಲೇ ನಾವು ನಮ್ಮ ಕಲ್ಯಾಣ ರಾಷ್ಟ್ರವನ್ನು ಕಟ್ಟಬಲ್ಲೆವು

ಭಾಷಣಗಳನ್ನು ಓದಿಹೇಳುವ ಪರಿಪಾಠವು ಸಣ್ಣ ತರಗತಿಗಳ ಮಕ್ಕಳಲ್ಲಿ ಮಾತ್ರವಿದ್ದರೂ ಇತ್ತೀಚೆಗೆ ಇವನ್ನು ಎಲ್ಲ ವೇದಿಕೆಗಳಲ್ಲಿಯೂ ಗೌರವಿಸಲಾಗುತ್ತಿದೆ. ಆದರೆ, ಭಾರತದ ಪ್ರಧಾನಿ ಶ್ರೀ ನೆಹರುರವರು ಲಿಖಿತ ಭಾಷಣವನ್ನು ಮನ್ನಿಸದೆ ಹೋದರೂ ಈಗ ಅವರೂ ಇದೇ ಮಾದರಿಯನ್ನು ಅನುಸರಿಸಲೇಬೇಕಾದ ಪ್ರಸಂಗ ಬಂತು. ದಿಲ್ಲಿ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ವಿ. ಕೆ. ಆರ್. ವಿ. ರಾವ್‌ರವರ ಸೂಚನೆಯಂತೆ ಪ್ರಧಾನಿಗಳು ಲಿಖಿತ ಭಾಷಣವನ್ನು ಓದಿಹೇಳಬೇಕಾಯಿತು! ಈ ಭಾಷಣದ ಸಾರಾಂಶವನಿದು:

ವಿಜ್ಞಾನ ಪ್ರಗತಿಯ ಪ್ರಭಾವವು ಮಾನವ ಜೀವನದ ಮೇಲೆ ಬಿದ್ದಿದೆ. ಮನುಷ್ಯ ಮತ್ತು ಪ್ರಕೃತಿಗಳ ನಡುವೆ ನೂತನ ಸಂಪರ್ಕ ಸ್ಥಾಪಿತವಾಗಿದೆ. ಹಿಂದಿಗಿಂತ ಇಂದು ನಮ್ಮ ವಿಚಾರಧಾರೆ ಸಂಪೂರ್ಣ ಪರಿವರ್ತನೆ ಹೊಂದಿವೆ. ವೈಜ್ಞಾನಿಕ ಪ್ರಗತಿಯ ಗತಿಯು ಇಲ್ಲಿ ಅತ್ಯಧಿಕ ತೀವ್ರವಾಗುತ್ತಿದೆ. ಮನುಷ್ಯನಿಗೆ ಸ್ವತಂತ್ರವಾಗಿ ಇದಕ್ಕನುಸಾರವಾಗಿ ಹೊಂದಿಕೊಳ್ಳುವುದೂ ಕಠಿನವಾಗಿದೆ.

ಇಂದು ಮಾನವನು ಬಡತನ, ಹಸಿವೆ ಮತ್ತು ರೋಗಗಳಿಂದ ಪೀಡಿತನಾಗಿಲ್ಲ. ಅವನು ಬಾಹ್ಯಜಗತ್ತಿನ ಮೇಲೆ ಕನ್ನ ಅಧಿಕಾರವನ್ನು ಸ್ಥಾಪಿಸುವುದರಲ್ಲಿ ಮುಂದವಿಯಿಟ್ಟಿದ್ದಾನೆ ಈ ಜ್ಞಾನ ವೃದ್ಧಿಯ ಬ್ರಹ್ಮಾಣದ ಕನ್ನ ಮೇಲಿನ ನಿಯಂತ್ರಣ ವೆಲ್ಲವನ್ನೂ ಶಿಥಿಲಮಾಡಿಕೊಂಡಿದ್ದಾನೆನಿ ಶ್ಚಯನೂತನ ಸಮಸ್ಯೆಗಳು ಮುಂದೆ ಬರುತ್ತಿವೆ. ನಿಸ್ಸನ್ನು ನೀನೇ ತಿಳಿದುಕೊಳ್ಳು' ಎಂಬ ಹಳೆಯ ಗಾದೆಯ ಮಾತಿಂದು ನಮಗೆ ನೆನಪಾಗುವಂತಿದೆ. ಈ ವೈಜ್ಞಾನಿಕ ಪ್ರಗತಿಯ ಕಾರಣದಿಂದ, ನಾವು ನಮ್ಮ ಆಧ್ಯಾತ್ಮಿಕ ಗುಣಗಳನ್ನು ಮೂರೀಕರಿಸಿ ಕೈಕಟ್ಟಿ ಕುಳಿತುಕೊಂಡಿದ್ದೇವೆ, ನಾವು ಕಲ್ಯಾಣಕಾರೀ ರಾಷ್ಟ್ರವನ್ನು ಕಟ್ಟುವಲ್ಲಿ ಪ್ರಯತ್ನ ಪಡುತ್ತಿರುವೆವಾದರೂ ಕಲ್ಯಾಣಕಾರೀ ರಾಷ್ಟ್ರಗಳು ಸ್ಥಾಪನೆಯಾಗಿರುವೆಡೆಗಳಲ್ಲಿ ಗಹನಗಂಭೀರವಾದ ಸಮಸ್ಯೆಗಳು ತಲೆದೋರಿವೆ. ಆದರೂ ಆಧ್ಯಾತ್ಮಿಕ ಪ್ರಗತಿಸೋಸ್ಕರ ಒಂದಲ್ಲ ಒಂದು ಮಿತಿತನಕ ಭೌತಿಕ ಸಮಸ್ಯೆಗಳು ದೂರವಾಗುವುದು ಆವಶ್ಯಕವೇ. ಆದುದರಿಂದಲೇ ನಾವು ಕಲ್ಯಾಣಕಾರೀ ರಾಷ್ಟ್ರ ನಿರ್ಮಾಣದ ಗುರಿಯನ್ನಿಟ್ಟುಕೊಂಟಿದ್ದೇವೆ. ನಾವು ಆಧ್ಯಾತ್ಮಿಕ ಸಿದ್ಧಾಂತಗಳನ್ನು ಉಪೇಕ್ಷಿಸುತ್ತ ಭೌತಿಕ ರೂಪದಲ್ಲಿ ಪ್ರಗತಿ ಪಡೆಯುತ್ತ ಮುಂದುವರಿದರೆ, ನಮ್ಮ ಸಮಾಜವು ಛಿನ್ನಭಿನ್ನವಾಗುತ್ತ ಹೋಗುವುದು.

ಈ ಮಾತಿನ ಅರ್ಥವು ಪರಮಾತ್ಮನಲ್ಲಿ ವಿಶ್ವಾಸವಿಡಬೇಕೇ ಬೇಡವೇ ಎಂಬ ಪ್ರಶ್ನೆಯಲ್ಲ. ಸಮಯವು ಪರಿವರ್ತನೆ ಕೊಂಡುವುದರೊಡನೆಯೇ ಪರಮಾತ್ಮನ ಕಲ್ಪನೆಯಲ್ಲಿಯೂ ಅಂತರವಾಗುತ್ತ ಹೋಗುತ್ತದೆ, ಆದರೂ ನಾವು ಸ್ವಯಂ ಕಂಡ ಇಲ್ಲವೇ ಕಾಣಿಸಿಕೊಂಡ ವಿಶ್ವಕ್ಕೂ ಪರವಾಗಿ ಒಂದು ವಸ್ತುವು ಇರಲೇಬೇಕು. ಈ ಸತ್ಯಾಂಶವನ್ನು ಮಾತುಗಳ ಮೂಲಕ ವ್ಯಕ್ತಪಡಿಸುವುದು ಸಾಧ್ಯವಿಲ್ಲ. ಜನಬೊಂಬೆಯ ಮುಖದಿಂದಲೇ ಇದನ್ನು ಕಂಡುಕೊಳ್ಳುವುದು ಸಾಧ್ಯ.

ಸಾಮಾಜಿಕ ನ್ಯಾಯದ ಭಾವನೆಯೇ ಮಾರ್ಕ್ಸ್‌ವಾದದ ಹಾಗೂ ಅದೇ ಪ್ರಕಾರದ ಇತರ ಸಿದ್ಧಾಂತಗಳಿಗೆ ಪ್ರೋತ್ಸಾಹ ಕೊಟ್ಟಿತು. ಈ ಕಾರಣದಿಂದಲೇ ಲೋಕದಲ್ಲಿ ಅನೇಕಾನೇಕ ಕ್ರಾಂತಿಗಳೂ ಸುಸಫಲೀಕರವಾದುವು. ಈ ರೀತಿಯಿಂದ ಸ್ಥಾಪಿತವಾದ ಸಮಾಜಗಳಲ್ಲಿ ಹಿಂಸೆ ಮತ್ತು ಸಾಮಾಜಿಕ ಹಿತಗಳೇ. ಎಲ್ಲವೂ ಅಗಿಹೋದುವು ಆಪ್ತಿದೆ ವ್ಯಕ್ತಿಯ ನೈಜ ಸ್ವಾತಂತ್ರ್ಯವು ಮಾತ್ರ ಏನೇನೂ ಉಳಿಯಲಿಲ್ಲ. ಇದು ನಮಗೆ ಬೇಕಾದ ಸಮಾಜ ಪದ್ಧತಿಯಲ್ಲ.

ಭಯ ಇಲ್ಲವೇ ತಿರಸ್ಕಾರದ ಮನೋಭಾವನೆಯನ್ನು ದೂರಮಾಡಿ ನಿಸ್ಸಾರ್ಥಕಠೋರ ಪರಿಶ್ರಮವನ್ನು ಮಾಡಿದಾಗ ಮಾತ್ರವೇ ನಮ್ಮ ಶಕ್ತಿಗೆ ಮೀರಿದ ಚಿನ್ಮಯ ವಸ್ತುವೊಂದಿದೆ ಎಂಬ ಸತ್ಯವು ಅರಿವಾಗುವುದು. ಕರಿನ ಪರಿಶ್ರಮದಿಂದಲೇ ನಾವು ನಮ್ಮ ಕಲ್ಯಾಣ ರಾಷ್ಟ್ರವನ್ನು ಕಟ್ಟಬಲ್ಲೆವು.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
Oregon RUBBER STAMP CO.
BALMATTA ROAD, MANGALORE.

ದೇಶ ಪರಿಚಯ

ಫಿಯೋರ್ಡಗಳ ತಾಯ್ನಾಡು-ನಾರ್ವೆ

ಮೊಸಂಗಾರಿಕೆ ಹಾಗೂ ಜಲವಿದ್ಯುತ್ತು ಇಲ್ಲಿನ ಹೆಚ್ಚುಗಾರಿಕೆ

ಒಸ್ಲೋ ರಾಜಧಾನಿಯಾಗಿರುವ ನಾರ್ವೆದೇಶವು ೧೫೫೦೦೦ ಚದರಮೈಲು ವಿಸ್ತಾರವುಳ್ಳದು. ೧೯೫೧ರಲ್ಲಿ ಸಕಿಕಾಂವು ಮಾಡಿದ ಅಂದಾಜಿನಂತೆ, ೩೪,೭೦,೦೦೦ ಜನರಿರುವ ಈ ಶೀತ ಯುರೋಪಿನಲ್ಲಿನ ಸ್ಕೇಂಡಿನೇವಿಯಾ ಪರ್ಯಾಯ ದ್ವೀಪದಲ್ಲಿ ಪಶ್ಚಿಮ ಭಾಗವು ನಾರ್ವೆಯಾಗಿದೆ. ಸ್ವಗೆರಾಕ್ ಎಂಬುದು ಡೆನ್‌ಮಾರ್ಕಿನಿಂದ ಇದನ್ನು ಪ್ರತ್ಯೇಕಿಸುತ್ತದೆ. ಉತ್ತರದಲ್ಲಿ ಧ್ರುವಸಾಗರವೂ ಪೂರ್ವದಲ್ಲಿ ಫಿನ್‌ಲೇಂಡ್ ಮತ್ತು ರಶ್ಯಗಳಿವೆ. ಪೂರ್ವದಲ್ಲಿರುವ ಕ್ಯೋಲೆನ್ ಪರ್ವತಾವಳಿಯು ಸ್ವೀಡನನ್ನು ನಾರ್ವೆಯಿಂದ ಪ್ರತ್ಯೇಕಿಸುತ್ತದೆ. ಪರ್ವತಮಯವಾದ ಉತ್ತರ ಅತ್ಲಾಂಟಿಕ ಮತ್ತು ಉತ್ತರ ಧ್ರುವಸಾಗರಗಳಿಂದ ತೊಳೆಯಲ್ಪಡುವ ಕರಾವಳಿಯು ಲಕ್ಷಾಂತರ ಎಡೆಗಳಿಂದ ಕೂಡಿದ್ದು ಫಿಯೋರ್ಡಮಯವಾಗಿರುವುದು. ಈ ಫಿಯೋರ್ಡಗಳಲ್ಲಿ ಅಸಂಖ್ಯ ಮೀನುಗಳ ವಾಸಮಾಡುತ್ತಿರುವುದರಿಂದ, ಮೀನಿನ ವ್ಯಯನಾಯಕ್ಕೆ ಅತ್ಯನುಕೂಲವಾಗಿದೆ.

ಈ ನಾರ್ವೆದೇಶದ ಅತ್ಯಧಿಕ ಉದ್ದ ೧೯೧೦೦ ಮೈಲುಗಳು. ಅಗಲವು ೨೭೦ ಮೈಲುಗಳಿಂದ ೪ ಮೈಲುಗಳಷ್ಟಿದೆ. ಕರಾವಳಿಯು ಫಿಯೋರ್ಡಗಳಿಂದ ಕೂಡಿ ಏಕ್ಯವಾಗಿರುವುದರಿಂದ ೧೨೫೦೦ ಮೈಲುಗಳಷ್ಟು ಉದ್ದವಿದೆ. ಪಡುಬದಿಯ ಹವಾಮಾನವು ಬಹಳ ಶೀತವೂ ತಂಡಿಯೂ ಇದ್ದು, ಪೂರ್ವ ಭಾಗವು ಸಾಮಾನ್ಯ ಬಣಕಲಾಗಿದೆ. ಮೇ ತಿಂಗಳಲ್ಲಿ ಉದಯಿಸಿದ ಸೂರ್ಯನು ಜುಲೈ ವರೆಗೂ ಅಸ್ತಂಗತವಾಗುವುದಿಲ್ಲ. ಹಾಗೆಯೇ ನವಂಬರ ತಿಂಗಳಿಂದ ಜನವರಿ ತಿಂಗಳ ವರೆಗೆ ದಿಗಂತದಿಂದ ಮೇಲೆ ಬರುವುದೂ ಇಲ್ಲ. ಚಳಿಗಾಲದಲ್ಲಿ ಉತ್ತರದಲ್ಲಿ ನಸು-ಬೆಳಕು ಮಾತ್ರ ತೋರುತ್ತಿರುವುದು. ಸೂರ್ಯೋದಯವೆಂಬುದೇ ಇಲ್ಲ. ಎಂದರೆ, ಉತ್ತರ ಧ್ರುವಕ್ಕೇ ದೇಶವು ಅತ್ಯಂತ ನಿಕಟವಾಗಿದೆ.

ನಾರ್ವೆಯೊಂದು ಕಾಡುಗುಡ್ಡಗಳ ನಾಡುದೇಶದವೈಶಾಲ್ಯದಲ್ಲಿಸೇಕಡಾ೭೨ರಷ್ಟು ಉತ್ಪತ್ತಿ ತೆಗೆಯಲು ಆಸಾಧ್ಯವಾದ ಭೂಮಿ ಕೇವಲ ೪,೫೦೦ ಚದರ ಮೈಲುಗಳಲ್ಲಿ ವ್ಯವಸಾಯ ಮಾಡಬಹುದು. ನದಿಗಳೂ ಸರೋವರಗಳೂ ೫ ಸಾವಿರ ಚ. ಮೈಲಿಗಳನ್ನೂ ಕಾಡುಗಳು ೨೯,೫೦೦ ಚ. ಮೈಲಿಗಳನ್ನೂ ಕವಚಿಸಿ ಬಿಟ್ಟಿವೆ.

ನಾರ್ವೆಯಲ್ಲಿ ಕಲ್ಲಿದ್ದಲಿನ ಆಭಾವವಿದ್ದರೂ ಗುಡ್ಡ ಬೆಟ್ಟಗಳಲ್ಲಿ ಹರಿಯುವ ಅಸಂಖ್ಯಾತ ನದಿಗಳಿಂದಾಗಿ ಎದ್ದ ಜಲಪಾತಗಳ ಸಹಾಯದಿಂದ ಜಲವಿದ್ಯುತ್ತನ್ನು ಧಾರಾಳವಾಗಿ ತಯಾರಿಸಲಾಗುತ್ತಿದೆ. ಈ ಜಲವಿದ್ಯುತ್ತು ಪ್ರಕೃತಿಮಾತೆಯು ನಾರ್ವೆಗಿತ್ತ ಅಮೂಲ್ಯ ವರವೆಂದು ಹೇಳಬಹುದು.

ವಿಸ್ತಾರವಾಗಿ ಹರಡಿದ ಕಾಡುಗಳು ಪ್ರಾಕೃತಿಕ ಸಂಪತ್ತಿನ ಕಣಜಗಳಾಗಿವೆ. ದೊಡ್ಡ ಜಾತಿಯ ಕೋಡ್ ಮೀನು, ಹೇರಿಂಗ್, ವೇಲ್, ಸೀಲ್ ಮೊದಲಾದುವು ವಿಪುಲ ಪ್ರಮಾಣದಲ್ಲಿ ಹಿಡಿಯಲ್ಪಡುತ್ತವೆ; ಗಸಗಸೆಯಿಂದ ಒಂದು ಪ್ರಮುಖೋದ್ಯಮವಾಗಿದ್ದು, ಇಲ್ಲಿ ಬೆಳ್ಳು, ತಾಮ್ರ, ನಿಕ್ಕೆಲ್‌ಮತ್ತು ಕಬ್ಬಿಣಗಳು ಇಲ್ಲಿ ಅಗೆಯಲ್ಪಡತ್ತವೆ.

ಹೇ ಮತ್ತು ಬಿರಿ ಎಂಬ ಧಾನ್ಯಗಳೂ ಬಟಾಟೆಯೂ ಇಲ್ಲಿನ ಮುಖ್ಯ ವ್ಯವಸಾಯೋತ್ಪನ್ನವಾಗಿವೆ. ನಾರ್ವೆಯ ಆರ್ಥಿಕ ಪರಿಸ್ಥಿತಿಯು ವ್ಯವಸಾಯ ಮತ್ತು ಮೀನ ಗಾರಿಕೆಗಳ ಮತ್ತು ಕಾಡುಪೈತ್ರಿ ಹಾಗೂ ತುಸ್ಪುಳಿಗಳ ಹೊಂದಾಣಿಕೆಯ ಮೇಲೆ ಹೊಂದಿಕೊಂಡಿದೆ.

ನಾರ್ವೆಯ ನೌಕಾವ್ಯಾಪಾರವು ಸುಪ್ರಸಿದ್ಧವಾಗುತ್ತಿದೆ. ಜಗತ್ತಿನಲ್ಲೆಲ್ಲಾ ತೃತೀಯ ಸ್ಥಾನವನ್ನೂ ಪಡೆದಿದೆ. ಸುಮಾರು ೩೦ಲಕ್ಷ ಟನ್ನುಗಳ ಆರಾಸಾವಿರ ನೌಕೆಗಳು ಇಲಿದ್ದು ಅವುಗಳಲ್ಲಿ ಸೇಕಡಾ೫೫ ಟೇಂಕರುಗಳಾಗಿವೆ. ಆಹಾರೋತ್ಪಾದನೆಯೂ ಶಕ್ತಿಕೋತ್ಪಾದನೆ ಮತ್ತು ಖನಿಜೋತ್ಪಾದನೆ, ಕಾಗದ ಹಾಗೂ ಅದನ್ನು ತಯಾರಿಸುವ ಗೊಜ್ಜು, ಬಟ್ಟೆ, ಮರ, ಮೀನು, ವೇಲ್ ಎಣ್ಣೆ, ಸಾಬೂನು, ಅಲ್ಯೂಮಿನಿಯಂ ಹಾಗೂ ಇಲೆಕ್ಟ್ರೋಕೆಮಿಕಲ್ ಉತ್ಪಾದನೆಗಳೂ ಗೊಬ್ಬರಗಳೂ ಇಲ್ಲಿನ ಉದ್ಯಮಗಳಲ್ಲಿ ಪ್ರಮುಖವಾಗಿವೆ.

೧೮೧೪ರ ಮೇ ೧೭ರಲ್ಲಿ ಸ್ವೀಕರಿಸಿದ ಸಂವಿಧಾನದಂತೆ ನಾರ್ವೆಯು ಸಾಂಕುಶ

(೧೨ನೇ ಪುಟ ನೋಡಿರಿ)

ಮನೆಯೆಂದಾವಲ್ಲಿ ಇರಲೇಬೇಕಾದ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ಎರಡು. ಎರಡು ರೂಪಾಯಿ ೨೫ ನಯೇ ಸೈಸೆ ಮನಿಯಾರ್ಡರು ಮಾಡಿದರೆ ೧ ಪ್ರತಿ ಕಳಿಸಬಹುದು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಒಂದೂವರೆ. ಒಂದು ರೂಪಾಯಿ ೭೫ ನಯೇ ಸೈಸೆ ಮನಿಯಾರ್ಡರ್ ಮಾಡಿದರೆ ೧ ಪ್ರತಿ ಬುಕ್ ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ್, ಉಡುಪಿ.

NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 date 2-12-1950 of the Director of public Instruction, Madras.

ಕಥಾ ವಿಹಾರ

(೨ನೇ ಪುಟದಿಂದ)

"ಮರೆಯೂದೆಯ ಜೆಣ ಇದೀಗ ಕೊಡಬಹುದು"—ಯಾವುದೋ ಒಂದು ಹಿರಿಯತಲೆ ಸೂಚನೆ ಕೊಟ್ಟಿತು.

ತಾಡ ಹರಿವಾಣದಲ್ಲಿ ಎಲೆಯಡಿಕೆಯ ಜೊತೆಗೆ ಏಮ ರೂಪಾಯಿಯಿರಿಸಿ ತೆಗೆದು ಕೊಂಡು ಬಂದ.

ಸಂಕಣ್ಣ ಇಣಕಿ ನೋಡಿದ; ಗಾಬರಿಯಾದ. ಕ್ಷಣಕಾಲ ತನ್ನನ್ನು ತಾನೇ ಮರೆತ. ಉಚ್ಚೆ ಸ್ವರದಲ್ಲಿ ತಾಡನನ್ನು ಆ ಕ್ಷೇಪಿಸಿ ನುಡಿದ ..."ಎಂಟುನೂರು ರೂಪಾಯಿ ?"

ತಾಡನೂ ತಬ್ಬಿಬ್ಬಾದ. ಏನು ಹೇಳುವುದೆಂತಾನಿಗೆ ತಿಳಿಯಲಿಲ್ಲ. ಎಂಟುನೂರನ್ನು ಸಲ್ಲಿಸಲು ಆತನ ತಂಗಿ ಬಂದಿರಲಿಲ್ಲ ಆತ ಸುಮ್ಮಗೆ ನಿಂತಿದನ್ನು ನೋಡಿ, ಅವನ ಭಾವನೆಂಟ್ಕಳಿಸಂಕಣ್ಣನೊಡನೆನು' ಹೌದು, ನೆನಪಿದೆ. ಆದರೆ ಈ ಸಮಯದಲ್ಲಿ ಸಂಗ್ರಹಿಸಲು ಸಾಧ್ಯವಾಗಲಿಲ್ಲ. 'ಕಾರು, ಹಡಿಯುವ ಸಂಕ್ರಾತಿಯೊಳಗೆ ಮುಟ್ಟಿಸ.ತ್ತಾರೆ "ಎಂದ.

ಸಂಕಣ್ಣನಿಗೆ ಸಹಿಸಪಾಯಿತು. ರೂಪಾಯಿ ಈಗ ದೊರಕದಿದ್ದರೆ, ಆ ಮೇಲೆ ದೊರಕುವುದೆಂತು ? ತಾನು ಆ ಕವಲು ರಸ್ತೆಯಸಂದಿನಲ್ಲಿ ಅಂಗಡಿಯಿಡುವುದೆಂತು ಎಲ್ಲಕ್ಕೂ ಮಿಗಿಲಾಗಿ ಊರ ಜನರ ನಡುವೆ ತಲೆಯೆತ್ತಿ ತಿರುಗುವುದೆಂತು ? ಕಟ್ಟಿಕೊಂಡ ಗಗನ ಚುಂಬುಬೂದ ಗಾಳಿಗೋಪುರ ಮುರಿದು ನೆಲಸಮವಾಯಿತು. ಕನ್ನ ಎದೆಯನ್ನು ಹರಿದು ಘಂಗಿದಂತಾಯಿತು, ನೋವನೆನ್ನುವ ಭೀಕರ ಸಿಂಹ ! ಕನ್ನನ್ನು ನಗುವಂತೆ ತೋರಿತು, ತಾಡನ ದೈನ್ಯತೆಯನ್ನು ವ್ಯಕ್ತಪಡಿಸುತ್ತಿದ್ದ ಮಿಸೆ! ಮನಸ್ಸು ಚಟ್ಟಹಾಸದಿಂದ ತನ್ನನ್ನು ನಕ್ಕು ಹೇಳಿತು—"ನೀನೇನು ಹೇಡಿಯೇ ? ಅಭಿಮಾನ ಶೂನ್ಯನೇ ? '

"ಅಲ್ಲ, ಅಲ್ಲ. ಬಿಡಬಾರದು ಈ ಸಂಧರ್ಭವನ್ನು!" ಒಡಲಲ್ಲೇ ಗುಡುಗಿತು, ಅಭಿನೂನವ ಆಂತರಾತ್ಮ !

"ಆಗದು. ಅಡೀಗಲೇ ಹಾಜಾರಾಗ ಬೇಕು ಎಂದು ಅಲುಗಿಸಲಾರದ ನಿರ್ಧಾರದ ಧ್ವನಿಯಿಂದ ಹೇಳಿದ, ಸಂಕಣ್ಣ.

'ಇರುವ ವ್ಯವಹಾರ ಈಗಲೇ ತೀರಿ, ಹೋಗುವುದು ಒಳ್ಳೆಯದೇ. ಮುಂದೆಂದರಿ ತುಂಬಾ ಕಜ್ಜಾಟಕ್ಕೆ ಕಾರಣ! "ಎಂದು ಆತನನ್ನು ಸರ್ಮಥಿಸಿದ, ಮತ್ತೊಬ್ಬ.

ಇಡೀ ಮಮತೆಯ ಮನೆ ವೌನವಾಗಿ ಕೇಳುತಿತ್ತು.

'ನಾವು ಸಂಬಂಧ ಬೆಳಸಲಿಕ್ಕೆ ಬಂದವರು; ಇಲ್ಲಿಯೇ ಮುರಿಯಲಿಕ್ಕಲ್ಲ.....,, ತಾಡನ ವೈಕಿಯೂರೋ ಒಬ್ಬ, ದುಡುಕಿ ಉತ್ತರ ಕೊಟ್ಟ.

" ಹೂಂ ! ಮಾತಾಡಿದಂತೆ ಹಣ ಈ ಕ್ಷಣ ಬಾರದಿದ್ದರೆ ಅದೂ ಆಗುವುದು ! ನನ್ಮಕ್ಕಳು ನಮಗೆ, ನೀವು ನಿಮ್ಮನ್ನು ಹೆಣ್ಣು ಕಟ್ಟಿಕೊಂಡು ಹೊಳೆಹಾರಿ, ನಾಯಿ ಸೂ....ಳ್.,—ಗುಡುಗಿನಂತೆ ಘರ್ಜಿಸುತ್ತಾ ಸಂಕಣ್ಣ ರಾಮನನ್ನು ಕರೆ ಮಣೆಯಿಂದ ಎಬ್ಬಿಸಿದನು. ಲಕ್ಷ್ಮಿಸ್ವಯಂವರ ಸಭೆಯನ್ನು ಸೇರಿ ಕಣ್ಣೀರಿಡತೊಡಗಿದಳು,

ಪರಿಸ್ಥಿತಿ ವಿಕೋಪಕ್ಕೆರಿತು. ತಾಡನ ಮೊಧಾನದಿಂದ ಎಷ್ಟು ಸಂತೈಸಿದರೂ ಸನ್ನಿವೇಶ ಹದಕ್ಕೆ ಬಾರದೇ ಹೋಯಿತು. ಕೊನೆಗೆ ಹೇಳಿದ, "ಹೂಂ ! ಆಗಲಿ. ನಾವೂ ಗಂಡಸರು. ಹೆಣ್ಣಿಗೆ ಬೇರೆ ಸಂಬಂಧ ನೋಡಿಕೊಳ್ಳುತ್ತೇನೆ. ನಮ್ಮ ಜಾತಿಯಲ್ಲಿ ಅಗ ಬಾರದೆಂದಿಲ್ಲವಷ್ಟೆ ಸಿಸ್ಟ, ಮಗ ಮೂತ್ರ ಲೋಕದ ಮನ್ಮಥನೆಂಬ ಕನಸನ್ನು ಮೂತ್ರ ಬಿಟ್ಟು ಬಡಿ ಗೊತ್ತಾಯಿತೇ...?,,ಸಿಟ್ಟಿನಿಂದ ಅವನ ವಿಸೆ ಹಾರುತಿತ್ತು.

ಸಂಕಣ್ಣ ತಡೆಯದಾದ. ಅವಾಚ್ಯ ಶಬ್ದಗಳನ್ನಾಡುತ್ತಾ ತನ್ನ ಬಂಧುಗಳೊಡನೆ ಏಗಸನ್ನು ಕರೆದುಕೊಂಡು ಮದುವೆಯ ಮನೆಯಿಂದ ಹೊರಟುಬಿಟ್ಟ. ಅತ!

ಎಲ್ಲರಿಗೂ ಹಿಂದೆ ಭಾರವಾದ ಮಂದ ಹೆಜ್ಜೆಗಳನ್ನಿರಿಸುತ್ತಾ ವೌನವಾಗಿ ವಿಚಾರಿಸುತ್ತಾ ಹಿಂಬಾಲಿಸಿದ ರಾಮ.

ದಿಗಂತದ ಯಾವುದೋ ಮೂಲೆಯಿಂದ ಭೋಗರ್ಗರೆದು ಬಂದು, ಮನೆ ಮರಗಳನ್ನೆಲ್ಲಾ ಕಡವಿ, ಧೂಳೀಪಟಮಾಡಿ, ಊರನ್ನು ಅರ್ಧಗಂತವರಂತೆ ಮಾಡಿ ಮಲಗಿಸಿ, ಅಟ್ಟಹಾಸದಿಂದ ಕೂಗುತ್ತಾ ಎಲ್ಲಿಯೋ—ದೂರದ ದಿಗಂತದಲ್ಲಿ ಅಡಗಿ ಮಾಯವಾದ ಬಿರುಗಾಳಿಯನ್ನು ನೆನೆಸಿ, "ಇದೇನೆಂದು ನಿಶ್ಚಯ ತಾಳಿ ತನ್ನೊಳಗೇ ಚಿಂತಿಸತೊಡಗಿದ ಸಂಕಣ್ಣ!

"ತವಗೇಕೆ ಅನೀಲೆ ಆ ಬುದ್ಧಿ ಬಂತೋ?" ಎಂದು ವ್ಯಸನಪಟ್ಟ ಸಂಕಣ್ಣ. ಇನ್ನೇನು ಮಾಡಲಿದೆ? ಎಲ್ಲವನ್ನೂ ಮುಗಿಸಿ ಬಿಟ್ಟಿದ್ದ ಆತ! ಇನ್ನು "ಜೀವ" ಎಂದುಕೊಂಡು ತಾಡನಲ್ಲಿಗೆಹೋಗುವುದೇ? "ಆಗದು" ಎಂದುಕೊಂಡ, ಆತ.

ಆ ದಿನ ಸಂಜೆಯೇ ತಾಡನ ತಂಗಿ, ಬೊಂಬಾಯಿಯಿಂದ ಬಂದಳು, ವಿಚಾರವನ್ನು ತಿಳಿದು ಬಹಳ ನೊಂದುಕೊಂಡಳು.

"ಅಲಿ ಇನ್ನಾದರೂ 'ಆಸರಾಧ್ಯವನ್ನಿಟ್ಟು ತಪ್ಪನ್ನೊಪ್ಪಿಕೊಳ್ಳುತ. ಹೇಗಾದರೂ ಲಕ್ಷ್ಮಿ ಆ ಮನೆಯನ್ನೇ ಸೇರಲಿ" ಎಂದಳು ಆಕೆ. ಆದರೆ ತಾಡ ಒಪ್ಪಲಿಲ್ಲ. 'ಹೆಣ್ಣೇನು ಕುಂಟೇ ಕುರುಡೇ? ಅವನ ಮಗನಷ್ಟಿದ್ದ ಬೇರೆ ಗಂಡೇ ಇಲ್ಲವೇ ಊರಿನಲ್ಲಿ? ಮಳೆ ಬಿಳುವದರೊಳಗೆ ಇನ್ನೊಂದು ಮದುವೆ ಯಾಗಲೇಬೇಕು,ಲಕ್ಷ್ಮಿಗೆ!'

ಕೆಲವು ದಿನಗಳುರುಳಿದುವು.

ಊರಂಚಿನ ಕಾಡಿಗೆ ಸೊಪ್ಪು ಕಡಿಯಲು ಹೋಗಿದ್ದ, ರಾಮ. ಜಲ್ಲಿಂದಲೇ ದೂರದಲ್ಲಿ ತೋರುತಿತ್ತು ಕೆಳಗದ್ದೆ ತಾಡನ ಮನೆ. ನೋಡುತ್ತಾ ಕ್ಷಣಕಾಲ ನಿಂತ ರಾಮ.

"ಅಮಿ ತಾಡನ ಮನೆ! ಅಲ್ಲಿ ಲಕ್ಷ್ಮಿಯಿದ್ದಾಳೆ. ಆ ಲಕ್ಷ್ಮಿ. ಮಾಲೆ ಹಾಕಿ ತನ್ನವಳನ್ನಾಗಿ ಮಾಡಿಕೊಂಡ ಆ ಲಕ್ಷ್ಮಿ... ..ಈಗಲೂ ನನ್ನವಳೇ?..... ಹೇಗೆ ಸಾಧ್ಯ? ವೃಥಾ ತಂದೆ ಎಬ್ಬಿಸಿದ ಗಲಾಟೆ... – ಪಾಪ! ಎಷ್ಟು ನೊಂದು ಕೊಂಡಳೊ!.....ನಾನೀಗ ಆಕೆಯನು ನೆನೆಸಿ ಒರಿವೇ ಬೇಯುತಿದ್ದೇನೆ! .. ಛ್ಹಾ! ಎಪ್ಪೆಲ್ಲಾ ಅನಾಹುತಕ್ಕೆ ಕಾರಣ ರಾವರು, ತಪ್ಪ! ....."

ಮನಸ್ಸು ಎಲ್ಲಿಯೋ ಅಲೆದಾಡುತ್ತಿತ್ತು; ರಾಮ ಸೊಪ್ಪು ಸವರುತಿದ್ದೆ. ಇದಿರಿನಲ್ಲಿ ಸದ್ದಾದಂತಾಗಿ ತಲೆಯೆತ್ತಿ ನೋಡಿದ!

ಲಕ್ಷ್ಮಿ!

ರಾಮ ತನ್ನನ್ನು ತಾನು ಮರೆತ. ಕೈಯಲ್ಲಿರುವ ಕತ್ತಿ ಕೈ ಜಾರಿತು!

ಒಣಕು ಸೌದೆಯನ್ನು ಒಟ್ಟುಮಾಡುತಿದ್ದ ಲಕ್ಷ್ಮಿ ನಾಚಿಕೆಯಿಂದ ತಲೆ ತಗ್ಗಿಸಿದಳು. ರಾಮ ಹತ್ತಿರ ಸರಿದು ಕೈ ಹಿಡಿದುಕೊಂಡ.....

ಆಡಿಮೇಲು ಮಾಡುತ್ತಿರುವ ಸುಳಿಗಾಳಿ.. ತಾಡನ ಮನೆ ತನ್ನ ಮನೆ—ಹೆಚ್ಚೆ ಕೆ? —ಇಡೀ ಜಗತ್ತೇ ಸಿಲುಕಿ ಉರುಳಾಡುತ್ತಾ ಎಲ್ಲಿಯೋ ಲಯವಾಗಿ ಹೋದಂತಾಯಿತು. ಬೇರೇನೂ ಕಾಣಿಸಲಿಲ್ಲ. ಭೂಮಿ ಚಂಚಲವಾಯಿತು. ಗಗನ ಹರಿದು ಎಲ್ಲಿಯೋ ಜಾರಿಹೋಯಿತು. ಸಂಕಣ್ಣ ಮರೆಯಾದ; ತಾಡ ಇಲ್ಲದಾದ.....ಇಲ್ಲ; ಯಾರೂ ಇಲ್ಲ.....ತಾನು, ಮತ್ತು ಲಕ್ಷ್ಮಿ ಇಬ್ಬರ ಹೊರತು ಬೇರಾರೂ ಇಲ್ಲ .....ಇಲ್ಲವೇ ಇಲ್ಲ!

ಮಾರನೆಯ ದಿನ ಸಂಕಣ್ಣ ಇಳಿಮೋರೆಯಿಂದ ಧನಿಗಳ ಮನೆಯನ್ನು ಸೇರಿದ. ಎನನ್ನೋ ಓದುತಿದ್ದ ಧನಿಗಳು ಕನ್ನಡಕವನ್ನು ಕಳಚಿ, "ಏನು ಸಂಕಣ್ಣ?" ಎಂದರು.

ಅಂದಿನ ಉತ್ಸಾಹ ಇಂದೀಗ ಇದ್ದಿಲ್ಲ. ತಾನೇ ತಾನಾಗಿ ಹರಡಿ ಬೆಳೆದು ನಿಂತ ಬಿದಿರು ಮೆಳೆ, ಇಂದು ಬೂದಿಯಾಗಿತ್ತು —ದಾಷ್ಟ್ರ್ಯದ ಮುಳ್ಳುಗಳು ಕರಟಿದ್ದುವು. ಸೈನ್ಯದಿಂದಲೇ ಉತ್ತರ ಕೊಟ್ಟ—

"ಈ ಬಡ ತಂದೆಯನ್ನು ಮುದಿ ಪ್ರಾಯದಲ್ಲಿ ಕೈಬಿಟ್ಟು.....ತಾಡನ ಮಗಳನ್ನು ಕಟ್ಟಿಕೊಂಡು ಓಡಿ ಹೋದ, ರಾಮ!" ಅವನ ಹೃದಯಾಂತರ್ನಾದದಿಂದ ನಿಟ್ಟುಸಿರೊಂದು ಹೊರಟು, ಒಡಲ ಬೇನೆಯ ಪರಿಮಾಣವನ್ನು ಸಾರಿ ಹೇಳಿತ್ತು!

ಬೇನೆಯ ಸಾಗರದಲ್ಲಿ ನಿಟ್ಟುಸಿರ ಬಿರುಗಾಳಿಯಿಂದೆದ್ದ ತೆರೆಗಳ ಮಧ್ಯ ಎಂಟು ನೂರು ಕಣ್ಣಿಗೆ ಕಾಣಿಸದಂತಾಗಿತ್ತು!

ರಾಮನೂ ಕಾಣಿಸಲಾರದಂತೆ ಹೊರಟು ಹೋಗಿದ್ದ!

ಯು. ಪದ್ಮನಾಭ ಭಟ್ಟ, ಬನ್ನಾಡಿ.

ಹೊಸ ಪುಸ್ತಕ

ಇದೀಗ ಪ್ರಕಟನಾಗಿದೆ.

ಅದೃಷ್ಟಶಾಲಿ ರಾಷ್ಟ್ರನಾಯಕ

ಜಾರ್ಜ್ ವಾಶಿಂಗ್‌ಟನ್

ಲೇಖಕಃ ಜೀನೇ ಇಯೇಟನ್.

ಅನುವಾದಕರು:

ಯು. ಎಲ್. ಆಚಾರ್ಯ,

ಎಮ್. ಎ.ಎಲ್. ಟಿ.

ಬೆಲೆ: ರೂಪಾಯಿ ಒಂದೂಕಾಲು.

ಅಮೇರಿಕದ ಮೊದಲ ಅಧ್ಯಕ್ಷನ—ಜಾರ್ಜ್ ವಾಶಿಂಗ್‌ಟನ್ನನ ಜೀವನ ಚರಿತ್ರೆಯಿದು. ಈತನಬಾಲ್ಯ, ಯೌವನದ ಸಾಹಸಮಯ ಜೀವನವನ್ನು ಚಿತ್ರಿಸಿ ಮುಂದೆ ಈತ ಹೇಗೆ ಅಮೇರಿಕದ ಜನರ ಮನದಿಂಗಿತವನ್ನು ಅರಿತು ಅದಕ್ಕೆ ತಕ್ಕಂತೆ ಸ್ವಾತಂತ್ರ್ಯ ಸ್ಥಾಪನೆಗಾಗಿ ಹೋರಾಡಿದನೆಂಬುದನ್ನು ಈ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ.

ಒಂದು ರೂಪಾಯಿ ಎಂಟಾಣೆ (ರೂ. 1=50 ನಯೇಪೈಸೆ) ಮನಿಯಾರ್ಡರ್ ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು.

1. ನವಯುಗ ಪ್ರೆಸ್, ಉಡು.ಪಿ.
2. ನವಭಾರತ ಪುಸ್ತಕ ಭಂಡಾರ, ಉಡುಪಿ.



ಉತ್ತರ ಇಂಡಿಯಾ ೬೦ ತೀರ್ಥಯಾತ್ರೆಗಳಿಗೆ ಹಾಗೂ ಮಹಾಶಿವರಾತ್ರಿ--ಮಹೋತ್ಸವಕ್ಕೆ--

ಭೂಕೈಲಾಸ ಶ್ರೀ ಕಾಶೀಕ್ಷೇತ್ರದಲ್ಲಿ ಮುಕ್ಕಾಮ್--

ರೈತರಿಗೆ ಅರ್ಧ ಚಾರ್ಜ್ ಕೇವಲ ೧೦೦ ರೂಪಾಯಿ

ಮೈಸೂರು ಸರಕಾರದ ಪ್ರತಿನಿಧಿಗಳಾಗಿ ಅತ್ಯಂತ ಸುಲಭ ದರದಲ್ಲಿ ಒಳ್ಳೆಯ ಸುಖಕರವಾದ ಪ್ರವಾಸ:—

[ದ್ವಾರಕಾ ಸೋಮನಾಥಕ್ಕೂ ಹೋಗಿ ಬರುವಮ]

೫೦೦ ಜನರ ಸ್ಪೆಶಲ್ ಟ್ರೇನ್

ಶ್ರೀ ಕಾಶೀ, ಗಯಾ, ಸರ್ವೋದಯಶಿಖರ ದಿಲ್ಲಿ, ಹರಿದ್ವಾರ, ಆಗ್ರಾ, ಮಥುರಾ, ಮುಂಬಯಿ ಮೊದಲಾದ ಅನೇಕ ೬೦ ತೀರ್ಥಯಾತ್ರೆಗೆ ಬರತಕ್ಕವರು ತ್ವರೆ ಮಾಡಿರಿ. ಪೂರ್ಣ ಮಾಹಿತಿ ಜಾಹೀರಾತು ನೋಡಿರಿ. ಉಗತ ೩ ಆಣೆ ತಿಕೀಟು ಕಳಸಿರಿ—ವಿವರಗಳಿಗೆ—

ಶ್ರೀ ಶಿವಾನಂದ ಯಾತ್ರಾ ಕಂಪನಿ, ಬನಹಟ್ಟಿ,

ಪೋಸ್ಟ ಬನಹಟ್ಟಿ, (ಜಿ. ವಿಜಾಪುರ)

NAVAYUGA
REGD. NO. M. 3619

UDIPI, THURSDAY
18—12—1958

LICENSE NO. 31
Licensed to Post without Prepayment

ಜೀವವಿಮಾ ಸಂಸ್ಥೆಯ ಹಣ ವಿನಿಯೋಗ

ಸಾರ್ವಜನಿಕರು ಜಾಗ್ರತೆ ಪಡೆಯುವಂತಾಗಬೇಕು

"ರಾಷ್ಟ್ರೀಕೃತವಾದ ಜೀವವಿಮಾ ಕಾರ್ಪೋರೇಶನ್ ತನ್ನ ಹಣವನ್ನು ಸ್ಥಳೀಯಾಭಿವೃದ್ಧಿ ಸಂಸ್ಥೆಗಳಿಗೆ ಸಾಲ ನೀಡುವ ಮೂಲಕ ವಿನಿಯೋಗಿಸಬಾರದೇಕೆ?" ಎಂದು ಕಳೆದ ತಾ ೨೮ರಂದು ಲೋಕ ಸಭೆಯಲ್ಲಿ ವಿಮಾ ಸಂಸ್ಥೆಯ ಹಣ ವಿನಿಯೋಗ ದೋರಣೆಯ ವಿಚಾರ ಚರ್ಚೆಗೆ ಬಂದಾಗ ಶ್ರೀಕೆ ಆರ್ ಆಚಾರ್ ಸೂಚಿಸಿದರು. ಭಾಷಣದ ಸಾರಾಂಶ ಇಂತಿದೆ

'ಜೀವವಿಮಾ ಸಂಸ್ಥೆಗೆ ದೇಶದ ಎಲ್ಲಾ ಭಾಗಗಳಿಂದ ಹಣ ಬಂದು ಸಂಚಯವಾಗುತ್ತದೆ ಪಟ್ಟಣ ಹಾಗೂ ಹಳ್ಳಿಗಳಲ್ಲಿಯೂ ಜೀವವಿಮೆಗೆ ಜನರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಹಾಗಿರುವಾಗ ವಿಮಾದಾರರ ಹಿತಗಳಿಗೆ ನಾವು ಪ್ರಧಾನ ಪ್ರಾಶಸ್ತ್ಯವಿತ್ತು ಈ ಸಂಸ್ಥೆಯ ಹಣ ವಿನಿಯೋಗಿಸುವ ದೋರಣೆಯನ್ನು ರೂಪಿಸಬೇಕಾಗಿದೆ

"ಒಳನಾಡಿನ, ಗ್ರಾಮಾಂತರ ಪ್ರದೇಶಗಳ ಜನತೆಗೂ ಪ್ರಯೋಜನ ಸಿಗುವ ರೀತಿಯಲ್ಲಿ ಈ ಹಣ ವಿನಿಯೋಗವಾಗಬೇಕು ದೊಡ್ಡ ದೊಡ್ಡ ನಗರಗಳಲ್ಲಿ ಹಿರಿಯ ಕೈಗಾರಿಕೆಗಳಲ್ಲಿ ಮಾತ್ರ ಹಣ ಹಾಕುವ ಬದಲು ಗ್ರಾಮಾಂತರ ಪ್ರದೇಶಗಳೂ ಪ್ರಯೋಜನ ಹೊಂದಲನುಕೂಲವಾಗುವಂತೆ, ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಬೋರ್ಡು ಇತ್ಯಾದಿಗಳು ಎತ್ತು ವ ನಾಲಗಳಲ್ಲಿ ಏಕೆ ಈ ಹಣ ವಿನಿಯೋಗಿಸಬಾರದು. ಎಷ್ಟೋ ಮುನಿಸಿಪಾಲಿಟಿಗಳಲ್ಲಿ ಹಣದ ತೀವ್ರ ತಾಪವಿದೆ ರಾಜ್ಯ ಸರಕಾರಗಳು ಹಣ ಒದಗಿಸಲು ಅಸಮರ್ಥವಾಗಿವೆ ಇಂದ ಸ್ಥಳೀಯ ಸಂಸ್ಥೆಗಳ ಸಾಲ ಎತ್ತುವ ಯತ್ನಿಸಿದರೂ ಎಲ್ಲೋ ಸಿಕ್ಕಿ ಒಂದು ಯೂಗವುದಿಲ್ಲ.

'ಸರಕಾರದ ಬಂಗಾರ ಎಂದಿದ್ದ ಈ ಸ್ಥಳೀಯ ಸಂಸ್ಥೆಗಳು ಹಣದ ತಾಪದಿಂದ ಕಷ್ಟ ಪಡುತ್ತಿರುವಾಗ ವಿಮಾ ಸಂಸ್ಥೆಯ ಹಣವನ್ನು ಈ ಸ್ಥಳೀಯ ಸಂಸ್ಥೆಗಳ ಪ್ರಯೋಜನಕ್ಕಾಗಿ ಅವುಗಳಿಗೆ ಸಾಲ ನೀಡುವ ರೀತಿಯಲ್ಲಿ ವಿನಿಯೋಗಿಸುವ ವಿಚಾರವನ್ನು ಸರಕಾರ ಏಕೆ ಮಾಡಬಾರದು? ಈ ರೀತಿಯ ವಿನಿಯೋಗಕ್ಕೆ ನಿಬಂಧನೆಗಳ ಅತಂಕಗಳೇನಾದರೂ ಇದ್ದರೆ, ಶಾಸನಕ್ಕೆ ತಕ್ಕ ತಿದ್ದುಪಡಿ ತರಬಹುದು.

"ಹಿಗೆಯೇ, ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲಿ ಸ್ಥಾಪಿತವಾಗಿ ವ ಚಿಕ್ಕ ಕೈಗಾರಿಕಾ ಸಂಸ್ಥೆಗಳಲ್ಲಿಯೂ ವಿಮಾ ಕಾರ್ಪೋರೇಶನ್ ತನ್ನ ಹಣ ವಿನಿಯೋಗಪಡಬಹುದೆಂದು ಸೂಚಿಸುವೆನು ಇಂಥ ಕೈಗಾರಿಕೆಗಳ ನೆರವಿಗಾಗಿ ಚಿಕ್ಕ ಕೈಗಾರಿಕಾ ಕಾರ್ಪೋರೇಶನ್ ಇದೆ ಆದರೆ ಅನೇಕ ವೇಳೆ ಆದರಿಂದ ಹಣ ಒದಗದಿರುವುದೂ ನಮಗೆ ತಿಳಿದಿದೆ

'ಈ ಸಂದರ್ಭದಲ್ಲಿ ವಿಮಾದಾರರ ಹಿತಗಳ ಕಡೆಗೆ ಲಕ್ಷ್ಯವಿರಬಾರದು ಎಂದು ನಾನು ಹೇಳಲಾರೆ ವಿನಿಯೋಗದ ಭದ್ರತೆಯನ್ನು ಮೊದಲು ಗಮನದಲ್ಲಿಟ್ಟು ಕೊಳ್ಳುವುದು ಅಗತ್ಯ ಆದುದರಿಂದ ವಿಮಾ ಕಾರ್ಪೋರೇಶನಿನ ಹಣ ವಿನಿಯೋಗ ವಿಚಾರ ನಿರ್ಧರಿಸಲು ಒಂದು ಸಂಘಿನೆ ಅಗತ್ಯವಾಗಲೂ ಬಹುದು"

ಬ್ರಿಟನ್ನಿನಲ್ಲಿ ತಯಾರಾದ ಈ ಮೂದರಿಯ ನಾಲ್ಕು ಜೆಟ್ ವಿಮಾನಗಳನ್ನು ಅರ್ಜೆಂಟೈನಾ ವಿಮಾನ ಸಂಸ್ಥೆ ಕಂಪೆನಿಯವರು ಕೊಂಡುಕೊಳ್ಳಲಿರುವರು

ದೇಶ ಪರಿಚಯ

(ಎಂಟನೇ ಪುಟದಿಂದ)

ಪ್ರಭುತ್ವ ೧೫೦೦ ವರೆಗೆ ಡೆನ್‌ಮಾರ್ಕ್ ಇದರ ಅಂಗವಾಗಿದ್ದು ಆದು ೧೮೧೪ರಲ್ಲಿಯೂ ಸ್ವೀಡನ್ ೧೮೧೪ರಿಂದ ನೋರ್ವೆಯೊಡನಿದ್ದು ೧೯೦೫ರಲ್ಲಿ ಬೇರೆ ಬೇರೆ ಆದುವು. ಡೆನ್‌ಮಾರ್ಕಿನ ಅರಸ ಎಂಟನೆಯ ಫ್ರೆಡರಿಕನ ಎರಡನೆಯ ಮಗ ಏಳನೆಯ ಹಾಕೋನನು ಈಗ ನಾರ್ವೆಯ ರಾಜನಿದ್ದಾನೆ ೧೯೦೫ರಲ್ಲಿ ಸ್ವೀಡ್ ರ್ಟಿಂಗ್‌ನಲ್ಲಿ ಈತನನ್ನು ಅರಸನೆಂದು ಆರಿಸಲಾಯಿತು ಶಾಸನಾಧಿಕಾರವು ೧೫೦ ಸದಸ್ಯರಿರುವ ಸ್ವೀಡ್ರ್ಟಿಂಗ್‌ನ ವಾಲಿಗೆ ನೇರಿದುದು ಇದಕ್ಕೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಚುನಾವಣೆ ನಡೆಯುವುದು. ಸ್ವೀಡ್ರ್ಟಿಂಗ್ ಎಂಬುದು ರಾಜಕೀಯ ಮತ್ತು ವರ್ತಮಾನ ಪತ್ರಿಕೆಗಳ ಪ್ರಶ್ನೆಗಳಿಜ್ಞನನ್ನೂ ಚರ್ಚಿಸುವುದು ಆದರೆ ರಾಜಕೀಯದ ಪ್ರಶ್ನೆಗಾಗಿ, ಇದನ್ನು ಎರಡು ಭಾಗಗಳನ್ನಾಗಿ ಮಾಡಲಾಗಿದೆ.

ಈಗಲ್ ಗೇಹ ರ್ಡಸನರು ಈಗ ನಾರ್ವೆಯ ಪ್ರಧಾನಿಗಳಾಗಿದ್ದಾರೆ. ಇವರನ್ನು ೧೯೫೫ನೇ ಜನವರಿ ೫ರಲ್ಲಿ ಆರಿಸಲಾಯಿತು

ದೋಗರುಜನ, ಆಕಸ್ಮಿಕ ಆಘಾತ ಮತ್ತು ನಿರುದ್ಯೋಗಗಳ ವಿಮಾ ಪದ್ಧತಿ ಹಾಗೂ ಕುಟುಂಬ ಭತ್ತೆ ಮತ್ತು ವೃದ್ಧಾಪ್ಯ ವೇತನಗಳ ಕ್ರಮವು ನಾರ್ವೆಯಲ್ಲಿದ್ದು ಉತ್ತಮ ಆರೋಗ್ಯ ಮತ್ತು ಸಮಾಜ ಪದ್ಧತಿಗಳಿಗೆ ಹೆಸರಾಗಿದೆ

ಇವೇಂಜಲಿಕಲ್ ಲೂಥೇರಿಯನ್ ಧರ್ಮವು ರಾಜ್ಯದಿಂದ ಗೌರವಿಸಲ್ಪಡುತ್ತದೆ. ಇದರ ಗುರುವಿನ ನಾಮಸೂಚನೆಯನ್ನು ಅರಸನು ನಿರ್ದೇಶಿಸುತ್ತಾನೆ. ಎಲ್ಲ ಧರ್ಮಗಳೂ ಇಲ್ಲಿ ಮನ್ನಿಸಲ್ಪಡುತ್ತವೆ

೧೮೬೦ರಿಂದ ೬ರಿಂದ ೧೫ ವರ್ಷ ವಯಸ್ಸಿನ ಮಕ್ಕಳ ವಿದ್ಯಾಭ್ಯಾಸವು ಅನಿವಾರ್ಯವಾಗಿದ್ದು ಶಾಲೆಗಳು ಉನ್ನತ ಮಟ್ಟದಲ್ಲಿ ನಡೆಸಲ್ಪಡುತ್ತಿವೆ ಓಸ್ಲೋದಲ್ಲಿ ಸ್ಥಾಪಿತವಾದ ಒಸ್ಲೋ ವಿಶ್ವವಿದ್ಯಾಲಯ, ಬರ್ಜಿನ್ ವಿಶ್ವವಿದ್ಯಾಲಯಗಳೂ ಟ್ರೋಂಡಿಯಮ್ಮಿನ ಟೆಕ್ನೋಲೋಜಿಕಲ್ ಸಂಸ್ಥೆಯೂ ಆಗಿನ ವ್ಯಾವಸಾಯಿಕ ಕಾಲೇಜೂ ಸರಕಾರದಿಂದ ಸಹಾಯಧನವನ್ನು ಪಡೆಯುತ್ತವೆ ಹಲವಾರು ವರ್ಷಕಾಲ ಡೇನಿಷ್ ಭಾಷೆಯ ಉಪಯೋಗಾನಂತರ ಈಗ ಸ್ಥಳೀಯ 'ಲೇಡ್ಸ್‌ಮಾಲ್' ಎಂಬ ಭಾಷೆಯನ್ನು ಸರಕಾರೀ ಭಾಷೆಯಾಗಿ ಬಳಸಿಕೊಳ್ಳಲಾಗುತ್ತಿದೆ

ಮಿಲಿಟರಿ ಸೇವೆಯು ಸಾರ್ವತ್ರಿಕ ಮತ್ತು ಅನಿವಾರ್ಯವಾಗಿದೆ ದಂಡಿಗೆ ಸೇರುವಾಗ ಆಗಬೇಕಾದ ವಯಸ್ಸು ೨೦. ನುತ್ತ ೧೮೦೦ ತಿಂಗಳ ಗಡ ತನಕ ಸೇವೆ ಸಲ್ಲಿಸಬೇಕು ನಾರ್ವೆಕಗಳು, ಸಬಾಜೋನ್‌ಗಳು ಮೂದಲಾದುವುಗಳಿಂದ ಕೂಡಿದ ನ್ಯಾಟಾಸೇನೆಯಿದೆ ಹಿಂದು ಪುಟ್ಟ ಆಕಾರವೂನ ದಳವೂ ಇರುವುದು ನಾರ್ವೆಯು ಸಂಯುಕ್ತ ರಾಷ್ಟ್ರ ಸಂಸ್ಥೆಯ ಸದಸ್ಯ ರಾಷ್ಟ್ರವಾಗಿದೆ ಮತ್ತು ಅದರೊಂದಿಗೇನೇ ನಾಟೋ ಮತ್ತು ನೋರ್ಡಿಕ್ ಕೌನ್ಸಿಲುಗಳ ಸದಸ್ಯತ್ವವನ್ನೂ ಪಡೆದಿದೆ

ಕುಂದಾಪುರ ಡಿ ಮುನ್ಸೀಫ್ ಕೋರ್ಟಿನಲ್ಲಿ

S C No 759/1958

ಕೆ ವಿಠಲನುಂಜುನಾಥ ಕಾಮತ ವಾಸಿ ಸಂಕಣ ಮರಕಾಲ, ಪೋಗೇರ ಹಾಲಾಡಿ ಅಂಚೆ ಕುಂದಾಪುರ ತಾಲ್ಲೂಕು ಬಿಡಾಡಿ ಗ್ರಾಮ P O Koteshwar ಪ್ರತಿವಾದಿ.

ಇವರಿಗೆ —

ನಿಮಗೆ ಪ್ರತಿವಾದಿಯು ತಾರೀಕು 24 2 1958ರಲ್ಲು ರೂಪಾಯಿ182 0 0ಕ್ಕೆ ಬರಸಿಕೊಟ್ಟ ದಿನಾಂಕದ ನೋಟಿನ ಹಣ ಬಡ್ಡಿ ಬಗ್ಗೆ ವಾದಿಯು ಮೇಲ್ಕಾಂಡ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ದು ಆಕ್ಷೇಪವಿದ್ದಲ್ಲಿ ತಾರೀಕು 9.1 1959ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಿ ಆಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಮ್ಮ ಉಜ್ರು ಶಿಷ್ಯಾಯೇಕತ್ಪಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಆ ಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿಯಿದೆ

K Raghunath Shenai,
Pleader for Plff
Coondapoor, 11-12-1958

ಕುಂದಾಪುರ ಅಸಿಸ್ಟಂಟ್ ಕಮಿಷನರವರ ಕೋರ್ಟಿನಲ್ಲಿ

O P No 1000/1957

ಗಣಪಸುಡ್ತಿ ಅರ್ಜಿದಾರರು

1 ಮಲ್ಲಿ ಹೆಂಗ್ಸು,೨ ಕೆಸ್ತಿ ದೇವ, 4 ಚಿಕ್ಕಿ ಹೆಂಗ್ಸು,5 ನಂಗಿ ಹೆಂಗ್ಸು,6 ಮಂಜಿ ಹೆಂಗ್ಸು ಹಳೆ ಪೈಕ ಮಾಜಿ ಹೆಂಗ್ಸಿನ ಮಕ್ಕಳು ಕುಂದಾಪುರ ತಾಲ್ಲೂ ಬಡಾಕೆರೆ ಗ್ರಾಮದಲ್ಲಿರುವವರು — ಎದ್ರಿರು

ಮೇಲ್ಕಂಡ ಅರ್ಜಿ ವ್ಯವಹರಣೆಯಲ್ಲಿ 1 2 3 4 5 6ನೇ ಎದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ಸದ್ರಿ ಅರ್ಜಿ ವ್ಯವಹರಣೆಯಲ್ಲಿ ಅರ್ಜಿದಾರರು ಗೇಣಿ ಬಾಕಿಗೂ ಆಸ್ತಿ ಸ್ವಾಧೀನತೆಗೂ ಕೊಡಾ ದಾಖಲು ಮಾಡಿದ ಅರ್ಜಿಯು ತಾ೩.1.1959ಕ್ಕೆ ಇಡೋಣಾಗಿಯಿದೆ, ಆದ್ದರಿಂದ ಈ ಬಾದಿನಲ್ಲಿ ಆಕ್ಷೇಪಗಳೇನಾದರೂ ಇದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿನಕ ಹಗಲು 11ಗಂಟೆಗೆ ಹಾಜ್ರು ಆಗಿ ತಿಳಿಯಪಡಿಸೋಣಾಗಬೇಕಾಗಿ ಈ ಮೂಲಕ ಜ್ಞಾಪೀರು ಮಾಡಿಕೊಂಡಿರುತ್ತೇವೆ

ಸೂರಪ್ಪಸೆಟ್ಟಿ ಕೊಳ್ಕೆಬೈಲು,
ಅರ್ಜಿದಾರರ ಕಡೆ ವಕೀಲ್

ಮೊಕ್ಕಾಂ:ಕುಂದಾಪುರ
ತಾ 11.12 1958

ಎಲ್ಲರಿಗೂ ಬೇಕಾಗಿದೆ.

ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬನ ಆರ್ಥಿಕ ಅನುಕೂಲತೆ ಮತ್ತು ಅವಶ್ಯಕತೆಗಳಿಗೆ ಒಪ್ಪುವ ಪಲದಾಯಕ ಯೋಜನೆಗಳು ನಮ್ಮಲ್ಲಿವೆ

ಪಿಗ್ಮಿ ಠೇವಣಾತಿ ಯೋಜನೆ ಪ್ರತಿದಿನವೂ ಉಳಿಸಬೇಕೆಂಬ ಅಪೇಕ್ಷೆಯುಳ್ಳವರಿಗೆ ಅಗತ್ಯ ನಾಲ್ಕಾಣೆಯಷ್ಟು ಅಲ್ಪ ಮೊತ್ತದಿಂದಲೂ ಆರಂಭಿಸಬಹುದು ಪಿಗ್ಮಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.

ಕ್ಯಮ್ಯುಲೇಟಿವ್ ಠೇವಣಾತಿಗಳು ರೂಪಾಯಿ ಐದು ಆಥವಾ ಆದರ ಗುಣಕಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಆಕರ್ಷಕವಾಗಿದೆ

ಲಕ್ಷ್ಮಿ ಠೇವ ಸರ್ಟಿಫಿಕೇಟ್ ನಿಮ್ಮಲ್ಲಿರುವ ಬಂದವಾಳಕ್ಕೆ ಲಾಭದಾಯಕ ಪ್ರತಿಫಲ ದೊರೆಯುವುದು ಸುಪ್ತ ಧನದ ಸದ್ವಿನಿಯೋಗಕ್ಕೆ 'ಲಕ್ಷ್ಮಿ'ಯ ಆಹ್ವಾನ ಮನೋಹರವಾಗಿದೆ.

ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯ. ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಪೈಕವಿದೆ ಮಾತ್ರವಲ್ಲದೆ, ನಮ್ಮ ಶಾಖೆಯಿಂದ ಧನಾರ್ಥವಾಗಿ ಹಣ ಪಾವತಿಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ

ಆವರ್ತ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ.

THE CANARA INDUSTRIAL & BANKING SYNDICATE LTD, UDIPI.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ ಚಂದಾರೂ 5-75] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ 13 ನಯೆಪೈಸೆ

ವರುಷ ೩೮ ವಾರ ೧೬ 25-12-1958 Vol 38 No 16.

ಕಠೋರ ಸತ್ಯ

ಭೂಸುಧಾರಣೆಯು ವಿಚಿತ್ರ ಹಾಸ್ಯವಾಗಿದೆ

ಮಧ್ಯಮ ವರ್ಗದ ಭೂಸ್ವಾಮಿಗಳನ್ನು ತಿಪ್ಪೆಗೆಸೆಯುತ್ತಿದೆ

ಭಾರತದಲ್ಲಿನ ಹೆಚ್ಚಿನ ಜನರು ಕೃಷಿಯನ್ನೇ ಹೊಂದಿಕೊಂಡು ಜೀವನ ಸಾಗಿಸುವುದರಿಂದ ಇದನ್ನು ವ್ಯಾವಸಾಯಿಕ ರಂಪ್ರದೆಂದು ಕರೆಯುತ್ತಾರೆ ಈ ಕಠೋರ ಸತ್ಯವನ್ನು ಮನದಂದೇ ನಮ್ಮ ಯೋಜನೆಗಳಲ್ಲಿ ಈ ಕ್ಷೇತ್ರಕ್ಕೆ ಅತ್ಯಧಿಕ ಗಮನವನ್ನು ಕೊಟ್ಟಿಲಾಗಿದೆ ಅಲ್ಲದೇ ವ್ಯವಸಾಯಿಕ ಸುಧಾರಣೆಗಳತ್ತವೂ ರಂಪ್ರದ ಶಾಸನ ಚಕ್ರಾಣಿಯನ್ನು ಹರ್ತದಲ್ಲರಿಸಿಕೊಂಡಿರುವ ಕಾಂಗ್ರೆಸ್ ಸರ್ಕಾರವು ತನ್ನ ಗಮನಹರಿಸಿದೆ. ಇದನ್ನು ಯಾರೂ ಅಲ್ಲಗಳೆಯಲಾರರು ಭಾರತದಂತಹ ಕೃಷಿ ಪ್ರಧಾನವಾದ ಮತ್ತು ಜನನಿಬಿಡವಾದ ದೇಶದಲ್ಲಿ ವ್ಯಾವಸಾಯಿಕ ಕ್ಷೇತ್ರದಲ್ಲಿ ಪರಿಣಾಮಕರ ಸುಧಾರಣೆಗಳನ್ನು ಮಾಡುವುದೇ ಪ್ರಗತಿಪಥ ದ್ಯೋತಕವೆಂಬುದು ನಿರ್ವಿವಾದ. ಇದಕ್ಕೆ ದೇಶದ ಯಾವುದೇ ವರ್ಗದ ಆಕ್ಷೇಪವೂ ಬರಲಾರದು ಆದರೆ, ಈ ಸುಧಾರಣೆಗಳು ಯಾವ ಪ್ರಕಾರವಾಗಬೇಕು ಎಂಬುದೇ ಒಂದು ಪ್ರಶ್ನೆ. ಈ ಪ್ರಶ್ನೆಯೇಳುವುದು ಅತಿ ಸರಳವಾಗಿಯೇ ಆದರೂ ಉತ್ತರವು ಮಾತ್ರ ತೀರ ಗಹನನಾನಾದೆಯೆಂದು ಒಪ್ಪಬೇಕು. ಭಾರತದ ವ್ಯವಸಾಯ ಕ್ರಮದಲ್ಲಿ ನಾನಾ ಪ್ರಕಾರಗಳಿದ್ದು, ಯಾವುದಾದರೂ ಒಂದೇ ಮಾನವನ್ನಿಟ್ಟುಕೊಂಡು ನೀರನ್ನೂ ಹಾಲನ್ನೂ ಸಮಾನವಾಗಿ ಗಣಿಸುವ ಒಂದು ಹಾಸ್ಯಾಸ್ಪದ ಮಾದರಿಯನ್ನು ಅಖಿಲ ಭಾರತಕ್ಕೆ ಅನ್ವಯಿಸುವ ಪ್ರಯತ್ನವು ಈಗೀಗ ನಡೆಯುತ್ತಿರುವುದು ಮಾತ್ರ ಶೋಚನೀಯವಿನ್ನದೆ ಗತ್ಯಂತರ ವಿಲ್ಲ.

ಭೂಮಿಯನ್ನು ಬಾಗುಮಾಡುವವನಿಗೆ ತನ್ನ ಪರಿಶ್ರಮಕ್ಕೆ ಯೋಗ್ಯ ಪ್ರತಿಫಲ ದೊರೆಯದೆ ಹೋದರೆ, ಅಂತಹ ರೈತನಿಗೆ ತನ್ನ ಉದ್ಯೋಗದಲ್ಲಿ ಆಸಕ್ತಿ ಬೆಳೆಯದೆನ್ನಲಾಗುತ್ತಿದೆ. ಅಂತೆಯೇ ಭೂಮಿಯನ್ನು ತನ್ನ ಪೈಬೆವರಿನಿಂದ ಪಡೆದುಕೊಂಡು ಭೂಸ್ವಾಮಿಯಾಗಿರುವವನಿಗೂ ತಾನು ಹಾಕಿದ ಬಂಡವಳಕ್ಕೆ ತಕ್ಕ ಪ್ರತಿಫಲವೂ ದೊರೆಯಬೇಕಾದುದು ಅನ್ಯಾಯವೆಂದು ಹೇಳ ಬೇದು ಸಾಧ್ಯವಿಲ್ಲ. ಉತ್ತರ ಭಾರತದ ಶಾಶ್ವತ ಭೂಕಂದಾಯ ಪದ್ಧತಿ, ಜಮೀನ್ದಾರಿ ಪದ್ಧತಿಗಳ ಮೂಲಕ ಭೂಸ್ವಾಮಿಯಾಗಿರುವವನನ್ನೂ ದಕ್ಷಿಣ ಭಾರತದ ಹೆಣಕೊಟ್ಟು ಕೊಂಡುಕೊಂಡ ಭೂಸ್ವಾಮಿಯೆನಿಸಿಕೊಂಡವನನ್ನೂ ಒಂದೇ ಸಮವಾಗಿ ಪರಿಗಣಿಸುವುದು ನ್ಯಾಯವಲ್ಲ ಎಂಬುದನ್ನು ಪ್ರಸಿದ್ಧ ಲೇಖಕರಾದ ಎಂ ವಿ ವೆಂಕಟರಾಯರು ಅಭಿಪ್ರಾಯಪಟ್ಟಿದ್ದಾರೆ ಹಾಗಾಗಿ, ದಕ್ಷಿಣ ಭಾರತದ ಭೂಮಾಲೀಕರುಗಳಿಗೆ ಪ್ರತ್ಯೇಕ ಪರಿಹಾರ ಶೋಧಿಸಬೇಕೆಂಬುದು ಮಾನವೀಕವೂ ಅತ್ಯಂತಾವಶ್ಯಕವೂ ಆ ವಿಷಯವಾಗಿದೆ

ಎಳ್ಳಾಪ್ಪೋರಂಗನ್ದರಿಸಲು ಟೀಪ್ ಕೆಳಕಾರರನ್ನು ಇಲ್ಲಿ ಕಾಣಬಹುದಾಗಿದೆ

ಮೈಸೂರು ರಾಜ್ಯದಲ್ಲಿ ಈಗ ಭೂಸುಧಾರಣಾ ವಿಧೇಯಕವೊಂದು ಶಾಸನ ಸಭೆಯ ಮುಂದೆ ಮಂಡಿಸಲ್ಪಟ್ಟಿದೆ ಇದು ಜಂಟಿ ಸಮಿತಿಯ ವರದಿಯಲ್ಲಿ ಸೂಚಿಸಲ್ಪಟ್ಟ ಕ್ರಮ ಹಾಗೂ ನಿಯಮ ಬದ್ಧತೆಗಿಂತ ಉದಾರವಾಗಿದೆಯೆಂದು ಒಪ್ಪಿಕೊಳ್ಳಬೇಕು. ಆದರೆ, ಈ ವಿಧೇಯಕವು ನ್ಯಾಯೋಚಿತವಾಗಿದೆಯೇ? ಎಂಬುದನ್ನು ಗಮನಿಸಬೇಕು. ಇದರಲ್ಲಿ ಭೂಸ್ವಾಮಿಯಾಗಿರುವವನನ್ನು ತೀರ ಪಾತಾಳಕ್ಕೆ ಎಸೆಯುವ ಪ್ರಯತ್ನವನ್ನೇ ಮಾಡಲಾಗಿದೆ ಇದನ್ನು ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಸಾಮ್ಯವಾದ ಮತ್ತು ಸಮಾಜವಾದಗಳಿರಡನ್ನೂ ದೂರತಳ್ಳಿ, ಸೂತನ "ವಾದ" ವೊಂದಕ್ಕೆ ಜನ್ಮವಿತ್ತಂತಾಗಿದೆ ಅಥವಾ ಈಗಿರುವ ಭೂಸಮಸ್ಯೆಗಳ ಪರಿಹಾರವೆಂದು ಹೇಳಿಕೊಂಡು ಹೊಸತಾದ ಸಮಸ್ಯೆಗಳನ್ನು ಎಬ್ಬಿಸಿ, ಈಗಿರುವ ಸಮಸ್ಯೆಗಳಿಗೆ ಹೊಸರೂಪವೊಂದನ್ನು ಮಾತ್ರ ಕೊಟ್ಟಂತಾಗಿದೆ ಹೀಗಾಗಿ ಈಗ ಮುಂಬರಿಯುತ್ತಿರುವ ನಿರ್ದೇಶಕವು ಮುಂದೂರಿಯಿತೆಂದರೆ, ಆದು ಕಾರ್ಯರೂಪಕ್ಕೆ ಬರುವಾಗ, ಭೂಸಮಸ್ಯೆಗಳು ದೂರವಾಗುವುದೆಂಬುದು ಶುದ್ಧ ಅವಿವೇಕ ಕಲ್ಪನೆ. ಆದರ ಬದಲು ಈ ಸಮಸ್ಯೆಗಳು ಮತ್ತಷ್ಟು ಬೆಳೆದು, ವಾತಾವರಣವು ಸಂಪೂರ್ಣ ಗೊಂದಲಮಯವೇ ಆಗಿ ಅರಾಜಕತೆಗೆ ಮಾತ್ರ ಹೇತುವಾಗುವುದೆಂಬುದನ್ನು ಕಂಡುಕೊಳ್ಳಬಹುದು.

ವರ್ಷಕ್ಕೆ ರೂ. ೩೬೦೦ ನಿವ್ವಳ ಆದಾಯ ಬರುವ ಭೂಮಿಯನ್ನು ಪರಮಾವಧಿ ಹಿಡುವಳಿಯೆಂದು ಗಣಿಸಲಾಗಿದೆ. ಆದರೆ, ಇಷ್ಟು ಆದಾಯ ಬರಬೇಕಾದರೆ, ಭೂಮಿಯ ಪ್ರಮಾಣವು ಎಷ್ಟಿರಬೇಕು! ಸದ್ಯ, ಈ ಪ್ರಮಾಣಕ್ಕಿಂತ ಅಧಿಕ ಭೂಮಿಯಿರುವ ಭೂಸ್ವಾಮಿಗಳ ಸಂಖ್ಯೆಯೆಷ್ಟು? ಎಲ್ಲ ಭೂಸ್ವಾಮಿಗಳಿಗೂ ಇಷ್ಟು ಆದಾಯ ಬರುವಷ್ಟು ಭೂಮಿಯನ್ನು ಉಳಿಸಿಕೊಳ್ಳಲು ಅವಕಾಶವಿಲ್ಲವೆ, ಆದರೆ, ಇದಕ್ಕಿಂತ ಕಡಿಮೆ ಭೂಮಿಯಿರುವವರಿಗೆ ಅಷ್ಟನ್ನು ಪಡೆದುಕೊಳ್ಳುವ ಸೌಲಭ್ಯವಿರುವುದಿಲ್ಲ. ಅಲ್ಲದೆ, ಹೀಗೆ ಭೂಸ್ವಾಮಿಯಿಂದ ಪರಮಾವಧಿಗಿಂತ ಅಧಿಕ ಭೂಮಿಯನ್ನು ಸರಕಾರವು ವಶಪಡಿಸಿಕೊಳ್ಳುವಾಗ, ಅವರ ಕೈಗೆ ದೊ

(ಅನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್,

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ - ಮಂಗಳೂರು—3

ಸ್ಥಾಪನೆ.- 1931

ಈ ಬೇಂಕನ್ನು ಇಂದಿನ
ಉನ್ನತಿ ಸ್ಥಾನಕ್ಕೆ ತರಲು
ಪರಿಶ್ರಮಿಸಿದ ಪ್ರತಿಯೊಬ್ಬ
ರಿಗೂ ನಮ್ಮ ನಮ್ರ ಕೃತಜ್ಞತೆಗಳು.

ಕ್ರಿಸ್ಮಸ್ ಶುಭಾಶಯಗಳು — ಸಿಂಡಿಕೇಟ್ ಬೇಂಕ್

ಕಥಾ ವಿಹಾರ

ಮಾತೃ ಹೃದಯ ಬೆರೆತ ತಾಯಿ

ಆವಳು ಉದಾತ್ತೆಯಾಗಿದ್ದಳು ಆದರೆ.....?

"ದುಃಖಿಸಬೇಡಮ್ಮ! ನಾನೇನು ಒಬ್ಬರ ಬಾಲಬಡಿದು ಹಂಗಿನ ಅನ್ನವನ್ನು ತಿನ್ನಲಿಕ್ಕೆ ಹೋಗುತ್ತೇನೆಯೇ? ಛೀ! ನೀನೇ ಈ ರೀತಿ ದುಃಖಿಸುತ್ತ ಕುಳಿತರೆ ನಾಡಿನ ಗತಿ ಏನು? ಇಂದು ನಮ್ಮ ನೆರೆಯ ರಾಜ್ಯದ ಮೇಲೆ ದಂಡೆತ್ತಿ ಬಂದವನು ನಮ್ಮ ನಾಡಿನ ಮೇಲೆ ದಂಡೆತ್ತಿ ಬರದೇ ಇರನೇ? ಬೇಡಮ್ಮ ನಿನ್ನ ಕಣ್ಣಲ್ಲಿಯ ಹನಿಗಳು ನನ್ನ ಬಿಸಿ ರಕ್ತವನ್ನು ಆರಿಸಿ ಬಿಡುತ್ತಿದೆ. ಎಷ್ಟುದರೂ ತಾಯಿಕರುಳು ಹ್ಞೂಂ! ಆಶೀರ್ವದಿಸು ತಾಯಿ, ವೀರ ಪದಗಳನ್ನು ಹಾಡುತ್ತ ಚಂದನವ ಇಟ್ಟು ಆರತಿಬೆಳಗಿ ಕಳಸವನ್ನು. ನಾನು ನಿನ್ನ ಮಗನಾಗಿ ಜನಿಸಿದ್ದಕ್ಕೆ ನಿನ್ನ ಕೀರ್ತಿ ಧ್ವಜವನ್ನು ಎಲ್ಲರೂ ನೋಡುವಂತೆ ಮಾಡುವದೇ ಅಲ್ಲವೇ? ಇಲ್ಲವಾವರೆ ಏಕೆ ಜನಿಸಬೇಕು?"

ಈ ಮಾತನ್ನು ಕತ್ತು ನರ್ಸಗಳ ಪೂರ್ವದಲ್ಲಿ ನಾನು ನನ್ನ ಕೆವಿಯಿಂದ ಕೇಳಿದ್ದೆ ಯಾಕಂದರೆ ಅಂದು ಶಂಕರ—ನಾನು ಕೂಡಿಯೇ ನಾಡ ರಕ್ಷಣೆಗೆ ಕರೆಕೊಟ್ಟ ಸರಕಾರದ ಪ್ರಾವೇಶಿಕ ಸೈನ್ಯದಲ್ಲಿ ಸೇರಿದ್ದೆವು. ಸರಕಾರದ ಕರೆ ಬರುವದೊಂದೇ ತಡ ಹಳ್ಳಿ-ಹಳ್ಳಿಯಿಂದ ಜನ ಬಂದು ಸೇರುತ್ತಿತ್ತು ಸೈನ್ಯಕ್ಕೆ ಆವಾಗ್ಯೆ ಶಂಕರನ ತಾಯಿ 'ಸುಶೀಲೆ' ಮಗನಿಗೆ ಆಶೀರ್ವದಿಸಿದ್ದಳು. "ವಿಜಯ ದೇವಿಯಸ್ಸು ಕೂಡಿ ಬಾ" ಎಂದು. ಅಂದವಳು ನಮ್ಮನ್ನು ಕುರಿತು ಹೇಳಿದ್ದಳು—

"ನಾನು ಹೆತ್ತ ಮಾತ್ರಕ್ಕೆ ತಾಯಿ. ಆದರೆ ಈ ಹೆತ್ತ ತಾಯಿಗಿಂತಲೂ ತುತ್ತು ಣಿಸಿ ಸಾಕಿದ ತಾಯಿಯೇ ತಾಯಿ. ನೀವೆಲ್ಲ ಇವನನ್ನು ಮಗು ಎಂದು ತಿಳಿದು ಕಾಪಾಡಿರಿ. ಇದೊಂದು ಕುಸುಮ ಧರೆಯಲ್ಲಿ ಅರಳಿ ಬಂದಿದೆ ಇದನ್ನು ಯಾರೂ ಹರಿಯದಂತೆ ನೋಡಿಕೊಳ್ಳಿ. ಅರಳದ ಮುನ್ನ ಕುಯಿದರೆ ವಾಸನೆ ಬೀರದು. ಇದು ಜಗತ್ತನ್ನು ಆರಿಯದು. ದುಃಖವನ್ನರಿಯದು. ಕಾತುಕ ದೃಷ್ಟಿಯಿಂದ ಜಗದ ನಾಲ್ಕೂ ನಿಟ್ಟನ್ನೂ ನೋಡುತ್ತಿದೆ. ಯಾವ ಪಥವನ್ನೂ ಅರಿಯದು. ಮನೆಯಲ್ಲಿ ರೊಟ್ಟಿಗಾಗಿ ತಂಗಿ-ತಮ್ಮ, ಇವರೊಡನೆ ಜಗಳಾಡುತ್ತಿತ್ತು. ಇದು ನಿಮ್ಮ ಕಿರಿಯ ತಮ್ಮ ಎಂದು ತಿಳಿಯಿರಿ. ಜಗಳ —ತೆಗೆದರೆ ಹರಿದು ಹಂಚಿ ಶಾಂತಿಯಿಂದ ಉಂಡು ತೃಪ್ತಿ ಪಡೆಯಿರಿ. ಬಟ್ಟೆಯ ಮೇಲೆ ಇದಕ್ಕೆ ಮಮತೆ ಇಲ್ಲ. ಆದರೂ ಮಗು ಮುದ್ದಾಗಿ ಕಾಣಲು ಜೆಂದನ್ನ ಅರಿವೆಯನ್ನು ತೊಡಿಸಿರಿ. ಆದರೆ ಮಾತ್ರ ಯಾವ ಹೆಣ್ಣಾಗಲೀ ಕಣ್ಣಾರಳಿಸಿ ಇಣಕಿ ಹಾಕುವಂತೆ ನಾಡಬೇಡಿರಿ. ಸಹಸ್ರ ಪಥಗಳ ಈ ಜಗದಲ್ಲಿ ಮಟ್ಟು ಪಾದಗಳನ್ನು ಊರುತ್ತಾ ನಡೆದಿದ್ದಾನೆ. ನೀರವತೆಯಿಂದ ನಾಲ್ಕೂ ನಿಟ್ಟಿನ್ನು ನೋಡಿ ಬಯಸುತ್ತಿದೆ. ಸಾವಿರ ಜನ ಮಧ್ಯ ಇವನೊಬ್ಬ. ನೀವು ಅಕೃತಿಯಿಂದ ಕರೆದರೆ ಬಿಕ್ಕ ಹೆಜ್ಜೆಯನಿಕ್ಕುತ್ತಾ ನಿಮ್ಮ ನೆರಳನಂತೆ ಅನುಸರಿಸುತ್ತಾನೆ. ಈತ ಸಣ್ಣನು, ಈ ಘೋರ ಸಂಸಾರದ ಕರಿಣ ಕಾರ್ಯ ನಿರ್ವಹಣೆಗೆ ಹೊರಟಿದ್ದಾನೆ. ಮುಂದೆ ಏನಾಗುವದೋ ಯಾರು ಬಲ್ಲರು? ಇದು ಹೇಗೆ ಬೆಳೆಯಿತೋ ಹಾಗೆ ಕಾಪಾಡುವ ಭಾರ ನಿಮ್ಮನ್ನೂ ಕೂಡಿದೆ. ಬಡವಿಯಾದ ನಾನು ಇದಕ್ಕೆಂತಲೂ ಹೆಚ್ಚಿನದೇನನ್ನು ಕೇಳಲಿ ಮಗು 'ಶಂಕರ' ಮುಂದಡಿ ಇಟ್ಟುದನ್ನು ಹಿಂದಕ್ಕೆ ಇಡಬೇಡ. ಆಪಾರ ಸಂಸಾರ ಸಾಗರದ ನೂರೆತೊರೆಗಳಲ್ಲಿ ತಿಲುಕಿ ಅದರಲ್ಲಿ ಕಾಣದ ಒಂದು ಸುಖವನ್ನು ಕಂಡುಕೋ. ಇಷ್ಟೇ ನಿನ್ನ ಹೆತ್ತ ತಾಯಿಯ ನೀರ ಗೀತೆ" ಎಂದು ಜಂದನಸನಿಟ್ಟು ಮಗನಿಗೆ ಆಶೀರ್ವದಿಸಿದ ತಾಯಿಯೇ ಇಂದು ಬೇರೊಂದು ಬಗೆಯಿಂದ ಆಶೀರ್ವದಿಸಿ ಬೀಳ್ಕೊಳ್ಳುತ್ತಿದ್ದಾಳೆ.

"ಭಯಾನಕ, ಭೀಭತ್ಸ್ಯ, ಪ್ರಮಾದ ಪ್ರಮೇಯಗಳೆಂದರೇನೂ ನನಗೆ ಆಶ್ಚರ್ಯವೆನಿಸುವದಿಲ್ಲ. ಯಾಕಂದರೆ ಈ ಹತ್ತು ವರ್ಷಗಳ ಪ್ರತೀಯೊಂದು ದಿನವೂ ಯುದ್ಧದಲ್ಲಿ ಕಳೆದಿದೆ. ಹೆಣಗಳ ಜೀತ್ಕಾರದ ಮಧ್ಯ ವಸತಿ ನಿರ್ಮಿಸಿ ಉಂಡುಟ್ಟ ದ್ದೇನೆ. ಇವಾನವೂ ಮನುಷ್ಯನನ್ನು ಅರಿಯದ ಲೋಕದತ್ತ ಒಯ್ಯಲಾರವು. ಒಮ್ಮೊಮ್ಮೆ ನಿಸರ್ಗದಲ್ಲಿ ಯಾವದಾದರೊಂದು ಜೀವತ್ಕಾರಗಳು ತೋರಿದರೆ ಆಶ್ಚರ್ಯಪಡುವದು ಸಹಜ. ಆದೇನೋ ನಮ್ಮ ನುನಮಂದಿರದಲ್ಲಿ ಸದಾ ಮಾಸ ಮಾಡಿ ಇರಲಾರದು, ಮನ ಕದಡಲಾರದು. ಆದರೆ ಕರುಣಾಜನಕ ನೋಟಗಳಿಂದ ನಮ್ಮ ಮನ ಧೃತಿಗೆಡುವಷ್ಟು ಇನ್ನಾವ ಚಿನುತ್ಕಾರಗಳಿಂದಲೂ ಧೃತಿಗೆಡಲಾರದು. ಮಾನವ ಜೀವಿತದಲ್ಲಿ ದುಃಖ ಪ್ರಸಂಗಗಳು ಅನೇಕ ಇರುವವು. ಆದರೆ ಅದರಲ್ಲಿ ತಾಯಿ ಮಗನನ್ನು ಅಗಲುವದು, ಮಗು ತಾಯಿಯನ್ನು ಅಗಲುವದು ವಿಚಿತ್ರ ದುಃಖವನ್ನುಂಟುಮಾಡುತ್ತಿದೆ. ಮಗುವಿನ ಸಾವು ತಾಯಿಗೆ ಎಷ್ಟು ಕಷ್ಟಕರ ವೋ, ತಿಪ್ಪೇ ತಾಯಿಯ ಸಾವು ಮಗನಿಗೆ ಕಷ್ಟಕರ. ಇನ್ನೂ ಒಂದು ಹೆಜ್ಜೆ ಮುಂದು ಅವನವನ ಭೀಕರ ಆಘಾತದಿಂದ ನುಚ್ಚು-ನೂರಾಗುತ್ತಿದೆ. ನಿಸರ್ಗ ನಿಯಮದಂತೆ ಎಲ್ಲರೂ ದುಃಖಮಯ ಸನ್ನಿವೇಶಗಳನ್ನು ಕಂಡು ಅನುಭವಿಸುತ್ತಿರುತ್ತಾರೆ. ಆದರೆ ಘಟನೆ ಸಂಘಟಿಸಿದ ಕಾಲಕ್ಕಿಂತಲೂ ಕೆಲವು ಕಾಲದನಂತರ ಆ ಘಟನೆಯ ಕಲ್ಪನೆ ಬಂದರೆ ಆ ಮಾನವನ ಸ್ಥಿತಿ ವರ್ಣಿಸಲು ಪಾರವಷ್ಟು ಜರ್ಜರಿತವಾಗಿರುತ್ತದೆ. ಒಂದು ಕಟು ಕಲ್ಪನೆಯಾದರೆ ಅದರ ಹಿಂದೆಯೇ ಸಾವಿರ ಕಹಿ ನೆನಪುಗಳು ಸಾಲುಸಾಲಾಗಿ ಬಂದು ಮುಟ್ಟುತ್ತಿರುತ್ತವೆ. ಅವನು ಆಲ್ಲಿ ಸ್ಥಿರುತ್ತರನಾಗುತ್ತಾನೆ. ಎಷ್ಟೋ ಜನ ವೀರ್ಥ ಕಾಲದ ನರೆಗೆ ಹುಚ್ಚರಾಗಿಯೂ ಹೋಗಿದ್ದಾರೆ. ಈ ಹೃದಯ ವಿದ್ರಾವಕ ಸನ್ನಿವೇಶ ಇಂದು ನಾಕಂಡ 'ತಾಯಿ' ಯಲ್ಲಿ ಬಂದಿದೆ."

ಶಂಕರನನ್ನು ಇಂದು ಕ್ರಾಂತಿಕಾರರ ಮುಖಂಡನೆಂದು ತೀರ್ಮಾನಿಸಿ, ಅವನಿಗೆ ಗಲ್ಲಿನ ಶಿಕ್ಷೆ ವಿಧಿಸಲ್ಪಟ್ಟಿದೆ ಆಳರಸರ ಕೈಗೊಂಬೆಯಾಗಿ ನ್ಯಾಯು ದೇವತೆ ಹೊಳಲುತ್ತಿದ್ದಾಳೆ. ಹತ್ತು ವರ್ಷ ಪೂರ್ವದಲ್ಲಿ ಯಾವ ಸರಕಾರ್ಯದೇಶದ ಸ್ವಾತಂತ್ರ್ಯ

(೧೦ನೇ ಪುಟ ನೋಡಿರಿ)



ಬೊಂಬಾಯಿ ನೂರ್ಗ ಸಾರಿಗೆ ಕಂಪೆನಿಯ ಮೂವರು ನೌಕರರು ಇಂಗ್ಲೆಂಡಿನ ಪೀಟರ್ ಬರ್ಗಿನ ಡೀಸಲ್ ಇಂಜಿನ್ ತಯಾರಿಸುವ ಶಾಲೆಯೊಂದರಲ್ಲಿ ಆಭ್ಯಸಿಸುತ್ತಿರುವುದನ್ನು ಇಲ್ಲಿ ಕಾಣಬಹುದು. ಎಡದಿಂದ ಬಲಕ್ಕೆ:— ಸಿ. ಎನ್. ಪೋಸ್ಟ, ಆರ್. ಎಪ್. ಶರ್ಮ ಮತ್ತು ಎಸ್. ಜಿ. ಸರಾಪ್

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

4 ತಿಂಗಳ ವರೇಗೆ 4%
5 ರಿಂದ 12 ,, 4½%
13 ,, 24 ,, 4¾%
ರೂ. 10,000/- ಮತ್ತ ಮೇಲಣ ಹಣಕ್ಕೆ ¼% ಹೆಚ್ಚು.
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ರೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

'ಖೀರಾ' ಇವರ ಸ್ಟೀಲ್ ಕ್ಯಾಬಿನೆಟ್‌ಗಳು (ಕಪಾಟುಗಳು)

ನಿಮಗೆ ಒಂದು ಕ್ಯಾಬಿನೆಟ್ ಆಗತ್ಯ. ಕಳ್ಳರ, ಹುಳುಹುಪ್ಪಟೆಗಳ ಭೀತಿ ಇಲ್ಲದೆ ಬಟ್ಟೆ, ಒಡವೆಗಳನ್ನು ಜೋಪಾನವಾಗಿಡಲು ಅವರ್ಶವಾದುವು. ೩ ಸೈಜುಗಳಿವೆ; ಮಿಜೆಟ್, ಪಾಪ್ಯುಲರ್, ಯುಟಿಲಿಟಿ. ಬೇಕಾದಂತೆ ಜೋಡಿಸಬಹುದಾದ ಶೆಲ್ಫುಗಳು ಮತ್ತು ಭದ್ರವಾದ ಬೀಗವುಳ್ಳ ಬಳಕೋಣೆಗಳಿವೆ.

ಅಲ್ಲದೆ
ಸೋಫಾ, ಡೈನಿಂಗ್ ಸೆಟ್, ಆಫೀಸ್ ಫರ್ನಿಚರ್,
ಡೆಸ್ಕ್‌ಗಳು, ಸ್ಟೈಲ್‌ಲೆಸ್ ಸ್ಟೀಲ್ ಪಾತ್ರೆಗಳು,
ವಿ. ಕೆ. ರಾಜ್ ಇಂಡಸ್ಟ್ರೀಸ್, ಆಲಿಘರ್ ಇವರ
ಉತ್ತಮ ಬೀಗಗಳು
ಇವೆಲ್ಲ ಸ್ವಾಕನೆ.

ಸ್ಟೈಲ್‌ಲೆಸ್ ಪಾತ್ರೆಗಳ ಮೇಲೆ ನಿಮ್ಮ ಹೆಸರನ್ನು ಉಚಿತವಾಗಿ ಕೊರೆದು ಕೊಡಲಾಗುವುದು.
7 ಲಿವರ್‌ಗಳ ಬೀಗ. ಆದರದೇ ಅಲ್ಲದ ಬೇರೆ ಬೀಗದ ಕೈಗಳಿಂದ ತೆಗೆಯಲಸಾಧ್ಯ.

ಕೋ ರೂಮನ್ನು ಸಂಪರ್ಕಿಸಿ:

ಶಾಸ್ತ್ರೀ ಅಂಡ್ ಕಂಪೆನಿ

ಹಂಸನಕಟ್ಟೆ — — ಮಂಗಳೂರು

ಪ್ರಗತಿ ಪಥ

ಜಂಷೆದಪುರದ ಪ್ರಯೋಗ ಶಾಲೆ

ಉಕ್ಕಿನ ತಯಾರಿಕೆಯಲ್ಲಿ ವೈಜ್ಞಾನಿಕ ಪ್ರಯಾಸ ಪಡುತ್ತಿದೆ

'ಭಾರತ—೧೯೫೮' ಪ್ರದರ್ಶನಕ್ಕೆ ಬರುವ ಸಾವಿರಾರು ಜನರು ರಾಷ್ಟ್ರೀಯ ಲೋಹ ವಿಜ್ಞಾನ ಪ್ರಯೋಗ ಶಾಲೆಯ ವಿಭಾಗದ ಮುಂದೆ ಉಕ್ಕು ತಯಾರಿಕ ವಿಧಾನವೊಂದನ್ನು ಪ್ರದರ್ಶಿಸುವ ಮಾದರಿ ಕಾರ್ಖಾನೆಯೊಂದನ್ನು ತುಂಬಾ ಕುತೂಹಲದಿಂದ ನೋಡುತ್ತಾರೆ. ಇಲ್ಲಿ ಪ್ರದರ್ಶಿಸುವ ಉಕ್ಕು ತಯಾರಿಕಾ ವಿಧಾನ ಅತ್ಯಂತ ಆಧುನಿಕವಾದುದು.

ಈ ಹೊಸ ವಿಧಾನಕ್ಕೆ 'ಎಲ್. ಡಿ. ತಯಾರಿಕಾ ವಿಧಾನ' ಎಂದು ಕರೆಯುತ್ತಾರೆ ಇಲ್ಲಿರುವ ಪುಟ್ಟ ಕಾರ್ಖಾನೆಯು ಮಾದರಿಯನ್ನು ನೋಡುವುದೇ ಒಂದು ನೋಡು. ಲೋಹವನ್ನು ಉಕ್ಕನ್ನಾಗಿ ಪರಿವರ್ತಿಸುವ ಆ ಯಂತ್ರದ ಬಾಯಿಯಿಂದ ಏಳಿ ಎತ್ತರದ ಕಂದ ಹಾರೂ ಬಿಳಿ ಬಣ್ಣದ ದೆಂಕೆಯ ನಾಲಗೆ ಹೊರ ಚಾಚುವ ರೀತಿ ತುಂಬಾ ಸೋಜಿಗದ್ದಾಗಿದೆ.

ಈ 'ಎಲ್. ಡಿ. ವಿಧಾನ'ವನ್ನು ಪ್ರಥಮ ಬಾರಿಗೆ ರೂರ್ಕೆಲಾದ ಉಕ್ಕಿನ ಕಾರ್ಖಾನೆಯಲ್ಲಿ ಬಳಸಲಾಗುವುದು. ರೂರ್ಕೆಲಾದ ಉಕ್ಕಿನ ಕಾರ್ಖಾನೆ ಭಾರತದಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಮೂರು ದೊಡ್ಡ ಕಾರ್ಖಾನೆಗಳ ಪೈಕಿ ಒಂದು.

ಈ ಹೊಸ ವಿಧಾನದ ಬಳಕೆಯು ಮೂಲಕ ೭೫೦,೦೦೦ ಟನ್ನುಗಳಷ್ಟು ಉಕ್ಕನ್ನು ತಯಾರಿಸುವ ಗುರಿಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆ ಇಟ್ಟುಕೊಂಡಿದೆ.

ಈ ಹೊಸ ವಿಧಾನದಿಂದ ಉಕ್ಕಿನ ತಯಾರಿಕೆ ಕಡಿಮೆ ವೆಚ್ಚದಲ್ಲಾಗುವುದರ ಜೊತೆಗೆ ಹೆಚ್ಚು ಪ್ರಮಾಣದಲ್ಲಾ ಆಗುತ್ತದೆ. ಭಾರತದಲ್ಲಿ ಈ ಕೈಗಾರಿಕೆ ಬಹು ವೇಗ ಅಭಿವೃದ್ಧಿ ಹೊಂದಲು ಈ ವಿಧಾನ ತುಂಬಾ ಸಹಾಯಕ.

ಜಂಷೆಡ್‌ಪುರದಲ್ಲಿರುವ ರಾಷ್ಟ್ರೀಯ ಲೋಹ ವೈಜ್ಞಾನಿಕ ಪ್ರಯೋಗ ಶಾಲೆಯಲ್ಲಿ ಈ ಹೊಸ ವಿಧಾನವನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವ ವಿಷಯವಾಗಿ ವಿಶೇಷ ಸಂಶೋಧನಾ ಕಾರ್ಯ ನಡೆಯುತ್ತಿದೆ.

ಈ ಸಂಶೋಧನಾ ಕಾರ್ಯ ಭಾರತದಲ್ಲಿ ಸಿಗುವ ಬೀಡು ಕಬ್ಬಿಣದ ವಿಶಿಷ್ಟ ಗುಣಗಳ ಮೇಲೆ ಬೆಳಕು ಚೆಲ್ಲುತ್ತದೆಯಲ್ಲದೆ, ಭಾರತದಲ್ಲಿಯೇ ತಯಾರಾಗುವ ಮೂಲ 'ರಿಫ್ರ್ಯಾಕ್ಟರಿ'ಗಳು ಆಮ್ಲಜನಕ ಯುಕ್ತ ಉಕ್ಕಿನ ಸರಿನರ್ತಕ ಸಾಧನಗಳಲ್ಲಿ ಎಷ್ಟರ ಮಟ್ಟಿಗೆ ಸಹಕಾರಿಯಾಗುತ್ತಿವೆಯೆಂಬ ಅಂಶವೂ ಸ್ಪಷ್ಟಪಡುತ್ತದೆ.

ಜಂಷೆಡ್‌ಪುರದಲ್ಲಿರುವ ರಾಷ್ಟ್ರೀಯ ಲೋಹ- ವೈಜ್ಞಾನಿಕ ಪ್ರಯೋಗ ಶಾಲೆ ಭಾರತದ ರಾಷ್ಟ್ರೀಯ ಪ್ರಯೋಗ ಶಾಲೆಗಳ ಪೈಕಿ ಆರನೆಯದು. ಕಳೆದ ೧೦ ವರ್ಷಗಳಲ್ಲಿ ಭಾರತದಲ್ಲಿ ಸ್ಥಾಪಿತವಾಗಿರುವ ೨೧ ಪ್ರಯೋಗ ಶಾಲೆಗಳ ಪೈಕಿ ಇದೂ ಒಂದು.

ಈ ಪ್ರಯೋಗ ಶಾಲೆಯಲ್ಲಿ ಅಂಥವುದಲ್ಲಾ ನಾಯ್ತು ಇಲ್ಲಿ ಕಬ್ಬಿಣ ಖನಿಜ ಇತರ ವಿಜ್ಞಾನಿಯ ಲೋಹಗಳಿಗೆ ಬದಲು ಉಪಯೋಗಿಸಬಹುದಾದ ವಿಶ್ರಿತ ಲೋಹಗಳ ಸಂಶೋಧನೆಗೆ ಪ್ರಯತ್ನಗಳು ನಡೆಯುತ್ತಿವೆ ದೇಶೀಯ ಲೋಹಗಳ ಸಹಾಯದಿಂದಲೇ ಅಂತಹ ವಿಶ್ರಿತ—ಲೋಹಗಳ ತಯಾರಿಕೆ ಸಾಧ್ಯವಾದರೆ, ನಮ್ಮ ದೇಶೀಯ ಎಂಜಿನಿಯರಿಂಗ್ ಕೈಗಾರಿಕೆಯಲ್ಲಿ ಹೆಚ್ಚಿನ ಪ್ರಗತಿ ಸಾಧ್ಯವಾಗುತ್ತದೆಯೆಂಬುದು ಈ ಸಂಶೋಧನೆಗಳ ಉದ್ದೇಶವಾಗಿದೆ. ನಮ್ಮ ದೇಶದಲ್ಲೇ ದೊರಕುವ ಕಚ್ಚಾ ನೂಲಿನ ಸದ್ವಿನಿಯೋಗವಾಗಬೇಕೆಂಬುದು ಇದರ ಗುರಿ.

ಆಧುನಿಕ ಎಲ್. ಡಿ. ವಿಧಾನ ಈ ಪ್ರಯೋಗ ಶಾಲೆಯ ಒಂದು ವಿಶಿಷ್ಟ ಸಂಶೋಧನೆ ಯಾದರೆ, ಅದೇ ರೀತಿಯ ಇನ್ನೊಂದು ಮಹತ್ವಾಕಾಂಕ್ಷೆ 'ಲೋ—ಷ್ಯಾಸ್ಟ್' ಒಲೆ. ಇದರ ಸಹಾಯದಿಂದ ದಿನಕ್ಕೆ ೧೫೦ ಟನ್‌ಗಳ ಪ್ರಮಾಣದಲ್ಲಿ ಬೇರೆ ಬೇರೆ ದರ್ಜೆಯ ಬೀಡು ಕಬ್ಬಿಣ ತಯಾರಿಸಬಹುದು. ಇದರ ತಯಾರಿಕೆಗೆ ಬೇಕಾಗುವ ಕೆಳಮಟ್ಟದ ಕಬ್ಬಿಣದ ಅದಿರು ಮತ್ತು ಲೋಹಾಂಶ ರಹಿತ ಕಲ್ಲಿದ್ದಲು ಮತ್ತು "ಕಾರ್ಬನ್ಯೆಸ್ಡ್ ಲಿಗ್ನೈಟ್" ಇತ್ಯಾದಿ ಖನಿಜಗಳು ಭಾರತದಲ್ಲಿ ಹೇರಳವಾಗಿ ದೊರಕುವುದರಿಂದ ಈ ಲೋ—ಷ್ಯಾಸ್ಟ್" ಒಲೆ ತುಂಬಾ ಉಪಯೋಗಕ್ಕೆ ಬರಬಹುದು.

ಈ ಪ್ರಯೋಗ ಶಾಲೆಯಲ್ಲಿ ನಿಕ್ಕಲ್ ಅಂಶವಿಲ್ಲದ 'ಸ್ಟೇನ್‌ಲೆಸ್ ಸ್ಟೀಲ್' ಮತ್ತು ನಾಣ್ಯ ತಯಾರಿಕೆಯಲ್ಲಿ ಬಳಸುವ ಲೋಹ — ಮಿಶ್ರಣಗಳ ಸಂಬಂಧವಾದ ವಿಶೇಷ ಪ್ರಯೋಗಗಳು ಯಶಸ್ವಿಯಾಗಿ ನಡೆದಿರುವುದರ ಜೊತೆಗೆ ಹೇರಳ ಪ್ರಮಾಣದಲ್ಲಿ ಎಲೆಕ್ಟ್ರೋಲೈಟಿಕ್ ಮ್ಯಾಂಗನೀಸ್ ಮತ್ತು ಮ್ಯಾಂಗನೀಸ್ ಡೈ ಆಕ್ಸೈಡ್ ಲೋಹಗಳನ್ನೂ ತಯಾರಿಸುವ ವಿಧಾನಗಳು ಕಂಡು ಹಿಡಿಯಲ್ಪಟ್ಟಿವೆ.

ಕೋಟ್ಯಂತರ ರೂಪಾಯಿಗಳ ಮೌಲ್ಯದ 'ಸ್ಟೇನ್‌ಲೆಸ್ ಸ್ಟೀಲ್'ನ್ನು ಇತ್ತೀಚಿನವರೆಗೂ ಹೊರದೇಶಗಳಿಂದ ತರಿಸಲಾಗುತ್ತಿತ್ತು. ಆದರೀಗ ಭಾರತದಲ್ಲೇ ದೊರಕುವ ಕ್ರೋಮಿಯಂ, ಮ್ಯಾಂಗನೀಸ್, ನಿಕ್ಕಲ್ ಟಿಂಗ್‌ಸನ್ ತುಲ್ಯ ವಸ್ತು ಲೋಹಯುಕ್ತ-ಮಣ್ಣಿನ ಕಲವಂಶಗಳನ್ನು ಬೆರೆಸಿ 'ಸ್ಟೇನ್‌ಲೆಸ್ ಸ್ಟೀಲ್'ನ್ನು ತಯಾರಿಸಲಾಗುತ್ತಿದೆ. ಹೀಗೆ ತಯಾರಾಗುವ 'ಸ್ಟೇನ್‌ಲೆಸ್ ಸ್ಟೀಲ್'ನ್ನು ಪಾತ್ರೆಗಳನ್ನು ತಯಾರಿಸುವುದರಿಂದ ಹಿಡಿದು ರೈಲ್ವೆಯಲ್ಲಿ ಕಲವು ಜೋಡಣೆಗಳ ಕಾರ್ಯಕ್ಕೂ ಅನೇಕ ರೀತಿಯಲ್ಲಿ ಉಪಯೋಗಿಸಲಾಗುತ್ತಿದೆ.

ಭಾರತದಲ್ಲಿ ನಿಕ್ಕಲ್ ಲೋಹ ದುರ್ಲಭ. ನಿಕಲ್ ಸಹಾಯದಿಂದ ತಯಾರಾಗುವ 'ಸ್ಟೇನ್‌ಲೆಸ್ ಸ್ಟೀಲ್'ನ್ನು ಹೊರದೇಶಗಳಿಂದ ತರಿಸಿಕೊಳ್ಳಲು ವಿನಿಯೋಗವಾಗುತ್ತಿದ್ದ ಅಪಾರ ಹಣ ಇದೀಗ ಉಳಿತಾಯವಾಗಿದೆ

ಕ್ರೋಮಿಯಂ-ನಿಕ್ಕಲ್ ಸಂಯೋಜನೆಯಿಂದ ತಯಾರಾಗುತ್ತಿದ್ದ 'ಸ್ಟೇನ್‌ಲೆಸ್ ಸ್ಟೀಲ್'ಗೆ ಬದಲಾಗಿ ನಿಕಲ್ ಲೋಹರಹಿತ 'ಸ್ಟೇನ್‌ಲೆಸ್ ಸ್ಟೀಲ್' ವಿಶೇಷ ಉಪಯೋಗಕಾರಿಯಾಗಿದೆ

ಎಲೆಕ್ಟ್ರೋಲೈಟಿಕ್ ಮ್ಯಾಂಗನೀಸ್, ಎಲೆಕ್ಟ್ರೋಲೈಟಿಕ್ ಮ್ಯಾಂಗನೀಸ್ ಡೈ ಆಕ್ಸೈಡ್ ಇತ್ಯಾದಿ ಲೋಹಗಳ ತಯಾರಿಕೆಗೂ ಈ ರಾಷ್ಟ್ರೀಯ ಪ್ರಯೋಗ ಶಾಲೆಯಲ್ಲಿ ಹೊಸ ವಿಧಾನಗಳು ಕಂಡು ಹಿಡಿಯಲ್ಪಟ್ಟಿವೆ.

ಲೋಹ ಸಂಬಂಧದ ಕೈಗಾರಿಕೆಗಳೊಡನೆ ಈ ಪ್ರಯೋಗ ಶಾಲೆ ತುಂಬಾ ಸಹಕರಿಸಿ ಕೆಲಸ ಮಾಡುತ್ತಿದೆ. ಭಾರತದ ಗಣಿಗಳ ಸಂಸ್ಥೆ, ಖನಿಜವಿಜ್ಞಾನ ಸಂಸ್ಥೆ, ಲೋಹಗಳ ಸಂಶೋಧನಾ ಸಮಿತಿ ಮತ್ತು ರೈಲ್ವೆ ಬೋರ್ಡಿನ ಜೊತೆಗೆ ಈ ಪ್ರಯೋಗಶಾಲೆ ತನ್ನ ಸಂಪರ್ಕವನ್ನಿಟ್ಟುಕೊಂಡು ಕೆಲಸಮಾಡುತ್ತಿದೆ. ಇವುಗಳಿಗೆ ಪ್ರಯೋಜನಕಾರಿಯಾಗುವಂತಹ ಹಲವಾರು ಪ್ರಯೋಗಗಳು ಈ ಪ್ರಯೋಗ ಶಾಲೆಯಲ್ಲಿ ಯಶಸ್ವಿಯಾಗಿ ನಡೆದಿವೆ. ಮತ್ತು, ಭಾರತೀಯ ಪ್ರಯಾಣಿಕರಣ ಸಂಸ್ಥೆಯೊಡನೆ ಇದು ಸಹಕರಿಸಿ ನಡೆಸುತ್ತಿರುವ ಪ್ರಯೋಗಗಳ ಕೆಲವು ರೀತಿಯಲ್ಲಿ ಪ್ರಯೋಜನಕಾರಿಯಾಗಿವೆ.

ಸಣ್ಣ ಪ್ರಮಾಣದ ಲೋಹ ಕೈಗಾರಿಕೆಗಳಿಗೆ ಸಹಾಯಕವಾಗಿ ಕೆಲಸಮಾಡುವ ಪ್ರಯೋಗಶಾಲೆ ತುಂಬಾ ಶ್ರಮಿಸಿ ಸಣ್ಣ ಪ್ರಮಾಣದ ಲೋಹ ಕೈಗಾರಿಕೆಗಳ ಯಶಸ್ವಿಯಾಗಿ ಕೆಲಸಮಾಡುತ್ತಿರುವ ಹಲವಾರು ಘಟಕಗಳನ್ನು ಈ ಪ್ರಯೋಗ ಶಾಲೆ ಆಗಾಗ ತೋರಿಸಿಕೊಟ್ಟು ಅವುಗಳ ಸ್ಪಗತಿಗೆ ಸಹಾಯಕವಾಗಿದೆ

ಅಲ್ಯೂಮಿನಿಯಂ ಮೇಲೆ 'ಎಲೆಕ್ಟ್ರೋ ಪ್ಲೇಟಿಂಗ್' ಕಾರ್ಯ ನಡೆಸುವ ನಾಲ್ಕು ಹೊಸ ವಿಧಾನಗಳನ್ನು ಈ ಪ್ರಯೋಗ ಶಾಲೆ ಇತ್ತೀಚೆಗೆ ಸ್ಪಗತಿಸಿತು.

ಕೈಗಾರಿಕೆಗಳೊಡನೆ ಈ ಪ್ರಯೋಗ ಶಾಲೆ ಇಟ್ಟುಕೊಂಡಿರುವ ನಿಕಟವಾದ ಸಂಬಂಧ ನಮ್ಮ ದೇಶದಲ್ಲಿ ಲೋಹ ಕೈಗಾರಿಕೆ ಪ್ರಗತಿಹೊಂದಲು ತುಂಬಾ ಸಹಾಯಕ. ಮತ್ತು, ಪ್ರಯೋಗ ಶಾಲೆಯಲ್ಲಿ ನಡೆಯುವ ವಿಶಿಷ್ಟ ಪ್ರಯೋಗಗಳು ಲೋಹ ಕೈಗಾರಿಕೆಯ ಬೆಳವಣಿಗೆಗೆ ತುಂಬಾ ಸಹಾಯ ಕವಾಗಿವೆ. ಇಷ್ಟಲ್ಲದೆ ಆಗಾಗ ವಿಚಾರ ವಿನಿಮಯಕ್ಕಾ ಪ್ರಯೋಗಶಾಲೆ ವ್ಯವಸ್ಥೆ ಮಾಡುತ್ತಿವೆ. 'ಫೌಂಡ್ರಿ ಟೆಕ್ನಾಲಜಿ'ಗೆ ಸಂಬಂಧಿಸಿದಂತೆ ವಿಶೇಷವಾಗಿ ಒಂದು ವಿಚಾರಸಂಕಿರಣ ತುಂಬಾ ಪ್ರಯೋಜನಕಾರಿಯಾಯಿತು.



ಜೀವ ವಿಮೆಯ
ಆಶ್ರಯದಲ್ಲಿ ಭದ್ರತೆ

ದೂರ ದೃಷ್ಟಿಯುಳ್ಳವನು
ತನ್ನ ಸಂಸಾರದ ಮುಂದಿನ
ಸಂರಕ್ಷಣೆಯನ್ನು ಯೋಚಿಸುತ್ತಾನೆ.
ಜೀವ ವಿಮೆ ಅದನ್ನು
ಸಾಧ್ಯಗೊಳಿಸುತ್ತದೆ.

ಲೈಫ್ ಇನ್ಷೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯ

ಡ್ವಿಜನಲ್ ಆಫೀಸ್-ಕೆನರಾ ಮ್ಯುಚುವಲ್ ಬಿಲ್ಡಿಂಗ್, ಉಡುಪಿ
ಶಾಖೆಗಳು:- ಉಡುಪಿ, ದಾವಣಗೆರೆ, ಧಾರವಾಡ, ಮಂಗಳೂರು.

ವಿದ್ಯಾಯೋಜನೆ

ಮುಂದಿನ ವರ್ಷದಿಂದ ನೂತನ ಪ್ರಣಾಳಿಕೆ

ಲಲಿತಕಲೆಗಳಿಗೆ ಶಾಲೆಗಳಲ್ಲಿ ಪ್ರೋತ್ಸಾಹವಿಯಲಾಗುವುದು

ಮುಂದಿನ ವರ್ಷಗಳಲ್ಲಿ ಬಣ್ಣ ಬಳೆಯುವುದು, ಶಿಲ್ಪ, ಸಂಗೀತ, ನಾಟಕ ಮತ್ತು ನೃತ್ಯ, ಶಾರೀರಿಕ ಶಿಕ್ಷಣ ಮತ್ತು ವೈದ್ಯಕೀಯ ಸೇವೆಗಳೇ ಮೊದಲಾದ ವಿವಿಧ ಕಲೆಗಳ ಕಡೆಗೆ ವಿಶೇಷ ಗಮನ ವೀಯಲಾಗುವುದು. ಅದುದರಿಂ, ಸೆಕೆಂಡರಿ ಶಾಲೆಗಳಲ್ಲಿ ಐಚ್ಛಿಕ ವಿಷಯಗಳಾಗಿ ಲಲಿತ ಕಲೆಗಳನ್ನು ಕಲಿಸಬಹುದು. ಸಂಗೀತವು ಈಗ ಕೇವಲ ವಿದ್ಯಾರ್ಥಿನಿಯರಿಗೆ ಮಾತ್ರ ಅನಿವಾರ್ಯ ವಿಷಯವಾಗಿದ್ದರೆ, ಇನ್ನು ಮುಂದೆ ಹುಡುಗರಿಗೂ ಈ ಸೌಲಭ್ಯವನ್ನೊದಗಿಸಬಹುದು. ಇದೇ ರೀತಿಯಲ್ಲಿ ಕೆಲವೇ ಶಾಲೆಗಳಲ್ಲಿ ಕಲಿಸಲ್ಪಡುವ ಭರತನಾಟ್ಯವನ್ನು ಇನ್ನೂ ಹಲವಾರು ಶಾಲೆಗಳಲ್ಲಿ ಪ್ರಾರಂಭಿಸಬಹುದು.

ಮುಂದಿನ ವರ್ಷದಿಂದ, ರಾಜ್ಯದಲ್ಲಿ ಅಖಿಲ ಭಾರತಕ್ಕೆ ಸರಿಹೊಂದುವ ಪದ್ಧತಿಯ ವಿದ್ಯಾಕ್ರಮವನ್ನು ಮೈಸೂರು ರಾಜ್ಯದಲ್ಲಿ ವ್ಯವಹಾರಕ್ಕೆ ತರಲಾಗುವುದು. ಇದೇ ಸಂದರ್ಭದಲ್ಲಿ ನೂತನ ಪಾಠಪಟ್ಟಿಯನ್ನೂ ಪ್ರಚಲಿತಗೊಳಿಸಲಾಗುವುದು. ಈ ಹೊಸ ಅಭ್ಯಾಸ ಪದ್ಧತಿಯಂತೆ, ವಿದ್ಯಾರ್ಥಿಗಳು ೧೪ ವರ್ಷಗಳಲ್ಲಿ ಪದವೀ ಪರೀಕ್ಷೆಯನ್ನು ಮುಗಿಸಬಲ್ಲರು; ಈಗಿನ ಪದ್ಧತಿಯಂತೆ ೧೫ ವರ್ಷಗಳ ಕಾಲ ಬೇಕಾಗುವುದು. ೧೯೫೯—೬೦ರಿಂದ, ಈಗಿನ ಕ್ರಮದ ಮತ್ತು ಹೊಸ ಕ್ರಮದ ಎರಡು ಪದ್ಧತಿಯ ವರ್ಗಗಳನ್ನೂ ಸೆಕೆಂಡರಿ ಶಾಲೆಗಳಲ್ಲಿ ತೆರೆಯಲಾಗುವುದು. ಇದಕ್ಕೆ ಸ್ಥಳಾವಕಾಶದ ಸಮಸ್ಯೆಯು ಮುಂದೆ ಬರುವುದು; ಆದರೂ ಸರಕಾರವು ಸಹಾಯದಸ್ತವನ್ನು ಅಕ್ಯಧಿಕ ಪ್ರಮಾಣದಲ್ಲಿ ಕೊಟ್ಟು, ಖಾಸಗಿ ಶಾಲೆಗಳಲ್ಲಿಯೂ ಇಂತಹ ಪದ್ಧತಿಯನ್ನು ಪ್ರಾರಂಭಿಸಲು ನೆರವಾಗುವುದೆಂದು ನಂಬುಗೆಯಿದೆ. ಈ ಹೊಸ ಪದ್ಧತಿಯಿಂದು, ಮಗುವಿಗೆ ಒಂದು ವರ್ಷವು ಉಳಿಯುವುದು; ಹತ್ತನೆರಿಗೆ ಅಥವಾ ರಕ್ಷಣೆರಿಗೆ ಒಂದು ವರ್ಷ ತಮ್ಮ ಮಗುವಿನ ವಿದ್ಯಾಭ್ಯಾಸಕ್ಕಾಗಿ ಮಾಡುವ ವೆಚ್ಚವು ಉಳಿತಾಯವಾಗುವುದು. ಅಲ್ಲದೇ ಮಗುವು ಹೊಸ ಪದ್ಧತಿಯನ್ನು

ಹೆಚ್ಚು ಬೆಳೆ ಬೆಳೆಸಲು ಸಹಕಾರಿಯೂಗುವ ಬ್ರಿಟಿಷ ಟ್ರಾಕ್ಟರು. ಪ್ರಪಂಚದಲ್ಲಿಯು ಹೆಚ್ಚುಹೆಚ್ಚಾಗಿ ಪ್ರಚಾರಗೊಳುತ್ತಿದೆ.

ಹೊಂದಿಸಿಕೊಳ್ಳುವುದಕ್ಕೇನೂ ವಿಶೇಷ ಪ್ರಯಾಸಪಡಬೇಕಾಗಿಲ್ಲ.

ಪ್ರಾಥಮಿಕ ಶಾಲೆಯ ಒಂದನೆ ಮತ್ತು ಎರಡನೆ ತರಗತಿಗಳ ಮಟ್ಟಿಗೆ ಸರಕಾರವು ಹೊಸ ಪಾಠಪಟ್ಟಿಯನ್ನು ಒಪ್ಪಿಕೊಂಡಿದೆ. ಪುಸ್ತಕಗಳು ಕೂಡ ಬರೆಯಲ್ಪಡುತ್ತಿವೆ. ಇವುಗಳನ್ನು ಮುದ್ರಿಸಿ ವಿದ್ಯಾಶಾಖೆಯಿಂದಲೇ ಮಾರಲಾಗುವುದು. ಮುಂದಿನ ಶೈಕ್ಷಣಿಕ ವರ್ಷವು ಪ್ರಾರಂಭವಾಗುವುದಕ್ಕೆ ಮೊದಲೇ ಈ ಪಠ್ಯ ಪುಸ್ತಕಗಳು ಸಿದ್ಧವಾಗುವುವು. ಟೆಕ್ಸ್ಟ್ ಬುಕ್ ಕಮಿಟಿಯು ಶಾಖೆಯು ಅಧಿಕಾರಿಯೇ ಪಠ್ಯ ಪುಸ್ತಕಗಳನ್ನು ಬರೆಸಿರೆ, ಉತ್ತಮವೆಂದೂ, ಅವನಿಗೂ ಆರ್ಥಿಕ ಸಹಾಯ ನೀಡಲಾಗುವುದೆಂದೂ ಅಭಿಪ್ರಾಯಪಟ್ಟಿತ್ತು. ಅಧ್ಯಾಪಕರೇ ಇದನ್ನು ಆಲೋಚಿಸಬೇಕು. ಅಖಿಲ ರಾಜ್ಯದಲ್ಲಿ ಸುಲಭಗ್ರಾಹ್ಯವಾದ ಪದಗಳನ್ನೇ ಪಠ್ಯ ಪುಸ್ತಕಗಳಲ್ಲಿ ನೇರಿಸಬೇಕಾದುದರಿಂದ, ಅಂತಹ ಪದಗಳನ್ನು ಕೂಡ ಹಾಕಲು ಒಂದು ಸಮಿತಿಯೂ ಅಧಿಕಾರದಲ್ಲಿದೆ. ಉಪಾಧ್ಯಾಯರಿಗೆ ಮಾರ್ಗದರ್ಶನೆ ಮಾಡಬಲ್ಲ ಪುಸ್ತಕಗಳನ್ನೂ ತಯಾರಿಸಲಾಗುವುದು. ಸಾಮಾಜಿಕ ವಿಜ್ಞಾನವೇ ಮೊದಲಾದ ಹೊಸ ಪಾಠಗಳನ್ನು ಕಲಿಸುವ ಸಂಬಂಧದಲ್ಲಿ ವಿಶೇಷ ಅನುಭವೀಯಲು ಉಪಾಧ್ಯಾಯರ ಸೆಮಿನಾರೊಂದನ್ನು ಸೇರಿಸಿ ಅಲ್ಲಿ ಅವರಿಗೆ ಅಂತಹ ಪಾಠದಲ್ಲಿ ವಿಶೇಷ ತಿಳುವಳಿಕೆಯನ್ನು ತುಂಬಿಸಲಾಗುವುದು. ಅಲ್ಲದೇ ಪಾಠಪಾಡುವ ಕ್ರಮವನ್ನೂ ಸೂಚಿಸಲಾಗುವುದು.

(ಡಿ. ಪಿ. ಐ. ಆದ ಪ್ರೊ॥ ಎ. ಸಿ. ಜೇನೇಗಾರು ಮೈಸೂರು ಅಧ್ಯಾಪಕರ ಸಭೆಯೊಂದರಲ್ಲಿ ಮಾಡಿದ ಭಾಷಣದಿಂದ)

ಧಾರ್ಮಿಕ ಕ್ಷೇತ್ರ

ನಿತ್ಯ, ಅನಿತ್ಯಗಳೆಂದು ತತ್ವಗಳ ತೆರಗಳಿವೆ

ರಮಣ ಮಹರ್ಷಿಯವರು ನಿತ್ಯ ತತ್ವಗಳನ್ನು ಅನುಷ್ಠಾನ ಮೂಲಕ ತೋರಿಸಿದರು.

ಮಹಾತ್ಮರಲ್ಲಿ ನಿಶ್ಚಾಸವಿಡುವುದು ಸ್ವಾಭಾವಿಕವಾಗಿದೆ; ಎಮರ್ಸನ್‌ನರ ಮಾತಿನಂತೆ ಮಹಾತ್ಮರನ್ನು ರಸಿಸುವುದು ಯುವಕರ ಕನಸು ಮತ್ತು ಮಾನವತೆಯ ಆತ್ಯಾವಶ್ಯಕ ಕರ್ಮವಾಗಿದೆ. ಇದೇ ದಾರ್ಶನಿಕನ ಅಭಿಪ್ರಾಯದಂತೆ, ತನ್ನ ಕಾರ್ಯಕಲಾಪಗಳನ್ನು ಪೂರ್ಣೀಕರಿಸಲು ನುಡಾ ಪುರುಷರು ನನಗೆ, ನಮ್ಮ ಜೀವನಕ್ಕೆ ಸಂಬಂಧಿಸಿರಬೇಕು; ಅಂತಹ ಮಹಾತ್ಮರಿಂದ ನಮ್ಮ ವಿಕಾಸಕ್ಕೆ ಅವಕಾಶವೊದಗಬೇಕು. ತಮ್ಮ ಗುಣನಡತೆಗಳಿಂದಾಗಲೀ ತಮ್ಮ ಕಾರ್ಯಗಳಿಂದಾಗಲೀ ನಾವು ಪ್ರಶ್ನಿಸಲು ಅಶಕ್ತರಾದಂತಹ ಪ್ರಶ್ನೆಗಳಿಗೆ ಮಹಾತ್ಮರಾದವರು ಉತ್ತರವೀಯುವರು ಎಂದಾತನೆನ್ನುತ್ತಾನೆ.

ಶ್ರೀ ರಾಮಕೃಷ್ಣ ಪರಮಹಂಸರ ಜೀವನವನ್ನು ರೇಖಿಸುತ್ತ ರೇಲಾಂಡಿನ್ ರೋಮನ್ನು, ತಿರಿಯುವುದಕ್ಕೆ, ಪೀರ್ಮಾನಿಸುವುದಕ್ಕೆ ಮತ್ತು ಧರ್ಮ ಮತ್ತು ತತ್ವಗಳನ್ನು ಆಪಾದಿಸುವುದಕ್ಕೆ ಅಂತಹ ಕ್ಷೇತ್ರದಲ್ಲಿಯೇ ಒಬ್ಬನು ಅನುಭವವನ್ನು ಪಡೆಯಬೇಕು; ಎಂದು ಅಭಿವ್ಯಾಪಟ್ಟಿದ್ದನು. ಇದೇ ಸಂದರ್ಭದಲ್ಲಿ ಯಾವ ದೇ ಧರ್ಮಕ್ಕೆ ಸಂಬಂಧಿಸಿದಿರಲ್ಲವೆಂದು ದೃಢವಾಗಿ ತಿಳಿಯುವವರು, "ಸಮಾಜವಾದ, ಸಮತಾವಾದ, ರಾಷ್ಟ್ರೀಯವಾದ ಅಥವಾ ಮಾನವತಾವಾದಗಳ ಕಡೆಗೆ ಅಧಿಕ ತಿಳಿವಳಿಕೆಯಿರುವವರಾಗಬೇಕೆ"ಂದು ನುರಿಯುವಾರದು. ಈ ಸಂಬಂಧದಲ್ಲಿ ಯಾವ ಅಳುಕೂ ಇಲ್ಲದೆ ಸತ್ಯ ಶೋಧನೆಗೆ ಹೊರಟರೆ, ತ್ಯಾಗವಾಡಲು ಸಿದ್ಧನಾದರೆ, ಆತನು ಧಾರ್ಮಿಕನೆಂದು ಕರೆಸುಲ್ಲಡುವನು; ಏಕೆಂದರೆ, ಧರ್ಮವೆಂಬುದು ವೈಯಕ್ತಿಕ ಜೀವನ ಮತ್ತು ಸಾಮಾಜಿಕ ಜೀವನಗಳಿಗಿಂತ ಅತ್ಯುನ್ನತವೆನಿಸಿದ ಮಾನವತಾ ಸಾಧನೆಗಳ ಬಗ್ಗೆ ಇರುವ ವಿಶ್ವಾಸವೆಂಬುದು ದೃಢ ನಿಶ್ಚಯ.

ಭಾರತದಲ್ಲಿ ಸ್ವಾಮಿ ವಿವೇಕಾನಂದರು ಹುಟ್ಟಿದ್ದಕ್ಕೆ ಅಲ್ಲಾಡಿದಂತೆ, ಜೀವಿಸುವ ಮನುಷ್ಯರಿಲ್ಲರ ಕನಸುಗಳು, ಮಾನವನು ಅಸ್ತಿತ್ವದ ಕನಸುಗಳನ್ನು ಕಾಣಲು, ತೊಡಗಿದ ಪ್ರಾರಂಭಿಕ ದಿನಗಳಿಂದಲೂ ಒಂದು ಶಿಖರವನ್ನು ಸಂಪಾದಿಸಿದೆ. ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ, ಬಾಮನ್ ರೋಲಾಂಡನು ಸ್ವಪ್ನ ವ್ಯಕ್ತನೆಂದು ಕರೆದುದೇ ಅವಿರತವಾಗಿ ಪಸಂಸಿತು, ಅದೇ ಸಮಯದಲ್ಲಿ ಆದರ ಶಾಖೆಗಳಲ್ಲಿ ಕಣ್ಣುಗಳೆಲ್ಲಿವೂ ಫಲಿತು ಹೋದುವು ಯಾವಾಗಲಾ ಎಲ್ಲ ವಿಧದ ಉನ್ನತ ಮಟ್ಟದಿಂದ ನಿಮ್ಮ ಮಟ್ಟದ ವರೆಗಿನ ಜೀವತೆಗಳೆಲ್ಲರೂ ಅಲ್ಲಿದ್ದರು. ಭಾರತವು ಹಿಂದಿನ ಕಾಲವಿಂದಲೂ ನಿಶ್ಚಾತ್ಮರನ್ನೂ ಆದರ್ಶ ಪಾಂಥರನ್ನೂ ಪಡೆದಿದೆ. ಈ ವೈಕ್ಷವು ಉಪನಿಷತ್ತು ಮತ್ತು ವೇದಗಳಲ್ಲಿ ಅಮರ ಅತ್ಯತ್ಥವೆಂದು ಕರೆಯಲಾಗಿದೆ. ಈ ಮರದ ಬೇರುಗಳು ಆಕಾಶದಲ್ಲಿಯೂ ಗೆಲ್ಲುಗಳು ಭೂಮಿಯಲ್ಲಿಯೂ ಹರಡುತ್ತವೆಯಂತೆ.

ಪ್ರಪಂಚದಲ್ಲಿ ಧರ್ಮಗಳೂ, ಧರ್ಮಶಾಸ್ತ್ರಗಳೂ ತುಂಬ ಇವೆ. ಇವೆಲ್ಲವೂ ಸತ್ಯವನ್ನು ಹೊರಗೆಡಹುವುವು. ಈ ಸತ್ಯವು ಒಂದೇ ಮತ್ತು ಅಮರವಾದರೂ ಅದು ಕಾಲಕ್ಕೆ ಸರಿಯಾಗಿ ಮಾನವ ಮನಸ್ಸಿನ ಮೂಲಕ ಪ್ರಕಟಗೊಳ್ಳುವುದು. ಆದುದರಿಂದಲೇ, ಎಲ್ಲ ಧರ್ಮೋಪದೇಶಗಳು ಮತ್ತು ಆದೇಶಗಳು ಆ ಕಾಲಕ್ಕೆ ಮಾತ್ರ ಯೋಗ್ಯವಾದ ನಾಶಿವಾಗಬಲ್ಲವುಗಳು ಮತ್ತು ಕಾಲದೇಶಗಳ ಮಿತಿಯಿಲ್ಲದೆ ಚಿರಕಾಲಕ್ಕೂ ಉಳಿಯಬಲ್ಲವುಗತೆಂದು ಎರಡು ವಿಧಗಳಾಗಿವೆಯೆಂದು ಮಹರ್ಷಿ ಅರವಿಂದರನ್ನುತ್ತಾರೆ.

ಸ್ವಾಮಿ ರಾಮಕೃಷ್ಣ ಮತ್ತು ಶ್ರೀ ಅರವಿಂದ ಘೋಷರು ಉಪದೇಶಿಸಿದ ತತ್ವಗಳು ಶ್ರೀ ರಮಣ ಮಹರ್ಷಿಗಳ ಜೀವನಕಾರ್ಯಕ್ಕೆ ಸದೃಶವಾಗಿವೆ.

ಶ್ರೀ ಮಹರ್ಷಿಯವರ ಜೀವನವು ಬಾಹ್ಯ ಘಟನಾರಹಿತವಾಗಿದ್ದರೂ ಪ್ರಾರಂಭಿಕ ಅವಸ್ಥೆಯಿಂದಲೂ ಜ್ಞಾನ, ಸ್ಥಿತಪ್ರಜ್ಞತೆ ಮತ್ತು ವೈರಾಗ್ಯ ಹಾಗೂ ದೈವರ ಕೋಧನೆಯತ್ತ ನೆಟ್ಟ ಜೀವನವಾಗಿತ್ತು. ವಿಸರ್ಜನೆ ಜ್ಞಾನ ಮತ್ತು ಎಂಡರಿಂದಲೂ ಒದಗಿ ಬಂದ ಶಕ್ತಿಗಳು ಎಳೆಯಪ್ರಾಯದಲ್ಲಿಯೇ ಶ್ರೀ ಮಹರ್ಷಿಗಳ ಜೀವನದ ಮೇಲೆ ಪರಿಣಾಮ ಬೀರಿತು. ಹಿಂದೂ ಧರ್ಮದಲ್ಲಿ ಜೀವನದ ಮೂಲಕ ಉಪದೇಶಿಸಲು

(೯ನೇ ಪುಟ ನೋಡಿರಿ)

ಕೇಶ ಸೌಂದರ್ಯವೇ—ಯುವತಿ, ಯುವಕರ ಶೃಂಗಾರ.
ಅಂಥ ಕೇಶವೃದ್ಧಿ (ಕೂದಲ ಬೆಳವಣಿಗೆ)ಗಾಗಿ ಅನೇಕ ತಲೆ ಎಣ್ಣೆಗಳನ್ನು (Hair Oils) ಉಪಯೋಗಿಸಿ ನಿರುತ್ಸಾಹರಾಗಿರುವುದು ಸಹಜ. ಆದರೆ:—
ಹಿಮಗಿರಿ ತೈಲ ಉಪಯೋಗಿಸುವುದರಿಂದ
ತಲೆನೋವು, ಕಣ್ಣುರಿ, ಕಣ್ಣಿನಲ್ಲಿ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೂದಲು ಉದುರುವಿಕೆ, ಕಣ್ಣು ಮಂಜು, ನಿದ್ರಾಭಂಗ ಈ ವ್ಯಾಧಿಗಳನ್ನು ಪರಿಹರಿಸಿ ಕೇಶವೃದ್ಧಿ ಮಾಡುವುದು.
ಸೂಚನೆ:— ಹಿಮಗಿರಿ ತೈಲವೆಂದು "ಬೇರೆ ಗಿರಿಗಳ" ಹೆಸರುಳ್ಳ ನಕಲಿ ಮಾಲನ್ನು ಕೊಂಡು ಮೋಸಹೋಗಬೇಡಿರಿ.
Wanted Agents & Stockists
Manufacturers: RATAN MISRI DEPOT
Avenue Road Cross, BANGALORE-2

ಭವ್ಯ ಪರಂಪರೆ

ನೈತಿಕ ಮತ್ತು ಆತ್ಮಬಲಗಳು ಬೆಳೆದು ಬರಬೇಕು

ಇದಕ್ಕೆ ಧಾರ್ಮಯುಕ್ತವಾದ ಶಿಕ್ಷಣವೇ ತಳಹದಿ

ನನಗಿಂದು ನೀವು ಆಹಾರ ಗೌರವವನ್ನು ಸಲ್ಲಿಸಿದ್ದೀರಿ. ಸೆಂಟ್ರಲ್ ಕಾಲೇಜಿನಲ್ಲಿ ಆನುತ್ತರದಾಯಿಯೂ ಕರ್ತವ್ಯನಿಷ್ಠನೂ ಆಗಿದ್ದ ವಿದ್ಯಾರ್ಥಿಯೆಂದು, ನಾನೇ. ಕಾಲೇಜಿನ ಈ ಶತಾಬ್ದಿಯ ಸಮಾರಂಭಗಳಿಂದು ಅಧ್ಯಕ್ಷತೆವನ್ನು ನಿರ್ವಹಿಸಲು ವ್ಯವಸ್ಥಾಪಕರು ಕಾಲೇಜಿನ ಅತ್ಯಂತ ನಿಮ್ನವರ್ಗದ ವಿದ್ಯಾರ್ಥಿಯೊಬ್ಬನನ್ನು ಆರಿಸಿದ್ದಾರೆ. ಇದೇನೋ ಚಕಸ್ಮಿಕವಿರಬಹುದು. ನಾನೇನೂ ಹೆಚ್ಚಾಗಿ ಈ ವಿಷಯವನ್ನು ಪ್ರಸ್ತಾಪಿಸುವುದಿಲ್ಲ; ಒಂದು ವೇಳೆ ನಾನು ಈ ಕುರಿತಾಗಿ ಇನ್ನೂ ಮಾತಾಡಿದರೆ, ಆದರಿಂದ ಇಂದಿನ ವಿದ್ಯಾರ್ಥಿಗಳಲ್ಲಿ ದುಷ್ಪರಿಣಾಮಗಳಾಗಬಹುದು.

ಸೆಂಟ್ರಲ್ ಕಾಲೇಜಿನ ಶತಾಬ್ದಿ ದಿನಾಚರಣೆಯು ವಿನೋದಕ್ಕೋಸ್ಕರ ವರ್ಷಪ್ರತಿ ಸೇರುವ ಹಳೆವಿದ್ಯಾರ್ಥಿಗಳ ಸಭೆಗಳಲ್ಲಿ ಶತಾಬ್ದಿಯು ಕನ್ನ ವಿಸ್ತಾರವಾದ ಹಿಂದಿನ ಚಿತ್ರಗಳತ್ತ ನೋಡಬೇಕಾಗಿದೆ. ನಾನು ಕಾಲೇಜನ್ನು ಬಿಟ್ಟ ಈ ಶತಮಾನದಲ್ಲಿ ಅರ್ಧಾಂಶದಷ್ಟು ಕಾಲ ಸಂದು ಹೋಯಿತು. ಇಂದಿನ ಜಗತ್ತು ಹಲವಾರು ಕಾರಣಗಳಿಂದ ಬದಲಾಗಿದೆ. ಈ ಬದಲಾವಣೆಗಳಲ್ಲಿ ಕೆಲವು ನಮ್ಮ ಒಳಿತಕ್ಕಿರುವುವಾದರೆ ಇನ್ನು ಕೆಲವು ಹಾನಿಕಾರಕವಿದೆ. ಗತಿಯ ಶತಮಾನವು ಪ್ರಮಾಣೀಕರಣಕ್ಕೆ ಸಿಂಹಾಸನವಿತ್ತು ಸರ್ವೋಚ್ಚ ಶಕ್ತಿಯನ್ನೂ ನಿರಂಕುಶಿಸಿ ಪರಂಪರಾ ಪ್ರಾಪ್ತವಾಗಿ ಬಂದ ಪದ್ಧತಿಗಳನ್ನು ದೂರೀಕರಿಸಿತು. ಆಧುನಿಕ ಸಂಸ್ಕೃತಿಯು ಬೆಳೆದು ಬಂದಂತೆ, ಪ್ರಾಚೀನ ಸಂಸ್ಕೃತಿಯು ಅವನತಿ ಹೊಂದುತ್ತ ಬಂತು. ಧರ್ಮವು ನಿವೃತ್ತವಾಯಿತು. ಆದರೆ, ಒಂದು ನೂರು ವರ್ಷಗಳ ನಂತರ ಆತ್ಮ ಸಂಯಮವಿನ ರಹಿತವಾದ ಜ್ಞಾನವು ಅಪಾಯಕಾರಿ ಎಂದು ಕಂಡುಕೊಂಡಿದ್ದಾರೆ ಸ್ವಗೋದ್ಯಾನದ ಜ್ಞಾನವೃಕ್ಷ ಮತ್ತು ಸಂಧ್ಯೆಗಳ ಪವಿತ್ರತೆಯು ಇಂದು ನೂತನ ಮತ್ತು ಭಯಂಕರತೆಯ ರೂಪವನ್ನು ಪಡೆಯುತ್ತಿವೆ. ಈ ಪವಿತ್ರ ಕಥೆಯ ಅರ್ಥವನ್ನು ಹಿರೋಶಿಮಾ ಮತ್ತು ನಾಗಸಾಕಿಗಳಿಂದ ಉದ್ಘಾಟಿಸಲ್ಪಟ್ಟ ಅಣುಯುಗದಾರಂಭದಿಂದ ಕಂಡುಕೊಂಡಿವ್ವರೆ. ಪ್ರಜ್ಞೋದನೆ ಮತ್ತು ಜ್ಞಾನದ ತತ್ವಗಳ ಅರ್ಥವನ್ನು ಅವರು ತಿಳಿದ್ದಾರೆ ಆದರೆ, ಕ್ರಮೇಣ ಏನಾದರೂ ಅಪೂರ್ಣ ಶಕ್ತಿಯು ರಕ್ಷಿಸದ ಹೊರತು, ನಾಗರಿಕತೆಯು ಸಂಪೂರ್ಣ ಸಮಾಧಿಸ್ಥವಾಗುವುದು.

ಅಮೆರಿಕೆಯ ವೈಜ್ಞಾನಿಕ ಫೆಡರೇಶನು ಅಣುಶಕ್ತಿಯುಕ್ತ ರಾಷ್ಟ್ರಗಳೊಡನಿರುವ ಅಣುಬಾಂಬುಗಳು ಮಾನವನನ್ನು ನಾಮಾವಶೇಷ ಮಾಡಲು ಸಾಕು; ಈ ಅಣುಹಾನಿಯಿಂದ ಉಳಿಸುವ ಯಾವ ರಕ್ಷಣೋಪಾಯವೂ ಇಲ್ಲ ಎಂದು ಕಂಡುಕೊಂಡಿದೆ ಈ ಅಣು ಶಸ್ತ್ರಾಸ್ತ್ರಗಳ ಪರೀಕ್ಷಾಪ್ರಯೋಗಗಳೇ ಜಗತ್ತಿನ ಕುಂಬ ವಿಷವನ್ನು ಹರಡಿಸಿ, ಮಕ್ಕಳೆಲ್ಲರಿಗೂ ವಿಷವನ್ನು ಣಿಸಿವೆ. ಯುದ್ಧವಾಗುವಾಗ, ಅಣುಶಕ್ತಿಯನ್ನು ಆದಕ್ಕೆ ಬಳಸದೆ ಹೋದರೂ ಈ ವರೆಗಿನ ಪರೀಕ್ಷಾಪ್ರಯೋಗಗಳೇ ಮಾನವಕುಲವನ್ನು ಕೆಡಿಸಲು ಸಾಕೆನಿಸುವುವು. ಆಲ್ಲದೇ ವೈಜ್ಞಾನಿಕರ ಅಂದೋಣದಂತೆ ಈಗಾಗಲೇ ಹೆಂಡಿರುವ ವಿಷ ಪದಾರ್ಥಗಳು ವಾತ್ಸ್ಯಾ ವ್ಯಾಪಕವಾಗಿ ಹರಡುತ್ತ ಬಂದು ಹಾನಿಯನ್ನುಂಟು ಮಾಡುವುವು.

ಈ ಎಲ್ಲ ಸಂಗತಿಗಳು ತಿಳಿದಿದ್ದರೂ ಪ್ರಮಾಣೀಕರಣವು ಇದನ್ನು ತಡೆಹಿಡಿಯಲಾರದು. ಮಾನವರನ್ನು ಹಿಡಿತದಲ್ಲಿಟ್ಟುಕೊಂಡಿದ್ದ ಧರ್ಮವು ಅಳಿದು ಹೋಗಿ ಪ್ರಮಾಣೀಕರಣದ ಪ್ರಭಾವವು ಇಂದು ಅಧಿಕವಾಗಿದೆ. ಎಲ್ಲ ದೇಶಗಳಲ್ಲಿಯೂ ವಾಸ್ತವಿಕ ಮೌಲ್ಯಯುಕ್ತ ವಸ್ತುಗಳಿಂದಾಗಿ ನೈತಿಕ ಮತ್ತು ಆತ್ಮಿಕ ಮೌಲ್ಯಗಳ ನೆಲ ಸಮವಾಗಿದೆ. ಎಲ್ಲಿಯೇ ಹೋಗಲಿ, ಯಾವೆಡೆ ಜನರು ಉತ್ತಮರೂ ದೇವನಿಗೆ ಹೆದರುವವರೂ ಆಗಿರುವರೋ ಅಲ್ಲಿ ಅವರು ಸ್ವಾರ್ಥಿಗಳಾಗಿರುವುದಿಲ್ಲ. ಆದರೆ ಈಗ ಮಾತ್ರ ಇಂತವರೂ ಹಣವನ್ನಷ್ಟೇ ಬೆಲೆ ಕಟ್ಟುವ ೨. ಆತ್ಮಿಕ ಮೌಲ್ಯವನ್ನು ಇವರು ತಿರಸ್ಕರಿಸಿದ್ದಾರೆ ನಾವು ಈ ಸಂಚಿನೆಯನ್ನು ನಡೆಸಿಗೆಂಡಿದೆ, ಜೀವನದ ಉನ್ನತ ಮೌಲ್ಯಗಳನ್ನು ಸುನಸ್ಥಾಪಿಸಬೇಕು. ಆತ್ಮಿಕ ಮೌಲ್ಯದಿಂದ ವಂಚಿತರಾದರೆ, ಸಮಾಜವು ಭದ್ರವಾಗಲಾರದು. ತಿಜ್ಞಾನಿಯಾಗಿರುವನು ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯುವನಲ್ಲದೇ ಅವನು ಸ್ವಾರ್ಥಿಯೂ ಲೋಭಿಯೂ ಆಗಿ ಪರಿಣಮಿಸುತ್ತಾನೆ. ಇಂದಿದಕ್ಕೆ ಅಪವಾದವಿರುವುದು ಅಪರೂಪ.

ನಾವು ಆತ್ಮಿಕ ಶಕ್ತಿಯನ್ನು ಪುನಸ್ಥಾಪಿಸಬೇಕು ನಾವು ಬದುಕಲು ಬಯಸುವೆವಾದರೇ ಹೀಗೆ ಮಾಡಲೇಬೇಕು. ಎಳೆಯವರನ್ನು ವಾಸ್ತವಿಕ ಮೌಲ್ಯದ ಕಡೆಗೊಲಿಯದಂತೆ ಬೆಳೆಸಿಕೊಳ್ಳಲೇಕು ಆದರೆ, ಸಮಾಜದ ಬಂಧನವನ್ನು ಶಿಥಿಲಗೊಳಿಸುವ ಧರ್ಮಗಳನ್ನೂ ದೂರಮಾಡಬೇಕು ಮಗುವಿಗೆ ತಾಯಿಯು ಸುಲಭಳಿರುವಂತೆ ಮಾನವನಿಗೆ ಧರ್ಮವಿರಬೇಕು. ಇದಕ್ಕಾಗಿ ಧರ್ಮವನ್ನು ಮೃದು ಮತ್ತು ಸುಲಭವಾಗಿ ಮಾರ್ಪಡಿಸಬೇಕು. ಮಾನವರು ಇಂತಹ ಉದಾರ ಧರ್ಮ ಭದ್ರ ರಕ್ಷಣೆಯಲ್ಲಿರುವಂತಾಗಬೇಕು.

ಹೀಗೆ ಮಾಡುವಾಗ, ದಂತಕತೆಗಳಲ್ಲಿ ಆಡಕವಾದ ವ್ಯಕ್ತಿಗಳ ನಂಬಿಕೆಗಳನ್ನು ದೂರವಾಗದಂತೆ ನೋಡಿಕೊಳ್ಳಬೇಕು. ರಾಮ, ಸೀತೆ, ಭೀಷ್ಮ ಇಲ್ಲವೇ ರಾವಣ ಇವರನ್ನು ದೂರ ಮಾಡಬಾರದು. ಧರ್ಮದ ರುಚಿಯೆಲ್ಲವನ್ನೂ ನಮ್ಮ ಕಥೆಗಾರರೂ ಶಿಲ್ಪಿಗಳೂ ಪ್ರಸಂಚಕ್ಕೆ ಹರಡಿಸಿವ್ವರೆ. ಇವರ ಕಥೆಗಳಲ್ಲದೆ ನಮ್ಮ ಧರ್ಮವು ಹರಡಲಾರದು.

ನಾನು ನಿಜಪ್ರಮಾಣ —ಆತ್ಮಿಕ ಮೌಲ್ಯಗಳನ್ನು ಪುನಸ್ಥಾಪಿಸಬೇಕಾದರೆ, ತಳೆದ ಪ್ರತಿ ದಿನವೂ ಕೆಲಸವನ್ನು ಜಟಿಲ

(ಅನೇ ಪುಟ ನೋಡಿರಿ)

ಜಗತ್ತಿನಲ್ಲಿ ಪ್ರೀತಿ ಮತ್ತು ಸಹೋದರಭಾವದ ಚಿಹ್ನೆಯಾಗಿ ಉಡುಗೊರೆಗಳನ್ನು ಸಾಂಪ್ರದಾಯಿಕವಾಗಿ ವಿನಿಮಯ ಮಾಡಿಕೊಳ್ಳುವ

ಸಂತೋಷದ ಸಮಯವಿದು.

ಒಂದು ಮೊಹರಿನ ಬೆಲೆ ಐದು ನಯೇಪೈಸೆ ಮಾತ್ರ

ಟಿ. ಬಿ. ಮೊಹರುಗಳನ್ನು ಕೊಂಡು ಕೊಂಡು ನಿಮ್ಮ ಕ್ರಿಸ್‌ಮಸ್ ಶುಭಾಶಯಗಳಿಗೂ ಉಡುಗೊರೆಗಳಿಗೂ ಅಂಟಿಸಿರಿ. ಇದರಿಂದ ನಿಮ್ಮಂತೆ ಕ್ರಿಸ್‌ಮಸ್ ಹಬ್ಬವನ್ನು ಆಚರಿಸಿ ಸಂದರ್ಭದ ಸಂತೋಷ ಅನುಭವಿಸಲಾರದ ಕ್ಷಯರೋಗಿಗೆ ನೀವು ನೇರ ಸಹಾಯ ಮಾಡಿದಂತಾಗುವುದು.

ಮೊಹರುಗಳು ದೊರೆಯುವ ಸ್ಥಳಗಳು:

1. ಒನೆರರಿ ಸೆಕ್ರೆಟರಿ, ಸೀಲ್ ಸೇಲ್ ಕಮಿಟಿ, ಗೋಪಾಲಕೃಷ್ಣ ಟೆಂಪಲ್ ರೋಡ್, ಮಂಗಳೂರು.
2. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್, ಮಡಿಕೇರಿ, ಕೊಡಗು.
3. ಒನೆರರಿ ಸೆಕ್ರೆಟರಿ, ಮೈಸೂರು ಸ್ಟೇಟ್ ಟ್ಯೂಬರ್ ಕ್ಯುಲೋಸಿಸ್ ಎಸೋಸಿಯೇಶನ್, ಲೇಡಿ ವಿಲ್ಲಿಂಗ್‌ಡನ್ ಟಿ ಬಿ ಕ್ಲಿನಿಕ್ ಎಂಡ್ ಡಿಸ್ಪೆನ್ಸರಿ, ಬೆಂಗಳೂರು ಸಿಟಿ ಮತ್ತು ಇತರ ರಾಜ್ಯದ ಏಜನ್ಸಿಗಳು.

ಒಂಭತ್ತನೇ ಟಿ. ಬಿ. ಮೊಹರು ಮಾರಾಟ ಚಳವಳಿ

(ಭಾರತದ ಕ್ಷಯರೋಗ ನಿವಾರಣಾ ಸಂಘದ ಕಡೆಯಿಂದ)

ಈ ಜಾಹೀರಾತು ಸ್ಥಳದ ದಾನಿಗಳು:

ಮೆಸರ್ಸ್ ಮಾಫತ್‌ಲಾಲ್ ಗಾಗಲ್‌ಭಾಯಿ ಎಂಡ್ ಕೊ. ಪ್ರೈ. ಲಿ., ಬೊಂಬಾಯಿ.

ಕಠೋರ ಸತ್ಯ

(೨೫ನೇ ಪುಟದಿಂದ)

ರೆಯುವುದು ಕೇವಲ ೨೫ ಲಕ್ಷ ಎಕರೆ ಗಳಷ್ಟು ಮಾತ್ರ. ಸಾಮಾನ್ಯವಾಗಿ ೩,೬೦೦ ರೂಪಾಯಿ ನಿವ್ವಳ ಆದಾಯ ವಿರಬೇಕಾದರೆ, ಸುಮಾರು ೩೦ರಿಂದ ೫೦ ಎಕ್ರೆಗಳಷ್ಟು ಭೂಮಿಯಿರಬೇಕಾಗುವುದು. ಆದರೆ, ಇಷ್ಟು ಪ್ರಮಾಣದ ಭೂಮಿಯು ಈಗ ಎಷ್ಟು ಜನ ಭೂಸ್ವಾಮಿಗಳಿಗಿರುವುದು?

ನ್ಯಾಯಗೇಣಿಯ ಪ್ರಮಾಣವು ನೀರಾವರೀ ಭೂಮಿಗೆ ಸಾಲ್ಯರಲ್ಲಿ ಒಂದಂಶವಾಗಿದೆ. ಆದರೆ, ಈ ನೀರಾವರೀ ಕ್ರಮವೆಂದರೆ, ಕಾಲುವೆ ಇಲ್ಲವೇ ಕೆರೆಗಳ ನೂಲಕ ನೀರು ಹಾಯಿಸಲಾಗುತ್ತಿರುವುದೆಂದೂ ಜ್ಞೇಳಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ವಿಷ್ಟಿಗೆ ಹೇಳುವುದಾದರೆ, ಇಂತಹ ನೀರಾವರೀ ಪದ್ಧತಿಯಿಂದ ಸಾಗು ಆಗುವ ಭೂಮಿಯು ಎಲ್ಲಿಯೂ ಇಲ್ಲವೆಂದು ಹೇಳಬಹುದು. ಆಗ, ನಮ್ಮ ಜಿಲ್ಲೆಯ ಭೂಮಿಗೆ ನೂರಕ್ಕೆ ಇಪ್ಪತ್ತರಷ್ಟೇ ಗೇಣಿಯು ದೊರೆಯುವುದು. ಆದರೆ, ಇದರಿಂದ ಭೂಸ್ವಾಮಿಗಳು ಸುರಿದ ಹಣಕ್ಕೆ ಯೋಗ್ಯ ಪ್ರತಿಫಲ ಸಿಕ್ಕಿದಂತಾಗಲಾರದು! ಆದರ ಮೇಲೆ, ಭೂಕಂಪಾತವನ್ನು ಭೂಸ್ವಾಮಿಯೇ ಕೊಡಬೇಕಾಗುವುದು. ಆಗ, ಧನಿಯೆನಿಸಿಕೊಂಡವನಿಗೆ ಸಿಗುವ ಪ್ರತಿಫಲ ತೀರ ತತ್ಕಲ್ಪನೇ ಅಲ್ಲವೆ? ಇದು ನ್ಯಾಯವೆಂದು ಹೇಳಿವುದಾದರೂ ಹೇಗೆ?

ಇನ್ನು ಪರಿಹಾರದ ಪ್ರಶ್ನೆಯೂ ಅನುಚಿತವೆನ್ನದೆ ಸಾಧ್ಯವಿಲ್ಲ. ನ್ಯಾಯ ಗೇಣಿಯಲ್ಲಿ ಭೂತೆಂದಾಯ ಕಳೆದು, ಉಳಿದುದರ ೧೫ ಪಟ್ಟು ಎನ್ನುವಾಗ ಸಾಮಾನ್ಯತಃ ಎಕರೆ (೧೭ ಕ್ಯೂಲ) ಒಂದಕ್ಕೆ ಸುಮಾರು ೧೫೦ ರೂಪಾಯಿಗಳಷ್ಟು ಸಿಗುವುದು. ಎಂದರೆ, ಕ್ಯೂಲೊಂದಕ್ಕೆ ೧೫ ರೂಪಾಯಿ ಪರಿಹಾರ. ಇದರ ಮೇಲೆಳಿ! ಸೇತುವೆ ಬಡ್ಡಿಯೆನ್ನುವಾಗ ಧನಿಗೆ ದೊರೆಯುವುದು ಕ್ಯೂಲೊಂದಕ್ಕೆ ಆರುವತ್ತೆಂಟು ನಯೇ ಪೈಸೆ ಮಾತ್ರ ಪ್ರತಿಫಲ! ಕ್ಯೂಲೊಂದರಲ್ಲಿ ಎಂಡು-ಮೂರು ಮುಡಿ ಅಕ್ಕಿ ಬೆಳೆಯುವಾಗ, ಈಗ ಸುಮಾರು. ಅದರ ಮೂರರಲ್ಲೊಂದಂಶದಷ್ಟು ಗೇಣಿ ಪ್ರತಿವರ್ಷ ದೊರೆಯುವಾಗ, ಇದಾವ ಲೆಕ್ಕಕ್ಕೆ ಎಂದು ಹೇಳಬರುವುದಿಲ್ಲ. ಇದರಿಂದಾಗಿ ಸಾಮಾನ್ಯವಾಗಿ ಚಿಕ್ಕ ಹಿಡುವಳಿದಾರರ ಸ್ಥಿತಿಯು ತೀರ ಅಧಃಪತನಗೊಳ್ಳುವುದೆಂಬುದು ನಿರ್ವಿವಾದ.

ಸಾಮಾನ್ಯವಾಗಿ ಒಂದು ಎಕರೆಯ ನೂರರಲ್ಲೊಂದಂಶ ಭೂಮಿಗೆ ೧೦೦ರಿಂದ ೧೫೦, ೨೦೦ ತನಕ ಬೆಲೆ ಬರುವಾಗ, ವಿಧೇಯಕದಲ್ಲಿ ಎಕರೆಗೆ ೧೫೦ ರೂಪಾಯಿಯ ಪರಿಹಾರ ನೀಡುವ ಯೋಜನೆಯಿಂದ ಇಂದಿನ ಭೂಸ್ವಾಮಿಗಳು ವಿವಂಚನೆಗೀಡಾಗಬೇಕಾದುದು ಸಹಜವೇ. ಅಲ್ಲದೇ ಉಳುವವನನ್ನೇ ಹೊಲದೊಡೆಯನನ್ನಾಗಿ ಮಾಡುವಾಗ ಮೂಲಹಿಡುವಳಿಗಿಂತ ಹೆಚ್ಚು ಭೂಮಿಯಿರುವವರು (ರೂ. ೪೦೦ ನಿವ್ವಳ ಆದಾಯ ಪಡೆಯುವವರು) ಸ್ವಂತ ಬೇಸಾಯವನ್ನೇ ಮಾಡಬೇಕಾಗಿರುವಾಗ, ಮಧ್ಯಮ ವರ್ಗದ ರೈತರು ಈ ಉತ್ಪಾದನೆಯಿಂದ ಹೇಗೆ ಜೀವಿಸಬೇಕು ಎಂದು ಈ ಸುಧಾರಕರು ಆಲೋಚಿಸಿಲ್ಲ. ಇಂಥ ಇಂತಹ ಸಾಮಾನ್ಯ ಭೂಮಾಲಿಕರು ಒಕ್ಕಲುಗಳ ಮೂಲಕ ಸಾಗುಮಾಡುತ್ತಿರುವುದಾದರೂ, ಅದರ ಆದಾಯದಿಂದ ತಮ್ಮ ಕಾಟುಂಬಿಕ ಜೀವನವನ್ನು ನಡೆಸಲಾಗದೆ ಅನ್ಯೋದ್ಯೋಗಗಳನ್ನು ಕೈಗೊಳ್ಳುವುದಕ್ಕಾಗಿಯೇ ಆಗಿದೆ. ಹೀಗಾಗಿ ಈಗ, ವಿಧೇಯಕದಲ್ಲಿ ಮಾಡಲಾದ ನಿಯಮದಿಂದ ಇಂತಹವರಿಗೆ ಆ ನ್ಯಾಯವೆನಿಸದಿರಬಹುದು.

ಭೂಸಂಧಾರಣೆಯ ನೆವನದಲ್ಲಿ ಸರಕಾರವು ಭೂಮಾಲಿಕರಿಗೆ ಪರಿಹಾರ ಕೊಡುವುದಾರೂ, ಹೊಸತಾಗಿ ಭೂಮಾಲಿಕರಾಗಲಿರುವ ಒಕ್ಕಲುಗಳು ಆ ಹಣವನ್ನು ಸರಕಾರಕ್ಕೆ ವಾರ್ಷಿಕ ಕಂತುಗಳಲ್ಲಿ ಕೊಡಬೇಕಾಗಿರುವುದರಿಂದ, ಈ ಕೊಡಕೊಳ್ಳುವಿಕೆಯು ಸರಿಯಾಗಿ ನಡೆಯುವುದೇ ಎಂಬುದು ಸಂದಿಗ್ಧ. ಈ ವ್ಯವಹಾರದಿಂದ ಸರಕಾರವೇ ತಲೆ ತುರಿಸಿಕೊಳ್ಳಬೇಕಾಗಬಹುದು.

ಭೂಮಾಲಿಕರಿಂದ, ಕಾರಣಾಂತರಗಳಿಂದ ಸ್ವಇಚ್ಛೆಯನ್ನು ಸ್ವಾಧೀನಪಡಿಸಿಕೊಳ್ಳುವಾಗ, ಅದಕ್ಕೆ ಆ ಕಾಲದ ಮಾರುಕಟ್ಟೆಯದರದಲ್ಲಿ ಪರಿಹಾರವನ್ನು ನೀಡುತ್ತಾರೆ ಆದರೆ, ಈಗ ಮಾತ್ರ ಈ ಕುಂಟು ನೆವನದಿಂದಾಗಿ, ಭೂಮಾಲಿಕರಿಗೆ, ಮುಖ್ಯವಾಗಿ ಸಾಮಾನ್ಯ ಮುಟ್ಟಿದನರಿಗೆ ಬಹಳ ಅನ್ಯಾಯವನ್ನು ಮಾಡಲಾಗುತ್ತಿದೆ. ಈ ವಿಧೇಯಕವು ಇನ್ನುದಕ್ಕಿದಂತೆಯೇ ಸ್ವೀಕೃತವಾದರೆ, ಆಗ, ಈಗಿನ ಭೂಮಾಲಿಕರು ಸಂಪೂರ್ಣ ದಿವಾಳಿಯೆದ್ದು ಚಡಪಡಿಸಬೇಕಾಗಿ ಬರುವುದು ಖಂಡಿತ. ಆಗ ಸಮಾಜದಲ್ಲಿನ ಶಾಂತಿಯು ಕದಡಿಹೋಗಿ ಅಶಾಂತಿಯು ವ್ಯಾಪಿಸುವುದು; ಹಲವಾರು ಅನಾಹುತಗಳಿಗಿದು ಕಾರಣೀಭೂತವಾಗಬಹುದು. ಇದೇ ಮಾತನ್ನು ನುತಸಂಸ್ಥಾನಗಳಿಗೂ ಶಿಕ್ಷಣಸಂಸ್ಥೆಗಳಿಗೂ ಅನ್ವಯಿಸಬಹುದು.

ಆದುದರಿಂದ, ನಮ್ಮ ಶಾಸನಸಭಾ ಸದಸ್ಯರಲ್ಲರೂ ಈ ವಿಧೇಯಕವನ್ನು ಸೂಕ್ಷ್ಮವಾಗಿ ಅಭ್ಯಸಿಸಿ ಅದರ ಲಾಭಾಲಾಭಗಳನ್ನು ಕಂಡುಕೊಂಡು, ಇಕ್ಕಡೆಗಳ ಹಿತವನ್ನೂ ಗಮನದಲ್ಲಿಟ್ಟು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ. ಸುಧಾರಣೆಯೊಂದಿಗೆ ಶಾಂತಿಯೂ ಭದ್ರತೆಯೂ ಜೊರ ಜಾರಿಹೋಗುವಂತಾಗಬಾರದು.

(ಬರೆದು ಬಂದುದು)

ಪರಿಶ್ರಮ

ಪೆಟ್ರೋಲಿಯಂ ಪಡಯಲು ಅವಿರತ ಪರಿಶ್ರಮ

ಇದು ಕೆಲವೊಮ್ಮೆ ಸಾರ್ಥಕವಾದರೆ ಇನ್ನು ಕೆಲವೊಮ್ಮೆ ನಿರರ್ಥಕವಾಗುವುದು

ಪ್ರಕೃತ ಭಾರತದಲ್ಲಿ ವರ್ಷಂಪ್ರತಿ ಸುಮಾರು ೫೦ಲಕ್ಷ ಟನ್ನುಗಳಷ್ಟು ಪೆಟ್ರೋಲಿಯಮನ್ನು ಬಳಸಲಾಗುತ್ತಿದೆ. ಅಸ್ಸಾಂ ನಲ್ಲಿರುವ ದಿಗ್ಬಾಯ್ ಭಾರತದಲ್ಲಿ ತೈಲವನ್ನು ಉತ್ಪಾದಿಸುತ್ತಿರುವ ಏಕೈಕ ತೈಲ ಕ್ಷೇತ್ರವಾಗಿದೆ ಈ ತೈಲಕ್ಷೇತ್ರದಿಂದ ವರ್ಷಕ್ಕೆ ಅಲ್ಪಸ್ವಲ್ಪ ಟನ್ನುಗಳಷ್ಟು ಪೆಟ್ರೋಲಿಯಂ ದೊರಕುತ್ತಿದೆ

ಇಂದು ಭಾರತದಲ್ಲಿ ಪೆಟ್ರೋಲಿಯಂನ ಬಳಕೆ ಹೆಚ್ಚುತ್ತಲಿದ್ದು ಮುಂದೆ ಪೆಟ್ರೋಲಿಯಂ ಬಗ್ಗೆ ನಮ್ಮ ಬೇಡಿಕೆಯು ವರ್ಷಕ್ಕೆ ನೂರಕ್ಕೆ ಸುಮಾರು ೧೦ ರಷ್ಟು ಅಧಿಕಗೊಳ್ಳುವ ಸಂಭವವಿದೆ. ದ್ವಿತೀಯ ಯೋಜನಾವಧಿಯ ಅಂತ್ಯದ ವೇಳೆಗೆ ೧೫೦ ಲಕ್ಷ ಟನ್ನುಗಳಷ್ಟು ಪೆಟ್ರೋಲಿಯಂ ಬಗ್ಗೆ ಬೇಡಿಕೆ ಹೆಚ್ಚಾಗುವ ನಿರೀಕ್ಷೆಯಿದೆ.

೧೯೬೧ರ ವೇಳೆಗೆ ಸುಮಾರು ೫೦ ಲಕ್ಷ ಟನ್ನುಗಳ ಅಶುದ್ಧ ತೈಲವನ್ನು ಉತ್ಪಾದಿಸುವ ನಿರೀಕ್ಷೆಯಿದೆ ಅಸ್ಸಾಂ ರಾಜ್ಯದ ಮೈದಾನ ಪ್ರದೇಶದಲ್ಲಿ ಹೊಸದಾಗಿ ಪತ್ತೆಹಚ್ಚಲ್ಪಟ್ಟಿರುವ ನಹೋರ್ಕಟಿಯಾ, ಹುಗ್ರಿಜನ್ ಮತ್ತು ಮೊಗಾನ್ ತೈಲ ಕ್ಷೇತ್ರಗಳಲ್ಲಿ ತೈಲ ಉತ್ಪಾದನೆಯಾಗಲಿದೆ.

ತೈಲ ಹಾಗೂ ಪ್ರಾಕೃತಿಕ ಆನಿಲಗಳ ಬಗ್ಗೆ ಬರುವ ಬೇಡಿಕೆ ಹಾಗೂ ಇವುಗಳ ಉತ್ಪಾದನೆಯ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವುದು ಭಾರತ ಸರ್ಕಾರದವರ ಮುಖ್ಯ ಕಾರ್ಯಭಾರವಾಗಿದೆ. ದೇಶದಲ್ಲಿ ತೈಲ ಸಂಪತ್ತಿನ ಬಗ್ಗೆ ಅಂದಾಜು ಮಾಡುವುದರಿಂದ ಹಾಗೂ ಹೊಸದಾಗಿ ತೈಲಕ್ಷೇತ್ರಗಳನ್ನು ಪತ್ತೆ ಹಚ್ಚುವುದರಿಂದ ಈ ಅಂತರವನ್ನು ಕಡಿಮೆ ಮಾಡಬಹುದಾಗಿದೆ.

ಪರಿಜಾಬ್, ಗಂಗಾ ನದಿಯ ಕಣಿವೆ ಪ್ರದೇಶ, ಅಸ್ಸಾಂ, ಪಶ್ಚಿಮ ಬಂಗಾಳ, ಗುಜರಾತ್, ಕಚ್, ರಾಜಾಸ್ಥಾನ ಮತ್ತು ಪೂರ್ವ ಹಾಗೂ ಪಶ್ಚಿಮ ಕರಾವಳಿಗಳನ್ನೊ ಗೊಂಡ ಸುಮಾರು ನಾಲ್ಕು ಲಕ್ಷ ಚದರ ಮೈಲಿಗಳ ವಿಸ್ತೀರ್ಣದಲ್ಲಿ ಪೆಟ್ರೋಲಿಯಂ ದೊರೆಯುವ ಸೂಚನೆಯಿದೆ

ದೇಶದಲ್ಲಿ ತೈಲ ಸಂಪತ್ತನ್ನು ಅಂದಾಜು ಮಾಡುವ ಉದ್ದೇಶದಿಂದ ಮೇಲೆ ತಿಳಿಸಿರುವ ಕ್ಷೇತ್ರಗಳಲ್ಲಿ ಕೆಲವೆಡೆಗಳಲ್ಲಿ ತೈಲಾನ್ವೇಷಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಭೂಮಿಯೊಳಗೆ ರಂಧ್ರಗಳನ್ನು ಕೊರೆಯಬೇಕಾಗುವುದು, ಭೂಗರ್ಭ ಶಾಸ್ತ್ರದ ಪ್ರಕಾರ ತೈಲವಿರುವ ಕ್ಷೇತ್ರಗಳಿಗಾಗಿ ನೆಪ್ಟೆಗಳನ್ನು ತಯಾರಿಸಬೇಕಾಗುವುದು, ಭೂ ಭೌತಿಕ ಸಮೂಹಕ್ಷೇಗಳನ್ನು ಕೈಗೊಳ್ಳಬೇಕಾಗಬಹುದು. ಭೂಮಿಯೊಳಗೆ ಹುದುಗಿರುವ ಶಿಲೆಗಳ ಸ್ವರೂಪ ಮತ್ತು ಅವುಗಳ ರಚನೆಯನ್ನು ಅರಿತುಕೊಳ್ಳುವುದಕ್ಕಾಗಿ ಆಳವಾದ ಹಾಗೂ ಆಳವಲ್ಲದ ರಂಧ್ರಗಳನ್ನು ಕೊರೆಯಬೇಕಾಗುವುದು. ಈ ತೈಲಾನ್ವೇಷಣೆಯು ಶ್ರಮ ಸಾಧ್ಯವಾದ ಹಾಗೂ ಅತಿ ದುಬಾರಿಯ ಕೆಲಸವಾಗಿದೆ. ಪರಿಕ್ಲಿಧ್ಧವಾಗಿ ಒಂದು ಬಾವಿಯನ್ನು ತೋಡಲು ೫೦ ಲಕ್ಷ ರೂ.ಗಳು ಆಥವಾ ಅದಕ್ಕಿಂತಲೂ ಹೆಚ್ಚು ಹಣ ಅಗತ್ಯವಾಗುವುದು. ಆಳವಾದ ಬಾವಿಯನ್ನು ತೋಡಲು ಅಗತ್ಯವಾದ 'ರಿಗ್' ಯಂತ್ರಕ್ಕೆ ೫೦ ಲಕ್ಷ ರೂ.ಗಳ ಬೆಲೆಯಾಗುತ್ತದೆ.

ಇಷ್ಟಾದರೂ ತೈಲ ದೊರೆಯುವ ದೃಢತೆಯಿರುವುದಿಲ್ಲ. ತೈಲ ದೊರೆಯುವ ಸಾಧ್ಯತೆ ಇರಲಿ ಇಲ್ಲದಿರಲಿ, ತೈಲಾನ್ವೇಷಣ ಕಾರ್ಯಕ್ಕೆ ಹಣ ವೆಚ್ಚವಾದರೂ ಪರವಾಗಿಲ್ಲ, ಭಾರತವು ಕನಸಿಗೆ ಅಗತ್ಯವಾಗುವ ತೈಲದ ವಿಚಾರದಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸಲೇ ಬೇಕು. ಈ ದಿತೆಯಲ್ಲಿ ನಮ್ಮ ದೇಶವು ಸರ್ವಸಾಧ್ಯ ಪ್ರಯತ್ನ ನಡೆಸಲೇ ಬೇಕು. ತೈಲದ ಆಯಾತಕ್ಕಾಗಿ ಭಾರತವು ಪರದೇಶಗಳಿಗೆ ಹಣವನ್ನು ಸುರಿಸುವಂತಿಲ್ಲ. ನಾವು ೧೯೬೧ರ ವೇಳೆಗೆ ತೈಲಾನ್ವೇಷಣೆಯ ಪ್ರಯತ್ನದಲ್ಲಿ ವಿಫಲರಾದಲ್ಲಿ ನಮ್ಮ ದೇಶದಿಂದ ಪರದೇಶಗಳಿಗೆ ಸುಮಾರು ೫೦೦ ಕೋಟಿ ರೂ.ಗಳ ಹಣ ಹರಿದು ಹೋಗುವುದೆಂದು ಅಂದಾಜು ಮಾಡಲಾಗಿದೆ.

ಭವ್ಯ ಪರಂಪರೆ

(೨೫ನೇ ಪುಟದಿಂದ)

ವಾಗಿ ಮಾಡಿತ್ತಿದೆ. ಇದನ್ನು ಸುಲಭವಾಗಿ ಮಾಡುವುದಕ್ಕೆ ಧಾರ್ಮಿಕ ತತ್ವ ಹಾಗೂ ನಿಯಮಗಳು ಗಣನೀಯ ಪಾತ್ರ ವಹಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೀಯ ಶಿಕ್ಷಣ ಕ್ರಮವು ಬೇಕಾಗುವುದು. ನಮ್ಮ ವೈಯಕ್ತಿಕ ಧರ್ಮ ಪ್ರಿಯತೆಯೊಂದಿಗೆ ಸರ್ವ ಧರ್ಮಗಳನ್ನೂ ಮನ್ನಿಸಿ ಗೌರವಿಸುವುದೇ ಮಹಾತ್ಮಾ ಗಾಂಧಿಯವರ ಮೂಲ ತತ್ವವಾಗಿತ್ತು.

ಗಾಂಧಿಯವರ ನಾಡಾದ ನಮ್ಮಲ್ಲಿ ಧಾರ್ಮಿಕ ಶಿಕ್ಷಣವೂ ಅಡಕವಾಗಿರುವ ಶಿಕ್ಷಣ ಪ್ರಣಾಳಿಕೆಯು ವ್ಯವಹಾರಕ್ಕೆ ಬರುವುದು ಅಪರಾಧವಾಗದು ನಾಸ್ತಿಕವಾದವು ಅವಿಶ್ವಾಸವನ್ನು ಹೆರಡಿಸಿದೆ.

ಮಾನವರು ಉತ್ತಮರಾದರೆ ಎಲ್ಲವೂ ಜಯಶೀಲವಾಗುವುದು. ಅವಶ್ಯವಿಸಿಗಳಾಗಿ ಜನರುಳಿದರೆ, ಎಲ್ಲವೂ ನಿಷ್ಫಲವಾಗುವುದು. ಎಳೆಯರನ್ನು ಬಳಿಸುವಾಗ, ಸತ್ಯ, ವಿಶ್ವಾಸ, ಸಹಕಾರಗಳ ಬುನಾದಿಯಾಗುವ ಧರ್ಮವನ್ನು ನಾವು ದೂರಮಾಡಬಾರದು ನಮ್ಮ ಭವಿಷ್ಯವು ಯುವಕರನ್ನು ಹೊಂದಿಕೊಂಡಿರುವುದರಿಂದ ಈ ಮಾತನ್ನ ನಾವು ಹೃದಯಪೂರ್ವಕ ಗಮನಿಸಬೇಕು.

ನಮ್ಮಲ್ಲಿ ಕೆಲವರು ನನ್ನನ್ನು ಸುನರು ಜ್ಜೀವಕನೆನ್ನಬಹುದು. ಹೌದು, ನಾನು ಅಳಿಯುತ್ತಿರುವ ಧರ್ಮವನ್ನು ಉಳಿಸಬಯಸುವವನು. ನಾನು ನನ್ನ ತಾಯಿಯಾಗಿದ್ದ ಈ ಕಾಲೇಜಿಗೆ ನನ್ನ ಶೃತಜ್ಞತೆ ಗೌರವಗಳನ್ನರ್ಪಿಸುವೆನು. ಈ ಕಾಲೇಜು ಭಾರತದಲ್ಲಿ ಸಂಸ್ಕೃತಿ ಮತ್ತು ಜ್ಞಾನಗಳ ವ್ಯಾಪಾರವನ್ನು ಮಾಡಿ ಗಣನೀಯ ಸೇವೆ ಸಲ್ಲಿಸುವಂತಾಗಲೆಂದು ಮನಸಾರೆ ಆಶಿಸುತ್ತೇನೆ.

(ಬೆಂಗಳೂರು ಸೆಂಟ್ರಲ್ ಕಾಲೇಜಿನ ಶತಮಾನೋತ್ಸವ ದಿನಾಚರಣೆಯಲ್ಲಿ ರಾಜಾಜಿ ಅವರ ಅಧ್ಯಕ್ಷಭಾಷಣದ ಸಾರ)

ಸಾದರ ಸ್ವೀಕಾರ

೧. **ವಿಧಿವಿಲಾಸ**-(ಕಾದಂಬರಿ)ತಪಸ್ವಿ ಬರೆದುದು. ಪ್ರಕಾಶಕರು: ಪ್ರತಿಭಾ ಗ್ರಂಥ ಮಾಲೆ, ಧಾರವಾಡ. ಪುಟಗಳು-೨೮೦. ಬೆಲೆ: ರೂ.೩.೦೦

೨. **ಬೆಳಗಿದ ತಾರೆಗಳು**:(ಇತಿಹಾಸದಲ್ಲಿ ಬೆಳಗಿದ ಮಹಿಳೆಯರ ಕಥಾಚಿತ್ರಗಳು) ಲೇಖಕರು: ಸೂರ್ಯನಾಥ ಕಾಮತ್, ಬಿ.ಎ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಪುಟಗಳು:೬೨, ಬೆಲೆ:ರೂ.೦.೭೫.

೩. **ನೆನಪು**-(ಕವಿತಾ ಸಂಕಲನ)ಬರೆದವರು: ಅಂಬಿಕಾತನಯದತ್ತ. ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ. ಪುಟಗಳು:೧೦೦. ಬೆಲೆ:ರೂ ೧ ೫೦.

ಕೆಲಂಡರ್ ಸ್ವೀಕಾರ.

ಕಾರವಾ ಪ್ರೆಸ್, ಮಂಗಳೂರು, ಇವರ ಕೆಲಂಡರ್ ಮತ್ತು ಡೈರಿ

ಬ್ರಿಟಿಷ್ ಇನ್‌ಫೋರ್ಮೇಶನ್ ಸರ್ವಿಸಸ್, ಮದ್ರಾಸು ಇವರು ಕಳಿಸಿದ ಕೆಲಂಡರ್ ಆಫ್ ಬ್ರಿಟೈನ್

ಇವನ್ನು ಸಾದರದಿಂದ ಸ್ವೀಕರಿಸಿದ್ದೇವೆ.

ಸಮಾಜ ಸುಧಾರಣೆ

ಭಿಕ್ಷಾಟನೆಯು ನಿರ್ಮೂಲವಾಗಲಿ

ಇದನ್ನು ಸಾಧಿಸದೆ ಸಮಾಜವು ಸುದೃಢವೂ ಸುಸಂಸ್ಕೃತವೂ ಆಗಲಾರದು.

ದಾನವೀಯುವುದು ಒಳ್ಳೆಯ ಗುಣವು ಯಾರಾದರೂ ಅವಿವೇಕಪೂರ್ಣವಾಗಿ ಈ ಬಿಲ್ಪಾಯುವ ದಾನದಿಂದ ಭಿಖಾರಿ ಮನೋವೃತ್ತಿಯನ್ನು ಹೆಚ್ಚಿಸುವುದೆಂದೂ ಇದರಿಂದ ಭಿಕ್ಷಾವೃತ್ತಿಗೆ ಅಪ್ರತ್ಯಕ್ಷವಾಗಿ ಸ್ಫೂರ್ತಿಪ್ರಹ ನೀಡಿದಂತಾಗುವುದೆಂದೂ ಹೇಳಬಹುದು.

ಮುಂಬಯಿಯ ಭಿಕ್ಷುಕರ ಸಹಾಯ ಮತ್ತು ಪುನರ್ವಾಸ ಸಂಬಂಧಿ ನಾಗರಿಕ ಸಮಿತಿಯ ಗೌರವಾನ ಕಾರ್ಯದರ್ಶಿ ಶ್ರೀ ಜೆ ಸಿ. ಜೈನರು ಈ ಮಾತನ್ನು ಸಮರ್ಥಿಸಿದ್ದಾರೆ. ಅಲ್ಲಿ ಕಲಾಕೌಶಲ ಮತ್ತು ಉದ್ಯೋಗ ಪ್ರದರ್ಶನವೊಂದರಲ್ಲಿ "ಭಿಕ್ಷುಕರಪ್ರಪಂಚ" ಎಂಬ ವಿಷಯದ ಮೇಲೆ ಏರ್ಪಡಿಸಲಾದ ಗೋಷ್ಠಿಯು ನಡೆದಾಗ, ಶ್ರೀ ಜೈನರು ಉಪಸ್ಥಿತರಿದ್ದವರನ್ನು ಬೆಂಬಲಿಸಿದರು.

"ಇಂದು ಭಿಕ್ಷಾವೃತ್ತಿಯೆಂಬುದು ಅನೇಕ ಸುದೃಢ ವ್ಯಕ್ತಿಗಳ ಜೀವನೋಪಯೋಗಿ ಉದ್ಯೋಗವಾಗಿ ಪರಿಣಮಿಸಿದೆ. ಜನತೆಯು ಭಿಕ್ಷೆ ನೀಡುವುದನ್ನು ನಿಲ್ಲಿಸಿದ ಸಕ್ಷಣವೇ, ವ್ಯವಸಾಯ ರೂಪದಲ್ಲಿರುವ ಭಿಕ್ಷಾವೃತ್ತಿಯು ನಿಂತು ಹೋಗಿ, ಅದರ ಮಹತ್ವವು ಕಳೆಕುಂದುವುದು. ಶಾರೀರಿಕವಾಗಿ ಯೋಗ್ಯವಂತರಾದ ಭಿಕ್ಷುಕರು ಸಮಾಜೋಪಯೋಗಕ್ಕೆ ಅರ್ಹರಲ್ಲ. ವ್ಯಾಪಾರಿಕತೆಯಿಂದ ಸಮ್ಮಾನಪೂರ್ವಕವಾಗಿ ಜೀವನ ಸಾಗಿಸಲು ಬಯಸುವ ಭಿಕ್ಷುಕರಿಗೆ ಸೂಕ್ತ ಉದ್ಯೋಗವನ್ನು ಕಲ್ಪಿಸಿಕೊಡಬೇಕು. ವಿವಿಧ ಉದ್ದಿಮೆಗಳ ನ್ಯಾಸ ಸ್ಥಾಪಕರು ಇಂತಹ ಭಿಕ್ಷುಕರಿಗೆ ತಮ್ಮಲ್ಲಿ ಉದ್ಯೋಗಾವಕಾಶವಿತ್ತು ಅವರ ಪುನರ್ನಿವೇಶನಕ್ಕೆ ಸಹಕಾರ ನೀಡಬೇಕು.

"ಮುಂಬಯಿ ರಾಜ್ಯ ಸರಕಾರವು ಭಿಕ್ಷಾವೃತ್ತಿ ನಿರ್ಮೂಲನದ ಹಿನ್ನೆಲೆಯಲ್ಲಿ ವಿಶೇಷ ಗಮನವಿತ್ತು ಉತ್ತಮ ಕಾರ್ಯಕೈಗೊಳ್ಳುತ್ತಿದೆ. ಇದೇ ರೀತಿಯಲ್ಲಿ ಜನತೆಯೂ ತನ್ನ ಹಾರ್ದಿಕ ಸಹಕಾರವನ್ನಿತ್ತರೆ, ಶೀಘ್ರದಲ್ಲಿಯೇ ಈ ಮಹಾಮಾರಿಯನ್ನು ಹೊಡೆದೋಡಿಸಬಹುದು. ಮಾರಾದರೂ ಭಿಕ್ಷುಕರಿಗೆ ನೀಡುವ ದಾನವನ್ನು ಭಿಕ್ಷುಕರ ಸಮಸ್ಯೆಯನ್ನು ನೀಗಿಸಲು ಪ್ರಯತ್ನಿಸುವ ಸಂಘಸಂಸ್ಥೆಗಳಿಗೆ ಕೊಡಬೇಕು' ಎಂದು ಶ್ರೀ ಜೈನರು ಅಭಿಪ್ರಾಯಪಟ್ಟರು.

ಭಿಕ್ಷಾವೃತ್ತಿಯು ನಿಜವಾಗಿಯೂ ನೋವಿಕರೋಗ. ಸುದೃಢಶರೀರವುಳ್ಳವರೂ ಕೆಲಸಮಾಡಲು ಸೋಮಾರಿಯಾಗಿ ಭಿಕ್ಷಾಟನೆಯ ಕೆಲಸವನ್ನೇ ಕೈಗೊಳ್ಳುತ್ತಾರೆ. ಕೆಲವಾರು ಕುಟುಂಬಗಳ ಎಲ್ಲ ಸದಸ್ಯರೂ ಇದೇ ವೃತ್ತಿಯನ್ನು ಕೈಗೊಳ್ಳುತ್ತಾರೆ. ಇವರಿಗೆ ಜನತೆಯು ದಾನಕೊಡುತ್ತಿದೆ. ಇದರಿಂದಾಗಿ ಭಿಕ್ಷುಕರಿಗೆ ಪ್ರೋತ್ಸಾಹಕೊಟ್ಟಂತೆಯೇ ಆಗುವುದು. ಅಂಗವಿಕಲರೂ, ಆನಾರೋಗ್ಯವಂತರೂ ಮದುಕರೂ ಆದವರಿಗೆ ಸಹಾಯ ಮಾಡಬಹುದಾದರೂ, ಸುದೃಢ ಶರೀರಿಗಳಿಗೆ ಎಷ್ಟಕ್ಕೂ ಭಿಕ್ಷೆ ನೀಡಬಾರದು. ಭಿಕ್ಷುಕರ ಸಂಖ್ಯೆಯನ್ನು ಬೆಳೆಸುತ್ತ ಹೋದರೆ, ಸಮಾಜದ ಬಹು ದೊಡ್ಡ ಭಾಗನೇ ಭಿಕ್ಷಾವೃತ್ತಿಯಿಂದ ಜೀವಿಕರಬೇಕಾಗಿ ಬರಬಹುದು. ನುಡಿಯುದೆ ಅನ್ನವಿಲ್ಲವೆಂಬುದನ್ನು ಅವರ ಮನಸ್ಸಿಗೆ ತಿಳಿಸಿಹೇಳುವಂತಹ ಮತ್ತು ಅವರಿಗೆ ದುಡಿಯುವ ಅವಕಾಶವನ್ನು ಒದಗಿಸಿಕೊಡುವಂತಹ ಕಾರ್ಯ ಸರಕಾರದ ಕಡೆಯಿಂದಲೂ ಜನತೆಯ ಮುಖಾಂತರವೂ ಆಗಬೇಕು. ನಗರನಗರಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ದಿನೇದಿನೇ ಹೆಚ್ಚುತ್ತಿರುವ ಈ ಭಿಕ್ಷಾಟನೆಯನ್ನು ನಿಯಂತ್ರಿಸಲು ಯೋಗ್ಯ ಕಾರ್ಯಕ್ರಮಗಳನ್ನು ತೀವ್ರವಾಗಿ ಕೈಗೊಳ್ಳಬೇಕು. ಇಲ್ಲವಾದರೆ, ಸಮಾಜದಸ್ತಂಭವೂ ನೈತಿಕ ಮಟ್ಟವೂ ಕುಸಿದು ಹೋಗುತ್ತವೆ ಖಂಡಿತ



ಆಕ್ಟೋಬರ್ ೮ರಂದು ಪ್ರಧಾನಿ ನೆಹರೂರವರು ಭಾರತ ಪ್ರದರ್ಶನ ೧೯೫೮ನ್ನು ಉದ್ಘಾಟಿಸಿದರು ಇದು ಎಲ್ಲರ ಗಮನವನ್ನೂ ಆಕರ್ಷಿಸಿತ್ತು. ಭಾರತದ ಸ್ವಾತಂತ್ರ್ಯೋತ್ತರ ಕಾಲದ ಪ್ರಗತಿಯನ್ನಿದು ತೋರಿಸುತ್ತದೆ. ಈ ಪ್ರದರ್ಶನದ ಕೆಲವು ದೃಶ್ಯಗಳನ್ನು ಇಲ್ಲಿ ಕಾಣಬಹುದು.

ಚಿತ್ರ ೧: ಪ್ರದರ್ಶಿಸಲ್ಪಟ್ಟ ಮಿರ್ಜಾ ಕುಂಭಕಾರಿಕೆಯನ್ನು ಪ್ರೇಕ್ಷಕರೊಬ್ಬರು ಮೆಚ್ಚುತ್ತಿದ್ದಾರೆ ಇದು ಉತ್ತರ ಪ್ರದೇಶದ ಪ್ರದರ್ಶನ ಕಕ್ಷೆಯಲ್ಲಿದೆ.

ಚಿತ್ರ ೨. ನಂಗಲ್ ಆಣೆಕಟ್ಟಿನ ಬಂದು ದೃಶ್ಯವನ್ನು ವಿದ್ಯಾರ್ಥಿ ಪ್ರೇಕ್ಷಕರು ಅಭ್ಯಸಿಸುತ್ತಿದ್ದಾರೆ ಹಿಂಗಡೆಯಲ್ಲಿ ಭಿಲಾಯ್, ರೂರ್ಕೇಲಾ ಮತ್ತು ದುರ್ಗಾಪುರಗಳ ಉಕ್ಕಿನ ಕಾರ್ಖಾನೆಗಳ ಪ್ರದರ್ಶನವಿದೆ.

ಚಿತ್ರ ೩. ಸಿಂಧ್ರಿ ಕೈತಗ ಗೊಬ್ಬರದ ಕಾರ್ಖಾನೆ ಮತ್ತು ವರ ಪ್ರಾಯೋಗಿಕ ನಮೂದರಿಯೊಂದನ್ನಿಲ್ಲಿ ಕಾಣಬಹುದು.

ಚಿತ್ರ ೪: ಸಣ್ಣ ಕೈಗಾರಿಕೆಗಳ ತೊಟ್ಟಿಯಲ್ಲಿ ಬಟ್ಟೆ ನೇಯಲು ರೇಷ್ಮೆಯ ನೂಲನ್ನು ಸುತ್ತುತ್ತಿದ್ದಾರೆ

ಧಾರ್ಮಿಕ ಕ್ಷೇತ್ರ

(ಅನೇ ಪುಟದಿಂದ)

ಸಾಕಷ್ಟು ಅವಕಾಶವಿದೆಯೇ ಹೊರತು ಮಾತಿಗೆ ಪ್ರಾಧಾನ್ಯವಿಲ್ಲ. ಎಂತಲೇ ಶ್ರೀ

ಒಂದು ಸಂದರ್ಭವಲ್ಲಿ ನನ್ನು ಇಂದಿನ ಸ್ವಧಾನಿ ನೆಹರೂ 'ನನ್ನ ಭಾರತದಲ್ಲಿ ಭಿಕ್ಷುಕರಿಲ್ಲ" ಎಂದು ಅಂದಿದ್ದರು. ಆದರೆ, ಈಗ ಅವರೇ ಪ್ರಧಾನಿಗಳಾಗಿರುವ ದೇಶದಲ್ಲಿ ಈ ಭಿಕ್ಷುಕರ ಹಾವಳಿ ಉಲ್ಬಣಾವಸ್ಥೆಗೇರುತ್ತಿದೆ. ಇದನ್ನು ಇನ್ನೂ ಬೆಳೆಯಗೊಟ್ಟರೆ, ಆನಂದ ಸಮಾಜಕ್ಕೂ ರಾಷ್ಟ್ರಕ್ಕೂ ಕಳಂಕ. ಆದುದರಿಂದ, ಈ ಭಿಕ್ಷಾಟನೆಯ ದುರ್ಬಲತೆಯಿಂದ ಭಿಕ್ಷುಕರನ್ನು ಮುಕ್ತರಾಗಿ ಮಾಡಲು ಸಮಾಜ ಸುಧಾರಕರು ತೀವ್ರ ಗಮನ ಹರಿಸಬೇಕು. ಜನತೆಯೂ ಇದಕ್ಕೆ ತನ್ನ ಸಂಪೂರ್ಣ ಸಹಕಾರವನ್ನೀಯಬೇಕು.

ನಿಮಗಾಗಿ --

ನಿಮ್ಮ ಜನರ ನಿರ್ದೇಶನದಲ್ಲಿ—

ನಿಮ್ಮದಾಗಿ ಬೆಳೆಯುತ್ತಿರುವ ಬ್ಯಾಂಕು

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: ಮಾರ್ಚ್ 12, 1906)

ಪ್ರಧಾನ ಕಚೇರಿ: ಉಡುಪಿ (ದ. ಭಾರತ)

ಮಹರ್ಷಿಗಳು ಯಾವಾಗಲೂ ಮಹಿಳಾ ಸಮಾಧಿಯುಕ್ತರಾಗಿರುತ್ತಾರೆ. ತಮ್ಮ ಕಾರ್ಯಗಳಲ್ಲಿಯೇ ನಿಮಗ್ನರಾಗಿದ್ದುದರಿಂದ ಇನ್ನೊರನ್ನು ಉದ್ಧರಿಸಿರಲಿಲ್ಲ ದಕ್ಷಿಣಾಮೂರ್ತಿಯಂತೆ ಮಹರ್ಷಿಗಳು ಮೌನದಲ್ಲಿಯೇ ಅಧಿಕೋಪದೇಶವಿತ್ತರು.

ಶ್ರೀ ಬಿ. ವಿ ನರಸಿಂಹ ಸ್ವಾಮಿಯವರು ಶ್ರೀ ರಮಣ ಮಹರ್ಷಿಗಳಿಗೆ ಸಂಬಂಧಿಸಿ ಬರೆದಿರುವ ಗ್ರಂಥದಲ್ಲಿ ಅವರು ಮಹರ್ಷಿಗಳ ದೈನಂದಿನ ಜೀವನದ ಚಿತ್ರವನ್ನು, ಪ್ರಾಪಂಚಿಕ ಮತ್ತು ಮನುಷ್ಯರ ಬೇಲೆ ಅವರಿಗಿರುವ ಅಪಾರ ಪ್ರೇಮವನ್ನು ಚಿತ್ರಿಸಿದ್ದಾರೆ ಸಾಮಾಜಿಕ ಮತ್ತು ಧಾರ್ಮಿಕ ಪ್ರಜ್ಞಾರಕ್ಷೆ ಅವರು ಮನಸೋಇಚ್ಛೆ ಸಿಂಹಾವಲೋಕನಕ್ಕಾಗಿ, ಯಾವ ಆಕಾಂಕ್ಷೆ ಗಳಿಗೂ ಮನಸೋಲದೆ ಶ್ರೀ ಮಹರ್ಷಿಗಳು ತನ್ನ ಸೇವೆಯನ್ನು ಕರ್ತವ್ಯವೆಂದು ಸಿಳಿದು ಮಾಡಿದರು. ಹೀಗಾದುದರಿಂದಲೇ ಪ್ರತೀಯ ಮತ್ತು ವಿದೇಶೀಯ ಮಹಾ ಜನರಿಂದಲೂ ಇವರು ಗೌರವಕ್ಕೆ ಪಾತ್ರರಾಗಿದ್ದಾರೆ. ಭಾರತೀಯ ಧರ್ಮ ಮತ್ತು ತತ್ವಗಳನ್ನು ಆಳವಾಗಿ ಅನುಸರಿಸಿ, ಅವುಗಳಿಂದಲೇ ತಮ್ಮ ಹಾಗೂ ತಮ್ಮವರ ಉನ್ನತಿಯನ್ನು ನಿರ್ಧರಿಸಿಕೊಂಡ ಮಹಾವ್ಯಕ್ತಿಗಳಲ್ಲಿ ಶ್ರೀ ರಮಣ ಮಹರ್ಷಿಗಳು ಒಬ್ಬರಾಗಿದ್ದಾರೆ

ಶ್ರೀ ರಮಣ ಮಹರ್ಷಿಗಳ ಜನ್ಮದಿನೋತ್ಸವವನ್ನು ದಕ್ಷಿಣ ಭಾರತದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಶ್ರೀ ಮಹರ್ಷಿಗಳ ಆದರ್ಶವನ್ನು ನಾವೆಲ್ಲರೂ ಅನುಷ್ಠಾನಕ್ಕೆ ತಂದುಕೊಂಡು ನಾವೂ ನಮ್ಮ ಜೀವನವನ್ನು ಪಾವನಗೊಳಿಸಬೇಕು.

(ಆಧಾರ—ಐ ಪಿ. ಎಸ್)

ದೇಶ ಪರಿಚಯ

ಆಫ್ರಿಕೆಯ ಸಂಪನ್ನ ರಾಷ್ಟ್ರ- ಘಾನಾ

ಡಾ। ನಿಕ್ರುಮಾರವರ ಪ್ರಜೆಲಿತ ಸಂಚಾರದಿಂದ ಉಭಯ ರಾಷ್ಟ್ರಗಳ ಸಂಬಂಧ ಬೆಳೆಯಲಿ

ನೂತನ ಪ್ರಜಾತಂತ್ರ್ಯ ಘಾನಾದ ಪ್ರಧಾನಿ ಡಾ. ಕ್ವಾಮೇ ನಿಕ್ರುಮಾರವರು ಭಾರತ ಸಂದರ್ಶನದ ಕಾರ್ಯಕ್ರಮವನ್ನಿಟ್ಟು ಕೊಂಡಿದ್ದಾರೆ. ಇವರಿಲ್ಲಿ ಸುಮಾರು ಎರಡು ವಾರಗಳ ತನಕ ಉಳಿಯುವ ನಿರೀಕ್ಷೆಯಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಗೋಲ್ಡ್ ಕೋಸ್ಟ್ ಎಂಬ ಬ್ರಿಟಿಷ ವಸಾಹತು ತದ ನಂತರ ಘಾನವೆಂಬ ಹೆಸರನ್ನು ಪಡೆಯಿತು ಇದರ ರಾಜಧಾನಿ ಆಕ್ರಾ. ಜನ ಸಂಖ್ಯೆಯು ೧೫೩೭ ರ ಹೊಯಂತೆ, ೪೬೯,೦೦೦ ವಿದೆ. ವಿಸ್ತೀರ್ಣವು ೧೧,೬೪೬ ಚದರ ಮೈಲುಗಳು. ಕೆಂಪು, ಬಂಗಾರ ಮತ್ತು ಹಸರು ಬಣ್ಣಗಳ ನಡುವೆ ಕಪ್ಪು ಬಣ್ಣದ ನಕ್ಷತ್ರವೊಂದಿರುವ ಧ್ವಜವೇ ಘಾನದ ರಾಷ್ಟ್ರ ಧ್ವಜವಾಗಿದೆ.

೧೯೫೭ ಮಾರ್ಚಿ ೬ರಂದು ಘಾನವು ಬ್ರಿಟಿಷ್ ಕಾಮನ್‌ವೆಲ್ತಿನೊಳಗಿನ ಸ್ವತಂತ್ರ ರಾಜ್ಯವಾಯಿತು ಬ್ರಿಟಿಷ ವಸಾಹತುವಾಗಿದ್ದ ಗೋಲ್ಡ್‌ಕೋಸ್ಟ್‌ಮತ್ತಿದರ ಸುತ್ತಲಿನ ಆಶಾಂತಿ ಮತ್ತು ಉತ್ತರದ ರಾಜ್ಯಗಳು ಬ್ರಿಟಿಷ ತೋಗೋಲೇಂಡ್‌ಗಳು ಒಂದುಸೇರಿ ಘಾನಾ ರಾಜ್ಯವು ರೂಪುಗೊಂಡಿತು. ಪಶ್ಚಿಮ ಆಫ್ರಿಕದಲ್ಲಿರುವ ಈ ರಾಜ್ಯದ ಉತ್ತರದಲ್ಲಿ ಫ್ರೆಂಚ್ ಪಶ್ಚಿಮ ಆಫ್ರಿಕಾದಿಂದಲೂ ಪೂರ್ವದಲ್ಲಿ ಫ್ರೆಂಚ್ ತೋಗೋಲೇಂಡಿನಿಂದಲೂ ದಕ್ಷಿಣದಲ್ಲಿ ಅತ್ಲಾಂತಿಕ್ ಸಾಗರದಿಂದಲೂ ಪಶ್ಚಿಮದಲ್ಲಿ ಫ್ರೆಂಚ್ ಐವರಿ ಕೋಸ್ಟ್‌ನಿಂದಲೂ ಸುತ್ತುವರಿಯಲ್ಪಟ್ಟಿವೆ. ಇಲ್ಲಿನ ಜನಸಂಖ್ಯೆಯಲ್ಲಿ ನೆಜ್ಜುಕಡಿಮೆ ಹತ್ತು ಸಾವಿರ ಮಂದಿ ಯುರೋಪಿಯನ್ನರಿರುವರು

ಮೈನಿಂಗ್ಸ್, ಚಿನ್ನ ಮತ್ತು ಕೋಕ್ವಾಟ್‌ಗಳು ಇಲ್ಲಿ ವಿಪುಲ ಪ್ರಮಾಣದಲ್ಲಿ ದೊರೆಯುತ್ತಿದ್ದಲ್ಲದೇ ಉಳಿದ ಖನಿಜಗಳೂ ಸಾಕಷ್ಟು ಪ್ರಮಾಣದಲ್ಲಿ ನಿಗುಪ್ತವಾ.. ಇಲ್ಲಿ ವೈಜ್ಞಾನಿಕ ಉದ್ಯೋಗಗಳು ತಿಂಗಳೊಂಬಕ್ಕೆ ಸುಮಾರು ೬೦ ಸಾವಿರ ಟನ್ನುಗಳಷ್ಟು ಖ್ಯಾತಿಯನ್ನು ಪಡೆದಿವೆ. ಪರಣ ಸಂವತ್ಸರ ಗಮನಾರ್ಹ ವಿದ್ಯುತ್ ಕೋಕ್ಕೋ ಮತ್ತು ರಬ್ಬರುಗಳ ಬೆಳೆಯು ಅತ್ಯಧಿಕವಿರುವುದು. ನಿರ್ಯಾತ ವಸ್ತುಗಳಲ್ಲಿ ಮ್ಯಾಂಗನೀಸ್, ಕೋಕ್ಕೋ, ಒಂಗಾರ ಮತ್ತು ವಜ್ರಗಳು ಮಹತ್ವದ ಸ್ಥಾನವನ್ನು ಸಂಪಾದಿಸಿವೆ. ಸಾಮಾನ್ಯ ಆಫ್ರಿಕೇ, ಹೆಚ್ಚಿನ ರಾಷ್ಟ್ರಗಳ ಸರಾಸರಿ ವೈಜ್ಞಾನಿಕ ಕಾರ್ಖಾನೆಗಳಿಗಿಂತ ಘಾನಾದ ಜನತೆಯ ಆದಾಯವು ಹೆಚ್ಚಿದೆ. ಎಂತಲೇ ಘಾನವು ಆಫ್ರಿಕೆಯ ರಾಜ್ಯಗಳಲ್ಲೊಂದು ಪ್ರಮುಖ ಸ್ಥಾನವನ್ನು ಪಡೆದಿದೆ ಇಲ್ಲಿ ಉತ್ತಮ ಹಾಗೂ ಬೃಹತ್ತಾದ ಬಂದರುಗಳನ್ನೂ ವಿದ್ಯುತ್ಕೇಂದ್ರಗಳನ್ನೂ ವ್ಯಾವಸಾಯಿಕ ಸಂಶೋಧನಾಲಯಗಳನ್ನೂ ಕಟ್ಟಲಾಗುತ್ತಿದೆ.

ತನ್ನ ಹಿಂದಿನ ಪರಂಪರೆಗೆ ಸಂಬಂಧಿಸಿಯೇ ಘಾನಾಕ್ಕೆ ಆ ಹೆಸರು ಬಂದಿತು. ೧೩ನೆಯ ಶತಮಾನದಿಂದ ಘಾನವು ಆ ದಾನ್ಸಿ, ಅಕ್ವಾಮೊ, ಅಕ್ರ ಪುತ್ತಿತರ ಸ್ಥಳೀಯ ವಂಶಸ್ಥರ ಆಳಿಕೆಗೊಳಪಟ್ಟು ಮುಂದೆ ಗ್ರೇಟ್ ಬ್ರಿಟನ್ನಿನ ವಸಾಹತಾಯಿತು. ಬ್ರಿಟನ್ನಿನ ಸ್ವಾಧೀನದಲ್ಲಿ ಸುಮಾರು ಒಂದು ಶತಮಾನದಷ್ಟು ಕಾಲವಿದ್ದಿತು. ೧೯೫೭ರಲ್ಲಿ ಬ್ರಿಟನ್ನು ಈ ವಸಾಹತುವಿಗೆ ಒಂದು ನೂತನ ಸಂವಿಧಾನವನ್ನಿತ್ತು ಮುಖ್ಯ ನಾಯಕನನ್ನಾಗಿ ಕ್ವಾಮೇ ನಿಕ್ರುಮಾರವರನ್ನು ಆರಿಸಿತು. ಡಾ. ನಿಕ್ರುಮಾರೇ ಆಗ ಪ್ರಧಾನಿಯಾಗಿ ಚುನಾಯಿತರಾದರು. ೧೯೫೭ರ ಮಾರ್ಚಿ ೬ರಿಂದ ಒರ್ವ ಬ್ರಿಟಿಷ ಗವರ್ನರ್-ಜನರಲ್ಲರಿರುವ ಬ್ರಿಟಿಷ ಕಾಮನ್‌ವೆಲ್ತಿನೊಳಗಿರುವ ಸಂಪೂರ್ಣ ಸ್ವಾಯತ್ತ ರಾಷ್ಟ್ರವಾಗಿ ಪರಿವರ್ತಿಸಲು ಬ್ರಿಟಿಷ ಸರಕಾರವು ೧೯೫೬ನೆ ಸೆಪ್ಟಂಬರದಲ್ಲಿ ಒಂದು ಘೋಷಣೆಯನ್ನಿತ್ತಿತು. ಬ್ರಿಟಿಷ ತೋಗೋಲೇಂಡನ್ನು ಈ ನವೋದಿತ ರಾಜ್ಯ ಜೊಡನೆ ವಿಲೀನಗೊಳಿಸಲು ಮತ್ತು ಅದರ ಮೇಲಿನ ಬ್ರಿಟಿಷ ವಿಶ್ವಸ್ಥತೆಯನ್ನು ಕೊನೆಗೊಳಿಸಲು ಜನರ ದಶಂಬರದಲ್ಲಿ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯು ಅನುಮತಿಯಿತ್ತಿತು.

೧೯೫೭ ಫೆಬ್ರವರಿ ೮ರಂದು ಪ್ರಥಾವಿತವಾದ ಘಾನಾದ ನೂತನ ಸಂವಿಧಾನದಂತೆ, ೧೦೪ ಸದಸ್ಯರಿಂದ ಕೂಡಿದ ಒಂದು ಪಾರ್ಲಿಮೆಂಟು, ಮಂತ್ರಿಮಂಡಳ ಮತ್ತು ಬ್ರಿಟಿಷ ರಾಜ ತ್ವವನ್ನು ಪ್ರತಿನಿಧೀಕರಿಸುವ ಒರ್ವ ಗವರ್ನರ ಜನರಲ್ಲರು ಘಾನಾದ ಆಡಳಿತವನ್ನು ನಿರ್ವಹಿಸುವರು. ಈಗಿನ ಪ್ರಧಾನಿಯವರಾದ ಡಾ. ಕ್ವಾಮೇ ನಿಕ್ರುಮಾರವರು ೧೯೫೮ರಲ್ಲಿ ಜನಸಿದ್ದು ಈಗ ಅವರಿಗೆ ವಿವಾಹವಾಗಿಲ್ಲ. ಸಂಯುಕ್ತರಾಷ್ಟ್ರಸಂಘದ ಅನಿಯ ಪದಸ್ಯರಾಷ್ಟ್ರವಾಗಿ ಘಾನಕ್ಕೆ ೧೯೫೭ರ ಜೂನ್ ತಿಂಗಳಂದು ಪ್ರವೇಶವೊದಗಿತು.

ಘಾನಾ ಪ್ರಧಾನಿಗಳ ಪ್ರಚಲಿತ ಭಾರತ ಸಂಚಾರವು ಎರಡೂ ರಾಷ್ಟ್ರಗಳ ಹಿತಾಸಕ್ತಿಯಿಂದ ಸುಖದವಾಗಲೆಂದು ಆಶ್ಚೇಯಾದ ಜನತೆ ಬಯಸುತ್ತಿದೆ.

ಅಮೆರಿಕೆಯಲ್ಲಿ ರಜದಿನಗಳನ್ನು ಸಂತೋಷದಿಂದ ಕಳೆಯುತ್ತಾರೆ. ಅಂತಹ ಒಂದು ಸಂತೋಷಕೂಟವನ್ನು ಇಲ್ಲಿ ಕಾಣಬಹುದು.

ವಿಚಿತ್ರ ಸಸ್ಯ

ಭತ್ತದ ಹೊಟ್ಟಿನ ಉಪಯೋಗ

ಅಕ್ಕಿ ಗಿರಣಿಗಳಿರುವ ಕ್ಷೇತ್ರಗಳಲ್ಲಿ ಅಕ್ಕಿ ತೌಡಿನಿಂದ ತೈಲ ತೆಗೆಯುವ ಬಗ್ಗೆ ಮೈಸೂರಿನಲ್ಲಿ ೧೦ ಟನ್ನುಗಳಷ್ಟು ತೈಲವನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿರುವ ಯಂತ್ರವನ್ನು ಸ್ಥಾಪಿಸುವ ಕಾರ್ಯಯೋಜನೆಯೊಂದು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿನ ಪರಿಶೀಲನೆಯಲ್ಲಿದೆ. ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿ ಭತ್ತದ ಹೊಟ್ಟಿನಿಂದ 'ಆಕ್ಟಿವೇಟೆಡ್' ಇಂಗಾಲವನ್ನು ತಯಾರಿಸಲಾಗುತ್ತಿದೆ.

೦೦ ೦೦ ೦೦

ಜಲ ರಕ್ಷಿತ ಮಣ್ಣಿನ ಗಾರೆ

ದೇಹಲಿಯಲ್ಲಿರುವ ಕೇಂದ್ರ ರಸ್ತೆ ಸಂಶೋಧನಾ ಸಂಸ್ಥೆಯು ಹಸಿ ಮಣ್ಣಿನ ಗಾರೆಯಲ್ಲಿ ಉಪಯೋಗಿಸಲಾಗುವ ಜಲ ರಕ್ಷಿತ ವಸ್ತುಗಳ ಬಗ್ಗೆ ಸರೀಕ್ಷೆ ಪ್ರಯೋಗಗಳನ್ನು ನಡೆಸಿದೆ ಈ ಪರೀಕ್ಷೆ ಪ್ರಯೋಗಗಳ ಫಲ ಸ್ವರೂಪವಾಗಿ "ಬಿಟುಮಾನ್ ಎಮಲ್ಷನ್" ಮಣ್ಣಿನ ಗಾರೆಯ ಬಗ್ಗೆ ಪರಿಣಾಮಕಾರಿಯಾದ ಜಲ ರಕ್ಷಿತ ವಸ್ತುವೆಂದು ತೀರ್ಮಾನಿಸಿದೆ.

ಹಳ್ಳಿಯ ಮನೆಯ ಗೋಡೆಗಳಿಗೆ ಹಸಿ ಮಣ್ಣಿನ ಗಾರೆಯನ್ನು ಬಳಸಬಹುದು ಈ ಗಾರೆಯು ಜಲರಕ್ಷಿತ ಗಾರೆಯಾಗಿದ್ದು ಮಳೆಯ ನೀರು ಗೋಡೆಯನ್ನು ಹಾಳು ಮಾಡುವುದನ್ನು ತಡೆಗಟ್ಟುವುದು.

೦೦ ೦೦ ೦೦

ನಾಲ್ಕರ ವಯಸ್ಸಿನಲ್ಲಿ ಸಂಗೀತ ಪ್ರತಿಭೆ!

ಎಲ್ಲ ಮಕ್ಕಳಿಂತೆಯೆ ತಾನ್ಯಾಳನ್ನು ನೋಡಿಕೊಳ್ಳಲಾಗುತ್ತಿತ್ತು. ಈ ನಾಲ್ಕು ವರ್ಷದ ಹಸುಳೆ ಯಾವಾಗಲೂ ತಾಯಿಯನ್ನು ಯಾರೂ ಲಕ್ಷಿಸಿಗದಂತಿರಲಿಲ್ಲ. ಅಂಗಳದಲ್ಲೊಮ್ಮೆ, ಆಡುತ್ತಿದ್ದಾಗ, ಬಾನುಲಿಯು ಮೇಲೆ ಹೊಸ ಗೀತೆಯೊಂದನ್ನು ಕೇಳಿ ಮನೆಯೊಳಕ್ಕೋಡಿಬಂದು, ಒಂದೇ ಬೆರಳಿನಿಂದ ಆ ಸ್ವರವನ್ನು 'ಪಿಯಾನೋ'ದಲ್ಲಿ ನುಡಿಸಲು ಪ್ರಯತ್ನ ಮಾಡಿದಾಗ, ಅವಳ ಪ್ರತಿಭೆ ಗುರುಹಿರಿಯರ ಲಕ್ಷ್ಯಕ್ಕೆ ಬಂತು. ಅವಳ ಅಕ್ಕ ವಾಲ್ಯಾ (೯ ವರ್ಷ ವಯಸ್ಸು) ಆಗ ಸೆಲಿಕೇಯಲೂಡಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿನಿಯಾಗಿದ್ದಳು.

ತಾನ್ಯಾ ಈಗಾಗಲೇ ಅನೇಕ ಸಣ್ಣ ಶಾಸ್ತ್ರೀಯ ರಚನೆಗಳ ವಾಚನವನ್ನು ಕಲಿತಿದ್ದಾಳೆ. ಅವಳ ಪುಟ್ಟ ಕೈಗಳು 'ಪಿಯಾನೋ' ಸ್ವರಗಳೆಲ್ಲವನ್ನೂ ನುಡಿಸುವಷ್ಟು ಉದ್ದವಾಗಿಲ್ಲವಾದುದರಿಂದ, ಅವಳು ತನ್ನ ಸೋದರಿಯೊಡಗೂಡಿಕೊಂಡು ನಾಲ್ಕು ಕೈಗಳಿಂದ 'ಪಿಯಾನೋ' ನುಡಿಸುತ್ತಾಳೆ.

ವಿದ್ಯಾಲಯ ಅನೇಕ ಕಚೇರಿಗಳಲ್ಲಿ ಈಗಾಗಲೇ ತಾನ್ಯಾ ಭಾಗವಹಿಸಿದ್ದಾಳೆ. ಈ ಪುಗುವಿಗೆ ಅನುಕೂಲವಾಗುವಂತೆ ಕಾರ್ಖಿಯ ಮೇಲೆ ಮಣೆಯೊಂದನ್ನಿಟ್ಟು ಆಕೆಯನ್ನು 'ಪಿಯಾನೋ' ನುಂಬೆ ಕೂರಿಸಬೇಕಾಗುತ್ತದೆ. ಳು ವರ್ಷದ ತಾನ್ಯಾಗೆ ಇನ್ನೂ ಅಕ್ಷರಾಭ್ಯಾಸವಾಗಿಲ್ಲವಾದರೂ ಅವಳು ಸಂಗೀತವನ್ನೋದಬಲ್ಲಳು. ಈ ಪ್ರತಿಭಾಶಾಲಿನಿಗೆ ಭವ್ಯ ಭವಿಷ್ಯತ್ತಿದೆ!

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ನಿಲುಕಬಹುದಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು.
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಪ್ರತಿಯೊಬ್ಬರಿಗೂ
ಅತ್ಯಪೆಯುಕ್ತವಾದ ಕೈಗನ್ನಡಿ.
ಬೆಲೆ ರೂ. 1-4-0 (1=25). ಒಂದೂವರೆ ರೂಪಾಯಿ ಮನಿಯಾರ್ಡರು
ಮಾಡಿದರೆ ಒಂದು ಪ್ರತಿಯನ್ನು ಟುಕ್‌ಪೋಸ್ಟ್ ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.
ಅಥವಾ
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ್

ಕಥಾ ವಿಹಾರ

(೨ನೇ ಪುಟದಿಂದ)

ಕಾಪಾಡಲು ಕರೆಕೊಟ್ಟಿತ್ತೀ ಆ ಸರಕಾರ ಇಂದು ನಿರ್ನಾಮವಾಗಿದೆ ಭಂಡ ಎಳಸಾಹಿಯ ದರ್ಪದ ತುಳಿತಕ್ಕೆ. ಇಂಥಹ ದೌರ್ಜನ್ಯದ ಚಿತ್ರ ನೋಡಲು ಇನ್ನೂ ನನ್ನ ಕಣ್ಣುಗಳು ಇನ್ನೆ ಏಕೆ ಇಂಗಿಹೋಗಬಾರದು? ಛೀ! ಛೀ! ಎಂಥ ಸವಾಯವಿದು. ನನ್ನ ಕೈಯಲ್ಲಿ ಸಿಕ್ಕಾಲಿದ್ದಿದ್ದರೆ ಈ ಸೈನ್ಯದ ನ್ಯಾಯಮಂಎರವನ್ನೇ ಧ್ವಂಸಗೊಳಿಸುತಿದ್ದೆ.....!

"ಅಯ್ಯೋ! ಇದೇನು ಶಂಕರನನ್ನು ವಧಸ್ತಂಭಕ್ಕೆ ತೆಗೆದುಕೊಂಡು ಹೊರಟಿರಲ್ಲ! ಶಂಕರನ ತಾಯಿ ಆ ಆತ್ಮ ಕರುಳು ಹರಿದು ಹೋಗುತ್ತಿದ್ದರೂ 'ನುಗು, ಸಿಕ್ಕ-ಸಿಕ್ಕಿ ಹಾಗೆ ಕೂಗಾಡುತ್ತಾರೆ ಹೊಟ್ಟೆಯ ಸಲುವಾಗಿ ಬಡಿದಾಡುತ್ತಾರೆ ಒಬ್ಬರ ಮೇಲೊಬ್ಬರು ಸಂಶಯಪಡುತ್ತಾರೆ. ಕೊನೆಗೆ ನಿರಾಶರಾಗುತ್ತಾರೆ. ಅವರ ಆಕೆಗೆ ಕೊನೆಯೇ ಇಲ್ಲ. ಚಿಂಚಿಲವೂ, ಶುಭ್ರವೂ ಆದ ಸುಪ್ರಭಾತನಾಗಿ ಅವರ ಹೃದಯಾಂತರಾಳವನ್ನು ಮುಸುಕಿದ ಕತ್ತಲೆಯನ್ನು ಕಳೆ, ಚಿನ್ನ, ಅಲೆ, ಆಸೂಯಗಳಂಥಾಗಿ ಅವರು ಕ್ರೂರ ಕರ್ಮಿಗಳಾಗಿದ್ದಾರೆ. ಅವರ ರಕ್ತಪಿಪಾಸೆಯನ್ನು ನೀನು ಕ್ಷಮಿಸು. ಅಮೃತವನ್ನು ಅವರಿಗೆ ಸುರಿ. ಶಾಂತಿ ಸಿಗಲಿ. ಅವರಲ್ಲಿ ಅಂಕುರಿಸಲ್ಪಟ್ಟ ಸುಶಾಂತಿ ಒಂದು ದಿನ ಹೆಮ್ಮರವಾಗಿ ಫಲ ಬಿಡುತ್ತದೆ. ಅಂದು ಅವರು ಈಗ ನಕ್ಕು ಮಡದಿಗೆ ಹೇಳಿದ ಕಥೆಯನ್ನು ನೆನೆಯಿಸಿ ಮುಖವನ್ನು ಮಡದಿ ಎದುರು ತೋರಿಸಬಹುದು. ನಿನ್ನ ಕಥೆಗೆ ಮರುಗವರು ಇರರು. ಈ ಸುಂದರ ದಿನದ ಚಿತ್ರವನ್ನು ಚಿತ್ರಿಸಿಕೊಳ್ಳದೇ ಇರರು ಮಗು. ಜಗತ್ತಿನಲ್ಲಿ ಸದಾ ಕತ್ತಲೆಯೇ ಆವರಿಸಿಕೊಂಡು ಇರಲಿಕ್ಕೆ ಸಾಧ್ಯವಿಲ್ಲ. ಒಂದು ಕಾಲಕ್ಕೆ ದಿನಕರ ರಕ್ತ ಖಚಿತವಾದ ಕೀರ್ತಿಪಟ ಧಾರಿಯಾಗಿ ಜಗತ್ತನ್ನು ಬೆಳಗದೇ ಇರನು. ಅವಾಗ್ಯೆ ನೀನು ಯೋಗ್ಯ ತಾಯಿಯ ಮಗನೆಂದು ಇಂದು ಗುಂಡಿಕ್ಕಿ ಕೊಂದವರೇ ಮಂ-ಮರನೇ ಮರುಗ ಬಹುದು. ಉತ್ತಾನನ ನಂತ ನಿನ್ನೆಡೆಗೆ ಒಲಿಯುವದೇನು ಮಹಾ. ಆದರೆ ರಾಕ್ಷಸೀ ಕೃತ್ಯ ಪಾಷಾಣ ಹೃದಯದ ಮಾನವನ ಹೃದಯಕರಗುವಂತೆ ಯಾವ ಕೃತಿಯು ಎಂದು ನಡೆಯುತ್ತಿದೆಯೋ ಅಂದು ನಿನ್ನ ಜನ್ಮ ಪವಿತ್ರವಾದ ಒಂದು ಲೋಕದಲ್ಲಿ ಆಗಿದೆ ಎಂದು ತಿಳಿಯುತ್ತದೆ. ಆಗ ನಿನ್ನ ತಾಯಿಯ ಕರಳು ಎಂಥಹದು ಎಂದು ಅವರು ತಿಳಿಯುತ್ತಾರೆ. ಅವಾಗ್ಯೆ ನೀನು ತಪ್ಪುಗಾರನಲ್ಲವೆಂದು ತಿಳಿಯಲ್ಪಡು



ತ್ತೀ ಮಗು ಹೋಗು ಎಷ್ಟುದಿನ ಇದ್ದರೂ ಈ ದೇಹ ನಾಶಿಯಾಗತಕ್ಕದ್ದು ಮಗು! ಸಂತೋಷದಿಂದ ಮರಣ ದೇವತೆಗೆ ಮುದ್ದು ಕೊಡು. ಅವಳ ಮನಸ್ಸಿಗೆ ನೋವು ಉಂಟು ಮಾಡಬೇಡ ಮತ್ತೆ ಕೀರ್ತಿಯು ಬಗೆಗೆ ಆಲೆ ಇಟ್ಟು ಸತ್ತೀಯೇ ಮುಂದೆ ಕತ್ತೆಯ ಶರೀರ ಧರಿಸಿ ಕೀರ್ತಿ–ಕೀರ್ತಿ ಎಂದು ಹಲುಬ ಬೇಕಾಗುತ್ತಿದೆ. ಮಗು! ಪಂಚ ತತ್ವಗಳು ನಿನ್ನನ್ನು ಕರೆದುಕೊಳ್ಳುವನೆಂದ ಬಳಿಕ ದುಃಖಬೇಡ ಯಾಕಂದರೆ ಅವುಗಳಿಂದಲೇ ನೀನಾಗಿದ್ದಿ ಅವು ನೀನಾಗಲು ತಪ್ಪೇನು? ಕೊನೆಗೆ ಬೇಡಿಕೊ ನನ್ನ ನಾಡ ದೇವಿ ಸದಾ ಮುತ್ತೈದಿಯಾಗಿ ಬಾಳಲೆಂದು. ಅವಳ ಹಣೆಯ ಮೇಲಿನ ಚಂದನದ ಕಾಂತಿ ಹೊಳೆಯುತ್ತಿದ್ದರೆ ಯಾವ ಕತ್ತಲೆಯಾದರೂ ಚದುರಿ ಹೋಗುತ್ತಿದೆ. ಕೊನೆಗೆ ನಿನಗೆ ಏನು ಕೊಡಲಿ? ನನ್ನಲ್ಲಿ ಇನ್ನು ಕೆಲವು ಕಣ್ಣೀರಿನ ಹನಿಗಳು ಇವೆ. ಅವೂ ಇನ್ನು ಕೆಲವು ವೇಳೆಗೆ ಬತ್ತಿ ಹೋಗಬಹುದು. ಇದ್ದಷ್ಟನ್ನು ಈಗ ಅರ್ಪಿಸುವೆ ಹೋಗಿ ಬಾ ಮಗು! ಅನಂತದ ಅಂತರಂಗದಲ್ಲಿರುವ ದೇದೀಪ್ಯಮಾನವಾದ ಪಿಂಹಾಸವನ್ನು ಏರಲು ಹೋಗು. ಅಲ್ಲಿ ಕುಳಿತು ದೇವತೆಗಳಿಂದ ಮಾತ್ರ ಆರತಿಯನ್ನು ಮಾಡಿಸಿಕೊಳ್ಳಬೇಡ ಭೂಲೋಕದ ವೀರ ಶಿರೋಮಣಿ ಸ್ತ್ರೀಯರು ತಮ್ಮ ಕಂಕಣದ ನಿನಾದ ಮಾಡುತ್ತಾ ಬರುವಾಗ ಅವರಿಂದ ಹರ್ಷದಿಂದ ಆರತಿ ಬೆಳಗಿಸಿಕೋ. ಯಾಕಂದರೆ ಅವರ ಆಶೀರ್ವಾದ ನಿತ್ಯ ಸತ್ಯವಾದದ್ದು. ಹೋಗಿ ಬಾ ಮಗು.....!" ಎಂದು ಮಗುವಿಗೆ ಬಿಶೀರ್ವದಿಸುತಿದ್ದ ಕೈಗಳನ್ನು ಅದಾರೋ ಕೆಳಕ್ಕೆ ಎಳೆದುಎಂತೆ ಬಡಿದರು. ಶಂಕರ ದುಃಖ ತುಂಬಿದ ಕಣ್ಣುಗಳಿಂದ ತಾಯಿಯನ್ನೊಮ್ಮೆ ನೋಡಿ ವಂದಿಸಿದ. ಇಷ್ಟರಲ್ಲಿಯೇ ಆ ತಾಯಿಯ ಪ್ರತಿಮೆ ಜನರ ಮಧ್ಯನಲ್ಲಿ ಮರೆಯಾಗಿ ಹೋಯಿತು. ಆಕೆಯ ಕೂಗು ಕೆಂಧೂಳಿಯ ಮಧ್ಯದಲ್ಲಿ ಮಾಯವಾಯಿತು.

"ತಾಯಿ! ತಾಯಿಯೇ ಹೌದು ಅವಳು. ಮರಣವನ್ನು ಅಪ್ಪಿಕೊಳ್ಳಲು ಹೋಗುತ್ತಿರುವ ಮಗ ಕಣ್ಣೆದುರಿಗೆ ಇರಲು ದೇಶ ಸೇವೆಗೆ ಮಡಿಯುತ್ತಿರುವನೆಂದು ಸಂತೋಷದಿಂದ ಅವನನ್ನು ಮರಣವನ್ನಪ್ಪಿಕೊಳ್ಳಲು ಕೇಳಿಕೊಳ್ಳುತ್ತಾಳೆ. ಇಂಥ ಮಾತೃ ಹೃದಯದ ಬಿಸಿಯುಸಿರಿನ ರಕ್ತದಿಂದ ಶಪ್ತಪ್ತವಾದ ಸಾಮ್ರಾಜ್ಯ ಎಷ್ಟು ದಿನ ತಾನೆ ಗಟ್ಟಿಯಾಗಿ ನಿಲ್ಲಬಲ್ಲದು?"

ಎಂದು ಕುಂಟು ಸೈನಿಕ ದುಃಖಿಸುತ್ತಿರುವಂತೆಯೇ ಶಂಕರನ ಹಿಂದೆಯೇ ವಧಾಸ್ತಂಭಕ್ಕೆ ಇನ್ನೊರ್ವ ಸ್ತ್ರೀಯನ್ನು ಎಳೆದೊಯ್ಯುತ್ತಿದ್ದಾರೆ.

ವಿರಾಮದ ದಿನವೊಂದರಲ್ಲಿ ವಿಹರಿಸುತ್ತಿರುವ ಅಮೆರಿಕನ್ ಕುಟುಂಬವಿದು.

"ಹೌದು. ಇವಳು ವಿಜಯನ ತಾಯಿ. ನಾನು-ಶಂಕರ-ವಿಜಯ ಮೂವರೂ ಒಮ್ಮೆಲೇ ಸೈನ್ಯ ಸೇರಿದವರು. ಇದೇನು ಈ ಕೆಯಸ್ಸು ಯಾವ ಕಾರಣಕ್ಕೆ ಗಲ್ಲಿನ ಕಂಬಕ್ಕೇರಿಸುತ್ತಾರೆ...?" ಎನ್ನುತ್ತಿರುವಂತೆ ಡಂಗುರ ಹೀಗೆ ಪ್ರಸಿದ್ಧಿಸಲ್ಪಟ್ಟಿತು.

"ಅಂದು ಸುಂದರ ಒಂದು ಸಂಜೆ ಪ್ರಸಿದ್ಧ ನಾಯಕ ವಿಜಯ ಅವನ ತಾಯಿ ಕಮಲ ಆದಾರಿಗೋ ಕಾಯುತ್ತಿದ್ದರು ಕಾಯುತ್ತಿದ್ದ ವ್ಯಕ್ತಿ ಆಗಮಿಸಿತು. ಆಗಮಿಸಿವರು ಯಾರೂ ಆಗಿರದೆ ಬ್ರಿಟಿಷರ ದಳಪತಿ. ದಳಪತಿಗಳು ಹೇಳಿದರು. "ನಿಸ್ತರ ವಿಜಯ ನಿಮ್ಮ ದಳಪತಿ ಸುಧೀರನನ್ನೆ ಹಿಡಿದುಕೊಟ್ಟರೆ ಈ ಖ್ಯಾಂತಕ್ಕೆ ನೀವು ತರರು. ಮತ್ತು ನಿನ್ನ ತಾಯಿಗೆ ವೀರಮಾತೆಗೌರವ ದೊರೆಯುತ್ತಿದೆ ವಿಜಾರಿಸಬಹುದು.ಬೆಳಗಿನಜಾವಗಂಟೆಗೆ ಸಿದ್ಧವಾಗಿಬೇಕು" ದಳಪತಿ ಹೋದನು.

"ಅಮೋಂದು ಸುಧೀರನಿಗೆ ಮರ್ಯೋವದ ದಿನ. ಕಮಲಳ ವನೆಗೆ ಭೋಜನಕ್ಕೆ(ಸುಧೀರ ಹೆಚ್ಚಾಗಿ ಕಮಲಳನ್ನು ತಾಯಿ ಎಂದೇ ತಿಳಿಯಲ್ಪಟ್ಟಿದ್ದ) ಮುಂಜಾನೆ ಹಾಲು ಕುಡಿದು ಭೋಜನಕ್ಕೆ ಬರುತಪ್ಪರಲ್ಲಿ ನನ್ನು ವಕದಲ್ಲಿ ಅವನಿಗಾಗಿ ತಯಾರಿಸಿದ ತಾಟು "ಅವನು ಕ್ಷೇಗ್ರದಿಂದ ಇಳಿದು ಬರುತ್ತಿರುವದನ್ನು ನೋಡುತ್ತೇನೆ."

"ಸುಧೀರನನ್ನು ಹಿಡಿದು ಕೊಟ್ಟ ಮಹೋಪಕಾರಕ್ಕೆ ಕಮಲಳಿಗೆ ಮತ್ತು ವಿಜಯನಿಗೆ ಮರಣದಂಡನೆ. ಯಾಕಂದರೆ ಇಂಥಹ ನೀಚರು ತಮ್ಮ ತಾಯಿಗೆ ದ್ರೋಹ ಬಗೆದಂತೆ ನವ ಗೆ ದ್ರೋಹಬಗೆಯುಬಾರದೆಂದು ಅವರಿಗೆ ಇದಕ್ಕಿಂತಲೂ ಯೋಗ್ಯವಾದ ಮರ್ಯಾದೆ ಸಿಗದ್ದರಿಂದ ಇದನ್ನೇ ಕೊಡಬೇಕಾಯಿತು. ಇದರಿಂದ ಜನತೆ ನಮಗೆ ದೂಷಿಸದಿರಲೆಂದು ನನ್ನು ವಿನಂತಿ." ದಳಪತಿ ಹೇಳಿದ.

ಒಂದೇ ಸವನೆ ಈ ಆಜ್ಞೆ ಓದುತ್ತಿತ್ತು.

"ಈ ಆಜ್ಞೆ ನನ್ನನ್ನು ದಿಬ್ಯಾಧನನ್ನಾಗಿ ಮಾಡಿತು. ಇವಳೂ ತಾಯಿ, ಅವಳೂ ತಾಯಿ, ಇವಳೂ ಸ್ತ್ರೀ, ಅವಳೂ ಸ್ತ್ರೀ. ಆದರೆ ಇಬ್ಬರಲ್ಲಿ ಭೂಮಿ ಆಕಾಶ ದಷ್ಟು ಅಂತರ. ಒಬ್ಬ ತಾಯಿ ಮರಣವನ್ನು ತೃಣವೆಂದು ಬಗೆದರೆ ಇನ್ನೊಬ್ಬ ತಾಯಿ 'ಮರಣ' ಅಮೂಲ್ಯ ಆಸರ್ಫೆ ರತ್ನವೆಂದು ತಿಳಿದಿದ್ದಾಳೆ. ಒಬ್ಬಳಲ್ಲಿ ದೇಶಪ್ರೇಮ ತುಂಬಿದ್ದರೆ ಇನ್ನೊಬ್ಬಳಲ್ಲಿ ಧನ, ಕನಕ್ಕ ಕೀರ್ತಿ ಅಧಿಕಾರದ ಮೇಲೆ ಪ್ರೇಮವಿದೆ. ಇಬ್ಬರೂ ಒಂದೇ ತಾಯಿಯು ಹೊಲೆಯುಂತರೂ ಈ ರೀತಿ ಭಿನ್ನಭೇದವೇಕೆ? ಏಕೆ?....."

ಎನೋ ನನಗೆ ತಿಳಿಯದು ಮಾತೃತನದ ಮೂಲ. ನನಗೆ ಎಚ್ಚರವಾದದ್ದು ಈ ಆಸ್ಪತ್ರೆಯಲ್ಲಿ. ಇಲ್ಲಿಯ ನರ್ಸ ಹೇಳಿದಳು "ನಾನು ಹೇಗೆ ಇಲ್ಲಿಗೆ ಬಂದೆ" ಎಂದುದಕ್ಕೆ.

"ರಾಜಬೀದಿಯಲ್ಲಿ ನೀವು ಬಿದ್ದಿದ್ದಿರಿ. ಜನರು ಓಡುತ್ತಿದ್ದರು. ಅಲ್ಲಿಂದ ನಿಮ್ಮನ್ನು ಕರೆತರಲಾಯಿತು."

ಮತ್ತೆ ಕೇಳಿದೆ "ಸುಧೀರ ಇರುವನೆ?" ಎಂದು.

"ಅಯ್ಯೋ! ಅಂಥ ತಾಯಂದಿರು ಈ ಪಾಪಮಯ ಜಗತ್ತಿನಲ್ಲಿ ಇರಲಿಕ್ಕೆ ಸಾಧ್ಯವೇ? ಪುಣ್ಯಾತ್ಮಳ.–ಹೆರಿಯುವ ಕೃಷ್ಣೆಯಲ್ಲಿ ಮಾಯವಾದಳು. ಅವಳ ಮಗ ವೀರ ಸ್ವರ್ಗವನ್ನು ಸೇರಿದ."

ದಿಕ್ಕೇ ತಿಳಿಯದಾಯಿತು. "ವಿಜಯ-ಅವನ ತಾಯಿ?" ಎಂದೆ.

"ಛೀ! ಆ ಸುದ್ದಿಯನ್ನು ತೆಗಿಯಬೇಡಿರಿ ಪಾಪಿಗಳ ದೇಹ ತಾಗುತ್ತಿವೆ ವಧಾಕಂಭದಲ್ಲಿ."

"ತಾಯಿ! ಹೌದು ತಾಯಿ. ನಿನ್ನ ಅವಶ್ಯಕತೆ ಇನ್ನಿಲ್ಲ. ಎಚ್ಚರಗೊಳ್ಳಬೇಕಾದ್ದವರು ನಾವು"

—ಎಫ್. ಡಿ. ಸಾಲಿ



ಕುಮಾರಿ ಬಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ವಾಕಿಸ್ವರು: ಪ್ರಾ ಕಂಪೆನಿ, ಮಂಗಳೂರು—1.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

NAVAYUGA
REGD. NO. M. 3619

UDIPI, THURSDAY
25-12-1958

LICENSE NO. 31
Licensed to Post without Prepayment

ಯೋಜನಾ ಗುರಿ

ಬೇಸಾಯೆ ಉತ್ಪನ್ನಗಳ ಗುರಿಯು ಅಧಿಕವಿದೆ

ಆದು ಸ್ವಲ್ಪವಷ್ಟಿಗೆ ಮಾತ್ರ ಕೈಗೂಡಿರುತ್ತದೆ

ನಮ್ಮ ಪಂಚವರ್ಷಿಕ ಯೋಜನೆಗಳಲ್ಲಿ ಬೇಸಾಯೋತ್ಪನ್ನಕ್ಕೆ ಕೊಡಲಾಗಿರುವ ಸ್ಥಾನವನ್ನೂ ಇನ್ನು ಉದಿರುವ ಕಾಲಾವಧಿಯಲ್ಲಿ ಯೋಜನೆಯ ಗುರಿಯನ್ನು ಸಾಧಿಸಲು ಅವಶ್ಯವಿರುವ ಕಾರ್ಯವನ್ನೂ ವಿಚಾರಮಾಡಿ ನೋಡುವುದು ಈ ಲೇಖನದ ಉದ್ದೇಶ.

ಬೇಸಾಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ನಮ್ಮ ಯೋಜನೆಗಳಲ್ಲಿ ಅತಿ ಮುಖ್ಯ ಪ್ರಾಮುಖ್ಯತೆ ಕೊಡಲಾಗಿದೆ ನಮ್ಮ ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನಕೋಟಿಯ ಜೀವನ ವಟ್ಟವನ್ನು ಸುಧಾರಿಸುವ ಕಾರ್ಯ ವ್ಯವಸಾಯೋತ್ಪನ್ನ ಹಚ್ಚಿಸುವುದರ ಮೂಲಕ ಮಾತ್ರ ಸಾಧ್ಯವಾದೀತು ನಮ್ಮ ದೇಶದ ಜನಸಂಖ್ಯೆಯಲ್ಲಿ ಶೇಕಡಾ ೭೦ ರಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲೇ ವಾಸಿಸುತ್ತಿರುವರು ಇವರ ಸ್ಥಿತಿಗತಿಗಳನ್ನು ಸುಧಾರಿಸುವುದರಿಂದ ಈಗ ಗ್ರಾಮಾಂತರ ಪ್ರದೇಶಕ್ಕೂ ನಗರಗಳ ಪ್ರದೇಶಕ್ಕೂ ಮಧ್ಯೆ ಇರುವ ಆದಾಯ ಪ್ರಮಾಣದ ಅಂತರವನ್ನು ಕಡಿಮೆಮಾಡಿ ಒಟ್ಟು ದೇಶದ ಸಾಮಾಜಿಕ ಭದ್ರತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ

"ಎಲ್ಲ ರಂಗಗಳಲ್ಲಿ ಸರ್ಕಾರದ ಆಡಳಿತಯಂತ್ರ ಈ ವಿಷಯಕ್ಕೇ ಗಮನಕೊಡಲು ಸಿದ್ಧವಿದೆ ಎಂಬುವ ಭರವಸೆ ಗ್ರಾಮಾಂತರ ಪ್ರದೇಶದ ನಿವಾಸಿಗಳಿಗೆ ದೊರಕಬೇಕು, ಸರ್ಕಾರದ ಗುರಿ ಗ್ರಾಮಾಂತರ ಪ್ರದೇಶದ ಜನರ ಜೀವನವನ್ನು ಸುಧಾರಿಸುವುದೇ ಎಂದು ಎಲ್ಲರಿಗೆ ಮನದಟ್ಟಾಗಬೇಕು, ಜನನಾಯಕರಿಗೆ ನಿಷ್ಠೆಕೊಂಡವರು ಮತ್ತು ಇತರ ಜನರಿಂದ ಸಂಘಸಂಸ್ಥೆಗಳು ಈ ವಿಷಯದಲ್ಲಿ ಆಸಕ್ತಿ ವಹಿಸಿ ಸಂತಸ ಕಲಸವಾಗುತ್ತಿರುವ ಭರವಸೆ ಜನಸಾಮಾನ್ಯರಿಗೆ ಬರಬೇಕು.-ಇಷ್ಟೆ ಇದ್ದಲ್ಲಿ ಸಾಧ್ಯವಾದೀತು ಗ್ರಾಮಾಂತರ ಪ್ರದೇಶದ ಜನರ ಜೀವನ ಮಟ್ಟವನ್ನು ಉತ್ತಮಗೊಳಿಸುವ ಕಾರ್ಯದಲ್ಲಿ ಜನತೆಯ ಬೆಂಬಲಗಳಿಸುವುದು ಮತ್ತು ಅವರಲ್ಲಿ ಉತ್ಸಾಹ ತುಂಬುವುದು ಸಾಧ್ಯವಾದೀತು,"ಎಂದು "ಅಧಿಕ ಆಹಾರ ಬೆಳೆಯುವ ಸಂಬಂಧವಾದ ಕಾರ್ಯಕ್ರಮ ವಿಚಾರಣಾ ಸಮಿತಿ" ಅಭಿಪ್ರಾಯಪಡುತ್ತದೆ.

ಈ ಹಿನ್ನಲೆಯಲ್ಲೇ ಗಮನದಲ್ಲಿಟ್ಟುಕೊಂಡು ಮೊದಲನೆ ಪಂಚವರ್ಷಿಕ ಯೋಜನೆಯು ಸಾಮುದಾಯಿಕ ಅಭಿವೃದ್ಧಿ ಚಳವಳಿಯನ್ನು ಆರಂಭಿಸಿತು.

ಪ್ರತಿಯೊಂದು ಗಾಮವೂ ಸರ್ವತೋಮುಖವಾಗಿ ಏಳಿಗೆ ಹೊಂದಿ ಗ್ರಾಮದ ಪ್ರತಿಯೊಂದು ವರ್ಗದ ಜೀವನ ಮಟ್ಟ ಉತ್ತಮಗೊಳ್ಳಲು ಬೇಕಾಗುವ ಆಡಳಿತ ಸಹಾಯ, ತಾಂತ್ರಿಕ ನೆರವು ಮತ್ತು ಹಣಕಾಸಿನ ಸಹಾಯ ಇತ್ಯಾದಿ ಸೌಕರ್ಯ ಸೌಲಭ್ಯಗಳನ್ನು ಒದಗಿಸುವುದೇ ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಉದ್ದೇಶ.

ಈ ಯೋಜನೆನ್ವಯಿಸಿದ ಕಾರ್ಯಕ್ರಮಗಳು ಗ್ರಾಮದ ಎಲ್ಲ ವರ್ಗಗಳ ಮೇಲೆ ಪರಿಣಾಮಕಾರಿಯಾಗಬೇಕು ತಮ್ಮದೇ ಆದ ಭೂಮಿಯಿಲ್ಲದ ರೈತರು ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ವರ್ಗಗಳ ಮೇಲೂ ಯೋಜನೆ ಪ್ರಭಾವ ಬೀರುವಂತಾಗಬೇಕು.

ಶತಮಾನಗಳಿಂದ ಬೆಳೆದು ಬಂದಿರುವ ಮನೋದೌರ್ಬಲ್ಯಗಳು ಮತ್ತು ವರ್ಗ ಭೇದ ಹೋಗಿ ಒಟ್ಟು ಗ್ರಾಮದ ಹಿತವೇ ಮುಖ್ಯವಾಗಿರುವಂತಹ ಏಕ ಮನೋಭಾವ ನುತ್ತು ಏಕೋದ್ದೇಶ ರೂಪಿತವಾಗಿ, ಅನುಕೂಲ ಸ್ಥಿತಿಯಲ್ಲಿರುವ ಜನ ಹಿಂದುಳಿದಿರುವವರ ಸ್ಥಿತಿಗತಿಗಳನ್ನು ಸುಧಾರಿಸುವ ಉದ್ದೇಶತಾಳಿರುವ ಭರವಸೆ ಜನ ಸಾಮಾನ್ಯರಿಗೆ ದೊರಕಬೇಕು.

ಸಾಮುದಾಯಿಕ ಅಭಿವೃದ್ಧಿ ಯೋಜನೆಯಂತೆ ಪ್ರತಿಯೊಂದು ಗ್ರಾಮದ ಮುಂದೆಯೂ ಇಟ್ಟಂತಹ ನಿರ್ದಿಷ್ಟ ಕಾರ್ಯಕ್ರಮ ಈ ರೀತಿ ಇದೆ:

೧ ವ್ಯವಸಾಯೋತ್ಪನ್ನವನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದ ಹಾಗೆಯೇ ಒಂದಲ್ಲ ಒಂದು ಗ್ರಾಮ ಕೈಗಾರಿಕೆ ಅಥವಾ ಸಣ್ಣ ಪುಟ್ಟ ಕೈಗಾರಿಕೆಗೆ ಸಂಬಂಧಿಸಿದ ಒಂದು ನಿರ್ದಿಷ್ಟ ಯೋಜನೆಯನ್ನು ಪ್ರತಿಯೊಂದು ಕುಟುಂಬವೂ ತಯಾರಿಸಿಕೊಳ್ಳಬೇಕು. ಮತ್ತು, ಅಂತಹ ಯೋಜನೆ ಕಾರ್ಯರೂಪಕ್ಕೆ ಬರಲು ಅಗತ್ಯವಾದ ನೆರವನ್ನು ಸರ್ಕಾರ ಹೊರೈಸಬೇಕು.

೨. ತನಗೆ ಬೇಕಾದ ಒಂದಲ್ಲ ಒಂದು ಸಹಕಾರ ಸಂಘದ ಸದಸ್ಯತ್ವವನ್ನು ಪ್ರತಿಯೊಂದು ಕುಟುಂಬವೂ ಪಡೆದಿರುವಂತೆ ಮಾಡಿ ತನ್ಮೂಲಕ ಸಹಕಾರ ಚಳವಳಿ ಬೆಳೆಯಲು ಅವಕಾಶ ಕಲ್ಪಿಸಬೇಕು.

೩ ಇಡೀ ಗ್ರಾಮದ ಏಳಿಗೆ ಹಾಗೂ ಸೌಕರ್ಯಕ್ಕೆ ಅನುಕೂಲವಾಗುವಂತಹ ಸ್ಥಾಯಿ ಕಾರ್ಯಕ್ರಮಗಳಿಗೆ ಪ್ರತಿಯೊಂದು ಕುಟುಂಬವೂ ತನ್ನ ಕೈಲಾಗುವ ಹಣಸಹಾಯವನ್ನೂ ಜೊತೆಗೆ ತನ್ನ ವಾಲಿನ ಶ್ರಮದಾನವನ್ನೂ ನೀಡಿ ಸಹಕರಿಸುವಂತೆ ಮಾಡಬೇಕು. ಈ ರೀತಿ ಮಾಡುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಒಂದು ಹೊಸ ಚೈತನ್ಯವನ್ನೂ ಹುರುಪನ್ನೂ ಹುಟ್ಟಿಸಲು ಸಾಧ್ಯವಾಗುವುದು.

೪. ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಉತ್ತಮ ತಳಹದಿಯ ಮೇಲೆ ಮಹಿಳೆಯರ ಹಾಗೂ ಯುವಕರ ಚಳವಳಿ ಬೆಳೆದು ಅವರು ಸಂಘಟಿತರಾಗಿ ನಿಲ್ಲಲು ಹಾದಿಮಾಡಬೇಕು.

ಪ್ರಥಮ ಪಂಚವರ್ಷಿಕ ಯೋಜನೆ ಅವಧಿ ಮುಗಿಯುವ ಹೊತ್ತಿಗೆ ಈ ಸಾಮುದಾಯಿಕ ಅಭಿವೃದ್ಧಿ ಚಳವಳಿ ನಾಡಿನ ಸುಮಾರು ೬೫೦೦೦ಕ್ಕೂ ಹೆಚ್ಚು ಗ್ರಾಮಗಳಿಗೆ ಹರಡಿತ್ತು

ಪ್ರಥಮ ಪಂಚವರ್ಷಿಕ ಯೋಜನಾವಧಿಯಲ್ಲಿ ಒಟ್ಟು ೭೬ ಲಕ್ಷ ಟನ್ನುಗಳಷ್ಟು ಹೆಚ್ಚು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲು ಒಂದು ಗುರಿ ಇಟ್ಟುಕೊಳ್ಳಲಾಗಿದ್ದಿತು

೧೯೫೫-೫೬ರಲ್ಲಿ ಇದ್ದ ಆಹಾರ ಧಾನ್ಯಗಳ ಉತ್ಪನ್ನ ಪ್ರಮಾಣದ ಅಂದಾಜಿಗೆ ಹೋಲಿಸಿದರೆ ಪಂಚವರ್ಷಿಕ ಯೋಜನೆ ಫಲವಾಗಿ ೧೯೫೫-೫೬ರಲ್ಲಿ ಆಹಾರ ಧಾನ್ಯಗಳ ಉತ್ಪನ್ನ ಪ್ರಮಾಣ ೧೯೬ ಲಕ್ಷ ಟನ್ನುಗಳಷ್ಟು ಹೆಚ್ಚಿತು

ಪ್ರಥಮ ಪಂಚವರ್ಷಿಕ ಯೋಜನೆಯಲ್ಲಿ ಗ್ರಾಮೋದ್ಯೋಗಿವೃದ್ಧಿಗೆ ೭೬೦ ಕೋಟಿ ರೂ ಗಳನ್ನು ವಿನಿಯೋಗಿಸಲಾಗಿದ್ದಿತು.

ಎದುರ್ಚಕ್ಕೆ ಸೌಕರ್ಯ, ಗ್ರಾಮ ಕೈಗಾರಿಕೆಗಳು, ಗ್ರಾಮಾಂತರ ನೀರಿನ ಪೂರೈಕೆ ಯೋಜನೆಗಳು, ಅಲ್ಪ ಹಾಗೂ ಮಾಧ್ಯಮ ಅವಧಿಯ ಸಾಲ ಸೌಲಭ್ಯ, ಇತ್ಯಾದಿಗಳಿಗೆ ಪ್ರತ್ಯೇಕವೆಚ್ಚ ನಮೂದಿಸಲಾಗಿದ್ದು ಮೇಲಿನ ಅಂದಾಜಿನಲ್ಲಿ ಅಡಕವೇರಿರಲಿಲ್ಲ ಭಾರತ ಸ್ವಾತಂತ್ರ್ಯ ಗಳಿಸುವುದಕ್ಕೆ ಮೊದಲು ಎಷ್ಟೋ ದಶಕಗಳಲ್ಲಾದ ವೆಚ್ಚಕ್ಕಿಂತ ಹೆಚ್ಚು ವೆಚ್ಚ ಈ ಐದು ವರ್ಷಗಳ ಕಾಲದಲ್ಲಿ ಆಯಿತು.

ಪ್ರಥಮ ಪಂಚವರ್ಷಿಕ ಯೋಜನೆ ಸಾಧಿಸಿದ್ದೇನು ಎಂಬುದನ್ನು ಯೋಜನಾ ಆಯೋಗವು ತಿಳಿಸುವಾಗ, ಈ ಸಾಧನೆಗೆ ಕಾರಣವಾಗಿ ಮೇಲೆ ಸಕಾಲಕ್ಕೆ ಆಗಿದ್ದ ಅಂಶವನ್ನೂ ಗಣನೆಗೆ ತೆಗೆದುಕೊಂಡಿತು. "ಯೋಜನೆಯ ಅವಧಿಯಲ್ಲಿ ವ್ಯವಸಾಯೋತ್ಪನ್ನವು ಹೆಚ್ಚಿರುವುದಕ್ಕೆ ಹಾಗೂ ಹೆಚ್ಚು ಉತ್ಪನ್ನವು ಸಾಕಷ್ಟು ದೃಢವಾದುದಲ್ಲ ಎಂಬುದಕ್ಕೂ ಸಾಕಷ್ಟು ಸೂಚನೆಗಳಿವೆ" ಎಂದು ಆಯೋಗವು ಅಭಿವ್ಯಾಯಪಟ್ಟಿತು

—ವಿ. ಟಿ. ಕೃಷ್ಣಮೂರ್ತಾಚಾರಿ.



ಅಮೆರಿಕೆಯ ಅಧ್ಯಕ್ಷ ಐಸನ್ ಹಾವರರು ವೋಇಸ್ ಆಫ್ ಅಮೆರಿಕದ ಸ್ಟುಡಿಯೊದಿಂದ ಭಾಷಣ ಮಾಡುತಿದ್ದಾರೆ.

ಎಲ್ಲರಿಗೂ ಬೇಕಾಗಿದೆ.

ಬಡವರು ದೊಡ್ಡವರು ಎಂಬ ಭೇದವಿಲ್ಲದೆ ಪ್ರತಿಯೊಬ್ಬನ ಆರ್ಥಿಕ ಅನುಕೂಲತೆ ಮತ್ತು ಅವಶ್ಯಕತೆಗಳಿಗೆ ಒಪ್ಪುವ ಫಲದಾಯಕ ಯೋಜನೆಗಳು ನಮ್ಮಲ್ಲಿವೆ.

ಪಿಗ್ಮಿ ದೇನಶಾತಿ ಯೋಜನೆ ಪ್ರತಿದಿನವೂ ಉಳಿಸಬೇಕೆಂಬ ಅಪೇಕ್ಷೆಯುಳ್ಳವರಿಗೆ ಆಗತ್ಯ. ನಾಲ್ಕಾಣೆಯಷ್ಟು ಅಲ್ಪ ಮೊತ್ತದಿಂದಲೂ ಆರಂಭಿಸಬಹುದು. ಪಿಗ್ಮಿಯು ಬೇಂಕಿನ ಸೇವೆಯನ್ನು ಮನೆಬಾಗಿಲಿಗೆ ತರುವುದು.

ಕ್ಯುಮ್ಯುಲೇಟಿವ್ ಠೇವಣಾತಿಗಳು ರೂಪಾಯಿ ಐದು ಅಥವಾ ಅದರ ಗುಣಕಗಳಲ್ಲಿ ಸಂಗ್ರಹಿಸಿಡಲು ಉತ್ತಮ ಸಾಧನ. ಮಾಸಿಕ ವೇತನ ಪಡೆಯುವ ಮಂದಿಗೆ ಅನುಕೂಲ ಹಾಗೂ ಆಕರ್ಷಕವಾಗಿದೆ.

ಲಕ್ಷ್ಮಿ ಠೇವ್ ಸರ್ಟಿಫಿಕೇಟ್. ನಿಮ್ಮಲ್ಲಿರುವ ಬಂಡವಾಳಕ್ಕೆ ಲಾಭದಾಯಕ ಪ್ರತಿಫಲ ದೊರೆಯುವುದು. ಸುಪ್ತ ಧನದ ಸದ್ವಿನಿಯೋಗಕ್ಕೆ "ಲಕ್ಷ್ಮಿ"ಯ ಆಹ್ವಾನ ನಮೋಹರವಾಗಿದೆ.

ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯ. ವಿದ್ಯಾರ್ಥಿಗಳ ಸೇವಿಂಗ್ಸ್ ಖಾತೆಯಲ್ಲಿ ಉಳಿತಾಯದ ಪ್ರಚಾರವಿದೆ. ಮಾತ್ರವಲ್ಲದೆ, ನಮ್ಮ ಶಾಖೆಯಿಂದ ಭವಿಷ್ಯಾರ್ಥವಾಗಿ ಹಣ ಪಾವತಿಮಾಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ಉದರ್ಶ ಆರ್ಥಿಕ ವ್ಯವಹಾರಕ್ಕೆ ಸಿಂಡಿಕೇಟ್ ಬೇಂಕ್.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

THE CANARA INDUSTRIAL & BANKING SYNDICATE LTD, UDIPI.

ಉಡ್ಪಿ ಡಿ ಮು ಕೋರ್ಟಿನಲ್ಲಿ
O S No. 63/1956
R E P No 306/1958
The State of Mysore—
—ಅರ್ಜಿದಾರರು.

ಮತ್ತು

ಬಂಗೇರಧಿ ಅಂಮ —ಎದ್ರಿಳು.

ಇವರೊಳಗೆ

ಎದ್ರಿಳು ಬಾಗೇರಧಿ ಅಂಮ—ಶ್ರೀಧರ ಆತಂರ್ಯರ ನಿದವೆ—

ಮೆಲ್ಕಂಡ ಅನ್ಯಾಜ್ಯಾರಿಯಲ್ಲಿ ಎದ್ರಿಳಿಗೆ ಆಗತಕ್ಕ ಇಸ್ತಿಹಾರ್ ನೋಟೀಸು ತಾರೀಕ. 13-1-1959ಕ್ಕೆ ಇಟ್ಟಿರುವದ್ರಿಂದ ಸದ್ರಿ ಎದ್ರಿಳು ತನ್ನ ಆಕ್ಷೇಪ ಹೇಳುವದನ್ನು ಆದಿನ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು

A. Lakshminarayan Rao,
Pleader for Governn ent
Udipi, 20-12-1958.

Edited, Printed & Published by K. H. Shetty, at the Navayuga Press, Udipi, S. India.